ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)



ಸಂಶೋಧಕರು

ಡಿ.ಆರ್.ಸುರೇಂದ್ರನಾಥ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ-೫೮೩.೨೭೬

೨೦೧೩

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಡಿ.ಆರ್.ಸುರೇಂದ್ರನಾಥ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಪ್ರಾಧ್ಯಾಪಕರು(ವಿಶ್ರಾಂತ)

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೭

ಸಂಶೋಧಕರ ಘೋಷಣಾ ಪತ್ರ

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರಾದ **ಡಾ.ಎಸ್.ಸಿ.ಪಾಟೀಲ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಡಿ.ಆರ್.ಸುರೇಂದ್ರನಾಥ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 1/12/17

.ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಡಿ.ಆರ್.ಸುರೇಂದ್ರನಾಥ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ದೃಶ್ಯಕಲಾ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

[signature]

ಡಾ. ಎಸ್.ಸಿ. ಪಾಟೀಲ

ಪ್ರಾಧ್ಯಾಪಕರು

ಮತ್ತು ವಿಶೇಷಾಧಿಕಾರಿಗಳು(ವಿಶ್ರಾಂತ)

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ

ಬೆಂಗಳೂರು

ಸ್ಥಳ : ವಿದ್ಯಾರಣ್ಯ

ದಿನಾಂಕ: 30/11/17

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಕಲೆಗಳಲ್ಲಿ ಒಂದಾದ ಚಿತ್ರಕಲೆಯಿಂದಲೇ ಮಾನವನ ಮೊದಲ ಭಾಷೆ ಆರಂಭವಾಯಿತು ಎಂಬುದಂತೆ ಲಿಪಿಯ ಉಗಮಕ್ಕಿಂತ ಮೊದಲೇ ಚಿತ್ರಕಲೆ ಬಳಕೆಯಲ್ಲಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಕಲೆಗಳಲ್ಲಿ ಪ್ರಮುಖವಾಗಿ ಲಲಿತಕಲೆಗಳು ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನು ತಮ್ಮಲ್ಲಿ ಒಡ ಮೂಡಿಸಿಕೊಂಡಿರುತ್ತವೆ. ಅಂತೆಯೇ ಸುಮಾರು ಇಪ್ಪತ್ತು, ಮೂವತ್ತು ವರ್ಷಗಳ ಹಿಂದಿನ ಶಿಲಾಯುಗದ ಮೊದಲ ಅವಧಿಯಲ್ಲಿಯೇ ಮಾನವ ಚಿತ್ರ ಬರೆಯುವುದನ್ನು ತಿಳಿದುಕೊಂಡಿದ್ದು, ಆತ ಪ್ರಾಣಿ ಚಿತ್ರಗಳನ್ನು ಮೂಳೆಗಳ, ಕಲ್ಲುಗಳ, ಗವಿಯೊಳಗಿನ ಕಲ್ಲುಗಳ ಮೇಲೆ ರಚಿಸಿರುತ್ತಾನೆ.

ಅಂದಿನ ಮಾನವರು ಬರೆದ ಚಿತ್ರಗಳು ಉತ್ತಮ ಮಟ್ಟದವು ಆಗಿದ್ದವು. ಆಗ ತಾನೆ ಚಿತ್ರ ಬರೆಯಲು ಮಾನವ ಆರಂಭಿಸಿರಲಾರ ಅದಕ್ಕೂ ಸಹಸ್ರ ವರ್ಷಗಳ ಹಿಂದಿನಿಂದಲೂ ಆತ ಚಿತ್ರ ಬರೆಯುತ್ತಲಿದ್ದು, ಆ ವೇಳೆಗಾಗಲೇ ಚಿತ್ರ ಬರೆಯುವುದರಲ್ಲಿ ಕೈಪಳಗಿರಬೇಕು ಎಂಬ ವಾದವಿದೆ. ಅದು ಪ್ರಾಚೀನ ನಾಗರೀಕತೆಯೊಂದರ ಅಂತಿಮಘಟ್ಟವೇ ಆಗಿರಬಹುದು.[1] ಎಂಬಂತೆ ನಾಗರೀಕತೆ ಅರಳಿದ ನೈಲ್ ನದಿ, ಯುಫ್ರೆಟಿಸ್, ಸಿಂಧೂನದಿ ತೀರಗಳಲ್ಲಿ ಗ್ರೀಸ್, ರೋಮ್. ಚೀನಾ ಮತ್ತು ಭಾರತಗಳಲ್ಲಿ ವಿಶೇಷವಾದ ಚಿತ್ರ ಮತ್ತು ಶಿಲ್ಪಕಲೆಗಳು ಇದ್ದವು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳು ದೊರೆತಿವೆ.

ಭಾರತದಲ್ಲಿ ಚಿತ್ರಕಲೆಗೆ ಕ್ರಿ.ಪೂ. ಐದು ಸಾವಿರ ವರ್ಷಗಳಿಗೂ ಹಿಂದಿನ ಇತಿಹಾಸವಿದೆ. ಆರ್ಯರು ಈ ದೇಶಕ್ಕೆ ಬರುವ ಪೂರ್ವದಲ್ಲಿಯೇ ಅಂದರೆ ಸಿಂಧೂನದಿ ತೀರದಲ್ಲಿ ನಾಗರೀಕತೆ

ಉನ್ನತಮಟ್ಟವನ್ನು ತಲುಪಿತ್ತು. ಹರಪ್ಪಾ-ಮೊಹಂಜೋದಾರೋಗಳ ಭಗ್ನಾವಶೇಷಗಳಲ್ಲಿ ದೊರೆತ ಕಂಚಿನ ಪ್ರತಿಮೆ ಹಾಗೂ ಇನ್ನಿತರೆ ಶಿಲ್ಪಗಳು, ಮಡಿಕೆ, ಕುಡಿಕೆಗಳ ಮೇಲೆ ಬರೆದ ಚಿತ್ರಗಳು ಶ್ರೇಷ್ಠ ನಿದರ್ಶನವಾಗಿದ್ದವು. ಆರ್ಯರ ಆಗಮನದ ನಂತರ ಚಿತ್ರಕಲೆ ವಿಕಾಸಗೊಂಡು ಯಜ್ಞಕುಂಡ, ಮದುವೆ ಮಂಟಪ, ಸಭಾಸದನ, ರಂಗೋಲಿಯಂತಹ ಕಲೆಗಳು ವೇದಗಳ ಕಾಲದಲ್ಲಿ ಬೆಳಕಿಗೆ ಬಂದಿರುತ್ತವೆ.

ಭಾರತದ ವಿಂಧ್ಯ ಪರ್ವತದ ದಕ್ಷಿಣಕ್ಕಿರುವ ಅಜಂತಾ, ಎಲ್ಲೋರಾ ಜಗತ್ತಿನ ಕಲಾವಿದರ ಮತ್ತು ಕಲಾರಸಿಕರ ಪುಣ್ಯಕ್ಷೇತ್ರಗಳಲ್ಲಿ ಒಂದು. ಇದಕ್ಕೆ ಯಾವುದೇ ಬಾಹ್ಯ ಪ್ರಭಾವವು ಇಲ್ಲದೇ ಭಾರತೀಯ ಚಿತ್ರಕಲೆ ಮತ್ತು ಶಿಲ್ಪಕಲೆಯ ತಾಣಗಳಾಗಿದ್ದು, ಮುಖ್ಯವಾಗಿ ಅಜಂತಾ ಗುಹೆಗಳ ಭಿತ್ತಿ ಚಿತ್ರಗಳು ಸುಮಾರು ೮೦೦ ವರ್ಷಗಳಿಗೂ ಹೆಚ್ಚಿನ ಕಾಲ ಇಲ್ಲಿನ ಚಿತ್ರಗಳನ್ನು ರಚಿಸಿದ್ದು, ಹೆಚ್ಚಿಗೆ ಕಲಾವಿದರ ಪರಿಶ್ರಮವಿದ್ದು. ಹಲವು ತಲೆಮಾರಿನ ಚಿತ್ರಗಾರರು, ಶಿಲ್ಪಗಾರರು ಇಲ್ಲಿ ದುಡಿದಿದ್ದಾರೆ. ಅಜಂತಾದ ಭಿತ್ತಿ ಚಿತ್ರಗಳು ಆದಿಮಾನವನ ಸೃಷ್ಟಿಯಲ್ಲಿ ಜಗತ್ತಿನ ಸುಖವನ್ನು ತೊರೆದು ಏಕಾಂತದಲ್ಲಿ ಇರಬಯಸಿದ ಭಿಕ್ಷುಗಳು, ತಮಗೆ ಬೇಕಾದಾಗೆ ನಿರ್ಮಿಸಿಕೊಂಡ ಕಲಾ ಪರಿಸರ ಇದಾಗಿದೆ.[೨]

ಪ್ರಮುಖವಾಗಿ ಇಲ್ಲಿ ಬಿಕ್ಷುಗಳಲ್ಲದವರೂ ಚಿತ್ರಗಾರರಾಗಿ ದುಡಿದಿರುವುದು ಕಂಡುಬರುತ್ತದೆ. ಈ ಭಿತ್ತಿ ಚಿತ್ರಗಳಲ್ಲಿ ಬುದ್ಧನ ಜೀವನ ಹಾಗೂ ಜಾತಕ ಕಥೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲ್ಪಟ್ಟಿದ್ದು, ಅದು ಕ್ರಿ.ಪೂ. ೭ನೆಯ ಶತಮಾನದಿಂದ ಪ್ರಾರಂಭವಾಗಿ, ಕ್ರಿ.ಶ. ೬ನೆಯ ಶತಮಾನದವರೆಗೂ ರಚಿಸಲ್ಪಟ್ಟವುಗಳಾಗಿವೆ. ಕ್ರಿ.ಶ. ೬ ಮತ್ತು ೭ನೆಯ ಶತಮಾನದಲ್ಲಿ ಕನ್ನಡದ ಚಾಲುಕ್ಯರ ಆಶ್ರಯದಲ್ಲಿ ಅಜಂತಾ ಹಾಗೂ ಬಾದಾಮಿಯ ಗುಹಾಂತರ ದೇವಾಲಯದಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿದ್ದು, ಕ್ರಿ.ಶ.೮ನೆಯ ಶತಮಾನದಿಂದ ಪ್ರಾರಂಭವಾದ ರಾಷ್ಟ್ರಕೂಟರ ಆಳ್ವಿಕೆಯಲ್ಲಿನ ಸಂದರ್ಭದಲ್ಲಿ ಎಲ್ಲೋರಾದಲ್ಲಿಯೂ ಕೂಡ ಭಿತ್ತಿ ಚಿತ್ರಗಳು ರಚನೆಯಾಗಿರುತ್ತವೆ. ಇವುಗಳು ಭಾರತೀಯ ಸಾಂಸ್ಕೃತಿಕ ಕಲೆಯ ಹೆಗ್ಗುರುತೆಂದು ಹೇಳಬಹುದು.

ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ಶಿಷ್ಟಪದ ಚಿತ್ರಗಳು ಅಜಂತಾದಲ್ಲಿ ಕಾಣಸಿಗುವ ಭಿತ್ತಿ ಚಿತ್ರಗಳಿಂದಲೇ ಪ್ರಭಾವಗೊಂಡು ರಚಿತವಾಗಿದ್ದು, ಈ ಕಲೆಯಲ್ಲಿ ಅದ್ಭುತ ದೃಶ್ಯಗಳಿವೆ. ಅವುಗಳಲ್ಲಿ ಮುಖ್ಯವಾಗಿ ದೇವತೆಗಳು, ರಾಜಕುಮಾರರು, ಸನ್ಯಾಸಿಗಳು, ಯೋಧರು, ಸ್ತ್ರೀಪುರುಷರು ಹೀಗೆ ಅನೇಕ ಸಮಾಜದ ವಿವಿಧ ಸ್ತರದವರೆಲ್ಲರನ್ನು ಇದರಲ್ಲಿ ಕಾಣಬಹುದು. ಪ್ರಾಣಿ, ಪಕ್ಷಿಗಳು. ಅರಮನೆ ನಗರದ ಸೌಧಗಳು, ಬೆಟ್ಟಗುಡ್ಡಗಳು, ಉದ್ಯಾನವನ, ಬಯಲುಗಳು ಹಿನ್ನಲೆಯಾಗಿವೆ. ಅಜಂತಾದ ಕಲಾ ತಂತ್ರಗಳನ್ನು ಗಮನಿಸಿದಾಗ ನಾಟ್ಯಶಾಸ್ತ್ರದ ಬಹುಪಾಲು ಅನುಕರಣೆ ರಚನಾ ವಿಧಾನದಲ್ಲಿ ಕಂಡುಬರುತ್ತದೆ. ಇಲ್ಲಿನ ಚಿತ್ರಗಳಲ್ಲಿ ಬಣ್ಣಗಳನ್ನು ಬಳಸುವಾಗ ಸಾಂಕೇತಿಕತೆಯನ್ನು ಗಮನದಲ್ಲಿಟ್ಟು ರಚನೆ ಮಾಡಲಾಗಿದೆ. ಆಯಾ ದೇವತೆಗಳಿಗೆ ಪ್ರಾತಿನಿಧಿಕ ಬಣ್ಣಗಳನ್ನು (ಹಳದಿ-

ಬ್ರಹ್ಮ, ಕೆಂಪು-ಶಿವ, ನೀಲಿ-ವಿಷ್ಣು) ಬಳಸಲಾಗಿದೆ. ಇಲ್ಲಿ ರಾಜರ ಸೇವಕರು ಉತ್ತರ, ದಕ್ಷಿಣ ದೇವರೆಂದು ಗುರುತಿಸಲಾಗಿದ್ದು, ಅದು ಸೂಕ್ತ ವರ್ಣಬೇಧಗಳಲ್ಲಿ ಕಾಣಬಹುದಾಗಿದೆ. ವರ್ಣಛಾಯೆಗಳ ನಿರೂಪಣೆಯ ವಿಧಾನ, ವ್ಯಕ್ತಿಗಳ ಗುಂಪುಗಳನ್ನು ಸಂಯೋಜನಾತ್ಮಕವಾಗಿ ಅಳವಡಿಕೆ ಮಾಡುವ ಜಾಣ್ಮೆ ಹಾಗೂ ವ್ಯಕ್ತಿಗಳಲ್ಲಿಯ ಭಾವನೆಗಳ ಮಿಡಿತವು ಪ್ರಧಾನವಾಗಿದ್ದು, ಅಲ್ಲಿ ಕಂಡುಬರುವ ವ್ಯಕ್ತಿಗಳಲ್ಲಿ ಚೈತನ್ಯ ತುಂಬುವಂತೆ ಭಾಸವಾಗುತ್ತಿದೆ.

ಕರ್ನಾಟಕದಲ್ಲಿರುವ ಬಾದಾಮಿಯ ಗುಹಾ ಚಿತ್ರಗಳು, ಅಜಂತಾದ ಗುಹಾ ಚಿತ್ರಗಳಿಗಿಂತ ಭಿನ್ನವಾಗಿವೆ. ಅಜಂತಾದ ವರ್ಣ ರೂಪದಲ್ಲಿಯ ನೆರಳು-ಬೆಳಕುಗಳ ವಿನ್ಯಾಸಕ್ಕಿಂತ ರೇಖೆಗಳಿಗೆ ಹೆಚ್ಚು ಒತ್ತು ಕೊಟ್ಟಿರುವರು. ಅದು ಉತ್ಪ್ರೇಕ್ಷಿತವಲ್ಲ, 'ತುಟಿ ಆಚೆಗಣ್ಣಿನ ಚಾಚುರೆಪ್ಪೆ' ಎಂಬಂತಹ ಹೊಸ ಸಂಪ್ರದಾಯದ ಬದಲಾವಣೆಯ ಸೂಚನೆಗಳು. ಮುಖ್ಯವಾಗಿ ಹೆಣ್ಣಿನ ಆದರ್ಶ, ಸೌಂದರ್ಯ, ನೀಳವಾದ ತೆಳು ದೇಹದ ಕಲ್ಪನೆಗಳು ಇಲ್ಲಿ ಹೊರಹೊಮ್ಮಿವೆ. ಮತ್ತೆ ದಪ್ಪವಾದ ಖಚಿತ ರೇಖೆಗಳನ್ನು ಬಳಸಿರುವುದು ಕಂಡುಬರುತ್ತದೆ. ಸಾಂಕೇತಿಕವಾಗಿ ಬಣ್ಣಗಳನ್ನು ಬಳಸುವ ಪದ್ಧತಿಯನ್ನು ಇಲ್ಲಿ ಕೈ ಬಿಡಲಾಗಿದ್ದು, ಮುಂದೆ ರಾಷ್ಟ್ರಕೂಟರ ಚಿತ್ರಕಲಾ ಶೈಲಿಯೂ ಬಾದಾಮಿಯ ಕಲಾ ಪರಂಪರೆಯ ಮುಂದಿನ ರೂಪವಾಗಿ ಹೊರಹೊಮ್ಮಿರುತ್ತದೆ. ರೇಖೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ ಇಲ್ಲಿನ ಕಲಾವಿದರು, ಬಣ್ಣಗಳಿಗೆ ಅಷ್ಟೊಂದು ಮಹತ್ವ ನೀಡಲಿಲ್ಲ. ಚಪ್ಪಟೆಯಾಗಿ ಬಣ್ಣಗಳನ್ನು ಬಳಸಿದ್ದು, ರೇಖೆಗಳು ಶಕ್ತಿಯುತವಾಗಿರುತ್ತದೆ. ಕಣ್ಣು ರೆಪ್ಪೆಯು ಕೆನ್ನೆಯಾಚೆಗೆ ಚಾಚಿರುವ ಶೈಲಿ ಸ್ಪಷ್ಟವಾಗಿದ್ದು, ಅಜಂತಾದಲ್ಲಿರುವ ಮತ್ತು ಬಾದಾಮಿಯಲ್ಲಿರುವ ದುಂಡು ಮುಖಗಳು ಇಲ್ಲಿನ ಕೋನಾತ್ಮಕ ರೂಪಕ್ಕೆ ಎಡೆಮಾಡಿಕೊಟ್ಟಿರುವಂತೆ ಭಾಸವಾಗುತ್ತದೆ. ಚೂಪಾದ ಮೂಗು, ಗಲ್ಲಗಳು ಇಲ್ಲಿ ವೈಶಿಷ್ಟ್ಯವಾಗಿವೆ. ಅದೇ ರೀತಿ ಅಜಂತಾದಲ್ಲಿರುವ ಭಿತ್ತಿ ಚಿತ್ರಗಳು ಮಾನವೀಯತೆಯೊಂದಿಗೆ ಪ್ರಾಪಂಚಿಕ ವಿಷಯಗಳಿಗೆ ಒತ್ತು ಕೊಟ್ಟರೆ, ಎಲ್ಲೋರದಲ್ಲಿನ ಭಿತ್ತಿ ಚಿತ್ರಗಳಲ್ಲಿ ಹೆಚ್ಚು ದೇವತೆಗಳಿಗೆ ಒತ್ತುಕೊಟ್ಟು ಚಿತ್ರಿಸಲಾಗಿದೆ.[5] ಈ ಎಲ್ಲಾ ಅಂಶಗಳನ್ನು ಪ್ರಮುಖವಾಗಿಟ್ಟುಕೊಂಡು ಬೆಳೆದು ಬಂದ ವಿಜಯನಗರ ಕಲೆಯು ಜನಜೀವನದ ವಾಸ್ತವ ಬದುಕಿಗೆ ಒತ್ತುಕೊಟ್ಟಂತಹ ಭಿತ್ತಿ ಚಿತ್ರಗಳನ್ನು ಕರ್ನಾಟಕ ರಾಜ್ಯದಲ್ಲಿಯೂ ಕಾಣಬಹುದು.

ಸಮಕಾಲೀನ ಅಂಶಗಳನ್ನೇ ಮುಖ್ಯವಾಗಿಟ್ಟುಕೊಂಡ ಸಂದರ್ಭ, ಸನ್ನಿವೇಶ, ವಸ್ತುಗಳನ್ನು ವಾಸ್ತವಿಕವಾಗಿ ಚಿತ್ರಿಸುವ ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದ ವಿಜಯನಗರ ಚಿತ್ರ ಕಲಾವಿದರು ಇಡೀ ದಕ್ಷಿಣ ಭಾರತದಲ್ಲೆಲ್ಲಾ ವಿಜಯನಗರ ಕಲಾಶೈಲಿಯು ಜನಪ್ರಿಯವಾಗಿ ಬೆಳೆದು ಬರುವುದಕ್ಕೆ ಕಾರಣೀಕರ್ತರಾದರು. ಅದರ ನಂತರದ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ದಖ್ಖನ್ ಕಲೆಯು ಹುಟ್ಟಿಕೊಂಡಿತು. ಇದು ಪರ್ಶಿಯನ್ ಮತ್ತು ತುರ್ಕಿ ಕಲೆಯ ಪ್ರಭಾವದಿಂದ ಆರಂಭವಾಗಿ ವಿಜಯನಗರ ಕಲೆಯೊಂದಿಗೆ ಬೆರೆತಾಗ ದಖ್ಖನ್ ಶಿಷ್ಟಪದ ಕಲೆಯಾಗಿ ರೂಪುಗೊಂಡಿತು. ಇದು ವಿಜಯನಗರ ಕಲಾ ಶೈಲಿಯಷ್ಟೇ ಪ್ರಬಲವಾಗಿರುವ ದಖ್ಖನ್ ಕಲೆ. ಈ ಕಲೆ ಉತ್ತರ

ಕರ್ನಾಟಕದಾದ್ಯಂತ ದಟ್ಟ ಪ್ರಭಾವದೊಂದಿಗೆ ಹರಡಿದರೆ, ಇತ್ತ ದಕ್ಷಿಣ ಕರ್ನಾಟಕದಲ್ಲೂ ವಿಜಯನಗರ ಕಲೆಯೊಂದಿಗೆ ದಖ್ಖನ್ ಕಲೆಯ ಅಂಶಗಳು ಸೇರಿಕೊಂಡಂತಹ ಅನೇಕ ಕಲಾಕೃತಿಗಳು ನಿರ್ಮಾಣಗೊಂಡವು. ಇಡೀ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ವಿಜಯನಗರ ಕಲಾಶೈಲಿ ಮತ್ತು ದಖ್ಖನ್ ಕಲಾಶೈಲಿಗಳು ಶಕ್ತಿಯುತವಾಗಿ ಮೂಡಿಬಂದಿವೆ. ಇವುಗಳ ಜೊತೆಗೆ ಮೊಘಲ್, ರಜಪೂತ ಕಲೆಗಳು ಇವುಗಳೊಂದಿಗೆ ಪಾಶ್ಚಾತ್ಯ ಕಲೆಯ ಪ್ರಭಾವವು ಒಂದೆಡೆಯಾದರೆ ಮತ್ತೊಂದು ಕಡೆ ಸ್ಥಳೀಯ ಪ್ರಭಾವಗಳೂ ಭಿತ್ತಿ ಚಿತ್ರಗಳಲ್ಲಿ ಪ್ರಮುಖವಾಗಿ ಕಂಡುಬರುವುದನ್ನು ಕಾಣಬಹುದು. ಉತ್ತರ ಕರ್ನಾಟಕದಲ್ಲಿ ಮರಾಠ ಕಲಾಶೈಲಿ, ಸುರಪುರ ಕಲಾಶೈಲಿ ಪ್ರಮುಖವಾಗಿದ್ದು, ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಕಲಾಶೈಲಿ, ತಂಜಾವೂರು ಕಲಾ ಶೈಲಿಗಳು ಪ್ರಮುಖವಾಗಿ ಕಂಡುಬರುತ್ತವೆ.

ಪ್ರಾಚೀನ ಕಾಲದಿಂದಲೂ ಕನ್ನಡದ ಅರಸರು, ಕನ್ನಡದ ಪ್ರಜೆಗಳು ಲಲಿತಕಲೆಗಳ ಬಗೆಗೆ ಉದಾತ್ತವಾದ ಧೋರಣೆಯನ್ನು ತಳೆದು ಉನ್ನತವಾದ ಅಭಿರುಚಿಯನ್ನು ಬೆಳೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಕನ್ನಡ ನಾಡಿನ ಕಲಾ ಪರಂಪರೆ ಅಪೂರ್ವವಾದದ್ದು, ರಾಜನೀತಿ, ಧರ್ಮ ಸಹಿಷ್ಣುತೆ ಕಲಾವಿಕಾಸ ಈ ಎಲ್ಲಾ ದೃಷ್ಟಿಗಳಿಂದಲೂ ಕರ್ನಾಟಕವು ಒಂದು ಚಿಕ್ಕ ಭರತಖಂಡವೇ ಆಗಿದೆ. ಕನ್ನಡ ನಾಡಿನ ಕಲಾವಿದರು ತಾವು ಬಳಸಿಕೊಂಡ ಮಾಧ್ಯಮ, ಧಾರ್ಮಿಕ, ಸಾಮಾಜಿಕ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಭಾ ಸ್ವಾತಂತ್ರ್ಯವನ್ನು ಮತ್ತು ಕಲಾ ಸ್ವಾತಂತ್ರ್ಯವನ್ನು ಮೆರೆದಿದ್ದಾರೆ.[೪] ಈ ಹಿನ್ನಲೆಯಲ್ಲಿ ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಭಿತ್ತಿ ಚಿತ್ರಕಲೆಯು ಒಂದು ಪ್ರಮುಖವಾದ ಘಟ್ಟವೆನಿಸಿದ್ದು, ಚಿತ್ರಕಲೆಯ ಇತಿಹಾಸಕ್ಕೆ ಸಾಕ್ಷಿಯಾಗಿದ್ದಲ್ಲದೇ ಕರ್ನಾಟಕದ ಸಂಸ್ಕೃತಿಗೆ ಒಂದು ಅಪೂರ್ವವಾದ ಕೊಡುಗೆಯಾಗಿದೆ ಮತ್ತು ದೇವಾಲಯಗಳು ಕೇವಲ ಧಾರ್ಮಿಕ ಪೂಜಾ ಸ್ಥಾನವಷ್ಟೇ ಆಗಿರದೆ, ಒಂದು ಸಾಮಾಜಿಕ ಸಂಸ್ಥೆ ಆಗಿರುವುದನ್ನು ಎಲ್ಲಾ ಕಾಲದಲ್ಲೂ ಭಾರತದಾದ್ಯಂತ ಕಾಣಬಹುದಾಗಿದೆ.

ಆಕರ್ಷಣೆಗೋಸ್ಕರವೋ ಅಥವಾ ಲಲಿತಕಲೆಗಳಿಗೆ ಪ್ರೋತ್ಸಾಹ ನೀಡಲೆಂದೋ ಅಥವಾ ಲಲಿತಕಲೆಗಳ ಮೂಲಕ ದೈವತ್ವ ಕಾಣಬಹುದೆಂದೊ ಈ ಎಲ್ಲಾ ಕಾರಣಗಳಿಂದಲೂ ದೇವಾಲಯಗಳಲ್ಲಿ ಆಕರ್ಷಕ ವಸ್ತುವಿನೊಂದಿಗೆ ಚಿತ್ರ-ಶಿಲ್ಪಾದಿಗಳನ್ನು ಕಾಣುತ್ತೇವೆ. ಈ ಎಲ್ಲಾ ಲಲಿತಕಲೆಗಳಲ್ಲೂ ಭಕ್ತಿಯೇ ಪ್ರಧಾನವಾಗಿದ್ದು, ದೈವಕ್ಕೆ ಸಂಬಂಧಿಸಿದ ಕಥಾ ನಿರೂಪಣೆಯನ್ನು ಕಾಣುತ್ತೇವೆಯಾದರೂ ಅವುಗಳಲ್ಲಿಯ ಕಲಾತ್ಮಕ ಅಂಶಗಳನ್ನು ಹೊರಗಿಟ್ಟು ನೋಡುವುದರಿಂದ ಕಲೆಯ ಕಾಲಕಾಲದ ಬೆಳವಣಿಗೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಒಂದು ಕಾಲದ ಜನರ ಮನಸ್ಸು, ಕಲಾವಿದನ ಕಾಣಿಕೆ ಹಾಗೂ ಆಯಾ ಕಾಲದ ಕಲೆಯ ತಾಂತ್ರಿಕ ಬೆಳವಣಿಗೆ, ಗುಣಮಟ್ಟದ ಪ್ರಭಾವ ಇತ್ಯಾದಿ ಹಲವಾರು ಐತಿಹಾಸಿಕ ಅಂಶಗಳನ್ನು ಕಂಡುಕೊಳ್ಳಬಹುದು. ಕಥಾ ನಿರೂಪಣೆಯ ಎಡೆಯಲ್ಲಿಯೇ ಕಲಾವಿದ ತನಗೆ ಅರಿವಿಲ್ಲದಂತೆಯೇ

ತನ್ನ ಕಾಲದ ಸಮಾಜವನ್ನು ಚಿತ್ರಿಸಿದ್ದು, ಇದು ಸಹ ಸಾಮಾಜಿಕ ಅಧ್ಯಯನಕ್ಕೆ ಅಪೂರ್ವ ಕೊಡುಗೆಯಾಗುತ್ತದೆ ಎಂಬುದನ್ನು ಪ್ರಮುಖವಾಗಿ ಪರಿಸರದಲ್ಲಿನ ಶಿಲಾಶ್ರಯ ತಾಣದ ಶಿಷ್ಟಪದ ಭಿತ್ತಿ ಚಿತ್ರಗಳು ಚಾಲುಕ್ಯರ ಪ್ರಾರಂಭಿಕ ರಚನೆಗಳೆಂದು ಯಾದಪ್ಪ ಪರದೇಶಿ[3]ಯವರು ಅಭಿಪ್ರಾಯಪಟ್ಟಿದ್ದು, ಬಹುಶಃ ನಮ್ಮ ಕನ್ನಡ ನಾಡಿನ ಪ್ರಾರಂಭಿಕ ಶಿಷ್ಟಪದ ಚಿತ್ರಗಳು ಇವೇ ಆಗಿವೆ. ಇದರ ನಂತರದ ಅವಧಿಯಲ್ಲಿ ಮಾನವ ನಿರ್ಮಿತ ಗುಹೆ, ದೇವಾಲಯ, ಅರಮನೆ, ಮಠ, ವಾಡೆ, ಚರ್ಚ್, ಮಸೀದಿ ಮತ್ತು ರಾಜರ ಬೃಹದಾದ ಮನೆಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿದ್ದನ್ನು ಇತಿಹಾಸದ ಮೂಲಕ ತಿಳಿಯಬಹುದು.

ಮಾನವನ ಸಂಸ್ಕೃತಿಯ ಒಂದು ಭಾಗವಾಗಿಯೇ ಚಿತ್ರಕಲೆ ಇತರ ಆಕಾರಗಳಿಗಿಂತ ಬೇರೆಯಾಗಿದ್ದು, ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಭಿತ್ತಿ ಚಿತ್ರಕಲೆಯನ್ನು ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನವಾಗಿ, ಸಮಾಜವನ್ನು ರೂಪಿಸುವಲ್ಲಿ ಮನರಂಜನೆಗಾಗಿ ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ರಾಜಕೀಯ ಉದ್ದೇಶಗಳಿಗಾಗಿ ಹೇಗೆ ಬಳಸಿಕೊಂಡಿರುವರು ಎಂಬುದನ್ನು ನೋಡುವುದರ ಜೊತೆಗೆ ಭಿತ್ತಿ ಚಿತ್ರಗಳು ಕಾಲದಿಂದ ಕಾಲಕ್ಕೆ ಬದಲಾಗಿರುವುದು ಕಂಡುಬರುತ್ತದೆ. ಜೊತೆಗೆ ಅದರ ಶೈಲಿ, ತಂತ್ರ, ವಿನ್ಯಾಸ ಮತ್ತು ಚಿತ್ರ ರಚನಾ ಸಂಯೋಜನೆ ಈ ತಾಂತ್ರಿಕತೆಯ ವಿಚಾರಗಳನ್ನು ತಿಳಿದುಕೊಳ್ಳುವುದು ಬಹುಮುಖ್ಯವಾಗಿದೆ.

ಈ ಹಿನ್ನಲೆಯಲ್ಲಿ ಕಲೆಗಳು ಆಯಾ ಭಾಗದ ಮೂಲ ಸಂಸ್ಕೃತಿಯೊಂದರ ಕಡೆಗೆ ಬೆರಳು ಮಾಡುತ್ತಾ ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಯಾವುದೇ ಒಂದು ಸಂಸ್ಕೃತಿ ತನ್ನ ಸಾಮಾಜಿಕ ಬದಲಾವಣೆಯಲ್ಲಿ ಅನೇಕ ಆಯಾಮಗಳನ್ನು ಪಡೆದು, ಹೊಸ ಹೊಸ ನೆಲೆಗಳನ್ನು ಕಂಡುಕೊಳ್ಳುತ್ತಲೇ ಪರಂಪರೆಗೆ ವಿವಿಧ ಮುಖಗಳ ಬದಲಾವಣೆಯನ್ನು ಸೇರಿಸುತ್ತದೆ. ಕಲಾ ಪ್ರಕಾರಗಳೂ ಅವುಗಳ ಅಭಿವ್ಯಕ್ತಿಯ ರೂಪಗಳು ಇಲ್ಲಿ ಪುರಾವೆಗಳಾಗಿ ಉಳಿಯುತ್ತವೆ. ಹೀಗೆ ಕನ್ನಡಿಗರ ಸಾಂಸ್ಕೃತಿಕ ಜೀವನದ ಕಲಾತ್ಮಕ ಬದುಕನ್ನು ಕಂಡುಕೊಳ್ಳುವುದರತ್ತ ಗಮನಹರಿಸಬಹುದಾಗಿದೆ.

ನಮ್ಮ ಪ್ರಾಚೀನರ ಈ ಅಮೂಲ್ಯ ಸಾಂಸ್ಕೃತಿಕ ಸಂಪತ್ತು ದಿನದಿಂದ ದಿನಕ್ಕೆ ನಾಶವಾಗುತ್ತಿರುವ ಈ ಸಂದರ್ಭದಲ್ಲಿ ಇವುಗಳ ವ್ಯಾಪಕ ಅಧ್ಯಯನದ ಅವಶ್ಯಕತೆ ಪ್ರಸ್ತುತ ತುಂಬಾ ಮಹತ್ವದ್ದಾಗಿರುತ್ತದೆ. ಒಂದು ನಾಡಿನ ಸಂಸ್ಕೃತಿಯನ್ನು ತಿಳಿಯಲು ಚಿತ್ರಕಲೆಯು ಒಂದು ಪ್ರಮುಖ ಮಾಧ್ಯಮವಾಗಿದ್ದು, ಈ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ? ಎಂಬುದನ್ನು ಅರಿಯಬೇಕಾಗಿರುವುದು ಅನಿವಾರ್ಯವೂ ಆಗಿದೆ.

ಭಿತ್ತಿ ಚಿತ್ರಗಳು ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಗೆ ಕೊಟ್ಟಂತಹ ಕೊಡುಗೆ ಅಪಾರ. ಅಲ್ಲದೇ ನಾಡಿನ ಇತಿಹಾಸ ತಿಳಿಯುವಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿವೆ ಎನ್ನಬಹುದು.

ಹೀಗೆ ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಕನ್ನಡ ನಾಡಿನ ಜನತೆ ಭಿತ್ತಿ ಚಿತ್ರಗಳನ್ನು ರಚಿಸುವ ಮೂಲಕ ಕಲಾವಿದರಾಗಿ, ಭಿತ್ತಿಚಿತ್ರ ನಿರ್ಮಾಣ ಪರಂಪರೆಯನ್ನು ಜೀವಂತವಾಗಿಸುವುದರೊಂದಿಗೆ ನಮ್ಮ ನಾಡನ್ನು ಸಂಪದ್ಭರಿತ ನಾಡನ್ನಾಗಿ ಮಾಡಿರುತ್ತಾರೆ. ಇದರಿಂದ ಆಯಾ ಕಾಲದ ಕಲೆಯ ತಾಂತ್ರಿಕ ಬೆಳವಣಿಗೆ, ಗುಣಮಟ್ಟ ಮತ್ತು ಪ್ರಭಾವ ಇತ್ಯಾದಿಯಾಗಿ ಐತಿಹಾಸಿಕ ಅಂಶಗಳನ್ನು ಕಂಡುಕೊಳ್ಳಬಹುದು ಎನ್ನುವ ಡಾ.ಅ.ಲ.ನರಸಿಂಹನ್[೬] ಅವರ ಅಭಿಪ್ರಾಯವಾಗಲಿ ಹಾಗೂ ಕಲೆ ಒಂದು ಕಾಲದ, ಒಂದು ದೇಶದ, ಒಂದು ಜನಾಂಗದ ಹೃದಯವನ್ನು ಮಿಡಿಯುತ್ತದೆ. ಜನತೆಯ ಆಸೆ, ಆಕಾಂಕ್ಷೆ ಮತ್ತು ಮನೋಭಾವನೆಗಳನ್ನು ಅವರು ಬದುಕಿ ಬಾಳಿದ ರೀತಿಯನ್ನು ಬಿಂಬಿಸುತ್ತದೆ. ಅವರು ನಂಬಿದ್ದ ಜೀವನ ಮೌಲ್ಯಗಳು ಸೂಚಿಸುತ್ತದೆ ಎನ್ನುವ ಡಾ.ಎಸ್.ಸಿ.ಪಾಟೀಲ[೭]ರ ಮಾತುಗಳು ವಾಸ್ತವ ನೆಲೆಯಲ್ಲಿ ಸತ್ಯದ ಸಂಗತಿಯಾಗಿದೆ.

ಹಲವಾರು ಧರ್ಮಗಳನ್ನು ಅನುಸರಿಸುವ ಭಾರತೀಯರಿಗೆ ಧರ್ಮದೊಡನೆ ಸಾಂಸ್ಕೃತಿಕ ಅಂಶಗಳೂ ಬೆರೆತು ಹೋಗಿದ್ದು, ಧಾರ್ಮಿಕ ಚಟುವಟಿಕೆಗಳೇ ಸಾಂಸ್ಕೃತಿಕವಾಗಿ ದಾಖಲಾಗಿರುವಂತಿದೆ. ಅಂತೆಯೇ ಕರ್ನಾಟಕದಲ್ಲಿಯೂ ಪ್ರಮುಖ ಧರ್ಮಗಳು ತಮ್ಮ ಇತರ ಅಭಿವ್ಯಕ್ತಿ ಮಾಧ್ಯಮದಂತೆ ಚಿತ್ರ-ಶಿಲ್ಪಕಲೆಗಳನ್ನು ಬಳಸಿಕೊಂಡಿವೆ.[೮] ಯಾವುದೇ ಕಾಲದ ಭಿತ್ತಿ ಚಿತ್ರಗಳು ಆಯಾ ಕಾಲದ ಜನಜೀವನದ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇವು ಮಹತ್ವದ ಆಕರಗಳಾಗಿವೆ ಎನ್ನಬಹುದು. ಮುಖ್ಯವಾಗಿ ಭಿತ್ತಿ ಚಿತ್ರಗಳ ಅಧ್ಯಯನದಿಂದ ಅವುಗಳ ಪೋಷಕರು ಯಾವ ಕಾರಣ ಮತ್ತು ಉದ್ದೇಶಗಳಿಗಾಗಿ ಅವುಗಳನ್ನು ರಚಿಸಿದರು ಎಂಬುದನ್ನು ತಿಳಿಯಬಹುದು. ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ 'ಜೀವದನಿ'ಗೆ ತನ್ನನ್ನು ಸಮ್ಮುಖವಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲದ ಕುರಿತು ಅವರ ಧೋರಣೆ ಅಥವಾ ನಿಲುವುಗಳನ್ನು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕಲೆಯು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ[೯] ಎನ್ನುವುದಕ್ಕೆ ಕಲಾ ಇತಿಹಾಸವನ್ನು ಸಂಶೋಧನೆಯ ಮೂಲಕ ಸಂರಕ್ಷಿಸುವ ಜವಾಬ್ದಾರಿ ಸಮಾಜದ ಬುದ್ಧಿಜೀವಿಗಳ ಕೈಯಲ್ಲಿ ಅಡಗಿದ್ದು, ಅದೇ ರೀತಿ ಯುವ ಸಮೂಹವು ಕೂಡ ಎಚ್ಚೆತ್ತುಕೊಂಡು ಕೆಲಸ ಮಾಡುವುದು ಅನಿವಾರ್ಯವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಆಳಿದ ರಾಜರ ವೈಭವದ ದಿನಗಳಲ್ಲಿ ವಿಜೃಂಭಿಸಿದ್ದು, ಇದೇ ಕಲೆಗಳಾದ ಚಿತ್ರ ಮತ್ತು ಶಿಲ್ಪಕಲೆಗಳು. ೧೪ನೇ ಶತಮಾನದಲ್ಲಿ ಪ್ರಾರಂಭವಾದ ವಿಜಯನಗರ ಚಿತ್ರಕಲೆ ಮುಂದುವರಿದು ತನ್ನ ಆಡಳಿತಕ್ಕೊಳಪಟ್ಟ ದೇವಾಲಯ, ಮಠ, ಅರಮನೆ ಮತ್ತು ಮನೆಗಳಲ್ಲಿ ಭಿತ್ತಿ ಚಿತ್ರಗಳನ್ನು ರಚಿಸಿದ್ದಾರೆ. ಅದಕ್ಕೆ ಪೂರಕವಾದ ದಾಖಲೆಗಳು ಕೂಡ ಸಿಕ್ಕಿರುತ್ತವೆ. ಸುಮಾರು ಐದು ದಶಕಗಳ ಚಿತ್ರಗಳು ಪ್ರಸ್ತುತ ದಿನಗಳಲ್ಲಿ ಕೆಲವು ಕಡೆ ಹೊರತುಪಡಿಸಿವರೆ ಸುಮಾರು ಕಡೆಗಳಲ್ಲಿ ನಾಶಹೊಂದಿದ್ದು, ಇದು ನಿಂತ ನೀರಾಗದೇ ಅರಿಯುವ ನೀರಾಗಿಯೇ

ಉಳಿದಿರುತ್ತದೆ. ಅದರಂತೆ ಸಮಗ್ರವಾದ ಅಧ್ಯಯನಗಳು ನಡೆಯಬೇಕಾಗಿರುವುದು ಅನಿವಾರ್ಯವು ಕೂಡ. ಇಲ್ಲವಾದಲ್ಲಿ ರಾಜರ ವೈಭವವನ್ನು ಸಿನಿಮಾ ನಾಟಕಗಳಲ್ಲಿ ನೋಡಿ ಹೇಗೆ ಕಣ್ತುಂಬಿಕೊಳ್ಳುತ್ತೇವೋ ಹಾಗೆಯೇ ಈ ಚಿತ್ರಗಳ ಕಥೆಯೂ ಅದೇ ಆಗುತ್ತದೆ. ಆ ದೃಷ್ಟಿಯಿಂದ ಪ್ರಸ್ತುತ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನವನ್ನು ಕೈಗೊಂಡಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ದಕ್ಷಿಣ ಕರ್ನಾಟಕದ ಯಾವ ನೆಲೆಯಲ್ಲಿ, ಎಷ್ಟು ಚಿತ್ರಗಳು ಲಭ್ಯವಿದ್ದಾವೆ ಎಂಬುದನ್ನು ಅರಿಯಬೇಕಾದರೆ ಅದರ ತಳದ ಅರಿವು ಅತ್ಯಗತ್ಯ ಅದರಂತೆ ಈ ಹಿಂದೆ ಕೆಲವು ವಿದ್ವಾಂಸರು ಕರ್ನಾಟಕದ ಭಿತ್ತಿ ಚಿತ್ರಗಳ ನೆಲೆ, ವೈಶಿಷ್ಟ್ಯತೆಯ ಬಿಂಬವನ್ನು ತೋರ್ಪಡಿಸಿದ್ದಾರೆ. ಅದೇ ದಾರಿಯಲ್ಲಿ ಸಾಗುವಾಗ ಅಳಿದುಳಿದು ಪ್ರಜ್ವಲಿಸುವ ಅನೇಕ ಭಿತ್ತಿ ಚಿತ್ರಗಳು ಪ್ರಸ್ತುತ ಸಂಶೋಧನೆಗೆ ನೆರವಾಗಿರುತ್ತವೆ.

ಪ್ರಮುಖವಾಗಿ ದಕ್ಷಿಣ ಕರ್ನಾಟಕ ಎಂದಾಗ ಚಿತ್ರದುರ್ಗ, ತುಮಕೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ ಮೈಸೂರು, ಚಾಮರಾಜನಗರ, ರಾಮನಗರ, ಮಂಡ್ಯ, ಚಿಕ್ಕಮಗಳೂರು, ಮಂಗಳೂರು, ಕಾರವಾರ, ಉಡುಪಿ, ದಾವಣಗೆರೆ, ಹಾಸನ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನೊಳಗೊಂಡಿರುತ್ತದೆ. ಇದರಲ್ಲಿ ಭಿತ್ತಿ ಚಿತ್ರಗಳು ನಮಗೆ ಲಭ್ಯವಾಗುವ ಪ್ರದೇಶಗಳೆಂದರೆ ಮೈಸೂರು, ಚಿತ್ರದುರ್ಗ, ತುಮಕೂರು, ಹಾಸನ, ಚಿಕ್ಕಮಗಳೂರು, ಬೆಂಗಳೂರು, ಮಂಡ್ಯ ಮತ್ತು ಕಾರವಾರಗಳಲ್ಲಿಯೇ ಹೆಚ್ಚು. ಇದರಲ್ಲಿ ಬರೀ ದೇವಾಲಯ ಮಾತ್ರವಲ್ಲ ಅರಮನೆ, ಮಠ ಮತ್ತು ಚರ್ಚ್‌ಗಳಲ್ಲಿಯೂ ಕೂಡ ಭಿತ್ತಿ ಚಿತ್ರಗಳನ್ನು ಕಾಣಬಹುದು. ವಿಜಯನಗರ ಕಾಲ ಮತ್ತು ಹೊಯ್ಸಳರ ಕಾಲದಲ್ಲಾದ ಚಿತ್ರ, ಶಿಲ್ಪಗಳನ್ನು ಹೆಚ್ಚಾಗಿ ಕರ್ನಾಟಕದಲ್ಲಿ ಗುರುತಿಸಬಹುದು. ಹೊಯ್ಸಳರ ಕಾಲದಲ್ಲಿಯೂ ಹೆಚ್ಚಾಗಿ ಶಿಲ್ಪಕಲೆಯನ್ನು ನೋಡಬಹುದಾಗಿದೆ. ಶೈವ ಮತ್ತು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ವಿಜಯನಗರ ಕಾಲದಲ್ಲಾದ ಭಿತಿ ್ತಚಿತ್ರಗಳ ಸಂತತಿಯೇ ಈ ಅಧ್ಯಯನದಲ್ಲಿ ಹೆಚ್ಚು ಆಗಿರುತ್ತದೆ. ಬಹುಭಾಗ ಹಿಂದೂ ಧರ್ಮಕ್ಕೆ ಸಂಬಂಧಿಸಿದ ನೂರಾರು ವರ್ಷಗಳ ಇತಿಹಾಸವಿರುವ ದೇವಾಲಯಗಳನ್ನು ಕಾಣಬಹುದು. ಅದೇ ರೀತಿ ಮೈಸೂರು ಭಾಗದಲ್ಲಿ ಅರಮನೆಗಳಲ್ಲಿ ಮತ್ತು ದೇವಾಲಯದಲ್ಲಿಯೂ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇನ್ನೂ ತುಮಕೂರು ಜಿಲ್ಲೆಯ ಹತ್ತಾರು ಕಡೆ ವಿಜಯನಗರ ಕಾಲದಲ್ಲಾದ ಶೈವ-ವೈಷ್ಣವ ಧರ್ಮದಲ್ಲಿ ಅರಳಿರುವ ಭಿತ್ತಿ ಚಿತ್ರಕೃತಿಗಳನ್ನು ಕಾಣಬಹುದು.

ಅದೇ ರೀತಿ ಹಾಸನದ ಶ್ರವಣಬೆಳಗೊಳ, ಕಾರ್ಕಳ ಮತ್ತು ಮೂಡಬಿದರೆಯಲ್ಲಿ ಜೈನ ಮಠಗಳಿದ್ದು, ಅಲ್ಲಿ ಜೈನ ಸಮುದಾಯಕ್ಕೆ ಸಂಬಂಧಿಸಿದ ನೂರಾರು ಭಿತ್ತಿ ಚಿತ್ರಗಳು ಲಭ್ಯವಾಗಿವೆ. ಹಾಗೂ ಕರಾವಳಿ ಭಾಗವಾದ ಮಂಗಳೂರು, ಉಡುಪಿ ಮತ್ತು ಕಾರವಾರ ಪ್ರದೇಶದ ಕ್ರೈಸ್ತ ಮಂದಿರಗಳಲ್ಲಿ ಆ ಸಮುದಾಯಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳನ್ನು ಕಾಣಬಹುದು. ಹೀಗೆ ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಉಪಯುಕ್ತ ಅಂಶಗಳನ್ನು ಸಂಶೋಧನೆಯ

ಮೂಲಕ ಸಂಗ್ರಹಿಸುವ ಪ್ರಯತ್ನ ಇದಾಗಿದ್ದು, ವಿಷಯದ ಪೂರ್ಣ ನಕ್ಷೆಯನ್ನು ಮಾರ್ಪಾಟು ಮಾಡಿಕೊಂಡು ಅದರ ದಾರಿಯಲ್ಲಿ ಸಾಗಿ ಸಿಕ್ಕ ಮಾಹಿತಿಯನ್ನು ಈ ಸಂಶೋಧನ ಗ್ರಂಥದಲ್ಲಿ ಸಂರಕ್ಷಿಸುವ ಕಾರ್ಯದ ಪ್ರಮುಖ ಉದ್ದೇಶ ಈ ಅಧ್ಯಯನದ್ದಾಗಿದೆ.

ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ರಚನೆಗೊಂಡ ಭಿತ್ತಿಚಿತ್ರ ಪರಂಪರೆಯು ಆಯಾ ಪ್ರದೇಶದ ಜನಸಮುದಾಯದ ಆಶೋತ್ತರಗಳನ್ನು ಕನ್ನಡಿಗರ ಕಲಾಭಿಮಾನ, ಧರ್ಮಾಭಿಮಾನದ ಹೆಜ್ಜೆಗಳನ್ನು ಗುರುತಿಸುವಾಗೇ, ಕನ್ನಡಿಗರ ಸಾಂಸ್ಕೃತಿಕ ಜೀವನದ ಕಲಾತ್ಮಕ ಬದುಕನ್ನು ಬಿಂಬಿಸುತ್ತವೆ. ನಮ್ಮ ಪ್ರಾಚೀನರ ಈ ಅಮೂಲ್ಯ ಸಾಂಸ್ಕೃತಿಕ ಸಂಪತ್ತು ದಿನದಿಂದ ದಿನಕ್ಕೆ ನಾಶವಾಗುತ್ತಿರುವ ಈ ಸಂದರ್ಭದಲ್ಲಿ ಇವುಗಳ ವ್ಯಾಪಕ ಅಧ್ಯಯನದ ಅವಶ್ಯಕತೆ ಇಂದು ತುಂಬಾ ಮಹತ್ವದ್ದಾಗಿದ್ದು, ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಕಾರ್ಯನಿರತವಾಗಿದೆ.

ಪ್ರಸ್ತುತ ಅಧ್ಯಯನದ ವಿಷಯವಾದ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಕುರಿತು ಅನೇಕ ವಿದ್ವಾಂಸರು ಅಲ್ಲಲ್ಲಿ ಬಿಡಿ ಬಿಡಿ ಸಂಶೋಧನಾ ಲೇಖನಗಳನ್ನು ರಚಿಸಿದ್ದು, ಅದರಲ್ಲಿ ಮಹತ್ವದ ಮಾಹಿತಿಯನ್ನು ತಿಳಿಸಿರುತ್ತಾರೆ. ಹಾಗೆಯೇ ಕರ್ನಾಟಕದ ಕಲಾಸಾಹಿತಿಯಾದ ಡಾ.ಅ.ಲ.ನರಸಿಂಹನ್‌ರವರ 'ಕರ್ನಾಟಕದ ಭಿತ್ತಿಚಿತ್ರ ಪರಂಪರೆ'[10] ಎಂಬ ಪುಸ್ತಕವನ್ನು ರಚಿಸಿದ್ದು, ಅದರಲ್ಲಿ ಸಮಗ್ರ ಕರ್ನಾಟಕದಲ್ಲಿರುವ ಭಿತ್ತಿ ಚಿತ್ರಗಳ ನೆಲೆಯನ್ನು ಸೂಚಿಸಿರುತ್ತಾರೆ. (ಆದರೆ ಕೆಲವನ್ನು ಹೊರತುಪಡಿಸಿ) ಹಾಗೆಯೇ ಮತ್ತೊಬ್ಬ ಸಂಶೋಧಕ ಡಾ.ಯಾದಪ್ಪ ಪರದೇಶಿಯವರು ತನ್ನ ಸಂಶೋಧನ ಶೀರ್ಷಿಕೆಯಾದ 'ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ' ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ತನ್ನ ವ್ಯಾಪ್ತಿಗೆ ಒಳಪಡುವ ಭಿತ್ತಿ ಚಿತ್ರಗಳ ಕುರಿತು ಅಧ್ಯಯನವನ್ನು ಮಾಡಿರುತ್ತಾರೆ.

ಭಿತ್ತಿ ಚಿತ್ರಗಳು ಎಂದಾಗ ಈ ಇಬ್ಬರು ಕಲಾ ಸಾಹಿತಿಗಳು ಕರ್ನಾಟಕದಲ್ಲಿ ಗುರುತಿಸಿಕೊಂಡಿರುತ್ತಾರಾದರೂ ಇದಕ್ಕಿಂತ ಮುಂಚಿತವಾಗಿ ಶಿವರಾಮಕಾರಂತ ಮತ್ತು ಪಿ.ಆರ್.ತಿಪ್ಪೇಸ್ವಾಮಿಯವರು ಲೇಖನಗಳ ಮೂಲಕ ಭಿತ್ತಿ ಚಿತ್ರಗಳನ್ನು ಪಟ್ಟಿ ಮಾಡಿರುತ್ತಾರೆ. ಆದ್ದರಿಂದ ಚಿತ್ರಕಲೆಯಲ್ಲಿ ವಿಶಿಷ್ಟ ಎನಿಸುವ ಒಂದು ತಂತ್ರವೂ ಕೂಡ ಈ ಭಿತ್ತಿ ಚಿತ್ರಕಲೆಯೇ ಆಗಿದೆ. ಚಿತ್ರಕಲೆ ಎಂದಾಗ ನೂರಾರು ಕಲಾವಿದರು, ಕಲಾಸಾಹಿತಿಗಳು ಮತ್ತು ಸಾಹಿತಿಗಳು ಕಾಣಸಿಗುತ್ತಾರೆ. ಆದರೆ ಈ ಸಂಶೋಧನ ವಿಷಯಕ್ಕೆ ಪೂರ್ವಭಾವಿಯಾಗಿ ಉಪಯುಕ್ತ ಅಂಶಗಳನ್ನೊಳಗೊಂಡ ಲೇಖನ ಮತ್ತು ಪುಸ್ತಕ, ಸಂಶೋಧನಾ ಗ್ರಂಥಗಳಲ್ಲಿ ಸಿಕ್ಕಂತ ಮಾಹಿತಿಗಳನ್ನೂ ಪರಿಗಣಿಸಿ ಅವರು ತಿಳಿಸಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವುದರೊಂದಿಗೆ ಭಿತ್ತಿಚಿತ್ರಗಳನ್ನು ಖಾತ್ರಿಪಡಿಸಿಕೊಂಡು ಅಲ್ಲಿ ಸಿಕ್ಕ ಮಾಹಿತಿಯನ್ನು ವ್ಯವಸ್ಥಿತವಾಗಿ ಈ ಅಧ್ಯಯನಕ್ಕೆ ಬಳಸಲಾಗಿರುತ್ತದೆ. ಅದರಂತೆಯೇ ಕಲಾವಲಯದಲ್ಲಿನ ಸಿರಿವಂತಿಕೆಗೆ ಭಿತ್ತಿ ಚಿತ್ರಗಳ ಸಾಂಸ್ಕೃತಿಕ ಕೊಡುಗೆ ಅಪಾರವಾದದ್ದಾಗಿರುತ್ತದೆ. ಎಲ್ಲಿ ಶೋಧನೆಯ ಕೊರತೆ ಎದ್ದುಕಾಣುತ್ತಿದೆಯೋ ಅಲ್ಲಿನ ಪರಿಪೂರ್ಣ

ಅಂಶಗಳನ್ನು ಎಕ್ಕಿ ತೆಗೆದು ಈ ಅಧ್ಯಯನದಲ್ಲಿ ಸೇರಿಸುವ ಕಾರ್ಯ ಸಾಗಿರುತ್ತದೆ. ಇಲ್ಲಿ ಬಹುಮುಖ್ಯವಾಗಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆಯ ವ್ಯಾಪ್ತಿಯಲ್ಲಿ ಬರುವಂತೆ ವಿಜಯನಗರ, ಹೊಯ್ಸಳ ಮತ್ತು ಮೈಸೂರು ಅರಸರ ಕಾಲದಲ್ಲಾದಂತಹ ಭಿತ್ತಿಚಿತ್ರ(ಗೋಡೆ)ಗಳ ಮೇಲಿನ ಸಮಗ್ರ ಚಿತ್ರ ಮತ್ತು ಇತಿಹಾಸವನ್ನು ಈ ಅಧ್ಯಯನದಲ್ಲಿ ಕಟ್ಟಿಕೊಡುವ ಉದ್ದೇಶವನ್ನು ಹೊಂದಲಾಗಿದ್ದು, ಈ ಹಿನ್ನಲೆಯಲ್ಲಿ ಸಂಶೋಧಿಸಿದಾಗ ದಕ್ಷಿಣ ಕರ್ನಾಟಕದಲ್ಲಿ ಸಾಕಷ್ಟು ಕಡೆ ಭಿತ್ತಿ ಚಿತ್ರಕಲೆ ಪ್ರಸ್ತುತ ಅಳಿವಿನ ಅಂಚಿನಲ್ಲಿರುವುದು ವಿಷಾದನೀಯ. ಆದರೂ ಇದ್ದಷ್ಟು ಭಿತ್ತಿಚಿತ್ರ ಮತ್ತು ನೆಲೆಗಳನ್ನು ಸಂಶೋಧನೆ ಮಾಡುವ ಮೂಲಕ ಸಂರಕ್ಷಿಸುವ ಹೊಣೆ ಸಂಶೋಧಕನದ್ದು ಎಂಬುದನ್ನರಿತು ಪ್ರಸ್ತುತ ಅಧ್ಯಯನದ ಮುಖ್ಯ ವಿಷಯದ ಸೂಚಕ ಗುಣಗಳನ್ನು ಪೋಷಿಸಿ, ರಕ್ಷಿಸುವುದು ಸಂಶೋಧನೆಯ ಆಧ್ಯ ಕರ್ತವ್ಯವೂ ಆಗಿರುತ್ತದೆ.

ಅಧ್ಯಯನದ ಉದ್ದೇಶ :

ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಹಾಗೂ ಅಧ್ಯಯನ ಮಾಡಲು ಇರುವ ಆಕರಗಳಲ್ಲಿ ಚಿತ್ರಕಲೆಗೆ ವಿಶೇಷ ಸ್ಥಾನವಿದೆ. ಭಿತ್ತಿ ಚಿತ್ರಕಲೆಯು ಆಯಾ ನಾಡಿನ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯದ ವಿಕಾಸದಲ್ಲಿ ಪ್ರಮುಖ ಪಾತ್ರದ್ದಾಗಿದೆ. ಆದುದರಿಂದ ಭಿತ್ತಿ ಚಿತ್ರಕಲೆಗಳ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ನಮ್ಮ ನಾಡಿನ ಕಲೆಯು, ಸಂಸ್ಕೃತಿಗಳ ತವರೂರು ಎಂಬುದು ಕಲಾ ಇತಿಹಾಸದಿಂದ ತಿಳಿದುಬರುತ್ತದೆ. ಕಲೆಯು ಕಾಲದಿಂದ ಕಾಲಕ್ಕೆ ತನ್ನದೇ ಆದ ಹೊಸ ಹೊಸ ತಿರುವುಗಳನ್ನು, ಮಾರ್ಪಾಡುಗಳನ್ನು ಪಡೆದುಕೊಂಡು, ಸಮುದಾಯದಿಂದ ಸಮುದಾಯಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಧರ್ಮದಿಂದ ಧರ್ಮಕ್ಕೆ ಪ್ರಭಾವ ಬೀರುತ್ತಾ ಬಂದಿರುತ್ತದೆ. ಹಾಗೂ ಜನರ ಜೀವನ ವಿಧಾನ, ಆಚಾರ-ವಿಚಾರ, ಧಾರ್ಮಿಕ ನಂಬಿಕೆಯ ಒಂದು ಅಭಿವ್ಯಕ್ತಿಯ ಮಾಧ್ಯಮ ಕೂಡ ಈ ಭಿತ್ತಿ ಚಿತ್ರಕಲೆಯಾಗಿತ್ತಾದರೂ ತನ್ನ ಕಾಲವನ್ನು ತಿಳಿಸುವುದರ ಜೊತೆಗೆ ಆಯಾ ಜನಾಂಗದ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಇತಿಹಾಸವನ್ನು ತಿಳಿಯಲು ಸಹಾಯಕವಾಗಿರುತ್ತದೆ.

ಇಂತಹ ವಿಷಯವು ಅಧ್ಯಯನಕಾರರಿಗೆ, ಇತಿಹಾಸ ತಜ್ಞರಿಗೆ, ಕಲಾವಿಮರ್ಶಕರಿಗೆ ಚಿತ್ರಕಲೆ ಅಧ್ಯಯನಕ್ಕೆ ಇರುವ ಆಕರಗಳಲ್ಲಿ ಭಿತ್ತಿ ಚಿತ್ರವೂ ಪ್ರಮುಖವಾಗಿದೆ, ಈ ಅಧ್ಯಯನದಿಂದ ಕಲೆಯ ಇತಿಹಾಸ ಮತ್ತು ಅವುಗಳನ್ನು ಕಲಾ ಪೋಷಕರು ಯಾವ ಕಾರಣಕ್ಕೆ ಮತ್ತು ಉದ್ದೇಶಗಳಿಗೆ ಅವುಗಳನ್ನು ರಚಿಸುತ್ತಿದ್ದರು, ಎಂತಹ ಮಾಧ್ಯಮಗಳನ್ನು ಬಳಸುತ್ತಿದ್ದರು, ಭಿತ್ತಿ ಸಿದ್ಧತಾ ವಿಧಿ ವಿಧಾನ, ಚಿತ್ರ ರಚನಾಕ್ರಮ, ಪರಿಕರಗಳು, ತಂತ್ರಗಾರಿಕೆ, ಶೈಲಿ ಹಾಗೂ ಪ್ರಭಾವ ಪ್ರೇರಣೆಗಳಂತಹ ವಿಷಯಗಳನ್ನು ಈ ಅಧ್ಯಯನದಿದ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

* ನಮ್ಮ ಪ್ರಾಚೀನರ ಅಮೂಲ್ಯ ಸಾಂಸ್ಕೃತಿಕ ಸಂಪತ್ತಾದ ಈ ಭಿತ್ತಿ ಚಿತ್ರಗಳು ದಿನದಿಂದ ದಿನಕ್ಕೆ ನಾಶವಾಗುತ್ತಿವೆ. ಈ ಸಂದರ್ಭದಲ್ಲಿ ಉಳಿದಿರುವ ಚಿತ್ರಗಳನ್ನಾದರೂ ಅವುಗಳು ಹಾಳಾಗುವ

ಪೂರ್ವದಲ್ಲಿ ಅವುಗಳ ಕುರಿತಾದ ತಲಸ್ಪರ್ಶಿ ಅಧ್ಯಯನದ ಅವಶ್ಯಕತೆ ಪ್ರಸ್ತುತ ತುಂಬಾ ಮಹತ್ವದ್ದಾಗಿದೆ. ಅಂತಹವುಗಳನ್ನು ಛಾಯಾಚಿತ್ರದ ಮೂಲಕ, ಇಲ್ಲವೇ ವಿಡೀಯೋ ಚಿತ್ರೀಕರಣದಿಂದ ಭಿತ್ತಿ ಚಿತ್ರಗಳನ್ನು ಸೆರೆಹಿಡಿದು ಕಾಯ್ದಿಡಬಹುದಾದರೂ, ಮೂಲ ಚಿತ್ರಗಳು ಒದಗಿಸುವ ಅನುಭವವೇ ಬೇರೆ. ಆ ದೃಷ್ಟಿಯಿಂದ ಮೂಲ ಚಿತ್ರಗಳನ್ನೇ ಆಕರಗಳನ್ನಾಗಿ ಮಾಡಿಕೊಂಡು ಅಧ್ಯಯನ ಮಾಡುವ ಅಗತ್ಯತೆ ತೀರಾ ಹೆಚ್ಚಾಗಿದೆ. ಈ ಹಿನ್ನಲೆಯಲ್ಲಿ ಕಾಲಮಾನದ ಪ್ರಭಾವದಿಂದ, ವಿವಿಧ ರೀತಿಯ ವಿಪತ್ತುಗಳಿಂದ ನಾಶಹೊಂದುತ್ತಿರುವ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳನ್ನು ಇಲ್ಲಿ ಒಂದು ವ್ಯವಸ್ಥಿತ ಅಧ್ಯಯನಕ್ಕೊಳಪಡಿಸಿ ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಡುವ ಉದ್ದೇಶವನ್ನು ಹೊಂದಲಾಗಿದೆ.

* ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳು ವಿಭಿನ್ನವಾದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಿನ್ನಲೆಯನ್ನು ಒಳಗೊಂಡಿವೆ. ಈ ಭಾಗದ ಭಿತ್ತಿ ಚಿತ್ರ ರಚನೆಯಲ್ಲಿ ಬೌದ್ಧ, ಜೈನ, ಹಿಂದೂ ಅರಸರು, ಮುಸ್ಲಿಂ ಅರಸರು, ಪಾಶ್ಚಿಮಾತ್ಯ ಆಗಮನದಿಂದ ಬಂದ ಕ್ರಿಶ್ಚಿಯನ್ ಸಮುದಾಯದವರು ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಹಿನ್ನಲೆಯಲ್ಲಿ ಭಿತ್ತಿ ಚಿತ್ರಗಳು ಧರ್ಮ ಪ್ರಸಾರ ಮತ್ತು ಸಮನ್ವತೆಗೆ ಯಾವ ರೀತಿಯ ಕೊಡುಗೆಯನ್ನು ಕರ್ನಾಟಕದಲ್ಲಿ ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ನೀಡಿವೆ ಎಂಬುದನ್ನು ತಿಳಿದುಕೊಳ್ಳುವ ಉದ್ದೇಶವು ಪ್ರಸ್ತುತ ಈ ಅಧ್ಯಯನದಲ್ಲಿ ಒಂದಾಗಿದೆ.

* ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳನ್ನು ಗಮನಿಸಿದಾಗ ವಿವಿಧ ನೆಲೆಗಳಲ್ಲಿ ರಚನೆಯಾಗಿರುವುದನ್ನು ಗಮನಿಸಬಹುದಾಗಿದೆ. ಅರಮನೆಗಳು, ಮಠ, ಮಂದಿರಗಳು, ಚರ್ಚುಗಳು, ಸಾರ್ವಜನಿಕ ಕಟ್ಟಡಗಳು, ಊರಿನ ಗಣ್ಯ ವ್ಯಕ್ತಿಗಳ ಮನೆಗಳು, ಭಿತ್ತಿ ಚಿತ್ರಗಳಿಂದ ಅಲಂಕೃತಗೊಂಡಿವೆ. ಈ ಎಲ್ಲಾ ನೆಲೆಗಳನ್ನು ಅವುಗಳು ರಚನೆಗೊಂಡ ಸ್ಥಳಗಳನ್ನು ಆಧರಿಸಿ,ಅವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡುವುದು ಈ ಅಧ್ಯಯನ ಉದ್ದೇಶವಾಗಿದೆ.

* ದಕ್ಷಿಣ ಕರ್ನಾಟಕದ ಭಿತ್ತಿಚಿತ್ರ ರಚನೆಯಲ್ಲಿ ಧಾರ್ಮಿಕ ವೈವಿಧ್ಯತೆ ಕಂಡುಬರುತ್ತದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳಲ್ಲದೆ ಶೈವ, ವೈಷ್ಣವ, ಶಾಕ್ತ, ಜೈನ ಧರ್ಮಗಳಿಗೆ ಸಂಬಂಧಿಸಿದ ಚಿತ್ರಗಳು ಈ ಭಾಗದಲ್ಲಿ ರಚನೆಯಾಗಿದ್ದು ಅವುಗಳೆಲ್ಲವುಗಳನ್ನು ಆಯಾ ನೆಲೆಗಳ ಹಿನ್ನಲೆಯಲ್ಲಿ ವಿವೇಚಿಸುವ ಪ್ರಯತ್ನವನ್ನು ಮಾಡಲಾಗಿದೆ.

* ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಧಾರ್ಮಿಕ ವಿಷಯಗಳ ಜೊತೆಗೆ ಐತಿಹಾಸಿಕ, ಸಾಮಾಜಿಕ, ರಾಜಕೀಯ ವಿಷಯಗಳಲ್ಲದೆ ಪ್ರಮುಖ ಯುದ್ಧ ಘಟನೆಗಳು, ಪ್ರಾಣಿ-ಪಕ್ಷಿಗಳ ಚಿತ್ರಗಳು, ಸಮಕಾಲೀನ ಅಂಶಗಳು ರಚನೆಗೊಂಡಿದ್ದು, ಇವೆಲ್ಲವುಗಳನ್ನು ಆಯಾ ನೆಲೆಗಳ ಹಿನ್ನೆಲೆಗಳಲ್ಲಿ ಪರಿಶೀಲಿಸುವ ಉದ್ದೇಶವನ್ನು ಹೊಂದಲಾಗಿದೆ.

* ದಕ್ಷಿಣ ಕರ್ನಾಟಕದಲ್ಲಿ ಅರಮನೆ ಮತ್ತು ಜೈನ ಬಸದಿಗಳಿಗೇನು ಕೊರತೆಯಿಲ್ಲ. ಹಿಂದೂ. ಕ್ರೈಸ್ತ, ಜೈನಬಸದಿ ಮುಂತಾದ ಧರ್ಮಗಳಿಗೆ ಸಂಬಂಧಿಸಿದ ಪ್ರಾಚೀನ ದೇವಾಲಯಗಳು ಈ

ಭಾಗದಲ್ಲಿದ್ದು, ಅವುಗಳಲ್ಲಿ ರಾಜರೂ, ಆಡಳಿತಗಾರರೂ, ಆರ್ಚಕರು, ಪಾದ್ರಿಗಳು ತಮ್ಮ ತಮ್ಮ ದೇವಾಲಯಗಳ ಸೌಂದರ್ಯವನ್ನು ಹೆಚ್ಚಿಸಲು ಭಿತ್ತಿಚಿತ್ರ ರಚನೆ ಮಾಡಿಸಿದ್ದು, ಅವುಗಳನ್ನು ಗುರುತಿಸಿ ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿರುತ್ತದೆ.

* ದಕ್ಷಿಣ ಕರ್ನಾಟಕದಲ್ಲಿ ಸಾಕಷ್ಟು ಮಠಗಳಿವೆ. ಅದರಲ್ಲಿ ಮುಖ್ಯವಾಗಿ ಭಿತ್ತಿ ಚಿತ್ರಗಳುಳ್ಳ ಐತಿಹಾಸಿಕತೆಯ ಮಠಗಳನ್ನು ಗುರುತಿಸಿ, ಅಲ್ಲಿರುವ ಭಿತ್ತಿ ಚಿತ್ರಗಳ ಮಹತ್ವವನ್ನು ಈ ಅಧ್ಯಯನದ ಮೂಲಕ ಕಟ್ಟಿಕೊಡಲಾಗಿರುತ್ತದೆ.

* ಸಂಕೀರ್ಣ ಮಾಧ್ಯಮದಲ್ಲಿ ಕಂಡುಬರುವ ಕೆಲವು ಭಿತ್ತಿ ಚಿತ್ರಗಳನ್ನು ಗುರುತಿಸಿ, ಅಲ್ಲಿರುವ ಭಿತ್ತಿ ಚಿತ್ರಗಳ ಕುರಿತು ಚರ್ಚಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿರುತ್ತದೆ.

* ಈ ಅಧ್ಯಯನಕ್ಕೆ ಪೂರಕವಾದ ವಿಷಯಕ್ಕನುಸಾರ ಸಿಕ್ಕಿರುವ ಭಿತ್ತಿ ಚಿತ್ರಗಳ ಮೇಲೆ ಆದ ಪ್ರಭಾವ ಎಂತಹದ್ದು? ಪ್ರೇರಣೆ ಯಾರದು? ಇಲ್ಲಿರುವ ಭಿತ್ತಿ ಚಿತ್ರಗಳಲ್ಲಿ ಯಾವ ಶೈಲಿಯನ್ನು ಬಳಸಲಾಗಿದೆ. ತಂತ್ರ ಹೇಗಿದೆ? ಎಂಬ ಅಂಶಗಳನ್ನು ಗಮನಿಸಿ ಈ ಅಧ್ಯಯನ ನಡೆಸುವ ಉದ್ದೇಶವಿರುತ್ತದೆ.

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಸಾಕಷ್ಟು ಪ್ರತ್ಯೇಕ ಪ್ರಾದೇಶಿಕ ಚಿತ್ರ ಶೈಲಿಗಳು ಕಂಡುಬರುತ್ತವೆ. ಒಂದೊಂದು ಶೈಲಿಯ ಮೇಲೆ ಮತ್ತೊಂದು ಚಿತ್ರಶೈಲಿಯು ಪ್ರಭಾವ ಬೀರಿರುವುದು ಗೋಚರವಾಗುತ್ತದೆ. ಈ ಭಾಗದ ಪ್ರಾಚೀನ ಭಿತ್ತಿ ಚಿತ್ರ ಕಲಾವಿದರು ಧಾರ್ಮಿಕ ವಿಷಯಗಳಲ್ಲದೆ ರಾಜಕೀಯ, ಸಾಮಾಜಿಕ, ಐತಿಹಾಸಿಕ ಘಟನಾವಳಿಗಳು, ರಾಜರ ದಿನನಿತ್ಯದ ಬದುಕು, ಪ್ರಮುಖ ಯುದ್ಧಗಳು, ಸುತ್ತಲಿನ ಪರಿಸರ ಇವೆಲ್ಲಾವುಗಳಿಂದ ಪ್ರೇರಣೆ ಪಡೆದುಕೊಂಡಿದ್ದಾರೆ. ಹಾಗಾಗಿ ಆ ಭಾಗದ ಭಿತ್ತಿ ಚಿತ್ರಗಳ ಪ್ರಸ್ತುತ ಸ್ಥಿತಿಗತಿ ಹೇಗಿದೆ, ಈ ಚಿತ್ರಗಳ ಸಂರಕ್ಷಣೆಗೆ ಎಂತಹ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕೆಂಬ ಅಂಶಗಳನ್ನು ಈ ಅಧ್ಯಯನದಲ್ಲಿ ವಿವೇಚಿಸುವ ಉದ್ದೇಶವನ್ನು ಸಹ ಹೊಂದಲಾಗಿದೆ.

ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನ ಅಧ್ಯಯನಗಳು :

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭಗೊಂಡಿರುವುದು ತೊಂಬತ್ತರ ದಶಕದ ಇತ್ತೀಚೆಗೆ, ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿಎಚ್.ಡಿಯಂತಹ ಪದವಿಯ ಹಿನ್ನೆಲೆಯಲ್ಲಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಯಲು ಮುಖ್ಯ ಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸ್‌ಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು. ವಿಶೇಷವಾಗಿ ಈ ಎಲ್ಲಾ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು

ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ಕಮರ್ಶಿಯಲ್ ಆರ್ಟಿಸ್ಟಾಗಿ ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿದ್ದರು. ಈ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿ ತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಡ್ಜ್ ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿಯಲು ಕಾರಣವಾಯಿತು. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಪ್ರಾರಂಭಗೊಂಡಿದ್ದು, ಅವು ಹೆಚ್ಚಾಗಿ ಪದವಿಹಂತಕ್ಕೆ ಮಾತ್ರ ಸೀಮಿತಗೊಂಡು ಕಾರ್ಯನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು. -

ಧಾರವಾಡ, ಗದಗ, ಗುಲಬರ್ಗಾ,ಹಂಪಿ.ಕನ್ನಡ ವಿಶ್ವವಿದ್ಯಾಲಯ, ಮೈಸೂರು, ದಾವಣಗೆರೆ ಹಾಗೂ ಬೆಂಗಳೂರು ಈ ಕೆಲವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲಾ ಪದವಿ ಕೋರ್ಸ್‌ಗಳು ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಈ ಹಂತದಲ್ಲಿ ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನುಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್, ಪಿಎಚ್.ಡಿಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯಲಿಲ್ಲ.

ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು. ತೊಂಬತ್ತರ ದಶಕದ ನಂತರದಲ್ಲಿ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್, ಪಿಎಚ್.ಡಿ ಸಂಶೋಧನ, ಅಧ್ಯಯನ ಪ್ರಾರಂಭಗೊಳ್ಳುವುದರ ಮೂಲಕ ಈ ವಾತಾವರಣ ಸ್ವಲ್ಪ ಬದಲಾಗಿ ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾಧ್ಯಯನಕ್ಕೆ ಅವಕಾಶ ದೊರೆಯಿತು. ಇಲ್ಲಿ ಸ್ನಾತಕೋತ್ತರ ಹಂತದಲ್ಲಿ ಪ್ರಾಯೋಗಿಕತೆಗೆ ಮತ್ತು ಸಿದ್ಧಾಂತ ಪತ್ರಿಕೆಗಳಿಗೆ ಸಮಾನಾವಕಾಶ ಸಿಕ್ಕ ಪರಿಣಾಮ, ದೃಶ್ಯಕಲಾ ಸಂಶೋಧನೆಯ ಹೊಸಪರಂಪರೆಗೆ ಈ

ವಿಶ್ವವಿದ್ಯಾಲಯವು ಹೊಸದಾರಿಯನ್ನು ಹಾಕಿಕೊಟ್ಟಿತು. ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯಯನಕ್ಕೆ ಅವಕಾಶಗಳು ದೊರಕಿವೆ.

ಈ ಕ್ಷೇತ್ರದಲ್ಲಿ ಸಂಶೋಧನಾಧ್ಯಯನವು ಈಗ ವಿಶ್ವವಿದ್ಯಾಲಯ ಮಟ್ಟದಲ್ಲಿ ಇನ್ನುಳಿದ ವಿಷಯಗಳಂತೆ ದೃಶ್ಯಕಲೆಗಳ ಸಂಶೋಧನೆಗೆ ಪ್ರಾಧಾನ್ಯ ಸಿಕ್ಕ ಕಾರಣವಾಗಿ ಈಗ ಸಾಕಷ್ಟು ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ. ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಎಚ್.ಡಿ. ಪ್ರಬಂಧಗಳು ೨. ಎಂ.ಫಿಲ್. ಪ್ರಬಂಧಗಳು ೩. ಡಿ.ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಚಿತ್ರಕಲೆಯ ಕುರಿತು ಡಾ.ಎಸ್.ಸಿ.ಪಾಟೀಲ ಅವರು ೧೯೮೩ರಲ್ಲಿ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ,**[೧೧] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ಕಲಾವಿದರೊಬ್ಬರು ದೃಶ್ಯಕಲೆಯಲ್ಲಿ ನಡೆಸಿದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ.

೧೯೮೭ರಲ್ಲಿ ಡಾ.ಚೂಡಾಮಣಿ ನಂದಗೋಪಾಲರ **ಡ್ಯಾನ್ಸ್ ಆಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್,**[೧೨] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಪೂರಕವಾಗಿ ಚಿತ್ರಕಲೆಯ ಕುರಿತು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ. ಬಿ.ಕೆ. ಹಿರೇಮಠರ **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ,**[೧೩] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಚರ್ಚೆಗೊಂಡಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಒಂದೆರಡು ಸಣ್ಣ ಪ್ರಯತ್ನಗಳಾಗಿವೆ.

ಪಿಹೆಚ್.ಡಿ. ಮಹಾಪ್ರಬಂಧಗಳು :

ಚಿತ್ರಕಲೆಯನ್ನೇ ಕುರಿತು ಕರ್ನಾಟಕದಲ್ಲಿ ಸಂಶೋಧನಾಧ್ಯಯನವು ಪೂರ್ಣಪ್ರಮಾಣದಲ್ಲಿ ಕಂಡುಬಂದಿರುವುದು ೧೯೯೧ರಲ್ಲಿ. ಇಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ

ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ,**[೧೪] ಈ ಮಹಾಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ.ಅ.ಲ.ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು,**[೧೫] ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು,**[೧೬] ಬೆಂಗಳೂರು ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,**[೧೭] ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ,**[೧೮] ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೧೯] ಡಾ.ಗಿರೀಶ ಅವರ **ಬುಡಕಟ್ಟು ಚಿತ್ರಕಲೆ,**[೨೦] ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ,**[೨೧] ಡಾ. ಶಂಕ್ರಪ್ಪ ಕೋಲ್ಕಾರ್ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ,**[೨೨] ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್,**[೨೩] ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪ್ಲೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್,**[೨೪] ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦),**[೨೫] ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ,**[೨೬] ಡಾ.ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್,**[೨೭] ಇದು ಡಾ.ಎಸ್.ಸಿ.ಪಾಟೀಲ ಅವರ ಎರಡನೆ ಪಿಹೆಚ್.ಡಿ ಮಹಾಪ್ರಬಂಧವಾಗಿದೆ. ೨೦೦೪ರಲ್ಲಿ ಡಾ.ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦),**[೨೮] ಡಾ.ಶಿವಕುಮಾರ.ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು,**[೨೯] ಡಾ.ಪಿ.ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ,**[೩೦] ೨೦೦೫ರಲ್ಲಿ ಡಾ.ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ,**[೩೧] ಡಾ.ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ,**[೩೨] ಡಾ.ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ,**[೩೩] ಡಾ.ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ,**[೩೪] ೨೦೦೬ರಲ್ಲಿ

ಡಾ.ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**,[೩೫] ೨೦೦೭ರಲ್ಲಿ ಡಾ.ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**,[೩೬] ಡಾ.ಗೀತಾಂಜಲಿ ಬಿ.ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**,[೩೭] ಡಾ.ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**,[೩೮] ೨೦೦೮ರಲ್ಲಿ ಡಾ.ಮೋಹನ್‌ರಾವ್ ಬಿ.ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್ ಅವರ ಜೀವನ ಮತ್ತು ಕಲಾಕೃತಿಗಳು**,[೩೯] ಡಾ.ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**,[೪೦] ಡಾ.ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**,[೪೧] ಪ್ರೇಮಾನಂದ ಟಿ. ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ**,[೪೨] ಡಾ.ಜಿ.ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**,[೪೩] ಡಾ. ಮಂಟಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ**,[೪೪] ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ**,[೪೫] ೨೦೧೦ರಲ್ಲಿ ಡಾ. ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು**,[೪೬] ಡಾ.ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ**,[೪೭] ಡಾ.ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ**,[೪೮] ೨೦೧೧ರಲ್ಲಿ ಡಾ.ಕಾಶಿನಾಥ ಡಿ. ವಡ್ಡರ ಅವರ **ಶಾಂತಿನಿಕೇತನದ ಭಿತ್ತಿಚಿತ್ರಗಳು**,[೪೯] ಡಾ.ಸತೀಶಕುಮಾರ ವಲ್ಲ್ಯೇಪೂರೆ ಅವರ **ಜೆ. ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು**,[೫೦] ಡಾ.ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ**,[೫೧] ೨೦೧೨ರಲ್ಲಿ ಡಾ. ಭಾರತಿ ಮರವಂತಿ ಅವರ **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ**,[೫೨] ಡಾ.ಕಾಮಾಕ್ಷಿ ಸಿ. ಸೊಪ್ಪಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ**,[೫೩] ಡಾ.ಪರಶುರಾಮ ಪಿ. ಅವರ **ಕರ್ನಾಟಕದ ಕಲಾಗ್ಯಾಲರಿಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನ**,[೫೪] ಡಾ.ಷಾಹಿದ್ ಪಾಷಾ ಅವರ **ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು**,[೫೫] ೨೦೧೩ರಲ್ಲಿ ಡಾ.ಬಿ.ಎಲ್ ಲಮಾಣಿ ಅವರ **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ**,[೫೬] ಡಾ.ರೇಣುಕಾ ಮಾರ್ಕಾಂಡೆಯವರ **ಕರ್ನಾಟಕದ ವೈಷ್ಣವಪರಂಪರೆಯ ಚಿತ್ರಕಲೆ**,[೫೭] ಡಾ.ಶಶಿಕಲಾ ನಂದನಗೌಡ ಅವರ **ಕರ್ನಾಟಕದ ಹುದುಗು ಕಲೆ**,[೫೮] ಡಾ.ಕೃಷ್ಣೇಗೌಡ ಹೆಚ್. ಎನ್ ಅವರ **ಕರ್ನಾಟಕದ ಬೌದ್ಧ ಚಿತ್ರಕಲೆ**,[೫೯] ಡಾ.ಬಿ. ಎಂ. ಪಾಟೀಲ ಅವರ **ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ**,[೬೦] ಡಾ.ಕೃಷ್ಣವೇಣಿ ಅವರ **ಬಳ್ಳಾರಿ ಜಿಲ್ಲೆಯ ಚಿತ್ರಕಲೆ**,[೬೧] ಡಾ.ರವಿ ವಸಾರಾಮ ನಾಯಕ ಅವರ **ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು**,[೬೨] ಡಾ.ಮಹಾಂತೇಶ ಎಂ. ಪಲದಿನ್ನಿ ಅವರ **ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು**,[೬೩] ಡಾ.ಪಿ.ಬಿ.ಗವಾನಿ ಅವರ **ಕರ್ನಾಟಕವ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ**,[೬೪] ಡಾ.ಸುಚಿತ್ರಾ ಜಿ. ಲಿಂಗದಳ್ಳಿ ಅವರ

ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು,[೧೫] ಡಾ.ಬಸವಯ್ಯ ಗವಿಮಠ ಅವರ **ಬಾಗಲಕೋಟ ಜಿಲ್ಲೆಯ ಚಿತ್ರಕಲೆ,**[೧೬] ಸುಬ್ಬಯ್ಯ ಮಹಾದೇವಯ್ಯ ನೀಲಾ ಅವರ **ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು – ಒಂದು ಅಧ್ಯಯನ,**[೧೭] ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಕೈಗೊಂಡಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು :

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್. ಪ್ರಬಂಧಗಳು ಹೀಗಿವೆ. ೨೦೦೧ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,**[೧೮] ೨೦೦೫ರಲ್ಲಿ ಬಂದ ಆನಂದ ಪೂಜಾರರ **ಕರಾವಳಿಯ ಕಾವಿ ಚಿತ್ರಕಲೆ,**[೧೯] ಡಿ.ಎ. ಉಪಾಧ್ಯ ಅವರ **ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ,**[೨೦] ೨೦೧೦ರಲ್ಲಿ ಎಮ್.ಎಸ್.ಮೂರ್ತಿ ಅವರ **ಮಕ್ಕಳಮನಸ್ಸಿನ ಚಿತ್ರಗಳು,**[೨೧] ೨೦೧೩ರಲ್ಲಿ ಜಿ. ಎಸ್.ಭೂಸಗೊಂಡ ಅವರ **ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್. ಕೋಟ್ಯಾಳಕರ – ಒಂದು ಅಧ್ಯಯನ,**[೨೨] ಹೀಗೆ ಹಲವು ಡಿ.ಲಿಟ್ ಮಹಾಪ್ರಬಂಧಗಳು ಹೊರಬಂದಿವೆ. ಈ ಡಿ.ಲಿಟ್. ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಪರಿಗಣಿಸಿ, ಕನ್ನಡ ವಿಶ್ವವಿದ್ಯಾಲಯವು ತಜ್ಞರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್. ಸಂಶೋಧನ ಅಧ್ಯಯನಕ್ಕೆ ಅವಕಾಶವಿರುವುದು ಗಮನಾರ್ಹ ಅಂಶವಾಗಿದೆ.

೩. ಎಂ.ಫಿಲ್. ಅಧ್ಯಯನಗಳು :

ಕರ್ನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್. ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ,**[೨೩] ೨೦೦೩ ರಲ್ಲಿ ಎ.ಎಸ್. ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು,**[೨೪] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಬದುಕು,**[೨೫] ಶಂಕರ ಕುಂದಗೋಳರ **ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು,**[೨೬]

೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **ವಿಜಯನಗರದ ಭಿತ್ತಿ ಚಿತ್ರಕಲೆ,**[೭೭] ರಾಜಕುಮಾರ ಎಸ್. ಕಾಳೆ ಅವರ **ಔಂಧ್ ಗ್ಯಾಲರಿ,**[೭೮] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು,**[೭೯] ಬಿ.ಎಂ.ಪಾಟೀಲರ **ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು,**[೮೦] ಉಮೇಶ ಎ.ಎಸ್. **ಕರ್ನಾಟಕ ಜೈನ ಚಿತ್ರಕಲೆ,**[೮೧] ರವಿ ವಸಾರಾಮನಾಯಕ **ಕಿನ್ನಾಳ ಕಲೆ,**[೮೨] ಶಶಿಕಾಂತ ಬಸರಿಕಟ್ಟಿಯವರ **ಕಲಘಗಿಯ ಚಿತ್ರಕಲೆ,**[೮೩] ಶೈಲಾ ಬರಡೋಲರ **ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು,**[೮೪] ಎಂಬ ಪ್ರಬಂಧಗಳು ಹೊರಬಂದಿವೆ. ೨೦೦೮ರಲ್ಲಿ ಕೃಷ್ಣವೇಣಿ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೮೫] ಯೋಗೀಶ ಹೆಚ್. **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ,**[೮೬] ಮಹಾಕೊಟೇಶ್ವರಗೌಡ ಪಾಟೀಲ **ಬೆಳಗಾವಿ ಜಿಲ್ಲೆಯ ಚಿತ್ರಕಲೆ,**[೮೭] ಸುರೇಶ ಬಡಿಗೇರರ **ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ,**[೮೮] ಸಂತೋಷಕುಮಾರ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ,**[೮೯] ಜಯರಾಜ ಚಿಕ್ಕಪಾಟೀಲರ **ಕರ್ನಾಟಕದ ಜಾಹೀರಾತುಗಳಲ್ಲಿಸಾಂಸ್ಕೃತಿಕ ನೆಲೆಗಳು,**[೯೦] ಮಹೇಶ ಉಮತಾರ ಅವರ ಬಿ.ಪಿ. **ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ,**[೯೧] ಗಿರಿಜಾ ಬಿರಾದಾರರ **ವಿಜಾಪೂರ ಜಿಲ್ಲೆಯ ಚಿತ್ರಕಲೆ,**[೯೨] ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ,**[೯೩] ಕೃಷ್ಣಗೌಡ ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ,**[೯೪] ಮಹಾಂತೇಶ ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,**[೯೫] ಮತ್ತು ೨೦೦೯ ರಲ್ಲಿ ಕಾಂತರಾಜ ಅವರ **ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ,**[೯೬] ರಂಗಸ್ವಾಮಿ ಅವರ **ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ,**[೯೭] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೯೮] ೨೦೧೦ ರಲ್ಲಿ ಭಾನುಮತಿ ಕೆ.ಎಲ್. ಅವರ **ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು,**[೯೯] ದಿನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆಗಳು,**[೧೦೦] ವಾದಿರಾಜ ಎ. ಅವರ **ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು,**[೧೦೧] ಚಿಂತಾಮಣಿ ಅವರ **ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ,**[೧೦೨] ೨೦೧೨ರಲ್ಲಿ, ಶ್ವೇತ ಡಿ.ಎಸ್. ಅವರ **ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ,**[೧೦೩] ಸುರೇಂದ್ರನಾಥ ಡಿ.ಆರ್ ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ,**[೧೦೪] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ,**[೧೦೫] ಎಂ.ವೈ ರಾಜೀವ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು,**[೧೦೬] ಕೆ.ಜಿ ಮಲ್ಲಿಕಾರ್ಜುನ ಅವರ **ಕೆ.ಕೆ.ಹೆಬ್ಬಾರರ ಕಲೆ ಮತ್ತು ಬದುಕು,**[೧೦೭] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ,**[೧೦೮] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೧೦೯] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ,**[೧೧೦] ವೈಶಾಲಿ ಕೆ. ಕಾಂಬಳೆ ಅವರ **ಬೀದರ ಜಿಲ್ಲೆಯ ಚಿತ್ರಕಲೆ,**[೧೧೧] ೨೦೧೩ರಲ್ಲಿ ದಯಾನಂದ ಕೋಳಿ ಅವರ **ಕೊಪ್ಪಳ ಜಿಲ್ಲೆಯ ಚಿತ್ರಕಲೆ,**[೧೧೨] ಸವಿತಾ ಬಡಿಗೇರ ಅವರ **ಧಾರವಾಡ ಜಿಲ್ಲೆಯ**

ಚಿತ್ರಕಲೆ,[೧೧೩] ಹೇಮಂತಕುಮಾರ ಅವರ **ಮೈಸೂರು ಜಿಲ್ಲೆಯ ಚಿತ್ರಕಲೆ,**[೧೧೪] ಬಸವರಾಜ ಕಲೆಗಾರ ಅವರ **ಯಾದಗಿರಿ ಜಿಲ್ಲೆಯ ಚಿತ್ರಕಲೆ,**[೧೧೫] ಗಾಯಿತ್ರಿ ಮಂತ ಅವರ **ಕಲಾವಿದ ಪಿ.ಎಸ್.ಕಡೇಮನಿಯವರ ಕಲೆ ಮತ್ತು ಬದುಕು**[೧೧೬], ವಿಶ್ವನಾಥ ಎಚ್.ಹಂಡೆ ಅವರ **ಸುಬ್ರಮಣ್ಯಂರವರ ದೃಶ್ಯಕಲಾ ಸಾಹಿತ್ಯ,**[೧೧೭] ಖಾದರ ಸಾಬ್ ಇ.ಗುಳೇದಗುಡ್ಡ ಅವರ **ಬಹುಮುಖ ಕಲಾ ಸಾಧಕ ವಿ.ಜಿ.ಕಡೆಮನಿ,**[೧೧೮] ಮಾಯಾದೇವಿ ಅವರ **ಎ.ಎಸ್.ಪಾಟೀಲರವರ ಕಲೆ ಮತ್ತು ಬದುಕು,**[೧೧೯] ಮಂಜುಳಾಬಾಯಿ ಅವರ **ಕೆ.ಜ್ಞಾನೇಶ್ವರರವರ ಕಲೆ ಮತ್ತು ಬದುಕು,**[೧೨೦] ಕೀರ್ತಿವರ್ಮ ಅವರ **ಕೆ.ರಾಮಚಂದ್ರನ್ ರವರ ಕಲೆ ಮತ್ತು ಬದುಕು,**[೧೨೧] ರಾಜಪ್ಪ ಅವರ **ಬಾಗೂರು ಮಾರ್ಕಂಡೇಯ್ಯರವರ ಚಿತ್ರಕಲೆ ಮತ್ತು ಸಾಹಿತ್ಯ,**[೧೨೨] ೨೦೧೫ರಲ್ಲಿ ಅಶೋಕ ಸಿ.ನಡುವಿನಮನಿ ಅವರ **ಹೈದರಾಬಾದ್ ಕರ್ನಾಟಕದ ಭಾವಚಿತ್ರ ಕಲಾವಿದರು-ಒಂದು ಅಧ್ಯಯನ,**[೧೨೩] ವೆಂಕಟೇಶ ಕೆ. ಹೆಚ್ ಅವರ **ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ.**[೧೨೪] ಅಸಂಗಪ್ಪ ಗುಳೇದಗುಡ್ಡ ಅವರ **ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿ ಮನೆತನದ ಕೊಡುಗೆ,**[೧೨೫] ನಟರಾಜ ಎಂ.ಶಿಲ್ಪಿ ಅವರ **ಕನಗನಹಳ್ಳಿಯ ಸ್ತೂಪ ಶಿಲ್ಪಗಳು,**[೧೨೬] ಬಸವರಾಜ ರೊಳ್ಳಿ ಅವರ **ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ,**[೧೨೭] ಸಂತೋಷ ಮಾ. ಬೇವಿನಮರದ ಅವರ **ಹಂಪಿ ಪರಿಸರದ ಹನುಮನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ),**[೧೨೮] ಅಮೀನ್ ರೆಡ್ಡಿ ಅವರ **ವಿಜಯನಗರ ಕಾಲದ ಲೇಪಾಕ್ಷಿ ಭಿತ್ತಿ ಚಿತ್ರಕಲೆ,** ೨೦೧೬[೧೨೯] ನಿಜಲಿಂಗ ಅವರ **ನಿಸರ್ಗ ಚಿತ್ರಕಲಾವಿದರ: ಒಂದು ಅಧ್ಯಯನ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ),**[೧೩೦] ಸಂಗಪ್ಪ ಕೊತ್ತಂಬರಿ ಅವರ **ಚಿಕ್ಕ ಮಕ್ಕಳ ಚಿತ್ರಕಲೆ,** ೨೦೧೬,[೧೩೧] ವಿರೇಶ ರುದ್ರಸ್ವಾಮಿ ಅವರ **ಕರ್ನಾಟಕ ಭಾವ ಚಿತ್ರಕಲಾವಿದರ ಒಂದು ಅಧ್ಯಯನ,** ೨೦೧೬,[೧೩೨] ಸಂಗಮ ದೊಡ್ಡಮನಿ ಅವರ **ಡಿ.ವಿ.ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಲಾಶಾಲೆ: ಒಂದು ಅಧ್ಯಯನ,** ೨೦೧೬,[೧೩೩] ಬಸವರಾಜ್ ಅವರ **ಕರ್ನಾಟಕ ಸಂಯೋಜನೆ ಚಿತ್ರಕಲೆ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ),** ೨೦೧೬.[೧೩೪] ಈ ಎಲ್ಲಾ ಪಿಎಚ್.ಡಿ, ಡಿ.ಲಿಟ್ ಮತ್ತು ಎಂ.ಫಿಲ್ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ., ಮೈಸೂರು ವಿ.ವಿ., ಬೆಂಗಳೂರಿನ ಜೈನ ಡೀಮ್ಡ್ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. (ಬ್ಯಾಚ್ಯುಲರ್ ಆಫ್ ಫೈನ್ ಆರ್ಟ್ಸ್-ಡಿಗ್ರಿ), ಬಿ.ವಿ.ಎ. (ಬ್ಯಾಚ್ಯುಲರ್ ಆಫ್ ವಿಜ್ಯುವಲ್ ಆರ್ಟ್ಸ್-ಡಿಗ್ರಿ) ಐದು ವರ್ಷಗಳ ದೃಶ್ಯಕಲೆಯಲ್ಲಿ ಡಿಪ್ಲೊಮಾ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೧೦೦೦ಕ್ಕೂ ಅಧಿಕ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ.

ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕ ವಾಗಿ, ಸದೃಢವಾಗಿ ಮುನ್ನಡೆಯುತ್ತಲಿರುವುದು ದೃಶ್ಯಕಲಾ ಕ್ಷೇತ್ರದಲ್ಲಾದ ಬಹುದೊಡ್ಡ ಬದಲಾವಣೆ ಎಂದರೆ ತಪ್ಪಾಗಲಾರದು. ಈ ಮೇಲಿನ ಎಲ್ಲಾ ಅಧ್ಯಯನಗಳು ತನ್ನದೇ ಆದ ಇತಿ–ಮಿತಿಗಳಲ್ಲಿ ನಡೆದಿವೆ.

ಈ ಎಲ್ಲಾ ಪಿಎಚ್.ಡಿ, ಡಿ.ಲಿಟ್ ಮತ್ತು ಎಂ.ಫಿಲ್ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ., ಮೈಸೂರು ವಿ.ವಿ., ಬೆಂಗಳೂರಿನ ಜೈನ ಡೀಮ್ಡ್ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. (ಬ್ಯಾಚ್ಯುಲರ್ ಆಫ್ ಫೈನ್ ಆರ್ಟ್ಸ್ – ಡಿಗ್ರಿ), ಬಿ.ವಿ.ಎ. (ಬ್ಯಾಚ್ಯುಲರ್ ಆಫ್ ವಿಜ್ಯುವಲ್ ಆರ್ಟ್ಸ್ – ಡಿಗ್ರಿ) ಐದು ವರ್ಷಗಳ ದೃಶ್ಯಕಲೆಯಲ್ಲಿ ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೧೦೦೦ಕ್ಕೂ ಅಧಿಕ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿ, ಸದೃಢವಾಗಿ ಮುನ್ನಡೆಯುತ್ತಲಿರುವುದು ದೃಶ್ಯಕಲಾ ಕ್ಷೇತ್ರದಲ್ಲಾದ ಬಹುದೊಡ್ಡ ಬದಲಾವಣೆ ಎಂದರೆ ತಪ್ಪಾಗಲಾರದು.

ಪ್ರಮುಖವಾಗಿ ಕರ್ನಾಟಕದಲ್ಲಿ ವಿಜಯನಗರ ಕಾಲದಲ್ಲಿನ ಭಿತ್ತಿ ಚಿತ್ರಕಲೆಯು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಅಷ್ಟೇ ಅಲ್ಲದೇ ದಕ್ಷಿಣ ಕರ್ನಾಟಕ ಭಾಗದ ಹಿರಿಯೂರಿನ ತೇರುಮಲ್ಲೇಶ್ವರ, ಶಿರಾದ ರೇವಣಸಿದ್ದೇಶ್ವರ, ಸಿಬಿಯ ನರಸಿಂಹ ದೇವಾಲಯ, ಹರದನಹಳ್ಳಿಯ ಲಕ್ಷ್ಮೀದೇವಾಲಯ ಹಾಗೂ ಪಕ್ಕದ ರಾಜ್ಯವಾದ ಆಂಧ್ರದ ಲೇಪಾಕ್ಷಿ, ಕಾಳಹಸ್ತಿ, ಸೋಮಾಪಲ್ಲಿ, ತಾಡಪತ್ರಿ, ಚಪ್ಪಗಿರಿ, ಪೆನುಗೊಂಡಗಳಲ್ಲಿ ಮತ್ತು ತಮಿಳುನಾಡಿನ ಸುಮಾರು ಹದಿನಾಲ್ಕು ಸ್ಥಳಗಳಲ್ಲಿ ಕಂಡುಬರುತ್ತದೆ ಎಂದು ಸಂಶೋಧಕ ಡಾ.ಯಾದಪ್ಪ ಪರದೇಶಿ[೧೩೫] ಯವರು ತನ್ನ ಮಹಾಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳನ್ನು ಮಾತ್ರ ನನ್ನ ಅಧ್ಯಯನಕ್ಕೆ ಸೀಮಿತಗೊಳಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಹಿಂದಿನ ಸಾವಿರಾರು ವರ್ಷಗಳಲ್ಲಿ ಮನುಷ್ಯಕುಲ ವಿಕಸನದ ಹಲವು ಮಜಲುಗಳನ್ನು ಕಂಡಿರುವ ಕರ್ನಾಟಕವು ಐತಿಹಾಸಿಕವಾಗಿ ನಾನಾ ಧರ್ಮ, ಪರಂಪರೆಗಳ ಹುಟ್ಟಿಗೆ ಕಾರಣವಾಗಿದೆ. ಒಟ್ಟಾರೆ ಈ ಸಾಂಸ್ಕೃತಿಕ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ರಚನೆಗೊಂಡ ಭಿತ್ತಿಚಿತ್ರಗಳು ಆಯಾ ಪ್ರದೇಶದ ಜನ ಸಮುದಾಯದ ಆಶೋತ್ತರಗಳನ್ನು ಬಿಂಬಿಸುತ್ತದೆ. ಇಂತಹ ಅಧ್ಯಯನವೊಂದರ ಅಗತ್ಯತೆಯನ್ನು ಗಮನಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಭಿತ್ತಿಚಿತ್ರಗಳ ಕುರಿತು ಇದುವರೆಗೆ ನಡೆದ ಅಧ್ಯಯನ :

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಸ್ಥೂಲವಾಗಿ ಹೀಗೆ ಸಮೀಕ್ಷಿಸಲಾಗಿದೆ.

ಭಾರತದಲ್ಲಿ ೧೮೩೦ರಲ್ಲಿ ಪ್ರಕಟವಾದ ರಾಮರಾಜ್ ಅವರ "ಎಸ್ಸೇ ಆನ್ ದಿ ಆರ್ಕಿಟೆಕ್ಚರ್ ಆಫ್ ದಿ ಹಿಂದೂಸ್"[೧೩೬] ಎಂಬ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕೃತಿಯಾಗಿದ್ದು, ಮನೆ, ಅರಮನೆ, ದೇವಾಲಯ, ಚಿತ್ರಶಾಲೆ, ಮುಂತಾದ ಹಿಂದೂ ವಾಸ್ತು ರಚನೆಗಳ ಸ್ವರೂಪ ಹೇಳುವಾಗ ಸಾಂದರ್ಭಿಕವಾಗಿ ಭಿತ್ತಿ ಚಿತ್ರಕಲೆಯನ್ನು ಪ್ರಸ್ತಾಪಿಸಿದ್ದಾರೆ. ೧೮೮೭ರಲ್ಲಿ ಜೆ.ಗ್ರಿಫಿತ್ ಅವರು 'ಪೇಂಟಿಂಗ್ಸ್ ಆಫ್ ಅಜಂತಾ' ಎಂಬ ಕೃತಿ ರಚಿಸಿದ್ದಾರೆ.[೧೩೭] ೧೯೦೮ರಲ್ಲಿ ಇ.ಬಿ.ಹ್ಯಾವೆಲ್‌ರು[೧೩೮] 'ಇಂಡಿಯನ್ ಸ್ಕಲ್ಪಚರ್ ಆ್ಯಂಡ್ ಪೇಂಟಿಂಗ್' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಇವುಗಳಲ್ಲಿ ಭಿತ್ತಿ ಚಿತ್ರಗಳ ಕುರಿತು ವಿವರಣೆ ಮಾಡಲಾಗಿದೆ. ೧೯೧೦ರಲ್ಲಿ ಆನಂದಕುಮಾರ ಸ್ವಾಮಿಯವರಿಂದ 'ಇಂಡಿಯನ್ ಡ್ರಾಯಿಂಗ್'[೧೩೯] ಕುರಿತು ಎರಡು ಸಂಪುಟಗಳು ಮತ್ತು ಇವರಿಂದಲೇ ೧೯೧೧ರಲ್ಲಿ "ಸೆಲೆಕ್ಟಡ್ ಎಕ್ಸಾಂಪಲ್ಸ್ ಆಫ್ ಇಂಡಿಯನ್ ಆರ್ಟ್"[೧೪೦] ಎಂಬ ಕೃತಿಗಳು ಬಂದಿವೆ. ಅಲ್ಲದೇ ೧೯೧೧ರಲ್ಲಿ ವಿ.ವಿ.ಸ್ಮಿತ್ ಅವರ 'ಎ ಹಿಸ್ಟರಿ ಆಫ್ ಫೈನ್ ಆರ್ಟ್ ಇನ್ ಇಂಡಿಯಾ ಆ್ಯಂಡ್ ಸಿಲೋನ್', ಎಂಬ ಗ್ರಂಥ[೧೪೧]ದಲ್ಲಿ ಭಿತ್ತಿಚಿತ್ರಗಳ ವಿಷಯ ಪ್ರಸ್ತಾಪಿತವಾಗಿದೆ. ೧೯೧೨ರಲ್ಲಿ ಮಧುಸೂಧನ ಮತ್ತು ಮಾಧವ ಪ್ರಸಾದ ಶರ್ಮಾ ಅವರು ವಿಷ್ಣುಧರ್ಮೋತ್ತರ ಮಹಾಪುರಾಣವನ್ನು ಸಂಪಾದಿಸಿದ್ದಾರೆ.[೧೪೨] ಇದರಲ್ಲಿ ಭಿತ್ತಿ ಚಿತ್ರಕಲೆಯ ಹಲವಾರು ಅಂಶಗಳು ಪ್ರಸ್ತಾಪಿಸಲ್ಪಟ್ಟಿವೆ. ೧೯೧೩ ರಲ್ಲಿ ಆನಂದ ಕುಮಾರಸ್ವಾಮಿಯವರು 'ಆರ್ಟ್ಸ್ ಆ್ಯಂಡ್ ಕ್ರಾಫ್ಟ್ ಆಫ್ ಇಂಡಿಯಾ ಆ್ಯಂಡ್ ಸಿಲೋನ್' ಕೃತಿ ರಚಿಸಿದ್ದು[೧೪೩] ಅದರಲ್ಲಿಯೂ ಸಾಂದರ್ಭಿಕವಾಗಿ ಭಿತ್ತಿಚಿತ್ರಕಲೆ ಉಲ್ಲೇಖ ದೊರೆಯುತ್ತದೆ. ೧೯೧೫ರಲ್ಲಿ ಲೇಡಿ ಹೆರಿಂಗ್‌ಹ್ಯಾಮ್ ಅವರು[೧೪೪] ಅಜಂತಾ ಭಿತ್ತಿ ಚಿತ್ರಗಳ ಭಿತ್ತಿಸಿದ್ಧತೆ, ಚಿತ್ರರಚನಾ ಕ್ರಮ, ವರ್ಣಸಂಯೋಜನೆಗಳ ಬಗ್ಗೆ ವಿವರಿಸಿದ್ದಾರೆ.

೧೯೧೭ರಲ್ಲಿ ಪರ್ಸಿಬ್ರೌನರು[೧೪೫] 'ಇಂಡಿಯನ್ ಪೇಂಟಿಂಗ್' ಎಂಬ ಕೃತಿಯಲ್ಲಿ ಭಾರತದ ಪ್ರಾಗೈತಿಹಾಸಿಕ ಭಿತ್ತಿಚಿತ್ರ ಮತ್ತು ಬೌದ್ಧ ಸಂಪ್ರದಾಯದ ಭಿತ್ತಿ ಚಿತ್ರಗಳನ್ನು ಪರಿಚಯಿಸಿದ್ದಾರೆ. ೧೯೨೦ರಲ್ಲಿ ಇ.ಬಿ.ಹ್ಯಾವೆಲ್ ಅವರು[೧೪೬] ಭಾರತೀಯ ಕಲೆಯ ಬಗ್ಗೆ ಕಿರುಪುಸ್ತಕ ರಚಿಸಿದ್ದು ಇಲ್ಲಿಯೂ ಭಿತ್ತಿಚಿತ್ರಗಳ ಸ್ಥೂಲ ವಿವರಣೆಯಿದೆ. ೧೯೨೧ರಲ್ಲಿ ಬಿನಯನ್ ಅವರು[೧೪೭] 'ದಿ ಕೋರ್ಟ ಪೇಂಟರ್ ಆಫ್ ದಿ ಗ್ರ್ಯಾಂಡ್ ಮೊಗಲ್ಸ್' ಎಂಬ ಕೃತಿ ರಚಿಸಿದ್ದು ಅಲ್ಲಿ ಭಾರತೀಯ ಭಿತ್ತಿ ಚಿತ್ರಗಳ ಸ್ಥೂಲವಾದ ಪ್ರಸ್ತಾಪವಿದೆ. ೧೯೨೮ರಲ್ಲಿ ಸ್ಟೆಲ್ಲಾ ಕ್ರಾಮ್ರಿಷ್[೧೪೮] ವಿಷ್ಣುಧರ್ಮೋತ್ತರ ಪುರಾಣದ 'ಚಿತ್ರಸೂತ್ರ' ಮತ್ತು 'ಪ್ರತಿಮಾಲಕ್ಷಣ' ಭಾಗಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಹಾಗೆಯೇ ೧೯೨೬ರಲ್ಲಿ ಆನಂದಕುಮಾರ ಸ್ವಾಮಿಯವರು[೧೪೯] ಶಿಲ್ಪರತ್ನ ಗ್ರಂಥದ 'ಚಿತ್ರಲಕ್ಷಣ' ಭಾಗವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಇವುಗಳಲ್ಲಿ ಆಯಾ ಮೂಲ ಗ್ರಂಥಗಳಲ್ಲಿ ಹೇಳಲಾದ ಭಿತ್ತಿ ಚಿತ್ರಕಲೆಯ ಅನೇಕ ವಿವರಗಳಿವೆ.

೧೯೨೬ರಲ್ಲಿ ಎನ್.ಸಿ.ಮೆಹತಾ ಅವರ[೧೫೦] 'ಸ್ಟಡೀ ಇನ್ ಇಂಡಿಯನ್ ಪೇಂಟಿಂಗ್' ಓ.ಸಿ.ಗಂಗೊಲಿಯವರ[೧೫೧] ರಜಪೂತ್ ಪೇಂಟಿಂಗ್ ಕೃತಿಗಳು ಪ್ರಕಟವಾಗಿದ್ದು ಇವುಗಳಲ್ಲಿ ಭಿತ್ತಿಚಿತ್ರಗಳ ಉಲ್ಲೇಖಗಳಿವೆ. ೧೯೨೬ರಲ್ಲಿ ಆರ್.ಶ್ಯಾಮಾಶಾಸ್ತ್ರಿ ಅವರ 'ಅಭಿಲಷಿತಾರ್ಥ ಚಿಂತಾಮಣಿ' ಗ್ರಂಥದಲ್ಲಿ[೧೫೨] ಮೂಲದಲ್ಲಿರುವಂತೆ ಭಿತ್ತಿಚಿತ್ರಕಲೆಯ ತಾಂತ್ರಿಕ ಅಂಶಗಳಿರುವುದು ವಿಶೇಷವಾಗಿದೆ. ೧೯೨೭ರಲ್ಲಿ ಆನಂದಕುಮಾರ ಸ್ವಾಮಿಯವರು[೧೫೩] 'ಹಿಸ್ಟರಿ ಆಫ್ ಇಂಡಿಯನ್ ಆ್ಯಂಡ್ ಇಂಡೋನೇಷಿಯನ್ ಆರ್ಟ' ಕೃತಿಯಲ್ಲಿ ಭಾರತೀಯ ಮತ್ತು ಇಂಡೋನೇಷಿಯಾದ ಭಿತ್ತಿಚಿತ್ರಕಲಾ ಇತಿಹಾಸವನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ೧೯೨೭ರಲ್ಲಿಯೇ ಜೆ.ಮಾರ್ಷಲ್, ಗಾರ್ಡೆ, ಜೆ.ಓಗೆಲ್, ಇ.ಬಿ.ಹ್ಯಾವೆಲ್, ಕಜಿನ್ಸ್ ಅವರುಗಳು ಕೂಡಿ[೧೫೪] ಗ್ವಾಲಿಯರ್ ಸಮೀಪ ಇರುವ 'ಬಾಗ್' ಗುಹೆಗಳ ಬಗ್ಗೆ ಪ್ರಕಟಿಸಿದ್ದು, ಅಲ್ಲಿರುವ ಭಿತ್ತಿ ಚಿತ್ರಗಳ ವಿಷಯ ಕುರಿತು ವಿವರ ನೀಡಿದ್ದಾರೆ.

೧೯೩೦ ರಿಂದ ೧೯೫೮ರ ಅವಧಿಯಲ್ಲಿ ಜಿ.ಯಜದಾನಿ ಅವರು[೧೫೫] 'ಅಜಂತಾ' ಕುರಿತು ನಾಲ್ಕು ಸಂಪುಟಗಳನ್ನು ಹೊರತಂದಿದ್ದು, ಅಜಂತಾ ಭಿತ್ತಿ ಚಿತ್ರಗಳ ವಿವರವಾದ ವಿಶ್ಲೇಷಣೆ ಇವುಗಳಲ್ಲಿದೆ. ೧೯೩೨ರಲ್ಲಿ ಆನಂದಕುಮಾರ ಸ್ವಾಮಿಯವರು 'ವಿಷ್ಣುಧರ್ಮೋತ್ತರ ಪುರಾಣ'ದ ೪೧ನೇ ಅಧ್ಯಾಯವನ್ನು ಪ್ರಕಟಿಸಿದ್ದಾರೆ.[೧೫೬] ಕೆ.ಪಿ.ಜಯಸ್ವಾಲ್[೧೫೭] ಅವರು ಶಿಲ್ಪರತ್ನ ಗ್ರಂಥದ 'ಚಿತ್ರ ಲಕ್ಷಣ' ಭಾಗವನ್ನು ಕುರಿತು ವಿಶ್ಲೇಷಣಾತ್ಮಕವಾದ ಟಿಪ್ಪಣಿ ಬರೆದಿದ್ದಾರೆ. ಇವುಗಳಲ್ಲಿ ಭಿತ್ತಿಚಿತ್ರಗಳ ರಚನಾ ಕ್ರಮಗಳು ಮತ್ತು ಚಿತ್ರಲಕ್ಷಣಗಳನ್ನು ಹೇಳಲಾಗಿದೆ.

೧೯೩೩ರಲ್ಲಿ ವ್ಹಿ.ರಾಘವನ್ ಅವರು[೧೫೮] "ಸಮ್ ಸಂಸ್ಕೃತ್ ಟೆಕ್ಸ್ಟ್ ಆನ್ ಪೇಂಟಿಂಗ್" ಎಂಬ ಗ್ರಂಥದಲ್ಲಿ ಭಿತ್ತಿ, ಸಿದ್ಧತಾ ವಿಧಾನ, ಚಿತ್ರ ರಚನಾ ಕ್ರಮ, ವರ್ಣ, ಕುಂಚ, ಅಂಟುಮಾಧ್ಯಮ ಮುಂತಾದ ತಾಂತ್ರಿಕ ವಿಷಯಗಳ ಕುರಿತು ಚರ್ಚಿಸಿದ್ದಾರೆ. ೧೯೩೪ರಲ್ಲಿ ಆನಂದಕುಮಾರ ಸ್ವಾಮಿಯವರು[೧೫೯] 'ಮಾನಸೋಲ್ಲಾಸ' (ಅಭಿಲಷಿತಾರ್ಥ ಚಿಂತಾಮಣಿ) ಕೃತಿಯನ್ನು ಇಂಗ್ಲೀಷಿಗೆ ಭಾಷಾಂತರಿಸಿದವರಲ್ಲದೇ ಅದರ ಮೇಲೆ ಟಿಪ್ಪಣಿಯನ್ನೂ ಬರೆದಿದ್ದಾರೆ. ಇಲ್ಲಿ ಭಿತ್ತಿಸಿದ್ಧತಾ ವಿಧಾನ, ಚಿತ್ರ ರಚನಾ ಹಂತ, ಅಲ್ಲದೇ ಅಂಟುಮಾಧ್ಯಮ ಮುಂತಾದ ತಾಂತ್ರಿಕ ಅಂಶಗಳ ಚರ್ಚೆ ಇದೆ.

೧೯೩೭ರಲ್ಲಿ ಪ್ರಕಟವಾದ ಸ್ಟೆಲ್ಲಾ ಕ್ರಾಮ್ರಿಷ್ ಅವರ[೧೬೦] ಸರ್ವೇ ಆಫ್ ಪೇಂಟಿಂಗ್ ಇನ್ ದಿ ಡೆಕ್ಕನ್' ೧೯೩೮ರಲ್ಲಿ ಪ್ರಕಟವಾದ ಜೆ.ಖಂಡಲವಾಲ್[೧೬೧] ಅವರ 'ಇಂಡಿಯನ್ ಸ್ಕಲ್ಪ್ಚರ್ ಆ್ಯಂಡ್ ಪೇಂಟಿಂಗ್' ಕೃತಿಗಳಲ್ಲಿ ಭಿತ್ತಿ ಚಿತ್ರಗಳ ಕುರಿತಾಗಿ ವಿವರಗಳು ದೊರೆಯುತ್ತವೆ. ೧೯೪೮ರಲ್ಲಿ ಪೊಡವಾಲ್ ಮತ್ತು ಕಸಿನ್ಸ್ ಅವರ[೧೬೨] ಆರ್ಟ್ಸ್ ಆ್ಯಂಡ್ ಕ್ರಾಫ್ಟ್ ಆಫ್ ತ್ರಾವಣಕೋರ್' ಮತ್ತು ೧೯೫೨ರಲ್ಲಿ ಜಿ.ಯಜದಾನಿ ಅವರ[೧೬೩] ದಿ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್' ಕೃತಿಗಳಲ್ಲಿ ಸಾಂದರ್ಭಿಕವಾಗಿ ಭಿತ್ತಿ ಚಿತ್ರಗಳ ವಿವರಗಳು ದೊರೆಯುತ್ತವೆ.

೧೯೫೮ರಲ್ಲಿ ಪ್ರಿಯಬಾಲಾ ಶಹಾ ಅವರು[೧೬೪] ವಿಷ್ಣುಧರ್ಮೋತ್ತರ ಪುರಾಣವನ್ನು ಮೂಲ ಮತ್ತು ಅನುವಾದ ಹೀಗೆ ಎರಡು ಸಂಪುಟಗಳಲ್ಲಿ ಪ್ರಟಕಸಿದರು. ಮೊದಲ ಸಂಪುಟ ಮೂಲ ಕೃತಿಯಾಗಿದ್ದರೆ, ಎರಡನೆಯ ಸಂಪುಟ ಅನುವಾದವಾಗಿದೆ. ೧೯೬೫ರಲ್ಲಿ ಪ್ರಕಟವಾದ ಮದನ ಜೀತ್ ಸಿಂಗ್ ಅವರ[೧೬೫] 'ದಿ ಕೇವ್ ಪೇಂಟಿಂಗ್ಸ್ ಆಫ್ ಅಜಂತಾ' ೧೯೬೯ರಲ್ಲಿ ಪ್ರಕಟವಾದ ಎ.ಗೋಪಾಲರಾವ್ ಅವರ[೧೬೬] ಲೇಪಾಕ್ಷಿ ಕೃತಿಗಳಲ್ಲಿ ಭಿತ್ತಿಚಿತ್ರಗಳ ವಸ್ತುವಿಷಯ ಕುರಿತಾಗಿ ವಿವರಿಸಲಾಗಿದೆ.

೧೯೭೧ರಲ್ಲಿ ಪ್ರಕಟವಾದ ಕೆ.ಆರ್.ಶ್ರೀನಿವಾಸನ್ ಅವರ[೧೬೭] 'ಟೆಂಪಲ್ಸ್ ಆಫ್ ಸೌತ್ ಇಂಡಿಯಾ' ಕೃತಿಯಲ್ಲಿ ದಕ್ಷಿಣ ಭಾರತದ ಕೆಲವು ದೇವಾಲಯಗಳಲ್ಲಿ ರಚನೆಯಾದ ಭಿತ್ತಿಚಿತ್ರಗಳ ಮಾಹಿತಿಯನ್ನು ಕೊಡುತ್ತಾರೆ. ೧೯೭೪ರಲ್ಲಿ ಶ್ರೀಕುಮಾರನ 'ಚಿತ್ರಲಕ್ಷಣ' ಗ್ರಂಥವನ್ನು ಅಶೋಕ ಭಟ್ಟಾಚಾರ್ಯ ಅವರು[೧೬೮] ಸಂಪಾದಿಸಿದ್ದು ಅದರಲ್ಲಿ ಚಿತ್ರಕಲೆಯ ವಿವರಗಳು ಬರುತ್ತವೆ. ೧೯೭೬ರಲ್ಲಿ ಬಿ.ಎನ್.ಗೋಸ್ವಾಮಿ ಮತ್ತು ಎ.ಜೆ.ಥಮೆನ್ ಅವರ[೧೬೯] 'ಆ್ಯನ್ ಅರ್ಲಿ ಡಾಕ್ಯುಮೆಂಟ್ ಆಫ್ ಇಂಡಿಯನ್ ಆರ್ಟ' ಕೃತಿಯಲ್ಲಿ ಭಾರತೀಯ ಪ್ರಾಚೀನ ಚಿತ್ರಕಲೆಯ ಉಲ್ಲೇಖಗಳನ್ನು ಚರ್ಚಿಸಲಾಗಿದೆ.

೧೯೭೬ರಲ್ಲಿ ಆರ್.ನಾಥ ಅವರ[೧೭೦] 'ಹಿಸ್ಟರಿ ಆಫ್ ಡೆಕಾರೇಟಿವ್ ಆರ್ಟ್ ಇನ್ ಮೊಗಲ್ ಆರ್ಕಿಟೆಕ್ಚರ್' ಕೃತಿಯಲ್ಲಿ ಮೊಗಲ್ ಕಟ್ಟಡಗಳಲ್ಲಿನ ವರ್ಣಭಿತ್ತಿ ಚಿತ್ರಗಳ ಕುರಿತು ಚರ್ಚಿಸಲಾಗಿದೆ. ೧೯೭೬ರಲ್ಲಿ ಎ.ಕೆ.ಭಟ್ಟಾಚಾರ್ಯ ಅವರ[೧೭೧] ಟೆಕ್ನಿಕ್ ಆಫ್ ಇಂಡಿಯನ್ ಪೇಂಟಿಂಗ್' ೧೯೮೦ರಲ್ಲಿ ಜಯಂತ್ ಚಕ್ರವರ್ತಿ ಅವರ[೧೭೨] 'ಟೆಕ್ನಿಕ್ಸ್ ಇನ್ ಇಂಡಿಯನ್ ಮ್ಯುರಲ್ ಪೇಂಟಿಂಗ್' ಕೃತಿಗಳಲ್ಲಿ ಭಾರತೀಯ ಭಿತ್ತಿ ಚಿತ್ರಕಲೆಯ ತಯಾರಿಕೆ ಅವುಗಳ ಬಳಕೆ, ಮುಂತಾದ ಚಿತ್ರರಚನಾ ತಾಂತ್ರಿಕ ಅಂಶಗಳ ಬಗ್ಗೆ ಪ್ರಾಚೀನ ಶಿಲ್ಪಶಾಸ್ತ್ರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ೧೯೮೦ರಲ್ಲಿ ಪ್ರಕಟಗೊಂಡ ಜಯ ಅಪ್ಪಸಾಮಿ ಅವರ[೧೭೩] 'ತಂಜಾವೂರು ಪೇಂಟಿಂಗ್ಸ್ ಆಫ್ ಮರಾಠಾ ಪಿರೇಡ್', ೧೯೮೦ರಲ್ಲಿ ಹೆಚ್.ಹೆರಾಸ್ ಅವರ[೧೭೪] ಸೌತ್ ಇಂಡಿಯಾ ಅಂಡರ್ ದಿ ವಿಜಯನಗರ ಎಂಪಾಯರ್' ಕೃತಿಗಳಲ್ಲಿ ಭಿತ್ತಿಚಿತ್ರಗಳ ವಿವರಗಳು ದೊರೆಯುತ್ತವೆ.

೧೯೮೨ರಲ್ಲಿ ಬಾಳಾಸಾಹೇಬ್ ಪಂತ್ ಅವರ[೧೭೫] 'ಅಜಂತಾ' ಕೃತಿ ಅಜಂತಾ ಭಿತ್ತಿಚಿತ್ರಗಳ ವಿವರಗಳನ್ನು ಒಳಗೊಂಡಿದೆ. ೧೯೮೨ರಲ್ಲಿ ಪುರಾತತ್ವ ಇಲಾಖೆಯ 'ಮಾಂಡು' ಬಗೆಗೆ ಕೈಪಿಡಿ ಪುಸ್ತಕವನ್ನು ಪ್ರಕಾಶಿಸಿದ್ದು ಅದರಲ್ಲಿ ಅಲ್ಲಿನ ಪ್ರಾಚೀನ ಕಟ್ಟಡಗಳ ವರ್ಣಮಯ ನಕ್ಷೆಗಳನ್ನು ಪ್ರಸ್ತಾಪಿಸಲಾಗಿದೆ.[೧೭೬] ಮಾರ್ಕ್ ಜಬ್ರೋವೆಸ್ಲಿ ಅವರ ಅವರ[೧೭೭] 'ಡೆಕ್ಕನೀ ಪೇಂಟಿಂಗ್ಸ್' ಕೃತಿಗಳಲ್ಲಿ ಸಾಂದರ್ಭಿಕವಾಗಿ ಭಿತ್ತಿಚಿತ್ರಗಳ ನೆಲೆಗಳ ಕುರಿತು, ಚಿತ್ರಗಳ ಸಧ್ಯದ ಪರಿಸ್ಥಿತಿ, ರಚನೆಯಾದ ಕಾಲಮಾನ. ಬಳಕೆಗೊಂಡ ವರ್ಣ ಮುಂತಾದ ವಿಷಯಗಳ ಬಗೆಗೆ ಮಾಹಿತಿ ನೀಡಿದ್ದಾರೆ. ಜೆ.ಸಿ.ನಾಗಪಾಲ್[೧೭೮] ಅವರ ಮ್ಯೂರಲ್ ಪೆಂಟಿಂಗ್ ಇನ್ ಇಂಡಿಯಾದಲ್ಲಿ ಭಿತ್ತಿ ಚಿತ್ರಗಳ ಕುರಿತು ಸವಿಸ್ತಾರವಾಗಿ ತಿಳಿಸಲಾಗಿದೆ. ೧೯೯೨ರಲ್ಲಿ ಎಡಿಟ್ ಟಮೊರಿ ಅವರ[೧೭೯] 'ಎ ಹಿಸ್ಟರಿ ಆಫ್

ಫೈನ್ ಆರ್ಟ್ಸ್ ಇನ್ ಇಂಡಿಯಾ ಆ್ಯಂಡ್ ವೆಸ್ಟ್' ೧೯೬೮ರಲ್ಲಿ ಸಿ.ಶಿವರಾಮಮೂರ್ತಿ ಅವರ ಸೌತ್ ಇಂಡಿಯನ್ ಪೇಂಟಿಂಗ್ಸ್[೧೮೦] ಹಾಗೂ ೧೯೭೦ರಲ್ಲಿ ಇಂಡಿಯನ್ ಪೇಂಟಿಂಗ್ಸ್[೧೮೧] ಕೃತಿಗಳು ಪ್ರಮುಖವಾಗಿ ಭಿತ್ತಿಚಿತ್ರಕಲೆಯ ಕುರಿತಾದ ಮಾಹಿತಿ ಕೊಡುತ್ತವೆ. ಇವುಗಳಲ್ಲದೇ 'ಆರ್ಟ ಆ್ಯಂಡ್ ಕ್ರಾಫ್ಟ್ ಆಫ್ ಇಂಡಿಯಾ'[೧೮೨] ದಿ ಆರ್ಟ ಆ್ಯಂಡ್ ಆರ್ಕಿಟೆಕ್ಚರ್ ಆಫ್ ಇಂಡಿಯನ್ ಸಬ್‌ಕಾಂಟಿನೆಂಟ್.[೧೮೩] ಇಂಡಿಯನ್ ಆರ್ಟ[೧೮೪] ಮುಂತಾದ ಕೃತಿಗಳಲ್ಲಿ ಸಾಂದರ್ಭಿಕವಾಗಿ ಭಾರತೀಯ ಭಿತ್ತಿ ಚಿತ್ರಕಲೆಯ ವಿವರಗಳು ಕಂಡು ಬರುತ್ತವೆ. ಈ ಪುಸ್ತಕಗಳಲ್ಲದೇ ಹಲವು ಲೇಖನಗಳೂ ಭಿತ್ತಿ ಚಿತ್ರಕಲೆಯ ವಿಷಯವಾಗಿ ವಿವರಗಳನ್ನು ಕೊಡುತ್ತಿದ್ದು ಅವುಗಳಿಗೆ ಸಂಬಂಧಿಸಿದ ಲೇಖನಗಳನ್ನು ಇಲ್ಲಿ ಹೆಸರಿಸಿದೆ.

೧೯೧೩ರಲ್ಲಿ ಸಮರೇಂದ್ರನಾಥ ಗುಪ್ತ,[೧೮೫] ೧೯೧೮ರಲ್ಲಿ ಗೋಪಿನಾಥರಾವ್.[೧೮೬] ೧೯೩೧ರಲ್ಲಿ ಕೆ.ಬಿ.ರಾಮಚಂದ್ರನ್ ಅವರ[೧೮೭] ಲೇಖನಗಳು ಭಿತ್ತಿಚಿತ್ರಕಲೆಯ ಬಗ್ಗೆಯೇ ಇವೆ. ಸಿ.ಶಿವರಾಮಮೂರ್ತಿಯವರ ಎರಡು ಲೇಖನಗಳು ೧೯೩೨ರಲ್ಲಿ ಮತ್ತು ೧೮೮ರಲ್ಲಿ ಬಂದಿದ್ದು, ಒಂದು ಶಿವತತ್ವರತ್ನಾಕರ[೧೮೮] ಮತ್ತು ಸಂಪ್ರಾಸ್ಕನ್ಸ್ ಆಫ್ ದಿ ಚೋಳಾಸ್[೧೮೯], ಮತ್ತೊಂದು ಜರ್ನಲ್ ಆಫ್ ಓರಿಯಯಂಟ್ ರಿಸರ್ಚ್[೧೯೦] ಸಿ.ಶಿವರಾಮೂರ್ತಿ ಮೂರು ಲೇಖನಗಳು ಒಂದು ಪೆಂಟಿಂಗ್ ಅಂಡ್ ಅಲೈಡ್ ಆರ್ಟ್ಸ್[೧೯೧] ಜರ್ನಲ್ ಆಫ್ ಓರಿಯನ್ಟ್ ರಿಸರ್ಚ್[೧೯೨] ಕಾಳಿದಾಸ ಅಂಡ್ ಪೆಂಟಿಂಗ್[೧೯೩] ಎಂಬ ಮೂರು ಲೇಖನಗಳನ್ನು ೧೯೩೩ರಲ್ಲಿ ಪ್ರಕಟವಾಗಿದ್ದು, ಇದರಲ್ಲಿ ಸಂಪೂರ್ಣವಾಗಿ ಭಿತ್ತಿ ಚಿತ್ರಕಲೆಯ ವಿಷಯ ತಿಳಿಸಿಕೊಡುತ್ತದೆ. ೧೯೩೪ರಲ್ಲಿ ಎಸ್.ಕೆ.ಗೋವಿಂದಸ್ವಾಮಿ[೧೯೪] ಟಿ.ಎನ್.ರಾಮಚಂದ್ರನ್[೧೯೫] ಅವರ ಒಂದೊಂದು ಲೇಖನಗಳಿದ್ದರೆ, ಸಿ.ಶಿವರಾಮಮೂರ್ತಿಯವರ ಐದು ಲೇಖನಗಳು[೧೯೬] ೧೯೩೪ರಲ್ಲೇ ಬಂದಿದ್ದು ಇವುಗಳೆಲ್ಲ ಭಿತ್ತಿಚಿತ್ರಗಳ ಕುರಿತಾಗಿ ಸಾಂದರ್ಭಿಕ ವಿವರಗಳನ್ನು ಕೊಡುತ್ತವೆ. ಸಿ.ಶಿವರಾಮಮೂರ್ತಿಯವರ ಮತ್ತೊಂದು ಲೇಖನ ೧೯೩೫ರಲ್ಲಿ[೧೯೭] ಬಂದಿದೆ. ೧೯೩೫ರಲ್ಲಿಯೇ ವ್ಹಿ.ರಾಘವನ್[೧೯೮] ಮತ್ತು ಅನುಜನ್ ಆಚನ್[೧೯೯] ಅವರ ಲೇಖನಗಳೂ ಪ್ರಕಟವಾಗಿವೆ.

೧೯೩೬ರಲ್ಲಿ ಸಿ.ಶಿವರಾಮಮೂರ್ತಿ[೨೦೦] ಮತ್ತು ಅನುಜನ್ ಆಚನ್[೨೦೧] ಅವರ ಲೇಖನಗಳು ಬಂದಿವೆ. ಹಾಗೆಯೇ ೧೯೩೭ರಲ್ಲಿ ಸಿ.ಶಿವರಾಮಮೂರ್ತಿ[೨೦೨] ಆರ್.ವಿ.ಪೊಡವಾಲ್[೨೦೩] ಮತ್ತು ಸ್ಟೆಲ್ಲಾಕ್ರಾಮ್ರಿಷ್[೨೦೪] ೧೯೪೯ರಲ್ಲಿ ಟಿ.ಜಿ.ಅರವಮುತ್ತನ್.[೨೦೫] ೧೯೫೨ರಲ್ಲಿ ಜಿ.ಗೋಯೇತ್.[೨೦೬] ೧೯೫೭ರಲ್ಲಿ ಓ.ಸಿ.ಗಂಗೂಲಿ[೨೦೭] ಅವರ ಲೇಖನಗಳು ಪ್ರಕಾಶಿತಗೊಂಡಿವೆ. ೧೯೫೯ರಲ್ಲಿ ಸಿ.ಶಿವರಾಮಮೂರ್ತಿ.[೨೦೮] ೧೯೬೧ರಲ್ಲಿ ಟಿ.ಎನ್.ರಾಮಚಂದ್ರನ್.[೨೦೯] ೧೯೭೧ರಲ್ಲಿ ಅನಿಲ್ ಡಿಸಿಲ್ವಾ[೨೧೦] ೧೯೮೩ರಲ್ಲಿ ಲೀಲಾಗಣಪತಿ ಅವರ[೨೧೧] ಲೇಖನಗಳಿದ್ದು ಅವುಗಳೂ ಸಹಿತ ಭಿತ್ತಿ ಚಿತ್ರಕಲೆಯ ವಿವರಗಳನ್ನು ಕೊಡುತ್ತವೆ. ಈ ಲೇಖನಗಳಲ್ಲಿ ಕೆಲವು ಲೇಖನಗಳು ಭಿತ್ತಿ ಚಿತ್ರಗಳ ಕುರಿತಾಗಿಯೇ ಇದ್ದರೆ, ಇನ್ನು ಕೆಲವು ಸಾಂದರ್ಭಿಕವಾಗಿ ಭಿತ್ತಿ ಚಿತ್ರಕಲೆಯ ಬಗ್ಗೆ ಹೇಳುತ್ತವೆ. ಸಿ.ಶಿವರಾಮಮೂರ್ತಿಯವರ ಒಂದು ಲೇಖನ ವಿಜಯನಗರ ಆರನೇ ಶತಮಾನೋತ್ಸವ

ಸಂಚಿಕೆಯಲ್ಲಿ[೨೧೨], ಮತ್ತೊಂದು ಡಾ॥ಕೃಷ್ಣಸ್ವಾಮಿ ಅಯ್ಯಂಗಾರ್ ನೆನಪಿನ ಸಂಚಿಕೆಯಲ್ಲಿದೆ.[೨೧೩]

ಈ ಪುಸ್ತಕಗಳು, ಲೇಖನಗಳು, ಸ್ಮರಣ ಸಂಚಿಕೆಗಳಲ್ಲದೇ ಪುರಾತತ್ವ ಇಲಾಖೆಯ ವಾರ್ಷಿಕ ವರದಿ. ವಿಶೇಷ ಸಂಚಿಕೆ, ಮೊನೋಗ್ರಾಫ್ ಹಾಗೂ ಕಿರುಪುಸ್ತಕ ಮತ್ತು ಇಲಾಖೆಯಿಂದ ಬಿಡುಗಡೆಗೊಳಿಸಲಾದ ಭಿತ್ತಿ ಚಿತ್ರಗಳ ವರ್ಣರಂಜಿತ ಕಾರ್ಡುಗಳಿಂದಲೂ ಭಿತ್ತಿಚಿತ್ರಕಲೆಯ ಬಗೆಗೆ ಮಾಹಿತಿ ದೊರೆಯುತ್ತದೆ. ೧೯೨೦-೨೧.[೨೧೪] ೧೯೨೭-೨೮[೨೧೫]ರ ವಾರ್ಷಿಕ ವರದಿಗಳು ಆಯಾ ಸ್ಥಳದ ಭಿತ್ತಿ ಚಿತ್ರಗಳ ವಿವರ ನೀಡುತ್ತವೆ. ಪುರಾತತ್ವ ಇಲಾಖೆಯ ಪುಸ್ತಕಗಳಲ್ಲಿ ಕೆ.ಆರ್.ಶ್ರೀನಿವಾಸನ್[೨೧೬] ಎ.ಘೋಷ್[೨೧೭] ಎಚ್.ಸರಕಾರ,[೨೧೮] ಕೆ.ವಿ.ಸೌಂದರ್ಯರಾಜನ್,[೨೧೯] ಜೆ.ಬರ್ಜೆಸ್,[೨೨೦] ಅಲೆಕ್ಸಾಂಡರ್ ರಿಯಾ[೨೨೧] ಮತ್ತು ಇತ್ತೀಚೆಗೆ ಬಂದ ಹೆನ್ರಿ ಕಸಿನ್ಸ್ ಅವರ[೨೨೨] ಪುಸ್ತಕಗಳು ಭಿತ್ತಿ ಚಿತ್ರಕಲೆಯ ಬಗ್ಗೆ ವಿವರ ನೀಡುತ್ತವೆ.

ಕರ್ನಾಟಕದ ಭಿತ್ತಿ ಚಿತ್ರಗಳ ಕುರಿತು ಬಂದ ಗ್ರಂಥಗಳು ಮತ್ತು ಲೇಖನಗಳು :

ಶ್ರೀರಂಗಪಟ್ಟಣದ ದರಿಯಾದೌಲತ್ ಚಿತ್ರಗಳ ಬಗ್ಗೆ ೧೮೧೦ರಲ್ಲಿ 'ವಿಲ್ಕ್' ಎಂಬುವವರು[೨೨೩] ಬರೆದಿದ್ದು ಅದನ್ನಾಧರಿಸಿ ೧೯೩೨ರಲ್ಲಿ ಮತ್ತೆ ಅವರು ಪುಸ್ತಕ ಒಂದನ್ನು ಬರೆದಿದ್ದಾರೆ. ಅದರಲ್ಲಿ ಅಲ್ಲಿಯ ಭಿತ್ತಿ ಚಿತ್ರಗಳ ವಿಷಯ, ವರ್ಣಸಂಯೋಜನೆ ಕುರಿತು ಹೇಳಲಾಗಿದೆ. ೧೮೫೧ರಲ್ಲಿ ಜಾನ್‌ವಿಲ್ಸನ್[೨೨೪] ಅವರು ಬಾದಾಮಿಯ ಭಿತ್ತಿ ಚಿತ್ರಗಳ ಬಗ್ಗೆ ಬರೆದಿದ್ದಾರೆ. ಅವರು ತಮಗಿಂತ ಪೂರ್ವದಲ್ಲಿ ೧೮೧೮ರಲ್ಲಿಯೇ ಥಾಮಸ್ ಮನ್ರೊ ಎಂಬುವವರು ಬದಾಮಿ ವೈಷ್ಣವ ಗುಹಾಲಯದ ಭಿತ್ತಿ ಚಿತ್ರಗಳ ಬಗ್ಗೆ ಹೇಳಿದ್ದನ್ನು ಉಲ್ಲೇಖಿಸುತ್ತಾರೆ. ಕ್ರಿ.ಶ.೧೮೦೦ರ ಸುಮಾರಿಗೆ ಫ್ರಾನ್ಸಿಸ್ ಬುಕ್ಯಾನನ್ ಭಾರತ ಪ್ರವಾಸ ಕೈಗೊಂಡಿದ್ದು ಆತ ಕರ್ನಾಟಕದಲ್ಲಿ ಸಂಚರಿಸುವಾಗ ತಾನು ಶ್ರೀರಂಗಪಟ್ಟಣದ ದರಿಯಾ ದೌಲತ್‌ನಲ್ಲಿ ಕಂಡ ಚಿತ್ರಗಳ ಕುರಿತಾಗಿ ತನ್ನ ಪ್ರವಾಸ ಕಥನದಲ್ಲಿ ಬರೆದಿದ್ದಾನೆ.[೨೨೫] ಅಲ್ಲದೇ ಅಲ್ಲಿನ ಗೋಡೆಯ ಮೇಲೆ ಚಿತ್ರಿತವಾಗಿರುವ ಸ್ತ್ರೀ, ಪುರುಷ ಹಾಗೂ ಮಗುವಿನ ಚಿತ್ರಗಳನ್ನು ಸ್ಥಳೀಯ ಚಿತ್ರಕಾರರಿಂದ ಬರೆಸಿ ತನ್ನ ಕೃತಿಯಲ್ಲಿ ಅಳವಡಿಸಿದ್ದಾನೆ. ೧೮೭೨ರಲ್ಲಿ ಬೌರಿಂಗ್ ಅವರು[೨೨೬] ಶ್ರೀರಂಗಪಟ್ಟಣದ ದರಿಯಾ ದೌಲತ್‌ನಲ್ಲಿರುವ ಭಿತ್ತಿಚಿತ್ರಗಳ ಬಗ್ಗೆ ವಿವರವಾಗಿ ಬರೆದು, ಅವುಗಳ ವಸ್ತುವಿಷಯ, ವರ್ಣಗಾರಿಕೆ, ಸಂಯೋಜನೆ ಮುಂತಾದ ಸಂಗತಿಗಳನ್ನು ತಿಳಿಸುತ್ತಾರೆ. ೧೯೨೪ರಲ್ಲಿ 'ಕರ್ನಾಟಕ' ಕುರಿತು ಕೈಪಿಡಿಯಲ್ಲಿ[೨೨೭] ಅಜಂತಾದಲ್ಲಿ ಎರಡನೇ ಪುಲಿಕೇಶಿಯಿಂದ ಭಿತ್ತಿಚಿತ್ರ ಬರೆಸಲ್ಪಟ್ಟ ಮತ್ತು ಬಿಜಾಪುರದಲ್ಲಿ ಮೊಗಲ್ ಶೈಲಿಯ ಚಿತ್ರಗಳು ರಚನೆಯಾದ ಕುರಿತು ಮಾಹಿತಿ ಇದೆ. ೧೯೩೧ರಲ್ಲಿ ಸಿ.ಇ.ಪಾರಸನ್ಸ್ ಅವರು[೨೨೮] ಶ್ರೀರಂಗಪಟ್ಟಣದ ಬಗ್ಗೆ ಕಿರುಪುಸ್ತಕ (ಕೈಪಿಡಿ) ಒಂದನ್ನು ಬರೆದಿದ್ದು ಅದರಲ್ಲಿ ದರಿಯಾದೌಲತ್ ಅರಮನೆಯ ಭಿತ್ತಿ ಚಿತ್ರಗಳ ಕುರಿತಾಗಿ ವಿವರಣೆ ಕೊಟ್ಟಿದ್ದಾರೆ. ೧೯೪೦ರಲ್ಲಿ ಎಂ.ಎಚ್.ಕೃಷ್ಣಯ್ಯ ಅವರು[೨೨೯] ಶ್ರವಣಬೆಳಗೊಳದ ಬಗ್ಗೆ ಒಂದು ಕಿರುಪುಸ್ತಕ ರಚಿಸಿದ್ದು ಅದರಲ್ಲಿ ಅಲ್ಲಿಯ ಭಿತ್ತಿ

ಚಿತ್ರಗಳ ವಿವರ ಇದೆ.

೧೯೬೨ರಲ್ಲಿ ಪ್ರಕಟವಾದ 'ಬೆಳೆದುಬಂದ ಭಾರತದ ಚಿತ್ರಕಲೆ' ಪುಸ್ತಕದಲ್ಲಿ ಪಿ.ಆರ್.ತಿಪ್ಪೇಸ್ವಾಮಿ[೨೩೦]ಯವರು ಅಜಂತಾ, ಎಲ್ಲೋರಾ, ಬದಾಮಿ ಭಿತ್ತಿ ಚಿತ್ರದ ವಿವರಗಳನ್ನೂ ಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ. ೧೯೬೮ರಲ್ಲಿ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಪುಸ್ತಕದಲ್ಲಿ ಡಾ.ಎಚ್.ತಿಪ್ಪೇರುದ್ರಸ್ವಾಮಿ[೨೩೧]ಯವರು ಕರ್ನಾಟಕದ ಭಿತ್ತಿಚಿತ್ರ ಪರಂಪರೆಯನ್ನು ಬದಾಮಿ ಚಾಲುಕ್ಯರಿಂದ ಮೈಸೂರು ಅರಸರವರೆಗೆ ಕೆಲವು ಚಿತ್ರ ನೆಲೆಗಳನ್ನು ಉದಾಹರಿಸುತ್ತಾ ಚರ್ಚಿಸಿದ್ದಾರೆ. ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ ಡಾ.ಎಂ.ಚಿದಾನಂದಮೂರ್ತಿ[೨೩೨]ಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಪುಸ್ತಕದಲ್ಲಿ ಅವರು ಶಾಸನಗಳಲ್ಲಿ ಬರುವ ಭಿತ್ತಿ ಚಿತ್ರಗಳ ಉಲ್ಲೇಖಗಳನ್ನು ಹೇಳುತ್ತಾರೆ. ಇವುಗಳಲ್ಲದೇ ೧೯೭೦ರಲ್ಲಿ ಅ.ನ.ಕೃಷ್ಣರಾಯರ[೨೩೩] ಚಿತ್ರಕಲೆ, ಎಸ್.ಎಂ.ಶಿರಹಟ್ಟಿಯವರ[೨೩೪] ಚಿತ್ರಕಲಾ ಕೈದೀಪ ಕೃತಿಗಳು ಪ್ರಕಟವಾಗಿದ್ದು ಇವುಗಳಲ್ಲಿ ಭಿತ್ತಿ ಚಿತ್ರಗಳ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

೧೯೭೫ರಲ್ಲಿ ಪ್ರಕಟಗೊಂಡ 'ಭಾರತೀಯ ಸಂಸ್ಕೃತಿ' ಕೃತಿಯಲ್ಲಿ ಎಸ್.ಶ್ರೀಕಂಠಶಾಸ್ತ್ರಿಗಳು[೨೩೫] ಭಿತ್ತಿಚಿತ್ರಕಲೆಯ ಬಗ್ಗೆ ಸಾಂದರ್ಭಿಕವಾಗಿ ಚರ್ಚಿಸುತ್ತಾರೆ. ೧೯೭೮ರಲ್ಲಿ ಪ್ರಕಟವಾದ 'ದಿ ಚಾಲುಕ್ಯ ಆಫ್ ಬದಾಮಿ' ಕೃತಿಯಲ್ಲಿ ಎಮ್.ಎಸ್.ನಾಗರಾಜರಾವ್[೨೩೬] ಅವರು ಬದಾಮಿ ವೈಷ್ಣವ ಗುಹೆಯ ಭಿತ್ತಿ ಚಿತ್ರಗಳ ಕುರಿತು ಹೇಳುತ್ತಾರಲ್ಲದೇ, ಒಂದು ಕಾಲದಲ್ಲಿ ಗುಹೆಯ ಒಳಭಾಗದಲ್ಲಿ ಹೆಚ್ಚಿನ ಪ್ರಮಾಣದ ವರ್ಣಚಿತ್ರಗಳಿದ್ದುವಲ್ಲದೇ ಚಿತ್ರಗಳಿರದ ಸ್ಥಳವನ್ನು ಬಣ್ಣ ಲೇಪಿಸಿ ಅಲಂಕರಿಸಲಾಗಿತ್ತು. ಹೀಗೆ ಇಡೀ ಗುಹೆ, ವರ್ಣ ಮತ್ತು ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿತ್ತು ಎಂದು ಹೇಳುತ್ತಾರೆ.

೧೯೭೯ರಲ್ಲಿ ಎಮ್.ಎಸ್.ನಾಗರಾಜರಾವ್[೨೩೭] ಭಾರತೀಯ ಚಿತ್ರಕಲೆಯಲ್ಲಿ ಬದಾಮಿ ಭಿತ್ತಿ ಚಿತ್ರಗಳ ಬಗ್ಗೆ ಕಿರು ಮಾಹಿತಿ ಇದೆ. ೧೯೭೯ರಲ್ಲಿ ಬಿ.ಪಿ.ಬಾಯಿರಿ ಅವರ[೨೩೮] ಅವರ 'ಭಾರತೀಯ ಕಲೆಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ ಕೃತಿಯಲ್ಲಿ ಭಾರತೀಯ ಶಿಲ್ಪ ಮತ್ತು ಭಿತ್ತಿ ಚಿತ್ರಗಳಲ್ಲಿ ರಚನೆಯಾಗಿರುವ ಕಿರಾತಾರ್ಜುನೀಯ ಪ್ರಸಂಗಗಳ ಕುರಿತು ತೌಲನಿಕ ಚರ್ಚೆ ಇದೆ. ೧೯೮೦ರಲ್ಲಿ ಕರ್ನಾಟಕದ ಸಂಪ್ರದಾಯ ಚಿತ್ರಗಳು ಎಂಬ ಕೃತಿಯನ್ನು ಎಸ್.ಆರ್.ರಾವ್ ಮತ್ತು ಬಿ.ವಿ.ಕೆ.ಶಾಸ್ತ್ರಿ ಅವರು ಕೂಡಿ ರಚಿಸಿದ್ದು[೨೩೯] ಅದರಲ್ಲಿ ಭಿತ್ತಿ ಚಿತ್ರಗಳ ಬಗ್ಗೆ ಮಾಹಿತಿ ಇದೆ. ಎಸ್.ಕೆ.ರಾಮಚಂದ್ರರಾವ್ ಅವರ ಸಂಪಾದಕತ್ವದ 'ಕರ್ನಾಟಕದ ಕಲೆಗಳು' ಸಂ. ೧ರಲ್ಲಿ[೨೪೦] ಸಂಪುಟ೨ರಲ್ಲಿ[೨೪೧] ಭಿತ್ತಿ ಸಿದ್ಧತಾ ವಿಧಾನ, ಚಿತ್ರ ರಚನಾ ಕ್ರಮಗಳ ಕುರಿತು ವಿವರಣೆ ಇದೆ.

೧೯೮೨ರಲ್ಲಿ ಆರ್.ಎನ್.ಸಾಲತ್ತೊರೆ ಅವರು[೨೪೨] ವಿಜಯನಗರ ಕಲೆ ಬಗ್ಗೆ ಬರೆದಿದ್ದು ಅದರಲ್ಲಿ ಭಿತ್ತಿ ಚಿತ್ರಗಳ ಭಿತ್ತಿ ವಸ್ತು ವಿಷಯವನ್ನು ಹೇಳುತ್ತಾರೆ. ೧೯೮೩ರಲ್ಲಿ ಗದಗ ತೋಂಟದಾರ್ಯ ಮಠದಿಂದ ಪ್ರಕಟವಾದ ಡಾ.ಪಿ.ವಿ.ನಾರಾಯಣ[೨೪೩] ಅವರ 'ವಚನ ಸಾಹಿತ್ಯ : ಒಂದು

ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥದಲ್ಲಿ ವಚನಗಳಲ್ಲಿ ಉಲ್ಲೇಖಗೊಂಡಿರುವ ಭಿತ್ತಿ ಚಿತ್ರದ ಪ್ರಸ್ತಾಪವಿದೆ. ೧೯೮೩ರಲ್ಲಿ ಪ್ರಕಟಿತವಾದ 'ಸಂಪ್ರದಾಯ ಶಿಲ್ಪಕಲೆ ಮತ್ತು ಚಿತ್ರಕಲೆ' ಪುಸ್ತಕದಲ್ಲಿ ಎಸ್.ಕೆ.ರಾಮಚಂದ್ರರಾವ್ ಅವರು[೨೪೪] ನಗ್ನಜಿತನ ಚಿತ್ರಲಕ್ಷಣ ಅಲ್ಲದೆ ವಿಷ್ಣುಧರ್ಮೋತ್ತರ ಗ್ರಂಥ. ವಿದ್ಯಾರಣ್ಯರ 'ಪಂಚದಶಿ' ಕೃತಿಯಲ್ಲಿನ ಭಿತ್ತಿ ಚಿತ್ರ ರಚನಾ ಹಂತಗಳನ್ನು ಚರ್ಚಿಸಿದ್ದಾರೆ. ೧೯೮೩ರಲ್ಲಿ ಬಿ.ವಿ.ಕೆ.ಶಾಸ್ತ್ರಿ[೨೪೫] ಅವರ 'ಕರ್ನಾಟಕದ ಭಿತ್ತಿ ಚಿತ್ರಗಳು' ಎಂಬ ಕೃತಿ ಪ್ರಕಟವಾಗಿದ್ದು ಅದರಲ್ಲಿ ಬಾದಾಮಿ, ಹಂಪಿ, ಮೈಸೂರು, ಹರಪನಹಳ್ಳಿ ಶ್ರವಣಬೆಳಗೊಳ, ಮುಡುಕುತೊರೆ ಮುಂತಾದ ಸ್ಥಳಗಳ ಭಿತ್ತಿ ಚಿತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದಾರೆ. ೧೯೮೪ರಲ್ಲಿ ಕೆ.ಆರ್.ಬಸವರಾಜ್ಅವರ[೨೪೬] ಕೃತಿಯಲ್ಲಿ ಕರ್ನಾಟಕದ ಭಿತ್ತಿಚಿತ್ರಗಳ ಬಗ್ಗೆ ಸಾಂದರ್ಭಿಕವಾಗಿ ಹೇಳಲಾಗಿದೆ. ೧೯೮೫ರಲ್ಲಿ ಸಿ.ಶಿವರಾಮಮೂರ್ತಿ[೨೪೭] ಅವರ 'ವಿಜಯನಗರ ಪೇಂಟಿಂಗ್ಸ್' ಕೃತಿಯಲ್ಲಿ ಹಂಪಿಯ ವಿರುಪಾಕ್ಷ ದೇವಾಲಯದ ಮಂಟಪದ ಚಿತ್ರಗಳು. ಲೇಪಾಕ್ಷಿಯ ಚಿತ್ರಗಳ ಕುರಿತು ಮಾಹಿತಿ ಇದೆ. ೧೯೮೫ರಲ್ಲಿ ಪ್ರಕಟವಾದ ವಿ.ಸೀತಾರಾಮಯ್ಯ[೨೪೮] 'ಸಾಹಿತ್ಯ ಮತ್ತು ಚಿತ್ರಕಲೆ' ಪುಸ್ತಕದಲ್ಲಿ ಸಾಹಿತ್ಯದಲ್ಲಿ ಸಾಂದರ್ಭಿಕವಾಗಿ ಬರುವ ಭಿತ್ತಿಚಿತ್ರಕಲೆಯ ವಿವರಗಳಿವೆ. ೧೯೮೮ರಲ್ಲಿ ಡಾ.ಎಸ್.ರಾಜಶೇಖರ್[೨೪೯] ಅವರು 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ' ಎಂಬ ಕೃತಿಯಲ್ಲಿ ಬದಾಮಿಯ ವೈಷ್ಣವ ಗುಹಾಲಯದ ಭಿತ್ತಿ ಚಿತ್ರಗಳು ಮತ್ತು ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಅಲ್ಲದೇ ಹಂಪಿಯ ವಿರೂಪಾಕ್ಷ ದೇವಾಲಯದ ಚಿತ್ರಗಳ ರಚನೆಯ ಕಾಲ ವಿಚಾರವಾಗಿ ದೀರ್ಘ ಚರ್ಚೆ ಮಾಡಿದ್ದಾರೆ

೧೯೮೯ರಲ್ಲಿ ಪ್ರಕಟವಾದ ಎಂ.ಎಚ್.ಕೃಷ್ಣ[೨೫೦] ಮತ್ತು ೧೯೮೯ರಲ್ಲಿ ಎನ್.ಮರಿಶಾಮಾಚಾರ್[೨೫೧] ಅವರ 'ಸಾಹಿತ್ಯದಲ್ಲಿ ಚಿತ್ರಕಲೆ' ಎಂಬ ಕೃತಿಗಳಲ್ಲಿ ಭಿತ್ತಿಚಿತ್ರದ ಮಾಹಿತಿ ಇದೆ. ೧೯೯೪ ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು 'ಕಲಾಕೋಶ'ವನ್ನು ಪ್ರಕಟಿಸಿದ್ದು[೨೫೨] ಅದರಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳ ನೆಲೆಗಳ ಮಾಹಿತಿ ಇದೆ. ೧೯೯೫ ರಲ್ಲಿ ಜಿ.ಯಜದಾನಿ[೨೫೩]ಯವರ 'ಬೀದರ್, ಇಟ್ಸ್ ಹಿಸ್ಟರಿ ಆ್ಯಂಡ್ ಮಾನ್ಯುಮೆಂಟ್ಸ್' ಎಂಬ ಕೃತಿಯಲ್ಲಿ ಬೀದರ್ ಮತ್ತು ಸಮೀಪದ ಅಸ್ತೂರಿನ ಭಿತ್ತಿಚಿತ್ರಗಳ ಕುರಿತಾದ ಮಾಹಿತಿ ಇದೆ. ೧೯೯೫ರಲ್ಲಿ ಬಸವರಾಜ ಉಪ್ಪಿನ[೨೫೪] ಅವರು 'ಮಾನಯ್ಯ ಗರುಡಾದ್ರಿ' ಎಂಬ ಕಿರುಪುಸ್ತಕ ರಚಿಸಿದ್ದು ಅದರಲ್ಲಿ ಸಾಂದರ್ಭಿಕವಾಗಿ ಸುರಪುರದ ಭಿತ್ತಿಚಿತ್ರಗಳ ಬಗೆಗೆ ಹೇಳಲಾಗಿದೆ.

೧೯೯೮ರಲ್ಲಿ 'ಕೊಪ್ಪಳ :ಸಾಂಸ್ಕೃತಿಕ ಪರಂಪರೆ' ಎಂಬ ಕೃತಿಯನ್ನು ಬಿ.ಸಿ.ಪಾಟೀಲ್[೨೫೫] ಅವರು ರಚಿಸಿದ್ದು ಅದರಲ್ಲಿ ಕೊಪ್ಪಳ ಪರಿಸರದ ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳ ಬಗೆಗೆ ಮಾಹಿತಿ ಇದೆ. ಶಿವರಾಮ ಕಾರಂತ ಅವರ 'ಕರ್ನಾಟಕದ ಚಿತ್ರಕಲೆ'[೨೫೬] ಕೃತಿಯು ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಯಲ್ಲಿ ಬಂದಿದ್ದು ಇದರಲ್ಲಿ ಬಾದಾಮಿ. ನರಗುಂದ. ನಿಪ್ಪಾಣಿ. ಅಥಣಿ.

ಶ್ರವಣಬೆಳಗೊಳ, ಹಂಪೆ, ವಿಜಾಪುರದ ಬಳಿಯ ಕುಮಟಗಿ ಭಿತ್ತಿ ಚಿತ್ರಗಳ ಒಳಗಿನ ಚರ್ಚೆ ಇದೆ. ಕಲಾಪ್ರಪಂಚದಲ್ಲಿ[೨೫೭] ಜಗತ್ತಿನ ವಿವಿಧ ರಾಷ್ಟ್ರಗಳ ಭಿತ್ತಿಚಿತ್ರಕಲೆಯನ್ನು ಸಾಂದರ್ಭಿಕವಾಗಿ ಹೇಳಲಾಗಿದೆ. 'ಭಾರತೀಯ ಚಿತ್ರಕಲೆ'[೨೫೮] ಪುಸ್ತಕದಲ್ಲಿ ಪ್ರಾಚೀನ ಗ್ರಂಥಗಳಲ್ಲಿಯ ಭಿತ್ತಿಚಿತ್ರಕಲೆಯ ಉಲ್ಲೇಖಗಳ ವಿವರವಿದೆ. ೨೦೦೦ರಲ್ಲಿ 'ಬಾದಾಮಿ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಡಾ.ಶೀಲಾಕಾಂತ ಪತ್ತಾರ[೨೫೯] ಅವರು ಬಾದಾಮಿಯ ಪರಿಸರ ಭಿತ್ತಿಚಿತ್ರಕಲೆಯನ್ನು ಪ್ರಾಸಂಗಿಕವಾಗಿ ಅಧ್ಯಯನ ಮಾಡಿದ್ದಾರೆ. ಮಲ್ಲಿಕಾರ್ಜುನ ಹಿರೇಮಠ[೨೬೦] ಅವರು ಸಂಪಾದಿಸಿದ 'ಬಾಗಿಲು' (ಬಾಗಿಲುಕೋಟೆ ಸಾಂಸ್ಕೃತಿಕ ಪರಂಪರೆ) ಕೃತಿಯಲ್ಲಿ ಬಾಗಲಕೋಟೆ ಜಿಲ್ಲೆಯ ಗೋಡೆ ಚಿತ್ರಗಳ ಪ್ರಸ್ತಾಪವಿದೆ. ೨೦೦೨ರಲ್ಲಿ ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಎಂಬ ವಿಷಯದಲ್ಲಿ ಸಂಶೋಧನಾ ಮಹಾಪ್ರಬಂಧದಲ್ಲಿ ಡಾ.ಯಾದಪ್ಪ ಪರದೇಶಿ[೨೬೧] ಅವರು ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆಯ ಬಗ್ಗೆ ಸಮಗ್ರ ಅಧ್ಯಯನವನ್ನು ಕೈಗೊಂಡಿರುತ್ತಾರೆ.

ಭಿತ್ತಿಚಿತ್ರಗಳ ಕುರಿತ ಲೇಖನಗಳು :

೧೮೭೪ರಲ್ಲಿ ಜೇಮ್ಸ್ ಬರ್ಜಸ್ ಅವರು[೨೬೨] ಬಾದಾಮಿಯ ವೈಷ್ಣವ ಗುಹೆಯ ಭಿತ್ತಿ ಚಿತ್ರಗಳ ಬಗ್ಗೆ ವಿವರ ಕೊಟ್ಟಿದ್ದಾರೆ. ೧೯೨೩ರ ಎಪಿಗ್ರಾಫಿಯ ಕರ್ನಾಟಕದ ಎರಡನೇ ಸಂಪುಟದಲ್ಲಿ[೨೬೩] ಶ್ರವಣಬೆಳಗೊಳದ ಭಿತ್ತಿ ಚಿತ್ರಗಳ ಕುರಿತು ಮಾಹಿತಿ ದೊರೆಯುತ್ತದೆ. ೧೯೩೦ರಲ್ಲಿ ಮೈಸೂರು ಜಿಲ್ಲಾ ಗೆಜೆಟೀಯರ್‌ನಲ್ಲಿ[೨೬೪] ಆಯಾ ಜಿಲ್ಲೆಯ ಭಿತ್ತಿ ಚಿತ್ರಗಳ ವಿವರಣೆ ಇದೆ.

೧೯೩೦ರಲ್ಲಿ ರಸಯೋಗಿ ಗೆಳೆಯರ ಗುಂಪು[೨೬೫] 'ಕನ್ನಡ ಸಾಹಿತ್ಯದಲ್ಲಿ ಚಿತ್ರಕಲೆ' ಎಂಬ ಲೇಖನ ಬರೆದಿದ್ದು, ಇದರಲ್ಲಿ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಾಂದರ್ಭಿಕವಾಗಿ ಬಂದಿರುವ ಭಿತ್ತಿಚಿತ್ರಕಲೆಯ ವಿವರ ಮತ್ತು ಚಿತ್ರಕಲಾವಿದ ಚರಘಟ್ಟಿಯ ಕುರಿತು ಪ್ರಸ್ತಾಪಿಸಲಾಗಿದೆ. ೧೯೩೪ರಲ್ಲಿ[೨೬೬] ರಲ್ಲಿ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣದಲ್ಲಿರುವ ತಿಪ್ಪೋಜಿ ಅರಮನೆಯ ಭಿತ್ತಿಚಿತ್ರಗಳ ಬಗೆಗಿನ ಮಾಹಿತಿ ದೊರೆಯುತ್ತದೆ.

೧೯೩೬ರಲ್ಲಿ ಪ್ರಕಟವಾದ ವಿಜಯನಗರ ಸಾಮ್ರಾಜ್ಯದ ಅರಮನೆಯ ಶತಮಾನೋತ್ಸವ ಸಮಾರಂಭದ ಸ್ಮರಣ ಸಂಚಿಕೆಯಲ್ಲಿ[೨೬೭] ಸಿ.ಶಿವರಾಮಮೂರ್ತಿಯವರ 'ವಿಜಯನಗರ ಪೇಂಟಿಂಗ್ಸ್ ಫ್ರಾಮ್ ಲೇಪಾಕ್ಷಿ' ಹಾಗೂ ಎಸ್.ಪರಮಶಿವನ್ ಅವರ 'ವಿಜಯನಗರ ಪೇಂಟಿಂಗ್ಸ್' ಎಂಬ ಲೇಖನಗಳಿವೆ. ಅವು ಅನುಕ್ರಮವಾಗಿ ಲೇಪಾಕ್ಷಿ ಮತ್ತು ಹಂಪಿಯ ವಿರುಪಾಕ್ಷ ದೇವಾಲಯದ ಭಿತ್ತಿಚಿತ್ರಗಳ ಬಗೆಗಿನ ವಿವರಗಳನ್ನು ನೀಡುತ್ತವೆ. ೧೯೩೬[೨೬೮] ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ 'ಅಂಗಡಿ'ಯ ವಾಸಂತಿಕಾ ದೇವಾಲಯದ ಭಿತ್ತಿಚಿತ್ರಗಳ ಕುರಿತು ತಿಳಿದುಬರುತ್ತದೆ.

೧೯೩೭ರ ಪುರಾತತ್ವದ ವರದಿಯಲ್ಲಿ[೨೬೯] ಮೈಸೂರು ಜಿಲ್ಲೆ ಚಾಮರಾಜನಗರ ತಾಲೂಕು

ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದ ಭಿತ್ತಿಚಿತ್ರಗಳ ಬಗ್ಗೆ ಮಾಹಿತಿ ದೊರಕುತ್ತದೆ. ಅದೇ ರೀತಿ ೧೯೩೮[೨೨೦] ರಲ್ಲಿ ಮೈಸೂರಿನ ಜಗನ್ಮೋಹನ ಚಿತ್ರಶಾಲೆಯ ಚಿತ್ರಗಳ ಕುರಿತು ವಿವರಣೆ ಕಾಣಸಿಗುತ್ತದೆ.

೧೯೪೦[೨೨೧]ರಲ್ಲಿ ದ.ರಾ.ಬೇಂದ್ರೆಯವರ ಲೇಖನ ಕಲಾವಿದ ಚಿರಘಟ್ಟಿಯ ಕುರಿತು ಚರ್ಚಿಸಿದರೆ, ೧೯೪೧ರಲ್ಲಿ ಎಸ್.ರಾಮಚಂದ್ರರಾವ್[೨೨೨] ಅವರ 'ಭಾಸನಲ್ಲಿ ಚಿತ್ರಕಲೆ ಮತ್ತು ಸಂಗೀತ' ಲೇಖನವು ಭಾಸನ ನಾಟಕದಲ್ಲಿ ಬರುವ ಭಿತ್ತಿ ಚಿತ್ರಗಳಿಂದ ಶೋಭಿಸುವ ಮನೆ, ಅರಮನೆ, ದೇವಾಲಯಗಳನ್ನು ವರ್ಣಿಸುತ್ತದೆ. ೧೯೪೨ರಲ್ಲಿ ಬಿ.ವಿ.ಕೆ.ಶಾಸ್ತ್ರಿ ಅವರ 'ಪ್ರಾಚೀನ ಚಿತ್ರಕಲೆ' ಲೇಖನ[೨೨೩] ಪ್ರಾಗೈತಿಹಾಸಿಕ ಭಿತ್ತಿ ಚಿತ್ರಕಲೆಯ ಕುರಿತು ಸ್ಥೂಲವಾಗಿ ಚರ್ಚಿಸಿದೆ.

೧೯೪೨ರಲ್ಲಿ ವಿ.ಎಂ.ಇನಾಮದಾರ್ ಅವರ 'ದಾಳಿದಾಸ ಮತ್ತು ಚಿತ್ರಕಲೆ' ಲೇಖನವು[೨೨೪] ಕಾಳಿದಾಸನ ಕೃತಿಗಳಲ್ಲಿ ಬರುವ ಭಿತ್ತಿ ಚಿತ್ರಗಳಿಂದ ಅಲಂಕರಿಸಿದ ಗುಹೆ, ಮನೆ, ಅರಮನೆ ಮತ್ತು ದೇವಾಲಯಗಳನ್ನು ವರ್ಣಿಸುತ್ತದೆ. ೧೯೪೩ರಲ್ಲಿ ಪುರಾತತ್ವ ವರದಿಯು[೨೨೫] ಕೋಲಾರ ಜಿಲ್ಲೆಯ ಮುಳುಬಾಗಿಲು ಆಂಜನೇಯ ದೇವಾಲಯದ ಭಿತ್ತಿ ಚಿತ್ರಗಳ ಬಗ್ಗೆ ಮತ್ತು ೧೯೪೫ರ ವರದಿಯಲ್ಲಿ[೨೨೬] ತುಮಕೂರು ಜಿಲ್ಲೆ ಸಿರಾ ತಾಲೂಕಿನ ಸಿಬಿಯ ರೇವಣಸಿದ್ದೇಶ್ವರ ದೇವಾಲಯದ ಭಿತ್ತಿ ಚಿತ್ರಗಳ ಮಾಹಿತಿ ನೀಡುತ್ತವೆ.

೧೯೪೯ರಲ್ಲಿ ಸಿ.ಟಿ.ಎಂ.ಕೊಟ್ರಯ್ಯ ಅವರ ಲೇಖನವು[೨೨೭] ಹಂಪಿಯ ವಿರುಪಾಕ್ಷ ದೇವಾಲಯದ ಭಿತ್ತಿಚಿತ್ರಗಳ ವಿವರ ನೀಡುತ್ತದೆ. ಇಲ್ಲಿ ಚಿತ್ರಗಳ ಕಾಲಮಾನದ ಬಗ್ಗೆಯೂ ಚರ್ಚೆ ಇದೆ. ೧೯೫೦ರಲ್ಲಿ ಎಂ.ವಿ.ಸೀತಾರಾಮಯ್ಯನವರ ಲೇಖನವು[೨೨೮] ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಬರುವ ಭಿತ್ತಿ ಚಿತ್ರಗಳಿಂದ ಅಲಂಕರಿಸಿದ ಮನೆ, ಅರಮನೆ, ದೇವಾಲಯಗಳನ್ನು ಕುರಿತು ವಿವರಿಸಿ ಜನಪದ ಭಿತ್ತಿ ಚಿತ್ರಗಳ ಬಗೆಗೆ ಚಿಕ್ಕ ಮಾಹಿತಿ ಕೊಡುತ್ತದೆ. ೧೯೫೪ರಲ್ಲಿ ಮೋತಿಚಂದ್ರ ಅವರ ಲೇಖನವು[೨೨೯] ಬಿಜಾಪುರದ ಅರಸ್‌ಮಹಲ್ ಮತ್ತು ಸಮೀಪದ ಕುಮಟಗಿಯ ಭಿತ್ತಿ ಚಿತ್ರಗಳ ಕುರಿತು ಚರ್ಚಿಸುತ್ತದೆ.

೧೯೫೯ರಲ್ಲಿ ಸಿ.ಶಿವರಾಮಮೂರ್ತಿಯವರ ಲೇಖನವು[೨೩೦] ಬದಾಮಿಯ ವೈಷ್ಣವ ಗುಹೆಯ ಭಿತ್ತಿ ಚಿತ್ರಗಳ ವಿಷಯ, ಶೈಲಿ, ವರ್ಣಗಾರಿಕೆ ಕುರಿತು ಮಾಹಿತಿ ನೀಡುತ್ತದೆ. ೧೯೫೯ರಲ್ಲಿ ಪಿ.ಆರ್.ತಿಪ್ಪೇಸ್ವಾಮಿಯವರು ಪ್ರಾಚೀನ ಚಿತ್ರ ರಚನೆಯಲ್ಲಿ ಭಿತ್ತಿ ಸಿದ್ಧತೆ. ಎಂಬ ಲೇಖನ ಬರೆದಿದ್ದು,[೨೩೧] ಇದರಲ್ಲಿ ವಿಷ್ಣು ಧರ್ಮೋತ್ತರ, ಶಿಲ್ಪರತ್ನ, ಮಾನಸೋಲ್ಲಾಸ ಗ್ರಂಥಗಳಲ್ಲಿನ ಭಿತ್ತಿ ಚಿತ್ರ ವಿವರಗಳನ್ನು ಚರ್ಚಿಸಲಾಗಿದೆ. ೧೯೬೬ರಲ್ಲಿ ತಿ.ಶಾ.ಶರ್ಮ ಅವರ ಲೇಖನ[೨೩೨] ಸಿಬಿ ಭಿತ್ತಿ ಚಿತ್ರಗಳ ಬಗೆಗೆ ಕಿರು ಮಾಹಿತಿ ಇದೆ.

೧೯೬೯ರಲ್ಲಿ ಬಿಜಾಪುರ ಜಿಲ್ಲಾ ಗೆಝೆಟೀಯರ್‌ದಲ್ಲಿ[೨೩೩] ಆ ಜಿಲ್ಲೆಯ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳ ಕುರಿತಾದ ಲೇಖನಗಳಿವೆ. ೧೯೭೦ರ ರಾಯಚೂರು ಜಿಲ್ಲಾ ಗೆಝೆಟಿಯರ್‌ನಲ್ಲಿ[೨೩೪]

೧೯೭೨ರ ಬಳ್ಳಾರಿಜಿಲ್ಲಾ ಗೆಝೆಟೀಯರ್‌ದಲ್ಲಿ[೮೫] ಹಾಗೂ ಧಾರವಾಡ ಜಿಲ್ಲಾ ಗೆಝೆಟೀಯರ್‌ದಲ್ಲಿ, ಆಯಾ ಜಿಲ್ಲೆಗಳ ಭಿತ್ತಿಚಿತ್ರಗಳ ವಿವರ ದೊರೆಯುತ್ತದೆ.

೧೯೭೨ರಲ್ಲಿ ಬಿ.ವಿ.ಕೆ.ಶಾಸ್ತ್ರಿ ಅವರು ಸುಧಾಯುಗಾದಿ ವಿಶೇಷಾಂಕಕ್ಕೆ 'ಮಾನಸೋಲ್ಲಾಸ' ಕುರಿತು ಪರಿಚಯಾತ್ಮಕ ಲೇಖನ ಬರೆದಿದ್ದಾರೆ.[೮೬] ಹಾಗೇ ೧೯೭೩ರಲ್ಲಿ ಬಿ.ವಿ.ಕೆ.ಶಾಸ್ತ್ರಿ ಸುಧಾ ವಾರಪತ್ರಿಕೆಗೆ 'ಮಾನಸೋಲ್ಲಾಸದಲ್ಲಿ ಚಿತ್ರಕಲೆ' ಎಂಬ ಮತ್ತೊಂದು ಲೇಖನ ಬರೆದಿದ್ದಾರೆ.[೮೭] ಇವುಗಳಲ್ಲಿ ಮಾನಸೋಲ್ಲಾಸ ಗ್ರಂಥದಲ್ಲಿ ಹೇಳಲ್ಪಟ್ಟ ಭಿತ್ತಿಚಿತ್ರ ವಿವರಗಳನ್ನು ಚರ್ಚಿಸಲಾಗಿದೆ. ೧೯೭೩ರಲ್ಲಿ ಪ್ರಕಟವಾದ ಜ್ಞಾನ ಗಂಗೋತ್ರಿಯ ೫ನೇ ಸಂಪುಟದಲ್ಲಿ[೮೮] ಭಿತ್ತಿಚಿತ್ರ ನೆಲೆಗಳು, ಭಿತ್ತಿಚಿತ್ರ ಸಿದ್ಧತೆ, ಚಿತ್ರರಚನಾ ಕ್ರಮ, ಬಣ್ಣಗಾರಿಕೆ, ಚಿತ್ರಗಳ ವಸ್ತುವಿಷಯಗಳ ಕುರಿತಾದ ಲೇಖನಗಳಿವೆ. ೧೯೭೮ರಲ್ಲಿ ಆರ್.ಸಿ.ಅಗರವಾಲ್ ಅವರ ಲೇಖನವು[೮೯] ಬಿಜಾಪುರ ಭಿತ್ತಿಚಿತ್ರಗಳ ಬಗೆಗೆ ಕಿರು ಮಾಹಿತಿ ನೀಡುತ್ತದೆ. ೧೯೭೮ರ ಪಿ.ಆರ್.ತಿಪ್ಪೇಸ್ವಾಮಿಯವರ ಲೇಖನ[೯೦] ಕರ್ನಾಟಕದ ಭಿತ್ತಿ ಚಿತ್ರಕಲೆಯು ಸಂಕ್ಷಿಪ್ತ ಮಾಹಿತಿ ನೀಡುತ್ತದೆ.

೧೯೭೯ರಲ್ಲಿ ಪ್ರಕಟವಾದ ಕನ್ನಡ ವಿಷಯ ವಿಶ್ವಕೋಶದಲ್ಲಿ[೯೧] ಭಿತ್ತಿ ಚಿತ್ರಕಲೆಯ ಮಾಹಿತಿ ದೊರಕುತ್ತದೆ. ೧೯೮೦ರಲ್ಲಿ ಕೆ.ಜಿ.ಕುಂದಣಗಾರ ಅವರ ಲೇಖನ[೯೨] ಕನ್ನಡ ಸಾಹಿತ್ಯದಲ್ಲಿ ಸಾಂದರ್ಭಿಕವಾಗಿ ಬರುವ ಭಿತ್ತಿ ಚಿತ್ರಕಲೆಯ ವಿವರಗಳನ್ನು ಹೇಳುತ್ತದೆ. ೧೯೮೦ರಲ್ಲಿ ಪಿ.ಆರ್.ತಿಪ್ಪೇಸ್ವಾಮಿಯವರ ಲೇಖನದಲ್ಲಿ[೯೩] ಭಾರತೀಯ ಚಿತ್ರಕಲಾ ಪರಂಪರೆ ಬೆಳೆದು ಬಂದದ್ದನ್ನು ಹೇಳುವಲ್ಲಿ ಕರ್ನಾಟಕದ ಭಿತ್ತಿ ಚಿತ್ರಕಲೆಯ ವಿವರ ಹೇಳಲಾಗಿದೆ. ೧೯೮೨ರಲ್ಲಿ ಡಾ॥ಅ.ಸುಂದರ ಅವರ ಲೇಖನದಲ್ಲಿ[೯೪] ಬಾದಾಮಿ ಮತ್ತು ಸುತ್ತಲಿನ ಪ್ರಾಗ್ಯೈತಿಹಾಸಿಕ ಮತ್ತು ಐತಿಹಾಸಿಕ ಚಿತ್ರಗಳನ್ನು ಕುರಿತು ಚರ್ಚಿಸಲಾಗಿದೆ. ೧೯೮೨ರಲ್ಲಿ ಕರ್ನಾಟಕ ರಾಜ್ಯ ಗೆಝೇಟಿಯರ್‌ದಲ್ಲಿ[೯೫] ಭಿತ್ತಿಚಿತ್ರಗಳ ಬಗೆಗಿನ ವಿವರಗಳು ಕಂಡುಬರುತ್ತವೆ.

೧೯೮೬ರಲ್ಲಿ ಪಿ.ಆರ್.ತಿಪ್ಪೇಸ್ವಾಮಿಯವರ ಲೇಖನ[೯೬] ಕರ್ನಾಟಕದ ಭಿತ್ತಿ ಚಿತ್ರಕಲೆಯ ಬಗೆಗೆ ಕಿರುನೋಟ ಹರಿಸುತ್ತದೆ. ಎಂ.ಆರ್.ಶ್ಯಾನಭಾಗ ಅವರ ಲೇಖನ[೯೭] ಕರಾವಳಿ ಭಾಗದ ಕಾವಿ ಭಿತ್ತಿ ಚಿತ್ರಕಲೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರೆ ಡಾ.ಎಸ್.ಸಿ.ಪಾಟೀಲ ಅವರ ಲೇಖನ[೯೮] ಪ್ರಾಚೀನ ಭಿತ್ತಿಚಿತ್ರ ರಚನೆಯಲ್ಲಿ ಅನುಸರಿಸುತ್ತಿದ್ದ ಚಿತ್ರಕಲೆಯ ಆರು ಅಂಗಲಕ್ಷಣಗಳನ್ನು ಕುರಿತು ಚರ್ಚಿಸಿದೆ. ಬಿ.ವಿ.ಕೆ.ಶಾಸ್ತ್ರಿ ಅವರ ಲೇಖನ[೯೯] ಕನ್ನಡ ಸಾಹಿತ್ಯದಲ್ಲಿ ಬರುವ ಭಿತ್ತಿ ಚಿತ್ರಕಲೆಯ ಅಂಶಗಳು ಮತ್ತು ಕಲಾವಿದರ ಚೀರಫಟ್ಟಿಯ ಬಗ್ಗೆ ಚರ್ಚಿಸಿದೆ.

೧೯೮೭ರಲ್ಲಿ ಪ್ರಟಕವಾದ ಹರತಿಸಿರಿ ನೆನಪಿನ ಸಂಪುಟದಲ್ಲಿ[೧೦೦] ಅ.ಸುಂದರ ಅವರ ಲೇಖನ ಪ್ರಾಗ್ಯೈತಿಹಾಸಿಕ ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳ ಬಗೆಗೆ ಮಾಹಿತಿ ನೀಡಿದರೆ, ಶ್ರೀಶೈಲ ಆರಾಧ್ಯ ಅವರ ಲೇಖನ ಚಿತ್ರದುರ್ಗ ಪರಿಸರದ ಪ್ರಾಗ್ಯೈತಿಹಾಸಿಕ ಭಿತ್ತಿ ಚಿತ್ರಗಳ ಕುರಿತಾದ ವಿವರಣೆ ಕೊಡುತ್ತದೆ. ಡಾ॥ಕೃಷ್ಣಾನಂದ ಕಾಮತ್ ಅವರ ಲೇಖನ ಸಿಬಿಯ ಭಿತ್ತಿ

ಚಿತ್ರಗಳ ವಸ್ತುವಿಷಯ, ವರ್ಣಗಾರಿಕೆ, ಚಿತ್ರಶೈಲಿಗಳನ್ನು ಪರಿಚಯಿಸುತ್ತದೆ.

೧೯೮೮ರಲ್ಲಿ ಆರ್.ರಾಮಕೃಷ್ಣನ್ ಅವರ ಲೇಖನ[೩೦೧] ಶಿಬಿಯ ಭಿತ್ತಿ ಚಿತ್ರಗಳ ಬಗೆಗೆ ಒಂದು ಸ್ಥೂಲನೋಟ ಕೊಡುತ್ತದೆ. ೧೯೯೧ರಲ್ಲಿ ಡಾ॥ಜೋತ್ಸ್ನಾ ಕಾಮತ್[೩೦೨] ಅವರ ಲೇಖನ ಭಿತ್ತಿ ಚಿತ್ರಗಳಲ್ಲಿ ಐತಿಹಾಸಿಕ ವ್ಯಕ್ತಿಗಳನ್ನು ಗುರುತಿಸುವುದಾಗಿದ್ದರೆ. ಇವರದೇ ಇನ್ನೊಂದು ಲೇಖನ ೧೯೯೨ ರಲ್ಲಿ[೩೦೩] ಭಿತ್ತಿ ಚಿತ್ರಗಳಲ್ಲಿ ತೇರನ್ನು ಕುರಿತದ್ದಾಗಿದೆ. ೧೯೯೩ರಲ್ಲಿ ಪ್ರಕಟವಾದ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆಯಲ್ಲಿ[೩೦೪] ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳ ವಿವರಣೆ ಇದೆ.

೧೯೯೫ರಲ್ಲಿ ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ ವಜ್ರಮಹೋತ್ಸವ ಸ್ಮರಣ ಸಂಚಿಕೆ ಚಿತ್ರಾಕ್ಷಿಯಲ್ಲಿ[೩೦೫] ಗುಳೇದಗುಡ್ಡದ ಭಿತ್ತಿ ಚಿತ್ರಗಳು, ವಿಶಿಷ್ಟ ವರ್ಣಚಿತ್ರಕಲೆಯ ಆಗರ ಬದಾಮಿ ಹೀಗೆ ಭಿತ್ತಿ ಚಿತ್ರಕಲೆ ಮತ್ತು ಅದಕ್ಕೆ ಪೂರಕವಾದ ೧೧ (ಹನ್ನೊಂದು) ಲೇಖನಗಳಿವೆ. ಇವು ಭಿತ್ತಿ ಚಿತ್ರಕಲೆಯ ಒಂದು ಪರಿಚಯಾತ್ಮಕ ನೋಟ ಕೊಡುತ್ತದೆ. ೧೯೯೬ರಲ್ಲಿ ಪುರಾತತ್ವ ಇಲಾಖೆಯು ಗ್ರಂಥ ಒಂದನ್ನು ಹೊರತಂದಿದ್ದು.[೩೦೬] ಅದರಲ್ಲಿ ಕೃಷ್ಣಾನಂದ ಕಾಮತ್ ಅವರ ಲೇಖನವಿದ್ದು, ಕರಾವಳಿ ಭಾಗದ ಕಾವಿ ಭಿತ್ತಿ ಚಿತ್ರಗಳ ಕುರಿತಾದ ಮಾಹಿತಿ ಇದರಲ್ಲಿದೆ. ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿನ ಜಯತೀರ್ಥ ಕಾಗಲಕರ ಅವರ ಲೇಖನ[೩೦೭] ಸುರಪುರದ ಗರುಡಾದ್ರಿ ಶೈಲಿಯ ಭಿತ್ತಿಚಿತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತದೆ.

೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯವು 'ಕರ್ನಾಟಕ ಚರಿತ್ರೆ ಮಾಲೆ' ಎಂಬ ಏಳು ಸಂಪುಟಗಳನ್ನು ಹೊರತಂದಿದ್ದು[೩೦೮] ಅವುಗಳಲ್ಲಿ ಕಲೆಯನ್ನು ಕುರಿತು ಹೇಳುವಾದ ಆಯಾ ಕಾಲದ ಭಿತ್ತಿ ಚಿತ್ರಗಳ ಕುರಿತು ಪ್ರೊ.ಅ.ಸುಂದರ, ಪ್ರೊ.ಬಿ.ಸುರೇಂದ್ರರಾವ್, ಪ್ರೊ.ಕೆ.ಶಿವರಣ, ಪ್ರೊ.ಬಿ.ಷೇಕ್‌ಅಲಿ, ಡಾ.ಸೆಬಾಸ್ಟಿಯನ್ ಜೋಸೆಪ್ ಮತ್ತು ಪ್ರೊ.ಎಸ್.ಚಂದ್ರಶೇಖರ್ ಅವರುಗಳ ಸಂಪುಟಗಳಲ್ಲಿ ಪ್ರಾಸಂಗಿಕವಾಗಿ ಲೇಖಕರು ಭಿತ್ತಿಚಿತ್ರಗಳ ಕುರಿತು ವಿವರಗಳನ್ನು ಕೊಡಮಾಡಿದ್ದಾರೆ.

೧೯೯೮ರ ಇತಿಹಾಸ ದರ್ಶನ ಸಂಪುಟ ೧೩ರಲ್ಲಿ[೩೦೯] ಶೀಲಾಕಾಂತ ಪತ್ತಾರ ಅವರ 'ಮತ್ತೆರಡು ಚಾಲುಕ್ಯ ವರ್ಣಚಿತ್ರಗಳ ಶೋಧ, 'ವಿ.ಟಿ.ಎಸ್.ರಾವ್ ಅವರ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ವಿಶಿಷ್ಟವಾದ ಲೇಪಾಕ್ಷಿಯ ಚಿತ್ರಗಳು. ಡಾ॥ಬೆಂ.ಶಾ.ಶ್ಯಾಮಲಾ ರತ್ನಕುಮಾರಿ ಅವರ 'ಗೇರುಸೊಪ್ಪಾದಲ್ಲಿನ ಕಾವಿ ಚಿತ್ರಗಳು ಒಂದು ಹೊಸಶೋಧ' ಎಂಬ ಲೇಖನಗಳು ಪ್ರಕಟವಾಗಿವೆ. ೧೯೯೮ರಲ್ಲಿ ಕರ್ಮವೀರ ಪತ್ರಿಕೆಯಲ್ಲಿನ ಎಸ್.ವೆಂಕಟೇಶ ಅವರ ಲೇಖನ[೩೧೦] ಸಿರಾದ ಭಿತ್ತಿಚಿತ್ರಗಳ ಮತ್ತು ಪ್ರಜಾವಾಣಿ ದೀಪಾವಳಿ ಸಂಚಿಕೆಯಲ್ಲಿನ ಕೃಷ್ಣಾನಂದ ಕಾಮತ್ ಅವರ ಲೇಖನ[೩೧೧] ಲೇಪಾಕ್ಷಿ ಭಿತ್ತಿ ಚಿತ್ರಗಳ ವಿಷಯ ವೈವಿಧ್ಯ. ವರ್ಣಗಾರಿಕೆ, ರೇಖಾವಿನ್ಯಾಸ. ಕಾಲವಿಚಾರಗಳ ಕುರಿತು ಸ್ಥೂಲ ಮಾಹಿತಿ ನೀಡುತ್ತವೆ.

೧೯೯೯ರಲ್ಲಿ ಮ.ಮುರಳೀಕೃಷ್ಣ ಅವರು[೩೧೨] ಸುಧಾ ಪತ್ರಿಕೆಗೆ ಲೇಖನ ಬರೆದಿದ್ದು ಅವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 'ಸುರಾಲು'ವಿನ ಹಳೆಯ ಮಣ್ಣಿನ ಅರಮನೆಯ ಭಿತ್ತಿ ಚಿತ್ರಗಳ ಕುರಿತು ಪ್ರಸ್ತಾಪಿಸಿದ್ದಾರೆ. ೧೯೯೯ರಲ್ಲಿ ಆ.ಲ.ನರಸಿಂಹನ್ ಅವರು 'ಆಲೇಖ್ಯ' ಎಂಬ ಕೃತಿ ಹೊರ ತಂದಿದ್ದು[೩೧೩] ಅದರಲ್ಲಿ 'ಶಿಷ್ಟಪದ ಚಿತ್ರಕಲೆಯ ಉಗಮ', ಕರ್ನಾಟಕದ ಚಿತ್ರಕಲೆಯಲ್ಲಿ ಸಂಸ್ಕೃತಿ ಎಂಬ ಎರಡು ಲೇಖನಗಳು ಭಿತ್ತಿ ಚಿತ್ರಕಲೆಗೆ ಸಂಬಂಧಿಸಿದವುಗಳಾಗಿವೆ. ಕರ್ಮವೀರದಲ್ಲಿನ ಎಸ್.ವೆಂಕಟೇಶ ಅವರ ಲೇಖನ[೩೧೪] ತುಮಕೂರಿನ ನಲ್ಲಪ್ಪನ ಹಳೆಯ ಮನೆಯಲ್ಲಿನ ಭಿತ್ತಿ ಚಿತ್ರಗಳನ್ನು ವಿವರಿಸಿದರೆ, ಎನ್.ಜಗನ್ನಾಥ ಪ್ರಕಾಶ ಅವರ ಲೇಖನ[೩೧೫] ಶ್ರವಣಬೆಳಗೊಳದ ಜೈನಮಠದ ಭಿತ್ತಿ ಚಿತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತದೆ.

೨೦೦೦ರಲ್ಲಿನ ಎಸ್.ವೆಂಕಟೇಶ[೩೧೬] ಅವರ ಲೇಖನ ಆನೆಗೊಂದಿನ ಹಾಳಾಗಿರುವ ಭಿತ್ತಿ ಚಿತ್ರಗಳ ಬಗೆಗೆ ಸಂಕ್ಷಿಪ್ತವಾದ ಮಾಹಿತಿ ನೀಡಿದರೆ, ರಾಜೇಶ್ ಶಹಬಾದಿ ಅವರ ಲೇಖನ[೩೧೭] ಸುರಪುರದ ಭಿತ್ತಿ ಚಿತ್ರಗಳ ಕುರಿತು ಕಿರುನೋಟ ಬೀರುತ್ತದೆ. ೨೦೦೦ರಲ್ಲಿ ಇತ್ತೀಚೆಗೆ ಡಾ.ಎಸ್.ಸಿ.ಪಾಟೀಲರ ಪ್ರಬಂಧವು[೩೧೮] ಬಿ.ಕೆ.ಹಳ್ಳಿಯ ಅಪೂರ್ವ ಭಿತ್ತಿಚಿತ್ರ ಭಂಡಾರ ಶೋಧ ಹಳಿಯಾಳ ಸಮೀಪದ ಬಂಜರ ಕಂಚನಹಳ್ಳಿಯ ಶ್ರೀರಾಮ ಮಂದಿರದ ಭಿತ್ತಿ ಚಿತ್ರಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದಿರುವುದಲ್ಲದೇ ಅವುಗಳ ವಿಷಯ ವೈವಿಧ್ಯ, ವರ್ಣಸಂಯೋಜನೆ, ರೇಖಾವಿನ್ಯಾಸ, ಕಾಲಮಾನದ ಬಗೆಗೆ ಚರ್ಚಿಸಲಾಗಿದೆ. ಡಾ.ಬಿ.ಕೆ.ಹಿರೇಮಠ[೩೧೯] 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದ್ದು, ಅದರಲ್ಲಿ ಹಸ್ತಪ್ರತಿ ಚಿತ್ರಕಲೆಯನ್ನು ಕುರಿತು ಸಾಂದರ್ಭಿಕವಾಗಿ ಅಧ್ಯಯನ ಮಾಡಿದ್ದಾರೆ.

ಇನ್ನು ಕನ್ನಡದಲ್ಲಿ ಚಿತ್ರಕಲೆಯ ಬಗ್ಗೆ ಶಾಸ್ತ್ರೀಯ ನೆಲೆಯಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಅಧ್ಯಯನಗಳು ಇತ್ತೀಚೆಗೆ ಪ್ರಾರಂಭಗೊಂಡಿವೆ. ಕನ್ನಡದಲ್ಲಿ ಮೊದಲು ಚಿತ್ರಕಲೆಯನ್ನೇ ಅಧ್ಯಯನ ವಿಷಯವಾಗಿ ತೆಗೆದುಕೊಂಡು ಸಂಶೋಧನೆ ಮಾಡಿದವರು ಡಾ.ಎಸ್.ಸಿ.ಪಾಟೀಲ[೩೨೦] ಅವರು. ಅವರ 'ಕರ್ನಾಟಕದ ಜನಪದ ಚಿತ್ರಕಲೆ' ಎಂಬ ಸಂಶೋಧನ ಮಹಾಪ್ರಬಂಧ ಕರ್ನಾಟಕದಲ್ಲಿ ಮೊದಲ ಚಿತ್ರಕಲಾ ಕ್ಷೇತ್ರದ ಪಿಎಚ್.ಡಿ. ಮಹಾಪ್ರಬಂಧವೆಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಇದರಲ್ಲಿ ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಜನಪದ ಚಿತ್ರಕಲೆಯ ವಿವರಣೆ ವಿಶ್ಲೇಷಣೆ ಇದೆಯಲ್ಲದೇ ಜನಪದ ಭಿತ್ತಿ ಚಿತ್ರಕಲೆಯ ಬಗ್ಗೆಯೂ ಸಾಂದರ್ಭಿಕವಾಗಿ ಅಧ್ಯಯನ ಮಾಡಿದ್ದಾರೆ. ಇದಕ್ಕೆ ೧೯೯೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದೆ.

೧೯೯೮ರಲ್ಲಿ ಡಾ.ಅ.ಲ.ನರಸಿಂಹನ್[೩೨೧] ಅವರು 'ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು' ಎಂಬ ವಿಷಯವಾಗಿ ಮಹಾಪ್ರಬಂಧ ರಚಿಸಿದ್ದು ಇದರಲ್ಲಿ ಕರ್ನಾಟಕದ ಕೆಲವು ಪ್ರದೇಶದ ಭಿತ್ತಿ ಚಿತ್ರಗಳನ್ನು ಸಾಂಸ್ಕೃತಿಕ ಅಂಶಗಳಿಗೆ ಸಾಂದರ್ಭಿಕವಾಗಿ ಬಳಸಿಕೊಂಡು. ವಿಶೇಷವಾಗಿ

ಅಧ್ಯಯನ ಮಾಡಿದ್ದಾರೆ. ೨೦೦೨ರಲ್ಲಿ ಕನ್ನಡ ವಿಶ್ವ ವಿದ್ಯಾಲಯದಿಂದ ಬಂದ ಪಿಎಚ್.ಡಿ ಮಹಾಪ್ರಬಂಧವನ್ನು ಡಾ.ಯಾದಪ್ಪ ಪರದೇಶಿ[೩.೨.೨] ಅವರು ರಚಿಸಿದ್ದು, ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದು, ಇದರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಸಿಗುವ ಭಿತ್ತಿ ಚಿತ್ರಗಳ ವಸ್ತುವಿಷಯದ ಜೊತೆ ಭಿತ್ತಿ ಚಿತ್ರಕಲೆಯ ವಿವರಣೆಯನ್ನು ನೀಡಿರುತ್ತಾರೆ.

೨೦೦೩ರಲ್ಲಿ ಡಾ.ಬಿ.ಕೆ.ಹಿರೇಮಠ[೩.೨.೩] ಅವರ ಸೃಷ್ಟಿ ಎಂಬ ಪುಸ್ತಕದಲ್ಲಿ ಒಟ್ಟು ನಲ್ವತ್ತನಾಲ್ಕು ಲೇಖನಗಳನ್ನು ಬರೆದಿದ್ದು, ಅದರಲ್ಲಿ ಇಪ್ಪತ್ತನೇ ಲೇಖನವೇ ಕರ್ನಾಟಕ ಚಿತ್ರಕಲಾ ಪರಂಪರೆಯ ಕುರಿತಾಗಿದ್ದು, ಅದರಲ್ಲಿ ವಿಜಯನಗರದ ನಂತರದ ಭಿತ್ತಿಚಿತ್ರಗಳ ಬಗ್ಗೆ ವಿವರಿಸಿದ್ದಾರೆ.

೨೦೦೯ರಲ್ಲಿ ಡಾ.ಮಲ್ಲಿಕಾರ್ಜುನ ಬಾಗೋಡಿಯವರ[೩.೨.೪] 'ಚಿತ್ರಲೇಖ'ದೊಳಗೆ ಒಟ್ಟು ಇಪ್ಪತ್ತು ಲೇಖನಗಳಿದ್ದು, ಎಲ್ಲಾ ಲೇಖನಗಳೂ ಚಿತ್ರಕಲೆ ಮತ್ತು ಕಲಾವಿದರ ಕುರಿತು ಬಂದಿರುತ್ತವೆ. ಇದರಲ್ಲಿ ಬಹುಮುಖ್ಯವಾಗಿ ವಿಜಯನಗರ ಚಿತ್ರಕಲೆ, ಮೈಸುರು ಚಿತ್ರಕಲೆ, ಬೀದರ ಸ್ಮಾರಕಗಳಲ್ಲಿನ ಭಿತ್ತಿ ಚಿತ್ರಗಳು, ರಾಯಚೂರಿನ ಖಾಜಾನಗೌಡರ ಮನೆಯಲ್ಲಿನ ಭಿತ್ತಿ ಚಿತ್ರಗಳ ಕುರಿತು ಪ್ರಸ್ತಾಪಿಸಿರುತ್ತಾರೆ.

೨೦೧೨ರಲ್ಲಿ ಎಂ.ಎಚ್.ಕೃಷ್ಣಯ್ಯರವರ[೩.೨.೫] 'ಕಲಾ ಸಂಸ್ಕೃತಿ'ಯಲ್ಲಿ ಒಟ್ಟು ಹನ್ನೊಂದು ಲೆಖನಗಳಿದ್ದು, ಅವುಗಳಲ್ಲಿ ಎರಡು ಒಂದು ಭಾರತೀಯ ಚಿತ್ರಕಲೆಯಲ್ಲಿ ಶೃಂಗಾರ ಲಹರಿ ಮತ್ತೊಂದು ಕರ್ನಾಟಕದಲ್ಲಿ ಚಿತ್ರಕಲಾ ಪರಂಪರೆಯಲ್ಲಿ ಕಲೆ ಮತ್ತು ಭಿತ್ತಿ ಚಿತ್ರಕಲೆಗಳ ಕುರಿತು ತಮ್ಮದೆ ಶೈಲಿಯಲ್ಲಿ ಪ್ರಸ್ತುತ ಪಡಿಸಿರುತ್ತಾರೆ.

೨೦೧೬ರಲ್ಲಿ ಪ್ರೊ.ಎಸ್.ಸಿ.ಪಾಟೀಲರವರ[೩.೨.೬] 'ಕರ್ನಾಟಕದ ಭಿತ್ತಿ ಚಿತ್ರಕಲೆ'ಯಲ್ಲಿ ಒಟ್ಟು ಹದಿನಾಲ್ಕು ಲೇಖನಗಳಿದ್ದು, ಕರ್ನಾಟಕದ ಪ್ರಮುಖ ಭಿತ್ತಿಚಿತ್ರ ನೆಲೆಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ಕರ್ನಾಟಕದ ಭಿತ್ತಿ ಚಿತ್ರಕಲೆಯ ಇತಿಹಾಸ–ಒಂದು ಅವಲೋಕನ, ಬಿ.ಕೆ ಹಳ್ಳಿಯ ಅಪೂರ್ವ ಚಿತ್ರಕಲಾ ಭಂಡಾರ ಶೋಧ ಮತ್ತು ಕೊಡಗಿನ ನಾಲ್ಕನಾಡು ಅರಮನೆಯ ಭಿತ್ತಿ ಚಿತ್ರಗಳು, ಲೇಪಾಕ್ಷಿಯ ಭಿತ್ತಿ ಚಿತ್ರಕಲೆ ಮುಂತಾದ ಲೇಖನಗಳನ್ನು ಇದರಲ್ಲಿ ನೋಡಬಹುದು.

೨೦೧೭ರಲ್ಲಿ ಡಾ.ಎಸ್.ಸಿ.ಪಾಟೀಲ್[೩೨೭] ಅವರ ಸಂಪಾದಕತ್ವದಲ್ಲಿ ಬೆಳಕಿಗೆ ಬಂದ 'ದೃಶ್ಯಕಲಾ ಸಂಶೋಧನಾ ನೆಲೆಗಳು' ಎಂಬ ಪುಸ್ತಕದಲ್ಲಿ ಒಟ್ಟು ಹದಿನಾಲ್ಕು ಲೇಖನಗಳಿದ್ದು, ಅದರಲ್ಲಿ ಲೇಖಕ ಡಿ.ಆರ್.ಸುರೇಂದ್ರನಾಥ್ ಅವರು ಬರೆದಿರುವ 'ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ' ಎಂಬ ಲೇಖನದಲ್ಲಿ ಕರಾವಳಿ ಭಾಗದ ಕ್ರೈಸ್ತ ದೇವಾಲಯಗಳಲ್ಲಿನ ಭಿತ್ತಿ ಚಿತ್ರಕಲೆಯ ಕುರಿತು ಚರ್ಚಿಸಿರುತ್ತಾರೆ.

ಅಧ್ಯಯನದ ಸ್ವರೂಪ :

ಈ ಅಧ್ಯಯನವನ್ನು ಒಂಬತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಂಡು

ವಿಶ್ಲೇಷಣೆ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳದ್ದಾಗಿರುತ್ತದೆ.

ಅಧ್ಯಾಯ ಎರಡರಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆಯ ನೆಲೆ ಹಿನ್ನೆಲೆ ದಕ್ಷಿಣ ಕರ್ನಾಟಕದ ಭಾಗದಲ್ಲಿನ ಭಿತ್ತಿಚಿತ್ರ ನೆಲೆಗಳು ಅನೇಕ ಕಡೆ ಹರಡಿಕೊಂಡಿದ್ದು, ತಮ್ಮದೇ ಆದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಮತ್ತು ಐತಿಹಾಸಿಕ ಮಹತ್ವ ಹೊಂದಿವೆ. ಇದಲ್ಲದೆ ಕಲಾತ್ಮಕ ದೃಷ್ಟಿಯಿಂದಲೂ ಈ ಭಾಗದ ಭಿತ್ತಿ ಚಿತ್ರಗಳು ಕರ್ನಾಟಕ ಮಾತ್ರವಲ್ಲದೇ ಭಾರತದ ಕಲಾ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಮೈಲುಗಲ್ಲಾಗಿದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಪ್ರಮುಖವಾಗಿ ಹೊಯ್ಸಳರು, ಗಂಗರು, ಮೈಸೂರಿನ ಒಡೆಯರು, ಚಿತ್ರದುರ್ಗದ ನಾಯಕರು ಅಲ್ಲದೇ ಕೆಲವು ಚಿಕ್ಕ ಪುಟ್ಟ ಸಂಸ್ಥಾನಿಕರು ತಮ್ಮ ಆಡಳಿತದ ವ್ಯಾಪ್ತಿಯ ಪ್ರದೇಶದಲ್ಲಿ ಭಿತ್ತಿ ಚಿತ್ರಗಳನ್ನು ರಚಿಸಲು ಪ್ರೋತ್ಸಾಹ ನೀಡಿದ್ದಾರೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಮುಖ್ಯವಾಗಿ ಬೆಂಗಳೂರು, ಮಂಡ್ಯ, ತುಮಕೂರು, ರಾಮನಗರ, ಮೈಸೂರು, ಚಾಮರಾಜನಗರ, ಮಡಿಕೇರಿ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಮಂಗಳೂರು, ಚಿಕ್ಕಮಗಳೂರು, ಉಡುಪಿ ಮುಂತಾದ ಜಿಲ್ಲೆಗಳಲ್ಲಿ ಭಿತ್ತಿ ಚಿತ್ರಗಳ ನೆಲೆಗಳನ್ನು ಗುರುತಿಸುವುದು ಮತ್ತು ಅವುಗಳ ವಸ್ತು ವಿಷಯವನ್ನು ಸ್ಥೂಲವಾಗಿ ತಿಳಿಸುವ ಉದ್ದೇಶವಾಗಿರುತ್ತದೆ. ಇಂತಹ ನೆಲೆಗಳ ಕುರಿತು ಇತಿಹಾಸದ ವಿವರವನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಅಧ್ಯಾಯ ಮೂರುರಲ್ಲಿ ದಕ್ಷಿಣ ಕರ್ನಾಟಕದ ಅರಮನೆಗಳಲ್ಲಿ ಭಿತ್ತಿ ಚಿತ್ರಕಲೆ ಅರಮನೆ ಎಂದಾಗ ನಮ್ಮ ಕಣ್ಣೆದುರಿಗೆ ಬರುವುದು ಮೈಸೂರು ಅರಮನೆ, ಆ ಸ್ಥಳಕ್ಕೆ ಹೋದಾಗ ರಾಜರ ಆಡಳಿತ ಮತ್ತು ಅವರ ದರ್ಬಾರು ಹೇಗಿದ್ದಿತ್ತು ಎಂದು ತಮಗೆ ತಾವೆ ಊಹಿಸಿಕೊಳ್ಳುವಷ್ಟರ ಮಟ್ಟಿಗೆ ಕಟ್ಟಡ ಮತ್ತು ಅಲ್ಲಿನ ಅವಶೇಷಗಳು ತಲೆಯೆತ್ತಿ ನಿಂತಿರುತ್ತವೆ. ಅದರಲ್ಲೂ ಈ ಅರಮನೆಯ ಬಾಗಿಲು, ಮೆಲ್ಚಾವಣಿ ಮತ್ತು ಗೋಡೆಗಳಲ್ಲಿ ವಿವಿಧ ಆಕಾರದ ಚಿತ್ರಗಳು ಇಂದಿಗೂ ರಾರಾಜಿಸುತ್ತಿವೆ ಅವುಗಳೇ ಭಿತ್ತಿ ಚಿತ್ರಗಳು. ಇದಲ್ಲದೇ ಬೆಂಗಳೂರಿನ ಟಿಪ್ಪು ಅರಮನೆ, ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆ, ಕೊಡಗಿನ ನಾಲ್ಕುನಾಡು ಅರಮನೆ ಮುಂತಾದ ರಾಜ, ಮಹಾರಾಜರು ಆಳಿದಂತಹ ಅರಮನೆಗಳಲ್ಲಿ ಇಂದಿಗೂ ಭಿತ್ತಿ ಚಿತ್ರಗಳು ಕಂಡು ಬರುತ್ತವೆ. ಅಂತಹ ನೆಲೆಗಳಿರುವ ಅರಮನೆಗಳನ್ನು ಹುಡುಕಿ ಚಿತ್ರ ಸಂಗ್ರಹದ ಜೊತೆಗೆ ಮಾಹಿತಿಯನ್ನು ವಿವರವಾಗಿ ತಿಳಿಸಿಕೊಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿ ಭಿತ್ತಿ ಚಿತ್ರಕಲೆ ಭಾರತದಾದ್ಯಂತ ಮಾತ್ರವಲ್ಲದೆ ಕರ್ನಾಟಕದ ಉದ್ದಗಲಕ್ಕೂ ಅನೇಕ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿರುವುದನ್ನು ಕಾಣಬಹುದು. ಭಿತ್ತಿ ಚಿತ್ರಗಳ ನೆಲೆಗಳನ್ನು ಪರಿಶೀಲಿಸಿದಾಗ ಅತಿಹೆಚ್ಚಿನ

ಭಿತ್ತಿ ಚಿತ್ರಗಳು ದೇವಾಲಯಗಳಲ್ಲಿ ರಚನೆಯಾಗಿರುವುದು ಕಂಡು ಬರುತ್ತದೆ. ಈ ಮಾತು ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಿಗೂ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿನ ಭಿತ್ತಿ ಚಿತ್ರಗಳನ್ನು ಸ್ಥೂಲವಾಗಿ ಗಮನಿಸಿ ಹಾಗೂ ದೇವಾಲಯಗಳಲ್ಲಿರುವ ಚಿತ್ರಗಳ ವಿವರಗಳ ಜೊತೆಗೆ ಇತಿಹಾಸವನ್ನು ಕಟ್ಟಿಕೊಡಲು ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. **ಅಧ್ಯಾಯ ಐದರಲ್ಲಿ** ದಕ್ಷಿಣ ಕರ್ನಾಟಕ ಮಠಗಳಲ್ಲಿರುವ ಭಿತ್ತಿ ಚಿತ್ರಕಲೆ ಕರ್ನಾಟಕದಲ್ಲಿ ಮಠ-ಮಾನ್ಯಗಳು ಧರ್ಮ ಪ್ರಚಾರವನ್ನು ನಡೆಸುವುದರ ಜೊತೆಗೆ ಕಲಾ ಪರಂಪರೆಯನ್ನು ಬೆಳಸುತ್ತಾ ಬಂದಿವೆ. ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ಸಂಬಂಧಪಟ್ಟ ಮಠಗಳು ಭಿತ್ತಿ ಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿವೆ. ದಕ್ಷಿಣ ಕರ್ನಾಟಕದಲ್ಲಿ ಭಿತ್ತಿಚಿತ್ರಗಳನ್ನು ಒಳಗೊಂಡ ಮಠಗಳೆಂದರೆ ಅಂಕಲಗಿ ಮಠ ಚಿತ್ರದುರ್ಗ, ಜೈನಮಠ, ಮೂಡಬಿದರೆ, ಜೈನ ಮಠ ಶ್ರವಣಬೆಳಗೊಳ, ಜೈನ ಮಠ, ಕಾರ್ಕಳ ಮಠಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇವುಗಳ ಕುರಿತು ಸಮಗ್ರವಾದ ಅಧ್ಯಯನ ಮಾಡಲಾಗಿರುತ್ತದೆ.

ಅಧ್ಯಾಯ ಆರರಲ್ಲಿ ದಕ್ಷಿಣ ಕರ್ನಾಟಕದ ಸಂಕೀರ್ಣ ಮಾಧ್ಯಮದ ಭಿತ್ತಿ ಚಿತ್ರಕಲೆಯ ಕುರಿತಾಗಿದ್ದು, ಇಲ್ಲಿ ಮುಖ್ಯವಾಗಿ ಪ್ರಾಗಿತಿಹಾಸಿಕ ಚಿತ್ರಗಳ ಹಿನ್ನಲೆಯನ್ನು ಪರಿಗಣಿಸುತ್ತಾ, ಈ ಭಾಗದ ವಿಶಿಷ್ಟವಾದ ಶಿಲ್ಪಗಳ ಮೇಲೆ ಬಣ್ಣವನ್ನು ಲೇಪಿಸಿರುವ ಚಿತ್ರಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸುವ ಕೆಲಸ ಈ ಅಧ್ಯಾಯನದ್ದಾಗಿರುತ್ತದೆ.

ಅಧ್ಯಾಯ ಏಳರಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ, ತಂತ್ರ ಮತ್ತು ಪ್ರಾದೇಶಿಕ ವೈಶಿಷ್ಟ್ಯತೆಗಳು ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಹಲವು ಶೈಲಿ ಕಂಡು ಬರುತ್ತವೆ. ಅಲ್ಲದೇ ಒಂದೊಂದು ಚಿತ್ರ ನೆಲೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ಚಿತ್ರ ಶೈಲಿಗಳ ಸಮ್ಮಿಶ್ರ ಸ್ವರೂಪ ಕಂಡು ಬರುತ್ತದೆ. ಈ ಭಾಗದಲ್ಲಿ ರಚನೆಯಾದ ಚಿತ್ರಗಳಲ್ಲಿ ಮೊಗಲ್, ಇಂಡೋ-ಪರ್ಷಿಯನ್, ಮರಾಠ, ಮೈಸೂರು, ವಿಜಯನಗರ, ತಂಜಾವೂರು, ನಾಯಕ ಶೈಲಿ, ಜೈಪುರ ಸ್ಥಳೀಯ ಜನಪದ ಶೈಲಿಯ ವಿವಿಧ ಚಿತ್ರ ಶೈಲಿಗಳು ಕಂಡುಬರುತ್ತವೆ. ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಯಲ್ಲಿ ಮೊಗಲ್, ಇಂಡೋ-ಪರ್ಷಿಯ ಮತ್ತು ಮೈಸೂರು ಶೈಲಿಗಳ ಸಮ್ಮಿಶ್ರಣ ಪ್ರಭಾವ ಉಂಟಾಗಿರುವುದು ಕಂಡು ಬರುತ್ತದೆ. ಹೀಗೆ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿಯ ವಿಶಿಷ್ಟತೆಗಳನ್ನು ವಿವರವಾಗಿ ತಿಳಿಸಿಕೊಡುವ ಪ್ರಮುಖ ಅಧ್ಯಾಯ ಇದಾಗಿದೆ.

ಅಧ್ಯಾಯ ಎಂಟರಲ್ಲಿ ದಕ್ಷಿಣ ಕರ್ನಾಟಕ ಭಿತ್ತಿಚಿತ್ರಗಳ ಸ್ಥಿತಿಗತಿ, ಸಂರಕ್ಷಣೋಪಾಯಗಳ ಕಲಾ ಪ್ರಕಾರಗಳು ಯಾವುದೇ ಜಗೆಯಲ್ಲಿದ್ದರು. ಅವು ಕಾಲಕ್ರಮೇಣ ವಿವಿಧ ರೀತಿಯ ಆಪತ್ತಿಗೆ ಸಿಲುಕಿ ನಾಶ ಹೊಂದುವುದು ಸಾಮಾನ್ಯವಾದ ಸಂಗತಿಯಾಗಿದೆ. ಸ್ವಾಭಾವಿಕವಾದ ಸವಕಳಿ ಉಂಟಾಗುವುದು. ನೀರಿನಿಂದಾಗುವ ಆಪತ್ತು, ವ್ಯಕ್ತಿಗತವಾಗಿ ಆಗುವ ಆಪತ್ತುಗಳು, ಕ್ರಿಮಿ-ಕೀಟಗಳಿಂದಾಗುವ

ಆಪತ್ತುಗಳು ನೈಸರ್ಗಿಕ ವಿಕೋಪದಿಂದಾಗುವ ಆಪತ್ತುಗಳು. ಹೀಗೆ ಅನೇಕ ರೀತಿಯ ಆಪತ್ತುಗಳು ಭಿತ್ತಿಚಿತ್ರ ಕಲಾಕೃತಿಗಳಿಗೆ ಬರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳು ನಾಶವಾಗುತ್ತಿರುವ ಹಾಗೂ ನಾಶವಾಗದೆ ಉಳಿದಿರುವ ಭಿತ್ತಿ ಚಿತ್ರಗಳ ಸಂರಕ್ಷಣೆಗೆ ಬೇಕಾಗಿರುವ ಪ್ರಮುಖ ಅಂಶಗಳನ್ನು ಹಿರಿಯ ತಜ್ಞರಿಂದ ತಿಳಿದುಕೊಂಡು ಶೋಧನೆ ಮಾಡಿ ,ಕಳೆದು ಹೋಗುತ್ತಿರುವ ಭಿತ್ತಿ ಚಿತ್ರಗಳನ್ನು ದಾಖಲೆಯತ್ತ ಮುಖ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ ಒಂಬತ್ತು ಸಮಾರೋಪ ಈ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಾಯಗಳ ಫಲಿತಗಳೊಂದಿಗೆ ಸಮೀಕ್ಷೆಯ ವಿವರಗಳನ್ನು ನೀಡಲಾಗಿರುತ್ತದೆ.

ಅಧ್ಯಯನದ ವ್ಯಾಪ್ತಿ :

ವಿಜಯನಗರ, ಹೊಯ್ಸಳ ಮತ್ತು ಮೈಸೂರು ಅರಸರ ಕಾಲದಲ್ಲಾಗಿರುವ ಭಿತ್ತಿ ಚಿತ್ರಗಳ ಜೊತೆಗೆ ಕ್ರೈಸ್ತ ಮತ್ತು ಜೈನ ಧರ್ಮದ ಮಹತ್ವ ಸಾರುವ ಭಿತ್ತಿ ಚಿತ್ರಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು, ಇಂದು ನೂರಾರು ಕಡೆ ಭಿತ್ತಿ ಚಿತ್ರಗಳು ಉಳಿದಿರುವುದಿಲ್ಲ. ಕೆಲವೇ ಕೆಲವು ಕಡೆ ಉಳಿದಿರುವ ಭಿತ್ತಿ ಚಿತ್ರಗಳನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ ಈ ಅಧ್ಯಯನ ಮಹತ್ವ ಪಡೆದಿರುತ್ತದೆ. ಭಿತ್ತಿಚಿತ್ರ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮಪ್ರಚಾರದ ಸಾಧನವಾಗಿ, ಸಮಾಜವನ್ನು ರೂಪಿಸುವಲ್ಲಿ, ಮನರಂಜನೆಗಾಗಿ, ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ರಾಜಕೀಯ ಉದ್ದೇಶಗಳಿಗಾಗಿ ಹೇಗೆ ಬಳಸಿಕೊಂಡರು ಎಂಬಂತಹ ವಿಷಯಗಳು ಈ ಅಧ್ಯಯನದಿಂದ ತಿಳಿದುಬರುತ್ತವೆ. ಮುಖ್ಯವಾಗಿ ಇಲ್ಲಿ ಶಿಷ್ಟಪದ ಭಿತ್ತಿ ಚಿತ್ರಕಲೆಯನ್ನು ಮಾತ್ರ ಪರಿಗಣಿಸಿ ಅಧ್ಯಯನ ಮಾಡಲಾಗಿದ್ದು, ಪ್ರಸ್ತುತ ಅಧ್ಯಯನವು ದಕ್ಷಿಣ ಕರ್ನಾಟಕಕ್ಕೆ ಮಾತ್ರ ಸೀಮಿತಗೊಂಡಿರುತ್ತದೆ.

ವೈಧಾನಿಕತೆ :

ಈ ಅಧ್ಯಯನದಲ್ಲಿ ಎರಡು ರೀತಿಯ ಸಾಮಗ್ರಿಗಳಿಂದ ವಿಷಯ ಸಂಗ್ರಹಣೆ ಮಾಡಿಕೊಂಡು ಬರವಣಿಗೆಗೆ ಅಳವಡಿಸಿಕೊಳ್ಳುವ ವಿಧಾನವನ್ನು ಅನುಸರಿಸಲಾಗಿದೆ. ಅವು ಈ ಕೆಳಗಿನಂತಿವೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿ :

ಪ್ರಸ್ತುತ ಅಧ್ಯಯನದಲ್ಲಿ ಮೂಲ ಆಕರ ಸಾಮಗ್ರಿಯಾಗಿ ದಕ್ಷಿಣ ಕರ್ನಾಟಕ ಭಿತ್ತಿಚಿತ್ರ ನೆಲೆಗಳನ್ನು ಆಯ್ದುಕೊಳ್ಳಲಾಗಿದೆ. ಮೂಲ ಆಕರ ಸಾಮಗ್ರಿಯಿಂದ ವಿಷಯ ಸಂಗ್ರಹ ಮಾಡಿಕೊಳ್ಳಲು ಕ್ಷೇತ್ರಕಾರ್ಯ ಮಾಡಲಾಗುವುದು. ಭಿತ್ತಿ ಚಿತ್ರಗಳು ಇರುವ ಮೂಲ ನೆಲೆಗಳಿಗೆ ಹೋಗಿ ಅಲ್ಲಿ ಸಿಕ್ಕಂತಹ ಚಿತ್ರಕೃತಿಗಳನ್ನು ಛಾಯಾಚಿತ್ರ ಮಾಡುವುದು ಮತ್ತು ವೀಡಿಯೊ ಮೂಲಕವೂ

ಸೆರೆಹಿಡಿಯಲಾಗಿದೆ. ಅಲ್ಲದೆ ಆ ಸ್ಥಳದ ಹಿರಿಯರು, ವಿದ್ವಾಂಸರು, ಇತಿಹಾಸಕಾರರನ್ನು ಭೇಟಿ ಮಾಡಿ ವಿಷಯಕ್ಕನುಸಾರ ಹೆಚ್ಚಿನ ಮಾಹಿತಿ ಪಡೆಯುವುದು. ಇನ್ನೂ ದೇವಾಲಯ, ಚರ್ಚ್, ಮಸೀದಿ ಮತ್ತು ಮಠ ಮಂದಿರಗಳಲ್ಲಿರುವ ಚಿತ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಬಂಧಪಟ್ಟವರಲ್ಲಿ ಮಾಹಿತಿ ಪಡೆಯಲಾಗಿದೆ. ಅರ್ಚಕರು, ಅಧಿಕಾರಿಗಳು ಹಾಗೂ ರಾಜ್ಯದ ಅನೇಕ ಸಾಹಿತಿಗಳು, ತಂತ್ರಜ್ಞರು ಮತ್ತು ಚಿತ್ರಕಲಾವಿದರೊಡನೆ ಚರ್ಚಿಸಿ ಉಪಯುಕ್ತ ಮಾಹಿತಿ ಪಡೆದುಕೊಂಡು ಈ ಸಂಶೋಧನಾ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ :

ಪ್ರಮುಖವಾಗಿ ಈ ಸಾಮಗ್ರಿಯಲ್ಲಿ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ, ಕಲಾಸಾಹಿತ್ಯ ಪುಸ್ತಕಗಳು, ಸಂಶೋಧನಾ ಪ್ರಬಂಧ, ಮಹಾಪ್ರಬಂಧಗಳು, ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳು, ನಿಘಂಟುಗಳು, ಪತ್ರಿಕೆಗಳಲ್ಲಿ ಬಂದಂತಹ ಭಿತ್ತಿ ಚಿತ್ರಗಳಿಗೆ ಸಂಬಂಧಿಸಿದಂತಹ ಪ್ರಕಟಗೊಂಡ ಲೇಖನಗಳು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಪ್ರಕಟಿತವಾದ ಸುದ್ದಿಗಳು ಮತ್ತು ಅಭಿಪ್ರಾಯಗಳು, ಬೇರೆ ಬೇರೆ ಗ್ರಂಥಾಲಯಗಳಿಗೆ ಭೇಟಿಯಾಗಿ ಭಿತ್ತಿ ಚಿತ್ರಕಲೆಗೆ ಸಂಬಂಧಪಟ್ಟ ಪುಸ್ತಕಗಳನ್ನು ಹುಡುಕಿ ಅದರಲ್ಲಿ ಸಂಶೋಧನಾ ವಿಷಯಕ್ಕೆ ಸಂಬಂಧಪಟ್ಟಂತಹ ಮಾಹಿತಿಯನ್ನು ಪಡೆದು, ಪ್ರಸ್ತುತ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ.

ಅಡಿ ಟಿಪ್ಪಣಿ

೧. ಪ್ರಸಂ.ನಿರಂಜನ: ಜ್ಞಾನ ಗಂಗೋತ್ರಿ, ವಿಶ್ವಕೋಶ ಸಂಪುಟ–೫, ಬೆಂಗಳೂರು.

೨. ಪ್ರೊ.ಎಂ.ಎಚ್.ಕೃಷ್ಣಯ್ಯ: ಶೃಂಗಾರ ಲಹರಿ, ಪು.೬

೩. ಪ್ರೊ.ಎಂ.ಎಚ್.ಕೃಷ್ಣಯ್ಯ: ಶೃಂಗಾರ ಲಹರಿ, ಪು.೫೮

೪. ಡಾ.ಎಸ್.ಸಿ.ಪಾಟೀಲ(ಸಂ): ಚಿತ್ರಾಕ್ಷಿ, ವಜ್ರ ಮಹೋತ್ಸವ ಸ್ಮರಣ ಸಂಚಿಕೆ ಪು.೫

೫. ಡಾ.ಅ.ಲ.ನರಸಿಂಹನ್: ಆಲೇಖ್ಯ, ಪು.೧೩

೬ ಡಾ.ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ, ಪಿಎಚ್.ಡಿ ಮಹಾಪ್ರಬಂಧ, ಕವಿವಿ.ಹಂಪಿ,೨೦೦೧

೭ ಡಾ.ಅ.ಲ.ನರಸಿಂಹನ್: ಆಲೇಖ್ಯ, ಪು.೧೩

೮. ಡಾ.ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪು.೨೭

೯. ಕೆ.ವಿ.ಸುಬ್ರಮಣ್ಯಂ: ಕಲಾ ಸಂವೇದನೆಯ ಒಳನೋಟಗಳು, ಪು.೨೭

೧೦. ಡಾ.ಅ.ಲ.ನರಸಿಂಹನ್: ಆಲೇಖ್ಯ, ಪು.೯

೧೧. ಡಾ.ಎಸ್.ಸಿ.ಪಾಟೀಲ: ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ, ಕರ್ನಾಟಕ ವಿ.ವಿ.೧೯೮೩

೧೨. ಡಾ.ಚೂಡಾಮಣಿ ನಂದಗೋಪಾಲ: ಡ್ಯಾನ್ಸ್ ಆಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್,ಬೆಂಗಳೂರು ವಿ.ವಿ.೧೯೮೭

೧೩. ಡಾ. ಬಿ.ಕೆ. ಹಿರೇಮಠ: ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಕರ್ನಾಟಕ ವಿ ವಿ.

೧೪. ಡಾ.ಎಸ್.ಸಿ.ಪಾಟೀಲ: ಕರ್ನಾಟಕ ಜನಪದ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿ.ವಿ.೧೯೯೧

೧೫. ಡಾ.ಅ.ಲ.ನರಸಿಂಹನ್: ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿ.ಎಚ್.ಡಿ ಮಹಾಪ್ರಬಂಧ,ಬೆಂಗಳೂರು ವಿ.ವಿ.೧೯೯೭

೧೬. ಡಾ. ಸಂಪದಾ ಭಟ್: ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು, ಪಿ.ಎಚ್.ಡಿ ಮಹಾಪ್ರಬಂಧ, ಬೆಂಗಳೂರು ವಿ.ವಿ.೧೯೯೭

೧೭. ಡಾ. ಪುಷ್ಪಾ ದ್ರಾವಿಡ :ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿ.ಎಚ್.ಡಿ ಮಹಾಪ್ರಬಂಧ, ಬೆಂಗಳೂರು ವಿ.ವಿ.೧೯೯೭

೧೮. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೧

೧೯. ಡಾ. ಶಿವಾನಂದ ಬಂಟನೂರು: ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೨

೨೦. ಡಾ.ಗಿರೀಶ: ಬುಡಕಟ್ಟು ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೨

೨೧. ಡಾ.ಲಕ್ಷ್ಮೀದೇವಿ ಗವಾಯಿ: ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೨

೨೨. ಡಾ.ಶಂಕ್ರಪ್ಪ ಕೋಲ್ಕಾರ್: ಕೊಪ್ಪಳ–ಹಂಪಿ ಪ್ರದೇಶದ ಪ್ರಾಗ್ಯೆತಿಹಾಸಿಕ ಕಾಲದ ಕಲೆ, ಪಿ.ಎಚ್.ಡಿ

ಮಹಾಪ್ರಬಂಧ, ಕ.ವಿ.ವಿ.ಹಂಪಿ.೨೦೦೨

೨೩. ಡಾ.ಸೌಮ್ಯಾ: ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿ.ಎಚ್.ಡಿ ಮಹಾಪ್ರಬಂಧ, ಬೆಂಗಳೂರು ವಿ.ವಿ.೨೦೦೨

೨೪. ಡಾ.ಪ್ರಮಿಳಾ ಲೋಚನ:ವಿಸ್ಪೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿ.ಎಚ್.ಡಿ ಮಹಾಪ್ರಬಂಧ, ಬೆಂಗಳೂರು ವಿ.ವಿ.೨೦೦೨

೨೫. ಡಾ.ವೀಣಾಶೇಖರ: ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ – ೧೮೨೦), ಪಿ.ಎಚ್.ಡಿ ಮಹಾಪ್ರಬಂಧ, ಬೆಂಗಳೂರು ವಿ.ವಿ.೨೦೦೩

೨೬. ಡಾ.ಸಿದ್ಧಲಿಂಗಸ್ವಾಮಿಹಿರೇಮಠ: ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೩

೨೭. ಡಾ. ಎಸ್.ಸಿ.ಪಾಟೀಲ: ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿ.ಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿ.ವಿ.ಧಾರವಾಡ.೨೦೦೩

೨೮. ಡಾ.ವಿ.ಎಮ್.ಬಾಗಾಯತ್: ಕರ್ನಾಟಕ ಮುಸ್ಲಿಂಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦), ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೪

೨೯. ಡಾ.ಶಿವಕುಮಾರ.ಜಿ.ಓ.: ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯಮೇಳಗಳ ವಿವಿಧ ಆಯಾಮಗಳು, ಪಿ.ಎಚ್.ಡಿ ಮಹಾಪ್ರಬಂಧ, ಮೈ.ವಿ.ವಿ

೩೦. ಡಾ.ಪಿ.ಗೌರೀಶ: ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ,ಮೈ.ವಿ.ವಿ,೨೦೦೫

೩೧. ಡಾ.ಶಶಿಕಲಾ ಹೂಗಾರ: ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ,ಕ.ವಿ.ವಿ, ೨೦೦೫

೩೨. ಡಾ.ಶಿವಪ್ರಕಾಶ ತುಕ್ಕಣ್ಣವರ: ಕರ್ನಾಟಕ ರಥ ಶಿಲ್ಪಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ ವಿ.ವಿ.ಹಂಪಿ, ೨೦೦೬

೩೩. ಡಾ.ಎಚ್.ಎನ್.ಚಿತ್ರಗಾರ: ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೬

೩೪. ಡಾ.ಎಸ್.ವಿ.ವೆಂಕಟೇಶಯ್ಯ: ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ,ಕ.ವಿ.ವಿ,೨೦೦೬

೩೫. ಡಾ.ವಿಶ್ವೇಶ್ವರಿ ತಿವಾರಿ: ರಂಗೋಲಿ ಕಲೆ, ಗುಲ್ಬರ್ಗಾ.ವಿ.ವಿ. ಪಿ.ಎಚ್.ಡಿ ಮಹಾಪ್ರಬಂಧ,೨೦೦೬

೩೬. ಡಾ.ಮಲ್ಲಿಕಾರ್ಜುನ ಸಿ. ಬಾಗೋಡಿ: ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ.೨೦೦೭

೩೭. ಡಾ.ಗೀತಾಂಜಲಿ ಬಿ.ಆರ್: ಐತಿಹಾಸಿಕ ದೀಪಸ್ತಂಭಗಳು ,ಕ.ವಿ.ವಿ. ಪಿ.ಎಚ್.ಡಿ ಮಹಾಪ್ರಬಂಧ. ಹಂಪಿ.೨೦೦೮

೩೮. ಡಾ.ರಾಠೋಡ್: ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿ.ಎಚ್.ಡಿ ಮಹಾಪ್ರಬಂಧ, ಕವಿ.ವಿ.ಹಂಪಿ.೨೦೦೮

೩೯. ಡಾ.ಮೋಹನ್‌ರಾವ್ ಬಿ. ಪಂಚಾಳ: ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್ ಅವರ ಜೀವನ ಮತ್ತು ಕಲಾಕೃತಿಗಳು , ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ.೨೦೦೮

೪೦. ಡಾ.ವಿಶ್ವನಾಥ ಎ.ಎಸ್: ಕರಾವಳಿ ಕರ್ನಾಟಕದ ಯಕ್ಷಗಾನ ಮತ್ತು ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ.೨೦೦೮

೪೧. ಡಾ.ರವೀಂದ್ರ ಎಸ್. ಕಮ್ಮಾರ: ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೮

೪೨. ಡಾ.ಪ್ರೇಮಾನಂದ ಟಿ. ಲಕ್ಕಣ್ಣನವರ್: ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೯

೪೩. ಡಾ.ಜಿ.ಲಕ್ಷ್ಮೀಪತಿ: ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೯

೪೪. ಡಾ.ಮಂಟಗಿ: ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೯

೪೫. ಡಾ. ರೆಹಮಾನ್ ಪಟೇಲ್: ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ,ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ.ವಿ.ವಿ,೨೦೦೯

೪೬. ಡಾ.ಸುನಿತಾ ಪಾಟೀಲ್: ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೦

೪೭. ಡಾ.ನಿಂಗಪ್ಪ ಎಂ. ಅಂಗಡಿ: ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೦

೪೮. ಡಾ.ಕಿಶೋರ್ ಎನ್. ದಾಟನಾಳ್: ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೦

೪೯. ಡಾ.ಕಾಶಿನಾಥ ಡಿ. ವಡ್ಡರ: ಶಾಂತಿನಿಕೇತನದ ಭಿತ್ತಿಚಿತ್ರಗಳು, ಪಿ.ಎಚ್.ಡಿ ಮಹಾಪ್ರಬಂಧ, ಮೈಸೂರು ವಿ.ವಿ,೨೦೧೦

೫೦. ಡಾ.ಸತೀಶಕುಮಾರ ವಲ್ಲ್ಯೇಪೂರೆ: ಜೆ. ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿ.ಎಚ್.ಡಿ ಮಹಾಪ್ರಬಂಧ,೨೦೧೦

೫೧. ಡಾ.ಶಂಕ್ರಪ್ಪ ಎಂ. ಕುಂದಗೋಳ: ಕರ್ನಾಟಕದ ಗಂಜೀಫಾ ಚಿತ್ರಕಲೆ,ಕ.ವಿ.ವಿ.ಹಂಪಿ, ಪಿ.ಎಚ್.ಡಿ ಮಹಾಪ್ರಬಂಧ,ಕ.ವಿ.ವಿ.ಹಂಪಿ,೨೦೧೧

೫೨. ಡಾ.ಭಾರತಿ ಮರವಂತಿ: ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ. ಪಿ.ಎಚ್.ಡಿ ಮಹಾಪ್ರಬಂಧ,೨೦೧೧

೫೩. ಡಾ. ಕಾಮಾಕ್ಷಿ ಸಿ. ಸೊಪ್ಪಿನ: ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ , ಪಿ.ಎಚ್.ಡಿ ಮಹಾಪ್ರಬಂಧ,೨೦೧೧

೫೪. ಡಾ. ಪರಶುರಾಮ ಪಿ: ಕರ್ನಾಟಕದ ಕಲಾಗ್ಯಾಲರಿಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನ. ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ.ವಿ.ವಿ.೨೦೧೨

೫೫. ಡಾ.ಷಾಹಿದ್ ಪಾಷಾ: ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು. ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ,ವಿ.ವಿ.೨೦೧೨

೫೬. ಡಾ.ಬಿ.ಎಲ್.ಲಮಾಣಿ: ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ. ಪಿ.ಎಚ್.ಡಿ ಮಹಾಪ್ರಬಂಧ. ಕ.ವಿ.ವಿ.ಹಂಪಿ.೨೦೧೨

೫೭. ಡಾ. ರೇಣುಕಾ ಮಾರ್ಕಾಂಡೆ: ಕರ್ನಾಟಕದ ವೈಷ್ಣವಪರಂಪರೆಯ ಚಿತ್ರಕಲೆ , ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೫೮. ಡಾ.ಶಶಿಕಲಾ ನಂದನಗೌಡ: ಕರ್ನಾಟಕದ ಹುದುಗು ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೫೯. ಡಾ.ಕೃಷ್ಣೇಗೌಡ ಹೆಚ್. ಎನ್: ಕರ್ನಾಟಕದ ಬೌದ್ಧ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೬೦. ಡಾ.ಬಿ.ಎಂ.ಪಾಟೀಲ: ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೬೧. ಡಾ. ಕೃಷ್ಣವೇಣಿ: ಬಳ್ಳಾರಿ ಜಿಲ್ಲೆಯ ಚಿತ್ರಕಲೆ , ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೬೨. ಡಾ. ರವಿ ವಸಾರಾಮ ನಾಯಕ: ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ.೨೦೧೨

೬೩. ಡಾ. ಮಹಾಂತೇಶ ಎಂ. ಪಲದಿನ್ನಿ: ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೬೪. ಡಾ. ಪಿ. ಬಿ. ಗವಾನಿ: ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೨

೬೫. ಡಾ. ಸುಚಿತ್ರಾ ಜೆ. ಲಿಂಗದಳ್ಳಿ: ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೩

೬೬. ಡಾ. ಬಸವಯ್ಯ ಗವಿಮಠ: ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೩

೬೭. ಸುಬ್ಬಯ್ಯ ಮಹಾದೇವಯ್ಯ ನೀಲಾ: ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು – ಒಂದು ಅಧ್ಯಯನ, ಪಿ.ಎಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ,ವಿ.ವಿ.೨೦೧೩

೬೮. ದೇವದಾಸ ಕಳಸದ: ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿಲಿಟ್ ಮಹಾಪ್ರಬಂಧ,ಕ ವಿ.ವಿ.ಹಂಪಿ,೨೦೦೧

೬೯. ಆನಂದ ಕೆ. ಪೂಜಾರ: ಕರ್ನಾಟಕದ ಕಾವಿ ಕಲೆ, ಕ ವಿ.ವಿ.ಹಂಪಿ,೨೦೦೫

೭೦. ಡಿ.ಎ.ಉಪಾಧ್ಯ: ಕರಾವಳಿಯ ಕಾವಿ ಚಿತ್ರಕಲೆ,ವಾಸ್ತು–ಶಿಲ್ಪ–ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಕ ವಿ.ವಿ.ಹಂಪಿ,೨೦೦೫

೭೧. ಎಮ್.ಎಸ್.ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು–, ಕ ವಿ.ವಿ.ಹಂಪಿ,೨೦೧೨

೭೨. ಜಿ.ಎಸ್.ಭೂಸಗೊಂಡ: ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್. ಕೋಟ್ಯಾಳಕರ – ಒಂದು ಅಧ್ಯಯನ. ಕ.ವಿ.ವಿ.ಹಂಪಿ.೨೦೧೪

೭೩. ಮಲ್ಲಿಕಾರ್ಜುನ ಬಾಗೋಡಿ: ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ. ಎಂ.ಫಿಲ್ ಪ್ರಬಂಧ. ಕ.ವಿ.ವಿ.ಹಂಪಿ.೨೦೦೩

೭೪. ಎ.ಎಸ್. ವಿಶ್ವನಾಥ: ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು. ಕ ವಿ.ವಿ.ಹಂಪಿ.

೨೦೦೫
೭೫. ಸಿ.ಡಿ. ಜಟ್ಟೆಣ್ಣನವರ: ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಬದುಕು, ಕ ವಿ.ವಿ.ಹಂಪಿ,
೭೬. ಶಂಕರ ಕುಂದಗೋಳ: ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಕ ವಿ.ವಿ.ಹಂಪಿ, ೨೦೦೬
೭೭. ಸುಚಿತ್ರಾ ಲಿಂಗದಳ್ಳಿ: ವಿಜಯನಗರದ ಭಿತ್ತಿ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೬
೭೮. ರಾಜಕುಮಾರ ಎಸ್. ಕಾಳೆ: ಚಂಧ್ ಗ್ಯಾಲರಿ, ಕ ವಿ.ವಿ.ಹಂಪಿ,೨೦೦೬
೭೯. ಜಿತೇಂದ್ರ ಜಿ. ಕೋತಳಿಕರ: ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಕ ವಿ.ವಿ.ಹಂಪಿ,೨೦೦೭
೮೦. ಬಿ.ಎಂ. ಪಾಟೀಲರ: ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಕ ವಿ.ವಿ.ಹಂಪಿ,೨೦೦೭
೮೧. ಉಮೇಶ ಎ.ಎಸ್: ಕರ್ನಾಟಕ ಜೈನ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೭
೮೨. ರವಿ ವಸಾರಾಮನಾಯಕ: ಕಿನ್ನಾಳ ಕಲೆ, ಕ ವಿ.ವಿ.ಹಂಪಿ,೨೦೦೭
೮೩. ಶಶಿಕಾಂತ ಬಸರಿಕಟ್ಟಿ: ಕಲಘಗಿಯ ಚಿತ್ರಕಲೆ, ಕ ವಿ.ವಿ.ಹಂಪಿ೨೦೦೭,
೮೪. ಶೈಲಾ ಬರಡೋಲ: ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಕ ವಿ.ವಿ.ಹಂಪಿ,೨೦೦೭
೮೫. ಕೃಷ್ಣವೇಣಿ: ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೮೬. ಯೋಗೀಶ ಹೆಚ್: ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೮೭. ಮಹಾಕೊಟೇಶ್ವರಗೌಡ ಪಾಟೀಲ: ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೮೮. ಸುರೇಶ ಬಡಿಗೇರ: ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೮೯. ಸಂತೋಷಕುಮಾರ ಕುಲಕರ್ಣಿ: ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೯೦. ಜಯರಾಜ ಚಿಕ್ಕಪಾಟೀಲ: ಕರ್ನಾಟಕದ ಜಾಹೀರಾತುಗಳಲ್ಲಿಸಾಂಸ್ಕೃತಿಕ ನೆಲೆಗಳು, ಕ ವಿ.ವಿ.ಹಂಪಿ,೨೦೦೮
೯೧. ಮಹೇಶ ಉಮತಾರ: ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ,, ಕ ವಿ.ವಿ.ಹಂಪಿ,೨೦೦೮
೯೨. ಗಿರಿಜಾ ಬಿರಾದಾರ: ವಿಜಾಪೂರ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೯೩. ಬಸಯ್ಯ ಗವಿಮಠ: ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೯೪. ಕೃಷ್ಣಗೌಡ ಹೆಚ್.ಎನ್: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೮
೯೫. ಮಹಾಂತೇಶ ಪಲದಿನ್ನಿ: ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಕ ವಿ.ವಿ.ಹಂಪಿ,೨೦೦೮
೯೬. ಕಾಂತರಾಜ: ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಕ ವಿ.ವಿ.ಹಂಪಿ,೨೦೦೯
೯೭. ರಂಗಸ್ವಾಮಿ: ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಕವಿ.ವಿ.ಹಂಪಿ,೨೦೦೯
೯೮. ಶ್ಯಾಮ ತಾ. ಜಮಾದಾರ: ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಕವಿ.ವಿ.ಹಂಪಿ,೨೦೦೯
೯೯. ಭಾನುಮತಿ ಕೆ.ಎಲ್: ಚಿತ್ರಕಲಾವಿದ ಎಂ.ಜಿ. ವಾಜೇದಮಠ ಬದುಕು ಮತ್ತು ಕಲಾಕೃತಿಗಳು, ಕವಿ.ವಿ.ಹಂಪಿ,೨೦೧೦

೧೦೦. ದಿನೇಶ ಬಿ: ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಕ ವಿ.ವಿ.ಹಂಪಿ,೨೦೧೦
೧೦೧. ವಾದಿರಾಜ ಎ: ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಕ ವಿ.ವಿ.ಹಂಪಿ,೨೦೧೦
೧೦೨. ಚಿಂತಾಮಣಿ: ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಕ ವಿ.ವಿ.ಹಂಪಿ,೨೦೧೦
೧೦೩. ಡಿ.ಎಸ್ ಶ್ವೇತ: ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಕ ವಿ.ವಿ.ಹಂಪಿ,೨೦೧೨
೧೦೪. ಡಿ.ಆರ್ ಸುರೇಂದ್ರನಾಥ: ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ, ಕ ವಿ.ವಿ.ಹಂಪಿ,೨೦೧೨
೧೦೫. ಶಶಿಕಲಾ ಜಿ.ವಿ: ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೨
೧೦೬. ರಾಜೀವ.ಎಂ.ವೈ: ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಕ ವಿ.ವಿ.ಹಂಪಿ,೨೦೧೨
೧೦೭. ಮಲ್ಲಿಕಾರ್ಜುನ ಕೆ.ಜಿ:ಕೆ.ಕೆ.ಹೆಬ್ಬಾರರ ಕಲೆ ಮತ್ತು ಬದುಕು, ಕ ವಿ.ವಿ.ಹಂಪಿ,೨೦೧೨
೧೦೮. ಎನ್.ಜಿ. ಅಂಬರೀಶ್: ಕರ್ನಾಟಕದ ಆಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಕ ವಿ.ವಿ.ಹಂಪಿ,೨೦೧೨
೧೦೯. ರಾಘವೇಂದ್ರ: ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೨
೧೧೦. ಮಹಾದೇವಪ್ಪ ಸಣತಂಗಿ: ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಕ ವಿ.ವಿ.ಹಂಪಿ,೨೦೧೨
೧೧೧. ವೈಶಾಲಿ ಕಾಂಬಳೆ: ಬೀದರ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೨
೧೧೨. ದಯಾನಂದ ಕೋಳಿ: ಕೊಪ್ಪಳ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೩
೧೧೩. ಸವಿತಾ ಬಡಿಗೇರ: ಧಾರವಾಡ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೩
೧೧೪. ಹೇಮಂತಕುಮಾರ: ಮೈಸೂರು ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೩
೧೧೫. ಬಸವರಾಜ ಕಲೆಗಾರ: ಯಾದಗಿರಿ ಜಿಲ್ಲೆಯ ಚಿತ್ರಕಲೆ, ಕ ವಿ.ವಿ.ಹಂಪಿ,೨೦೧೩
೧೧೬. ಗಾಯಿತ್ರಿ ಮಂತ: ಕಲಾವಿದ ಪಿ.ಎಸ್.ಕಡೇಮನಿಯವರ ಕಲೆ & ಬದುಕು,ಕವಿ.ವಿ.ಹಂಪಿ,೨೦೧೪
೧೧೭. ವಿಶ್ವನಾಥ ಎಚ್.ಹಂಡೆ: ಸುಬ್ರಮಣ್ಯಂರವರ ದೃಶ್ಯಕಲಾ ಸಾಹಿತ್ಯ,ಕ.ವಿ.ವಿ.ಹಂಪಿ,೨೦೧೪
೧೧೮. ಖಾದರ ಸಾಬ್ ಇ.ಗುಳೇದಗುಡ್ಡ: ಬಹುಮುಖ ಕಲಾ ಸಾಧಕ ವಿ.ಜಿ.ಕಡೆಮನಿ,ಕ.ವಿ.ವಿ.ಹಂಪಿ
೧೧೯. ಮಾಯಾದೇವಿ: ಎ.ಎಸ್.ಪಾಟೀಲರವರ ಕಲೆ ಮತ್ತು ಬದುಕು, ಕ.ವಿ.ವಿ.ಹಂಪಿ,೨೦೧೪
೧೨೦. ಮಂಜುಳಾಬಾಯಿ: ಕೆ.ಜ್ಞಾನೇಶ್ವರರವರ ಕಲೆ ಮತ್ತು ಬದುಕು, ಕ.ವಿ.ವಿ.ಹಂಪಿ,೨೦೧೪
೧೨೧. ಕೀರ್ತಿವರ್ಮ: ಕೆ.ರಾಮಚಂದ್ರನ್ ರವರ ಕಲೆ ಮತ್ತು ಬದುಕು, ಕ.ವಿ.ವಿ.ಹಂಪಿ,೨೦೧೪
೧೨೨. ರಾಜಪ್ಪ: ಬಾಗೂರು ಮಾರ್ಕಂಡೇಯ್ಯರವರ ಚಿತ್ರಕಲೆ ಮತ್ತು ಸಾಹಿತ್ಯ, ಕ.ವಿ.ವಿ.ಹಂಪಿ,೨೦೧೪
೧೨೩. ಅಶೋಕ ಸಿ.ನಡುವಿನಮನಿ : ಹೈದರಾಬಾದ್ ಕರ್ನಾಟಕದ ಭಾವಚಿತ್ರ ಕಲಾವಿದರು-ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೫
೧೨೪. ವೆಂಕಟೇಶ ಕೆ. ಹೆಚ್ : ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ. ಎಂ.ಫಿಲ್ ಪ್ರಬಂಧ. ಕವಿವಿ.ಹಂಪಿ. ೨೦೧೫
೧೨೫. ಅಸಂಗಪ್ಪ ಗುಳೇದಗುಡ್ಡ : ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿ ಮನೆತನದ ಕೊಡುಗೆ. ಎಂ.ಫಿಲ್ ಪ್ರಬಂಧ. ಕವಿವಿ.ಹಂಪಿ, ೨೦೧೫
೧೨೬. ನಟರಾಜ .ಶಿಲ್ಪಿ: ಕನಗನಹಳ್ಳಿಯ ಸ್ತೂಪ ಶಿಲ್ಪಗಳು. ಎಂ.ಫಿಲ್ ಪ್ರಬಂಧ. ಕವಿವಿ.ಹಂಪಿ. ೨೦೧೫

೧೨೭. ಬಸವರಾಜ ರೊಳ್ಳಿ : ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೫

೧೨೮. ಸಂತೋಷ ಮಾ. : ಬೇವಿನಮರದ ಅವರ ಹಂಪಿ ಪರಿಸರದ ಹನುಮನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ), ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೫

೧೨೯. ಅಮೀನ್ ರೆಡ್ಡಿ : ವಿಜಯನಗರ ಕಾಲದ ಲೇಪಾಕ್ಷಿ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೬

೧೩೦. ನಿಜಲಿಂಗ : ನಿಸರ್ಗ ಚಿತ್ರಕಲಾವಿದರ: ಒಂದು ಅಧ್ಯಯನ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), ಎಂ.ಫಿಲ್ ಪ್ರಬಂಧ,ಕವಿವಿ.ಹಂಪಿ, ೨೦೧೬

೧೩೧. ಸಂಗಪ್ಪ ಕೊತ್ತಂಬರಿ : ಚಿಕ್ಕ ಮಕ್ಕಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೬,

೧೩೨. ವೀರೇಶ ರುದ್ರಸ್ವಾಮಿ : ಕರ್ನಾಟಕ ಭಾವ ಚಿತ್ರಕಲಾವಿದರ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೬,

೧೩೩. ಸಂಗಮ ದೊಡ್ಡಮನಿ : ಡಿ.ವಿ.ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಲಾಶಾಲೆ: ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೬,

೧೩೪. ಬಸವರಾಜ್ : ಕರ್ನಾಟಕ ಸಂಯೋಜನೆ ಚಿತ್ರಕಲೆ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), ಎಂ.ಫಿಲ್ ಪ್ರಬಂಧ, ಕವಿವಿ.ಹಂಪಿ, ೨೦೧೬.

೧೩೫. ಡಾ.ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಅಪ್ರಕಟಿತ ಗ್ರಂಥ, ಕವಿವಿ.ಹಂಪಿ,೨೦೦೧

136. Ram Raj : Essay on the architecture of the Hindu's London.

137. J.Griffiths Paintings of Ajanta, Secretary of State for India.

138. E.B.Havell : Indian Sculpture and Painting Murray.

139. A.K.Coomaraswamy : Indian Drawings (Volumes) Oxford University Press

140. A.K.Coomaraswamy : Selected Examples of Indian Art, Oxford University Press.

141. Vincent A. Smith : A History of Fine Art in India and Ceylon, Clarendon Press.

142. Madhusudan and Madhav Prasad Sharma (Ed.) : Vishnudharmottara Mahapurana, Venkateshwara Press, Bombay 1910.

143. A.K.Coomaraswamy : Arts and Crafts of India and Ceylon, Foulis 1913.

144. Lady Hamingham : Ajant Fresco, Oxford University Press. 1915

145. Persey Brown : Indian Painting. Y.M.C.A. Publishing house, S Russell Street, Calcutta, 1917

146. E.B.Havell : Hand Book of Indian Art, Murry

147. L.Binyon : The Court Painters of the Grand Moghuls, Oxford.

148. Stella Karnisch : 'The Visnudharmottaram' Part III, Calcutta.

149. A.K.Coomaraswamy : 'Citralaksana', Sir Asutosh Memorial Val, Patna

150. N.C.Mehta : 'Studies in Indian Painting', Bombay.

151. O.C.Gangoly : 'Rajput Painting', Calcutta

152. R.Shama Shastri : Abhilashitrataha Cintamani, Vol. I Mysore Sanskrit Series, Mysore.

153. A.K.Coomaraswamy : History of Indian and Indonesian Art, London.

154. Sir J.Marshall, M.B.Garde, J.Vogel, E.B. Havell and J.H.Cousins : 'The Bagh Caves in the Gwalior State' London.

155. G.Yazdani : Ajanta (4 Vols) Oxford.

156. A.K.Coomaraswamy : The Vishnudharmottara, Chapter 4j, JAOS, Vol. 52

157. K.P.Jayaswal : 'A Hindu Text on Painting', JBORS, Vol IX, Patna

158. V.Raghavan : 'Some Sanskrit Text on Painting', JHQ, Vol. IX, Haraprasad Memorial Volume, Calcutta

159. A.K.Coomaraswamy : 'The Technique and Theory of Indian Painting, Technical Studies, Vol. III, No. 2, Fogg Art Museum, U.S.A.

160. Stella Kramisch : 'Survery of Painting in the Deccan', London

161. J.Karl, Khandalavala : Indian Sculpture and Painting, Bombay

162. R.V.Poduval and J.H.Cousins : Arts and Crafts of Travancore, London.

163. G.Yazdani : The Early History of the Deccan, Fine Arts, Oxford.

164. Priyabala Shah (Edt) : 'The Vishnuvardharmottaram Purana', Vol I (text) and Vol. II (Trans), Gaekwada's oriental Series, Baroda.

165. Madanjeet Singh : 'The Cave Paintings of Ajanta', London

166. Amancherla Gopal Rao : Lepakshi, Delhi.

167. K.R.Srinivasan : 'Temples of South India', Delhi.

168. Ashok K. Bhattacharya (Ed.) : Srikumara Chitralaksana, Calcutta.

169. B.N.Goswamy : A.J.Dahmen Dallapiccola : An Early Document of Indian Art, Delhi.

170. R.Nath : 'History of Decorative Art in Mughal Architecture', Delhi.

171. A.K.Bhattacharya : Technique of Indian Painting, Calcutta

172. Jayanth Chakravarthi : 'Techniques in Indian Mural Paintings', K.P.Bagachi & Company, Calcutta

173. Jaya Appaswamy : 'Tanjavur Paintings of Maratha Period', New Delhi.

174. H.Heras : 'South India Under the Vijayanagar Empire', Vol. II.

175. Balasaheb Pant : 'Ajanta', Bombay

176. Mandu : A.S.I., Delhi.

177. Mark Zebroweski : 'Deccan Painting', London.

178. J.C.Nagapal : 'Mural Paintings in India', Gain publication, Delhi.

179. Edith Tomor : 'A History of Fine Arts in India and West', Orient Longman Limited, Madras.

180. C.Shivaramamurti : South Indian Paintings, National Museum, Delhi.

181. C.Shivaramamurti : Indian Painting, National Book Trust, India, New Delhi.

182. Watts Brown : 'Art and Craft of India', Cosmo Publication.

183. J.C.Harle : 'The Art and Architecture of Indian Subcontinentn', Penguin Group.

184. Roy C.Craven : 'Indian Art'. World of Art Series.

185. Modern Review : December 1913, The Classic Art of Ajanta, Samarendranath Gupta

186. Modern Review : December, 1918, Vol XXIV, Paintings in Ancient India, Gopinath Rao.

187. Triveni : JV.Madras, 1931, Paintings from Tiruvanjikulam, K.V.Ramachandarn

188. Triveni : V.Madras, 1932, Fresco Paintings in Sivatatvaratnakara, C.Sivaramamurthi.

189. Triveni : VI. Madras, 1932, Some Frescons of the Cholas, C.Sivaramamurthi.

190. Toural of Orient Research : VI, Madras, 1933,

191. Paintings and Allied Arts as Revealed in Bana's Works, C.Sivaramamurthi.

192. Journal of Orient Research : VI. Madras, 1933, Sri Harsha's Observations of painting with Special Reference to Naishadhiya Charita, C.Sivaramamurthi

193. Journal of Oriental Research : VII, Madras, 1933, Kalidas and Painting, C.Sivaramamurthi.

194. J.I.S.O.A. : 1934, Discovery of Cholapaintings in the Brihadisvara Temple, Tanjore, S.K.Govindaswamy.

195. Journal of Oriental Research : Madras, 1934, The Royal Artist of Mahdendravarman, T.N.Ramachandran.

196. Triveni : VII, 1934, Chitrasalas, Ancient Indian Art Galleries, C.Sivaramamurthi.

ii. Journal of Oriental Research : VII, Madras, 1934, Artist's Jatting from the Nalachampu of Trivikrama, C.Sivaramamurthi.

iii. Journal of Oriental Research : VIII, Madras, 1934, The Artist in Ancient India, C.Sivaramamurthi.

iv. J.I.S.O.A. : Calcutta, 1934, Sanskrit Sayings Based on Paintings, C.Sivaramamurthi.

v. Journal of Oriental Reasearch : Madras, 1934, Conventions in the Art of Painting, C.Sivaramamurthi.

197. Journal of Oriental Research : II, Calcutta, 1935', 'Artists materials', C.Sivaramamurthi.

198. J.I.S.O.A. : Vol III, Calcutta, 1935, Two Chapters on Paintings in the Naradasilpasastra, V.Raghavan.

199. J.I.S.O.A. : Vol IV, Calcutta, 1935, The Marriage Scene of Uma as Depicted on the walls of the Mattancheri Palace, Anujan Achan.

200. J.I.S.O.A. : IV, 1936, Note on the Paintings at Tirumalaipuram, C.Sivaramamurthi.

201. J.I.S.O.A. : IV, 1936, Two Scenes from the Ramayana Paintings on the Walls of the Mattancheri Palace, Anujan Anchan.

202. J.I.S.O.A. : V, 1937, Calcutta, Paintings from lepakshi, C.Sivaramamurthi.

203. J.I.S.O.A. : V, 1937, Calcutta, Note on Paintings and Sculptures in Travancore, R.V.Podval.

204. J.I.S.O.A. : V, 1937, Calcutta, Dakshinachitra, Stella Kramrisch.

205. Journal of Oreiental Research : XII, 1939, Madras, A, Fragment of an Ancient Paintings in Deccan, T.G.Aravamuthan.

206. Artibus Asiac : XV, 1952, Ascona, The Kailsa of Ellora, and the Chronology of Rakshtrakuta Art, H.Goetz.

207. March of India : May 1957, Pages 8, Art in the Service of History, O.C.Gongoly.

208. Lalita Kala : 1959, New Delhi, Early Western Chalukya Paintings from Badami, C.Sivaramamurthi.

209. Lalita Kala : IX, New Delhi, 1961, Sittannavasal Paintings, T.N.Ramachandran.

210. Times of India Annual : 1971, page 66, Indian influence in the art of Tun-Huang, Anil-De-Silva.

211. Nuan-Kalai : July-Dec. 1983, The Artist and his Patron through the ages, Leela Ganapati.

212. Vijayanagar Sexcentenary Commemoration Vol : Dharwad, 1936, Vijayanagara Paintings from Lepakshi,C.Sivaramamurthi.

213. Dr.S.Krishnaswamy Aiyanger Commermoration Volume : Madras, 1936, Art Tribits from Ratnakara's Haravijaya, C.Sivaramamurthi.

214. A.S.I. Annual Report : 1920-21, Coloured Picture Preserved in the Siva Temple at Mukhalingam, Srikakulam ; Sri, John Marshall.

215. A.S.I. Annual Report : 1927-28, Preservation of Frescos in Pundarik-Ji's House.

216. Cave Temples of the Pallavas : A.S.I. Monograph 1964, K.R.Srinivasan.

217. Ajanta Murals : A.S.I. Monograph, 1967, A Ghosh (Ed.)

218. An Architectural Survey of Temples of Kerala : A.S.I. Monograph, 1978, H.Sarkar.

219. Cave Temples of the Deccan : A.S.I. Monograph, 1981, K.V.Sundara Rajan.

220. i) Report on the Buddhist Cave Temples and their inscriptions : J.Burgess, A.S.I.Imperial Series, (1883, reprint 1994) New Delhi.

ii) Report on the Ellora Cave Temples and the Brahmanical and Jain caves in Western India, J.Burgess, A.S.I. Imperial Series (1883 reprint 1994)

221. The Chalukyan Architecture : Including Examples of the Bellari District, Alexander Rea, A.S.I. Imperial Series (1896 reprint 1995)

222. Bijapur its Architectural Remains with an Historical out line of the Adil Shahi Dynasty, Henry Cousens, A.S.I. Imperial Series (1916 reprint 1996).

223. Wilks : History of Mysore, 1810, Edited with Notes by Murry Hammnic 1932, Vol. II, Page, 160

224. John Wilson : Ancient Remains of Western India, 1851

225. Francis Buchanam : A Journey from Madras through countries of Mysore, Canara and Malbar, Vol. I. (IInd Ed.) Madras, 1870, Page 50-52

226. Lewin B. Bowring : 'Mysore Historical and Despective Eastern Experience'

227. D.K.Bharadvaj (Ed) : 'Paintings' Karnataka Hand Book, Mysore.)

228. Constence, E.Persons 'Serigapatanm' Madras)

229. M.H.Krishna : A Guide to Shravana Belagola, Mysore)

೨೩೦. ಪಿ.ಆರ್.ತಿಪ್ಪೇಸ್ವಾಮಿ : ಬೆಳೆದು ಬಂದ ಭಾರತದ ಚಿತ್ರಕಲೆ' ಕಲಾಕ್ಷೇತ್ರ, ಮೈಸೂರು ೧೯೯೨.

೨೩೧. ಡಾ.ಎಚ್.ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ'. ಕೃಷ್ಣಮೂರ್ತಿಪುರಂ, ಮೈಸೂರು.

೨೩೨. ಡಾ.ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೩೩. ಆ.ನ.ಕೃಷ್ಣರಾಯ : ಚಿತ್ರಕಲೆ : ಎಚ್.ವೆಂಕಟರಾಮಯ್ಯ ಆ್ಯಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.

೨೩೪. ಎಸ್.ಎಂ.ಶಿರಹಟ್ಟಿ : ಚಿತ್ರಕಲಾ ಕೈದೀಪ, ಷಿಹಾಮಿ ಪಬ್ಲಿಕೇಶನ್ ಗದಗ.

೨೩೫. ಎಸ್.ಶ್ರೀಕಂಠಶಾಸ್ತ್ರಿ : ಭಾರತೀಯ ಸಂಸ್ಕೃತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

236. M.S.Nagaraja Rao : 'The Chakulya of Badami' Bangalore)

237. M.S.Nagaraj Rao : 'Kiratarjuneeyan in Indian Art', Delhi

೨೩೮. ಬಿ.ಪಿ.ಬಾಯರಿ : ಭಾರತೀಯ ಚಿತ್ರಕಲೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ

239. S.R.Rao B.V.K.Shastry : 'Traditional Painting of Karnataka', C.K.P.Bangalore

೨೪೦. ಎಸ್.ಕೆ.ರಾಮಚಂದ್ರರಾವ್ : ಕರ್ನಾಟಕದ ಕಲೆಗಳು (ಸಂಪುಟ ೧) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೦೬. ೨೩೯. ೨೪೧. ಅದೇ ೧೦೭.

242. R.N.Saletore : 'Vijayanagara Art', Delhi

೨೪೩. ಡಾ.ಪಿ.ವಿ.ನಾರಾಯಣ : ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ ವೀರಶೈವ ಅಧ್ಯಯನ ಸಂಸ್ಥೆ : ಶ್ರೀ ತೋಂಟದಾರ್ಯಮಠ, ಗದಗ.

೨೪೪. ಎಸ್.ಕೆ.ರಾಮಚಂದ್ರರಾವ್ : ಸಂಪ್ರದಾಯ ಶಿಲ್ಪಕಲೆ ಮತ್ತು ಚಿತ್ರಕಲೆ : ಶಿಲ್ಪಕಲಾ ಪ್ರತಿಷ್ಠಾನ, ಬೆಂಗಳೂರು

೨೪೫. ಬಿ.ವಿ.ಕೆ.ಶಾಸ್ತ್ರಿ : 'ಕರ್ನಾಟಕದ ಭಿತ್ತಿಚಿತ್ರಗಳು' : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

246. K.R.Basavaraj : 'Fine Arts, History and Culture of Karnataka', Dharwad

247. C.Shivamurthi : 'Vijayanagara Paintings', Delhi

೨೪೮. ವಿ.ಸೀತಾರಾಮಯ್ಯ : ಸಾಹಿತ್ಯ ಮತ್ತು ಚಿತ್ರಕಲೆ, ರಾಘವ ಪ್ರಕಾಶನ, ಬೆಂಗಳೂರು

೨೪೯. ಸಿಂದಗಿ ರಾಜಶೇಖರ : 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ' ಸುಜಾತಾ ಪಬ್ಲಿಕೇಶನ್ ಧಾರವಾಡ

೨೫೦. ಎಂ.ಎಚ್.ಕೃಷ್ಣಯ್ಯ : 'ಶೃಂಗಾರ ಲಹರಿ', ಸಿ.ಎಂ.ಎನ್.ಪ್ರಕಾಶನ, ಬೆಂಗಳೂರು.

೨೫೧. ಎನ್.ಮರಿಶಾಮಾಚಾರ್ : ಸಾಹಿತ್ಯದಲ್ಲಿ ಚಿತ್ರಕಲೆ'. ಸಿ.ಎಂ.ಎನ್.ಪ್ರಕಾಶನ, ಬೆಂಗಳೂರು.

೨೫೨. ಪಿ.ಆರ್.ತಿಪ್ಪೇಸ್ವಾಮಿ (ಸಂ.) : 'ಕಲಾಕೋಶ'. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

253. G.Yajadani : Bidar, Its History and Monuments, Motilal Banarsidas Publishers Private Limited, Delhi

೨೫೪. ಬಸವರಾಜ ಉಪ್ಪಿನ : ಬಾನಯ್ಯ ಗರುಡಾದ್ರಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೫೫. ಬಿ.ಸಿ.ಪಾಟೀಲ್ : ಕೊಪ್ಪಳ : ಸಾಂಸ್ಕೃತಿಕ ಪರಂಪರೆ ಹರಿಹರ ಪ್ರಕಾಶನ, ಜವಾಹರ ರಸ್ತೆ, ಕೊಪ್ಪಳ

೨೫೬. ಡಾ.ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ' ಮೈಸೂರು ವಿಶ್ವವಿದ್ಯಾಲಯ

೨೫೭. ಡಾ.ಶಿವರಾಮ ಕಾರಂತ : ಕಲಾ ಪ್ರಪಂಚ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೫೮. ಡಾ.ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೫೯. ಡಾ.ಶೀಲಾಕಾಂತ ಪತ್ತಾರ : 'ಬಾದಾಮಿ' : ಒಂದು ಸಾಂಸ್ಕೃತಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೨೬೦. ಮಲ್ಲಿಕಾರ್ಜುನ ಹಿರೇಮಠ (ಸಂ.) : 'ಬಾಗಿಲು'. ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ.

೨೬೧. ಡಾ.ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಅಪ್ರಕಟಿತ ಗ್ರಂಥ, ಕವಿವಿ.ಹಂಪಿ,೨೦೦೧

262. Archaeological Report of Western India :January to May (1974) Page 20 James Bugers

263. R Narasimhachar (Ed.) : Epigraphia Carnatika. Vol II. (Inscription of Shravanabelagola) 1923 Page-4

264. C.Hayavadana Rao : Paintgs Mysore gazetteer, Vol II Part I (Bangalore 1930) Page 333-334

೨೬೫. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : (ಎಪ್ರಿಲ್ ೧೯೩೦) 'ಕನ್ನಡ ಸಾಹಿತ್ಯದಲ್ಲಿ ಚಿತ್ರಕಲೆ' ರಸಯೋಗಿ ಗೆಳೆಯ ಗುಂಪು ೨೬೨.

೨೬೬. Mysore Archaeological Report : (1935) Page 20

267. i) Vijayanagara Sexcentenary Commemoration Volume, Dharwad (1936) Vijayanagara Paintings from Lepakshi, C.Shivamurthi

ii) Ibid : S.Paramasivan

268. Mysore Archaeological Report (1936) Page 17

269. Mysore Archaeological Report : (1937), Page 38

270. Mysore Archaeological Report : (1938), Page 71

೨೭೧. ದ.ರಾ.ಬೇಂದ್ರೆ: ಸಾಹಿತ್ಯ ಸಂಶೋಧನ, ಚರಘಟ್ಟಿ ಯಾರು? ಪುಟ. ೧೩೪-೧೩೭,

೨೭೨. ಎಸ್.ರಾಮಚಂದ್ರರಾವ್: (ಬಿ.ಎಂ.ಶ್ರೀ ಸಂಭಾವನಾ ಗ್ರಂಥ ೧೯೪೧) ಪುಟ,೪೯೦-೯೫

೨೭೩. ಬಿ.ವಿ.ಕೆ.ಶಾಸ್ತ್ರಿ: ಪ್ರಬುದ್ಧ ಕರ್ನಾಟಕ (೧೯೪೨) ಪುಟ ೧೨೧-೩೧ ಮೈಸೂರು ಪ್ರಾಚೀನ ಚಿತ್ರಕಲೆ

೨೭೪. ವಿ.ಎಂ.ಇನಾಮದಾರ್: ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, (ಡಿಸೆಂಬರ್ ೧೯೪೨) 'ಕಾಳಿದಾಸ ಮತ್ತು ಚಿತ್ರಕಲೆ'

275. Mysore Archaeological Report : (1943), Page 39

276. Mysore Archaeological Report : (1945), Page 35

277. Q.J.M.S. II (1949) Page 228-37, Vijayanagara Paintings at the Virupaksha Temple, Hampi.

೨೭೮. ಎಂ.ವಿ.ಸೀತಾರಾಮಯ್ಯ: ಜೀವನ ಪತ್ರಿಕೆ (ಸಂಚಿಕೆ ೪, ಸಂಪುಟ ೨, ೧೯೫೦) ಭಾರತೀಯ ಚಿತ್ರಕಲೆ ಅದರ ಪ್ರಾಚೀನತೆ ಮತ್ತು ಬೆಳವಣಿಗೆ, ಪುಟ ೧೬೦,

೨೭೯. Bijapur Municipality Century Saviner : (1954) Page 55-64, Deccan School-Bijapur, Motichandra

280. Lalita Kala, (April 1959) Page 49-58, Western Chalukya Paintings at Badami, C.Shivamurthi

೨೮೧.ಪಿ.ಆರ್.ತಿಪ್ಪೇಸ್ವಾಮಿ: ಚಿತ್ರಕಲಾ ಪ್ರಪಂಚ ,ಪ್ರಾಚೀನ ಚಿತ್ರರಚನೆಯಲ್ಲಿ ಭಿತ್ತಿಚಿತ್ರ ಸಿದ್ಧತೆ, ಪು೨೫೫-೭೩,

೨೮೨.ಶಿ.ತಾ.ಶರ್ಮ: ದೀಪಾವಳಿ ಸಂಚಿಕೆ, ಪ್ರಜಾಮತ (೧೯೬೬) ಸಿಬಿ-ಒಂದು ಕಲಾಕ್ಷೇತ್ರ, ಪು೩೫

283. Bijapur District Gazetter (1969) Page 30, 40 A.Sundra

284. Raichur District Gazetter (1970) Page 30, 37 A.Sundra

285. Bellary District Gazetter (1972) Page 38, 49, A.Sundra

೨೮೬. ಬಿ.ವಿ.ಕೆ.ಶಾಸ್ತ್ರಿ: ಸುಧಾ ಯುಗಾದಿ ವಿಶೇಷಾಂಕ (೧೯೭೨) ಪುಟ ೭೩-೭೭,

೨೮೭. ಬಿ.ವಿ.ಕೆ.ಶಾಸ್ತ್ರಿ: ಸುಧಾ (ಎಪ್ರಿಲ್ ೨೯, ೧೯೭೩) ಪುಟ ೯-೧೭, ಮಾನಸೋಲ್ಲಾಸದಲ್ಲಿ ಚಿತ್ರಕಲೆ,

೨೮೮. ನಿರಂಜನ (ಸಂ.): ಜ್ಞಾನಗಂಗೋತ್ರಿ ಸಂಪುಟ ೫ (೧೯೭೩) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

289. R.C.Agarwal, Archaeological Studies, Vol. III. Mysore 1978) Page 107-30, A Notes on Adishashi Paintings.

೨೯೦. ಪಿ.ಆರ್.ತಿಪ್ಪೇಸ್ವಾಮಿ: ಕಲಾವಿಕಾಸ, ಸಂಪುಟ ೬ (ಡಿಸೆಂಬರ್ ೧೯೭೮) ಪುಟ ೫, ೯ ಭಿತ್ತಿಚಿತ್ರ ನಮ್ಮ ಪ್ರಾಚೀನರ ಅಪೂರ್ವಸಿದ್ಧಿ,

೨೯೧. ಕನ್ನಡ ವಿಷಯ ವಿಶ್ವಕೋಶ : (ಮೈಸೂರು ೧೯೭೯) ಪುಟ ೬೦೧-೬೦೯

೨೯೨. ಕೆ.ಜಿ.ಕುಂದಣಗಾರ: ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಎಪ್ರಿಲ್ ೧೯೮೦, ಪುಟ ೧೧೯

೨೯೩. ಪಿ.ಆರ್.ತಿಪ್ಪೇಸ್ವಾಮಿ: ಸವಿ ಸಂಚಯ, ಸದಾಶಿವ ಒಡೆಯರ್, ಸ್ಮರಣಗ್ರಂಥ ೧೯೮೦, ಪುಟ ೨೦೮-೧೨, ಭಾರತೀಯ ಚಿತ್ರಕಲೆಯ ಪರಂಪರೆ,

೨೯೪. ಡಾ.ಅ.ಸುಂದರ, ಚಾಳುಕ್ಯಶ್ರೀ (ಬಾದಾಮಿ ೧೯೮೨), ಪುಟ ೧೧೮, ೨೫. ವಿಶಿಷ್ಟ ವರ್ಣಚಿತ್ರಕಲೆಯ ಆಗರ, ಬದಾಮಿ,

295. Suryanath U Kamat (Ed.) Karnataka State Gazetteer (1982) Page 190-215

೨೯೬. ಪಿ.ಆರ್.ತಿಪ್ಪೇಸ್ವಾಮಿ.ಅವಲೋಕನ (ವಿಶ್ವ ಕನ್ನಡ ಸಮ್ಮೇಳನ, ಮೈಸೂರು. ೧೯೮೬) ಪುಟ ೩೨೮–೩೨, ಕರ್ನಾಟಕದ ಚಿತ್ರಕಲೆ.

೨೯೭. ಎಂ.ಆರ್.ಶ್ಯಾನಭಾಗ, 'ಸಂಯುಕ್ತ ಕರ್ನಾಟಕ', ಸಾಪ್ತಾಹಿಕ ಸೌರಭ (ಡಿಸೆಂಬರ ೨೮, ೧೯೮೬) ಪುಟ ೧–೩. ಕರಾವಳಿ ದೇಗುಲಗಳಲ್ಲಿ ಭಿತ್ತಿ ಚಿತ್ರಗಳು.

೨೯೮. ಎಸ್.ಸಿ.ಪಾಟೀಲ. ಚಿತ್ರಕಲೆಯ ಆರು ಅಂಗಲಕ್ಷಣಗಳು, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಡಿಸೆಂಬರ್ ೧೯೮೬, ಪುಟ ೧೩೦–೩೨,

೨೯೯. ಬಿ.ವಿ.ಕೆ.ಶಾಸ್ತ್ರಿ, ವಿಶ್ವ ಕನ್ನಡ ಸಂಪುಟ ೩, ಕನ್ನಡ ಸಾಹಿತ್ಯದಲ್ಲಿ ದೃಶ್ಯಕಲೆ, ೧೯೮೬

೩೦೦. ಲಕ್ಷ್ಮಣ ತೆಲಗಾವಿ (ಸಂ.) : ಹರತಿಸಿರಿ (ಹೆಚ್.ಪಿ.ವೀರನಾಯಕ 'ಹರತಿ' ನೆನಪಿನ ಸಂಪುಟ. ಹರ್ತಿಕೋಟೆ. ೧೯೮೭

i.ಪ್ರಾಗೈತಿಹಾಸಿಕ ಗವಿವರ್ಣ ಮತ್ತು ಬಯಲುಬಂಡೆ ಚಿತ್ರಗಳು. ಅ.ಸುಂದರ

ii. ಅದೇ– ಚಿತ್ರದುರ್ಗದ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು. ಎಚ್.ಶ್ರೀಶೈಲ ಆರಾಧ್ಯ

iii. ಅದೇ– ಶಿಬಿಯ ಭಿತ್ತಿಚಿತ್ರಗಳು. ಡಾ.ಕೃಷ್ಣಾನಂದ ಕಾಮತ್

301. Saviner from The Sibi Temple 1988 Page 83, 88, The Sibimurals, R.Ramakrishna

೩೦೨.ಡಾ.ಜ್ಯೋತ್ಸ್ನಾ ಕಾಮತ್: ಇತಿಹಾಸ ದರ್ಶನ, ಸಂಪುಟ ೬ (೧೯೯೧), ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು ಭಿತ್ತಿ ಚಿತ್ರಗಳಲ್ಲಿ ಐತಿಹಾಸಿಕ ವ್ಯಕ್ತಿ

೩೦೩. ಡಾ.ಜ್ಯೋತ್ಸ್ನಾ ಕಾಮತ್: ಇತಿಹಾಸದರ್ಶನ ಸಂಪುಟ ೭ (೧೯೯೨) ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ವಾಸ್ತುಶಿಲ್ಪ ಭಿತ್ತಿಚಿತ್ರಗಳಲ್ಲಿ ತೇರು

೩೦೪. ತಿರುಳ್ಗನ್ನಡ (ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕೊಪ್ಪಳ ೧೯೯೩) ಪುಟ. ೫೨, ೫೭

೩೦೫. ಡಾ.ಎಸ್.ಸಿ.ಪಾಟೀಲ್(ಸಂ.) : 'ಚಿತ್ರಾಕ್ಷಿ' (ವಜ್ರಮಹೋತ್ಸವ ಸ್ಮರಣ ಸಂಚಿಕೆ. ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ,೧೯೯೫

306. Dr.D.V.Devaraj and C.S.Patil (Ed.) (1996) : Art and Architecture in Karnataka (Paper presented at the National Seminar on Archeology (1985) Directorate of Acheology and Museums, Mysore.)

೩೦೭. ಜಯತೀರ್ಥ ಕಾಗಲಕರ: ಸಂಯುಕ್ತ ಕರ್ನಾಟಕ (ಮೇ. ೨೮, ೧೯೯೬) ಪುಟ. ೮. ನಶಿಸುತ್ತಿರುವ ಗರುಡಾದ್ರಿ ಪರಂಪರೆಯ ಚಿತ್ರಕಲೆ.

೩೦೮. ಕರ್ನಾಟಕ ಚರಿತ್ರೆ ಮಾಲೆ ಸಂಪುಟಗಳು (೧೯೯೭) ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

i. ಪ್ರೊ.ಅ.ಸುಂದರ (ಸಂ.) ಸಂಪುಟ–೧

ii. ಪ್ರೊ. ಬಿ.ಸುರೇಂದ್ರರಾವ್ (ಸಂ.) ಸಂಪುಟ–೨

iii. ಪ್ರೊ.ಕೆ.ಶಿವರಣ್ಣ (ಸಂ.) ಸಂಪುಟ–೩

iv. ಪ್ರೊ.ಬಿ.ಷೇಕ್‌ಅಲಿ (ಸಂ.) ಸಂಪುಟ–೪

v. ಪ್ರೊ.ಬಿ.ಷೇಕ್ ಅಲಿ (ಸಂ.) ಸಂಪುಟ–೫

vi. ಡಾ॥ಸೆಬಾಸ್ಟಿಯನ್ ಜೋಸೆಫ್ (ಸಂ.) ಸಂಪುಟ–೬

vii. ಪ್ರೊ.ಎಸ್.ಚಂದ್ರಶೇಖರ್ (ಸಂ.) ಸಂಪುಟ–೭

೩೦೯. ಇತಿಹಾಸ ದರ್ಶನ ೧೩ ಕರ್ನಾಟಕ ಇತಿಹಾಸ ಅಕಾಡೆಮಿ(ರಿ) ಬೆಂಗಳೂರು.೧೯೯೮

೩೧೦. ಎಸ್.ವೆಂಕಟೇಶ್: ಕರ್ಮವೀರ. ಪುಟ. ೩೮–೮೧. ಅವಸಾನ ಅಂಚಿನಲ್ಲಿ ಸಿರಾದ ಭಿತ್ತಿ ಚಿತ್ರಗಳು.೧೯೯೮

೩೧೧. ಕೃಷ್ಣಾನಂದ ಕಾಮತ್: ಪ್ರಜಾವಾಣಿ. ದೀಪಾವಳಿ ವಿಶೇಷಾಂಕ ಲೇಪಾಕ್ಷಿಯ ಭಿತ್ತಿಚಿತ್ರಗಳು.೧೯೯೮ ಪುಟ ೬೮–೭೫.

೩೧೨. ಮ.ಮುರಳೀಕೃಷ್ಣ: ಸುಧಾ ಪುಟ ೪೨, ೪೪ 'ತೋಳಹರಾಳಿದ ಸುಂದರ ಸುರಾಲು', ಜುಲೈ ೧೩, ೧೯೯೯

೩೧೩. ಆ.ಲ.ನರಸಿಂಹನ್: ಆಲೇಖ ಸಂಯೋಜಿತ, ಬೆಂಗಳೂರು, ೧೯೯೯

೩೧೪. ಎಸ್.ವೆಂಕಟೇಶ: ಕರ್ಮವೀರ ಪುಟ. ೪೨–೪೩, ಕಣ್ಣು ಹಾಯಿಸಬಾರದೇ ಈ ಭಿತ್ತಿಚಿತ್ರಗಳತ್ತ?, ೧೯೯೯

೩೧೫. ಎನ್.ಜಗನ್ನಾಥ ಪ್ರಕಾಶ: ಕರ್ಮವೀರ, ಶ್ರವಣಬೆಳಗೊಳದ ಭಿತ್ತಿಚಿತ್ರಗಳು. ೧೯೯೯, ಪುಟ ೩೮–೩೯

೩೧೬. ಎಸ್.ವೆಂಕಟೇಶ್: ನೂತನ ಕಣ್ಮರೆಯಾಗುತ್ತಿರುವ ಆನೆಗೊಂದಿಯ ಭಿತ್ತಿಚಿತ್ರಗಳು.೨೦೦೦, ಪುಟ ೩೫, ೩೬

೩೧೭. ರಾಜೇಶ ಶಹಬಾದಿ: ವಿಜಯ ಕರ್ನಾಟಕ, ವಿನಾಶದ ಅಂಚಿನಲ್ಲಿ ವಿಶ್ವವಿಖ್ಯಾತ ಗರುಡಾದ್ರಿ ಕಲೆ,೨೦೦೦ ಪುಟ.೮

೩೧೮. ಡಾ.ಎಸ್.ಸಿ.ಪಾಟೀಲ ಅವರ ಅಪ್ರಕಟಿತ ಲೇಖನ. ಇದನ್ನು ಇತಿಹಾಸ ಅಕಾಡೆಮಿ ವಾರ್ಷಿಕ ಸಮಾವೇಶ ಹಂಪಿಯಲ್ಲಿ ಮಂಡಿಸಲಾಗಿದೆ.

೩೧೯. ಡಾ.ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳ ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ,೧೯೮೩

೩೨೦. ಡಾ.ಎಸ್.ಸಿ.ಪಾಟೀಲ್: ಕರ್ನಾಟಕದ ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ,೧೯೯೧

೩೨೧. ಡಾ.ಅ.ಲ.ನರಸಿಂಹನ್: 'ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು'.ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೧೯೯೮

೩೨೨. ಡಾಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೨೦೦೨

೩೨೩. ಡಾ.ಬಿ.ಕೆ.ಹಿರೇಮಠ: ಸೃಷ್ಟಿ, ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ಬಾಗಲಕೋಟೆ, ೨೦೦೩

೩೨೪. ಡಾ.ಮಲ್ಲಿಕಾರ್ಜುನ ಬಾಗೋಡಿ: ಚಿತ್ರಲೇಖ, ಸರಚಂದ್ರ ಪ್ರಕಾಶನ, ೨೦೦೯

೩೨೫. ಎಂ.ಎಚ್.ಕೃಷ್ಣಯ್ಯ: ಕಲಾ ಸಂಸ್ಕೃತಿ,ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೨

೩೨೬. ಪ್ರೊ.ಎಸ್.ಸಿ.ಪಾಟೀಲ: ಕರ್ನಾಟಕದ ಭಿತ್ತಿಚಿತ್ರಕಲೆ,ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೬

೩೨೭.ಡಾ.ಎಸ್.ಸಿ.ಪಾಟೀಲ: ದೃಶ್ಯಕಲಾ ಸಂಶೋಧನಾ ನೆಲೆಗಳು, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೭

ಅಧ್ಯಾಯ : ೨

ದಕ್ಷಿಣ ಕರ್ನಾಟಕ ಭಿತ್ತಿ ಚಿತ್ರಗಳ ನೆಲೆ-ಹಿನ್ನೆಲೆ

ಅಧ್ಯಾಯ – ಎರಡು

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ನೆಲೆ–ಹಿನ್ನಲೆ

ಭಾರತದಲ್ಲಿ ಚಿತ್ರಕಲೆ ಪರಂಪರೆಗೆ ಶ್ರೀಮಂತವಾದ ಇತಿಹಾಸವಿದೆ. ಭಾರತವನ್ನು ಆಳಿದ ವಿವಿಧ ರಾಜ ಮನೆತನಗಳು ಕೇವಲ ಚಿತ್ರಕಲೆಯನ್ನಷ್ಟೆ ಅಲ್ಲದೆ ಕಲೆಗೆ ತಮ್ಮದೇ ಆದ ಅಪಾರ ಕೊಡುಗೆಯನ್ನು ನೀಡಿದ್ದಾರೆ. ದಕ್ಷಿಣ ಭಾರತದ ರಾಜಮನೆತನಗಳ ಕೊಡುಗೆ ಇದರಲ್ಲಿ ವಿಶೇಷವಾದ ಪಾತ್ರವಹಿಸಿದೆ. ವಿಜಯನಗರದ ಅರಸರು ನೀಡಿದ ಕೊಡುಗೆ ಕರ್ನಾಟಕವನ್ನು ಕಲಾ ಕ್ಷೇತ್ರದಲ್ಲಿ ಉತ್ತುಂಗ ಸ್ಥಾನಕ್ಕೇರುವಂತೆ ಮಾಡಿದೆ. ಕಲೆ ತಾನಾಗಿಯೇ ಹುಟ್ಟುವಂತಹದ್ದು. ಇದಕ್ಕೆ ಮಾನವನ ಕೊಡುಗೆಗಿಂತಲು ಸಾಮಾಜಿಕ ಸಂದರ್ಭಗಳು ಹೆಚ್ಚು ಅಪ್ಯಾಯಮಾನವಾಗಿವೆ. ೭ನೆಯ ಶತಮಾನದಲ್ಲಿ ನಿರ್ಮಿಸಲಾದ ವಿಷ್ಣುಧರ್ಮೋತ್ತರ ಕಲೆಯಿಂದ ನಮಗೆ ತಿಳಿಯುವುದೇನೆಂದರೆ ಕಲೆಯ ಆದಿ ಗುರುಗಳಾದ ನಾರಾಯಣರು ನಮಗೆಲ್ಲರಿಗೂ ಚಿತ್ರಕಲೆಯನ್ನು ಕಲಿಸಿದ ಗುರುವಾಗಿದ್ದಾರೆ.

ಭಾರತದಲ್ಲಿ ಗವಿ ಚಿತ್ರಕಲೆಯು ಮೂಲತಃ ಮಧ್ಯಪ್ರದೇಶದ ಪ್ರಾಚೀನ ಗವಿಗಳಲ್ಲಿ ಉದಯಿಸಿತು. ರಾಯಗಡ ಜಿಲ್ಲೆಯ ಸಿಂಘಾನ್ ಪುರ, ಭೋಪಾಲ ಬಿಂಬಟ್ಕ ಮತ್ತು ದಕ್ಷಿಣ ಭಾಗದ ರಾಯಚೂರು, ಬಳ್ಳಾರಿ, ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಾಚೀನ ಚಿತ್ರಕಲೆಗಳ ಕುರುಹುಗಳು ದೊರೆತಿವೆ. ಭಾರತೀಯ ಚಿತ್ರಕಲೆ ಪ್ರಾಗಿತಿಹಾಸಿಕತೆಗಳ ಕಾಲಕ್ಕೆ ಪ್ರಾರಂಭವಾಯಿತು. ಭಾರತದ ಅತ್ಯಂತ ಪ್ರಾಚೀನ ಚಿತ್ರ ಭಂಡಾರಗಳಾದ ಅಜಂತ, ಬಾಗ್ ಹಾಗೂ ಬಾದಾಮಿ ಮುಂತಾದ ಗುಹೆಗಳಿಗೂ ಮೊದಲು ರಚನೆಗೊಂಡ ಈ ಕೃತಿಗಳು ಆದಿಮಾನವರ ಕಾಲಕ್ಕೆ ಸೇರುತ್ತವೆ. ಗುಹೆಗಳೇ ಅವರ ಆಶ್ರಯದ ತಾಣಗಳು. ಸಂತೋಷ, ದುಃಖ, ವಿಭ್ರಮೆ ಮುಂತಾದ ಮಾನಸಿಕ ಉದ್ವೇಗಗಳು ಉಂಟಾದಾಗ ಈ ಜನ ತಮ್ಮ ಭಾವನೆಯನ್ನು ವ್ಯಕ್ತಪಡಿಸುವ ಸುಲವಾಗಿ ಗುಹೆಯ ಗೋಡೆಗಳ ಮೇಲೆ ಗೀಚತೊಡಗಿರಬೇಕು. ಇದೇ ಕ್ರಮೇಣ ಚಿತ್ರ ರಚನೆಗೆ ಮೂಲ

ಪ್ರೇರಣೆಯಾಯಿತು. ಆಹಾರ ಮತ್ತು ಆಶ್ರಯಕ್ಕಾಗಿ ಬೇಟೆಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದ ಆದಿಮಾನವರು, ತಮ್ಮ ಕಸುಬಿನ ಚಟುವಟಿಕೆಗಳನ್ನೇ ಚಿತ್ರಗಳ ವಸ್ತುವಾಗಿಸಿಕೊಂಡರು. ಸುಲಭವಾಗಿ ಲಭ್ಯವಾಗುವಂತಹ ಮಣ್ಣು, ಮರಗಳ ಬಣ್ಣಗಳನ್ನು ಪ್ರಾಣಿಗಳ ಕೊಬ್ಬು ಮೊದಲಾದವುಗಳ ಜೊತೆ ಬಳಸಿದರು. ಹೀಗೆ ಆದಿಮಾನವನ ಚಿತ್ರಕಲೆ ಮೊದಲಾಯಿತು. ಭಾವನೆಗಳನ್ನು ಅರುಹವುದೇ ಮೂಲ ಉದ್ದೇಶವಾಗಿದ್ದ ಈ ಚಿತ್ರಗಳು ಮಕ್ಕಳ ರಚನೆಗಳಂತೆ ಭಾವ ಪ್ರಧಾನವಾಗಿವೆ.

ಆಫ್ರಿಕ, ಯೂರೋಪ್, ಏಷ್ಯ ಖಂಡಗಳಲ್ಲಿ ಆದಿಮಾನವನ ಕುರುಹುಗಳು ದೊರೆಯುತ್ತವೆಯೋ ಅಲ್ಲೆಲ್ಲ ಈ ಬಗೆಯ ಚಿತ್ರಕಲೆ ಕಂಡುಬರುತ್ತದೆ. ಮನಸ್ಸಿನ ಉಲ್ಲಾಸವನ್ನು ಪ್ರಕಟಗೊಳಿಸುವ ಸಲುವಾಗಿ ಬರೆದ ಈ ಚಿತ್ರಗಳಲ್ಲಿ ಸರಳತೆ ಎದ್ದು ಕಾಣುತ್ತದೆ. ಕೆಂಗಾವಿ ಬಣ್ಣಗಳ ರೇಖೆಗಳಿಂದ ಚಪ್ಪಟೆಯಾಗಿ ಚಿತ್ರಿಸಲ್ಪಟ್ಟಿರುವ ಮಾದರಿಗಳೇ ಹೆಚ್ಚು. ಲಲಿತ ರೇಖೆಗಳಿಂದ ಬಂಡೆಗಳ ಮೇಲೆ ಬರೆದು ಅಥವಾ ಗಟ್ಟಿಕಲ್ಲಿನಿಂದ ಬಂಡೆಗಳ ಮೇಲೆ ಗಾಯಮಾಡಿ ಅಂಟಿಸಿದ ರೂಪಗಳೂ ಸಿಗುತ್ತವೆ. ಇವನ್ನು ಗಾಯ ಚಿತ್ರಗಳು (ಬ್ರೂಸಿಂಗ್) ಎಂದು ಕರೆಯುವುದು ವಾಡಿಕೆ. ಇವು ರೇಖಾ ಚಿತ್ರಗಳಿಂತೆಯೂ ನೆರಳು ಚಿತ್ರಗಳಂತೆಯೂ ಮೂಡಿ ಬಂದಿವೆ. ಇಂಥ ಚಿತ್ರ ರಚನೆಗಳು ಹೆಚ್ಚಾಗಿ ಬಂಡೆಗಳ ಮೇಲೆ ಮತ್ತು ಗವಿಗಳ ಗೋಡೆಗಳ ಮೇಲೆ ಕಂಡು ಬರುತ್ತವೆ.

ಉತ್ತರ ಪ್ರದೇಶದ ಮಿರ್ಜಾಪುರ, ಬಂಡಾ ಎಂಬಲ್ಲಿ ಬುಂದೇಲ ಖಂಡದ ಮಹಾದೇವ ಪರ್ವತ, ಸಾಂಚಿ-ಭೂಪಾಲಗಳ ನಡುವಣ ಕೆಲ ಸ್ಥಳಗಳಲ್ಲೂ ಬಾಗಲಖಂಡದ ಕೈಮೂರು ಬೆಟ್ಟಗಳಲ್ಲೂ ವಿಂಧ್ಯಪರ್ವತಗಳ ಗುಹೆಗಳಲ್ಲಿಯೂ ಮಧ್ಯ ಪ್ರದೇಶದ ರಾಮಘಟ್ಟ ಬೆಟ್ಟದ ಯೋಗಿಪುರ (ಜೋಗಿಮಾರ) ಗುಹೆಗಳಲ್ಲಿಯೂ ಇಂತಹ ಚಿತ್ರಗಳು ಕಂಡುಬರುತ್ತವೆ. ಮಧ್ಯಪ್ರದೇಶದ ರಾಯಘಡ ಸಂಸ್ಥಾನದ ಪೂರ್ವಕ್ಕಿರುವ ಸಿಂಗನ್ಪುರವೆಂಬ ಗ್ರಾಮದ ಬಳಿಯ ಬೆಟ್ಟಗಳಲ್ಲಿ ಕೆಲವು ಗುಹೆಗಳಿವೆ. ಅಲ್ಲಿ ಕೆಂಪು ಮತ್ತು ತೆಳು ಹಳದಿ ಬಣ್ಣಗಳಿಂದ ಬರೆದ ರೇಖಾ ಚಿತ್ರಗಳಿವೆ. ಇವು ಸುಮಾರು ೧೦,೦೦೦ ವರ್ಷಗಳಷ್ಟು ಪ್ರಾಚೀನವಾದವು ಎಂಬ ಅಭಿಪ್ರಾಯವಿದೆ. ಇಲ್ಲಿ ಬೇಟೆಯ ದೃಶ್ಯಗಳು. ಜಿಂಕೆ, ಆನೆ, ಮೊಲ ಮೊದಲಾದ ಪ್ರಾಣಿಗಳ ಚಿತ್ರಗಳೂ ಇಲ್ಲಿವೆ. ದೊಡ್ಡ ಕಾಡುಕೋಣವೊಂದನ್ನು ಹಿಡಿಯುತ್ತಿರುವ ದೃಶ್ಯ, ಬೇಟೆಗಾರರು ಪ್ರಾಣಿಯನ್ನು ಸುತ್ತುವರಿದು ನಿಂತಿರುವ ದೃಶ್ಯ, ಕಾಡುಕೋಣವೊಂದು ಕೆಲವರನ್ನು ಕೊಂಬಿನಿಂದ ಎತ್ತಿಹಾಕಿ ತಿವಿಯುತ್ತಿರುವ ದೃಶ್ಯ. ಈಟಿಯಿಂದ ಆ ಕಾಡುಕೋಣವನ್ನು ಗಾಯಗೊಳಿಸುತ್ತಿರುವ ದೃಶ್ಯ ಮುಂತಾದವು ಚಿತ್ರಣಗೊಂಡಿವೆ.

ಮಧ್ಯಪ್ರದೇಶದ ರಾಮಘಡ ಬೆಟ್ಟದ ಯೋಗಿಪುರ ಗುಹೆಗಳಲ್ಲಿರುವ ವರ್ಣಚಿತ್ರಗಳು ಕ್ರಿ.ಪೂ. ೩ನೆಯ ಶತಮಾನದವೆಂದು ತೀರ್ಮಾನಿಸಲಾಗಿದೆ. ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳಿಂದ ಇವು ಬರೆಯಲ್ಪಟ್ಟಿವೆ. ಮನುಷ್ಯಾಕೃತಿ ಮತ್ತು ಅನೇಕ ಪ್ರಾಣಿಗಳ ಚಿತ್ರಗಳು ಇಲ್ಲಿವೆ. ಹಾಗೆಯೇ ಮಧ್ಯಪ್ರದೇಶದ ಹೊಶಂಗಾಬಾದಿನ ಮರಳುಗಲ್ಲಿನ ಬೆಟ್ಟವೊಂದರಲ್ಲಿ ಚಾಚಿದ ಬಂಡೆಗಳ ಆಸರೆಯಲ್ಲಿ

ಆದಿಮಾನವನಿಂದ ಬರೆಯಲಾದ ಚಿತ್ರಗಳು ಕಂಡುಬರುತ್ತವೆ. ಚಿತ್ರಿತವಾದ ಪ್ರಾಣಿಗಳಲ್ಲಿ ಮಡಿಸುಗೊಂಬಿನ ಆನೆ ಮತ್ತು ಬಿಡಿಸುಗೊಂಬಿನ ಗೂಳಿಗಳನ್ನು ನೆರಳು ಚಿತ್ರಗಳಾಗಿ ತೋರಿಸಲಾಗಿದೆ. ಈಟಿ, ಗುರಾಣಿಗಳನ್ನು ಹಿಡಿದ ಆನೆ ಸವಾರರೂ ಕುದುರೆ ಸವಾರರೂ ಇದರಲ್ಲಿದ್ದಾರೆ. ಬೇಟೆಯ ಮಾದರಿಗಳನ್ನೂ ಪಶುಪಾಲನೆಯ ಮಾದರಿಗಳನ್ನೂ ಈ ಚಿತ್ರಗಳಲ್ಲಿ ಕಾಣಬಹುದಾಗಿದೆ. ಇವುಗಳ ಕಾಲ ಕ್ರಿ. ಪೂ. ಸುಮಾರು ೨೦೦೦ ವರ್ಷಗಳೆಂದು ಊಹಿಸಲಾಗಿದೆ. ಕರ್ನಾಟಕ ಬಾದಾಮಿ, ಅಂಕಲಿ ಮಠದಲ್ಲೂ, ಜಮಖಂಡಿಯ ಬಳಿ ಗೊಂಬೆ ಗುಡ್ಡದಲ್ಲೂ, ಬಳ್ಳಾರಿಯ ಕುಪ್ಪಗಲ್ಲಿನಲ್ಲೂ ಈ ತೆರನಾದ ಚಿತ್ರಗಳನ್ನು ಕಾಣಬಹುದು. ತುಂಗಭದ್ರಾ ನದಿ ದಂಡೆಯ ಉತ್ತರದಲ್ಲಿ ಆನೆಗುಂದಿ, ಹಿರೇಬೆನಕಲ್ಲು ಮೊದಲಾದ ಕಡೆಗಳಲ್ಲಿಯ ಗುಡ್ಡಗಳಲ್ಲಿ ಇತಿಹಾಸಪೂರ್ವ ಕಾಲದ ಚಿತ್ರಗಳು ಕಂಡುಬರುತ್ತವೆ. ಇವು ನವಶಿಲಾಯುಗದಲ್ಲಿ ಅಥವಾ ಅನಂತರದ ಕಾಲದಲ್ಲಿ ಬಂದ ಕಲ್ಗೋರಿ ಸಂಸ್ಕೃತಿಯ ಜನ ಬರೆದ ಚಿತ್ರಗಳಾಗಿರಬಹುದೆಂಬ ವಾದವಿದೆ. ಕೈಕೈಹಿಡಿದು ಕುಣಿಯುವ ಜನರ ಸಾಲು, ಎರಳೆ, ಹಿಣಿಲುಳ್ಳಹೋರಿ, ಕುದುರೆಸವಾರ, ನವಿಲು ಮೊದಲಾದ ಹಲವಾರು ಆಕೃತಿಗಳನ್ನು ಇಲ್ಲಿ ಕಾಣಬಹುದಾಗಿದೆ.

ಮಾನವ ಬೇಟೆಯಾಡುತ್ತಿದ್ದಾಗ ಮತ್ತು ಆಹಾರೋತ್ಪಾದನೆ ಮಾಡಲು ಕಲಿತಾಗಿನ ಹಾಗೂ ಲೋಹಗಳ ಉಪಯೋಗ ಕಂಡು ಕೊಂಡ ಕಾಲಗಳಲ್ಲಿ ಸೃಷ್ಟಿಯಾದ ಕಲೆಯ ವಿವಿಧ ಘಟ್ಟಗಳು ಇತಿಹಾಸ ಪೂರ್ವ ಕಲೆಯ ಪುಟಗಳಾಗಿ ಅರಳಿವೆ. ಮಾನವನ ಮೂಲಭೂತ ಅವಶ್ಯಕತೆಗಳಾದ ಊಟ, ವಾಸ-ಬಟ್ಟೆಗಳೊಂದಿಗೆ ಬದುಕುವ ಅನ್ವೇಷಣೆಯೊಂದಿಗೆ, ವಿವಿಧ ಹಂತಗಳ ಹಲವು ಹಿಮಯುಗಗಳ ನಂತರದ, ಹಳೆಯ ಶಿಲಾಯುಗದ ಅಂತ್ಯದ ಕಾಲದಲ್ಲಿ ಹಾಸುಹೊಕ್ಕು ಈ ಕಲೆ ಬೆಳೆದುಬಂದಿದೆ. ಮೀನು ಹಿಡಿಯುವುದರಲ್ಲಿ ನಿರತರಾಗಿದ್ದು, ಪ್ರಾಣಿಗಳ ಬೇಟೆ ಮತ್ತು ಪ್ರಾಣಿಗಳೊಂದಿಗೆ ಹತ್ತಿರದ ಸಂಬಂಧ, ಅವಲಂಬನೆ ಹೊಂದಿದ ಶಿಲಾಯುಗದ ಜನರಿಂದ ನಮ್ಮ ಕಲೆಯ ವಿನಮ್ರ ಅರಂಭದ ಮಾದರಿಗಳನ್ನು ಕಾಣುತ್ತೇವೆ. ನಂತರದ ಸೂಕ್ಷ್ಮ ಶಿಲಾಯುಗ, ಹೊಸ ಶಿಲಾಯುಗ, ಶಿಲಾತಾಮ್ರಯುಗ, ಕಬ್ಬಿಣ ಯುಗದ ಬೃಹತ್ ಶಿಲಾಯುಗ ಮತ್ತು ಈ ಇತಿಹಾಸ ಪೂರ್ವ ಕಾಲವೇ ಅಲ್ಲದೆ, ಇತಿಹಾಸದ ಆರಂಭದ ಕಾಲಗಳಲ್ಲೂ ಕಲೆ ತನ್ನದೇ ಆದ ರೀತಿಯಲ್ಲಿ ಮುನ್ನಡೆಯಿತು. ಈ ಮೊದಲ ಹೆಜ್ಜೆಗಳಲ್ಲಿ ನಮಗೆ ಬಹುಶಃ ಇನ್ನೂ ಗೊತ್ತಿರದ ಹಲವು ಸಾವಿರ ವರ್ಷಗಳ ತಾಲೀಮು ಇದ್ದಿರಬಹುದು. ಹಿಮಯುಗಗಳಲ್ಲಿ ಗುಹೆಗಳನ್ನು ಆಶ್ರಯಿಸಲೇಬೇಕಿದ್ದ ಮಾನವ ಹಲವು ಗುಂಪುಗಳಲ್ಲಿ ಗುರುತಿಸಲ್ಪಟ್ಟಿದ್ದಾನೆ. ಅವನ ಬದುಕಿನಲ್ಲಿ ಕಲೆ ಪ್ರಮುಖ ಪಾತ್ರವನ್ನು ವಹಿಸಿರಲೇಬೇಕು. ಕಲೆಯ ಬೆಳವಣಿಗೆಯನ್ನು ಆದಿಮಾನವನ ಹುಟ್ಟಿನಿಂದಲೂ ಗುರುತಿಸಬಹುದಾಗಿದೆ. ಆಗಿನಿಂದ ಇಲ್ಲಿಯವರೆಗೂ ನಾಗರೀಕತೆ ಬೆಳೆದಂತೆಲ್ಲಾ, ಸಮಾಜ-ಸಂಸ್ಕೃತಿಗಳ ಜೊತೆಜೊತೆಗೆ ಕಲೆಯ ಆಯಾಮಗಳು ಹಲವು ಬಗೆಗಳಲ್ಲಿ ವ್ಯಕ್ತವಾಗುತ್ತಾ ಬಂದಿವೆ. ಆದಿಮ ಕಲೆಯ ರೂಪುರೇಷೆಗಳು ನಿರ್ಧಾರವಾಗುವುದು ಕಲಾಕೃತಿಯೊಂದು

ನಿರ್ಮಾಣಗೊಂಡ ಆಯಾ 'ಪದಾರ್ಥಗಳ ಗುಣ ವಿಶೇಷದ ದೃಷ್ಟಿಯಿಂದ' ಎಂಬ ವಿಚಾರ ಇಲ್ಲಿ ಮುಖ್ಯವಾಗಿದೆ.

ಭಾರತದ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿದ್ದ ಅಜಂತಾ ಭಿತ್ತಿ ಚಿತ್ರಗಳಿಗಾಗಿ ಅತ್ಯಂತ ಪ್ರಸಿದ್ದಿಯಾಗಿದೆ. ಇದು ಮಲೆಸೀಮೆ, ಚಂದರ್, ಶತಮಾಲ, ವಿಂಧ್ಯಾದ್ರಿ, ಸಹ್ಯಾದ್ರಿ ಎಂದು ಕರೆಯಲ್ಪಡುವ ಪಶ್ಚಿಮಘಟ್ಟಗಳ ಬೆಟ್ಟಗಳು ಸುತ್ತಲೂ ಇವೆ. ಜಗತ್ಪ್ರಸಿದ್ಧವಾದ ಅಜಂತ ಗುಹಾಂತರ ದೇವಾಲಯಗಳು ವಾಘ್ ಕಣಿವೆಯ ಮನೋಹರವಾದ ನೈಸರ್ಗಿಕ ಸನ್ನಿವೇಶದಲ್ಲಿವೆ. ಕಲೆಯ ಪ್ರಭೇದಗಳಾದ ಶಿಲ್ಪ, ಕೆತ್ತನೆ ಹಾಗೂ ವರ್ಣಲೇಪನ ಇವುಗಳ ಕೇಂದ್ರವೆನಿಸಿರುವ ಅಜಂತ ಭಾರತೀಯ ಪರಮೋತ್ಕೃಷ್ಟ ಕಲಾನೈಪುಣ್ಯದ ಚಿರಂತನ ಸಾಕ್ಷಿಯಾಗಿದೆ.

ಇಲ್ಲಿ ಬೆಟ್ಟವನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಚಿತ್ರಗಳನ್ನು ಬಿಡಿಸುವ ಕಾರ್ಯ ಕ್ರಿ.ಪೂ.೨ನೆಯ ಶತಮಾನದಲ್ಲಿ ಪ್ರಾರಂಭವಾಗಿ ಅವಿಚ್ಛಿನ್ನವಾಗಿ ಕ್ರಿ.ಶ. ೭ನೆಯ ಶತಮಾನದವರೆಗೂ ಮುಂದುವರಿಯಿತು. ಶಾತವಾಹನ, ವಾಕಾಟಕ ಮತ್ತು ಬಾದಾಮಿ ಚಾಳುಕ್ಯ ಸಂತತಿಗಳ ಅರಸರು ಬೌದ್ಧಭಿಕ್ಷುಗಳಿಗಾಗಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದರು, ಶಿಲ್ಪಿಗಳು ಗುಹಾಲಯಗಳ ನಿರ್ಮಾಣ ಹಾಗೂ ಕಲಾ ವಿನ್ಯಾಸದಲ್ಲಿ ತಮ್ಮ ಚಾತುರ್ಯವನ್ನು ತೋರಿಸಿರುವರು. ಮತನಿಷ್ಠೆ ಹಾಗೂ ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಕಲಾ ಪರಿಪೂರ್ಣತೆಯನ್ನು ವರ್ಣಲೇಪನದಲ್ಲಿ ಬೌದ್ಧಭಿಕ್ಷುಗಳು ಅತ್ಯುನ್ನತವಾಗಿ ಪ್ರದರ್ಶಿಸಿರುವರು. ಕ್ರಿ.ಶ. ೭ನೆಯ ಶತಮಾನದಲ್ಲಿ ಅಜಂತಕ್ಕೆ ಭೇಟಿ ನೀಡಿದ ಪ್ರವಾಸಿಗರ ಬರೆವಣಿಗೆಗಳಿಂದ, ಇಲ್ಲಿ ಬಹು ಸಂಖ್ಯೆಯಲ್ಲಿ ಬೌದ್ಧಭಿಕ್ಷುಗಳು ವಾಸಿಸುತ್ತಿದ್ದರೆಂದೂ ಅವರು ಹತ್ತಿರದಲ್ಲಿದ್ದ ಇಂದ್ರಕಾಂತವೆಂಬ ಪಟ್ಟಣಕ್ಕೆ ಆಗಾಗ ಭಿಕ್ಷಾಟನೆಗಾಗಿ ಹೋಗುತ್ತಿದ್ದರೆಂದು ತಿಳಿದುಬರುತ್ತದೆ.

ಇವರು ಅಜಂತ ಕಲಾಕೇಂದ್ರದ ಪ್ರಕೃತಿ ಸೌಂದರ್ಯವನ್ನೂ ಗುಹಾಂತರ ದೇವಾಲಯಗಳ ಸೌಂದರ್ಯವನ್ನು ವಿಶೇಷವಾಗಿ ಪ್ರಶಂಸಿಸಿರುವರು. ಬೌದ್ಧಮತ ಕ್ಷೀಣಿಸಿದ ಮೇಲೆ ಈ ಸ್ಥಳ ನಿರ್ಲಕ್ಷಿಸಲ್ಪಟ್ಟು ಪೊದೆಗಳು ಬೆಳೆದು ಮೃಗಪಕ್ಷಿಗಳ ಆವಾಸ ಸ್ಥಾನವಾಗಿ ಮಾನವ ಸ್ಮೃತಿಗೋಚರದಿಂದ ಮರೆಯಾಯಿತು. ಇವು ಕ್ರಿ.ಶ. ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಆಂಗ್ಲ ವಿದ್ವಾಂಸರ ಗಮನಕ್ಕೆ ಬಂದು ಅವರಲ್ಲಿ ವಿಸ್ಮಯವನ್ನೂ ಕುತೂಹಲವನ್ನೂ ಕೆರಳಿಸಿ ನಮ್ಮ ನಾಡಿನ ಹಾಗೂ ಪ್ರಪಂಚದ ಕಲಾತಜ್ಞರ ಗಮನವನ್ನು ಅತ್ತ ಸೆಳೆದುವು. ಅಜಂತದಲ್ಲಿ ಒಟ್ಟು ೩೦ ಗುಹಾಂತರ ದೇವಾಲಯಗಳಿವೆ. ಅನೇಕ ಗುಹಾಲಯಗಳಲ್ಲಿ ಕಾಲ ಮತ್ತು ಪ್ರಕೃತಿಯ ಹೊಡೆತದಿಂದ ಚಿತ್ರಗಳು ನಾಶವಾಗಿವೆ. ಅಜಂತದ ಚಿತ್ರಗಳ ಮುಖ್ಯಗುರಿ ಮತಬೋಧನೆ. ಬೌದ್ಧ ಭಿಕ್ಷುಗಳು. ಕೆಂಪು. ಹಸಿರು, ಹಳದಿ. ಮತ್ತು ನೀಲಿವರ್ಣಗಳಿಂದ ಬಿಡಿಸಿರುವ ಭಿತ್ತಿ ಚಿತ್ರಗಳು ವರ್ಣನಾತೀತವಾದ ಸೌಂದರ್ಯವನ್ನೂ, ಕೌಶಲವನ್ನೂ ಪ್ರದರ್ಶಿಸುತ್ತವೆ. ಚಿತ್ರಕಾರರು ಸಾಂಪ್ರದಾಯಿಕ ನೀತಿಯನ್ನು ಅನುಸರಿಸಿದಾಗಲೂ ತಮ್ಮ ಪ್ರತಿಭೆ ಮತ್ತು ಸ್ವಾತಂತ್ರ್ಯವನ್ನು ತೋರ್ಪಡಿಸಿದ್ದಾರೆ.

ಇಲ್ಲಿ ಬೋಧಿಸತ್ವ ಬುದ್ಧ ದೇವನ ಜೀವನದ ಪ್ರಮುಖ ಘಟನೆಗಳು ಸಜೀವವಾಗಿ ಪಡಿಮೂಡಿವೆ. ಹೂಬಳ್ಳಿಗಳ, ಗೂಳಿ, ಕಪಿ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ಚಿತ್ರಗಳು ನೈಜ ಜೀವಿಗಳಂತಿವೆ. ಸ್ತ್ರೀ ಚಿತ್ರಗಳು ಭಾರತೀಯ ಸ್ತ್ರೀಯರ ಸಹಜವಾದ ಶರೀರಭಂಗಿ, ಪ್ರಮಾಣ, ಅಲಂಕಾರ, ಮಾರ್ದವ, ಲಾವಣ್ಯಗಳನ್ನು ನಿದರ್ಶಿಸುತ್ತವೆ. ದೇವಾನುದೇವತೆಗಳ, ಅಪ್ಸರೆಯರ, ಗಣ್ಯರ, ವೀರರ, ಹಳ್ಳಿ, ನಗರಗಳ, ಸಂತರ ಮತ್ತು ಮಹರ್ಷಿಗಳ ಚಿತ್ರಗಳು ಸಹಜವಾಗಿ, ಸುಂದರವಾಗಿ, ಮನೋಜ್ಞವಾಗಿ ಒಡಮೂಡಿವೆ. ಒಂದು ಮತ್ತು ಎರಡನೆಯ ಗುಹಾಲಯಗಳಲ್ಲಿ ಪುಲಿಕೇಶಿಯ ಆಸ್ಥಾನದಲ್ಲಿ ಪರ್ಷಿಯಾ ರಾಯಭಾರಿಗಳ ಆಗಮನವನ್ನು ಜೀವಂತವಾಗಿ ಚಿತ್ರಿಸಿದ್ದಾರೆ. ಈ ಗುಹೆಗಳಲ್ಲಿರುವ ಜಿಂಕೆಗಳ ಹಾಗೂ ಶಿವಪಾರ್ವತಿಯರ ಭಿತ್ತಿಚಿತ್ರಗಳು ಅತ್ಯಂತ ಸುಂದರವಾಗಿವೆ. ೧೭ನೆಯ ಗುಹೆಯಲ್ಲಿ ಬೌದ್ಧಮತದ ನಿಯಮನಿಷ್ಠೆಯಲ್ಲಿದ್ದ ನಿರಂತರ ಶ್ರದ್ಧೆ ಹಾಗೂ ಪರಂಪರಾನುಗುತವಾಗಿ ಬೆಳೆಸಿಕೊಂಡು ಬಂದ ಚಿತ್ರಕಲಾಭ್ಯಾಸ ಇವುಗಳ ಅನುಭವದ ಆನಂದ ಪರವಶತೆಯನ್ನೂ ಕೌಶಲ್ಯವನ್ನೂ ಅನಾಮಧೇಯ ಬೌದ್ಧಭಿಕ್ಷುಗಳು ಪರಮೋತ್ಕೃಷ್ಟವಾಗಿ ಅಜಂತ ಗುಹಾಂತರ ದೇವಾಲಯಗಳಲ್ಲಿ ಪ್ರದರ್ಶಿಸಿದ್ದಾರೆ. ಸೌಮ್ಯತೆ, ಅಸದೃಶವಾದ ಕುಂಚ ಕೌಶಲ, ಎಣೆಯಿಲ್ಲದ ವರ್ಣವಿನ್ಯಾಸದ ವೈಖರಿ, ಅಸಾಧಾರಣ ಪ್ರೌಢಿಮೆ–ಇವುಗಳಿಗೆ ಅಜಂತ ಭಿತ್ತಿಚಿತ್ರಗಳು ಅದ್ವಿತೀಯ ನಿದರ್ಶನಗಳಾಗಿವೆಯೆಂದು ಕಲಾವಿಮರ್ಶಕರು ಪ್ರಶಂಸಿಸಿದ್ದಾರೆ.

ಅಜಂತದ ವಾಸ್ತುಶಿಲ್ಪ, ಮೂರ್ತಿಶಿಲ್ಪಗಳಲ್ಲಿನ ಕಲೆ ಸಾಕಷ್ಟು ಉತ್ತಮಮಟ್ಟದ್ದಾಗಿದ್ದು ವೈವಿಧ್ಯಮಯವಾಗಿದೆ. ಕಂಬಗಳ ಮಾಟ, ಅಲಂಕಾರ ಪದ್ಧತಿ, ಮೂರ್ತಿಗಳ ಮೈಕಟ್ಟು, ಪ್ರಮಾಣ, ಅಲಂಕಾರ ಕಲೆ ಮನ ಮೆಚ್ಚುವಂತಿವೆ. ನಿರ್ಮಾತೃಗಳಾದ ಸ್ಥಪತಿಗಳು ಒಳ್ಳೆ ದಕ್ಷತೆಯಿಂದ ಕೆಲಸ ಮಾಡಿ ಮೂರ್ತಿಗಳಲ್ಲಿ, ವರ್ಣಚಿತ್ರಗಳಲ್ಲಿ ಜೀವಕಳೆ ತುಂಬಿದ್ದಾರೆ. ಅಜಂತದ ಚೈತ್ಯಗಳಿಗೆ ಕಂಬಗಳುಳ್ಳ ಮುಖಮಂಟಪ, ಹಿಂಬದಿಯಲ್ಲಿ ಅರ್ಧವರ್ತುಲಾಕಾರದ ನಡು ಅಂಕಣ, ಅದರ ಪಕ್ಕಗಳಲಲಿ ಕಂಬಗಳ ಸಾಲಿನಿಂದ ಬೇರ್ಪಡಿಸಿದ ಬದಿಯ ಅಂಕಣಗಳು, ಸ್ತೂಪ, ಗುಮ್ಮಟ, ಚಾವಣಿಯ ಕೋಣೆ – ಇತ್ಯಾದಿ ಇರುತ್ತವೆ. ಅಜಂತದಲ್ಲಿ ಸಂಶೋಧಿಸಲಾದ, ಹೆಚ್ಚು ಕಡಿಮೆ, ಎಲ್ಲ ಗುಹೆಗಳೂ ವರ್ಣಚಿತ್ರಗಳಿಂದ ಅಲಂಕೃತವಾಗಿವೆ. ಮೊದಲ ಹಂತದಲ್ಲಿ ಭೋಧಿವೃಕ್ಷ ಮತ್ತು ಸ್ಥೂಪಗಳನ್ನು ಆರಾಧಿಸುವ ಚಿತ್ರಗಳನ್ನು ಬರೆಯಲಾಗಿದೆ. ಮಧ್ಯಭಾಗದಲ್ಲಿ ಜಾತಕ ಅವಧಾನಗಳಿಂದ ಎತ್ತಿಕೊಂಡು ನಿರೂಪಣಾಶೈಲಿಯ ಕಥೆಗಳನ್ನು ಚಿತ್ರಿಸಲಾಗಿದೆ. ಮಣ್ಣು, ಮರಗಳು, ಹಕ್ಕಿಗಳು, ಜಿಂಕೆಗಳು, ಆನೆಗಳು, ಪ್ರಾಕಾರಗಳು, ಹೊರಾಂಗಣಗಳು, ಆನೆಬಾಗಿಲು, ಮಾಡಗಳು ಎಲ್ಲಕ್ಕೂ ಮಿಗಿಲಾಗಿ ಗಂಡಸರ, ಹೆಂಗಸರ, ಮಕ್ಕಳ ಲಾಲಿತ್ಯಮಯವಾದ ನಿಲುವುಗಳು, ಸಲೀಸಾಗಿ ಓಡಾಡುವ ಆಡುವ ಜನರ ಆಹ್ಲಾದಮಯ ಚರ್ಯೆಗಳು ಇಲ್ಲಿ ಚಿತ್ರಿತವಾಗಿದೆ. ಬುದ್ಧನ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ಘಟನೆಗಳನ್ನು ನಿರೂಪಿಸುವ ವರ್ಣಮಯವಾದ ಉಲ್ಲೇಖಗಳನ್ನು ಇಲ್ಲಿ ಕಾಣಬಹುದು.

ಇಲ್ಲಿ ಎರಡು ಹಂತಗಳಲ್ಲಿ, ಅದು ಬಹಳ ಕಾಲದ ಅಂತರದಲ್ಲಿ ಚಿತ್ರಿಸಲಾಗಿರುವ ವರ್ಣಚಿತ್ರಗಳು ಕಂಡುಬರುತ್ತವೆ. ಮೊದಲ ಹಂತ, ಅಂದರೆ ಕ್ರಿ.ಪೂ. ೨-೧ನೆಯ ಶತಮಾನದಷ್ಟು ಪ್ರಾಚೀನತೆ ಇರುವ ಚಿತ್ರಗಳು ೯ ಮತ್ತು ೧೦ನೆಯ ಗುಹೆಗಳಲ್ಲಿವೆ. ಈ ಆಕೃತಿಗಳಲ್ಲಿಯ ವೇಷಭೂಷಣ ಮುಖ್ಯವಾಗಿ ತಲೆಯ ಮೇಲಿನ ಮುಂಡಾಸು ಮತ್ತು ಆಭರಣಗಳು ಸಾಂಚಿ ಮತ್ತು ಭಾರ್ಹುತರ್‌ಗಳಲ್ಲಿಯ ಉಬ್ಬು ಕೆತ್ತನೆಯನ್ನು ಹೋಲುತ್ತವೆ. ಚಿತ್ರಗಳು ಒಳ್ಳೆಯ ಪ್ರೌಢಿಮೆಯನ್ನು ತೋರಿಸುತ್ತವೆ.

ಅಜಂತ ಭಿತ್ತಿ ಚಿತ್ರಗಳನ್ನು ಗಾರೆಚಿತ್ರ ಎಂದು ಕೆಲವೊಮ್ಮೆ ತಪ್ಪಾಗಿ ಬರೆಯುವುದುಂಟು. ಅಜಂತ ಕಲೆಯ ರೂಪರೇಷೆಯನ್ನು ಅಭ್ಯಸಿಸಿದವರು ಅದನ್ನು ಸ್ಟೆಕ್ಕೊ ವಿಧಾನದ ಚಿತ್ರಕಲೆ ಎಂದು ಪರಿಗಣಿಸಿದ್ದಾರೆ. ಗೋಡೆ ಇಲ್ಲವೆ ಮುಚ್ಚಿಗೆಗಳಿಗೆ ಗಾರೆಯನ್ನು ಬಳಿದ ಬಳಿಕ ಅದು ಒಣಗಿದ ಮೇಲೆ ಬರೆಯುವ ಚಿತ್ರ ವಿಧಾನವಿದು. ನೈಸರ್ಗಿಕವಾಗಿ ಲಭ್ಯವಾಗುವ ಬಿಳಿಜೇಡಿ ಮುಂತಾದ ಬಣ್ಣಗಳ ಜೊತೆಗೆ, ಅಜಂತ ಪ್ರದೇಶದಲ್ಲೇ ವಿಶೇಷವಾಗಿ ಸಿಗುವ ನೀಲಗಲ್ಲುಗಳನ್ನು ಇಲ್ಲಿ ಬಳಸಿದ್ದಾರೆ. ಅಜಂತದ ಹೊರಗೆ ಬಾಗ್, ಬಾದಾಮಿ, ಎಲ್ಲೋರಾ, ಸಿತ್ತವಾಸಲ್ ಮುಂತಾದ ಭೂಭಾಗಗಳಲ್ಲೂ ಚಿತ್ರಕಲೆಯ ಅವಿರ್ಭಾವವಾಯಿತು. ಗ್ವಾಲಿಯರ್‌ನ (ಮಧ್ಯಪ್ರದೇಶ) ಬಾಗ್‌ಮತಿ ಎಂಬ ನದಿಯ ದಂಡೆಯಲ್ಲಿ ಸುಮಾರು ೪೬ ಮೀ ಎತ್ತರದಲ್ಲಿ ಈ ಕಲಾ ಸಂಪತ್ತು ಸ್ಥಿತವಾಗಿದೆ. ಇಲ್ಲಿಯ ಚಿತ್ರಗಳಲ್ಲಿ ರೇಖಾ ವಿನ್ಯಾಸ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಹಸ್ತ ಪರ್ಯಂತ ಅಂಗಿಯ ಕೈಯಿರುವ ನರ್ತಕಿಯರು, ವಾದಕರು, ಗಾಯಕಿಯರು, ತಮ್ಮ ಸುಖದುಃಖಗಳನ್ನು ಸಖಿಯರೊಂದಿಗೆ ತೋಡಿ ಕೊಳ್ಳುವ ಲಲನೆಯರು, ಆನೆಗಳ ಮೆರವಣಿಗೆ, ಆನೆ ಸವಾರಿ ಮಾಡುತ್ತಿರುವ ದೊರೆ, ಬಸವ, ಪಕ್ಷಿ, ಫಲಪುಷ್ಪಾದಿಗಳ ಅನೇಕ ಚಿತ್ರಗಳು ಇಲ್ಲಿವೆ.

ಬಾಗಲಕೋಟೆ ಜಿಲ್ಲೆಯಲ್ಲಿರುವ ಬಾದಾಮಿ ಪ್ರಾಚೀನ ಐತಿಹಾಸಿಕ ಕೇಂದ್ರಗಳ ಪೈಕಿ ಒಂದು. ಇಲ್ಲಿ ಒಂದೊಂದು ಅಖಂಡ ಬಂಡೆಯಲ್ಲಿ ಒಂದೊಂದು ಗುಹಾಲಯವಿದ್ದು ಎರಡು ವೈಷ್ಣವ ಪಂಥಕ್ಕೂ, ಒಂದು ಶೈವ ಹಾಗೂ ನಾಲ್ಕನೆಯದು ಜೈನಸಂಪ್ರದಾಯಕ್ಕೂ ಸೇರಿವೆ. ಸುಮಾರು ೧೪ ಶತಮಾನಗಳ ಹಿಂದೆ ನಿರ್ಮಿಸಲಾದ ಇಲ್ಲಿಯ ವಾಸ್ತುಶಿಲ್ಪ, ಮೂರ್ತಿಕಲೆ ಸುರಕ್ಷಿತವಾಗಿ ಉಳಿದು ಬಂದಿದ್ದರೂ ಭಿತ್ತಿ ಚಿತ್ರಕಲೆ ಅಳಿದುಳಿದ ಸ್ಥಿತಿಯಲ್ಲಿದೆ. ಅಜಂತ ಕಲೆಯ ಹೋಲಿಕೆ ಲಕ್ಷಣಗಳು ಇಲ್ಲಿಯ ಚಿತ್ರಕಲೆಯಲ್ಲಿ ಕಂಡುಬರುವ ವೈಶಿಷ್ಟ್ಯ. ಅಜಂತದಲ್ಲಿ ಬೌದ್ಧ ಧರ್ಮಕ್ಕೆ ಸಂಬಧಿಸಿದ ಜಾತಕಕತೆಗಳ ಚಿತ್ರಣವಿದ್ದರೆ, ಇಲ್ಲಿ ಹಿಂದೂ ಧರ್ಮದ ಪುರಾಣಕಥೆಗಳ ಸನ್ನಿವೇಶಗಳಿವೆ. ಹಿಂದೂ ಮತದ ಅತ್ಯಂತ ಪ್ರಾಚೀನ ಕಲಾ ಪಳೆಯುಳಿಕೆಯ ದೃಷ್ಟಿಯಿಂದ ಇಲ್ಲಿಯ ಚಿತ್ರಕಲಾಕೃತಿಗಳು ಪ್ರಾಶಸ್ತ್ಯ ಪಡೆಯುತ್ತವೆ. ಅಜಂತ ಶೈಲಿಯ ಚಿತ್ರಕಲಾ ರಚನೆಯನ್ನು ದಕ್ಷಿಣ ಭಾರತದ ತಂಜಾವೂರಿನ ಸಮೀಪದ ಪುದುಕೋಟೆಯಲ್ಲೂ ಕಾಣಬಹುದು. ಪಲ್ಲವರಾಜನಿಂದ ಏಳನೆಯ ಶತಮಾನದಲ್ಲಿ ನಿರ್ಮಾಣಗೊಂಡ ಇಲ್ಲಿಯ ದೇವಾಲಯದಲ್ಲಿ ಗಂಧರ್ವರು, ಅಪ್ಸರೆಯರು,

ರಮ್ಯವಾದ ಅಲಂಕಾರಿಕ ಆಕೃತಿಗಳು, ವೃಷಭ, ಆನೆ ಮುಂತಾದ ಪ್ರಾಣಿಗಳು, ಪಕ್ಷಿಗಳು ಮೊದಲಾದ ಚಿತ್ರಗಳಿವೆ.

ಹದಿನಾಲ್ಕನೆಯ ಶತಮಾನದಲ್ಲಿ ಚೋಳಕಲೆ ಉತ್ತುಂಗತೆ ಪಡೆಯಿತು. ತಂಜಾವೂರಿನ ಬೃಹದೇಶ್ವರ ದೇವಾಲಯದಲ್ಲಿ ಚೋಳ ಪರಂಪರೆಯ ಕಲೆಯನ್ನು ಕಾಣಬಹುದು. ನಟರಾಜ, ಕೈಲಾಸ ಶಿವ, ಶೈವಸಂತರು ಮೊದಲಾದವು ಚೋಳಕಲೆಯ ದ್ಯೋತಕಗಳು, ಕಾಂಜೀವರದಲ್ಲೂ ಈ ಶೈಲಿಯ ಚಿತ್ರಗಳನ್ನು ಕಾಣಬಹುದು. ನಟರಾಜನ ಕಲ್ಪನೆ ಸಿಂಧೂನದಿ ಕಣಿವೆಯ ನಾಗರಿಕತೆಯ ಮೂಲವನ್ನು ಹೊಂದಿದೆ ಎಂಬ ಅಭಿಪ್ರಾಯವಿದೆ. ಸುಮಾರು ೪೦೦೦ ವರ್ಷಗಳ ಹಿಂದಿನ ಹರಪ್ಪಾ ಆಕೃತಿಯೊಂದರಲ್ಲಿ ಗಂಡು ನೃತ್ಯಕಾರ ನಿಂತ ಒಂದು ಭಂಗಿಯಿದೆ. ಆತ ತನ್ನ ಬಲಗಾಲ ಮೇಲೆ ನಿಂತು. ಎಡಗಾಲನ್ನು ಕೊಂಚ ಎತ್ತರಿಸಿದ್ದಾನೆ. ಇದೆ ನಟರಾಜನ ಮೂಲ ಸೆಲೆಯಾಗಿರಬಹುದೆಂದು ನಂಬಲಾಗಿದೆ. ನಟರಾಜನ ಕಲ್ಪನೆ ಭಾರತದ ದಾಕ್ಷಿಣಾತ್ಯ ಕಲೆಯ ಪ್ರಾವಿಣ್ಯಕ್ಕೆ ಒಂದು ದ್ಯೋತಕವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕರ್ನಾಟಕದಲ್ಲಿ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಭಿತ್ತಿ ಚಿತ್ರಕಲೆ ಮತ್ತೆ ಪುನರುಜ್ಜೀವನ ಹೊಂದಿತು. ಲೇಪಾಕ್ಷಿ ದೇವಾಲಯದ ಗೋಡೆಗಳ ಮೇಲೂ ಚಾವಣಿಯಲ್ಲೂ ಚಿತ್ರಿತವಾದ ಚಿತ್ರಗಳು ವಿಜಯನಗರ ಸಾಮ್ರಾಜ್ಯದ ಚಿತ್ರಕಲಾ ವೈಖರಿಗೆ ಉತ್ತಮ ನಿದರ್ಶನಗಳು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಲೇಪಾಕ್ಷಿ ಕ್ರಿ.ಶ. ೧೬ನೆಯ ಶತಮಾನದ ಕಲಾ ಕೊಡುಗೆ ಎನ್ನಬಹುದು. ಕಿರಾತಾರ್ಜುನಿಯಂ, ರಾಮಾಯಣ, ಶಿವಾನುಗ್ರಹದ ಉಲ್ಲೇಖ, ರಾಜದರ್ಬಾರು ಮೊದಲಾದ ಚಿತ್ರಗಳನ್ನೂ ಇಲ್ಲಿ ಕಾಣಬಹುದು.

ಭಾರತ ಮತ್ತು ಪರ್ಷಿಯಾ ದೇಶದ ಚಿತ್ರಕಲೆಗಳ ಸಮ್ಮಿಳನದಂತಿರುವ ಮೊಗಲ್ ಚಿತ್ರಕಲೆಯ ಕಾಲ ಕ್ರಿ.ಶ. ೧೫೫೦–೧೮೦೦. ವರ್ಣ ಚಿತ್ರಕಲೆ ಮಾತ್ರವಲ್ಲ, ವಾಸ್ತುನೇಯ್ಗೆ ಕಲೆಗಳೂ ಈ ಕಾಲದಲ್ಲಿ ವಿಕಸನಗೊಂಡವು. ಈ ಕಾಲದಲ್ಲಿ ಅನೇಕ ಚಾರಿತ್ರಿಕ ಗ್ರಂಥಗಳಿಗೆ ಚಿತ್ರಾಲಂಕರಣ ನಡೆಯಿತು. ಬಾಬರನ ಆತ್ಮಚರಿತ್ರೆ, ಮೊಗಲ್ ವಂಶದ ಚರಿತ್ರೆ ಹಾಗೂ ಅಕ್ಬರ್ ನಾಮಾಗಳಿಗೂ ಚಿತ್ರಗಳ ಸಂಕಲನಗಳನ್ನು ಸೇರಿಸಿದ್ದಾರೆ. ಅಕ್ಬರನ ಕಾಲದಲ್ಲಿ ಮಹಾಭಾರತವನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿ, ಅದರಲ್ಲಿ ೧೬೪ ಚಿತ್ರಗಳನ್ನು ಅಳವಡಿಸಲಾಯಿತು. ನಾಜೂಕು ರೇಖೆ, ಸುಂದರ ವರ್ಣಸಂಯೋಜನೆ ಸೂಕ್ಷ್ಮ, ಸುಳುಹುಗಳಿಂದ ಈ ಕಾಲದ ಚಿತ್ರಗಳು ಮೆರೆದವು. ಬೇಟೆ, ಸಂಗೀತ, ನೃತ್ಯ, ವಿಹಾರ ಕೂಟ, ವೃತ್ತಿನಿರತರು ಹೀಗೆ ನಾನಾ ವಸ್ತುವೈವಿಧ್ಯವನ್ನು ಈ ಚಿತ್ರಗಳಲ್ಲಿ ಕಾಣಲು ಸಾಧ್ಯ. ಅಕ್ಬರನ ಮಗ ಜಹಾಂಗೀರ್ ಕೂಡ ತನ್ನ ಆಸ್ಥಾನದಲ್ಲಿ ಚಿತ್ರಕಲಾವಿದರಿಗೆ ಪ್ರೋತ್ಸಾಹ ನೀಡಿದ್ದ. ಅಕ್ಬರನ ಕಾಲದಲ್ಲಿ ಚಿತ್ರಕಲೆಯಲ್ಲಿ ನಿಷ್ಣಾತರಾದ ನೂರು ಮಂದಿಗೂ ಮಿಕ್ಕ ಕಲಾವಿದರು ರಾಜಾಶ್ರಯ ಪಡೆದಿದ್ದರು. ಮೊಗಲರ ಕಾಲದಲ್ಲಿ ಭಿತ್ತಿ ರಚನೆ ಇಳಿಮುಖವಾಗಿ, ಕಾಗದಪತ್ರಗಳ ಮೇಲಿನ ಕಲೆ ಪ್ರಾರಂಭವಾಯಿತು. ಜಹಾಂಗೀರಿನ ಕಾಲದಲ್ಲಿ

ಯೂರೋಪಿನ ಅನೇಕ ಚಿತ್ರಗಳು ಭಾರತಕ್ಕೆ ಬಂದುವು. ಹೀಗಾಗಿ ಮೊಗಲ್ ಕಲೆಯು ಯೂರೋಪ್ ಚಿತ್ರಕಲೆಯ ಪ್ರೇರಣೆಗೂ ಪಾತ್ರವಾಯಿತು. ಷಾಹಜಹಾನನ ಕಾಲದಲ್ಲಿ ಚಿತ್ರಕಲೆಯ ಸ್ಥಾನವನ್ನು ವಾಸ್ತುಕಲೆ ತುಂಬಿಕೊಂಡಿತ್ತಾದರೂ ಚಿತ್ರಕಲೆ ಪೂರ್ಣ ಸ್ವರೂಪದಲ್ಲಿ ನಾಮಾವಶೇಷವಾಯಿತೆಂದು ಹೇಳಲಾಗದು. ಅಂದಿನ ಚಿತ್ರ ಶೈಲಿಯನ್ನು ದಿಲ್ಲಿಕಲಂ ಎಂದು ಕರೆಯುವುದು ವಾಡಿಕೆ.

ಮೊಗಲ್ ಕಲೆಯ ಕಾಲದಲ್ಲಿ ರಾಜಾಶ್ರಯ ಪಡೆದಿದ್ದ ಹಿಂದೂ ಚಿತ್ರಕಾರರು ನಾದಿರ್ಷಾನ ದಾಳಿಯ ಕಾರಣದಿಂದಾಗಿ ದೆಹಲಿ ಬಿಟ್ಟು ತೆರಳಿದರು. ನೆಲೆ ಕಳಕೊಂಡ ಕಲಾವಿದರು ಆಶ್ರಯ ಹುಡುಕುತ್ತ ಪಂಜಾಬ್ ಕಣಿವೆಯ ಮೂಲಕ ಹೊರಟರು. ಅಲ್ಲಿ ಅವರಿಗೆ ರಾಜಾ ದಿಲೀಪ್ ಸಿಂಗನ ಅನಂತರ ಅವನ ಮಗ ಗೋವರ್ಧನ ಚಂದನ ಆಶ್ರಯ ಲಭ್ಯವಾಯಿತು. ಆತನ ಮಗ ಪ್ರತಾಪಚಂದ್ರ ಕಾಂಗ್ರಾಕೋಟೆಯನ್ನು ಕಟ್ಟಿಸಿ ಕಲಾವಿದರಿಗೆ ಆಶ್ರಯದಾತನಾದ. ಹೀಗೆ 'ಕಾಂಗ್ರಾಶೈಲಿ ಎಂಬ ಹೊಚ್ಚ ಹೊಸತೊಂದು ಶೈಲಿ ನಾಂದಿಹಾಡಿತು. ಗೀತಗೋವಿಂದ, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಗ್ರಂಥಗಳಿಂದ ಆಯ್ದ ಸನ್ನಿವೇಶಗಳಿಗೆ ಸಂಬಂಧಿಸಿದ ಚಿತ್ರರಚನೆಗಳು ಈ ಕಾಲದಲ್ಲಿ ಬಂದುವು. ಋತುಗಳನ್ನೂ ರಾಗಗಳನ್ನೂ ಕಾಂಗ್ರಾ ಶೈಲಿಯಲ್ಲಿ ನಿರೂಪಿಸಿರುವ ನಿದರ್ಶನಗಳುಂಟು. ರೇಖಾಲಾಲಿತ್ಯ ಮತ್ತು ವರ್ಣಮೋಹಕತೆಯ ಕಿರುಚಿತ್ರಗಳೂ ಈ ಶೈಲಿಯಲ್ಲಿ ನಿರ್ಮಾಣಗೊಂಡವು. ಕಾಂಗ್ರಾ ಶೈಲಿಯಲ್ಲಿ ಮೊಗಲ್ ಮತ್ತು ರಜಪೂತ ಶೈಲಿಗಳ ಪ್ರಭಾವ ಕಂಡುಬಂದರೂ ಇದೊಂದು ನೂತನ ವಿಶಿಷ್ಟ ಶೈಲಿಯೆಂದೇ ಪ್ರಖ್ಯಾತವಾಯಿತು.

ರಾಜಸ್ಥಾನಿ ಚಿತ್ರಕಲೆ ಎಂದು ಕರೆಯಲ್ಪಡುವ ಈ ಶೈಲಿ ೧೭–೧೮ನೆಯ ಶತಮಾನದ ಅವಧಿಯಲ್ಲಿ ಉಚ್ಛ್ರಾಯಸ್ಥಿತಿಗೆ ಬಂತು. ಉದಯಪುರ, ಚಿತ್ತೂರು, ಬಿಕನೀರ್, ಜಯಪುರ, ಚಾವಂಡ, ಜೋಧಪುರ ಮುಂತಾದ ಸ್ಥಳಗಳಲ್ಲಿ ರಜಪೂತ ಶೈಲಿ ವಿಸ್ತರಿಸಿತ್ತು. ಹಿಮಾಲಯ ಪರ್ವತಗಳ ಕಳಗಣ ಚಂಬಾ, ಬಸೋಲಿ, ಕಾಂಗ್ರಾ, ಜಮ್ಮುಗಳಲ್ಲೂ ಈ ಶೈಲಿ ಅಸ್ತಿತ್ವದಲ್ಲಿತ್ತು. ಹೀಗಾಗಿ ರಜಪೂತ ಚಿತ್ರಕಲೆಯನ್ನು ಪಹಾಡಿ ಶೈಲಿ ಮತ್ತು ಜಯಪುರ ಶೈಲಿ ಎಂದು ಎರಡು ವರ್ಗವಾಗಿ ಪರಿಗಣಿಸುತ್ತಾರೆ. ಇದರಲ್ಲೂ ಹಿಂದೂ ಮತಕ್ಕೆ ಸಂಬಂಧಿಸಿದ ಹಾಗೂ ಜನರ ದೈನಂದಿನ ಚಟುವಟಿಕೆಗಳನ್ನು ಒಳಗೊಂಡಿರುವ ಎರಡು ವಿಧದ ಚಿತ್ರಗಳನ್ನು ಕಾಣಬಹುದು. ಪ್ರೇಮ ಮತ್ತು ಭಕ್ತಿಯ ಸಾಕಾರ ರೂಪವನ್ನೂ ಈ ಶೈಲಿಯ ವಸ್ತುವಿನಲ್ಲಿ ಕಾಣಬಹುದು. ತಾವರೆ ಎಸಳಿನಂಥ ಕಣ್ಣುಗಳು, ಕೆಂದುಟಿಗಳು, ಘನವಾದ ಸ್ತನಗಳು, ನೀಳ ಕೇಶರಾಶಿ, ತೆಳುವಾದ ಸೊಂಟ, ನುಣುಪಾದ ಬೆಳ್ಳಗಿನ ದೇಹ, ಗುಲಾಬಿ ಬಣ್ಣದ ಹಸ್ತ–ಈ ಶೈಲಿಯ ಮುಖ್ಯ ಲಕ್ಷಣಗಳು. ಭಾರತೀಯ ಜನಪದ ಸಾಹಿತ್ಯದ ವರ್ಣಚಿತ್ರ ಈ ಶೈಲಿಯಲ್ಲಿ ಮೂಡಿಬಂದುವು. ರಾಗಮಲಿಕಾ ವರ್ಣನೆಗಳು, ಋತುವರ್ಣನೆ ನಾಯಕ–ನಾಯಿಕೆಯರ ಹಾಗೂ ಕೃಷ್ಣಚರಿತ್ರೆಯ

ಅಂಶಗಳೇ ರಾಜಸ್ಥಾನೀ ಶೈಲಿಯ ಮುಖ್ಯ ವಸ್ತು. ರಾಜಸ್ಥಾನೀ ಶೈಲಿಯಂತೆ ದಕ್ಷಿಣ ಭಾರತದಲ್ಲೂ ವಿಜಯನಗರ ಹಾಗೂ ದಕ್ಷಿಣ ಶೈಲಿಯ ಸಂಪ್ರದಾಯಗಳು ಮಂದಗತಿಯಲ್ಲಿ ವಿಕಸನಗೊಂಡಿದ್ದವು.

ವಿಜಯನಗರದ ವಿರೂಪಾಕ್ಷ, ದೇವಾಲಯದ ಸುಂದರ ಭಿತ್ತಿ ಚಿತ್ರಗಳಿವೆ. ಬಿಜಾಪುರ, ಗೋಲ್ಕೊಂಡ, ಅಹಮದಾಬಾದ್. ಹೈದರಾಬಾದ್ ಮುಂತಾದ ಸಂಸ್ಥಾನಗಳ ಅರಸರು ಕಲಾವಿದರಿಗೆ ಆಶ್ರಯ ನೀಡಿದ್ದರು. ಈ ಕಾಲದಲ್ಲಿ ಅಂದರೆ ೧೭ನೆಯ ಶತಮಾನದಲ್ಲಿ ದಕ್ಷಿಣದ ಶೈಲಿಯಲ್ಲಿ ಚಿತ್ರ ನಿರ್ಮಾಣ ನಡೆದಿತ್ತು. ಅನೇಕ ರಾಗಗಳಿಗೆ ಚಿತ್ರಗಳನ್ನು ರಚಿಸಿ, ದಕ್ಷಿಣ ಶೈಲಿಯ ರಾಗಮಾಲಾ ಕೃತಿಗಳು ಅಸ್ತಿತ್ವಕ್ಕೆ ಬಂದವು. ಕ್ರಿ.ಶ. ೧೧-೧೫ನೆಯ ಶತಮಾನದ ಅವಧಿಯಲ್ಲಿ ಜೈನಕಲೆ ಉದ್ದೀಪನಗೊಂಡಿತೆಂದು ಹೇಳಬಹುದು. ವಿಶಾಲವಾದ ಎದೆ, ಅಗಲವಾದ ನೇತ್ರಗಳು. ಗುರುಡನಂತಿರುವ ದೊಡ್ಡ, ಬಾಗಿದ ಚೂಪುಮೂಗು, ದೀರ್ಘ ಕಣ್ಣಿನ ಮೂಲೆಗಳು, ಬಿಲ್ಲಿನಾಕಾರದ ಹುಬ್ಬು, ಎರಡು ಗಲ್ಲ, ಸಪೂರ ಸೊಂಟ ಮೊದಲಾದವು ಈ ಕಲೆಯ ವೈಶಿಷ್ಟ್ಯಗಳು. ಈ ಕೃತಿಗಳು ತಾಳೆ ಎಲೆಯ ಗ್ರಂಥಗಳಲ್ಲಿ ಹಾಗೆಯೇ ಒರಟಾದ ಮಸುಕು ಕಾಗದಗಳ ಮೇಲೆ ರೂಪುಗೊಂಡಿವೆ. ಗ್ರಂಥಗಳ ಅಲಂಕಾರಕ್ಕಾಗಿ ಅನೇಕ ನಮೂನೆಯ ಅಂಚುಗಳಿರುವ ಚಿತ್ರಗಳನ್ನು ಚಿತ್ರಿಸಲ್ಪಟ್ಟಿವೆ.

ಕರ್ನಾಟಕದ ಪ್ರಾರಂಭಿಕ ವರ್ಣಚಿತ್ರಗಳು ಇತಿಹಾಸ-ಪೂರ್ವ ಯುಗಕ್ಕೆ, ಸೇರಿದಾಗಿವೆ. ಇತಿಹಾಸ- ಪೂರ್ವ ಜನರ ವಾಸಸ್ಥಾನವಾಗಿದ್ದ ಕಾಲದ ಚಾಚಿಕೊಂಡಿರುವ ಶಿಲಾಶ್ರಯಗಳ ಅಡಿಯಲ್ಲಿ ಪ್ರಾಣಿ ಹಾಗೂ ಮಾನವ ಚಿತ್ರಗಳೇ ಮುಂತಾದವನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದೆ. ಇತಿಹಾಸ-ಪೂರ್ವ ಮಾನವನ ಕಲಾ ಪಳೆಯುಳಿಕೆಗಳನ್ನು ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಣಬಹುದು. ಹಿರೇಬೆಣಕಲ್, ಪಿಕ್ಲಿಹಾಳ, ಮುಂತಾದ ಇತಿಹಾಸ- ಪೂರ್ವ ಕಾಲದಲ್ಲಿ ತಾಣಗಳಲ್ಲಿ ಬಂಡೆಗಳ ಮೇಲೆ ಆಯುಧಗಳನ್ನು ಹಿಡಿದ ಬೇಟೆಗಾರರು, ಕುದುರೆ ಸವಾರರು, ಗೂಳಿಗಳೇ, ಮೊದಲಾದ ರೇಖಾಚಿತ್ರಗಳನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ರಾಜಾಶ್ರಯದಲ್ಲಿ ರಚಿಸಲ್ಪಟ್ಟ ವರ್ಣಚಿತ್ರಗಳ ಪ್ರಾಚೀನ ಉದಾಹರಣೆಯನ್ನು ಚಾಲುಕ್ಯ ಅರಸನಾದ ಮಂಗಳೇಶನ ಕಾಲಕ್ಕೆ ಗುರುತಿಸಬಹುದಾಗಿದ್ದು ಆತನ ಕಾಲದ ವರ್ಣಚಿತ್ರಗಳ ಕುರುಹುಗಳು ಬಾದಾಮಿಯ ಮೂರನೆಯ ಗುಹೆಯಲ್ಲಿ ಉಳಿದಿದೆ. ಐತಿಹಾಸಿಕ ಕಾರಣಗಳಿಂದ, ಕರ್ನಾಟಕದ ಈ ವರ್ಣಚಿತ್ರ ಸಂಪ್ರದಾಯದ ನಿರಂತರತೆಯಲ್ಲಿ ಅಂತರವಿದ್ದು, ಹೊಯ್ಸಳ ಕಾಲಕ್ಕೆ ಸೇರಿದ ಮೂಡುಬಿದ್ರಿಯಲ್ಲಿನ ಸಚಿತ್ರ ಧವಳ ಹಸ್ತಪ್ರತಿಗಳನ್ನೂ ಕಾಣಬಹುದು. ಅದೇ ವಿಷಯಗಳನ್ನು ಚಿತ್ರಿಸುವ ಗುಜರಾತಿನ ಕಲ್ಪಸೂತ್ರ ಚಿತ್ರಕಲೆಗಿಂತ, ಈ ರೇಖಾಚಿತ್ರಗಳ ಪರಿಸ್ಥಿತಿ ಹಾಗೂ ಭಂಗಿಗಳು ವಿಭಿನ್ನವಾಗಿವೆ. ಈ ಶೈಲಿಯು ಸ್ಥಳೀಯವಾಗಿದ್ದು. ಹೊಯ್ಸಳ ಶಿಲ್ಪಗಳಲ್ಲಿನ ಅಲಂಕರಣೆಗಳ ಕಲಾತ್ಮಕ ಅನುಕರಣೆಯನ್ನು ಬಿಂಬಿಸುತ್ತದೆ.

ರುದ್ರಭಟ್ಟನಂತಹ ಕನ್ನಡ ಕವಿಗಳು ಭಾವಚಿತ್ರ ಹಾಗೂ ವರ್ಣಚಿತ್ರಗಳ ಉಲ್ಲೇಖವನ್ನು ಮಾಡಿದ್ದಾರೆ. ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಈ ಕಲೆಗೆ ಸಂಬಂಧಿಸಿದಂತೆ ಒಂದು ವಿಭಾಗವೇ ಇದೆ. ವಿಜಯನಗರ ಕಾಲದ ಚಿತ್ರಕಲೆಯ ಅಧ್ಯಯನವನ್ನು ಮಾಡಿದಾಗ, ಭಿತ್ತಿ ಚಿತ್ರಕಲೆಯು ಬೃಹತ್ ಪ್ರಮಾಣದಲ್ಲಿ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ಇಂತಹ ಮೊದಮೊದಲಿನ ಉದಾಹರಣೆಗಳನ್ನು ಹಂಪಿಯ ವಿರೂಪಾಕ್ಷ ದೇವಾಲಯದ ಛಾವಣಿಯ ಮೇಲೆ ಕಾಣಬಹುದು. ಕರ್ನಾಟಕದ ಚಿತ್ರಕಲೆಯ ಕೂಲಂಕೂಷ ಅಧ್ಯಯನವು ಅವು ಆ ಕಾಲದ ಜನಜೀವನವನ್ನು ಪ್ರತಿಬಿಂಬಿಸುವ ಬದಲು, ಚಿತ್ರ ರಚನಾಕಾರರು ಸಾಂಪ್ರದಾಯಿಕ ಪರಿಸ್ಥಿತಿಗಳಿಗೆ ವಾಸ್ತವಿಕತೆಗೆ ದೂರವಾದ ಭಂಗಿಗಳನ್ನು, ಆಗಮಗಳ ಕಟ್ಟುನಿಟ್ಟಾದ ರೂಪುರೇಷೆಗಳಿಗೆ ಬದ್ಧವಾಗಿ ಮಾಡಿರುವುದು ಗೋಚರವಾಗುತ್ತದೆ. ಈ ಚಿತ್ರಕಲೆಯು, ಇಂದಿಗೂ ಹೇರಳವಾಗಿ ಕಾಣುವ ಶಿಲ್ಪಗಳ ಚಿತ್ರಾತ್ಮಕ ಆವರ್ತನೆಗಳೆಂದು ತೋರುತ್ತದೆ. ಜಾತ್ಯಾತೀತ ವಸ್ತು ವಿಷಯಗಳೂ ಸಹ ಈ ವಾಸ್ತವಿಕತೆಗೆ ದೂರವಾದ ಭಂಗಿಗಳನ್ನು[೮] ಅನುಸರಿಸಿವೆ. ಕರ್ನಾಟಕದ ಬಹುತೇಕ ದೇವಾಲಯಗಳ ಈ ರೀತಿಯ ಭಿತ್ತಿ ಚಿತ್ರಗಳಿಂದ ಅಲಂಕರಣಗೊಂಡಿರುವ ಸಾಧ್ಯತೆ ಇದೆ.

ಕ್ರಿ.ಪೂ. ಕಾಲದಿಂದಲೇ ರಚನೆಯಾಗುತ್ತಲಿರುವ ಶಿಷ್ಟ ಪರಂಪರೆಯ ಭಿತ್ತಿ ಚಿತ್ರಕಲೆಯ ಜೊತೆಗೆ ಪ್ರಾಗೈತಿಹಾಸ ಕಾಲದಿಂದಲೇ ಜನಪದ ಭಿತ್ತಿ ಚಿತ್ರಕಲೆಯೂ ಬೆಳೆಯುತ್ತ ಬಂದಿದೆ. ಜನಪದ ಭಿತ್ತಿ ಚಿತ್ರಕಲೆಯೂ ಮನೆಗಳಲ್ಲಿ, ಮಠ, ಮಾನ್ಯಗಳಲ್ಲಿ, ದೇವಾಲಯಗಳಲ್ಲಿ, ತುಳಸೀಕಟ್ಟೆ, ಸಮಾಧಿ, ಗದ್ದುಗೆ, ಗರಡಿಮನೆ ಮುಂತಾದವುಗಳ ಮೇಲೆ ಅಲ್ಲದೇ ಹಬ್ಬ–ಹರಿದಿನ, ಮದುವೆ–ಮುಂಜಿವೆ, ಜಾತ್ರೆ–ಉತ್ಸವ, ಹೀಗೆ ಕೆಲವು ನಿರ್ಧಿಷ್ಟಪಡಿಸಿದ ಆಚರಣೆಯ ದಿನಗಳಲ್ಲಿ ರಚನೆಯಾಗುತ್ತ ಬಂದಿದೆ.[೯] ಹೀಗೆ ಈ ಭಿತ್ತಿ ಚಿತ್ರಕಲೆಯ ಪರಂಪರೆಯ ಇವತ್ತಿನವರೆಗೂ ರಚನೆಯಾಗುತ್ತಲೇ ಇದೆ. ಪ್ರಾಚೀನ ಕಾಲದಿಂದಲೂ ಪ್ರಾಗೈತಿಹಾಸಿಕ ಮತ್ತು ಜನಪದ, ಶಿಷ್ಟಪದ ಅಲ್ಲದೆ ಸಮ್ಮಿಶ್ರಣದ ಮಾದರಿಯ ಭಿತ್ತಿ ಚಿತ್ರಕಲೆಯು ವಿವಿಧ ಮಾಧ್ಯಮಗಳಲ್ಲಿ ರಚನೆಯಾಗುತ್ತ ಬೆಳವಣಿಗೆಯಾಗಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕ ಚರಿತ್ರೆಯಲ್ಲಿ ಉತ್ತರ ಮತ್ತು ದಕ್ಷಿಣ ಭಾಗಗಳ ರಾಜಕೀಯ, ಸಾಮಾಜಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಅದಕ್ಕೆ ಅನುಗುಣವಾಗಿ ಆಯಾ ಭಾಗದ ಜನಜೀವನ ರೂಪಗೊಂಡಿದೆ. ಇದರ ಜೊತೆಗೆ ಉತ್ತರ ಮತ್ತು ದಕ್ಷಿಣ ಭಾಗದ ಭೌಗೋಳಿಕ ಲಕ್ಷಣಗಳು ಭಿನ್ನವಾಗಿದ್ದು, ಆಯಾ ಭಾಗದ ನಾಗರೀಕತೆ, ನಂಬಿಕೆ, ಆಚರಣೆಗಳು ಮತ್ತು ಕಲಾ ಪ್ರಕಾರಗಳಂತೆ ಸಾಂಸ್ಕೃತಿಕ ಸಂಗತಿಗಳು ಭಿನ್ನ ರೀತಿಯಿಂದ ಬೆಳೆದುಬಂದಿವೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರ ಪರಂಪರೆಯನ್ನು ಗಮನಿಸಿದಾಗ ಅದು ವೈವಿಧ್ಯತೆಯಿಂದ ಕೂಡಿದ್ದು, ಬೇರೆ ಬೇರೆ ಪ್ರಭಾವಗಳಿಗೆ ಒಳಪಟ್ಟಿರುವುದು ಕಂಡುಬರುತ್ತದೆ. ಅಲ್ಲದೆ ವಿವಿಧ ಅರಸು ಮನೆತನಗಳು, ಸಂಸ್ಥಾನಿಕರು, ಅಧಿಕಾರಿಗಳು, ಧರ್ಮಾಧಿಕಾರಿಗಳು,

ಮಠ, ಮಾನ್ಯಗಳು, ಪ್ರಮುಖ ವ್ಯಕ್ತಿಗಳು ಈ ಭಾಗದ ಭಿತ್ತಿಚಿತ್ರ ಪರಂಪರೆಯನ್ನು ಬೆಳೆಸಿರುವುದು ಗೋಚರಿಸುತ್ತದೆ.

ದಕ್ಷಿಣ ಕರ್ನಾಟಕದ ಭಾಗದಲ್ಲಿನ ಭಿತ್ತಿ ಚಿತ್ರ ನೆಲೆಗಳು ಅನೇಕ ಕಡೆ ಹರಡಿಕೊಂಡಿದ್ದು ತಮ್ಮದೇ ಆದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಮತ್ತು ಐತಿಹಾಸಿಕ ಮಹತ್ವ ಹೊಂದಿವೆ. ಇದಲ್ಲದೆ ಕಲಾತ್ಮಕ ದೃಷ್ಟಿಯಿಂದಲೂ ಈ ಭಾಗದ ಭಿತ್ತಿ ಚಿತ್ರಗಳು ಕರ್ನಾಟಕ ಮಾತ್ರವಲ್ಲದೆ ಭಾರತದ ಕಲಾ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಮೈಲುಗಲ್ಲಾಗಿದೆ. ಇಂತಹ ಸಂಗತಿಗಳ ಜೊತೆಗೆ ಕಲಾತಾಂತ್ರಿಕತೆಯ ದೃಷ್ಟಿಯಿಂದ ಈ ಭಾಗದ ಭಿತ್ತಿ ಚಿತ್ರಗಳು ವೈವಿಧ್ಯತೆಯಿಂದ ಕೂಡಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಇಲ್ಲಿನ ಭಿತ್ತಿಚಿತ್ರ ರಚನೆಯಲ್ಲಿ ಹಲವಾರು ಪ್ರಭಾವಗಳು ಮತ್ತು ಶೈಲಿಗಳು ಮೇಳೈಸಿವೆ. ಈ ವೈವಿಧ್ಯತೆಯನ್ನು ಸ್ಥೂಲವಾಗಿ ಗಮನಿಸುವ ಮೂಲಕ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರ ನೆಲೆಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಕಟ್ಟಿಕೊಡುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ದಕ್ಷಿಣ ಕರ್ನಾಟಕದ ಭಾಗದಲ್ಲಿ ಪ್ರಮುಖವಾಗಿ ಹೊಯ್ಸಳರು, ಗಂಗರು, ಮೈಸೂರಿನ ಒಡೆಯರು, ಚಿತ್ರದುರ್ಗದ ನಾಯಕರು ಅಲ್ಲದೆ ಕೆಲವು ಚಿಕ್ಕ-ಪುಟ್ಟ ಸಂಸ್ಥಾನಿಕರು ತಮ್ಮ ಆಡಳಿತದ ವ್ಯಾಪ್ತಿಯ ಪ್ರದೇಶದಲ್ಲಿ ಭಿತ್ತಿ ಚಿತ್ರಗಳನ್ನು ರಚಿಸಲು ಪ್ರೋತ್ಸಾಹ ನೀಡಿದ್ದಾರೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಮುಖ್ಯವಾಗಿ ಬೆಂಗಳೂರು, ಮಂಡ್ಯ, ಮೈಸೂರು, ಕೊಡಗು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಭಿತ್ತಿಚಿತ್ರ ನೆಲೆಗಳು ಕಂಡುಬರುತ್ತವೆ. ಈ ಭಾಗದ ಭಿತ್ತಿ ಚಿತ್ರಗಳು ದೇವಾಲಯ, ಮಠ, ಅರಮನೆ, ಮಂಟಪಗಳು, ಚರ್ಚುಗಳು ಮತ್ತು ಸ್ಥಿತಿವಂತರ ಮನೆಗಳಲ್ಲಿ ರಚನೆಯಾಗಿರುವುದು ಕಂಡುಬರುತ್ತದೆ. ಅವುಗಳ ಸ್ಥೂಲವಾದ ಹಿನ್ನೆಲೆಯನ್ನು ಈ ಕೆಳಗಿನಂತೆ ವಿವೇಚಿಸಬಹುದು.

ಬೆಂಗಳೂರು ಜಿಲ್ಲೆಯಲ್ಲಿ ಬೆಂಗಳೂರು, ಮಾಗಡಿ ತಾಲೂಕುಗಳಲ್ಲಿ ಭಿತ್ತಿಚಿತ್ರ ನೆಲೆಗಳಿವೆ. ಬೆಂಗಳೂರಿನಲ್ಲಿರುವ ಟಿಪ್ಪುವಿನ ಅರಮನೆಯಲ್ಲಿ ವರ್ಣ ಭಿತ್ತಿ ಚಿತ್ರಗಳಿವೆ. ಈ ಚಿತ್ರಗಳ ರಚನೆಗೆ ಟಿಪ್ಪುಸುಲ್ತಾನನ ಪ್ರೋತ್ಸಾಹವಿದೆ. ಇಲ್ಲಿ ಮೊಗಲ್ ಶೈಲಿ ಪ್ರಭಾವವಿರುವ ಚಿತ್ರಗಳಿದ್ದು, ಕೆಂಪು ಮತ್ತು ಹಳದಿ ವರ್ಣವನ್ನು ಪ್ರಮುಖವಾಗಿ ಬಳಸಲಾಗಿದೆ. ಯುದ್ಧದ ದೃಶ್ಯಗಳು, ರಾಜ-ರಾಣಿಯರು, ರಾಜ ಪರಿವಾರದವರು, ನಕ್ಷೆ ವಿನ್ಯಾಸಗಳು, ಅಲಂಕಾರಿಕ ಗಿಡಮರಗಳು, ಹೂಕುಂಡಗಳು ಇಲ್ಲಿ ರಚನೆಯಾಗಿವೆ. ಬಹುಮಟ್ಟಿನ ಚಿತ್ರಗಳು ನಾಶವಾಗಿ ಕೆಲವು ಚಿತ್ರಗಳು ಮಾತ್ರ ಉಳಿದಿವೆ. ಮಾಗಡಿ ತಾಲೂಕಿನಲ್ಲಿರುವ ಸೋಮೇಶ್ವರ ದೇವಾಲಯದಲ್ಲಿ ಕ್ರಿ.ಶ. ೧೭೧೨ರ ಸುಮಾರಿಗೆ ರಚನೆಯಾದ ಚಿತ್ರಗಳಿದ್ದು, ಶೈವ ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳನ್ನು ಒಳಗೊಂಡಿವೆ. ಆದರೆ ಪ್ರಸ್ತುತ ಇಲ್ಲಿ ಚಿತ್ರಗಳು ಕಂಡುಬರುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಶ್ರೀರಂಗಪಟ್ಟಣ, ನಾಗಮಂಗಲ ತಾಲೂಕುಗಳಲ್ಲಿ ಭಿತ್ತಿ ಚಿತ್ರಗಳಿವೆ. ಶ್ರೀರಂಗಪಟ್ಟಣದ ದರಿಯಾ-ದೌಲತ್ ಅರಮನೆಯನ್ನು ಟಿಪ್ಪುವಿನ ಕಾಲಕ್ಕೆ ನಿರ್ಮಿಸಲಾಗಿದ್ದು, ಒಳಭಾಗದಲ್ಲಿ ಭಿತ್ತಿ ಚಿತ್ರಗಳಿಂದ ಅಲಂಕರಿಸಲಾಗಿದೆ. ಅರಮನೆಯ ಒಳಭಾಗದ ನಾಲ್ಕು ಬದಿಯ ಗೋಡೆಗಳು ಚಿತ್ರಗಳಿಂದ ತುಂಬಿಕೊಂಡಿವೆ. ಯುದ್ಧದ ದೃಶ್ಯಗಳು, ಬೇಟೆಯ ದೃಶ್ಯಗಳು, ವಿವಿಧ ಪ್ರಾದೇಶಿಕ ರಾಜರು, ರಾಜ ಪರಿವಾರದವರು, ಯುದ್ದದ ದೃಶ್ಯಗಳು, ಸಾಮಾಜಿಕ ಚಿತ್ರಗಳು ಮುಂತಾದ ಚಿತ್ರಗಳಲ್ಲದೇ ಅಲಂಕಾರಿಕ ಗಿಡ, ಮರಗಳು, ಹೂಕುಂಡಗಳು, ನಕ್ಷೆ ವಿನ್ಯಾಸಗಳು, ಖುರಾನಿನ ಬರಹಗಳು ಕಂಡುಬರುತ್ತವೆ. ಅಲ್ಲದೇ ನಾಗಮಂಗಲದಲ್ಲಿರುವ ಸೌಮ್ಯಕೇಶವ ದೇವಾಲಯದಲ್ಲಿ ರಚಿಸಲಾಗಿರುವ ಚಿತ್ರಗಳು ಇದೇ ಕಾಲಾವಧಿಗೆ ಸೇರುತ್ತವೆ.

ಮೈಸೂರು ಜಿಲ್ಲೆಯಲ್ಲಿ ಮೈಸೂರಿನ ಅರಮನೆ ಮತ್ತು ಅರಮನೆಯ ಆವರಣದಲ್ಲಿರುವ ದೇವಾಲಗಳಲ್ಲಿ ಭಿತ್ತಿಚಿತ್ರಗಳಿವೆ. ಮೈಸೂರಿನಲ್ಲಿ ಒಡೆಯರ ಕಾಲಕ್ಕೆ ರಚಿಸಲಾದ ಭಿತ್ತಿ ಚಿತ್ರಗಳ ಹಲವಾರು ನೆಲೆಗಳಿವೆ. ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ಶ್ವೇತಾವರಹಸ್ವಾಮಿ ದೇವಾಲಯ, ಪ್ರಸನ್ನ ವೆಂಕಟರಮಣ ದೇವಾಲಯ ಮತ್ತು ಅಂಬುಜವಲ್ಲಿ ದೇವಾಲಯದಲ್ಲಿ ಚಿತ್ರಗಳು ಕಂಡುಬರುತ್ತವೆ. ಇಲ್ಲಿನ ಚಿತ್ರಗಳು ಮೈಸೂರು ಅರಸರ ಪ್ರೋತ್ಸಾಹದ ಅಡಿಯಲ್ಲಿ ರಚನೆಗೊಂಡಿರುವುದು ಮಹತ್ವದ ವಿಷಯವಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕೊಳ್ಳೇಗಾಲ, ಗುಂಡ್ಲುಪೇಟೆ ತಾಲೂಕುಗಳಲ್ಲಿ ಭಿತ್ತಿಚಿತ್ರಗಳ ನೆಲೆಗಳಿವೆ. ಚಾಮರಾಜನಗರದ ಚಾಮರಾಜೇಶ್ವರಿ ದೇವಾಲಯ, ಜನ್ಮಮಂಟಪ, ಪಾರ್ಶ್ವನಾಥ ಬಸದಿಗಳಲ್ಲಿ ಮೈಸೂರು ಒಡೆಯರ ಕಾಲದ ಭಿತ್ತಿ ಚಿತ್ರಗಳಿವೆ. ಇವು ೧೮ನೇ ಶತಮಾನದಲ್ಲಿ ರಚನೆಯಾಗಿವೆ. ಅಲ್ಲದೇ ಇದೇ ತಾಲೂಕಿನ ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ, ಕುಲಗಾಣದ ಬಸವೇಶ್ವರ ದೇವಾಲಯಗಳಲ್ಲಿ ಚಿತ್ರಗಳು ೧೯ನೆಯ ಶತಮಾನದಲ್ಲಿ ರಚನೆಯಾಗಿವೆ. ಪ್ರಸ್ತುತ ನಾಶಹೊಂದಿರುತ್ತವೆ.

ಹಾಸನ ಜಿಲ್ಲೆಯಲ್ಲಿ ಹೊಯ್ಸಳರ ಕಾಲದ ಚಿತ್ರಗಳ ಜೊತೆಗೆ ಮೈಸೂರು ಅರಸರ ಕಾಲದ ಭಿತ್ತಿ ಚಿತ್ರಗಳ ನೆಲೆಗಳು ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರ ತಾಲೂಕುಗಳಲ್ಲಿ ಭಿತ್ತಿ ಚಿತ್ರಗಳು ಕಂಡುಬರುತ್ತವೆ. ಹಾಸನದ ಹಾಸನಾಂಭ ದೇವಾಲಯ.(ಸದ್ಯ ಭಿತ್ತಿಚಿತ್ರಗಳು ನಾಶಹೊಂದಿವೆ.) ಶ್ರವಣಬೆಳಗೊಳದ ಜೈನ ಮಠ, ಪೋಚಾವ್ವೆ ಬಸದಿ, ಚಾವುಂಡರಾಯ ಬಸದಿ, ಚಂದ್ರಗಿರಿಯ ಬೆಟ್ಟದ ಮೇಲಿರುವ ಮಂಟಪ, ಶಾಂತಿನಾಥ ಬಸದಿಗಳಲ್ಲಿ ಭಿತ್ತಿಚಿತ್ರಗಳಿವೆ. ಇವುಗಳಲ್ಲಿ ಮಠದಲ್ಲಿ ಇರುವ ಭಿತ್ತಿ ಚಿತ್ರಗಳು ಮೈಸೂರು ಒಡೆಯರ ಕಾಲಕ್ಕೆ ರಚನೆಯಾಗಿದ್ದರೆ ಇನ್ನುಳಿದ ಚಿತ್ರಗಳು ಹೊಯ್ಸಳರ ಕಾಲದಲ್ಲಿ ರಚನೆಗೊಂಡಿವೆ.

ಅದೇ ರೀತಿ ಚನ್ನರಾಯಪಟ್ಟಣ ತಾಲೂಕಿನಲ್ಲಿ ಅನೇಕ ನೆಲೆಗಳಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಗುರುತಿಸಲಾಗಿದೆ. ಉತ್ತರಕನ್ನಡದ ಜಿ.ಕೆ.ಹಳ್ಳಿಯಲ್ಲಿಯೂ ಕೂಡ ಸಾಕಷ್ಟು ಭಿತ್ತಿ ಚಿತ್ರಗಳು

ಸಿಕ್ಕಿರುತ್ತವೆ ಅವುಗಳನ್ನು ಕೂಡ ಇಲ್ಲಿ ಪರಿಗಣಿಸಲಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗಗಳಾಗಿ ಹಂಚಿ ಹೋಗಿದ್ದು, ದಕ್ಷಿಣ ಕರ್ನಾಟಕದಲ್ಲಿ ಒಳಗೊಳ್ಳುವ ಭಿತ್ತಿಚಿತ್ರ ನೆಲೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಜಿಲ್ಲೆಯ ಹಿರಿಯೂರಿನ ಶ್ರೀತೇರುಮಲ್ಲೇಶ್ವರ ದೇವಾಲಯ ಹಾಗೂ ಚಿತ್ರದುರ್ಗದ ಅಂಕಲಿಗಿ ಮಠದಲ್ಲಿ ಭಿತ್ತಿ ಚಿತ್ರಗಳನ್ನು ನಾವು ಕಾಣಬಹುದು. ಹಿರಿಯೂರಿನಲ್ಲಿ ಶೈವ, ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳು ರಚನೆಯಾಗಿದ್ದರೆ ಅಂಕಲಗಿ ಮಠದಲ್ಲಿ ಶೈವ ಚಿತ್ರಗಳು ಕಂಡುಬರುತ್ತವೆ.

ಭಾರತ ಹಲವಾರು ವಿಶಿಷ್ಟ ಧರ್ಮಗಳಿಗೆ ನೆಲೆಯಾಗಿದ್ದು, ಅವುಗಳಲ್ಲಿ ಪ್ರಮುಖವಾದ ಬೌದ್ಧ, ಜೈನ್, ಶೈವ, ವೈಷ್ಣವ ಇತ್ಯಾದಿಗಳ ಧರ್ಮವನ್ನು ಕಾಣುತ್ತೇವೆ. ಧರ್ಮದ ಚೌಕಟ್ಟನ್ನು ಹಾಕಿಕೊಂಡಾಗ, ಧಾರ್ಮಿಕ ಆಚರಣೆಗಳು ಕಲೆಯ ರೂಪ ತಾಳುವುದನ್ನು ನೋಡುತ್ತೇವೆ. ಎಷ್ಟೋ ಸಲ ಹಿಂದಿನಿಂದ ಬಂದಿದೆ. ಅದನ್ನು ಬಿಡಬಾರದೆಂದು ಆಚರಿಸುವ ಅನೇಕ ಆಚರಣೆಗಳು ನಮ್ಮ ಕಣ್ಮುಂದಿವೆ. ಈ ಧರ್ಮದ ಸಂಪ್ರದಾಯಗಳ ಪ್ರಭಾವಕ್ಕೆ ಸಿಲುಕಿ ದೇವರ ಆರಾಧನೆಗೆ ತೊಡಗಿ ದೇವರನ್ನು ಸ್ತುತಿಸಲು ನಲಿಸಲು ದೇವರ ಕಣ್ಣಿಗೆ ಹಬ್ಬ ಮಾಡಲು ಸಾಹಿತ್ಯ, ನೃತ್ಯ, ಅಲಂಕಾರದಂತಹ ಕಲೆಗಳು ಹುಟ್ಟಿ ಬಂದವು. ಒಟ್ಟಾರೆಯಾಗಿ ಕಲೆಯ ಉಗಮವನ್ನು ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ದೈವದ ಆರಾಧನೆಯ ಹಿನ್ನೆಲೆಯಲ್ಲಿ ಪರಿಗಣಿಸಬೇಕಾಗುತ್ತದೆ. ಪ್ರತಿಯೊಂದು ಆಚರಣೆಗೆ ಒಂದೊಂದು ಪ್ರತಿರೂಪವನ್ನು ಸೃಷ್ಟಿಸುವುದು ಜನಪದದ ವೈಶಿಷ್ಟವಾಗಿದೆ. ಹಾಗೆಯೇ ಆಯಾ ಧರ್ಮದಲ್ಲಿ ವಿಶೇಷವಾದ ಮೂರ್ತಿ ಅಥವಾ ಚಿತ್ರಪಟಗಳನ್ನು ಪೂಜಿಸುವುದು ಆರಾಧನೆಯ ಸಂಕೇತವಾಗಿದೆ. ಸ್ಪಷ್ಟವಾಗಿ ತಿಳಿದುಕೊಂಡು ಶ್ರದ್ಧೆಯಿಂದ ಆಚರಿಸಿದಾಗ ಜೀವಿಯಲ್ಲಿ ವಿಕಾಸ ಮತ್ತು ಪರಿವರ್ತನೆಯನ್ನು ಉಂಟು ಮಾಡುವ ಸತ್ಯಗಳ ಸಮೂಹವೇ ಧರ್ಮವೆಂದು ಸೈದ್ಧಾಂತಿಕವಾಗಿ ನಿರೂಪಿಸಬಹುದು. ನಮ್ಮ ಶೀಲ ಸ್ವಭಾವಗಳು ನಮ್ಮ ನಂಬಿಕೆಗೆ ಅನುಗುಣವಾಗಿ ರೂಪುಗೊಳ್ಳುತ್ತವೆ. ಇದೇ ಧರ್ಮದ ಮೂಲದ ಸತ್ಯ ನಮ್ಮ ಅಂತರಂಗವನ್ನು ಶುದ್ಧೀಕರಿಸುವ ಶ್ರದ್ಧೆ ಶಕ್ತಿಯೇ ಧರ್ಮ. ಈ ಕಾರಣದಿಂದ ಶ್ರದ್ಧೆಯು ಧರ್ಮದ ಮೂಲ ಸತ್ಯವಾಗಿದೆ. ಈ ನೆಲೆಗಟ್ಟಿನಲ್ಲಿ ಭಾರತೀಯ ಮನೋ ಭೂಮಿಕೆಯಲ್ಲಿ ಧರ್ಮಗಳು ಸ್ಥಾನ ಪಡೆದಿದೆ. ಆಚರಣೆಯಲ್ಲಿ ಹಾಸುಹೊಕ್ಕಾಗಿ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಇದಕ್ಕೆ ಪ್ರತೀಕವಾಗಿ ಅನೇಕ ಧರ್ಮಗಳು ಉದಯಿಸಿವೆ. ಪ್ರಧಾನವಾಗಿ ನಾಗರಿಕತೆಯ ಕಾಲದಿಂದಲೂ ಇಲ್ಲಿ ಶೈವ, ವೈಷ್ಣವ, ಬೌದ್ಧ, ಜೈನ ಇನ್ನಿತರ ಧರ್ಮಗಳು ಅಸ್ಥಿತ್ವದಲ್ಲಿದ್ದು ಕಲೆ ಮತ್ತಿತರ ಸಂಗತಿಗಳಲ್ಲಿ ತಮ್ಮ ಅಸ್ಥಿತ್ವವನ್ನು ಸಾಬೀತು ಪಡಿಸಿವೆ. ಕಲೆಯ ಒಂದು ಪ್ರಕಾರವೇ ಆಗಿರುವ ಭಿತ್ತಿ ಚಿತ್ರಕಲೆಯಲ್ಲಿಯೂ ಮೇಲಿನ ಸಂಗತಿಗಳು ಪುರಾವೆಗಳಾಗಿ ಕಾಣಸಿಗುತ್ತವೆ.

ಭಿತ್ತಿ ಚಿತ್ರಕಲೆಯಲ್ಲಿ ಬೌದ್ಧಧರ್ಮ :

ಭಾರತದಲ್ಲಿ ಮೊದಲಿಗೆ ದೊರೆಯುವ ಶಿಷ್ಟ ಸಂಪ್ರದಾಯದ ಚಿತ್ರ ಅಜಂತೆಯಲ್ಲಿದ್ದು ಅದು ಬೌದ್ಧ ಮತೀಯವಾಗಿಯೇ ಇದೆ. ಬೌದ್ಧ ಚಿತ್ರಕಲೆಯು ಉಗಮದ ಬಗ್ಗೆ ದಿವ್ಯಾವಧಾನದಲ್ಲಿ

ಸ್ವಾರಸ್ಯಕರವಾದ ನಿರೂಪಣೆ ದೊರೆಯುತ್ತದೆ. ಬೌದ್ಧಧರ್ಮ ಪ್ರಸರಿಸಿದ ಕಡೆಗಳಲ್ಲಿ ಎರಡರಿಂದ ಎಂಟನೆಯ ಶತಮಾನದವರೆಗೆ ಅದರ ಧಾರ್ಮಿಕ ಚಿತ್ರಗಳ ರಚನೆಯಾದಂತೆ ತಿಳಿದುಬರುತ್ತದೆ. ಎರಡರಿಂದ ಏಳನೆಯ ಶತಮಾನದವರೆಗೆ ಅಜಂತ ಹಾಗೂ ಬಾಗ್‌ಗಳಲ್ಲಿ ಬೌದ್ಧ ಚಿತ್ರಗಳ ರಚನೆ ಪ್ರಸಿದ್ಧವಾಗಿದೆ.[೩]

ಅಜಂತದಲ್ಲಿ ಬೆಟ್ಟವನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಭಿತ್ತಿ ಚಿತ್ರಗಳನ್ನು ಬರೆಯುವ ಕಾರ್ಯವು ಕ್ರಿ.ಪೂ.೩ನೆಯ ಶತಮಾನದಿಂದ ಪ್ರಾರಂಭವಾಗಿ ಕ್ರಿ.ಶ.೭ನೆಯ ಶತಮಾನದರೆಗೂ ಮುಂದುವರೆದಿದೆ. ಶಾತವಾಹನರು, ನಾಕಾಟಕರು ಮತ್ತು ಬಾದಾಮಿಯ ಚಾಲುಕ್ಯ ಅರಸರು ಬೌದ್ಧ ಭಿಕ್ಷುಗಳಿಗಾಗಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದರು. ಬೌದ್ಧರು ಹೀನಾಯಾನ ಪಂಗಡ ಮತ್ತು ಮಹಾಯಾನ ಪಂಗಡಗಳಿವೆ. ಹೀನಾಯಾನ ಪಂಥದಲ್ಲಿ ಬುದ್ಧನ ಸಂಕೇತಗಳಿಂದ ಪಾದಗಳು, ಧರ್ಮಚಿತ್ರ, ದಂತಗಳು ಇವುಗಳಿಗೆ ಮಾತ್ರ ಆರಾಧನೆ ಸಲ್ಲತಕ್ಕದ್ದು. ಮಹಾಯಾನದಲ್ಲಿ ಬುದ್ಧನ ಜೀವಿತಕ್ಕೆ ಸಂಬಂಧಿಸಿದ ಜಾತಕ ಕಥೆಗಳು ಆರ್ಯದೇವನ ಜಾತಕಮಾಲೆ ಅಶ್ವಘೋಷನ ಬುದ್ಧಚರಿತೆ ಸೌಂದರಾನಂದ, ಸಾರಿಪುತ್ರ ಪ್ರಕರಣ, ಭಿಕ್ಷುಗಳ ಜೀವಿತಗಳು, ಚರಿತ್ರಾತ್ಮಕ ಘಟನೆಗಳು, ಪ್ರಕೃತಿ ಸೌಂದರ್ಯವನ್ನು ಸಾರುವ ಮೃಗ, ಪಕ್ಷಿ, ವೃಕ್ಷ ಮುಂತಾದವು ವರ್ಣಚಿತ್ರಗಳಲ್ಲಿ ಸುಂದರವಾಗಿ ರೂಪುಗೊಂಡಿದೆ. ತುಮಕೂರು ಬಳಿಯ ಮಿಂಚುಕಲ್ಲು, ಗೊಲ್ಲಹಳ್ಳಿ, ಕೊಳ್ಳೆಗಾಲದ ಮಂಟಪ, ಇತ್ಯಾದಿ ಕೆಲವು ಕಡೆಗಳಲ್ಲಿ 'ಬೌದ್ಧವತಾರ'ದ ಚಿತ್ರಗಳನ್ನು ಕಾಣಬಹುದಿತ್ತು ಪ್ರಸ್ತುತ ಚಿತ್ರಗಳು ಉಳಿದಿರುವುದಿಲ್ಲ. ಆದರೆ ಇಪ್ಪತ್ತನೆ ಶತಮಾನದಲ್ಲಿ ರಾಜ್ಯದ ನಾನಾಕಡೆ ಟಿಬೇಟಿಯನ್ನರ ನೆಲೆಗಳು ಹುಟ್ಟಿಕೊಂಡಿವೆ. ಅವುಗಳೆಂದರೆ ಬೈಲುಕುಪ್ಪೆ, ಒಡೆಯರಪಾಳ್ಯ, ಗುರುಪುರ ಮುಂಡಗೋಡ ಈ ಭಾಗದಲ್ಲಿ ಸಾಕಷ್ಟು ಟಿಬೇಟಿಯನ್ನರು ನೆಲೆಸಿರುತ್ತಾರೆ. ಇಲ್ಲಿ ಬುದ್ಧನ ಮಂದಿರವನ್ನು ಸ್ಥಾಪಿಸಿ ಆ ಕಟ್ಟಡಗಳ ತುಂಬೆಲ್ಲಾ ಭಿತ್ತಿ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ಡಾ.ಕೃಷ್ಣೆಗೌಡ ಎಚ್.ಎನ್ ಅವರು 'ಕರ್ನಾಟಕದ ಬೌದ್ಧಚಿತ್ರಕಲೆ' ಎಂಬ ಸಂಶೋಧನ ಅಧ್ಯಯನ ಕೈಗೊಂಡು ಪೂರ್ಣಗೊಳಿಸಿರುವ ಹಿನ್ನಲೆಯಲ್ಲಿ ಇದರ ಕುರಿತು ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಆ ಗ್ರಂಥದಲ್ಲಿ ಪಡೆಯಬಹುದು. ಸಂಪೂರ್ಣವಾಗಿ ಅಧ್ಯಯನವಾಗಿರುವ ಹಿನ್ನಲೆಯಲ್ಲಿ ಈ ವಿಷಯದ ಹಿನ್ನಲೆ ಮತ್ತು ಚಿತ್ರಗಳ ವಸ್ತು ವಿಷಯವನ್ನು ಇಲ್ಲಿ ವಿಸ್ತಾರವಾಗಿ ಸೂಚಿಸಿರುವುದಿಲ್ಲ.

ಭಿತ್ತಿ ಚಿತ್ರಗಳಲ್ಲಿ ಜೈನಧರ್ಮ :

ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ಸಂಬಂಧ ಪಟ್ಟ ಭಿತ್ತಿ ಚಿತ್ರಗಳು ಹಲವಾರು ಕಡೆಗಳಲ್ಲಿ ಕಾಣಬಹುದು. ಜೈನ ಕಾವ್ಯಗಳಲ್ಲಿ ಚೀರಘಟ್ಟ ಎಂಬ ಚಿತ್ರಕಲಾವಿದನೊಬ್ಬನ ಪ್ರಸ್ತಾಪ ಬಂದಿದ್ದು ಅದು ವಿದ್ವಾಂಸರ ಗಮನ ಸೆಳೆದಿದೆಯಲ್ಲದೆ ಆತನ 'ಚಿತ್ರಕಲಾ ನೈಪುಣ್ಯ'ಕ್ಕೆ ಸಂಬಂಧಿಸಿದಂತೆ ಹಲವಾರು ವಿವರಗಳು ಕಾವ್ಯಗಳಲ್ಲಿ ದೊರೆಯುತ್ತವೆ. ಜೈನ ಸಾಹಿತ್ಯದಲ್ಲಿ ಚಿತ್ರಕಲೆಯ ವಿವರಗಳು ಕಂಡು ಬಂದ ಕಾಲದಲ್ಲಿಯೇ ಜೈನರಲ್ಲಿ ಚಿತ್ರಕಲೆಯನ್ನು ರಚಿಸುವ ಪರಿಕಲ್ಪನೆ ಬೆಳೆದು ಬಂತು.

ಪ್ರಸ್ತುತ ದೊರೆಯುವ ಮೊದಲ ಜೈನ್‌ಪರ ಚಿತ್ರವಾದ ರಾಜಸ್ತಾನದಲ್ಲಿ ೧೦೬೦ರಲ್ಲಿ ರಚಿತವಾದ ಒಘನಿರ್ಯುಕ್ತಿಯಲ್ಲಿರುವ ಚಿತ್ರಗಳ ಮೇಲೆ ಅಜಂತ ಹಾಗೂ ಎಲ್ಲೋರದ ಮೊದಲ ಚಿತ್ರಗಳ ಪ್ರಭಾವ ಬಿದ್ದಿದ್ದೆಯೆಂದು ತಿಳಿಸುವ ಸರಯುದೋಸಿ ಅವರು ಮುಂದಿನ ಮೂರು ಶತಮಾನಗಳು ತಾಳೆ ಅಥವಾ ಭೂರ್ಜ್ವ ಪತ್ರಗಳ ಮೇಲೆ ಕೆಲವು ಚಿತ್ರಗಳು ಹಾಗೂ ಓಲೆಗರಿ ಪುಸ್ತಕದ ಮೇಲಿನ ಮರದ ಹಲಗೆಯಲ್ಲಿ ಹಲವು ಜೈನ್ ಧಾರ್ಮಿಕ ಚಿತ್ರಗಳು ಇರುವುದಾಗಿ ತಿಳಿಸುತ್ತಾರೆ. ಪಶ್ಚಿಮ ಭಾರತದಲ್ಲಿ ೧೩೫೦ರವರೆಗೂ ಕೆಲವೇ ಓಲೆಗರಿ ಮೇಲಿನ ಚಿತ್ರಗಳು ದೊರಕಿದ್ದು ಮೊದಲ ಚಿತ್ರಗಳಲ್ಲಿ ರೇಖಾ ಚಿತ್ರವೇ ಪ್ರಧಾನವಾಗಿದ್ದು ಅಲ್ಲಲ್ಲಿ ತೆಳುವಾದ ಬಣ್ಣಗಳನ್ನು ಹಾಕಿದ್ದು ಹನ್ನೆರಡನೆಯ ಶತಮಾನದ ವೇಳೆಗೆ ಭಿತ್ತಿ ಚಿತ್ರಗಳಿಗೆ ಕೆಂಪು ಅಥವಾ ಶ್ಯಾಮ ವರ್ಣವನ್ನು ಗಾಢವಾಗಿ ಲೇಪಿಸಿ ಅಂಕಣಗಳಂತೆ ರೂಪಿಸಿಕೊಂಡಿರುವುದು. ಜೈನ ಚಿತ್ರಗಳ ಮೊದಲ ಅವಧಿಯ ಚಿತ್ರಗಳೊಂದಿಗೆ ಮೂಡಬಿದಿರೆಯ ಧವಳತ್ರಯಗಳ ಚಿತ್ರಗಳನ್ನು ಪರಿಗಣಿಸಬಹುದು.[೪] ಮೈಸೂರು ಅರಸರ ಕಾಲದಲ್ಲಿ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದಾಗ ಚಿತ್ರ ರಚಿಸಿದ್ದಲ್ಲದೆ ಮೈಸೂರು ಅರಸರ ಕೆಲವು ಜೈನ ಕಟ್ಟಡಗಳನ್ನು ಕಟ್ಟಿಸಿ ಚಿತ್ರ ರಚಿಸಿರುವುದುಂಟು. ಅವುಗಳಲ್ಲಿ ಮುಖ್ಯವಾಗಿ.

* ಜೈನ ಧರ್ಮದ ಸಂಬಂಧಿಸಿದ ಭಿತ್ತಿಚಿತ್ರಗಳನ್ನು ಹಾಸನದ ಹಾಸನಾಂಬ ದೇವಾಲಯದಲ್ಲಿ ಕೆಲವು ಜೈನ ಧಾರ್ಮಿಕ ಚಿತ್ರಗಳು ಇದ್ದವು ಪ್ರಸ್ತುತ ಇರುವುದಿಲ್ಲ.

* ಕಾರ್ಕಳದ ಚತುರ್ಮುಖ ಬಸದಿಯ ಬಳಿಯ ಜೈನಮಠದಲ್ಲಿ ಇರುವ ತೊಟ್ಟಿಯ ಬಲಭಾಗದ ಕೋಣೆಯ ಎದುರಿಗೆ ಗೋಡೆಯಲ್ಲಿ ಚಿತ್ರಗಳಿವೆ. ಅವು ಅಷ್ಟಾಗಿ ಸ್ಪಷ್ಟವಾಗಿರುವುದಿಲ್ಲ.

* ಮೂಡಬಿದಿರೆಯ ಜೈನಮಠದ ಬಸ್ತಿಯಲ್ಲಿ ಕೆಲವು ಭಿತ್ತಿಚಿತ್ರಗಳಿವೆ. ಒಳಗಿನ ಗರ್ಭಗುಡಿಯ ಮುಂದಿನ ಅಂಕಣದ ಮೂರು ಗೋಡೆಗಳಲ್ಲಿ ಮೇಲೆ ಉದ್ದಕ್ಕೂ ಕುಳಿತಿರುವ ಭಂಗಿಯಲ್ಲಿ ಇಪ್ಪತ್ತುನಾಲ್ಕು ತೀರ್ಥಂಕಾರರನ್ನು ಕಾಣಬಹುದಾದರೂ ಅವುಗಳಲ್ಲಿ ಸ್ಪಷ್ಟತೆಯಿಲ್ಲ.

* ಜೈನ ಚಿತ್ರಗಳ ವಿಪುಲ ಸಂಗ್ರಹ ಇರುವುದು ಶ್ರವಣಬೆಳಗೊಳದ ಶ್ರೀಮಠದಲ್ಲಿದೆ. ಜೈನ ಧಾರ್ಮಿಕ ಚಿತ್ರಗಳು ಮತ್ತು ಕಥೆಗಳು ನಿರೂಪಣಾ ಭಿತ್ತಿಚಿತ್ರಗಳು ಇವೆ.

ಭಿತ್ತಿ ಚಿತ್ರಗಳಲ್ಲಿ ಶೈವಧರ್ಮ :

ಅಜಂತೆಯ ಬೌದ್ಧ, ಸಿತ್ತನ್ನವಾಸಲ್‌ನಲ್ಲಿ ಜೈನ ಹಾಗೂ ಬಾದಾಮಿಯಲ್ಲಿ ವೈಷ್ಣವ ಪರವಾದ ಗುಹಾಚಿತ್ರಗಳು ದೊರೆತಂತೆ ದಕ್ಷಿಣ ಭಾರತದಲ್ಲಿ ಶೈವಪರವಾದ ಗುಹಾಚಿತ್ರಗಳು ದೊರೆಯುವುದಿಲ್ಲವೆಂದು ವಿದ್ವಾಂಸರ ಅಭಿಪ್ರಾಯ. ಮೊದಲಿನ ಗುಹಾಲಯಗಳಲ್ಲಿ 'ದೇವರು' ಇರಬಹುದಾದ ಜಾಗದಲ್ಲಿ ಚಿತ್ರ ರಚಿಸುತ್ತಿದ್ದರೆಂದೂ ಇಂದು ಚಿತ್ರ ಅಥವ ಮೂರ್ತಿ ಇಲ್ಲವಾದ್ದರಿಂದ ಆ ಗುಹೆಯನ್ನು ಯಾವ ದೇವರಿಗಾಗಿ ರಚಿಸಿದ್ದರೆಂದು ಶಾಸನಗಳಲ್ಲಿ ಇರುವ ಪಾಠಗಳಿಂದಷ್ಟೇ

ತಿಳಿಯಬಹುದೆಂದೂ; ಉದಾಹರಣೆಗೆ ಮಂಡಗಪಟ್ಟುವಿನಲ್ಲಿ ಗುಹಾಲಯವನ್ನು ತ್ರಿಮೂರ್ತಿಗೆ ಅರ್ಪಿಸಿದ್ದು, ಅಲ್ಲಿ ಮೂರು ಗರ್ಭಗೃಹಗಳಂತಹ ರಚನೆ ಕಂಡುಬರುವುದರಿಂದ ಈ ಮೂರರಲ್ಲಿ ಮೂರು ಮೂರ್ತಿಗಳ ಚಿತ್ರಗಳನ್ನು (ಶಿವ, ವಿಷ್ಣು, ಬ್ರಹ್ಮ) ರಚಿಸಿರಬಹುದೆಂದು ಕೆ.ಆರ್.ಶ್ರೀನಿವಾಸನ್[೫] ಅಭಿಪ್ರಾಯ ಪಡುತ್ತಾರೆ. ಇದು ಒಂದನೇ ಮಹೇಂದ್ರ ವರ್ಮನ ಕಾಲದ್ದಾಗಿದ್ದು (೬೦೦-೬೩೦) ಇಲ್ಲಿ ರಚಿಸಿರಬಹುದಾದ ಶಿವನ ಚಿತ್ರವೇ ಶೈವಪರವಾದ ಶಿಷ್ಟ ಚಿತ್ರಗಳಲ್ಲಿ ಪ್ರಥಮವೆನ್ನಬಹುದು.

ಬಳ್ಳಾರಿಯ ಕಪ್ಪಗಲ್ಲಿನ ಆದಿಮ ಗುಹಾ ಚಿತ್ರವೊಂದರಲ್ಲಿ ವೃಷಭವೊಂದು ಲಿಂಗದ ಮುಂದೆ ಕುಳಿತಂತೆ ಚಿತ್ರಿತವಾಗಿದೆ. ಇದರಿಂದ ಲಿಂಗಪೂಜೆಯ ಕಲ್ಪನೆಯ ಶಿಲಾಯುಗದ[೬] ಕಾಲದಿಂದಲೇ ಗುರುತಿಸಬಹುದು. ಶೈವ ಸಂಬಂಧಿಯಾದ ಕಥೆಯನ್ನು ಒಂದೇ ಅಂಕಣದಲ್ಲಿ ಒಂದೇ ಸಂಯೋಜನೆಯಲ್ಲಿ ತೋರಿಸಿರುವುದೇ ಆಧಿಕವಾಗಿದೆ. ದಶಾವತಾರಗಳನ್ನು ಹತ್ತು ಅಂಕಣಗಳಲ್ಲಿ ಮುಗಿಸುವುದು ಪದ್ಧತಿ. ಪಂಚವಿಂಶತಿಯ ಅಂಕಣಗಳನ್ನು ಹಂಪೆ. ತುಮಕೂರು ಜಿಲ್ಲೆಯಲ್ಲಿ ಇರುವ ಸಿಬಿ ಹಾಗೂ ಕೆರೆಗೋಡು ರಂಗಾಪುರಗಳಲ್ಲಿ ಕಾಣಬಹುದು. ಉಳಿದಂತೆ ತ್ರಿಪುರ ಸಂಹಾರ ಮತ್ತು ಗಿರಿಜಾ ಕಲ್ಯಾಣಗಳನ್ನು ಒಂದೊಂದೇ ಅಂಕಣದಲ್ಲಿ ಚಿತ್ರಿಸುವುದುಂಟು. ಈ ಚಿತ್ರದ ಬಗ್ಗೆ ಕೆರೆಗೋಡು ರಂಗಾಪುರದಲ್ಲಿ ವಿವರವಾಗಿ ಚಿತ್ರಿತವಾಗಿದೆ. ಹಂಪಿಯಲ್ಲಿ ತ್ರಿಪುರದ ವೃತ್ತವೊಂದರಲ್ಲಿ ನಗ್ನವಾಗಿ ವಿಷ್ಣು ನಿಂತಿರುವುದು ಎರಡು ಬದಿಗೆ ಹೆಂಗಳೆಯರಿಬ್ಬರು ಕುತೂಹಲದಿಂದ ಕೈಯತ್ತಿ ನಿಂತಂತಿರುವುದು ಉಳಿದೆರಡು ವೃತ್ತಗಳಲ್ಲಿ ರಾಕ್ಷಸರೇ ಪರಸ್ಪರ ಕಾದಾಡುತ್ತಿರುವಂತೆ ಚಿತ್ರಿಸಿದೆ. ಹಿರಿಯೂರಿನ ತೇರುಮಲ್ಲೇಶ್ವರದಲ್ಲಿ ಕಿರಾತಾರ್ಜುನೀಯದ ಕಥೆಯ ಚಿತ್ರ ಮತ್ತು ಋಷಿಗಳ ಕಾಡಿನ ಮಧ್ಯೆ ವಿವಿಧ ಭಂಗಿಗಳಲ್ಲಿ ತಪಸ್ಸು ಮಾಡುತ್ತಿರುವ ಚಿತ್ರ. ಬಿಡಿಯಾದ ಸಾಂಪ್ರದಾಯಿಕ ಚಿತ್ರಗಳಲ್ಲಿಯೂ ಶಬರ ಶಂಕರ ವಿಲಾಸ, ಶಿವನ ಸಂಸಾಗರ, ತ್ರಿಪುರ ಸಂಹಾರ, ಗಿರಿಜಾ ಕಲ್ಯಾಣ ಇತ್ಯಾದಿ ಚಿತ್ರಗಳು ಕಂಡು ಬರುತ್ತವೆ. ಬೆಂಗಳೂರು ಕೃಷ್ಣರಾವ್ ಉದ್ಯಾನವನದಲ್ಲಿರುವ ಯಲ್ಲಮ್ಮ ದೇವಾಲಯದಲ್ಲಿ ಮೈಸೂರು ಸಂಪ್ರದಾಯದ ಕಳೆದ ಶತಮಾನದ ದೊಡ್ಡ ಅಳತೆಯ ಚಿತ್ರವಿದೆ. ಶೈವ ಧರ್ಮಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳು ಲೇಪಾಕ್ಷಿ, ಚಿದಂಬರಾ ಇತ್ಯಾದಿಗಳಲ್ಲಿ ಕಾಣಬಹುದು.

ವೈಷ್ಣವ ಧರ್ಮ :

ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದು, ಸಕಲ ಲೋಕಗಳ ಪಾಲಕ ಎಂದು ಹಿಂದೂ ಧರ್ಮ ನಂಬುತ್ತದೆ. ಭಗವದ್ಗೀತೆಯಲ್ಲಿ ವರ್ಣಿಸಿದಂತೆ 'ವಿಶ್ವರೂಪಿ'. ನಾರಾಯಣ ಎಂದೂ ಕರೆಯುತ್ತಾರೆ. ಧರ್ಮ ಸಂಸ್ಥಾಪನೆಗಾಗಿ ದಶಾವತಾರ ತಾಳಿ ಭೂಲೋಕವನ್ನು ರಕ್ಷಿಸಿದಾತ ಎಂದು ಪುರಾಣಗಳು ಕೊಂಡಾಡುತ್ತವೆ. ವಿಷ್ಣುವನ್ನು ಲಕ್ಮಿನಾರಾಯಣ, ಹರಿ, ಜನಾರ್ದನ, ಮಾಧವ, ಕೇಶವ, ಅಚ್ಚ್ಯುತ, ಶ್ರೀನಿವಾಸ ಎಂದೂ ಕರೆಯುತ್ತಾರೆ. ವೈಷ್ಣವ ಪಂಥ, ಶೈವ ಪಂಥ, ಶಾಕ್ತ ಪಂಥ ಮತ್ತು ಸ್ಮಾರ್ತ ಸಂಪ್ರದಾಯ ಹಿಂದೂ ಧರ್ಮದ ಮುಖ್ಯ ಪಂಥಗಳು. ಈ ನಾಲ್ಕು ಪಂಥಗಳು

ಕ್ರಿಯಾವಿಧಿಗಳು, ನಂಬಿಕೆಗಳು, ಮತ್ತು ಸಂಪ್ರದಾಯಗಳನ್ನು ಹಂಚಿಕೊಳ್ಳಬಹುದು. ಆದರೆ ಪ್ರತಿ ಪಂಥವು ಜೀವನದ ಪರಮ ಗುರಿಯಾದ ಆತ್ಮಜ್ಞಾನವನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ಒಂದು ಬೇರೆ ಜೀವನಕ್ರಮವನ್ನು ಹೊಂದಿದೆ. ವೈಷ್ಣವ ಪಂಥವು ಶೈವ ಪಂಥ, ಸ್ಮಾರ್ತ ಸಂಪ್ರದಾಯ, ಮತ್ತು ಶಾಕ್ತ ಪಂಥದ ಜೊತೆಗೆ ಹಿಂದೂ ಧರ್ಮದ ಪ್ರಮುಖ ಶಾಖೆಗಳ ಪೈಕಿ ಒಂದು. ಅದು ಪರಮಶ್ರೇಷ್ಠ ಭಗವಂತ ವಿಷ್ಣುವಿನ ಪೂಜ್ಯ ಭಾವನೆಯ ಮೇಲೆ ಕೇಂದ್ರೀಕೃತವಾಗಿದೆ. ವೈಷ್ಣವರು, ಅಥವಾ ವಿಷ್ಣುವಿನ ಅನುಯಾಯಿಗಳು, ಭಗವಂತ ವಿಷ್ಣು ಮತ್ತು ಅವನ ದಶಾವತಾರಗಳಿಗೆ ಪ್ರಾಮುಖ್ಯ ಕೊಡುವ, ಪ್ರತ್ಯೇಕವಾಗಿಸಲ್ಪಟ್ಟ ಏಕದೇವತಾವಾದವನ್ನು ಏಕದೇವನಿಷ್ಠೆ ಪ್ರಚಾರಮಾಡುವ ಜೀವನದ ಒಂದು ದಾರಿಯಲ್ಲಿ ನಡೆಯುತ್ತಾರೆ.

ವೈಷ್ಣವ ಪಂಥವೂ ಕರ್ನಾಟಕದ ಪ್ರಾಚೀನ ಸಂಪ್ರದಾಯ. ಕದಂಬರ ಹಲ್ಮಿಡಿ, ಗುಡ್ನಾಪುರ ಶಾಸನಗಳು ವಿಷ್ಣು ಸ್ತುತಿಯಿಂದ ಆರಂಭವಾಗುತ್ತವೆ. ಆರಂಭದಲ್ಲಿ ಬಾದಾಮಿ ಚಾಳುಕ್ಯರೂ, ರಾಷ್ಟ್ರಕೂಟರೂ ವೈಷ್ಣವರಗಿದ್ದು ಬಾದಾಮಿಯ ವೈಷ್ಣವ ಗುಹೆಯೂ ಪ್ರಾಚೀನ ವೈಷ್ಣವಾಲಯ. ಕರ್ನಾಟಕದಲ್ಲಿ ರಾಮಾನುಜ ಮತ್ತು ಮಾಧ್ವರ ಬೋಧನೆಗಳಿಂದ ವೈಷ್ಣವ ಸಂಪ್ರದಾಯಕ್ಕೆ ವಿಶೇಷ ಚಾಲನೆ ಸಿಕ್ಕಿತು. ರಾಮಾನುಜರು ವಿಷ್ಣವಿಗೆ ಭಕ್ತಿ ಮತ್ತು ಶರಣಾಗತಿಯನ್ನು ಭೋಧಿಸಿದರು. ವಿಷ್ಣುವಿನ ಪತ್ನಿ ಲಕ್ಷ್ಮಿ ದೈವಾನುಗ್ರಹದ ಸಂಕೇತ. ಹೀಗಾಗಿ ಅವರ ಪಂಥಕ್ಕೆ ಶ್ರೀವೈಷ್ಣವ ಪಂಥ ಎನ್ನುತ್ತಾರೆ. ಲಕ್ಷ್ಮಿಯ ಕೃಪೆಗೆ ಪಾತ್ರರಾಗಿ ವಿಷ್ಣುವಿನ ಅನುಗ್ರಹ ಪಡೆಯಬೇಕು ಎಂಬುದು ರಾಮಾನುಜರ ತತ್ತ್ವ ಅವರ ತತ್ತ್ವಜ್ಞಾನವು ಶಕ್ತಿವಿಶಿಷ್ಟಾದ್ವೈತವೆಂದು ಪ್ರಸಿದ್ಧವಾಯಿತು. ಹೊಯ್ಸಳ ವಿಷ್ಣುವರ್ಧನನ ಮೇಲೆ ರಾಮಾನುಜರ ವಿಶೇಷ ಪ್ರಭಾವವಿದೆ. ಅವರು ದಲಿತರನ್ನು 'ತಿರುಕುಳತ್ತರ್' ಎಂದು ಕರೆದು ತಮ್ಮ ಸಂಪ್ರದಾಯದಲ್ಲಿ ಸೇರಿಸಿಕೊಂಡರು. ಮೇಲುಕೋಟೆ ದೇವಾಲಯವನ್ನು ಅರಸರೂ ಮೈಸೂರಿನ ಚಿಕ್ಕದೇವರಾಯರೂ ಶ್ರೀವೈಷ್ಣವರು. ಕನ್ನಡ ಕವಿಗಳಾದ ತಿರುಮಲಾರ್ಯ ಸಂಚಿಯ ಹೊನ್ನಮ್ಮ ಶ್ರಿವೈಷ್ಣವರು. ಉಡುಪಿ ಬಳಿ ಜನಿಸಿದ ಆಚಾರ್ಯ ಮಧ್ವರು ವಿಷ್ಣುವೇ ಪರದೈವವೆಂಬ ತತ್ತ್ವ ಬೋಧಿಸಿದರು. ಅನ್ಯ ದೇವರ ಆರಾಧನೆಯನ್ನು ಅವರು ವಿರೋಧಿಸಲಿಲ್ಲ. ಜೀವಾತ್ಮನೂ ಪರಮಾತ್ಮನೂ ಬೇರೆಬೇರೆ, ಭಕ್ತಿಯಿಂದ ಮನುಷ್ಯ ಆತ್ಮೋದ್ಧಾರ ಮಾಡಬೇಕು, ಎಂದು ಅವರು ಬೋಧಿಸಿದರು. ಉತ್ತರ ಭಾರತದ ಭಕ್ತಿಪಂಥ ಇವರ ಮೇಲೆ ರಾಮಾನುಜ ಪಂಥ ಮತ್ತು ಬಂಗಾಳದ ಚೈತನ್ಯರ ಭಕ್ತಿಪಂಥಗಳ ಮೇಲೆ ಮಧ್ವರ[೨] ಪ್ರಭಾವ ವಿಶೇಷವಾಗಿದೆ.

ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು ಹಾಗೂ ಆತನ ಅವತಾರಗಳು ಪ್ರತಿರೂಪಗಳು. ಆತನ ಅಂಶಗಳುಳ್ಳ ರೂಪಗಳು ಇತ್ಯಾದಿಗಳನ್ನು ಹಾಗೂ ಅದರೊಂದಿಗೆ ಆತನ ಪತ್ನಿ ಪರಿವಾರ ದೇವತೆ, ವಾಹನ ದೇವತೆ ಇತ್ಯಾದಿಗಳೆಲ್ಲಾವನ್ನು ಸೇರಿಸಿ ವೈಷ್ಣವ ಪಂಥವೆಂದು ಕರೆಯಬಹುದು. ಈ ಪಂಥ ಅಥವಾ ವೈಷ್ಣವ ರೂಪಗಳು ವೇದಗಳ ಕಾಲದಿಂದಲೇ ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ರಾಷ್ಟ್ರಕೂಟರು, ಬಾದಾಮಿ ಹಾಗೂ ಕಲ್ಯಾಣಿ ಚಾಳುಕ್ಯರು ವೈಷ್ಣವ ಪರವಾದ

ಕೃತಿ ರಚನೆಗಳಿಗೆ ದೇವಾಲಯಗಳಿಗೆ ಪ್ರೋತ್ಸಾಹ ನೀಡಿದರು. ವಿಷ್ಣುವಿನ ಅವತಾರಗಳಲ್ಲಿ ವರಹಾ ನರಸಿಂಹ, ರಾಮ, ಕೃಷ್ಣರಿಗೆ ವಿಶೇಷ ಪ್ರಾಮುಖ್ಯತೆ ಬಂದಿದ್ದು, ಅವರ ಪರವಾದ ಆಲಯಗಳು ಹಾಗೂ ಚಿತ್ರಲೆಯನ್ನು ಕಾಣಬಹುದು. ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿರುವ ಚಿತ್ರಗಳಲ್ಲಿ ಮಹಾಭಾರತದ ಕೆಲವು ದೃಶ್ಯಗಳಲ್ಲದೆ ದಶಾವತಾರ ಹಾಗೂ ಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ ಚಿತ್ರಣಗಳನ್ನು ಕಾಣಬಹುದು. ಕೃಷ್ಣನಿಗೆ ಸಂಬಂಧಿಸಿದ ಚಿತ್ರಗಣಗಳಲ್ಲಿ ಕಲಾವಿದನಿಗೆ ಅತ್ಯಂತ ಪ್ರಿಯವಾದುದೆಂದರೆ ಕೃಷ್ಣನ ಜಲಕ್ರೀಡಾ ಪ್ರಸಂಗ ಹಾಗೂ ಗೋಪಿಕಾ ವಸ್ತ್ರಾಪಹರಣ, ಈ ದೃಶ್ಯದ ಚಿತ್ರಗಳು ದಕ್ಷಿಣ ಕರ್ನಾಟಕದಲ್ಲಿಯೂ ಕಾಣಬಹುದು ಅವುಗಳಲ್ಲಿ ಮುಖ್ಯವಾಗಿ.

* ಸಿರಾದಲ್ಲಿ ರಾಮಾಯಣ ವಸ್ತ್ರಾಪಹರಣ ಇನ್ನು ಹಲವಾರು ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿತ್ತು ಆದರೆ ಇಂದಿರುವುದಿಲ್ಲ.
* ತುಮಕೂರು ಗೊಲ್ಲಹಳ್ಳಿ ಇತ್ಯಾದಿ ಕಡೆಗಳಲ್ಲಿ ವೈಷ್ಣವ ಧರ್ಮದ ಚಿಕ್ಕ ಅಂಕಣದಲ್ಲಿ ಕಂಡುಬಂದಿರುವುದನನು ನೆನೆಯಬಹುದು.
* ಸಿಬಿಯಲ್ಲಿ ನರಸಿಂಹ ಚಂಚುಲಕ್ಷ್ಮಿಯರ ವಿವಾಹದ ಕಥೆಯನ್ನು ಒಂದು ಅಂಕಣದಲ್ಲಿ ವಿವರವಾಗಿ ಚಿತ್ರಿಸಿದೆಯಲ್ಲದೆ ಈ ಪ್ರಸಂಗದ ಚಿತ್ರಣ ಕರ್ನಾಟಕದ ಮಟ್ಟಿಗೆ ಏಕೈಕವೆಂದೆನಿಸುತ್ತದೆ.
* ಹಿರಿಯೂರಿನಲ್ಲಿಯೂ ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ಕಾಣಬಹುದು.
* ಶ್ವೇತಾವರಹ ದೇವಾಲಯದಲ್ಲಿಯೂ ಕೃಷ್ಣನ ಅವತಾರದ ದೃಶ್ಯವನ್ನು ಕಾಣಬಹುದು.
* ಮೈಸೂರಿನ ಕೃಷ್ಣ ದೇವಾಲಯದಲ್ಲಿಯೂ ಕೂಡ ಕೃಷ್ಣನ ಬದುಕಿನ ನೋಟವನ್ನು ಸ್ಥೂಲವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸಿಬಿ, ಸಿರಾ, ಕೆರೆಗೋಡು, ರಂಗಾಪುರ, ಮೈಸೂರು ಮತ್ತು ತುಮಕೂರುಗಳ ವೈಷ್ಣವ ದೇವಾಲಯಗಳಲ್ಲಿ ಅತಿರೇಕಿಸಿದ ಶೃಂಗಾರ ಪರಚಿತ್ರಗಳು ಕಂಡುಬರುವುದು ಇವುಗಳನ್ನು ಧಾರ್ಮಿಕ ಹಿನ್ನೆಲೆ ಸಂಬಂಧಿಸಿದ ಭಿತ್ತಿಚಿತ್ರಗಳನ್ನು ಕಾಣಬಹುದು.

ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಭಿತ್ತಿ ಚಿತ್ರ ನೆಲೆಗಳನ್ನು ಒಳಗೊಂಡ ಪ್ರದೇಶವಾಗಿದೆ. ಈ ಜಿಲ್ಲೆಯಲ್ಲಿ ಶಿರಾ, ಸಿಬಿ, ಕೆರೆಗೋಡಿ, ರಂಗಾಪುರ ಮತ್ತು ಕುಣಿಗಲ್, ಈ ಸ್ಥಳದಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಕುಣಿಗಲ್ ತಾಲೂಕಿನ ಅಮೃತೂರಿನ ಲಕ್ಷ್ಮೀ ದೇವಾಲಯ, ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯಗಳಲ್ಲಿ ಚಿತ್ರಗಳು ರಚನೆಯಾಗಿದ್ದವು ಆದರೆ ಪ್ರಸ್ತುತ ಇರುವುದಿಲ್ಲ.

ಒಟ್ಟಾರೆ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರ ನೆಲೆಗಳನ್ನು ಜಿಲ್ಲಾವಾರು ವಿಂಗಡಿಸಿ ನೋಡಿದಾಗ ಕೆಲವು ಕುತೂಹಲಕರವಾದ ಅಂಶಗಳು ಕಂಡಬರುತ್ತವೆ. ಈ ಭಾಗದ ಭಿತ್ತಿ ಚಿತ್ರ ರಚನೆಯಲ್ಲಿ ಮೈಸೂರು ಅರಸರು ಹೆಚ್ಚಿನ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಉಳಿದಂತೆ ಆಯಾ ಊರಿನ ಪ್ರಮುಖ ವ್ಯಕ್ತಿಗಳ ಚಿತ್ರ ರಚನೆಯಲ್ಲಿ ತಮ್ಮ ಕೊಡುಗೆಯನ್ನು ನೀಡಿರುವುದು

ಕಂಡುಬರುತ್ತದೆ. ಉತ್ತರ ಕರ್ನಾಟಕದ ಪ್ರಾಚೀನ ಭಿತ್ತಿ ಚಿತ್ರ ನೆಲೆಗಳಲ್ಲಿ ಮಠಮಾನ್ಯಗಳ ಅದರಲ್ಲೂ ವಿಶೇಷವಾಗಿ ವೀರಶೈವ ಮಠಗಳ ಕೊಡುಗೆ ಅಪಾರವಾಗಿದೆ. ದಕ್ಷಿಣ ಕರ್ನಾಟಕದ ಚಿತ್ರ ರಚನೆಯಲ್ಲಿ ಸ್ಥಳೀಯ ನಾಯಕರು ಗಮನಾರ್ಹ ಪಾತ್ರವಹಿಸಿದ್ದಾರೆ.

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ನೆಲೆಗಳನ್ನು ಸ್ಥೂಲವಾಗಿ ಗಮನಿಸಿದಾಗ ಬೇರೆ ಬೇರೆ ಧರ್ಮ ಮತ್ತು ಮತ ಪಂಗಡಗಳ ಚಿತ್ರಗಳು ರಚನೆಯಾಗಿರುವುದನ್ನು ಗಮನಿಸಬಹುದಾಗಿದೆ. ಈ ಭಾಗದ ಚಿತ್ರಗಳು ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳು, ಧಾರ್ಮಿಕ ಘಟನಾವಳಿಗಳು ಮತ್ತು ಐತಿಹಾಸಿಕ ಯುದ್ಧದ ಕಾರಣಗಳನ್ನು ಮತ್ತೊಂದು ರೀತಿಯಲ್ಲಿ ತಿಳಿದುಕೊಳ್ಳುವ ಕಡೆಗೆ ನಮ್ಮ ಗಮನ ಸೆಳೆಯುತ್ತದೆ.

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಿಂದ ಈ ಭಾಗದ ಮರೆಯಾಗಿರುವ ಐತಿಹಾಸಿಕ ಘಟನಾವಳಿಗಳನ್ನು ಕೆಲವು ಸಂದರ್ಭಗಳಲ್ಲಿ ತಿಳಿದುಕೊಳ್ಳಬಹುದಾಗಿದೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭಿತ್ತಿ ಚಿತ್ರದಲ್ಲಿನ ಯುದ್ಧದ ದೃಶ್ಯದಲ್ಲಿ ಚಿತ್ರದುರ್ಗ ನಾಯಕರ ಐತಿಹಾಸಿಕ ಘಟನಾವಳಿಯೊಂದನ್ನು ಸ್ಪಷ್ಟಪಡಿಸುತ್ತದೆ. ಅದೇ ಮೈಸೂರು ಒಡೆಯರ ವಂಶಾವಳಿ ಅವರ ಕಾಲದ ಯುದ್ಧಗಳು, ಸಾಮಾಜಿಕ ಘಟನೆಗಳು, ಆಡಳಿತ ಪದ್ಧತಿ, ಆಚಾರ–ವಿಚಾರಗಳು, ನಂಬಿಕೆ, ಆಚರಣೆಗಳು ಮತ್ತು ಜನರ ವೇಷಭೂಷಣಗಳನ್ನು ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಟಣ, ಬೆಂಗಳೂರು ಮುಂತಾದ ತಾಲೂಕುಗಳಲ್ಲಿರುವ ಚಿತ್ರಗಳು ತಿಳಿಸಿಕೊಡುತ್ತವೆ. ಅದೇ ರೀತಿ ಹಾಸನದ ಚನ್ನರಾಯಪಟ್ಟಣ, ತಾಲೂಕುಗಳಲಿ ಕಾಣಬಹುದು.

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳು ಧಾರ್ಮಿಕ ಸಮನ್ವಯತೆಯನ್ನು ಒಳಗೊಂಡಿವೆ. ಶೈವ, ವೈಷ್ಣವ ಮತ್ತು ಶಾಕ್ತಪಂಥಕ್ಕೆ ಸಂಬಂಧಿಸಿದ ಚಿತ್ರಗಳು ಒಂದೇ ಕಡೆಗೆ ರಚನೆಯಾಗಿರುವುದು ಗಮನಾರ್ಹವಾಗಿದೆ. ಕೆಲವು ಶೈವ ದೇವಾಲಯಗಳಲ್ಲಿ ಶೈವ ಚಿತ್ರಗಳ ಜೊತೆಗೆ ವೈಷ್ಣವ ಮತ್ತು ಶಾಕ್ತಪಂಥದ ಚಿತ್ರಗಳನ್ನು ರಚನೆ ಮಾಡಿದ್ದಾರೆ. ವೈಷ್ಣವ ದೇವಾಲಯಗಳಲ್ಲಿ ಶೈವ ಮತ್ತು ಶಾಕ್ತ ಚಿತ್ರಗಳನ್ನು ಸಹಿತ ರಚಿಸಲಾಗಿದೆ. ಅದೇರೀತಿ ದೇವಿ ಮಂದಿರಗಳಲ್ಲಿ ಶೈವ, ವೈಷ್ಣವ ಚಿತ್ರಗಳು ರಚನೆಯಾಗಿದ್ದು ಗಮನಾರ್ಹವಾಗಿವೆ.

ಟಿಪ್ಪು ಮತ್ತು ಹೈದರಾಲಿ ಕಾಲಕ್ಕೆ ಮುಸ್ಲಿಂ ಕಟ್ಟಡಗಳಲ್ಲಿ ಹಿಂದೂ ರಾಜರ ಚಿತ್ರಗಳನ್ನು ರಚಿಸಿರುವುದನ್ನು ನೋಡಿದರೆ ಧರ್ಮ ಸಮನ್ವಯತೆಯ ಅಂಶಗಳು ಗೋಚರವಾಗುತ್ತವೆ. ಇವರ ಕಾಲಕ್ಕೆ ರಚನೆಯಾದ ಬಹುಮಟ್ಟಿನ ಭಿತ್ತಿ ಚಿತ್ರಗಳು ಯುದ್ಧ, ರಾಜಕೀಯ ಘಟನಾವಳಿಗಳು ಮತ್ತು ಭೇಟಿಗೆ ಸಂಬಂಧಪಟ್ಟವುಗಳಾಗಿವೆ. ಇದರಿಂದ ಅವರ ಬದುಕು, ರಾಜರಿಗೆ ಜೀಟಿಯ ಮೇಲಿದ್ದ ಒಲವು ಕಂಡುಬರುತ್ತದೆ. ಹೀಗೆ ದಕ್ಷಿಣ ಕರ್ನಾಟಕದ ಭಿತ್ತಿಚಿತ್ರಗಳನ್ನು ಗಮನಿಸಿದಾಗ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಮಹತ್ವದ ಹಿನ್ನೆಲೆಯನ್ನು ಹೊಂದಿರುವುದು ಕಂಡುಬರುತ್ತದೆ.

ಭಿತ್ತಿ ಸಿದ್ದತೆ :

ಶಿಷ್ಟಪದ ಕಲೆಯಾದ ಈ ಸಾಂಪ್ರದಾಯಿಕ ಭಿತ್ತಿ ಚಿತ್ರಕಲೆಯ ರಚನೆಯಲ್ಲಿ ಕಲಾವಿದರು ಅತ್ಯಂತ ಕೌಶಲ್ಯವನ್ನು ತಾಂತ್ರಿಕತೆಯನ್ನು ಮೆರೆದಿದ್ದಾರೆ. ವಿಶಿಷ್ಟವಾದ ಕಲ್ಪನೆಯನ್ನು ತೋರಿದ್ದಾರೆ. ಪರಂಪರಾಗತವಾಗಿ ಬಂದ ಸಂಪ್ರದಾಯಗಳಲ್ಲಿ ಅರಿತು ನುರಿತವರಾಗಿ ಇಂತಹ ಅದ್ಭುತ ಕಲೆಯನ್ನು ಸೃಷ್ಟಿಸಿದ್ದಾರೆ. ಭಿತ್ತಿ ಚಿತ್ರ ರಚನೆಯ ತಂತ್ರಗಳ ಮೇಲೆ ಕಲಾವಿದನು ಕುಶಲಿಯಾಗಬೇಕಾದರ ಆಯಾ ವಿಷಯಕ್ಕೆ ಸಂಬಂಧಪಟ್ಟ ಮೂಲ ಗ್ರಂಥಗಳ ಸೂಕ್ಷ್ಮ ಪರಿಚಯವನ್ನು ಪಡೆದಿರಬೇಕು. ಈ ದಾರಿಯಲ್ಲಿ ನೆಡೆದು ಬಂದ ಅಂದಿನ ಅನೇಕ ಕಲಾವಿದರು ಇಂತಹ ಅಮೋಘ ತಂತ್ರ ಚಾತುರ್ಯತೆಯನ್ನು ಗಳಿಸಿಕೊಂಡಿದ್ದರೆಂದು ಹೇಳಬಹುದಾಗಿದೆ. ಈ ನಿಟ್ಟಿನಲ್ಲಿ ಪ್ರಾಚೀನ ಭಿತ್ತಿ ಚಿತ್ರಗಳ ಬಗ್ಗೆ ಅನೇಕ ಗ್ರಂಥಗಳಲ್ಲಿ ಪ್ರಸ್ಥಾಪಿರುವುದನ್ನು ಇಂದಿಗೂ ತಿಳಿಯಬಹುದು. ಅಂತಹ ಪ್ರಮುಖ ಗ್ರಂಥಗಳಾದ ಕ್ರಿ.ಪೂ ೨ನೇ ಶತಮಾನ ಕಲ್ಲು ವರ್ಗ ಕ್ರಿ.ಶ.೬ನೇ ಶತಮಾನದ ಬೃಹತ್ ಸಂಹಿತೆ, ಕ್ರಿ.ಶ ೫ನೇ ಶತಮಾನದ ವಿಷ್ಣುಧರ್ಮೋತ್ತರ ಪುರಾಣ, ಹನ್ನೊಂದನೆಯ ಶತಮಾನದ ಅಭಿಲಾಷಿತಾರ್ಥ ಚಿಂತಾಮಣಿ, ಕ್ರಿ.ಶ ೧೬ನೇ ಶತಮಾನದ ಶಿಲ್ಪರತ್ನ ಮುಂತಾದ ಪ್ರಮುಖ ಗ್ರಂಥಗಳಲ್ಲಿ ಭಿತ್ತಿ ಮತ್ತು ಅದರ ರಚನೆಗಳ ಬಗ್ಗೆ ಸಂಪೂರ್ಣವಾಗಿ ವಿವೇಚಿಸಲಾಗಿದೆ.

ಈ ಚಿತ್ರಗಳ ರಚನಾ ತಂತ್ರವು ಅನೇಕ ವಿಧಗಳಲ್ಲಿವೆ, ಅಭಿಲಾಷಿತೀರ್ಥ ಚಿಂತಾಮಣಿ ಮತ್ತು ಶಿಲ್ಪರತ್ನ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಪ್ರಕಾರ ಚಿತ್ರ ರಚನೆಗೆ ಮೂಲವಾದ ಗೋಡೆ(ಭಿತ್ತಿ)ಯನ್ನು ಹೇಗೆ ಅಣಿಗೊಳಿಸಬೇಕು ಎಂಬ ವಿಷಯವನ್ನು ಗಮನಿಸಿದಾಗ "ಇಟ್ಟಿಗೆ ಪುಡಿ, ಜೇನುಬೆಲ್ಲ, ನೀರು ಮತ್ತು ಅತಿಮಧುರ ಮುಂತಾದವುಗಳನ್ನು ಸಮಪ್ರಮಾಣದಲ್ಲಿ ಬೆರೆಸಿ ಗೋಡೆಯ ಮೇಲೆ ಮೃದುವಾಗಿ ಲೇಪಿಸಬೇಕು" ಆ ನಂತರ ಇದರ ಮೇಲೆ ಬಳಿಯುವ ವಜ್ರ ಲೇಪವು ಭದ್ರವಾಗಿ ಕೂರಲು ಸಹಕಾರಿಯಾಗುತ್ತದೆ ಎಂದು 'ಪ್ರಾಚೀನ ಚಿತ್ರ ರಚನೆಯಲ್ಲಿ ಭಿತ್ತಿ ಸಿದ್ದತೆ' ಎಂಬ ಲೇಖನದಲ್ಲಿ ಪಿ.ಆರ್.ತಿಪ್ಪೇಸ್ವಾಮಿ[೮] ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಈ ವಜ್ರ ಲೇಪನಕ್ಕೆ ಮುಂಚೆ ಗೋಡೆಯನ್ನು ಸಿದ್ದಮಾಡಿಕೊಳ್ಳುವ ಮಿಶ್ರಣಗಳನ್ನು ಕುರಿತು ಹೇಳಿರುವ ವಿವರಗಳನ್ನು ಈ ರೀತಿ ಗಮನಿಸಬಹುದು. ಇಲ್ಲಿ ಮೂರು ಬಗೆಯ ಇಟ್ಟಿಗೆ ಪುಡಿಯನ್ನು ಸಮ ಪ್ರಮಾಣದಲ್ಲಿ ಹೊಂದಿಸಿಕೊಂಡು ಅದರಲ್ಲಿ ಮೂರರಷ್ಟು ಜೇಡಿ ಮಣ್ಣಿನೊಂದಿಗೆ ಬೆರೆಸಬೇಕು, ಜೇನುಮೇಣ, ಅತಿಮಧುರ, ಮರುಗ ಎಂಬ ಗಂದಿಗರ ಸರಕು, ಬೆಲ್ಲ ಕುಸುಂಬ ಇವೆಲ್ಲಾವನ್ನು ಪುಡಿಮಾಡಿ ಸಮಪ್ರಮಾಣದಲ್ಲಿ ಸೇರಿಸಿ, ಎಣ್ಣೆಯಿಂದ ಕಲಸಿ ಜೇಡಿಮಣ್ಣಿನೊಂದಿಗೆ ಬೆರೆಸಬೇಕು. ಅದರ ಮುಕ್ಕಾಲು ಪಾಲಿನಷ್ಟು ಬಿಲ್ವಪತ್ರಕಾಯಿಯ ಮೇಣವನ್ನು ಹರೆದು ಅದಕ್ಕೆ ಉದ್ದಿನ ಹಿಟ್ಟನ್ನು ಸೇರಿಸಿ ಅದಕ್ಕೆ ತಕ್ಕಂತೆ ಮರಳನ್ನು ಸೇರಿಸಿ.ಚೆನ್ನಾಗಿ ಮರ್ದಿಸಬೇಕು. ಹೀಗೆ ತಯಾರಿಸಿದ ಮಿಶ್ರಣವನ್ನು ನೀರಿನಲ್ಲಿ ನೆನೆಸಿ ಪಕ್ವವಾಗುವಂತೆ ಸುಮಾರು ಒಂದು ತಿಂಗಳ ಕಾಲ ರಾಶಿಮಾಡಿ ಇಡುತ್ತಾರೆ. ಅನಂತರ ಮೃದುವಾದಂತಹ ಈ ಮಿಶ್ರಣವನ್ನು

ತೆಗೆದುಕೊಂಡು ಚಿತ್ರ ರಚನೆಗೆ ಅರ್ಹವಾದ ಒಣಗಿದ ಗೋಡೆಯ ಮೇಲೆ ಚೆನ್ನಾಗಿ ಲೇಪಿಸಬೇಕು. ಲೇಪನ ಬಹಳ ಘಟ್ಟಿಯಾಗಿ ಆಗಲಿ ಇಲ್ಲವೇ ತುಂಬಾ ತೆಳುವಾಗಿಯಾಗಲಿ ಇರದೇ ಒಂದೇ ಮಟ್ಟದಲ್ಲಿರಬೇಕು. ಗೋಡೆ ಒಣಗಿದಂತೆಲ್ಲಾ ಸರ್ಜರಸ ಮತ್ತು ಎಣ್ಣೆಗಳಿಂದ ಲೇಪಿಸಬೇಕು. ನಂತರ ಗೋಡೆಯನ್ನು ಉಜ್ಜಿ ನಯಮಾಡಬೇಕು ಆಗಾಗ ಹಾಲನ್ನು ಅದರ ಮೇಲೆ ಎರಚಿ ತೊಳೆಯುತ್ತಿರಬೇಕು. ಇಂತಹ ಸ್ಥಿತಿಯಿಂದ ಗೋಡೆಗಳ ಹೊರ ಮೈ ನೂರಾರು ವರ್ಷಗಳವರಗೆ ಅಳಿಯದೇ ಬಿಗಿಯಾಗಿರುತ್ತದೆ.[೯]

'ಅಭಿಲಾಷಿತಾರ್ಥ ಚಿಂತಾಮಣಿ'ಯಲ್ಲಿ ಈ ವಿಷಯವನ್ನು ಕುರಿತು ಬರುವ ವಿವರಗಳನ್ನು ಹೀಗೆ ಸಂಗ್ರಹಿ ಹೇಳಬಹುದು. ಚಿತ್ರ ರಚನೆಗೆ ಗೊತ್ತು ಪಡಿಸಿರುವ ಸುಣ್ಣ ಮತ್ತು ಇತರ ಮಿಶ್ರಣಗಳಿಂದ ಹದಗೊಳಿಸಿರುವ ಗೋಡೆಯನ್ನು ಚೆನ್ನಾಗಿ ಶುಚಿಗೊಳಿಸಬೇಕು. ಅನಂತರ ಸ್ವಲ್ಪವೂ ಏರುಪೇರುಗಳಿಲ್ಲದೇ ಈ ಕೆಳಗಿನ ವಸ್ತುಗಳನ್ನು ಲೇಪಿಸಬೇಕು. ಕೋಣದ ತೊಗಲನ್ನು ಮೇಣವಾಗುವವರೆಗೂ ಚೆನ್ನಾಗಿ ನೀರಿನಲ್ಲಿ ಕುದಿಸಬೇಕು. ಇದನ್ನೆ 'ವಜ್ರಲೇಪ' ಎಂದು ಕರೆಯುವರು. ಇದನ್ನು ಕಲಾವಿದನಾದವನು ಬಿಳಿಯ ಮಣ್ಣಿನೊಡನೆ ಬೆರೆಸಿ ಗೋಡೆಗಳ ಮೇಲೆ ಬಳಿಯಬೇಕು. ಈ ರೀತಿಯ ಮೂರು ಲೇಪನಗಳಾದ ಮೇಲೆ ವಜ್ರಲೇಪನದೊಡನೆ ಸಮಾಂಶದಲ್ಲಿ ಮಿಶ್ರಣ ಮಾಡಿದ ಶಂಖದ ಪುಡಿಯನ್ನು ಅದರ ಮೇಲೆ ಬಳಿದು, ಅನಂತರ ಅಚ್ಚ ಬೆಳ್ಳಗಿರುವ ನೀಲಗಿರಿ ಬೆಟ್ಟಗಳಲ್ಲಿ ಸಿಗುವ ವಸ್ತುವೊಂದರ ಜೊತೆಯಲ್ಲಿ ಸಮಪ್ರಮಾಣದಲ್ಲಿ ಸೇರಿಸಿ ಕೈಯಿಂದ ಕಲಸಬೇಕು ಇದನ್ನು ಗೋಡೆಗಳ ಮೇಲೆ ತೆಳುವಾಗಿ ಲೇಪಿಸಬೇಕು.

'ಶಿಲ್ಪರತ್ನ'ದ ಕರ್ತೃವಾದ ಶ್ರೀಕುಮಾರನು ಈ ಮಿಶ್ರಣವು ಕಟ್ಟಿಗೆಯಿಂದ ಬೇಯಿಸಿದ ಶಂಕದ ಸುಣ್ಣದೊಡನೆ ಬೆರೆತಿರಬೇಕೆಂದು ಹೇಳುತ್ತಾನೆ. ಈ ಸುಣ್ಣವನ್ನು ಮಣ್ಣು ಮತ್ತು ಜೇನುಬೆಲ್ಲ ಇವುಗಳ ಮಿಶ್ರಣದ ನಾಲ್ಕನೇ ಒಂದು ಭಾಗದೊಡನೆ ಚೆನ್ನಾಗಿ ಅರೆಯಬೇಕು ಜೊತೆಯಲ್ಲಿ ಮರಳನ್ನೂ ಸೇರಿಸುತ್ತಿರಬೇಕು. ಸೂಕ್ಷ್ಮ ಜ್ವಾಲೆಯಲ್ಲಿ ಕಾಯಿಸಿದ ಬಾಳೆಯ ತಿರುಳನ್ನು ೧:೪ ಪ್ರಮಾಣದಲ್ಲಿ ಮಿಶ್ರವಾದ ಸುಣ್ಣ ಮತ್ತು ಮರಳಿನಲ್ಲಿ ಸೇರಿಸಬೇಕು. ಈ ಹಣ್ಣಿನ ತಿರಳೂ ಸುಣ್ಣಕ್ಕೆ ೧;೪ ಪ್ರಮಾಣದಲ್ಲೇ ಇರಬೇಕು. ಅನಂತರ ಮಣ್ಣಿನ ಮಡಕೆಯಲ್ಲಿ ಮೂರು ತಿಂಗಳ ಕಾಲ ಈ ವಸ್ತುವನ್ನು ಒಣಗಿಸಬೇಕು. ಆ ಮೇಲೆ ಒಣಗಿದ ಮಿಶ್ರಣವನ್ನು ಹೊರತೆಗೆದು ಚೆನ್ನಾಗಿ ಬೆಣ್ಣೆಯಂತಾಗುವವರೆಗೂ ರುಬ್ಬುಗುಂಡಿನಿಂದ ಅರೆಯಬೇಕು. ಒಳ್ಳೆಯ ತೆಂಗಿನ ನಾರಿನಿಂದ ಗೋಡೆಯನ್ನು ಚೆನ್ನಾಗಿ ಉಜ್ಜಿ ಶುಚಿಪಡಿಸಬೇಕು. ಅನಂತರ ಕೆಲವು ದಿನಗಳವರೆಗೆ ಜೇನುಬೆಲ್ಲದ ನೀರನ್ನು ಅದರ ಮೇಲೆ ಚುಮುಕಿಸುತ್ತಿರಬೇಕಲ್ಲದೇ ಮೇಲಿನ ಮಿಶ್ರಣವನ್ನು ನಯವಾಗಿ. ಕ್ರಮಬದ್ದವಾಗಿ ಒಂದು ವಸ್ತ್ರದಿಂದ ಬಳಿಯಬೇಕು ಬಳಿಕ ಶುಚಿಯಾದ ನೀರನ್ನು ಆಗಾಗ ತೆಂಗಿನ ನಾರಿನ ಮೂಲಕ ಸಿಂಪಡಿಸಬಹುದು[೧೦] ಹೀಗೆ ಸಿದ್ದಪಡಿಸಿದ ಭಿತ್ತಿಯ ಮೇಲೆ ನೈಸರ್ಗಿಕವಾಗಿ ದೊರೆಯುವ ವರ್ಣಗಳಿಂದ ಚಿತ್ರವನ್ನು ರಚಿಸಲಾಗುತ್ತಿತ್ತು.

ಪ್ರಮುಖವಾಗಿ ಚಿತ್ರ ರಚನೆಯನ್ನು ಯಾವರೀತಿಯಾಗಿ ಆರಂಭಿಸುತ್ತಿದ್ದರು ಎಂಬುದನ್ನು ಹಾಗೂ ಅವರು ಬಳಸುತ್ತಿದ್ದ ಬಣ್ಣಗಳ ವೈವಿಧ್ಯವು ಗಮನಾರ್ಹವಾಗಿದೆ. ಈ ವಿಷಯವಾಗಿ ನಮ್ಮ ಪ್ರಾಚೀನರು ವರ್ಣ ಪ್ರಯೋಗಗಳನ್ನು ಹೇಗೆ ಬಳಸುತ್ತಿದ್ದರು ಎಂಬುದು ತುಂಬಾ ಕುತೂಹಲಕರ ಸಂಗತಿ. ಸಂವಹನೆ, ಸಂವೇದನೆಯ ಒಂದು ಮುಖ್ಯ ಭಾಷೆಯಾಗಿ 'ಬಣ್ಣ' ಚಿತ್ರಕಲೆಯ ಮೂಲಕ ಅಭಿವ್ಯಕ್ತಗೊಳ್ಳುವುದು. ಅದರಲ್ಲಿ ಪ್ರಾಚೀನ ಜೀವನದ ದಾಖಲಾತಿಯಾಗಿ ಉಳಿದು ಬಂದವುಗಳಲ್ಲಿ ಬಣ್ಣದ ಚಿತ್ರಗಳು ಪ್ರಮುಖವಾದವು. ಇದಕ್ಕೆ ಪ್ರಾನ್ಸ್‌ನ ಗವಿಯಲ್ಲಿ ಸಿಕ್ಕಂತಹ ಗವಿಯ ಚಿತ್ರಗಳೇ ಸಾಕ್ಷೀ.

ರಾಜಕೀಯ, ಆರ್ಥಿಕ ಆಯಾಮದಲ್ಲಿ ಬಣ್ಣ ತನ್ನ ಛಾಪನ್ನು ಮೂಡಿಸಿದೆ. ೪೭೦೦ ವರ್ಷಗಳ ಹಿಂದೆಯೇ ಭಾರತದ 'ಇಂಡಿಗೋ' ಪಶ್ಚಿಮದಲ್ಲಿ ಪ್ರಸಿದ್ಧಿಯಾಗಿತ್ತು. ಕ್ರಿ.ಪೂ. ೨೭೦೦ರಲ್ಲಿ ಮೆಸಪೆಟೋಮಿಯಾದಲ್ಲಿ ಭಾರತದ ನೀಲಿ ಬಳಕೆಯಾಗುತ್ತಿದ್ದುದ್ದು ದಾಖಲೆಯಾಗಿದ್ದು[೧೧] ಇದು ಬಣ್ಣದ ಐತಿಹಾಸಿಕ ದಾಖಲೆಯಾದರೆ ಪುರಾಣ ಪುಸ್ತಕಗಳಲ್ಲಿ ಬಣ್ಣದ ಕುರಿತು ದೊಡ್ಡದಾದ ಮಾಹಿತಿಯು ದೊರೆಯುತ್ತದೆ. ಆ ಮೂಲಕ ಬಣ್ಣಗಳಾದ ಬಿಳುಪು, ಕೆಂಪು, ಹಳದಿ, ಕಪ್ಪು, ನೀಲಿ, ಎಂಬ ಐದು ವರ್ಣಗಳ ಪರಸ್ಪರ ಮಿಶ್ರಣದಿಂದ ಅನೇಕ ವರ್ಣಗಳನ್ನು ಪಡೆಯಬಹುದು.

ಪ್ರಸ್ತುತ ಅಧ್ಯಯನದಲ್ಲಿಯೂ ಕೂಡ ಭಿತ್ತಿಚಿತ್ರಗಳಲ್ಲಿ ಅದೇ ರೀತಿಯ ನೈಸರ್ಗಿಕವಾಗಿ ದೊರೆಯುವ ಗಿಡ, ಮರ, ಎಲೆ, ಬಳ್ಳಿ, ಶಂಕ, ಸುಣ್ಣ, ಹೂವು, ಕಲ್ಲು, ಮಣ್ಣು ಮುಂತಾದ ಖನಿಜ ಪದಾರ್ಥಗಳಿಂದ ದೊರೆಯುವ ಬಣ್ಣಗಳನ್ನು ಪರಸ್ಪರ ಸಮ್ಮಿಶ್ರಣದಿಂದ ತಮಗೆ ಬೇಕಾದ ಬಣ್ಣಗಳನ್ನು ತಾವೇ ತಯಾರಿಸಿಕೊಂಡು ಚಿತ್ರಗಳನ್ನು ರಚಿಸುತ್ತಿದ್ದರೆಂದು ಇತಿಹಾಸದಿಂದ ತಿಳಿಯಬಹುದು. ಹೀಗೆ ಭಿತ್ತಿ ಚಿತ್ರಕ್ಕೆ ಪ್ರಾಚೀನ ಇತಿಹಾಸ ಹೊಂದಿತ್ತಾದರೂ ಅವುಗಳ ರಕ್ಷಣೆ ಪ್ರಸ್ತುತ ದಿನಮಾನಗಳಲ್ಲಿ ಅವಶ್ಯಕವಾಗಿ ಆಗಬೇಕಾಗಿದೆ ಅದ್ದರಿಂದ ಪ್ರಸ್ತುತ ಈ ಅಧ್ಯಯನವು ಕರ್ನಾಟಕದ ಒಂದು ಭಾಗವಾದ ದಕ್ಷಿಣ ಕರ್ನಾಟಕದಲ್ಲಿ ಸಿಗುವ ಭಿತ್ತಿ ಚಿತ್ರಕಲೆಯ ಒಟ್ಟು ನೆಲೆಗಳ ಸಂಗ್ರಹ ಹಾಗೂ ಅಲ್ಲಿ ಸಿಗುವ ಉಪಯುಕ್ತ ಮಾಹಿತಿ ಸಂಗ್ರಹ, ಸಂರಕ್ಷಣೆಯ ಸದುದ್ದೇಶವಾಗಿರುತ್ತದೆ.

ದಕ್ಷಿಣ ಕರ್ನಾಟಕದ ಭಿತ್ತಿಚಿತ್ರ ನೆಲೆಗಳನ್ನು ಗಮನಿಸಿದಾಗ ವೈವಿಧ್ಯತೆಯ ಜೊತೆಗೆ ಅನೇಕ ಕುತೂಹಲಕರ ಸಂಗತಿಗಳು ಗೋಚರಿಸುತ್ತವೆ. ಈ ಭಾಗದಲ್ಲಿ ದೇವಾಲಯ, ಮಠ, ಚರ್ಚ್, ಅರಮನೆ, ಅಧಿಕಾರಿಗಳ ಮನೆ, ಸಾರ್ವಜನಿಕ ಕಟ್ಟಡಗಳು ಮುಂತಾದ ಕಡೆಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿದ್ದು ಅಧ್ಯಯನದ ಅನುಕೂಲ ದೃಷ್ಟಿಯಿಂದ ಅವುಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ.

೧. ಅರಮನೆಗಳು
೨. ದೇವಾಲಯಗಳು
೩. ಮಠಗಳು

ಭಿತ್ತಿಚಿತ್ರಗಳಿರುವ ಅರಮನೆಗಳ ಹಿನ್ನಲೆ

ಟಿಪ್ಪು ಅರಮನೆ, ಬೆಂಗಳೂರು :

ಕೆ.ಆರ್. ಮಾರುಕಟ್ಟೆಯ ಬಳಿ ಇರುವ ಟಿಪ್ಪು ಸುಲ್ತಾನ ಬೇಸಿಗೆ ಅರಮನೆಯ ವೈಶಿಷ್ಟ್ಯವೇ ಅಂಥದ್ದು. ಶ್ರೀಮಂತಿಕೆಯ ಆಡಂಬರವಿಲ್ಲದ ಈ ಪ್ರಶಾಂತ ಅರಮನೆಯಲ್ಲಿ ಒಂದು ಸುತ್ತು ಹಾಕಿದರೆ ಸಾಕು, ಆಯಾಸವೆಲ್ಲ ಕರಗಿ, ಮನಸ್ಸು ಹಗುರವಾಗುವುದು. ಕೆ.ಆರ್. ಮಾರ್ಕೆಟ್ ಎಂದರೆ ಕೇವಲ ಕಸದ ರಾಶಿ, ಗಬ್ಬು ವಾಸನೆ, ಜನರ ಗಲಿಬಿಲಿ, ವಾಹನಗಳ ದಟ್ಟಣೆ, ದಾರಿಗೆ ಅಡ್ಡ ಬಂದು ನಿಲ್ಲುವ ಬಿಡಾಡಿ ದನಗಳು. ಇಂಥವೇ ಚಿತ್ರಗಳು ಕಣ್ಮುಂದೆ ಬಂದು ನಿಲ್ಲುತ್ತವೆ. ಆದರೆ ಇದೇ ಕೆ.ಆರ್. ಮಾರುಕಟ್ಟೆಯ ಹತ್ತಿರ (ಕೋಟೆ ದೇವಸ್ಥಾನದ ಹಿಂಭಾಗದಲ್ಲಿ)ದಣಿದ ಮನಸ್ಸಿಗೆ ಮುದ ನೀಡುವ, ಬೇಸತ್ತ ಕಣ್ಣಿಗೆ ತಂಪನೆರೆಯುವ ತಾಣವೊಂದಿದೆ. ಅದುವೇ ಟಿಪ್ಪು ಸುಲ್ತಾನ ಬೇಸಿಗೆ ಅರಮನೆ. ಬೇಸಿಗೆ ಅರಮನೆ ಎಂದರೆ ತಕ್ಷಣ ಕಣ್ಮುಂದೆ ಬರುವುದು ಶ್ರೀರಂಗಪಟ್ಟಣದ 'ದರಿಯಾ ದೌಲತ್'. ಕೆಲವು ಅಂಶಗಳಿಂದ 'ದರಿಯಾ ದೌಲತ್'ಗೆ ಒಂದಿಷ್ಟು ಹತ್ತಿರವಾಗುವ, ಆದರೆ ವಾಸ್ತವದಲ್ಲಿ ದರಿಯಾ ದೌಲತ್‌ಕ್ಕಿಂತ ಬಹಳ ವಿಭಿನ್ನವಾಗಿರುವ ಅರಮನೆ ಇದು. 'ದರಿಯಾ ದೌಲತ್' ಹೆಸರಿಗೆ ತಕ್ಕಂತೆ ದೊಡ್ಡ ಅರಮನೆ, ಶ್ರೀಮಂತಿಕೆಯ ವೈಭವವನ್ನು ಕಣ್ಣಿಗೆ ಕಟ್ಟುವ ಕಟ್ಟಡವದು. ಆದರೆ ಬೆಂಗಳೂರಿನ ಈ ಬೇಸಿಗೆ ಅರಮನೆ ಸರಳತೆಯಲ್ಲಿಯೇ ಸೌಂದರ್ಯವನ್ನು ಮೈಗೂಡಿಸಿಕೊಂಡಿರುವ, ಆಡಂಬರವಿಲ್ಲದ ಸೂಕ್ಷ್ಮ ಕರಕುಶಲ ಕೆತ್ತನೆಗಳಿಂದ ಕೂಡಿರುವ, ಟಿಪ್ಪುವಿನ ಮತ್ತೊಂದು ಜೀವನ ಶೈಲಿಯ ಪರಿಚಯ ಮಾಡಿಸುವ ಕಟ್ಟಡ. ಒಬ್ಬ ರಾಜ ಇಷ್ಟು ಪುಟ್ಟ ಅರಮನೆಯಲ್ಲಿ ಬಂದು ನೆಲೆಸುತ್ತಿದ್ದರೇ ಎನ್ನುವ ಅನುಮಾನ ಹುಟ್ಟಿಸುವ ತಾಣವಿದು. ಆದರೆ ಇಲ್ಲಿನ ಪ್ರಶಾಂತ ವಾತಾವರಣ, ಹಿತಾನುಭವ ಗಮನಕ್ಕೆ ಬಂದಾಗ, ಈ ವಿಶಿಷ್ಟ ಅನುಭೂತಿಗಾಗಿಯೇ ಅವರು ಇಲ್ಲಿ ಬರುತ್ತಿದ್ದರೇನೊ ಎನಿಸುತ್ತದೆ.

ಟಿಪ್ಪು ಅರಮನೆಯ ಒಳನೋಟ :

ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಸಮೀಪದಲ್ಲಿರುವ ಟಿಪ್ಪು ಸುಲ್ತಾನ ಅರಮನೆ ಸುಂದರ ತಾಣವಾಗಿ, ಅರಸಿ ಬರುವವರಿಗೆ ಶಾಂತಿ, ನೆಮ್ಮದಿ ನೀಡುವ ಆಕರ್ಷಣೆಯ ಕೇಂದ್ರವಾಗಿದೆ. ಟಿಪ್ಪು ವೈಭವ, ಐಶಾರಾಮದ ಜೊತೆಗೆ ಪ್ರಶಾಂತವಾದ, ತಂಪಾದ ಪರಿಸರವನ್ನು ಇಷ್ಟಪಡುತ್ತಿದ್ದ ರಾಜ ಎನ್ನುವುದನ್ನು ತಿಳಿಯಬೇಕಾದರೆ ಬೆಂಗಳೂರಿನ ಬೇಸಿಗೆ ಅರಮನೆಯನ್ನೂ ಒಂದು ಸುತ್ತು ಹಾಕಿ ಬರಬೇಕು.

ಕೇವಲ ೫-೧೦ ನಿಮಿಷಗಳಲ್ಲಿ ಇಡೀ ಮನೆಯನ್ನು ನೋಡಿ ಮುಗಿಸಬಹುದು. ಎರಡೆರಡು ಸುತ್ತು ಹಾಕಿ ನೋಡಿದರೂ ದಣಿವಾಗದು. ನೋಡಲು ಒಂದೇ ಅಂತಸ್ತಿನಂತೆ ಕಂಡರೂ ಒಳಗೆ ಎರಡು ಅಂತಸ್ತುಗಳಿರುವ ಈ ಕಟ್ಟಡವನ್ನು ಸಮಕಾಲೀನ ಇಂಡೋ ಇಸ್ಲಾಮಿಕ್ ಶೈಲಿಯಲ್ಲಿ

ನಿರ್ಮಾಣ ಮಾಡಲಾಗಿದೆ. ಉನ್ನತ ಗುಣಮಟ್ಟದ ಮರದಿಂದ ಸ್ತಂಭಗಳನ್ನು ನಿರ್ಮಿಸಲಾಗಿದ್ದು, ಸ್ತಂಭಗಳ ನಡುವೆ ಇಂಡೋ,ಇಸ್ಲಾಮಿಕ್ ಶೈಲಿಯ ಅರ್ಧ ವರ್ತುಲಗಳ ಕಮಾನುಗಳಿವೆ.

ಸರಳವಾದ ಮೆಟ್ಟಿಲುಗಳಿಂದ ಎರಡನೇ ಅಂತಸ್ತಿಗೆ ಹೋಗಬಹುದು. ಅಲ್ಲಿ ಕೋಣೆಯಿಂದ ಕೋಣೆಗೆ ಸರಾಗವಾಗಿ ಹೋಗಬಹುದು. ಪುಟ್ಟ ಆದರೆ ಅಚ್ಚುಕಟ್ಟಾದ, ಆಕರ್ಷಕವಾದ ಬೆಂಗಳೂರಿನ ಈ ಬೇಸಿಗೆ ಅರಮನೆಯ ವೈಶಿಷ್ಟ್ಯವೆಂದರೆ ಬೇಸತ್ತು ಹೋದವರಿಗೆ ತಂಪನೆರೆದು, ಪ್ರಶಾಂತ ಅನುಭೂತಿ ನೀಡಿ ಸಂತೈಸಿ ಕಳುಹಿಸುತ್ತದೆ ಎನ್ನುವುದು. ಬೆಂಗಳೂರಿನ ಅದರಲ್ಲೂ ಕೆ.ಆರ್.ಮಾರುಕಟ್ಟೆಯ ಜಂಜಾಟ, ಕಿರಿಕಿರಿ, ಒತ್ತಡಗಳನ್ನು ಕ್ಷಣಮಾತ್ರದಲ್ಲಿ ಮರೆಸಿ ಹಿತವಾದ ಅನುಭವ ನೀಡುವಂತಿದೆ ಇಲ್ಲಿನ ವಾತಾವರಣ. ಶ್ರೀರಂಗಪಟ್ಟಣದ 'ದರಿಯಾ ದೌಲತ್' ಒಂದು ರೀತಿಯಿಂದ ಸಕಲ ಸೌಲಭ್ಯಗಳನ್ನೊಳಗೊಂಡ ಅರಮನೆ. ರಾಜರು ತಂಗಲು ಬೇಕಾದ ಎಲ್ಲಾ ವ್ಯವಸ್ಥೆಗಳೂ ಅಲ್ಲಿದ್ದವು. ಆದರೆ ಈ ಪುಟ್ಟ ಅರಮನೆಯಲ್ಲಿ ಟಿಪ್ಪು ಬಂದು ನೆಲೆಸುತ್ತಿದ್ದುದಾದರೂ ಹೇಗೆ ಎಂದು ಅನುಮಾನವೂ ಬಂದು ಹೋಗುತ್ತದೆ. ಇಲ್ಲಿನ ಕೋಣೆಗಳೂ ಅಷ್ಟೇ ಚಿಕ್ಕದಾಗಿವೆ.

ಅಂದಿನ ಕಾಲದ ಕಲಾಕೃತಿಗಳು, ಚಿತ್ರಪಟಗಳು ರಾಜನ ಇತಿಹಾಸವನ್ನು ಸಾರಲು ಸಾಕ್ಷಿಯಾಗಿ ನಿಂತಿವೆ. ಗೋಡೆಯ ಮೇಲಿರುವ ಚಿತ್ರಗಳು ಆ ಕಾಲದ ರೀತಿ, ನೀತಿ, ಉಡುಗೆ ತೊಡುಗೆಗಳನ್ನು ಪರಿಚಯ ಮಾಡಿಕೊಡುತ್ತವೆ. ಅರಮನೆಯ ಕಟ್ಟಡವನ್ನು ಕಟ್ಟಲು ಟಿಪ್ಪುವಿನ ತಂದೆ ಹೈದರ್ ಅಲಿ ೧೭೮೧ರಲ್ಲಿ ಪ್ರಾರಂಭಿಸಿದರು. ೧೭೮೪ರಲ್ಲಿ ಕಟ್ಟಡ ಪೂರ್ಣಗೊಂಡಿತ್ತು. ಆ ಕಾಲದಲ್ಲಿ ಈ ಅರಮನೆಗೆ ಭೇಟಿ ನೀಡಿದ ಅನೇಕ ಪ್ರವಾಸಿಗರು, ಬ್ರಿಟಿಷ್ ಅಧಿಕಾರಿಗಳು ಈ ಅರಮನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ದಾಖಲೆಗಳಿವೆ.

ಈ ಅರಮನೆಯ ಇನ್ನೊಂದು ವಿಶೇಷವೆಂದರೆ ಇದು ಸಂಪೂರ್ಣ ಮರದಿಂದ ಕಟ್ಟಲಾಗಿದ್ದು. ಗೋಪುರಗಳು ಮತ್ತು ಕಮಾನುಗಳ ಮೇಲೆ ಆ ಕಾಲದ ವಾಸ್ತು ಶೈಲಿಯನ್ನು ಬಿಂಬಿಸುವ ಸುಂದರ ಕೆತ್ತನೆಗಳಿವೆ. ಅರಮನೆಯ ಚಾವಣಿ ಮತ್ತು ಗೋಡೆಗಳನ್ನು ವಿವಿಧ ಕಲಾಕೃತಿಗಳಿಂದ ಭಿತ್ತಿ ಚಿತ್ರಗಳಿಂದ ಅಲಂಕರಿಸಲಾಗಿದೆ. ಬೇಸಿಗೆಯಲ್ಲಿ ಟಿಪ್ಪು ಇಲ್ಲಿ ಕಾಲ ಕಳೆಯುತ್ತಿದ್ದರು. ಟಿಪ್ಪು ಮರಣದ ನಂತರ ಇದು ಆಂಗ್ಲರ ಪಾಲಾಗಿತ್ತು. ನಂತರ ಒಡೆಯರ ಕೈಸೇರಿತು. ೧೯೫೧ರಲ್ಲಿ[೧೨] ಭಾರತೀಯ ಪುರಾತತ್ವ ಇಲಾಖೆ ಅರಮನೆಯ ಕೋಟೆಯನ್ನು ತನ್ನ ಸುಪರ್ದಿಗೆ ಪಡೆದುಕೊಂಡಿತು.

ದರಿಯಾ-ದೌಲತ್ ಅರಮನೆ, ಶ್ರೀರಂಗಪಟ್ಟಣ

ಶ್ರೀರಂಗಪಟ್ಟಣ ಮತ್ತು ಸಾಂಸ್ಕೃತಿಕ ಪರಿಸರ :

ಮೊಘಲರ ಹಾಗೂ ಹೈದರಾಬಾದ್ ನಿಜಾಮ ಅರಸರ ಆಡಳಿತದ ನಂತರ ಕರ್ನಾಟಕದ ಬಹುಭಾಗವನ್ನು ಹೈದರ್ ಮತ್ತು ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟಿತ್ತು. ಆದಕಾರಣ ಈ ಇಬ್ಬರ ಸುಲ್ತಾನರ ಆಡಳಿತದ ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡುವುದು ಅವಶ್ಯವಾಗಿದೆ.

ಹೈದರ್‌ಅಲಿ(ಕ್ರಿಶ. ೧೭೬೧-೧೭೮೨) :

ಹೈದರಲಿಯು ಬೂದಿಕೋಟೆಯಲ್ಲಿ ೧೭೬೧ರಲ್ಲಿ ಜನಿಸಿದನು. ಅವನ ತಂದೆ ಫತೇಮಹಮ್ಮದ ತಾತನ ಹೆಸರು ಮಹಮ್ಮದ ಅಲಿ ಹೈದರಲಿಯ ಮುತ್ತಾತ ಧರ್ಮನಿಷ್ಟನೂ ಸಂತನೂ ಆಗಿದ್ದನು. ಮಹಮ್ಮದ ಹೈದರನ ವಂಶಜರು ಪ್ರಾಚೀನ ಅರೇಬಿಯಾದ ಖುರೈಷಿ ಬುಡಕಟ್ಟಿನಿಂದ ಬಂದವರು. ಇರಾನ್ ಇರಾಕ್ ಮೂಲಕ ಭಾರತಕ್ಕೆ ವಲಸೆ ಬಂದು ದೆಹಲಿಯಲ್ಲಿ ನೆಲೆಸಿದ್ದವರು ದೆಹಲಿಯಿಂದ ನಂತರ ಗುಲಬರ್ಗಾಕ್ಕೆ ಬಂದರು. ಮಹಮ್ಮದ ಅಲಿಯ ಗುಲಬರ್ಗಾ ಬಂದೇನವಾಜ ದರ್ಗಾದ ಮುತವಲ್ಲಿಯಾಗಿದ್ದರು. ನಂತರ ಗುಲಬರ್ಗಾದಿಂದ ಮಹಮ್ಮದ ಅಲಿಯು ಬಿಜಾಪುರಕ್ಕೆ ಬಂದನು. ಬಿಜಾಪುರವು ಮೊಘಲರ ವಶವಾದಾಗ ಕುಟುಂಬ ಸಮೇತ ದಕ್ಷಿಣ ಕೋಲಾರಕ್ಕೆ ಬಂದನು. ಮಹಮ್ಮದ ಅಲಿಯ ನಾಲ್ಕನೆಯ ಮಗ ಷೇಠ ಫತೇಮಹಮ್ಮದ ಹೈದರನ ತಂದೆ ಅದೃಷ್ಟವನ್ನ ಅರಸಿಕೊಂಡು ಬೇರೆ ಬೇರೆ ಪಾಳೆಗಾರರ ಬಳಿ ಯೋಧನಾಗಿ ಸೇರಿಸಿಕೊಂಡನು. ಮೊದಲು ಮೈಸೂರಿನ ರಾಜರ ಸೇವೆಯಲ್ಲಿ ನಿಂತನು. ನಂತರ ದೊಡ್ಡಬಳ್ಳಾಪುರ ಕೋಟೆಯ ದಳಪತಿಯಾದನು. ಅದು ಮೈಸೂರು ಅರಸರಿಂದ ನವಾಬನ ವಶದಲ್ಲಿತ್ತು. ಹೀಗೆ ಧಾರ್ಮಿಕ ಪಶ್ಚಾತಾಪಗಳ ನೆಲೆಯಿಂದ ಹೈದರನ ಹಿರಿಯರು ಅದೃಷ್ಟವನ್ನರಸುವ ಯೋದರಾದರು. ಹೈದರನ ತಾಯಿ ಮಜಿದಾ ಬೇಗಂ ಆಕೆ ಸಿರಾದ ಒಬ್ಬ ಜಮೀನದಾರ ಮೀರ ಅಕ್ಬರನ ಮಗಳು. ಅವನು ಸಿರಾದ ನವಾಬನಿಗೆ ಕೊಡಬೇಕಾದ ಸಾಲವನ್ನು ಫತೇ ಮಹಮ್ಮದನೇ ಮರುಪಾವತಿ ಮಾಡಿದ ಉಪಕಾರದಲ್ಲಿ ಮಜೀದಾಳನ್ನು ವಿವಾಹಮಾಡಿಕೊಂಡನು. ಫತೇಮಹಮ್ಮದನು ಸಿರಾದ ಕೋಟೆಯನ್ನು ಧೈರ್ಯದಿಂದ ರಕ್ಷಿಸಿದನು. ಅದರ ಸಲುವಾಗಿ ಅವನಿಗೆ ಫತೇಮಹಮ್ಮದ ಎಂದು ಬಿರುದು ಪಡೆದನು.

ಹೈದರನ ಬಾಲ್ಯದ ದಿನಗಳು ಬಹಳ ಕಷ್ಟದಿಂದ ಕೂಡಿದ್ದವು. ಸಿರಾದ ಸುಬೇದಾ ಅಹಲ್ ಖಾನ್ ಮತ್ತು ದೊಡ್ಡಬಳ್ಳಾಪುರದ ಜಹಗೀರದಾರ ಅಜ್ಜುಲ್‌ರಸೂಲ ನಡುವೆ ನಡೆದ ಕದನದಲ್ಲಿ ಫತೇಮಹಮ್ಮದ ಮೃತನಾದನು. ಹೈದರನ ತಂದೆಯ ಸೋದರ ಅಳಿಯನಾದ ಹೈದರ ಸಾಹೇಬನ ನೆರವನ್ನು ಪಡೆದು ಹೈದರನ ತಾಯಿ ಮಜೀದಾಳನ್ನು ಬೆಂಗಳೂರಿನಲ್ಲಿಟ್ಟು ಸಲುಹಿದನು. ಅಲ್ಲಿ ಹೈದರ ಸಾಹೇಬರ ನೆರವಿನಲ್ಲಿ ಈ ಸಹೋದರರು ಸೈನಿಕ ತರಬೇತಿಯನ್ನು ಪಡೆದು ಆನಂತರ ಮೈಸೂರಿನ ಸೈನ್ಯವನ್ನು ಸೇರಿಕೊಂಡನು. ಕ್ರಿ.ಶ. ೧೭೪೯ರಲ್ಲಿ ಹೈದರನು ದೇವನಹಳ್ಳಿಯ ಮುತ್ತಿಗೆಯಲ್ಲಿ ಬಹು ವೀರಾವೇಶದಿಂದ ಹೋರಾಡಿ ಮೈಸೂರ ರಾಜ್ಯಕ್ಕೆ ಜಯ ದೊರಕಿಸಲು ಕಾರಣನಾದನು. ಇದರಿಂದ ಆಕರ್ಷಿತನಾದ ದಳವಾಯಿ ನಂಜರಾಜಯ್ಯ ಹೈದರನನ್ನು ಸೈನ್ಯವೊಂದರ ತುಕಡಿಯ ನಾಯಕನನ್ನಾಗಿ ಮಾಡಿ ಪ್ರೋತ್ಸಾಹ ನೀಡಿದನು.

ಹೈದರನು ಕ್ರಮೇಣ ಉನ್ನತ ಪದವಿ ಪಡೆಯುತ್ತ ದಂಡನಾಯಕನಾದನು. ಈ ಮಧ್ಯ ಹೈದರಾಬಾದ್‌ನಲ್ಲಿ ನಾಸರಜಂಗನಿಗೂ ಮುಜಾಫರಜಂಗನಿಗೂ ಸಿಂಹಾಸನಕ್ಕಾಗಿ ಕಲಹ ಉಂಟಾಗಿತ್ತು.

ನಂಜರಾಜನು ಸಹಾಯಕ್ಕಾಗಿ ಕಳುಹಿಸಿದ ಸೈನ್ಯದಲ್ಲಿ ಹೈದರನು ಒಬ್ಬ ಸೈನಿಕನಾಗಿದ್ದ ಯಾದವೀಕಲಹದಲ್ಲಿ ನಾಸರಜಂಗನು ಕೊಲೆಯಾದಾಗ ಹೈದರನು ಸೈನಿಕರ ಸಹಾಯದಿಂದ ಹೈದರಾಬಾದ ರಾಜ್ಯದ ಬೊಕ್ಕಸ ಲೂಟಿಮಾಡಿ ಮೈಸೂರಿಗೆ ಹಿಂದಿರುಗಿದ. ಇದರಿಂದ ಹೈದರನು ಮೈಸೂರಿನ ರಾಜರ ಕೃಪೆಗೆ ಪಾತ್ರನಾದನು. ಆ ಹಣದಿಂದ ಸೈನಿಕ ಸಂಖ್ಯೆಯನ್ನು ಹೆಚ್ಚಿಸಿ ಫ್ರೆಂಚ್ ಸೈನಿಕರಿಂದ ತರಬೇತಿ ನೀಡಿ ಫ್ರೆಂಚ್ ಸೈನ್ಯದ ಮಾದರಿಯಲ್ಲಿ ಸೈನ್ಯವನ್ನು ತಯಾರಿಸಿದನು. ತಿರುಚನಾಪಳ್ಳಿಯ ಮೇಲೆ ದಾಳಿ ಮಾಡಲು ನಂಜರಾಜ ದಳವಾಯಿಯೊಂದಿಗೆ ಹೈದರಲಿ ಹೋದನು. ಅಲ್ಲಿ ಬ್ರಿಟೀಷರನ್ನು ಸೋಲಿಸಿ ಕೆಲವು ಫಿರಂಗಿಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೭೭೫ ರಲ್ಲಿ ಅವನನ್ನು ದಿಂಡಿಗಲ್ಲಿನ ಫಜಿದಾರನನ್ನಾಗಿ ನೇಮಿಸಲಾಯಿತು. ಮುಂದಿನ ಐದು ವರ್ಷದಲ್ಲಿ ಮೈಸೂರಿನ ಆಸ್ಥಾನದಲ್ಲಿ ತನ್ನ ಅಧಿಕಾರವನ್ನು ಘನತೆಯನ್ನು ಹೆಚ್ಚಿಸಿಕೊಂಡನು. ನಂತರ ನಂಜರಾಜನಿಂದ ಅಧಿಕಾರವನ್ನು ಕಸಿದುಕೊಂಡನು. ಕೃಷ್ಣರಾಜ ಒಡೆಯರನ್ನು ಮೆಲ್ಲಗೆ ಬದಿಗೊತ್ತಿ ಕ್ರಿ.ಶ. ೧೭೬೧ ರಲ್ಲಿ ಹೈದರಾಲಿ ಮೈಸೂರಿನ ಅರಸನಾದನು. ಕೃಷ್ಣರಾಜ ಒಡೆಯರು ನಾಮಕಾವಾಸ್ತೆ ರಾಜನಾಗಿದ್ದು ವರ್ಷಕ್ಕೊಮ್ಮೆ ಪ್ರಜೆಗಳಿಗೆ ದರ್ಶನ ಕೊಡುತ್ತಿದ್ದರು. ಮೈಸೂರನ್ನು ದಕ್ಷಿಣ ಭಾಗದಲ್ಲಿ ಒಂದು ಪ್ರಭಲವಾದ ರಾಜ್ಯವನ್ನಾಗಿ ಮಾಡಿ ತಾನು ಅದರ ರಾಜನಾಗಿ ಮೆರೆದನು. ಬ್ರಿಟೀಷರು ಹಾಗೂ ಹೈದರಾಬಾದ ನಿಜಾಮನೊಂದಿಗೆ ಮೊದಲನೆಯ ಆಂಗ್ಲೋ ಮೈಸೂರು ಯುದ್ಧ (೧೭೬೬-೧೭೬೯) ರಲ್ಲಿ ನಡೆಯಿತು. ಈ ಯುದ್ಧದಲ್ಲಿ ಹೈದರನಿಗೆ ಗೆಲುವಾಯಿತು. ಎರಡನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಕ್ರಿ.ಶ.೧೭೮೨ ರ ಡಿಸೆಂಬರ್‌ನಲ್ಲಿ ಹೈದರ ತಮಿಳುನಾಡಿನಲ್ಲಿ ಮರಣ ಹೊಂದಿದನು.

ಹೈದರನ ಕಾಲದಲ್ಲಿ ಮೈಸೂರಿನ ರಾಜ್ಯ ತನ್ನ ಗಾತ್ರದಲ್ಲಿ ಎರಡು ಪಟ್ಟು ಹೆಚ್ಚಿ ೮೦,೦೦೦ ಚ.ಮೈ. ವಿಸ್ತಾರವಾಯಿತು. ೪೮ ಲಕ್ಷವಿದ್ದ ರಾಜ್ಯದ ವರಮಾನ ೧೧೦ ಲಕ್ಷಕ್ಕೇರಿತು. ಅವನು ಒಬ್ಬ ಶ್ರೇಷ್ಠ ಯೋಧ ಆಡಳಿತಗಾರ ಹಾಗೂ ರಾಜನೀತಿಜ್ಞನಾಗಿ ಕರ್ನಾಟಕದ ಇತಿಹಾಸದಲ್ಲಿ ಅವನಿಗೆ ಗಣ್ಯಸ್ಥಾನವಿದೆ. ಶ್ರದ್ಧಾವಂತ ಮಹಾತ್ಮನಾದ ಆತ ತನ್ನ ಮತವನ್ನು ಸಾರ್ವಜನಿಕ ವ್ಯವಹಾರದಲ್ಲಿ ಅಷ್ಟೊಂದು ತರಲಿಲ್ಲ. ಆತ ಧರ್ಮ ಸಹಿಷ್ಣುವಾಗಿದ್ದನು. ಬೆಂಗಳೂರಿನಲ್ಲಿ ಲಾಲ್‌ಬಾಗ್ ಉದ್ಯಾನ ಹಾಗೂ ಅರಮನೆ ಹಾಗೂ ಹೈದರನೆ ಕಟ್ಟಿಸಲು ಪ್ರಾರಂಭಿಸಿದ. ವರ್ಣರಂಜಿತ ದರಿಯಾ ದೌಲತ್ ಶ್ರೀರಂಗಪಟ್ಟಣದಲ್ಲಿದೆ.

ಟಿಪ್ಪು ಸುಲ್ತಾನ (ಕ್ರಿ.ಶ. ೧೭೮೨-೧೭೯೯) :

ಹೈದರನ ನಂತರ ಅಧಿಕಾರಕ್ಕೆ ಬಂದ ಟಿಪ್ಪು ಕರ್ನಾಟಕದ ಇತಿಹಾಸದಲ್ಲಿ ತಂದೆಗಿಂತ ಭಿನ್ನವಾದ ಸ್ಥಾನವನ್ನು ಕಲ್ಪಿಸಿಕೊಂಡಿದ್ದಾನೆ. ಬ್ರಿಟೀಷರನ್ನು ಭಾರತದಿಂದ ಓಡಿಸಬೇಕೆಂಬ ದೃಢಸಂಕಲ್ಪದಿಂದಲೇ ಹೋರಾಡಿದ ಟಿಪ್ಪು ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿದ್ದು "ಮೈಸೂರಿನ ಹುಲಿ" ಎಂದೇ ಪ್ರಸಿದ್ಧವಾಗಿದ್ದ. ವಿದ್ಯಾವಂತ ಆದರೆ ತಂದೆಯಂತೆ ಚತುರನಾಗಿರಲಿಲ್ಲ.

ಟಿಪ್ಪುಸುಲ್ತಾನ ಕ್ರಿ.ಶ.೧೭೫೦ ಡಿಸೆಂಬರ ೩೦ ರಂದು ಜನಸಿದನು. ಟಿಪ್ಪುವಿಗೆ ಪರ್ಷಿಯನ್ ಇಂಗ್ಲೀಷ್ ಮತ್ತು ಫ್ರೆಂಚ್ ಭಾಷೆಗಳು ತಿಳಿದಿದ್ದವು. ಅಮೇರಿಕನ್ ಡಿಕ್ಲೇರೇಷನ್ ಆಫ್ ಇಂಡಿಪೆಂಡೆನ್ಸ್ ಪತ್ರಿಕೆಯನ್ನು ಪಡೆದ ಭಾರತೀಯರಲ್ಲಿ ಟಿಪ್ಪು ಮೊದಲಿಗ. ತಂದೆ ಹೈದರ ಅಲಿ ಜೊತೆ ಎರಡನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಪಾಲ್ಗೊಂಡು ವಿಜಯವನ್ನು ಗಳಿಸಿದ್ದ ಧೀರ ತರುಣನಾಗಿದ್ದ. ೧೭೮೪ ರಲ್ಲಿ ಮಂಗಳೂರ ಒಪ್ಪಂದ ಬ್ರಿಟೀಷರ ಜೊತೆ ಮಾಡಿಕೊಂಡಿದ್ದನು. ಟಿಪ್ಪು ತನ್ನನ್ನು ಸುಲ್ತಾನನೆಂದು ಘೋಷಿಸಿಕೊಂಡನು. ತನ್ನ ರಾಜ್ಯ "ದೈವದತ್ತ" ಎಂದು ಪ್ರಕಟಿಸಿಕೊಂಡನು. ಕ್ರಿ.ಶ. ೧೭೮೯ರಲ್ಲಿ ಟಿಪ್ಪು ಮರಾಠರನ್ನು ಸೋಲಿಸಿದನು. ಟಿಪ್ಪು ಬ್ರಿಟೀಷರ ವಿರುದ್ಧ ಯುದ್ಧ ಮುಂದುವರಿಸಿಕೊಂಡು ಬಂದನು. ಮೂರನೆಯ ಆಂಗ್ಲೋ ಮೈಸೂರು ಯುದ್ಧವು ೧೭೯೦ರಲ್ಲಿ ಪ್ರಾರಂಭವಾಯಿತು. ಇದರಲ್ಲಿ ಟಿಪ್ಪು ಮತ್ತು ಬ್ರಿಟೀಷರು ಭಾಗಿಯಾದರು ೧೭೯೨ರಲ್ಲಿ ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಮೂರನೆಯ ಆಂಗ್ಲೋ ಮೈಸೂರು ಯುದ್ಧ ಅಂತ್ಯವಾಯಿತು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಕ್ರಿ.ಶ. ೧೭೯೯ರಲ್ಲಿ ಟಿಪ್ಪು ಜನರಲ್ ಹ್ಯಾರಿಸನ್ ಕೈಯಲ್ಲಿ ಮುಳವಳ್ಳಿಯಲ್ಲಿಯೂ ಸ್ಟುವರ್ಟ್‌ನ ಕೈಯಲ್ಲಿ ಸಿದ್ದೇಶ್ವರದಲ್ಲಿ ಸೋತು ತನ್ನ ರಾಜಧಾನಿ ಶ್ರೀರಂಗಪಟ್ಟಣದ ಮೀಕಾಪಣೆಗೆ ಹೊರಟನು. ಶ್ರೀರಂಗಪಟ್ಟಣ ಕೋಟೆ ಬ್ರಿಟೀಷರ ವಶವಾದವು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ಅಂತ್ಯಕ್ಕೆ ೧೭೯೯ ಜೂನ್ ೨೨ರಲ್ಲಿ ಶ್ರೀರಂಗಪಟ್ಟಣ ಒಪ್ಪಂದವಾಯಿತು. ಟಿಪ್ಪು ೧೭೯೯ ಮೇ ೪ರಂದು ಶ್ರೀರಂಗಪಟ್ಟಣದಲ್ಲಿ ಮರಣ ಹೊಂದಿದನು.

ಟಿಪ್ಪುವಿನ ಜೀವನ ಪರಿಚಯ ಮತ್ತು ಪ್ರಮುಖ ಸಾಧನೆಗಳು :

ಟಿಪ್ಪುವಿನಲ್ಲಿ ಹುಡುಗನಾಗಿದ್ದಾಗಲೇ ಯೋಧನ ಗುಣಗಳು ಕಂಡುಬಂದವು. ಅವನು ತಂದೆಯೊಂದಿಗೆ ಮಲಬಾರ್ ದಂಡಯಾತ್ರೆಯಲ್ಲಿ ಪಾಲಗೊಂಡನು ಹಾಗೂ ಪ್ರಥಮ ಆಂಗ್ಲೋ–ಮೈಸೂರು ಯುದ್ಧದಲ್ಲಿ ಭಾಗವಹಿಸಿದನು. ದ್ವಿತೀಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಅವನು ಕರ್ನಲ್ ಬ್ರೇತ್‌ವೈಟ್‌ನನ್ನು ಸೋಲಿಸಿ ಸೆರೆಹಿಡಿದನು. ೧೭೮೨ ಡಿಸೆಂಬರ್ ೨೯ರಂದು ಅವನು ಮಲಬಾರಿನಲ್ಲಿದ್ದಾಗ ತಂದೆಯ ಸಾವಿನ ಸುದ್ದಿ ಬಂತು. ಹಾಗೂ ಅವನು 'ನವಾಬ್ ಟಿಪ್ಪು ಸುಲ್ತಾನ ಬಹದೂರ್' ಎಂಬ ಹೆಸರಿನಲ್ಲಿ ಅಧಿಕಾರವನ್ನು ವಹಿಸಿಕೊಂಡನು.

ಆಗ ಬಹಳ ಗೊಂದಲವಿದ್ದರೂ ಟಿಪ್ಪುವು ಬಿದನೂರನ್ನು ಇಂಗ್ಲೀಷರ ಕೈಯಿಂದ ವಶಪಡಿಸಿಕೊಂಡನು ಹಾಗೂ ಮಂಗಳೂರಿಗೆ ಮುತ್ತಿಗೆ ಹಾಕಿದನು. ೧೭೮೪ರಲ್ಲಿ ಮಂಗಳೂರಿನಲ್ಲಿ ಅವನ ಮತ್ತು ಇಂಗ್ಲೀಷರ ನಡುವೆ ಒಪ್ಪಂದವಾಯಿತು. ಇದರ ಪ್ರಕಾರ ಟಿಪ್ಪುವು ಕರ್ನಾಟಕವನ್ನು ತೆರವು ಮಾಡಲು ಒಪ್ಪಿದನು ಹಾಗೂ ಸೆರೆಯಾಳುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲಾಯಿತು. ಮುಂದೆ ಮರಾಠರು ಮತ್ತು ನಿಜಾಮ ಒಟ್ಟಾಗಿ ಟಿಪ್ಪುವನ್ನು ಅವಮಾನಿಸಲು ಯತ್ನಿಸಿದರು. ಆದರೆ ಅವನು ನಿಜಾಮನನ್ನು ಆದವಾನಿಯಲ್ಲಿ ಹಾಗೂ ಮರಾಠರನ್ನು ಸವಣೂರಿನಲ್ಲಿ

ಸೋಲಿಸಿದನು. ೧೭೮೭ರ ಒಪ್ಪಂದದಲ್ಲಿ ಟಿಪ್ಪು, ಪೇಶ್ವೆ ಮತ್ತು ನಿಜಾಮ ಒಳ್ಳೆಯ ಸ್ನೇಹಿತರಾಗಿರಬೇಕೆಂದು ನಿರ್ಧಾರವಾಯಿತು. ಆದರೆ ಲಾರ್ಡ್ ಕಾರ್ನ್‌ವಾಲೀಸ್ ೧೭೯೦ರಲ್ಲಿ ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡನು. ಹಾಗೂ ಟಿಪ್ಪುವು ಇಂಗ್ಲೀಷರ ಮಿತ್ರನಾದ ತಿರುವಾಂಕೂರಿನಲ್ಲಿ ರಾಜನ ವಿರುದ್ಧ ಮಾಡಿದ ಆಕ್ರಮಣಕ್ಕೋಸ್ಕರ ಅವನ ಮೇಲೆ ಎರಗಿದನು. ಟಿಪ್ಪುವು ಪ್ರಾರಂಭದಲ್ಲಿ ಗೆದ್ದರೂ ಶ್ರೀರಂಗಪಟ್ಟಣಕ್ಕೆ ಹಿಂದೆ ಸರಿಯಬೇಕಾಯಿತು. ಮರಾಠರು ಮತ್ತು ನಿಜಾಮ ಇಂಗ್ಲೀಷರೊಂದಿಗೆ ಸೇರಿಕೊಂಡರು. ಹೀಗಾಗಿ ಟಿಪ್ಪುವು ರಾಜಿಮಾಡಿಕೊಳ್ಳಲು ಮುಂದಾದನು. ಅವನು ಆಕ್ರಮಣದಲ್ಲಿ ಗೆದ್ದುಕೊಂಡಿದ್ದ ಪ್ರದೇಶಗಳಲ್ಲಿ ಹೆಚ್ಚಿನವನ್ನು ಈ ಮೂವರಿಗೆ ಬಿಟ್ಟುಕೊಡಬೇಕಾಯಿತು. ಇದೇ ವೇಳೆಗೆ ಟಿಪ್ಪುವು ನೆಪೋಲಿಯನ್ ಮತ್ತು ಕಾಬೂಲಿನ ಜಮಾನ್‌ಷಾನಿಂದ ಬೆಂಬಲವನ್ನು ಪಡೆಯಲು ಯತ್ನಿಸಿದನು.

ಟಿಪ್ಪುವು ಕರ್ನಾಟಕದ ಇತಿಹಾಸದ ಮೇಲೆ ಆಳವಾದ ಮುದ್ರೆಯನ್ನೊತ್ತಿದ್ದಾನೆ. ಅವನು ಒಳ್ಳೆಯ ಆಡಳಿತಗಾರನಾಗಿದ್ದು, ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ವ್ಯವಸಾಯವನ್ನು ಪ್ರೋತ್ಸಾಹಿಸಿದನು. ಅವನು ತನ್ನ ಅರಮನೆಗೋಸ್ಕರ ಶ್ರೀರಂಗಪಟ್ಟಣದ ದರಿಯಾ ದೌಲತ್ ಬಾಗ್ ಸಹಿತ ಕೆಲವು ಅದ್ಭುತ ಕಟ್ಟಡಗಳನ್ನು ಕಟ್ಟಿಸಿದನು, ಟಿಪ್ಪುವು ಓರ್ವ ಗಣನೀಯ ವ್ಯಕ್ತಿಯಾಗಿದ್ದನು ಎಂಬುದನ್ನು ಇತಿಹಾಸವೇ ಸಾರಿ ಹೇಳುತ್ತಿದೆ.

ಟಿಪ್ಪುವಿನ ಅರಮನೆ :

ಶ್ರೀರಂಗಪಟ್ಟಣದ ಕೋಟೆಯ ಒಳಗಡೆ ಸುಮಾರು ೧೫೦ ಯಾರ್ಡ್ ದೂರದ ಪೂರ್ವದಿಕ್ಕಿನಲ್ಲಿ ರಂಗನಾಥಸ್ವಾಮಿಯ ದೇವಾಲಯವಿದೆ. ಅದರ ಪಕ್ಕದಲ್ಲಿದ್ದ ನಗಿಸಿಹಾಳಾದ ಟಿಪ್ಪುವಿನ ಅರಮನೆ ಇದೆ. ಟಿಪ್ಪುವಿನ ಅರಮನೆಯನ್ನು ಕರ್ನಲ್ ವೆಲ್ಲಸ್ಲಿಯು ಕ್ರಿ.ಶ. ೧೮೦೭ ಮತ್ತು ೧೮೯೯ರಲ್ಲಿ ನಾಶಪಡಿಸಿದನು. ಪಟ್ಟಿಗೆ ತೊಲೆಗಳ ಮೈಸೂರಿನ ಮಹಾರಾಜರ ಅರಮನೆ ರಚನೆಯಲ್ಲಿ ಉಪಯೋಗಿಸಿರಬಹುದು. ಬೆಂಗಳೂರಿನಲ್ಲಿಯ ಟಿಪ್ಪುವಿನ ಅರಮನೆಯ ಹಾಗೂ ಗಂಜಂನಲ್ಲಿ ದರಿಯಾ ದೌಲತ್ ಹೂದೋಟದ ಮಧ್ಯದಲ್ಲಿಯ ಅರಮನೆ ಇಂದಿಗೂ ಇವೆ. ಈ ಕಟ್ಟಿಗೆಯ ಅರಮನೆಯು ೧೮೯೭ರಲ್ಲಿ ಬೆಂಕಿಯಿಂದ ನಾಶವಾಯಿತು. ಈಗಿನ ದರಿಯಾ ದೌಲತ್ ಅರಮನೆಯು ನಾಶವಾದನಂತರ ಮೈಸೂರಿನಲ್ಲಿದ್ದ ಇಂದಿನ ಅರಮನೆ ರಚನೆಯಾಯಿತು. ಕಟ್ಟಿಗೆಯಿಂದ ರಚಿಸಿದ ಅರಮನೆಯ ದ್ವಾರವು ಈಗಲೂ ಮೈಸೂರಿನ ಅರಮನೆಯ ಮುಂದಿನ ಭಾಗದಲ್ಲಿದೆ.

ದರಿಯಾದೌಲತ್ ಅರಮನೆ :

ಲಾಲ್‌ಬಾಗ್ ಹೂ ತೋಟವು ಶ್ರೀರಂಗಪಟ್ಟಣದ ನೈರುತ್ಯ ದಿಕ್ಕಿನಲ್ಲಿದೆ. ಕಾವೇರಿ ನದಿಯ ಗಂಜಾಮ್ ಸ್ಥಳದಲ್ಲಿದೆ. ಈ ಅರಮನೆಯು ಟಿಪ್ಪುವಿನ ಆಡಳಿತದ ಕಾಲಾವಧಿಯಲ್ಲಿಯ ಒಂದು ಶ್ರೇಷ್ಠ ರಚನೆಯಾಗಿದೆ. ಈ ಕಟ್ಟಡವನ್ನು ಮದ್ರಾಸದ ಗವರ್ನರ್ ಸರ್ ಸ್ಟೀಫನ್ ರುಂಬಾಲ್ಡ್ ಲುಸಿಂಗಟನ್ ಕೆಡವಲು ಆದೇಶಿಸಿದನು ಮತ್ತು ಅದರ ಅವಶೇಷಗಳನ್ನು ನೀಲಗಿರಿಯಲ್ಲಿದ್ದು

ಚರ್ಚಿನ ರಚನೆಗೆ ಕೆಲವೊಂದನ್ನು ತೆಗೆದುಕೊಂಡು ಹೋದರು. ಲಾಲ್‌ಬಾಗ ಅರಮನೆಯನ್ನು ನಾಶ ಪಡಿಸಿದ ನಂತರ ಅಲ್ಲಿಯ ತೊಲೆಗಳು, ಬಾಗಿಲುಗಳು ಚರ್ಚಿನಲ್ಲಿ ಉಪಯೋಗಿಸಿದ್ದಾರೆ. ಕೆಲವು ಕಟ್ಟಿಗೆಯ ತೊಲೆಗಳು ಚಾರ್ಚಿಮಿಷನ್ ಸ್ಕೂಲಿನಲ್ಲಿ ಉಪಯೋಗಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿರುವ ಟಿಪ್ಪುವಿನ ಅರಮನೆ ದರಿಯಾ ದೌಲತ್ ಇದನ್ನು ಹೈದರಲಿಯು ಕಟ್ಟಲು ಪ್ರಾರಂಭಿಸಿದ ಅರಮನೆಯನ್ನು ಟಿಪ್ಪು ಹದಿನೆಂಟನೆಯ ಶತಮಾನದ ಕೊನೆಗೆ ರಚಿಸಿದನು. ಕಾವೇರಿ ನದಿಯ ನಡುಗಡ್ಡೆಯಾದ ಶ್ರೀರಂಗಪಟ್ಟಣದಲ್ಲಿ ಒಂದು ವಿಶಾಲ ಉದ್ಯಾನವನ್ನು ರಚಿಸಿ ಅದರ ನಡುವೆ ಬಂಗ್ಲೆಯಂತಹ ಅರಮನೆಯನ್ನು ಕಟ್ಟಿಸಿದ. ಅದಕ್ಕೆ ಸುತ್ತಲೂ ವಿಶಾಲವಾದ ಹೊರ ಚಾವಡಿಗಳಿವೆ. ಒಳಗಡೆ ವಿಶಾಲವಾದ ಕೊಠಡಿಗಳಿವೆ. ನಮ್ಮ ಕಣ್ಣಿಗೆ ಪ್ರಧಾನವಾಗಿ ಕಾಣಿಸುವ ಭಿತ್ತಿ ಚಿತ್ರಗಳು ಈ ಅರಮನೆಯ ಮೂಡಣ ಮತ್ತು ಪಡುವಣ ಚಾವಡಿಗಳ ಗೋಡೆಗಳಿರುತ್ತವೆ. ಹೊರಗಣ ಪೂರ್ವ ಮತ್ತು ಪಶ್ಚಿಮ ಗೋಡೆಗಳು ಐವತ್ತು ಅರವತ್ತು ಅಡಿ ಉದ್ದವಾಗಿಯೂ ಸುಮಾರು ಹದಿನೆಂಟು ಅಡಿಗಳಷ್ಟು ಉದ್ದವಾಗಿಯೂ ಇದ್ದು ಅವುಗಳ ಮೈತುಂಬ ಚಿತ್ರಗಳೇ ಇವೆ.

ನಾಲ್ಕು ನಾಡು ಅರಮನೆ, ಕೊಡಗು :

ಇಂದಿನ ಕರ್ನಾಟಕದ ಕೊಡಗು ಜಿಲ್ಲೆಯ ಅದೇ ಹೆಸರಿನ ಹಿಂದಿನ ರಾಜ ಸಂಸ್ಥಾನದ ಪ್ರದೇಶದಲ್ಲಿ ಒಳಗೊಂಡಿದೆ. ಕೊಡಗು ಅತ್ಯಂತ ಆಸಕ್ತಿದಾಯಕ ಪ್ರಾಚೀನ ಪ್ರಾಚೀನ ೧.೫ ಹೆಚ್ಚಿನ ೭.೫ ಮೀ ಇವು ಭೂಮಿಯ ಅಥವಾ ವಾರ್ ಟ್ರೆಂಚಸ್ (ಕಡಂಗ), ಮತ್ತು ವ್ಯಾಪಕ ೨ ಅಥವಾ ೩ ಮೀ ಮೂಲಕ ಆಳವಾದ ಕಂದಕದ ೩ ಮೀ ಒದಗಿಸಲಾಗುತ್ತದೆ. ಲಿನಿಯರ್ ಮಟ್ಟಿಗೆ ೫೦೦ ರಿಂದ ೬೦೦ ಮೀ ಎನ್ನಲಾಗಿದೆ. ಅವರು ೯ನೇ ಮತ್ತು ೧೦ನೇ ಶತಮಾನಗಳಲ್ಲಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಕೊಡವರು ಶತಮಾನಗಳಿಂದ ಎಂದು ಸ್ಥಳದಲ್ಲಿ ವಾಸಿಸುವ, ಕೊಡಗು ಆರಂಭಿಕ ಕೃಷಿಕರು ಇದ್ದರು. ಚನಗಲ್ವ ಮತ್ತು ಕೊನಗಲ್ವ ಹಾಗೇ ನಾಯಕ ಮತ್ತು ಪಾಳೆಗಾರರು ಅವುಗಳನ್ನು ಆಳಿದರು. ಶತಮಾನಗಳಿಂದ ಕದಂಬರು, ಗಂಗರು, ಚೋಳರು, ಚಾಲುಕ್ಯರು, ಹೊಯ್ಸಳರು, ಮತ್ತು ವಿಜಯನಗರ ರಾಯ್ಸ್ ಕೆಳಗೆ ಅನೇಕ ದಕ್ಷಿಣ ಭಾರತದ ಸಾಮ್ರಾಜ್ಯಗಳು, ಕೊಡಗು ಆಳಿದರು. ಕೊಡಗು ಆರಂಭಿಕ ಖಾತೆಗಳನ್ನು ಕೇವಲ ಪ್ರಸಿದ್ಧ, ಮತ್ತು ಅದರ ಇತಿಹಾಸ ಅಧಿಕೃತ ದಾಖಲೆಗೆ ವಸ್ತುವಾದರು ಎಂದು ೯ನೇ ಮತ್ತು ೧೦ನೇ ಶತಮಾನಗಳ ತನಕ ಇರಲಿಲ್ಲ. ಈ ಅವಧಿಯಲ್ಲಿ, ಶಾಸನಗಳಲ್ಲಿ ಪ್ರಕಾರ, ದೇಶದ ಇವರಲ್ಲಿ ಅಡಿಯಲ್ಲಿ ಚನಗಲ್ವ, ಚಂಗ– ನಾಡು ರಾಜರು, ನಂಜರಾಯಪಟ್ಟಣ ಶೈಲಿಯ ರಾಜರು, ಪೂರ್ವ ಮತ್ತು ಉತ್ತರ ಭಾಗವಾಗಿ ನಡೆದ, ತಲಕಾಡು ರಾಜರು ಆಳಿದರು ಒಟ್ಟಿಗೆ ಮೈಸೂರು ಹುಣಸೂರು ತಾಲ್ಲೂಕಿನ ಜೊತೆ ಕೊಡಗು.. ಪತನದ ನಂತರ, ೧೧ನೇ ಶತಮಾನದಲ್ಲಿ, ಚೋಳರು ಗಂಗಾ ಅಧಿಕಾರದ, ಚನಗಲ್ವ

ಎರಡನೆಯದು ಉಪನದಿ ಆಯಿತು. ಚನಗಲ್ವ, ಕೊನಗಲ್ವ ಮತ್ತು ಕೊಡವರ ಎರಡೂ ಕೊಡಗು ಚೋಳರ ಊಳಿಗಮಾನ್ಯ ಪದ್ಧತಿಯ ಧಣಿಗಳು. ತಮ್ಮ ಪ್ರತಿಯಾಗಿ ಚೋಳರ ೧೨ನೇ ಶತಮಾನದಲ್ಲಿ, ಹೊಯ್ಸಳರ ಮೈಸೂರು ದೇಶದ ಹೊರ ಬಂದಾಗ ಚನಗಲ್ವ ಸ್ವಾತಂತ್ರ್ಯದಿಂದ ಹೊರಗುಳಿದವು; ಆದರೆ ತೀವ್ರ ಹೋರಾಟದ ನಂತರ ಅವರು ಸದ್ದಡಗಿಸಿಕೊಂಡವು ಮತ್ತು ಹೊಯ್ಸಳ ಅರಸರ ಸಾಮಂತರು ಆಯಿತು. ೧೪ನೇ ಶತಮಾನದಲ್ಲಿ, ಹೊಯ್ಸಳ ಆಡಳಿತದ ಪತನದ ನಂತರ, ಅವರು ವಿಜಯನಗರ ಸಾಮ್ರಾಜ್ಯದ ಸಾರ್ವಭೌಮತ್ವದ ಅಡಿಯಲ್ಲಿ ಜಾರಿಯಾಯಿತು. ಈ ಅವಧಿಯಲ್ಲಿ, ೧೬ನೇ ಶತಮಾನದ ಆರಂಭದಲ್ಲಿ, ನಂಜ ರಾಜಾ ಹೊಸ ಚನಗಲ್ವ ಬಂಡವಾಳ ನಂಜರಪಟ್ಟಣ ಸ್ಥಾಪಿಸಲಾಯಿತು. ಬ್ರಿಟಿಷ್ ಆಡಳಿತದ ಏಪ್ರಿಲ್ ೧೮೩೪, ೧೧ರಂದು ರಾಜಾ ಕರ್ನಲ್ ಫ್ರೇಸರ್, ಬಲದೊಂದಿಗೆ ರಾಜಕೀಯ ಏಜೆಂಟ್ ಪದಚ್ಯುತಗೊಳಿಸಿದ, ಮತ್ತು ೭ರಂದು ರಾಜ್ಯದ ಔಪಚಾರಿಕವಾಗಿ ಕೊಡಗು ಮಾಹಿತಿ, ಈಸ್ಟ್ ಇಂಡಿಯಾ ಕಂಪೆನಿಯ ಪ್ರದೇಶಗಳನ್ನು ಸೇರ್ಪಡೆಯಾಯಿತು. ಮೇ. ೧೮೫೨ರಲ್ಲಿ ಪಡೆದ ವೆಲ್ಲೂರು ಗಡಿಪಾರು ಮಾಡಿದ ರಾಜಾ, ಅವರು ಯುರೋಪಿಯನ್ ಶಿಕ್ಷಣ ನೀಡಲು ಬಯಸಿದರು ಯಾರಿಗೆ ತನ್ನ ನೆಚ್ಚಿನ ಮಗಳು ಗೌರಮ್ಮ, ಇಂಗ್ಲೆಂಡ್ ಭೇಟಿ ಬಿಟ್ಟು. ೩೦ ಜೂನ್‌ರಂದು ಅವಳು ರಾಣಿ ವಿಕ್ಟೋರಿಯಾ ತನ್ನ ಪ್ರಾಯೋಜಕರು ಒಂದಾಗಿದೆ, ಬ್ಯಾಪ್ಟೈಜ್ ಮಾಡಲಾಯಿತು. ಅವರು ನಂತರ ೧೮೬೪ ರಲ್ಲಿ ಅವರ ಸಾವಿನ ನಂತರ, ನಿಗೂಢವಾಗಿ ತಮ್ಮ ಮಗುವಿಗೆ ಕಣ್ಮರೆಯಾಯಿತು, ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ವಿವಾಹವಾದರು. ವೀರ ರಾಜಾ ಸ್ವತಃ ೧೮೬೩ ರಲ್ಲಿ ನಿಧನರಾದರು, ಮತ್ತು ಕೆನ್ಸಲ್ ಗ್ರೀನ್ ಸ್ಮಶಾನದಲ್ಲಿ ಸಮಾಧಿ ಮಾಡಲಾಯಿತು. ಬ್ರಿಟಿಷ್ ಭಾರತದ ಒಂದು ಪ್ರಾಂತವಾಗಿ, ಇದು ಕೊಡಗಿನಲ್ಲಿ ಅಧಿಕೃತವಾಗಿ ಮುಖ್ಯ ಆಯುಕ್ತ ಯಾರು ಮೈಸೂರು ನಿವಾಸಿ ಮೂಲಕ ಭಾರತದ ಗವರ್ನರ್ ಜನರಲ್ ಅಧೀನ ಒಂದು ಆಯುಕ್ತ ಆಡಳಿತಕ್ಕೊಳಪಟ್ಟಿತ್ತು. ಕೊಡಗು ನಂತರ ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು.

ನಾಲ್ಕುನಾಡು ಅರಮನೆಯು ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನಲ್ಲಿದೆ. ಕೊಡಗನ್ನು ಕ್ರಿಸ್ತ ಶಕ ಸುಮಾರು ೧೬೦೦ರಿಂದ ೧೮೩೪ರವರೆಗ ಆಳಿದ ಇಕ್ಕೇರಿಯ ಲಿಂಗಾಯತ ರಾಜರು ಮಡಿಕೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ಸ್ಥಳ ಎದ್ದು ಕಾಣುವಂತಿದ್ದು, ಶತ್ರುಗಳಿಂದ ತಲೆಮರೆಸಿಕೊಳ್ಳಲು, ಅಥವಾ ಇನ್ಯಾವುದೇ ಕಾರಣಕ್ಕಾಗಿ ಗೌಪ್ಯವಾಗಿರಲು ಆಗಿನ ಕಾಲಕ್ಕೆ ದುರ್ಗಮವಾಗಿದ್ದ ನಾಲ್ಕುನಾಡಿನಲ್ಲಿ ಈ ಅರಮನೆಯನ್ನು ಕಟ್ಟಿಸಿದರು. ಕೊಡಗನ್ನು ಆಳುತ್ತಿದ್ದ ಲಿಂಗಾಯತ ರಾಜರಲ್ಲಿ ೯ನೆಯವನಾದ ಮೊದಲನೆಯ ಲಿಂಗರಾಜನು ೧೭೮೦ರಲ್ಲಿ ಸತ್ತಾಗ ಅವನ ಇಬ್ಬರು ಮಕ್ಕಳು – ವೀರರಾಜ ಮತ್ತು ಎರಡನೇ ಲಿಂಗರಾಜ– ಅಪ್ರಾಪ್ತ ವಯಸ್ಕರಾಗಿದ್ದರು. ಇದನ್ನು ದುರುಪಯೋಗಪಡಿಸಿಕೊಂಡು ಮೈಸೂರಿನ ಹೈದರಲಿಯು ಕೊಡಗನ್ನು ಸ್ವಾಧೀನಪಡಿಸಿಕೊಂಡನು. ಆದರೆ ಕೊಡವರು ದಂಗೆಯೆದ್ದು, ಹೈದರಲಿಯನ್ನು ಸೋಲಿಸಿ ಓಡಿಸಿದರು.

ಬಳಿಕ ಹೈದರಲಿಯ ಮಗ ಟಿಪ್ಪುವೂ ವೀರರಾಜನನ್ನು ತನ್ನ ವಶಕ್ಕೆ ತೆಗೆದುಕೊಂಡು ಕೊಡಗನ್ನು ಮತ್ತೆ ಸ್ವಾಧೀನಪಡಿಸಿಕೊಂಡನು.

ಟಿಪ್ಪುವಿನ ಬಂಧನದಿಂದ ತಪ್ಪಿಸಿಕೊಂಡ ವೀರ ರಾಜನು, ಕೊಡವರ ಸಹಾಯದಿಂದ ಟಿಪ್ಪುವಿನ ವಿರುದ್ಧ ಸತತವಾಗಿ ಯುದ್ಧ ಮಾಡುತ್ತಿರುವಾಗ ಅವನ ಕುಟುಂಬವನ್ನು ಸುರಕ್ಷಿತವಾದ ಸ್ಥಳದಲ್ಲಿಡಲು ಯೋಚಿಸುತ್ತಿದ್ದನು. ಆ ಸಂದರ್ಭದಲ್ಲಿ ಅವನ ಆಪ್ತ ಕಾರ್ಯಕಾರರಲ್ಲಿ ಒಬ್ಬನಾದ ಕೇಟುವಳಿರ ಅಚ್ಚುವಂಣನು ಪಾಡಿ ನಾಲ್ಕುನಾಡಿನ ಯುವಕಪಾಡಿ ಗ್ರಾಮದಲ್ಲಿ ಒಂದು ಅರಮನೆಯನ್ನು ಕಟ್ಟಿಸಲು ಸೂಚಿಸಿದನು. ಈ ಪ್ರದೇಶವು ಒಂದು ಬೆಟ್ಟದ ಮೇಲಿದ್ದು, ಕಾಡುಗಳಿಂದಲೂ ಆಳವಾದ ಕಣಿವೆಗಳಿಂದಲೂ ಸುತ್ತುವರೆದಿತ್ತು. ಬಯಲು ಸೀಮೆಯ ಟಿಪ್ಪುವಿನ ಸೈನಿಕರಿಗೇ ಅಲ್ಲದೆ ಕೊಡಗಿನವರಿಗೂ ದುರ್ಗಮವಾಗಿತ್ತು.

ವೀರರಾಜನಿಗೆ ಮನೆ ಕಟ್ಟಲು ನಿರ್ದೇಶಿಸಲ್ಪಟ್ಟ ಪ್ರದೇಶವು ಪುಲಿಯಂಡ ಮನೆತನಕ್ಕೆ ಸೇರಿತ್ತು. ಆ ಮನೆತನದ ಮುಖ್ಯಸ್ಥನಾದ ಪೊನ್ನಪ್ಪನನ್ನು ಕರೆಸಿ, ತಾನು ಮನೆ ಕಟ್ಟಲು ಉದ್ದೇಶಿಸಿರುವ ಪ್ರದೇಶಕ್ಕೆ ಬದಲಾಗಿ ಅವನಿಗೆ ಅನುಕೂಲವಾಗಿರುವ ಬೇರೆ ಯಾವದೇ ಪ್ರದೇಶವನ್ನು ಕೇಳಿ ಪಡೆದುಕೊಳ್ಳಬಹುದೆಂದು ಆದೇಶಿಸಿದನು. ಪುಲಿಯಂಡ ಮನೆತನಕ್ಕೆ ಎಡೆನಾಲ್ಕುನಾಡಿನ (ಈಗಿನ ವೀರರಾಜಪೇಟೆಯ ಸಮೀಪದ) ಮಗ್ಗುಲ ಗ್ರಾಮದ ಚೋಕಂಡ ಮನೆತನದಿಂದ ಮದುವೆಯಾಗಿ ಬಂದಿದ್ದವಳೊಬ್ಬಳ ಸೂಚನೆಯಂತೆ ಪೊನ್ನಪ್ಪನು ಮಗ್ಗುಲ ಗ್ರಾಮದಲ್ಲಿ ಭೂಮಿಯನ್ನು ಕೇಳಿದನು. ರಾಜನು ಅದಕ್ಕೆ ಸಮ್ಮತಿಸಿ, ಹಾಗೆಯೇ ಪುಲಿಯಂಡ ಮನೆತನದವರು ಅಲ್ಲಿನೆಲೆಸಲು ಅನುಕೂಲ ಮಾಡಿಕೊಟ್ಟನು. ಹೀಗೆ ನಾಲ್ಕುನಾಡಿನ ಅರಮನೆಯ ಕೆಲಸವು ಆರಂಭವಾಗಿ ಕೆಲವು ತಿಂಗಳುಗಳ ಬಳಿಕ ೧೭೯೧ರ ಡಿಸೆಂಬರಿನಲ್ಲಿ ಪೂರ್ಣಗೊಂಡಿತು[೧೩]

ಮೈಸೂರು ಅರಮನೆ :

ಅಂಬಾ ವಿಲಾಸ್ ಅರಮನೆ ಮೈಸೂರು ನಗರದಲ್ಲಿರುವ ಅನೇಕ ಅರಮನೆಗಳಲ್ಲಿ ಮುಖ್ಯವಾದ ಅರಮನೆ. ಮೈಸೂರು "ಅರಮನೆಗಳ ನಗರ" ಎಂದು ಕರೆಯಲ್ಪಡುತ್ತದೆ. "ಮೈಸೂರು ಅರಮನೆ" ಎನ್ನುವಾಗ ಸಾಮಾನ್ಯವಾಗಿ ಮುಖ್ಯ ಅರಮನೆಯಾದ ಅಂಬಾ ವಿಲಾಸವನ್ನು ನಿರ್ದೇಶಿಸಿ ಹೇಳಲಾಗುತ್ತದೆ. ಇದು ಹಿಂದಿನ ಮೈಸೂರು ಸಂಸ್ಥಾನದ ಒಡೆಯರ್ ವಂಶದ ಅರಸರ ನಿವಾಸ ಹಾಗೂ ದರ್ಬಾರು ಶಾಲೆಯಾಗಿದ್ದಿತು. ಈ ಅರಮನೆಯ ನಿರ್ಮಾಣ ಪ್ರಾರಂಭಿಸಿದ್ದು ೧೮೯೭ ರಲ್ಲಿ; ನಿರ್ಮಾಣ ೧೯೧೨ರಲ್ಲಿ ಮುಗಿಯಿತು. ಮೈಸೂರಿನ ಪ್ರವಾಸಿ ಆಕರ್ಷಣೆಗಳಲ್ಲಿ ಮುಖ್ಯವಾದ ಸ್ಥಳಗಳಲ್ಲಿ ಮೈಸೂರು ಅರಮನೆಯೂ ಒಂದು.

ಮೈಸೂರು ಸಂಸ್ಥಾನ ೧೩೯೯ರಿಂದ ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯದವರೆಗೂ 'ಒಡೆಯರ್ ವಂಶದ ಅರಸ'ರಿಂದ ಆಳಲ್ಪಟ್ಟಿತು (ಮಧ್ಯದಲ್ಲಿ ಸ್ವಲ್ಪ ಕಾಲ ಹೈದರ್ ಅಲಿ ಮತ್ತು ಟೀಪ್ಪು

ಸುಲ್ತಾನರ ಆಡಳಿತವನ್ನು ಬಿಟ್ಟು). ಒಡೆಯರ್ ಅರಸರು ೧೪ನೆಯ ಶತಮಾನದಲ್ಲಿಯೇ ಇಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ್ದರು. ಈ ಅರಮನೆ ೧೬೩೮ರಲ್ಲಿ ಸಿಡಿಲು ಹೊಡೆದು ಭಾಗಶಃ ಹಾಳಾಯಿತು. ಆಗ ಇದನ್ನು ರಿಪೇರಿ ಮಾಡಿ ವಿಸ್ತರಿಸಲಾಗಿತ್ತು. ಆದರೆ ೧೮ನೆಯ ಶತಮಾನದ ಕೊನೆಯ ಹೊತ್ತಿಗೆ ಅರಮನೆ ಮತ್ತಷ್ಟು ಹಾಳಾಗಿ ೧೭೯೩ರಲ್ಲಿ ಟೀಪು ಸುಲ್ತಾನ್ ಕಾಲದಲ್ಲಿ ಅದನ್ನು ಬೀಳಿಸಲಾಯಿತು. ೧೮೦೩ರಲ್ಲಿ ಇನ್ನೊಂದು ಅರಮನೆಯನ್ನು ಅದರ ಸ್ಥಳದಲ್ಲಿ ಕಟ್ಟಿಸಲಾಯಿತು. ಈ ಅರಮನೆ ಸಹ ೧೮೯೭ರಲ್ಲಿ ರಾಜಕುಮಾರಿ ಜಯಲಕ್ಷಮ್ಮಣ್ಣಿ ಅವರ ಮದುವೆಯ ಸಂದರ್ಭದಲ್ಲಿ ಬೆಂಕಿ ಬಿದ್ದು ನಾಶವಾಯಿತು.

ಆಗ ಮೈಸೂರು ಮಹಾರಾಣಿಯವರಾಗಿದ್ದ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಇನ್ನೊಂದು ಅರಮನೆಯನ್ನು ಕಟ್ಟಲು ಬ್ರಿಟಿಷ್ ಇಂಜಿನಿಯರ್ ಹೆನ್ರಿ ಇರ್ವಿನ್ ಅವರನ್ನು ನೇಮಿಸಿದರು. ವಿವಿಧ ರೀತಿಯ ವಾಸ್ತುಕಲೆಗಳನ್ನು ಸೇರಿಸಿ ಅರಮನೆಯನ್ನು ಕಟ್ಟಲು ಅವರಿಗೆ ತಿಳಿಸಲಾಯಿತು. ಅರಮನೆ ೧೯೧೨ರಲ್ಲಿ ಸಂಪೂರ್ಣವಾಯಿತು. ಈ ಅರಮನೆಯ ವಾಸ್ತುಕಲೆಯ ಶೈಲಿಯನ್ನು ಸಾಮಾನ್ಯವಾಗಿ “ಇಂಡೋ-ಸರಾಸೆನಿಕ್” ಶೈಲಿ ಎಂದು ವರ್ಣಿಸಲಾಗುತ್ತದೆ. ಮುಖ್ಯವಾಗಿ ಹಿಂದೂ, ಮುಸ್ಲಿಮ್, ಮತ್ತು ಗೋಥಿಕ್ ಶೈಲಿಯ ವಾಸ್ತುಕಲೆಗಳನ್ನು ಅರಮನೆಯ ನಿರ್ಮಾಣದಲ್ಲಿ ಉಪಯೋಗಿಸಲಾಗಿದೆ. ಕಲ್ಲಿನಲ್ಲಿ ಕಟ್ಟಲಾಗಿರುವ ಅರಮನೆಯಲ್ಲಿ ಮೂರು ಮಹಡಿಗಳಿದ್ದು, ಕೆಂಪು ಅಮೃತಶಿಲೆಯ ಗುಂಬಗಳು ಹಾಗೂ ೧೪೫ ಅಡಿ ಎತ್ತರದ ಐದು ಮಹಡಿಗಳುಳ್ಳ ಗೋಪುರವನ್ನು[೧೨] ಅರಮನೆ ಹೊಂದಿದೆ. ಅರಮನೆಯ ಸುತ್ತಲೂ ದೊಡ್ಡ ಉದ್ಯಾನವಿದೆ. ಬಂಗಾರದ ಗುಡಿಯಂತಿದೆ. ಇದರ ಒಳಾಂಗಣದಲ್ಲಿ ಭರಪೂರ ಭಿತ್ತಿ ಚಿತ್ರಗಳಿದ್ದು, ಅವುಗಳು ತೀರಾ ಇತ್ತೀಚಿನವೆಂದು ಹಿರಿಯರ ಮಾತು. ಆದರೂ ಅಧ್ಯಯನದ ದೃಷ್ಟಿಯಿಂದ ನೂರು ವರ್ಷಗಳ ಇತಿಹಾಸವಿರುವ ಅರಮನೆಯ ಕುರಿತು ಚರ್ಚಿಸುವುದು ಅನಿವಾರ್ಯವಾಗಿದೆ.

ದಕ್ಷಿಣ ಕರ್ನಾಟಕದ ದೇವಾಲಯಗಳು :

ದಕ್ಷಿಣ ಕರ್ನಾಟಕದ ದೇವಾಲಯಗಳಾದ ನರಸಿಂಹಸ್ವಾಮಿ ದೇವಾಲಯ, ಸಿಬಿ. ತೇರುಮಲ್ಲೇಶ್ವರ ಹಿರಿಯೂರು, ಯಡೆಯೂರು ಸಿದ್ದಲಿಂಗೇಶ್ವರ, ಶಂಕರೇಶ್ವರ, ಕೆರೆಗೋಡು. ರಂಗನಾಥ, ರಂಗಾಪುರ. ಸೋಮೇಶ್ವರ ದೇವಾಲಯ, ಮಾಗಡಿ. ಸೌಮ್ಯಕೇಶವ ದೇವಾಲಯ, ನಾಗಮಂಗಲ. ಪ್ರಸನ್ನಕೃಷ್ಣಸ್ವಾಮಿ ದೇವಾಲಯ, ಮೈಸೂರು. ಶ್ವೇತಾವರಹಸ್ವಾಮಿ ದೇವಾಲಯ, ಮೈಸೂರು. ಪ್ರಸನ್ನವೆಂಕಟರಮಣ ದೇವಾಲಯ, ಮೈಸೂರು. ಶ್ರೀರಾಮ ದೇವಾಲಯ, ಬಿ.ಕೆ.ಹಳ್ಳಿ ಮುಂತಾದ ಕೆಲವು ಅಳಿಸಿಹೋದ ದೇವಾಲಯಗಳಲ್ಲಿ ವಿಜಯನಗರ, ಹೊಯ್ಸಳರ ಮತ್ತು ರಾಜಾಡಳಿತದಲ್ಲಾದ ಭಿತ್ತಿ ಚಿತ್ರಗಳಿರುವುದನ್ನು ಇತಿಹಾಸ ಪುಟಗಳಿಂದ ತಿಳಿಯಬಹುದಾದರೂ ಪ್ರಸ್ತುತ ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪುರಾತನ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳ ಸಂಖ್ಯೆ ತೀರಾ ವಿರಳ ಎಂದರೆ ಬಹುಶಃ

ತಪ್ಪಾಗಲಿಕ್ಕಿಲ್ಲ ಕಾರಣ ಭಿತ್ತಿ ಚಿತ್ರಗಳ ಕ್ಷೇತ್ರಕಾರ್ಯದ ಸಂದರ್ಭದಲ್ಲಾದ ಅನುಭವ ಈ ಮಾತನ್ನು ಹೇಳಿಸುವಂತದ್ದು, ಮೇಲೆ ಸೂಚಿಸಿರುವ ದೇವಾಲಯಗಳು ಇಂದಿಗೂ ಅಚ್ಚಳಿಯದಂತೆ ಇದ್ದರೂ ಅಲ್ಲಿ ಭಿತ್ತಿ ಚಿತ್ರಗಳಿರುವುದಿಲ್ಲ ಮತ್ತೇ ಕೆಲವು ದೇವಾಲಯಗಳು ಸಂಪೂರ್ಣ ಹೊಸ ರೂಪವನ್ನು ಪಡೆದಿರುತ್ತವೆ. ಸಧ್ಯ ಭಿತ್ತಿ ಚಿತ್ರಗಳಿರುವ ದೇವಾಲಯದ ಇತಿಹಾಸದ ಜೊತೆಗೆ ಅಲ್ಲಿರುವ ಭಿತ್ತಿ ಚಿತ್ರಕಲೆಯ ಸ್ವರೂಪವನ್ನು ಕಟ್ಟಿಕೊಡಲಾಗಿರುತ್ತದೆ.

ಇತಿಹಾಸ, ಕಲೆ ಮತ್ತು ಸಿಬಿಯ ಸಂಸ್ಕೃತಿ :

ತುಮಕೂರು ಜಿಲ್ಲೆ ಕಲ್ಪತರು ನಾಡೆಂದು ಕೀರ್ತಿ ಪಡೆದಿದೆ. ಇದು ಕರ್ನಾಟಕದಲ್ಲಿ ಆಗ್ನೇಯ ದಿಕ್ಕಿನಲ್ಲಿದ್ದು, ನಾಡಿನ ರಾಜಧಾನಿ ಬೆಂಗಳೂರು ನಗರಕ್ಕೆ ೬೮ ಕಿ.ಮೀ ಅಂತರದಲ್ಲಿದೆ. ಕ್ರಿ.ಶ.೧೦ನೇ ಶತಮಾನದ ಶಾಸನವೊಂದರಲ್ಲಿ ತುಂಬೆ ಊರು ಎಂಬ ಉಲ್ಲೇಖವಿದ್ದು, ಮುಂದೆ ಇದು ತುಮಕೂರು ಎಂದಾಯಿತೆಂದು ತಿಳಿದು ಬರುತ್ತದೆ. ಹಾಗೂ ಇಲ್ಲಿಯ ಜನ ಟುಮಕಿ ಬಾರಿಸುತ್ತಿದ್ದುದ್ದರಿಂದ ತುಮಕೂರು ಆಯಿತೆಂದು ಇತಿಹಾಸ ತಿಳಿಸುತ್ತದೆ. ಈಶಾನ್ಯಕ್ಕೆ ಆಂದ್ರಪ್ರದೇಶ, ಪೂರ್ವಕ್ಕೆ ಕೋಲಾರ, ದಕ್ಷಿಣಕ್ಕೆ ಮಂಡ್ಯ ಮತ್ತು ವಾಯುವ್ಯಕ್ಕೆ ಹಾಸನ ಹಾಗೂ ಚಿತ್ರದುರ್ಗ ಜಿಲ್ಲೆಗಳಿವೆ. ಈಶಾನ್ಯ ಭಾಗದ ಪಾವಗಡ ಇತರೆ ತಾಲ್ಲೂಕುಗಳಿಗಿಂತ ಪೂರ್ಣವಾಗಿ ಬೇರ್ಪಟ್ಟಿರುವುದು ವಿಶೇಷವಾಗಿದೆ. ಜಿಲ್ಲೆಯಲ್ಲಿ ಕಾವೇರಿ, ಕೃಷ್ಣ, ಉತ್ತರ ಪಿನಾಕಿನಿ, ಜಲಾನಯನ ಪ್ರದೇಶಗಳಿದ್ದು ಶಿಂಷಾ, ಜಯಮಂಗಲಿ, ಸುವರ್ಣಮುಖಿ ನದಿಗಳು ಪ್ರಮುಖವಾಗಿವೆ. ಅಲ್ಲದೆ ದೇವರಾಯನದುರ್ಗ, ಮಧುಗಿರಿ ಏಕಾಶಿಲಾಬೆಟ್ಟ, ನಿಡಗಲ್ಲು ದುರ್ಗ, ಮಿಡೀಗೆಶಿ ದುರ್ಗ, ಹುಲಿಯೂರು ದುರ್ಗ, ಸಿದ್ದರಬೆಟ್ಟ ಮುಂತಾದುವುಗಳು ಜಿಲ್ಲೆಯ ಪ್ರಸಿದ್ಧ ಬೆಟ್ಟಗಳಾಗಿವೆ. ಇತಿಹಾಸ ಪ್ರಸಿದ್ಧ ತುಮಕೂರು ಜಿಲ್ಲೆ ಅನೇಕ ರಾಜ ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಗಂಗರು, ರಾಷ್ಟ್ರಕೂಟರು, ನೊಳಂಬರು, ಚೋಳರು, ವಿಜಯನಗರದ ಅರಸರು, ಮೈಸೂರು ಅರಸರು ವಿವಿಧ ಪ್ರದೇಶಗಳಲ್ಲಿ ತಮ್ಮ ಆಡಳಿತವನ್ನು ವಿಸ್ತರಿಸಿದ್ದರು. ಹೊಯ್ಸಳರು ಜಿಲ್ಲೆಯಲ್ಲಿ ಹಲವಾರು ದೇವಾಲಯಗಳನ್ನು ಕಟ್ಟಿಸಿದ್ದು, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಉದಾಹರಣೆಗೆ ಕೈದಾಳ ಮತ್ತು ಅರಳಗುಪ್ಪೆ ದೇವಾಲಯಗಳು. ತುಮಕೂರು ಮೊದಲ ಹೆಸರು ತುಮ್ಮೆಗೂರು, ಎಂದು ಕ್ರಿ.ಶ. ೯೯೫ರಲ್ಲಿ ನಿರ್ಮಿಸಲಾದ ಸೋಮೇಶ್ವರ ದೇವಾಲಯದ ಕಲ್ಲಿನ ಶಾಸನದಲ್ಲಿ ಕಾಣಬಹುದು. ಈ ಹೇರಳವಾಗಿ ತುಂಬೆ ಹೂ ಬಿಡುತ್ತಿದ್ದುದರಿಂದಲೂ ಆ ಹೆಸರು ಬಂದಿದೆ ಎಂಬ ಪ್ರತೀತಿಯಿದೆ. ಮತ್ತೊಂದು ಹೆಸರು ಟುಮುಕಿಹಳ್ಳಿ, ಸಮೀಪದ ಕೈದಾಳ ದಲ್ಲಿದ್ದ ಹೋಯ್ಸಳ ಸಾಮಂತನಾದ ಬಾಚಿದೇವ ಎಂಬುವನ ಶತೃಗಳ ದಾಳಿಯ ಬಗ್ಗೆ ಎಚ್ಚರಿಕೆ ನೀಡಲು ತಮಟೆ (ಟುಮುಕಿ) ಹೊಡೆಯುವ ಕಾವಲುಗಾರರನ್ನು ಇಲ್ಲಿ ನೆಲೆಗೊಳಿಸಿದ್ದರಿಂದ ಈ ಹೆಸರು ಬಂದಿದೆ.

ತುಮಕೂರು ಜಿಲ್ಲೆಯಲ್ಲಿನ ಸಿಬಿ ಎಂಬ ಹಳ್ಳಿ ಚಿತ್ರಕಲೆಗೆ ಪ್ರಸಿದ್ಧವಾಗಿದೆ. ಇದನ್ನ ಸಿಬಿ ಕ್ಷೇತ್ರವೆಂದೂ ಸಹ ಕರೆಯಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಈ ಹಳ್ಳಿಯು ದಟ್ಟ ಕಾಡಿನಿಂದ

ಆವರಿಸಿಕೊಂಡಿದ್ದರಿಂದ ಅನೇಕ ಋಷಿಗಳು ತಪಸ್ಸಿಗೆ ಕುಳಿತುಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ಟಿಪ್ಪುಸುಲ್ತಾನ್ ತನ್ನ ಬಿಡುವಿನ ಸಮಯದಲ್ಲಿ ಈ ಕಾಡಿಗೆ ಬೇಟೆಯಾಡಲು ಬರುತ್ತಿದ್ದನು. ೧೮ನೇ ಶತಮಾನದಲ್ಲಿ ಸಿಬಿಯಲ್ಲಿ ಸ್ಥಾಪಿಸಲಾದ ನರಸಿಂಹಸ್ವಾಮಿ ದೇವಾಲಯವು ಇಲ್ಲಿ ಪ್ರಸಿದ್ಧವಾದ ದೇವಸ್ಥಾನವಾಗಿದೆ. ಮೈಸೂರಿನ ಅರಮನೆಯಲ್ಲಿ ದಿವಾನರಾಗಿದ್ದ ಕಚೇರಿ ಕೃಷ್ಣಪ್ಪನವರ ಮೂವರು ಮಕ್ಕಳು ಈ ದೇವಸ್ಥಾನ ಕಟ್ಟಿಸಿದರೆಂದು ಹೇಳಲಾಗಿದೆ. ಕೃಷ್ಣಪ್ಪನವರ ಮಕ್ಕಳಾದ ಲಕ್ಷ್ಮಿನರಸಪ್ಪ, ಪುಟ್ಟಣ್ಣ ಮತ್ತು ನಲ್ಲಪ್ಪ ಎಂಬ ಮೂವರು ಈ ದೇವಸ್ಥಾನ ಕಟ್ಟಿಸಲು ಜನರಿಂದ ಹಣ ಸಂಗ್ರಹ ಮಾಡಿದ್ದರು. ಹಾಗೆಯೇ ಇವರು ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿಯೂ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ. ಕೃಷ್ಣಪ್ಪನವರ ಅಕಾಲ ಮರಣ ಹೊಂದಿದ್ದರಿಂದ ಅವರ ಪತ್ನಿ ಅಲಮೇಲು ಸತಿ ಸಹಗಮನ ಮಾಡಿಕೊಂಡ ಪ್ರಯುಕ್ತ, ಈ ಮೂವರು ಮಕ್ಕಳು ದೇವಸ್ಥಾನ ಕಟ್ಟಿಸಲು ಪ್ರಯತ್ನ ಪಟ್ಟರು. ಇದಕ್ಕೆ ಸಂಬಂಧಿಸಿದಂತೆ ಇವರ ಅರಮನೆಯಾದ ವಸಂತ ಮಹಲ್ ಬಳಿ ದೊರಕಿರುವ ಶಾಸನ ಇದರ ಬಗ್ಗೆ ಉಲ್ಲೇಖ ನೀಡುತ್ತದೆ. ಕೃಷ್ಣಪ್ಪನವರ ಹಿರಿಯ ಮಗನಾದ ನಲ್ಲಪ್ಪ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಸೈನ್ಯದಲ್ಲಿ ಸಿಪಾಯಿಯಾಗಿದ್ದರು. ೧೭೮೪ ರಲ್ಲಿ ರಚಿತವಾದ ಹೈದರ್ ಅಲಿಯ ಆತ್ಮಕಥೆಯಾದ ಹೈದರ್ ನಾಮವನ್ನು ಬರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಒಮ್ಮೆ ನಲ್ಲಪ್ಪನವರ ಕನಸಿನಲ್ಲಿ ನರಸಿಂಹಸ್ವಾಮಿಯು ಪ್ರತ್ಯಕ್ಷವಾಗಿ ತನಗೊಂದು ದೇವಸ್ಥಾನ ಕಟ್ಟಿಸಿದರೆ ಜೀವನದಲ್ಲಿ ಅಪಾರ ಯಶಸ್ಸು ಮತ್ತು ನೆಮ್ಮದಿ ದಯಪಾಲಿಸುವುದಾಗಿ ಹೇಳಿದನೆಂಬ ನಂಬಿಕೆಯಿದೆ. ಹೀಗಾಗಿ ನಲ್ಲಪ್ಪನವರು ಸಿಬಿಯಲ್ಲಿ ನರಸಿಂಹ ದೇವಸ್ಥಾನ ಕಟ್ಟಿಸಿದರು ಎಂದು ಹೇಳಲಾಗಿದೆ. ೧೭೯೫ರಲ್ಲಿ ಪ್ರಾರಂಭವಾದ ದೇವಸ್ಥಾನದ ಕೆಲಸ ೧೮೧೧ರಲ್ಲಿ ಮುಕ್ತಾಯವಾಯಿತು. ವಿಷ್ಣುವಿನ ಅವತಾರವಾದ ನರಸಿಂಹನು ಈ ದೇವಾಲಯದ ಎಲ್ಲರ ಗಮನ ಸೆಳೆಯುತ್ತದೆ. ಈ ದೇವಾಲಯದಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಚಿತ್ರಕಲೆ ಬಿಡಿಸಲಾಗಿದೆ. ಈ ದೇವಾಲಯದ ನಿರ್ಮಾಣ ಕುರಿತಂತೆ ಅನೇಕ ಪೌರಾಣಿಕ ಕಥೆಗಳಿವೆ. ಒಮ್ಮೆ ವ್ಯಾಪಾರಿಗಳು ತಮ್ಮ ಧಾನ್ಯದ ಚೀಲಗಳನ್ನು ಸಾಗಿಸುತ್ತ ಪಕ್ಕದ ಊರಿಗೆ ಹೋಗುವಾಗ ಸಿಬಿಯಲ್ಲಿ ಒಂದು ರಾತ್ರಿ ತಂಗುವ ಪ್ರಸಂಗ ಒದಗಿ ಬರುತ್ತದೆ. ವ್ಯಾಪಾರಿಗಳು ಅನಿವಾರ್ಯವಾಗಿ ರಾತ್ರಿ ಕಳೆಯಬೇಕಿದ್ದರಿಂದ ತಮಗೆ ಮತ್ತು ತಮ್ಮ ಆಳುಗಳಿಗೆ ರಾತ್ರಿ ಊಟಕ್ಕೆಂದು ಅನ್ನ ಬೇಯಿಸುತ್ತಾರೆ. ಇದ್ದಕ್ಕಿದ್ದಂತೆ ಬೇಯುತ್ತಿದ್ದ ಅಕ್ಕಿ ಕೆಂಪಾಗುತ್ತದೆ. ಬೇಯುವ ಅಕ್ಕಿಯಿಂದ ಹೊರ ಬಂದ ನರಸಿಂಹನು ಪ್ರತ್ಯಕ್ಷವಾಗಿ ತನಗೊಂದು ದೇವಸ್ಥಾನ ನಿರ್ಮಿಸಬೇಕೆಂದು ಆಜ್ಞೆ ಮಾಡುತ್ತಾನೆ. ಹೀಗಾಗಿ ದೇವರ ಆಜ್ಞೆಯಂತೆ ನಲ್ಲಪ್ಪ ಮತ್ತು ಇತರೆ ವ್ಯಾಪಾರಿಗಳು ಇಲ್ಲಿ ದೇವಸ್ಥಾನ ನಿರ್ಮಿಸಿದರು ಎಂಬ ನಂಬಿಕೆಯಿದೆ. ಜನಪದ ಕಥೆಯ ಪ್ರಕಾರ ನೊಳಂಬವಾಡಿ ಹೆಂಜೇರಪ್ಪ ಮತ್ತು ನರಸಿಂಹ ಸ್ವಾಮಿ ಎಂಬ ಇಬ್ಬರು ಸಹೋದರರು ಆಸ್ತಿ ಮತ್ತು ಅಧಿಕಾರಕ್ಕಾಗಿ ಪರಸ್ಪರ ಹೋರಾಡುತ್ತಾರೆ. ಅಣ್ಣತಮ್ಮಂದಿರು

ಆಸ್ತಿ ಅಂತಸ್ತಿಗಾಗಿ ಹೊಡೆದಾಡುವುದನ್ನು ಕಂಡು ಮನನೊಂದ ನರಸಿಂಹನು ಹೇಮಾವತಿಯನ್ನು ತೊರೆದು ಸಿಬಿಯಲ್ಲಿ ನೆಲೆಸಿದ ಎಂದು ಹೇಳುತ್ತದೆ.

ಸಿಬಿಯಲ್ಲಿರುವ ಶಾಸನ :

ಸಿಬಿಯಲ್ಲಿ ವಾಸಿಸುತ್ತಿರುವ ನರಸಿಂಹಯ್ಯ[೧೫] ಎಂಬುವರ ಬಳಿಯಿಂದ ಲಭ್ಯವಾದ ತಾಮ್ರಪತ್ರದಿಂದ ತಿಳಿಯುವುದೇನೆಂದರೆ ಯದುವಂಶದ ರಾಜನಾದ ಹರಿಹರನ ಮಂತ್ರಿಯಾದ ಇರುಗಪ್ಪನೆಂಬುವನು ಹರಿಹರಾಯಪುರ ಎಂಬ ಕೆರೆ ಕಟ್ಟಿಸಿದನು ಮತ್ತು ಇದನ್ನು ಬ್ರಾಹ್ಮಣರಿಗೆ ದಾನ ನೀಡಿದನು. ಕಾರಣಿಕ ನಲ್ಲಪ್ಪ ಎಂಬಾತನ ಮನೆಯಲ್ಲಿ ದೊರಕಿದ ೧೭೭೭ರ ತಾಮ್ರ ಶಾಸನದ ಸಾರಾಂಶವೇನೆಂದರೆ ಸಿರಾದ ಸುಬೇದಾರರಾದ ಬಜೆ ಅಬದ್‌ಉಲ್ ರಹೀಂ ಮತ್ತು ಬಜೆ ಅಬ್ದುಲ್ಲ ಎಂಬುವರು ಶೀಬಿಯಲ್ಲಿ ನರಸಿಂಹ ದೇವಾಲಯ ಕಟ್ಟಲು ಭೂಮಿಯನ್ನು ದತ್ತಿ ನೀಡಿದರು ಎಂಬ ಉಲ್ಲೇಖವಿದೆ. ೧೭೯೦ರ ಶಿಲಾಶಾಸನದ ಪ್ರಕಾರ ಅಮರವಜ್ಜಲ ಹರಿಯಪ್ಪ ಎಂಬುವರ ಮೊಮ್ಮಕ್ಕಳು ಮತ್ತು ತಮ್ಮಣ್ಣ ಮತ್ತು ಲಕ್ಷ್ಮಮ್ಮ ಎಂಬ ದಂಪತಿಗಳ ಮಗನಾದ ಕಛೇರಿ ಕೃಷ್ಣಪ್ಪ ಎಂಬುವರು ನವಾಬ್ ಹೈದರ್ ಅಲಿಯವರ ಆಜ್ಞೆಯ ಮೇರೆಗೆ ಸಿಬಿಯಲ್ಲಿ ನರಸಿಂಹ ದೇವಾಲಯ ನಿರ್ಮಿಸಲು ಅಪ್ಪಣೆ ಪಡೆದಿರುತ್ತಾರೆ ಎಂಬ ಮಾಹಿತಿಯಿದೆ. ಸಿಬಿಯಲ್ಲಿರುವ ನರಸಿಂಹ ದೇವಾಲಯದಲ್ಲಿರುವ ಶಾಸನದ ಪ್ರಕಾರ ಶಾಲಿವಾಹನ ಶಕೆಯ ೧೬೮೩ರ ಕಾರ್ತೀಕ ಮಾಸದ ೧೦ನೇ ದಿನದಂದು ಬೊಸವ ನಾಗಪ್ಪ ನಾರಾಯಣಪ್ಪ ಎಂಬುವರು ನರಸಿಂಹ ದೇವಾಲಯಕ್ಕೆ ತಾಮ್ರದ ಗಂಟೆಯನ್ನು ದಾನ ಮಾಡಿದರು ಎಂಬ ವಿಷಯ ತಿಳಿದುಬರುತ್ತದೆ. ಪ್ರಸಕ್ತ ದಿನಗಳಲ್ಲಿ ಪ್ರತಿ ವರ್ಷ ನರಸಿಂಹ ದೇವಾಲಯದ ಜಾತ್ರೆ ಉತ್ಸವ ನೆಡೆಯುತ್ತದೆ. ಸಿಬಿ ಸುತ್ತಮುತ್ತಲಿನ ಗ್ರಾಮಗಳಾದ ಕಂಚಿಗಾನಹಳ್ಳಿ, ಸೋಮಸಾಗರ, ಹುಂಜನಹಳ್ಳಿ, ಕೊಳಾಲಕುಂಟೆ, ಯಲದಡ್ಲು, ಕೆಂಪನದೊಡ್ಡೇರಿ ಸೇರಿದಂತೆ ಹಲವು ಗ್ರಾಮಗಳಿಂದ ಬಂದ ಭಕ್ತರು ನರಸಿಂಹಸ್ವಾಮಿ ದರ್ಶನ ಪಡೆದರು. ಮಂಗಳವಾರ ರಾತ್ರಿ ತೆಪ್ಪೋತ್ಸವ ಕಾರ್ಯಕ್ರಮ ಜರುಗಲಿದೆ. ಒಂದು ವಾರದ ಕಾಲ ನಡೆಯುವ ಜಾತ್ರಾ ಮಹೋತ್ಸವದಲ್ಲಿ ನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮನರಂಜನೆ ಭಕ್ತರನ್ನು ಸೆಳೆಯುತ್ತಿದೆ. ದೇವಾಲಯದ ಚಾವಣಿಯಲ್ಲಿ ರಾಮಾವತಾರ, ಕೃಷ್ಣಾವತಾರ ಹಾಗೂ ನರಸಿಂಹ ಅವತಾರದ ಚಿತ್ರಗಳು ೨೨೨ ವರ್ಷವಾದರೂ ಅಂದಗೆಟ್ಟಿಲ್ಲ. ೨೫ ಮಂದಿ ಚಿತ್ರ ಕಲಾವಿದರು ಶ್ರಮದಿಂದ ತಯಾರಾದ ಪ್ರೆಸ್ಕೋ ಚಿತ್ರಗಳು ಇತ್ತೀಚೆಗೆ ನಿಧಾನವಾಗಿ ಮಬ್ಬುಗಟ್ಟುತ್ತಿವೆ. ಆನೆ, ಕುದುರೆ, ಕೋಟೆ ಕೊತ್ತಲು, ಯುದ್ಧದ ಚಿತ್ರಗಳು ಗಮನ ಸೆಳೆಯುತ್ತವೆ. ಮುಂದಿನ ೫೦-೧೦೦ ವರ್ಷದವರೆಗೆ ಈ ಚಿತ್ರಗಳು ಇರಬಹುದು ಎಂದು ಚಿತ್ರಕಾರರೇ ಅಂದಾಜಿಸಿದ್ದಾರೆ. ಈ ಐತಿಹಾಸಿಕ ದೇವಾಲಯದಲ್ಲಿ ಇಂದಿಗೂ ನಲ್ಲಪ್ಪನವರ ವಂಶಸ್ಥರೇ ಪೂಜೆ ಕಾರ್ಯಕ್ರಮಗಳನ್ನು ಮಾಡುತ್ತಾರೆ.

ವೈಷ್ಣವ ಧರ್ಮದಡಿಯಲ್ಲಿ ನರಸಿಂಹ ದೇವರ ಆರಾಧನೆ :

ಸಿಬಿಯಲ್ಲಿರುವ ನರಸಿಂಹ ದೇವಾಲಯವು ವೈಷ್ಣವ ಧರ್ಮಕ್ಕೆ ಸೇರಿದೆ. ಈ ದೇವಾಲಯಕ್ಕೆ ಬರುವ ಭಕ್ತಾದಿಗಳು ನರಸಿಂಹನನ್ನು ಪೂಜಿಸುವುದಲ್ಲದೆ ನರಸಿಂಹನ ಆರಾಧನೆಯನ್ನು ಒಂದು ಪಂಥವಾಗಿಸಿದ್ದಾರೆ. ಈ ದೇವಾಲಯದಲ್ಲಿರುವ ಚಿತ್ರಗಳು ವಿಷ್ಣುವಿನ ಕುರಿತು ಮತ್ತು ವೈಷ್ಣವ ಧರ್ಮದಲ್ಲಿ ಆತನಿಗಿರುವ ಮಹತ್ವವನ್ನು ಹೇಳುತ್ತವೆ.

ವಿಷ್ಣು :

ಮಹಾವಿಷ್ಣುವು ಸಾಕಾರ ಸ್ವರೂಪನು, ಹಾಗಾಗಿ ಹಲವು ಅವತಾರಗಳ ಮೂಲಕ ಗುರುತಿಸಲ್ಪಟ್ಟಿದ್ದಾನೆ. ಹತ್ತು ಅವತಾರಗಳನ್ನೂ ಪ್ರಮುಖ ಎಂದು ನಿರ್ದೇಶಿಸುವ ವಾಡಿಕೆ ಇದ್ದರೂ ವಿಷ್ಣುವಿನ ಅವತಾರಗಳು ವಾಸ್ತವವಾಗಿ ಅಸಂಖ್ಯ. 'ವಿಷ್ಣು' ಎಂಬ ಶಬ್ದವೇ 'ಎಲ್ಲವನ್ನೂ ವ್ಯಾಪಿಸಿಕೊಂಡಿರುವವನು' ಎಂಬ ಅರ್ಥವನ್ನು ಸೂಚಿಸುತ್ತದೆ. ವಿಷ್ಣುವಿನ ವಾಮನ ಅವತಾರದಲ್ಲಿ ತ್ರಿವಿಕ್ರಮನಾಗುವ ಚಿತ್ರಣ ಇದೆ. ಹಾಗೇ ಕೃಷ್ಣಾವತಾರದಲ್ಲಿ ಭಗವದ್ಗೀತೆ ಬೋಧನೆ ಮಾಡಿದಾಗ 'ವಿಶ್ವರೂಪದರ್ಶನ' ಮಾಡಿದ ವಿವರಗಳಿವೆ. ವಿಷ್ಣುವಿನ ಸ್ವರೂಪ ಸಾಕಾರವಾಗುವುದರ ಜೊತೆಗೆ ಅದು 'ವಿರಾಟ್' ಆಗಿರುವುದು ಎಂಬುದನ್ನು ಇಲ್ಲಿ ಸೂಚಿಸುತ್ತದೆ. ವಿಷ್ಣುವಿನ ಕುರಿತ ಜನಪ್ರಿಯವಾದ ಪರಿಕಲ್ಪನೆ ಎಂದರೆ ಕ್ಷೀರಸಾಗರದ ಮೇಲೆ ಶೇಷಶಾಯಿಯಾಗಿ ವಿಶ್ರಮಿಸುತ್ತಿರುವುದು. ಒಂದೆಡೆ, ಲಕ್ಷ್ಮಿಯು ಅವನ ಕಾಲನ್ನೊತ್ತುತ್ತಿದರೆ, ಇನ್ನೊಂದೆಡೆ, ನಾಭಿಯಿಂದ ಬಂದ ಕಮಲದಲ್ಲಿ ಬ್ರಹ್ಮನು ಸೃಷ್ಟಿ ಕಾರ್ಯದಲ್ಲಿ ನಿರತನಾಗಿದ್ದಾನೆ. ಇದು ಇಡೀ ಬ್ರಹ್ಮಾಂಡದಲ್ಲಿ ಇರುವ ಚೇತನ ಸ್ವರೂಪವನ್ನು ಚಿತ್ರಿಸುತ್ತದೆ. ಕ್ಷೀರಸಾಗರವು ಪ್ರಕೃತಿಯ ಪರಿಶುದ್ಧ ರೂಪವನ್ನು ಸೂಚಿಸಿದರೆ, ಮುಗಿಲು-ಕಡಲುಗಳೆರಡರ ಕಲ್ಪನೆ ಬೆರೆತಂತಿರುವ ಇದನ್ನು ವಿಜ್ಞಾನದ ಆಕಾಶಗಂಗೆ (ಮಿಲ್ಕೀವೇ) ಪರಿಕಲ್ಪನೆಗೆ ಹೋಲಿಸಬಹುದು. ವಿಷ್ಣುವು ಮಲಗಿದ್ದಾನೆ ಎನ್ನಲಾದ ಆದಿಶೇಷ ಅಥವಾ ಅನಂತ ಎಂಬ ಸರ್ಪಕ್ಕೆ ಸಾವಿರ ಹೆಡೆಗಳಿದ್ದು ಅದು ಅನೇಕ ಲೋಕವನ್ನು ಹೊತ್ತಿದೆ ಎನ್ನಲಾಗುತ್ತದೆ. 'ಅನಂತ' ಎಂಬ ಪದಕ್ಕೆ ಎಣಿಕೆಗೆ ಸಿಕ್ಕದ್ದು ಎಂಬ ಅರ್ಥವಿದೆ. ಹೀಗೆ ಎಣಿಸುವವನು ಮಾನವ ಎಂಬುದನ್ನು ಗಮನಿಸಬೇಕಾಗುತ್ತದೆ. ಅಂದರೆ, ಪ್ರಕೃತಿಯು ಮಾನವನಿಗಿಂತಲೂ ಬಹಳ ದೊಡ್ಡದು. ಅದನ್ನು ಎಣಿಸುವ ಪ್ರಯತ್ನವೇ ವ್ಯರ್ಥ ಎಂಬುದನ್ನು 'ಅನಂತ' ಎಂಬ ಪದ ಸೂಚಿಸುತ್ತದೆ. ಹಾಗೆಯೇ, 'ಶೇಷ' ಎಂಬ ಪದವೂ ಅರ್ಥ ಗರ್ಭಿತವಾದದ್ದು. ಇದು ಉಳಿದದ್ದು ಎಂಬುದನ್ನು ಸೂಚಿಸುತ್ತದೆ. ಸೃಷ್ಟಿಯು ಯಾವಾಗಲೂ ಶೂನ್ಯದಿಂದ ಉಂಟಗುವುದಿಲ್ಲ. ಹಿಂದಿನ ಸೃಷ್ಟಿಯಲ್ಲಿ ಉಳಿದು ಹೋದದ್ದು ಮುಂದಿನ ಸೃಷ್ಟಿಗೆ ಕಾರಣವಾಗುತ್ತದೆ. ಇದೇ ಇಡೀ ಜಗತ್ತನ್ನು ಮುನ್ನಡೆಸುತ್ತಿರುವ ಸೃಷ್ಟಿಚಕ್ರ ಆದಿಶೇಷನ ಪರಿಕಲ್ಪನೆ ಇದನ್ನೇ ಸೂಚಿಸುತ್ತದೆ ಎನ್ನಬಹುದು. ಇದರ ಜೊತೆಗೆ ಸರ್ಪವು ಕಾಮಕ್ಕೆ ಸಂಕೇತ ಎಂಬ ಅರ್ಥಕೂಡ ಈ ವಿಶ್ಲೇಷಣೆಗೆ ಇಂಬು ನಿಡುವಂತಿದೆ. ವಿಷ್ಣುವನ್ನು ನೀಲ. ಮೇಘ. ಶ್ಯಾಮನೆಂದು ವರ್ಣಿಸುತ್ತಾರೆ. ಇದು ಮಳೆ ನೀಡಲು ಸಿದ್ಧವಾಗಿರುವ ಕಡುನೀಲಿ ಮೋಡದ ಬಣ್ಣ. ಇದರಲ್ಲಿ ಸೃಷ್ಟಿಯು ಪಕ್ವವಾಗಿರುವುದರ ಸಾಂಕೇತಿಕ ಅರ್ಥವಿದೆ.

ವಿಷ್ಣುವಿನ ಕಲ್ಪನೆಯಲ್ಲಿ ಸಾಧನೆ ಮತ್ತು ಸಿದ್ಧಿ ಇವೆರಡರ ಸಂಯೋಗದ ಅರ್ಥಗಳಿರುವುದನ್ನು ನಾವು ಗಮನಿಸಬಹುದು. ವಿಷ್ಣುವಿನ ಕಲ್ಪನೆಯಲ್ಲಿರುವ ಇನ್ನು ಕೆಲವು ಅಂಶಗಳತ್ತ ಗಮನ ಹರಿಸಿದರೆ, ವಿಷ್ಣುವು ಸಾಮಾನ್ಯವಾಗಿ ಚಿತ್ರಿತವಾಗುವುದು ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಹಿಡಿದಿರುವ ಸ್ಥಿತಿಯಲ್ಲಿ. ಈ ನಾಲ್ಕು ಕೈಗಳು ನಾಲ್ಕು ದಿಕ್ಕುಗಳನ್ನು ಸೂಚಿಸುತ್ತಾ ವಿಷ್ಣುವು ಸರ್ವವ್ಯಾಪಿ ಎಂಬುದನ್ನು ತೋರಿಸುತ್ತದೆ. ಶಂಖವು ಸಮಸ್ತ ಉದಯದ ಸಂಕೇತ. ಚಕ್ರವು ಸಮಸ್ತ ಚಿತ್ತವೃತ್ತಿಯ, ಗದೆಯು ಸಮಸ್ತ ಬುದ್ಧಿಗಳ ದ್ಯೋತಕ. ಪದ್ಮವು ಸೃಷ್ಟಿಸಲ್ಪಡುವ ಪ್ರಪಂಚದ ಸಂಕೇತ. ಇವೆಲ್ಲವೂ, ವಿಷ್ಣುವು ಸೃಷ್ಟಿಕರ್ತನೂ ಮತ್ತು ಸ್ಥಿತಿಕಾರನೂ ಆಗಿದ್ದಾನೆ ಎಂಬುದಕ್ಕೆ ರೂಪಕ. ಇನ್ನು ವಿಷ್ಣುವಿನ ಎದೆಯ ಮೇಲೆ ಶ್ರೀವತ್ಸ ಲಾಂಛನವಿದೆ. ಅದನ್ನು ಕೌಸ್ತುಭಮಣಿ ಮತ್ತು ವೈಜಯಂತಿ ಹಾರಗಳು ಮುಚ್ಚಿರುತ್ತವೆ. ಶ್ರೀವತ್ಸ ಲಾಂಛನವು ಎಲ್ಲಾ ಭೋಗವಸ್ತುಗಳ ಸಂಕೇತವಾಗಿದೆ. ಇದರ ಮೇಲಿನ ಕೌಸ್ತುಭಮಣಿಯು, ಭೋಗಿಯ ಪ್ರತಿನಿಧಿ. ಹೀಗೆ ಭೋಗ-ಭೋಗಿಗಳಿಂದ ಕೂಡಿದ ಪ್ರಪಂಚವು ಸ್ಥಿತಿಕಾರಕನಾದ ವಿಷ್ಣುವಿಗೆ ಒಂದು ಮಾಲೆಯೇ. ಜೊತೆಗಿರುವ ವೈಜಯಂತಿ ಮಾಲೆಯು ಪಂಚಭೂತಗಳ ಸಂಕೇತ. ಹೀಗೆ ವಿಷ್ಣು ಸ್ವರೂಪದಲ್ಲಿ ಇಡೀ ಬ್ರಹ್ಮಾಂಡದ ಸೂಕ್ಷ್ಮ ಚಿತ್ರಣವೇ ಅಡಗಿರುವುದನ್ನು ನೋಡಬಹುದು.

ಮತ್ಸ್ಯಾವತಾರ ಮೀನಿನ ರೂಪದಲ್ಲಿ ಹಿಂದೂ ದೇವತೆ ವಿಷ್ಣುವಿನ ಅವತಾರ ಮತ್ತು ಇದು ಕೂರ್ಮಾವತಾರದ ಮೊದಲು ಬರುತ್ತದೆ. ವಿಷ್ಣುವಿನ ದಶಾವತಾರಗಳ ಪಟ್ಟಿಗಳಲ್ಲಿ ಹಲವುವೇಳೆ ಮೊದಲ ಅವತಾರ ಎಂದು ಪಟ್ಟಿಮಾಡಲಾದ ಮತ್ಸ್ಯಾವತಾರವು ಮೊದಲ ಮಾನವನಾದ ಮನುವನ್ನು ಒಂದು ಭಾರಿ ಪ್ರಳಯದಿಂದ ಕಾಪಾಡಿದ ಜೀವಿ ಎಂದು ವಿವರಿಸಲಾಗುತ್ತದೆ. ಮತ್ಸ್ಯಾವತಾರವನ್ನು ಒಂದು ದೈತ್ಯ ಮೀನಾಗಿ ಚಿತ್ರಿಸಬಹುದು, ಅಥವಾ ಮಾನವರೂಪಿಯಾಗಿ ಒಂದು ಮೀನಿನ ಹಿಂದಿನ ಅರ್ಧಕ್ಕೆ ಸಂಪರ್ಕ ಹೊಂದಿದ ಒಂದು ಮಾನವ ಮುಂಡವಾಗಿ ಚಿತ್ರಿಸಬಹುದು. ಹಿಂದೂಧರ್ಮದಲ್ಲಿ, ಕೂರ್ಮಾವತಾರವು ಮತ್ಸ್ಯಾವತಾರದ ನಂತರ ಬರುವ ಮತ್ತು ವರಾಹಾವತಾರದ ಮೊದಲು ಬರುವ ವಿಷ್ಣುವಿನ ಎರಡನೇ ಅವತಾರ. ಮತ್ಸ್ಯಾವತಾರದಂತೆ ಈ ಅವತಾರವೂ ಸತ್ಯಯುಗದಲ್ಲಿ ಸಂಭವಿಸಿತ್ತು.

ವರಾಹಾವತಾರ ಹಂದಿಯ ರೂಪದಲ್ಲಿ ಹಿಂದೂ ದೇವತೆ ವಿಷ್ಣುವಿನ ಅವತಾರ, ಮತ್ತು ಇದು ಕೂರ್ಮಾವತಾರದ ನಂತರ ಹಾಗೂ ನರಸಿಂಹಾವತಾರದ ಮೊದಲು ಬರುತ್ತದೆ. ವರಾಹಾವತಾರವನ್ನು ದಶಾವತಾರಗಳಲ್ಲಿ ಮೂರನೆಯದಾಗಿ ಪಟ್ಟಿಮಾಡಲಾಗುತ್ತದೆ. ದೈತ್ಯ ಹಿರಣ್ಯಾಕ್ಷನು ಭೂಮಿಯನ್ನು (ಭೂದೇವಿಯಾಗಿ ಮೂರ್ತೀಕರಿಸಲಾಗಿದೆ) ಕದ್ದು ಆಕೆಯನ್ನು ಆದಿಸ್ವರೂಪದ ನೀರಿನಲ್ಲಿ ಬಚ್ಚಿಟ್ಟಾಗ, ವಿಷ್ಣು ಆಕೆಯನ್ನು ಕಾಪಾಡಲು ವರಾಹನಾಗಿ ಕಾಣಿಸಿಕೊಂಡನು. ಒಮ್ಮೆ ಒಂದು ರಾಕ್ಷಸನಿದ್ದನು. ಅವನ ಹೆಸರು ಹಿರಿಯಂಕಷ. ಇವನು ಬ್ರಹ್ಮನನ್ನು ಪೂಜಿಸಿ, ಆ ದೇವರಿಂದ ವರ ಪಡೆಯುತ್ತಾನೆ. ಅವನು ಯಾರಿಂದಲು ತನಗೆ ಸಾವು ಬರಬಾರದೆಂದು

ಬೇಡಿಕೊಳ್ಳುತ್ತಾನೆ. ಆದರೆ ಅವನ ಬೇಡಿಕೆ ತೀರಿದ ನಂತರ ಅವನು ತುಂಬ ಕ್ರೂರನಾಗುತ್ತಾನೆ. ಅವನನ್ನು ಸಂಹಾರ ಮಾಡಲು ವಿಷ್ಣುವು ವರಾಹಾವತಾರ ತಾಳಿ ಅವನನ್ನು ಸಂಹಾರ ಮಾಡುತ್ತಾನೆ. ನರಸಿಂಹ ವಿಷ್ಣುವಿನ ದಶಾವತಾರಗಳಲ್ಲಿ ಒಂದು. ದಶಾವತಾರಗಳಲ್ಲಿ ನಾಲ್ಕನೆಯದು. ಅರ್ಧ ದೇಹ ಮನುಷ್ಯನಂತೆ ಮತ್ತು ಇನ್ನರ್ಧ ಭಾಗ ಸಿಂಹ ರೂಪದಲ್ಲಿರುವುದರಿಂದ ನರಸಿಂಹ ಎಂಬ ಹೆಸರು ಬಂದಿದೆ. ಹಿರಣ್ಯ ಕಶಿಪು ಎಂಬ ರಾಕ್ಷಸನನ್ನು ಕೊಲ್ಲಲು ಮಹಾವಿಷ್ಣು ಈ ರೂಪದಿಂದ ಭೂಮಿಯಲ್ಲಿ ಅವತರಿಸಿದನೆಂದು ಪುರಾಣಗಳಲ್ಲಿ ಹೇಳಲಾಗಿದೆ.

ವಾಮನಾವತಾರವನ್ನು ಪುರಾಣಗಳಲ್ಲಿ ವಿಷ್ಣುವಿನ ಐದನೆಯ ಅವತಾರವೆಂದು, ಮತ್ತು ಎರಡನೇ ಯುಗ ಅಥವಾ ತ್ರೇತಾಯುಗದ ಮೊದಲ ಅವತಾರವೆಂದು ವಿವರಿಸಲಾಗಿದೆ. ಅವನು ಮಾನವರೂಪಿ ಲಕ್ಷಣಗಳಿಲ್ಲದೆ ಕಾಣಿಸಿಕೊಂಡ ಮೊದಲ ಅವತಾರ, ಆದಾಗ್ಯೂ ಅವನು ಕುಬ್ಜ ಬ್ರಾಹ್ಮಣನಾಗಿ ಕಾಣಿಸಿಕೊಳ್ಳುತ್ತಾನೆ. ಇವನು ಉಪೇಂದ್ರ, ಮತ್ತು ತ್ರಿವಿಕ್ರಮನೆಂದೂ ಪರಿಚಿತನಾಗಿದ್ದಾನೆ.

ಪರಶುರಾಮ ವಿಷ್ಣುವಿನ ಆರನೆಯ ಅವತಾರ, ಮತ್ತು ಬ್ರಹ್ಮನ ವಂಶಸ್ಥ ಹಾಗು ಶಿವನ ಶಿಷ್ಯ. ಅವನು ರೇಣುಕಾ ಹಾಗು ಸಪ್ತರ್ಷಿ ಜಮದಗ್ನಿಯ ಪುತ್ರ. ಅವನು ತ್ರೇತಾಯುಗದ ಕೊನೆಯಲ್ಲಿ ಜೀವಿಸಿದ್ದನು ಮತ್ತು ಅವನು ಹಿಂದೂ ಧರ್ಮದ ಏಳು ಅಮರ್ತ್ಯರು ಅಥವಾ ಚಿರಂಜೀವಿಗಳ ಪೈಕಿ ಒಬ್ಬನು. ಭಗವಾನ್ ವಿಷ್ಣುವಿನ ಆರನೆಯ ಅವತಾರವೆಂದೇ ಖ್ಯಾತರಾಗಿರುವ ಮಹರ್ಷಿ ಪರಶುರಾಮರು ಬ್ರಾಹ್ಮಣ ಸಪ್ತರ್ಷಿಯಾದ ಜಮದಗ್ನಿ ಮತ್ತು ರೇಣುಕಾರ ಪುತ್ರರಾಗಿದ್ದಾರೆ. ತ್ರೇತಾಯುಗದಲ್ಲಿ ಜನಿಸಿ, ಹಿಂದೂ ಧರ್ಮದಲ್ಲಿ ಕರೆಯಲಾದ ಏಳು ದೇವತೆಗಳಲ್ಲಿ ಒಬ್ಬರೆನಿಸಿದ್ದಾರೆ. ಹುಟ್ಟುವಾಗಲೇ ಬ್ರಾಹ್ಮಣರಾಗಿದ್ದರೂ, ಕ್ಷತ್ರಿಯರ ಆಕ್ರಮಶೀಲತೆ ಮತ್ತು ಧೈರ್ಯ ಪರಶುರಾಮನಿಗೆ ಇದ್ದುದರಿಂದ ಬ್ರಹ್ಮ ಕ್ಷತ್ರಿಯನೆಂಬ ಹೆಸರನ್ನೂ ಪರಶುರಾಮ ಪಡೆದುಕೊಂಡಿದ್ದಾರೆ.

ಭಾರತದಲ್ಲಿ ರಾಮನ ಆಳ್ವಿಕೆಯ ಕಾಲ ಅತ್ಯಂತ ಸುಭಿಕ್ಷವಾಗಿದ್ದು, ನ್ಯಾಯ, ನೀತಿಗಳಿಂದ ಕೂಡಿದ್ದವೆಂದು ತಿಳಿದು ಬರುತ್ತದೆ. ಅಯೋಧ್ಯೆಯ ರಾಜನಾಗಿದ್ದ ದಶರಥನ ನಾಲ್ಕು ಜನ ಮಕ್ಕಳಲ್ಲಿ ಹಿರಿಯನು ರಾಮ. ಆತನ ತಾಯಿ ಕೌಸಲ್ಯೆ. ಲಕ್ಷ್ಮಣ, ಭರತ, ಶತ್ರುಘ್ನರು ಆತನ ತಮ್ಮಂದಿರು. ಭರತನ ತಾಯಿ ಕೈಕೇಯಿ. ಲಕ್ಷ್ಮಣ ಶತ್ರುಘ್ನರ ತಾಯಿ ಸುಮಿತ್ರೆ. ಸೀತೆ ರಾಮನ ಹೆಂಡತಿ. ರಾಮನಿಗೆ ಲವ ಮತ್ತು ಕುಶ ಎಂಬ ಇಬ್ಬರು ಮಕ್ಕಳು. ಶ್ರೀ ರಾಮನು ಸೂರ್ಯ ವಂಶದವನು. ಬಲದೇವ, ಬಲಭದ್ರ, ಮತ್ತು ಹಲಾಯುಧ ಎಂಬ ಹೆಸರುಗಳನ್ನು ಹೊತ್ತ ಬಲರಾಮ ಕೃಷ್ಣನ ಹಿರಿಯಣ್ಣ. ದಕ್ಷಿಣ ಭಾರತದ ಬಹುತೇಕ ವೈಷ್ಣವರ ಪ್ರಕಾರ ಬಲರಾಮನು ವಿಷ್ಣುವಿನ ಒಂಬತ್ತನೇ ಅವತಾರ. ವಿಷ್ಣುವನ್ನು ಹೊಂದುವ ದೈವೀ ಸರ್ಪಆದಿಶೇಷನ ಅವತಾರವಾಗಿಯೂ ಪರಿಗಣಿಸಲಾಗುತ್ತದೆ. ಭಾಗವತ ಪುರಾಣದ ಪ್ರಕಾರ ಕೃಷ್ಣನೇ ವಿಶ್ವದ ಮೂಲ. ಈ ಪ್ರಕಾರ ಕೃಷ್ಣನ ಮೊದಲ ಅವತಾರವೇ ಬಲರಾಮ. ಬಲರಾಮನಿಂದ ಇತರ ಅವತಾರಗಳು ಹುಟ್ಟಿದವು.

ಗೌತಮಬುದ್ಧ ಬೌದ್ಧಧರ್ಮದ ಸಂಸ್ಥಾಪಕ. ಮಾತ್ರವಲ್ಲ, ಚತುರಾರ್ಯ ಸತ್ಯಗಳಾದ ದುಃಖ, ದುಃಖದ ಹುಟ್ಟು, ದುಃಖದ ಅಡಗುವಿಕೆ, ಮತ್ತು ದುಃಖ ನಿವಾರಣೆಗೆ ಒಯ್ಯುವ ಅಷ್ಟಾಂಗಿಕ ಮಾರ್ಗವನ್ನು ಕಂಡು ಹಿಡಿದ ದಾರ್ಶನಿಕ. ಭಗವಾನ್ ಗೌತಮ ಬುದ್ಧನು ಕಂಡು ಹಿಡಿದ ವಿಪಶ್ಯನ ಧ್ಯಾನ ಮಾರ್ಗವು ದುಃಖ ಮತ್ತು ಪಾಪಕರ್ಮಗಳಿಂದ ಮುಕ್ತವಾಗಲು ಸಹಾಯ ಮಾಡುತ್ತದೆ.

ಕಲ್ಕಿ ವಿಷ್ಣುವಿನ ಹತ್ತನೆಯ ಹಾಗೂ ಕೊನೆಯ ಅವತಾರ. ಕಲಿಯುಗದ ಕೊನೆಯಲ್ಲಿ ಆಗಲಿದೆ. ಕಲಿಮಹಾಪುರುಷನ ಪ್ರಭಾವದಿಂದ ಜನರಲ್ಲಿ ಧರ್ಮ, ದಯೆ ಮೊದಲಾದ ಗುಣಗಳು ಅಳಿದು ಅಧರ್ಮ ಅತಿ ಹೆಚ್ಚಿದಾಗ ವಿಷ್ಣು ಕಲ್ಕಿಯಾಗಿ ಅವತರಿಸಿ ಅಶ್ವಾರೂಢನಾಗಿ, ಖಡ್ಗ ಹಿಡಿದು ಹೊರಟು ಮೋಚ್ಛ ಸಮೂಹವನ್ನು ಸಂಹರಿಸಿ, ಜಗತ್ತಿನಲ್ಲಿ ಧರ್ಮಸಂರಕ್ಷಣೆ ಮಾಡಿ ಶಾಂತಿಸೌಖ್ಯಗಳನ್ನು ನೆಲೆಗೊಳಿಸುತ್ತಾನೆಂದು ನಂಬಿಕೆ. ವೈದಿಕ ಸಾಹಿತ್ಯದಲ್ಲಿ ಕಲ್ಕಿಯು ಮಹಾವಿಷ್ಣುವಿನ ಹತ್ತನೆಯ ಮತ್ತು ಕೊನೆಯ ಅವತಾರ. ಅವನು ಈಗ ಇರುವ ಅಸತ್ಯ, ಅಧರ್ಮ ಮತ್ತು ಅನ್ಯಾಯಗಳಿಂದ ಕೂಡಿದ ಕಲಿಯುಗವನ್ನು ಕೊನೆಗೊಳಿಸಿ ಸತ್ಯ,ಧರ್ಮ,ನ್ಯಾಯಗಳ ಕೃತಯುಗ ಅಂದರೆ ಸತ್ಯಯುಗವನ್ನು ಸ್ಥಾಪಿಸುವನು. ಬೌದ್ಧಧರ್ಮದಲ್ಲಿ ಶಾಂಭಲಾ ರಾಜ್ಯದ ೨೫ ಜನ ಅರಸರು ಕಲ್ಕಿ ಎಂಬ ಬಿರುದನ್ನು ಹೊಂದಿರುತ್ತಾರೆ.

ನರಸಿಂಹ ಅವತಾರ :

ವಿಷ್ಣುವಿನ ಅವತಾರಗಳಲ್ಲಿ ಹತ್ತು ಅವತಾರಗಳನ್ನು 'ದಶಾವತಾರ' ಎಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಇವುಗಳಲ್ಲಿ ಮೊದಲ ಮೂರು ಅವತಾರಗಳು ಮತ್ಸ್ಯ, ಕೂರ್ಮ, ವರಾಹ ಅವತಾರಗಳನ್ನು ಸಾಂಕೇತಿಕ ಅವತಾರ ಎಂದು ಕರೆಯುತ್ತಾರೆ. ಈ ರೂಪದಲ್ಲಿ ವಿಷ್ಣುವಿನ ಪೂಜೆಯಾಗುವುದು ಅಪರೂಪವೇ. ಪ್ರಳಯದಿಂದ ಕಾಪಾಡಿದ ಎಂದು ನಂಬಲಾದ ಮತ್ಸ್ಯ ಅವತಾರ ಚಲನೆಯನ್ನು ಸೂಚಿಸಿದರೆ, ಸಮುದ್ರ ಮಥನಕ್ಕೆ ಆಧಾರವಾದ ಕೂರ್ಮಾವತಾರ ಸ್ಥಿತಿಯನ್ನು ಸೂಚಿಸುತ್ತದೆ. ಹಾಗೆಯೇ, ಭೂಮಿಯನ್ನು ತನ್ನ ಕೋರೆಗಳಿಂದ ಎತ್ತಿದ ಎಂದು ವಿವರಿಸಲಾದ ವರಾಹವು, ಕ್ರಿಯೆಯನ್ನು ಸೂಚಿಸುವ ಅವತಾರ. ಚಲನೆ, ಸ್ಥಿತಿ ಮತ್ತು ಕ್ರಿಯೆಗಳು ಸೃಷ್ಟಿಯ ಬಹುಮುಖ್ಯ ಲಕ್ಷಣಗಳೆಂಬುದನ್ನು ಈ ಅವತಾರಗಳು ಸೂಚಿಸುತ್ತದೆ. ಇನ್ನು ನರಸಿಂಹ, ವಾಮನ, ಪರಶುರಾಮ. ಈ ಮೂರು ಅವತಾರಗಳನ್ನು ಅರ್ಧಾವತಾರಗಳು ಎಂದು ಕರೆಯುತ್ತಾರೆ.

ನರಸಿಂಹ ಅವತಾರದಲ್ಲಿ ಪ್ರಹ್ಲಾದನನ್ನು, ಅವನ ತಂದೆ, ಹಿರಣ್ಯ ಕಶ್ಯಪುವೇ ಹಿಂಸಿಸುತ್ತಿರುವಾಗ ಮಹಾವಿಷ್ಣು ಅರ್ಧಸಿಂಹ ಮತ್ತು ಅರ್ಧ ಮಾನವನ ರೂಪತಾಳಿ, ಹಿರಣ್ಯ ಕಶ್ಯಪುವನ್ನು ಸಂಹರಿಸುತ್ತಾನೆ. ಸಿಂಹ ಪ್ರಾಣಿಗಳಲ್ಲೇ ಬಲಿಷ್ಠವಾದದ್ದು. ಅದಕ್ಕೆ ವೀರ ಗುಣವುಳ್ಳ ಮಾನವ ದೇಹವೂ ಸೇರಿದರೆ ಸರ್ವಶಕ್ತಿ ಜೊತೆಗೂಡಿದಂತೆಯೇ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಬುದ್ಧಿಯಲ್ಲಿ ಮಾನವ ಮಿಗಿಲು ಎಂಬುದು ಸಹಜವಾದ ಎಣಿಕೆ. ಆದರೆ, ನರಸಿಂಹ ಅವತಾರದಲ್ಲಿ

ತಲೆ ಪ್ರಾಣಿಯದಾಗಿದ್ದು, ದೇಹ ಮಾನವನದು. ಇದು ಅವತಾರದ ಅರ್ಧ ಸ್ವರೂಪಕ್ಕೆ ನಿದರ್ಶನವಾದಂತೆ ಅದು ಆವೇಶದ ಅಭಿವ್ಯಕ್ತಿ ಎಂಬುದನ್ನು ಸೂಚಿಸುತ್ತದೆ. ಇನ್ನು ವಾಮನ ಬಲಿಯನ್ನು ತ್ರಿವಿಕ್ರಮ ರೂಪತಾಳಿ ಪಾತಾಳಕ್ಕೆ ತಳ್ಳಿದ ಅವತಾರ. ಇಲ್ಲಿ ವಾಮನ ಮತ್ತು ತ್ರಿವಿಕ್ರಮ ಎರಡೂ ಒಂದೇ ಶಕ್ತಿಯ ರೂಪಗಳು ಎಂಬುದನ್ನು ಗಮನಿಸಬೇಕು. ನೋಡಲು ವಾಮನನಂತಿದ್ದರೂ, ಅವನಲ್ಲಿ ತ್ರಿವಿಕ್ರಮ ಶಕ್ತಿ ಅಡಗಿರಬಹುದು ಎಂಬುದನ್ನು ಈ ಅವತಾರವು ಸೂಚಿಸುತ್ತದೆ. ಪರಶುರಾಮನು ತನ್ನ ಅವತಾರದಲ್ಲಿ ಪ್ರಜಾ ಪೀಡಕರಾದ ಕ್ಷತ್ರಿಯರನ್ನೆಲ್ಲ ನಾಶ ಮಾಡಿದ ಚಿತ್ರ ಕಣ್ಮುಂದೆ ಬರುತ್ತದೆ.

ಆಡಳಿತ ನಡೆಸುವವರು ಅಹಂಕಾರ ತೋರಿದರೆ, ಭಗವಂತನು ಅವರನ್ನು ಶಿಕ್ಷಿಸುತ್ತಾನೆ ಎಂಬುದನ್ನು ಇದು ತೋರಿಸುತ್ತದೆ. ಅಷ್ಟೇ ಅಲ್ಲ, ಮುಂದಿನ ಅವತಾರದಲ್ಲಿ ವಿಷ್ಣುವು ಕ್ಷತ್ರಿಯನಾಗಿಯೇ ಜನಿಸುತ್ತಾನೆ. ಇದು ಈ ಪ್ರಕ್ರಿಯೆಯಲ್ಲಿರುವ ಸಂಕೀರ್ಣತೆಗೆ ನಿದರ್ಶನವಾಗಿದೆ. ಈ ಮೂರು ಅವತಾರಗಳಲ್ಲಿ ಸಂದೇಶವಿದೆ. ಆದರೆ ಭಗವಂತನ ಸ್ವರೂಪ ಇಲ್ಲೆಲ್ಲಾ ಸೀಮಿತ ಅವಧಿಯಲ್ಲಿ ಬಂದು ಹೋಗುತ್ತದೆ. ಹಾಗಾಗಿಯೇ ಇವುಗಳನ್ನು ಅರ್ಧಾವತಾರಗಳು ಎಂದು ಹೇಳಲಾಗುವುದು. ಇವನ್ನೆಲ್ಲಾ ಆವೇಶಾವತಾರ ಅಥವಾ ವಿಷ್ಣುವು ತಾತ್ಕಾಲಿಕವಾಗಿ ಧರಿಸಿದ್ದ ಅವತಾರ ಎಂದು ವಿಶ್ಲೇಷಿಸುವುದೂ ಇದೆ. ದಶಾವತಾರ ಪರಿಕಲ್ಪನೆಯಲ್ಲಿ ಜೀವವಿಕಾಸದ ಚಿತ್ರಣವೂ ಇದೆ. ಮೊದಲು ಕಾಣಿಸಿಕೊಂಡಿದ್ದು ಜಲಚರ ಜೀವಿಗಳು ಎಂಬುದನ್ನು ಮತ್ಸ್ಯಾವತಾರ ಸೂಚಿಸಿದರೆ, ಜಲ ಮತ್ತು ಭೂಮಿಗಳೆರಡರಲ್ಲಿಯೂ ಓಡಾಡಬಲ್ಲ ಉಭಯವಾಸಿ ಜೀವಿಗಳು ಸೃಷ್ಟಿಯಾದವೆಂಬುದನ್ನು ಕೂರ್ಮಾವತಾರವು ಸೂಚಿಸುತ್ತದೆ. ನಂತರ ಬಂದ ಸಸ್ತನಿಗಳನ್ನು ವರಾಹ ಅವತಾರ ಸೂಚಿಸಿದರೆ, ಪ್ರಾಣಿ ಸ್ಥಿತಿಯಿಂದ ಮಾನವ ವಿಕಾಸಗೊಂಡಿದ್ದನ್ನು ನರಸಿಂಹ ಅವತಾರ ಸೂಚಿಸುತ್ತದೆ. ಆರಂಭದಲ್ಲಿ ಕಾಣಿಸಿಕೊಂಡ ಕುಬ್ಜ ಮಾನವರನ್ನು ವಾಮನ ಅವತಾರ ಸೂಚಿಸಿದರೆ, ವಿಕಾಸಗೊಂಡ ಆದರ್ಶವಾದಿ ಮಾನವನನ್ನು ರಾಮಾವತಾರ ಸೂಚಿಸುತ್ತದೆ. ರಾಜನೀತಿ ತಜ್ಞನ ಪಾತ್ರವನ್ನು ಕೃಷ್ಣನೂ, ಆಧ್ಯಾತ್ಮಿಕ ವಿಕಸನವನ್ನು ಬುದ್ಧನೂ ಸೂಚಿಸುತ್ತಾನೆ. ಕಲ್ಕಿಯು ಆಧುನಿಕ ಮಾನವನ ಸ್ವರೂಪ. ಹೀಗೆ ದಶಾವತಾರ ಕಲ್ಪನೆಯಲ್ಲಿ ಮಾನವ ವಿಕಾಸ ಚಕ್ರವಿರುವುದನ್ನು ಗಮನಿಸಬಹುದು.

ವಿಷ್ಣುವಿನ ನರಸಿಂಹ ಅವತಾರದ ಬಗ್ಗೆ ಹಲವಾರು ಪುರಾಣ ಕಥೆಗಳಿವೆ. ಅವುಗಳ ಪ್ರಕಾರ ಹಿರಣ್ಯಕಶ್ಯಪ ಎಂಬ ರಾಜನಿಗೆ ಪ್ರಹ್ಲಾದನೆಂಬ ಮಗನಿದ್ದನು. ಹಿರಣ್ಯಕಶ್ಯಪೂವು ಘೋರ ತಪಸ್ಸನ್ನು ಆಚರಿಸಿ ದೇವರನ್ನು ಪ್ರಸನ್ನಗೊಳಿಸಿ 'ತನ್ನ ಮರಣವು ಮನುಷ್ಯನಿಂದಾಗಲಿ ಪ್ರಾಣಿಗಳಿಂದಾಗಲಿ ಬರಕೂಡದು, ಹಗಲು ಅಥವಾ ರಾತ್ರಿ ಬರಬಾರದು, ಮನೆಯಲ್ಲಿ ಅಥವಾ ಮನೆಯ ಹೊರಗೆ ಬರಬಾರದು.' ಎಂದು ವರ ಪಡೆದುಕೊಂಡಿದ್ದನು. ಈ ವರದಿಂದ ಅವನಿಗೆ ತನ್ನನ್ನು ಯಾರೂ ಕೊಲ್ಲಲಾರರು ಎಂದು ಅನಿಸಿತು. ಇದರಿಂದ ರಾಜನಿಗೆ ಅಹಂಕಾರ ಬಂದಿತು. ಅವನಿಗೆ

'ದೇವರಿಗಿಂತ ತಾನೇ ದೊಡ್ಡವನು', ಎಂದು ಅನಿಸತೊಡಗಿತು. ಯಾರಾದರೂ ದೇವರ, ಅದರಲ್ಲಿಯೂ ವಿಷ್ಣುವಿನ ಹೆಸರುಹೇಳಿದರೆ ಅವನಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ.

ಹಿರಣ್ಯಕಶ್ಯಪುವಿನ ಮಗನಾದ ಪ್ರಹ್ಲಾದನು ಮಾತ್ರ ಸತತವಾಗಿ ದೇವರ ನಾಮಸ್ಮರಣೆಯನ್ನು ಮಾಡುತ್ತಿದ್ದನು. 'ನಾರಾಯಣ ನಾರಾಯಣ' ಹೀಗೆ ಜಪ ಮಾಡುತ್ತಲೇ ಅವನು ದೈನಂದಿನ ಕೆಲಸಗಳನ್ನು ಮಾಡುತ್ತಿದ್ದನು. ತಂದೆಗೆ ದೇವರ ನಾಮಸ್ಮರಣೆ ಮಾಡುವುದು ಇಷ್ಟವಾಗುವುದಿಲ್ಲವೆಂದು ಪ್ರಹ್ಲಾದನು ತಂದೆಯ ಎದುರು ಬರುತ್ತಿರಲಿಲ್ಲ. ಆದರೂ ಯಾವಾಗಲೊಮ್ಮೆ ಪ್ರಹ್ಲಾದನಿಗೆ ರಾಜನ ಭೇಟಿಯಾಗುತ್ತಿತ್ತು. ಪ್ರಹ್ಲಾದನ ನಾಮಸ್ಮರಣೆಯನ್ನು ಕೇಳಿ ರಾಜನು ಸಿಟ್ಟಿನಿಂದ ಕೆಂಡಮಂಡಲವಾಗುತ್ತಿದ್ದನು ಹಾಗೂ ಮಗನಿಗೆ ಸಾಕಷ್ಟು ದೊಡ್ಡ ಶಿಕ್ಷೆಯನ್ನು ವಿಧಿಸುವಂತೆ ಸೇವಕರಿಗೆ ಆಜ್ಞೆ ಮಾಡುತ್ತಿದ್ದನು.

ಒಂದು ದಿನ ನಾಮಜಪದಲ್ಲಿ ತಲ್ಲೀನನಾಗಿದ್ದ ಪ್ರಹ್ಲಾದನಿಗೆ ಹಿರಣ್ಯಕಶ್ಯಪೂ ಬರುತ್ತಿರುವುದು ತಿಳಿಯಲೇ ಇಲ್ಲ. ರಾಜನು ನಾಮಜಪ ಕೇಳುತ್ತಿದ್ದಂತೆಯೇ ಸೇವಕರಿಗೆ 'ಬೆಟ್ಟದ ಎತ್ತರದ ಭಾಗದಿಂದ ಆಳವಾದ ಕಂದಕದಲ್ಲಿ ಪ್ರಹ್ಲಾದನನ್ನು ನೂಕಿ ಎಂದು ಆಜ್ಞೆ ಮಾಡಿದನು. ಸೇವಕರು ರಾಜನ ಆಜ್ಞೆ ಪಾಳಿಸಿದರು ಮತ್ತು ರಾಜನಿಗೆ ಈ ಬಗ್ಗೆ ತಿಳಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಅರಮನೆಯ ಮಹಡಿಯಲ್ಲಿ ನಿಂತ ರಾಜನಿಗೆ ದೂರದಿಂದಲೇ ಪ್ರಹ್ಲಾದನು ಅರಮನೆಯತ್ತ ಬರುತ್ತಿರುವುದು ಕಾಣಿಸಿತು. ಜೀವಂತವಾಗಿರುವ ಪ್ರಹ್ಲಾದನನ್ನು ಕಂಡು ರಾಜನು ಸೇವಕರ ಮೇಲೆ ಕುಪಿತಗೊಂಡನು. ನಡೆದ ವಿಷಯವನ್ನು ತಿಳಿಯಲು ಮಗನನ್ನೇ ವಿಚಾರಿಸಬೇಕು ಎಂದು 'ಪ್ರಹ್ಲಾದನು ಅರಮನೆಯಲ್ಲಿ ಪ್ರವೇಶಿದ ಕೂಡಲೇ ನನ್ನ ಎದುರಿನಲ್ಲಿ ನಿಲ್ಲಿಸಿ', ಎಂದು ರಾಜನು ಸೇವಕರಿಗೆ ಆಜ್ಞೆ ಮಾಡಿದನು.

ಅರಮನೆಗೆ ಬಂದ ನಂತರ ಪ್ರಹ್ಲಾದನು ರಾಜನೆದುರು ವಿನಮ್ರವಾಗಿ ನಿಂತನು. ರಾಜನು ಅವನಿಗೆ ಕೇಳಿದನು. 'ಸೇವಕರು ನಿನಗೆ ಬೆಟ್ಟದ ಮೇಲಿನ ತುದಿಯಿಂದ ನೂಕಿ ಹಾಕಿದರೋ, ಇಲ್ಲವೋ' ಎಂದು ಗುಡುಗಿದನು. 'ಹೌದು, ನೂಕಿದರು' ಎಂದು ಪ್ರಹ್ಲಾದ ಉತ್ತರಿಸಿದನು. ರಾಜನು ಪುನಃ ಕೇಳಿದನು, 'ಹಾಗಾದರೆ ನೀನು ಇಲ್ಲಿ ಹೇಗೆ ಬಂದಿರುವಿ' ಆಗ ಪ್ರಹ್ಲಾದನು ನಗುತ್ತ ಹೇಳಿದನು, 'ನಾನು ಒಂದು ಮರದ ಮೇಲೆ ನಿಧಾನವಾಗಿ ಬಿದ್ದೆ. ಮರದ ಮೇಲಿಂದ ಕೆಳಗೆ ಇಳಿದೆ. ಅಲ್ಲಿಂದಲೇ ಒಂದು ಎತ್ತಿನಗಾಡಿ ಹೊರಟಿತ್ತು. ಅದರಲ್ಲಿ ಕುಳಿತು ದಾರಿಯವರೆಗೆ ತಲುಪಿದೆ. ಏಕೋ, ಏನೋ; ಸತತ ನನ್ನ ಜೊತೆ ಯಾರೋ ಇದ್ದಾರೆ ಎಂದು ಅನ್ನಿಸುತ್ತಿತ್ತು; ಆದುದರಿಂದ ನಾನು ಇಲ್ಲಿ ಬೇಗ ತಲುಪಿದೆ.' ಇದನ್ನು ಕೇಳಿ ನಿರಾಶನಾದ ರಾಜನು ಪ್ರಹ್ಲಾದನಿಗೆ ಹೋಗಲು ತಿಳಿಸಿದನು. ಕೆಲದಿನಗಳು ಉರುಳಿದವು. ರಾಜನ ವಿಶಿಷ್ಟ ಜನರಿಗಾಗಿ ಭೋಜನ ಸಿದ್ಧಪಡಿಸುವಲ್ಲಿ ಪ್ರಹ್ಲಾದನು ಏನೋ ಕೆಲಸಕ್ಕೆಂದು ಹೋಗಿರುವಾಗ ಅದೇ ಸಮಯಕ್ಕೆ ಅಲ್ಲಿ ಬಂದ ರಾಜನ ಗಮನವು ಪ್ರಹ್ಲಾದನ ಮೇಲೆ ಬಿತ್ತು. ಪ್ರಹ್ಲಾದನು 'ನಾರಾಯಣ ನಾರಾಯಣ'

ಎಂದು ನಾಮಜಪ ಮಾಡುತ್ತ ಹೊರಟಿದ್ದನು. ಪುನಃ ರಾಜನು ಕೋಪಗೊಂಡನು. ಹತ್ತಿರದಲ್ಲೇ ಇರುವ ದೊಡ್ಡ ಬಾಣಲೆಯಕಾಯ್ದ ಎಣ್ಣೆಯಲ್ಲಿ ಪ್ರಹ್ಲಾದನನ್ನು ಹಾಕಿ ಎಂದು ಅವನು ಸೇವಕರಿಗೆ ಆಜ್ಞೆ ಮಾಡಿದನು. ಸೇವಕರು ಗಾಬರಿಗೊಂಡರು; ಏಕೆಂದರೆ ಪ್ರಹ್ಲಾದನನ್ನು ಎಣ್ಣೆಯಲ್ಲಿ ಹಾಕುವಾಗ ಕಾಯ್ದ ಎಣ್ಣೆಯು ತಮ್ಮಮೈಮೇಲೆ ಸಿಡಿದು ಬಿದ್ದು ನಾವು ಸುಟ್ಟುಕೊಳ್ಳಬಹುದೆಂದು ಅವರಿಗೆ ಹೆದರಿಕೆ ಆಯಿತು; ಆದರೆ ಏನು ಮಾಡುವುದು ರಾಜಾಜ್ಞೆಯನ್ನು ಪಾಲಿಸಲೇಬೇಕು. ಆದುದರಿಂದ ಅವರು ಪ್ರಹ್ಲಾದನನ್ನು ಕಾಯ್ದ ಎಣ್ಣೆಯಲ್ಲಿ ಹಾಕಿದರು. 'ಈಗ ಇವನಿಗೆ ಯಾರು ಕಾಪಾಡುವರು', ಎಂಬುದನ್ನು ನೋಡಲು ರಾಜನು ಅಲ್ಲೇ ಉಪಸ್ಥಿತನಿದ್ದನು. ನಾಲ್ಕೂ ಬದಿಯಿಂದ ಕಾಯ್ದ ಎಣ್ಣೆಯು ಸಿಡಿಯಿತು. ಸೇವಕರು ಸುತ್ತು ಗಾಯಗಳಿಂದ ನೋವು ತಡೆಯಲಾರದೇ ಒದ್ದಾಡುತಿದ್ದರು.; ಆದರೆ ಪ್ರಹ್ಲಾದ ಮಾತ್ರ ಶಾಂತವಾಗಿ ನಿಂತಿದ್ದನು. ರಾಜನು ಬೆರಗಾಗಿ ನಿಂತನು. ನೋಡುತ್ತಾ ಬಾಣಲೆಯಲ್ಲಿ ಕಮಲಗಳು ಕಾಣಹತ್ತಿದವು. ಅದರ ಮೇಲೆ ಪ್ರಹ್ಲಾದನು ಶಾಂತವಾಗಿನಿಂತಿದ್ದನು. ಪುನಃ ಕೋಪಗೊಂಡ ರಾಜನುತನ್ನ ಪರಿವಾರ ಸಮೇತವಾಗಿ ಹೊರಟುಹೋದನು.

ರಾಜನು ಪ್ರಹ್ಲಾದನ ಮೇಲೆ ಕಣ್ಣಿಟ್ಟಿದ್ದನು. ಕೊನೆಗೆ ಒಂದು ದಿನ ರಾಜನು ಪ್ರಹ್ಲಾದನಿಗೆ ಕೇಳಿದನು, 'ಹೇಳು, ಎಲ್ಲಿದ್ದಾನೆ ನಿನ್ನ ದೇವರು? ಆಗ ಪ್ರಹ್ಲಾದನು 'ಎಲ್ಲೆಡೆ' ಎಂದುಹೇಳಿದನು. ರಾಜನು ಹತ್ತಿರದಲ್ಲೇ ಇದ್ದ ಕಂಬವನ್ನು ಒದ್ದು 'ಈ ಕಂಬದಲ್ಲಿಯೂ ಇದ್ದಾನೆಯೇ? ಇದ್ದಾರೆ ತೋರಿಸಿ ನಿನ್ನ ದೇವರನ್ನು!' ಎಂದು ಗುಡುಗಿದನು.ಅಷ್ಟರಲ್ಲಿಯೆ ಗರ್ಜಿಸುತ್ತ ನರಸಿಂಹನು ಕಂಬದೊಳಗಿಂದ ಪ್ರಕಟನಾದನು. ಹಿರಣ್ಯಕಶ್ಯಪೂ ಪಡೆದ ವರಗಳ ನಿಯಮಗಳನ್ನು ಪಾಲಿಸಲುಮನುಷ್ಯನ ಶರೀರ ಹಾಗೂ ಸಿಂಹದ ಮುಖ (ತಲೆ) ಇದ್ದ ನರಸಿಂಹ (ಅಂದರೆ ಮನುಷ್ಯ ಅಥವಾ ಪ್ರಾಣಿಯಲ್ಲ), ಹೊಸ್ತಿಲಿನ ಮೇಲೆ, ಮುಸ್ಸಂಜೆಯ ಸಮಯದಲ್ಲಿ ಹಿರಣ್ಯಕಶ್ಯಪೂವಿನ ಹೊಟ್ಟೆಯನ್ನು ಉಗುರುಗಳಿಂದ ಸೀಳಿ ಅವನನ್ನು ನಾಶಗೊಳಿಸಿದನು.

ನರಸಿಂಹನ ಮೂರ್ತಿಶಿಲ್ಪ :

ಪ್ರತಿಮಾಶಾಸ್ತ್ರದ ಪ್ರಕಾರ ವಿಷ್ಣುವಿನ ಚಿತ್ರಗಳು ಎರಡು ರೀತಿಯಲ್ಲಿವೆ ಅವೆಂದರೆ ಗಿರಿಜ ನರಸಿಂಹ ಮತ್ತು ಯೋಗ ನರಸಿಂಹ ಗೋವಿಂದ ರಾವ್ ಅವರು ಹೇಳುವ ಪ್ರಕಾರ ನಾಲ್ಕು ಕೈಗಳನ್ನು ಹೊಂದಿರುವ ವಿಷ್ಣುವನ್ನು ಕುಳಿತ ಭಂಗಿಯಲ್ಲಿ ಚಿತ್ರಿಸಬೇಕು. ಹೀಗೆ ಕುಳಿತಿರುವ ಭಂಗಿಯಲ್ಲಿರುವ ವಿಷ್ಣುವಿನ ನಾಲ್ಕು ಕೈಗಳಲ್ಲಿ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದ್ದು ಮತ್ತೆರಡು ಕೈಗಳು ಆತನು ವರ ನೀಡುವ ಭಂಗಿಯಲ್ಲಿರಬೇಕೆಂದು ಹೇಳುತ್ತಾರೆ. ವಿಷ್ಣುವಿನ ಮತ್ತೊಂದು ಚಿತ್ರವೆಂದರೆ ಲಕ್ಷ್ಮಿಯ ತೊಡೆಯ ಮೇಲೆ ಆಸೀನನಾಗಿರುವ ಮತ್ತು ಕೈಯಲ್ಲಿ ಕಮಲ ಹಿಡಿದಿರುವ ಲಕ್ಷ್ಮಿ ನರಸಿಂಹನ ಚಿತ್ರ. ನರಸಿಂಹ ಪಂಥ ಮುಂಚೂಣಿಗೆ ಬಂದಂತೆ ನರಸಿಂಹನ ಭಾವಚಿತ್ರಗಳೂ ಸಹ ಕಾಲಕಾಲಕ್ಕೆ ಬದಲಾವಣೆ ಕಂಡಿವೆ. ನರಸಿಂಹನನ್ನು ಉಗ್ರ ಸ್ವರೂಪಿಯಾಗಿ ಚಿತ್ರಿಸಿರುವ ಭಾವಚಿತ್ರಗಳು ಹೆಚ್ಚು ಪ್ರಚಲಿತವಾಗಿವೆ.

ನರಸಿಂಹ ಪಂಥ :

ಮೂಲತಃ ನರಸಿಂಹ ಅರಣ್ಯದೈವನಾಗಿದ್ದು, ಬುಡಕಟ್ಟು ಜನಾಂಗದವರು ಇವನನ್ನು ಪೂಜಿಸುತ್ತಿದ್ದರು. ಕ್ರಮೇಣ ನರಸಿಂಹನನ್ನು ಹಿಂದು ಧರ್ಮದಲ್ಲಿ ಅಳವಡಿಸಿಕೊಳ್ಳಲಾಯಿತು. ಒರಿಸ್ಸಾದ ಬುಡಕಟ್ಟು ಜನಾಂಗಗಳು ಸಿಂಹವನ್ನು ದೇವರೆಂದು ಪೂಜಿಸುವ ಪ್ರತೀತಿಯಿದೆ. ಹೀಗಾಗಿ ನರಸಿಂಹನನ್ನು ಮೂಲತಃ ದೇಸಿ ಬುಡಕಟ್ಟುಗಳು ಪೂಜಿಸುತ್ತಿದ್ದ ಹಿಂದು ದೇವರಾಗಿದ್ದಾನೆ. ಬುಡಕಟ್ಟು ಜನಾಂಗದವರು ಹಿಂದು ಧರ್ಮದ ಪ್ರಸರಣೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸಿದ್ದಾರೆ. ಏಕೆಂದರೆ ವೇದಗಳಲ್ಲಿ ಪ್ರಾಣಿ ದೇವತೆಗಳಿಲ್ಲ.

ಪ್ರಾಚೀನ ಕಾಲದಿಂದಲು ಸಿಂಹಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ. ಬುದ್ಧನನ್ನು ಸಕ್ಯ ವಂಶದ ಸಿಂಹನೆಂದು ಕರೆಯಲಾಗುತ್ತಿತ್ತು. ಹಾಗೆಯೇ ಜೈನ ಧರ್ಮದ ಪ್ರತಿ ತೀರ್ಥಂಕರರು ಸಿಂಹವನ್ನು ತಮ್ಮ ಲಾಂಛನವನ್ನಾಗಿ ಬಳಸಿಕೊಳ್ಳುತ್ತಿದ್ದರು. ಹಿಂದು ಧರ್ಮದಲ್ಲಿ ಸಿಂಹವನ್ನು ಶಕ್ತಿಯ ಸ್ವರೂಪವಾಗಿ ಬಳಸಲಾಗುತ್ತದೆ ಮತ್ತು ಇದನ್ನು ಪ್ರಾಣಿಗಳ ರಾಜನೆಂದು ಗುರುತಿಸಲಾಗಿದೆ. ಹಲವಾರು ಹಿಂದು ದೇವಾಲಯಗಳಲ್ಲಿ ಸಿಂಹವ ಚಿತ್ರವನ್ನು ಕೆತ್ತಲಾಗಿದೆ. ಇದಕ್ಕೆ ಕಾರಣ ಕೆಟ್ಟ ದೃಷ್ಟಿಯಿಂದ ರಕ್ಷಣೆ ಪಡೆಯುವುದಾಗಿದೆ. ದುರ್ಗಾದೇವಿಯು, ಮಹಿಷಾಸುರನನ್ನು ಕೊಲ್ಲುವಾಗ ಸಿಂಹನಂತೆ ಉಗ್ರ ರೂಪ ತಾಳುತ್ತಾಳೆ. ಹೀಗಾಗಿ ಹಿಂದು ಧರ್ಮದಲ್ಲಿ ಸಿಂಹನು ದೇವರ ಸ್ವರೂಪವಾಗಿ ಚಿತ್ರಿಸಲ್ಪಟ್ಟಿದ್ದಾನೆ. ಕ್ರಮೇಣವಾಗಿ ಜನಮಾನಸದಲ್ಲಿ ಜನಪ್ರಿಯತೆ ಪಡೆದಿರುವ ಸಿಂಹನು ನರಸಿಂಹ ಪಂಥದ ಭಾವಚಿತ್ರವಾಗಿ ಮಾರ್ಪಾಟು ಹೊಂದಿದೆ. ಪ್ರಸ್ತುತ ಸಮಯದಲ್ಲಿ ನರಸಿಂಹನನ್ನು ದಕ್ಷಿಣ ಭಾರತದ ಹಲವಾರು ಮನೆತನಗಳ ಮನೆ ದೇವರನ್ನಾಗಿ ಪೂಜಿಸಲಾಗುತ್ತಿದೆ. ಉತ್ತರ ಭಾರತದಲ್ಲೂ ನರಸಿಂಹನನ್ನು ಪೂಜಿಸಲಾಗುತ್ತಿದೆ. ಗುಪ್ತರ ಕಾಲದಲ್ಲಿ ಪ್ರಚಲಿತವಿದ್ದ ನರಸಿಂಹನ ಭಾವಚಿತ್ರಗಳು ಪ್ರತಿಮಾಶಾಸ್ತ್ರದ ದೃಷ್ಟಿಯಿಂದ ನೋಡುವುದಾದರೆ ಹೆಚ್ಚು ಮಹತ್ವವುಳ್ಳವಾಗಿವೆ. ಇವರ ಕಾಲದ ನರಸಿಂಹನ ವಿಗ್ರಹಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಗುಪ್ತರು ನರಸಿಂಹನನ್ನು ಆರಾಧಿಸುತ್ತಿದ್ದರೆಂಬ ವಿಷಯ ಬೆಳಕಿಗೆ ಬರುತ್ತದೆ. ಅಲ್ಲದೆ ಗುಪ್ತರ ಕೊನೆಯ ದೊರೆಯ ಹೆಸರು ನರಸಿಂಹನೇ ಆಗಿದೆ.

ಐಹೊಳೆಯಲ್ಲಿ ನರಸಿಂಹನು ರಾಕ್ಷಸ ಸಂಹಾರ ಮಾಡುತ್ತಿರುವ ಚಿತ್ರವನ್ನು ಕಾಣಬಹುದು. ಈ ಶಿಲ್ಪಕಲಾಕೃತಿಯು ಚಾಲುಕ್ಯರ ಕಾಲದ್ದಾಗಿದ್ದು, ನರಸಿಂಹನನ್ನು ಉಗ್ರಾವತಾರದಲ್ಲಿ ಬಿಂಬಿಸಲಾಗಿದೆ. ಬಾದಾಮಿಯಲ್ಲಿ ಎಂಟು ಕೈಗಳಿರುವ ನರಸಿಂಹನು ಹಿರಣ್ಯ ಕಶ್ಯಪುವಿನ ವಧೆ ಮಾಡುತ್ತಿರುವ ದೃಶ್ಯ ಎಲ್ಲರ ಗಮನ ಸೆಳೆಯುತ್ತದೆ. ಈ ಚಿತ್ರದಲ್ಲಿ ಹಿರಣ್ಯಕಶ್ಯಪು ನರಸಿಂಹನಿಂದ ತಪ್ಪಿಕೊಳ್ಳುವ ಭಂಗಿಯಲ್ಲಿದೆ. ಎಲ್ಲೋರದಲ್ಲಿ ರಾಷ್ಟ್ರಕೂಟರು ನಿರ್ಮಿಸಿರುವ ನರಸಿಂಹನ ಚಿತ್ರಗಳನ್ನು ನೋಡಬಹುದು. ಒಂದು ದೊಡ್ಡ ಗುಹೆಯನ್ನು ರಚಿಸಿ ಅದನ್ನು ದಶಾವತಾರವೆಂದು ಬಿಂಬಿಸಲಾಗಿದೆ. ಇಲ್ಲಿ ನರಸಿಂಹನ ವಿಗ್ರಹಕ್ಕೆ ಎಂಟು ಕೈಗಳಿವೆ ಮತ್ತು ಹಿರಣ್ಯಕಶ್ಯಪುವಿನ ತಲೆಯ ಮೇಲೆ ನರಸಿಂಹನು

ತನ್ನ ಬಲಗಾಲನ್ನು ಇಟ್ಟಿದ್ದಾನೆ. ತನ್ನ ಕೈಗಳಲ್ಲಿ ರಾಕ್ಷಸನ ರುಂಡ ಹಿಡಿದಿದ್ದಾನೆ. ಪಲ್ಲವ ಮತ್ತು ಚೋಳರರು ಸಹ ನರಸಿಂಹನ ವಿಗ್ರಹವನ್ನು ಕೆತ್ತಿಸಿದ್ದಾರೆ. ಕಾಂಚಿಪುರಂನಲ್ಲಿರುವ ಕೈಲಾಸನಾಥ ದೇವಾಲಯದಲ್ಲಿ ಪಲ್ಲವರು ನಿರ್ಮಿಸಿರುವ ಆಕರ್ಷಕ ನರಸಿಂಹನ ವಿಗ್ರಹವನ್ನು ನೋಡಬಹುದು. ನರಸಿಂಹನ ತೆರೆದ ಬಾಯಿ, ಉತ್ಕೃಷ್ಟ ತೋಳುಗಳು, ಉಬ್ಬಿದ ಕಣ್ಣುಗಳು ನರಸಿಂಹನ ದೈಹಿಕ ಸಾಮರ್ಥ್ಯವನ್ನು ಹೇಳುತ್ತವೆ. ಪಲ್ಲವ ಮತ್ತು ಚೋಳರಿಗೆ ನರಸಿಂಹನ ಮೇಲಿದ್ದ ಅಪಾರ ನಂಬಿಕೆ ಮತ್ತು ಶ್ರದ್ಧೆಯನ್ನು ಈ ಚಿತ್ರಗಳು ಹೇಳುತ್ತವೆ.

೧೧ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ಹೊಯ್ಸಳರು[೧೬] ನರಸಿಂಹನ ವಿವಿಧ ರೂಪಗಳನ್ನು ತಮ್ಮ ಕಾಲಾವಧಿಯಲ್ಲಿ ಚಿತ್ರಿಸಿದ್ದಾರೆ. ಬಿಟ್ಟಿದೇವನು ರಾಮಾನುಜರ ಪ್ರಭಾವಕ್ಕೊಳಗಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿ ಹಲವಾರು ಹಿಂದೂ ದೇವಾಲಯಗಳನ್ನು ನಿರ್ಮಿಸಿದನು. ಮತ್ತು ಈ ಎಲ್ಲ ದೇವಾಲಯಗಳು ವೈಷ್ಣವ ಧರ್ಮಕ್ಕೆ ಸಂಬಂಧಿಸಿವೆ. ಹಳೆಬೀಡಿನಲ್ಲಿ ನಿರ್ಮಿಸಿರುವ ವಿಷ್ಣು ದೇವಾಲಯದಲ್ಲಿ ನರಸಿಂಹನ ವಿವಿಧ ಚಿತ್ರಗಳನ್ನು ಕೆತ್ತನೆ ಮಾಡಲಾಗಿದೆ. ಈ ದೇವಾಲಯದಲ್ಲಿರುವ ನರಸಿಂಹನಿಗೆ ೧೬ ಕೈಗಳಿದ್ದು ಅವನ ಬಲಭಾಗಕ್ಕೆ ಶ್ರೀದೇವಿ ಮತ್ತು ಭೂದೇವಿಯರಿದ್ದರೆ, ಎಡ ಭಾಗಕ್ಕೆ ಆತನ ವಾಹನವಾದ ಗರುಡನ ಚಿತ್ರವಿದೆ. ಮೈಸೂರಿನ ಹೊಸ ಹೊಳಲು ಎಂಬ ಗ್ರಾಮದಲ್ಲಿ ಲಕ್ಷ್ಮಿನರಸಿಂಹನ ದೇವಾಲಯವಿದೆ. ಈ ದೇವಸ್ಥಾನವು ತ್ರಿಕೂಟ ವಿನ್ಯಾಸ ಮಾದರಿಯಲ್ಲಿದ್ದು. ಇದಕ್ಕೆ ಮೂರು ಗೋಪುರಗಳಿದ್ದು. ಈ ಮೂರು ಗೋಪುರಗಳು ಸೇರಿ ಒಂದು ಮಂದಿರವಾಗಿದೆ. ದೇವಸ್ಥಾನದ ಮುಖ್ಯ ಗೋಪುರ, ಲಕ್ಷ್ಮೀ ನಾರಾಯಣ ಮಂದಿರದ ಮೂರು ಗೋಪುರಗಳಲ್ಲಿ ಮಧ್ಯಭಾಗದ ಗೋಪುರವು ಎತ್ತರವಾಗಿದ್ದು. ಇನ್ನುಳಿದ ಎರಡು ಗೋಪುರಗಳು ಸಮತಟ್ಟಾದ ಮೇಲ್ಛಾವಣಿಗಳನ್ನು ಹೊಂದಿದೆ. ದೇವಾಲಯದ ರಚನೆ ಈ ದೇವಸ್ಥಾನವು ಜಗಲಿ(ಚೌಕಾಕಾರದ ಕಟ್ಟೆ)ಯಂತಹ ದಿಬ್ಬಗಳ ಮೇಲೆ ನಿರ್ಮಿತವಾಗಿದ್ದು. ಇದು ಹೊಯ್ಸಳ ಶೈಲಿಯ ವಾಸ್ತು ಪ್ರಕಾರಗಳಲ್ಲಿ ಕಂಡುಬರುವ ಒಂದು ಮುಖ್ಯ ಲಕ್ಷಣವೂ ಹೌದು.

ದೇವಾಲಯದ ಮುಖ್ಯದೇವರು ವಿಷ್ಣುವು ಈ ದೇವಾಲಯದ ಆರಾಧ್ಯ ದೈವ. ವಿಷ್ಣುವಿನ ಮತ್ತೊಂದು ಹೆಸರೇ ಲಕ್ಷ್ಮೀನಾರಾಯಣ. ಅಂದರೆ ಲಕ್ಷ್ಮಿಯ ಪತಿ ಎಂದರ್ಥ. ಶಿಲ್ಪಕಲೆಗಳು ಇದು ವೈಷ್ಣವ ಮಂದಿರವಾಗಿರುವುದರಿಂದ ಇಲ್ಲಿ ವಿಷ್ಣುವಿನ ಕೆತ್ತನೆಗಳನ್ನು ಹೆಚ್ಚು ಕಾಣಬಹುದು. ರಾಮಾಯಣ ಹಾಗೂ ಮಹಾಭಾರತದ ಕೆಲವು ಸನ್ನಿವೇಶಗಳನ್ನೂ ಸಹ ಇಲ್ಲಿನ ಗೋಡೆಗಳ ಮೇಲೆ ಕೆತ್ತಲಾಗಿದೆ. ಇಲ್ಲಿನ ಗೋಪುರಗಳಲ್ಲಿ ವಿಷ್ಣುವಿನ ವಿವಿಧ ಅವತಾರಗಳನ್ನು ನೆನಪಿಸುವ ಕೆತ್ತನೆಗಳನ್ನು ಮಾಡಲಾಗಿದ್ದೆ. ಹೀಗಾಗಿ ವೇಣುಗೋಪಾಲ, ಲಕ್ಷ್ಮೀ ನಾರಾಯಣ, ಲಕ್ಷ್ಮೀನರಸಿಂಹನ ವಿಗ್ರಹಗಳನ್ನು ಗೋಪುರದ ಮಂಟಪಗಳಲ್ಲಿ ಕಾಣಬಹುದು. ಬನವಾಸಿಯಲ್ಲಿರುವ ದೇವಾಲಯಗಳು ನರಸಿಂಹನ ಶಿಲ್ಪಗಳಿಂದ ಕೂಡಿವೆ. ಈ ದೇವಾಲಯಗಳು ವಿಜಯನಗರದ ಅರಸರಿಂದ ನಿರ್ಮಾಣವಾಗಿವೆ. ಹಂಪಿಯಲ್ಲಿರುವ ಬೃಹದಾಕಾರದ ಯೋಗ ನರಸಿಂಹನ ವಿಗ್ರಹವು ಆಗಿನ

ಕಾಲದ ಜನರಿಗೆ ನರಸಿಂಹನ ಮೇಲಿದ್ದ ಭಕ್ತಿಯನ್ನು ತೋರುತ್ತದೆ. ವಿಜಯನಗರವನ್ನು ಆಳಿದ ಅನೇಕ ನಾಯಕರು ಸಹ ನರಸಿಂಹನನ್ನು ಆರಾಧಿಸುತ್ತಿದ್ದರು. ಇವರು ಕಟ್ಟಿಸಿದ ದೇವಾಲಯಗಳಲ್ಲಿ ಪ್ರಮುಖ ಮೂರ್ತಿಯೆಂದರೆ ನರಸಿಂಹನದ್ದಾಗಿದೆ. ಉತ್ತರ ಭಾರತದಲ್ಲೂ ನರಸಿಂಹನ ವಿಗ್ರಹಗಳನ್ನು ನೋಡಬಹುದು.

ವಿಷ್ಣುವಿನ ವಿವಿಧ ರೂಪಗಳು :

ವಿಷ್ಣುವಿನ ದಶಾವತಾರಗಳನ್ನು ಅತ್ಯಂತ ಆಸಕ್ತಿ ಮತ್ತು ಶ್ರದ್ಧೆಯಿಂದ ಬಿಡಿಸಲಾಗಿದೆ. ಅಷ್ಟದಿಕ್ಪಾಲಕರ ಚಿತ್ರಗಳ ನಡುವೆ ನರಸಿಂಹನ ವಿವಿಧ ರೂಪಗಳನ್ನು ಕೆತ್ತಲಾಗಿದೆ. ಇಂದ್ರನ ಚಿತ್ರದ ಪಕ್ಕದಲ್ಲಿ ಬಿಡಿಸಿರುವ ಯೋಗ ನರಸಿಂಹನ ಚಿತ್ರವು ಧ್ಯಾನದಲ್ಲಿ ಕುಳಿತಿದೆ. ಇದರ ಪಕ್ಕದಲ್ಲಿ ಲಕ್ಷ್ಮಿ ನರಸಿಂಹನ ಚಿತ್ರವಿದೆ. ಈ ಚಿತ್ರದಲ್ಲಿ ವಿಷ್ಣುವಿಗೆ ನಾಲ್ಕು ಕೈಗಳಿವೆ. ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಲಕ್ಷ್ಮಿಯ ಚಿತ್ರ ಸ್ವಲ್ಪ ಚಿಕ್ಕದಾಗಿದೆ. ಇತರೆ ಅವತಾರಗಳಾದ ವಾಮನ, ಕಲ್ಕಿ, ಕೃಷ್ಣ ಅವತಾರಗಳನ್ನು ಸಹ ಬಿಡಿಸಲಾಗಿದೆ. ಇಲ್ಲಿ ಕಣ್ಮನ ಸೆಳೆಯುವ ಮತ್ತೊಂದು ಚಿತ್ರವೆಂದರೆ ಎರಡು ಮಂಗಗಳು, ಒಂದು ಸಿಂಹ, ಹಂದಿ ಮತ್ತು ಕೋಣದ ತಲೆಯಿರುವ ಪಂಚಮುಖಿ ಆಂಜನೇಯನ ಚಿತ್ರ.

ಗೋಪಿಕೆಯರ ಜೊತೆ ಶ್ರೀಕೃಷ್ಣ :

ಕಲಾವಿದರ ಅಚ್ಚುಮೆಚ್ಚಿನ ಚಿತ್ರವಾಗಿರುವುದರಿಂದ ಈ ಚಿತ್ರವನ್ನು ಒಂದಕ್ಕಿಂತಲೂ ಹೆಚ್ಚು ಬಾರಿ ಕೆತ್ತಲಾಗಿದೆ. ಈ ಚಿತ್ರವನ್ನು ಮುಖಮಂಟಪದ ಮೇಲೆಯೂ ಬಿಡಿಸಲಾಗಿದೆ, ಕೃಷ್ಣನ ರಾಸಲೀಲೆಯನ್ನು ಸ್ವತಂತ್ರವಾಗಿ ಮತ್ತು ತಮ್ಮ ಅಭಿರುಚಿಗೆ ತಕ್ಕಂತೆ ಬಿಡಿಸಲು ಸ್ವಾತಂತ್ರವಿರುವ ಕಾರಣ ಕಲಾವಿದರು ಇದನ್ನು ಹೆಚ್ಚಾಗಿ ಆಯ್ಕೆಮಾಡಿಕೊಂಡಿದ್ದಾರೆ. ನಗ್ನನಾಗಿರುವ ಕೃಷ್ಣನನ್ನು ಗೋಪಿಕೆಯರು ಆವರಿಸಿಕೊಂಡಿದ್ದಾರೆ. ತನ್ನ ಎರಡು ಕೈಗಳಿಂದ ಗೋಪಿಕೆಯರನ್ನು ಬಿಗಿದಪ್ಪಿರುವ ಕೃಷ್ಣ ಕೆಲವು ಗೋಪಿಕೆಯರ ಸ್ಥನಗಳನ್ನು ಚುಂಬಿಸುವ ದೃಶ್ಯವಿದೆ. ಗೋಪಿಕೆಯರು ತಮ್ಮ ಕಾಲುಗಳಿಂದ ಕೃಷ್ಣನನ್ನು ತಬ್ಬಿಕೊಂಡಿದ್ದಾರೆ. ಇಬ್ಬರು ಗೋಪಿಕೆಯರು ಅತ್ಯಂತ ಕುತೂಹಲದಿಂದ ಕೃಷ್ಣನನ್ನು ದಿಟ್ಟಿಸುತ್ತಿದ್ದಾರೆ. ಇನ್ನು ಕೆಲವು ಚಿತ್ರಗಳಲ್ಲಿ ಕೃಷ್ಣ ಮತ್ತು ಗೋಪಿಕೆಯರು ಅರೆ ನಗ್ನರಾಗಿದ್ದಾರೆ.

ಗೋಪಿಕೆಯರ ಸೀರೆ ಕದಿಯುತ್ತಿರುವ ಕೃಷ್ಣ :

ಕೃಷ್ಣನನ್ನು ತನ್ನ ಪತಿಯನ್ನಾಗಿ ಪಡೆಯುವುದಕ್ಕಾಗಿ ಹಲವಾರು ಗೋಪಿಕೆಯರು ಕಾತ್ಯಾಯಿನಿ ದೇವತೆಯನ್ನು ಪೂಜಿಸುತ್ತಿದ್ದರು. ಪೂಜೆ ಸಲ್ಲಿಸುವುದಕ್ಕಿಂತಲೂ ಮುನ್ನ ಗೋಪಿಕೆಯರು ಯಮುನಾ ತೀರದಲ್ಲಿ ಸ್ನಾನ ಮಾಡುತ್ತಿದ್ದರು. ಇದನ್ನು ಅರಿತಿದ್ದ ಕೃಷ್ಣ, ಬೇಕೆಂತಲೇ ಗೋಪಿಕೆಯರ ಸೀರೆ ಕದ್ದು ಅವರನ್ನು ಪೀಡಿಸುತ್ತಿದ್ದ. ಭಾಗವತ ಪುರಾಣದಲ್ಲಿ ಕೃಷ್ಣನು ಗೋಪಿಕೆಯರನ್ನು ಕುರಿತು ಹೇಳುತ್ತಾನೆ 'ಓ ಗೋಪಿಕೆಯರೆ, ನಿಮಗೆ ನಿಮ್ಮ ಉಡುಪು ಬೇಕಿದ್ದರೆ ಒಬ್ಬೊಬ್ಬರಾಗಿ ಬಂದು

ತಮ್ಮ ಸೀರೆ ತೆಗೆದೊಕೊಂಡು ಹೋಗಿ. ಬರುವಾಗ ಮುಖದ ಮೇಲೆ ಮಂದಸ್ಮಿತವಿರಲಿ". ಅನಿವಾರ್ಯವಾಗಿ ಗೋಪಿಕೆಯರು ಅರೆಮನಸ್ಸಿನಿಂದ ಕೃಷ್ಣನ ಮುಂದೆ ಬರಬೇಕಾಗುತ್ತದೆ. ಗೋಪಿಕೆಯರು ಒಬ್ಬೊಬ್ಬರಾಗಿ ತಮ್ಮ ಸೀರೆ ತೆಗೆದುಕೊಳ್ಳು ಬಂದಾಗ ಮರದ ಮೇಲೆ ಕುಳಿತಿರುವ ಕೃಷ್ಣ ಅವರ ಕೈಯಿಂದ ಸೀರೆಯನ್ನು ಕಸಿದುಕೊಳ್ಳುತ್ತಿರುವ ದೃಶ್ಯ ಚಿತ್ರಿಸಲಾಗಿದೆ. ಇದನ್ನು ನೋಡಿದ ಗೋಪಿಕೆಯರು ಕೃಷ್ಣನನ್ನು ಬೇಡಿಕೊಳ್ಳುತ್ತಿದ್ದಾರೆ. ಒಬ್ಬ ಗೋಪಿಕೆಯು ಮರದ ಮೇಲಿನ ಕೃಷ್ಣನನ್ನು ಕೆಳಗೆ ಬೀಳಿಸಲೆಂದು ಮರವನ್ನು ಅಲ್ಲಾಡಿಸುತ್ತಿದ್ದರೆ, ಉಳಿದ ಗೋಪಿಕೆಯರು ಎರಡು ಕೈಗಳಿಂದ ತಮ್ಮ ಎದೆ ಮುಚ್ಚಿಕೊಂಡಿದ್ದಾರೆ.

ವಿಷಕಂಠನಾಗಿ ಶಿವ :

ಹಿಂದೆ ದೇವಾಸುರರು ಅಮೃತ ಪಡೆಯಲು ಕ್ಷೀರಸಾಗರ ಮಥನಕ್ಕೆ ಮುಂದಾದರು. ಮಂದರಪರ್ವತ ಕಡಗೋಲಾಯಿತು. ವಾಸುಕಿ ಹಗ್ಗವಾಯಿತು. ಮಥನಕಾರ್ಯ ರಭಸವಾಗಿ ನಡೆದಾಗ ಸರ್ಪವಾದ ವಾಸುಕಿಯ ಬಾಯಿಂದ ವಿಷ ಜ್ವಾಲೆ ಹೊರಬಂದು ಕ್ಷೀರ ಸಾಗರವನ್ನು ವ್ಯಾಪಿಸಿತು. ಅದರ ಬಾಧೆಗೆ ಎಲ್ಲರೂ ಓಡಿ ಹೋದಾಗ ಶಿವನು ತನ್ನ ಅಂಗೈಯಲ್ಲಿ ವಿಷವನ್ನು ಶೇಖರಿಸಿ ಕುಡಿದನು. ಕೂಡಲೇ ಪಾರ್ವತಿ ಮಾತೆ ಶಿವನ ಕಂಠ ಒತ್ತಿ ಹಿಡಿಯಲು ವಿಷವು ಅಲ್ಲಿಯೇ ನಿಂತಿತಂತೆ. ಅಲ್ಲಿಂದ ಶಿವನು ವಿಷಕಂಠ ಅಥವಾ ನೀಲಕಂಠ ಎನಿಸಿದನು. ಇಲ್ಲಿ ಶಿವನಿಗೆ ನಾಲ್ಕು ಕೈಗಳಿವೆ. ಎರಡು ಕೈಗಳು ಖಡ್ಗವನ್ನು ಹಿಡಿದಿದ್ದರೆ ಕೆಳಗಿನ ಕೈಗಳು ನಾಶವಾಗಿವೆ. ಪಾರ್ವತಿಯು ಶಿವನ ಕಂಠವನ್ನು ಬಿಗಿಯಾಗಿ ಹಿಡಿದಿದ್ದಾಳೆ. ಶಿವ ಮತ್ತು ಪಾರ್ವತಿಯ ಉಡುಪು ಸರಳವಾಗಿದೆ.

ತಾಂಡವೇಶ್ವರನಾಗಿ ಶಿವ :

ಇಲ್ಲಿ ಶಿವನು ನೃತ್ಯ ಮಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಶಿವನಿಗೆ ನಾಲ್ಕು ಕೈಗಳಿದ್ದು ಎರಡು ಕೈಗಳಲ್ಲಿ ಖಡ್ಗವಿದೆ ಮತ್ತು ಹನ್ನೆರಡು ಕೈಗಳು ಅಭಯವನ್ನು ತೋರಿಸುತ್ತಿವೆ. ಈತನ ಬಲಗಾಲು ಮೇಲೆತ್ತಿದ್ದು ಆಕಾಶದ ಕಡೆ ತೋರಿಸುತ್ತಿದೆ. ಈ ಚಿತ್ರವನ್ನು ಏಕಪಾದ ಶಿವನೆಂದು ಕರೆಯಲಾಗುತ್ತಿದೆ.

ಗಜಸುರಾವಧಮೂರ್ತಿಯಾಗಿ ಶಿವ :

ಇಲ್ಲಿ ಶಿವನನ್ನು ಗಜಸುರಾವಧಮೂರ್ತಿಯಾಗಿ ಬಿಡಿಸಲಾಗಿದೆ. ಹಿಂದೆ ದೇವತೆಗಳಿಗೂ ಮತ್ತು ದಾನವರಿಗೂ ಯುದ್ಧ ಆಗುತ್ತಿತ್ತು. ಆಗ ನೀಲ ಎನ್ನುವ ರಾಕ್ಷಸ ದೇವತೆಗಳನ್ನು ಸೋಲಿಸಲು ಅವರ ರಕ್ಷಕನಾದ ಶಿವನನ್ನೇ ಮೊದಲು ಸೋಲಿಸಬೇಕು ಎಂದು ಯೋಚಿಸಿ ರಾಕ್ಷಸ ನೀಲನು ಒಂದು ಆನೆಯ ದೇಹದ ಒಳಹೊಕ್ಕು ನಂತರ ಶಿವನ ಮೇಲೆ ಆಕ್ರಮಣ ಮಾಡುತ್ತಾನೆ. ಆದರೆ ಶಿವನಿಗೆ ಇದು ಓರ್ವ ರಾಕ್ಷಸನ ಕೃತ್ಯ ಎಂದು ತಿಳಿಯುತ್ತದೆ. ಪಾಪದ ಪ್ರಾಣಿ ಆನೆಯನ್ನು

ಘಾಸಿಗೊಳಿಸಲು ಇಚ್ಚಿಸದ ಶಿವನು ತಾನು ಕೂಡ ಅಣು ರೂಪದಲ್ಲಿ ಆನೆಯ ದೇಹದ ಒಳ ಹೋಗುತ್ತಾನೆ. ಅಲ್ಲಿ ತಾಂಡವ ನೃತ್ಯ ಮಾಡಿ ಆ ಗಜಾಸುರನನ್ನು ಕೊಲ್ಲುತ್ತಾನೆ.ಆನೆಗೆ ಏನೂ ಅಪಾಯ ಉಂಟಾಗುವುದಿಲ್ಲ. ಹೀಗಾಗಿ ಶಿವನಿಗೆ ಗಜಾಸುರವಧನ ಎಂಬ ಹೆಸರು ಬಂತು. ಇಲ್ಲಿ ಶಿವನು ಗಜಾಸುರನ ಮೇಲೆ ನಿಂತು ನೃತ್ಯ ಮಾಡುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಶಿವನಿಗೆ ನಾಲ್ಕು ಕೈಗಳಿದ್ದು ಆತನ ಎರಡು ಕೈಗಳಲ್ಲಿ ಆಯುಧವಿದೆ. ಆತನ ಮುಖದಲ್ಲಿ ರೋಷವಿದೆ.

ಶಿವ ಮತ್ತು ಆತನ ಭಕ್ತ ಕಣ್ಣಪ್ಪ :

ಈ ಚಿತ್ರದಲ್ಲಿ ಶಿವಲಿಂಗದ ಮೇಲೆ ನಿಂತಿರುವ ಶಿವ ಇದ್ದಾನೆ. ಇದರ ಪಕ್ಕದಲ್ಲಿ ಬೇಡರ ಕಣ್ಣಪ್ಪನ ಚಿತ್ರ ಬಿಡಿಸಲಾಗಿದೆ. ಬೇಡರ ಕಣ್ಣಪ್ಪ ಒಬ್ಬ ಅಪ್ರತಿಮ ಶಿವಭಕ್ತನಾಗಿದ್ದ. ಒಮ್ಮೆ ಕಣ್ಣಪ್ಪನು ಶಿವನ ವಿಗ್ರಹದಲ್ಲಿರುವ ಕಣ್ಣಿನಿಂದ ರಕ್ತ ಬರುತ್ತಿರುವುದನ್ನು ನೋಡುತ್ತಾನೆ. ತನ್ನ ಭಕ್ತಿಯಲ್ಲಿ ದೋಷವಿದೆಯೆಂದು ತಿಳಿದ ಕಣ್ಣಪ್ಪ ಶಿವನ ಕಣ್ಣಿನಿಂದ ರಕ್ತ ಬರುವುದನ್ನು ನಿಲ್ಲಿಸಲು ಹರಸಾಹಸ ಪಡುತ್ತಾನೆ. ಕೊನೆಗೆ ತನ್ನ ಕಣ್ಣನ್ನೇ ಕಿತ್ತು ಶಿವನ ಕಣ್ಣಿನಿಂದ ರಕ್ತ ಬರುವುದನ್ನು ನಿಲ್ಲಿಸಲು ಮುಂದಾಗುತ್ತಾನೆ. ಆಗ ಶಿವ ಪ್ರತ್ಯಕ್ಷನಾಗಿ ಕಣ್ಣಪ್ಪನ ಕಣ್ಣನ್ನು ರಕ್ಷಿಸುತ್ತಾನೆ. ಈ ಚಿತ್ರದಲ್ಲಿ ಶಿವ ಕಣ್ಣನ್ನು ಕೀಳುತ್ತಿರುವ ಕಣ್ಣಪ್ಪನನ್ನು ತಡೆಯುತ್ತಿರುವ ದೃಶ್ಯವಿದೆ. ಕಣ್ಣಪ್ಪನ ಚಿತ್ರ ಚಿಕ್ಕದಿದ್ದು ಶಿವನ ಚಿತ್ರ ದೊಡ್ಡದಿದೆ.

ಮೃತ್ಯುಂಜಯ :

ಈ ಚಿತ್ರದಲ್ಲಿ ಶಿವನು ಹುಲಿಯ ಮೇಲೆ ಆಸೀನನಾಗಿದ್ದಾನೆ ಮತ್ತು ಈತನ ಕೈಯಲ್ಲಿ ಅಮೃತದ ಗಡಿಗೆಯಿದೆ. ಶಿವ ತನ್ನ ಸೌಂದರ್ಯದಿಂದ ಇತರರ ಪತ್ನಿಯರನ್ನು ಆಕರ್ಷಿಸುತ್ತಾನೆಂದು ತಿಳಿದು ದ್ವಾರುಕಾವನದ ಋಷಿಗಳು ಶಿವನ ಮೇಲೆ ಕುಪಿತರಾಗುತ್ತಾರೆ. ಹೀಗಾಗಿ ಈ ಋಷಿಗಳು ತಮ್ಮ ಮಂತ್ರಶಕ್ತಿಯಿಂದ ಶಿವನನ್ನು ಕೊಲ್ಲುವ ಯೋಜನೆ ಹಾಕಿಕೊಳ್ಳುತ್ತಾರೆ. ಇದಕ್ಕಾಗಿ ಉಗ್ರ ಹೋಮ ಮಾಡುತ್ತಾರೆ. ಹೋಮದ ಬೆಂಕಿಯಿಂದ ಹುಲಿ, ಮತ್ತು ಜಿಂಕೆಯನ್ನು ಸೃಷ್ಟಿಸುತ್ತಾರೆ. ಹಾಗೆಯೇ ಹೋಮದ ಅಗ್ನಿಯಿಂದ ಕೆಂಪಗೆ ಉರಿಯುತ್ತಿರು ಕಬ್ಬಿಣದ ಸಲಾಕೆಯನ್ನೂ ಸಹ ತಯಾರಿಸುತ್ತಾರೆ. ಆದರೆ ಇದನ್ನು ಅರಿತ ಶಿವ ಹುಲಿಯ ಸಂಹಾರ ಮಾಡುತ್ತಾನೆ. ಜಿಂಕೆಯನ್ನು ತನ್ನ ಎಡಗೈಯಲ್ಲಿ ಹಿಡಿದು ಕಬ್ಬಿಣದ ಸಲಾಕೆಯನ್ನು ತನ್ನ ?ಯುಧವನ್ನಾಗಿ ಮಾಡಿಕೊಳ್ಳುತ್ತಾನೆ. ತನ್ನ ಮೈಗೆ ಬೂದಿ ಬಳಿದುಕೊಂಡಿರುವ ಶಿವ ತನ್ನ ಕೊರಳಿನಲ್ಲಿ ತಲೆ ಬುರುಡೆ, ಮೂಳೆಗಳನ್ನು ತನ್ನ ಹಾರವಾಗಿಸಿಕೊಂಡಿದ್ದಾನೆ. ತನ್ನ ಮುಡಿಯಲ್ಲಿ ಗಂಗೆಯನ್ನು ಹಿಡಿದಿಟ್ಟುಕೊಂಡಿದ್ದಾನೆ.

ಕಿರಾತಾರ್ಜುನಮೂರ್ತಿ :

ಅರ್ಜುನನ ಶಕ್ತಿ ಮತ್ತು ಅವನ ಶಿವಭಕ್ತಿಯನ್ನು ಪರೀಕ್ಷಿಸಲು ಶಿವ ಬೇಟೆಗಾರನ ವೇಷದಲ್ಲಿ ಬರುವ ಪ್ರಸಂಗವನ್ನು ಈ ಚಿತ್ರದಲ್ಲಿ ನೋಡಬಹುದು. ಅರ್ಜುನನು ಪಾಶುಪತಾಸ್ತ್ರವನ್ನು

ಪಡೆಯಲು ಉಗ್ರ ತಪಸ್ಸನ್ನು ಕೈಗೊಳ್ಳುತ್ತಾನೆ. ಇದರಿಂದ ಪ್ರಸನ್ನನಾದ ಶಿವ ಅರ್ಜುನನಿಗೆ ಆಸ್ತ್ರವನ್ನು ನೀಡುವ ಮೊದಲು ಅವನ ಪರೀಕ್ಷೆ ನೆಡೆಸಲು ಮುಂದಾಗುತ್ತಾನೆ. ಬೇಟೆಗಾರನ ವೇಷದಲ್ಲಿ ಬಂದ ಶಿವ ಮತ್ತು ಅರ್ಜುನನ ನಡುವೆ ಭಯಂಕರ ಕಾಳಗ ನೆಡೆಯುತ್ತದೆ. ಈ ಚಿತ್ರದಲ್ಲಿ ಶಿವ ತನ್ನ ಮೈಮೇಲೆ ಹುಲಿಯ ಚರ್ಮ ಹೊದ್ದುಕೊಂಡಿದ್ದಾನೆ ಮತ್ತು ತನ್ನ ಎರಡು ಕೈಗಳಲ್ಲಿ ತ್ರಿಶೂಲ ಹಿಡಿದಿದ್ದಾನೆ. ಈತನ ಪಕ್ಕದಲ್ಲಿ ಕಾಡುಹಂದಿಯ ಚಿತ್ರವಿದ್ದು ಆ ಪ್ರಾಣಿಯ ಮೇಲೆ ಶಿವ ತನ್ನ ಬಲಗೈ ಇಟ್ಟಿದ್ದಾನೆ. ಆದರೆ ಈ ಚಿತ್ರದಲ್ಲಿ ಅರ್ಜುನನ ಚಿತ್ರವಿಲ್ಲ. ಹೀಗಾಗಿ ಈ ಚಿತ್ರವು ಕಿರಾತಾರ್ಜುನೀಯ ಎಂದು ಖಚಿತವಾಗಿ ಹೇಳಲಾಗುವುದಿಲ್ಲ.

ಯೋಗಾಸನಮೂರ್ತಿ :

ಶಿವನನ್ನು ಯೋಗಗುರು ಎಂದು ಕರೆಯಲಾಗುತ್ತದೆ. ಹಿಮಾಲಯದ ಮೇಲೆ ಯತಿಗಳಿಗೆ ಯೋಗ ಕಲಿಸಿದನೆಂದು ಪುರಾಣಗಳು ಹೇಳುತ್ತವೆ. ಈ ಚಿತ್ರದಲ್ಲಿ ಶಿವನು ಮರದ ಕೆಳಗೆ ಆಸೀನನಾಗಿದ್ದಾನೆ. ಇವನ ಎರಡು ಕೈಗಳು ಅಭಯವನ್ನು ನೀಡುತ್ತಿವೆ ಮತ್ತು ಈತನ ಮುಂದೆ ಯತಿಗಳು ಮತ್ತು ಮುನಿಗಳು ಕೈಮುಗಿದು ಕುಳಿತುಕೊಂಡಿದ್ದಾರೆ.

ಪಂಚಮುಖಿ ಶಿವ :

ಈ ಚಿತ್ರದಲ್ಲಿ ಶಿವನ ಪಂಚಮುಖಿ ರೂಪವನ್ನು ಕಾಣಬಹುದು. ಈ ಚಿತ್ರದಲ್ಲಿ ಶಿವನಿಗೆ ಐದು ಮುಖಗಳು ಮತ್ತು ಹತ್ತು ಕೈಗಳಿವೆ. ಪ್ರತಿಯೊಂದು ಕೈಯಲ್ಲಿ ಬೇರೆ ಬೇರೆ ಆಯುಧಗಳಿವೆ. ಶಿವನ ಐದು ಮುಖಗಳು ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜ್ಯಾತವನ್ನು ಪ್ರತಿನಿಧಿಸುತ್ತವೆ. ಈಶಾನನ ಮುಖ ಕ್ಷಿತಿಜವನ್ನು ನೀಡುತ್ತಿರುವ ಭಂಗಿಯನ್ನು ಸದಾಶಿವನೆಂದು ಕರೆಯಲಾಗುತ್ತದೆ. ಈ ಭಂಗಿಯಲ್ಲಿರುವ ಶಿವನನ್ನು ಪೂಜಿಸಿದರೆ ಮೋಕ್ಷ ದೊರಕುತ್ತದೆ ಎಂಬ ನಂಬಿಕೆಯಿದೆ. ಪೂರ್ವ ದಿಕ್ಕಿಗೆ ಮುಖ ಮಾಡಿರುವ ತತ್ಪುರುಷ ರೂಪದ ಶಿವ ಗಾಳಿ ಮತ್ತು ಕತ್ತಲನ್ನು ನಿವಾರಿಸುವ ಶಕ್ತಿಯೆಂದು ನಂಬಲಾಗಿದೆ. ದಕ್ಷಿಣಕ್ಕೆ ಮುಖ ಮಾಡಿರುವ ಅಘೋರನ ರೂಪ ಶಿವನ ಶಕ್ತಿ ಮತ್ತು ಅವನಿಗೆ ಲೋಕವನ್ನು ಮತ್ತೊಮ್ಮೆ ಪುನಸೃಷ್ಟಿ ಮಾಡುವ ಶಕ್ತಿಯನ್ನು ಬಿಂಬಿಸುತ್ತದೆ. ಉತ್ತರದ ಮುಖ ಮಾಡಿರುವ ವಾಮದೇವ ನೀರಿನ ಮೇಲೆ ಶಿವನಿಗಿರುವ ಹತೋಟಿಯನ್ನು ಪ್ರತಿನಿಧಿಸುತ್ತದೆ ಮತ್ತು ಪಶ್ಚಿಮಕ್ಕಿರುವ ಸದ್ಯೋಜ್ಯಾತ ರೂಪವು ಸೃಷ್ಟಿಯ ವಿಸ್ಮಯವನ್ನು ಹೇಳುತ್ತದೆ.

ಶರಭಮೂರ್ತಿ :

ಈ ಚಿತ್ರದಲ್ಲಿ ಶಿವನನ್ನು ಎರಡು ತಲೆಯ ಮೇಲೆ ಕಿರೀಟ ಧರಿಸಿದ ಸಿಂಹಸಂತೆ ಮತ್ತು ೧೮ ಕೈಗಳಿರುವ ಪ್ರಾಣಿಯಂತೆ ಚಿತ್ರಿಸಲಾಗಿದೆ. ಈ ಕೈಗಳಲ್ಲಿ ಬೇರೆ ಬೇರೆ ರೀತಿಯ ಆಯುಧಗಳಿವೆ. ಈ ಚಿತ್ರವನ್ನು ಯಜ್ಞವರಾಹವೆಂದು ಕರೆಯಬಹುದು. ಪ್ರತಿಮಾಶಾಸ್ತ್ರದ

ಪ್ರಕಾರ, ತ್ಯಾಘದ ಮೂರ್ತಿಐಆದ ಯಜ್ಞೇಶ್ವರನಿಗೆ ಎರಡು ತಲೆ, ಏಳು ಕೈ, ಮೂರು ಕಾಲು ಮತ್ತು ನಾಲ್ಕು ಕೊಂಬುಗಳಿವೆ. ಈ ಚಿತ್ರದಲ್ಲಿರುವ ಶಿವನ ಕೈಗಳಲ್ಲಿ ತ್ರಿಶೂಲವೂ ಸೇರಿದಂತೆ ಹಲವಾರು ರಕ್ಷಣಾ ಆಯುಧಗಳಿರುವುದರಿಂದ ಇದನ್ನು ಶರಬೇಶ್ವರನ ಚಿತ್ರವೆಂದು ಹೇಳಬಹುದಾಗಿದೆ.

ಚತುರ್ಮುಖಿ ಬ್ರಹ್ಮ[೧೭] :

ಈ ಚಿತ್ರದಲ್ಲಿ ಬ್ರಹ್ಮಾಂಡದ ಸೃಷ್ಟಿಕರ್ತನಾದ ಬ್ರಹ್ಮನ ಚಿತ್ರವಿದೆ. ಈ ಚಿತ್ರದಲ್ಲಿ ಬ್ರಹ್ಮನಿಗೆ ನಾಲ್ಕು ತಲೆಗಳಿವೆ. ಇಲ್ಲಿ ಬ್ರಹ್ಮನು ತನ್ನ ವಾಹನವಾದ ಹಂಸದ ಮೇಲೆ ಆಸೀನನಾಗಿದ್ದಾನೆ. ನಾಲ್ಕು ಕೈಗಳಲ್ಲಿ ಒಂದು ಕೈ ನಾಶವಾಗಿದೆ. ಒಂದು ಕೈಯಲ್ಲಿ ಪುಸ್ತಕ ಹಿಡಿದಿದ್ದಾನೆ. ಬ್ರಹ್ಮನ ನಾಲ್ಕು ತಲೆಗಳು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆ. ಸಾಮಾನ್ಯವಾಗಿ ಬ್ರಹ್ಮನಿಗೆ ಗಡ್ಡವಿರುವ ಚಿತ್ರಗಳನ್ನು ನಾವು ನೋಡಿದ್ದೇವೆಯಾದರು ಈ ಚಿತ್ರದಲ್ಲಿ ಆತನ ಮುಖದ ಮೇಲೆ ಗಡ್ಡವಿಲ್ಲ. ಈತನ ಕಣ್ಣುಗಳು ಧ್ಯಾನಾವಸ್ಥೆಯಲ್ಲಿವೆ. ಇದರ ಜೊತೆಗೆ ಕೈಮುಗಿದು ನಿಂತಿರುವ ಗಂಡು ಮತ್ತು ಹೆಣ್ಣು ಭಕ್ತರ ಚಿತ್ರಗಳು ಗಮನ ಸೆಳೆಯುತ್ತವೆ. ಋಷಿಗಳು ಹೋಮವನ್ನು ಮಾಡುತ್ತಿದ್ದಾರೆ ಮತ್ತು ಕಾಮಧೇನುವನ್ನು ಸಹ ಚಿತ್ರಿಸಲಾಗಿದೆ. ಹೆಣ್ಣಿನ ಮುಖ ಮತ್ತು ಹಸುವಿನ ದೇಹವಿರುವ ಕಾಮದೇನು ಕೇಳಿದ್ದನ್ನು ದಯಪಾಲಿಸುತ್ತದೆ. ಶಂಕರಾಚಾರ್ಯರು ತಪಸ್ಸಿನ ಭಂಗಿಯಲ್ಲಿರುವುದನ್ನು ನೋಡಬಹುದು. ಅಲ್ಲದೆ, ಶಣ್ಮುಖ, ಗಣೇಶ, ಪಂಚಮುಖಿ ಆಂಜನೇಯ ಮತ್ತಿತರ ಚಿತ್ರಗಳನ್ನು ಸಹ ಬಿಡಿಸಲಾಗಿದೆ.

ಗೋಡೆಗಳ ಮೇಲಿರುವ ಅಂಕಣಗಳಲ್ಲಿ ಪಂಚಮುಖಿ ಗಣೇಶ, ಎರಡು ತಲೆಯ ಗಣೇಶ, ನಾಟ್ಯ ಗಣಪತಿ, ಸಿಂಹದ ಮೇಲೆ ಕುಳಿತಿರುವ ನರಸಿಂಹ ಮುಂತಾದ ಚಿತ್ರಗಳು ಸಹ ಗಮನ ಸೆಳೆಯುತ್ತವೆ. ಐದು ತಲೆ, ೨೦ ಕೈ, ಮತ್ತು ಸಿಂಹದ ತಲೆಯಿರುವ ಮತ್ತು ಮುನಷ್ಯನ ದೇಹ ಹೊಂದಿರುವ ನರಸಿಂಹನ ನೋಡುಗರಿಗೆ ವಿಶೇಷ ಆಸಕ್ತಿ ಮೂಡಿಸುತ್ತದೆ. ಗರ್ಭಗೃಹದ ಮೇಲಿರುವ ಅಂಕಣಗಳಲ್ಲಿ ಕೃಷ್ಣನ ಬಾಲ್ಯದ ದಿನಗಳನ್ನು ಚಿತ್ರಿಸಲಾಗಿದೆ. ಇಲ್ಲಿ ಕೃಷ್ಣನನ್ನು ವಾತಾಪತ್ರಸಾಯಿಯಾಗಿ, ಅಂದರೆ ಬಾಲಕ ಕೃಷ್ನನು ಬಾಳೆ ಎಲೆಯ ಮೇಲೆ ನಿದ್ರಿಸುವ ಚಿತ್ರವಿದೆ. ಕೊಳಲು ಊದುತ್ತಿರುವ, ಗೋವುಗಳನ್ನು ಮೇಯಿಸುತ್ತಿರುವ, ಬೆಣ್ಣೆಯನ್ನು ಕದಿಯುತ್ತಿರುವ ಬಾಲ ಕೃಷ್ಣನ ಚಿತ್ರಗಳಿವೆ.

ವೈಕುಂಠ ಮಂಟಪದ ಮೇಲಿನ ಅಂಕಣಗಳಲ್ಲಿ ಉಗ್ರಸ್ವರೂಪಿ ನರಸಿಂಹನನ್ನು ಚಿತ್ರಿಸಲಾಗಿದೆ. ಹಿರಣ್ಯ ಕಶ್ಯಪುವಿನ ವಧೆ ಮಾಡುತ್ತಿರುವ ಭಂಗಿಯಲ್ಲಿರುವ ನರಸಿಂಹನಿಗೆ ಎಂಟು ಕೈಗಳಿವೆ. ಎರಡು ಕೈಗಳು ರಾಕ್ಷಸನ ರುಂಡ ಹಿಡಿದಿದ್ದರೆ, ಮತ್ತೆರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದೆ. ಮತ್ತೆರಡು ಕೈಗಳು ರಾಕ್ಷಸನ ತಲೆ ಮತ್ತು ಕಾಲುಗಳನ್ನು ಹಿಡಿದುಕೊಂಡಿದ್ದರೆ. ಇನ್ನೆರಡು ಕೈಗಳು ರಾಕ್ಷಸನ ಹೊಟ್ಟೆ ಸೀಳುತ್ತಿವೆ. ಹಿರಣ್ಯಕಶ್ಯಪುವಿನ ಮಗನಾದ ಪ್ರಹ್ಲಾದನು ಕೈಮುಗಿದು ಜಾಗಿದ್ದಾನೆ ಮತ್ತು ಈತನ ಪಕ್ಕದಲ್ಲಿ ಲಕ್ಷ್ಮಿಯಿದ್ದಾಳೆ.

ಈ ಎಲ್ಲಾ ಚಿತ್ರಗಳನ್ನು ಅತಿ ಸೂಕ್ಷ್ಮತೆಯಿಂದ ಮತ್ತು ಕಲಾನಿಪುಣತೆಯಿಂದ ಬಿಡಿಸಲಾಗಿದೆ. ಈ ಎಲ್ಲಾ ಚಿತ್ರಗಳಲ್ಲಿ ಕಲಾವಿದ ನೈಪುಣ್ಯತೆ ಮತ್ತು ಆತನಿಗೆ ತನ್ನ ಕಲೆಯ ಮೇಲಿದ್ದ ಆಸಕ್ತಿಯನ್ನು ತೋರಿಸುತ್ತದೆ. ಎಲ್ಲಾ ಚಿತ್ರಗಳು ಒಂದನ್ನೊಂದು ಹೋಲುತ್ತವೆ ಮತ್ತು ದೇವಾನುದೇವತೆಗಳನ್ನು ಸುಲಭವಾಗಿ ಗುರುತಿಸಲು ವಿಶೇಷವಾದ ಉಡುಪನ್ನು ಚಿತ್ರೀಕರಿಸಲಾಗಿದೆ. ಉದಾಹರಣೆಗೆ ಶಿವನ ಕೈಯಲ್ಲಿರುವ ಜಿಂಕೆ ಅಗತ್ಯಕ್ಕಿಂತಲು ದೊಡ್ಡದಿದೆ ಆದರೂ ಇದು ವಿಷ್ಣುವಿನ ಮತ್ತು ಶಿವನ ಮಧ್ಯೆಯಿರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಪ್ರತಿ ಚಿತ್ರದಲ್ಲಿ ದೇವರ ಚಿತ್ರವನ್ನು ಸ್ವಲ್ಪ ದೊಡ್ಡದಾಗಿ ಚಿತ್ತಿಸಲಾಗಿದೆ.

ಕಲ್ಲಿನ ಚಿತ್ರಗಳು :

ಈ ದೇವಾಲಯದಲ್ಲಿ ೧೫ ಕಲ್ಲಿನ ಶಿಲ್ಪಗಳಿವೆ. ಇದರಲ್ಲಿ ಎರಡು ಚಿತ್ರಗಳು ನಿಂತ ಭಂಗಿಯಲ್ಲಿರುವ ವಿಷ್ಣು, ಎರಡು ಗಣೇಶ, ಒಂದು ಲಕ್ಷ್ಮಿ, ಒಂದು ಅಂಬೆಗಾಲು ಕೃಷ್ಣ, ಲಕ್ಷ್ಮಿ ನರಸಿಂಹ, ಯೋಗ ನರಸಿಂಹ, ಶ್ರೀದೇವಿ ಮತ್ತು ಭೂದೇವಿಯ ಜೊತೆಗಿರುವ ಅನಂತಶಯನ, ವಾತಾಪತ್ರಸಾಯಿ ಕೃಷ್ಣ, ಮುಂತಾದ ಚಿತ್ರಗಳಿವೆ. ಈ ಚಿತ್ರಗಳು ಗರ್ಭಗೃಹದ ಪಕ್ಕದಲ್ಲಿರುವ ಚಿಕ್ಕ ಅಂಕಣಗಳಲ್ಲಿವೆ. ಅನಂತಶಯನ ರೂಪದಲ್ಲಿರುವ ಕೃಷ್ಣನ ಚಿತ್ರ ವಿಶೇಷವಾಗಿದೆ. ಹಾಗೆಯೇ ಕಾಳಿಂಗ ಸರ್ಪದ ಮೇಲೆ ಶಯನಾವಸ್ಥೆಯಲ್ಲಿರುವ ವಿಷ್ಣುವಿನ ಚಿತ್ರವೂ ಇದೆ. ಈ ಚಿತ್ರದಲ್ಲಿ ವಿಷ್ಣುವಿಗೆ ನಾಲ್ಕು ಕೈಗಳಿವೆ. ಈತನ ಬಲಗೈ ತಲೆಯ ಕೆಳಗಿದ್ದರೆ ಎಡಗೈ ಈತನ ತೊಡೆಯ ಮೇಲಿದೆ. ಇನ್ನೆರಡು ಕೈಗಳು ಚಕ್ರ ಮತ್ತು ಶಂಖವನ್ನು ಹಿಡಿದುಕೊಂಡಿವೆ. ಶ್ರೀದೇವಿ ಮತ್ತು ಭೂದೇವಿಯರು ಈತನ ಬಳಿ ಕುಳಿತುಕೊಂಡಿದ್ದಾರೆ. ಶ್ರೀದೇವಿಯ ಕೈಯಲ್ಲಿ ಕಮಲವಿದೆ.

ವಾತಾಪತ್ರಸಾಯಿ ರೂಸದಲ್ಲಿರುವ ಕೃಷ್ಣನ ಚಿತ್ರವೂ ಸಹ ನೋಡುಗರ ಗಮನ ಸೆಳೆಯುತ್ತದೆ. ಬಾಲಕ ಕೃಷ್ಣನು ಬಾಳೆ ಎಲೆಯ ಮೇಲೆ ಮಲಗಿದ್ದು, ನೀರಿನ ಮೇಲೆ ತೇಲುತ್ತಿದ್ದಾನೆ. ಬಾಳೆ ಎಲೆಯ ಸುತ್ತ ಮೀನುಗಳಿವೆ. ಆದರೆ ಈ ಚಿತ್ರದಲ್ಲಿರುವ ಬಾಲಕಕೃಷ್ಣ ಮಗುವನ್ನು ಹೋಲುವುದಿಲ್ಲ. ಯೋಗ ನರಸಿಂಹನ ಚಿತ್ರವನ್ನು ಸಹ ವಿಶಿಷ್ಟವಾಗಿ ಚಿತ್ರೀಕರಿಸಲಾಗಿದೆ. ನಾಲ್ಕು ಕೈಗಳಿರುವ ನರಸಿಂಹ ಧ್ಯಾನದಲ್ಲಿ ಕುಳಿತಿದ್ದಾನೆ. ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವಿದೆ. ಇನ್ನು ಎರಡು ಕೈಗಳು ಮೊಣಕಾಲಿನ ಮೇಲೆ ವಿಶ್ರಮಿಸುತ್ತಿವೆ. ಇದಲ್ಲದೆ, ಆಂಜನೇಯ, ನೃತ್ಯ ಮಾಡುತ್ತಿರುವ ಕೃಷ್ಣ, ಮತ್ತು ಅಯ್ಯಪ್ಪನ ಚಿತ್ರಗಳು ಸಹ ಮನಸೂರೆಗೊಳ್ಳುತ್ತವೆ. ಈ ದೇವಾಲಯದಲ್ಲಿ ಹಲಗೆಯ ಚಿತ್ರಗಳೂ ಇವೆ. ಗರುಡ, ಆಂಜನೇಯ ಮತ್ತು ಕುದುರೆ ಚಿತ್ರಗಳು ದೇವಾಲಯದ ಸೌಂದರ್ಯವನ್ನು ಹೆಚ್ಚುಗೊಳಿಸಿವೆ.

ಶ್ರೀತೇರುಮಲ್ಲೇಶ್ವರ ದೇವಾಲಯ, ಹಿರಿಯೂರು :

ಚಿತ್ರದುರ್ಗ ಜಿಲ್ಲೆಯು ಒಂದು ಸಾಂಸ್ಕೃತಿಕ ಜಿಲ್ಲೆಯಾಗಿದ್ದು, ಇದು ತನ್ನದೇ ಆದ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ಈ ದುರ್ಗಕ್ಕೆ ದೇವಿಪುರಾಣದ ಶುಂಭ-ನಿಶುಂಭರಿಂದ ಹಿಡಿದು

ಮದಕರಿ ನಾಯಕನವರೆಗೂ ತನ್ನದೆ ಆದ ಸಾಂಸ್ಕೃತಿಕ ಮೆರಗನ್ನು ಈ ಜಿಲ್ಲೆಯು ತಂದುಕೊಂಡಿದೆ. ಇಲ್ಲಿ ಆದಿಮಾನವರು ಬದುಕಿದ ಪುರಾತನ ಕುರುಹುಗಳು ಹಾಗೂ ಅವರು ರಚಿಸಿದ ಬಯಲು ಬಂಡೆಯ ಕೊರೆದ ಚಿತ್ರಗಳು, ಗುಹೆಗಳಲ್ಲಿನ ಬಿಳಿವರ್ಣ ಹಾಗೂ ಕೆಂಪುವರ್ಣದ ರೇಖಾಚಿತ್ರಗಳನ್ನು ಕಾಣಬಹುದು. ಇದೇ ರೀತಿಯಾಗಿ ಮುಂದುವರಿದು ರಾಮಾಯಣ, ಮಹಾಭಾರತದ ಕುರುಹುಗಳನ್ನು ಚಿತ್ರದುರ್ಗದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಣಬಹುದು. ಹಿಡಿಂಬಾ ಸುರನು ಚಿತ್ರದುರ್ಗದಲ್ಲಿ ವಾಸವಾಗಿದ್ದನೆಂದು, ದ್ವಾಪರಯುಗದಲ್ಲಿ ಈ ಸ್ಥಳಕ್ಕೆ ಹಿಡಿಂಬಾಪುರ ಕ್ಷೇತ್ರವೆಂದೂ ಹೆಸರಿತ್ತು. ಪಾಂಡವರು ಈ ಹಿಡಿಂಬಾವನಕ್ಕೆ ಬಂದಿದ್ದರೆಂದು ಆ ಸಂದರ್ಭದಲ್ಲಿ ಹಿಡಿಂಬಾಶುರನು ಭೀಮಸೇನನಿಂದ ಕೊಲ್ಲಲ್ಪಟ್ಟು ಆತನ ತಂಗಿಯಾದ ಹಿಡಿಂಬಿಯನ್ನು ವೇದವ್ಯಾಸರ ಅಪ್ಪಣೆಯ ಮೇರೆಗೆ ಮದುವೆಯಾದರೆಂದು ತಿಳಿದುಬಂದಿದೆ.

ಇದೇ ರೀತಿಯಲ್ಲಿ ಹಲವು ರಾಜ ಮನೆತನಗಳು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ. ಅವರುಗಳೆಂದರೆ, ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಸೇವುಣರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಗಾರರು, ಮೊಗಲರು, ಮೈಸೂರು ಒಡೆಯರು ಇಲ್ಲಿ ಆಳ್ವಿಕೆ ನಡೆಸಿದರೆಂಬ ಐತಿಹಾಸಿಕ ಕುರುಹುಗಳು ದೊರೆತಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ದೊರೆ ಮುಮ್ಮಡಿ ಬಲ್ಲಾಳನ ಅವಧಿಯ ಸುಮಾರು ೧೦ ಶಾಸನಗಳು ಇಲ್ಲಿ ಸಿಕ್ಕಿವೆ. ಇಂದಿನ ರಾಜರಂತೆ ಇವನೂ ಸಹ ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ಇನ್ನೂ ಕೆಲವು ತಾಲೂಕುಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿದನೆಂದು ಇತಿಹಾಸ ತಿಳಿಸುತ್ತದೆ. ಆದುದರಿಂದ ಹಿರಿಯೂರು ಕ್ರಿ.ಶ. ೧೨೯೧ ರಿಂದ ೧೩೪೨ರವರೆಗೆ ಹೊಯ್ಸಳ ಸಿಂಹಾಸನಾಧೀಶ್ವರನಾದ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿತ್ತು ಎಂದು ತಿಳಿಯಬಹುದು.

ಹಿರಿಯೂರಿಗೆ ಮೊದಲಿಗೆ ಘನಪುರಿ ಎಂಬ ಹೆಸರಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಹಿರಿಯೂರು ತನ್ನದೇ ಆದ ಸ್ಥಾನವನ್ನು ಕಾಯ್ದಿರಿಸಿಕೊಂಡಿದೆ. ಹಿರಿಯೂರನ್ನು ಸ್ಥಾಪಿಸಿದ ಬಗೆಗೆ ಆಧಾರಗಳು ದೊರೆಯುತ್ತವೆ. ೧೬ನೆಯ ಶತಮಾನದ ಪ್ರಾರಂಭದಲ್ಲಿ ಮಾಯಸಂದ್ರದ ದೊರೆ ಕೇಶ್ವನಾಯಕನು ಹಿರಿಯೂರನ್ನು ಸ್ಥಾಪಿಸಿದನು. ಹಿರಿಯೂರು ಸ್ಥಾಪನೆಯ ಬಗ್ಗೆ ಒಂದು ಜಾನಪದ ಕಥೆಯನ್ನು ಹೇಳುತ್ತಾರೆ. ಮೊಲವು ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಹೋದ ಸ್ಥಳವೆಂದು ಹೇಳುತ್ತಾರೆ. ೧೨ನೆಯ ಶತಮಾನದಲ್ಲಿ ಬರುವ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಶ್ರೀಶೈಲಕ್ಕೆ ಹೋಗಿ ಅವಳು ಚನ್ನಮಲ್ಲಿಕಾರ್ಜುನನನ್ನು ನೋಡಬೇಕೆಂಬ ಆಸೆ ಅವಳಿಗಿತ್ತು. ಆದರೆ ಆ ಶಿವನು ಅವಳಿಗೆ ಅವಳ ಮನೆಯಲ್ಲಿ ಪ್ರತ್ಯೇಕ್ಷವಾಗಿ ಬಳಿಕ ಐಕ್ಯವಾದನು ಅದೇ ಇಂದಿನ ತೇರುಮಲ್ಲೇಶ್ವರನಾಗಿ ಜನರ ಕಷ್ಟಗಳನ್ನು ನೀಗಿಸುವ ದೇವನಾಗಿದ್ದಾನೆ. ಈ ದೇವಾಲಯದ ಗೋಪುರವನ್ನು ಕ್ರಿ.ಶ.೧೪೬೬ರಲ್ಲಿ ಕೆಂಚಪ್ಪನಾಯಕನು ಕಟ್ಟಿಸಿದನು ಎಂಬ ಇತಿಹಾಸವಿದೆ. ಈ ಗೋಪುರ ದ್ರಾವಿಡ ಶೈಲಿಯಲ್ಲಿದೆ. ಇದು ೪೫ ಅಡಿ ಎತ್ತರವಿದೆ.

ಹಿರಿಯೂರಿನ ಸುತ್ತಲೂ ಪರಿಸರದಲ್ಲಿ ಉತ್ತರಕ್ಕೆ ಚಳ್ಳಕೆರೆ ಮತ್ತು ಹೊಸದುರ್ಗ ತಾಲೂಕುಗಳು ದಕ್ಷಿಣದಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ಪೂರ್ವದಲ್ಲಿ ಶಿರಾ ತಾಲೂಕುಗಳು ಈಶಾನ್ಯದಲ್ಲಿ ಆಂಧ್ರಪ್ರದೇಶವು ಸುತ್ತುವರಿದಿದೆ. ಜಾವಗೊಂಡನಹಳ್ಳಿ, ಹಿರಿಯೂರು, ಐಮಂಗಲ ಮತ್ತು ಧರ್ಮಪುರ. ಹೋಬಳಿಗಳು ಒಟ್ಟು ೧೫೭ ಗ್ರಾಮಗಳಿರುವ ಈ ತಾಲೂಕಿನ ವಿಸ್ತೀರ್ಣ ೧೭೦೩.೯ ಚ.ಕಿ.ಮೀ. ಜನಸಂಖ್ಯೆ ೨.೬೪೧೭೯ ಇದರಲ್ಲಿ ೨.೧೫೯೧೩ ಮಂದಿ ಗ್ರಾಮಸ್ಥರು. ೪೮೮೦೬ ಮಂದಿ ಪಟ್ಟಣ ಪ್ರದೇಶದವರು ಇದ್ದಾರೆ.

ದೇವಾಲಯದ ಸಾಂಸ್ಕೃತಿಕ ಪರಿಸರ :

ಕ್ರಿ.ಶ. ೧೪೪೬ರಲ್ಲಿ ಶ್ರೀ ಕೆಂಚಪ್ಪ ನಾಯಕರಿಂದ ಈ ದೇವಾಲಯದ ಗೋಪುರ ನಿರ್ಮಾಣವಾಗಿದೆ. ಈ ದೇವಸ್ಥಾನ ದಕ್ಷಿಣಮುಖವಾಗಿ ಶ್ರೀಸ್ವಾಮಿಯು ಇರುವುದರಿಂದ ಅಲ್ಲದೆ ಗರ್ಭಗುಡಿ ದಕ್ಷಿಣಾಭಿಮುಖವಾಗಿ ಇರುವುದರಿಂದ ದಕ್ಷಿಣಕಾಶಿ ಎಂದು ಹೆಸರು ಬಂದಿದೆ. ಈ ದೇವಸ್ಥಾನ ಮಲ್ಲೇಶ್ವರ ದೇವಸ್ಥಾನವಾಗಿತ್ತು. ನಂತರ ಯಗಚಿಯಲ್ಲಿ ಯತೇಚ್ಚವಾಗಿ ಮಳೆಯಾದ ಕಾರಣ ಯಗಚಿ ನದಿಯ ಮೂಲಕ ಮೂರು ಕಲ್ಲಿನ ರಥಗಳು ಕೊಚ್ಚಿಕೊಂಡು ವೇದಾವತಿ ನದಿಗೆ ಬಂದುನಿಂತವು. ಈ ನೀರಿನಲ್ಲಿ ತೇಲಿಬಂದ ಮೂರು ರಥಗಳನ್ನು ನಗರದ ಮುಖಂಡರು ದೇವಸ್ಥಾನಕ್ಕೆ ತೆಗೆದುಕೊಂಡು ಬಂದು ಶ್ರೀಮಲ್ಲೇಶ್ವರ ಜಾತ್ರೆಯನ್ನು ಮಾಡಲಾಯಿತು ಅಂದಿನಿಂದ ಈ ರಥೋತ್ಸವಕ್ಕೆ ಪ್ರತೀತಿಯಾಗಿ ಶ್ರೀತೇರುಮಲ್ಲೇಶ್ವರ ಎಂದು ನಾಮಕರಣ ಮಾಡಿದರು.

ಹಿಂದೆ ಈ ನಗರಕ್ಕೆ ಇದ್ದ ಘನಪುರಿ ಎಂಬ ಹೆಸರು ಹೋಗಿ ಈಗ ಹಿರಿಯೂರು ಎಂದು ಬದಲಾಗಿದೆ. ಈ ದೇವಸ್ಥಾನದಲ್ಲಿ ರಾಜಗೋಪುರವು ೭೦ ಅಡಿ ಶಿಖರವಾಗಿದ್ದು, ಇದರ ವಾಸ್ತು ವಿನ್ಯಾಸವು ದ್ರಾವಿಡ ಶೈಲಿಯಲ್ಲಿದ್ದು, ಈ ಗೋಪುರವು ಹಂಪಿ ವಿರೂಪಾಕ್ಷನ ಗೋಪುರವನ್ನು ಹೋಲುತ್ತದೆ. ಹಾಗೂ ಇಲ್ಲಿನ ದೀಪಸ್ತಂಬವು ೭೦ಅಡಿ ಎತ್ತರವಿದೆ. ಗೋಪುರದ ಮುಂಭಾಗದಲ್ಲಿ ಉಯ್ಯಾಲೆ ಕಂಬವಿದ್ದು, ಇದು ಸುಮಾರು ೪೫ ಅಡಿ ಎತ್ತರವಿದೆ. ಈ ಕಂಬಗಳ ಮೇಲೆ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ವಿಶೇಷವೆಂದರೆ ಈ ದೇವಾಲಯದ ಎದುರಿನಲ್ಲಿ ೭೦ ಅಡಿಯ ದೀಪಸ್ತಂಬವಿದ್ದು, ಈ ಕಂಬದ ಸುತ್ತಲು ಸಣ್ಣ ದೀಪವಿಡಲು ವಿನ್ಯಾಸಾಕೃತ ಹೆಜ್ಜೆಯನ್ನು ಮಾಡಲಾಗಿದೆ. ಈ ದೀಪಸ್ತಂಭದ ಮೇಲೆ ಪ್ರತಿ ದಿಕ್ಕಿಗೂ ಎರಡರಂತೆ ಎಂಟು ಲೋಹದ ಹಣತೆಯನ್ನು ಮಾಡಲಾಗಿದೆ. ಪ್ರತಿಯೊಂದು ಹಣತೆಯು ತಲಾ ಹತ್ತು ಸೇರು ಎಣ್ಣೆಯನ್ನು ಹಿಡಿಯುವಷ್ಟು ಅಗಲವಿದೆ. ವರ್ಷಕ್ಕೊಮ್ಮೆ ಈ ದೀಪಗಳನ್ನು ಹಚ್ಚಲಾಗುವುದು.

ಈ ದೇವಾಲಯದ ದೀಪಸ್ತಂಬವನ್ನು ಆಂಧ್ರ ಪ್ರದೇಶದಿಂದ ತರುವಾಗ ಗರುಡ ವಿಗ್ರಹವಿರುವ ಮುಂದಿನ ತುದಿಯು ಹಿರಿಯೂರು ತಾಲೂಕು ಅಂಬಲಗೇರಿಯ ಶ್ರೀ ರಂಗನಾಥಸ್ವಾಮಿ ದೇವಾಲಯದ ಹತ್ತಿರ ಮುರಿದು ಬಿದ್ದುದರಿಂದ, ಆ ಗರುಡ ವಿಗ್ರಹವಿರುವ ದೀಪದ ಕಲ್ಲಿನ ಕಂಬ ಅಂಬಲಗೇರಿಯ ರಂಗನಾಥಸ್ವಾಮಿಯ ಮುಂದೆಯಿದೆ. ಈ ಕಂಬವು ಇತ್ತೀಚಿನ ದಿನಗಳಲ್ಲಿ

ಜನರ ಭಾವನೆಯಲ್ಲಿ ಮಳೆ ಬರುತ್ತದೆಯೋ ಇಲ್ಲವೋ ಎನ್ನುವ ಕುರುಹನ್ನು ನೀಡುವ ದೈವಾಂಶವಾಗಿದೆ. ಈ ಗರುಡನ ಮುಖವು ಮುಂದಕ್ಕೆ ಬಾಗಿದಲ್ಲಿ ಮಳೆ ಬೇಗ ಬರುತ್ತದೆ. ಈ ಗರುಡಗಂಬವು ಹಿಂದಕ್ಕೆ ಬಾಗಿದಲ್ಲಿ ಬರಗಾಲವು ಬರಬಹುದೆನ್ನುವ ಪ್ರತೀತಿ ಇಲ್ಲಿ ವಾಡಿಕೆಯಾಗಿದೆ. ವಿಶೇಷವೆಂದರೆ ಅಂಬಲಗೇರಿಯ ರಂಗನಾಥಸ್ವಾಮಿಯ ವಾಸ್ತು ವಿನ್ಯಾಸ ಹಾಗೂ ಶ್ರೀತೇರುಮಲ್ಲೇಶ್ವರ ದೇವಾಲಯದ ವಸ್ತುವಿನ್ಯಾಸ ಒಂದೆ ತೆರನಾಗಿದೆ.

ಶ್ರೀತೇರುಮಲ್ಲೇಶ್ವರ ಸ್ವಾಮಿಯ ಜಾತ್ರೆಯನ್ನು ಪ್ರಾರಂಭಿಸುವ ಮುನ್ನ ಮೇಘನಕ್ಷತ್ರದ ಸಂದರ್ಭದಲ್ಲಿ ನಗರದ ಕೈವಾಡಸ್ಥರ ಊರಿನ ಪ್ರಮುಖ ಗಣ್ಯರು ಹಾಗೂ ದೇವಸ್ಥಾನದ ಸಮಿತಿಯವರು ಮತ್ತು ಭಕ್ತರು ವೇದಾವತಿ ನದಿ ದಂಡೆಯ ಮೇಲೆ ಹೋಗಿ ಶ್ರೀ ರಂಗನಾಥಸ್ವಾಮಿ ಇರುವ ಎದುರುದಿಕ್ಕಿಗೆ ನಿಂತು "ಶ್ರೀ ರಂಗನಾಥಸ್ವಾಮಿಯೇ ನಿಮ್ಮ ತಂದೆ-ತಾಯಿಯವರ ರಥೋತ್ಸವ ನಡೆಯುತ್ತದೆ. ನೀನು ಬಂದು ಈ ರಥೋತ್ಸವವನ್ನು ಸುಗಮವಾಗಿ ನಡೆಸಿಕೊಂಡು" ಎಂದು ಪ್ರಾರ್ಥಿಸುತ್ತಾರೆ. ಆ ಸಂದರ್ಭದಲ್ಲಿ ಅಂಬಲಗೇರಿಯಲ್ಲಿರುವ ಶ್ರೀರಂಗನಾಥಸ್ವಾಮಿ ದೇವಸ್ಥಾನದಲ್ಲಿರುವ ಘಂಟೆಗಳು ಬಾರಿಸುತ್ತವೆ ಎಂಬ ಪ್ರತೀತಿ ಮೇಲೆ ಜಾತ್ರೆಯು ಸುಗಮವಾಗಿ ನಡೆಯುತ್ತದೆ.

ಈ ದೇವಾಲಯಕ್ಕೆ ಹನ್ನೆರಡು ಜಾತಿಯ ಕೈವಾಡ ಭಕ್ತರಿದ್ದಾರೆ. ಅವರುಗಳೆಂದರೆ

೧. ಪಂಚಪೀಠ ಜಂಗಮರು

೨. ನಡೆನುಡಿಹಾಸುವ ಅಗಸರು

೩. ತಳಿರು ತೋರಣಕಟ್ಟಿ ಚಪ್ಪರ ಹಾಕುವ ದಲಿತ, ಹಿಂದುಳಿದವರು

೪. ಪಂಜಿನ ಸೇವೆ ಮಾಡುವ ಮಡಿವಾಳರು

೫. ದೇವಸ್ಥಾನಕ್ಕೆ ಉತ್ಸವಕ್ಕೆ ದೇವರನ್ನು ಶೃಂಗಾರ ಮಾಡುವ ತಳವಾರರು

೬. ಕಸಗುಡಿಸುವ ಕೊರಚರು

೭. ಸ್ವಾಮಿಯನ್ನು ಗಂಗೆಯ ಬಳಿ ವಿಹಾರಕ್ಕೆ ಕರೆದೊಯ್ಯುವವರು ಗಂಗೆಮತಸ್ಥರು

೮. ಓಕಳಿಗೆ ಸೇವೆಕುಂಬ ಕೊಡುವವರು ಕುಂಬಾರರು

೯. ದೇವರನ್ನು ಹೊರುವವರು ಬೆಸ್ತರು

೧೦. ಓಕಳಿ ಆಡುವವರು ಕುರುಬ ಜನಾಂಗದವರು ಹಾಗೂ ಪೇಟೆ ದಾಸಯ್ಯರು

೧೧. ಅಭಿಷೇಕ ಇತ್ಯಾದಿಗಳನ್ನು ಮಾಡುವವರು ಜಂಗಮರು, ಬ್ರಾಹ್ಮಣರು

೧೨. ದೇವಸ್ಥಾನದ ಅರ್ಚಕರು ವಿಶ್ವಕರ್ಮ ಸಮಾಜದವರು.

ಶಿವರಾತ್ರಿಯ ಸಮಯದಲ್ಲಿ ಶ್ರೀ ತೇರು ಮಲ್ಲೇಶ್ವರಸ್ವಾಮಿಯು ವಿಶೇಷವಾಗಿ ಎಳೆನೀರು ಅಭಿಷೇಕ ಮಾಡುವಂತಹ ಭಕ್ತರು ಮುಸ್ಲಿಂ ಬಾಂಧವರು. ಈ ದೇವಸ್ಥಾನದಲ್ಲಿ ಶಿವಧನಸ್ಸು

೨೫ ಅಡಿ ಕಬ್ಬಿಣದ ಮಿಶ್ರಣದ ಎರಕದ ಶಿವಧನಸ್ಸು ಇದೆ. ಈ ಶಿವಧನಸ್ಸು ರಥೋತ್ಸವಕ್ಕಿಂತ ಮುಂಚೆ ಊರಿನ ಭಕ್ತರು ಶಿವಧನಸ್ಸನ್ನು ಚಿಕ್ಕಪೇಟೆಯ ಮೂಲಕ ದೇವಸ್ಥಾನಕ್ಕೆ ತರುತ್ತಾರೆ. ಈ ಶಿವಧನಸ್ಸು ರಸ್ತೆಯ ಮೂಲಕ ಬರುವಾಗ ಯಾರ ಮನೆಯ ಮುಂದೆ ಜಗ್ಗುತ್ತದೆಯೋ ಅವರ ಮನೆಯಲ್ಲಿ ಸಾವಿನ ಅನಾಹುತ ಖಚಿತವೆಂದು ವಾಡಿಕೆ. ಈ ದೇವಸ್ಥಾನದ ಮುಂಭಾಗದಲ್ಲಿ ಓಕಳಿಬಾವಿಯು ಇರುತ್ತದೆ. ಈ ಬಾವಿಯನ್ನು ಓಕಳಿಯ ಹಬ್ಬದ ದಿನ ತೆಗೆದು ಸ್ವಚ್ಛಮಾಡಿ ಎಲ್ಲಾ ಮನೆಯ ಭಕ್ತರು ಕೊಡದಲ್ಲಿ ನೀರು ತುಂಬಿ ಓಕಳಿ ಮಾಡಿ ಸ್ವಾಮಿ ಮುಂದೆ ಆಡುವುದು. ವಾಡಿಕೆ ವಿಶೇಷವೆಂದರೆ ಓಕಳಿಗಿಂತ ಮುಂಚೆ ಶ್ರೀತೇರುಮಲ್ಲೇಶ್ವರ ಸ್ವಾಮಿಯನ್ನು ಚಿಟುಗು ಮಲ್ಲೇಶ್ವರ ದೇವಸ್ಥಾನಕ್ಕೆ ಗಂಗೆಮತಸ್ಥರು ಕೊಂಡೊಯ್ಯುತ್ತಾರೆ. ಚಿಟುಗು ಮಲ್ಲೇಶ್ವರಸ್ವಾಮಿಯ ದೇವಸ್ಥಾನದಲ್ಲಿ ಈಶ್ವರನಿಗೆ ಪ್ರಿಯವಾದ ಹೆಂಡತಿ ಗಂಗೆ ಅದೇ ಸಮಯದಲ್ಲಿದ್ದು ಈಶ್ವರನನ್ನು ಬರಮಾಡಿಕೊಂಡು ಮೂರು, ನಾಲ್ಕು ಘಂಟೆಗಳ ಕಾಲ ಸರಸ ಸಲ್ಲಾಪದಲ್ಲಿ ಇಬ್ಬರು ಪಾಲ್ಗೊಳ್ಳುತ್ತಾರೆ ಎನ್ನುವ ಸನ್ನಿವೇಶವನ್ನು ತಯಾರಿಸುತ್ತಾರೆ. ನಂತರದಲ್ಲಿ ಬೆಂಡು, ಬೆತ್ತಾಸು, ಸಿಹಿಪದಾರ್ಥಗಳು ಹಾಗೂ ಮಂಡಕ್ಕಿ ಇತರೆ ಪದಾರ್ಥಗಳನ್ನು ಹಂಚಿ ಮರಳಿ ದೇವಸ್ಥಾನಕ್ಕೆ ತರುವ ವಾಡಿಕೆ ನಂತರ ದೇವಸ್ಥಾನದ ಮುಂಭಾಗಕ್ಕೆ ಶ್ರೀಸ್ವಾಮಿಯು ಮರಳಿ ಬಂದಾಗ ಶಿಖರದ ದ್ವಾರಬಾಗಿಲನ್ನು ಮುಚ್ಚಿ ಹೊರಗಡೆ ಮಂಟಪದಲ್ಲಿ ಪಾರ್ವತಿಯನ್ನು ಪಲ್ಲಕ್ಕಿಯಲ್ಲಿ ಕುಡಿಸಿ ಬಾಗಿಲನ್ನು ತೆಗೆಯುವುದಿಲ್ಲ. ನೀನು ಜಾರಿನಿಯ ಮನೆಗೆ ಹೋಗಿದ್ದೀಯಾ ನಿನ್ನನ್ನು ಬಿಟ್ಟುಕೊಳ್ಳುವುದಿಲ್ಲಾ ಎಂದು ಬಹಿಷ್ಕಾರ ಹಾಕುತ್ತಾಳೆ. ಆ ಸಮಯದಲ್ಲಿ ಒಂದು ಕಡೆ ಈಶ್ವರ ಕುದುರೆಯ ಮೇಲೆ ಕುಳಿತಿದ್ದರೆ, ಇನ್ನೊಂದು ಕಡೆ ಪಾರ್ವತಿ ಪಲ್ಲಕ್ಕಿಯ ಮೇಲೆ ಕುಳಿತಿರುತ್ತಾಳೆ. ಎರಡು ಕಡೆಯ ಭಕ್ತರು ಸೇರು ಇಬ್ಬರಿಗೂ ರಾಜಿ ಮಾಡುವ ಚರಿತ್ರೆಯನ್ನು ಓದಿ ಸಮಾಧಾನ ಮಾಡಿಸುತ್ತಾರೆ. ನಂತರ ದೇವಾಲಯದ ಮುಂಭಾಗದಲ್ಲಿರುವ ಉಯ್ಯಾಲೆ ಕಂಬದ ತೊಟ್ಟಿಲನ್ನು ಶೃಂಗಾರಮಾಡಿ ಕೂರಿಸಿ ಜೋಗುಳ ಹಾಡುತ್ತಾ ತೊಟ್ಟಿಲನ್ನು ತೂಗುತ್ತಾರೆ. ಹಾಗೂ ಮಕ್ಕಳಿಲ್ಲದವರು ಈ ತೊಟ್ಟಿಲನ್ನು ತೂಗಿದರೆ ಮಕ್ಕಳಾಗುತ್ತವೆ ಎಂಬ ವಾಡಿಕೆಯು ಸಹ ಇದೆ.

ದೇವಸ್ಥಾನದ ವಾಸ್ತುವಿನ್ಯಾಸ : ಶ್ರೀ ತೇರುಮಲ್ಲೇಶ್ವರ ದೇವಾಲಯವು ಒಟ್ಟಾರೆ ಅರ್ಧ ಎಕರೆಯಷ್ಟು ವಿಸ್ತೀರ್ಣವನ್ನು ಹೊಂದಿದೆ. ಪ್ರಾಂಗಣವನ್ನು ಹೊಂದಿದ ಈ ದೇವಾಲಯವು ದಕ್ಷಿಣಕಾಶಿ ಎಂದು ಕರೆಯುವರು. ಈ ದೇವಾಲಯವು ಗರ್ಭಗುಡಿ, ಮುಖಮಂಟಪ ದಕ್ಷಿಣಾಭಿಮುಖವಾಗಿದ್ದು, ರಾಯಗೋಪುರವು ಪೂರ್ವಕ್ಕೆ ಮುಖಮಾಡಿದೆ. ಈ ಗೋಪುರಕ್ಕೆ ಒಟ್ಟು ಐದು ಬಾಗಿಲುಗಳಿವೆ. ಗೋಪುರದ ತುದಿಗೆ ಹಿತ್ತಾಳೆಯ ಕಳಸವಿದೆ. ಗೋಪುರದ ಹೊರಭಾಗದಲ್ಲಿ ಉಯ್ಯಾಲೆಯ ಕಂಬವಿದ್ದು, ಮುಂಭಾಗದಲ್ಲಿ ಅರಳಿಕಟ್ಟೆ ಇದೆ. ಇದರಲ್ಲಿ ನಾವು ವಿವಿಧ ಬಗೆಯ ನಾಗರ ಕಲ್ಲುಗಳ ಶಿಲ್ಪಗಳನ್ನು ಕಾಣಬಹುದು.

ದೇವಾಲಯದ ಗರ್ಭಗುಡಿಯು ದಕ್ಷಿಣಕ್ಕೆ ಮುಖಮಾಡಿದ್ದು, ಸ್ವಲ್ಪ ಅಂತರದಲ್ಲಿ ಕಟ್ಟಲಾಗಿದೆ. ವಿಶೇಷವಾಗಿ ೧. ಗರ್ಭಗುಡಿ ೨. ಸಂಕಲ್ಪ ಮಂಟಪ ೩. ಸಭಾಮಂಟಪ ೪. ನೃತ್ಯಮಂಟಪ ೫. ನಂದಿಮಂಟಪ ಈ ಮೇಲಿನವುಗಳು ಸುಂದರವಾಗಿ ರಚನೆಯಾಗಿವೆ.

ಗರ್ಭಗುಡಿ : ಗರ್ಭಗುಡಿಯಲ್ಲಿ ಶ್ರೀಸ್ವಾಮಿಯ ಉದ್ಭವಲಿಂಗವಿದ್ದು, ಅದಕ್ಕೆ ಪಂಚಲೋಹದ ಮುಖವಾಡವಿದೆ. ಗರ್ಭಗುಡಿಗೆ ಪಂಚಮಸಾಲಿ ಜಂಗಮರು, ಬ್ರಾಹ್ಮಣರು, ವಿಶ್ವಕರ್ಮ ಮತಸ್ಥರಿಗೆ ಮಾತ್ರ ಪ್ರವೇಶವಿದೆ. ಸ್ವಾಮಿಗೆ ಯಾವಾಗಲು ದೊಡ್ಡದಾದ ಕಳಸದಿಂದ ಹನಿಹನಿಯಾಗಿ ಅಭಿಷೇಕವನ್ನು ನಡೆಸುತ್ತಲೇ ಇರುತ್ತಾರೆ. ನಂದಾದೀಪ ಸದಾಕಾಲ ಉರಿಯುತ್ತದೆ.

ಸಂಕಲ್ಪ ಮಂಟಪ : ಸಂಕಲ್ಪ ಮಂಟಪದಲ್ಲಿ ಈ ದೇವಾಲಯದ ಉಪದೇವತೆಗಳಾದ ಚಂದ್ರಮೌಳೇಶ್ವರ ಹಾಗೂ ಉಮಾಮಹೇಶ್ವರ ಸ್ವಾಮಿಯರ ಎರಡು ಗರ್ಭಗುಡಿಗಳಿವೆ. ಹಾಗೂ ಮಧ್ಯದಲ್ಲಿ ನಂದಿಯೊಂದು ಕುಳಿತಿದೆ. ಸುಮಾರು ೮ಅಡಿಯ ಛಾವಣಿಯನ್ನು ಇದು ಹೊಂದಿದೆ. ಈ ಸಂಕಲ್ಪ ಮಂಟಪದಲ್ಲಿ ನಿಂತು ಭಕ್ತಾದಿಗಳು ತಮ್ಮ ಇಷ್ಟ ಕಷ್ಟಗಳನ್ನು ದೇವರಲ್ಲಿ ಸಂಕಲ್ಪ ಮಾಡಿಕೊಳ್ಳಬಹುದು.

ಸಭಾ ಮಂಟಪ : ಸಭಾಮಂಟಪವು ನಾಲ್ಕು ದ್ವಾರವನ್ನು ಹೊಂದಿದ್ದು, ಒಳಭಾಗದಲ್ಲಿ ನಾಲ್ಕು ಕಂಬಗಳಿವೆ. ಮಧ್ಯದ ಮೇಲ್ಛಾವಣಿಯಲ್ಲಿ ಕಲ್ಲುಗಳನ್ನು ಅಷ್ಟಾಕಾರದಲ್ಲಿ ಜೋಡಿಸಲಾಗಿದೆ. ಕಂಬಗಳ ಮೇಲೆ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಇದು ಸಹ ೮ಅಡಿಯ ಛಾವಣಿಯಾಗಿದೆ. ಇಲ್ಲಿ ಭಕ್ತರು ಸಂಕಲ್ಪಗಳನ್ನು ಸಲ್ಲಿಸಿದ ನಂತರ ಬಂದು ಕೂರುವ ಹಾಗೂ ಉತ್ಸವದ ನಂತರ ಉಪದೇವತೆಯನ್ನು ಕೂರಿಸುವ ಸ್ಥಳವಾಗಿದೆ.

ನೃತ್ಯಮಂಟಪ : ಈ ಮಂಟಪದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಭಿತ್ತಿಚಿತ್ರಗಳಿವೆ. ಈ ಮಂಟಪವು ಸುಮಾರು ೧೨ ಅಡಿ ಎತ್ತರವಿದ್ದು, ದಶಭುಜಗಳಲ್ಲಿ ಕಟ್ಟಲಾಗಿದೆ. ಒಟ್ಟು ೨೪ ಕಂಬಗಳನ್ನು ನಾವು ಇಲ್ಲಿ ಕಾಣಬಹುದು. ಈ ಎಲ್ಲ ಕಲ್ಲಿನ ಕಂಬದ ಮೇಲೆ ಉಬ್ಬುಶಿಲ್ಪಗಳನ್ನು ಸಹ ಕಾಣಬಹುದು. ನೃತ್ಯಮಂಟಪದಲ್ಲಿ ೯ ಅಂಕಣದಲ್ಲಿ ಭಿತ್ತಿ ಚಿತ್ರಗಳಿದ್ದವು. ಆದರೆ ಇಂದು ೩ ಅಂಕಣದಲ್ಲಿ ಮಾತ್ರ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ.

ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಮತ್ತು ಹಿನ್ನಲೆ :

ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿರುವಂತೆ ಈ ಹಿಂದೆ ಕರ್ನಾಟದ ರಾಜಧಾನಿಯೂ ಆಗಿದ್ದಿತು. ಬಹಳ ಹಿಂದಿನಿಂದಲೇ ಆದಿಮಾನವನ ಪ್ರಾರಂಭದ ಆ ದಿನಗಳಲ್ಲಿದ್ದ ನೆಲೆಗಳಲ್ಲಿ ಈ ಜಿಲ್ಲೆಯು ಹೊಂದಿದ್ದು ಅತಿ ಪ್ರಾಚೀನತೆಯ ಹಿನ್ನೆಲೆಯನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಒಂದು ಚೈತನ್ಯಪ್ರಾಯದ ಸಂಸ್ಕೃತಿಯಲ್ಲಿ ಬೆಳೆದ ಶ್ರೀಮಂತ ಸಾಂಸ್ಕೃತಿಕ ಪರಿಸರ ಇದು ಈ ಪ್ರದೇಶದ ಇತಿಹಾಸದಲ್ಲಿ ಲಲಿತಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತದ್ದರಿಂದ ಇದು ಕಲೆಯ

ತವರೂರಾಗಿವೆ. ದೀರ್ಘ ಇತಿಹಾಸ ಹೊತ್ತ ಈ ನಾಡು ತನ್ನ ಒಡಲಿನಲ್ಲಿ ವಿವಿಧ ಕಲಾಪ್ರಕಾರಗಳನ್ನು ಹೊಂದಿ ಇಂದು ಕಲೆಗಳ ಪರಂಪರಾಗತ ಬೀಡಾಗಿದೆ. ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಮೈಸೂರು ಜಿಲ್ಲೆ, ಕನ್ನಡನಾಡಿನ ತೆಂಕಣದಿಕ್ಕು ಪೂರ್ವ ಭಾಗದಲ್ಲಿರುವ ಒಂದು ಪ್ರದೇಶ. ಈ ಭಾಗವು ಹಿಂದೆ ಮೈಸೂರು ರಾಜ್ಯವಾಗಿತ್ತು. ಇಂದು ಭಾರತದೊಳಗಿನ ಕರುನಾಡಿನ ಪ್ರಾಚೀನ ನಗರಗಳಲ್ಲಿ ಒಂದೆನಿಸಿದೆ. ನೈಸರ್ಗಿಕವಾಗಿಯೂ ಸುಂದರ ತಾಣಗಳನ್ನು ಒಳಗೊಂಡ ಸಂಪದ್ಭರಿತ ನೆಲೆಯಾಗಿ, ಸಾಂಸ್ಕೃತಿಕ ರಂಗಕ್ಕೆ ಅತ್ಯಂತ ಮಹತ್ವ ಪೂರ್ಣವಾದ ತನ್ನದೆ ಆದ ದೇಶಿಯ ಕೊಡುಗೆಗಳನ್ನು ನೀಡಿದ್ದು, ಆಧುನಿಕ ಕಾಲದ ಪ್ರವಾಹಕ್ಕೆ ಕೊಚ್ಚಿ ಹೋಗದೆ ಅದರ ಅನುಭವದಿಂದ ಪರಿಪುಷ್ಟಿಗೊಳ್ಳುತ್ತಾ ಇನ್ನೂ ಬೆಳೆಯುತ್ತಲೇ ಇದೆ.

ಯಾವುದೇ ಪ್ರಾಂತ್ಯ ಅಥವಾ ದೇಶದ ಸಂಸ್ಕೃತಿ ನೋಡಬೇಕಾದರೆ ಕಲೆಯೇ ಮುಖ್ಯ. ಕಲೆಯ ಪರಿಸರವೇ ಸಂಸ್ಕೃತಿಯ ಜೀವಾಳ. ಭಾರತೀಯ ಸಂಸ್ಕೃತಿಯು ಮೊಟ್ಟಮೊದಲು ರೂಪುಗೊಂಡಿರುವುದೆ ದಖ್ಖನ್ ಪ್ರಸ್ಥಭೂಮಿಯಲ್ಲಿ. ಸಂಸ್ಕೃತಿ ಎಂದರೆ ಒಂದು ದೇಶದ ಅಥವಾ ಒಂದು ಜನಾಂಗದ ಮಾನಸಿಕವಾದ ಸಾಧನೆ. ಅಷ್ಟೇ ಅಲ್ಲದೆ ಪಕ್ವತೆ, ಬುದ್ಧಿವಾದ, ನಾಗರಿಕತೆ ಅಲ್ಲದೆ ವ್ಯವಸಾಯ, ಕೃಷಿ, ಸಭ್ಯತೆ, ಸಭಾನಗರ, ಸಂರಕ್ಷಿಸು ಎಂದೆಷ್ಟೇ ಅಲ್ಲದೆ ಗೌರವಿಸು, ಆರಾಧಿಸು, ಸೇವೆಮಾಡು ಎಂಬಿತ್ಯಾದಿ ಅರ್ಥಗಳು ಇರುತ್ತದೆ.[೧೯] ಸಂಸ್ಕೃತಿಯ ಪ್ರಧಾನ ಅಂಶವೇ ಜನಜೀವನದ ಅಂತರಂಗದ ಅನುಭವ. ಅಲ್ಲದೆ ಆಯಾಪ್ರದೇಶದ ಭಾಷೆ, ಧರ್ಮ, ಜನಗಳ ಸಮಸ್ಯೆಗಳಿಗೆ ಉತ್ತರ ಕಾಣ ಬಯಸುವ ಅಂತರಂಗದ ಸಾಧನೆಯ ಮೂಲ ಸಾಮಾಗ್ರಿಯೇ ಇದಾಗಿದೆ.

ನಮ್ಮ ಪುರಾಣೇತಿಹಾಸವಾದ ಪದ್ಮಪುರಾಣ ಮತ್ತು ವಿಷ್ಣುಪುರಾಣಗಳಲ್ಲಿ ಮಾಹಿಷ್ಮತಿ, ಮಹಿಷಮಂಡಲ, ಮಹಿಷರಾಷ್ಟ್ರ ಇತ್ಯಾದಿ ಹೆಸರುಗಳಿಂದ ಮೈಸೂರು ಕೂಡಿದೆ. ಕಾರಣ ಮಹಿಷ ಎಂಬ ರಾಕ್ಷಸನು ಈ ಸ್ಥಳದಲ್ಲಿ ಇದ್ದನೆಂದು ಅದು ತಿಳಿಸುತ್ತದೆ. ಅವನು ಇಲ್ಲಿಯ ಜನರಿಗೆ ತುಂಬ ಉಪಟಳ ಕೊಡುತ್ತಿದ್ದನು. ಆಗ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜನು ತನ್ನ ಕುಲದೇವತೆಯಾದ ವಾಸಂತಿಕ, ದುರ್ಗ ಅಥವಾ ಚಾಮುಂಡೇಶ್ವರಿ ಎಂಬು ಕರೆಯುವ ಆ ದೇವಿಯ ಅನುಗ್ರಹದಿಂದ ತೊಂದರೆ ತಪ್ಪಿಸಿಕೊಂಡ ನಂತರ ಶಾಂತಿ ನೆಲೆಸಿತು.[೨೦] ಈ ಪ್ರದೇಶದಲ್ಲಿ, ಇದರ ನೆನಪಿಗಾಗಿ ಮಹಿಷಾಸುರ ಮತ್ತು ಮಹಿಷಾನ ವಿಗ್ರಹವನ್ನು ಚಾಮುಂಡಿ ಬೆಟ್ಟದಲ್ಲಿ ದೊಡ್ಡದಾಗಿ ನಿರ್ಮಿಸಿರುವುದನ್ನು ನಾವು ಕಾಣಬಹುದಾಗಿದೆ. ಮೈಸೂರು ಚರಿತ್ರೆಯನ್ನು ಗುರುತಿಸುವಂತಹ ಅಂಶಗಳಲ್ಲಿ ಮೊದಲಿಗೆ ಪ್ರಾರಂಭವಾದಂತಹ ಘಟ್ಟವು. ಕ್ರಿ.ಶ. ಪೂರ್ವದಲ್ಲಿ ಚಾಣಕ್ಯನ ಸಹಾಯದಿಂದ ಪಟ್ಟಕ್ಕೆ ಬಂದ ಚಂದ್ರಗುಪ್ತ ಮೌರ್ಯನು ಮಾಹಿಷ್ಮತಿಗೆ ಬಂದು ನಂತರ ಶ್ರವಣಬೆಳಗೊಳಕ್ಕೆ ಹೋಗಿ ನೆಲೆಸಿದನು ಎಂದು. ಆ ನಂತರ ಮೌರ್ಯನ ಮೊಮ್ಮಗನಾದ ಅಶೋಕನು ಬೌದ್ಧಧರ್ಮ ಬೋಧಕರನ್ನು ಮಹಿಷಮಂಡಲಕ್ಕೆ ಕಳುಹಿಸಿದನು. ಮಹಿಷಾರಾಷ್ಟ್ರ ಕ್ರಿ.ಶ.ದ ಪ್ರಾರಂಭದ ಹೊತ್ತಿಗೆ ಪ್ರಬಲಶಕ್ತಿಯಾಗಿ

ಬೆಳೆದಿದ್ದು ಎಂಬುದಕ್ಕೆ ತಮಿಳುನಾಡಿನ ಚೋಳರಾಜನು ಸಹ ಶ್ರೀಲಂಕಾ ಗೆಲ್ಲಲು ಮೈಸೂರು ಸೇನೆಯ ಸಹಾಯ ಪಡೆದಿದ್ದನಂತೆ ಎಂಬ ಉಲ್ಲೇಖಗಳು ಐತಿಹಾಸಿಕ ಗ್ರಂಥಗಳಲ್ಲಿ[೨೧] ಕಾಣಸಿಗುವುದು. ಕೆಲವು ಶಾಸನಗಳ ಪ್ರಕಾರ ಎರುಮೈನಾಡು ಎಂದು ಮತ್ತೊಂದು ಹೆಸರಿನಿಂದಲೂ ಸಹ ಗುರುತಿಸುತ್ತಾರೆ. ಮುಂದೆ ಗ್ರೀಕ್ ದೇಶದಿಂದ ಬಂದ ಟಾಲಾಮಿ ಎಂಬ ಪ್ರವಾಸಿಯು ತನ್ನ ಗ್ರಂಥದಲ್ಲಿ ಪುನ್ನಾಟ, ಪೌನ್ನಾಟ ಎಂಬುದನ್ನು ಕ್ರಿ.ಶ. ೧೫೦ ರಲ್ಲಿ ಮೈಸೂರಿಗೆ ಕರೆದಿದ್ದಾನೆ. ಇತ್ತೀಚಿನ ಕಾಲದ ಸಾಹಿತ್ಯಗ್ರಂಥಗಳಲ್ಲಿ ಮೈಸ (ಸು,ಸೆ) ನಾಡು, ಮಹಿಸೂರು ತದನಂತರ ಮೈಸೂರು ಎಂದು ಪರಿವರ್ತನೆ ಆಗಿ ಪ್ರಸಿದ್ಧ ಸ್ಥಳವಾಗಿದೆ[೨೨] ಎಂದು ವಿದ್ವಾಂಸರು ತಿಳಿಸುತ್ತಾರೆ.

೧೧೭೫ ರಿಂದಲೆ ಮೈಸೂರು ನಾಡು ೭೦ ಗ್ರಾಮಗಳ ಪಾಳೇಪಟ್ಟು ಆಗಿತ್ತು. ೧೪೯೯ರ ಶಾಸನಗಳಲ್ಲಿ ಮೈಸೂರು ಎಂಬ ಪದ ಪೂರ್ಣವಾಗಿ ಬಳಕೆಗೆ ಬಂದಿದೆ. ಹೀಗೆ ಸುದೀರ್ಘವಾದ ಒಂದು ಜನಾಂಗದ ಸಂಸ್ಕೃತಿಯ ಭವ್ಯ ಪರಂಪರೆಯ ಇತಿಹಾಸವನ್ನು ಇದು ಹೊಂದಿದೆ. ಎಂದು ಈ ಐತಿಹಾಸಿಕ ಕಾಲವನ್ನು ಪ್ರಾಚೀನ ಇತಿಹಾಸದ ಕಾಲಘಟ್ಟವಾಗಿ ಗುರುತಿಸಲಾಗಿದೆ. ಇನ್ನೂ ಮುಂದೆ ಇದರಲ್ಲಿ ಹಲವು ಪ್ರಮುಖ ರಾಜವಂಶಸ್ಥರು ಈ ನಾಡಿನ ಲಲಿತಕಲೆಗೆ ಅವಿಸ್ಮರಣೀಯ ಪ್ರೋತ್ಸಾಹದ ಕೊಡುಗೆ ನೀಡಿದ್ದಾರೆ. ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳ ಮತ್ತು ವಿಜಯನಗರದ ಪರಂಪರೆಯ ನಿಷ್ಠೆ ಸಂಪ್ರದಾಯಗಳನ್ನು ಸಮರ್ಥವಾಗಿ ಮುಂದುವರೆಸಿದ್ದು ಮೈಸೂರು ಒಡೆಯರು. ಇವರ ಚರಿತ್ರೆಯೂ ಆರು ಶತಮಾನಗಳ ಕಾಲದ ಬಹಳ ದೊಡ್ಡ ಮನೆತನದ ಸಂಸ್ಕೃತಿ ಸಂಪನ್ನವಾದುದ್ದಾಗಿದೆ.[೨೩] ಇಲ್ಲಿಂದ ಒಡೆಯರ ಇತಿಹಾಸವಾಗಿ ಬೆಳೆಯಿತು. ಹಾಗಾಗಿ ಸಾಂಸ್ಕೃತಿಕ ರಾಜಧಾನಿಯಾಗಿ ಬೌದ್ಧಿಕ ಸಂಪತ್ತು ಅಪರಿಮಿತವಾಗಿದೆ.

ಇಲ್ಲಿ ಕನ್ನಡ ಮತ್ತು ಸಂಸ್ಕೃತಿಗಳೆರಡು ಪ್ರೋತ್ಸಾಹ ಪಡೆದವು. ಇಷ್ಟೆಲ್ಲ ಗಟ್ಟಿತನ ಹೊಂದಿದ್ದರು ಮೈಸೂರು ಒಡೆಯರ ಮೂಲದ ಬಗ್ಗೆ ಚರಿತ್ರೆಕಾರರಲ್ಲಿ ಒಮ್ಮತವಿಲ್ಲ ಚಂದ್ರ ಮತ್ತು ಯದುವಂಶದ ಮನೆತನದವರು ಎಂದು, ಮೂಲವನ್ನು ಮಹಾವಿಷ್ಣು, ಶ್ರೀಕೃಷ್ಣ, ಬ್ರಹ್ಮ, ಚಂದ್ರನ ಮೂಲಕ ಯದುರಾಯರ ವರೆಗೆ ಪೌರಾಣಿಕ ವಂಶಾವಳಿ ಹೇಳುತ್ತಾರೆ. ಮೂಲಸ್ಥಳವನ್ನು ದ್ವಾರಕೆಯೆಂದು ಗುರುತಿಸಿದ್ದಾರೆ. ಇನ್ನೊಂದರ ಪ್ರಕಾರ ಇಲ್ಲಿನ ಅರಸರು ಹೊರಗಿನಿಂದ ಬಂದವರಾಗಿರಲಿಕ್ಕಿಲ್ಲ. ಪ್ರಾಚೀನ ಕಾಲದಿಂದ ಮೈಸೂರು ನಾಡು ಒಂದು ಪುಟ್ಟ ಭೌಗೋಳಿಕ ಘಟ್ಟಕ್ಕೆ ಇದನ್ನು ಆಳುತ್ತಿದ್ದವರು ಇಲ್ಲಿನ ಮಣ್ಣಿನ ಮಕ್ಕಳೇ ಆಗಿರುತ್ತಾರೆ.[೨೪]

ಕೃಷ್ಣ, ಯದು ಮುಂತಾದ ವಿವರಗಳು ಬಹುಶಃ ಹೊಸ ಮನೆತನವೊಂದರ ಗಟ್ಟಿ ನೆಲಗಟ್ಟಿಗೆ ಒದಗಿಸಿಕೊಟ್ಟ ಹಿನ್ನೆಲೆಯಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಯದುವಂಶ ಪ್ರಾರಂಭವಾಗುವುದೇ ೧೩ನೇ ಶತಮಾನಾರ್ಧದ ನಂತರ ಮೊದಲೆ ಆಳ್ವಿಕೆ ಮಾಡುತ್ತಿದ್ದ ಚಾಮರಾಜರು ಗಂಡು ಸಂತಾನವಿರಲಿಲ್ಲ ಮತ್ತು ಸ್ವರ್ಗಸ್ಥರಾಗಿದ್ದರು, ಪತ್ನಿ ದೊಡ್ಡದೇವರಾಜಮ್ಮಣ್ಣಿ ಮತ್ತು ಮಗಳನ್ನು ದುಷ್ಟ ಸೇನಾಪತಿಯಾದ ಮಾರನಾಯಕನು ಮದುವೆಯಾಗುವಂತೆ ಪೀಡಿಸುತ್ತಿದ್ದ. ಇವರಿಗೆ ಈ

ಸಂಕಷ್ಟದಿಂದ ಪಾರುಮಾಡಿದ ಯದುರಾಯನಿಗೆ ತನ್ನ ಮಗಳನ್ನು ಕೊಟ್ಟು ೧೩೯೯ರಲ್ಲಿ ಪಟ್ಟಾಭಿಷೇಕ ಮಾಡಿ ರಾಜ್ಯಭಾರ ವಹಿಸಿದ ವಿವರಗಳಿವೆ.

ಒಡೆಯರ್ ಎಂಬ ಬಿರುದು ಸಹ ಇಲ್ಲಿನಿಂದ ಪ್ರಾರಂಭವಾಗುತ್ತದೆ. ಮುಂದಿನ ಎಲ್ಲಾ ಅರಸರಿಗೂ ಗೌರವ, ಅಧಿಕಾರದ ಪ್ರತಿಯಾಗಿ ಮತ್ತು ೩೩ ಗ್ರಾಮಗಳ ಪ್ರಾಂತದ ಅಧಿಪತ್ಯಕ್ಕಾಗಿ ಮತ್ತು ಕಷ್ಟಕಾಲದಲ್ಲಿ ದಾರಿ ತೀರಿಸಿದ ಜಂಗಮನ ನೆನಪಿಗಾಗಿ ಹೆಸರಿನೊಂದಿಗೆ ಗೌರವಸೂಚಕವಾಗಿ ಇರುತ್ತದೆ. ಯದುರಾಯರಿಂದ ಒಡೆಯರ್ ಮನೆತನದ ಇತಿಹಾಸ ಆರಂಭವಾಗುತ್ತದೆ. ಒಟ್ಟು ೨೫ ಅರಸರು ರಾಜ್ಯಭಾರ ಮಾಡಿರುತ್ತಾರೆ.

೨೬ನೇ ಖಾಸಗಿ ರಾಜನಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಇಂದು ಮುನ್ನಡೆಸುತ್ತಿದ್ದಾರೆ. ಮೊದಲನೆಯ ಒಡೆಯರ ಅರಸನಾದ ಯದುವಂಶ ಸಂಸ್ಥಾಪಕನಾದ ಯದುರಾಯ ನಂತರ ಹಿರಿಯಬೆಟ್ಟದ ಚಾಮರಾಜ ಒಡೆಯರು, ತಿಮ್ಮರಾಜ ಒಡೆಯರು ಹಾಗೂ ಹಿರಿಯ ಚಾಮರಾಜ ಒಡೆಯರು, ಬೆಟ್ಟದ ಚಾಮರಾಜ ಒಡೆಯರು, ಇಮ್ಮಡಿ ತಿಮ್ಮರಾಜಒಡೆಯರು ಮತ್ತು ಬೋಳ ಚಾಮರಾಜ ಒಡೆಯರು, ರಾಜ ಒಡೆಯರ್‌ವರೆಗೆ ಅಂದರೆ ೧೩೯೯ ರಿಂದ ೧೬೦೯ರವರೆಗೆ ೨೧೦ ವರ್ಷಗಳು ಪಾಳೇಗಾರರಾಗಿ ಆಳ್ವಿಕೆ ನಡೆಸಿದ್ದಾರೆ.

ಯದುರಾಯ ನಂತರ ಹಿರಿಯ ಬೆಟ್ಟದ ಚಾಮರಾಜ ಒಡೆಯರು ಯಾದವಗಿರಿಯಲ್ಲಿ ಕೋಟೆಯನ್ನು ಕಟ್ಟಿಸಿ ನಾಲ್ಕು ದಿಕ್ಕಿಗೆ ಬಾಗಿಲುಗಳನ್ನು ಮಾಡಿಸಿ ಶಿಲ್ಪಕಲೆಯ ಸೌಂದರ್ಯದಿಂದ ಮೆರಗನ್ನು ಹೆಚ್ಚಿಸುತ್ತಾನೆ. ವಾಸ್ತುಕಲೆಯ ಭವ್ಯತೆ ಸಾಕ್ಷಿಯಾಗಿ ಈ ದೇವಾಲಯವಿದೆ ಇದಕ್ಕೆ ಮೇಲುಕೋಟೆ ಎಂದು ಹೆಸರು ಇಟ್ಟಿದ್ದಾರೆ. ಇವರ ನಂತರ ತಿಮ್ಮರಾಜ ಒಡೆಯರು, ಆ ನಂತರದ ಮೇಲೆ ಹಿರಿಯಚಾಮರಾಜ ಒಡೆಯರು ತರುವಾಯ ಬೆಟ್ಟದ ಚಾಮರಾಜ ಒಡೆಯರು ಇವರಿಗೆ ಹೊಗಳುತ್ತಾರೆ. ಶಿಥಿಲ ಕೋಟೆಯ ದುರಸ್ತಿ, ಪುರಗೇರಿ, ತಮ್ಮಟಗೇರಿ ಸೋಮೇಶ್ವರ, ಲಕ್ಷ್ಮೀನಾರಾಯಣಸ್ವಾಮಿ ಗುಡಿಗಳು ಅಲ್ಲದೆ ೧೫ನೇ ಶತಮಾನದಲ್ಲಿ ಕೋಟೆ ಕಟ್ಟಿಸಿ, ಮಹಿಷಾಸುರ ನಗರ ಎಂದು ಹೆಸರನ್ನು ಇಟ್ಟದ್ದು ಇವರೆ ನಂತರ ಇಮ್ಮಡಿತಿಮ್ಮರಾಜ ಅರಸರ ನಂತರ ಬೋಳ ಚಾಮರಾಜ ಒಡೆಯರು ಇವರಿಗೆ ಸುಗುಣ ಗಂಭೀರ ಎಂದು ಮೈಸೂರು ಅರಮನೆಯ ಕೋಟೆಯ ಒಳಗೆ ತ್ರಿಣೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದರು.

ಇದು ಅತಿ ಪ್ರಾಚೀನ ದೇವಾಲಯವಾಗಿದೆ. ಹೀಗೆ ಅರಮನೆ ಆವರಣದಲ್ಲದೆ ನಂತರ ಚಾಮರಾಜ ಒಡೆಯರು ಕೋಟೆ ಕಟ್ಟಿಸಿ ಭದ್ರಪಡಿಸಿದರು. ಆ ನಂತರ ೧೬೧೦ ರಿಂದ ೧೬೩೮ ವರೆಗೆ ೨೮ ವರ್ಷಗಳು ವಿಜಯನಗರದ ಅಧೀನ ರಾಜರಾಗಿದ್ದರು. ರಾಜ ಒಡೆಯರು ಒಡೆಯರ ಮನೆತನವನ್ನು ಭದ್ರಬುನಾದಿಯ ಮೇಲೆ ನಿಲ್ಲಿಸಿದ್ದು ಈ ರಾಜ ಒಡೆಯರು. ರಾಜ್ಯ ನಿರ್ಮಾಣ ಸ್ವತಂತ್ರರಾಗಲು ಹಂತ ಹಂತವಾಗಿ ಸಫಲರಾದರು. ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿ ಅಲ್ಲಿಂದ ಹೊಸ ಅಧ್ಯಾಯ ಆರಂಭವಾಯಿತು. ಪಾಳೇಗಾರಿಕೆ ಹರಿದು ಹಂಚಿಹೋಗಿದ್ದನ್ನು

ಒಂದು ಆಡಳಿತ ಕೇಂದ್ರಕ್ಕೆ ತಂದು ಸಂಸ್ಥಾನದ ರೂವಾರಿಯಾದರು. ಒಡೆಯರ ಚರಿತ್ರೆಯಲ್ಲಿ ಮೈಸೂರು ರಾಜ್ಯ ಉದಯಿಸಿತು. ಮೊದಲ ಸಿಂಹಾಸನಾರೋಹಣದಲ್ಲಿ ದಸರಾ ದರ್ಬಾರು ನಡೆಸಿದ್ದರು, ವಿಜಯನಗರ ಅರಸರ ಪರಂಪರೆಯಂತೆ ನವರಾತ್ರಿ ಉತ್ಸವ, ಮಹಾನವಮಿ, ವಿಜಯದಶಮಿಗಳನ್ನು ಒಳಗೊಂಡಂತೆ ಸಂಪ್ರದಾಯವನ್ನು ಕಟ್ಟಳೆಗೊಳಿಸಿದರು. ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯ, ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿ ಇವರ ಭಕ್ತ ವಿಗ್ರಹಗಳಿವೆ. ಇವರಿಗೆ ಮೈಸೂರು ರೂವಾರಿ, ಪವಾಡ ಪ್ರಭು, ರಾಜೇಂದ್ರ, ರಾಜನೃಪ, ರಾಜಮಹೀಪತಿ ಎಂದು ಕರೆಯುತ್ತಿದ್ದುದಾಗಿ ತಿಳಿದುಬರುತ್ತದೆ. ಆ ನಂತರ ಚಾಮರಾಜ ಒಡೆಯರಿಗೆ ಕಠಾರಿಯ ಸಾಳ್ವ, ವೈರಿಗಜ, ಗಂಡಭೇರುಂಡ ಎಂಬ ಬಿರುದು ಇದೆ.[೨೫] ರಾಜ್ಯ ವಿಸ್ತರಣೆ ಮಾಡಿ ಸಂಪತ್ತು ಹೆಚ್ಚಿಸಿದರು. ಸರ್ವ ಧರ್ಮ ಸಮನ್ವಯ ಪ್ರತಿಪಾದಕರು ಸ್ವತಃ ವೈಷ್ಣವರಾದರೂ ಶೈವ ಮತ್ತು ಜೈನಧರ್ಮಗಳನ್ನು ಪ್ರೋತ್ಸಾಹಿಸಿದರು. ಅಶ್ವಶಾಸ್ತ್ರ ಕೃತಿ, ರಾಮಾಯಣದ ಗದ್ಯ ರೂಪಾ, ಭೌದ್ಧಿಕ ಚರ್ಚೆ, ಸಾಹಿತ್ಯ, ಸಂಗೀತಗೋಷ್ಠಿ ವಾದ್ಯಗೋಷ್ಠಿಗಳನ್ನು ನಡೆಸುತ್ತಿದ್ದರು. ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿದ್ದರು.

ಇಮ್ಮಡಿರಾಜ ಒಡೆಯರು ಲಲಿತಕಲೆಗೆ ಪ್ರೋತ್ಸಾಹ ನೀಡಿದ್ದರಿಂದ ಸಂಗೀತಲೋಲ ಸಾಹಿತ್ಯ ರತ್ನಾಕರ, ಮಲೆಪರಗಂಡ, ಅಭಯ ಪ್ರತಾಪಾಧೀಶ್ವರ ಎಂಬ ಬಿರುದುಗಳು ಇವರಿಗೆ ಇವೆ.[೨೬] ನಂತರ ೧೬೩೮ ರಿಂದ ೧೬೯೬ ರವರೆಗೆ ೫೮ ವರ್ಷಗಳು ಮಂಡಾಲಧೀಶ್ವರಾಗಿದ್ದರು, ಅದರಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರಿಂದ ಚಿಕ್ಕದೇವರಾಜ ಒಡೆಯರವರೆಗೆ ಇರುವುದು ಕಂಡುಬರುತ್ತದೆ. ಕಂಠೀರವರ ಕಾಲದಲ್ಲಿ ಲಲಿತಕಲೆ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಶ್ರೀರಂಗಪಟ್ಟಣದ ಕೋಟೆ, ಮೈಸೂರು ಕೋಟೆಯು ಸೇರಿದಂತೆ ವಿಶಾಲವಾಯಿತು. ಪ್ರಾಚೀನ ಅರಮನೆಯನ್ನು ಚಿತ್ರಕಲೆ, ಶಿಲ್ಪಕಲೆ, ವಾಸ್ತುಗಳಿಗೆ ಮೆರಗನ್ನು ನೀಡಿ ಸುಂದರಗೊಳಿಸಿದರು. ಶ್ರೀರಂಗಪಟ್ಟಣದಲ್ಲಿ ಟಂಕಶಾಲೆ ನಾಣ್ಯಗಳ ಮುದ್ರಣ ಪ್ರಾರಂಭವಾಯಿತು. ನಾಣ್ಯಗಳಲ್ಲಿ ಅನೇಕ ದೇವಿವರ ಚಿತ್ರಗಳು, ಅಲಂಕಾರಿಕ ನಕ್ಷೆಗಳು ಕಂಡುಬರುತ್ತದೆ. ಪಟ್ಟಣದಲ್ಲಿ ನರಸಿಂಹಸ್ವಾಮಿ ದೇವಸ್ಥಾನ ಕಟ್ಟಿಸಿ, ನಂಜನಗೂಡಿನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಗುಡಿಗೋಪುರಗಳಿಗೆ ಅನೇಕ ಮೂರ್ತಿಗಳನ್ನು ಮಾಡಿಸಿಕೊಟ್ಟರು. ಇಲ್ಲಿರುವ ದೇವಸ್ಥಾನವನ್ನು ದುರಸ್ತಿ ಮಾಡಿಸಿ ಸುಂದರ ಗೊಳಿಸಿದರು. ಇವರ ಆಳ್ವಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಬೆಳವಣಿಗೆಯಾಯಿತು. ಭಾಸ್ಕರನ ಬೇಹಾರಗಣಿತ, ಮಾರ್ಕಂಡೇಯ ಪುರಾಣ ಇತ್ಯಾದಿಗಳನ್ನು ಹೆಸರಿಸಬಹುದು. ಮೈಸೂರಿನ ತೃಣೇಶ್ವರ ಸ್ವಾಮಿ ದೇವಾಲಯ ನಿರ್ಮಾಣ ಮಾಡಿಸಿದರು. ಇವರಿಗೆ ಸರಸವಿದ್ಯಾವಿಶಾರದ, ಮತ್ತು ಸಂಗೀತ ಸಾಹಿತ್ಯ ಶಾಸ್ತ್ರ ವಿಶಾರದ ಎಂಬ ಬಿರುದುಗಳು ಇದ್ದವು.

ದೇವರಾಜ ಒಡೆಯರ್ ಅವರು ತಿರುಪತಿಯ ನವರತ್ನಮಂಟಪ, ಕಲ್ಲುಮಂಟಪ, ಮೈಸೂರಿನ ಚಾಮುಂಡಿಬೆಟ್ಟದಲ್ಲಿ ೭೦೦ನೆಯ ಮೆಟ್ಟಿಲಿನ ಹತ್ತಿರ ಅದ್ಭುತವಾದ ಬೃಹದಾಕಾರವಾದ ೧೬

ಅಡಿ ನಂದಿ ವಿಗ್ರಹ ಇದೆ. ಅದಕ್ಕೆ ಬೆಟ್ಟದಬಸವ ಎಂಬ ಹೆಸರಿಸಿದ್ದು ಕೂಡ ಇವರೇ.[೨೭] ಪ್ರಮುಖವಾಗಿ ಕಲೆಯನ್ನು ಪ್ರೋತ್ಸಾಹಿಸಿದವರಲ್ಲಿ ದೇವರಾಜ ಅರಸರ ಹೆಸರು ಸ್ಮರಣೀಯವಾಗಿದೆ. ಅನೇಕ ಭಕ್ತ ವಿಗ್ರಹಗಳನ್ನು ಕೆತ್ತಿಸಿದ್ದಾರೆ. ಧರಣಿವರಾಹ, ಮೂರು ಮನ್ನೆಯರಗಂಡ ಹಿಂದುರಾಯಸುರತ್ರಾ ಎಂಬ ಬಿರುದು ಗಳಿಸಿದ್ದರು. ನಂತರ ಚಿಕ್ಕದೇವರಾಜ ಒಡೆಯರು ೧೬೭೩ ರಿಂದ ೧೭೦೪ರವರೆಗೆ ೩೧ ವರ್ಷಗಳು ಸರ್ವಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಅದರಲ್ಲಿ ಚಿಕ್ಕದೇವರಾಜ ಒಡೆಯರ ಕಂಠೀರವ ಒಡೆಯರ, ದೊಡ್ಡಕೃಷ್ಣರಾಜ ಒಡೆಯರ, ಚಾಮರಾಜ ಒಡೆಯರ, ಇಮ್ಮಡಿಕೃಷ್ಣರಾಜ ಒಡೆಯರವರೆಗೆ ಇದ್ದು. ಚಿಕ್ಕದೇವರಾಜ ಒಡೆಯರಿಗೆ ಅಪ್ರತಿಮವೀರ, ಸಂಗರಭೀಮ, ಯಾದವ ಕುಲೋದ್ದಾರಕ, ತೆಂಕಣರಾಯ, ಕರ್ನಾಟಕದ ಚಕ್ರವರ್ತಿ ಎಂಬ ಬಿರುದುಗಳು ಇತ್ತು. ವಿಜಯನಗರದ ಕೃಷ್ಣದೇವರಾಯರಂತೆ ಯದುವಂಶದ ಅತ್ಯಂತ ಶ್ರೇಷ್ಠ ಅರಸು, ಔರಂಗಜೇಬನ ಸ್ನೇಹಸಂಬಂಧ ಅತ್ಯಂತ ಚೆನ್ನಾಗಿತ್ತು. ಉತ್ತಮ ಯುದ್ಧ ಕೌಶಲ್ಯ ಬಲ್ಲವರಾಗಿದ್ದರು. ನವಕೋಟಿ ನಾರಾಯಣ ನೂತನ ಸಾಹಿತ್ಯ ಬ್ರಹ್ಮ ಎಂದು ಹೆಸರಾಗಿದ್ದರು.[೨೮] ಇವರ ಆಸ್ಥಾನವು ಕವಿಗಳು, ಕವಯಿತ್ರಿಯರು. ಪ್ರಸಿದ್ಧ ವಿದ್ವಾಂಸರುಗಳಿಂದ ತುಂಬಿತ್ತು. ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ಗಣ್ಯಕೃತಿಗಳು, ಒಡೆಯರು ಕುಲಚರಿತ್ರೆ ಅನೇಕ ರಾಮಾಯಣ, ಭಗವದ್ಗೀತೆ, ಕ್ಷೇತ್ರಮಹಾತ್ಮ್ಯ ಗದ್ಯಗಳಲ್ಲಿ ಕೃತಿರಚನೆ, ನಾಟಕಗಳು ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದವರಾಗಿದ್ದಾರೆ.

ಗುಂಡ್ಲಪೇಟೆ, ತೆರಕಣಾಂಬಿಯಲ್ಲಿ ಭವ್ಯವಾದ ಪರವಾಸುದೇವ, ಹರದನಹಳ್ಳಿಯಲ್ಲಿ ಅಪ್ರತಿಮರಾಜ ಗೋಪಾಲ, ವರಕೂಡಿನಲ್ಲಿ ವರದರಾಜಸ್ವಾಮಿ, ಬೆಂಗಳೂರಿನ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯ, ಅನೇಕಗಳಲ್ಲಿ ವಿಗ್ರಹಗಳು ಮತ್ತು ಶ್ರೀರಂಗಪಟ್ಟಣದಲ್ಲಿ ಅರಮನೆ ಬಲಭಾಗದಲ್ಲಿ ಶ್ವೇತವರಾಹ ಸ್ವಾಮಿ ದೇವಾಲಯ, ಬೇಲೂರು, ಬೆಳ್ಳೂರುಗಳ ಜಿನಬಸದಿ, ಮುಡಕುತೊರೆ, ಹುಲ್ಲಂಬಳ್ಳಿ ಮಠಗಳಿಗೆ ಪ್ರೋತ್ಸಾಹ. ಮೈಸೂರಿನಲ್ಲಿ ಚಿಕ್ಕ ಅರಮನೆ ಕಟ್ಟಿಸಿದ್ದರು. ನಂತರದವರಾದ ಕಂಠೀವರ ಮಹಾರಾಜ ಒಡೆಯರಿಗೆ ಮೂಕ ಅರಸು ಎಂಬ ಹೆಸರಿತ್ತು.

ಹಲವು ದೇವತಾ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಮೇಲುಕೋಟೆಯಲ್ಲಿ ಒಂದು ಮಾಧವನಗುಡಿ ಕಟ್ಟಿಸಿದ್ದರು. ಆ ನಂತರದಲ್ಲಿ ಬಂದ ದೊಡ್ಡ ಕೃಷ್ಣರಾಜ ಒಡೆಯರಿಗೆ ಶ್ರೀವೈಷ್ಣವ ನೃಪಾಗ್ರಣಿ ಎಂಬ ಬಿರುದು ಇತ್ತು. ಇವರು ಅನೇಕ ವೈಷ್ಣವ ಶಿಲ್ಪಮೂರ್ತಿ ನಿರ್ಮಿಸಲು ಪ್ರೋತ್ಸಾಹಿಸಿದರು. ಕಳಲೆಯ ಲಕ್ಷ್ಮೀಕಾಂತಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದರು. ಇವರು ಸಂಗೀತ, ಸಾಹಿತ್ಯಗಳ ಬೆಳವಣಿಗೆಯಲ್ಲಿ ತೊಡಗಿಕೊಂಡಿದ್ದರು.

ಇವರ ಕಾಲದಲ್ಲಿ ರಚನೆಗೊಂಡ ಕಾವೇರಿ ಮಹಾತ್ಮ ವರನಂದೀ ಕಲ್ಯಾಣ. ಪದ್ಮನೀಪರಿಣಯ, ಸಕಲವೈದ್ಯ ಸಂಹಿತ ಸಾರರ್ಣವ ಇತ್ಯಾದಿಗಳ ಜೊತೆ ವನ್ಯಪ್ರಾಣಿ ರಕ್ಷಣೆಗೆ ವಿಶೇಷ ಆಸಕ್ತಿ ವಹಿಸಿದ್ದರು. ಈ ನಂತರ ಚಾಮರಾಜ ಒಡೆಯರು ತರುವಾಯ ಇಮ್ಮಡಿ ಕೃಷ್ಣರಾಜ ಒಡೆಯರು

ಇವರ ಆಡಳಿತದಲ್ಲಿ ಹೈದರನಿಂದ ದಳವಾಯಿಗಳ ಬಲ ಕಡಿಮೆಗೊಳಿಸಿದರು. ಸಾಹಿತ್ಯಗಳನ್ನು ರಚಿಸಿದ್ದಾರೆ. ಅದರಲ್ಲಿ ಸೌಂದರ್ಯಕಾವ್ಯ, ನಂಜರಾಜ ಯಶೋಧಭೂಷಣ, ನಂಜರಾಜ ಯಶಸ್ಸಮೋಲ್ಲಾಸ ಚಂಪೂಗಳು ಸೇರಿದೆ. ನವಬೋರಾಜ ಎಂಬ ನಂಜನಕೀರ್ತಿ ಇರುವುದು ಇವರಿಗೆ. ಇವರ ಕಾಲದಿಂದ ೧೭೬೧ರಿಂದ ೧೭೯೯ರವರೆಗೆ ೩೮ ವರ್ಷಗಳು ಹೈದರ ಮತ್ತು ಟಿಪ್ಪು ಆಳ್ವಿಕೆ ಕಾಲದಲ್ಲಿ ಇಮ್ಮಡಿ ಕೃಷ್ಣನಂಜರಾಜ ಒಡೆಯರ, ಬೆಟ್ಟದ ಚಾಮರಾಜ ಒಡೆಯರು, ಖಾಸ ಚಾಮರಾಜ ಒಡೆಯರು. ಮುಮ್ಮಡಿ ಕೃಷ್ಣರಾಜ ಒಡೆಯರವರೆಗೆ ಮುಸ್ಲಿಂ ಪ್ರಭಾವದ ಆಡಳಿತ ಕಂಡುಬರುತ್ತದೆ.

ನಂಜರಾಜ ಒಡೆಯರು ಅನಂತರ ಬೆಟ್ಟದ ಚಾಮರಾಜ ಒಡೆಯರು ತರುವಾಯ ಚಾಮರಾಜ ಒಡೆಯರು ಈ ರಾಜರುಗಳ ಹೆಸರಿನಲ್ಲಿ ಹೈದರಾಲಿ, ಟಿಪ್ಪುಸುಲ್ತಾನ್ ಆಡಳಿತವನ್ನು ನಡೆಸಿದರು. ಮೈಸೂರು ಹುಲಿಯೆಂದೇ ಟಿಪ್ಪು ಪ್ರಖ್ಯಾತನಾದನು. ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೈಸೂರು ಪಟ್ಟಣವನ್ನು ರಾಜ್ಯದ ಅವಿಭಾಜ್ಯ ಹಂಗದಂತೆ ಆಳ್ವಿಕೆ ಮಾಡಿದ್ದರು. ಇವರ ಸಾಧನೆ ಈ ನಾಡಿಗೆ ಸೇರಿದೆ. ಇವರನ್ನೂ ಮೈಸೂರು ಅರಸರೆಂದೇ ಕರೆಯುತ್ತಿದ್ದರು ಲಲಿತಕಲೆಗೆ ಅಪಾರ ಪ್ರೋತ್ಸಾಹ ದೊರಕಿಸಿ ಕೊಟ್ಟಿದ್ದಾರೆ. ೧೮ನೇ ಶತಮಾನದ ಉತ್ತರಾರ್ಧ ಇಡಿ ಹಿಂದೂ ಇತಿಹಾಸದಲ್ಲೇ ಒಂದು ಮಹತ್ವದ ತಿರುವು ಮಧ್ಯಯುಗದಿಂದ ಆಧುನಿಕ ಕಾಲಕ್ಕೆ ಪಾದಾರ್ಪಣೆ ಮಾಡಿದ ಕಾಲ. ಹಳೆ ಅರಮನೆ ಕೆಡುವಿಸಿ ಹೊಸದಾಗಿ ನಜರ್‌ಬಾದ್‌ನಲ್ಲಿ ಅರಮನೆ ಕೋಟೆ ಕಟ್ಟಿಸಲು ಪ್ರಾರಂಭಿಸಿದ ಟಿಪ್ಪೂ ಮತ್ತೊಂದು ಅರಮನೆ (ಬಂಗಲೆ) ನಿರ್ಮಿಸಿದ್ದನು. ಹಾಗೆ ಇವನ ಕಾಲದಲ್ಲಿ ಕೈಗಾರಿಕೆ ಕ್ರಾಂತಿ ನಡೆಯಿತು. ತೋಟಗಾರಿಕೆ ಬೆಳವಣಿಗೆ ಹೆಚ್ಚಿತು. ದೇಶವಿದೇಶದಿಂದ ಕುಶಲಕರ್ಮಿಗಳನ್ನು ಕರೆಸಿ ಮೈಸೂರಿನಲ್ಲಿ ನೆಲೆಸುವಂತೆ ಮಾಡಿದನು. ಅನೇಕ ಅರಮನೆ ಕಟ್ಟಿಸಿದ್ದಾನೆ. ಅದರಲ್ಲಿ ಶ್ರೀರಂಗಪಟ್ಟಣ ಬೇಸಿಗೆ ಅರಮನೆ ಉತ್ತಮ ಉದಾಹರಣೆಯಂತೆ ಇದೆ. ಮುಂತಾದ ಅರಮನೆಗಳನ್ನು ಅಲ್ಲಿ ಕಟ್ಟಿಸಿ ಅದರಲ್ಲಿ ಭಿತ್ತಿ ಚಿತ್ರಗಳು ನಿರ್ಮಾಣ, ಕಾರ್ಯಕ್ಕೆ ಪ್ರೋತ್ಸಾಹಿಸಿದರಿಂದ ಕಲಾಚಟುವಟಿಕೆಗಳು ಹೆಚ್ಚಾಗಿ ನಡೆದಿರುತ್ತದೆ. ಅನೇಕ ಭಾವಚಿತ್ರಗಳು, ಅಲಂಕಾರಿಕ ನಕ್ಷೆಗಳ ಕಲಾಕೃತಿಗಳು ಇಂದು ಸಹ ಅಲ್ಲಿ ಕಂಡುಬರುತ್ತದೆ. ವಿದೇಶದಿಂದ ಅನೇಕ ಚಿತ್ರಕಲಾವಿದರನ್ನು ಇಲ್ಲಿಗೆ ಕರೆಸಿ ಕಲಾಕೃತಿ ನಿರ್ಮಾಣಕ್ಕೆ ಮುಖ್ಯ ಕಾರಣಕರ್ತನಾದನು.[೨೯]

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನವನ್ನು ವಸಾಹತು ಕಾಲಘಟ್ಟವಾಗಿ, ಅದರಲ್ಲಿ ಲಲಿತಕಲೆಗೆ ಪ್ರೋತ್ಸಾಹ ನೀಡಿರುವುದು ವಿಶೇಷವಾಗಿಯೂ ಗುರುತಿಸಬಹುದು. ಅದನ್ನೂ ಆಧುನಿಕ ಮೈಸೂರಿನ ಇತಿಹಾಸವೆಂದು ಕರೆಯಬಹುದಾಗಿದೆ. ಅದನ್ನು ಕ್ರಿ.ಶ. ಹದಿನೆಂಟನೆಯ ಶತಮಾನದ ಪ್ರಾರಂಭದಿಂದ ಇಪ್ಪತ್ತನೆಯ ಶತಮಾನದ ಅರ್ಧಭಾಗದವರೆಗೆ, ಸುಮಾರು ನೂರೈವತ್ತು ವರ್ಷಗಳ ಕಾಲ ಮೈಸೂರು ಸಮಸಂಸ್ಥಾನದಲ್ಲಿ

ಬ್ರಿಟೀಷರ ಚಕ್ರಾಧಿಪತ್ಯದೊಂದಿಗೆ ಸಾಗಿದೆ. ಆ ಕಾಲದಲ್ಲಿಯೂ ಲಲಿತಕಲೆಯಲ್ಲಿ ಚಿತ್ರಕಲೆಗೆ ಹೆಚ್ಚು ಬೆಳವಣಿಗೆ ಕಂಡಿದ್ದರ ಜೊತೆ ಅದರ ಕಲಾಪ್ರಕಾರಗಳು ಸಹ ಬೆಳವಣಿಗೆ ಕಂಡಿತು. ೧೭೯೯ರಿಂದ ದಿವಾನರುಗಳ ಆಡಳಿತವು ಪ್ರಾರಂಭವಾಗುತ್ತದೆ. ೧೮೩೧ರವರೆಗೆ ೩೨ ವರ್ಷಗಳು ಬ್ರಿಟೀಷರ ಅಧೀನದಲ್ಲಿ ಆಶ್ರಿತರಾಜರಾಗಿ ಆಳ್ವಿಕೆ ಮಾಡಿದರು. ೧೮೩೧ರಿಂದ ೧೮೮೧ರವರೆಗೆ ೫೦ ವರ್ಷಗಳಷ್ಟು ಬ್ರಿಟಿಷ್ ಕಮೀಷನರ ಆಳ್ವಿಕೆ ನಡೆಯುತ್ತದೆ. ಅದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಜಯಚಾಮರಾಜ ಒಡೆಯರು ಆಳ್ವಿಕೆ ಮಾಡುತ್ತಾರೆ.

ಟಿಪ್ಪುಸುಲ್ತಾನ ಮರಣ ನಂತರ ಮೈಸೂರು ರಾಜ್ಯವನ್ನು ನಾಲ್ಕು ಭಾಗವಾಗಿ ವಿಂಗಡಿಸಿ, ಒಂದು ಭಾಗವನ್ನು ಮೈಸೂರು ಸಂಸ್ಥಾನಕ್ಕೆ ಬಿಟ್ಟು ಕೊಟ್ಟರು. ಶ್ರೀರಂಗಪಟ್ಟಣದಿಂದ ನಡೆಯುತ್ತಿದ್ದ ಆಳ್ವಿಕೆ ಮತ್ತೆ ಮೈಸೂರಿನಿಂದ ನಡೆಯತೊಡಗಿತ್ತು. ಸಿಬಿ, ಶ್ರವಣಬೆಳಗೊಳ, ಶ್ರೀರಂಗಪಟ್ಟಣ ಮತ್ತು ಮೈಸೂರಿನ ಜಗನ್ಮೋಹನ ವಸ್ತುಸಂಗ್ರಹಾಲಯ, ಹಿರಿಯೂರು, ಗುಬ್ಬಿ, ಚಾಮರಾಜನಗರ, ತಲಕಾಡು, ಬೊಪ್ಪಗೌಡನಪುರ ಮುಂತಾದ ಸ್ಥಳಗಳಲ್ಲಿ ಇವರು ಭಿತ್ತಿ ಚಿತ್ರಕಲೆ ರಚಿಸಲು ಪ್ರೋತ್ಸಾಹಿಸಿದ್ದಾರೆ. ಇವರ ಕಾಲದಲ್ಲಿ ಲಲಿತಕಲೆಗೆ ಅಪಾರ ಪ್ರೋತ್ಸಾಹದಿಂದ ದೇವಾಲಯಗಳು ಭಿತ್ತಿ ಚಿತ್ರಗಳು ರಚನೆಗೊಂಡಿವೆ. ದಿವಾನ್ ಪೂರ್ಣಯ್ಯನವರ ಆಡಳಿತ ಕಾರ್ಯದಿಂದ ಅನೇಕ ವೈಷ್ಣವ ಮಹಾಲಯಗಳ ಸ್ಥಾಪನೆ ಮಾಡಿದ್ದರು. ಅಲ್ಲಿ ಶಿಲ್ಪಮೂರ್ತಿ, ವಾಸ್ತುಮೂರ್ತಿಗಳನ್ನು ಏತೇಚ್ಛವಾಗಿ ಸೃಷ್ಟಿಯಾದವು ಅರಮನೆಯ ಆವರಣದಲ್ಲಿ ಶ್ವೇತವರಾಹ ದೇವಾಲಯ, ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಗಳ ಸ್ಥಾಪನೆ ಅಲ್ಲಿ ಭಿತ್ತಿ ಚಿತ್ರಕಲೆಯ ರಚನೆಗೂ ಇವರದೆ ಸಹಾಯ ಹಸ್ತ, ಕಲೆ, ಸಾಹಿತ್ಯ, ಸಂಸ್ಕೃತಿ ದೃಷ್ಟಿಯಿಂದ ಸಂಕ್ರಮಣಕಾಲ, ಸ್ವತಃ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾಧಿವದಿಯಲ್ಲೇ ಸುಮಾರು ೬೦ ಕೃತಿಗಳನ್ನು ರಚಿಸಿದ್ದಾರೆ. ಶಿವತತ್ವನಿಧಿ, ಸೌಗಂಧಿಕ ಪರಿಣಯ, ಕೃಷ್ಣಕಥಾ ಸಾರಸಂಗ್ರಹ, ಹಾಗೆ ಸಂಗೀತಕ್ಕೆ ಪ್ರೋತ್ಸಾಹದಿಂದ ಮೂಗೂರು ಸುಬ್ಬಣ್ಣ ಸದಾಶಿವರಾಯ, ವೀಣೆಶೇಷಣ್ಣ, ವೀಣೆಶಾಮಣ್ಣ ಮುಂತಾದವರು. ಕವಿಗಳು ಅಳಿಯ ಲಿಂಗರಾಜ, ದೇವಲಾಪುರದ ನಂಜುಂಡ, ಕೆಂಪುನಾರಾಯಣ ಮುಂತಾದ ಕವಿಗಳಿಗೆ ಆಶ್ರಯ ಚಾಮುಂಡೇಶ್ವರಿ ದೇವಾಲಯ, ನಂಜನಗೂಡಿನ ದೇವಾಲಯಕ್ಕೆ ಗೋಪುರ, ಕೊಡುಗೈ ದೊರೆಗಳಾಗಿದ್ದ ಇವರಿಗೆ "ಕೃಷ್ಣರಾಜಭೂಪ, ಮನೆಮನೆಗೆ ದೀಪ" ಎಂಬ ಪಡೆನುಡಿ ಹುಟ್ಟಿಕೊಂಡಿತ್ತು.[೬೦]

ಮುಮ್ಮಡಿಯವರ ಕಾಲದಲ್ಲಿ ಮರದ ಅರಮನೆ ನಿರ್ಮಾಣ, ಅದು ಕೆಳದಿ ಶಿವಪ್ಪನಾಯಕನ ಅರಮನೆಯಂತೆ ಮಾದರಿಯಲ್ಲಿ ಸರಳ ಸುಂದರವಾಗಿ ನಿರ್ಮಾಣವಾಗಿತ್ತು. ಐದು ಅಂತಸ್ತು, ಹೊರಭಾಗ ಸುಂದರ ಕೆತ್ತನೆಗಳಿಂದ ಕೂಡಿದ್ದು, ದರ್ಬಾರ್ ಸಭಾಂಗಣ ಬಣ್ಣಬಣ್ಣದ ಚಿತ್ರಗಳಿಂದಲೂ ಚಿನ್ನದ ಮುಲಾಮಿನಿಂದಲೂ ಅಲಂಕೃತವಾಗಿತ್ತು. ಸರಸ್ವತಿಭಂಡಾರ, ಅಂತಪುರ ಅದರಲ್ಲಿ ಕೆಲವು ಯುರೋಪಿಯನ್ ಕಲಾವಿದರ ಚಿತ್ರಗಳಿದ್ದವು. ಬಾಗಿಲುಗಳಲ್ಲಿ ಹಸ್ತಿದಂತಹ ಕೆತ್ತನೆಗಳಿದ್ದವು

ಪರಕಾಲಮಠಕ್ಕೆ ಅನೇಕ ಕಲಾಕೃತಿಗಳನ್ನು ಉಡುಗೊರೆ ನೀಡಿದ್ದಾರೆ.[೩೧] ಕಾರಂಜಿ ಅರಮನೆ, ಚೆಲುವಾಂಬ ವಿಲಾಸ ಅರಮನೆ, ಜಗನ್ಮೋಹನ ಅರಮನೆ, ವಸಂತ ಮಹಲ್ ಅರಮನೆ, ಲೋಕರಂಜನ ಮಹಲ್, ಈ ಅರಮನೆಗಳ ಸ್ಥಾಪನೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಹಾಗೂ ಚಾಮರಾಜ ಒಡೆಯರ ಕಾರಣಕರ್ತರಾಗಿದ್ದಾರೆ.

ಅರಮನೆ ಮುಮ್ಮಡಿಯವರ ನಂತರ ಬಂದ ಚಾಮರಾಜೇಂದ್ರರು ದಿವಾನ್ ರಂಗಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರ ಆಡಳಿತ ನೆರವಿನಿಂದ ಪ್ರಜಾಪ್ರತಿನಿಧಿಸಭೆ, ಅನೇಕ ಶಾಲೆಗಳು ತೆರೆದರು. ಅವುಗಳಲ್ಲಿ ಸಂಸ್ಕೃತಶಾಲೆ, ಫಸ್ಟ್‌ಗ್ರೇಡ್ ಕಾಲೇಜ್, ಮಹಾರಾಣಿ ಕಾಲೇಜ್, ಇಂಗ್ಲೀಷ್ ಪಾಠಶಾಲೆ ಪುರಾತತ್ವ ಇಲಾಖೆ, ಭೂಗರ್ಭ ಇಲಾಖೆ ಮುಂತಾದವುಗಳನ್ನು ತೆರೆದಿದ್ದಾರೆ. ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ ಜೊತೆಗೆ ಅನೇಕ ವಿದ್ವಾಂಸರನ್ನು ಪೋಷಿಸಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ದೀರ್ಘಕಾಲ ಆಳಿದ ಯದುವಂಶೀಯ ರಾಜರಲ್ಲಿ ನಾಲ್ವಡಿ ಅವರು ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಕೃಷ್ಣರಾಜಸಾಗರ, ದಸರಾ ವಸ್ತುಪ್ರದರ್ಶನ, ಅಂಬಾವಿಲಾಸ ಅರಮನೆ ಅದರಲ್ಲಿ ಕಲಾಸೌಂದರ್ಯ. ಸುಂದರ ಮೂರ್ತಿರೂಪದ ವಾಸ್ತುಶಿಲ್ಪ, ನಕ್ಷಾ ಅಲಂಕಾರ ಮತ್ತು ಕಲ್ಯಾಣಮಂಟಪ ಇತ್ಯಾದಿಗಳನ್ನು ಹಾಗೂ ಕರಿಕಲ್ಲು ತೊಟ್ಟು, ನವಿಲುತೊಟ್ಟಿ ಮತ್ತು ವಸ್ತುಪ್ರದರ್ಶನಗಳು, ಭಿತ್ತಿ ಚಿತ್ರಗಳು ಮರದ ಕೆತ್ತನೆ, ಗಾಜಿನ ಚಿತ್ರಕಲೆ ಮುಂತಾದ ಪ್ರಕಾರದ ಚಿತ್ರಕಲೆಯ ವಿವಿಧಗಳು ಇಲ್ಲಿ ಕಂಡುಬರುತ್ತದೆ. ನಾಲ್ವಡಿಯರ ಕಾಲದಲ್ಲಿಯೇ ಸಾಮಾನ್ಯರಿಗೆ ವಿದ್ಯಾಭ್ಯಾಸ, ಲಲಿತಕಲೆಗೆ ತುಂಬ ಪ್ರೋತ್ಸಾಹ ನೀಡಿ, ಕಲಾವಿದರಿಗೆ ಆಶ್ರಯದಾತರಾಗಿದ್ದರು.

ಆಧುನಿಕ ಮೈಸೂರು ಕಟ್ಟಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸೇರುತ್ತದೆ. ಗಾಂಧೀಜಿ ಇವರಿಗೆ ರಾಜರ್ಷಿ ಎಂದು ಕರೆದರು. ರಾಮರಾಜ್ಯದ ಪ್ರತಿಫಲನ ಕಂಡ ಬಿ.ಎಂ.ಶ್ರೀಯವರು ಪುಣ್ಯದರಸು, ಧರ್ಮದಾಳು, ಕನ್ನಡಿಗರ ಮಯಿರಮುಡಿ ಎಂದು ಕರೆದಿದ್ದಾರೆ. ಮೈಸೂರು ವಿವಿಗೆ ಮೊದಲನೆಯ ಕುಲಾಧಿಪತಿಯಾಗಿ ಡಾಕ್ಟರ್ ಆಫ್ ಲಾ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ಇವರ ಆಸ್ಥಾನದಲ್ಲಿ ವೀಣೆಶೇಷಣ್ಣ, ಭಕ್ಷಿಸುಬ್ಬಣ್ಣ, ಮೈಸೂರು ವಾಸುದೇವಾಚಾರ್ಯ ಸಂಗೀತ ಕಲಾವಿದರು. ಜಟ್ಟಿತಾಯಮ್ಮ, ಸುಂದರಮ್ಮ ಮುಂತಾದ ನಾಟ್ಯಕಲಾವಿದೆಯರಿಗೆ ಆಶ್ರಯದಾತರಾಗಿ ಪ್ರೋತ್ಸಾಹ ನೀಡಿದರು.[೩೨] ಜಯಚಾಮರಾಜೇಂದ್ರ ಒಡೆಯರ್ ಅವರ ಕಾಲವು ಸಂಕ್ರಮಣ ಕಾಲವಾಗಿದೆ. ಮೈಸೂರು ಮತ್ತು ಮದರಾಸಿನ ರಾಜ್ಯಪಾಲರಾಗಿದ್ದು ಇವರು ಬಹುಕಾಲ ವನ್ಯಜೀವಿಗಳ ಭಾರತೀಯ ಮಂಡಳಿಯ ಅಧ್ಯಕ್ಷರಾಗಿದ್ದರು. ಲಲಿತಮಹಲ್, ರಾಜೇಂದ್ರ ವಿಲಾಸ ಅರಮನೆ, ಚಾಮುಂಡಿ ವಿಹಾರ, ಚಿತ್ತರಂಜನ್ ಮಹಲ್ ಸ್ಥಾಪನೆ ಮತ್ತು ಭಾರತದ ಸ್ವಾತಂತ್ರ್ಯಕ್ಕೆ ಮೊದಲು ಒಪ್ಪಿಗೆ ಕೊಟ್ಟಿದ್ದು ಅಲ್ಲದೆ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಅಪಾರ ಆಸಕ್ತಿ ತೋರಿಸಿದ್ದಾರೆ. ಜಯಚಾಮರಾಜೇಂದ್ರ ಗ್ರಂಥರತ್ನಮಾಲೆ ಎಂಬ ಸ್ವತಃ ಪ್ರಕಾಶನ ಅಡಿಯಲ್ಲಿ

ವೇದ, ಪುರಾಣ ಹಾಗೂ ಗ್ರಂಥಭಂಡಾರವನ್ನು ರೂಪಿಸಿದ್ದರು. ತತ್ವಶಾಸ್ತ್ರ, ಸೌಂದರ್ಯಶಾಸ್ತ್ರ, ರಸಶಾಸ್ತ್ರ, ತರ್ಕಶಾಸ್ತ್ರ ಮುಂತಾದವುಗಳ ಕುರಿತಾಗಿದೆ. ಕರ್ನಾಟಕ ಸಂಗೀತದೆಡೆ ಒಲವು, ಪಾಶ್ಚಾತ್ಯ ಸಂಗೀತ ಕೃತಿಸಂಗ್ರಹಾಲಯ, ಕ್ವೀನ್ಸ್ ಲ್ಯಾಂಡ್ ವಿವಿಯಿಂದ ಡಿ.ಲಿಟ್, ಬನಾರಸ್ ವಿವಿಗೌರವ ಡಾಕ್ಟರ್ ಆಫ್ ಲಾ. ವಿದೇಶಿ ಬಿರುದುಗಳು ಸಹ ಬಂದಿರುತ್ತದೆ. ಇವರು ಕೋಟೆಯೊಳಗಿನ ಗಾಯತ್ರಿ ದೇವಾಲಯ, ಭುವನೇಶ್ವರಿ ಮತ್ತು ಹೊರಗೆ ವಿಶ್ವೇಶ್ವರ ಮತ್ತು ಶಿವಕಾಮೇಶ್ವರಿ ದೇವಸ್ಥಾನಗಳು ಕಟ್ಟಿಸಿದ್ದರು. ತ್ರಿಣಯನೇಶ್ವರನಿಗೆ, ಚಾಮುಂಡೇಶ್ವರಿ ದೇವಾಲಯದ ಮಹಾದ್ವಾರಕ್ಕೆ ನಕಾಶೆ ಕೆಲಸ ಬೆಳ್ಳಿ ಹೊದಿಕೆ, ಚಾಮರಾಜೇಮದ್ರ ಮೃಗಾಲಯ ಮತ್ತು ಅನೇಕ ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ್ದಾರೆ.[೩೩]

ಜಯಚಾಮರಾಜೇಂದ್ರ ಕಲ್ಚರಲ್ ಅಕಾಡೆಮಿ, ಮೈಸೂರು ಮ್ಯೂಸಿಕ್ ಅಸೋಸಿಯೇಷನ್, ಜಯಚಾಮರಾಜೇಂದ್ರ ಎಜುಕೇಷನಲ್ ಟ್ರಸ್ಟ್, ಇವರು ಕಲಾಕೃತಿಸಂಗ್ರಹಾಲಯದ ಜೊತೆಗೆ ಇವರು ಪ್ರಜಾಸೇವೆ ಮಾಡುತ್ತಿದ್ದಾರೆ. ವಿವಿಧ ಕಲಾಕೃತಿಗಳು, ವೇಷಭೂಷಣಗಳು ಯುದ್ಧಗಳಲ್ಲಿ ಉಪಯೋಗಿಸುತ್ತಿದ್ದ ಆಯುಧಗಳು, ಛಾಯಾಚಿತ್ರಗಳು, ತಮ್ಮ ಖಾಸಗಿ ಸಂಗ್ರಹಾಲಯವೊಂದನ್ನು ಅರಮನೆಯ ಹಿಂಭಾಗದ ಕರಿಕಲ್ಲು ತೊಟ್ಟಿಯಲ್ಲಿ ಶ್ರೀಕಂಠದತ್ತರು ಸಂಗ್ರಹಿಸಿ, ಅರಮನೆಯ ಪರಂಪರೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಮಾಡುತ್ತಿದ್ದಾರೆ. ಸಂಸ್ಕೃತಿ ಪರಂಪರೆಗಳನ್ನು ಉಳಿಸಿ ಬೆಳೆಸುವುದರಲ್ಲಿ ಅವರಿಗೆ ವಿಶೇಷ ಕಾಳಜಿ. ಇಂದಿನ ಸಂವಿಧಾನಕ್ಕೆ ಅನುಗುಣವಾಗಿ ಅವರು ಮಹಾರಾಜರಲ್ಲ ಆದರೆ ಇಂದಿನ ಖಾಸಗಿ ದರ್ಬಾರು ಹಿಂದಿನ ನವರಾತ್ರಿಯ ವಿಧಿ ವಿಧಾನಗಳ ಪ್ರಕಾರಗಳನ್ನು ಇಂದು ಸಹ ನಡೆಸುತ್ತಿದ್ದಾರೆ.

ಮೈಸೂರು ಸಾಂಸ್ಕೃತಿಕ ಪರಿಸರವು ಪ್ರಾಚೀನತೆಯಿಂದ ಪುರಾಣ ಹಾಗೂ ಐತಿಹಾಸಿಕ ಕಾಲದಲ್ಲಿ ವಿಜೃಂಭಿಸಿದೆ. ಅದಕ್ಕೆ ಇಲ್ಲಿನ ಅರಸರುಗಳು ಲಲಿತಕಲೆಗೆ ಮರೆಯಲಾಗದಂತಹ ಶಾಶ್ವತವಾದ ದೇಶಿಯತನ ಪ್ರತಿಬಿಂಬಿಸುವ ಕಲಾಸಂಪತ್ತನ್ನು ಕೊಡುಗೆ ನೀಡಿ, ಕಲಾವಿದರನ್ನು ಪೋಷಿಸಿ, ಕಲಾಕೃತಿಗಳನ್ನು ಸಂರಕ್ಷಿಸಿ ದೇಶದ ಆಸ್ತಿಗೆ ಮೌಲ್ಯ ತಂದುಕೊಟ್ಟಿದ್ದಾರೆ. ಹಾಗೆ ಅನೇಕ ಚಿತ್ರಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸಿದರಿಂದ ಇಲ್ಲಿ ಕಲೆಗಳು ಬೆಳೆಯಲು ಕಾರಣ ಮಾತೃಗಳಾಗಿದ್ದಾರೆ.

ಲಲಿತಕಲೆಯಲ್ಲಿ ಚಿತ್ರಕಲೆ ಮತ್ತು ಅದರ ಪ್ರಮುಖ ಪ್ರಕಾರವಾದ ಭಿತ್ತಿ ಚಿತ್ರಕಲೆಯು ದೇವಾಲಯ, ಅರಮನೆ, ಮಂಟಪ, ರಂಗಮಂದಿರ, ಚರ್ಚ್‌ಗಳಲ್ಲಿ ಭಿತ್ತಿಚಿತ್ರ ರೂಪದಲ್ಲಿ ರಾರಾಜಿಸುತ್ತಿದೆ. ಅದರಲ್ಲಿ ಭಾಗವತ, ರಾಮಾಯಣ, ಮಹಾಭಾರತ, ಅಲಂಕಾರಿಕ ಸ್ತ್ರೀಯರ ಚಿತ್ರಗಳು, ವಿವಿಧ ನಕ್ಷೆಗಳು, ಒಣಭಿತ್ತಿಯ ರಚನೆಯಲ್ಲಿ ಚಿತ್ರಿಸಿದ್ದಾರೆ. ಅವು ದೇಶಿಯ ಪ್ರತೀಕದಂತೆ ಪ್ರತಿಫಲಿಸುತ್ತದೆ. ನೈಸರ್ಗಿಕ ವರ್ಣಗಳ ಬಳಕೆ, ಪ್ರಾಂತ್ಯದ ಶೈಲಿಯ ಸೊಬಗು, ತಮ್ಮ ದೀರ್ಘಕಾಲದ ಆಳ್ವಿಕೆಯಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ಆಗಿನ ಮೈಸೂರು ಸಂಸ್ಥಾನದಲ್ಲಿದ್ದ ಪ್ರಾಂತ್ಯಗಳು ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಚಿಕ್ಕಮಗಳೂರು,

ಶಿವಮೊಗ್ಗ, ಹಾಸನ, ಚಿತ್ರದುರ್ಗ ಈ ಸ್ಥಳಗಳಲ್ಲಿ ಭಿತ್ತಿಚಿತ್ರಕಲೆ ಕಾರ್ಯ ನಡೆದಿರುತ್ತದೆ. ಆದರೆ ಈಗಿನ ಪರಿಸ್ಥಿತಿಯ ರಾಜಕೀಯ ಹಾಗೂ ಆಧುನಿಕ ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯಲ್ಲಿ ನಗರ ಹಾಗೂ ತಾಲೂಕುಗಳಲ್ಲಿ ಭಿತ್ತಿ ಚಿತ್ರಕಲೆಯ ನೆಲೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅವು ಸುತ್ತೂರು, ಮುಡುಕುತೊರೆ, ಬೈಲುಕುಪ್ಪೆ, ಟಿ.ನರಸಿಪುರ ಸ್ಥಳಗಳಲ್ಲಿ ಭಿತ್ತಿ ಚಿತ್ರಗಳು ಕಂಡು ಬರುತ್ತಿದ್ದವು ಆದರೆ ಇಂದಿಲ್ಲ. ಭಿತ್ತಿ ಚಿತ್ರ ಸಿಕ್ಕಂತವುಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ೧೭೯೯ರಿಂದ ನಂತರ ಯೇಥೇಚ್ಚವಾಗಿ ಭಿತ್ತಿ ಚಿತ್ರಗಳನ್ನು ನಿರ್ಮಿಸಿರುತ್ತಾರೆ. ಚಿತ್ರಕಲೆಯು ಪ್ರಾರಂಭದಲ್ಲಿ ಅರಮನೆಗಳಲ್ಲಿ ನಂತರ ದೇವಾಲಯಗಳಲ್ಲಿ ಇದೆ. ಆಧುನಿಕ ಕಾಲದಲ್ಲಿ ಟಿಪ್ಪು ಮತ್ತು ಎಲ್ಲಾ ಒಡೆಯರ ವಂಶಸ್ಥರ ಅರಸರುಗಳು ಅರಮನೆ ದೇವಾಲಯಗಳಲ್ಲಿ ಚಿತ್ರಕಲೆಯು ವಿಜಯನಗರದ ನಂತರ ಮೈಸೂರಿನಲ್ಲಿ ಸುತ್ತಮುತ್ತ ಭಿತ್ತಿ ಚಿತ್ರಗಳು ಹೆಚ್ಚು ಕಂಡುಬರುತ್ತವೆ.

ಇಲ್ಲಿನ ಐತಿಹಾಸಿಕ ಕಾಲಗಳಲ್ಲಿಯೇ ಹಸ್ತಪ್ರತಿಗಳು ಸಹ ಇರುತ್ತದೆ. ಅದರಲ್ಲಿ ಚಿತ್ರಕಲೆಯೂ ಸಹ ಕಂಡುಬರುತ್ತದೆ. ಹಸ್ತಪ್ರತಿಯೂ ತಾಳೆಗರಿ, ಕಾಗದ, ರಟ್ಟು ಮತ್ತು ಕಾಗದದ ಜೊತೆ ಬಟ್ಟೆಯಲ್ಲಿಯೂ ಇವು ಇರುತ್ತದೆ. ಹೆಚ್ಚಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಹಾಗೂ ಅಲಂಕಾರಿಕ ನಕ್ಷೆಯನ್ನು ಇವು ಹೊಂದಿರುತ್ತದೆ ಅನೇಕ ಶಾಸ್ತ್ರ, ಗ್ರಂಥಗಳಲ್ಲಿ ಸೌಂದರ್ಯ, ತತ್ವಶಾಸ್ತ್ರ, ಪುರಾಣಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ರೇಖಾಚಿತ್ರಗಳು ಇದೆ.

ಮೈಸೂರು ಭಾಗದಲ್ಲಿ ಧಾರ್ಮಿಕ ಐತಿಹಾಸಿಕವು ದೀರ್ಘವಾದ ಹಿನ್ನೆಲೆಯಿಂದ ಹಸ್ತಪ್ರತಿ ಕಲೆಯು ಅಷ್ಟೇ ಹೇರಳವಾಗಿ ತುಂಬಿದೆ. ಅವುಗಳು ಅರಮನೆಯ ಸರಸ್ವತಿ ಭಂಡಾರದಲ್ಲಿ, ಓರಿಯಂಟಲ್ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಮತ್ತು ಸಂಸ್ಕೃತ ಪಾಠ ಶಾಲೆಯಲ್ಲಿ ಮುಖ್ಯವಾಗಿ ಹಸ್ತಪ್ರತಿಗಳು ಶೇಖರಣೆಗೊಂಡಿದೆ. ಅದು ಮಹಾರಾಜರ ಕಾಳಜಿಯಿಂದ ಇಂದು ನಮಗೆಲ್ಲರಿಗೂ ಸಹ ಪ್ರಾಚೀನ ಮೈಸೂರು ಚಿತ್ರಕಲೆಯ ಪ್ರಕಾರಗಳಲ್ಲಿ ಒಂದು. ಮೈಸೂರು ಪ್ರಾಂತ್ಯದಲ್ಲಿ ಪರಂಪರೆಯಿಂದ ಬೆಳೆದು ಬಂದಿದೆ. ಅರಸರ ಪ್ರೋತ್ಸಾಹದಿಂದ ಬೆಳವಣಿಗೆ ಕಂಡಿದೆ. ಇತ್ತೀಚಿನ ಕಾಲಮಾನದಲ್ಲಿ ತಾಂತ್ರಿಕ, ಯಾಂತ್ರಿಕ ಮತ್ತು ರಾಜಕೀಯವಾಗಿ ಬೆಳವಣಿಗೆಯಿಂದ ಇದು ಕುಂಠಿತಗೊಂಡಿತ್ತು.

ಹಾಗೇ ಭಾರತೀಯ ಕಲೆಯಲ್ಲಿ ಗಂಜೀಫಾ ಕಲೆಯು ಅತಿ ಪ್ರಾಚೀನತೆಯಿಂದಲೂ ಇದೆ. ಅದು ಧಾರ್ಮಿಕ, ಕ್ರೀಡೆಯ ಮನೋರಂಜನೆಯ ಹಿನ್ನೆಲೆಯಲ್ಲಿ ಕೂಡಿದೆ. ಈ ಕಲೆಯೂ ಮೈಸೂರು ಪ್ರಾಂತ್ಯದಲ್ಲಿಯೂ ರಾಜರ ಪ್ರೋತ್ಸಾಹದ ನೆರಳಿನಲ್ಲಿ ಹೆಚ್ಚಾಗಿ ಬೆಳವಣಿಗೆ ಕಂಡಿದೆ. ಇದರಲ್ಲಿ ಅನೇಕ ರೀತಿಯ ಪ್ರಕಾರಗಳು ಇದೆ. ದೇಶಿಯವಾಗಿ ಜನಪದ ಮತ್ತು ಸಂಪ್ರದಾಯ ಹಾಗೂ ಸಮಕಾಲೀನ ನೆಲೆಯ ಅಂಶದಲ್ಲಿ ರಚನೆಯಾಗಿದೆ. ಅವುಗಳು ಅರಮನೆ ಸಂಗ್ರಹಾಲಯದಲ್ಲಿ, ಖಾಸಗಿ ಮ್ಯೂಜಿಯಂಗಳಲ್ಲಿ, ಶ್ರೀಮಂತ ಮಹಲ್‌ಗಳಲ್ಲಿ ಕಂಡುಬರುತ್ತದೆ. ಈ ಪ್ರಾಂತ್ಯದಲ್ಲಿ

ಒಂದು ಕಲಾಪರಂಪರೆಯಾಗಿ ಇಂದಿಗೂ ಸಹ ಚಿತ್ರ ರಚಿಸುವ ಕಲಾವಿದರು ಕಂಡುಬರುತ್ತಾರೆ.

ಆ ಕಲೆಗಳಂತೆ ಆಧುನಿಕ ಕಾಲದಲ್ಲಿ ಈ ಪ್ರಾಂತ್ಯದಲ್ಲಿ ಗಾಜಿನ ಚಿತ್ರಕಲೆಯೂ ಒಂದು ಚಿತ್ರಕಲಾ ಪರಂಪರೆಯಾಗಿ ಬೆಳೆದು ಸಾಗುತ್ತಿದೆ. ಅದು ಪಾಶ್ಚಾತ್ಯರ ಲಲಿತಕಲೆಯ ಪ್ರಭಾವದಿಂದ ಘನವಾದ ದ್ರವ ಮಾಧ್ಯಮವಾಗಿದ್ದು ಒಂದು ಪಾರದರ್ಶಕ ಗುಣಹೊಂದಿದೆ. ಇದರ ಮೇಲೆ ಒಂದು ರೀತಿಯಲ್ಲಿ ವಿಭಿನ್ನ ಚಿತ್ರಕಲೆ ರಚಿಸುತ್ತಾರೆ. ಇಲ್ಲಿನ ರಾಜರ ಆಸೆಯಂತೆ ಅರಮನೆ, ಮಹಲ್‌ಗಳಲ್ಲಿ ಚರ್ಚ್‌ಗಳಲ್ಲಿ ಹೆಚ್ಚಾಗಿ ಗಾಜಿನ ಚಿತ್ರಗಳು ಕಂಡುಬರುತ್ತದೆ. ಅದರಲ್ಲಿ ದೇಶಿಯ ಸಾಂಪ್ರದಾಯಿಕ ಚಿತ್ರಗಳು, ಆಧುನಿಕ ಚಿತ್ರಗಳು, ಅಲಂಕಾರಿಕ ನಕ್ಷೆಗಳು, ರಿಯಾಲಿಸ್ಟಿಕ್ ಮಾದರಿ ಹೊಂದಿದ ಗಾಜಿನ ಚಿತ್ರಗಳು ಈ ಪ್ರಾಂತ್ಯದಲ್ಲಿ ಇದೆ ಹಾಗೂ ಒಂದು ಉದ್ಯಮವಾಗಿ, ಸಾರ್ವತ್ರಿಕ ಪ್ರಮುಖ ಕಲೆಯಾಗಿದೆ. ವರ್ಣ ಮತ್ತು ಎಚ್ಚಿಂಗ್ ಮತ್ತು ತಂತ್ರದಿಂದ ಚಿತ್ರಕಲೆ ರಚಿಸುತ್ತಾರೆ.

ಬ್ರಿಟಿಷ್‌ರ ಆಡಳಿತ ಚುಕ್ಕಾಣಿಯಲ್ಲಿ ಅನೇಕ ಸುಧಾರಣೆಯ ಜೊತೆ ಬದಲಾವಣೆಗಳು ಆದವು. ಅದರಲ್ಲಿ ಶಿಕ್ಷಣ ಕ್ರಾಂತಿಯು ಒಂದು. ಅದರಲ್ಲಿ ಚಿತ್ರಶಾಲೆ ಸೇರಿದೆ. ಅದರ ಪಠ್ಯಕ್ರಮದ ಜೊತೆಗೆ ಅನೇಕ ಕಲಾಶಾಲೆ ತೆರೆದರು. ಶಾಲೆಯಲ್ಲಿ ಕರಕುಶಲ ಕಲೆಯ ಶಿಕ್ಷಣವನ್ನು ನೀಡುತ್ತಿದ್ದರು. ಅದರಲ್ಲಿ ಅವರ ಪ್ರಭಾವ, ಪ್ರೇರಣೆಯಿದ್ದು, ರಾಜರು ಸಹ ಶಿಕ್ಷಣದ ಮಹಾತ್ವಾಕಾಂಕ್ಷೆಯ ಫಲವಾಗಿ ಮೈಸೂರು ಪ್ರಾಂತ್ಯದಲ್ಲಿ ರಾಜರ ಆಸಕ್ತಿಯಿಂದ ಹಲವು ಕಲಾಶಾಲೆ ಸ್ಥಾಪನೆ ಮಾಡಿದರು. ಇದರ ಪ್ರೇರಣೆಯಿಂದ ಕಲಾವಿದರು ಮತ್ತು ಕಲಾಚಟುವಟಿಕೆಗಳು ಈ ಭಾಗದಲ್ಲಿ ನಡೆಯಲು ಪ್ರಾರಂಭವಾಯಿತು. ಮುಂದಿನ ವರ್ಷಗಳಲ್ಲಿ ಖಾಸಗಿಯಾಗಿಯೂ ಅನೇಕ ಕಲಾಶಾಲೆಗಳು ಸ್ಥಾಪನೆಯಾಗಿದೆ ಈ ನೆಲೆಯಲ್ಲಿ, ಖಾಸಗಿ ಕಲಾಶಾಲೆ ತಲೆಯೆತ್ತಿ ಕಲಾಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಲು ಅನೇಕ ಕಲಾವಿದರನ್ನು ಇಲ್ಲಿ ಹೊರತಂದಿರುತ್ತಾರೆ. ಇದರಿಂದ ವಿಭಿನ್ನ ಕಲಾಕೃತಿಗಳು ಕಲಾಪ್ರಪಂಚದಲ್ಲಿ ಅಮರವಾಗಿ ಪ್ರಸಿದ್ಧಿಯಾಗಿದೆ. ಇಲ್ಲಿ ಚಿತ್ರಕಲೆಯ ಹಲವು ಪ್ರಕಾರಗಳ ಬಗೆ ಇಲ್ಲಿಯೂ ಶಿಕ್ಷಣ ನೀಡಿರುತ್ತಾರೆ. ಆಧುನಿಕತೆಯಲ್ಲಿ ದೇಶಿಯ ವಿದೇಶಿಯ ಸಾರವನ್ನು ಸಾರುವ ಶಿಕ್ಷಣ ನೀಡಿದ್ದರೂ ಕಲಾವಿದರು ತಮ್ಮ ಶ್ರೇಷ್ಠತೆಯನ್ನು ಕಾಪಾಡಿಕೊಂಡು ಬೆಳೆದಿದ್ದಾರೆ.

ಚಿತ್ರಕಲೆಯ ಅನೇಕ ಕಲಾಪ್ರಕಾರಗಳು ಮೈಸೂರು ಜಿಲ್ಲೆಯಲ್ಲಿ ಹೇರಳವಾಗಿ ಬೆಳೆದಿದೆ. ಅದು ಅನೇಕ ಪ್ರಸಿದ್ಧ ಕಲೆಯ ಋತುವಿನ ಕಾಲದಲ್ಲಿಯೇ ಅವು ಈ ನಾಡಿನ ನೆಲೆಯಲ್ಲಿ ಬೆಳೆದು ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದು ಅನೇಕ ಕಲಾವಿದರುಗಳು ಹೆಸರು ಸಹ ಮಾಡಿದ್ದಾರೆ. ನವ್ಯತೆಯಲ್ಲಿ ಕೈಗಾರಿಕೆಯ ಕ್ರಾಂತಿಯ ತರಾತುರಿಯ ಕಾಲದ ಸುಳಿಯಲ್ಲಿ ಚಿತ್ರಕಲೆಯ ಪ್ರಕಾರಗಳು ನಶಿಸುತ್ತಿದೆ. ಆದರು ಇಂದು ಅಲ್ಲಲ್ಲಿ ಜೀವಂತಿಕೆಯ ಕಲೆಯ ಸೆಲೆಯಾಗಿ ಕಂಡುಬರುತ್ತಿವೆ. ಆ ಕಲೆಗಳಿಗೂ ಸಹ ರಾಜಾಶ್ರಯ ದೊರಕಿ ಒಂದು ಕಾಲದಲ್ಲಿ ವಿಜೃಂಭಿಸಿತ್ತು. ಆದರೆ ಇಂದು

ಅದು ಕೈತಪ್ಪಿ ಕಲಾವಿದರು ಇಂದಿನ ಯಾಂತ್ರಿಕ ಕಾಲದಲ್ಲಿ ಕಂಗಾಲಾಗಿದ್ದಾರೆ. ಆಗಾಗಿ ಈ ಕಲೆಗಳು ನಶಿಸುತ್ತಿವೆ.

ಈ ಕಲೆಗಳು ಯಾವುವೆಂದರೆ, ಜನಪದ ಕಲೆಗಳು ಮತ್ತು ಕಪ್ಪು-ಬಿಳಿಪಿನ ಫೋಟೋವನ್ನು ವರ್ಣಗಳಿಂದ ಕೊನೆಗೊಳಿಸುವ ಕಲೆ. ಲೀಥೋಗ್ರಾಫ, ಎನ್‌ಗ್ರೇವಿಂಗ್ ಕಲೆ ಮಣಿಗಳಿಂದ ನಿರ್ಮಾಣವಾದ ಕಲಾಕೃತಿಗಳ ತಯಾರಿಕೆ, ಚರ್ಮ ಪ್ರಸಾದನ ಕಲೆ, ಕಪ್ಪೆಚಿಪ್ಪಿನಿಂದ ಮೂರ್ತಿ ತಯಾರಿಕೆ, ಮೇಣದ ಕಲಾಕೃತಿ ರಚನೆ ಇನ್ನೂ ಮುಂತಾದ ಕಲೆಯ ಪ್ರಕಾರಗಳು ಇವೆ ಅವುಗಳನ್ನು ಸಂಕೀರ್ಣ ಕಲಾ ಪರಂಪರೆ ಎಂದು ಗುರುತಿಸಿ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಬೇರೆ ಬೇರೆ ಮಾಧ್ಯಮಗಳು ಸಹ ಬಳಕೆಯಾಗಿ ಸಂಯೋಜನೆಯಿಂದ ನಿರ್ಮಾಣವಾಗಿರುತ್ತದೆ. ಈ ಕಲೆಗಳು ಮೈಸೂರಿನ ಸುತ್ತಮುತ್ತ ಒಂದು ಉತ್ತಮ ಉದ್ಯಮವಾಗಿಯೂ ಪರಿಣಯಿಸಿದೆ. ಹಾಗೆ ಕರಕುಶಲ ಕಲೆಯು ಸಹ ಈ ನೆಲೆಯಲ್ಲಿ ಹೆಮ್ಮರವಾಗಿ ಬೆಳೆದಿದೆ. ಮೈಸೂರಿನಲ್ಲಿ ಕರಕುಶಲ ಕೇಂದ್ರ ಮುಂಚೂಣಿಯಲ್ಲಿ ಸಾಗುತ್ತಿದೆ. ಈ ಎಲ್ಲಾ ಕಲೆಗಳು ಮೈಸೂರು ಜಿಲ್ಲೆಯ ಸಂಕೀರ್ಣಕಲೆಯಾಗಿದ್ದು. ಅವು ಒಂದು ಪರಂಪರೆಯಾಗಿಯೂ ಬೆಳೆದಿವೆ.

ಆ ಕಲಾಕೃತಿಗಳು ಸರಕಾರಿ ಸಂಗ್ರಹಾಲಯಗಳಲ್ಲಿ, ಖಾಸಗಿ ಚಿತ್ರಸಂಗ್ರಹಕಾರರು, ಅರಮನೆಯ ಸಂಗ್ರಹಾಲಯ ಮುಂತಾದ ಸ್ಥಳಗಳಲ್ಲಿ ಶೇಖರಣೆಗೊಂಡಿವೆ. ಮೈಸೂರಿನ ಚಿತ್ರಕಲಾ ಕ್ಷೇತ್ರವು ಯಾವಾಗಲೂ ಚಲನೆಯಿಂದ ಕೂಡಿದೆ. ಚಿತ್ರಕಲೆಯ ಇತಿಹಾಸ ತೆರೆದು ನೋಡಿ ಆಲೋಚಿಸಿದ್ದರೆ ತಿಳಿಯುತ್ತದೆ. ೫೦೦-೬೦೦ ರಷ್ಟು ವರ್ಷಗಳ ಕಾಲ ದೀರ್ಘ ಇತಿಹಾಸದಲ್ಲಿ ಪ್ರಾಚೀನ ಕಲಾಇತಿಹಾಸ, ಐತಿಹಾಸಿಕ ಕಲಾಇತಿಹಾಸ, ಆಧುನಿಕ ಕಲಾಇತಿಹಾಸದಲ್ಲಿ ಲಲಿತಕಲೆಯು ಇಲ್ಲಿ ಸಮೃದ್ಧವಾಗಿ ಬೆಳೆದಿದೆ. ಇಲ್ಲಿ ಚಿತ್ರಕಲೆಯು ನಿಂತ ನೀರಂತೆ ಒಂದೇ ಆಕಾರದಲ್ಲಿ ಇರುವುದಿಲ್ಲ ಅದು ಅನೇಕ ರೀತಿಯಲ್ಲಿ ರೂಪಾಂತರಗೊಂಡು ಮಿಲನಗೊಂಡಿದೆ. ಅದರಲ್ಲಿ ಮನುಷ್ಯನ ಭಾವನೆ, ಪರಿಸ್ಥಿತಿಗಳು, ಸಂದರ್ಭ, ರಾಜಕೀಯ, ಧಾರ್ಮಿಕದ ಕೆಲವು ಪ್ರಭಾವ ಪ್ರೇರಣೆ, ತನ್ನದೆಶೈಲಿ ಲಕ್ಷಣಗಳಿಂದ ಆಗಿದೆ, ಮೊಗಲಕಲೆ, ಡಚ್ಚರು, ಇಂಗ್ಲೀಷರು ಮತ್ತು ಆಧುನಿಕ ಕಲೆಯ ಪ್ರಭಾವ ಈ ಪ್ರಾಂತ್ಯದ ಚಿತ್ರಕಲೆಯಲ್ಲಿ ಸೇರಿದೆ. ಜೊತೆಗೆ ಇತಿಹಾಸದಲ್ಲಿ ನಮ್ಮ ವಿಜಯನಗರದ ಪತನ ನಂತರ ಅಲ್ಲಿನ ಲಲಿತಕಲೆಯು ಮೈಸೂರು ಪ್ರಾಂತ್ಯದಲ್ಲಿ ಮೊಳಕೆ ಹೊಡೆದು ಬೆಳೆಯಿತು, ಅದರಲ್ಲಿ ಬೇರೆ ಚಿತ್ರಕಲಾ ಶೈಲಿಯಂತೆ ಇಲ್ಲಿಯೂ ದೇಶಿಯ ಸೊಬಗುವುಳ್ಳ ತಮ್ಮದೆ ಆದ ಶೈಲಿ ಮತ್ತು ಪ್ರತ್ಯೇಕ ಲಕ್ಷಣಗಳಿಂದ[೩೪] ಚಿತ್ರಕಲೆ ಕಂಡುಬರುತ್ತದೆ.

ಇಲ್ಲಿನ ಐತಿಹಾಸಿಕ ನೆಲೆಗಟ್ಟಿನ ಮೇಲೆ ಮುಸ್ಲಿಂ, ಮತ್ತು ಇಂಗ್ಲಿಷರ ಮತ ಧರ್ಮಗಳು, ಧಾರ್ಮಿಕ, ಆಧುನಿಕತೆ ಒಳಗೊಂಡ ಚಿತ್ರಕಲೆಯು ಈ ಪ್ರಾಂತ್ಯದಲ್ಲಿ ಅರಮನೆ, ಸಂಗ್ರಹಾಲಯ, ದೇವಾಲಯ ಹಾಗೂ ಗ್ಯಾಲರಿ, ಕಲಾಶಾಲೆ, ಚರ್ಚ್, ಕಛೇರಿ ಮುಂತಾದ ಸ್ಥಳಗಳಲ್ಲಿ ದಾಖಲಾಗಿದೆ. ಕಲಾಕೃತಿಗಳಲ್ಲ ಮೌಲ್ಯಗಳನ್ನು ಒಳಗೊಂಡ ಕಲಾಪ್ರಕಾರಗಳ ಪರಂಪರೆಯೆ

ಆಗಿದ್ದು ಈ ಪ್ರದೇಶದ ಸೊಬಗಿನ ಪ್ರತಿಫಲವಾಗಿ ಈ ನಾಡಿನ ಸಂಪತ್ತು ಆಗಿರುತ್ತದೆ. ಆದರೆ ಐತಿಹಾಸಿಕ ಘಟನೆಗಳಿಂದ ಕೆಲವು ನಾಶವಾಗಿದೆ.

ತೌಲನಿಕವಾಗಿ ನೋಡಿದಾಗ ಹೊರರಾಜ್ಯದ ಸಾಂಸ್ಕೃತಿಕ ಪರಿಸರವನ್ನು ಹೋಲಿಕೆ ಮಾಡಿ ನೋಡಿದಾಗಲೂ ಮೈಸೂರು ಅರಸರುಗಳು ಕಲೆ ಉಳಿಸಿ ಬೆಳೆಸುವ ಶ್ರಮವೇ ಹೆಚ್ಚಾಗಿದೆ. ಇಲ್ಲಿನ ಅರಸರುಗಳ ಸಾಂಸ್ಕೃತಿಕ ಪರಿಸರವನ್ನು ವಿಶ್ವಪ್ರಸಿದ್ಧಿಯಾಗಿರುವಂತೆ ನಿರ್ಮಾಣ ಮಾಡಿದ್ದಾರೆ. ಈಗಲೂ ಆ ಸವಿಯ ವೈಭವವನ್ನು ಜನರು ತುದಿಗಾಲಿನಲ್ಲಿ ನಿಂತೂ ನೋಡಿ, ಆಶ್ಚರ್ಯಚಕಿತರಾಗಿ ಈ ಕಲೆಯನ್ನು ಕಣ್ಣು ಅರಳಿಸಿ ನೋಡಿ, ಮನಸೋಲುವ ಜೊತೆಗೆ ಮೈಮರೆತು ನೋಡುತ್ತಾ ನಿಲ್ಲುತ್ತಾರೆ. ಕರ್ನಾಟಕ ಐತಿಹಾಸಿಕ ದಾರಿಯಲ್ಲಿ ಲಲಿತಕಲೆಯ ಜೊತೆಗೆ ಚಿತ್ರಕಲೆಯನ್ನು ಉಳಿಸಿ ಬೆಳೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇಲ್ಲಿನ ಅರಸರು ಕಲೆಯ ಎಲ್ಲಾ ಭಾಗದಲ್ಲಿ ನೋಡಿದಾಗ ಚಿತ್ರಕಲೆಯ ಪ್ರಕಾರಗಳ ಜೊತೆ ಕಲಾಸಾಹಿತ್ಯ ಸಹ ಇಲ್ಲಿ ಬೆಳೆಸಿದ್ದಾರೆ.

ಈ ಜಿಲ್ಲೆಯ ಲಲಿತಕಲೆಯಂತೆ ಸುರಪುರ, ಕೆಳದಿ ಅರಸರ ಲಲಿತಕಲೆಯು ಅಲ್ಲಿಯೂ ಬೆಳೆದರು ಸಹ ಹೆಚ್ಚು ಪ್ರಬುದ್ಧತೆ ಶಕ್ತಿಶಾಲಿಯಾಗಿ ಬೆಳೆದಿದ್ದು ಮೈಸೂರು ಅರಸರು ಮಾತ್ರ, ಏಕೆಂದರೆ ಕರ್ನಾಟಕ ಆಡಳಿತ ಚುಕ್ಕಾಣಿ ಬ್ರಿಟೀಷರ ಕೈಯಲ್ಲಿತ್ತು. ಆದರೂ ಇಲ್ಲಿನ ಅರಸರು ತುಂಬಾ ಜಾಣ್ಮೆಯಿಂದ ಭಿತ್ತಿ ಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ, ಗಂಜೀಫಾ ಚಿತ್ರಕಲೆ, ಗಾಜಿನ ಚಿತ್ರಕಲೆ, ಮತ್ತು ಕಲಾಶಾಲೆಗಳು ಅದರಿಂದ ಅನೇಕ ಕಲಾಪ್ರಕಾರಗಳನ್ನು ಅವರು ಇಲ್ಲಿ ಉಳಿಯಲ್ಲೂ, ಈ ಭಾಗದಲ್ಲಿ ಆಧುನಿಕ ಕಾಲದಲ್ಲಿಯೂ ಶ್ರಮಿಸಿದ್ದರು.

ಶ್ರೀಶ್ವೇತಾವರಾಹ ಸ್ವಾಮಿ ದೇವಸ್ಥಾನ ಕೋಟೆಯ ದಕ್ಷಿಣ ದಿಡ್ಡಿಬಾಗಿಲು ಬಳಿ ಇದೆ. ಹೊಯ್ಸಳ ಶೈಲಿಯ ಸುಂದರ ಕಲಾವಂತಿಕೆ ಛಾಪಿಗದೆ ಈ ದೇವಾಲಯದ ನಿರ್ಮಾಣದ ಶ್ರೇಷ್ಠ ಕುಸುರಿಕೆಲಸದ ನಾಜೂಕುಕೆತ್ತನೆಯ ಭವ್ಯವೆನಿಸುವ ಮಹಾದ್ವಾರ ಆಕರ್ಷಕ ಸ್ತಂಭಗಳು ಮೋಹಕ ಗೋಪುರ. ಶ್ರೀ ವೈಷ್ಣವ ಧರ್ಮಾವಲಂಭನಕ್ಕೆ ಸೇರಿದ ದೇವಾಲಯ ಇದಿ ದೇವಾಲಯ ಜಾಗತಿಕ ಮೇಲಿದೆ. ದೇವಾಲಯ ಸೊಗಸೆಲ್ಲ ನವರಂಗದ ಭಿತ್ತಿ ಚಿತ್ರಗಳಲ್ಲಿದೆ. ಈ ವರ್ಣಚಿತ್ರಗಳು ರಾಮಾಯಣ, ಭಾಗವತ. ಕೃಷ್ಣನ ಬಾಲಲೀಲೆಯ ಸಂಬಂಧಪಟ್ಟಂತಹ ದೃಶ್ಯಗಳು ನಯನ ಮನೋಹರವಾಗಿದೆ. ಇದನ್ನು ಚಿತ್ರಿಸಿದ ವರ್ಷ ೧೮೭೫ರಲ್ಲಿ ಈ ಭಿತ್ತಿ ಚಿತ್ರಗಳು ಸುಂದರ ಅಭಿವ್ಯಕ್ತಿಯಿರುವ ವರ್ಣಭಿತ್ತಿಚಿತ್ರಗಳಾಗಿವೆ. ಇನ್ನೊಂದು ವಿಶೇಷವೆಂದರೆ ಈ ಚಿತ್ರರಚನೆ ಮುಕ್ತಾಯದ ವರ್ಷ ನಮೂದಿಸಿರುವುದು ವಿಶೇಷವಾಗಿದೆ.

ದಕ್ಷಿಣ ಹೊರಗಡೆಯ ೧೨-೧೩ನೇ ಶತಮಾನಕ್ಕೆ ಸೇರಿದ ಶಾಸನವಿದೆ. ಇಲ್ಲಿ ಇನ್ನೂ ಅನೇಕ ವಿಶೇಷ ಒಳಗೊಂಡಿದೆ. ಈ ದೇವಾಲಯ ಹೆಸರೆ ಹೇಳುವಂತೆ ಶ್ವೇತವರಾಹಸ್ವಾಮಿ ದೇವಸ್ಥಾನ ಶ್ವೇತ ಎಂದರೆ ಬಿಳಿಯ ಬಣ್ಣದು, ಬೆಳ್ಳಿ ಎಂದು ಹಾಗುತ್ತದೆ. ವಾರಹ ಎಂದರೆ

ಹಂದಿ ಮುಖವುಳ್ಳಂತಹ ಮನುಷ್ಯ ದೇಹಹೊಂದಿದ ಮೂರ್ತಿ, ಸ್ವಾಮಿ ಎಂದರೆ ಪರಮಾತ್ಮ, ಒಡೆಯ ಯಜಮಾನ ಎಂದು ದೇವಸ್ಥಾನ ಎಂದರೆ ದೇವರು ವಾಸಿಸುವಂತಹ ಆಲಯಕ್ಕೆ ದೇವಾಲಯ ಎನ್ನುತ್ತಾರೆ. ಶ್ರೀವರಹಸ್ವಾಮಿ ವಿಷ್ಣುವಿನ ಮೂರನೆ ಅವತಾರ ಇರಣ್ಯಕಶುಬು ಎಂಬ ರಾಕ್ಷಸನನ್ನು ಭೂಮಿಯನ್ನು ತೆಗೆದುಕೊಂಡು ನೀರಿನಲ್ಲಿ ಮುಳುಗಿಸಿದ್ದನ್ನು ಅದನ್ನು ರಕ್ಷಿಸಲು ವಿಷ್ಣುವು ವರಾಹ ಅವತಾರ ಎತ್ತಿದನ್ನು ಎಂದು ವಿಷ್ಣುಪುರಾಣ ತಿಳಿಸುತ್ತದೆ. ಈ ವಿಗ್ರಹವು ಭೂಮಿಯನ್ನು ತನ್ನ ದವಡೆಗಳಲ್ಲೆತ್ತಿ ಕೊಂಡಿರುವ ಈ ವರಾಹ ಸ್ವಾಮಿ ಗಾತ್ರ ಎತ್ತರ ಚಿಕ್ಕದು. ಆದರೂ ಸುಂದರ ರೂಪದಿಂದ ಕೂಡಿದೆ. ಹಾಗೂ ಶಂಖಬ ಬಿಳುಪಿನಿಂದ ಕೂಡಿದೆ ವಿಗ್ರಹ. ಆದರಿಂದ ಈ ದೇವಾಲಯಕ್ಕೆ ಶ್ವೇತವರಾಹ ದೇವಾಲಯ ಎಂದು ಹೆಸರು.

ಚಿಕ್ಕದೇವರಾಜ ಒಡೆಯರು ಸ್ವಪ್ನದಲ್ಲಿ ವರಾಹಸ್ವಾಮಿ ಬಂದು ತಮಿಳು ನಾಡಿನ ಶ್ರೀ ಮುಷ್ಣಂನಲ್ಲಿ ಇರುವುದಾಗಿ ತನ್ನನ್ನು ಕರೆದು ತರುವಂತೆಯೇ ಆದೇಶಿಸಿದರ ಮೇರೆಗೆ ಆಗ ರಾಜರು ಶ್ರೀ ಮುಷ್ಣಂಗೆ ಹೋಗಿ ಕುಸ್ತಿ ಪಂದ್ಯದಲ್ಲಿ ಅಲ್ಲಿಯ ಜಟ್ಟಿಯನ್ನು ಗೆದ್ದು ವರಾಹ ಮೂರ್ತಿಯನ್ನು ತಂದು ಶ್ರೀರಂಗಪಟ್ಟಣದಲ್ಲಿ ಪ್ರತಿಷ್ಠಾಪಿಸಿದರು. ಅಲ್ಲೊಂದು ದೇವಾಲಯವನ್ನು ನಿರ್ಮಾಣ ಮಾಡಿಸಿದರು. ೧೬೭೩-೧೭೦೪ರಲ್ಲಿ ಇದು ಸುಮಾರು ಮುನ್ನೂರು ಹೆಚ್ಚು ವರ್ಷಗಳ ಹಿಂದೆ.

ಮತ್ತೊಂದು ಪ್ರಕಾರ ತಂಜಾವೂರಿನ ಏಕೊಜಿಯ ಮಗ ಶಹಜಿ ಒಬ್ಬ ಗರ್ವಿಷ್ಠ ರಾಜ ಮೈಸೂರು ಸೀಮೆಯಲ್ಲಿ ಮೇಲು ಕೋಟೆಯೊಂದೇ ವಿಷ್ಣುವಿನ ಕ್ಷೇತ್ರ ನಮ್ಮಲ್ಲಿ ಅನೇಕ ಶೈವ ಕ್ಷೇತ್ರಗಳೊಂದಿಗೆ ಶ್ರೀರಂಗ, ಶ್ರೀಮುಷ್ಠ, ಕುಂಕೊಣಂದಂತಹ ಹಲವು ವಿಷ್ಣುಕ್ಷೇತ್ರಗಳಿವೆ ನಮ್ಮ ಸೀಮೆಗೆ ಸಮಾನವಿಲ್ಲ ಎಂದು ಸಭೆಯಲ್ಲಿ ಶಹಜಿ ಅಹಂಕರಿಸಿ ನುಡಿದ ಸುದ್ಧಿ ಕೇಳಿದ ಚಿಕ್ಕದೇವರಾಜರು ಕುಪಿತರಾದರು, ಸಪ್ತಕಲ್ಪಗಳಲ್ಲಿ ಶ್ವೇತವರಾಹ ಕಲ್ಪಗಳಲ್ಲಿ ಶ್ವೇತವರಾಹ ಕಲ್ಪ, ಶ್ರೀಮುಷ್ಣಂದಲ್ಲಿರುವುದು, ಅದನ್ನೆ ತಂದು ರಾಜನ ಸೊಕ್ಕಿಳಿಸಿದರು. ಈ ರಾಜನು ದ್ರವ್ಯದಿಂದ ಮುಳುಗಿಸಿ ಯಾರಿಗೂ ತಿಳಿಯದಂತೆ ಶ್ವೇತವರಾಹಸ್ವಾಮಿಯನ್ನು ತಂದರು. ಈ ವಿಗ್ರಹ ಸಾಲಿಗ್ರಾಮ ಶಿಲೆ ಅದಕ್ಕೆ ವಿಗ್ನ ಎಂಬುದು ಇರುವುದು ಇಲ್ಲ ಎಂದು ತಿಳಿಸುತ್ತಾರೆ. ಹಾಗೆಯೇ ಪ್ರಸನ್ನ ಕೃಷ್ಣ ದೇವಾಲಯ ಮತ್ತು ಅಂಬುಜವಲ್ಲಿ ದೇವಾಲಯಗಳಲ್ಲಿಯೂ ರಾಮಾಯಣ, ಕೃಷ್ಣನ ಲೀಲೆಗಳು, ಪವಾಡಗಳು, ಬಾಲ್ಯ ಘಟನೆಗಳ ಚಿತ್ರಗಳಿರುವುದನ್ನು ಕಾಣಬಹುದು. ಮುಂದಿನ ಅಧ್ಯಾಯಗಳಲ್ಲಿ ಭಿತ್ತಿ ಚಿತ್ರಗಳ ವಸ್ತು ಸ್ಥಿತಿಯನ್ನಿ ತಿಳಿಸಲಾಗಿದೆ.

ಕೆರೆಗೋಡಿ ಮತ್ತು ರಂಗಾಪುರ ಪರಿಸರ ಮತ್ತು ಹಿನ್ನಲೆ :

ತುಮಕೂರು ಜಿಲ್ಲೆಯಲ್ಲಿರುವ ತಿಪಟೂರಿನಿಂದ ದಕ್ಷಿಣಕ್ಕೆ ೬ ಕಿ.ಮೀ.ಗಳ ಅಂತರದಲ್ಲಿ ದಾರಿಯ ಎಡಬಲಗಳಲ್ಲಿ ಶಿರಬಾಗಿ ನಮಿಸುವಂತೆ ತೆಂಗಿನ ಮರಗಳು ಎಳೆನೀರುಗಳ ಪೂರ್ಣ ಕುಂಭ ಹತೊತು ಸ್ವಾಗತಿಸುತ್ತಿವೆ. ದಾರಿಸಾಗಿದಂತೆ ಬಟ್ಟಬಯಲಿನ ಸುಂದರ ತಾಣದಲ್ಲಿ

ದೃಷ್ಠಿಗೋಚರವಾಗುವುದೇ ಶ್ರೀಕೆರಗೋಡಿ ರಂಗಾಪುರ ಸುಕ್ಷೇತ್ರ. ಇಲ್ಲಿ ಆಗಿ ಹೋಗಿರುವ ಎಲ್ಲ ಶ್ರೀಗಳೂ ಕೂಡ ಶ್ರೀಗುರುಪರದೇಶಿ ಕೇಂದ್ರ ಸ್ವಾಮಿಗಳಂಬ ಅಭಿದಾನದಿಂದಲೇ ಲೋಕವಿಖ್ಯಾತರಾಗಿದ್ದಾರೆ. ಮಹಾಮನೆಯ ಧರ್ಮಾಡಳಿತಕ್ಕೆ ಒಳಪಟ್ಟ ರಂಗಾಪುರದ ರಂಗನಾಥ ದೇವಾಲಯ ಮತ್ತು ಕೆರೆಗೋಡಿ ಶಂಕರೇಶ್ವರ ದೇವಾಲಯಗಳು ಕರ್ನಾಟಕದಲ್ಲಿಯೇ ವಿಶೇಷವೆನ್ನಿಸುವ ದೇವಾಲಯಗಳು. ಕಳೆದು ಹೋದ ಎರಡು ಶತಮಾನಗಳಿಗಿಂತಲೂ ಹಳೆಯದಾದ ಭಿತ್ತಚಿತ್ರಗಳು ಈ ದೇವಾಲಯಗಳಲ್ಲಿ ಸಂರಕ್ಷಿತವಾಗಿರುವುದೇ ವಿಶೇಷವೆನಿಸಿದೆ. ಪುರಾಣ ಕಲ್ಪನೆಗಳ ಈ ಚಿತ್ರಗಳ ನಡುವೆ ಸಮಕಾಲೀನ ಜನರ ವೇಷ ಭೂಷಣಗಳು ಭಾವ ಭಂಗಿಗಳು ಒಟ್ಟಿನಲ್ಲಿ ಸಂಸ್ಕೃತಿಯನ್ನು ಬಿಂಬಿಸುವ ವರ್ಣಚಿತ್ರಗಳು ಇವಾಗಿವೆ. ಕೆರೆಗೋಡಿ ರಂಗಪುರದ ದೇವಾಲಯ ಭಿತ್ತಿ ಚಿತ್ರಗಳು ವಿಜಯನಗರ ಕಾಲದ ಭಿತ್ತಿ ಚಿತ್ರಗಳನ್ನು ಹೋಲುತ್ತವೆ. ಕೆರೆಗೋಡಿ ರಂಗಾಪುರದ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು ಇತಿಹಾಸಕಾರರಿಗೆ ಚಿತ್ರಕಲಾವಿದರಿಗೆ ಹಲವಾರು ಕೌತುಕಗಳನ್ನು ಕಟ್ಟಿ ಕೊಡುತ್ತದೆ. ಕೆರೆಗೋಡಿ ರಂಗಾಪುರಗಳಲ್ಲಿ ನೊಣವಿನಕೆರೆ ಸುಬ್ಬಣ್ಣನವರು ಭಿತ್ತಿ ಚಿತ್ರರಚನೆ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಶೈವ–ವೈಷ್ಣವ ಧರ್ಮಗಳ ಸಂಗಮ ಕ್ಷೇತ್ರವಾಗಿ ಲೋಕ ಕಲ್ಯಾಣ, ಸಾಮಾಜಿಕ ಹಿತಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡಿದೆ.

ಪರಿಸರ :

ಕೆರೆಗೋಡಿ ರಂಗಾಪುರದ ಪರಿಸರ ಸುಂದರವಾಗಿದೆ. ಎಲ್ಲಿ ನೋಡಿದರು ಹಸಿರಿನಿಂದ ಕೂಡಿದ ವಾತಾವರಣವಿದೆ. ಪರಿಸರ ನೋಡಿದವರ ಕಣ್ಣಿಗೆ ಆನಂದವನ್ನು ಕೊಡುತ್ತದೆ. ಈ ಊರಿನಲ್ಲಿ ಸುಂದರವಾಗಿ ಕಟ್ಟಿದ ಶಂಕರೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನದ ಬಳಿ ಕಲ್ಯಾಣಿ ಪಕ್ಕದಲ್ಲಿ ಸುಂದರವಾದ ತೋಟ ಇದೆ. ಪ್ರವೇಶದ್ವಾರದಲ್ಲಿ ಕರಿಕಲ್ಲಿನ ತೆರೆದ ಬಾಯಿಯ ಎರಡು ಸಿಂಹಗಳು ಕೆತ್ತಲ್ಪಟ್ಟಿವೆ. ಈ ದೇವಸ್ಥಾನದ ಗೊಡುಗಳಲ್ಲಿ ಬುದ್ಧ, ವಿಘ್ನೇಶ್ವರ, ನಂದಿ ಇವರ ವಿಗ್ರಹಗಳಿವೆ. ಸುಂದರವಾದ ಭಿತ್ತಿಚಿತ್ರಗಳಿವೆ. ಈ ಊರಲ್ಲಿ ವೀರಶೈವ ಮಠವೊಂದಿದೆ ಇದನ್ನು ಕೆರೆಗೋಡಿ ಸಂಸ್ಥಾನ ಮಠ ಎಂದು ಕರೆಯುತ್ತಾರೆ. ರಂಗಾಪುರದಲ್ಲಿ ಸುಂದರವಾದ ಉದ್ಯಾನವನವಿದೆ. ಸುತ್ತ ತೆಂಗಿನಮರಗಳ ಸಾಲು ಕಾಣುತ್ತದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಹಸಿರನ್ನು ಕಾಣುತ್ತೇವೆ. ಇಲ್ಲಿ ಸುಂದರವಾದ ರಂಗನಾಥನ ದೇವಸ್ಥಾನವಿದೆ. ದೇವಸ್ಥಾನದ ಮುಂದೆ ಐವತ್ತು ಅಡಿಗಳ ಎತ್ತರದ ದೀಪಮಾಲೆ ಕಂಭವಿದೆ. ಈ ಊರಿನಲ್ಲಿ ಪರದೇಶಿಕೇಂದ್ರ ಸ್ವಾಮಿಗಳ ಮಠ ಪ್ರಸಿದ್ಧವಾಗಿದೆ. ಕೆರಗೋಡಿ ಮತ್ತು ರಂಗಾಪುರಗಳು ಪ್ರತ್ಯೇಕ ಘಟಕಗಳು ಎಂದು ಭಾವಿಸಲು ಸಾಧ್ಯವಾಗದಂತೆ ಬೆಸೆದು ಹೋಗಿವೆ. ರಂಗನಾಥಸ್ವಾಮಿ ದೇವಸ್ಥಾನದ ಸುತ್ತ ಸುಂದರವಾದ ಉದ್ಯಾನವನವಿದೆ. ಈ ಸ್ಥಳವು ಸುತ್ತಮುತ್ತ ಗ್ರಾಮಗಳಿಂದ ಕೂಡಿದೆ. ಈ ಸ್ಥಳ ಕೃಷಿಗೆ ಅನುಕೂಲವಾಗಿದೆ. ಇಲ್ಲಿ ತೆಂಗು ಹೆಚ್ಚಾಗಿ ಬೆಳೆಯುತ್ತಾರೆ. ರಾಗಿ, ಜೋಳ, ಭತ್ತ ಇಲ್ಲಿನ ಪ್ರಮುಖ ಬೆಳೆಗಳು. ಸೊಪ್ಪು, ತರಕಾರಿ ಇತ್ಯಾದಿಗಳನ್ನು ಇಲ್ಲಿ ಬೆಳೆಯುತ್ತಾರೆ. ಇಲ್ಲಿನ ವಾತಾವರಣ ಸದಾಕಾಲ ತಂಪಾಗಿರುತ್ತದೆ.

ಬೆಟ್ಟ, ಗುಡ್ಡ, ತೋಟದ ಸಾಲುಗಳಿಂದ ಕೂಡಿದೆ. ಇಲ್ಲಿ ಹಲವಾರು ಪ್ರಾಣಿಸಂಪತ್ತನ್ನು ಕಾಣಬಹುದು. ಈ ಊರು ಹರಿಹರ ಸಂಗಮವಾಗಿದ್ದರಿಂದ ಅಂದರೆ ರಂಗಿನ ಜೊತೆ ಲಿಂಗ ಸೇರಿರುವುದರಿಂದ "ರಂಗಲಿಂಗಪುರ" ಎಂದು ಹೆಸರು ಬಂದಿದೆ. ಇಲ್ಲಿ ರಂಗನಾಥ ಮತ್ತು ಶಂಕರಲಿಂಗ ಆದಿದೈವವಾದರಿಂದ ಒಂದು ದೇವರಿಗೆ ನಡೆದುಕೊಂಡ ಮೇಲೆ ಮತ್ತೊಂದು ದೇವರಿಗೂ ನಡೆದುಕೊಳ್ಳಬೇಕೆಂಬ ನಿಯಮ ಇದೆ.

ಐತಿಹಾಸಿಕ ಹಿನ್ನಲೆ :

ಕೆರೆಗೋಡಿ ರಂಗಾಪುರ ಸುಕ್ಷೇತ್ರ ಇತಿಹಾಸ ಮಹತ್ವವುಳ್ಳ ಕ್ಷೇತ್ರವಾಗಿದೆ. ಐತಿಹಾಸಿಕ ದಾಖಲೆಗಳು ಪ್ರಾಚೀನತೆಯನ್ನು ಖಚಿತಗೊಳಿಸುತ್ತವೆ. ಎಫಿಗ್ರಾಫಿಯಾ ಕರ್ನಾಟಕ ಹದಿನಾರನೆಯ ಸಂಪುಟದಲ್ಲಿ ಕೆರೆಗೋಡಿ ರಂಗಾಪುರದ ಪರದೇಶಿ ಸ್ವಾಮಿಗಳ ಮಠದ ಏಜೆಂಟ್ ನಿರ್ವಾಣಪ್ಪನವರು. ಹಾಜರ್‍ಮಾಡಿನ ತಾಮ್ರ ಶಾಸನದಲ್ಲಿ ದಾಖಲಾಗಿರುವ ಕ್ರಿ.ಶ. ಸುಮಾರು ೯೦೦ರ ಕಾಲಕ್ಕೆ ಇದರ ಕಾಲವನ್ನು ನಿರ್ಧರಿಸಬಹು ದಾಗಿದೆ. ತಾಮ್ರ ಶಾಸನವು ಗಂಗರ ಭೂತುಗನ ಕಾಲಕ್ಕೆ ಸೇರಿದ್ದಾಗಿದೆ.

ಶಂಕರೇಶ್ವರ ದೇವಾಲಯ ಸಾಕಷ್ಟು ಹಳೆಯದು ಕ್ರಿ.ಶ. ೧೬೦೮ರಲ್ಲಿ ದೀಪದ ಕಂಬ ಸ್ಥಾಪಿಸಿದ ದಾಖಲೆಯಿದ್ದು ಮುಂದೆ ೧೬೬೯, ೧೬೭೧, ೧೭೪೮ ಹಾಗೂ ೧೭೭೦ರಲ್ಲಿ ಹಾಕಿಸಿದ ಶಾಸನಗಳು ಕಂಡುಬರುತ್ತವೆ. ಪರದೇಶಿ ಸ್ವಾಮಿಯವರು ಮೂವತ್ತು ವರ್ಷ ಭಿಕ್ಷಾಟನೆಯನ್ನು ಮಾಡಿ ಆ ದೇವಾಲಯದ ಉಪ್ಪರಿಗೆ ಇತ್ಯಾದಿಗಳನ್ನು ಮಾಡಿಸಿದ ಆಗಲೇ ಆ ಚಿತ್ರಗಳನ್ನು ಬರೆಯಿಸಿದಂತೆ ತೋರುವುದಿಲ್ಲ. ಬಳಿಯಲ್ಲಿಯೇ ಇರುವ ರಂಗಾಪುರದಲ್ಲಿಯೂ ಭಿತ್ತಿಚಿತ್ರಗಳಿವೆ. ಅಲ್ಲಿ ಶಿವ ಹಾಗೂ ವಿಷ್ಣುವಿನ ಕಲ್ಯಾಣಗಳಲ್ಲದೆ ದಶಾವತಾರದ ಚಿತ್ರಗಳಿವೆ. ಶೈಲಿ ಇತ್ಯಾದಿಗಳ ದೃಷ್ಟಿಯಿಂದ ಎಲ್ಲಾ ಚಿತ್ರಗಳಲ್ಲಿ ಒಂದೆಡೆ ಅರಮನೆಯ ಮಂತ್ರಿವರ್ಯರು ಸೈನಿಕರು, ಜನಸಾಮಾನ್ಯರು ಬಂದೂಕು ಹಿಡಿದ ಸಿಪಾಯಿಗಳು ಇತ್ಯಾದಿಗಳೊಂದಿಗೆ ದರ್ಬಾರಿನಲ್ಲಿ ವಿರಾಜರಾಮನಾಗಿರುವ ಮುಮ್ಮಡಿಯವರ ಕಾಲದಲ್ಲಿಯೇ ರಚಿತವಾಗಿರುವುದು ಕೆರೆಗೋಡಿಯ ಕೊಳವನ್ನು ೧೮೩೪ರಲ್ಲಿ ಕಟ್ಟಿಸಿದ್ದು ಭಿತ್ತಿಚಿತ್ರಗಳೂ ಇದೇ ಕಾಲದವುಗಳೆನ್ನಬಹುದಾಗಿದೆ.

ಮುಮ್ಮಡಿಯವರ ಕಾಲದ ಚಿತ್ರಗಾರನೊಬ್ಬನ ಹೆಸರು ಮತ್ತು ಊರು ಮೊದಲ ಬಾರಿಗೆ ಇಲ್ಲಿ ತಿಳಿದು ಬರುತ್ತದೆ. ನೊಣವಿನಕೆರೆ ಚಿತ್ರಗಾರ್ ಸುಬ್ಬಣ್ಣನಾದ ಈತನ ಪೂರ್ವಜರು ಪ್ರಾಯಶಃ ವಿಜಯನಗರದಲ್ಲಿ ಚಿತ್ರಗಾರ್ ಇದ್ದಿರಬೇಕು. ವಿಜಯನಗರ ಪತನಾನಂತರ ಕಲಾವಿದರು ಮೈಸೂರಿಗೆ ಬರುವ ಹಾದಿಯಲ್ಲಿ ಚಿತ್ರದುರ್ಗ, ನಾಗಮಂಗಲ ಇತ್ಯಾದಿ ಕಡೆಗಳಲ್ಲಿ ನೆಲೆಸಿದಂತೆ ಕಂಡುಬರುತ್ತದೆ. ಚಿತ್ರಗಳ ಶೈಲಿಯಲ್ಲಿ ಅದರಲ್ಲೂ ತ್ರಿಪುರ ಸಂಹಾರ ದೃಶ್ಯದಲ್ಲಿ ವಸ್ತ್ರಾಭರಣಗಳಲ್ಲಿ ಮೈಸೂರು ಸಂಪ್ರದಾಯದ ಶೈಲಿ ಕಂಡುಬರುವುದರಿಂದ ಸುಬ್ಬಣ್ಣನು ಮೈಸೂರು ಆಸ್ಥಾನ ಕಲಾವಿದರೂ ಆಗಿರಬಹುದು.

ಇಲ್ಲಿಯೂ ಮೂರು ಅಂಕಣಗಳನ್ನು ಬೇರೆ ಬೇರೆಯವರು ಬರೆಸಿದ್ದಾರೆ. ತ್ರಿಪುರ ಸಂಹಾರ ದೃಶ್ಯದಲ್ಲಿರುವ "ಅರವತ್ತು ರೂಪಾಯಿ ಮಜೂರಿ" ಎಂಬುದು ಆ ಒಂದು ಅಂಕಣಕ್ಕೆ ನೀಡಿದ ಸಂಭಾವನೆಯಿರಬೇಕು. ಮೊಘಲರ ಚಿಕಣಿ ಚಿತ್ರಗಳಲ್ಲಿ ಈ ರೀತಿ ಚಿತ್ರವೊಂದಕ್ಕೆ ನೀಡಿದ ಸಂಭಾವನೆಯ ವಿವರ ದೊರೆಯುತ್ತದೆಯಾದರೂ ಭಿತ್ತಿ ಚಿತ್ರವೊಂದಕ್ಕೆ ನೀಡಿದ ಸಂಭಾವನೆಯ ವಿವರ ಇರುವುದು ಈ ಒಂದು ಭಿತ್ತಿ ಚಿತ್ರಗಳಲ್ಲಿ ಮಾತ್ರ ಕಲಾ ಇತಿಹಾಸದ ದೃಷ್ಠಿಯಿಂದ ಇದೊಂದು ಮಹತ್ವದ ಅಂಶ. ಕೆರೆಗೋಡು ಶಂಕರೇಶ್ವರ ದೇವಾಲಯಗಳಲ್ಲಿ ಇರುವ ಭಿತ್ತಿಚಿತ್ರಗಳು ಹಲವಾರು ದೃಷ್ಠಿಯಿಂದ ಮಹತ್ತರವಾದುದು. ಇಲ್ಲಿ ಮೊದಲ ಬಾರಿಗೆ ಕಲಾವಿದನೊಬ್ಬನ ಹೆಸರು ಹಾಗೂ ಪಡೆದ ಮಜೂರಿಯ ಉಲ್ಲೇಖ ದೊರೆಯುತ್ತದೆ. ಮೊದಲ ಬಾರಿಗೆ ಕಲಾವಿದ ತನ್ನ ಸ್ವಂತ ಭಾವಚಿತ್ರವನ್ನು ಇಲ್ಲಿ ರಚಿಸಿಕೊಂಡಿದ್ದಾನೆ.

ಹರಿಶಂಕರೇಶ್ವರಸ್ವಾಮಿಯವರು :

ಶುಭಮಸ್ತು ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನಶಕ ವರುಷ ೧೭೯೨ನೆಯ ವರ್ತಮಾನಕ್ಕೆ ಸಲ್ಲುವ ವಿರೋದಿ ಸಂವತ್ಸರದ ಫಾಲ್ಗುಣ ಬ ೧೩ರ ಭಾನುವಾರದಲ್ಲೂ ಕೆರೆಗೋಡಿ ಶಂಕರೇಶ್ವರ ಸ್ವಾಮಿಯವರ ಶ್ರೀಪಾದಕ್ಕೆ ರಂಗಾಪುರದ ರಂಗಸ್ವಾಮಿಯವರ ಸ್ಥಾನದಲ್ಲಿಯಿದಂಥಾ ಪರದೇಶಿ ಅಯ್ಯನವರೂ ಮೂವತ್ತೈದ. ನಿಗ್ರಿ ಭಿಕ್ಷಾ ಉತ್ರಿಯಲ್ಲಿ ಮೂಡಿಸಿದ ದೇವಸ್ಥಾನ ಉಪ್ಪರಿಗೆ ಬಾಗಲು ಮಹಾನವಮಿ ಮಂಟಪ. ಕೆರೆಮೆರಡು ಸಹಾ ಸಮರ್ಪಿಸಿದ ಸೇವೆಯೂ ಧರ್ಮಸೇವೆಗೆ ಸಹಾಯವಾದ ಚನ್ನರಾಯಪಟ್ಟಣದ ಸುಭೇವಾರು ಗಿರಿಯಪ್ಪೈಯನವರೂ. "೧೭೭೦ಕ್ಕಿಂತ ಹಿಂದೆ ಮೂವತ್ತೈದು ವರ್ಷಗಳಿಂದಲೂ ರಂಗಾಪುರದ ಪರದೇಶಿ ಸ್ವಾಜಮೀಜಿಯವರು ಫಲಹಾಕುವ ಸೇವೆಯಿಂದ ಇದ್ದು ಭಿಕ್ಷಾವೃತ್ತಿಯನ್ನು ಕೈಗೊಂಡು ಕೆರೆಗೋಡಿ ಶಂಕರೇಶ್ವರ ಸ್ವಾಮಿಯ ದೇವಾಲ್ಯದ ಉಪ್ಪರಿಗೆ ಬಾಗಿಲು, ಮಹಾನವಮಿ ಮಂಟಪ ಮತ್ತು ಕೆರೆಗೋಡಿಯಲ್ಲಿ ಎರಡು ಕೆರೆಗಳನ್ನು ಚನ್ನರಾಯಪಟ್ಟಣದ ಸುಭೇದಾರ್ಯ ಗಿರಿಯಪ್ಪನವರು ಸಹಕಾರದಿಂದ ನಾಡಿಗೆ ಸಮರ್ಪಿಸಿದರು ೨೩೦ ವರ್ಷಗಳ ಹಿಂದೆ ಈ ಕೆಲಸಗಳನ್ನು ಮಾಡಿದ್ದಾರೆ. ಮಹಾಸ್ವಾಮಿಯವರು ಅದರ ಬಗ್ಗೆ ಈ ಶಾಸನ ಬೆಳಕು ಚೆಲ್ಲುತ್ತದೆ. ಅಂದರೆ ಇವರೇ ಪರದೇಶಿ ಮಠದ ಮೊದಲನೆಯ ಸ್ವಾಮೀಜಿಯವರಾಗಿರಬೇಕು"

ಶಿರಾ :

ಶಿರಾ ತುಮಕೂರಿನಿಂದ ೪೫ ಕಿ.ಮೀ. ದೂರದ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಶಿರಾ ಹಿಂದೆ ಪ್ರಾಗೈತಿಹಾಸ ಕಾಲದಿಂದ ಹಲವಾರು ರಾಜರು ಆಡಳಿತಕ್ಕೆ ಒಳಗಾಗಿರುವ ಹಾಗೂ ಕೇಂದ್ರ ಸ್ಥಳವಾಗಿ ಕೋಟೆ ಕೊತ್ತಲುಗಳಿಂದ ಕಂಗೊಳಿಸುವ ಐತಿಹಾಸಿಕ ನಗರ. ನಗರದಲ್ಲಿನ ಕಾಳಿದಾಸ ನಗರದ ಶ್ರೀ ರೇವಣಸಿದ್ದೇಶ್ವರ ದೇವಾಲಯವು ಸುಂದರವಾದ ಭಿತ್ತಿ ಚಿತ್ರಗಳನ್ನು ಒಳಗೊಂಡಿದೆ. ಈ ದೇವಾಲಯವು ಕುರುಬ ಜನಾಂಗಕ್ಕೆ ಸೇರಿದ್ದು ಕುರುಬ ಜನಾಂಗದ ಜಾತಕ ಕಥೆಯನ್ನು

ಹೇಳುವ ಚಿತ್ರವೂ ಸಹ ಈ ದೇವಾಲಯದ ಮುಖ್ಯ ವಸ್ತು ವಿಷಯವಾಗಿದೆ. ದೇವಾಲಯವು ಸುಮಾರು ೧೦ ಮತ್ತು ೧೫ ಅಡಿ ಅಗಲವಿರುವ ಹಜಾರ ಪುಟ್ಟದೊಂದು ಗರ್ಭಗುಡಿಯನ್ನು ಹೊಂದಿದೆ. ಚೊಕ್ಕ ಪುಟ್ಟ ದೇವಾಲಯ, ದೇವಾಲಯದ ಹಜಾರದ ಛಾವಣಿ ಮತ್ತು ತೊಲೆ, ಹಾಗೂ ಸುತ್ತಲಿನ ಗೋಡೆಯ ಮೇಲೆ ಅದ್ಭುತವಾದ ಭಿತ್ತಿ ಚಿತ್ರ ರಚನೆಗೊಂಡಿರುವುದು ಆಶ್ಚರ್ಯವೇ ಸರಿ. ಈ ದೇವಾಲಯವನ್ನು ಹೊರಗಿನಿಂದ ನೋಡಿದರೆ ಯಾವುದೇ ವಿಶೇಷಗಳು ಕಾಣುಬರುವುದಿಲ್ಲ. ಅದರ ಒಳ ಹೊಕ್ಕಂತೆ ಬೆಚ್ಚಬೆರಗಾಗಿಸುವ ಭಿತ್ತಿ ಚಿತ್ರಗಳ ಕಣವೆಂದೆನಿಸುವಷ್ಟು ಸುಂದರವಾದ ಭಿತ್ತಿ ಚಿತ್ರಗಳು ರಚನೆಗೊಂಡಿವೆ. ಹಜಾರದ ಛಾವಣಿ, ತೊಲೆಗಳು ಮತ್ತು ಸುತ್ತಲನ ಗೋಡೆಗಳ ಮೇಲೆ ಚಿತ್ರಗಳಿವೆ. ಇಲ್ಲಿ ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳು ರಚನೆಗೊಂಡಿವೆ. ಸುತ್ತಲಿನ ಗೋಡೆಯ ಮೇಲೆ ಆಂಜನೇಯ, ರಾಮ ಪಟ್ಟಾಭಿಷೇಕ, ಗೋಪಿಕೆಯ ವಸ್ತ್ರಾಪಹರಣ, ವೇಣುಗೋಪಾಲ ಗರುಡ, ಕುರುಬ ಜನಾಂಗದ ಉಗಮದ ಚಿತ್ರ, ಹಾಗೂ ಮೈಸೂರು ಅರಸರ ದರ್ಬಾರು ದೃಶ್ಯಗಳು ರಚನೆಯಾಗಿದ್ದವು. ಆದರೆ ಇಂದು ಚಿತ್ರಗಳು ಉಳಿದಿರುವುದಿಲ್ಲ.

ಅಮೃತೂರು :

ಕುಣಿಗಲ್ ತಾಲ್ಲೂಕಿನ ಒಂದು ಹೋಬಳಿಯಾಗಿರುವ ಅಮೃತೂರು ತಾಲ್ಲೂಕು ಕೇಂದ್ರದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದ ಸುತ್ತಲಿನ ಹಳ್ಳಿಗಳಿಗೆ ಕೇಂದ್ರ ಸ್ಥಳವಾಗಿದೆ. ಅಮೃತೂರು ಹಿಂದೊಮ್ಮೆ ರಾಜಾಡಳಿತದ ಅವಧಿಯಲ್ಲಿ ಕೇಂದ್ರಾಡಳಿತವಾಗಿತ್ತು. ಪ್ರಾಚೀನ ಯುಗದಿಂದ ರಾಜಾಡಳಿತ ಕಾಲದವರೆಗೆ ಜಿಲ್ಲೆಯ ಮುಖ್ಯ ಕೇಂದ್ರ ಸ್ಥಳವಾಗಿ ಬೆಳೆದು ಬಂದಿದೆ. ಹಲವಾರು ಶಾಸನಗಳು ಇಲ್ಲಿವೆ.

ಅಮೃತೂರು ಒಂದೂವರೆ ಕಿ.ಮೀ. ದೂರದಲ್ಲಿರುವ ಹೊಸಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಪಟ್ಟಲದಮ್ಮ ಮತ್ತು ಲಕ್ಷ್ಮೀದೇವಿಯರ ದೇವಾಲಯವಿದೆ. ಈ ದೇವಾಲಯ ಹೊರನೋಟಕ್ಕೆ ತುಂಬ ಸರಳ ಸಾಧಾರಣ ದೇವಾಲಯವು ಪಡಸಾಲೆ ವಿಶಾಲವಾದ ಗರ್ಭಗುಡಿಯ ಗೋಡೆ ಮತ್ತು ದ್ವಾರದ ಎದುರ ತೊಲೆಯ ಮೇಎ ಚಿತ್ರಗಳಿದ್ದು ಈಗ ಅವುಗಳು ಸುಣ್ಣ ಬಣ್ಣಗಳಿಂದ ಮುಚ್ಚಿಹೋಗಿವೆ. ಉತ್ತಮ ರೇಖೆ, ಬಣ್ಣ ಹಾಗೂ ಸಂಯೋಜನೆಯಿಂದ ಕೂಡಿದ ಶಿವಲೀಲಾಪ್ರಸಂಗ, ದಶಾವತಾರಗಳು, ಸ್ತ್ರೀ ಪುರುಷರ ಮೆರವಣಿಗೆ, ನೃತ್ಯಗಾರ್ತಿಯರು, ವಾದ್ಯಗಾರರು, ಕುದುರೆ ಸವಾರರು ವಿಶೇಷವಾಗಿ ಸುಮಾರು ೩*೫ ಅಳತೆಯ ಗೋಡೆಯ ಮೇಲೆ ರಚಿಸಲಾಗಿದೆ. ಭಿತ್ತಿ ಚಿತ್ರಗಳು ರಚನೆಗೊಂಡ ಕಾಲಾನಂತರ ಅವುಗಳ ಮೇಲೆ ಆಯಿಲ್ ಪೈಂಟ್ ಮರು ಲೇಪನ ಮಾಡಲಾಗಿದೆ. ಆದುದರಿಂದ ಚಿತ್ರಗಳು ನೈಜ ಸ್ಥಿತಿಯನ್ನು ಕಳೆದುಕೊಂಡಿವೆ. ಅಲ್ಲದೇ ಪ್ರತಿ ವರ್ಷವೂ ಲೇಪಿತವಾದ ಸುಣ್ಣ ಬಣ್ಣಗಳು ಭಿತ್ತಿಚಿತ್ರಗಳು ಅವನತಿಗೆ ಕಾರಣವಾಗಿವೆ. ದೇವಾಲಯದ ನಿರ್ವಾಹಕರು ಚಿತ್ರಗಳ ಮಹತ್ವ ಅರಿಯದೇ ಹೋಗಿರುವುದು ಸ್ಥಿತಿಗೆ ಕಾರಣವಾಗಿದೆ.

ಯಡೆಯೂರು :

ಕುಣಿಗಲ್ ತಾಲ್ಲೂಕಿನ ಯಡಯೂರು ಶ್ರೀಸಿದ್ಧಲಿಂಗಸ್ವಾಮಿ ಯತಿಗಳ ಪುಣ್ಯಕ್ಷೇತ್ರ, ಈ ದೇವಾಲಯದ ಮುಖ್ಯ ಮಂಟಪದ ಚಾವಣಿಯಲ್ಲಿ ನುರಾರು ಚಿತ್ರಗಳು ಇದ್ದವು. ಅಲ್ಲಿ ಶ್ರೀ ಸಿದ್ಧಲಿಂಗಾಯತಿಗಳಿಗೆ ಸಂಬಂಧಿಸಿದ ಅವರ ಪವಾಡಗಳನ್ನು ಕುರಿತಾದ ಸಚಿತ್ರಗಳು ಚಿತ್ರಿತವಾಗಿದ್ದವು. ನಂತರ ಅವುಗಳನ್ನು ಮರು ಬಣ್ಣದ ಲೇಪನ ಮಾಡಿದ್ದರು. ಆನಂತರ ಚಿತ್ರಗಳು ಸುಮಾರು ದಿನಗಳ ತರುವಾಯ ಕಾಣದಂತಾಗಿವೆ. ಈ ದೇವಾಲಯದಲ್ಲಿ ಚಿತ್ರಗಳಿದ್ದುದರ ಬಗ್ಗೆ ೧೯೩೦ನೇ ಗ್ಯಾಸೆಟಿಯರ್‌ನಲ್ಲಿ ವಿವರಣೆ ಪ್ರಸ್ತುತ ಮುಖ್ಯ ದ್ವಾರದ ಮೇಲೆ ಶ್ರೀ ಸಿದ್ಧಲಿಂಗಯತಿಗಳು ಸುಖಾಸನದಲ್ಲಿ ಮಲಗಿರುವ ಚಿತ್ರವಿದೆ. ಅಕ್ಕಪಕ್ಕದಲ್ಲಿ ನಾಟಕದ ಪರದೆಯೊಪಾದಿ ಇರುವ ಎರಡೂ ಬದಿಯಲ್ಲಿ ರಚಿಸಲಾಗಿದೆ. ಇದೇ ಮಾದರಿಯ ಹಲವಾರು ಚಿತ್ರಗಳು ಛಾವಣಿ ತಲುಪಿಲ್ಲ. ಇದ್ದವು ದೇವಾಲಯದ ಜೀರ್ಣೋದ್ಧಾರದ ಸಂದರ್ಭದಲ್ಲಿ ಅವುಗಳನ್ನು ಕೆರೆದುಹಾಕಲಾಯಿತು ಎಂದು ದೇವಾಲಯದ ಮುಖ್ಯಸ್ಥರು ಪುರೋಹಿತರು ಹೇಳುತ್ತಾರೆ. ದೇವಾಲಯದ ಮಿಠಾಯಿ ಮನೆಯಲ್ಲಿ ಸಿದ್ಧಲಿಂಗ ಯತಿಗಳು ತಪಸ್ಸಿನಲ್ಲಿದ್ದರು. ಹಿಂದೆ ಹುತ್ತದ ಕೋವಿನಗಳಲ್ಲಿ ಹಾವುಗಳು, ಹಾಗೂ ಕಾಮಧೇನು ಹಾಲು ಕರೆಯುತ್ತಿರುವ ಚಿತ್ರವಿದೆ. ಯತಿಗಳ ದರುಶನಕ್ಕೆ ಆದುನಿಂತಿರುವ ರಾಜಪೋಷಾಕಿನ ಸ್ತ್ರೀ ಪುರುಷರು ಆಶೀರ್ವಾದಕ್ಕಾಗಿ ಕಾದು ನಿಂತಿದ್ದಾರೆ ಎಂದು ತೋರುತ್ತ ಪುರುಷನು ತಲೆಗೆ ರುಮಾಲು ಕಟ್ಟಿ ಉದ್ದನೆಯ ಪೀತಾಂಬರದ ಅಂಗಿ ಕಚ್ಚೆ ಕಟ್ಟಿದ್ದಾನೆ. ಸ್ತ್ರೀಯು ಮರಾಠಿ ಮಾದರಿಯ ಸೀರೆಯನ್ನುಟ್ಟು ರವಿಕೆ ಮತ್ತು ಸೀರೆಯ ತುಂಬೆಲ್ಲ ಚಿನ್ನದ ಲೇಪನವನ್ನು ಚಿತ್ರದಲ್ಲಿ ಮಾಡಲಾಗಿದೆ. ಈ ಶೈಲಿಯು ಮೈಸೂರು ಸಾಂಪ್ರದಾಯಿಕ ಶೈಲಿ ಎಂದು ಸ್ಪಷ್ಟಪಡಿಸುತ್ತಾರೆ. ಏಕೆಂದರೆ ತೆಳುವಾದ ಚಿನ್ನದ ಹಾಳೆಯನ್ನು ಬಳಸಿ ಚಿತ್ರ ರಚಿಸಿರುವುದು ಮೈಸೂರು ಸಂಪ್ರದಾಯಿಕ ಶೈಲಿಯಲ್ಲಿ ಮಾತ್ರ ಕಾಣುತ್ತೇವೆ. ಈ ಚಿತ್ರವು ಪೇಪರ್ ಮಾಧ್ಯಮದ ಮೇಲೆ ಜೆಸೂ ಮತ್ತು ಚಿನ್ನದ ಹಾಳೆ ಬಳಸಿದ ಚಿತ್ರವಾಗಿದೆ. ಈ ಚಿತ್ರವು ೨*೪ ಅಡಿ ಅಳತೆಯಿಂದ ಕೂಡಿದ್ದು ತುಮಕೂರಿನ ಕ್ಯಾತ್ಸಂದ್ರದ ಶ್ರೀ ಎಂ.ಆರ್.ವೀರಪ್ಪಾಜಿ ಮತ್ತು ಶ್ರೀಮತಿ ಎನ್.ಆರ್.ಸುಮಂಗಳರವರ ಕುಟುಂಬ, ಎಸ್.ವಿ.ಬಿ.ಎಸ್. ಕೊಡುಗೆ ಎಂದು ಬರೆಯಲಾಗಿದೆ. ಈ ಚಿತ್ರದ ಕೊಡುಗೆಯನ್ನು ಗಮನಿಸಿದರೆ ಹಿಂದ ಈ ದೇವಾಲಯದಲ್ಲಿ ಉತ್ತಮ ಭಿತ್ತಿ ಚಿತ್ರಗಳಿದ್ದವೆಂದು ಗೋಚರಿಸುತ್ತವೆ. ಇಲ್ಲಿದ್ದ ಚಿತ್ರಗಳೇ ಈ ಕಾಲಕೃತಿಯ ಕೊಡುಗೆಗೆ ಪ್ರೇರಣೆ ನೀಡಿರಬೇಕು ಎನಿಸುತ್ತದೆ.

ಶ್ರೀಸೌಮ್ಯಕೇಶವಸ್ವಾಮಿ ದೇವಾಲಯ :

ನಾಗಮಂಗಲವನ್ನು ದೇವಾನುದೇವತೆಗಳ ಊರು ಎಂದೂ ಕರೆಯುತ್ತಾರೆ. ಇಲ್ಲಿನ ಶ್ರೀ ಸೌಮ್ಯಕೇಶವ(ಚನ್ನಕೇಶವ)ದೇವಾಲಯ ಭವ್ಯವಾಗಿದ್ದು, ಅದು ಹೊಯ್ಸಳರ ಕಾಲದ್ದಾಗಿದೆ. ಅದರ

ಮುಂಭಾಗದ ರಾಜಗೋಪುರವು ವಿಜಯನಗರದ ಪ್ರಖ್ಯಾತ ದೊರೆ ಶ್ರೀಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲ್ಪಟ್ಟಿರುತ್ತದೆ. ಈ ದೇವಾಸ್ಥಾನ ಇಲ್ಲಿನ ದೇವಾಲಯಗಳಲ್ಲಿ ದೊಡ್ಡದಾಗಿದ್ದು ಇದನ್ನು ೨೦೩*೧೫೫ ಅಡಿ ನಿವೇಶನದಲ್ಲಿ ನಿರ್ಮಿಸಲಾಗಿದೆ. ಇದು ಬಹುಶಃ ವಿಷ್ಣುವರ್ಧನನ ಕಾಲದಲ್ಲಿ ಕಟ್ಟಿದ್ದಾಗಿರಬಹುದು. ನಾಲ್ಕೂವರೆ ಅಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲೆ ಕಟ್ಟಲಾಗಿರುವ ತ್ರಿಕೂಟ ದೇವಾಲಯ. ಮಧ್ಯ ಮೂರು ಗರ್ಭಗುಡಿಗಳುಳ್ಳ ಕೇಶವಾಲಯ ಗರ್ಭಗುಡಿಯಲ್ಲಿ ಸೌಮ್ಯಕೇಶವ, ಇಕ್ಕೆಲದ ಗುಡಿಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲ ವಿಗ್ರಹಗಳಿವೆ. ಮುಖ್ಯ ಗುಡಿಯಲ್ಲಿರುವ ವಿಗ್ರಹದಿಂದಾಗಿ ಈ ದೇವಾಲಯವನ್ನು ಸೌಮ್ಯಕೇಶವ ದೇವಾಲಯ ಎಂದು ಕರೆಯಲಾಗಿದೆ. ಆದರೆ ಕೆಲವು ಶಾಸನಗಳಲ್ಲಿ ಚನ್ನಕೇಶವ ಎಂಬ ಉಲ್ಲೇಖವಿದೆ. ಈ ದೇವಾಲಯದ ಹೊರಭಿತ್ತಿಯ ಮೇಲೆ ಕೇವಲ ಅರೆಗಂಬಗಳ ಅಲಂಕರಣವಿದೆ. ಅಧಿಷ್ಠಾನ, ಭಿತ್ತಿ, ಹಾರ, ಶಿಖರ ಇವೆಲ್ಲವೂ ಸಂಪೂರ್ಣವಾಗಿ ಮೂರ್ತಿರಹಿತವಾಗಿರು ವುದು ಇಲ್ಲಿಯ ವಿಶೇಷತೆ. ಮುಂದುಗಡೆ ಪಾತಾಳಂಕಣ, ಸುತ್ತಲೂ ಪ್ರಕಾರ ಮತ್ತು ಮಹಾದ್ವಾರದ ಮೇಲೆ ಏಳು ಅಂತಸ್ತಿನ ದ್ರಾವಿಡ ಶೈಲಿಯ ಗೋಪುರವಿದೆ. ಈ ಗೋಪುರ ನಾಗಮಂಗಲದಿಂದ ಸುಮಾರು ಒಂದು ಮೈಲಿ ದೂರದಿಂದಲೇ ನಮ್ಮ ಗಮನ ಸೆಳೆಯುತ್ತದೆ. ಇದು ಬೇಲೂರಿನ ಶ್ರೀ ಚೆನ್ನಕೇಶವ ದೇವಸ್ಥಾನದ ಗೋಪುರವನ್ನು ಥಟ್ಟನೆ ನೆನಪಿಗೆ ತರುತ್ತದೆ. ಪ್ರಾಕಾರದಲ್ಲಿರುವ ಗುಡಿಗಳಲ್ಲಿ ಶ್ರೀವೈಷ್ಣವ ಸಂಪ್ರದಾಯದ ದೇವರುಗಳಾದ ನಾರಾಯಣಸ್ವಾಮಿ, ಹನುಮಂತ ಮತ್ತು ಆಳ್ವಾರರುಗಳ ವಿಗ್ರಹಗಳಿವೆ. ಅಲ್ಲದೇ ಅಲ್ಲೇ ಪಾಳೆಯಗಾರರ ಕಾಲದಲ್ಲಿ ಸ್ಥಾಪಿಸಲ್ಪಟ್ಟವೆಂದು ನಂಬಲಾದ ಶ್ರೀದೇವಿ, ಭೂದೇವಿ, ನೀಳಾದೇವಿ, ಸುದರ್ಶನ, ಹನುಮಂತ ಇವರ ಸಣ್ಣ ಪುಟ್ಟ ಗುಡಿಗಳಿವೆ. ದೇವಸ್ಥಾನದ ಮುಂಭಾಗದಲ್ಲಿರುವ ಗರುಡಗಂಭ ಉತ್ತಮ ಕಲಾಕೃತಿಯನ್ನು ಹೊಂದಿದ್ದು ಐವತ್ತೈದು ಅಡಿ ಎತ್ತರವಿದೆ. ಕಂಬದ ನಾಲ್ಕು ಪಾರ್ಶ್ವಗಳಲ್ಲಿ ಗರುಡ, ಹನುಮಂತ, ಶಂಖ-ಚಕ್ರ ಹಾಗೂ ತ್ರಿಪುರಸಿಂಹ ಆಕೃತಿಗಳನ್ನು ಕೆತ್ತಲಾಗಿದೆ. ಗೋಪುರ ಮತ್ತು ಕಂಬಗಳನ್ನು ಎತ್ತಿಸಿದವನು ಚನ್ನಪಟ್ಟಣದ ಜಗದೇವರಾಯನೆಂದು ಹೇಳಲಾಗಿದೆ. ಈ ಕಂಬದ ಮೇಲಿರುವ ದೀಪಕ್ಕೆ ಎಣ್ಣೆ ಹಾಕಿ ಅದನ್ನು ಬೆಳಗಿಸುವ ಯಾಂತ್ರಿಕ ವ್ಯವಸ್ಥೆ ಇಂದಿಗೂ ಸುಸ್ಥಿತಿಯಲ್ಲಿದೆ.

ಕಂಬದ ನೆತ್ತಿಯ ಮೇಲೆ ದೀಪ ಹೊತ್ತಿಸಿ ಇರಿಸುವ ವ್ಯವಸ್ಥೆ ವಿಶೇಷ ರೀತಿಯದು. ಕಂಬದ ಮೇಲಿನಿಂದ ಕೆಳಗಿನವರೆಗೆ ಕಂಬವನ್ನು ಬಳಸಿರುವ ಎರಡು ಕಬ್ಬಿಣದ ಸರಪಳಿಗಳನ್ನು ಕಾಣುತ್ತೇವೆ. ಒಂದು ಸರಪಳಿಯನ್ನೆಳೆದಾಗ ಕಂಬದನೆತ್ತಿಯ ಮೇಲಿನಿಂದ, ಅಲ್ಲಿರುವ ದೀಪಾಕೃತಿ ಹಾಗೂ ಸಣ್ಣ ರಂಧ್ರವಿರುವ ಕೊಳಗ ಇವು ಕಂಬದ ಬುಡಕ್ಕೆ ಇಳಿಯುತ್ತವೆ. ದೀಪಾಕೃತಿಯಲ್ಲಿ ಬತ್ತಿ ಜೋಡಿಸಿ, ಹಚ್ಚಿ, ಕೊಳಗಕ್ಕೆ ಎಣ್ಣೆ ಸುರಿದು, ಮತ್ತೊಂದು ಸರಪಳಿಯನ್ನೆಳೆದಾಗ, ದೀಪಾಕೃತಿ ಹಾಗೂ ಕೊಳಗ ಕಂಬದ ನೆತ್ತಿಯ ಮೇಲೆ ಸುರಕ್ಷಿತವಾಗಿ ಸ್ಥಾಪಿಸಲ್ಪಟ್ಟ, ಕೊಳಗದ ಎಣ್ಣೆ ರಂಧ್ರದ ಮೂಲಕ ಸ್ವಲ್ಪ ಸ್ವಲ್ಪವಾಗಿ ಬತ್ತಿಯ ಬುಡಕ್ಕೆ ಸುರಿದುಕೊಂಡು ಜ್ಯೋತಿ ಅನೇಕ ದಿನಗಳ ಕಾಲ

ಬೆಳಗುತ್ತಿರುತ್ತದೆ.

ಸೌಮ್ಯಕೇಶವ ಗುಡಿಯ ಗರ್ಭಗೃಹ ಗೋಡೆಯ ಮೇಲಿರುವ ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ಕ್ರಿ.ಶ. ೧೧೭೦ರ ಶಾಸನವು,[೩೫] ನಾಗಮಂಗಲದ ಚನ್ನಕೇಶವ ದೇವರಿಗೆ ಹಾಲತ್ತಿ (ಹಾಲ್ತಿ) ಗ್ರಾಮದಲ್ಲಿ ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ. ಅಲ್ಲದೇ ಸಾಂದರ್ಭಿಕವಾಗಿ ಮಹದೇವರ ಗುಡಿಯ ಜೊತೆಗೆ ಜನಪದ ದೇವತೆಗಳಾದ ಸುಸಗಲ್ಲಗುಡಿ, ಗುಂಡಗಲ್ಲಗುಡಿ ಹಾಗೂ ಗೊರವನ ಗುಡಿಗಳನ್ನೂ ಹೆಸರಿಸುತ್ತವೆ. ಹೊಯ್ಸಳರ ಕಾಲದ ಈ ಗುಡಿಯು ಮೂಲತಃ ಪ್ರಧಾನ ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಉತ್ತರ-ದಕ್ಷಿಣಗಳಲ್ಲಿ ಒಂದೊಂದಂಕಣದ ಗರ್ಭಗೃಹ ಹಾಗೂ ನವರಂಗದ ಮುಂಭಾಗದಲ್ಲಿ ಅರ್ಧ ಮಂಟಪಗಳಿವೆ. ನಂತರದಲ್ಲಿ ನವರಂಗಕ್ಕೆ ಮೂರು ಅಂಕಣದ ಮುಖಮಂಟಪವನ್ನು ಸೇರಿಸಲಾಗಿದ್ದು, ಇವಿಷ್ಟಕ್ಕೂ ಜಗತಿಯಿದೆ. ವಿಜಯನಗರದ ಕಾಲದಲ್ಲಿ ಪಾತಾಳಾಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರ ಗೋಪುರ, ಬಲಕ್ಕಿರುವ ಎರಡಂಕಣದ ಕೈಸಾಲೆ ಮಂಟಪ ಮತ್ತು ಎದುರಿಗಿರುವ ೫೫ ಅಡಿ ಎತ್ತರದ ಗರುಡಗಂಭಗಳನ್ನು ಸೇರಿಸುವ ಮೂಲಕ ದೇವಾಲಯವನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಲಾಗಿದೆ. ಮುಖಮಂಟಪ ಹಾಗೂ ಶಿಖರಗಳು ವಿಜಯನಗರ ಕಾಲದ ದೇವಾಲಯಗಳ ಶೈಲಿಯಲ್ಲಿಯೇ ಇವೆ.

ಸುಮಾರು ನಾಲ್ಕು ಅಡಿ ಎತ್ತರದ ಜಗಲಿಯ ಮೇಲೆ ಬಹುಕೋನಾಕಾರದ ಸ್ಥಳವಿನ್ಯಾಸವನ್ನು ಹೊಂದಿರುವ ಈ ಗುಡಿಯ ಭಿತ್ತಿಯಲ್ಲಿ ಆಲಂಕಾರಿಕ ಕಂಭಗಳಿವೆ. ಪ್ರಧಾನ ಗರ್ಭಗೃಹದ ದಕ್ಷಿಣ ಭಿತ್ತಿಯ ದೇವಕೋಷ್ಠದಲ್ಲಿ ಉಗ್ರನರಸಿಂಹನ ಶಿಲ್ಪವಿದ್ದು, ಮೇಲೆ ವಿಜಯನಗರ ಕಾಲದ ಇಟ್ಟಿಗೆ-ಗಾರೆಯ ಶಿಖರವಿದೆ. ಪ್ರಧಾಸ ಗರ್ಭಗೃಹದಲ್ಲಿ ಗರಡುಪೀಠದ ಮೇಲೆ ಆರಡಿ ಎತ್ತರದ ಕೇಶವನ ಸುಂದರ ಶಿಲ್ಪವಿದೆ. ಈ ಸರ್ವಾಭರಣಾಲಂಕೃತ ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದು, ಸರ್ಪತೋರಣಯುಕ್ತ ಪ್ರಭಾವಳಿಗಳಲ್ಲಿ ವಿಷ್ಣುವಿನ ದಶಾವತಾರಗಳಿವೆ. ಶಿಲ್ಪದ ಮುಖದಲ್ಲಿಯ ಶಾಂತಿ, ಮಂದಹಾಸಗಳಿಂದಾಗಿ ಅದನ್ನು ಸೌಮ್ಯಕೇಶವನೆಂದೂ ಕರೆಯುತ್ತಾರೆ. ಇಲ್ಲಿ ಸ್ವಾಮಿಗೆ ಬಲಗೈನಲ್ಲಿ ಶಂಕು, ಎಡಗೈನಲ್ಲಿ ಚಕ್ರವಿದೆ. ಶಂಕು ಕ್ಲೇಶಪರಿಹಾರದ ಸಂಕೇತ. ಅಂದರೆ ಶತ್ರು ನಾಶ. ಶಾಂತ ಸ್ವಭಾವದ ಮೂರ್ತಿ, ಗರ್ಭಗೃಹ ಮತ್ತು ಸುಖನಾಸಿಯ ಬಾಗಿಲವಾಡಗಳಿಗೆ ದ್ವಾರಪಾಲಕರಿದ್ದು, ನವರಂಗದ ದಕ್ಷಿಣ ಮತ್ತು ಉತ್ತರ ಗರ್ಭಗೃಹಗಳಲ್ಲಿರುವ ಆಳೆತ್ತರದ ವೇಣುಗೋಪಾಲ ಹಾಗೂ ಲಕ್ಷ್ಮೀನರಸಿಂಹನ ಸುಂದರ ಶಿಲ್ಪಗಳು ವಿಜಯನಗರ ಕಾಲದ ಲಕ್ಷಣವನ್ನು ಹೊಂದಿವೆ. ಬಾಗಿಲಲ್ಲಿ ದ್ವಾರಪಾಲಕರಿದ್ದಾರೆ. ೧೨ ಅಂಕಣಗಳನ್ನುಳ್ಳ ವಿಶಾಲ ನವರಂಗದ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ೧೨ ಅಂಕಣಗಳನ್ನುಳ್ಳ ವಿಶಾಲ ನವರಂಗದ ಬಾಗಿಲಿನಲ್ಲಿ ದ್ವಾರಪಾಲಕರು, ಲಲಾಟಗಳಲ್ಲಿ ಗಜಲಕ್ಷ್ಮೀ, ಒಳಗೆ ಆದಿಶೇಷ ಹಾಗೂ ವಿಶ್ವಕಸೇನರ

ಶಿಲ್ಪಗಳಿವೆ. ನವರಂಗಕ್ಕೆ ಬಹುಕೋನಾಕಾರದ ವೈವಿಧ್ಯಮಯ ಕಂಬಗಳಿದ್ದು, ಛತ್ತುಗಳು, ಅಲಂಕೃತ ಕಮಲ, ನಕ್ಷತ್ರಗಳಿಂದಾಗಿ ಆಕರ್ಷಕವಾಗಿದ್ದು, ಪ್ರಧಾನ ಛತ್ತು ಅಷ್ಟದಿಕ್ಪಾಲಕರಿಂದ ಆವೃತವಾದ ಕಮಲಾಲಂಕಾರವನ್ನು ಹೊಂದಿದೆ. ನವರಂಗದ ಮುಂದಿನ ಅರ್ಧಮಂಟಪವು ವಿಜಯನಗರದ ಕಾಲದ್ದಾಗಿದ್ದು, ವಿಶಾಲವೂ, ಎತ್ತರವೂ ಆದ ಮುಖಮಂಟಪವಿದೆ.

ಇಲ್ಲಿಯ ಮೇಲ್ಛಾವಣಿಯಲ್ಲಿ ಹನ್ನೆರಡು ಕಮಲ ಫಲಕಗಳ ಪೈಕಿ ಇಂದು ನಾವು ಕಾಣುವುದು ಎಂಟನ್ನು ಮಾತ್ರ. ನವರಂಗಕ್ಕೆ ಸೂರ್ಯನ ಬೆಳಕು ಸಾಕಷ್ಟು ಬರಲಿ ಎಂಬ ಉದ್ದೇಶದಿಂದ, ನಾಲ್ಕು ಕಮಲ ಫಲಕಗಳನ್ನು ತೆಗೆದುಹಾಕಿ ಸಣ್ಣ ಸಣ್ಣ ಕಿಂಡಿಗಳಿಂದ ಕಿಟಕಿಗಳ ವ್ಯವಸ್ಥೆ ಮಾಡಲಾಘಿದೆ. ಪ್ರಾಕಾರದ ಗೋಡೆಯು ಸರಳವಾಗಿದ್ದು ನೈರುತ್ಯಕ್ಕೆ ಮಡಪಲ್ಲಿನಾಚಾರ್, ವೈಕುಂಠನಾರಾಯಣ, ಸುದರ್ಶನಾಳ್ವಾರ್, ಹನುಮಂತ, ವಾಯುವ್ಯಕ್ಕೆ ಸೌಮ್ಯನಾಯಕಿ, ಈಶಾನ್ಯಕ್ಕೆ ರಾಮಾಯನುಜ, ಪಿಳ್ಳೈಲೋಕಾಚಾರ್ಯರ ಗುಡಿ, ಯಾಗಶಾಲೆ ಹಾಗೂ ಮನವಾಳ ಮಹಾಮುನಿಯ ಗುಡಿಗಳಿವೆ. ಪ್ರಾಕಾರದ ಮಹಾದ್ವಾರವು ವಿಜಯನಗರದ ಕಾಲದ್ದಾಗಿದ್ದು ದ್ರಾವಿಡಶೈಲಿಯ ಆರು ಅಂತಸ್ತಿನ ಆಕರ್ಷಕ ಗೋಪುರವನ್ನು ಹೊಂದಿದೆ. ಗುಹೆಯ ಎಡಭಾಗದಲ್ಲಿರುವ ವಿಶಾಲವಾದ ಸಭಾಮಂಟಪವು ಹಿಂದೆ ಮಹಾರಾಜರ ಸಭಾಸ್ಥಾನವಾಗಿದ್ದಂತೆ ತೋರುತ್ತದೆ. ಹಿಂದಿನಿಂದಲೂ ನಾಗಮಂಗಲ ಪಂಚಲೋಹ ಕಲಾಕುಸರಿ ಕೆಲಸಕ್ಕೆ ಹೆಸರಾಗಿದ್ದು ದೇವಾಲಯದಲ್ಲಿರುವ ವಿವಿಧ ಉತ್ಸವ ಮೂರ್ತಿಗಳಲ್ಲಿ ಕೆಲವಾದರೂ ಸ್ಥಳೀಯ ಶಿಲ್ಪಗಳದ್ದಾಗಿವೆ. ದೇವಾಲಯದ ಹೊರಭಾಗದಲ್ಲಿರುವ ಲಕ್ಷ್ಮೀ ದೇವಾಲಯದ ಗರ್ಭಗುಡಿಯ ಮೇಲೆ ಸೈನಿಕರ ಮತ್ತು ವೈಷ್ಣವ ಧರ್ಮಕ್ಕೆ ಸೇರಿದ ಭಿತ್ತಿ ಚಿತ್ರಗಳನ್ನು ಗೆರೆಯ ಮೂಲಕ ರಚಿಸಿರುವುದನ್ನು ಕಾಣಬಹುದು.

ಬುಜರಕಂಚನಹಳ್ಳಿ, ಉತ್ತರ ಕನ್ನಡ

ಸಾಂಸ್ಕೃತಿಕ ಪರಿಸರ :

ಬಯಲು ಪ್ರದೇಶಕ್ಕಿಂತ ತುಂಬಾ ವೈಶಿಷ್ಟತೆಯುಳ್ಳ ಪ್ರದೇಶ ಬಿ.ಕೆ.ಹಳ್ಳಿ. ಇದು ಮಲೆನಾಡಲ್ಲಿರುವುದರಿಂದ ಇಲ್ಲಿನ ಹಳ್ಳಿ ಎಲ್ಲಿಲ್ಲದ ಮೆರಗು ಕೂಡ. ಹತ್ತು ಹಲವು ಕಾರಣಗಳಿಂದ ಈ ಪ್ರದೇಶವು ತನ್ನದೇ ದಾಟಿಯಲ್ಲಿ ವಿಶೇಷತೆಯನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ವಾಸಿಸುವ ವೈವಿಧ್ಯಮಯ ಜನಸಮುದಾಯದ ಜೀವನ ವಿಧಾನ, ಸಾಂಸ್ಕೃತಿಕ ಬದುಕು, ಧಾರ್ಮಿಕ ಆಚಾರ, ವಿಚಾರಗಳು, ಬೇರೆ ಬೇರೆಯಾಗಿರುವಂತೆಯೇ ಅವುಗಳನ್ನು ಅನುಸರಿಸಿ ಬೆಳೆದ ಈ ಭಾಗದ ಚಿತ್ರಕಲೆಯೂ ವೈವಿಧ್ಯತೆಯಿಂದ ಕೂಡಿದ್ದಾಗಿದೆ. ಈ ಪ್ರದೇಶದ ವಿಶೇಷ ಕಲಾಪ್ರಕಾರವಾದ ಕಾವಿ ಬಣ್ಣದ ಭಿತ್ತಿ ಚಿತ್ರಗಳು ಇಲ್ಲಿರುವಂತೆಯೇ ಬಹುವರ್ಣದ ಭಿತ್ತಿಚಿತ್ರಗಳೂ ಇಲ್ಲಿ ರಚನೆಯಾಗಿವೆ. ಕಾವಿ ಭಿತ್ತಿ ಚಿತ್ರಗಳು ಸಾಮಾನ್ಯವಾಗಿ ಈ ಪ್ರದೇಶದಲ್ಲಿನ ಹೆಚ್ಚಿನ ದೇವಾಲಯಗಳಲ್ಲಿ ಕಂಡುಬಂದರೆ, ಬಹುವರ್ಣದ ಭಿತ್ತಿ ಚಿತ್ರಗಳು ಕೆಲವು ಸ್ಥಳಗಳಲ್ಲಿ ಅಂದರೆ ಮೂಡಬಿದರೆಯ ಸಮೀಪದ ಬಜಗೋಳಿ, ಕಾರ್ಕಳದ ಜೈನಮಠ, ಉಗ್ಗಲ್ ಬೆಟ್ಟುವಿನ ಉಪ್ಪುರುಗರಡಿ, ಕೂಗಾರು ಘಟ್ಟದ ಜೈನಬಸ್ತಿ, ಸೆಂಟ್ ಅಲೋಸಿಯಸ್ ಚರ್ಚ್ ಮುಂತಾದ

ಕಡೆಗಳಲ್ಲಿ ಪ್ರಾಚೀನ ಕಾಲದ ಬಹುವರ್ಣ ಚಿತ್ರಗಳಿದ್ದು, ಇದೇ ಬಿ.ಕೆ ಹಳ್ಳಿಯೂ ಇವುಗಳ ವರ್ಗಕ್ಕೆ ಸೇರ್ಪಡೆಗೊಳ್ಳುತ್ತದೆ.

ಬಿ.ಕೆ ಹಳ್ಳಿಯಲ್ಲಿರುವ ಶ್ರೀರಾಮ ದೇವಾಲಯದಲ್ಲಿ ಭಿತ್ತಿ ಚಿತ್ರಗಳಿದ್ದು, ಅತಿಸರಳವಾಗಿ ರಚನೆ ಮಾಡಲಾಗಿದೆ. ತುಂಬಾ ವೈಭವಪೂರ್ಣವಾಗಿ ಬಿಂಬಿಸಿರಲಿಲ್ಲ. ಯಾಕೆಂದರೆ ತುಂಬಾ ಹಳೆ ದೇವಾಲಯವಾಗಿತ್ತು ಆ ಕಾರಣ. ಸದ್ಯ ಈ ದೇವಾಲಯವು ಮತ್ತು ಭಿತ್ತಿ ಚಿತ್ರಗಳು ಇಲ್ಲವಾದರೂ ಮಾಹಿತಿ ಲಭ್ಯವಿರುವ ಕಾರಣ ಈ ಅಧ್ಯಯನಕ್ಕೆ ಸೇರಿಸಲು ಪ್ರಯತ್ನಿಸಿದ ಭಾಗವಾಗಿ ದೇವಾಲಯವು ಸರಳತೆ ಮತ್ತು ಭಿತ್ತಿ ಚಿತ್ರಗಳ ಸೌಂದರ್ಯದ ರಸಭಾವಗಳಿಂದ ಕೂಡಿದ ಹಿನ್ನಲೆಯಲ್ಲಿ ಇದರ ಇತಿಹಾಸವನ್ನು ಇಲ್ಲಿ ಹೇಳಲ್ಪಟ್ಟಿರುತ್ತದೆ.

ಈ ಭಾಗದ ದೇವಾಲಯಗಳ ರಚನೆ ಶಾಸ್ತ್ರಾಧಾರಿತವಾದರೂ ಇಲ್ಲಿಯ ಹವಮಾನ ಮತ್ತು ಸ್ಥಳಿಯ ಅವಶ್ಯಕತೆಗಳಿಗೆ ತಕ್ಕಂತೆ ಬೆಳೆದುಬಂದಿದೆ. ಗಾರೆ, ಮರ ಮತ್ತು ಚಪ್ಪಡಿಕಲ್ಲು ಇಲ್ಲಿನ ದೇವಾಲಯಗಳ ನಿರ್ಮಾಣದಲ್ಲಿ ಉಪಯೋಗಿಸುವ ಪ್ರಮುಖ ವಸ್ತುಗಳಾಗಿವೆ. ಈ ದೇವಾಲಯಗಳ ನಿರ್ಮಾಣದಲ್ಲಿ ಕಲದಿಂದ ಕಾಲಕ್ಕೆ ಸಾಕಷ್ಟು ಬದಲಾವಣೆಗೊಂಡಿವೆ ಎಂಬುದನ್ನು ಹಿರಿಯರು ತಿಳಿಸಿದ್ದಾರೆ. ದೇವಾಲಯ ನಿರ್ಮಾಣಕ್ಕೆ ಮೊದಲು ಗರ್ಭಗುಡಿಯಲ್ಲಿ ಮೂಲ ದೇವರನ್ನು ಕೂರಿಸಿ ಅದಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ, ಮಳೆ ಹುಲ್ಲಿನ ಹೊದಿಕೆ ಹಾಕಿ ಪೂಜೆಯನ್ನು ಪ್ರಾರಂಭಿಸಿವುದು ಇಲ್ಲಿನ ವಾಡಿಕೆ. ನಂತರ ದೇವಾಲಯ ನಿರ್ಮಾಣಕ್ಕೆ ಸಾಕಷ್ಟು ಸಮಯವನ್ನು[೩೬] ಪಡೆದಿರುತ್ತಾರೆ.

ಹಳಿಯಾಳದಿಂದ ದಕ್ಷಿಣಕ್ಕೆ ಮೂರು ಕಿ.ಮೀ ಇರುವ ಬಿ.ಕೆ ಹಳ್ಳಿಯ ಪ್ರದೇಶದಲ್ಲಿ ಕದಂಬರನ್ನೊಳಗೊಂಡಂತೆ ಅರಸರು ಕೂಡ ತನ್ನ ಆಳ್ವಿಕೆಯನ್ನು ಮಾಡಿರುತ್ತಾರೆ. ಇಲ್ಲಿ ತುಂಬಾ ಹಳೆಯ ಕೋಟೆಯು ಇದ್ದು, ಚಾಲುಕ್ಯ ಪೂರ್ವದ್ದಾಗಿರುತ್ತದೆ.[೩೭] ಇಲ್ಲಿಂದ ಕೇವಲ ೯ ಮೈಲು ದೂರದಲ್ಲಿರುವ ಸಾಂಬ್ರಾಣಿ ಎಂಬಲ್ಲಿ ಸೋದೆಯ ಅರಸು ಸಾಂಬಸದಾಶಿವರಾಯ (೧೬೭೪–೧೬೯೬) ಆಳುತ್ತಿದ್ದನು. ಈ ಪ್ರದೇಶದಲ್ಲಿ ಅನೇಕ ಪ್ರಾಚೀನ ಸ್ಮಾರಕಗಳು ಈಗಲೂ ಸಿಗುತ್ತವೆ. ನಂತರದಲ್ಲಿ ಹೈದರ್ ಅಲಿ, ಟಿಪ್ಪುಸುಲ್ತಾನ್ ಮತ್ತು ಮರಾಠಿಗರು ಈ ಭಾಗದಲ್ಲಿ ತಮ್ಮ ಆಳ್ವಿಕೆ ನಡೆಸಿದ್ದಾರೆ. ಈ ದೇವಾಲಯದಲ್ಲಿನ ಭಿತ್ತಿ ಚಿತ್ರಗಳು ಮರಾಠರ[೩೮] ಪ್ರಭಾವದಿಂದ ಕೂಡಿರುವುದರಿಂದ ಇಲ್ಲಿನ ಚಿತ್ರಗಳು ಮರಠ ಆಳ್ವಿಕೆಯಲ್ಲಿ ರಚಿಸಿರಬಹುದೆಂದು ಇತಿಹಾಸ ತಜ್ಞರ ಅಭಿಪ್ರಾಯವಾಗಿದೆ.

ದ.ಕರ್ನಾಟಕದ ಚರ್ಚುಗಳಲ್ಲಿರುವ ಭಿತ್ತಿ ಚಿತ್ರಗಳ ಹಿನ್ನಲೆ :

ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಬಂದು ಅರವತ್ತೇಂಟು ವರ್ಷಗಳಾಗಲು ಬಂದರೂ ಜನಾಭಿಪ್ರಾಯದ ಆಧಾರದ ಮೇಲೆ ಸರ್ಕಾರವು ನಿರ್ಮಿತಾದರೆ ಜನಜೀವನ ಮತ್ತು ಜನರ ವರ್ತನೆಯ ಮಟ್ಟಗಳು ತಾವಾಗಿಯೇ ಮೇಲಕ್ಕೇರುವವೆಂಬ ಆಯಾಮವು ಎಲ್ಲಾಕಡೆ ಇತ್ತು

ಆದರೆ ಅರವತ್ತು ವರುಷಗಳು ಆಗುವ ಸಂದರ್ಭಗಳ ಅನುಭವವು ಇಂತಹ ಕಲ್ಪನೆ ನಿರಾಧಾರವೆಂಬುದು ತೋರಿಸಿಕೊಟ್ಟಿದೆ. ರಾಜಕೀಯದಿಂದ ಸ್ವಾತಂತ್ರ್ಯ ಬಂದರೆ ಸಾಮಾಜಿಕ ಸಮಾನತ್ವವು, ಆರ್ಥಿಕ ಸಮಾನತ್ವವು ಬೆಳೆದು ಸಾಮಾನ್ಯ ಜನ ಜೀವನದ ಮಟ್ಟವು ಏಳಿಗೆಯನ್ನು ಹೊಂದುವ ಅವಕಾಶಗಳು ತಾವಾಗಿಯೇ ಮೂಡುತ್ತವೆ ಎಂಬ ನಂಬಿಕೆಯು ಸತ್ಯಾಂಶದಿಂದ ದೂರ ಉಳಿದಿದೆ ಎಂಬಂಶವನ್ನು ಈಗ ಸರ್ವರಿಗೂ ತಿಳಿದಂತಾಗಿದೆ ಹಾಗೆಯೇ ಧರ್ಮ ಎನ್ನುವ ಪದವು ಸಮಾಜದಲ್ಲಿರುವ ಎಲ್ಲಾ ಅಂತಸ್ತಿನ ಮತ್ತು ಎಲ್ಲಾ ವಯಸ್ಸಿನ ಜನರು ಉಪಯೋಗಿಸುವ ಪದ ಸಾಮಾನ್ಯವಾಗಿದೆ

ಕ್ರೈಸ್ತ ಧರ್ಮ :

ಪ್ರಪಂಚದ ಧರ್ಮಗಳಲ್ಲಿ ಹಿರಿದಾದ ಧರ್ಮ ಕ್ರೈಸ್ತ ಧರ್ಮ, ಇದು ವಿಶಿಷ್ಟವಾದ ಹಾಗೂ ವಿನೂತನವಾದ ಧರ್ಮ, ಮಾನವ ಈ ಧರ್ಮದ ಕೇಂದ್ರ ವ್ಯಕ್ತಿ. ಮಾನವೀಯ ಮೌಲ್ಯಗಳು ಈ ಧರ್ಮದ ದೀಪ ಸ್ತಂಭಗಳು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವುದು. ಇತರ ಧ್ಯೇಯೋದ್ದೇಶ, ಯೇಸುಕ್ರಿಸ್ತ ಕ್ರೈಸ್ತ ಧರ್ಮದ ಸ್ಥಾಪಕನೆಂಬುದು ಬಹುಜನ ವಿದ್ವಾಂಸರ ಅಭಿಪ್ರಾಯವಾಗಿದೆ.

ಕರ್ನಾಟಕಕ್ಕೆ ಕ್ರೈಸ್ತಮತ, ಹಿಂದಿನಿಂದಲೂ ಯುರೋಪಿನೊಂದಿಗೆ ವ್ಯಾಪಾರ ಸಂಬಂಧಗಳಿದ್ದ ಕಾರಣ, ಕೊಂಕಣಿ ಕರಾವಳಿಗೆ ಬಂದಿತು. ಕ್ರಿ.ಶ. ೧೩೨೪ರಲ್ಲಿ ಡೊಮಿನಿಕನ್ ಪಂಥಕ್ಕೆ ಸೇರಿದ ಪಾದ್ರಿಗಳು ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರೇ ಕರ್ನಾಟಕಕ್ಕೆ ಬಂದ ಮೊದಲ ಮಿಷಿನರಿಗಳು, ಇವರು ಕೆನರಾ, ಮೈಸೂರು, ಮಲಬಾರ್ ಮತ್ತು ಟ್ರಾವಂಕೂರುಗಳಲ್ಲಿ ಮತ ಪ್ರಚಾರವನ್ನು ಪ್ರವೇಶಿಸಿದ ವಿವಿಧ ಸಂಘಗಳು, ಕೆನರಾ ಮಿಷನ್ (೧೫೩೮) ಮೈಸೂರು ಮಿಷನ್ (೧೬೪೮), ಕರ್ನಾಟಕ ಮಿಷನ್ (೧೭೦೦) ಹೀಗೆ ರಾಜ್ಯಾದ್ಯಂತ ಧರ್ಮ ಪ್ರಚಾರ ಕಾರ್ಯವನ್ನು ಮುಂದುವರಿಸಿದವು. ಕರ್ನಾಟಕದ ಭವ್ಯ ಪರಂಪರೆಯ ಪ್ರಕಾಶಕ್ಕೆ ಕಾರಣವಾಗಿ ಸಾವಿರಾರು ಚರ್ಚುಗಳು ಇಂದು ಮುಗಿಲೆತ್ತರಕ್ಕೆ ಮೂಡಿನಿಂತಿವೆ. ಕರಾವಳಿ ಕರ್ನಾಟಕದ ಕ್ರೈಸ್ತರು ನಾಡು-ನುಡಿಗೆ ಸಲ್ಲಿಸುತ್ತಿರುವ ಸೇವೆ ಅಪಾರ. 'ಪರಸೇವೆಯೇ ಪರಮಾತ್ಮನ ಸೇವೆ'ಯೆಂಬ ಧರ್ಮನಿಷ್ಠೆಯ ಜೊತೆಗೆ ಸೇವೆಯನ್ನು ಮೈಗೂಡಿಸಿಕೊಂಡು ತಾಳ್ಮೆ, ಸಹನೆ, ಸಹಕಾರಕ್ಕೆ ಹೆಸರಾಗಿದ್ದಾರೆ. ಕಾರವಾರ, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಾದ್ಯಂತ ಕ್ರೈಸ್ತರು ವಾಸಿಸುತ್ತಿದ್ದು, ಎಲ್ಲಾ ಧರ್ಮಗಳಿಗೂ ಸರಿಸಮಾನವೆಂಬಂತೆ ಬಿಂಬಿತವಿರುವ ಕ್ರೈಸ್ತ ಧರ್ಮವು ಕರಾವಳಿ ಕರ್ನಾಟಕದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದ್ದು, ಈ ಭಾಗದಲ್ಲಿ ಇನ್ನೂರ ಐವತ್ತರಿಂದ ಮೂರುನೂರು ಕ್ರೈಸ್ತ ಧರ್ಮದ ದೇವಾಲಯಗಳಿದ್ದು, ಯೇಸುಸ್ವಾಮಿಯ ಪವಾಡದ ದೃಶ್ಯಗಳು ಚಿತ್ರಗಳ ರೂಪದಲ್ಲಿ ಕೆಲವು ಕ್ರೈಸ್ತ ಮಂದಿರಗಳಲ್ಲಿ ಭಿತ್ತಿಚಿತ್ರ, ಬಟ್ಟೆ ಮಾಧ್ಯಮದ ಚಿತ್ರ ಮತ್ತು ಗಾಜಿನ ಮೇಲಿನ ಚಿತ್ರಗಳನ್ನು ಕಾಣಬಹುದಾಗಿದೆ.

ಕರಾವಳಿ ಕ್ರೈಸ್ತರು ಮತ್ತು ದೇವಾಲಯಗಳು :

ಕರಾವಳಿ ಕರ್ನಾಟಕದ ಕ್ರೈಸ್ತೇತರ ಪರಿಸರದಲ್ಲಿ ಕ್ರೈಸ್ತ ಧರ್ಮವು ಹುಟ್ಟಿ ಬೆಳೆದದ್ದಕ್ಕೆ ಕಾರಣ ವಿಜಯನಗರ ಮತ್ತು ಕೆಳದಿಯ ಅರಸರು. ದೇವ ಪ್ರಭುತ್ವವಾಗದೆಯೂ ಧರ್ಮ ಸಂರಕ್ಷಣ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದದ್ದು, ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಕ್ರೈಸ್ತ ಧರ್ಮವು ಆಗಮಿಸಿದುದರಿಂದ ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಬೌದ್ಧಿಕ ಪರಿಣಾಮಗಳು ಕಾಣಿಸಿಕೊಂಡವು. ಕ್ರೈಸ್ತ ಧರ್ಮವು ಕರ್ನಾಟಕಕ್ಕೆ ಒಂದು, ಭಾರೀ ಬಂಡೆಯಂತೆ ಬಂದೆರಗಲಿಲ್ಲ. ಏಕೆಂದರೆ ಕರಾವಳಿ ಕರ್ನಾಟಕಕ್ಕೆ ಬಂದ ಯುರೋಪಿಯನ್ ಕ್ರೈಸ್ತರಿಗೆ ಈಪ್ರದೇಶದ ಆಸಕ್ತಿಗಳಲ್ಲಿ ಘರ್ಷಣೆಗಳು ಎದುರಾದವು. ಅದು ಪೋರ್ಚ್‌ಗೀಸರಿಗೂ ಡಚ್ಚರಿಗೂ, ಪೋರ್ಚ್‌ಗೀಸರಿಗೂ ಫ್ರೆಂಚರಿಗೂ ಮತ್ತು ಪೋರ್ಚ್‌ಗೀಸರಿಗೂ ಮತ್ತು ಬ್ರಿಟೀಷರಿಗೂ ಹೀಗೆ ದೇಶಿಯ ಶಕ್ತಿಗಳು ಎಲ್ಲಲ್ಲಿ ಯಾವಾಗ ಸಾಧ್ಯವೋ ಅಲ್ಲೆಲ್ಲಾ ಆ ಕಾಲಾವಧಿಯಲ್ಲೆಲ್ಲಾ ಕ್ರೈಸ್ತ ಶಕ್ತಿಗಳ ನಡುವೆ ಭೇದ, ಭಿನ್ನಾಭಿಪ್ರಾಯಗಳನ್ನು ಮಾಡಿಸಿ, ಒಡಕು ತರಲು ಪ್ರಯತ್ನಿಸಿದುದನ್ನು ಇಂದು ಕಾಣಬಹುದಾಗಿದೆ.

ಮುಖ್ಯವಾಗಿ ಕ್ರೈಸ್ತರ ಚಿತ್ರಕೃತಿಗಳ ಕುರಿತು ವರದಿಯ ಅನುಸಾರ ಕರಾವಳಿಯಲ್ಲಿನ ಕ್ರೈಸ್ತರ ಇತಿಹಾಸವನ್ನು ಮೊದಲು ತಿಳಿದಿಕೊಳ್ಳಬೇಕಾಗುತ್ತದೆ. ವಿಜಯನಗರ ಹಿಂದೂ ಸಾಮ್ರಾಜ್ಯದ ಅರಸರು ಮತ್ತು ಕೆಳದಿಯ ನಾಯಕರೊಂದಿಗೆ ಕ್ರೈಸ್ತರು ಹೊಂದಿದ್ದ ಸಂಬಂಧ ಹಾಗೂ ದೇಶಿಯ, ವಿದೇಶಿಯ ಕ್ರೈಸ್ತರ ಚಟುವಟಿಕೆಗಳನ್ನು ದಾಖಲಿಸುವುದು ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ, ಕ್ರೈಸ್ತ ಧರ್ಮವು ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಹಂತಗಳೆರಡರಲ್ಲೂ ಹಲವು ಬಗೆಯಾಗಿ ಒಡೆದಿದ್ದನ್ನು ಇತಿಹಾಸದಲ್ಲಿ ನೋಡುತ್ತೇವೆ. ಉದಾಹರಣೆಗೆ ಯುರೋಪಿಯನ್ ದೇಶಗಳ ಲೌಕಿಕ ಸ್ತರದಲ್ಲಿ ಅಂತರ್ವಾಹಿನಿಯಾಗಿ ರಾಷ್ಟ್ರೀಯ ಮತ್ತು ರಾಷ್ಟ್ರೀಯತೆ ಹಿತಾಸಕ್ತಿಗಳು ಹರಿಯುತ್ತಿದ್ದವು. ಹಾಗೆಯೇ ಆಧ್ಯಾತ್ಮಿಕ ಸ್ಥರದಲ್ಲಿ ಕ್ರೈಸ್ತ ಧರ್ಮವು ಕ್ಯಾಥೋಲಿಕರು, ಪ್ರಾಂಟೆಸ್ಟೆಂಟರು, ಆಂಗ್ಲಿಕನ್ನರು ಮತ್ತು ಕಾಲ್ವಿನಿಷ್ಟರು ಎಂದು ಹಲವು ಪಂಗಡಗಳಾಗಿ ಒಡೆದಿತ್ತು. ಅಂಗಾಗಿ ಆಧ್ಯಾತ್ಮಿಕ ಸ್ತರದಲ್ಲಾಗಲಿ, ಲೌಕಿಕ ಸ್ತರದಲ್ಲಾಗಲಿ, ಕ್ರೈಸ್ತ ಧರ್ಮವು ಒಂದು ಅಖಂಡ ಶಕ್ತಿಯಾಗಿರಲಿಲ್ಲ. ಕ್ರಿ.ಶ. ೧೫೦೦ಕ್ಕಿಂತ ಮೊದಲೇ ಇಲ್ಲಿ ಕ್ರೈಸ್ತ ಧರ್ಮ ವಿದ್ದಿತು. ಆದರೆ ಪಶ್ಚಿಮ ಕರಾವಳಿಯ ಸಣ್ಣ ಸಣ್ಣ ಪ್ರದೇಶಗಳಿಗೆ ಅದು ಸೀಮಿತವಾಗಿದ್ದಿತು. ಅದರ ಪ್ರಭಾವ ಅಷ್ಟಾಗಿ ಗಮನಾರ್ಹವಾಗಿರಲಿಲ್ಲ. ಈ ಕಾಲಾವಧಿಯಲ್ಲಿ ಕ್ರೈಸ್ತ ಧಮ್ಮ ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಹೀಗೆ ಹಲವು ಆಯಾಮಗಳನ್ನು ಹೊಂದಿದ್ದಿತು. ವಿಜಯನಗರ ಮತ್ತು ಕೆಳದಿ ಕಾಲದಲ್ಲಿ ಕರ್ನಾಟಕದ ಕರಾವಳಿ ಪ್ರದೇಸದಲ್ಲಿ ಕಂಡುಬಂದಿದ್ದ, ಕ್ರೈಸ್ತರ ಅನೇಕ ಚಟುವಟಿಕೆಗಳ ವಿವಿಧ ಆಯಾಮಗಳನ್ನು ಒಟ್ಟಿಗೆ ತರಲು ಪ್ರಯತ್ನಿಸುವ ಉದ್ದೇಶವಿದ್ದು, ಈ ಕ್ಷೇತ್ರದಲ್ಲಿನ ಇತರ ಕೃತಿಗಳಿಗಿಂತ ಒಂದು ರೀತಿಯಲ್ಲಿ ಭಿನ್ನವೆಂದೇಳಬಹುದು. ಕಾರಣ ಲಲಿತಕಲೆಗಳಲ್ಲಿ ಪ್ರಮುಖವಾದ ಅಂಗಗಳಾದ ಚಿತ್ರಕಲೆ ಮತ್ತು

ಶಿಲ್ಪಕಲೆಗಳನ್ನು ಕ್ರೈಸ್ತ ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಕ್ರೈಸ್ತ ಭಿತ್ತಿ ಚಿತ್ರಕಲೆ

ಅಭಿವ್ಯಕ್ತಿ ಪ್ರಧಾನವಾದ ಚಿತ್ರಕಲೆಯನ್ನು ಎರಡು ರೀತಿಯಗಳಿಂದ ಪರಿಗಣಿಸ ಬೇಕಾಗುತ್ತದೆ. ಈಗಾಗಲೇ ರಚಿತವಾಗಿರುವ ಚಿತ್ರಕಲಾ ಕೃತಿಗಳನ್ನು ಇರಿಸಿ, ಅವುಗಳ ಮೂಲಕ ಅಲ್ಲಿಯಸಂಸ್ಕೃತಿಯನ್ನು ನೋಡುವುದು ಒಂದಾದರೆ ಒಂದು ಜನಾಂಗದ ಆಚರಣೆಯ ಸಂದರ್ಭದಲ್ಲಿ ರಚಿತವಾಗುವ ಕಲಾಕೃತಿಗಳಿಂದ ಅಲ್ಲಿಯ ಸಂಸ್ಕೃತಿಯನ್ನು ಪರಿಶೀಲಿಸುವುದು ಇನ್ನೊಂದು ಎಂಬಂತೆ ಸಾಮಾಜಿಕ ಜೀವನದಲ್ಲಿ ಆ ಸಂದರ್ಭದಲ್ಲಿ ಪರಿಸರದಲ್ಲಿ ನಡೆದಿರುವ ಘಟನೆಗಳನ್ನು ಚಿತ್ರಗಳ ಮೂಲಕ ತೋರಿಸುವುದು ಪ್ರಸ್ತುತ ಇಂದಿನ ಸಮಾಜಕ್ಕೆ ಅನಿವಾರ್ಯವಾಗಿದೆ. ಭಿತ್ತಿ ಚಿತ್ರವನ್ನು ಒಂದು ದೇಶಿ ಬದ್ಧಕಲೆ ಎಂದು ಗುರುತಿಸಲಾಗುತ್ತದೆ. ಚಲನ ರಹಿತವಾದ ಕಾಲಬದ್ಧವಾದ ಕಲೆಗಿಂತ ಪ್ರಭಾವಿ ಎಂಬುದನ್ನು ಪ್ರಪಂಚದಲ್ಲಿ ಪ್ರಮುಖ ಚಿತ್ರ ನೆಲೆಗಳನ್ನು ಆಧರಿಸಿ ಹೇಳಬಹುದಾಗಿದೆ.

ಒಂದು ಭಿತ್ತಿಚಿತ್ರ ಮತ್ತೊಂದು ಚಿಕ್ಕ ಪ್ರತಿಯ ಚಿತ್ರಗಳೆಂದು ಕರೆಯಬಹುದು. ನಮಗೆ ದೊರೆತಿರುವ ಪ್ರಾಚೀನ ಚಿತ್ರಗಳೆಲ್ಲಾ ಮುಖ್ಯವಾಗಿ ಭಿತ್ತಿ ಚಿತ್ರಗಳೇ! ಅಜಂತಾ, ಎಲ್ಲೋರಾ, ಬದಾಮಿ ಗುಹೆಗಳ ಚಿತ್ರಗಳು, ವಿಜಯನಗರ, ಲೇಪಾಕ್ಷಿ ಮೊದಲಾದ ಪ್ರಮುಖ ಸ್ಥಳಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇವೆಲ್ಲವು ಇತಿಹಾದ ಕಂಡಂತಹ ಪ್ರಾಚೀನ ಚಿತ್ರಗಳೆಂದೇ ಕರೆಯಬಹುದು. ಹಾಗೆಯೇ ಮುಂದುವರೆದಂತೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕ್ರೈಸ್ತ ಧರ್ಮದ ಚರ್ಚ್‌ಗಳಲ್ಲಿ ವಿವಿಧ ರೀತಿಯ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು. ಮುಖ್ಯವಾದ ಕೆಲವು ಚರ್ಚ್‌ಗಳಲ್ಲಿ ಇಟಾಲಿಯನ್ ಶೈಲಿಯ ಗೋಡೆವರ್ಣ ಚಿತ್ರವನ್ನು ರಚಿಸಲಾಗಿದ್ದು, ಅವು ೧೮೯೯ರ ನಂತರ ಜೊತೆಗೆ ಸಂಯೋಜನಾ ಚಿತ್ರಗಳೂ ಕೂಡ ರಚಿತವಾಗಿದ್ದವೆ. ಭಿತ್ತಿ ಚಿತ್ರಗಳಲ್ಲಿ ಪ್ರಮುಖವಾಗಿ ಎರಡು ರೀತಿಯದ್ದಾಗಿ ಪರಿಣಮಿಸಿದೆ. ಅದು ೧೯ನೆಯ ಶತಮಾನದ ಹಿಂದಿನ ದಿನಮಾನಗಳಲ್ಲಿ ಭಿತ್ತಿ ಚಿತ್ರಗಳನ್ನು ಗೋಡೆಯ ಮೇಲೆ ಚಿತ್ರಿಸುತ್ತಿದ್ದರು. ಆದರೆ ಸಿಮೆಂಟ್‌ನಿಂದ ಮಾಡಿದ ಹಸಿಗೋಡೆಯ ಮೇಲೆ ರೇಖೆಗಳನ್ನು ಗುರುತಿಸಿ, ನಂತರದಲ್ಲಿ ಬಣ್ಣವನ್ನು ತುಂಬುತ್ತಿದ್ದರು. ಹಾಗೆಯೇ ಒಣಗಿದ ಗಾರೆಯ ಗೋಡೆಯ ಮೇಲೆ ರೇಖೆಗಳನ್ನು ಮೊದಲು ಚಿತ್ರಿಸಿ ನಂತರ ಫೌಡರನ್ನು ಹಾಕಿ ಬಣ್ಣಗಳಿಂದ ಪೂರ್ಣಗೊಳಿಸುತ್ತಿದ್ದರು.

೧೯ನೇ ಶತಮಾನದ ಕೊನೆಯ ಭಾಗದಲ್ಲಿ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಂಡು ಬರುವ ಕ್ರೈಸ್ತ ಧರ್ಮ ದೇವಾಲಯಗಳಲ್ಲಿ ಗೋಡೆ ಮತ್ತು ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರವನ್ನು ರಚನೆ ಮಾಡಲಾಗಿದೆ. ಇಂದಿಗೂ ಮಂಗಳೂರಿನ ಸೆಂಟ್ ಅಲೋಷಿಯಸ್ ಚರ್ಚ್, ಹೋಲಿಕ್ರಾಸ್ ಚರ್ಚ್, ದಿ ಅವರ್ ಲೇಡಿ ಆಫ್ ಚರ್ಚ್, ಸೆಂಟ್ ಪೀಟರ್ಸ್ ಚರ್ಚ್ ಹೀಗೆ ಇನ್ನೂ ಅನೇಕ ಚರ್ಚು(ಮಂದಿರ)ಗಳಿದ್ದು, ಪ್ರಮುಖ ಎನಿಸುವ

ಚರ್ಚ್‌ಗಳಲ್ಲಿ ಮಾತ್ರ ವಿವಿಧ ಮಾಧ್ಯಮದಲ್ಲಿ ಚಿತ್ರ ರಚನೆಯಾಗಿರುವುದನ್ನು ಕಾಣಬಹುದು. ಕ್ರೈಸ್ತ ಧರ್ಮದ ಆದ್ಯ ಪ್ರವರ್ತಕನಾದ ಯೇಸುವಿನ ಕುರಿತು ಅನೇಕ ಚಿತ್ರಕೃತಿಗಳನ್ನು ಇಲ್ಲಿ ರಚನೆ ಮಾಡಲಾಗಿದೆ. ಹಾಗೆಯೇ ದೇವ ಮಾನವರು, ಪಾದ್ರಿಗಳು, ಹನ್ನೆರಡು ಮಂದಿ ಶಿಷ್ಯಂದಿರರು, ದೇವಾಲಯಕ್ಕೆ ಸಹಾಯ ನೀಡಿದವರು, ಕಂಬಗಳಲ್ಲಿ ಭಿತ್ತಿಚಿತ್ರ, ಚಿತ್ರ ವಿನ್ಯಾಸಗಳು ಹೀಗೆ ವಿವಿಧ ಆಯಾಮಗಳಲ್ಲಿ ಭಿತ್ರಿ ಚಿತ್ರಗಳನ್ನು ರಚನೆ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಕರಾವಳಿಯ ಭಾಗಕ್ಕೆ ಇಟಲಿಯ ಪ್ರಸಿದ್ಧ ಕಲಾವಿದ ಆಂಟೋನಿಯಾ ಮೊಶ್ಚಿನಿಯು ೧೯೪೯ರಲ್ಲಿ ಬಂದು ಭಿತ್ತಿಚಿತ್ರ, ತೈಲಚಿತ್ರ ಹೀಗೆ ವಿವಿಧ ಆಯಾಮಗಳಲ್ಲಿ ಖಾಲಿಗೋಡೆಗೆ ಧರ್ಮದ ಪ್ರಚಾರ ಮಾಡುವ ಉದ್ದೇಶದಿಂದಲೇ ಕಲಾಕೃತಿಗಳನ್ನು ರಚನೆ ಮಾಡಿದ್ದಾನೆ. ಅವು ಇಂದಿಗೂ ಅಚ್ಚಳಿಯದೆ ಹೊಳೆಯುತ್ತಿದ್ದಾವೆ.

ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ, ಸುಣ್ಣವು ಇನ್ನೂ ಹಸಿರಾಗಿರುವಾಗಲೇ ಚಿತ್ರವನ್ನು ಸಂಪೂರ್ಣವಾಗಿ ಚಿತ್ರಿತವಾಗಿರುವಂತೆ ಪ್ರೆಸ್ಕೊ ಪದ್ಧತಿಯ ವೈಶಿಷ್ಟ್ಯವಾಗಿದೆ. ಅದು ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವು ಗಟ್ಟಿಗೊಂಡು ಶಾಸ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಪ್ರೆಸ್ಕೊ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿರುತ್ತವೆ. ಇದರ ಜೊತೆಗೆ ಗೋಡೆಗಳಿಗೆ ಬಣ್ಣ ಹಚ್ಚುವ ವಿಧಾನಗಳು ಅನೇಕ ತೈಲವರ್ಣ ಮತ್ತು ಮೇಣದ ವರ್ಣಗಳನ್ನೂ ಸಹ ಬಳಸಬಹುದೆಂಬುದಕ್ಕೆ ಸಾಕ್ಷಿ ವೆನಿಸ್ ಮತ್ತು ಇತರೆ ಅನೇಕ ಕಡೆಗಳಲ್ಲಿ ಬಟ್ಟೆಯ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೇ ಒಳ ಮಾಳಿಗೆಯಲ್ಲಿ ಅಂಟಿಸಿರುವುದನ್ನು ಕಾಣಬಹುದು.

ಧರ್ಮ ಎಂಬ ಪದದಲ್ಲಿನ ಭಾವವು ಹಿಂದು, ಜೈನ, ವೈಷ್ಣವ, ಶೈವ, ಮುಸ್ಲಿಂಗಳಲ್ಲಿ ಮಾತ್ರವಲ್ಲದೇ ಕ್ರೈಸ್ತದಲ್ಲಿಯು ಒಂದು ಸ್ಥಾನವಾಗಿ ನೆಲೆನಿಂತಿದೆ. ನಮ್ಮ ದೇಶದಲ್ಲಿ ಸುಮಾರು ೪೦೫೦ ವರ್ಷಗಳಿಂದಲೂ ಧರ್ಮ ಎಂಬ ಪದ ಉಪಯೋಗದಲ್ಲಿದೆ. ಮುಖ್ಯವಾಗಿ ಏ ಪದವನ್ನು "ಯಜ್ಞ" ಎಂಬ ಆರ್ಥದಲ್ಲಿ ಉಪಯೋಗಿಸಲಾತ್ತಿತ್ತು .ಆದರೆ ಈಗ ಸಾಧಾರಣವಾಗಿ "ಧರ್ಮ" ಎನ್ನುವ ಪದವು "ಮತ" ಎಂಬ ಆರ್ಥದಲ್ಲಿ ಉಪಯೋಗಿಸಲಾಗುತ್ತಿದೆ. ನಮ್ಮ ಭಾರತೀಯ ಸಂಸ್ಕ್ರತಿಯಲ್ಲಿ ಅವರವರ ಧರ್ಮಗಳಿಗೆ ಆದ ಸಂಸ್ಕ್ರತಿಯಲ್ಲಿ ಬೆಳೆಯಲು ಹಾಗೂ ಬೆಳೆಸಲು ಶ್ರಮಿಸುತ್ತಿದ್ದಾರೆ. ಹಾಗೆಯೇ ಮುಖ್ಯವಾಗಿ ಕರ್ನಾಟಕ ಪ್ರದೇಶವು ಕೂಡ ಬ್ರಿಟೀಷರ ಆಳ್ವಿಕೆಯಲ್ಲಿ ನೊಂದು ಬೆಂದಂತಹ ಜನರ ಪರಿಸ್ಥಿತಿಯನ್ನು ಹಿಂದಿನ ಇತಿಹಾಸಗಳಲ್ಲಿ ಕಾಣಬಹುದು. ಆದರಂತೆಯೇ ಕೆಲವು ಉತ್ತಮವಾದ ಕೆಲಸಗಳು ಬ್ರಿಟೀಷರಿಂದ ನೆಡೆದಿರುವುದನ್ನು ಇಲ್ಲಿ ನೋಡಬಹುದು.

ಕಲೆಯಲ್ಲಿ ಉತ್ತಮ ಬಾಂಧವ್ಯವನ್ನು ಹೊಂದಿರುವ ನಮ್ಮ ಭಾರತವು ಸಾಂಸ್ಕ್ರತಿಕ ನೆಲೆಯುಳ್ಳದ್ಧಾಗಿದ್ದು, ದೇವಸ್ಥಾನ. ಮಠ. ಮಂದಿರಗಳನ್ನು ನಿರ್ಮಿಸಿ ಅವರವರ ಧರ್ಮಗಳಿಗೆ

ಸಂಬಂದಪಟ್ಟಂತಹ ಇತಿಹಾಸಕ್ಕೆ ಹತ್ತಿರವಿರುವ ಚಿತ್ರಗಳು, ಚಿತ್ರವಿನ್ಯಾಸಗಳು, ಭಿತ್ತಿಚಿತ್ರಗಳು ಹೀಗೆ ಅನೇಕ ವಿಧ ವಿಧವಾದ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ಶ್ಲಾಘನೀಯ.

ಮುಖ್ಯವಾಗಿ ಕರ್ನಾಟಕಕ್ಕೆ ಬಂದಾಗ ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಪ್ರಾದೇಶಿಕವಾಗಿ ವಿಭಾಗಿಸಿ ಅವುಗಳ ವಿಭಿನ್ನ ಮುಖಗಳನ್ನು ಅಥವಾ ಕ್ಷೇತ್ರಗಳ ವಿಶೇಷತೆಗಳನ್ನು ಗುರುತಿಸುವ ಹಾಗೂ ಸಂಶೋಧಿಸುವ(ದಾಖಲಿಸುವ) ನಿಟ್ಟಿನಲ್ಲಿ ಉತ್ತರಕರ್ನಾಟಕ,ದಕ್ಷಿಣ ಕರ್ನಾಟಕ,ಹೈದರಾಬಾದ್ ಕರ್ನಾಟಕ ಹಾಗೂ ಕರಾವಳಿ ಕರ್ನಾಟಕ ಹೀಗೆ ವಿಭಾಗಗಳಾಗಿ ಹೇಳುವುದುಂಟು, ಮುಖ್ಯವಾಗಿ ದಕ್ಷಿಣ- ಪಶ್ಚಿಮ ಭಾಗದ ಕಡಲತೀರವನ್ನು ವ್ಯಾಪಿಸಿರುವ ಕರಾವಳಿ ಪ್ರದೇಶವು ಭೌಗೋಳಿಕವಾಗಿ ಕರ್ನಾಟಕದ ಇತರ ಪ್ರದೇಶಗಳಿಗಿಂತ ಭಿನ್ನವಾಗಿರುವಂತೆ ಕಂಡು, ಸಾಂಸ್ಕೃತಿಕವಾದ ಪರಿಸರದ ಆಯಾಮಗಳನ್ನು ಮೈಗೂಡಿಸಿಕೊಂಡು ಸಂಪದ್ಭರಿತವಾಗಿದೆ ಸಾಹಿತ್ಯ, ಸಂಗೀತ, ನೃತ್ಯ, ಯಕ್ಷಗಾನ, ಶಿಲ್ಪ, ಚಿತ್ರಕಲೆ, ವಾಸ್ತು ಹೀಗೆ ಮುಂತಾದ ಲಲಿತಕಲೆಗಳಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದ ಪ್ರದೇಶವಾಗಿದೆ. ಪ್ರಮುಖವಾಗಿ ದೇವಾಲಯ,ಮಸೀದಿ,ಚರ್ಚ್‌ಗಳಲ್ಲಿ ಅವರದೇ ಆದ ಚಿತ್ರಕಲೆಯನ್ನು ಕಾಣಬಹುದು.

ಯಾವುದೇ ಒಂದು ಕಾಲಘಟ್ಟದ ಚಿತ್ರಕಲೆಯನ್ನು ಕುರಿತು ಪರಿಗಣನೆಗೆ ತೆಗೆದುಕೊಳ್ಳುವಾಗ ಅಂದಂದಿನ ಕಾಲದ ಸಾಮಾಜಿಕ ಬದುಕಿನಲ್ಲಿ ಕಂಡುಕೊಂಡ ಧಾರ್ಮಿಕ ನಂಬಿಕೆಗಳೇ ಚಿತ್ರಕಲೆಗೆ ಪ್ರಧಾನ ವಸ್ತುಗಳಾಗಿವೆ. ಇದು ಯಾಕೆ ಹೇಗೆ ಎಂಬುದಕ್ಕೆ ವ್ಯವಸ್ಥೆ ಒಂದು ಗೌಣಯುಕ್ತ ಕಾರಣವಾದರೂ ಇದೊಂದು ಸಹಜ ಕ್ರಿಯಗಳೆಂದೇ ಎಂದು ತಿಳಿಯಬೇಕಾಗುತ್ತದೆ. ಭಾರತೀಯ ಚಿತ್ರಕಲೆಯ ಸಂಪ್ರದಾಯದಲ್ಲಿ ಕರ್ನಾಟಕ ಚಿತ್ರಕಲಾ ಸಂಪ್ರದಾಯಕ್ಕೆ ಆದರದೇ ಆದ ಒಂದು ಪ್ರಮುಖ ಸ್ಥಾನವಿದ್ದು, ಈ ಚಿತ್ರಕಲಾ ಪರಂಪರೆ ಎನ್ನುವುದು ಆಯಾಕಾಲದ ಜನ ಸಮುದಾಯಕ್ಕೆ ಹಾಗು ಅವರ ನಂಬಿಕೆಗಳಿಗೆ ಹೊಂದಿಕೊಂಡೇ ಬೆಳೆದುದರಿಂದ ಅಲ್ಲಿ ವಸ್ತು ವೈವಿಧ್ಯತೆ ಎಂಬುದು ಸಹಜವಾಗಿ ಕಂಡುಬರುತ್ತದೆ. ಹಾಗೆಯೇ ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇವು ಮಹತ್ವದ ಆಕರಗಳಾಗಿರುತ್ತವೆ.

ಕರಾವಳಿ ಕರ್ನಾಟಕ ಎಂದಾಗ ಮುಖ್ಯವಾಗಿ ಮಂಗಳೂರು,ಕಾರವಾರ ಮತ್ತು ಉಡುಪಿ ಎಂಬ ಮೂರು ಜಿಲ್ಲೆಗಳನ್ನು ಕಾಣಬಹುದು. ಈ ಮೂರು ಜಿಲ್ಲೆಗಳಲ್ಲಿ ಸುಮಾರು ಕ್ರೈಸ್ತ ಮತಭಾಂದವರಿದ್ದು,ಇಲ್ಲಿ ಸುಮಾರು ೩೫೦ಕ್ಕೂ ಹೆಚ್ಚು ಚರ್ಚ್‌ಗಳನ್ನು ಕಾಣಬಹುದು. ಹಾಗೆಯೇ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಈ ಕರಾವಳಿ ಪ್ರದೇಶಕ್ಕೆ ಆಧುನಿಕವೇನಿಸುವಂತಹ ತೈಲಚಿತ್ರ ರಚನೆ ಕಾಲಿರಿಸಿತು.ಅದಕ್ಕೂ ಮೊದಲು "ಭಾಷಲ್ ಮಿಷನ್" ಎಂಬಾತನು ಕಲ್ಲಚ್ಚಿನಲ್ಲಿ, ಮುಂದೆ ಪಡಿಯಚ್ಚಿನಲ್ಲಿ(ಬ್ಲಾಕ್)ಚಿತ್ರಗಳನ್ನು ಪತ್ರಿಕೆ, ಪುಸ್ತಕಗಳಿಗಾಗಿ ರಚಿಸಿರುತ್ತಾನೆ.

ಮಂಗಳೂರಿನ ಹೆಸರಾಂತ ಸೆಂಟ್‌ಅಲೋಷಿಯಸ್ ಚರ್ಚ್ ೧೮೭೯ರಲ್ಲಿ ಒಂಬತ್ತು ಸದಸ್ಯರಿರುವ ತಂಢದಿಂದ ಬೆಳಕಿಗೆ ಬಂತು. ಇದರಲ್ಲಿ ಮುಖ್ಯವಾಗಿ ಫಾದರ್ ಜೋಸೆಫ್ ಎಲ್ಲಿ ಎಂಬುವವರಿಂದ

ಅಂತಿಮರೂಪಕ್ಕೆ ಬಂತು ಎನ್ನುವರು ಇಲ್ಲಿನ ಹಿರಿಯ ಫಾದರ್ಸ್. ೧೮೯೯ರಲ್ಲಿ ಯುರೋಪಿನಿಂದ ಮಂಗಳೂರಿಗೆ ಬಂದ ಸಹೋದರ ಆಂಟೋನಿ ಮೋಶ್ಚಿನಿ ಎಂಬಾತ ರಚಿಸಿದ ನೂರಾರು ಚಿತ್ರಗಳು ಈ ಚರ್ಚನಲ್ಲಿ ರಾರಾಜಿಸುತ್ತವೆ.

ಪ್ರಮುಖವಾಗಿ ಈ ಚರ್ಚ್‌ಗಳಲ್ಲಿ ನಯವಾದ ಗಾರೆ ಹಾಕಿದ ಗೋಡೆಯ ಮೇಲೆ, ಕಂಬಗಳ ಮೇಲಿನ ಪಕ್ಕದ ಗೋಡೆಗಳ ಮೇಲೆ ನೇರವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಒಳಮೇಲ್ಚಾವಣಿಗೆ ಹೊಂದಿಕೊಂಡಂತೆ ಬಟ್ಟೆ ಮೇಲೆ ಚಿತ್ರರಚಿಸಿ ಮರದ ಚೌಕಟ್ಟಿನ ನೆರವಿನಿಂದ ಹದ್ದಿಸಿರುವುದನ್ನು ಕಾಣಬಹುದು ಇಷ್ಟೇ ಅಲ್ಲದೆ ಚರ್ಚ್‌ನ ಒಳಾಂಗಣದಲ್ಲಿ ಹಾಗು ಕೆಳಮನೆಯ ಬೋಜನಾ ಶಾಲೆಗಳಲ್ಲಿ ಭಿತ್ತಿ ಹಾಗೂ ಬಿಡಿಭಾಗವಿರುವ ಚಿತ್ರಗಳನ್ನು ಕಾಣಬಹುದು.

ಈ ಚರ್ಚ್‌ಗಳಲ್ಲಿ ನಾಲ್ಕು ದೊಡ್ಡದಾದ ಸೆಂಟ್ ಅಲೋಷಿಯಸ್‌ಗೆ ಸಂಬಂದಿಸಿದ ಚಿತ್ರಗಳ ಜೊತೆಗೆ ಏಸುವು ಬಡವರಿಗೆ ದು:ಖಿತರಿಗೆ ಸಾಂತ್ವನ ಹೇಳುತ್ತಿರುವುದು ಮತ್ತು ಇಕ್ಕೆಲಗಳಲ್ಲಿ ಪೀಟರ್ ಪಾಲ್ ಜೇಮ್ಸ್ ಜೋನ್ ಮುಂತಾದ ಹನ್ನೆರಡು ಮಂದಿ ಧರ್ಮ ಪ್ರಚಾರಕ ಚಿತ್ರಗಳಿವೆ. ಈ ಚರ್ಚ್‌ಗಳಲ್ಲಿ ಸುಮಾರು ನಲ್ವತ್ತು ಅಂಕಣಗಳಿದ್ದು, ಎಲ್ಲಾದರಲೂ ಸಂತರ ಜೀವನವನ್ನು ಚಿತ್ರಿಸಲಾಗಿದೆ.ಕಂಬಗಳಿಂದ ಪ್ರತ್ಯೇಕಿಸಿರುವ ಭಾಗ ಉದ್ದನೆಯ ಹಜಾರದಂತಿದ್ದು, ಪಕ್ಕದ ಅಂಕಣಕ್ಕಿಂತ ಹೆಚ್ಚು ಎತ್ತರಿಸಿದೆ.ಅಲ್ಲಿಯ ಇಕ್ಕೆಲದ ಗೋಡೆಗಳಲ್ಲಿ ಏಸುವಿನ ಜನನವಿರುವ ಚಿತ್ರವಿರುವುದರ ಜೊತೆಗೆ ಪವಾಡಗಳ ದೃಶ್ಯ, ಆರ್ತರಿಗೆ ದು:ಖ ಶಮನಮಾಡಿದ್ದು,ಉಪದೇಶ ನೀಡಿದ್ದು,ಕೊನೆಯ ಬೋಜನ, ಅಂತಿಮ ವಿಚಾರಣೆ, ದನದ ಕೊಠಡಿಯಲ್ಲಿ ಯೇಸುವಿನ ಜನನ, ಶಿಲುಬೆಗೆ ಹಾಕಿರುವ ದೃಶ್ಯ ಕೆಲ ದಿನಗಳ ನಂತರ ಪುಣ್ಯ ಪುರುಷನಾಗಿ ಕಾಣಿಸಿಕೊಂಡಿದ್ದು ಇತ್ಯಾದಿ ಆನೇಕ ಪ್ರಮುಖ ಚಿತ್ರಗಳನ್ನೂ ಕಾಣಬಹುದಾಗಿದೆ. ಜೊತೆಗೆ ಕೈ ಸಾಲೆಯಲ್ಲಿ ಯೇಸು, ಮೇರಿಗೆ ಸಂಬಂದಿಸಿದ ಹಲವಾರು ಬಿಡಿ ಚಿತ್ರಗಳನ್ನು ಕಾಣುವುದರ ಜೊತೆಗೆ ಏಸುವಿನ ಆಂತ್ಯದ ಹದಿನಾಲ್ಕು ಘಟ್ಟಗಳು, ಕ್ಯಾನ್ವಸ್‌ನ ಮೇಲೆ ಬಿಡಿಯಾಗಿ ಚಿತ್ರಸಿಗೋಡೆಯಲ್ಲಿ ಪ್ರದರ್ಶಿಸಲಾಗಿದೆ.

ಕಲಾವಿದರಾದ ಆಂಟನಿ ಮೋರ್ಶಿನಿ ೧೯೦೨ ರಿಂದ ೧೯೦೪ರ ಆವಧಿಯಲ್ಲಿ ಏಕಾಂಗಿಯಾಗಿ ಹಲವಾರು ಅಂಕಣದಲ್ಲಿ ಸಾವಿರಾರು ವ್ಯಕ್ತಿಗಳ ಅವರ ಸಂಕೇತಗಳ ಉಡುಗೆ–ತೋಡಿಗೆ ವೈವಿಧ್ಯತೆ ಅನುಸರಿಸಿ ಇಡೀ ದೃಶ್ಯಕ್ಕೆ ಸೂಕ್ತ ಹಿನ್ನಲೆಯಿಂದ ರಚಿಸಿರುವುದು ಸಹ ಇಲ್ಲಿ ಕಾಣಬಹುದು. ಯುರೋಪಿನ ನೈಜಶೈಲಿಯಲ್ಲಿ ನೆರಳು–ಬೆಳಕಿನಿಂದ ಕೂಡಿದ ಅಷ್ಟು ಪ್ರಖರವಲ್ಲದ ಹಿತ–ಮಿತ ಬಣ್ಣಗಳಿಂದ ರಚಿಸಲಾಗಿದೆ. ಈ ಚಿತ್ರಗಳನ್ನು ತೀರ ಹತ್ತಿರದಿಂದ ಕಂಡು ಒರಟಾಗಿ ಕಂಡರೂ ದೂರದಿಂದ ವಿಜೃಂಬಿಸುತ್ತವೆ. ಒಟ್ಟು ಸಂಯೋಜನೆಯಲ್ಲಿ ಮುಖ್ಯ ವ್ಯಕ್ತಿಗಳ ಗಮನ ಸೆಳೆಯುವಂತೆ ಒಂದು ದೃಶ್ಯಕ್ಕೆ ಹೋಗುವಂತೆ ಪ್ರೇಕ್ಷಕರನ್ನು ಪ್ರೇರೇಪಿಸುವಂತೆ ಕಥೆಯು ಇಡೀ ದೃಶ್ಯದಿಂದಲೇ ನಾಟಕದ ರೂಪದಲ್ಲಿ ತನ್ನನ್ನು ತಾನು ಮೈ ಮರೆತು ಆ ಕಥೆಯಲ್ಲಿ ಬೆರೆತು ಹೋಗುವಂತೆ ಚಿತ್ರಸಿರುವುದರಿಂದ, ಅಲ್ಲಿರುವ ಕೃತಿಗಳನ್ನು ನಶಿಸಿ ಹೋಗಲು ಆವಕಾಶ ಕೊಡದ ಹಾಗೇ

ಸಂರಕ್ಷಿಸುವುದು ತುಂಬಾ ಆವಶ್ಯಕವಾಗಿದೆ.

ಮಂಗಳೂರಿನ ಅನೇಕ ಕಡೆ ಚರ್ಚುಗಳಿದ್ದರು ಮುಖ್ಯವಾದಂತಹ ಚರ್ಚುಗಳಲ್ಲಿ ಚಿತ್ರಕಲೆಯ ವಿಶೇಷತೆಯನ್ನು ಕಾಣಬಹುದು ಆದರಂತೆ ಈ ನಗರಕ್ಕೆ ಹತ್ತಿರ ವಿರುವ ಬಂಟ್ವಾಳ ತಾಲ್ಲೂಕಿನ ಜಕ್ರಿಬೆಟ್ಟು ಎಂಬ ಗುಡ್ಡದ ಮೇಲಿರುವ "ಸೆಂಟ್ ಹೋಲಿ ಸೋವಿನಿಯಾರ್" ಚರ್ಚ್‌ನಲ್ಲಿಯೂ ಕೂಡ ಕೆಲವು ಭಿತ್ತಿ ಚಿತ್ರಗಳಿದ್ದು, ಪ್ರಾರ್ಥನಾ ವೇದಿಕೆಯ ಒಳ ಹಾಗೂ ಹೊರ ಭಾಗದಲ್ಲಿರುವ ಭಿತ್ತಿ ಚಿತ್ರಗಳಲ್ಲಿ ಬೈಬಲ್‌ದಲ್ಲಿನ ಕೆಲವು ವಿಷಯಗಳನ್ನು ಚಿತ್ರಸಲಾಗಿದೆ, ಶೈಲಿ,ಆಕಾರ,ನಿಲುವು,ಬಣ್ಣಗಾರಿಕೆ ಛಾಯಕಾರನ ಚಿತ್ರಿತ ವಿಷಯಗಳ ವಿರೂಪಣೆ ಇತ್ಯಾದಿಗಳೆಲ್ಲಾ "ಎಲೋಷಿಯಸ್" ಚರ್ಚ್‌ನದ್ದನ್ನೆ ಹೋಲುತ್ತೆಯಾದರೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಗಳಿರುವುದಿಲ್ಲ. ಈ ಚರ್ಚ್ ೧೮೮೦ರಲ್ಲಿ ರಚನೆಯಾಗಿದ್ದು, ಸಂತ ಮೋಶ್ಚಿನಿಯೇ ಮೊದಲು ಚಿತ್ರರಚನೆ ಮಾಡಿದ್ದಾರೆ ಇದಾದ ನಂತರ ಸೆಂಟ್ ಎಲೋಷಿಯಸ್‌ನಲ್ಲಿ ಚಿತ್ರ ರಚನೆ ಮಾಡಲಾಗಿದೆಯಂತೆ ನಂತರ ಮಂಗಳೂರಿನ ಶಹರದ ಒಂದು ಭಾಗವೇ ಆದ ಕುಲಶೇಖರ ಚರ್ಚ್ ಕೊರ್ಡೆಲ್ ಪ್ರದೇಶಧ ಹೋಲಿಕ್ರಾಸ್ ಚರ್ಚ್,ಬಂಟ್ವಾಳದ ಇನ್ಫಂಟ್ ಜೀಸಿಸ್ ಚರ್ಚ್ ಇನ್ನೂ ಅನೇಕ ಸುತ್ತ ಮುತ್ತಲಿನ ಚರ್ಚ್‌ಗಳಲ್ಲಿ ಗ್ಲಾಸ್ ಪೇಂಟಿಂಗ್ಸ್, ಭಿತ್ತಿ ಚಿತ್ರ, ಕ್ಯಾನ್ವಸ್ ಮೇಲೆ ರಚಿತ ಚಿತ್ರ, ಶಿಲ್ಪ ಹೀಗೆ ಅನೇಕ ಚಿತ್ರಗಳನ್ನು ಕಾಣಬಹುದು. ಇತಿಹಾಸವುಳ್ಳ ಚಿತ್ರಕೃತಿಗಳ ಸಂರಕ್ಷಣೆಯ ಹೊಣೆಯನ್ನೊತ್ತ ಕೆಲವು ಚರ್ಚ್‌ಗಳು ಚಿತ್ರರಸಿಕರನ್ನು ತನ್ನತ್ತ ಸೆಳೆಯುವಲ್ಲಿ ಹಿಂದೆಬಿದ್ದಿಲ್ಲ, ಅದಕ್ಕೆ ಉದಾಹರಣೆ ಕಲಾಕೃತಿಗಳ ಗೂಡೆನಿಸಿಕೊಂಡಿರುವ ಮಂಗಳೂರಿನ ಸೆಂಟ್ ಎಲೋಷಿಯಸ್ ಚರ್ಚ್ ಒಂದೇ ಸಾಕು. ಪ್ರಮುಖವಾಗಿ ಈ ಭಾಗದಲ್ಲಿಯೇ ಹೆಚ್ಚು ಚರ್ಚುಗಳಿದ್ದು ಅವು ಇತಿಹಾಸವನ್ನು ನಿರ್ಮಿಸಿದಂತಹವುಗಳು ಹಾಗೂ ಇಲ್ಲಿ ಇತಿಹಾಸ ನಿರ್ಮಿಸಿರುವ ಭಿತ್ತಿ ಚಿತ್ರಗಳನ್ನು ಕಾಣುತ್ತೇವೆ. ಅವುಗಳನ್ನು ರಚಿಸುವ ಸಂಪ್ರದಾಯವು ಪಾಶ್ಚಾತ್ಯರಿಂದ ಭಾರತಕ್ಕೆ ಆಗಮಿಸಿತು ಎನ್ನುವುದಕ್ಕೆ ಇವು ಸಾಕ್ಷಿಯೆನಿಸುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ಈ ಚರ್ಚುಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು.

೧. ಸೆಂಟ್ ಅಲೋಷಿಯಸ್ ಚರ್ಚ್, ಮಂಗಳೂರು

೨. ಕ್ಯಾಥೋಡ್ರಲ್ ಚರ್ಚ್, ಮಂಗಳೂರು

೩. ಹೋಲಿಕ್ರಾಸ್ ಚರ್ಚ್, ಮಂಗಳೂರು

೪. ಸೆಂಟ್ ಫಿಲೋಮಿನ ಚರ್ಚ್, ಮೈಸೂರು

ಸೆಂಟ್ ಅಲೋಷಿಯಸ್ ಚರ್ಚ್, ಮಂಗಳೂರು :

ಮಂಗಳೂರಿನ ಸೆಂಟ್ ಅಲೋಷಿಯಸ್ ಕ್ರೈಸ್ತಚರ್ಚಿನ ಮುಖ್ಯದ್ವಾರ ಬಾಗಿಲಿನಿಂದ ಹೋಗುವಾಗ ಮಧ್ಯದ ದಾರಿಯಲ್ಲಿ ಈ ಧರ್ಮದ ದೇವದೂತರಾದ ಯೇಸುವಿನ ಮೂರ್ತಿಯು ಕಂಡುಬರುತ್ತಿದ್ದು,

ಪ್ರಾರ್ಥನ ಮಂದಿರದಲ್ಲಿ ಸೆಂಟ್ ಅಲೋಷಿಯಸ್‌ನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಎಡ ಮತ್ತು ಬಲ ಭಾಗದಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ. ಭಿತ್ತಿ ಚಿತ್ರಗಳ ಶಿಲ್ಪಗಳಂತೆ ಕಂಡರೂ ಇಲ್ಲಿ ಶಿಲ್ಪಗಳು ತುಂಬಾ ಕಡಿಮೆ ಕಲಾಕೃತಿಗಳ ಆಗರವಾಗಿರುವ ಈ ಚರ್ಚ್ ಸೌಂದರ್ಯದಿಂದ ತುಂಬಿ ತುಳುಕುತ್ತಿದೆ. ಅದಕ್ಕೆ ಪ್ರಮುಖ ಕಾರಣ ಇಲ್ಲಿನ ಆಡಳಿತ ಪ್ರಮುಖವಾಗಿ ಗೋಡೆಗಳ ಮೇಲೆ ಭಿತ್ತಿ ಚಿತ್ರಗಳು ಅಲ್ಪ ಮಟ್ಟಕ್ಕೆ ಮಾಸಿರುವುದು ಶತಮಾನಗಳು ಕಳೆದು ಹೋಗಿರುವುದರಿಂದ, ಆದರೆ ಕೆಲವು ದಿನಗಳ ಹಿಂದೆ ಎಲ್ಲಾ ಕಲಾಕೃತಿಗಳನ್ನು ಇಳಿಸಿ, ಮೈ ವರೆಸಿರುವುದರೊಂದಿಗೆ ಕಿತ್ತು ಹೋಗಿರುವಂತಹ ಕಲಾಕೃತಿಗಳಿಗೆ ಜೋಡಣೆ ಮಾಡಿರುವುದು ಹಾಗೆಯೇ ಶತಮಾನಗಳ ಕಲಾಕೃತಿಗಳು ದಶಕದ ರೀತಿ ಗೋಚರಿಸುತ್ತವೆ.

ಈ ಪ್ರಾರ್ತನಾ ಮಂದಿರದ ಮುಂಭಾಗ, ಮೇಲ್ಛಾವಣಿ ಹಾಗೂ ಅಕ್ಕ ಪಕ್ಕಗಳಲ್ಲಿ ಭಿತ್ತಿ ಚಿತ್ರ ಹಾಗೂ ಬಟ್ಟೆ ಮೇಲೆ ರಚಿಸಿರುವ ಕ್ರೈಸ್ತ ಧರ್ಮದ ರೂವಾರಿಗಳು, ಪಾದ್ರಿಗಳು, ದೇವದೂತರು, ಯೇಸುವಿನ ಹನ್ನೆರಡು ಮಂದಿ ಶಿಷ್ಯಂದಿರರು ಹಾಗೂ ಯೇಸುವಿನ ಪವಾಡಗಳು, ಯೇಸುವಿಗೆ ಚಿತ್ರಹಿಂಸೆ ಕೊಡುತ್ತಿರುವ ವಿರೋಧಿಗಳು, ತಾಯಿ ಮತ್ತು ತಂದೆಯ ಜೊತೆ ಯೇಸು, ಮೇರಿ ಮತ್ತು ಯೇಸು, ಅಲೋಷಿಯಸ್‌ನು ಬೋಧನೆ ಮಾಡುತ್ತಿರುವುದು. ಜ್ಞಾನ-ಸ್ನಾನ, ನೀರನ್ನು ದ್ರಾಕ್ಷಿರಸ ಮಾಡಿದ ಸನ್ನಿವೇಶ, ಯೇಸುವು ಜನರಿಗೆ ಮಕ್ಕಳ ಕುರಿತು ಅರಿವು ಮೂಡಿಸುವುದು, ಗಾಡ್ ಆಫ್ ಪಾಧರ್, ಕಪ್ಪು ಅಲೋಷಿಯಸ್‌ನು ಅಧಿಕಾರವನ್ನು ತ್ಯಾಗ ಮಾಡುತ್ತಿರುವುದು. ಹೀಗೆ ನೂರಾರು ಚಿತ್ರಗಳನ್ನು ಈ ಪ್ರಾರ್ಥನ ಮಂದಿರದಲ್ಲಿ ಕಾಣಬಹುದಾಗಿದೆ. ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆಯಲ್ಲಿ ಮುಖ್ಯವಾಗಿ ಯೇಸುಸ್ವಾಮಿಯನ್ನೆ ಕೇಂದ್ರ ಬಿಂದುವಾಗಿಟ್ಟುಕೊಂಡು ಚಿತ್ರಗಳನ್ನು ರಚಿಸಲಾಗಿದ್ದು, ಮಂಗಳೂರಿನ ಸೆಂಟ್ ಅಲೋಷಿಯಸ್ ಚರ್ಚ್ ಹಾಗೂ ಕುಲಶೇಖರ ಚರ್ಚ್‌ಗಳಲ್ಲಿ ಹೆಚ್ಚು ಭಿತ್ತಿಚಿತ್ರ ಹಾಗೂ ಬಟ್ಟೆ ಮಾದ್ಯಮದ ಚಿತ್ರಗಳನ್ನು ಕಾಣಬಹುದು. ಅಲ್ಲಲ್ಲಿ ಗಾಜಿನ ಮೇಲೆ ರಚಿತವಾಗಿರುವ ಚಿತ್ರಗಳನ್ನು ಸಹ ಕಾಣಬಹುದಾಗಿದೆ. ಮಂಗಳೂರು ನಗರದಲ್ಲಿರುವ ಈ ಚರ್ಚನ್ನು ಪೋರ್ಚುಗೀಸರ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಇಲ್ಲಿನ ಚಿತ್ರಗಳನ್ನು ಕ್ರಿ.ಶ. ೧೯೦೨ರಲ್ಲಿ ಬರೆಸಲಾಗಿದೆ. ಮೇರಿ ಮತ್ತು ಬಾಲಕ ಯೇಸು, ಏಸುವಿನ ಜೀವನದ ವಿವಿಧ ಘಟನೆಗಳು, ಆತನ ಉಪದೇಶಗಳನ್ನು ಕುರಿತಂತ ಚಿತ್ರಗಳನ್ನು ರಚಿಸಲಾಗಿದೆ.

ಕ್ಯಾಥೋಡ್ರಲ್ ಚರ್ಚ್, ಮಂಗಳೂರು :

ಈ ಚರ್ಚ್‌ನ್ನು ರೋಸಾರಿಯೋ ಕೃಥೆಡ್ರಲ್ ಎಂದು ಕರೆಯಲಾಗುತ್ತದೆ. ಇದು ಡಯಾಸಿಸ್ ಮತ್ತು ಡೆಲ್ಲಾವಲ್ಲೆ, ೧೬೨೩ರಲ್ಲಿ ಮಂಗಳೂರಿಗೆ ಬೇಟಿ ನೀಡಿದ ಸಮಯದಲ್ಲಿ ಇಟಾಲಿಯನ್ ಮಾಂತ್ರಿಕ ಮೂರು ಅತ್ಯಂತ ಪ್ರಾಚೀನ ಚರ್ಚುಗಳು ನಿರ್ಮಿಸಿದ್ದು ಅದರಲ್ಲಿ ಇದು ಕೂಡ

ಒಂದು. ಇಲ್ಲಿಯೂ ಸಹಿತ ಕ್ರಿ.ಶ. ೧೯೦೨ರ ಸುಮಾರಿನಲ್ಲಿ ರಚನೆಗೊಂಡ ಏಸುವಿನ ಜೀವನಕ್ಕೆ ಸಂಬಂಧಪಟ್ಟ ಚಿತ್ರಗಳಿವೆ. ಚರ್ಚಿನ ಕಿಟಕಿಯ ಮೇಲೆ ಚಿತ್ರ ರಚಿಸಿರುವುದು ಇಲ್ಲಿನ ವಿಶೇಷವಾಗಿದೆ.

ಹೋಲಿಕ್ರಾಸ್ ಚರ್ಚ್, ಮಂಗಳೂರು :

ಮಂಗಳೂರು ಪಟ್ಟಣದ ಕಾರ್ಡೆಲ್, ಕುಲಶೇಖರ ನಗರದಲ್ಲಿರುವ ಈ ಚರ್ಚ್‌ನ್ನು ಹೋಲಿಕ್ರಾಸ್ ಚರ್ಚ್ ಎಂದು ಕರೆಯುತ್ತಾರೆ. ಈ ಚರ್ಚ್‌ನ್ನು ಆಂಗೆಲೋರ್, ವಮಾಜೂರ್, ಕೆಲಾರೈ, ನೀರ್ಮಾರ್ಗ, ಬೊಂಡೆಲ್ ಮತ್ತು ದೆರೆಬೈಲ್ ಪ್ಯಾರಿಷ್ಗಳು ಸುತ್ತುವರಿದಿದೆ. ಕಾರ್ಡೆಲ್ ಮಿಲಾಗ್ರೆಸ್ ಚರ್ಚ್‌ನ ಪ್ರಾರಿಸ್ ಪಾದ್ರಿ, ರೆವರೆಂಡ್ ಪ್ರ್ ಅಲೆಗ್ಸಾಂಡರ್ ಡ್ಯೂಬಿಯೋಸ್, ಸೆಪ್ಟಂಬರ್ ೧೪, ೧೮೭೩ರಲ್ಲಿ ಈ ಚರ್ಚ್‌ನ್ನು ಸ್ಥಾಪಿಸಿದನು. ಪ್ರೆಂಷ್ ಭಾಷೆಯಲ್ಲಿ ಕಾರ್ಡೆಲ್ ಎಂದರೆ ಹೃದಯ ಭಾಗವಂತೆ ಅದರಂತೆ ಅಂತಹ ಸ್ಥಳ ಪರಿಶೀಲನೆ ಮಾಡಿ, ಮಂಗಳೂರಿನ ಹೃದಯಭಾಗದಲ್ಲಿ ಬೃಹದಾಕಾರವಾದ ದೇವಾಲಯವನ್ನು ನಿರ್ಮಿಸಲಾಯಿತು. ನಂತರ ಬದಲಾವಣೆಗೊಳ್ಳುತ್ತಾ ಬಂದು ಆ ಸಮಯದಲ್ಲಿ ಪ್ರಸ್ತುತ ಚರ್ಚ್‌ನ ಪಾದ್ರಿ ಲೂನಾಜೀ ಎಸ್.ಜೆ ಮೇಲ್ವಿಚಾರಣೆಯಲ್ಲಿ ವಿಭಿನ್ನಕ್ಕೆ ಚಾಲನೆ ಸಿಕ್ಕು ಇನ್ನೂ ಹೆಚ್ಚಿನ ಸೌಂದರ್ಯಕ್ಕೆ ಮೀಸಲಾಯಿತು. ಇಲ್ಲಿ ಕೆಲವು ಗೋಡೆ ಮೇಲೆ ರಚಿತ ಭಿತ್ತಿ ಚಿತ್ರಗಳನ್ನು ಕಾಣಬಹುದು.

ಸೆಂಟ್ ಫಿಲೋಮಿನ ಚರ್ಚ್, ಮೈಸೂರು :

ಮೈಸೂರಿನಲ್ಲಿ ಸುಂದರವಾಗಿರುವ ಗೋಥಿಕ್ ಶೈಲಿಯ ಈ ಚರ್ಚಿನಲ್ಲಿ ನಕ್ಷಾ ವಿನ್ಯಾಸದ ಅಲಂಕಾರಗಳು ಮತ್ತು ಗಾಜಿನ ಮೇಲೆ ಚಿತ್ರಿಸಿದ ನಕ್ಷೆಯ ವಿನ್ಯಾಸಗಳು ಕಂಡುಬರುತ್ತವೆ. ದಕ್ಷಿಣ ಭಾರತದ ಚರ್ಚುಗಳಲ್ಲಿ ಇರುವ ಭಿತ್ತಿ ಚಿತ್ರಗಳನ್ನು ಸ್ಥೂಲವಾಗಿ ಗಮನಿಸಿದಾಗ ಪೋರ್ಚುಗೀಸರ ಕೊಡುಗೆ ಹೆಚ್ಚಾಗಿರುವುದು ಕಂಡುಬರುತ್ತದೆ. ಉಪಯುಕ್ತ ಮಾಹಿತಿಯೊಂದಿಗೆ ಇಲ್ಲಿ ಸಿಗುವ ಭಿತ್ತಿಚಿತ್ರ ಮತ್ತು ಸಂಕೀರ್ಣ ಚಿತ್ರಗಳ ಸಂರಕ್ಷಣೆಯ ಹೊಣೆ ಈ ಸಂಶೋದನಾಧ್ಯಯನದ್ದಾಗಿರುತ್ತದೆ.

ದಕ್ಷಿಣ ಕರ್ನಾಟಕದ ಭಾಗದಲ್ಲಿ ಅರಮನೆಗಳೂ, ಮಠಗಳು ಮತ್ತು ಚರ್ಚುಗಳಲ್ಲಿ ಭಿತ್ತಿಚಿತ್ರಗಳು ಕಂಡುಬರುವಂತೆ ಕೆಲವು ಸಾರ್ವಜನಿಕ ಕಟ್ಟಡಗಳಲ್ಲಿ ಭಿತ್ತಿ ಚಿತ್ರಗಳನ್ನು ಚಿತ್ರಿಸಿರುವುದು ಗೋಚರಿಸುತ್ತದೆ. ಈ ಚಿತ್ರಗಳು ಸಾರ್ವಜನಿಕವಾಗಿದ್ದು ವಿಶೇಷವಾಗಿ ಹೆಚ್ಚಿನ ಜನರು ಬಂದು ಹೋಗುವ ಅಥವಾ ಭೇಟಿ ನೀಡುವ ಸ್ಥಳಗಳಲ್ಲಿ ರಚನೆಯಾಗಿದ್ದು ಹೆಚ್ಚಿನ ಜನಕ್ಕೆ ಕಲಾ ಹಿನ್ನೆಲೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ತಿಳಿದುಬರುತ್ತದೆ. ಅವು ಕೆಳಗಿನಂತಿದ್ದು ಅವುಗಳನ್ನು ಸ್ಥೂಲವಾಗಿ ವಿವೇಚಿಸಬಹುದು.

ಕಾವಿ ಚಿತ್ರಕಲೆಯ ನೆಲೆ, ಹಿನ್ನೆಲೆ :

ಕಾವಿ ಚಿತ್ರಕಲೆಯನ್ನು ಹೆಚ್ಚು ಕರಾವಳಿ ಭಾಗದಲ್ಲಿ ಕಾಣಬಹುದಾಗಿರುವುದರಿಂದ ಅದರ ಸಾಂಸ್ಕೃತಿಕ ಹಿನ್ನೆಲೆಯನ್ನು ಇಲ್ಲಿ ಹೇಳಲಾಗಿರುತ್ತದೆ. ಕರಾವಳಿ ಎಂದರೆ ಸಮುದ್ರ ತೀರದ ಪ್ರದೇಶ. ಕರ್ನಾಟಕ ತೀರ ಪ್ರದೇಶಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ

ಜಿಲ್ಲೆಗಳನ್ನು ಒಳಗೊಂಡ ಪ್ರದೇಶವೇ ಕರಾವಳಿ ಕರ್ನಾಟಕವಾಗಿದೆ. ೮ ಜುಲೈ ೧೭೯೯ರಲ್ಲಿ ಕೆನರಾ ಜಿಲ್ಲೆಯಾಗಿ ಉದಯಗೊಂಡು, ೧೮೬೨ರ ಪೂರ್ವದಲ್ಲಿ ಒಂದೇ ಆಗಿದ್ದು, ಅದು ಮದ್ರಾಸ್ ಪ್ರಾಂತದ ಒಂದು ಭಾಗವಾಗಿತ್ತು. ಈಗಲೂ ಕನ್ನಡ ಜಿಲ್ಲೆಯೆಂದು ಕರೆಯಲಾಗುತ್ತಿತ್ತು. ತದನಂತರ ೧೮೬೨ರಲ್ಲಿ ಈ ಪ್ರದೇಶ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೆಂದು ಎರಡಾಗಿ ದಕ್ಷಿಣ ಕನ್ನಡ ಮದ್ರಾಸ್ ಪ್ರಾಂತದ ಅಧಿಪತ್ಯಕ್ಕೂ ಉತ್ತರ ಕನ್ನಡ ಜಿಲ್ಲೆ ಮುಂಬಯಿ ಪ್ರಾಂತದ ಅಧಿಪತ್ಯಕ್ಕೂ ಸೇರಿದವು. ಅನಂತರ ಈ ಎರಡೂ ಜಿಲ್ಲೆಗಳು ೧೯೫೬ರಿಂದ ಕರ್ನಾಟಕದ ಜಿಲ್ಲೆಗಳಾದವು. ೧೯೯೭ರಲ್ಲಿ ಜಿಲ್ಲೆಗಳ ಪುನರ್ವಿಂಗಡಣೆ ಆದಾಗ ದಕ್ಷಿಣ ಕನ್ನಡ ಮತ್ತು ಉಡುಪಿ ಎಂದು ಎರಡು ಜಿಲ್ಲೆಗಳಾದವು. ಹೀಗೆ ಒಂದು ಕಾಲದಲ್ಲಿ ಒಂದೇ ಆಗಿದ್ದ ಕನ್ನಡ ಜಿಲ್ಲೆ ಮೂರು ಜಿಲ್ಲೆಗಳಾಗಿ ಸೀಳಲ್ಪಟ್ಟರೂ ಈ ಜಿಲ್ಲೆಗಳ ಜನಜೀವನ–ಸಂಸ್ಕೃತಿ ಒಂದೇ ಬಗೆಯಾಗಿದೆ.

ಈ ಜಿಲ್ಲೆಗಳ ಸಂಸ್ಕೃತಿಯ ಮೇಲೆ ಕನ್ನಡದ ಸೋದರ ಭಾಷೆಗಳಾದ ತುಳು, ಕೊಡಗು, ಮಲೆಯಾಳಿ ಸಂಸ್ಕೃತಿ ಮತ್ತು ಕನ್ನಡೇತರ ಕೊಂಕಣಿ ಭಾಷೆಯ ಪ್ರಭಾವ ಕೊಂಚಮಟ್ಟಿಗೆ ಕಂಡು ಬಂದರೂ ಒಟ್ಟಾರೆ ಈ ಮೂರು ಜಿಲ್ಲೆಗಳಲ್ಲಿ ಕನ್ನಡ ಸಂಸ್ಕೃತಿಯೇ ಪ್ರಧಾನವಾಗಿ ಹರಿಯುತ್ತಿರುವುದನ್ನು ಕಾಣಬಹುದು.

ಕರಾವಳಿ ಜಿಲ್ಲೆಗಳ ಸಾಂಸ್ಕೃತಿಕ ಪರಿಸರ ವರ್ಣರಂಜಿತ. ಇಲ್ಲಿಯ ಸಂಸ್ಕೃತಿ ಪರಂಪರೆ ಚೇತೋಹಾರಿ, ಬಹುಬಗೆಯ ಜನಾಂಗ, ಬುಡಕಟ್ಟು, ಜಾನಪದ ಲಾಲಿತ್ಯ ವೈವಿಧ್ಯ, ಯಕ್ಷಗಾನ, ಸಂಗೀತ, ಕೋಟೆಕೊತ್ತಲ, ಬತೇರಿ–ಬಸದಿಗಳು, ಮಸೀದಿಗಳು, ಚರ್ಚ್–ದೇವಾಲಯಗಳು, ಶಿಲ್ಪ–ಕಾಷ್ಠ ವೈಭವಗಳು, ಜನರ ಭಾಷೆ–ಬಣ್ಣ–ಬದುಕು ಎಲ್ಲಾವೂ ವೈಶಿಷ್ಟ್ಯ ಪೂರ್ಣ. ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಈ ನೆಲದಲ್ಲಿ ಇನ್ನೂ ತಮ್ಮ ಸಂಸ್ಕೃತಿಯ ಸಾರವನ್ನು ಉಳಿಸಿದ್ದಾರೆ. ಇಲ್ಲಿ ಪ್ರವಾಸೋದ್ಯಮಕ್ಕೆ ವಿಶೇಷವಾದ ಅವಕಾಶಗಳು ಲಭ್ಯವಿವೆ. ಸೆಂಟ್ ಮೇರಿಸ್ ದ್ವೀಪ, ಮುರುಡೇಶ್ವರ, ಗೋಕರ್ಣ, ತೋರ್ಮಗಡ, ಹೀಗೆ ಮಂಜೇಶ್ವರದಿಂದ ಸದಾಶಿವಗಡದವರೆಗೆ ಪ್ರವಾಸಿಗಳನ್ನು ಸೆಳೆಯಬಲ್ಲ ಸಾಲು ಸಾಲು ಕಿನಾರೆ ಮತ್ತು ಕುದ್ರು ದ್ವೀಪಗಳಿವೆ. ಪಶ್ಚಿಮ ಘಟ್ಟದಲ್ಲಿ ಉಕ್ಕಿ ಹರಿಯುವ ತೊರೆ ಜಲಪಾತಗಳಿವೆ.

ಈ ಭಾಗದಲ್ಲಿ ವಿಶೇಷವಾದ ಆಟಗಳೆಂದರೆ ಸಿದ್ದಾಪುರದ 'ಅಗಡಿ ಆಟ', ಡೊಳ್ಳುಕುಣಿತ, ಕೋಲಾಟ, ಲಂಬಾಣಿಗಳ ಜಾನಪದ ಕುಣಿತ ಮತ್ತು ಗೌಳಿಗಳ ಸಂಪ್ರದಾಯಿಕ ನೃತ್ಯ ಹೆಸರುವಾಸಿಯಾಗಿವೆ. ಕಲೆಯಲ್ಲಿ ವಿಶೇಷವಾದದ್ದೇನೆಮದರೆ ಯಕ್ಷಗಾನ, ಬೇಡರ ವೇಷ, ಸುಗ್ಗಿ ಕುಣಿತ, ಭೂತಾರಾಧನೆ, ಕೋಲ, ನಾಗಮಂಡಲ, ಭೀತಿ ಹುಟ್ಟಿಸುವ ಬೇಡರ ವೇಷ, ಇವು ತುಂಬಾ ಜನಾಕರ್ಷಣೆಯ ಕಲೆಗಳಾಗಿವೆ.

ಆಚಾರ ವಿಚಾರ ಭಾಷೆಗಳಲ್ಲಿ ಬಹುತ್ವವನ್ನು ಇತ್ಯಾತ್ಮಕವಾಗಿ ಬಳಸಿಕೊಂಡಿರುವ ಇಲ್ಲಿನ

ಜನರು ಸಾಹಸಿಗಳು, ಶ್ರಮಜೀವಿಗಳು ಹಾಗು ಛಲಗಾರರು. ಹುಟ್ಟಿದ ಊರನ್ನು ತೊರೆದು ಹೊರನಾಡಿನಲ್ಲಿ ನೆಲೆ ನಿಂತಾಗಲೂ ಸಾಮುದಾಯಿಕ ಸಾಮರಸ್ಯದಿಂದ ಉದ್ಯಮಶೀಲತೆಯನ್ನು ಸಾಧಿಸುವಲ್ಲಿ ಕರಾವಳಿಯ ಜನರು ಯಶಸ್ವಿಯಾಗಿದ್ದಾರೆ. ದೂರದ ತಮಿಳುನಾಡಿರಲಿ, ನೆರೆಯ ಕೇರಳ, ಮಹಾರಾಷ್ಟ್ರಗಳಿರಲಿ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರಗಳಿಗೆ ಇಲ್ಲಿನ ಅಧ್ವರ್ಯಗಳು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಒಟ್ಟಾರೆ ಸಂಗೀತ, ಯಕ್ಷಗಾನ, ಚಿತ್ರಕಲೆ, ನಾಟಕ, ಪತ್ರಿಕೋದ್ಯಮ, ಶಿಕ್ಷಣ, ವೈದ್ಯಕೀಯ ರಂಗಗಳಿಗೆ ಪ್ರತಿಭಾ ಸಂಪನ್ನರನ್ನು ನೀಡಿದ ನೆಲ ಇದಾಗಿದೆ. ಇಂತಹ ನೆಲದಲ್ಲಿ ಜನಪದಕ್ಕೆ ಸಂಬಂಧಿಸಿದ ಕಾವಿಚಿತ್ರಗಳನ್ನು ಹೆಚ್ಚು ಗುರುತಿಸಬಹುದು. ಭಿತ್ತಿಯ ಮೇಲೆ ರಚಿತವಾಗಿರುವ ಈ ಚಿತ್ರಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದಾದರೂ ಈಗಾಗಲೆ ಈ ವಿಷಯದ ಕುರಿತು ಡಾ.ಆನಂದ ಕೆ.ಪೂಜಾರ ಅವರು 'ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ' ಎಂಬ ಶಿರ್ಷಿಕೆಯ ಮೇಲೆ ಸಮಗ್ರ ಅಧ್ಯಯನವನ್ನು ಮಾಡಿರುವ ಹಿನ್ನಲೆಯಲ್ಲಿ ಪ್ರಸ್ತುತ ಈ ಅಧ್ಯಯನದಲ್ಲಿ ಹೇಳಿರುವುದಿಲ್ಲ. ಕಾವಿಕಲೆಯ ಕುರಿತ ಹೆಚ್ಚಿನ ಮಾಹಿತಿಗೆ 'ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ'ಯ ಡಿ.ಲಿಟ್ ಗ್ರಂಥವನ್ನು ನೋಡಬಹುದು.

ಮಠಗಳಲ್ಲಿರುವ ಭಿತ್ತಿ ಚಿತ್ರಗಳು :

ಕರ್ನಾಟಕದಲ್ಲಿ ಮಠಮಾನ್ಯಗಳು ಧರ್ಮ ಪ್ರಸಾರವನ್ನು ನಡೆಸುವುದರ ಜೊತೆಗೆ ಕಲಾ ಪರಂಪರೆಯನ್ನು ಬಳಸುತ್ತಾ ಬಂದಿವೆ. ದಕ್ಷಿಣ ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ಸಂಬಂಧಪಟ್ಟ ಮಠಗಳು ಭಿತ್ತಿ ಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿವೆ. ದಕ್ಷಿಣ ಕರ್ನಾಟಕದಲ್ಲಿ ಭಿತ್ತಿ ಚಿತ್ರಗಳನ್ನು ಒಳಗೊಂಡ ಮಠಗಳು ಕೆಳಗಿನಂತಿವೆ.

* ಅಂಕಲಗಿ ಮಠ, ಚಿತ್ರದುರ್ಗ
* ಜೈನ ಮಠ, ಮೂಡಬಿದರೆ
* ಜೈನ ಮಠ, ಶ್ರವಣಬೆಳಗೊಳ
* ಜೈನ ಮಠ, ಕಾರ್ಕಳ

ಅಂಕಲಗಿ ಮಠದ ಹಿನ್ನಲೆ :

ಅಂಕಲಗಿಮಠ

ಚಿತ್ರದುರ್ಗ ನಗರ ಪ್ರದೇಶದಿಂದ ಸುಮಾರು ಐದು ಕಿ.ಮೀ ದೂರದಲ್ಲಿರುವ ಪಂಚಲಿಂಗೇಶ್ವರ ಗುಹಾದೇವಾಲಯದ ಪಕ್ಕದಲ್ಲಿರುವ ಕಲ್ಲುಮಂಟಪವನ್ನು ಅಂಕಲಗಿಮಠ ಅಥವಾ ಪರದೇಶಪ್ಪನ ಗವಿಮಠ ಎಂತಲೂ ಕರೆಯುತ್ತಾರೆ. ಇಲ್ಲಿ ವೀರಭದ್ರನ ಹೆಂಡತಿಯೇ ಅಂಕಾಳಮ್ಮ, ಭೈರವೇಶ್ವರನ ಗುಡಿ ಹತ್ತಿರದಲ್ಲಿರುವುದರಿಂದ ಹೆಂಡತಿಯ ಹೆಸರಿನಲ್ಲಿ ಈ ಗವಿಯನ್ನು ಹಿಂದಿನವರು ಹೆಸರಿಸಿದ್ದಾರೆ.

ವಿಶೇಷವಗಿ ಸಿದ್ದರು, ನಾಥಪಂಥದವರು ತಮ್ಮ ಸಾಧರ್ನೆಯ ಗೃಹಗಳನ್ನಾಗಿ ಈ ಮಠವನ್ನು ಉಪಯೋಗಿಸಿ ಕೊಂಡಿದ್ದರಂತೆ.! ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಈ ದೇವಾಲಯ ಮತ್ತು ಗವಿಯಲ್ಲಿ ಪರದೇಶಪ್ಪ ಎಂಬ ಸನ್ಯಾಸಿ ವಸವಿದ್ದ ಕಾರಣ ಪರದೇಶಪ್ಪನ ಗವಿಯೆಂತಲೇ ಜನರವಾಣಿಯಾಗಿ ಬಂದಿದೆ ಎಂಬ ಹಿರಿಯರ ಮಾತು.

ಚಿತ್ರದುರ್ಗದ ಪ್ರಮುಖ ಪ್ರೇಕ್ಷಣೀಯ ನೆಲೆಗಳಲ್ಲೊಂದಾದ ಚಂದ್ರವಳ್ಳಿ ಅಥವಾ ಹುಲಿಗೊಂದಿ ಪ್ರದೇಶದ ಅಂಕಲಗಿಮಠ(ಜನರು ಇದನ್ನು ಅಂಕಳಸ್ವಾಮಿ ಮಠ ಎಂತಲೂ ಕರೆಯುವುದುಂಟು), ಹುಲಿಗೊಂದಿಯ ಬೈರವೇಶ್ವರ(ಸಿದ್ದೇಶ್ವರ)ದೇವಾಲಯವನ್ನು ದಾಟಿ ಅದೇ ರಸ್ತೆಯಲ್ಲಿ ಮುಂದೆ ಸಾಗಿ ಬಲಕ್ಕೆ ತಿರುಗಿ ಮೆಟ್ಟಿಲುಗಳ ಮೇಲೇರಿ ಹೋದರೆ ಎದುರಿಗೆ ಪಂಚಲಿಂಗೇಶ್ವರ ಗುಹಾಲಯ ಅಲ್ಲಿಂದ ಎಡಕ್ಕೆ ಕಾಣುವುದೇ ಅಂಕಲಗಿಮಠ. ಪಂಚಲಿಂಗ ಗುಹಾಲಯದ ಬಲಬದಿಗೆ ಇರುವ ಸಾಲುಕಂಬಗಳ ವಿಶಾಲ ಚಾವಡಿ ಮತ್ತು ಅದಕ್ಕೆ ಸೇರಿದ ಕೆಳಗಿನ ಹಾಗೂ ಹಿಂದಿನ ಭಾಗ ಎಲ್ಲಾವೂ ಸೇರಿ ಸುತ್ತಮುತ್ತಲ ಪ್ರದೇಶವನ್ನೆಲ್ಲಾ ಅಂಕಲಿಕ ಮಠ ಎಂದು ವಾಚಿಸುವುದುಂಟು, ಚಿತ್ರದುರ್ಗ ಪರಿಸರದ ಸುಂದರ ತಾಣಗಳಲ್ಲಿ ಇದು ಒಂದು.

ಚಾವಡಿಯ ಹಿಂಬದಿಯಲ್ಲಿ ಬಂಡೆಗಳ ಸಂದುಕಟ್ಟುಗಳನ್ನು ಉಪಯೋಗಿಸಿಕೊಂಡು ಕಲ್ಲಿನ ಕಂಬ-ಬೋದಿಗೆ ತೊಲೆ ಕಲ್ಲು ಇಟ್ಟಿಗೆ ಗಾರೆಗಳನ್ನು ಬಳಸಿ ವಿವಿಧ ಕೋಣೆಗಳು, ತೊಟಿ, ಬಚ್ಚಲು ಸಭಾಂಗಣ, ಸಭಾಂಗಣದ ಮೇಲಿನ ಗುಮ್ಮಟ, ಗಾಳಿಗೂಡುಗಳು, ದೀಪದ ಗೂಡುಗಳು, ಆಸನಗಳ ರೀತಿಯ ರಚನೆಗಳು, ರಹಸ್ಯ ವೀಕ್ಷಣೆಗೆಂಬ ರೀತಿಯಲ್ಲಿರುವ ಮೇಲುಕೋಣೆ ಮುಂತಾದವುಗಳನ್ನು ಇಲ್ಲಿ ಕಾಣಬಹುದು. ಇವೆಲ್ಲಾ ಹಿಂದಿನವರ ವಾಸ್ತುಶಿಲ್ಪ ಪರಿಣಿತಿಯ ಆಶ್ಚರ್ಯಕರ ಸಾಕ್ಷಿಗಳಾಗಿವೆ. ಆದರೆ ಇದಕ್ಕಿಂತ ಆಶ್ಚರ್ಯಕರವಾದುದು ಚಾವಡಿಯ ಕೆಳಗಿನ ನೆಲಗವಿ ಚಾವಡಿಯ ಹಿಂಭಾಗದಲ್ಲಿ ಒಂದೆಡೆ ಮೆಟ್ಟಿಲುಗಳನ್ನಿಳಿದುಕೆಳಗೆ ಬಂದರೆ ಒಂದಾದ ಮೆಲೊಂದರಂತೆ-ದೀಪದ ಬೆಳಕಿನಲ್ಲಿ-ಕಲ್ಲು, ಇಟ್ಟಿಗೆ ಗಾರೆಗಳನ್ನು ಬಳಸಿ ಮಾಡಿರುವ ಅಚ್ಚರಿಯ ರಚನೆಗಳು ಕಾಣಿಸುತ್ತವೆ. ದೊಡ್ಡ ಶಿವಲಿಂಗ, ನೀರಿನ ಸಂಗ್ರಹದ ತೊಟ್ಟಿಗಳು, ವಿವಿಧ ಆಸನಗಳು, ಗುಂಬಜವನ್ನೋಲುವ ಮಂಟಪ, ಕಲ್ಲಿನ ಆನೆಗಳ ಶಿಲ್ಪ, ತಾಳ್ವರಗಳು, ಗಾರೆಯ ವಿವಿಧ ಬಗೆಯ ಭಾಗಿಲುಗಳು ರಹಸ್ಯದಾರಿಗಳು ಹೀಗೆ ಕೌತುಕಗಳ ಒಂದು ಜಗತ್ತು ನೋಡುಗನೆದುರು ತೆರೆದು ನಿಂತಿರುವಂತಹ ಸನ್ನಿವೇಶಗಳು ಭಾಸವಾಗುತ್ತವೆ.

ಉತ್ತರ ಕರ್ನಾಟಕದ ಅಂಕಲಗಿ ಎನ್ನುವ ಕಡೆಯಿಂದ ಇಲ್ಲಿಗೆ ಬಂದು ನೆಲೆಸಿದ ವೀರಶೈವ ಗುರುಗಳೊಬ್ಬರಿಂದ ಇದಕ್ಕೆ ಅಂಕಲಗಿಮಠ ಎಂದು ಹೆಸರು ಬಂದಿತೆಂದು ಇತಿಹಾಸದ ಮೂಲಗಳಿಂದ ತಿಳಿಯಬಹುದು. ನೂರು ವರ್ಷಗಳಿಗೂ ಹಿಂದೆ ತಮ್ಮ ಅನುಯಾಯಿಗಳೊಂದಿಗೆ ಇಲ್ಲಿ ವಾಸ್ತವ ಹೂಡಿದ್ದರೆಂಬ ಮಾತಿದೆ. ಅದರ ಇತಿಹಸದ ಹಿನ್ನಲೆಯಲ್ಲಿ ೧೯ನೇ ಶತಮಾನಕ್ಕೂ ಪೂರ್ವದಲ್ಲಿಯೇ ಈ ಸ್ಥಳದಲ್ಲಿ ಜನ ವಾಸವಿದ್ದದ್ದು ಮತ್ತು ಪೂಜೆ ವಿಧಿವಿಧಾನಗಳ ಆಚರಣೆಗಳು ನಡೆದಿರುವಂತಹ

ಸಾಧ್ಯತೆಗೆ ಅನೇಕ ಪುರಾವೆಗಳು ಲಭ್ಯವಿರುತ್ತವೆ. ಇದರೊಂದಿಗೆ ನೆಲಗವಿಯ ಒಂದು ಮಠ ಕ್ರಿ.ಶ.೧೮ನೇ ಶತಮಾನದಲ್ಲಿಯೇ ಪ್ರಚಲಿತಕ್ಕೆ ಬಂದಿದೆ ಎಂಬುದನ್ನು ನಾಡಿನ ಸಾಹಿತಿಗಳು ಅಭಿಪ್ರಾಯಿಸಿರುತ್ತಾರೆ. ಚಿತ್ರದುರ್ಗದ ಈ ಮಠವು ಶೈವ ಧರ್ಮಕ್ಕೆ ಸಂಬಂಧಪಟ್ಟಿದೆ. ಇದು ಕಲ್ಲುಗಳಿಂದ ನಿರ್ಮಿಸಿ ವ್ಯವಸ್ಥಿತವಾಗಿರದೆ, ಸ್ವಾಭಾವಿಕವಾಗಿ ರಚನೆಗೊಂಡ ಶಿಲಾಗುಹೆಯನ್ನು ಮಠವಾಗಿ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಅದಕ್ಕಾಗಿಯೇ ಇದನ್ನು ಕಿನ್ನರ ಗವಿ ಎಂತಲು ಕರೆಯುತ್ತಾರೆ. ಈ ಮಠದಲ್ಲಿ ೧೮ನೇ ಶತಮಾನದ ಹೊತ್ತಿಗೆ ರಚನೆಯಾದ ಚಿತ್ರಗಳಿವೆ. ಹೆಚ್ಚಿನ ಚಿತ್ರಗಳು ನಾಶವಾಗಿದ್ದು, ಕೆಲವೇ ನಕ್ಷಾ ವಿನ್ಯಾಸಗಳು ಉಳಿದುಕೊಂಡಿವೆ. ಇಲ್ಲಿ ಮುಖ್ಯವಾಗಿ ಋಷಿ ಮುನಿಗಳು ತಪಸ್ಸು ಮಾಡುತ್ತಿರುವ ಚಿತ್ರಗಳು ಸಿಂಹ, ಹುಲಿ ಮುಂತಾದ ಕಾಡುಪ್ರಾಣಿಗಳ ಚಿತ್ರಗಳಿವೆ.

ಶ್ರೀಮಠ.ಮೂಡಬಿದರೆ ಸಾಂಸ್ಕೃತಿಕ ಹಿನ್ನಲೆ :

ಬಹು ವರುಷಗಳ ಹಿಂದೆ ಅಂದರೆ ಸುಮಾರು ಕ್ರಿ.ಶ. ೧ನೇ ಶತಮಾನದಲ್ಲಿ ಜೈನ ಧರ್ಮವು ತುಳುನಾಡಿನ ರಾಜಧರ್ಮವಾಗಿ ಮೆರೆದಿತ್ತು. ಅದೇ ಕಾಲದಲ್ಲಿ ಕಾಂಚಿಯ ಪಲ್ಲವ ರಾಜ್ಯಾಂತರ್ಗತವಾಗಿತ್ತು. ಸಾಮ್ರಾಟ್ ಅಶೋಕ ಮಹಾರಾಜನ ಕಾಲದಲ್ಲಿಯೂ ಕನ್ನಡ ಜಿಲ್ಲೆಯಲ್ಲಿ ಜೈನ ಪ್ರಭಾವ ಇತ್ತೆಂದೂ, ಅವರ ರಾಜ್ಯವು ಕೇರಳದವರೆಗೆ ವ್ಯಾಪಕವಾಗಿತ್ತೆಂದೂ, ಪ್ರಾಚೀನ ಕದಂಬರು ಮತ್ತು ಚಾಲುಕ್ಯ ವಂಶದವರು ಪಲ್ಲವ ರಾಜರ ನಂತರ ತುಳುನಾಡನ್ನು ಆಳಿದವರು ಜೈನ ರಾಜರುಗಳಾಗಿದ್ದರೆಂದು ಪ್ರಾಚೀನ ಪಲ್ಲವರೂ ಜೈನರಾಗಿದ್ದರೆಂದೂ ನಿಸ್ಸಂದೇಹವಾಗಿ ಹೇಳಬಹುದು. ಏಕೆಂದರೆ ಫಲಸಿಕ ಮತ್ತು ಹಲಸಿ (ಬೆಳಗಾಂ ಜಿಲ್ಲೆ) ಯಲ್ಲಿರುವ ಜೈನ ಬಸದಿಗಳು ಪಲ್ಲವ ವಂಶದ ರಾಜರುಗಳಿಂದ ನಿರ್ಮಿಸಲ್ಪಟ್ಟಿದೆ.

ಮೂಡಬಿದಿರೆಯು "ಜೈನಕಾಶಿ" ಎಂದು ಬಹಳ ಪ್ರಸಿದ್ಧವಾಗಿದೆ. ಮೂಡಬಿದಿರೆ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರವಾದ ಮಂಗಳೂರು ನಗರದಿಂದ ಉತ್ತರಕ್ಕೆ ೩೫ ಕಿಲೋಮೀಟರ್ ದೂರದಲ್ಲಿದೆ. ಮೂಡಬಿದಿರೆ ಜೈನರಿಗೆ ಧಾರ್ಮಿಕತೆಯ ದೃಷ್ಟಿಯಿಂದ ಪವಿತ್ರ ಧಾರ್ಮಿಕ ಕ್ಷೇತ್ರವಾದರೆ, ಜೈನೇತರಿಗೆ ಕೂಡಾ ಐತಿಹಾಸಿಕ, ಧಾರ್ಮಿಕ ಹಾಗೂ ಶಿಲ್ಪಕಲಾ ದೃಷ್ಟಿಯಿಂದ ಮಹತ್ವಪೂರ್ಣ ಸ್ಥಳವಾಗಿದೆ. ಈ ಊರಿಗೆ ಸಂಸ್ಕೃತದಲ್ಲಿ 'ವಂಶಪುರ' ಅಥವಾ 'ಕ್ಷೇಮವೇಣುಪುರ' 'ವೇಣುಪುರ' ಎಂಬ ಹೆಸರುಗಳು ಇವೆ. ಮಾನವನ ಮನಸ್ಸಿನಲ್ಲಿ ಸಹಜವಾಗಿ ಕೆರಳುವ ರಾಗ-ದ್ವೇಷಗಳು, ಕೋಪ ತಾಪಗಳೆಂಬ ೧೮ ದೋಷಗಳು ದೂರವಾಗಲೆಂದು ೧೮ ಬಸದಿಗಳನ್ನು ಇಲ್ಲಿಯ ಶ್ರಾವಕರು ಭವ್ಯವಾಗಿ ನಿರ್ಮಿಸಿದರು. ಕಾಲಕ್ರಮಾನುಸಾರವಾಗಿ ಜೈನಮಂದಿರಗಳನ್ನು ಇಲ್ಲಿಯ ಜೈನಗುರುಗಳ, ಭಟ್ಟಾರಕರ, ಮುನಿಸಾಧುಗಳ ಪ್ರೇರಣೆಯ ಮೇರೆಗೆ ಕಟ್ಟಿಸಿದರು. ಇಲ್ಲಿರುವ ಅತ್ಯಂತ ಪುರಾತನ ಬಸದಿಯಾದ 'ಗುರುಬಸದಿ' ಅಥವಾ 'ಸಿದ್ಧಾಂತ ಬಸದಿ'ಯ ಒಂದು ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿ ಮೆರೆದಿತ್ತು. ಕಾಲದ ದವಡೆಗೆ ಸಿಲುಕಿ ಕೆಲವು

ವರ್ಷಗಳ ಕಾಲ ಈ ಊರು ಮತ್ತು ಈ ಬಸದಿಯ ಅಧಿಕಾಂಶ ಭಾಗ ಜೈನರಿಲ್ಲದೆ ಹಾಗೂ ಇತರ ಭಾಧೆಗಳೊಗಾಗಿ ಅರಣ್ಯಮಯವಾಯಿತು. ಸುತ್ತಮುತ್ತಲೂ ಗಿಡ-ಗಂಟಿ, ಮರಗಳು, ಬಿದಿರು ಪೊದರುಗಳ ಒಳಗೆ ಈ ಬಸದಿ ಮುಚ್ಚಿ ಹೋಯಿತು. ಈ ಬಿದಿರ ಮೆಳೆಗಳ ದಿಸೆಯಿಂದಲೇ ಈ ಸ್ಥಳಕ್ಕೆ 'ಬಿದಿರೆ' ಅಥವಾ 'ವೇಣುಪುರ' ಎಂಬ ಹೆಸರು ಬಂದಿತು (ವೇಣು ಎಂದರೆ ಬಿದಿರು) ಈ ಬಿದಿರೆ ಮೂಲ್ಕಿ, ಮಂಗಳೂರು ಮುಂತಾದ ಬಂದರು ಸ್ಥಳಗಳಿಗೆ ಮೂಡು ದಿಕ್ಕಿಗೆ ಇರುವುದರಿಂದ 'ಮೂಡುಬಿದಿರೆ' ಎಂಬ ಸಾರ್ಥಕ ನಾಮವನ್ನು ಪಡೆಯಿತು. ಇಲ್ಲಿ ಅನೇಕ ಪವಿತ್ರ ಜೈನ ಬಸದಿಗಳಿದ್ದು ಇಲ್ಲಿ ಸಹಸ್ರಾರು ಮಂದಿ ಜೈನ ಶ್ರಾವಕರು (ಜೈನ ಸಾಧು, ಗುರು, ಶ್ರವಣರು) ವಾಸಿಸುತ್ತಿದ್ದರಿಂದ ಈ ಊರಿಗೆ 'ವೃತಪುರ' ಎಂಬ ಹೆಸರೂ ಇತ್ತೆಂದು ಶಾಸನಗಳಲ್ಲಿ ಕಂಡುಬರುತ್ತದೆ.

ಮೂಡಬಿದಿರೆಯು ತುಳುನಾಡು ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪುರಸಭಾ ಪಟ್ಟಣವಾಗಿದೆ. ಹಾಗೂ ಇದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಮುಖ ಯಾತ್ರಾ ಸ್ಥಳ. ಈ ಊರಿನ ನಾಲ್ಕೂ ಕಡೆ ಪ್ರಕೃತಿಯ ಸೊಬಗಿನಂಥ ಚಂದವಾದ, ಸಸ್ಯ ಶ್ಯಾಮಲವಾಗಿ ಕಂಗೊಳಿಸುವ ಗದ್ದೆಗಳ ಸಾಲುಗಳು, ಅಲ್ಲಲ್ಲಿ ಜಲಭರಿತವಾದ ೧೮ ಸರೋವರಗಳು ಈ ಊರಿಗೆ ಮೆರುಗನ್ನು ನೀಡುತ್ತದೆ. ಹತ್ತಿರದಲ್ಲಿ ಕಡಲ ಕೆರೆ ಅನ್ನುವ ಪ್ರಕೃತಿ ಧಾಮ ಪ್ರದೇಶದ ಅಭಿವೃದ್ಧಿಯಾಗಿದೆ. ಇಲ್ಲಿ ತೆಂಗು, ಅಡಿಕೆ, ಬಾಳೆ, ಗೇರುಬೀಜ, ವೀಳ್ಯದ ಎಲೆ, ಭತ್ತ, ಕಬ್ಬು, ಕರಿಮೆಣಸು, ಅನನಾಸು ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ಶ್ರೀ ಜೈನಮಠ, ಅರಮನೆ, ಬಸದಿಗಳು, ಕೆಲವು ಮನೆಗಳು, ಶಿಲ್ಪಕಲೆಯ ಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸಗಳಿಂದ ಕಣ್ಮನ ಸೆಳೆಯುತ್ತವೆ. ಇಲ್ಲಿನ ಜಲವಾಯು ಸಮಶೀತೋಷ್ಣವನ್ನು ಆರೋಗ್ಯಕ್ಕೆ ಹಿತಕರವಾಗಿದೆ.

ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ ಉತ್ತರ ಭಾರತದಿಂದ ಶ್ರವಣ ಬೆಳಗೊಳಕ್ಕೆ ಶ್ರುತ ಕೇವಲಿ ಭದ್ರಬಾಹು ಮುನಿಗಳ ಸಂಗವು ಆಗಮಿಸುವ ಮೊದಲೇ ಮೂಡಬಿದಿರೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಜೈನರು ನೆಲೆಸಿದ್ದರು. ಆದರೆ ಕ್ರಿಸ್ತಶತಕ ಏಳನೇ ಶತಮಾನಕ್ಕಿಂತ ಹಿಂದಿನ ದಾಖಲೆಗಳು ದೊರೆಯದಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಗೋಚರವಾಗುವ ಜೈನ ಪುರಾತತ್ವದ ಅವಶೇಷಗಳಿಂದ ಈ ಮಾತನ್ನು ರುಜುಮಾತು ಪಡಿಸಬಹುದು. ನಾಡಿಗೆ ಭಗವಾನ್ ಪಾರ್ಶ್ವನಾಥ ತೀರ್ಥಂಕರ ವಿಶೇಷ ಧರ್ಮ ಪ್ರಭಾವವನ್ನು ಕಾಣಬಹುದು.

ಕ್ರಿಸ್ತಪೂರ್ವ ಮೂರು, ನಾಲ್ಕನೆಯ ಶತಮಾನದಲ್ಲಿ ಉತ್ತರ ಭಾರತದಿಂದ ಶ್ರುತಕೇವಲಿ ಭದ್ರಬಾಹು ಮುನಿಗಳು ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಮೌರ್ಯ ಮತ್ತು ಹನ್ನೆರಡು ಸಾವಿರ ಶಿಷ್ಯರೊಂದಿಗೆ ದಕ್ಷಿಣ ಭಾರತಕ್ಕೆ ಬಂದು ಶ್ರವಣ ಬೆಳಗೊಳದಲ್ಲಿ ನೆಲೆಸಿದರು. ಅವರ ಶಿಷ್ಯಂದಿರು ತಮಿಳು, ತೆಲುಗು, ಕರ್ನಾಟಕ, ತೌಳವ ಪ್ರಾಂತ್ಯಗಳತ್ತ ತೆರಳಿ ಧರ್ಮ ಪ್ರಚಾರ (ಭೋಧನೆ)ಕ್ಕೆ ತೊಡಗಿದರು. ಹೀಗೆ ಬಂದ ಅನೇಕ ಜೈನ ಬಂಧುಗಳು ಮೂಡಬಿದಿರೆಯಲ್ಲಿ ವ್ಯಾಪಾರ

ವ್ಯವಸಾಯಗಳಲ್ಲಿ ತೊಡಗಿದರು. ತಮ್ಮ ದೈನಂದಿನ ಪೂಜೆ, ಆರಾಧನೆಗಾಗಿ ಬಸದಿಗಳನ್ನು ಕಟ್ಟಿಸಿದರು. ದ್ವಿ-ಪ್ರಾಂತಗಳಿಗೆ ಇಲ್ಲಿನ ಬಂದರುಗಳು ಮೂಲಕ ಹೋಗಿ ವಿಫುಲ ಸಂಪತ್ತು ಗಳಿಸಿದವರಲ್ಲಿ ಕೆಲವರು ಶ್ರೇಷ್ಠನಿಸಿದರು, ಕೆಲವರು ಕೃಷಿ ಕಾರ್ಯಗಳಲ್ಲಿ ನಿರತರಾಗಿ ಜಮೀನ್ದಾರರೆನಿಸಿದರು. ಕೆಲವರು ದ್ವಾದಂಶಾಂಗ, ವೇದ ಜ್ಞಾನ ಪಡೆದು ಧಾರ್ಮಿಕ, ಸಾಹಿತ್ಯ ಕಾರ್ಯಗಳನ್ನು ತೊಡಗಿಸಿಕೊಂಡು ಆತ್ಮಕಲ್ಯಾಣ ಮಾರ್ಗದಲ್ಲಿ ನಿರತರಾಗಿರುತ್ತಿದ್ದರು. ಬಸದಿಯ ಧಾರ್ಮಿಕ, ವಿಧಿ ವಿಧಾನ, ಶ್ರಾವಕರ ನೊಂಪಿ ಆರಾಧನೆ ಪೂಜೆಗಳನ್ನು ಶಾಸ್ತ್ರೋಕ್ತ ಕ್ರಮಗಳನ್ನು ಗುರುಪೀಠಗಳ ಆಜ್ಞಾವರ್ತಿಗಳಾಗಿ ತೊಡಗಿಸಿಕೊಳ್ಳುತ್ತಿದ್ದರು. ಪಂಡಿತ ಪುರೋಹಿತರೆನಿಸಿದರು.

ಕಾಲದೋಷದಿಂದ ಧನ ಜನ ಸಂಪನ್ನನಾದ ಮೂಡಬಿದ್ರೆಯಲ್ಲಿ ಜೈನರ ಸಂಖ್ಯೆ ಕಡಿಮೆಯಾಗಿ ಇಲ್ಲಿನ ಜೈನ ಮಂದಿರಗಳು ಕಾಡು ಪಾಲಾಗಿ ಸುತ್ತಮುತ್ತ ಬಿದಿರಿನ ಮೆಳೆಗಳ ಹೆಚ್ಚಿ ಕಗ್ಗಾಡು ಬೆಳೆಯಿತು. ಮತ್ತೆ ಎಂಟನೆಯ ಶತಮಾನದ ಹೊತ್ತಿಗೆ ಶ್ರವಣಬೆಳಗೊಳದಿಂದ ಇತ್ತ ಕಡೆಗೆ ಚಿತ್ತೈಸಿದ ಒಬ್ಬರು ಮುನಿಗಳು ತನ್ನ ಶೌಚಕ್ರಿಯೆಯಾಗಿ ಕಾಡಿನತ್ತ ಹೋಗುತ್ತಿದಾಗ ಒಂದು ಕಡೆ (ಈಗಿನ ಗುರು ಬಸದಿ ಇರುವಲ್ಲಿ) ಪರಸ್ಪರ ವಾತ್ಸಲ್ಯದಿಂದ ಮೈ ನೆಕ್ಕುತ್ತ ಒಂದೆ ಮರಿಗೆಯಿಂದ ನೀರು ಕುಡಿಯುತ್ತಿರುವ ಹುಲಿ ಮತ್ತು ಹಸುವನ್ನು ಕಂಡರು. ಈ ಅಪೂರ್ವವಾದ ದೃಶ್ಯವನ್ನು ಕಂಡ ಮುನಿವರ್ಯರು ಇಲ್ಲೆನೋ ಅತಿಶಯ ಇರಬೇಕೆಂದು ನಿಶ್ಚಯಿಸಿದರು. ಅಲ್ಲಿ ಬೆಳೆದಿದ್ದ ಬಿದರನ್ನು ಕಡಿದು ಕಾಡನ್ನು ಸವರಿದಾಗ ಭಗವಾನ್ "ಶ್ರೀ ಪಾರ್ಶ್ವನಾಥ ಸ್ವಾಮಿ"ಯ ವಿಶಾಲ ಕಾಯದ ಅತ್ಯಂತ ಸುಂದರ ಕಾಯೋತ್ಸರ್ಗ ಮೂರ್ತಿಯು ದೃಷ್ಠಿ ಗೋಚರವಾಯಿತು. ಕರಿಶಿಲೆಯ ಈ ಮೂರ್ತಿ ಸಾವಿರಾರು ವರ್ಷ ಪುರಾತನವಾಗಿದ್ದು ಅದನ್ನಲ್ಲಿಯೇ ಗುರುಗಳ ಮಾರ್ಗದರ್ಶನದಂತೆ ಮತ್ತೆ ಪುನರ್ ಪ್ರತಿಷ್ಠಾಪಿಸಿ ಸುಂದರವಾದ ಬಸದಿಯನ್ನು ನವೀಕರಿಸಿದರು.

ಅತಿಶಯ ಕ್ಷೇತ್ರವಾದ ಇಲ್ಲಿ ವಜ್ರ, ಮರಕತ, ಮಾಣಿಕ್ಯ, ಪಚ್ಚೆ, ನೀಲ, ವೈಢುರ್ಯ ಮತ್ತು ಗರುಡ ಮಣಿ ಗಜ ಮತ್ತು ಸ್ಫಟಿಕ, ಚಿನ್ನ, ಬೆಳ್ಳಿ ಮೊದಲಾದ ಬೆಲೆಬಾಳುವ ರತ್ನಗಳಿಂದ ನಿರ್ಮಿತವಾದ ಅದ್ವಿತೀಯ, ಅನುಪಮವಾದ ಜಿನಪ್ರತಿಮೆಗಳು ಸುರಕ್ಷಿತವಾಗಿವೆ. ಮೂಡಬಿದಿರೆಯ ಹಿಂದಿನ ಶ್ರಾವಕರು ಹಡಗಿನಲ್ಲಿ ದ್ವಿ-ಪ್ರಾಂತಗಳಿಗೆ ಹೋಗಿ ವ್ಯಾಪಾರ ನಡೆಸುವುದರಲ್ಲಿ ನಿಪುಣರಾಗಿದ್ದರು. ಅವರು ಅರೆಬೀಯ, ಆಫ್ರಿಕ ಹಾಗೂ ಈಜಿಪ್ಟ್ ಮುಂತಾದ ಪಾಶ್ಚಾತ್ಯ ದೇಶಗಳಿವೆ, ಚೀನಾವಲಯ, ಇಂಡೋನೇಷ್ಯಾ ಮೊದಲಾದ ಪೌರ್ವಾತ್ಯ, ದೇಶಗಳಿಗೂ ಹೋಗಿ ವ್ಯಾಪಾರ ನಡೆಸುತ್ತಿದ್ದರು. ಆದ್ದರಿಂದಲೇ ಜಿರಾಫೆ, ಚೀನಾದ ಡ್ರಾಗನ್, ಒಂಟೆಯಿಂದ ಉಳುವವ. ಶರಭ, ಗಂಡ ಬೇರುಂಢ, ಘೇಂಡಾಮೃಗ ಮುಂತಾದ ಪ್ರಾಣಿಗಳನ್ನು ಕಂಡ ಇವರು ತ್ರಿಭುವನ ತಿಲಕ ಚೂಡಮಣಿ ಬಸದಿಯ ಪಂಚಾಂಗದ ಪೀಠದಲ್ಲಿ ಈ ಪ್ರಾಣಿಗಳ ಆಕೃತಿಗಳನ್ನು ಬೇರೆ ಬೇರೆ ಕ್ರಮದಲ್ಲಿ ಆಕರ್ಷಕ ಭಂಗಿಯಲ್ಲಿ ಕೆತ್ತಿದ್ದಾರೆ. ಸುಂದರವಾದ ಹೂದೋಟಗಳಿಂದ ಅರಳಿದ ಹೂಗಳ ಪರಿಮಳ ಹೊತ್ತ, ಗಾಳಿಯ ಸಂಚಾರದಿಂದ, ನಾಲ್ಕು ಕಡೆಗಳ ಪ್ರಕೃತಿ ಶೋಭಿತವಾದ

ಪ್ರದೇಶಗಳಿಂದ ಉತ್ತಮ ಜಿನಾಲಯಗಳಿಂದ ಪಾವನವಾದ ಹಾಗೂ ರಮ್ಯವಾದ ಹರ್ಮ್ಯ (ಉಪ್ಪರಿಗೆ ಮನೆ)ಗಳಿಂದ ಈ ವಂಶಪುರವು (ಮೂಡಬಿದಿರೆ) ದೇವಾಂಗನೆಯರಂತಹ ಪುಣ್ಯ ವನಿತೆಯರಿಂದ ಕೂಡಿ ಕಂಗೊಳಿಸುತ್ತದೆ. ಈ ಸೊಬಗನ್ನು ಶಿಲಾಶಾಸನ ಬರೆದ ಅಜ್ಞಾತ ಕವಿಯ ಕಲ್ಪನೆಯಾಗಿದೆ.

೧೫-೧೬ನೆಯ ಶತಮಾನದಲ್ಲೂ ಜೈನ ರಾಜಮನೆತನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಭದ್ರವಾಗಿದ್ದರು. ಮೂಡಬಿದಿರೆಯ ಜೈನ ಧರ್ಮದ ಆಗರ, ಜಿನಾಲಯಗಳ ನೆಲೆ ಬೀಡಾಗಿದೆ. ತ್ರಿಭುವನ ಅತಿಶಯ ಕ್ಷೇತ್ರವಾಗಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಜಿನಮಣಿಯನ್ನು ತನ್ನ ಗರ್ಭದಲ್ಲಡಗಿಸಿಕೊಂಡು ಧವಳ, ಜಯಧವಳ ಮತ್ತು ಮಹಾಧವಳಗಳನ್ನು ಸಂರಕ್ಷಿಸಿಕೊಂಡು ಜಿನ ಪ್ರತಿಮೆಗಳು ವಿರಾಜಿಸುತ್ತವೆ.

ಮೂಡಬಿದಿರೆಯ ಗುರುಪೀಠ ಮತ್ತು ಭಟ್ಟಾರಕ ಪರಂಪರೆ :

ಮೂಡಬಿದಿರೆಯ ಗುರುಪೀಠವು ಭಗವಾನ್ ಮಹಾವೀರರ ನಂತರದ ಆಚಾರ್ಯ ಕುಂದಕುಂದರ ದೇಶೀಯ ಗಣ ಪರಂಪರೆಯಾಗಿದ್ದು, ಇಲ್ಲಿಯ ಪೀಠದ ಬಿರುದಾವಳಿಯು ಶ್ರೀಮದ್ ಡೆಲ್ಲಿ ಕನಕಾದ್ರಿಶ್ವೇತಪುರ, ಸುಧಾಪುರ, ಸಂಗೀತಪುರ, ಶ್ರೀಮದ್ ಬೆಳಗೊಳ, ಕ್ಷೇಮ ವೇಣ್ಪುರ, ಸಿದ್ಧ ಸಿಂಹಾಸನಾಧೀಶ್ವರ ಎಂಬುದಾಗಿದೆ. ಭಟ್ಟಾರಕರೆಂದರೆ "ಸರ್ವಾಶಾಸ್ತ್ರ ಕಲಾಬಿಜ್ಞೊ ಸರ್ವಗಜ್ಞಾಭಿ ವರ್ಧಕಃ ಮಹಾತ್ಮಾನಂ ಪ್ರಭಾವಿ ಭಟ್ಟಾರಕ ಇತಿಷ್ಯತಿ" ಅಂದರೆ ಧರ್ಮಶಾಸ್ತ್ರದಲ್ಲಿ ಪ್ರವೀಣರೂ, ಮುನಿಗಳ ಶ್ರೇಯಸ್ಸನ್ನು ಬಯಸುವವರು. ಮಹಾತ್ಮರು ಧರ್ಮ ಭೋದನೆ ಪ್ರಚಾರವನ್ನು ಮಾಡುವವರು ಎಂಬುದಾಗಿದೆ. ಇಲ್ಲಿನ ಗುರುಪೀಠ (ಮಠ)ದ ಸ್ಥಾಪನೆಯು ಸುಮಾರು ಕ್ರಿ.ಶ. ೧೨೨೦ರಲ್ಲಾಯಿತು. "ಶ್ರವಣ ಬೆಳಗೊಳ ಮಠದ ಸ್ವಸಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರಿಂದ ನೆರವೇರಿತು." ದ್ವಾರಸಮುದ್ರ (ಹಳೇಬೀಡು)ದ ರಾಜನಾದ ಬಿಟ್ಟಿ ದೇವನು (೧೧೦೪-೧೧೪೧) ಜೈನ ಧರ್ಮವನ್ನು ತೊರೆದು ವೈಷ್ಣವ ಧರ್ಮ ಸ್ವೀಕರಿಸಿದನು. ನಂತರ ಅವನು ಬಿಟ್ಟಿದೇವ ಎಂಬ ಹೆಸರನ್ನು ಬದಲಿಸಿ "ವಿಷ್ಣುವರ್ಧನ"ನೆಂದು ನಾಮಾಂಕಿತನಾದನು. ವಿಷ್ಣುವರ್ಧನನು ಮತಾಂತರ ಹೊಂದಿದ ಬಳಿಕ ಅನೇಕ ಬಸದಿಗಳನ್ನು ಧ್ವಂಸಗೊಳಿಸಿದನು. ಜೈನ ಶ್ರಾವಕರನ್ನು ಹಿಂಸಿಸಿ ವಧಿಸಿದನು. ಈ ಅತ್ಯಾಚಾರ, ಅನಾಚಾರದ ಪರಿಣಾಮವಾಗಿ ಪ್ರಕೃತಿ ವಿಕೋಪಕ್ಕೊಳಗಾಗಿ ಅನೇಕ ಜನರು, ಪ್ರಾಣಿಗಳು ಬಲಿಯಾದವು. ಕ್ರಿ.ಶ. ೧೧೭೩-೧೨೨೯ರ ತನಕ ಇಲ್ಲಿ ರಾಜ್ಯವಾಳಿದ ವೀರಬಲ್ಲಾಳನು ಈ ಘೋರ ದುರಂತವನ್ನು ದೂರಗೊಳಿಸುವುದಕ್ಕಾಗಿ ಶ್ರವಣಬೆಳಗೊಳದ ಪೂಜ್ಯಶ್ರೀ ಸ್ವಾಮಿಗಳವರು ದ್ವಾರ ಸಮುದ್ರಕ್ಕೆ (ಈಗಿನ ಹಳೇಬೀಡು ಬಳಿಯ ಅಡಗೂರು) ಚಿತ್ತೈಸಿದರು. ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಯ ಕಲಿಕುಂಡ ಆರಾಧನೆಯನ್ನು ವಿಧಿವತಾಗಿ ಆರಾಧಿಸಿ ಮಂತ್ರ ಪೂರಿತವಾದ ಕುಂಬಳಕಾಯಿ (ಕೂಷ್ಮಾಂಡ) ಗಳಿಂದ ಸಿದ್ಧಾಂತವೆತ್ತರು. ತಪೋಧನ ಜೈನ ಮಂತ್ರದಷ್ಟಾರರು, ತಪೋಶೀಲ ನಿರತರೂ ಆಗಿದ್ದರು.

ಹೊಯ್ಸಳ ರಾಜ ಬಲ್ಲಾಳರಾಯನ ರಾಜ್ಯದ ವಿಪತ್ತನ್ನೂ, ದುಃಖವನ್ನೂ ದೂರ ಮಾಡಿರುವುದರಿಂದ

ರಾಜನು ನಾಲ್ಕು ಕಡೆಯಲ್ಲಿ ಧರ್ಮ ಜಾಗೃತಿಯನ್ನು ಮೊಳಗಿಸಿದ ಪೂಜ್ಯರಿಗೆ ತನ್ನ ಮಂತ್ರಿ, ಪರಿವಾರ ಸಮೇತ ವಿನಯಪೂರ್ವಕವಾಗಿ 'ಚಾರುಕೀರ್ತಿ' ಎಂಬ ಅಭಿಧಾನವನ್ನಿತ್ತು ಗೌರವಿಸಿದ, ಅವರೇ ಚಾರು ಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು. ಅಲ್ಲಿಂದ ಸ್ವಾಮಿಗಳವರು ನೇರವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ನಲ್ಲೂರಿಗೆ ಬಂದು ಅಲ್ಲೊಂದು ಮಠವನ್ನು ಸ್ಥಾಪಿಸಿದರು. ನಂತರ ಮೂಡಬಿದಿರೆಗೆ ಸಿದ್ಧಾಂತ ಗ್ರಂಥಗಳ ಪ್ರದರ್ಶನಕ್ಕೆಂದು ಚಿತ್ತೈಸಿ ಇಲ್ಲೊಂದು ಮಠವನ್ನು ಸನ್ ೧೨೨೦ನೆಯ ಇಸವಿಯಲ್ಲಿ ಸ್ಥಾಪಿಸಿ ಖಾಲಿಯಾಗಿದ್ದ ಪ್ರಾಚೀನ ಪೀಠವನ್ನು ಅಲಂಕರಿಸಿದರು.

ಹೀಗೆ ಇವೆರಡು ಮಠಗಳು ಶ್ರವಣಬೆಳಗೊಳದ ಮಠಗಳೊಂದಿಗೆ ಅನಂತ ನೇರ ಸಂಬಂಧ ಹೊಂದಿರುವ ಗೌರವ ಪಾತ್ರವಾದ ಸ್ವತಂತ್ರ ಪೀಠಗಳಾಗಿವೆ. ಅಂದಿನಿಂದ ಎರಡೂ ಗೌರವಾನ್ವಿತ ಪೀಠದ ಮಠಾಧಿಪತಿಗಳು ಕೂಡಾ ಹೊಯ್ಸಳ ರಾಜ ಬಲ್ಲಾಳರಾಯನಿಂದ ಕೊಡಮಾಡಿದ 'ಚಾರುಕೀರ್ತಿ' ಎಂಬ ಅಭಿದಾನದಿಂದ ವಿಖ್ಯಾತರಾದರು. ಅಂದರೆ ಮೂಡಬಿದಿರೆಯ ಶ್ರೀ ಜೈನ ಮಠವು ಇಂದಿಗೆ ೭೮೦ ವರ್ಷಗಳ ಮೊದಲು ಸ್ಥಾಪನೆಗೊಂಡಿದೆ ಎಂದು ತಿಳಿದು ಬರುತ್ತದೆ.

ಇಂದು ಮೂಡಬಿದಿರೆಯ ಶ್ರೀ ಜೈನ ಮಠದ ಚಂದನದ ಗದ್ದುಗೆಯ ಶ್ರೀ ಪೀಠ ರೂಢಿಯಾದ ಪೂಜ್ಯ ಭಟ್ಟಾರಕರು ಸ್ವಸ್ತಿ ಶ್ರೀ ಮದಭಿನವ "ಭಾರತ ಭೂಷಣ" ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವಿದ್ವಾಂಸರಾಗಿದ್ದು, ಜೈನದರ್ಶನ, ರತ್ನಕರಂಡಕ, ವಿಶಾರದ ಸಿವಿಲ್ ಇಂಜಿನಿಯರ್ ಡಿಪ್ಲೋಮಾ, ಅರ್ಥಶಾಸ್ತ್ರ ಪದವೀಧರರು. ಇವರ ಪಟ್ಟಾಭಿಷೇಕ ಸಮಾರಂಭವು ದಿನಾಂಕ ೨೯-೦೮-೧೯೯೯ ರಂದು ಸಂಪನ್ನವಾಯಿತು. ಪರಮಪೂಜ್ಯ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಚಾರ್ಯವರ್ಯ ಮಹಾಸ್ವಾಮಿಗಳವರು ತನ್ನ ಪ್ರಿಯಾಗ ಶಿಷ್ಯರಲ್ಲೋರ್ವರಾದ ತಮ್ಮಿಂದಲೇ ಬಿಜಾಪುರದ ಸಹಸ್ರಫಣಿ ಕ್ಷೇತ್ರದ ಅಧ್ಯಕ್ಷರಾಗಿ ನಿಯುಕ್ತಿಗೊಂಡ ವಿಚಾರಪಟ್ಟದ ಕ್ಷುಲ್ಲಕ ದೀಕ್ಷಿತ ಹೇಮಕೀರ್ತಿ ಶ್ರೀಗಳನ್ನು ಶ್ರೀಪೀಠಕ್ಕೆ ನೀಡಿದರು.

ಇವರು ತನ್ನ ದೀಕ್ಷಾ ಗುರುಗಳ ಆದೇಶದಂತೆ ಶ್ರೀಪೀಠರೂಢರಾಗಿ ಧರ್ಮ ಪ್ರಭಾವನ ನಿರತರಾಗಿದ್ದುದಲ್ಲದೆ ಬಹುಭಾಷೆ ಬಲ್ಲವರೂ, ವಿದ್ವಾಂಸರೂ, ಮೇಧಾವಿಗಳೂ, ವಾಸ್ತುಶಾಸ್ತ್ರಜ್ಞರೂ, ಬರಹಗಾರರೂ, ಕಲಾಪೋಷಕರೂ ಆಗಿದ್ದು, ಧರ್ಮಪೂಜ್ಯ ಭಟ್ಟಾರಕರ ಸಂಚಾಲಕತ್ವ ಹಾಗೂ ನೇತೃತ್ವದಲ್ಲಿ ಮೂಡಬಿದಿರೆ ಕ್ಷೇತ್ರವು ೧೮ ಭವ್ಯ ಬಸದಿಗಳು, ಅನರ್ಘ್ಯ ರತ್ನ ಪ್ರತಿಮೆಗಳು ಇವರ ಅಧೀನದಲ್ಲಿವೆ. ಇವರು ಈ ಕ್ಷೇತ್ರದ (೧೮ ಬಸದಿಗಳ) ಮುಖ್ಯ ಸಂಚಾಲಕರಾಗಿರುತ್ತಾರೆ.

ಇಲ್ಲಿಯ ಜಿನಮಂದಿರಗಳಲ್ಲಿ ಜರುಗುವ ಪ್ರತಿಯೊಂದು ನೋಂಪಿ, ಆರಾಧನೆ, ಪೂಜೆ, ಅಭಿಷೇಕ ಮೊದಲಾದ ಕಾರ್ಯಕ್ರಮಗಳಲ್ಲಿ ಶ್ರೀಗಳ ನಂತರ ಜೈನ ಪಾಳೇಗಾರರ ಪೈಕಿ ಮೊತ್ತಮೊದಲು ಚೌಟರು, ಬಂಗರು, ಅಜಿಲರು, ಚೋಳರು, ಮೂಲರು, ರೊನ್ನರು, ಭಿನಾಳರು, ಸೇಮಿತರು, ಬಲ್ಲಾಳರು, ಹೆಗ್ಗಡೆಯವರು ಮೊದಲಾದವರಿಗೆ ಯಥಾಕ್ರಮವಾಗಿ ಗಂಧಪ್ರಸಾದ

ಮೊದಲಾದ ಮಾನ ಮರ್ಯಾದೆಗಳನ್ನು ಕೊಡತಕ್ಕದ್ದು, ನಡೆಯತಕ್ಕದ್ದೆಂದು ಸೂಚಿಸುತ್ತಾರೆ.

ಹೀಗೆ ಜೈನ ಕಾಶಿಯಾದ ವೇಣುಪುರ ಅರ್ಥಾತ್ ಮೂಡಬಿದಿರೆ ಬಹಳ ಪುರಾತನ ಊರಾಗಿದ್ದು ಜೈನರ ಯಾತ್ರಾಸ್ಥಳ ಹಾಗೂ ದಕ್ಷಿಣ ಕನ್ನಡದ ಪ್ರಮುಖ ಪ್ರವಾಸಿ ತಾಣವಾಗಿದೆ. ಮೂಡಬಿದಿರೆಯು 'ಜೈನಕಾಶಿ' ಎಂದು ಪ್ರಸಿದ್ಧಿ ಪಡೆದಿರುವುದನ್ನು ಈ ಮೊದಲೇ ಹೇಳಲಾಗಿದೆ. ಅಂದಾಜು ಸರಿ ಸುಮಾರು ೧೦ ಶತಮಾನಗಳಷ್ಟು ಹಿಂದೆ ಇಲ್ಲಿ ಆಳಿದ ಜೈನ ರಾಜರುಗಳು, ಅವರ ಸಾಮಂತರುಗಳು, ಶ್ರೀಮಂತ ಸೆಟ್ಟಿಗಳು (ವ್ಯಾಪಾರಿಗ) ಇಲ್ಲಿರುವ ಬಸದಿಗಳನ್ನು ಕಟ್ಟಿಸಿದವರೆಂದು ಇಲ್ಲಿರುವ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಈ ಬಸದಿಗಳು ವಾಸ್ತುಕಲೆ, ಶಿಲ್ಪಕಲೆ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿದೆ. ಹಾಗೆಯೇ ಇಲ್ಲಿರುವ ಒಂದೆರಡು ಬಸದಿಗಳ ಗೋಡೆಗಳ ಮೇಲೆ ಭಿತ್ತಿ ಚಿತ್ರಕಲೆಯೂ ಕಂಡುಬರುತ್ತದೆ. ಇವುಗಳು ಚಿತ್ರಕಲೆಯ ದೃಷ್ಟಿಯಿಂದ ಬಹಳ ಮಹತ್ವವುಳ್ಳದ್ದಾಗಿದೆ.

ಮುಖ್ಯವಾಗಿ ಮೂಡಬಿದಿರೆಯಲ್ಲಿರುವ ೧೮ ಬಸದಿಗಳು ವಾಸ್ತುಕಲೆ ಹಾಗೂ ಶಿಲ್ಪಕಲೆಯ ದೃಷ್ಟಿಯಿಂದ ಬಹಳ ಮಹತ್ವದುಳ್ಳದ್ದಾಗಿದೆ. ಪ್ರಸ್ತುತ ಕೆಲವೇ ಕೆಲವು ಬಸದಿಗಳ ಗೋಡೆಗಳಲ್ಲಿ ದ್ವಾರಪಾಲಕರ ಚಿತ್ರಗಳನ್ನು ಕಾಣಬಹುದು. ಚಿತ್ರಕಲೆಯ ದೃಷ್ಟಿಯಿಂದ ನೋಡುವಾಗ ಕೇವಲ ಎರಡು ಬಸದಿಗಳು (ಮಠದ ಬಸದಿ ಹಾಗೂ ಸಾವಿರ ಕಂಬದ ಬಸದಿ) ಮಾತ್ರ ಮಹತ್ವವುಳ್ಳದ್ದಾಗಿದ್ದು ಅಲ್ಲಿಯೂ ಕುಡ ಚಿತ್ರಗಳ ಸ್ಥಿತಿ ಚಿಂತಾಜನಕವಾಗಿದೆ.

ಜೈನಮಠ, ಶ್ರವಣಬೆಳಗೊಳದ ಸಾಂಸ್ಕೃತಿಕ ಹಿನ್ನಲೆ :

ಜೈನರ ದಕ್ಷಿಣಕಾಶಿ ಎಂದು ಪ್ರಸಿದ್ದವಾಗಿರುವ ಶ್ರವಣಬೆಳಗೊಳ ಕ್ರಿ.ಪೂರ್ವ ಮೂರನೆ ಶತಮಾನದಿಂದಲೂ ಜೈನ ಸಂಸ್ಕೃತಿಯ ಪ್ರಮುಖ ಕೇಂದ್ರಕರ್ನಾಟಕದ ಪ್ರಸಿದ್ದ ಅರಸು ಮನೆತನಗಳಾದ ಗಂಗಾ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರದ ಅರಸರು ಹಾಗೂ ಮೈಸೂರುಮಹಾರಾಜರು ಒಂದಲ್ಲ ಒಂದು ರೀತಿಯಿಂದ ಶ್ರವಣಬೆಳಗೊಳದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಈ ಕ್ಷೇತ್ರವನ್ನು ಧಾರ್ಮಿಕ ಮತ್ತು ಕಲಾತ್ಮಕವಾಗಿ ಮಾಡುವಲ್ಲಿ ತಮ್ಮದೇಯಾದ ಕಾಣಿಕೆಗಳನ್ನು ನೀಡಿರುತ್ತಾರೆ.

ಕ್ರಿ.ಶ.ಹತ್ತನೆ ಶತಮಾನದಲ್ಲಿ ಗಂರಾಜರಾಚಮಲ್ಲನ ದಂಡನಯಕನಾದ ಚಾವುಂಡರಾಯನು ನಿರ್ಮಿಸಿದ ಜಗದ್ವಿಖ್ಯಾತ ಗೋಮ್ಮಟೇಶ್ವರ ಮೂರ್ತಿ ಉದ್ಬವವಾಗಿದ್ದರ ಹಿನ್ನಲೆಯೇ ಈ ಕ್ಷೇತ್ರಕ್ಕೆ ಮತ್ತಷ್ಟು ಮೆರಗನ್ನು ತಂದಿರುತ್ತದೆ.

ಶ್ರವಣಬೆಳಗೊಳ ಕ್ಷೇತ್ರದ ಧಾರ್ಮಿಕ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳಿಗೆ ಸ್ಫೂರ್ತಿಯ ಕೇಂದ್ರ, ಇಲ್ಲಿನ ಜೈನ ಮಠ, ಚಾವುಂಡ ರಾಯನ ಗುರುಗಳಾದ ನೇಮಿಚಂದ್ರ ಸಿದ್ದಾಂತ ಚಕ್ರವರ್ತಿಗಳಿಗೂ ಗೊಮ್ಮಟಮೂರ್ತಿಯನ್ನು ಪ್ರತಿಸ್ಠಾಪಿಸಿದ ನಂತರ ಜೈನ ಮಠದ ಮಠಾಧಿಪತಿಗಳೂ ಆದರು. ಆದರೆ ಇದಕ್ಕಿಂತ ಮೊದಲೇ ಈ ಮಠಕ್ಕೆ ಭವ್ಯಗುರು ಪರಂಪರೆಯಿದ್ದಿತೆಂದು

ತಿಳಿದುಬರುತ್ತದೆ.

ಶ್ರವಣಬೆಳಗೊಳದ ಭಂಡಾರಿ ಬಸದಿಯ ಬಲಭಾಗದಲ್ಲಿ ಒಳಗಡೆ ಪಶ್ಚಿಮಕ್ಕೆ ಮುಖ ಮಾಡಿರುವ ಜೈನ ಮಠವು ಮಧ್ಯೆ ತೊಟ್ಟಿ ಮನೆಯಂತಿದ್ದು ಅನೇಕ ಕೋಣೆಗಳನ್ನೊಳಗೊಂಡಿದೆ. ಬಾಗಿಲಿನ ಎದುರಿಗೆ ಇರುವ ಮೂರು ಕೋಣೆಗಳಲ್ಲಿ ಅನೇಕ ಜಿನ ಯಕ್ಷ-ಯಕ್ಷಿಯರ ಪ್ರತಿಮೆಗಳಿವೆ ಹಾಗೂ ಅನೇಕ ಪ್ರಾಚೀನ, ಅರ್ವಾಚೀನ ವಿಗ್ರಹಗಳು ಇಲ್ಲಿವೆ. ಈ ಮಠದ ಪರಂಪರೆ ಎಷ್ಟು ಹಳೆಯದೆಂಬುದು ನಿರ್ಧರಿಸುವುದು ಕಷ್ಟ. ಆದರೆ ೧೧ನೆಯ ಶತಮಾನದಲ್ಲಿಯೇ ಸ್ವಾಮಿಗಳ ಉಲ್ಲೇಖ ಬಂದಿರುವುದರಿಂದ ಆ ಕಾಲದಲ್ಲಿಯೇ ಇಲ್ಲಿ ಮಠವಿದ್ದಿರಬಹುದೆಂದು ಊಹಿಸಬಹುದಾಗಿದೆ. ಪ್ರಸ್ತುತ ಈ ಮಠದ ಕಟ್ಟಡವು ಮೈಸೂರು ಅರಸರ ಕಾಲದಾಗಿದ್ದು, ಬಹುಶಃ ಇಲ್ಲಿನ ಹಳೆಯ ಕಟ್ಟಡವನ್ನು ಕಿತ್ತು ಹೊಸದಾಗಿ ಕಟ್ಟಿಸಿರಬಹುದು. ಭಂಡಾರಿ ಹುಳ್ಳಮಯ್ಯನು ಭಂಡಾರಿ ಬಸದಿಯನ್ನು ಇಲ್ಲಿ ಕಟ್ಟಿಸಿದ ಮೇಲೆ ಮಠವು ಅಕ್ಕನ ಬಸದಿ ಕಡೆಯಿಂದ (ದಾನ ಶಾಲಾ ಬಸದಿ ಹಾಗೂ ಸಿದ್ಧಾಂತ ಬಸದಿಯಿಂದ) ಇಲ್ಲಿಗೆ ಬದಲಾಯಿಸಿರಬಹುದು. ಈಗಿರುವ ಕಟ್ಟಡದ ಮೇಲುಪ್ಪರಿಗೆಯನ್ನು ಈ ಶತಮಾನದ ಸುಮಾರು ೧೯೩೦ರ ದಶಕದಲ್ಲಿ ನಿರ್ಮಿಸಿರುತ್ತಾರೆ. ಮಠದ ಸುತ್ತಲೂ ಅಲಂಕಾರಿಕವಾಗಿ ನಿರ್ಮಿಸಿರುವ ಗಾರೆಯ ಗೂಡುಗಳಲ್ಲಿ ಸರಸ್ವತಿ, ಅಂಬಿಕೆ, ಪದ್ಮಾವತಿ ಹಾಗೂ ಇಂದ್ರ ಮುಂತಾದ ಗಾರೆಯ ಮಾಧ್ಯಮದ ಸುಂದರವಾದ ಮೂರ್ತಿಗಳಿವೆ. ಈ ಮೂರ್ತಿಗಳಿಗೆ ಬಣ್ಣವನ್ನು ಹಚ್ಚಿರುವ ಕುರುಹುಗಳನ್ನು ಕಾಣಬಹುದಾಗಿದೆ. ಜೈನ ಮಠದ ಭಿತ್ತಿಚಿತ್ರ ಕಲಾಕೃತಿಗಳ ಅಪೂರ್ವ ಭಂಡಾರವನ್ನು ಈಗಲೂ ಕಾಣಬಹುದು.

ಇಲ್ಲಿ ಮಠವನ್ನು ಪ್ರವೇಶ ಮಾಡಿದೊಡನೆ ಎದುರುಗಡೆ ಕಾಣುವ ಗರ್ಭಗೃಹದ ಬಲಭಾಗದಲ್ಲಿ ಗೋಡೆಯ ಮೇಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ಅವರ ದಸರಾ ದರ್ಬಾರಿನ ಚಿತ್ರಗಳು ನಮ್ಮ ಗಮನವನ್ನು ಸೆಳೆಯುತ್ತದೆ. ಆದರೆ ಎಡಗಡೆ ಗೋಡೆಯ ಮೇಲೆ ಮೂರು ಸಲು ಚಿತ್ರಗಳಿವೆ. ಅವುಗಳಲ್ಲಿ ಮೇಲಿನಿಂದ ಮೊದಲನೆಯ ಸಾಲಿನಲ್ಲಿ ಪಂಚಪರಮೇಷ್ಠಿಗಳನ್ನು ಚಿತ್ರಿಸಲಾಗಿದೆ. ಮಧ್ಯದ ಸಾಲಿನಲ್ಲಿ ನೇಮಿನಾಥ, ಯಕ್ಷ-ಯಕ್ಷಿಯರ ಚಿತ್ರಗಳು, ಕೆಳಗಡೆ ಸಾಲಿನಲ್ಲಿ ಮಠದ ಸ್ವಾಮಿಗಳ ಚಿತ್ರಗಳೂ ಇವೆ. ತಮ್ಮ ಶಿಷ್ಯರಿಗೆ ಧಾರ್ಮಿಕ ಉಪದೇಶವನ್ನು ಮಾಡುತ್ತಿರುವಂತೆ ಈ ಸ್ವಾಮಿಗಳನ್ನು ಚಿತ್ರಿಸಲಾಗಿದೆ. ಉತ್ತರ ದಿಕ್ಕಿನ ಗೋಡೆಯ ಮೇಲೆ ಪಾರ್ಶ್ವನಾಥನ ಸಮವಸರಣದ ಚಿತ್ರ ವಸ್ತುವನ್ನು ಮುಖ್ಯವಾಗಿ ಚಿತ್ರಿಸಲಾಗಿದೆ. ಇದರ ಸುತ್ತಲೂ ಇರುವ ವೃತ್ತಾಕಾರದಲ್ಲಿ ಕುತೂಹಲಕರವಾದ ಅನೇಕ ಚಿತ್ರಗಳಿವೆ. ದಕ್ಷಿಣ ದಿಕ್ಕಿನ ಗೋಡೆಯ ಮೇಲೆ ಸ್ವಾಮಿಗಳು ಇರುವ ಕೋಣೆಯ ಬಲಭಾಗದಲ್ಲಿ ಭರತ ಚಕ್ರವರ್ತಿಯ ಜೀವನವನ್ನು ಆಧರಿಸಿದ ಸನ್ನಿವೇಶಗಳು ನಿರೂಪಿಸಲ್ಪಟ್ಟಿವೆ. ಪಶ್ಚಿಮ ದಿಕ್ಕಿನ ಗೋಡೆಯ ಮೇಲಿರುವ ಎರಡು ಸಾಲುಗಳಲ್ಲಿಯೂ ಈ ಕಥೆಯೇ ಮುಂದುವರೆದಿದೆ. ಇಲ್ಲಿನ ಚಿತ್ರಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ.

ಇವುಗಳಲ್ಲಿ ಕೆಲವಾದರೂ ಪ್ರಾಚೀನವಾಗಿದ್ದಿರಬೇಕು. ಆದರೆ ಬಹುಪಾಲು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದವುಗಳೆನ್ನಬಹುದು. ಮೈಸೂರು ಶೈಲಿಯ ಭಿತ್ತಿಚಿತ್ರಗಳಲ್ಲಿ ಬಹಳ ಪ್ರಮುಖವಾದ ಸ್ಥಾನವನ್ನು ಹೊಂದಿರುವುದು ಕಂಡುಬರುತ್ತದೆ. ಇಲ್ಲಿರುವ ಕೆಲವು ಭಿತ್ತಿ ಚಿತ್ರಗಳು ಆಕರ್ಷಣೀಯವಾಗಿವೆ.

ಜೈನ ಚಿತ್ರಕಲೆ :

ಕರ್ನಾಟಕದಲ್ಲಿ ಅನೇಕ ಕಡೆ ಜೈನ ಭಿತ್ತಿ ಚಿತ್ರಗಳನ್ನು ಕಾಣಬಹುದು. ನನ್ನ ಅಧ್ಯಯನದ ವ್ಯಾಪ್ತಿಗೆ ಬರುವುದು ಮುಖ್ಯವಾಗಿ ದಕ್ಷಿಣ ಕರ್ನಾಟಕದಲ್ಲಿ ಸಿಗುವಂತಹ ಭಿತ್ತಿ ನೆಲೆ ಹಾಗೂ ಅಲ್ಲಿರುವ ಕಲೆಯ ಕುರಿತು ಅದು ಮಠವಿರಬಹುದು, ಬಸದಿಯಿರಬಹುದು ಮತ್ತು ಜೈನ ಶ್ರಾವಕ ಮನೆಯಲ್ಲಿನ ಭಿತ್ತಿ ಚಿತ್ರವಿರಬಹ್ಮದು, ಒಟ್ಟಾರೆ ಇತಿಹಾಸ ಕಂಡಂತಹ ಜೈನ ಭಿತ್ತಿಚಿತ್ರಗಳನ್ನು ಸಂಶೋಧನೆಯ ಮೂಲಕ ಬೆಳಕು ಹರಿಸಬೇಕು ಎಂಬ ಸದುದ್ದೇಶದಿಂದ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಮುಖ್ಯವಾಗಿ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿರುವ ಜೈನಮಠ ಮತ್ತು ಅದಲ್ಲಿರುವ ವಿಶೇಷ ಭಿತ್ತಿ ಚಿತ್ರಗಳ ಕುರಿತು ಇಲ್ಲಿ ಹೇಳಲಾಗಿದೆ.

ಜೈನ ಪರಂಪರೆಯ ಅನುಸಾರ ಅವಸರ್ಪಿಣೀ ಕಾಲದಲ್ಲಿ ಹ್ರಾಸವು ಆಗುತ್ತಾ ಆಗುತ್ತ ಭೋಗ ಭೂಮಿಯ ಸ್ಥಾನವನ್ನು ಕರ್ಮಭೂಮಿಯು ತೆಗೆದುಕೊಂಡಾಗ ಭಗವಾನ್ ಋಷಭದೇವರು ಜನರ ಯೋಗಕ್ಷೇಮಕ್ಕೋಸ್ಕರ ಪುರುಷರಿಗೆ ಎಪ್ಪತ್ತೆರಡು ಕಲೆಗಳನ್ನು, ಸ್ತ್ರೀಯರಿಗೆ ಅರವತ್ತು ನಾಲ್ಕು ಗುಣಗಳನ್ನು ಬೋಧಿಸಿದರು. ಜೈನ ಅಂಗ ಸಾಹಿತ್ಯದ ಹದಿಮೂರನೆಯ ಪರ್ವದಲ್ಲಿ ಅವುಗಳ ವಿಸ್ತೃತ ವರ್ಣನೆಯು ಮಾಡಲ್ಪಟ್ಟಿದೆ.

ಕಲಾ ಬಹತ್ತರ ಪುರುಷಕೀ, ತಾಮೋ ದೋ ಸರದಾರ।
ಏಕ ಜೀವಕೀ ಜೀವಿಕಾ, ತಾಮೇ ದೋ - ಉದ್ದಾರ॥

ಜೈನಧರ್ಮದ ಪ್ರಧಾನ ಲಕ್ಷ್ಯವೇ ಜೀವದ ಉದ್ದಾರ. ಒಂದುವೇಳೆ ಜೀವದ ಉದ್ದಾರಕ್ಕಾಗಿ ಮಾಡಲ್ಪಡುವ ಸತ್ಪ್ರಯತ್ನಗಳ ಹೆಸರೇ ಜೈನಧರ್ಮವೆಂದರೂ ಅನುಚಿತವಾಗಲಾರದು. ಆದುದ್ದರಿಂದಲೇ ಇಂದು 'ಸತ್ಯಂ-ಶಿವಂ-ಸುಂದರಂ" ಅಂದರೆ ಸತ್ಯವೂ, ಕಲ್ಯಾಣಕರವೂ, ಸುಂದರವೂ ಆದುದೇ ಕಲೆಯೆಂದು ಮಾಡಲ್ಪಡುವ ಕಲೆಯ ಪರಿಭಾಷೆಯು ಜೈನ ಕಲೆಯಲ್ಲಿ ಸುಘಟಿತವಾಗುವುದು. ಏಕೆಂದರೆ ಜೈನಧರ್ಮಕ್ಕೆ ಸಂಬಂಧಪಟ್ಟ ಚಿತ್ರಕಲೆ, ಮೂರ್ತಿಕಲೆ ಹಾಗೂ ಸ್ಥಾಪತ್ಯ ಕಲೆಗಳು ಸುಂದರವಾಗಿರುವುದರೊಡನೆ ಕಲ್ಯಾಣಕರವು ಸತ್ಯವು ಆಗಿವೆ.[೪೧] ಕರ್ನಾಟಕದಲ್ಲಿ ಜೈನಧರ್ಮವು ಕ್ರಿಸ್ತ ಪೂರ್ವದಿಂದಲೇ ಹರಡಿರಬೇಕೆಂಬುದಕ್ಕೆ ಹಲವು ಶಾಸನ ಮತ್ತು ಸಾಹಿತ್ಯಿಕ ಆಧಾರಗಳು ದೊರೆಯುತ್ತದೆ. ಉತ್ತರ ಭಾರತದಲ್ಲಿ ಈ ಧರ್ಮವು ಉಗಮವಾದುದಾದರೂ ಕರ್ನಾಟಕದಲ್ಲಿ ಪ್ರಚಾರಗೊಂಡಂದಿನಿಂದ ಇಲ್ಲಿನ ಸಾಹಿತ್ಯ, ಕಲೆ, ಭಾಷೆ, ವಿದ್ಯಾಪ್ರಸಾರ ಹಾಗೂ ಸಾಮಾನ್ಯ

ಜನರ ಜೀವನ ವಿಧಾನ, ನೈತಿಕ ಮೌಲ್ಯಗಳ ಪ್ರತಿಪಾದನೆಗಳಲ್ಲಿ ಪ್ರಮುಖ ಪಾತ್ರವನ್ನು ಈ ಧರ್ಮವಹಿಸಿದೆ. ಜೈನ ತೀರ್ಥಂಕರೆಲ್ಲರೂ ಉತ್ತರ ಭಾರತದಲ್ಲಿ ಜನಿಸಿ, ಧರ್ಮ ಪ್ರಚಾರ ಮಾಡಿದರೂ, ಜೈನ ಶಾಸ್ತ್ರಗ್ರಂಥಗಳು ರಚಿಸಿದ ಆಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರು. ಕರ್ನಾಟಕಕ್ಕೆ ಜೈನಧರ್ಮದ ಆಗಮನದ ಕಾಲವನ್ನು ಎಲ್ಲಾ ವಿದ್ವಾಂಸರು ಚಂದ್ರಗುಪ್ತ ಮತ್ತು ಭದ್ರಬಾಹು ಮುನಿಗಳ ಆಗಮನದ ಘಟನೆಯೊಡನೆ ಹೇಳುತ್ತಾರೆ.

ಕ್ರಿಸ್ತಪೂರ್ವ ಕಾಲದಲ್ಲಿ ಭದ್ರಬಾಹು ಭಟ್ಟಾರಕರು ಉಜ್ಜಯನಿಯಲ್ಲಿದ್ದಾಗ ಉತ್ತರ ಪ್ರದೇಶದಲ್ಲಿ ಹನ್ನೆರಡು ವರ್ಷಗಳ ಕಾಲ ಕ್ಷಾಮವುಂಟಾಗುತ್ತದೆಂಬುದನ್ನು ಅರಿತು ಚಂದ್ರಗುಪ್ತ ಮೊದಲಾದ ಶಿಷ್ಯರೊಡಗೂಡಿ ದಕ್ಷಿಣಕ್ಕೆ ಬಂದು ಕಳ್ಬಪ್ಪು ನಾಡಿನಲ್ಲಿ ಅಂದರೆ ಶ್ರವಣ ಬೆಳಗೊಳದಲ್ಲಿ ನೆಲೆ ನಿಂತರೆಂದು ಹೇಳಲಾಗುತ್ತದೆ.[೪೨] ಇದಕ್ಕೆ ಸಂಬಂಧಿಸಿದಂತೆ ಶ್ರವಣಬೆಳಗೊಳದಲ್ಲಿ ಶಾಸನಗಳು ಪತ್ತೆಯಾಗಿರುತ್ತವೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಜೈನ ಚಿತ್ರಕಲೆಯಲ್ಲಿ ಮುಖ್ಯವಾಗಿ ಶ್ರವಣಬೆಳಗೊಳ, ಹೊಂಬುಜ, ಮೂಡಬಿದರೆ, ಕಾರ್ಕಳ, ವೇಣೂರು, ಧರ್ಮಸ್ಥಳ, ಸಿಂಹನಗದ್ದೆ ಮುಂತಾದ ಸ್ಥಳಗಳಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದು. ಪ್ರಸ್ತುತ ಕ್ಷೇತ್ರಕಾರ್ಯ ಕೈಗೊಂಡ ಶ್ರವಣಬೆಳಗೊಳದಲ್ಲಿ ಸಿಗುವ ಜೈನ ಭಿತ್ತಿ ಚಿತ್ರಗಳನ್ನು ವಿಶ್ಲೇಷಿಸುವುದು ಇಲ್ಲಿ ಮುಖ್ಯವಾಗಿದೆ.

ಸಿರಗುಜಾ ರಾಜ್ಯಾಂತರ್ಗತ ಲಕ್ಷಣಪುರದಿಂದ ಹನ್ನೆರಡು ಮೈಲುಗಳ ದೂರದಲ್ಲಿ ರಾಮಗಿರಿ ಎಂಬ ಪರ್ವತವಿದೆ. ಅಲ್ಲಿ ಜೋಗಿಮರಾ ಗುಹೆಗಳಿವೆ. ಗುಹೆಯ ಬಾಗಿಲಲ್ಲಿ ಬಹುಸುಂದರವಾದ ಚಿತ್ರಗಳಿರುವವು. ಈ ಚಿತ್ರಗಳು ಐತಿಹಾಸಿಕ ದೃಷ್ಟಿಯಿಂದ ಪ್ರಾಚೀನವಾಗಿವೆ. ಇವು ಜೈನಧರ್ಮಕ್ಕೆ ಸಂಬಂಧಪಟ್ಟವು. ಆದರೆ ರಕ್ಷಣೆಯ ಅಭಾವದಿಂದ ಚಿತ್ರಗಳ ಸ್ಥಿತಿಯು ತುಂಬಾ ಕೆಟ್ಟು ಹೋಗಿದೆ. ಪುದುಕೋಟೆಯ ರಾಜ್ಯದಲ್ಲಿ ರಾಜಧಾನಿಯಿಂದ ಒಂಬತ್ತು ಮೈಲುಗಳ ಉತ್ತರದಲ್ಲಿ ಒಂದು ಜೈನ ಗುಹಾಮಂದಿರವಿದೆ. ಇದನ್ನು ಸಿತ್ತನ್ನಿವಾಸಲವೆಂದು ಕರೆಯುತ್ತಾರೆ. ಸಿತ್ತನ್ನಿವಾಸಲದ ಪ್ರಾಕೃತ ರೂಪ ಸಿದ್ದ ನಿವಾಸ ಅಂದರೆ ಸಿದ್ದರ ನಿವಾಸ. ಇದರ ಭಿತ್ತಿಚಿತ್ರಗಳಲ್ಲಿ ಪೂರ್ವ ಪಲ್ಲವ ರಾಜರ ಶೈಲಿಯ ಚಿತ್ರಗಳಿವೆ. ಇವು ತಮಿಳು ಸಂಸ್ಕೃತಿ ಹಾಗೂ ಸಾಹಿತ್ಯದ ಮಹಾನ್ ಸಂರಕ್ಷಕನೂ ಪ್ರಸಿದ್ಧ ಕಲಾಕಾರನೂ ಆದ ರಾಜಮಹೇಂದ್ರ ವರ್ಮ, ಪ್ರಥಮ (ಕ್ರಿ.ಶ.೬೦೦-೬೨೫) ದಿಂದ ನಿರ್ಮಿಸಲ್ಪಟ್ಟವು. ಇವು ಅತ್ಯಂತ ಸುಂದರವಾಗಿರುವುದೇ ಮಾತ್ರವಲ್ಲ. ಎಲ್ಲದಕ್ಕಿಂತ ಪ್ರಾಚೀನ ಜೈನ ಚಿತ್ರಗಳು ಅಜಂತಾ ಸರ್ವೋತ್ಕೃಷ್ಟ ಚಿತ್ರಗಳೊಡನೆ ಸಿತ್ತನ್ನಿವಾಸಲದ ಚಿತ್ರಗಳ ತುಲನೆಯನ್ನು ಮಾಡುವುದು ಅನ್ಯಾಯವಾಗಬಹುದೆಂಬ ಮಾತು ನಿಸ್ಸಂದೇಹವಾದುದು. ಆದರೆ ಈ ಚಿತ್ರಗಳು ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಗೌರವಪೂರ್ಣವಾದ ಸ್ಥಾನವನ್ನು ಗಳಿಸಲರ್ಹವಾಗಿವೆ. ಇವುಗಳ ರಚನಾ ಶೈಲಿ ಬಹಳಮಟ್ಟಿಗೆ ಅಜಂತಾದ ಭಿತ್ತಿ ಚಿತ್ರಗಳನ್ನು ಹೋಲುತ್ತದೆ.

ಇಲ್ಲಿ ಈಗ ಭಿತ್ತಿ ಹಾಗೂ ಛತ್ತಿನಲ್ಲಿ ಕೇವಲ ಕೆಲವೇ ಚಿತ್ರಗಳು ಸ್ವಲ್ಪ ಉತ್ತಮ ಸ್ಥಿತಿಯಲ್ಲಿ ಉಳಿದಿವೆ. ಬಹಳ ಕಡಿಮೆಯಾದರೂ ಸ್ಥಿರವೂ, ದೃಢವೂ ಆದ ರೇಖೆಗಳಿಂದ ಅತ್ಯಂತ

ಸುಂದರವಾದ ಆಕೃತಿಗಳನ್ನು ಬಹಳ ನಿಪುಣತೆಯಿಂದ ಚಿತ್ರಿಸಿರುವುದೇ ಇದರ ವೈಶಿಷ್ಟ್ಯವಾಗಿದೆ. ಈ ಚಿತ್ರಗಳು ಸಜೀವಗಳಂತೆ ಕಾಣುತ್ತವೆ. ಗುಹೆಯ ಒಳಗೆ ಪರ್ಯಂಕ ಮುದ್ರೆಯಲ್ಲಿ ಪುರುಷ ಪ್ರಮಾಣವುಳ್ಳ ಅತ್ಯಂತ ಸುಂದರವಾದ ಐದು ತೀರ್ಥಂಕರರ ಮೂರ್ತಿಗಳಿವೆ. ಮೂರ್ತಿ ವಿಧಾನ ಕಲೆಯ ದೃಷ್ಟಿಯಿಂದಲೂ ಇವು ಉಲ್ಲೇಖನೀಯವಾಗಿವೆ. ವಾಸ್ತವಿಕವಾಗಿ ಪಲ್ಲವಕಾಲೀನ ಚಿತ್ರಗಳು ಭಾರತೀಯ ವಿದ್ವಾಂಸರಿಗೆ ಅಧ್ಯಯನ ವಸ್ತುವಾಗಿದೆ.

ಸಿತ್ತಿನ್ನಿವಾಸಲದ ಬಳಿಕ ಜೈನಧರ್ಮಕ್ಕೆ ಸಂಬಂಧಪಟ್ಟ ಚಿತ್ರಕಲೆಯ ಉದಾಹರಣೆಗಳು ಹತ್ತನೆಯ ಹಾಗೂ ಹನ್ನೊಂದನೆಯ ಶತಮಾನದಿಂದ ಹಿಡಿದು ಹದಿನೈದನೆಯ ಶತಮಾನದವರೆಗಿನವು ದೊರೆಯುತ್ತವೆ. ಈ ಮಧ್ಯಕಾಲೀನ ಚಿತ್ರಕಲೆಯ ಅವಶೇಷಗಳಿಗಾಗಿ ಭಾರತವು ಜೈನ ಭಂಡಾರಗಳಿಗೆ ಋಣಿಯಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಏಕೆಂದರೆ ಒಂದನೆಯ ಕಾರಣ ಈ ಕಾಲದಲ್ಲಿ ಪ್ರಾಯಶಃ ಒಂದು ಸಾವಿರ ವರುಷಗಳ ತನಕ ಜೈನಧರ್ಮದ ಪ್ರಭಾವವು ಭಾರತದಲ್ಲಿ ವರ್ಷಗಟ್ಟಲೆ ಒಂದು ಬಹಳ ದೊಡ್ಡ ಸಂಖ್ಯೆಯಲ್ಲಿ ಧಾರ್ಮಿಕ ಗ್ರಂಥಗಳನ್ನು ತಾಳೆಯೋಲೆಯಲ್ಲಿ ಬರೆಸಿದರು ಹಾಗೂ ಚಿತ್ರಿಸಿದರು. ವಿ.ಸಂ.೧೧೫೭ರಲ್ಲಿ ಚಿತ್ರಿತ ನಿಶೀಥಚೂರ್ಣಿಯ ಪ್ರತಿಯು ಇಂದೂ ಉಪಲಬ್ಧವಾಗುತ್ತದೆ. ಇದು ಜೈನಾಶ್ರಿತ ಕಲೆಯಲ್ಲಿ ಅತೀ ಪ್ರಾಚೀನವಾದುದು. ಹದಿನೈದನೆಯ ಶತಮಾನದ ಪೂರ್ವದ ಉಪಲಬ್ಧ ಎಲ್ಲಾ ಕಲಾತ್ಮಕ ಚಿತ್ರಕೃತಿಗಳು ಕೇವಲ ಜೈನಗ್ರಂಥಗಳಲ್ಲಿಯೇ ಸಿಗಬಲ್ಲವು[೪೩] ಎಂಬುದನ್ನು ಗಮನಿಸಬಹುದಾಗಿದೆ.

ವಿಜಯನಗರ ರಾಜ್ಯ :

ದಕ್ಷಿಣ ಭಾರತದಲ್ಲಿ ಜೈನಧರ್ಮವು ರಾಜಾಶ್ರಯದಿಂದ ವಂಚಿತವಾಯಿತು. ಆದರೂ ಗುಣಗ್ರಾಹಿ ರಾಜರು ಜೈನ ಗುರುಗಳಿಗೂ, ವಿದ್ವಾಂಸರಿಗೂ, ಮುಂದಾಳುಗಳಿಗೂ ಯಥೋಚಿತವಾದ ಗೌರವವನ್ನು ನೀಡುತ್ತಿದ್ದರು. ಅಂತಹ ರಾಜರುಗಳಲ್ಲಿ ವಿಜಯನಗರ ಸಾಮ್ರಾಜ್ಯದ ಶಾಸಕರ ಹೆಸರು ಉಲ್ಲೇಖಾರ್ಹವಾಗಿದೆ. ಈ ರಾಜ್ಯವು ವೈದಿಕ ಧರ್ಮದ ಪೋಷಕವಾಗಿತ್ತು. ಆದರೆ ಇದರ ನಿರೇಶರು ಬೇರೆ ಬೇರೆ ಧರ್ಮಾವಲಂಬಿಗಳ ಸಂಬಂಧದಲ್ಲಿಯೂ ಉದಾರತೆಯನ್ನು ತೋರಿಸುತ್ತಿದ್ದರು. ಈ ರಾಜ್ಯದ ಉನ್ನತಾಧಿಕಾರಿಗಳಲ್ಲಿ ಹೆಚ್ಚಾಗಿ ಜೈನಧರ್ಮಾವಲಂಬಿಗಳೇ ಇದ್ದರು. ಆದುದ್ದರಿಂದ ರಾಜರೂ ಜೈನಧರ್ಮದ ಸಂಬಂಧದಲ್ಲಿ ವಿಶೇಷ ನಿಗಾ ತೆಗೆದುಕೊಳ್ಳಬೇಕಾಗಿತ್ತು. ಎರಡನೇ ಹರಿಹರನ ಸೇನಾಪತಿಯಾದ ಇರುಗಪ್ಪನು ದೃಢವಾದ ಜೈನ ಧರ್ಮಾನುಯಾಯಿಯಾಗಿದ್ದನು. ಅವನು ೫೯ ವರ್ಷಗಳ ತನಕ ವಿಜಯನಗರ ರಾಜ್ಯದ ಅತ್ಯುನ್ನತವಾದ ಪದವಿಗಳನ್ನು ಯೋಗ್ಯತೆಯಿಂದ ನಿರ್ವಹಿಸಿದನು. ವಿಜಯನಗರದ ರಾಣಿಯರೂ ಜೈನಧರ್ಮವನ್ನು ಪಾಲಿಸುತ್ತಿದ್ದರು. ಶ್ರವಣಬೆಳಗೊಳದ ಒಂದು ಶಿಲಾಲೇಖದಿಂದ ಮಹಾರಾಜ ದೇವರಾಯನ ರಾಣಿ ಭೀಮಾದೇವಿಯು ಜೈನಗಳಾಗಿದ್ದಳೆಂದು ತಿಳಿದುಬರುತ್ತದೆ. ಸನ್ ೧೩೬೮ ನೆಯ ಒಂದು ಶಿಲಾಲೇಖದಂತೆ ಜೈನರು ಮೊದಲನೆಯ ಬುಕ್ಕರಾಯರಲ್ಲಿ ವೈಷ್ಣವರು ನಮಗೆ ಬಹಳ ಅನ್ಯಾಯವನ್ನು ಮಾಡುತ್ತಿದ್ದಾರೆಂದು

ಪ್ರಾರ್ಥಿಸಿಕೊಂಡಾಗ ರಾಜನು ಪರ್ಯಾಪ್ತ ಶೋಧನೆಯನ್ನು ನಡೆಸಿ, ಜೈನ ಹಾಗೂ ವೈಷ್ಣವರೊಡನೆ ಮೈತ್ರಿಯನ್ನುಂಟುಮಾಡಿ ಈ ಕೆಳಗಿನ ಆಜ್ಞೆಯನ್ನಿತ್ತನು.

ಜೈನ ದರ್ಶನವು ಮೊದಲಿನಂತೆಯೇ ಪಂಚಮಹಾಶಬ್ದಕ್ಕೂ, ಕಲಶಕ್ಕೂ ಅಧಿಕಾರಿಯಾಗಿದೆ. ಯಾವನಾದರೊಬ್ಬ ವೈಷ್ಣವನು ಜೈನರಿಗೆ ಯಾವ ಪ್ರಕಾರವಾದ ಹಾನಿಯನ್ನುಂಟು ಮಾಡಿದರೂ ವೈಷ್ಣವರು ಅದನ್ನು ತಮ್ಮ ಧರ್ಮದ ಹಾನಿಯನ್ನಾಗಿಯೇ ತಿಳಿಯಬೇಕು. ವೈಷ್ಣವರು ಈ ಮಾತಿನ ಕಟ್ಟಪ್ಪಣೆಯ ಶಾಸನವನ್ನು ಸ್ಥಾನ-ಸ್ಥಾನಗಳಲ್ಲಿ ಬರೆಸಬೇಕು. ಸೂರ್ಯ, ಚಂದ್ರರು ಇರುವ ತನಕ ವೈಷ್ಣವರು ಜೈನ ದರ್ಶನವನ್ನು ಕಾಪಾಡುವರು. ವೈಷ್ಣವರೂ, ಜೈನರೂ ಒಂದೇ ಆಗಿದ್ದಾರೆ. ಅವರನ್ನು ಬೇರೆ ಬೇರೆಯಾಗಿ ತಿಳಿಯಬಾರದು. ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ.

ಜೈನ ಮಂಟಪ, ಶ್ರವಣಬೆಳಗೊಳ :

ಈ ಜೈನಮಂಟಪವನ್ನು ಹೊಯ್ಸಳರ ಕಾಲಕ್ಕೆ ಕಟ್ಟಲಾಗಿದ್ದು, ಇದನ್ನು ಸಾರ್ವಜನಿಕರಿಗಾಗಿ ಕಟ್ಟಿಸಿದ ಮಂಟಪವಾಗಿದೆ. ದಾರಿಹೋಕರಿಗೆ ಮತ್ತು ನಿರ್ಗತಿಕರಿಗೆ ತಂಗಲು ಅನುಕೂಲವಾಗುವಂತಹ ಮಂಟಪ ಇದಾಗಿದ್ದು ಇಲ್ಲಿಯ ಭಿತ್ತಿ ಚಿತ್ರವನ್ನು ೧೭೮೦ರ ಸುಮಾರಿಗೆ ಮೈಸೂರು ಅರಸರ ಕಾಲಕ್ಕೆ ಮಾಡಲಾಗಿದೆ. ಇಲ್ಲಿನ ಚಿತ್ರಗಳು ಜೈನ ತೀರ್ಥಂಕರರಿಗೆ ಸಂಬಂಧಪಟ್ಟದ್ದು. ಅಲ್ಲದೆ ಮೈಸೂರು ಅರಸರ ವಂಶಾವಳಿ, ಪುಣ್ಯ ಮತ್ತು ಪಾಪಗಳ ಲೇಶ್ಯಗಳನ್ನು ಕುರಿತು ಇವುಗಳನ್ನು ಸಾಂಕೇತಿಕವಾಗಿ ಮರಗಳ ಹಿನ್ನೆಲೆಯಿಂದ ತೋರಿಸಲಾಗಿದೆ.

ದಕ್ಷಿಣ ಕರ್ನಾಟಕದ ಸಾರ್ವಜನಿಕ ಕಟ್ಟಡಗಳಲ್ಲಿ ಇರುವ ಚಿತ್ರಗಳನ್ನು ಗಮನಿಸಿದಾಗ ವೈವಿಧ್ಯತೆ ಕಂಡುಬರುತ್ತದೆ. ಕೆಲವು ಚಿತ್ರಗಳು ಮಂಟಪದಂತಹ ವಾಸ್ತುವಿನಲ್ಲಿ ಕಂಡುಬಂದರೆ, ಮತ್ತೆ ಕೆಲವು ಗರಡಿ ಮನೆಗಳಲ್ಲಿ ಕಂಡುಬಂದಿವೆ. ಆಗಾಗಿ ಇಲ್ಲಿನ ಚಿತ್ರಗಳಲ್ಲಿ ಧಾರ್ಮಿಕತೆಯಲ್ಲಿ ಹೆಚ್ಚಿನ ವಿಂಗಡನೆ ಕಂಡುಬರುವುದಿಲ್ಲ. ಜೈನ ಮತ್ತು ಹಿಂದೂ ಧರ್ಮದಲ್ಲಿ ವೈಷ್ಣವ ಧರ್ಮವನ್ನು ಪ್ರತಿಬಿಂಬಿಸುವ ಚಿತ್ರಗಳು ಮಾತ್ರ ರಚನೆಗೊಂಡಿವೆ.

ಶ್ರೀಮಠ, ಕಾರ್ಕಳ :

ಈ ಹಿಂದಿನ ಮಠಗಳ ದಾರಿಯಲ್ಲಿಯೇ ಸಾಗಿಬಂದಿರುವ ಕಾರ್ಕಳ ಮಠವು ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾಗಿದ್ದು, ಶ್ರವಣಬೆಳಗೋಳ ಮತ್ತು ಮೂಡಬಿದರೆಯ ಸಂಸ್ಕೃತಿಯನ್ನು ಹೊಂದಿರುತ್ತದೆ. ಈ ಭಾಗದಲ್ಲಿ ಬೃಹತ್ತಾದ ಬಾಹುಬಲಿಯನ್ನು ಶಿಲೆಯಲ್ಲಿ ಕೆತ್ತಿಸಿ ಕೋಟೆಯ ಮೇಲೆ ನಿಲ್ಲಿಸಲಾಗಿದೆ. ಈ ಮಠಕ್ಕೂ ಕೂಡ ಸ್ವಾಮಿಗಳನ್ನು ನೇಮಿಸಿ ಆರಾಧಿಸುತ್ತಿರುವುದು ಜೈನಪರಂಪರೆಯ ಬೆಳವಣಿಗೆಗೆ ಪೂರಕವಾಗಿದೆ ಎಂದೇ ಹೇಳಬೇಕು. ಇಂತಹ ಐತಿಹಾಸಿಕ ಮಠದಲ್ಲಿ ಜೈನ ಧರ್ಮದ ತತ್ವಗಳನ್ನು ಬಿಂಬಿಸುವ ಕೆಲವು ಚಿತ್ರಗಳನ್ನು ಕಾಣಬಹುದು.

ಅಡಿಟಿಪ್ಪಣಿ

೧. ವೀಣಾಶೇಖರ್: ಮ್ಯೂರಲ್ ಪೇಂಟಿಂಗ್ ಆಫ್ ಸಿಬಿ, ಕೆಳದಿ ಮೂಸಿಯಂ, ಕೆಳದಿ, ಪು ೧೦.
೨. ಡಾ.ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ-೧೯೩-೯೬
೩. ಅ.ಲ.ನರಸಿಂಹನ್, ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕ.ಲ.ಕ.ಅ. ಬೆಂ, ಪು.56
೪. ಅ.ಲ.ನರಸಿಂಹನ್, ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕ.ಲ.ಕ.ಅ. ಬೆಂ, ಪು.60
೫. ಅ.ಲ.ನರಸಿಂಹನ್, ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕ.ಲ.ಕ.ಅ. ಬೆಂ, ಪು.60
೬. ಅ.ಲ.ನರಸಿಂಹನ್, ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕ.ಲ.ಕ.ಅ. ಬೆಂ, ಪು.67
೭. ವೀಣಾಶೇಖರ್, ಮ್ಯೂರಲ್ ಪೇಂಟಿಂಗ್ಸ್ ಆಫ್ ಸಿಬಿ, ಕೆಳದಿ ಮ್ಯೂಜಿಯಂ, ಕೆಳದಿ,
೮. ಪಿ.ಆರ್.ತಿಪ್ಪೇಸ್ವಾಮಿ(ಸಂ): ಚಿತ್ರಕಲಾ ಪ್ರಪಂಚ, ಪು.ಸ ೨೫೭
೯. ಅದೇ ಪು, ಪು.ಸ.೨೫೮
೧೦. ಅದೇ ಪು, ಪು.ಸ.೨೫೯
೧೧. ಆರ್ಯ: ಬಣ್ಣದ ಕಣ್ಣು, ಪ್ರಜಾವಾಣಿ(ಸಾಪ್ತಾಯಿಕ ಪುರಾವಣೆ)
೧೨. ವಿಕಿಪೀಡಿಯ,ಜಾಲತಾಣ, ದಿ:೧೪.೪.೨೦೧೫
೧೩. ಡಿ.ಎನ್.ಕೃಷ್ಣಯ್ಯ, ಕೊಡಗಿನ ಇತಿಹಾಸ, ಪ್ರಸಾರಾಂಗ, ಮೈ.ವಿವಿ,೧೯೭೪
೧೪. ವಿಕಿಪೀಡಿಯ,ಜಾಲತಾಣ, ದಿ:೦೫.೫.೨೦೧೫
೧೫. ಸಂದರ್ಶನ, ನರಸಿಂಹಯ್ಯ, ನರಸಿಂಹ ದೇವಾಲಯ, ಸಿಬಿ,ದಿ:೧೦.೧೦.೨೦೧೩
೧೬. ವೀಣಾಶೇಖರ್, ಮ್ಯೂರಲ್ ಪೇಂಟಿಂಗ್ಸ್ ಆಫ್ ಸಿಬಿ, ಪು.೨೧
೧೭. ವೀಣಾಶೇಖರ್, ಮ್ಯೂರಲ್ ಪೇಂಟಿಂಗ್ಸ್ ಆಫ್ ಸಿಬಿ, ಪು.೨೩
೧೮. ಹುಲ್ಲೂರು ಶ್ರೀನಿವಾಸ ಜೋಯಿಸರು, ಜಯಕರ್ನಾಟಕ, ೧೯೨೮
೧೯. ಎಚ್.ತಿಪ್ಪೇರುದ್ರಸ್ವಾಮಿ : ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, ಪು.ಸ.-೨೫
೨೦. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೫
೨೧. ಪ್ರೊ.ನಂಜರಾಜಅರಸು : ಮೈಸೂರು ನೂರಿನ್ನೂರು ವರ್ಷಗಳ ಹಿಂದೆ. ಪು.ಸ.-೩
೨೨. ಡಾ.ಆರ್.ಗೋಪಾಲ್ : ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ. ೨೮-೪೩
೨೩. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೫
೨೪. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೭೦
೨೫. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೮೧
೨೬. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೮೮
೨೭. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೯೦
೨೮. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೧೨೮
೨೯. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೧೬೦
೩೦. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೯೯
೩೧. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೧೦೦
೩೨. ಡಾ.ತಿಪ್ಪೇರುದ್ರಸ್ವಾಮಿ:ಕರ್ನಾಟಕ ಸಂಸ್ಕೃತಿ ಪು.ಸಂ.-೧೭೧
೩೩. ಪ್ರೊ.ಕೆ.ಎಸ್.ರಂಗಪ್ಪ : ಮೈಸೂರು ದರ್ಶನ, ಪು.ಸ.-೧೦೨
೩೪. ಹೇಮಂತಕುಮಾರ.ಎಂ: ಮೈಸೂರು ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ. ಕವಿವಿ.ಹಂಪಿ, ೨೦೧೩,ಪು.೧೯
೩೫. ಡಾ.ಎಚ್.ಎಂ.ನಾಗರಾಜ್, ನಾಗಮಂಗಲ ತಾಲ್ಲೂಕಿನ ಮಹತ್ವದ ಸ್ಥಳಗಳು, ಪ್ರಸಾರಾಂಗ, ಮೈವಿವಿ.೨೦೧೨ ಪು.೧೧
೩೬. ಮುರಳೀಧರ ಉಪಾಧ್ಯ, ದಕ್ಷಿಣ ಕನ್ನಡದ ದೇವಾಲಯಗಳು, ಪು.೭೮

೩೭. ಜಿ.ಜಿ.ಮೆಹಂದಳೆ, ಹಳಿಯಾಳ ತಾಲ್ಲೂಕು ಪರಿಚಯ, ಪು ೧

೩೮. ಡಾ.ಎಸ್.ಸಿ.ಪಾಟೀಲ, ಬಿ.ಕೆ.ಹಳ್ಳಿಯ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಕಿರುಪ್ರಬಂಧ, ಕವಿವಿಹಂಪಿ,೨೦೦೬,ಪು ೧೧

೩೯. ಡಿ.ಆರ್.ಸುರೇಂದ್ರನಾಥ, ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಸಂಪ್ರಬಂಧ, ಕ.ವಿ.ವಿ.ಹಂಪಿ, ಪು.ಸ.೪೯

೪೦. ಡಾ.ಆನಂದ ಕೆ.ಪೂಜಾರ. ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ ಪು–೨೩

೪೧. ಪಿ.ಆರ್.ತಿಪ್ಪೇಸ್ವಾಮಿ(ಸಂ): ಚಿತ್ರಕಲಾ ಪ್ರಪಂಚ, ಪು.ಸ ೨೫೭

೪೨. ಉಮೇಶ್, ಕರ್ನಾಟಕದ ಜೈನ ಚಿತ್ರಕಲೆ, ಎಂಫಿಲ್ ಸಂಪ್ರಬಂಧ, ಕವಿವಿಹಂಪಿ,ಪು.ಸ.೩೬

೪೩. ಅದೇ

ಅಧ್ಯಾಯ : ೩

ದಕ್ಷಿಣ ಕರ್ನಾಟಕದ ಅರಮನೆಗಳಲ್ಲಿ ಭಿತ್ತಿ ಚಿತ್ರಕಲೆ

ಅಧ್ಯಾಯ–ಮೂರು

ದಕ್ಷಿಣ ಕರ್ನಾಟಕದ ಅರಮನೆಗಳಲ್ಲಿರುವ ಭಿತ್ತಿ ಚಿತ್ರಕಲೆ

ಭಿತ್ತಿ ಚಿತ್ರವನ್ನು ಆಂಗ್ಲ ಭಾಷೆಯಲ್ಲಿ "Mural painting" ಎಂದು ಕರೆಯಲಾಗಿದೆ. ಈ "Mural" ಶಬ್ದವು ಲ್ಯಾಟಿನ್ ಭಾಷೆಯ 'Murs' ದಿಂದ ಬಂದಿದೆ. 'Murs' ದ ಅರ್ಥವು ಗೋಡೆ (wall) ಎಂದಾಗುವುದು[೧] ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಮತ್ತು ಕೆತ್ತಿ, ಕೊರೆದು ಅಂಟಿಸಿ ಹೀಗೆ ಇತರ ಯಾವುದೇ ವಿಧಾನದಿಂದ ಗೋಡೆಯ ಮೇಲೆ ರೂಪಿಸಿದ ಚಿತ್ರಗಳು "Mural" ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಕ್ಯಾಂಬ್ರಿಜ್ ವಿಶ್ವಕೋಶ ತಿಳಿಸುತ್ತದೆ.[೨] ಗೋಡೆ ಮತ್ತು ಮೇಲ್ಛಾವಣೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸುವ ವಿಧಾನವನ್ನು ಭಿತ್ತಿ ಚಿತ್ರಕಲೆ ಎಂದು ಆಕ್ಸ್‌ಫರ್ಡ್ ಶಬ್ದಕೋಶದಲ್ಲಿ ಹೇಳಲಾಗಿದೆ[೩] ಗೋಡೆಗಳು, ಮೇಲ್ಛಾವಣೆಗಳು ಮತ್ತು ಗುಹೆಗಳನ್ನು ಫ್ರೆಸ್ಕೋ, ಸೆಕ್ಕೋ, ತೈಲವರ್ಣ, ಟೆಂಪರಾ ಇಲ್ಲವೆ ಎನ್‌ಕ್ಯಾಸ್ಟಿಕ್ ವಿಧಾನಗಳಿಂದ ಚಿತ್ರರಚಿಸಿ ಅಲಂಕರಿಸುವ ವಿಧಾನವನ್ನು ಸಹ (Mural painting) ಭಿತ್ತಿ ಚಿತ್ರಕಲೆ ಎಂದು ಎಬ್‌ಸ್ಟೆರ್ಸ್ ನ್ಯೂ ವರ್ಲ್ಡ್ ಸೈಕ್ಲೋಪಿಡಿಯಾ ಪರಿಗಣಿಸಿದೆ.[೪] ಗೋಡೆ ಮತ್ತು ಮೇಲ್ಛಾವಣೆಗಳ ಮೇಲೆ ವರ್ಣದಿಂದ ರಚಿಸಿದ ಚಿತ್ರಗಳು. ಮತ್ತು ಬಣ್ಣದ ಕಲ್ಲಿನ ತುಂಡುಗಳನ್ನು (ಸೂಡುಬಿಲ್ಲೆ) ಅಂಟಿಸಿದ ರೂಪಿಸಿದ ಮೊಸಾಯಿಕ್ ಚಿತ್ರಗಳು (Mural painting) ಭಿತ್ತಿ ಚಿತ್ರಗಳ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತದೆ ಎಂಬುದನ್ನು ಬ್ರಿಟಾನಿಕಾ ಎನ್‌ಸೈಕ್ಲೋಪಿಡಿಯಾ ಹೇಳುತ್ತದೆ.[೫] ಕನ್ನಡ ಜಾನಪದ ವಿಶ್ವಕೋಶವು ಭಿತ್ತಿಚಿತ್ರ ಎಂದರೆ ಗೋಡೆಯ ಮೇಲೆ ಬರೆದಿರುವ ಚಿತ್ರವೆಂದು ಹೇಳಿ. ಭಿತ್ತಿ ಎಂಬುದಕ್ಕೆ ಗೋಡೆ, ಕುಡ್ಯ, ಮೂಲ ತಳ ಹಿನ್ನೆಲೆ ಚಿತ್ರವನ್ನು ಬರೆಯುವ ಮೂಲಾಧಾರಗಳಿಂದ ಬಟ್ಟೆ, ಗೋಡೆ, ಮೊದಲಾದ ಸಾಧನಗಳು ಎಂಬ ಅರ್ಥವನ್ನು ಕೊಟ್ಟಿದೆ.[೬] ಭಾರತೀಯ ಪ್ರಾಚೀನ

ಶಿಲ್ಪಶಾಸ್ತ್ರಗಳು ಚಿತ್ರ ಬರೆಯಲಾಗುವ ಮೂಲಾಧಾರವಾದ ಗೋಡೆ ಮತ್ತು ಚಿತ್ರಣಕ್ಕೆ ಮೇಲೆ ಲೇಪಿಸಲಾಗುವ ಗಾರೆಲೇಪನ ಎರಡಕ್ಕೂ ಭಿತ್ತಿ ಎಂದೇ ಕರೆದಿವೆ.[೬] ಗೋಡೆ ಮೇಲೆ ಲೇಪಿಸಲಾಗುವ ಗಾರೆ ಲೇಪನವನ್ನು ಬಿತ್ತಿ ಎಂದು ಪರಿಗಣಿಸಿದಾಗ, ಗಾರೆ ಲೇಪನದ ಮೇಲೆ ರಚನೆಗೊಂಡ ಚಿತ್ರಗಳನ್ನು 'ಭಿತ್ತಿಚಿತ್ರ' ಎಂದು ಹೇಳಬೇಕಾಗುವುದು ವಿಶಾಲಾರ್ಥದಲ್ಲಿ ಈ ಗೋಡೆಯ ಮೇಲೆ ಲೇಪಿಸಲಾಗುವ ಗಾರೆ ಮಿಶ್ರಣಕ್ಕೆ ಬಳಸಲಾಗುವ ಚಿತ್ರರಚನೆಯ ಪೂರ್ವದ ಯಾವುದೇ ಹಿನ್ನೆಲೆಯ ಲೇಪನಕ್ಕೂ ಅನ್ವಯಿಸಬಹುದಾಗಿದೆ.

ಕೆಲವು ಸಾಹಿತ್ಯ ಕೃತಿಗಳಲ್ಲಿಯೂ ಭಿತ್ತಿ ಚಿತ್ರಗಳ ಬಗ್ಗೆ ಪ್ರಾಸಂಗಿಕ ವಿವರಳಿರುವುದನ್ನು ಇಲ್ಲಿ ಕಾಣಬಹುದು.

ಭಿತ್ತಿ ಇಲ್ಲದೇ ಬರೆಯಬಹುದೇ ಚಿತ್ತಾರವ
ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಬಹುದು
ಚಿತ್ರವಿಲ್ಲದೆ ಭಿತ್ತಿ ಸೊಗಸಹುದೆಂತು[೭]
ನೀಕ್ಷಿತಸುತನ ರೂಪವು ಚಿತ್ರಂ ಬರೆದಿಂತಿರ್ಪುದು

ಚಿತ್ರ ಭಿತ್ತಿಯೊಳೆನ್ನಾ[೮] ಎಂಬಂತಹ ಸಾಲುಗಳು ಭಿತ್ತಿ ಮತ್ತು ಭಿತ್ತಿ ಚಿತ್ರದ ಬಗೆಗೆ ತಿಳಿಸುತ್ತದೆ. ಇವುಗಳ ಒಟ್ಟಾರೆ ಇದರ ಅರ್ಥ ಭಿತ್ತಿ ಎಂದರೆ ಚಿತ್ರವನ್ನು ಬರೆಯುವ ಮೂಲಾಧಾರವೆಂದು ಪರಿಗಣಿಸಬಹುದು. ಭಿತ್ತಿ ಚಿತ್ರವೆಂದರೆ ಗೋಡೆಯ ಮೇಲೆ ಬರೆದ ಚಿತ್ರವೆಂದು ಸಾಮಾನ್ಯ ತಿಳುವಳಿಕೆಯಿದ್ದರೂ ಮೇಲಿನ ಸಾಲುಗಳಲ್ಲಿನ ವಿವರಣೆಯಿಂದ ಭಿತ್ತಿ ಚಿತ್ರವೆಂದರೆ ಬರೀ ಗೋಡೆಯ ಮೇಲೆ ರಚಿಸಿದ ಚಿತ್ರಗಳಲ್ಲದೇ ಯಾವುದೇ ಆಧಾರದ ಮೇಲೆ ರಚಿಸಿದ ಚಿತ್ರಗಳೂ ಭಿತ್ತಿ ಚಿತ್ರಗಳೆನಿಸುತ್ತವೆ. ಭಿತ್ತಿ ಇಲ್ಲದೇ ಬರೆಯಬಹುದೇ ಚಿತ್ತಾರವ ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಬಹುದು? ಎನ್ನುವಲ್ಲಿ ಚಿತ್ರ ಬರೆಯಲು ಭಿತ್ತಿಯ ಅವಶ್ಯಕತೆಯನ್ನು ತಿಳಿಸಿಕೊಡುತ್ತದೆ.

ಇದುವರೆಗಿನ ವಿವರಗಳ ಪ್ರಕಾರ ಭಿತ್ತಿ ಚಿತ್ರಕಲೆ ಎಂದರೆ ಗೋಡೆಗಳು. ಮೇಲ್ಛಾವಣೆಗಳು ಹೀಗೆ ಕಟ್ಟಡದ ಯಾವುದೇ ಭಾಗವನ್ನು ವರ್ಣಚಿತ್ರದಿಂದ ಮತ್ತು ಉಬ್ಬು ಇಲ್ಲವೆ ತಗ್ಗು ಚಿತ್ರ ಇಲ್ಲವೆ ಮೊಸಾಯಿಕ್‌ನಂತಹ ಚಿತ್ರಗಳಿಂದ ಅಲಂಕರಿಸುವ ವಿಧಾನವಾಗಿದೆ. ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಈ ಅಧ್ಯಾಯದಲ್ಲಿ ಭಿತ್ತಿ ಚಿತ್ರಕಲೆ ಎಂದರೆ ಸ್ವಾಭಾವಿಕ ಗುಹೆ. ಶೀಲಾಶ್ರಯದ ಬಯಲುಬಂಡೆಗಳ ಮೇಲೆ ಮತ್ತು ಮಾನವ ನಿರ್ಮಿತ ಶಿಲಾಗುಹೆ, ದೇವಾಲಯಗಳು ಮನೆ, ಅರಮನೆ, ಮಠಮಾನ್ಯ, ಚರ್ಚು, ಮಸೀದಿ, ಸಮಾಧಿ ಮುಂತಾದ ಯಾವುದೇ ಕಟ್ಟಡಗಳ ಗೋಡೆ, ಮೇಲ್ಛಾವಣೆ, ಜಂತಿ, ತೊಲೆ, ಬೋದಿಗೆ, ಕಂಬ, ಬಾಗಿಲು, ಕಿಟಕಿ, ಕಮಾನು ಹೀಗೆ ವಾಸ್ತುವಿನ (ಕಟ್ಟಡದ) ಯಾವುದೇ ಭಾಗದಲ್ಲಿ ಚಿತ್ರ ರಚಿಸಿ ಅವುಗಳನ್ನು ಅಲಂಕರಿಸುವ ವಿಧಾನವನ್ನು ಭಿತ್ತಿ ಚಿತ್ರಕಲೆ ಎಂದು ಪರಿಗಣಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಭಿತ್ತಿ

ಚಿತ್ರಕಲೆಯ ಪ್ರಾಚೀನತೆಯ ಬಗ್ಗೆ ನಿಖರವಾದ ಕಾಲಸೂಚಿ ಹೇಳುವುದು ಅನನ್ಯವಾದುದಾದರೂ ಮನುಷ್ಯ ಪ್ರಪಂಚಕ್ಕೆ ಕಾಲಿಟ್ಟು, ಅವನು ಕಲೆಯ ಹೊಳಹುಗಳನ್ನು ಹಾಕಿಕೊಂಡು ಅವನ್ನು ನಿತ್ಯ ಬದುಕಿನಲ್ಲಿ ತಂದುಕೊಳ್ಳುವವರೆಗಿನ ಕಾಲವನ್ನು ಈ ಕಲೆಯ ಕಾಲವೆಂದು ಗುರುತಿಸಬೇಕಾಗುತ್ತದೆ. ಹಾಗಾದಾಗ ಹೇಳಲಾಗಿದೆ. 'ಭಾರತೀಯ ಚಿತ್ರಕಲೆ' ಪುಸ್ತಕದಲ್ಲಿ ಪ್ರಾಚೀನ ಗ್ರಂಥಗಳಲ್ಲಿಯ ಭಿತ್ತಿ ಚಿತ್ರಕಲೆಯ ಉಲ್ಲೇಖಗಳ ವಿವರವಿದೆ.

ಭಿತ್ತಿ ಎಂದರೆ ಚಿತ್ರವನ್ನು ಬರೆಯುವ ಮೂಲಾಧಾರ ಎಂದು ಪರಿಗಣಿಸಬಹುದು. ಭಿತ್ತಿ ಚಿತ್ರವೆಂದರೆ ಗೋಡೆಯ ಮೇಲೆ ಬರೆದ ಚಿತ್ರವೆಂದು ಸಾಮಾನ್ಯವಾದ ತಿಳುವಳಿಕೆಯಿದ್ದರೂ ಬರೀ ಗೋಡೆಯ ಮೇಲೆ ರಚಿಸಿದ ಚಿತ್ರಗಳಲ್ಲದೇ ಯಾವುದೇ ಆಧಾರದ ಮೇಲೆ ರಚಿಸಿದ ಚಿತ್ರಗಳು ಕೂಡ ಭಿತ್ತಿ ಚಿತ್ರಗಳೆನಿಸುತ್ತವೆ. ಭಿತ್ತಿ ಇಲ್ಲದೇ ಬರೆಯಬಹುದೇ ಚಿತ್ತಾರವ? ಭಿತ್ತಿಯಂದಿಲ್ಲದಿರೆ ಚಿತ್ರವೆಂತಿರಬಹುದು? ಎನ್ನುವಲ್ಲಿ ಚಿತ್ರ ಬರೆಯಲು ಭಿತ್ತಿಯ ಅವಶ್ಯಕತೆಯನ್ನು ತಿಳಿಸಿಕೊಡುತ್ತದೆ.

ಇದುವರೆಗಿನ ವಿವರಗಳ ಪ್ರಕಾರ ಭಿತ್ತಿ ಚಿತ್ರಕಲೆ ಎಂದರೆ ಗೋಡೆಗಳು ಮೇಲ್ಛಾವಣಿಗಳು ಹೇಗೆ ಕಟ್ಟಡದ ಯಾವುದೇ ಭಾಗವನ್ನು ವರ್ಣಚಿತ್ರದಿಂದ ಮತ್ತು ಉಬ್ಬು ಇಲ್ಲವೇ ತಗ್ಗು ಚಿತ್ರ ಇಲ್ಲವೇ ಮೊಸಾಯಿಕ್‌ನಂತಹ ಚಿತ್ರಗಳಿಂದ ಅಲಂಕರಿಸುವ ವಿಧಾನವಾಗಿದೆ. ಯಾವುದೇ ಕಟ್ಟಡಗಳ ಗೋಡೆ ಮೇಲ್ಛಾವಣಿ, ಜಂತಿ, ತೊಲೆ, ಬೋದಿಗೆ ಕಂಬ, ಬಾಗಿಲು, ಕಿಟಕಿ, ಕಯಾನು, ಹೇಗೆ ವಾಸ್ತುವಿನ(ಕಟ್ಟಡಗಳ) ಯಾವುದೇ ಭಾಗದಲ್ಲಿ ಚಿತ್ರ ರಚಿಸಿ ಅವುಗಳನ್ನು ಅಲಂಕರಿಸುವ ವಿಧಾನವನ್ನು ಭಿತ್ತಿಚಿತ್ರಕಲೆ ಎಂದು ಪರಿಗಣಿಸಿ[೧೦] ಇಲ್ಲಿ ಅಧ್ಯಯನ ಮಾಡುವುದರಿಂದ ತಮ್ಮದೇ ಭಿನ್ನ ಸ್ವರೂಪಕ್ಕೆ ಘಟ್ಟಿಯಾದ ನೆಲೆಸಿಕ್ಕಂತಾಗುತ್ತದೆ.

ಕಲಾಸಕ್ತಿವಿರುವ ರಾಜರುಗಳು ತಮ್ಮ ಅರಮನೆಗಳಲ್ಲಿ ಹಾಗೂ ತಾವು ವಾಸಿಸುವ ಇತರ ಸ್ಥಳಗಳಲ್ಲಿ ಭಿತ್ತಿ ಚಿತ್ರಗಳನ್ನು ಅಲಂಕರಿಸುವುದು. ಭಾರತದಲ್ಲಿ ರಾಮಾಯಣ, ಮಹಾಭಾರತಗಳ ಕಾಲದಿಂದಲೇ ಪ್ರಚಲಿತದಲ್ಲಿತ್ತು. ಎಂದು ಹೇಳಲಾಗಿದೆ. ಭಾರತದಲ್ಲಿ ಅನೇಕ ಪ್ರಾಚೀನ ಅರಮನೆಗಳು ಭಿತ್ತಿಚಿತ್ರಗಳಿಂದ ಶೃಂಗರಿಸಲ್ಪಟ್ಟಿವೆ. ಮೊದಲಿನ ಅರಮನೆಗಳು ಮರಗಳಿಂದ ನಿರ್ಮಿಸಲ್ಪಡುತ್ತಿದ್ದು ಅವು ನಾಶವಾಗಿರುವುದು ಸರ್ವವಿಧಿತ. ಆದರೆ ಕ್ರಿ.ಶ ೧೫ನೇ ಶತಮಾನದ ನಂತರದ ಅರಮನೆಗಳು ಭಾರತದ ತುಂಬ ಅಲ್ಲಲ್ಲಿ ಕಂಡುಬರುತ್ತಿದ್ದು, ಅವುಗಳಲ್ಲಿ ಹಲವು ಭಿತ್ತಿಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ.

ಕ್ರಿ.ಶ ೧೫ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟ ರಾಜಸ್ಥಾನದ ಕೋಟೆ ಜಿಲ್ಲೆಯ ಇಂದರ್‌ಘರ್ ಅರಮನೆ, ಕಶಾಲೀ ತಾಲ್ಲೂಕಿನ ಮಹಾರಾಜ ಗೋಪಾಲ ಲಾಲ್‌ನ ಅರಮನೆ, ಇದೇ ಅವಧಿಯ ರಾಜಸ್ಥಾನದ ನಾಗೂರ್ ಕೋಟೆಯಲ್ಲಿರುವ ಬದಲ್‌ಮಹಲ್, ಹವಾಮಹಲ್, ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿರುವ ಮಾನಸಿಂಗನ ಅರಮನೆ ಕ್ರಿಶ ೧೬ನೇ ಶತಮಾನದಲ್ಲಿ ನಿರ್ಮಿಸಿದ ಧಾರ್‌ಜಿಲ್ಲೆಯ ಮಾಂಡುವಿನಲ್ಲಿರುವ ಗಡಶಹಾನ ಅರಮನೆಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿವೆ. ಕೇರಳದ

ಮಟ್ಟಂಚೇರಿ ಅರಮನೆಯು ಕ್ರಿ.ಶ ೧೬ನೇ ಶತಮಾನದಲ್ಲಿ ನಿರ್ಮಿಸಿದ್ದು, ಅಲ್ಲಿಯೂ ವೈವಿಧ್ಯ ಭಿತ್ತಿ ಚಿತ್ರಗಳಿವೆ. ಕರ್ನಾಟಕದ ವಿಜಯನಗರ ರಾಜಧಾನಿ ಹಂಪೆಯಲ್ಲಿದ್ದ ಅರಮನೆಯು ಮಹೋನ್ನತ ಭಿತ್ತಿ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದು, ಅವುಗಳಲ್ಲಿ ಮುಸ್ಲಿಂ ಅರಸರಿಗೆ ಸಂಬಂಧಿಸಿದ ಭಿತ್ತಿ ಚಿತ್ರಗಳನ್ನು ಇಲ್ಲಿ ಕೆಳಗಿನಂತಿವೆ.

೧. ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ

೨. ನಾಲ್ಕುನಾಡು ಅರಮನೆ, ಕೊಡಗು

೩. ಟಿಪ್ಪುಸುಲ್ತಾನ ಅರಮನೆ, ಬೆಂಗಳೂರು

೪. ಮೈಸೂರು ಅರಮನೆ, ಮೈಸೂರು

ದರಿಯಾ-ದೌಲತ್ ಅರಮನೆ, ಶ್ರೀರಂಗಪಟ್ಟಣ :

ಈ ಅರಮನೆಯ ಚಿತ್ರಗಳು ೧೭೮೪ ರಿಂದ ೧೮೬೦ರ ಅವಧಿಯಲ್ಲಿ ರಚನೆಗೊಂಡಿವೆ. ಇಲ್ಲಿನ ಚಿತ್ರಗಳನ್ನು ಎರಡು ಹಂತಗಳಲ್ಲಿ ರಚನೆ ಮಾಡಲಾಗಿದೆ. ಮೊದಲನೇ ಹಂತದ ಚಿತ್ರಗಳನ್ನು ೧೭೮೪ ರಿಂದ ೧೭೯೪ ಹತ್ತು ವರ್ಷದ ಅವಧಿಯಲ್ಲಿ ರಚನೆ ಮಾಡಿದ್ದಾರೆ. ಎರಡನೇ ಹಂತದ ಚಿತ್ರಗಳನ್ನು ೧೮೫೦ ರಿಂದ ೧೮೬೦ರ ಅವಧಿಯವರೆಗೆ ಚಿತ್ರ ರಚನೆ ಮಾಡಲಾಗಿದೆ. ಇಲ್ಲಿ ವಿಶೇಷವಾಗಿ ಟಿಪ್ಪು ಮತ್ತು ಹೈದರಾಲಿ ಜೀವನಕ್ಕೆ ಸಂಬಂಧಿಸಿದ ಚಿತ್ರಗಳು ಮುಖ್ಯವಾಗಿ ಬ್ರಿಟೀಷರೊಂದಿಗೆ ಟಿಪ್ಪು ಕೈಗೊಂಡ ಯುದ್ಧ, ವಿಶೇಷವಾಗಿ ಪೋಲೆಯೂರಿನ ಯುದ್ಧ ಸಂಬಂಧಿ, ದೊಡ್ಡ ಚಿತ್ರ ಪಟ್ಟಿಕೆ ಒಂದು ಭಾಗದಲ್ಲಿ ರಚನೆಗೊಂಡಿದೆ. ಇದಲ್ಲದೆ ಸಮಕಾಲೀನ ಕರ್ನಾಟಕದ ರಾಜರ ಚಿತ್ರಗಳೂ ಸಹಿತ ಇಲ್ಲಿ ರಚನೆಯಾಗಿವೆ. ಇವುಗಳ ಜೊತೆಗೆ ಪ್ರಾಣಿ-ಪಕ್ಷಿಗಳು, ಟಿಪ್ಪು ಮತ್ತು ಹೈದರಾಲಿ ಬೇಟೆಯಲ್ಲಿ ತೊಡಗಿರುವ ಚಿತ್ರಗಳು, ರಾಜ ಪರಿವಾರದ ಚಿತ್ರಗಳು, ಹೂಬಳ್ಳಿ ಮತ್ತು ನಕ್ಷಾ ವಿನ್ಯಾಸದ ಚಿತ್ರಗಳು ಇಲ್ಲಿ ಕಂಡುಬರುತ್ತವೆ.

ಅರಮನೆಯ ಭಿತ್ತಿ ಚಿತ್ರಕಲೆ :

ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆಯಲ್ಲಿರುವ ಭಿತ್ತಿ ಚಿತ್ರಗಳನ್ನು ಹದಿನೆಂಟನೆ ಶತಮಾನದ ಕೊನೆಯಲ್ಲಿ ರಚಿಸಲಾಗಿದ್ದು, ಈ ಅರಮನೆಗೆ ನಾಲ್ಕು ಸುತ್ತಲೂ ವಿಶಾಲವಾದ ಹೊರಚಾವಡಿಗಳಿವೆ. ಒಳಗಡೆ ವಿಶಾಲವಾದ ಕೊಠಡಿಗಳಿವೆ. ನಮ್ಮ ಕಣ್ಣಿಗೆ ಪ್ರಧಾನವಾಗಿ ಕಾಣಸಿಗುವ ಭಿತ್ತಿ ಚಿತ್ರಗಳು ಈ ಅರಮನೆಯ ಮೂಡಣ ಮತ್ತು ಪಡುವಣ ಚಾವಡಿಗಳ ಗೋಡೆಗಳಲ್ಲದೆ. ಅದರ ಒಳಗೋಡೆಗಳಲ್ಲೂ ಸಾಕಷ್ಟು ಚಿತ್ರಗಳೂ, ಚಿತ್ತಾರಗಳೂ ಇರುತ್ತವೆ. ಹೊರಗಣ ಪೂರ್ವ ಮತ್ತು ಪಶ್ಚಿಮದ ಗೋಡೆಗಳು ಐವತ್ತು ಅರವತ್ತು ಅಡಿ ಉದ್ದವಾಗಿಯೂ ಸುಮಾರು ಹದಿನೆಂಟು ಅಡಿಗಳಷ್ಟು ಎತ್ತರವಾಗಿಯೂ ಇದ್ದು ಅವುಗಳ ಮೈತುಂಬ ಚಿತ್ರಗಳೇ ಇವೆ. ಇವುಗಳಲ್ಲಿ ಪಡುವಣ ಗೋಡೆಯ ಚಿತ್ರ ಅದರ ವಿಸ್ತಾರವನ್ನು ಆವರಿಸುವ ಒಂದೇ ಒಂದು ಚಿತ್ರ.

ಚಿತ್ರ-೧ : ದರಿಯಾದೌಲತ್ ಅರಮನೆ :

ದರಿಯಾದೌಲತ್ ಬಾಗ್‌ನ ಮಧ್ಯದಲ್ಲಿರುವ ಬೇಸಿಗೆ ಅರಮನೆಯಲ್ಲಿ ಟಿಪ್ಪುಸುಲ್ತಾನನ ವಸ್ತು ಸಂಗ್ರಹಾಲಯವಿದೆ. ಇದನ್ನು ೧೭೮೪ರಲ್ಲಿ ಕಟ್ಟಲಾಗಿದ್ದು, ಇದು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿದೆ. ಇದನ್ನು ಬಹುಪಾಲು ತೇಗದ ಮರದಿಂದ ಕಟ್ಟಲಾಗಿದ್ದು, ಕಟ್ಟಡವು ಆಯತಾಕಾರದಲ್ಲಿದೆ. ಮತ್ತು ಎತ್ತರವಾದ ಜಗಲಿಯ ಮೇಲೆ ಇದನ್ನು ನಿರ್ಮಿಸಲಾಗಿದೆ. ಇದರ ನಾಲ್ಕು ಪಾರ್ಶ್ವಗಳಲ್ಲಿ ತೆರೆದ ನಡವೆಗಳಿದ್ದು, ಅಡಿಪಾಯದ ಅಂಚಿನಲ್ಲಿ ಮರದ ಕಂಬಗಳಿವೆ. ಪಶ್ಚಿಮ ಮತ್ತು ಪೂರ್ವ ಬದಿಗಳಲ್ಲಿ ಗೋಡೆಗಳಿದ್ದು, ಇತರ ಎರಡು ಬದಿಗಳು, ಭಾವಣಿಗೆ ಆಸರೆಯನ್ನು ಒದಗಿಸಿರುವ ಸ್ತಂಭಗಳನ್ನು ಹೊಂದಿರುವ ಹೊರಚಾಚುಗಳಿಂದ ಕೂಡಿದ್ದವುಗಳಾಗಿವೆ. ಇದರಿಂದ ಮೇಲಿನ ಅಂತಸ್ತಿನಲ್ಲಿ ಒಂದು ಒಳ ಅಂತಸ್ತು ನಿರ್ಮಾಣವಾಗಿದ್ದು, ಅಲ್ಲಿ ಎರಡು ಸುಂದರವಾದ ಬೃಹತ್ ಪ್ರೇಕ್ಷಕರ ಸಭಾಂಗಣಗಳು ಹಾಗೂ ಮೇಲ್ಛಾವಣಿಯುಳ್ಳ ಎರಡು ಉಪ್ಪರಿಗೆಗಳಿವೆ. ನಾಲ್ಕು ಪ್ರತ್ಯೇಕಿಸುವ ಗೋಡೆಗಳಲ್ಲಿ ಅಗೋಚರವಾದ ನಾಲ್ಕು ಸೋಪಾನ ಪಂಕ್ತಿಗಳಿದ್ದು, ಅವು ಒಳಬದಿಯಲ್ಲಿದ್ದು, ಅದರಿಂದಾಗಿ ಸಭಾಂಗಣದ ನಾಲ್ಕು ಮೂಲೆಗಳಲ್ಲಿ ನಾಲ್ಕು ಕೋಣೆಗಳು ನಿರ್ಮಾಣವಾಗಿ ಮಧ್ಯದ ಸಭಾಂಗಣವು ಪೂರ್ವ, ಪಶ್ಚಿಮದ ನಡವೆಗಳಿಗೆ ಸಂಪರ್ಕವೇರ್ಪಟ್ಟಿದೆ.

ಈ ಕಟ್ಟಡದ ವೈಶಿಷ್ಟವೆಂದರೆ ಇಲ್ಲಿನ ಪ್ರತಿಯೊಂದು ಗೋಡೆ, ಕಂಬ, ಭಾವಣಿ ಮತ್ತು ಕಮಾನುಗಳ ಮೇಲೆ ಒಂದಿಷ್ಟು ಖಾಲಿ ಬಿಡದಂತೆ ಬಣ್ಣದ ಚಿತ್ರಗಳನ್ನು ಕಲಾತ್ಮಕವಾಗಿ ಬಿಡಿಸಲಾಗಿದೆ. ಅರಮನೆಯ ಹೊರಗೋಡೆಗಳಲ್ಲಿ ರಣಾಂಗಣದ ಸನ್ನಿವೇಶಗಳನ್ನು ಭಾವಚಿತ್ರಗಳನ್ನು ಬಿಡಿಸಿದ್ದರೆ, ಒಳಗೋಡೆಗಳು ತೆಳುವಾದ ಎಲೆ ಸುರಳಿಗಳು ಮತ್ತು ಪುಷ್ಪ ಚಿತ್ತಾರಗಳ ವರ್ಣವಿನ್ಯಾಸದಿಂದ ಅಲಂಕೃತಗೊಂಡಿವೆ. ಮರದ ಭಾವಣಿಯ ಮೇಲೆ ಪುಷ್ಪಲಂಕೃತ ಚಿತ್ತಾರಗಳನ್ನು ಅಂಟಿಸಲಾಗಿದೆ.

ಪಶ್ಚಿಮದ ಗೋಡೆಯ ಮೇಲಿರುವ ವರ್ಣಚಿತ್ರಗಳು :

ಚಿತ್ರ-೨ : ನಿಜಾಮನ ಮೆರವಣಿಗೆಯ ದೃಶ್ಯ (ಮೇಲ್ಪಂಕ್ತಿ)

ಈ ಗೋಡೆಯ ಮೇಲ್ಪಂಕ್ತಿಯ ವಿಸ್ತೀರ್ಣದಲ್ಲಿ ನಿಜಾಮನ ಮೆರವಣಿಗೆ ದೃಶ್ಯವನ್ನು ಚಿತ್ರಿಸಲಾಗಿದೆ. ನಿಜಾಮನು ಉದ್ದನೆಯ ಕಂದುಬಣ್ಣದ ನಿಲುವಂಗಿ, ಮಣಿ ಮತ್ತು ಕಸೂತಿ ಕೆಲಸದ ರುಮಾಲು ತೊಟ್ಟು, ಬಿಳಿಬಣ್ಣದ ರಾಜಾಶ್ವದ ಮೇಲೆ ಕುಳಿತು ಗುಲಾಬಿ ಹೂವಿನ ಸುವಾಸನೆಯನ್ನು ಆಹ್ಲಾದಿಸುತ್ತಿದ್ದು, ರಾಜಧ್ವಜ, ಛತ್ರಿ, ಚಾಮರಧಾರಿಗಳು ನಿಜಾಮನ ಜೊತೆಯಲ್ಲಿದ್ದು, ಚಿತ್ರದ ಮಧ್ಯಭಾಗದಲ್ಲಿ ಆಕರ್ಷಣೀಯವಾಗಿದೆ. ಅಲಂಕೃತ ಅಂಬಾರಿಯನ್ನು ಹೊತ್ತ ಆರು ಆನೆಗಳ ಎರಡು ಸಾಲುಗಳು ನಿಜಾಮನನ್ನು ಹಿಂಬಾಲಿಸುತ್ತಿದ್ದರೆ, ಮೂರು ಸಾಲುಗಳಲ್ಲಿ ಸ್ಥಳೀಯ ಸೈನಿಕರು ಬಿಲ್ಲು ಬಾಣ, ಖಡ್ಗ, ಢಾಲುಗಳನ್ನು ಹಿಡಿದು ಮುನ್ನಡೆಯುತ್ತಿದ್ದಾರೆ. ಹುಲಿ ಪಟ್ಟೆ

ಚಿತ್ರದ ಬಟ್ಟೆಯಿಂದ ಅಲಂಕರಿಸಿದ ಎರಡು ಆನೆಗಳು ಮೈಸೂರಿನ ಧ್ವಜ ಹಿಡಿದ ಸವಾರರೊಂದಿಗೆ ಈ ಮೆರವಣಿಗೆ ನೇತೃತ್ವವನ್ನು ವಹಿಸಿವೆ. ನಿಜಾಮನ ಚಿತ್ರದ ಕೆಳಭಾಗದಲ್ಲಿ ಹುಲ್ಲು ಮೇಯುತ್ತಿರುವ ಒಂದು ಬಿಳಿ ಹಸು ಹಾಗೂ ಕಪ್ಪು ಹಂದಿಯನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ.

ಚಿತ್ರ-೩ : ಪೊಲಿಲೂರು ಯುದ್ಧದಲ್ಲಿ ಕರ್ನಲ್ ಬೇಲಿಯ ಪರಾಭವ :

ಈ ವರ್ಣ ಚಿತ್ರಣದ ಕೆಳಪಂಕ್ತಿಯ ಸನ್ನಿವೇಶವು ಪೊಲಿಲೂರು ಯುದ್ಧದ ದೃಶ್ಯವೆಂದು ಪರಿಗಣಿಸಲಾಗಿದೆ. ಹೈದರ್‌ಅಲಿ ಹಾಗೂ ಟಿಪ್ಪುಸುಲ್ತಾನರ ಮೆರವಣಿಗೆಯ ದೃಶ್ಯವು ಒಂದು ಕಡೆ ಇದ್ದು, ಮಧ್ಯಭಾಗದಲ್ಲಿ ಬ್ರಿಟೀಷ್ ಸೇನೆಯೊಂದಿಗೆ ಸ್ಥಳೀಯ ಕುದುರೆ ಸವಾರರು ಹಾಗೂ ಫ್ರೆಂಚ್ ಸೈನಿಕರು, ಸ್ಫೋಟಣೆಯಿಂದ ಗಾಬರಿಗೊಂಡು ಕ್ಯಾಪ್ಟನ್ ಬೈಲಿಯು ಸೋಲನ್ನು ಅನುಭವಿಸುತ್ತಿರುವ ದೃಶ್ಯಕ್ಕೆ ವಿಶೇಷವಾದ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಯುದ್ಧದಲ್ಲಿ ಗಾಯಗೊಂಡು, ಆಶ್ಚರ್ಯಚಕಿತನಾಗಿ ತನ್ನ ತೋರು ಬೆರಳನ್ನು ಕಚ್ಚುತ್ತಿರುವ ಕರ್ನಲ್ ಬೇಲಿಯನ್ನು ಆರು ಸ್ಥಳೀಯ ಸೈನಿಕರು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುತ್ತಿದ್ದಾರೆ. ಆನರಲ್ ಬರ್ಡ್ ಮತ್ತು ಕರ್ನಲ್ ಫ್ಲೆಚ್ಚ್ ತಮ್ಮ ಕುದುರೆಯಲ್ಲಿ ಬರುತ್ತ ಈ ಯುದ್ಧದ ದೃಶ್ಯವನ್ನು ವಿಸ್ಮಯಚಕಿತರಾಗಿ ವೀಕ್ಷಿಸುತ್ತಿದ್ದಾರೆ. ಮೇಲ್ಭಾಗದ ಎಡಭಾಗದಲ್ಲಿ ಮದ್ದು ಗುಂಡಿನ ಸಂಗ್ರಹದ ಸ್ಫೋಟನೆಯನ್ನು ಕಾಣಬಹುದು. ಉದ್ದನೆಯ ಟೋಪಿ, ಕೆಂಪು ಬಣ್ಣದ ಪೋಷಾಕು, ಬಿಳಿಯ ಷರಾಯಿ, ಕಪ್ಪನೆಯ ಬೂಟು ಹಾಗೂ ಬಿಳಿಯ ನಡುಪಟ್ಟಿ ಧರಿಸಿದ ಬ್ರಿಟೀಷ್ ಸೈನಿಕರು ತಮ್ಮ ನಾಯಕನಾದ ಕರ್ನಲ್ ಬೇಲಿಯನ್ನು ಬಂದೂಕುಗಳ ಸಹಾಯದಿಂದ ಚೌಕಾಕಾರದಲ್ಲಿ ಸುತ್ತುವರಿದು ರಕ್ಷಿಸುತ್ತಿರುವ ದೃಶ್ಯವು ಎದ್ದು ಕಾಣುತ್ತಿದೆ. ವೀರಯೋಧರ ಮುಖಗಳಲ್ಲಿ ದಿಗಿಲು, ಗಾಬರಿ ಹಾಗೂ ಅವರ ಕುದುರೆಗಳಲ್ಲಿಯೂ ಭಯ ಎದ್ದು ಕಾಣುತ್ತಿದೆ. ಬ್ರಿಟೀಷ್ ಸೈನ್ಯವನ್ನು ಟಿಪ್ಪುಸುಲ್ತಾನ್ ಹಾಗೂ ಫ್ರೆಂಚ್ ಸೇನಾಪಡೆಗಳು ಎಲ್ಲ ದಿಕ್ಕುಗಳಿಂದಲೂ ಆಕ್ರಮಿಸುತ್ತಿದೆ. ಮೇಲ್ಭಾಗದ ಬಲ ತುದಿಯಲ್ಲಿ ಮೌಂಟ್ ಲಾಲಿಯು, ಒಂದು ದೂರದರ್ಶಕ ಯಂತ್ರವನ್ನು ಹಿಡಿದು ಯುದ್ಧವನ್ನು ವೀಕ್ಷಿಸುತ್ತಿದ್ದಾನೆ. ಆತನ ಸಮವಸ್ತ್ರ ಹಾಗೂ ಧರಿಸಿರುವ ಟೋಪಿಯು ಆತನ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ಸ್ಥಳೀಯ ಸೈನಿಕರು ಖಡ್ಗವನ್ನು ಹಿಡಿದುಕೊಂಡು ಮುನ್ನುಗ್ಗುತ್ತಿದ್ದರೆ, ಮತ್ತೆ ಕೆಲವರು ಬಿಲ್ಲು ಬಾಣಗಳನ್ನು ಹಿಡಿದುಕೊಂಡಿದ್ದಾರೆ. ಕೆಲವು ಸೈನಿಕರು ಸಾವಿನ ದವಡೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ರುಂಡ ಹಾಗೂ ಮುಂಡವೇ ಇಲ್ಲದ ಅನೇಕ ಶವಗಳು ಅನಾಥವಾಗಿ ಬಿದ್ದಿವೆ. ಈ ದೃಶ್ಯದಲ್ಲಿ ದಿಟ್ಟತನ, ರೌದ್ರತನ, ಅಸ್ತವ್ಯಸ್ತೆ ಹಾಗೂ ಭಯಾನಕತೆಯನ್ನು ಬಹಳ ವಾಸ್ತವವಾಗಿ ಚಿತ್ರಿಸಲಾಗಿದೆ.

ಚಿತ್ರ-೪ ಮತ್ತು ೫ : ಟಿಪ್ಪು ಸುಲ್ತಾನನ ದಂಡಯಾತ್ರೆಯ ದೃಶ್ಯ (ಕೆಳಪಂಕ್ತಿ) :

ಈ ಗೋಡೆಯ ಕೆಳಪಂಕ್ತಿಯ ಚಿತ್ರಣದಲ್ಲಿ ರಾಜ ಪೋಷಾಕಿನಲ್ಲಿರುವ ಟಿಪ್ಪುಸುಲ್ತಾನನು ಅಲಂಕೃತವಾದ ಬಿಳಿ ಕುದುರೆಯ ಮೇಲೆ ಕುಳಿತು ಗುಲಾಬಿ ಹೂವಿನ ಸುವಾಸನೆಯನ್ನು

ಆಹ್ಲಾದಿಸುತ್ತಿದ್ದು, ರಾಜಧ್ವಜ, ಛತ್ರಿ, ಚಾಮರಧಾರಿಗಳು ಸುಲ್ತಾನನ ಜೊತೆಗಿದ್ದಾರೆ. ಟಿಪ್ಪುಸುಲ್ತಾನನ ಪಕ್ಕದಲ್ಲಿ ಅವನ ಸೇನಾಪಡೆಯ ಮುಖ್ಯಸ್ಥನೊಂದಿಗೆ (ಕಮರುದ್ದೀನ್?) ಮಾತನಾಡುತ್ತಿರುವಂತೆ ಹಾಗೂ ಆತನ ರಕ್ಷಣಾಮಂತ್ರಿ (ಮೀರ್ ಸಾಧಿಕ್ ನಂತರ ವಿರೂಪಗೊಳಿಸಿದ) ಕುದುರೆ ಮೇಲೇರಿ ಯುದ್ಧರಂಗಕ್ಕೆ ದೊರೆಯನ್ನು ಆಹ್ವಾನಿಸುತ್ತಿರುವಂತೆ ಚಿತ್ರಿಸಲಾಗಿದೆ. ಈ ದೃಶ್ಯವನ್ನು ಟಿಪ್ಪು, ಪೋಲಿಲೂರು ಯುದ್ಧಕ್ಕೆ ಹೋಗುತ್ತಿರುವ ದೃಶ್ಯವೆಂದು ಪರಿಗಣಿಸಲಾಗಿದೆ. ಸೈನ್ಯದಲ್ಲಿ ಅಶ್ವದಳದವರು ಕುದುರೆ ಸವಾರಿ ಮಾಡುತ್ತಿದ್ದು, ಭರ್ಜಿಗಳನ್ನು ಹಿಡಿದ ಕಾಲ್ದಳದವರು ಶಿಸ್ತಿನ ಕ್ರಮಬದ್ಧ ನಡಿಗೆಯಲ್ಲಿದ್ದಾರೆ. ಅವರ ಪೋಷಾಕುಗಳು ಮೇಲಿನ ಪಂಕ್ತಿಯ ಚಿತ್ರದ ರೀತಿಯಲ್ಲಿಯೇ ಇದೆ. ಆದರೆ ಇಲ್ಲಿ ಮೌಂಟ್ ಲಾಲಿ ನಾಯಕತ್ವದ ಫ್ರೆಂಚ್ ಅಶ್ವದಳವನ್ನು ಸೇರಿಸಲಾಗಿದೆ. ಇವರುಗಳು ಉದ್ದನೆಯ ಪಿರಂಗಿ, ಟೋಪಿ, ನಿಲುವಂಗಿ, ಬಿಳಿಯ ಷರಾಯಿ ಹಾಗೂ ಉದ್ದನೆಯ ಕಪ್ಪು ಬೂಟು ಧರಿಸಿದ್ದಾರೆ. ಇದಲ್ಲದೇ ಹುಲಿಪಟ್ಟೆಯ ಪೋಷಾಕು ಮತ್ತು ಧ್ವಜವನ್ನು ಹಿಡಿದ ಕಾಲ್ದಳದ ರಕ್ಷಣಾ ದಳದವರನ್ನು ಕೊಡಗಿನ ಸೇನಾದಳವೆಂದು ಗುರುತಿಸಲಾಗಿದೆ.

ಚಿತ್ರ-೬ : ಹೈದರ್ ಅಲಿಯ ದಂಡಯಾತ್ರೆಯ ದೃಶ್ಯ (ಮೇಲ್ಪಂಕ್ತಿ) :

ಈ ಮೇಲ್ಪಂಕ್ತಿಯ ಗೋಡೆಯ ವಿಸ್ತೀರ್ಣದ ಚಿತ್ರಣವನ್ನು ಹೈದರ್ ಅಲಿಯು ಅಂಬಾರಿಯನ್ನೇರಿ ಪೊಲಿಲೂರು ಯುದ್ಧಕ್ಕೆ ತನ್ನ ಸೈನಿಕರೊಂದಿಗೆ ಹೊರಟಿರುವ ಸನ್ನಿವೇಶ ದೃಶ್ಯವೆಂದು ಪರಿಗಣಿಸಲಾಗಿದೆ. ಇಲ್ಲಿ ಅಶ್ವದಳದವರು, ಕತ್ತಿ ಮತ್ತು ಭರ್ಜಿಗಳನ್ನು ಹಿಡಿದ ಕಾಲ್ದಳದವರು, ರಾಜನೊಂದಿಗೆ ಹುಲಿ ಪಟ್ಟೆಯ ಧ್ವಜವನ್ನು ಹೊತ್ತ ಆನೆಗಳು ಹಿಂಬಾಲಿಸುತ್ತಿರುವುದನ್ನು ಚಿತ್ರಿಸಲಾಗಿದೆ. ಅಶ್ವದಳದವರು ಶಿರಸ್ತ್ರಾಣವನ್ನು, ನಿಲುವಂಗಿಯನ್ನು ದೇಶೀಯ ಷರಾಯಿ ಮತ್ತು ಪಾದರಕ್ಷೆಗಳನ್ನು ತೊಟ್ಟಿದ್ದರೆ, ಕಾಲ್ದಳಗವರು ದೇಶೀಯ ರುಮಾಲು, ಷರಾಯಿ ಮತ್ತು ನಿಲುವಂಗಿ ಸಮವಸ್ತ್ರವನ್ನು ಧರಿಸಿ, ಕತ್ತಿಯನ್ನು ಹೆಗಲ ಮೇಲಿಟ್ಟು, ಮತ್ತೊಂದು ಕೈಯಲ್ಲಿ ಭರ್ಜಿಯನ್ನು ಹಿಡಿದಿದ್ದಾರೆ. ಹೈದರ್ ಅಲಿಯು ರಾಜಪೋಷಾಕಿನಲ್ಲಿದ್ದು, ಕೈಯಲ್ಲಿ ಗುಲಾಬಿ ಹೂವಿನ ಸುಗಂಧವನ್ನು ಆಹ್ಲಾದಿಸುತ್ತ ಅಂಬಾರಿಯಲ್ಲಿ ಕುಳಿತಿರುವುದನ್ನು ತೋರಿಸಲಾಗಿದೆ. ಸೈನಿಕರೊಂದಿಗೆ ತೆರೆದ ಅಂಬಾರಿಯ ಮೇಲೆ ಕುಳಿತ ರಾಜ ಪ್ರತಿನಿಧಿಗಳ ಹಾಗೂ ಕೇವಲ ಅಂಬಾರಿ ಹೊತ್ತ ಆನೆಗಳು ಹಿಂಬಾಲಿಸುತ್ತಿವೆ. ತುತ್ತೂರಿ, ಕಹಳೆ ಮತ್ತು ಮದ್ದಳೆ ಬಾರಿಸುತ್ತಿರುವುದನ್ನು ಅಲ್ಲಲ್ಲಿ ಚಿತ್ರಿಸಲಾಗಿದೆ. ಎರಡು ಅಲಂಕೃತವಾದ ಬಿಳಿ ಕುದುರೆಯ ಮೇಲೆ ರಾಜಲಾಂಛನ ಹಿಡಿದಿರುವವರನ್ನು ಈ ಚಿತ್ರಣದ ಮಧ್ಯಭಾಗದಲ್ಲಿ ಕಾಣಬಹುದು. ಆದರೆ ವಿದೇಶಿಯ ಸೈನ್ಯದಳವನ್ನು ಇಲ್ಲೆಲ್ಲೂ ಚಿತ್ರಿಸಿಲ್ಲ.

ಚಿತ್ರ-೭ ಮತ್ತು ೮: ಪೂರ್ವ ಭಾಗದ ಗೋಡೆಯ ಮೇಲಿನ ಭಿತ್ತಿಚಿತ್ರ :

ಈ ಗೋಡೆಯ ಚಿತ್ರಣದಲ್ಲಿ ಅನೇಕ ರಾಜರು, ಪ್ರಧಾನ ನಾಯಕರು, ರಾಯಭಾರಿಗಳು, ನವಾಬರು, ಮರಾಠರು, ಪೇಶ್ವೆಯರು, ಸಂಗೀತಗಾರರು, ಪ್ರಾಣಿಗಳು ಹಾಗೂ ವಿವಿಧ ಸಸ್ಯವರ್ಗಗಳನ್ನು ಅರಮನೆಗಳ ದೃಶ್ಯಗಳ ಜೊತೆಯಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಗೋಡೆಯ ಉದ್ದಕ್ಕೂ ಏಳು

ಸಾಲುಗಳು ಸ್ವತಂತ್ರವಾಗಿ ಚಿತ್ರಿಸಲ್ಪಟ್ಟಿದ್ದು, ಅದರಲ್ಲಿ ಅರಮನೆಯ ಕಟ್ಟಡದ ಪ್ರಾರ್ಥನಾ ಸ್ಥಳಗಳ ಒಳ ಹಾಗೂ ಹೊರಭಾಗಗಳ ಚಿತ್ರಣವನ್ನು ವಿಭಿನ್ನ ರೀತಿಯಲ್ಲಿ ಕಟ್ಟಡ ವಾಸ್ತುಶಿಲ್ಪದ ಜೊತೆ ಸುಂದರವಾಗಿ ಚಿತ್ರಿಸಲಾಗಿದೆ. ಕೆಲವು ಅರಮನೆಗಳ ಒಳಭಾಗದಲ್ಲಿ ಪ್ರಧಾನರು ಕುಳಿತಿದ್ದರೆ, ಮತ್ತೆ ಕೆಲವರು ಅರಮನೆಗಳಲ್ಲಿ ಅತಿಥಿಗಳನ್ನು ಸ್ವಾಗತಿಸುತ್ತಿರುವ, ಚರ್ಚಿಸುತ್ತಿರುವ ಹಾಗೂ ರಾಜಬೀವಿಯಲ್ಲಿ ಕುಳಿತಿರುವ ದೃಶ್ಯಗಳನ್ನು ಚಿತ್ರಿಸಲಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಾಜಮನೆತನದ ಗಣ್ಯವ್ಯಕ್ತಿಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ. ಆಸ್ಥಾನದ ಗಣ್ಯವ್ಯಕ್ತಿಗಳು ಅಲ್ಲಲ್ಲಿ ವಿವಿಧ ರೀತಿಯಲ್ಲಿ ತಲೆಬಾಗಿಸಿ ಗೌರವಿಸುತ್ತಿರುವುದು ಹಾಗೂ ಸೇವಕರು ಅನೇಕ ವೇಷಭೂಷಣಗಳಲ್ಲಿ ನಿಂತಿರುವುದನ್ನು ಚಿತ್ರಿಸಲಾಗಿದೆ.

ಇಲ್ಲಿರುವ ಒಟ್ಟು ೧೪೦ಕ್ಕಿಂತ ಹೆಚ್ಚು ಚಿತ್ರಗಳಲ್ಲಿ ಪ್ರಮುಖರಾದ ಚಿತ್ರದುರ್ಗದ ಮದಕರಿ ನಾಯಕ, ಚಿತ್ತೂರಿನ ರಾಣಿ, ಅರ್ಕಾಟಿನ ನವಾಬ, ಮಹಮ್ಮದ್ ಆಲಿ, ಕಾಠೇವಾಡದ ರಾಜ, ಸಾವನೂರಿನ ನವಾಬ, ಬನಾರಸಿನ ಅರಸ, ಕಣ್ಣಾನೂರಿನ ನವಾಬ, ಕೊಡಗಿನ ಹಿಂದು ರಾಜ, ಔಧದ ನವಾಬ, ಪೂನಾದ ಎರಡನೇ ಬಾಲಾಜಿ ಬಾಜಿರಾವ್, ಮಾಗಡಿ ಕೆಂಪೇಗೌಡ, ತಂಜಾವೂರಿನ ರಾಜ, ಯುವರಾಜ ಟಿಪ್ಪು, ಆನೆಯ ಮೇಲೆ ಸವಾರಿ ಮಾಡುತ್ತಿರುವ ವಾಲಾಜ ಮುಂತಾದ ಕೆಲವರನ್ನು ಗುರುತಿಸಲಾಗಿದೆ. ಒಂದು ಚಿತ್ರಣದಲ್ಲಿ ರಾಜ ಮನೆತನದ ಗಣ್ಯವ್ಯಕ್ತಿಗಳು ಸಂದೇಶವನ್ನು ಬರೆಯುತ್ತಿರುವುದು, ಪಾರಿವಾಳಗಳ ಮೂಲಕ ರವಾನಿಸುತ್ತಿರುವುದು ಹಾಗೂ ಬಂದ ಸಂದೇಶವನ್ನು ಓದುತ್ತಿರುವ ದೃಶ್ಯವನ್ನು ಸಮಂಜಸವಾದ ಚಿತ್ರಿಸಲಾಗಿದೆ. ಈ ಗೋಡೆಯ ವರ್ಣಚಿತ್ರಗಳಲ್ಲಿ ಅತ್ಯಂತ ಸುಂದರವಾದ ಹಾಗೂ ಆಕರ್ಷಣೀಯ ದೃಶ್ಯವೆಂದರೆ ರಾಣಿಯು ರತ್ನಕಂಬಳಿಯ ಮೇಲೆ ಕುಳಿತು ಹುಕ್ಕಾ ಕಡಿಯುತ್ತಿರುವುದು, ರಾಣಿಯ ಸುತ್ತಲೂ ಸಖಿಯರು ಕುಳಿತಿದ್ದು, ಮುಂಭಾಗದಲ್ಲಿ ಸಂಗೀತಗಾರ್ತಿಯರು ಹಾಗೂ ಹಿಂಭಾಗದಲ್ಲಿ ಮೂವರು ಚಾಮರಧಾರಣಿಯರಿರುವ ಚಿತ್ರಣವು ರಾಜಸ್ಥಾನಿ ಶೈಲಿಯನ್ನು ಹೋಲುತ್ತದೆ.

ನೀಲಿ ಹಾಗೂ ಕಪ್ಪು ಮಿಶ್ರಿತ ಬಣ್ಣದ ಅಲಂಕೃತ ಆನೆಯ ಮೇಲಿನ ಅಂಬಾರಿಯಲ್ಲಿ ರಾಜನು ರಾಜಬೀವಿಯಲ್ಲಿ ಕುಳಿತಿರುವುದು ಹಾಗೂ ಕಂದುಬಣ್ಣದ ರಾಜನ ಕುದುರೆಯ ಸುತ್ತಲೂ ಶ್ವೇತವಸ್ತ್ರ ಧರಿಸಿದ ರಾಜ ಸೇವಕರು ಸುತ್ತುವರೆದಿರುವ ದೃಶ್ಯವನ್ನು ಮನಮೋಹಕವಾಗಿ ಚಿತ್ರಿಸಲಾಗಿದೆ. ಇನ್ನೊಂದು ಸನ್ನಿವೇಶದಲ್ಲಿ ಸಂಗೀತಗಾರರ ಗುಂಪೊಂದು ಸಾಲಾಗಿ ನಿಂತಿರುವುದು. ಅದರಲ್ಲಿ ಒಬ್ಬಳು ಹಾಡುತ್ತ, ಮತ್ತೊಬ್ಬಳು ನರ್ತಿಸುತ್ತ, ವಾದ್ಯ ವೃಂದದವರು ಹಿಂಬಾಲಿಸುತ್ತಿರುವುದನ್ನು ಒಂದು ಮೇಲ್ಮುಚ್ಚಣ ವೇದಿಕೆಯ ಚೌಕಟ್ಟಿನಲ್ಲಿ ಚಿತ್ರಿಸಿರುವುದು ಕಲಾಕಾರನ ನೈಪುಣ್ಯತೆ ತೋರಿಸುತ್ತದೆ. ಈ ಚಿತ್ರಣವು ಅನೇಕ ವರ್ಣಚಿತ್ರಕಾರರಿಂದ ರಚಿಸಲ್ಪಟ್ಟಿದ್ದು, ಮೊಟ್ಟಮೊದಲಿಗೆ ಶ್ರೀರಂಗಪಟ್ಟಣದ ಕಲಾಕಾರರು ಟಿಪ್ಪು ಸುಲ್ತಾನನ ಆಡಳಿತ ಕಾಲದಲ್ಲಿಯೇ ಪ್ರಾರಂಭಿಸಿ, ಟಿಪ್ಪುವಿನ ನಂತರ ಯೂರೋಪಿಯನ್ ಕಲಾವಿದರಿಂದ ಪುನರ್‌ರಚಿಸಿ, ಸಂರಕ್ಷಿಸಲ್ಪಟ್ಟವೆಂದು ತಿಳಿದುಬರುತ್ತದೆ. ಕ್ರಿ.ಶ.೧೮೫೫ರಲ್ಲಿ ಲಾರ್ಡ್ ಡಾಲ್‌ಹೌಸಿಯು ಈ ಅರಮನೆಗೆ ಭೇಟಿ ನೀಡಿ, ಇಲ್ಲಿಯ

ವರ್ಣಚಿತ್ರವನ್ನು ಸಂರಕ್ಷಿಸುವಂತೆ ಆದೇಶಿಸಿದನು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರಣವು ಇಲ್ಲಿ ಸೇರ್ಪಡೆಗೊಂಡಿದೆ.

ಚಿತ್ರ-೯ ೧೦ :

ಈ ಚಿತ್ರಕೃತಿಗಳಲ್ಲಿ ಹೂವಿನ ಎಲೆಯ ಅಲಂಕಾರಿಕೆ ಮತ್ತು ಹೂಜಿಯ ರೀತಿಯಲ್ಲಿ ರಚಿಸಲಾಗಿರುವ ಗಿಡವನ್ನು ಕಾಣಬಹುದು. ದರಿಯಾದೌಲತ್ ಅರಮನೆಯ ಗೋಡೆಯ ಚಿತ್ರಗಳನ್ನು ವೀಕ್ಷಿಸುತ್ತಾ ಒಳಗಡೆ ಬಂದಂಗೆಲ್ಲಾ ಈ ರೀತಿಯ ಬಣ್ಣ ಬಣ್ಣದ ಮರ, ಬಳ್ಳಿ, ಗಿಡ, ಹೂವುಗಳನ್ನು ಕಾಣಬಹುದು. ಭಿತ್ತಿಯಲ್ಲಿ ಮಾತ್ರವಲ್ಲ, ಮೇಲ್ಚಾವಣಿಯಲ್ಲೂ ಈ ರೀತಿಯ ಅಲಂಕಾರವನ್ನು ಕಾಣಬಹುದು. ಟಿಪ್ಪುಸುಲ್ತಾನರ ಬೇಸಿಗೆ ಅರಮನೆಯಾಗಿರುವ ಇದು ಕಲೆಯ ರೀತಿಯಲ್ಲಿ ಸ್ವರ್ಗವಾಗಿದೆ. ಎಲ್ಲಿಯೂ ಒಂದಿಂಚು ಖಾಲಿ ಬಿಡದ ಜಾಗವನ್ನು ಬಣ್ಣ ಮತ್ತು ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ.

ಇಲ್ಲಿ ಕಾಣುವ ಚಿತ್ರಕೃತಿಯು ದಾಸವಾಳ ಹೂವಿನ ಚಿತ್ರವಾಗಿದ್ದು, ರೇಖೆಗಳಿಂದ ಮೊದಲು ಸ್ಕೇಚ್ ತಯಾರಿಸಿ ನಂತರ ಬಣ್ಣಗಳಿಂದ ಚಿತ್ರಿಸಿದ್ದಾರೆ. ಹಿಂಬದಿಯಲ್ಲಿ ಗಾಢವಾದ ಬಣ್ಣವನ್ನು ಬಳಸಿ ಮುಂಬದಿಯಲ್ಲಿ ತೆಳುವಾದ ಬಣ್ಣವನ್ನು ರಚಿಸಲಾಗಿರುತ್ತದೆ. ಈ ಚಿತ್ರದಲ್ಲಿ ಹೆಚ್ಚು ಹಸಿರು ಬಣ್ಣವನ್ನು ಬಳಸಿದ್ದು, ಅಲ್ಲಲ್ಲಿ ಕಪ್ಪು, ಕಡುಗೆಂಪನ್ನು ಗುರುತಿಸಬಹುದು.

ನವಾಬನ ಆಸ್ಥಾನದ ಚಿತ್ರ :

ಈ ಚಿತ್ರ ನವಾಬನ ಆಸ್ಥಾನದ್ದು ಮುಂಭಾಗದ ಸ್ತಂಭಗಳು ಮೆಟ್ಟಿಲು ಮೊದಲಾದವು ಗೋಪಿಬಣ್ಣ ಪ್ರಧಾನವಾದವು ಎರಡು ಸ್ತಂಭಗಳ ಮಧ್ಯದಲ್ಲಿ ಕಾಲುಗಳನ್ನು ಮಡಚಿ ದಿಂಬಿಗೊರಗಿ ಕುಳಿತ ಯವನೋ ನವಾಬನಿದ್ದಾನೆ. ಅವನ ಬೆಂಗಡೆಯಲ್ಲಿ ನಿಲುವಂಗಿ ರುಮಾಲು, ನಡುಕಟ್ಟು ಧರಿಸಿನಿಂತ ಸೇವಕನಿದ್ದಾನೆ. ನವಾಬನ ಮುಂಗಡೆಯಲ್ಲಿ ಕುಳಿತು ಏನನ್ನೋ ನಿವೇದಿಸುವ ಒಬ್ಬ ರಾಯಭಾರಿ ಇದ್ದಾನೆ. ಚಿತ್ರವನ್ನು ಕಂದು ಕೆಂಗಂದು, ಗೋಪಿ ಮೊದಲಾದ ಬಣ್ಣಗಳಿಂದ ಪಾಶ್ಚತ್ಯ ರೀತಿಯಲ್ಲಿ ತಾದ್ರೂಪಿಕವಾಗಿ ಬರೆದಿದ್ದಾರೆ. ಚಿತ್ರದ ಪ್ರಬಂಧ, ಬಣ್ಣಗಾರಿಕೆ ಹಿಂಬದಿಯ ತೆರೆಗಳು ಮುಂಬದಿಯ ಕಮಾನುಗಳು ಮೋಹಕವಾದ ಮೇಳದಿಂದ ಕಾಣಿಸುತ್ತವೆ. ಪರದೇಶದ ಶೈಲಿಯನ್ನು ಬಳಸುವುದರಲ್ಲಿ ಈ ಚಿತ್ರಕಾರ ಸಾಕಷ್ಟು ಯಶಸ್ಸನ್ನು ಗಳಿಸಿದಂತಿದೆ.

ವ್ಯಕ್ತಿ ಚಿತ್ರ :

ಇಲ್ಲಿನ ಒಂದು ಚಿತ್ರ ಕಮಾನುಗಳುಳ್ಳ ಮಂಟಪವೊಂದರ ಮುಂದೆ ನಿಂತ ಸ್ತ್ರೀ ಸಮುದಾಯದ್ದು, ಚಿತ್ರ ಮಧ್ಯದಲ್ಲಿ ಸೀರೆತೊಟ್ಟು ಕೈಯಲ್ಲಿ ಹೂವನ್ನು ಹಿಡಿದು ನಿಂತ ಯೌವ್ವನೆಯಾದ ರಾಣಿಯೊಬ್ಬಳು ಇದ್ದಾಳೆ. ಅವಳ ಎಡ, ಬಲಗಡೆಯಲ್ಲಿ ಹಿಂದೆ ಮುಂದೆ, ಹಲವಾರು ಸ್ತ್ರೀಯರು ಓಲೈಸುತ್ತಿದ್ದಾರೆ. ತಟ್ಟೆಯಲ್ಲಿ ಹಣ್ಣನ್ನು ಹಿಡಿದವರು, ಕೈಯಲ್ಲಿ ಕುಂಚ ಹಿಡಿದವರು, ಆಲಿಸುವವರು, ನೋಡುವವರು

ಕಾಣಿಸುತ್ತಾರೆ. ರಾಣಿ ಚಿತ್ತಾರದ ಲಂಗವನ್ನು ತೊಟ್ಟು ಅದರ ಮೇಲೆ ಅರ್ಧ ಸೀರೆಯನ್ನು ಹೊದೆದ ರೀತಿಯನ್ನು ಕಂಡಾಗ, ಅವಳು ಮುಸಲ್ಮಾನ ಸ್ತ್ರೀಯರೆಂದು ಊಹಿಸಬೇಕು. ಈ ಚಿತ್ರಗಳಲ್ಲಿ ಕಣ್ಣು ತಲೆಗೂದಲು, ಜಡೆ, ಸೀರೆಯ ಅಂಚುಗಳು ಇವಕ್ಕೆಲ್ಲಾ ಬಳಸಿದ ಕಪ್ಪುಗೆರೆಗಳು ಬಲು ಲಲಿತವಾಗಿ ಕಾಣಿಸುತ್ತವೆ. ನಾರಿಯರ ಆಭರಣ, ಅಲಂಕಾರ, ಮೈಮುಖಗಳನ್ನು ತುಂಬಾ ನಾಜೂಕಿನಿಂದ ಚಿತ್ರಿಸಿದ್ದಾರೆ. ಉಳಿದ ಭಾವಚಿತ್ರಗಳಷ್ಟು ಬೆಳಕು ಛಾಯಾಗಳೊಳಗಿನ ವ್ಯತ್ಯಾಸವನ್ನು ಹೆಚ್ಚಾಗಿ ತೋರಿಸಿದಯೇ ಬಹಳ ಮಿದುವಾಗಿ ತೋರಿಸಿದ್ದಾರೆ. ಈ ಚಿತ್ರದ ಮುಖ್ಯ ಬಣ್ಣದ ರೇಖೆಗಳು ಸ್ವಲ್ಪ ಹೆಚ್ಚಾಗಿಯೇ ಕಣ್ಣಿಗೆ ಹೊಡೆಯುತ್ತವೆ. ಇನ್ನೊಂದೇ ಒಂದು ಚಿತ್ರದ ವಿವರಣೆಯಿಂದ ಈ ವಿಚಾರವನ್ನು ಮುಗಿಸಬಹುದು.

ಅಂಬಾರಿಯುಳ್ಳ ಆನೆಯನ್ನು ನೆಡೆಸಿಕೊಂಡು ಹೋಗುವ ದೂತರ ಚಿತ್ರ ನೀಲಗಪ್ಪಿನ ಆನೆ, ಅದರ ಬೆನ್ನಮೇಲೆ ಜರತಾರಿ ಅಂಚಿನ ಹಸಿರು ಬಣ್ಣದ ಪಾವುಡವಿದೆ. ಅದು ಆನೆಯ ಚೆಲುವನ್ನು ಹೆಚ್ಚಿಸುತ್ತದೆ. ಅದರ ಎದುರಿಗೆ ಈಟಿ ಹಿಡಿದ ಬಿಳಿಯ ಪೋಷಾಕಿನ ಮಾವುತನೊಬ್ಬ ನಡೆಯುತ್ತಿದ್ದಾನೆ. ಆನೆಯ ಬೆಂಗಡೆಯಲ್ಲಿ ಕಡುಗಂದು ಬಣ್ಣದ ಕೆಚ್ಚಿನ ಕುದುರೆಯೊಂದು ಸುಂದರವಾಗಿ ಚಿತ್ರಿತವಾಗಿದೆ. ಅದರ ಮುಂಗಡೆ ಬಿಳಿಯ ಪೋಷಾಕಿನ ಒಬ್ಬ ಆಳು ಕಡಿವಾಣ ಹಿಡಿದು ನಿಂತಿದ್ದಾನೆ. ಬೆಂಗಡೆಯಲ್ಲಿ ಬಿಳಿ ಪೋಷಾಕಿನ ಜವಾನರು ನಿಂತಿದ್ದಾರೆ. ಈ ಒಟ್ಟು ಚಿತ್ರಕ್ಕೆ ಹಿನ್ನಲೆಯಾಗಿ ಚಿತ್ರದ ಮುಂದಿನ ಅರ್ಧಭಾಗದಲ್ಲಿ ಗೋಪಿ ಬಣ್ಣದ ನೆಲವೂ ಹಿಂದಿನ ಅರ್ಧ ಭಾಗದಲ್ಲಿ ನೀಲಾಕಾಶವೂ ಕಾಣಿಸುತ್ತದೆ. ಈ ಚಿತ್ರದ ವಿವಿಧ ಆಕೃತಿಗಳಲ್ಲಿ, ಬಣ್ಣಗಳಲ್ಲಿ ಒಳ್ಳೆಯ ಹೊಂದಿಕೆಯಿದ್ದು ಆನೆ, ಕುದುರೆ, ಮನುಷ್ಯ ಮೊದಲಾದವುಗಳಲ್ಲಿ ಜೀವಂತಿಕೆ ಕಾಣಿಸುತ್ತದೆ.

ಪೂರ್ವದಿಕ್ಕಿನ ಗೋಡೆಯ ಮೇಲೂ ಅನೇಕ ಚಿತ್ರಗಳ ಸಾಲುಗಳಿವೆ. ಅವುಗಳಲ್ಲಿ ಅನೇಕವು ಟಿಪ್ಪುವಿನ ಸಮಕಾಲೀನ ಅಥವಾ ಅವನಿಗಿಂತ ಹಿಂದಿನ ರಾಜರುಗಳ ದರ್ಬಾರಿನ ದೃಶ್ಯವನ್ನು ಚಿತ್ರಿಸುವಂತೆ ತೋರುತ್ತದೆ. ಇಂತಹ ಸುಮಾರ ನೂರಾರು ಚಿತ್ರಗಳಲ್ಲಿ ಚಿತ್ತೂರಿನ ರಾಣಿ, ಮಹಮ್ಮದ್ ಅಲಿ, ತಂಜಾವೂರಿನ ರಾಜ, ಬಾಲಾಜಿರಾವ ಪೇಷ್ವೆ, ಮುಮ್ಮಡಿ ಕೃಷ್ಣರಾಜ ಒಡೆಯರು, ಮಾಗಡಿ ಕೆಂಪೇಗೌಡ, ಚಿತ್ರದುರ್ಗದ ಮದಕರಿ ನಾಯಕ, ಆರ್ಕಾಟ್ ಮತ್ತು ಸವಣೂರಿನ ನವಾಬರು ಈ ಮೊದಲಾದವುಗಳನ್ನು ಗುರುತಿಸಬಹುದಾಗಿದೆ.

ಪ್ರವೇಶ ದ್ವಾರದ ಪಶ್ಚಿಮ ದಿಕ್ಕಿನ ಗೋಡೆಯ ಭಿತ್ತಿಚಿತ್ರಗಳು :

ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ ವಿಸ್ತಾರವಾದ ಹಿನ್ನಲೆಯಲ್ಲಿ ನೃತ್ಯ ಮತ್ತು ಯುದ್ಧದ ಚಿತ್ರಗಳು ನಿರ್ಮಿತವಾಗಿವೆ. ಒಂದು ಕಡೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನರಿಬ್ಬರೂ ವಜೀರನೊಡನೆ ಸೈನ್ಯವನ್ನು ನಡೆಸಿಕೊಂಡು ಶತ್ರುಗಳ ಮೇಲೆ ಹೋಗುತ್ತಿದ್ದಾರೆ. ಟಿಪ್ಪುವಿಗೂ ಆಂಗ್ಲ ಸೈನ್ಯಕ್ಕೂ ನಡೆಯುತ್ತಿರುವ ಯುದ್ಧದ ಒಂದು ದೃಶ್ಯ ಎಡಭಾಗದ ಗೋಡೆಯ ಮೇಲೆ ಕಣ್ಣಿಗೆ ಕಟ್ಟುವಂತಹ ರೀತಿಯಲ್ಲಿ ಇದರ ಮೇಲಿನ ಸಾಲಿನಲ್ಲಿ ಕುದುರೆಯ ಮೇಲೆ ಕುಳಿತ ಯುದ್ಧಕ್ಕೆ ಹೋಗುತ್ತಿರುವ

ಟಿಪ್ಪುವಿನ ಚಿತ್ರ ಮತ್ತು ಅವನಿಗೆ ಬಹಳ ಪ್ರಿಯವಾದ ಹುಲಿಪಟ್ಟಿಯ ಆಕೃತಿಗಳು ಆಕರ್ಷಕವಾಗಿ ಮೂಡಿವೆ. ಟಿಪ್ಪುವಿನ ಸೈನ್ಯದಲ್ಲಿ ಪ್ರೆಂಚ್ ಸೈನಿಕರೂ ಇದ್ದಾರೆ. ಪ್ರೆಂಚ್ ಅಧಿಕಾರಿಯೊಬ್ಬನು (ಬಹುಶಃ ಲಿಲ್ಲಿ ಎಂಬುವನಿರಬೇಕೆಂದು ಊಹಿಸಲಾಗಿದೆ) ಕಂಡು ಬರುತ್ತಿರುವುದು ಗಮನಾರ್ಹವಾಗಿದೆ. ಅದರ ಕೆಳಗಡೆ ಅಂದರೆ ಮೂರನೇ ಸಾಲಿನಲ್ಲಿ ಹೈದರ ಮತ್ತು ಟಿಪ್ಪು ಇವರ ಸೈನ್ಯ, ಆಂಗ್ಲರೊಡನೆ ನಡೆದ ಪಾಲಿಲೂರ್, ಯುದ್ದದಲ್ಲಿ ಜಯಶಾಲಿಯಾಗುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಇಲ್ಲಿಯೂ ೫ ಪ್ರೆಂಚ್ ಸೈನಿಕರು ಮತ್ತು ಮೈಸೂರು ಸೈನ್ಯಕ್ಕೆ ಸಹಾಯ ನೀಡುತ್ತಿದ್ದಾರೆ. ಕೆಂಪು ಕೋಟನ್ನು ಧರಿಸಿರುವ ಇಂಗ್ಲೀಷ್ ಸೈನಿಕರು ತಮ್ಮ ನಾಯಕರಾದ ಕರ್ನಲ್ ಬೈಲಿಯನ್ನು ಸುತ್ತುವರಿದು ಆತನ ರಕ್ಷಣೆಯ ಸಾಹಸದಲ್ಲಿ ತೊಡಗಿರುವಂತಿದೆ. ಮನೆಯಲ್ಲಿ ಕುಳಿತಿರುವ ಬೈಲಿ ತನ್ನ ಕೈ–ಬೆರಳನ್ನು ತುಟಿಯ ಮೇಲಿಟ್ಟುಕೊಂಡು ಆಶ್ಚರ್ಯ ಮತ್ತು ನಿರಾಶೆಯ ಭಂಗಿಯಲ್ಲಿರುವುದು ಬ್ರಿಟಿಷರಿಗೆ ಸೋಲು ಶತಸಿದ್ಧವೆಂಬುದನ್ನು ಸಾರುತ್ತದೆ. ನಾಲ್ಕನೆಯ ಸಾಲು ಚಿತ್ರದಲ್ಲಿ ನಿಜಾಮನ ಸೈನ್ಯ ಬ್ರಿಟಿಷರ ಸಹಾಯಕ್ಕಾಗಿ ಆಗಮಿಸುತ್ತದೆ. ಕುದುರೆಯ ಮೇಲೆ ಕುಳಿತಿರುವ ನಿಜಾಮನ ಕೆಳಗೆ ಹಸು ಮತ್ತು ಹಂದಿ ಈ ಎರಡು ಪ್ರಾಣಿಗಳ ಚಿತ್ರಗಳಿವೆ. ನಿಜಾಮನನ್ನು ಹಸುವಿನಂತಹ ಸಾಧು ಪ್ರಾಣಿಯೆಂದು ಟಿಪ್ಪು ಭಾವಿಸಿದ್ದನೆಂಬುದನ್ನು ಈ ಚಿತ್ರ ಸೂಚಿಸುತ್ತದೆಂದು ಹೇಳುವುದುಂಟು. ಅಲ್ಲದೇ ಹಸುವಿನಂತೆ ಬಂದ ನಿಜಾಮನು ಹಂದಿಯಂತೆ ಓಡಿದುದನ್ನು ಸೂಚಿಸುವುದರ ಸಂಕೇತವೆಂದೂ ಇದಕ್ಕೆ ಅರ್ಥ ಹೇಳುವವರೂ ಇದ್ದಾರೆ. ಒಟ್ಟಿನಲ್ಲಿ ನಿಜಾಮನನ್ನು ಟಿಪ್ಪು ಕಂಡ ರೀತಿಯನ್ನು ಇದು ಅರ್ಥವತ್ತಾಗಿ ನಿರೂಪಿಸಿದೆ.

ನಾಲ್ಕುನಾಡು ಅರಮನೆ. ಮಡಿಕೇರಿ :

ಮಡಿಕೇರಿಯಲ್ಲಿ ಈ ಅರಮನೆಯ ಚಿತ್ರಗಳನ್ನು ೧೮೧೫ರ ಸುಮಾರಿಗೆ ರಚಿಸಲಾಗಿದೆ. ಮಡಿಕೇರಿ ನಾಯಕರು ಈ ಚಿತ್ರಗಳನ್ನು ಬರೆಸಿದ್ದು, ಇಲ್ಲಿನ ಚಿತ್ರಗಳಲ್ಲಿ ಸ್ಥಳೀಯ ವೇಷಭೂಷಣಗಳು, ಕೊಡಗಿನ ವೇಷಭೂಷಣಗಳನ್ನು ಬಿಂಬಿಸುವ ಅವರ ಸಂಸ್ಕೃತಿಯ ವೈವಿಧ್ಯತೆಯನ್ನು ತೋರಿಸುವ ಚಿತ್ರಗಳು ಇಲ್ಲಿವೆ. ಅದರ ಜೊತೆಗೆ ಬೇಟೆಯ ದೃಶ್ಯಗಳೂ, ಕೆಲವು ಧಾರ್ಮಿಕ ದೃಶ್ಯಗಳು, ಸಾಮಾಜಿಕ ಚಿತ್ರಗಳು ಇಲ್ಲಿ ಕಂಡುಬರುತ್ತವೆ.

ಭಿತ್ತಿ ಚಿತ್ರಗಳು :

ಚಿತ್ರ-೧ ಮತ್ತು ೨ :

ಈ ಅರಮನೆ ಮೇಲ್ನೋಟಕ್ಕೆ ಮಲೆನಾಡಿನ ಸಮಾನ್ಯ ಮನೆಯಂತೆ ಕಂಡರೂ. ತುಂಬಾ ವೈಶಿಷ್ಟತೆಯನ್ನು ಕಾಣಬಹುದು. ಎರಡು ಅಂತಸ್ತು ಹೊಂದಿರುವ ಈ ಅರಮನೆಯಲ್ಲಿ ಭಿತ್ತಿಚಿತ್ರಗಳ ಕಲರವವನ್ನು ಕಾಣಬಹುದು. ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟಿರುವ ಈ ಅರಮನೆಯಲ್ಲಿ ಮರಗಳದ್ದೆ ಸೌಂದರ್ಯ ತುಸು ಜಾಸ್ತಿ. ಎರಡನೆ ಅಂತಸ್ತಿನಲ್ಲಿ ಬರಿ ಹಲಗೆಯಿಂದ ಕಟ್ಟಲಾಗಿದ್ದು,

ಮೇಲೊದಿಕೆಯಾಗಿ ಕೆಂಪು ಹಂಚನ್ನು ಬಳಸಿರುತ್ತಾರೆ. ನೋಡಿದ ತಕ್ಷಣ ಬೃಹತ್ತಾದ ಶ್ರೀಮಂತರ ಮನೆಯಂತೆ ಕಂಡರೂ ನೂರಕ್ಕೂ ಅಧಿಕ ವರ್ಷಗಳ ಆಯಸ್ಸು ಹೊಂದಿರುವ ಅರಮನೆಯಲ್ಲಿ ನೂರಾರು ಭಿತ್ತಿ ಚಿತ್ರಗಳನ್ನು ರಚಿಸಲಾಗಿರುತ್ತದೆ. ಆದರೆ ಇವತ್ತು ಅಷ್ಟಾಗಿ ಉಳಿದಿರುವುದಿಲ್ಲ. ಮೆಲ್ಚಾವಣಿಗಳಲ್ಲಿ ಪೇಪರ್‌ನಿಂದ ರಚಿತ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇದೇ ಮಾದರಿಯಲ್ಲಿರುವ ಟಿಪ್ಪು ಅರಮನೆ ಬೆಂಗಳೂರಿನ ಭಿತ್ತಿ ಚಿತ್ರಕ್ಕೂ ಯಾವುದೇ ವ್ಯತ್ಯಾಸ ಕಂಡುಬಂದಂತಿಲ್ಲ. ಆದರೆ ಇಲ್ಲಿನ ಚಿತ್ರಕ್ಕೂ, ಟಿಪ್ಪು ಅರಮನೆಯ ಚಿತ್ರಕ್ಕೂ ಭಿನ್ನ ಆಯಾಮಗಳನ್ನು ಗುರುತಿಸಬಹುದು. ನೋಡಲು ಸುಂದರವಾಗಿರುವ ಕಟ್ಟಡ ಕೊಡಗಿನ ಸೌಂದರ್ಯವನ್ನು ತುಸು ಹೆಚ್ಚಿಸಿದೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

ಈ ಅರಮನೆಯಲ್ಲಿ ಐದು ಕಂಬಗಳಿರುವ ಪ್ರವೇಶದ್ವಾರವಿದ್ದು, ಅರಮನೆಯ ಕೆಳ ಮತ್ತು ಮೇಲಂತಸ್ಥಿನಲ್ಲಿ ದಪ್ಪ ಮರದ ಕಂಬಗಳನ್ನು ಅಳವಡಿಸಿದ್ದಾರೆ. ಕಂಬಗಳಂತೂ ಸುಂದರ ಕೆತ್ತನೆಗಳನ್ನು ಹೊಂದಿರುತ್ತವೆ. ಅವುಗಳ ಕೆಳಭಾಗದಲ್ಲಿ ದಪ್ಪವಾಗಿ ಮೇಲೆ ಹೋದಂತೆ ಚಿಕ್ಕದಾಗಿ ರಚಿಸಲಾಗಿದೆ. ಇದು ರಾಜರು ತಂಗುವ, ವಿಶ್ರಾಂತಿ ಪಡೆಯುವ ನೆಚ್ಚಿನ ತಾಣವಾಗಿರಬಹುದು. ಅತಿಯಾದ ಬೇಸಿಗೆಯಲ್ಲಿ ಕಾಲಕಳೆಯುತ್ತಿದ್ದರೆಂಬುದು ಇತಿಹಾಸದಿಂದ ತಿಳಿಯಬಹುದಾಗಿದೆ.

ಈ ಧಾರ ಮಂಟಪವು ಕ್ರಿ.ಶ.೧೭೯೩ರಲ್ಲಿ ದೊಡ್ಡವೀರರಾಜೇಂದ್ರ ಮತ್ತು ಮಹದೇವಮ್ಮ ಅವರ ಮದುವೆಯ ಧಾರೆ ಎರೆಯುವ ಕಾರ್ಯಕ್ರಮ ನಡೆದ ಸ್ಥಳವಾಗಿರುವುದನ್ನು ಹಿರಿಯರು ಸೂಚಿಸುತ್ತಾರೆ. ಇಲ್ಲಿನ ಚೌಕದ ವಿನ್ಯಾಸವು ಕಲಾತ್ಮಕವಾಗಿ ನಿರ್ಮಾಣಗೊಂಡಿದೆ. ಈ ಧಾರಮಂಟಪವು ಸಂಪೂರ್ಣವಾಗಿ ವರ್ಣಚಿತ್ರಗಳಿಂದ ಅಲಂಕೃತಗೊಂಡ, ಒಂದು ಕಾಲದಲ್ಲಿ ಸಂಪೂರ್ಣವಾಗಿ ವರ್ಣಚಿತ್ರಗಳಿಂದ ಅಲಂಕೃತಗೊಂಡ ಈ ಧಾರಮಂಟಪ ಇಂದು ಪ್ರಕೃತಿ ವಿಕೋಪಗಳಿಂದ ಬಣ್ಣ ಕಳೆದುಕೊಂಡು ಇಲ್ಲಿರುವ ಚಿತ್ರಗಳು ವಿನಾಶದ ಅಂಚಿನಲ್ಲಿ ಉಳಿದಿರುವುದನ್ನು ಕಾಣಬಹುದು. ಹೆಚ್ಚೆಚ್ಚು ಕೆಂಪು, ಹಳದಿ ಮತ್ತು ಹಸಿರು ಬಣ್ಣಗಳಿಂದ ಅಲಂಕರಿಸಲಾಗಿರುತ್ತದೆ.

ಚಿತ್ರ-೩ :

ಎರಡು ಅಂತಸ್ಥಿನ ಈ ಅರಮನೆಯಲ್ಲಿ ರಾಜನ ಒಡ್ಡೋಲಗ ನಡೆಯುತ್ತಿತ್ತಂತೆ, ಅಲ್ಲಿ ರಾಜನ ಸಿಂಹಾಸನವಿರುವುದಾಗಿ ಸ್ಥಳಿಯರು ಹೇಳುತ್ತಾರೆ. ಇಲ್ಲಿರುವ ಭಿತ್ತಿ ಚಿತ್ರಗಳು ವಿಶೇಷವಾಗಿ ಕೆಳಂತಸ್ತಿನ ವರಾಂಡದಲ್ಲಿ ಅಸ್ಪಷ್ಟವಾಗಿ ಕಂಡುಬರುತ್ತಿವೆ. ಹಾಗೂ ಅಲಕೃತಗೊಂಡ ರಾಣಿ ನಿಂತಿರುವ ಭಂಗಿಯ ಚಿತ್ರ ತುಂಬಾ ವಿಶೇಷವಾಗಿ ಕಾಣಲ್ಪಟ್ಟಿರುತ್ತದೆ. ಕೆಂಪು ಸೀರೆಯನ್ನುಟ್ಟ ಈ ಹುಡುಗಿ, ತನ್ನ ಸೀರೆಯ ಸೆರಗನ್ನು ತಲೆಗೆ ಹಾಕಿರುವಂತಿದೆ. ಒಡವೆ, ವೈಡೂರಗಳಿಂದ ಅಲಂಕರಿಸಿರುವ ಕಲಾವಿದ ನೈಜತೆಗೆ ಹೆಚ್ಚು ಹೊತ್ತನ್ನಿಟ್ಟಿದ್ದಾರೆ. ಆದರೂ ಈ ಚಿತ್ರವೂ ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಗೊಂಡಿರುತ್ತದೆ. ಕಲಾವಿದ ಪ್ರಕೃತಿಯ ಸಹಜ ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಿದ್ದಾನೆ. ಹಿನ್ನಲೆಯಲ್ಲಿ ಹಸಿರುವರ್ಣವನ್ನು ಬಳಸಲಾಗಿದ್ದು.

ಪ್ರಕೃತಿಯ ನಾಡು ಆಗಿರುವುದರಿಂದ ಇಲ್ಲಿನ ಚಿತ್ರಗಳಲ್ಲಿ ಹಸಿರನ್ನು ಹೆಚ್ಚು ಬಳಸಿದ್ದಾರೆನ್ನಲಾಗಿದೆ. ಜೊತೆಗೆ ಕೆಂಪುವರ್ಣವೂ ಕೂಡ ಹೆಚ್ಚಿರುತ್ತದೆ.

ಚಿತ್ರ-೪ :

ಈ ಚಿತ್ರದಲ್ಲಿ ಆನೆಯ ಮೇಲೆ ಪಲ್ಲಕ್ಕಿಯಿದ್ದು, ಅದರಲ್ಲಿ ಒಬ್ಬ ರಾಜ ಕುಳಿತಿರುವಂತೆ ಬಾಸವಾಗುತ್ತಿದೆ.ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಉತ್ಸವದ ಆಚರಣೆಯ ಸಂದರ್ಭವಿರುವಂತಿದೆ. ಇದನ್ನು ನೋಡುತ್ತಿದ್ದರೆ ಮೈಸುರು ಅಂಬಾರಿಯ ನೆನಪು ಬಾರದೆಯಿರದು, ಅಷ್ಟರ ಮಟ್ಟಿನ ಸೌಂದರ್ಯವನ್ನು ಕಲಾವಿದ ತುಂಬಿರುತ್ತಾನೆ. ಪಲ್ಲಕ್ಕಿಯ ಮುಂಭಾಗದಲ್ಲಿ ಸೈನಿಕರು ಸಾಲಾಗಿ ನಿಂತಿದ್ದು, ಗಂಭಿರವಾದ ಮುಖವನ್ನೊತ್ತಿದ್ದಾರೆ. ಸೈನಿಕರ ಕೈಯಲ್ಲಿ ಆಯುಧಗಳನ್ನು ಕಾಣಬಹುದು. ಇದರ ಹಿನ್ನಲೆಯಲ್ಲಿ ಮಲೆನಾಡು ಪ್ರಾದೇಶಿಕ ನೈಸರ್ಗಿಕತೆಯನ್ನು ಬಳಸಿಕೊಂಡಿರುವುದು. ತೆಂಗಿನಮರ, ಹೂವಿನ ಗಿಡಗಳು ಸಹಜವಾಗಿರುವಂತೆ ಚಿತ್ರದಲ್ಲಿ ತೋರಿಸಲಾಗಿದೆ. ಗೋಲ್ಡ್ ಕಲರ್, ಕೆಂಪು, ಹಳದಿ ಮತ್ತು ಹಸಿರು ವರ್ಣಗಳನ್ನು ಹೆಚ್ಚು ಬಳಸಿ ಚಿತ್ರಕೃತಿಯನ್ನು ಪೂರ್ಣಗೊಳಿಸಲಾಗಿರುತ್ತದೆ.

ಟಿಪ್ಪುಸುಲ್ತಾನ ಅರಮನೆ, ಬೆಂಗಳೂರು :

೧೭೬೧ರಲ್ಲಿ ಶಿರಾದ ನವಾಬನಿಂದ ಅಧಿಕಾರವನ್ನು ಪಡೆದ ಹೈದರನು ದಿಟ್ಟವಾಗಿ ನಿಂತು ಆಡಳಿತ ಮಾಡಿದವನು ಮತ್ತು ಅಲ್ಲಿನ ಮೊಘಲ್ ವಾಸ್ತುಕಲೆಯಿಂದ ಪ್ರಭಾವಿತನಾಗಿದ್ದನು. ಶಿರಾದ ಹಿಂದಿನ ಪ್ರಾಂತಾಧಿಪತಿಗಳಲ್ಲಿ ಒಬ್ಬನಾದ ದಿಲಾವರ್ ಖಾನ್ ಕಟ್ಟಿಸಿದ್ದ ಅರಮನೆಯು ಬೆಂಗಳೂರು ಮತ್ತು ಶ್ರೀರಂಗಪಟ್ಟಣದಲ್ಲಿ (ಬೇಸಿಗೆ ಅರಮನೆ ಮತ್ತು ದರಿಯಾ ದೌಲತ್) ಕಟ್ಟಿಸಿದ ಅರಮನೆಗಳಿಗೆ ಒಂದು ಮಾದರಿಯನ್ನೊದಗಿಸಿತು.

ಮಹಲಿನ ವಾಯುವ್ಯ ದಿಕ್ಕಿನಲ್ಲಿದ್ದ ದೊಡ್ಡ ರ್‍ಯಾಂಪನ್ನು ಮತ್ತು ಮಹಲಿನ ವಾಯುವ್ಯ ಮೂಲೆಯಲ್ಲಿದ್ದ ಅಷ್ಟಭುಜಾಕೃತಿಯ ಬಾವಿಯನ್ನು ಮುಚ್ಚಲು ಅದೇ ಸಮಯದಲ್ಲಿ ಸೂಚನೆ ನೀಡಲಾಯಿತು. ವೆಂಕಟರಮಣಸ್ವಾಮಿ ದೇವಾಲಯವನ್ನು ಇನ್ನೂ ಉತ್ತಮ ರೀತಿಯಲ್ಲಿ ಸಂರಕ್ಷಿಸಬೇಕೆಂದು ಸಹ ಇದೇ ಸಂದರ್ಭದಲ್ಲಿ ಸೂಚನೆ ನೀಡಲಾಯಿತು. ಈ ಅರಮನೆಯ ಭಿತ್ತಿ ಚಿತ್ರಗಳು ೧೭೯೧ರಲ್ಲಿ ರಚನೆಯಾಗಿವೆ. ಈ ಚಿತ್ರಗಳಲ್ಲಿ ಹೆಚ್ಚಾಗಿ ಹೂವಿನ ಚಿತ್ರ ಮತ್ತು ವಿನ್ಯಾಸದ ಚಿತ್ರಗಳನ್ನು ಹೆಚ್ಚು ಇಲ್ಲಿ ಕಾಣಬಹುದು. ಈ ಅರಮನೆಯ ಹಿಂದೆ ಮತ್ತು ಮುಂದೆ ಒಂದೆ ಹೋಲಿಕೆಯಿರುವುದು ತುಂಬಾ ವಿಶೇಷವಾದದ್ದು, ಎರಡು ಮಹಡಿ ಇರುವ ಈ ಅರಮನೆ ನೊಡಲು ಸುಂದರವಾಗಿದೆ. ಅದಕ್ಕೆ ಮುಖ್ಯ ಕಾರಣ ಭಿತ್ತಿ ಚಿತ್ರಗಳ ಕಲರವ, ಎತ್ತ ತಿರುಗಿದರೂ ವಿವಿಧ ಆಕಾರದಲ್ಲಿರುವ ಹೂವಿನ ಚಿತ್ರಕೃತಿಗಳದ್ದೆ ಸದ್ದು. ಒಂದಿಂಚು ಖಾಲಿ ಜಾಗ ಕಾಣದ ರೀತಿಯಲ್ಲಿ ಚಿತ್ರವನ್ನು ರಚಿಸಲಾಗಿದೆ. ಹೆಚ್ಚಾಗಿ ನೀಲಿ, ಹಳದಿ, ಬಿಳಿ ಮತ್ತು ಕೆಂಪು, ಕಪ್ಪು

ವರ್ಣದ ದಟ್ಟ ಛಾಯೆಯ ಚಿತ್ರಗಳನ್ನು[೧೩] ಇಲ್ಲಿ ಕಾಣಬಹುದು. ಈ ಚಿತ್ರಗಳ ಜೊತೆಗೆ ಪ್ರಾಣಿ-ಪಕ್ಷಿಗಳ ಹಾಗೂ ಭೇಟೆಯಾಡುವ ದೃಶ್ಯಗಳನ್ನು ವೀಕ್ಷಿಸಬಹುದು. ಅರಮನೆಗಳೂ ವಿಶೇಷವಾಗಿ ಅಲಂಕಾರದಿಂದ ಕೂಡಿರುತ್ತವೆ ಅದೇರೀತಿ ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕೆಲವು ಚಿತ್ರಕೃತಿಗಳ ಛಾಯಾಚಿತ್ರಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಮೈಸೂರು ಅರಮನೆ :

ಚಿತ್ರ-೧ :

ಅಂಬಾ ವಿಲಾಸ್ ಅರಮನೆ ಮೈಸೂರು ನಗರದಲ್ಲಿರುವ ಅನೇಕ ಅರಮನೆಗಳಲ್ಲಿ ಮುಖ್ಯವಾದ ಅರಮನೆ. ಮೈಸುರು ಅರಮನೆಗಳ ನಗರ ಎಂದು ಕರೆಯಲ್ಪಡುತ್ತದೆ. ಮೈಸುರು ಅರಮನೆ ಎನ್ನುವಾಗ ಸಾಮಾನ್ಯವಾಗಿ ಮುಖ್ಯ ಅರಮನೆಯಾದ ನಿರ್ದೇಶಿಸಿ ಹೇಳಲಾಗುತ್ತದೆ. ಇದು ಹಿಂದಿನ ಮಯಸೂರು ಸಂಸ್ಥಾನದ ಒಡೆಯರ್ ವಂಸದ ಅರಸರ ನಿವಾಸ ಹಾಗೂ ದರ್ಬಾರು ಶಾಲೆಯಾಗಿತ್ತು. ಈ ಅರಮನೆಯನ್ನು ೧೮೯೭ರಲ್ಲಿ ಪ್ರಾರಂಭಿಸಿ ೧೯೧೨ರಲ್ಲಿ ಪೂರ್ಣಗೊಳಿಸಲಾಯಿತು. ಮೈಸುರಿನ ಮುಖ್ಯ ಪ್ರವಾಸಿ ತಾಣಗಳಲ್ಲಿ ಇದು ಒಂದು.

ಚಿತ್ರ-೨ :

ಶ್ರೀನಾಲ್ವಡಿ ಕೃಷ್ಣರಾಜ ಒಡೆಯರು ಅವರ ಜಂಬುಸವಾರಿ ಚಿತ್ರ :

ಈ ತೈಲವರ್ಣ ಭಿತ್ತಿ ಚಿತ್ರವು ಸುಮಾರು ೧೯ನೇ ಶತಮಾನದ ನಂತರ ಚಿತ್ರಿಸಲಾಗಿದೆ. ಅರಮನೆ ಆವರಣದಲ್ಲಿ ದಸರಾ ಸಾಗುತ್ತಿರುವ ಚಿತ್ರವು ಕಲ್ಯಾಣ ಮಂಟಪದಲ್ಲಿ ಬಲಭಾಗದಲ್ಲಿ ದೊಡ್ಡದಾಗಿ ಚಿತ್ರಿಸಿದ್ದಾರೆ. ಗೋಡೆಯ ಮೇಲೆ ಕ್ಯಾನ್‌ವಾಸ್ ಅಂಟಿಸಿ ಅದರ ಮೇಲೆ ದಸರಾ ಮೆರವಣಿಗೆಯ ಚಿತ್ರದಲ್ಲಿ ಈ ಚಿತ್ರವು ಅತ್ಯಂತ ಮೆಚ್ಚುಗೆ ಗಳಿಸಿದ ಭಿತ್ತಿ ಚಿತ್ರವಾಗಿದೆ. ಅರಮನೆ ಆವರಣದಿಂದ ದಸರಾ ಸಾಗುತ್ತಿದ್ದು ಚಿತ್ರದೊಳಗೆ ಮೂವರು ಅರಸರು ಇದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಮುಂದೆ, ಅವರ ಹಿಂದೆ ಜಯಚಾಮರಾಜ ಒಡೆಯರ್ ಮತ್ತು ಶ್ರೀಕಂಠದತ್ತ ಒಡೆಯರು ಕುಳಿತಿದ್ದಾರೆ. ಅರಮನೆಯ ಕಲಾವಿದರಾದ ಕೇಶವಯ್ಯನವರು ಈ ಚಿತ್ರವನ್ನು ತುಂಬ ಶ್ರದ್ಧೆಯಿಂದ ಚಿತ್ರಿಸಿದ್ದಾರೆ. ಆನೆಯ ಮೇಲೆ ಅಂಬಾರಿಯಲ್ಲಿ ಸಾಗುತ್ತಿದ್ದಾರೆ. ಅಲಂಕರಿಸಿದ ಚಿನ್ನದ ಅಂಬಾರಿಯಲ್ಲಿ ರಾಜವಸ್ತ್ರ ಧರಿಸಿ ಜನರಿಗೆ ಹರ್ಷವನ್ನು ವ್ಯಕ್ತಪಡಿಸುತ್ತಾ ಕುಳಿತಿದ್ದಾರೆ. ಮಾವುತ ಆನೆಯನ್ನು ಮುನ್ನಡೆಸುತ್ತಿದ್ದಾನೆ. ಅನೇಕ ಕಾಲುಧಳ ಸೈನಿಕರು. ರಾಜಪರಿವಾರದವರು, ಅರಮನೆಯ ಅನೇಕ ಅಧಿಕಾರಿಗಳು, ಪುರೋಹಿತರುಗಳು ಪೂಜಾ ಪರಿಕರಗಳನ್ನು ಹಿಡಿದು ಸಾಗುತ್ತಿದ್ದಾರೆ ಎಂಬಂತೆ ಚಿತ್ರಿಸಿದ್ದಾರೆ. ಸೈನಿಕರು ಸಮವಸ್ತ್ರಧರಿಸಿ ಎಲ್ಲರು ದಸರಾ ಹಬ್ಬದ ವಾತಾವರಣದಿಂದ ಎಲ್ಲಾರು ಕಂಗೊಳಿಸುತ್ತಿದ್ದಾರೆ. ಆನೆಯು ಅಂಬಾರಿ ಹೊತ್ತು ರಾಜಗಾಂಭೀರ್ಯದಿಂದ ನಿಂತಿರುತ್ತದೆ. ಹಿನ್ನೆಲೆಯಲ್ಲಿ ಅಸಂಖ್ಯಾ ಮೈಸೂರಿನ ಗಣ್ಯ ವ್ಯಕ್ತಿಗಳು.

ಸಾರ್ವಜನಿಕರಲ್ಲಿ ಸಹ ಹಬ್ಬದ ಕಳೆಯು ತುಂಬಿದೆ. ಪ್ರಕೃತಿಯ ಮಡಿಲಲ್ಲಿ ನವರಾತ್ರಿಯ ಉತ್ಸವಕ್ಕೆ ಸಾಕ್ಷಿಯಾಗಿ ಸುಂದರ ಬೆಳ್ಳಿಯ ಮೋಡಗಳು ಆಕಾಶದಲ್ಲಿ ಚೆಲ್ಲಿಸುತ್ತದೆ. ಎನ್ನುವಂತೆ ಕಲಾವಿದ ರಚಿಸಿದ್ದಾರೆ. ಚಾಮುಂಡಿಯ ಬೆಟ್ಟದ ಸಾಲು ಸಹ ಈ ವಾತಾವರಣ ಕಂಡು ಹರುಶದಿಂದ ನಿಂತಿರುವಂತೆ, ಆವರಣದ ದೇವಾಲಯಗಳು ಸುಣ್ಣಬಣ್ಣಗಳಿಂದ ಲೇಪನಕಾರ್ಯ ನಡೆದು ಅವುಗಳು ಹೊಚ್ಚ ಹೊಸದರಂತೆ ಶೃಂಗಾರಗೊಳಿಸಿದ್ದಾರೆ. ಈ ಕಲಾಕೃತಿಯು ದೊಡ್ಡದಾಗಿದ್ದು ಸೂಕ್ಷ್ಮ ಕುಶಲತೆಯಿಂದ ಕೂಡಿದೆ. ಕಲಾವಿದನ ಶ್ರದ್ಧೆ ಕೌಶಲ್ಯ ಆಕೃತಿಗಳನ್ನು ಜೀವಂತಿಕೆಯಿಂದ ಇರುವಂತೆ ಚಿತ್ರಿಸಿದ್ದಾರೆ. ಪಾಶ್ಚಾತ್ಯರ ಪ್ರಭಾವವು ಇದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆಕೃತಿಗಳ ಅದ್ಭುತವಾದ ಸಂಯೋಜನೆಯಿಂದ ಕೂಡಿದು ರಿಯಾಲಿಸ್ಟಿಕ್ ಕಲಾಕೃತಿಯಾಗಿದೆ. ೧೯ನೆಯ ಶತಮಾನದಲ್ಲಿ ಕಪ್ಪುಬಿಳುಪಿನ ಛಾಯಾಚಿತ್ರವನ್ನು ಕ್ಯಾನ್‌ವಾಸ್ ಮೇಲೆ ಗ್ರಾಫ್ ತಂತ್ರವನ್ನು ಉಪಯೋಗಿಸಿ ರಚಿಸಿದ್ದಾರೆ. ಇದು ಅಮೋಘ ಕಲಾಕೃತಿಯಾಗಿದ್ದು ಕರ್ನಾಟಕದ ಬೇರೆಯಾವ ಮೂಲೆಯಲ್ಲೂ ಈ ತರಹದ ಕಲಾಕೃತಿಯು ಕಾಣಸಿಗುವುದಿಲ್ಲ. ಅಂದಿನ ದಸಾರವನ್ನು ಎಲ್ಲರು ಸೇರಿ ಆಚರಿಸುತ್ತಿದ್ದರು ಮತ್ತು ಸರ್ವಧರ್ಮದ ಸಮನ್ವಯದಿಂದ ಕೂಡಿ ದಸರಾ ಹಬ್ಬ ಆಚರಿಸುತ್ತಿದ್ದಾರೆ. ನೂರು ವರ್ಷಗಳು ದಾಟಿದ್ದರೂ ಇದನ್ನು ಸಂರಕ್ಷಣೆ ಮಾಡಿ ದೇಶದ ಆಸ್ತಿಯಾಗಿಸಿದ್ದಾರೆ.

ಚಿತ್ರ–೩ :

ಕಲ್ಯಾಣ ಮಂಟಪದ ದಸರಾ ಭಿತ್ತಿಚಿತ್ರಗಳು :

ಕಲ್ಯಾಣಮಂಟಪಕ್ಕೆ ಹೋಗುವ ಮಾರ್ಗದ ಎಡಗಡೆ ಹಾಗೂ ಮಂಟಪದ ಮುಕ್ಕಾಲು ಭಾಗದ ಸುತ್ತ ಗೋಡೆಗೆ ಕ್ಯಾನ್‌ವಾಸ್ ಅಂಟಿಸಿ ತೈಲವರ್ಣಗಳಿಂದ ದಸರಾ ಮೆರವಣಿಗೆಯ ಸರಣಿ ಭಿತ್ತಿ ಚಿತ್ರಗಳನ್ನು ರಚಿಸಿದ್ದಾರೆ. ಕ್ಯಾನ್‌ವಾಸ್ ಎಂದರೆ ಚಿತ್ರಪಟ ಎಂದರ್ಥ. ತೈಲಚಿತ್ರ ರಚಿಸಲು ಕ್ಯಾನ್ವಾಸ್‌ನ್ನು ಉಪಯೋಗಿಸುತ್ತಾರೆ ಇವುಗಳ ಮೇಲ್ಮೈ ಒರಟು ಮತ್ತು ಮೃದುವಾಗಿಯೂ ಇರುತ್ತದೆ. ಮರವಜ್ರ, ಚಾಕ್‌ಪೌಡರ್, ಲಿನ್‌ಸಿಡ್ ಆಯಿಲ್ ಬಳಸುತ್ತಾರೆ. ಸಮಾರಾಂಗಣ ಸೂತ್ರಧಾರದಲ್ಲಿ ರೇಷ್ಮೆ ಬಟ್ಟೆಯಿಂದ ಕ್ಯಾನ್‌ವಾಸ್ ತಯಾರಿಸುವ ವಿಧಾನ ತಿಳಿಸಿದ್ದಾರೆ. ಇಲ್ಲಿನ ಭಿತ್ತಿ ಚಿತ್ರವು ಅರಮನೆಯಿಂದ ಪ್ರಾರಂಭಗೊಂಡು ಸಾಗುವ ಚಿತ್ರವೇ ಮೊದಲು ನಂತರ ಮುಖ್ಯ ರಸ್ತೆಗಳಾದ ಅಶೋಕ ರಸ್ತೆ, ಬನ್ನಿಮಂಟಪಕ್ಕೆ ಹೋಗುವ ರಸ್ತೆ, ಬೆಂಗಳೂರು ರಸ್ತೆ, ಇರನಗೆರೆ ಕೋಟೆಗಡಿ, ಜೊತೆಗೆ ಅನೇಕ ಗಣ್ಯರ ಮುಂದೆ ಸಾಗುತ್ತಿರುವ ದೃಶ್ಯಗಳು ಮತ್ತು ಚರ್ಚಿನ ಮುಂದೆ ಹೋಗುತ್ತಿರುವ ಚಿತ್ರಗಳನ್ನು ಛಾಯಾಚಿತ್ರಗಳ ಆಧಾರದಲ್ಲಿ ೧೯೩೪ ರಿಂದ ೧೯೪೫ ನಡುವಿನಲ್ಲಿ ಈ ಭಿತ್ತಿ ಚಿತ್ರಗಳನ್ನು ರಚಿಸಿದ್ದಾರೆ.

ಮತ್ತೊಂದು ವಿಶೇಷವೆಂದರೆ ಕಲಾಕೃತಿಗಳ ಒಳಗಿರುವ ವ್ಯಕ್ತಿಗಳ ಹೆಸರುಗಳನ್ನು ಗುರುತಿಸಬಹುದು. ಜೊತೆಗೆ ಶೀರ್ಷಿಕೆಯನ್ನು ಕೆಳಗೆ ನಮೂದಿಸಿದ್ದಾರೆ. ಈ ಭಿತ್ತಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು

ಅವರ ಜಂಬೂಸವಾರಿ, ಸರದಾರರ ಗದ್ದುಗೆಯ ವಾಹನ ಸಾರೋಟು ಮತ್ತು ಪ್ರಥಮ ಚಿಕಿತ್ಸೆ ವಾಹನ, ಸಾರೋಟು ಮತ್ತು ರಥವನ್ನು ಆನೆ ಮತ್ತು ಬೆಳ್ಳಿಯ ರಥ, ಮಹಾರಾಜರ ಅಂಗರಕ್ಷಕ ಪಡೆಗಳು ರಾವುತ ದಳದ ಪತಾಕೆಗಳು, ಮಹಾರಾಜರ ಅಂಗರಕ್ಷಕ ಪಡೆಗಳು ಹಾಗೇ ಕರ್ನಾಟಕ ವಾದ್ಯತಂಡ, ಪಟ್ಟದ ಆನೆ, ಕುದುರೆ ಮತ್ತು ಪಲ್ಲಕ್ಕಿ ತುದಿಗೂಲಿನಿಂದ ಕೂಡಿದ ಸ್ಕಾಟಿಷ್‌ವಾದ್ಯ ವೃಂದ, ಮತ್ತು ನಿಶಾಲೆ ಒಂಟೆ, ನಗಾರಿ ಮತ್ತು ವಾದ್ಯಸಮೂಹ, ಸೇಂಟ್ ಫಿಲೋಮಿನಾ ಚರ್ಚಿನ ಮುಂದೆ ಸಾಗುತ್ತಿರುವ ದಸರಾ ಮೆರವಣಿಗೆ, ಮೈಸೂರು ಕಾಲ್ದಳದ ಮೂರನೇ ತುಕಡಿ, ದಸರಾ ಮೆರವಣಿಗೆಯ ಆನೆಯ ಮೇಲೆ ಕುಳಿತಿರುವುದು ವಿಶೇಷವೆನಿಸುತ್ತದೆ.

ಚಿತ್ರ–೪ :

ಮೆರವಣಿಗೆಯ ದೃಶ್ಯ :

ಇದು ಕೂಡ ಮೆರವಣಿಗೆಯ ಚಿತ್ರವಾಗಿದ್ದು, ಮೇಲಿನ ಚಿತ್ರವನ್ನೇ ಯಥಾ ರೀತಿಯಲ್ಲಿದ್ದು, ತೀರಾ ಇತ್ತೀಚೆಗೆ ರಚನೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಾಯಿತು.

ಚಿತ್ರ–೫ :

ಚಾಮುಂಡೇಶ್ವರಿ ದೇವಿಯ ಭಿತ್ತಿಚಿತ್ರ :

ಈ ಚಿತ್ರವು ದರ್ಬಾರ್ ಹಾಲ್ ಮೇಲ್ಭಾವಣಿಯ ಮೇಲೆ ದೊಡ್ಡದಾಗಿ ಸಂಯೋಜನೆಯಾಗಿ ರುತ್ತದೆ. ವೃತ್ತಾಕಾರದ ಹೂವಿನ ಒಳಗೆ ಈ ಚಿತ್ರವನ್ನು ಚಿತ್ರಿಸಿದ್ದಾರೆ. ಇದರ ಜೊತೆಗೆ ಇನ್ನೂ ಅನೇಕ ದೇವರ ಚಿತ್ರಗಳನ್ನು ರಚಿಸಲಾಗಿದೆ. ಬ್ರಹ್ಮದೇವ, ಶಿವಪಾರ್ವತಿ, ಲಕ್ಷ್ಮೀನಾರಾಯಣನ ಚಿತ್ರಗಳನ್ನು ಬಿಡಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ಕಂಡುಬರುವ ಚಾಮುಂಡೇಶ್ವರಿ ದೇವಿಯ ಚಿತ್ರವು ದೊಡ್ಡಗಾತ್ರದ ಸಿಂಹದ ಮೇಲೆ ಪೀಠವಿದ್ದು ಅದರ ಮೇಲೆ ಈ ದೇವಿಯು ಕುಳಿತಿದ್ದಾಳೆ. ಎಂಟು ಕೈಗಳನ್ನು ಹೊಂದಿರುತ್ತಾರೆ. ಪ್ರತಿ ಕೈಯಲ್ಲಿ ಆಯುಧವಿದೆ. ಎಡಭಾಗದ ಮೇಲಿನ ಕೈಯಲ್ಲಿ ಗುರಾಣಿ, ಕತ್ತಿ, ಶಂಖ, ಅಗ್ನಿಯನ್ನು ಹಿಡಿದಿರುತ್ತಾಳೆ. ಬಲಭಾಗದ ಕೈಗಳಲ್ಲಿ ಖಡ್ಗ, ಚಕ್ರ, ತ್ರಿಶೂಲ, ಬಾಣವಿದೆ. ದೇವಿಯನ್ನು ಸಾಧಾರಣವಾಗಿ ನೈಜತೆ ಇರುವಂತೆ ಚಿತ್ರಿಸಲಾಗಿದೆ. ತಲೆಗೆ ಕಿರೀಟ, ಕೊರಳಿಗೆ ಮಣಿಸರವಿದ್ದು ನೀಲಿ ರವಿಕೆ, ತಿಳಿಕೆಂಪು ವರ್ಣದ ಸೀರೆ ಉಟ್ಟಿರುತ್ತಾಳೆ. ವರ್ಣಲೇಪನವು ವಿಶೇಷವಾಗಿ ನಡೆದಿದೆ ಎಂಬುದನ್ನು ನೋಡಿದರೆ ಕಾಣುತ್ತದೆ.

ಈ ಚಿತ್ರದಲ್ಲಿ ಸಿಂಹವು ದೊಡ್ಡದಾಗಿ ತೋರಿಸಿದ್ದಾನೆ ಕಲಾವಿದನು. ದೇವಿಯ ವಾಹನವಾದ ಸಿಂಹವು ಕಂದು ಬಣ್ಣದಿಂದ ರಚಿಸಿದ್ದಾರೆ. ದೊಡ್ಡದೇಹವನ್ನು ಹೊಂದಿರುವ ಸಿಂಹವು ದೇವಿಯನ್ನು ತಿರುಗಿ ನೋಡುತ್ತಿರುವಂತೆ ಕಂಡುಬರುತ್ತದೆ. ಈ ಪ್ರಾಣಿಯು ಶಾಂತ ರೀತಿಯಿಂದ ಕುಳಿತಿರುವಂತೆ ರಚನೆ ಮಾಡಲಾಗಿದೆ. ಅದರ ಕೇಶವಿನ್ಯಾಸವು ಜಲಪಾತದಂತೆ ಇರುತ್ತದೆ. ಕೂದಲು ದಟ್ಟವಾಗಿದೆ. ಇಲ್ಲಿ ದೇವಿಗಿಂತ ಸಿಂಹವನ್ನೇ ದೊಡ್ಡದಾಗಿ ಚಿತ್ರಿಸಲಾಗಿರುವುದು ವಿಶೇಷವಾಗಿದೆ. ಹಿಂಬದಿಯಲ್ಲಿ

ಆಕಾಶದಂತೆ ತಿಳಿನೀಲಿ ವರ್ಣದಿಂದ ಲೇಪನ ಮಾಡಿದ್ದಾರೆ. ಸಿಂಹವು ಅಲಂಕಾರಿಕ ಹಸಿರು ಎಲೆಗಳ ಮೇಲೆ ಕುಳಿತಿರುವಂತೆ ಸುಂದರವಾಗಿ ಚಿತ್ರರಚನೆ ಮಾಡಿದ್ದಾರೆ. ಚಿಕ್ಕದಾದ ಪ್ರಭಾವಳಿಯನ್ನು ದೇವಿಯ ಹಿಂದೆ ಹಿನ್ನಲೆಯ ಮೇಲೆ ಚಿತ್ರಿಸಿ, ಅದರ ಮೇಲೆ ವ್ಯಾಲಿಚಿತ್ರಿಸಲಾಗಿದೆ. ಅದರ ಆಧಾರಕ್ಕೆ ಎರಡು ಅಲಂಕಾರಿಕದಿಂದ ತುಂಬಿದ ಕಂಬಗಳು ಇರುತ್ತದೆ. ವರ್ಣ ಸಂಯೋಜನೆಯಲ್ಲಿ ಯಾವುದೇ ನೆರಳು ಬೆಳಕು ಇಲ್ಲದೆ ವಸ್ತುವಿನ ದುಂಡುತನವನ್ನು ಮಾತ್ರ ಇಲ್ಲಿ ತೋರಿಸಲಾಗಿದೆ.

ಚಿತ್ರ–೬ :

ಅರಮನೆಯನ್ನು ವೀಕ್ಷಿಸುತ್ತಿರುವ ಪ್ರೇಕ್ಷಕರು :

ಇದೊಂದು ವಿಶೇಷವಾದ ಚಿತ್ರಕೃತಿಯಾಗಿದ್ದು, ಪ್ರತಿವರ್ಷ ನಡೆಯುವ ಅಂಬಾರಿಯನ್ನು ಲಕ್ಷಾಂತರ ಜನರು ವೀಕ್ಷಣೆ ಮಾಡೋದು ಸಹಜ, ಆದರೆ ಆನೆಯ ಅಂಬಾರಿಯನ್ನು ಸಾಕಷ್ಟು ಭಾರಿ ಚಿತ್ರಗಳನ್ನು ತೆಗೆದಿರುವುದನ್ನು ನೊಡಿದ್ದೇವೆ. ಆದರೆ ಅಂಬಾರಿಯನ್ನು ವೀಕ್ಷಣೆ ಮಾಡುವವರ ಚಿತ್ರಗಳನ್ನು ನೋಡಿರುವುದು ತುಂಬಾ ವಿರಳ. ಅಂತಹುಗಳಲ್ಲಿ ಈ ಚಿತ್ರವು ವಿಶೇಷವಾಗಿರುತ್ತದೆ. ಮನೆ ಮುಂದೆ ಮತ್ತು ಮನೆಯ ಮಹಡಿಯ ಮೇಲೆ ಮೆರವಣಿಗೆಯ ದೃಶ್ಯವನ್ನು ಹತ್ತಾರು ಜನ ವೀಕ್ಷಣೆ ಮಾಡುತ್ತಿರುವುದನ್ನು ಕಾಣಬಹುದು.

ಚಿತ್ರ–೭ :

ಸೆಂಟ್ ಫಿಲೋಮಿನಾ ಚರ್ಚ್ ಮುಂದೆ ಸಾಗುತ್ತಿರುವ ದಸರಾ ಮೆರವಣಿಗೆಯ ಚಿತ್ರ :

ಈ ಕಲಾಕೃತಿಯು ಸಹ ಕಲ್ಯಾಣ ಮಂಟಪದ ಎಡಭಾಗದಲ್ಲಿ ಗೋಡೆಯ ಮೇಲೆ ಚಿತ್ರರಚನೆ ಮಾಡಲಾಗಿದೆ. ಕಲಾಕೃತಿಯನ್ನು ಕಲಾವಿದ ವೈ.ನಾಗರಾಜು ಅವರು ರಚಿಸಿದ್ದಾರೆ. ಇವರು ರಾಜಾಶ್ರಯದ ಕಲಾವಿದರಾಗಿದ್ದಾರೆ. ೧೯ನೇ ಶತಮಾನದಲ್ಲಿ ಈ ಚಿತ್ರರಚನೆಯ ಕಾರ್ಯ ನಡೆದಿರುತ್ತದೆ. ಈ ಕಲಾಕೃತಿಯು ಅಂದಿನ ದಸರಾ ಮೆರವಣಿಗೆಯಲ್ಲಿ ಇದೊಂದು ಉತ್ತಮವಾದ ಕಲಾಕೃತಿಯಾಗಿದೆ. ಈ ದಸರಾ ಮೆರವಣಿಗೆಯು ಅಂದಿನ ರಾಜಬೀದಿಯಾದ ಅಶೋಕ ರಸ್ತೆಯಲ್ಲಿ ಸಾಗುತ್ತ ಚರ್ಚಿನ ಮುಂದೆಯಿಂದ ಸಾಗುತ್ತಿರುವಂತೆ ಚಿತ್ರವನ್ನು ರಚಿಸಿದ್ದಾರೆ. ಈ ಚಿತ್ರದಲ್ಲಿ ಅಶ್ವಧಳ ಸಾಗುತ್ತಿದೆ. ಅದರ ಜೊತೆಯಲ್ಲಿ ಕೆಂಪು ಮತ್ತು ಕಂದುಕೆಂಪು ವರ್ಣದ ಸಮವಸ್ತ್ರ ಧರಿಸಿದ ಸೈನಿಕರು ಕುದುರೆಯ ಮೇಲೆ ಶಿಸ್ತಿನಿಂದ ಸವಾರಿ ಮಾಡುತ್ತ ಮುಂದೆ ಸಾಗುತ್ತ ರಸ್ತೆಯಲ್ಲಿ ಚಲಿಸುತ್ತಿದ್ದಾರೆ. ಸೆಂಟ್ ಫಿಲೋಮಿನಾ ಚರ್ಚ್ ಹೊರಗಡೆ ಸಾಗುತ್ತಿರುವ ದಸರಾ ಮೆರವಣಿಗೆಯಲ್ಲಿ ಮಹಾರಾಜರನ್ನು ಗೌರವಿಸುವುದಕ್ಕಾಗಿ ಕಾದುನಿಂತಿರುವ ಕ್ರಿಶ್ಚಿಯನ್ ಬಾಂಧವರು ಚರ್ಚಿನ ಹೊರಗಡೆ ನಿಂತಿದ್ದಾರೆ. ಜೊತೆಗೆ ರಸ್ತೆಯ ಬದಿಯಲ್ಲಿ ಸಾರ್ವಜನಿಕರು ನಿಂತಿರುವ ಹಾಗೆ ಚಿತ್ರದೊಳಗೆ ಸಂಯೋಜಿಸಲಾಗಿದೆ. ಹಿನ್ನೆಲೆಯಲ್ಲಿ ಹಬ್ಬದ ವಾತಾವರಣಕ್ಕೆ ನಗರವು ಜನರೆಲ್ಲ ತುಂಬಿರುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯು ದೊಡ್ಡದಾಗಿದ್ದು ಕಲಾವಿದನು ತುಂಬ ತಾಳ್ಮೆ, ಶ್ರದ್ಧೆಯಿಂದ ರಚಿಸಿರುವುದು ಕಾಣಬಹುದಾಗಿದೆ. ಇದು ತೈಲವರ್ಣದ ಕಲಾಕೃತಿಯಾಗಿದೆ.

ವೈ.ಸುಬ್ರಹ್ಮಣ್ಯರಾಜು ಅವರು ಕಲಾವಿದರ ಕುಟುಂಬದಲ್ಲಿ ೧೯೦೭ರಲ್ಲಿ ಜನಿಸಿದರು. ಇವರು ಮುಂಬಯಿ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾಶಿಕ್ಷಣ ಪಡೆದು, ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯ ಪುನರುಜ್ಜೀವನ ಕಾರ್ಯದಲ್ಲಿ ಮಹತ್ತರ ಸೇವೆ. ಚಾಮರಾಜೇಂದ್ರ ಕಲಾ ಶಿಕ್ಷಣ ಸಂಸ್ಥೆಯಲ್ಲಿ ವೃತ್ತಿ. ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಹಲವಾರು ಬಾರಿ ಸ್ವರ್ಣಪದಕ ವಿಜೇತರು. ಮೈಸೂರು ಅರಮನೆಯ ಕಲ್ಯಾಣಮಂಟಪದಲ್ಲಿ ದಸರಾ ಮೆರವಣಿಗೆಯ ಭಿತ್ತಿಚಿತ್ರ ಚಿತ್ರರಚನೆ ಮಾಡಿದ್ದಾರೆ. ಇವರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ವೈ.ನಾಗರಾಜು, ಕಲಾಮಾರ್ಗದರ್ಶನ ದೊರಕಿದೆ. ಇವರು ರಿಯಾಲಿಸ್ಟಿಕ್, ಸಂಪ್ರದಾಯ ಕಲೆಗಳ ಎರಡರಲ್ಲಿಯೂ ಸಿದ್ಧಹಸ್ತರು.

ಚಿತ್ರ-೮ :

ಶ್ರೀರಾಮನು ಚಾಮುಂಡೇಶ್ವರಿದೇವಿಯನ್ನು ಪೂಜಿಸುತ್ತಿರುವ ತೈಲವರ್ಣದ ಭಿತ್ತಿಚಿತ್ರ :

ಈ ತೈಲವರ್ಣದ ಭಿತ್ತಿ ಚಿತ್ರವು ಅಂಬಾವಿಲಾಸ ಅರಮನೆಯ ಕಲ್ಯಾಣಮಂಟಪದಲ್ಲಿ ಇರುತ್ತದೆ. ಇದರ ಸಂಯೋಜನೆ ಶ್ರೇಷ್ಠತೆಯಿಂದ ಕೂಡಿದೆ ಆಕೃತಿಗಳಾಗಿರಬಹುದು, ವರ್ಣ, ವಸ್ತುಗಳೆ ಆಗಿದ್ದರೂ ತುಂಬ ಮನೋಜ್ಞವಾಗಿ ಸಂಯೋಜಿಸಿ ಚಿತ್ರಿಸಿದ್ದಾರೆ. ಈ ಚಿತ್ರವು ದೊಡ್ಡದಾಗಿ ಗೋಡೆಯ ಮೇಲೆ ಕ್ಯಾನ್‌ವಾಸ್ ಅಂಟಿಸಿ ರಿಯಾಲಿಸ್ಟಿಕ್ ಶೈಲಿಯಲ್ಲಿ ಧಾರ್ಮಿಕ ಕಲಾಕೃತಿಯನ್ನು ಇವರು ರಚಿಸಿದ್ದಾರೆ. ಆಕೃತಿಗಳನ್ನು ಸಂದರ್ಭ ತಕ್ಕಂತೆ ಚಲನೆಯಿಂದ ಕೂಡಿದೆ. ವೇಷಭೂಷಣ, ಪೂಜಾಸಡಗರದ ಜೊತೆಗೆ ಭಕ್ತಿ ಭಾವವು ಎಲ್ಲಾ ಕಡೆ ತುಂಬಿದಂತೆ ತೋರುತ್ತಿದೆ. ಯಥಾದರ್ಶನದ ಪ್ರಯೋಗವು ಅದ್ಭುತವಾಗಿದೆ.

ರಾಮನು ದೇವಿಯ ಪೂಜೆಯಲ್ಲಿ ತೊಡಗಿದ್ದು ಪಕ್ಕದಲ್ಲಿ ಹನುಮಂತ, ರಾಜಪರಿವಾರದವರು, ಋಷಿಮುನಿಗಳು, ಸೇವಕರು, ಬ್ರಾಹ್ಮಣರು ಸೇರಿ ಪೂಜಾಕಾರ್ಯವನ್ನು ಸಂಭ್ರಮ ಸಡಗರದಿಂದ ಎಲ್ಲರೂ ತೊಡಗಿದ್ದಾರೆ. ಈ ದೃಶ್ಯವನ್ನು ನೋಡುತ್ತಿದ್ದರೆ ಅರಮನೆಯ ಒಳಾಂಗಣದಲ್ಲಿ ರಚನೆಗೊಂಡ ಚಿತ್ರವೆನ್ನಬಹುದು. ಚಾಮುಂಡಿದೇವಿಯು ಸಿಂಹದ ಮೇಲೆ ಕುಳಿತಿರುವುದು ನೈಜತೆಯಿಂದ ರಚಿದ್ದಾರೆನ್ನಬಹುದು. ಈ ಶಿಲ್ಪದ ಹಿಂದೆ ಪ್ರಭಾವಳಿಯು ಇರುತ್ತದೆ. ಸೇವಕರು ಗಾಳಿ ಬೀಸುತ್ತಿದ್ದು, ಹಿನ್ನೆಲೆಯಲ್ಲಿ ವಾದ್ಯವನ್ನು ನುಡಿಸುತ್ತಿದ್ದು, ಹಲವು ಸ್ತ್ರೀಯರು ಕೈಮುಗಿದು ನಿಂತಿರುತ್ತಾರೆ. ಮನೆಯೊಳಗಿನ ಮೇಲು ಹಂತಸ್ತಿನಲ್ಲಿ ಇರುವಂತೆ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ವಿಶೇಷವಾಗಿ ಗಂಧರ್ವರು ಹೂವುಗಳನ್ನು ದೇವಿಯ ಮೇಲೆ ಗಾಳಿಯಲ್ಲಿ ತೇಲುತ್ತಾ ಪರಿಮಳದ ಹೂವುಗಳನ್ನು ಚೆಲ್ಲುತ್ತಿದ್ದಾರೆ. ಈ ಸಂಯೋಜನೆಯಲ್ಲಿ ಪಾಶ್ಚಿಮಾತ್ಯರ ಪ್ರೇರಣೆಯು ಕಂಡುಬರುತ್ತದೆ. ಕಲಾವಿದನ ಸಾಮರ್ಥ್ಯವು ಅಗಾಧವಾಗಿರುತ್ತದೆ. ಅದ್ಭುತವಾಗಿ ಚಿತ್ರ ಸಂಯೋಜನೆ ಮಾಡಿ ಆಕೃತಿಯ ನೈಜತೆಯ ಲಕ್ಷಣದಲ್ಲಿ ಚಿತ್ರಿಸುವಾಗ ಕಲಾವಿದನ ತಾಳ್ಮೆ ಹೆಚ್ಚಿನದು ಈ ಚಿತ್ರವನ್ನು ೧೯ನೇ ಶತಮಾನದಲ್ಲಿ ರಚಿಸಿರುತ್ತಾರೆ. ಈ ಕಲಾಕೃತಿಯು ವಿಶೇಷ ಕಲಾಕೃತಿಯಲ್ಲಿ ಒಂದು.

ಒಂದು ಶತಮಾನ ದಾಟಿದರು ವರ್ಣಮಾಸದಂತೆ ನೋಡಿಕೊಂಡಿದ್ದಾರೆ. ದಸರಾ ಮೆರವಣಿಗೆಯ ಚಿತ್ರದಲ್ಲಿ ಪ್ರಕೃತಿಯನ್ನು ಸೇರಿಸಿಕೊಂಡು ಚಿತ್ರವನ್ನು ಸಂಯೋಜಿಸಿ ದಸರಾ ಸಂದರ್ಭದ ಭಿತ್ತಿಚಿತ್ರಗಳನ್ನು ಚಿತ್ರಿಸಿ ಅವು ಅತ್ಯುತ್ತಮವಾದ ಕಲಾಕೃತಿಯಾಗಿದೆ. ಅಂದಿನ ಕಲಾಪೋಷಕಾರದ ರಾಜರ ಆಸಕ್ತಿಯಿಂದ ಕಲಾವಿದರು ತೈಲವರ್ಣವನ್ನು ಮತ್ತು ಪಾಶ್ಚಾತ್ಯರ ಕಲಾತಂತ್ರವನ್ನು ನಮ್ಮ ದೇಶೀಯ ಕಲಾವಸ್ತು ವಿಷಯದಲ್ಲಿ ದುಡಿಸಿಕೊಂಡರು. ಹೊರಗಿನಿಂದ ಬಂದ ಮಾಧ್ಯಮ ತಂತ್ರ, ಶೈಲಿಯನ್ನು ತನ್ನತನಕ್ಕೆ ದುಡಿಸಿಕೊಂಡಿದ್ದಾರೆ. ಇಲ್ಲಿನ ಸಂಸ್ಕೃತಿಗೆ ನೆರಳುಬೆಳಕಿನ ಸಂಯೋಜನೆಯು ಈ ಚಿತ್ರಗಳಲ್ಲಿ ಅತ್ಯುತ್ತಮವಾಗಿ ಸೆರೆಯಿಡಿದಿದ್ದಾರೆ. ಯಥಾದರ್ಶನದ ತಂತ್ರ ಈ ಚಿತ್ರಗಳಲ್ಲಿ ಎದ್ದು ಕಾಣುತ್ತದೆ.

೧೯ನೇ ಶತಮಾನದಲ್ಲಿ ನಡೆಯುತ್ತಿದ್ದ ಅಂದಿನ ದಸರಾ ವೈಭವವನ್ನು, ಪರಿಸರ, ಜನರ ಪರಿಸ್ಥಿತಿ, ಉಡುಗೆ-ತೊಡುಗೆಗಳ ಜೊತೆ ಸಂಭ್ರಮವನ್ನು ಅತಿಸೂಕ್ಷ್ಮವಾಗಿ, ರಾಜರ ಮೇಲಿನ ಗೌರವ ಭಕ್ತಿಯನ್ನು ವರ್ಣಚಿತ್ರಗಳಲ್ಲಿ ಹಿಡಿದಿಟ್ಟಿದ್ದಾರೆ. ಎಲ್ಲಾ ಮೆರವಣಿಗೆ ಪಟ್ಟದಲ್ಲೂ ರಾಜಗಾಂಭೀರ್ಯದಿಂದ ಕೂಡಿದ ಮೆರವಣಿಗೆ, ಚಾಮುಂಡಿಬೆಟ್ಟದ ಸಾಲು, ಸುಣ್ಣಬಣ್ಣದಿಂದ ಅಲಂಕರಿಸಿ ಸಿದ್ಧವಾಗಿ ನಿಂತಿರುವ ಕಟ್ಟಡ, ಮನೆ ದೇವಾಲಯಗಳು ಸ್ವಚ್ಛತೆಯಿಂದ ಕೂಡಿದ ರಸ್ತೆಗಳು, ನೀಲಿ ಆಕಾಶದಲ್ಲಿ ಬೆಳ್ಳಿಮೋಡಗಳು ಸಹ ಸಂಭ್ರಮ ಆಚರಿಸುವಂತೆ ಚಿತ್ರಿಸಿದ್ದಾರೆ. ಕಲಾಕೃತಿಗಳು ಕಲಾವಿದನ ಶ್ರದ್ಧೆ, ಕೌಶಲ್ಯ, ಆಕೃತಿಗಳಲ್ಲಿನ ಜೀವಂತಿಕೆಯ ಚೆಲುವು, ಭಾವನೆಗಳ ನಲಿದಾಟವನ್ನು ರಾಜಾಶ್ರಯದ ಕಲಾವಿದರು ರಾಜ್ಯದ ಶ್ರೀಮಂತಿಕೆಯನ್ನು ಅದ್ಭುತವಾಗಿ ಸೆರೆಯಿಡಿದ್ದಾರೆ. ನೋಡುವವರನ್ನು ಸಹ ಅಂದಿನ ರಸಗಳಿಗೆಯ ಸವಿಯನ್ನು ಇಂದು ಸಹ ಕಣ್ಣಿಗೆ ಕಟ್ಟುವಂತೆ ಹಾಗೂ ಮನಸ್ಸಿಗೆ ಹಿತಾನುಭವವನ್ನು ಉಣಬಡಿಸಿರುತ್ತಾರೆ.

ಈ ಎಲ್ಲಾ ಕಲಾಕೃತಿಗಳು ಅಮೋಘವಾಗಿದ್ದು ಕರ್ನಾಟಕದ ಬೇರೆ ಯಾವ ಮೂಲೆಯಲ್ಲೂ ಈ ಥರದ ಕಲಾಕೃತಿಗಳು ಕಾಣಸಿಗುವುದಿಲ್ಲ. ನೂರು ವರ್ಷ ಹತ್ತಿರ ಬರುತ್ತಿದ್ದರು. ಮಾಸದ ವರ್ಣ, ಕಲಾಕೃತಿಯಲ್ಲಿರುವ ಸೈನಿಕರ ಶಿಸ್ತು ಮತ್ತು ಗೋಡೆಯಲ್ಲಿ ಇದ್ದಂತಹ ಸ್ಥಳಾವಕಾಶದಲ್ಲಿ ಅದ್ಭುತವಾಗಿ ಸಂಯೋಜನೆಗೊಂಡಿರುವುದು ಕಲಾವಿದರಲ್ಲಿದ್ದ ಇದ್ದ ಜಾಣ್ಮೆ, ಕೌಶಲ್ಯವು ಉತ್ತಮ ಉದಾಹರಣೆಗೆ ಸಾಕ್ಷಿಯಾಗಿದೆ. ಇಲ್ಲಿನ ಸಂಪ್ರದಾಯ ಕಲಾವಿದರು, ಪಾಶ್ಚಾತ್ಯ ಕಲಾಪದ್ಧತಿಯನ್ನು ಪಳಗಿಸಿಕೊಂಡು ಉತ್ತಮವಾಗಿ ಭಿತ್ತಿಚಿತ್ರ ರಚನೆ ಮಾಡಿರುವುದನ್ನು ನೋಡಿದರೆ ಕಲಾವಿದರು ವರ್ಣ ಸಂಯೋಜನೆಯನ್ನು ಸಹ ತಂಪಾಗಿ ವಿವಿಧ ವರ್ಣಗಳನ್ನು ದುಡಿಸಿಕೊಂಡಿರುವ ರೀತಿ, ಮಾಧ್ಯಮಗಳ ಮತ್ತು ಪರಿಕರಗಳ ವೈವಿಧ್ಯತೆಯ ಸವಾಲನ್ನು ಸರಿಯಾಗಿ ನಿರ್ವಹಿಸಿದ್ದಾರೆ. ಆಕೃತಿಯಲ್ಲಿ ನೆರಳು ಬೆಳಕಿನ ಆಟ, ಯಥಾದರ್ಶನದ ಅರಿವು, ನಾಲ್ವಡಿ ಕೃಷ್ಣರಾಜ ಒಡೆಯರು ಅರಮನೆಗಳನ್ನು ವರ್ಣ ಶೃಂಗಾರದಲ್ಲಿ ತುಂಬುವ ಆಸಕ್ತಿ ವಹಿಸಿದ್ದರ ಫಲವಾಗಿದೆ.

ಜಗನ್ಮೋಹನ ಚಿತ್ರಶಾಲೆ ಮೇಲುಗಡೆ ಕೋಣೆಯೊಂದರಲ್ಲಿ ಸಹ ಗೋಡೆಗೆ ಕ್ಯಾನ್‌ವಾಸ್ ಅಂಟಿಸಿ ಅಲಂಕಾರಿಕ ನಕ್ಷೆಗಳನ್ನು ಹಾಗೂ ವೃತ್ತಾಕಾರದೊಳಗೆ ಗಣೇಶನಚಿತ್ರ, ಗಿಣಿ, ಹಂಸ, ಹೂಬಳ್ಳಿ ಸಾಲುಗಳನ್ನು ಚಿತ್ರಿಸಿದ್ದಾರೆ. ಇದರ ಹಿನ್ನೆಲೆಯೂ ಹಳದಿ ವರ್ಣವೇ ಪ್ರಧಾನವಾಗಿದ್ದು ಹಸಿರು, ಕೆಂಪು ವರ್ಣಗಳಿಂದ ಹೂ ಬಳ್ಳಿಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

ನೂರಾರು ವರ್ಷಗಳು ಕಳೆದರೂ ಕುಂದದ ವರ್ಣಗಳು ದೇಶಿಯ ಕಲಾವಿದರ ಶ್ರಮದ ಫಲವಾಗಿದೆ, ಸಂಯೋಜನೆಯು ಅವರ ಸಾಮರ್ಥ್ಯವು ಸರಿಸಾಟಿಯಲ್ಲದ ಕೊಡುಗೆಯಾಗಿದೆ. ಮತ್ತು ಭಿತ್ತಿ ಚಿತ್ರಕಲೆಯನ್ನು ನೋಡುವವರಿಗೆ ಭಕ್ತಿಭಾವ ಮೂಡಿಸುವ ಅವರ ಗುರಿಯನ್ನು ಮೆಚ್ಚುವಂತಹದಾಗಿದೆ. ಇಲ್ಲಿನ ಅರಸರ ಅರಮನೆಗಳಲ್ಲದೆ ಅನೇಕ ದೇವಾಲಯಗಳಲ್ಲಿ ವಿಷ್ಣುವಿನ ಅವತಾರವಾದ ಕೃಷ್ಣಬಾಲಲೀಲೆ, ಭಾಗವತ, ಪುರಾಣಗಳು, ರಾಮಾಯಣ, ಮಹಾಭಾರತ ಮತ್ತು ಶಿವನಿಗೆ ಸಂಬಂಧಪಟ್ಟಂತಹ ಹಾಗೂ ಅರಸರ ಮೆಚ್ಚುಗೆಯ ದೇವರು ಆದಂತಹ ವಿಷ್ಣು ಮತ್ತು ಕೃಷ್ಣನ ಸಂಬಂಧಪಟ್ಟಂತಹ ಭಿತ್ತಿ ಚಿತ್ರಗಳು ಹೇರಳವಾಗಿ ಅರಮನೆಯ ಆವರಣದ ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿ

೧. ಜಯಂತ್ ಚಕ್ರವರ್ತಿ : ಟೆಕ್ನಿಕ್ ಇನ್ ಇಂಡಿಯನ್ ಮ್ಯುರಲ್ ಪೇಂಟಿಂಗ್ಸ್, ಪುಟ-೦೨

೨. ಡೇವಿಡ್ ಕ್ರಿಸ್ಟಲ್ : ದಿ ಕ್ಯಾಂಬ್ರಿಜ್ ಎನ್‌ಸೈಕ್ಲೋಪಿಡಿಯಾ ಪುಟ.-೮೨೨

೩. ದಿ ಆಕ್ಸ್‌ಫರ್ಡ್ ಇಂಗ್ಲೀಷ್ ಡಿಕ್ಷನರಿ : ವ್ಯಾಲ್ಯುಮ್ ೧೦ ಪುಟ-೧೦೬

೪. ವೆಬ್‌ಸ್ಟರ್ಸ್ ನ್ಯೂ ವರ್ಲ್ಡ್ ಎನ್‌ಸೈಕ್ಲೋಪಿಡಿಯಾ : ಪುಟ-೭೭೨

೫. ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ : ಭಾಗ-೮ ಪುಟ-೪೨೫

೬. ಡಾ.ಚಂದ್ರಶೇಖರ ಕಂಬಾರ (ಸಂ.) ಜನಪದ ವಿಶ್ವಕೋಶ – ಭಾಗ-೨ ಪುಟ೨೫೨

೭. ಜಯಂತ್ ಚಕ್ರವರ್ತಿ : ಟೆಕ್ನಿಕ್ ಇನ್ ಇಂಡಿಯನ್ ಮ್ಯುರಲ್ ಪೇಂಟಿಂಗ್ಸ್, ಪುಟ-೨೦

೮. ಡಾ.ಪಿ.ವ್ಹಿ.ನಾರಾಯಣ : ವಚನ ಸಾಹಿತ್ಯ – ಒಂದು ಅಧ್ಯಯನ ಪುಟ-೩೧೯

೯. ಡಾ.ಎಸ್.ಸಿ.ಪಾಟೀಲ : ಕರ್ನಾಟಕದ ಜಾನಪದ ಚಿತ್ರಕಲೆ-೪,

೧೦. ಡಾ.ಅ.ಲ.ನರಸಿಂಹನ್:ಕರ್ನಾಟಕ ಭಿತ್ತಿಚಿತ್ರ ಪರಂಪರೆ: ಪು.ಸಂ.೧೧೬

೧೧. ವಜೀರಬಾಷ ಮ.ಬಾಗಾಯತ: ಕರ್ನಾಟಕದ ಮು ಅರಸರ ಕಾಲದ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮ ಪ್ರ, ಕವಿವಿಹಂಪಿ ಪು.ಸ,೧೩೯

೧೨. ಅದೇ: ೧೫೩

೧೩. ಡಾ.ಎಚ್.ಪಿ.ಶಶಿಧರ ಮೂರ್ತಿ, ಟಿಪ್ಪುಸುಲ್ತಾನ ಅರಮನೆ, ಬೆಂಗಳೂರು,ಬೆಂಗಳೂರು ದರ್ಶನ

೧೪. ಹೇಮಂತಕುಮಾರ.ಎಂ, ಮೈಸೂರು ಜಿಲ್ಲೆಯ ಚಿತ್ರಕಲೆ, ಎಂಫಿಲ್.ಸಂಪ್ರಬಂಧ,ಕವಿವಿಹಂಪಿ,೨೦೧೨

ಅಧ್ಯಾಯ : ೪

ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿ ಭಿತ್ತಿ ಚಿತ್ರಕಲೆ

ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ



ಚಿತ್ರ–೧



ಚಿತ್ರ–೨

ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ



ಚಿತ್ರ–೩




ಚಿತ್ರ–೪

ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ



ಚಿತ್ರ-೫



ಚಿತ್ರ-೬

ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ



ಚಿತ್ರ-೭



ಚಿತ್ರ-೮

ನಾಲ್ಕುನಾಡು ಅರಮನೆ,ಕೊಡಗು



ಚಿತ್ರ-೧



ಚಿತ್ರ-೨

ನಾಲ್ಕುನಾಡು ಅರಮನೆ,ಕೊಡಗು



ಚಿತ್ರ–೩



ಚಿತ್ರ–೪

ಟಿಪ್ಪು ಅರಮನೆ,ಬೆಂಗಳೂರು



ಚಿತ್ರ–೧



ಚಿತ್ರ–೨

ಟಿಪ್ಪು ಅರಮನೆ,ಬೆಂಗಳೂರು



ಚಿತ್ರ-೩



ಚಿತ್ರ-೪

ಟಿಪ್ಪು ಅರಮನೆ,ಬೆಂಗಳೂರು



ಚಿತ್ರ-೫



ಚಿತ್ರ-೬

ಮೈಸೂರು ಅರಮನೆ,ಮೈಸೂರು



ಚಿತ್ರ-೧



ಚಿತ್ರ-೨

ಮೈಸೂರು ಅರಮನೆ,ಅರಮನೆ



ಚಿತ್ರ-೩



ಚಿತ್ರ-೪

ಮೈಸೂರು ಅರಮನೆ,ಮೈಸೂರು



ಚಿತ್ರ-೫



ಚಿತ್ರ-೬

ಮೈಸೂರು ಅರಮನೆ,ಅರಮನೆ



ಚಿತ್ರ-೭



ಚಿತ್ರ-೮

ಅಧ್ಯಾಯ–ನಾಲ್ಕು

ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿರುವ ಭಿತ್ತಿ ಚಿತ್ರಕಲೆ

ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳಿಗೆ ಮಹತ್ವದ ಸ್ಥಾನಮಾನವಿದೆ.[೧] ಭಾರತದಾದ್ಯಂತ ಮಾತ್ರವಲ್ಲದೆ ಕರ್ನಾಟಕದ ಉದ್ದಗಲಕ್ಕೂ ಅನೇಕ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿರುವುದನ್ನು ಕಾಣಬಹುದು. ಭಿತ್ತಿ ಚಿತ್ರಗಳ ನೆಲೆಗಳನ್ನು ಪರಿಶೀಲಿಸಿದಾಗ ಅತಿ ಹೆಚ್ಚಿನ ಭಿತ್ತಿ ಚಿತ್ರಗಳು ದೇವಾಲಯಗಳಲ್ಲಿ ರಚನೆಯಾಗಿರುವುದು ಕಂಡುಬರುತ್ತದೆ. ಈ ಮಾತು ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಿಗೂ ಅನ್ವಯಿಸುತ್ತದೆ. ಭಾರತೀಯರು ಕಲೆ ಮತ್ತು ಧರ್ಮಗಳನ್ನು ಸಮನ್ವಯಗೊಳಿಸಿಕೊಂಡು ತಮ್ಮ ಆಂತರಿಕ ಮತ್ತು ಬಾಹ್ಯ ಬದುಕುಗಳನ್ನು ಅಭಿವೃದ್ಧಿಪಡಿಸಿಕೊಂಡಿರುವುದು ಕಂಡುಬರುತ್ತದೆ. ಹಾಗಾಗಿ ಧರ್ಮ ಮೂಲವಾದ ದೇವಾಲಯಗಳಲ್ಲಿ ಸಾಂಸ್ಕೃತಿಕ ಮೂಲವಾದ ಚಿತ್ರಕಲೆಯನ್ನು ಹೆಚ್ಚಾಗಿ ರೂಪಿಸಿ ಜನರ, ನಾಗರಿಕರ ಬದುಕನ್ನು ಮೌಲ್ಯಯುತವಾಗಿ ಮಾಡಿರುವುದು ಕಂಡುಬರುತ್ತದೆ. ದೇವಾಲಯಗಳು ಒಂದು ದೃಷ್ಟಿಯಿಂದ ಪ್ರಾಚೀನ ಚಿತ್ರಕಲೆಯನ್ನು ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ಉಳಿಸಿಕೊಟ್ಟಿರುವ ಅಮೂಲ್ಯ ಅಂಶಗಳೆಂದರೂ ತಪ್ಪಿಲ್ಲ. ಈ ಹಿನ್ನಲೆಯಲ್ಲಿ ದಕ್ಷಿಣ ಕರ್ನಾಟಕದ ದೇವಾಲಯ ಭಿತ್ತಿ ಚಿತ್ರಗಳನ್ನು ಸ್ಥೂಲವಾಗಿ ಗಮನಿಸಲಾಗುವುದು. ಈ ಭಾಗದಲ್ಲಿ ಭಿತ್ತಿ ಚಿತ್ರಗಳು ರಚನೆಗೊಂಡ ಪ್ರಮುಖ ದೇವಾಲಯಗಳು ಕೆಳಗಿನಂತಿವೆ. ಇತರ ಕಲೆಗಳಂತೆ ಭಾರತೀಯ ಚಿತ್ರಕಲೆಯೂ ಸಹ ಬಹು ಪ್ರಾಚೀನ ಕಾಲದಿಂದಲೂ ಮನುಷ್ಯನ ಸಂಗಾತಿಯಾಗಿ ಬೆಳೆದುಬಂದಿದೆ.

ಭಾರತೀಯ ಮನೋಧರ್ಮ ಇತರ ಕಲೆಗಳಿಗೆ ಹೇಳಿದಂತೆ ಚಿತ್ರಕಲೆಗೂ ದೈವಿಕವಾದ ಮೂಲವನ್ನೇ ಕೊಟ್ಟಿದೆ. ಅದೇರೀತಿ ಇತರ ಕಲೆಗಳಲ್ಲಿರುವಂತೆ ಚಿತ್ರಕಲೆಯಲ್ಲಿಯೂ ಕರ್ನಾಟಕದ ಸಾಧನೆ ಅದ್ಭುತವಾದದ್ದು. ಭರತ ಖಂಡದ ಚಿತ್ರಪರಂಪರೆಯಲ್ಲಿ ಬಹುಪ್ರಾಚೀನವೂ ಮತ್ತು

ಶಿಖರಪ್ರಾಯವೂ ಆದ ಅಜಂತಾದ ಭಿತ್ತಿ ಚಿತ್ರಕಲೆಯ ಮುಂದುವರಿದ ಭಾಗ, ಕರ್ನಾಟಕದ ರಾಜರ ಸಾಧನೆಯ ಫಲವಾಗಿ ರೂಪಿತವಾದದ್ದು[೨] ಹಾಗೇ ಮುಂದುವರಿದು ಕರ್ನಾಟಕದಲ್ಲಿಯೂ ಭಿತ್ತಿ ಚಿತ್ರಗಳ ಸದ್ದು ಕೇಳಿಸಿದ್ದು ಬದಾಮಿಯ ಗುಹೆಗಳಲ್ಲಿ. ಅಲ್ಲಿಂದ ಪ್ರಾರಂಭವಾದ ಭಿತ್ತಿ ಚಿತ್ರಗಳು ಮುಂದುವರಿದು ಕರ್ನಾಟಕದ ತುಂಬೇಲ್ಲಾ ಹರಡಿಕೊಂಡಿವೆ. ಮುಖ್ಯವಾಗಿ ಈ ಅಧ್ಯಯನದ ಭಾಗವಾಗಿ ದಕ್ಷಿಣ ಕರ್ನಾಟಕ ಭಾಗದಲ್ಲಿನ ದೇವಾಲಯದಲ್ಲಿ ಸಿಗುವ ಭಿತ್ತಿ ಚಿತ್ರಗಳನ್ನು ಇಲ್ಲಿ ವಿಮರ್ಶಿಸಲಾಗಿದೆ.

ಶ್ರೀರಾಮ ದೇವಾಲಯ, ಬುಜರಕಂಚನ ಹಳ್ಳಿ, ನರಸಿಂಹಸ್ವಾಮಿ ದೇವಾಲಯ, ಸಿಬಿ, ತೇರುಮಲ್ಲೇಶ್ವರ ದೇವಾಲಯ, ಹಿರಿಯೂರು, ಶ್ರೀಸೌಮ್ಯಕೇಶವ ದೇವಾಲಯ, ನಾಗಮಂಗಲ, ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ಮೈಸೂರು, ಶ್ವೇತಾವರಹಸ್ವಾಮಿ ದೇವಾಲಯ, ಮೈಸೂರು, ಅಂಬುಜವಲ್ಲಿ, ಶ್ರೀಪ್ರಸನ್ನವೆಂಕಟರಮಣ ದೇವಾಲಯ, ಮೈಸೂರು, ಶ್ರೀಲಕ್ಷ್ಮೀ ಮತ್ತು ಪಟಲದಮ್ಮ ದೇವಾಲಯ, ಅಮೃತೂರು, ಶ್ರೀಶಂಕರೇಶ್ವರ ದೇವಾಲಯ, ಕೆರೆಗೋಡು, ಶ್ರೀರಂಗನಾಥ ದೇವಾಲಯ, ರಂಗಾಪುರ, ಶ್ರೀಸಿದ್ದೇಶ್ವರ ದೇವಾಲಯ, ಎಡೆಯೂರು, ಈ ದೇವಾಲಯಗಳಲ್ಲಿ ರಚನೆಗೊಂಡಿರುವ ಭಿತ್ತಿ ಚಿತ್ರಗಳನ್ನು ಮೇಲಿನಂತೆ ವರ್ಗೀಕರಿಸಿಕೊಳ್ಳಲಾಗಿದ್ದು, ಆಯಾ ದೇವಾಲಯದ ಚಿತ್ರಗಳ ವಸ್ತು ವಿಷಯಗಳನ್ನು ಸ್ಥೂಲವಾಗಿ ಕೆಳಗಿನಂತೆ ವಿವೇಚಿಸಲಾಗಿರುತ್ತದೆ.

ಬುಜರಕಂಚನ ಹಳ್ಳಿ :

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿಗೆ ಸೇರಿದ ಬುಜರ ಕಂಚನಹಳ್ಳಿಯು ಹಳಿಯಾಳದಿಂದ ೩ ಕಿ.ಮೀ.ಗಳ ಅಂತರದಲ್ಲಿದೆ. ಈ ಗ್ರಾಮದ ಹೊರವಲಯದಲ್ಲಿರುವ ಶ್ರೀರಾಮಮಂದಿರದಲ್ಲಿ ವರ್ಣ ಭಿತ್ತಿ ಚಿತ್ರಗಳು ಕಮಡುಬಂದಿವೆ. ಈ ದೇವಾಲಯವು ಬಯಲು ನಾಡಿನ ಕಲ್ಲಿನಲ್ಲಿ ನಿರ್ಮಿಸಿದ ದೇವಾಲಯಗಳ ಮಾದರಿಯಲ್ಲಿರದೇ ಮಲೆನಾಡ ಭಾಗದ ಕಪ್ಪು ಹಂಚುಗಳನ್ನು ಹೊದಿಸಿದ ಕಟ್ಟಡವಾಗಿದೆ. ದೇವಾಲಯವು ಚಚ್ಚೌಕವಾದ ತಳಪಾಯದ ಮೇಲೆ ನಿರ್ಮಿಸಿದ್ದು, ಪ್ರತಿಯೊಂದು ಬದಿಯ ಅಳತೆ ೨೦ ಘೂಟುಗಳಾಗಿದೆ. ನಾಲ್ಕೂ ದಿಕ್ಕಿಗೆ ಪ್ರತಿಯೊಂದು ದಿಕ್ಕಿನಲ್ಲಿ ೮ ಕಂಬಗಳಂತೆ ೩೨ ಕಟ್ಟಿಗೆಯ ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಮೇಲ್ಚಾವಣಿ ಹೊದಿಸಲಾಗಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವನ್ನು ನಿರ್ಮಿಸಿದ್ದು ಈ ಪ್ರದಕ್ಷಿಣಾಪಥಕ್ಕೆ ಎತ್ತರವಾದ ಕಟ್ಟೆ ಇದೆ. ಚಿತ್ರಗಳನ್ನು ನೋಡುತ್ತಾ ಸಾಗಲು ಅನುಕೂಲ ಕಲ್ಪಿಸಿದ್ದಾರೆ. ದೇವಾಲಯದ ನಾಲ್ಕೂ ಬದಿಯ ಹೊರಗೋಡೆಗಳು. ಒಳಭಾಗದ ಗೋಡೆಗಳು. ಛಾವಣಿಗೆ ಹೊಂದಿಕೊಂಡಿರುವ ಮರದ ತೊಲೆಗಳು. ಬಾಗಿಲ ಮೇಲಿನ ಮರದ ಫಲಕಗಳು. ಬಾಗಿಲ ತೋಳುಗಳಲ್ಲಿ ಚಿತ್ರಗಳಿವೆ. ಅಲ್ಲದೇ ಮೇಲ್ಚಾವಣಿಗೆ ಹೊಂದಿಕೊಂಡಿರುವಂತೆ ಸುತ್ತಲೂ ಮಣ್ಣಿನ ಆಸರೆ ಗೋಡೆ ಕಟ್ಟಲಾಗಿದ್ದು ಅದರ ಮೇಲೆಯೂ ಚಿತ್ರಗಳನ್ನು ರಚನೆ ಮಾಡಲಾಗಿದೆ. ಮುಖ್ಯವಾಗಿ ರಾಮಾಯಣ ಕಥೆಗೆ ಸಂಬಂಧಿಸಿದ ಚಿತ್ರಗಳಿದ್ದರೂ ಅಲ್ಲಲ್ಲಿ ಇತರ ವಿಷಯಗಳ ಚಿತ್ರಗಳು ರಚನೆಯಾಗಿವೆ.

ಈ ಅಪರೂಪದ ದೇವಾಲಯದ ವರ್ಣಚಿತ್ರಗಳ ಬಗ್ಗೆ ಮೊದಲು ಶೋಧಿಸಿ ಅಧ್ಯಯನ ಮಾಡಿದವರು ಡಾ.ಎಸ್.ಸಿ.ಪಾಟೀಲ[೩] ಅವರು ಇಲ್ಲಿಯ ಭಿತ್ತಿ ಚಿತ್ರಗಳ ಕಾಲಮಾನದ ಬಗ್ಗೆ ವಿವರಿಸುತ್ತಾ ಭಿತ್ತಿ ಚಿತ್ರಗಳನ್ನು ತೌಲನಿಕವಾಗಿ ವಿಶ್ಲೇಷಿಸಿರುತ್ತಾರೆ ಮತ್ತು ವಿಜಯನಗರೋತ್ತರ ಕಾಲದಿಂದ ಹದಿನೆಂಟನೆಯ ಶತಮಾನಕ್ಕೆ ಸೇರಿದ ಜನಪದ ಮತ್ತು ಶಿಷ್ಟಪದ ಶೈಲಿಗಳ ಅಪೂರ್ವ ಸಂಗಮದ ಭಿತ್ತಿಚಿತ್ರಗಳು ಇಲ್ಲಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವೆನಿಸುವ ಭಿತ್ತಿ ಚಿತ್ರಗಳನ್ನು ಇಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ.

೧. ಮಹಿಷಾಸುರಮರ್ಧಿನಿ :

ಈ ಚಿತ್ರದಲ್ಲಿ ದೇವಿಯು ಮಹಿಷಾಸುರನನ್ನು ಸಂಹರಿಸುತ್ತಿರುವಂತೆ ಚಿತ್ರಿಸಿದೆ. ಮಹಿಷರೂಪಿಯಾದ ದಾನವನನ್ನು ಕಾಲಲ್ಲಿ ಮೆಟ್ಟಿ ನಿಂತ ದೇವಿಯು ಒಂದು ಕೈಯಿಂದ ಆತನ ಜುಟ್ಟು ಹಿಡಿದು, ಈಟಿಯಿಂದ ತಿವಿದು ಕೊಲ್ಲುತ್ತಿದ್ದಾಳೆ. ರಾಕ್ಷಸನ ಮಹಿಷಮುಖವು ತುಂಡಾಗಿ ದೂರ ಬಿದ್ದಿದ್ದು. ಅದರಿಂದ ರಕ್ತ ತೊಟ್ಟಿಕ್ಕುತ್ತಿದೆ. ಹತ್ತು ಕೈಗಳನ್ನು ಹೊಂದಿದ ದೇವಿಯ ಕೈಗಳಲ್ಲಿ ಶಂಖ, ಚಕ್ರ, ತ್ರಿಶೂಲ, ಖಡ್ಗ, ಈಟಿ ಹೀಗೆ ವಿವಿಧ ಆಯುಧಗಳಿವೆ. ಕಿರೀಟವು ಭುಜದವರೆಗೂ ವ್ಯಾಪಿಸಿದೆ. ಬಿಳಿ ಬಣ್ಣದ ಹಸಿರು ಚುಕ್ಕೆಗಳ ಹಳದಿ ದಡಿಯನ್ನು ಹೊಂದಿದ ಸೀರೆ ಉಟ್ಟಕೊಂಡ ದೇವಿ ಹಸಿರು ಕುಪ್ಪಸ ಧರಿಸಿದ್ದಾಳೆ. ಆದರೆ ಕುಪ್ಪಸದ ಹಸಿರು ವರ್ಣ ಕಿತ್ತು ಹೋಗಿದೆ. ದೇವಿಯ ಮೂಗಿನಲ್ಲಿರುವ ನತ್ತು ಮುಖದ ಸೌಂದರ್ಯವನ್ನು ಹೆಚ್ಚಿಸಿದ್ದರೂ ಆಕೆಗೆ ರಚಿಸಿರುವ ಕೋರೆ ಹಲ್ಲುಗಳು ಭೀಕರ ರೂಪವನ್ನು ಪ್ರತಿನಿಧಿಸುತ್ತವೆ. ದೇವಿಯ ಬಲಗಡೆಗೆ ಮಹಿಳೆಯೊಬ್ಬಳು ಚಾಮರ ಬೀಸುತ್ತಿದ್ದರೆ, ಎಡಭಾಗದಲ್ಲಿ ಪುರುಷನೊಬ್ಬ ಧೂಪಾರತಿ ಬೆಳಗುತ್ತಿದ್ದಾನೆ. ಚಿತ್ರದ ಹಿನ್ನೆಲೆ ವರ್ಣ ಕೆಂಪಾಗಿದ್ದು, ರೇಖೆಗಳು ಶಕ್ತಿಯುತವಾಗಿವೆ. ಕಮಾನಿನಾಕಾರದಲ್ಲಿರುವ ಈ ಚಿತ್ರ ಉತ್ತಮ ಸಂಯೋಜನೆಯಿಂದ ಕೂಡಿದೆ.

೨. ಪಂಚಮುಖದ ಆಂಜನೇಯ :

ಈ ಚಿತ್ರದಲ್ಲಿ ಆಂಜನೇಯನಿಗೆ ಪಂಚಮುಖಗಳನ್ನು ಚಿತ್ರಿಸಿದೆ. ಎದುರಿನ ಮುಖ ನರಸಿಂಹನದಾಗಿದ್ದರೆ ಬಲಬದಿಗೆ ಗರುಡ. ಎಡಬದಿಗೆ ಆಂಜನೇಯನ ಮುಖ ಚಿತ್ರಿಸಿದೆ. ತಲೆಯ ಮೇಲೆ ಬಿಳಿ ಹಾಗೂ ಕೆಂಪು ಬಣ್ಣದ ಎರಡು ಕುದುರೆಯ ಮುಖಗಳಿವೆ. ಹತ್ತು ಕೈಗಳನ್ನು ಹೊಂದಿದ ಆಂಜನೇಯನು ಬಿಲ್ಲು, ಬಾಣ, ಗಧೆ, ಚಕ್ರ, ತ್ರಿಶೂಲ, ಖಡ್ಗ, ಢಾಲು ಹೀಗೆ ವಿವಿಧ ಆಯುಧಗಳನ್ನು ಧರಿಸಿದ್ದಾನೆ. ಬಾಲವು ತಲೆಯ ಮೇಲಿನಿಂದ ಬಾಗಿಕೊಂಡು ಎಡಭಾಗದಲ್ಲಿ ಸುರುಳಿಯಾಗಿ ಚಾಚಿಕೊಂಡಿದೆ. ನರಸಿಂಹ, ಆಂಜನೇಯ. ಗರುಡ ಈ ಎಲ್ಲ ಶಕ್ತಿಗಳು ಶ್ರೀ ಹರಿಯ ಲೀಲಾ ವಿನೋದಗಳು ಎನ್ನುವ ಸಾಂಕೇತಿಕ ಚಿತ್ರಣ ಇದರಲ್ಲಿ ವ್ಯಕ್ತಗೊಂಡಿದೆ. ಬಲಬದಿಗೆ ಒಬ್ಬ ಮಹಿಳೆ ಆರತಿ ಬೆಳಗುತ್ತಿದ್ದ ಎಡಗಡೆಗೆ ಪುರುಷನೊಬ್ಬ ಧೂಪಾರತಿ ಬೆಳಗುತ್ತಿದ್ದಾನೆ. ಚಿತ್ರದ ಹಿನ್ನೆಲೆ ಕೆಂಪುವರ್ಣದಿಂದ ಕೂಡಿದೆ.

೩. ಕೃಷ್ಣನ ವಿಶ್ವರೂಪ ದರ್ಶನ :

ಈ ಚಿತ್ರದಲ್ಲಿ ಕೃಷ್ಣನು ನವಿಲನ್ನು ಹೋಲುವ ವಿಚಿತ್ರ ಪಕ್ಷಿಯ ಮೇಲೆ ಕುಳಿತಿದ್ದಾನೆ. ಈ ವಿಚಿತ್ರ ಪಕ್ಷಿಯ ದೇಹವು ಹಲವು ಮಾನವಾಕೃತಿಯ ಸಂಯೋಜನೆಯಿಂದ ರಚಿಸಲ್ಪಟ್ಟಿದೆ. ನವಿಲಿನ ದೇಹಕ್ಕೆ ಹೊಂದುವಂತೆ ವಿವಿಧ ವಿನ್ಯಾಸದಲ್ಲಿ ಸ್ತ್ರೀಯರ ಆಕೃತಿಗಳನ್ನು ಒಟ್ಟುಗೂಡಿಸಿ ಪಕ್ಷಿಯ ದೇಹವನ್ನು ರೂಪಿಸಲಾಗಿದೆ. ಅದರ ಮೇಲೆ ನಾಲ್ಕು ಕೈಗಳನ್ನು ಹೊಂದಿದ ಕೃಷ್ಣನು ಕುಳಿತುಕೊಂಡಿದ್ದಾನೆ. ಕೃಷ್ಣನ ಎದುರು ಭಾಗದಲ್ಲಿ ಚಿಕ್ಕದಾದ ಮಾನವಾಕೃತಿಯೊಂದು ರಚಿಸಿದ್ದು ಅದು ಸಂಪೂರ್ಣ ನಾಶವಾಗಿದೆ. ಎದುರಿಗೆ ಚಿತ್ರಿಸಿದ ಚಿಕ್ಕ ವ್ಯಕ್ತಿ ಚಿತ್ರವು ಅರ್ಜುನನದಾಗಿದ್ದು. ಈ ಚಿತ್ರವು ಕೃಷ್ಣನು ಅರ್ಜುನನಿಗೆ ವಿಶ್ವರೂಪ ದರ್ಶನ ಮಾಡಿಸುವ ಸಾಂಕೇತಿಕ ಅರ್ಥದಲ್ಲಿ ರೂಪಿತವಾಗಿದೆ. ಇದೇ ರೀತಿಯ ಚಿತ್ರ ಅಮ್ಮಿನಭಾವಿಯ ಹಿರೇಮಠದಲ್ಲಿಯೂ ರಚನೆಯಾಗಿದೆ. ಅಲ್ಲಿ ಪಕ್ಷಿರೂಪದ ಮೃಗವೊಂದರ ಮೇಲೆ ಕೃಷ್ಣನು ನಿಂತಿದ್ದಾನೆ. ಎದುರಿಗೆ ಅರ್ಜುನನು ನೆಲದ ಮೇಲಿದ್ದಾನೆ. ಇಲ್ಲಿಯೂ ಅರ್ಜುನನು ನೆಲದ ಮೇಲೆ ಚಿತ್ರಿಸಿದ್ದು ಕೃಷ್ಣನು ವಿಚಿತ್ರ ಪಕ್ಷಿಯ ಮೇಲೆ ಇದ್ದಾನೆ. ಈ ಚಿತ್ರದ ಹೆಚ್ಚಿನ ಭಾಗವು ನಾಶವಾಗಿದೆ.

೪. ಶ್ರವಣಕುಮಾರನ ಚಿತ್ರ :

ಶ್ರವಣಕುಮಾರನು ತನ್ನ ಕುರುಡು ವೃದ್ಧ ತಂದೆ ತಾಯಿಗಳನ್ನು ತಕ್ಕಡಿಯಲ್ಲಿ ಹೊತ್ತುಕೊಂಡು ತೀರ್ಥಯಾತ್ರೆಗೆ ಹೊರಟಿರುವ ದೃಶ್ಯವಿದೆ. ತೀರ್ಥಯಾತ್ರೆಯ ಸಂದರ್ಭದಲ್ಲಿ ತಂದೆತಾಯಿಗಳಿಗೆ ಬಾಯಾರಿಕೆಯಾಗಲು ಅವರಿಗಾಗಿ ನೀರು ತರಲು ಹೋಗುತ್ತಾನೆ. ನೀರು ತರಲು ಹೋಗುವಾಗ ತಂದೆತಾಯಿಗಳು ಕುಳಿತ ತಕ್ಕಡಿಯನ್ನು ಗಿಡದ ಮೇಲೆ ಸಿಕ್ಕಿಸಿ ಹೋಗುತ್ತಾನೆ. ದೂರದಲ್ಲಿಯ ಒಂದು ಕೊಳದಲ್ಲಿ ಬಿಂದಿಗೆಯಿಂದ ಶ್ರವಣಕುಮಾರನು ನೀರು ತುಂಬುವಾಗ ಅಲ್ಲಿಗೆ ಭೇಟಿಗೆ ಬಂದಿದ್ದ ದಶರಥನು ನೀರು ತುಂಬುವ ಶಬ್ದವನ್ನು ಆಲಿಸಿ ಯಾವುದೋ ಮೃಗ ನೀರು ಕುಡಿಯುತ್ತದೆ ಎಂದು ಭಾವಿಸಿ ಗಿಡದ ಮರೆಯಿಂದ ಬಾಣ ಬಿಡುತ್ತಾನೆ. ಬಾಣ ತಾಗಿ ಶ್ರವಣಕುಮಾರನು ಅಸು ನೀಗುತ್ತಾನೆ. ಆತ ಸಾಯುವಾಗ ದಶರಥನಿಗೆ ನೀನು ಕೊನೆಗಾಲದಲ್ಲಿ ಮಕ್ಕಳಿಂದ ದೂರವಾಗಿ ಮರಣ ಹೊಂದು ಎಂದು ಶಾಪ ಕೊಡುತ್ತಾನೆ. ಚಿತ್ರದಲ್ಲಿ ವೃದ್ಧ ತಂದೆ ತಾಯಿಗಳು ತೀರ್ಥಯಾತ್ರೆಗೆ ಹೋಗಲು ಬಯಸುವುದು. ಶ್ರವಣನು ತಕ್ಕಡಿಯಂತಹ ಸಾಧನದಲ್ಲಿ ಅವರನ್ನು ಕುಳ್ಳಿರಿಸಿಕೊಂಡು ಹೋಗುವುದು, ನೀರು ತರಲು ಹೋಗುವಾಗ ತಕ್ಕಡಿಯನ್ನು ಗಿಡದ ಮೇಲೆ ಸಿಕ್ಕಿಸುವುದು, ಕೊಳದಲ್ಲಿ ಬಿಂದಿಗೆಯಿಂದ ನೀರು ತುಂಬುವುದು ಗಿಡದ ಮರೆಯಲ್ಲಿ ನಿಂತ ದಶರಥನು ಶ್ರವಣನಿಗೆ ಬಾಣ ಬಿಡುವುದು ತುಂಬ ಕಲಾತ್ಮಕವಾಗಿ ರಚನೆಯಾಗಿದೆ.

೫. ವಸಿಷ್ಠ ಮುನಿಗಳ ಚಿತ್ರ :

ರಾಜಧಾನಿಗೆ ಬರುತ್ತಲಿರುವ ವಸಿಷ್ಠ ಮುನಿಗಳನ್ನು ಸಕಲ ರಾಜ ಮರ್ಯಾದೆಯಿಂದ ವಾದ್ಯ ಸಮೇತ ಕರೆತರಲಾಗುತ್ತಿದೆ. ಮಕ್ಕಳಿಲ್ಲದ ದಶರಥ ಮಹಾರಾಜನಿಗೆ ವಸಿಷ್ಠ ಮುನಿಗಳು

ಪುತ್ರಕಾಮೇಷ್ಟಿಯಾಗ ಮಾಡಲು ಸಲಹೆ ಮಾಡುತ್ತಾರೆ. ಚಿತ್ರದಲ್ಲಿ ವಾದ್ಯಗಾರರು ಸ್ತ್ರೀ-ಪುರುಷರು ವಸಿಷ್ಠ ಮುನಿಗಳನ್ನು ಕರೆದು ತರುತ್ತಿದ್ದಾರೆ.

೬. ಯಾಗದ ಚಿತ್ರ :

ಕೆಳಗಿನ ಮತ್ತೊಂದು ಕಾನೆಯಲ್ಲಿ ದಶರಥ ಮಹಾರಾಜನು ಪುತ್ರಕಾಮೇಷ್ಟಿ ಯಾಗವನ್ನು ಮಾಡುತ್ತಿರುವ ಚಿತ್ರವಿದೆ. ಋಷಿಮುನಿಗಳು ಯಜ್ಞಕುಂಡದ ಸುತ್ತಲೂ ಕುಳಿತು ಯಾಗದಲ್ಲಿ ನಿರತರಾಗಿದ್ದು, ದಶರಥ ಮತ್ತು ಆತನ ಮೂವರು ಪತ್ನಿಯರು ಕೈ ಮುಗಿದು ನಿಂತಿದ್ದಾರೆ. ಯಜ್ಞದಿಂದ ದೊರೆತ ಫಲವನ್ನು ಮುನಿಯು ದಶರಥನಿಗೆ ಕೊಡುತ್ತಿರುವಂತೆ ಚಿತ್ರಿಸಿದೆ. ಅಲ್ಲಿಯೇ ದಶರಥನ ಮೂವರು ಹೆಂಡತಿಯರೂ ನಿಂತಿದ್ದಾರೆ.

೭. ಶೇಷಶಯನ ವಿಷ್ಣು :

ಇದರ ಕೆಳಗಿರುವ ಚಿತ್ರದಲ್ಲಿ ಶೇಷಶಯನ ವಿಷ್ಣುವು ಚಿತ್ರಿತನಾಗಿದ್ದು ಆತನ ಪಕ್ಕದಲ್ಲಿ ಶ್ರೀದೇವಿ-ಭೂದೇವಿಯರು ಸೇವೆ ಮಾಡುತ್ತಿದ್ದಾರೆ. ಎದುರಿಗೆ ದೇವತೆಗಳು, ಋಷಿಮುನಿಗಳು ನಿಂತು ರಾಕ್ಷಸರಿಂದ ಯಜ್ಞಯಾಗಾದಿಗಳು, ದೇವತಾ ಕಾರ್ಯಗಳು ನಡೆಯದೇ ತೊಂದರೆಯಾಗಿದೆ ಎಂದು ಬಿನ್ನವಿಸುತ್ತಿದ್ದಾರೆ. ನಾರಾಯಣನು ಅವರ ಕೋರಿಕೆ ಮನ್ನಿಸಿ ರಾಮಾವತಾರದಿಂದ ಹುಟ್ಟಿ ರಾಕ್ಷಸ ಹಾವಳಿ ಕಡಿಮೆ ಮಾಡುವುದಾಗಿ ಅಭಯ ಕೊಡುತ್ತಿದ್ದಾನೆ. ಆದಿಶೇಷ ಸರ್ಪವು ಐದು ಹೆಡೆಗಳನ್ನು ಹೊಂದಿದ್ದು ಬಿಳಿ ಮಿಶ್ರಿತ ಹಳದಿ ವರ್ಣದಲ್ಲಿದೆ. ನಾರಾಯಣನ ಎದುರಿಗೆ ನಿಂತ ವ್ಯಕ್ತಿಗಳು ಉದ್ದ ತೋಳಿನ ಅಂಗಿ, ಪಂಚೆಯುಟ್ಟುಕೊಂಡಿದ್ದಾರಲ್ಲದೇ ಕೆಲವರು ನಡುವಿಗೆ ಶಲ್ಯ ಕಟ್ಟಿಕೊಂಡಿದ್ದಾರೆ.

೮. ರಾಮಲಕ್ಷ್ಮಣರ ಜನನ

ಕೌಶಲ್ಯದೇವಿಯಿಂದ ಶ್ರೀರಾಮನೂ, ಸುಮಿತ್ರಾದೇವಿಯ ಹೊಟ್ಟೆಯಿಂದ ಲಕ್ಷ್ಮಣ-ಶತ್ರುಘ್ನರೂ, ಕೈಕೇಯಿಯ ಮಡಿಲಲ್ಲಿ ಭರತನೂ ಜನ್ಮ ತಾಳುತ್ತಾರೆ. ಇಲ್ಲಿನ ಚಿತ್ರದಲ್ಲಿ ಕೌಸಲ್ಯದೇವಿಯು ರಾಮನನ್ನು ಸುಮಿತ್ರಾದೇವಿಯು ಲಕ್ಷ್ಮಣ-ಶತ್ರುಘ್ನರನ್ನು ತೊಡೆಯ ಮೇಲೆ ಮಲಗಿಸಿಕೊಂಡಿದ್ದಾರೆ. ಋಷಿಮುನಿಗಳು ಬಂದು ಆಶೀರ್ವಾದ ಮಾಡುತ್ತಿದ್ದಾರೆ.

೯. ವಿಶ್ವಾಮಿತ್ರ ಮುನಿಯು ರಾಮ-ಲಕ್ಷ್ಮಣರನ್ನು ಅರಣ್ಯಕ್ಕೆ ಕರೆದೊಯ್ಯುತ್ತಿರುವುದು :

ಆಶ್ರಮದಲ್ಲಿ ತಾವು ಮಾಡುತ್ತಿರುವ ಯಜ್ಞಕ್ಕೆ ರಾಕ್ಷಸರಿಂದ ತೊಂದರೆಯಾಗುವುದನ್ನು ತಿಳಿಸಿ ರಾಮ-ಲಕ್ಷ್ಮಣರನ್ನು ರಾಕ್ಷಸರ ಸಂಹಾರ ಮಾಡಲು ಕರೆದೊಯ್ಯುತ್ತಿರುವ ಚಿತ್ರವಿದಾಗಿದೆ. ರಾಮ-ಲಕ್ಷ್ಮಣರನ್ನು ಕಳಿಸಲು ದಶರಥರಾಜ ಆತನ ಮಡದಿ ಹಿಂಜರಿದಾಗ ಮುನಿಯು ಅವರಿಗೆ ತಿಳಿಹೇಳಿ ಒಪ್ಪಿಸುತ್ತಿದ್ದಾನೆ. ಮುಂದಿನ ಅಂಕಣದಲ್ಲಿ ರಾಮ-ಲಕ್ಷ್ಮಣರನ್ನು ಕರೆದುಕೊಂಡು ಹೊರಟಿರುವ ಚಿತ್ರವಿದೆ.

೧೦. ತಾಟಕಿಯ ಸಂಹಾರ :

ವಿಶ್ವಾಮಿತ್ರರ ಸಂಗಡ ಹೊರಟ ರಾಮ-ಲಕ್ಷ್ಮಣರು ದಾರಿಯಲ್ಲಿ ಮುನಿಯಿಂದ ಉಪದೇಶ ಪಡೆಯುತ್ತ ಸಾಗುತ್ತಿದ್ದಾಗ ಒಮ್ಮೆಲೇ ಎದುರಾದ ತಾಟಕಿ ಎಂಬ ಭಯಂಕರ ರಾಕ್ಷಸಿಯು ಇವರನ್ನು ಅಡ್ಡಗಟ್ಟಲು ಮುನಿಯು ರಾಕ್ಷಸಿಯನ್ನು ಸಂಹರಿಸಲು ರಾಮನಿಗೆ ಆಜ್ಞಾಪಿಸುತ್ತಾನೆ. ಇಲ್ಲಿನ ಚಿತ್ರದಲ್ಲಿ ರಾಮನು ಬಾಣ ಬಿಟ್ಟು ರಾಕ್ಷಸಿಯನ್ನು ಕೊಲ್ಲುತ್ತಿದ್ದಾನೆ. ರಾಮನು ತಲೆಯ ಮೇಲೆ ಕಿರೀಟ ಧರಿಸಿದ್ದು, ಉದ್ದ ತೋಳಿನ ಕೆಂಪು ಬಣ್ಣದ ಕಪ್ಪು ಗೀರಿನ ಅಂಗಿ ತೊಟ್ಟು ಬಿಳಿ ಪಂಚೆ ಉಟ್ಟುಕೊಂಡಿದ್ದಾನೆ. ಹಸಿರು ಮೈಬಣ್ಣದಲ್ಲಿ ಚಿತ್ರಿಸಿರುವ ರಾಮನು ರಾಕ್ಷಸಿಗೆ ಅತ್ಯಂತ ಹತ್ತಿರವಾಗಿ ಚಿತ್ರಿಸಲ್ಪಟ್ಟಿದ್ದಾನೆ. ತಾಟಕಿಯು ಹಳದಿ ಬಣ್ಣದ ಸೀರೆ ಉಟ್ಟು ಕೆಂಪು ಬಣ್ಣದ ಕುಪ್ಪಸ ಧರಿಸಿದ್ದಾಳೆ. ರಾಮನ ಬಾಣದ ಪ್ರಹಾರದಿಂದ ಕಿರುಚುತ್ತ ಹಿಂದಕ್ಕೆ ಬೀಳುತ್ತಿದ್ದಾಳೆ.

೧೧. ಸುಬಾಹು ಮಾರಿಚರ ವಧೆ :

ಆಶ್ರಮಕ್ಕೆ ರಾಮ-ಲಕ್ಷ್ಮಣರನ್ನು ಕರೆದುಕೊಂಡು ಬಂದ ವಿಶ್ವಾಮಿತ್ರ ಮುನಿಗಳು ಯಾಗ ಪ್ರಾರಂಭಿಸುತ್ತಾರೆ. ಅದನ್ನು ಕೆಡಿಸಲು ಬಂದ ಸುಬಾಹು ಮಾರೀಚರೆಂಬ ರಾಕ್ಷಸರನ್ನು ರಾಮ-ಲಕ್ಷ್ಮಣರು ಹಿಂದಕ್ಕೆ ಅಟ್ಟುವರು. ರಾಮ-ಲಕ್ಷ್ಮಣರ ಬಾಣದ ಪ್ರಹಾರಕ್ಕೆ ಸುಬಾಹು ಸಮುದ್ರದಲ್ಲಿ ಬಿದ್ದರೆ, ಮಾರೀಚನು ಲಂಕೆಗೆ ಎಸೆಯಲ್ಪಟ್ಟನು. ಇಲ್ಲಿ ಮಂಟಪದಂತಹ ಸ್ಥಳದಲ್ಲಿ ಮುನಿಗಳು ಯಜ್ಞ ಮಾಡುತ್ತಿದ್ದು, ರಾಮ-ಲಕ್ಷ್ಮಣರು ರಾಕ್ಷಸರನ್ನು ಹೊಡೆದಟ್ಟುತ್ತಿರುವ ದೃಶ್ಯ ಚಿತ್ರಿಸಲ್ಪಟ್ಟಿದೆ.

೧೨. ಅಹಲ್ಯಾ ಶಾಪವಿಮೋಚನೆ :

ಮಿಥಿಲಾ ನಗರದಲ್ಲಿ ಜನಕ ಮಹಾರಾಜನು ಸೀತಾದೇವಿಯ ಸ್ವಯಂವರ ಏರ್ಪಡಿಸಿದ ಸುದ್ದಿ ತಿಳಿದ ವಿಶ್ವಾಮಿತ್ರ ಮುನಿಗಳು ರಾಮ-ಲಕ್ಷ್ಮಣರನ್ನು ಅಲ್ಲಿಗೆ ಕರೆದುಕೊಂಡು ಹೊರಟಾಗ ದಾರಿಯಲ್ಲಿ ಶಾಪದಿಂದ ಕಲ್ಲಾಗಿ ಬಿದ್ದುಕೊಂಡಿದ್ದ ಗೌತಮ ಋಷಿಯ ಪತ್ನಿ ಅಹಲ್ಯಾದೇವಿಯನ್ನು ರಾಮನು ಪಾದ ಸ್ಪರ್ಶ ಮಾಡಿ ವಿಮೋಚನಗೊಳಿಸುತ್ತಾನೆ. ಚಿತ್ರದಲ್ಲಿ ಶಾಪ ವಿಮೋಚನೆಗೊಂಡ ಅಹಲ್ಯೆಯು ಶ್ರೀರಾಮನಿಗೆ ಮತ್ತು ವಿಶ್ವಾಮಿತ್ರನಿಗೆ ನಮಿಸುತ್ತಿದ್ದಾಳೆ. ಆಕೆಯು ಕಲ್ಲಾಗಿ ಬಿದ್ದಿರುವ ಸ್ಥಳವನ್ನು ಒಂದು ಚೌಕಾಕಾರದ ವಿನ್ಯಾಸದಿಂದ ಚಿತ್ರಿಸಲಾಗಿದೆ.

೧೩. ಸೀತಾ ಸ್ವಯಂವರ :

ಮಿಥಿಲಾ ನಗರದಲ್ಲಿ ಬಂದ ರಾಮ-ಲಕ್ಷ್ಮಣರು ಸೀತಾಸ್ವಯಂವರದಲ್ಲಿ ಭಾಗವಹಿಸುತ್ತಾರೆ. ಶಿವಧನಸ್ಸು ಹೆದೆ ಏರಿಸಲು ವಿಫಲರಾದ ಎಲ್ಲ ರಾಜರೂ ಹಿಂದೆ ಸರಿಯುತ್ತಾರೆ. ಲಂಕಾಧೀಶ್ವರ ರಾವಣನೂ ಸ್ವಯಂವರದಲ್ಲಿ ಶಿವಧನಸ್ಸು ಎತ್ತಲು ವಿಫಲನಾಗಿ ಕೆಳಗುರುಳಿ ಬೀಳುತ್ತಾನೆ. ಇಲ್ಲಿ ರಾವಣನು ವಿಫಲನಾಗಿ ಕೆಳಗುರುಳಿ ಬಿದ್ದಿದ್ದು ಸಭಿಕರು ನಗುತ್ತಿದ್ದಾರೆ. ಋಷಿಗಳು ಸಮ್ಮುಖದಲ್ಲಿ ರಾಮನು ಶಿವಧನಸ್ಸನ್ನು ಯಶಸ್ವಿಯಾಗಿ ಹೆದೆ ಏರಿಸಿ ಬಾಣ ಹೂಡುತ್ತಿದ್ದಾನೆ. ನಾಲ್ಕೂ ಕಡೆಗೆ

ಒಬ್ಬೊಬ್ಬ ವ್ಯಕ್ತಿಗಳನ್ನು ಚಿತ್ರಿಸಿ ಸುತ್ತಲೂ ಜನ ನೆರೆದಿದ್ದಾರೆ ಎಂಬುದಾಗಿ ಸಾಂಕೇತಿಸಲಾಗಿದೆ. ರಾಮನು ಹಳದಿ ಬಣ್ಣದ ಉದ್ದ ತೋಳಿನ ಅಂಗಿ ತೊಟ್ಟಿದ್ದು ಕೆಂಪು ಬಣ್ಣದ ಪಂಚೆ ಉಟ್ಟಿದ್ದಾನೆ. ಕೆಳಗೆ ಬಿದ್ದಿರುವ ರಾವಣನು ಹಳದಿ ಮಿಶ್ರಿತ ಬಿಳಿಬಣ್ಣದ ಅಂಗಿ ಧರಿಸಿದ್ದು ಅದರಲ್ಲಿ ಚುಕ್ಕೆಯಂತಹ ನಕ್ಷೆ ಇದೆ. ಮೇಲ್ಭಾಗದಲ್ಲಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತ ಸೀತಾದೇವಿಯು ಸ್ವಯಂವರವನ್ನು ವೀಕ್ಷಿಸುತ್ತಿದ್ದು ವಿಜಯಿಯಾದವರಿಗೆ ಹೂಮಾಲೆ ಹಾಕಲು ಸಿದ್ಧಳಾಗಿದ್ದಾಳೆ. ಕೆಳಭಾಗದ ಅಂಕಣದಲ್ಲಿ ರಾಮ-ಸೀತೆಯರ ಮದುವೆ ನಡೆಯುತ್ತಿದ್ದು ಋಷಿಮುನಿಗಳು, ಮಹಿಳೆಯರು ಕೈ ಎತ್ತಿ ಹರಸುತ್ತಿದ್ದಾರೆ.

೧೪. ಜನಕರಾಜನ ಉಡುಗೊರೆಗಳೊಂದಿಗೆ ಅಯೋಧ್ಯೆಗೆ ಪ್ರಯಾಣ :

ರಾಮ-ಸೀತೆಯರ ಮದುವೆ ವೈಭವದಿಂದ ನೆರವೇರಿದ ನಂತರ ಜನಕ ಮಹಾರಾಜನು ಮಗಳನ್ನು ಕಳಿಸುವಾಗ ಗೋವುಗಳು, ಗಜ, ತುರಗ ಸಮೇತ ಅನೇಕ ಕೊಡುಗೆಗಳನ್ನು ಕೊಟ್ಟು ರಥದಲ್ಲಿ ಕಳಿಸುತ್ತಾನೆ. ಇಲ್ಲಿ ರಥದಲ್ಲಿ ಕುಳಿತು ಹೊರಟ ರಾಮ-ಲಕ್ಷ್ಮಣರು, ಮುನಿಗಳು, ಮುಂದೆ ಗೋವುಗಳು ಸೈನಿಕರು ಹೊರಟಿರುವಂತೆ ಚಿತ್ರಿಸಿದೆ. ತೀರಾ ಮುಂದೆ ವಾದ್ಯಗಾರರು ವಾದ್ಯ ನುಡಿಸುತ್ತ ಸಾಗಿದ್ದಾರೆ.

೧೫. ಗಣಪತಿ-ಸರಸ್ವತಿಯ ಚಿತ್ರ :

ಈ ಪಟ್ಟಿಕೆಯ ಕೆಳಭಾಗದಲ್ಲಿ ೨೨ ಚಿತ್ರಗಳಿದ್ದು ಅವು ಗುರುತಿಸಲಾಗದಂತೆ ನಾಶವಾಗಿವೆ. ಅವುಗಳಲ್ಲಿ ಒಂದು ಅಂಕಣದಲ್ಲಿ ಗಣಪತಿ-ಸರಸ್ವತಿಯವರ ಚಿತ್ರ ರಚಿಸಿದೆ. ಈ ಅಂಕಣದಲ್ಲಿ ಬಲಗಡೆಗೆ ಗಣಪತಿ ಇದ್ದರೆ ಎಡಗಡೆಗೆ ಸರಸ್ವತಿಯನ್ನು ಚಿತ್ರಿಸಲಾಗಿದೆ. ಕಿರೀಟಧಾರಿಯಾದ ಗಣಪತಿಯು ಪೀಠದ ಮೇಲೆ ಕುಳಿತಿದ್ದು ತಿಳಿ ನೀಲಿ ಬಣ್ಣದ ಉದ್ದ ತೋಳಿನ ಪೇಶ್ವೆ ಶೈಲಿಯ ಅಂಗಿ ಧರಿಸಿದ್ದಾನೆ. ನವಿಲಿನ ಮೇಲಿರುವ ಸರಸ್ವತಿಯು ವೀಣಾಪಾಣಿಯಾಗಿದ್ದು ಶ್ವೇತ ಬಣ್ಣದ ಸೀರೆ ಉಟ್ಟಿದ್ದಾಳೆ. ವಿದ್ಯಾದೇವತೆಗಳೆನಿಸಿದ ಗಣಪತಿ-ಸರಸ್ವತಿಯವರನ್ನು ಹೀಗೆ ಜೊತೆಯಾಗಿ ಚಿತ್ರಿಸಿದ್ದು ಉತ್ತರ ಕರ್ನಾಟಕದಲ್ಲಿ ಅಮ್ಮಿನಭಾವಿಯ ಹಿರೇಮಠ, ಮಹಾಲಿಂಗಪುರದ ಮಹಾಲಿಂಗೇಶ್ವರಮಠ, ಗುಳೇದಗುಡ್ಡದ ಹೊಸಮನಿ ಗೌಡರ ಮನೆಗಳಲ್ಲಿ ಕಂಡುಬರುತ್ತದೆ.

೧೬. ರಾವಣನ ಚಿತ್ರಗಳು :

ಉಳಿದಂತೆ ಈ ಪಟ್ಟಿಕೆಯಲ್ಲಿ ರಾವಣನ ತಪಸ್ಸು ಆತನ ದಿಗ್ವಿಜಯ ಯಾತ್ರೆಗಳನ್ನು ಚಿತ್ರಿಸಿದೆ. ರಾವಣನು ವೈಶ್ರವಣನನ್ನು ಓಡಿಸಿ ಲಂಕೆಯನ್ನು ಆಕ್ರಮಿಸಿದ್ದು, ಮಂಡೋದರಿಯನ್ನು ಮದುವೆಯಾಗಿದ್ದು, ರಾವಣನು ಮರುತ್ತರನನ್ನು ಜಯಿಸಿದ್ದು, ಅರಣ್ಯಕನನ್ನು ಕೊಂದು ಶಾಪ ಪಡೆದದ್ದು. ಯಮನೊಡನೆ ಯುದ್ಧ ಮಾಡಿದ್ದು, ಕಾಲಕೇಯರೆಂಬ ದೈತ್ಯರನ್ನು ಜಯಿಸಿದ್ದು, ಇಂದ್ರನ ಮೇಲೆ ಯುದ್ಧ ಮಾಡಿದ್ದು, ಸಹಸ್ರಾರ್ಜುನನ ಸಂಗಡ ಯುದ್ಧ ಮಾಡಿ ಪರಾಜಯ

ಹೊಂದಿದ್ದು ಹೀಗೆ ಒಟ್ಟು ೨೨ ಅಂಕಣಗಳಲ್ಲಿ ಈ ಕೆಳಭಾಗದಲ್ಲಿ ಚಿತ್ರಗಳಿದ್ದು ಅಸ್ಪಷ್ಟವಾಗಿವೆ. ಕೆಳಭಾಗದಲ್ಲಿರುವುದರಿಂದ ಹೆಚ್ಚಿಗೆ ಹಾನಿಗೊಳಗಾಗಿವೆ.

೧೭. ರಾಣಿಯರು ರಥದಲ್ಲಿ ಹೊರಟಿರುವುದು :

ಇಬ್ಬರು ಸ್ತ್ರೀಯರು ರಥದಲ್ಲಿ ಕುಳಿತು ಹೊರಟಿದ್ದು ರಥವು ಕುದುರೆಯಿಂದ ಎಳೆಯಲ್ಪಡುತ್ತಿದೆ. ಮುಂದೆ ಇಬ್ಬರು ಯೋಧರು ಖಡ್ಗ ಹಿಡಿದು ಹೊರಟಿದ್ದರೆ ಅವರಿಗಿಂತ ಮುಂದಾಗಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತ ರಾಜನಿದ್ದಾನೆ. ಆನೆಯ ಮುಂದೆಯೂ ಇಬ್ಬರು ಸೈನಿಕರು ಆಯುಧ ಸಮೇತ ಹೊರಟಿದ್ದಾರೆ. ಇದರ ಕೆಳಭಾಗದ ಅಂಕಣದಲ್ಲಿಯೂ ಇಂತಹದೇ ಮೆರವಣಿಗೆ ದೃಶ್ಯವಿದೆ. ಇವುಗಳ ಕೆಳಗೆ ಇನ್ನೆರಡು ಇಂತಹದೇ ಮೆರವಣಿಗೆಯ ದೃಶ್ಯಗಳಿದ್ದು ಅದರಲ್ಲಿಯೂ ಮುಂದೆ ಇಬ್ಬರು ಸೈನಿಕರು ಅವರ ಹಿಂದೆ ಆನೆಯ ಮೇಲೆ ಅಂಬಾರಿಯಲ್ಲಿ ರಾಜ, ಆನೆಯ ಹಿಂದುಗಡೆ ಮತ್ತೆ ಇಬ್ಬರು ಸೈನಿಕರು, ತೀರ ಹಿಂದುಗಡೆ ರಥದಲ್ಲಿ ಇಬ್ಬರು ರಾಣಿಯರು ಹೀಗೆ ಪ್ರತಿಯೊಂದು ಒಂದೇ ತೆರನಾಗಿರುವ ನಾಲ್ಕು ಮೆರವಣಿಗೆ ದೃಶ್ಯಗಳಿವೆ. ಮೇಲಿನ ಎರಡರಲ್ಲಿ ನೀಲಿ ಬಣ್ಣದ ಆನೆಗಳಿದ್ದರೆ ಕೆಳಗಿನ ಆನೆ ಕಂದು ಬಣ್ಣದಲ್ಲಿ ಮಧ್ಯದ ಮೆರವಣಿಗೆಯ ಆನೆ ಬಿಳಿ ಬಣ್ಣದಲ್ಲಿದೆ. ರಥದಲ್ಲಿ ಇಬ್ಬರು ಸ್ತ್ರೀಯರು ಕುಳಿತು ಮೆರವಣಿಗೆ ಹೊರಟಿರುವ ಇನ್ನೂ ನಾಲ್ಕು ಚಿತ್ರಗಳಿವೆ.

೧೮. ಕುದುರೆ ಮೇಲೆ ಹೊರಟ ರಾಜ :

ಪೇಶ್ವೆ ಶೈಲಿಯ ವಸ್ತ್ರವಿನ್ಯಾಸದಲ್ಲಿರುವ ರಾಜನೊಬ್ಬನು ಕುದುರೆಯ ಮೇಲೆ ಹೊರಟಿದ್ದಾನೆ. ಆತನ ಮುಂದೆ ವಾಗ್ಯಗಾರರು ಖಡ್ಗ ಹಿಡಿದ ವ್ಯಕ್ತಿ ಹೊರಟಿದ್ದಾರೆ. ಇಂತಹ ಆರು ಚಿತ್ರಗಳಿವೆ. ಅವುಗಳಲ್ಲಿ ಕುದುರೆ ಮತ್ತು ಜನರ ವೇಷಭೂಷಣ ಅವುಗಳಲ್ಲಿನ ಬಣ್ಣಗಳು ಮಾತ್ರ ಬದಲಾಗಿವೆ. ವಾದ್ಯಗಾರರಲ್ಲಿ ತಾಳ, ಡೋಲು, ತುತ್ತೂರಿ ಬಾರಿಸುವವರಿದ್ದಾರೆ. ಇನ್ನೊಂದು ಕಡೆಗೆ ಪಲ್ಲಕ್ಕಿಯಲ್ಲಿ ಇಬ್ಬರು ಸ್ತ್ರೀಯರನ್ನು ಕುಳ್ಳಿರಿಸಿಕೊಂಡು ಹೊರಟಿದ್ದಾರೆ. ಮುಂದೆ ಪುರೋಹಿತರು, ಋಷಿಮುನಿಗಳು ಇದ್ದು ಪಲ್ಲಕ್ಕಿಯನ್ನು ಇಬ್ಬರು ವ್ಯಕ್ತಿಗಳು ಹೊತ್ತುಕೊಂಡಿದ್ದಾರೆ. ಇನ್ನೊಂದು ಕಡೆಗೆ ಮುನಿಯೊಬ್ಬ ರಾಜಕುಮಾರರಿಗೆ ಅಸ್ತ್ರವಿದ್ಯೆ ಹೇಳಿಕೊಡುತ್ತಿರುವ ಚಿತ್ರವಿದೆ. ಮತ್ತೊಂದು ಕಡೆಗೆ ಯಜ್ಞದ ದೃಶ್ಯವಿದ್ದು ಅದರಲ್ಲಿ ರಾಜರಾಣಿಯರು ಪಾಲ್ಗೊಂಡಿದ್ದಾರೆ. ಹೀಗೆ ಈ ಪಟ್ಟಿಕೆಯ ಮೇಲ್ಭಾಗದಲ್ಲಿ ಪೋಷಕರಾಜರಿಗೆ ಸಂಬಂಧಿಸಿದ ಚಿತ್ರಗಳಿವೆ.

೧೯. ರಾಮನ ಪಟ್ಟಾಭಿಷೇಕ :

ಕೆಳಭಾಗದಲ್ಲಿ ಮಧ್ಯದಲ್ಲಿ ರಾಮನು ಸೀತೆಯೊಡನೆ ಸಿಂಹಾಸನದ ಮೇಲೆ ಕುಳಿತ ದೃಶ್ಯವಿದೆ ಬಲಭಾಗದಲ್ಲಿ ಲಕ್ಷ್ಮಣ-ಭರತ ಕೈ ಮುಗಿದುಕೊಂಡು ನಿಂತಿದ್ದರೆ, ಎಡಭಾಗದಲ್ಲಿ ಶತ್ರುಘ್ನ ನಿಂತಿದ್ದಾನೆ. ಕೆಳಗಡೆಗೆ ಆಂಜನೇಯ ಮತ್ತು ಇತರ ವಾನರರು ರಾಮನ ಸೇವೆಯಲ್ಲಿ

ತೊಡಗಿದ್ದಾರೆ. ಉಳಿದಂತೆ ಈ ಮುಖ್ಯ ಚಿತ್ರದ ಸುತ್ತಲೂ ಹರಡಿಕೊಂಡಂತೆ ರಾಮ-ರಾವಣರ ಯುದ್ಧ ಮತ್ತು ಯುದ್ಧ ಮುಗಿಸಿ ಆತ ಮರಳಿ ಅಯೋಧ್ಯೆಗೆ ಬರುವ ಚಿತ್ರಗಳನ್ನು ರಚನೆ ಮಾಡಲಾಗಿದೆ. ಚಿತ್ರಗಳು ನಾಶವಾಗಿದ್ದು ಗುರುತಿಸಲು ಕಷ್ಟವಾಗುತ್ತದೆ.

೨೦. ಕದನದ ದೃಶ್ಯ :

ಈ ಚಿತ್ರದಲ್ಲಿ ಇಬ್ಬರು ವ್ಯಕ್ತಿಗಳು ಯುದ್ಧ ಮಾಡುತ್ತಿರುವ ಚಿತ್ರವಿದೆ. ಇಬ್ಬರೂ ಬಿಲ್ಲು-ಬಾಣಗಳಿಂದ ಯುದ್ಧ ಮಾಡುತ್ತಿದ್ದಾರೆ. ಬಲಗಡೆಗೆ ಇರುವ ವ್ಯಕ್ತಿಯು ನೀಲಿ ವರ್ಣದ ಅಂಗಿ ತೊಟ್ಟು ಬಿಳಿ ಧೋತರ ಉಟ್ಟಿದ್ದರೆ ಎಡಗಡೆಯ ವ್ಯಕ್ತಿ ಹಳದಿ ಧೋತರ ಉಟ್ಟು ಕಂದುಬಣ್ಣದ ಅಂಗಿ ಧರಿಸಿದ್ದಾನೆ. ಇಬ್ಬರೂ ಬಿಟ್ಟ ಬಾಣಗಳು ಚಿತ್ರದಲ್ಲಿ ತುಂಬಿಕೊಂಡಿವೆ.

೨೧. ಮೆರವಣಿಗೆಯ ದೃಶ್ಯಗಳು :

ಇದೇ ಚಿತ್ರದ ಪಕ್ಕದ ಇನ್ನೊಂದು ಚಿತ್ರದಲ್ಲಿ ಎರಡು ಮೇಣೆ(ಪಲ್ಲಕ್ಕಿ) ಯಲ್ಲಿ ರಾಣಿಯರನ್ನು ಕುಳ್ಳಿರಿಸಿಕೊಂಡು ಹೊರಟಿದ್ದಾರೆ. ಮುಂದಿನ ಮೇಣೆಯಲ್ಲಿ ಇಬ್ಬರು ರಾಣಿಯರು, ಹಿಂದಿನ ಮೇಣೆಯಲ್ಲಿ ಇಬ್ಬರು ರಾಣಿಯರಿದ್ದಾರೆ. ಒಂದೊಂದು ಮೇಣೆಯನ್ನು ಇಬ್ಬರು ವ್ಯಕ್ತಿಗಳು ಹೊತ್ತುಕೊಂಡಿದ್ದಾರೆ. ಮೆರವಣಿಗೆಯ ದೃಶ್ಯ ಒಂದರಲ್ಲಿ ಮುಂದೆ ಮೂವರು ವ್ಯಕ್ತಿಗಳು ವಾದ್ಯ ನುಡಿಸುತ್ತ ಸಾಗುತ್ತಿದ್ದರೆ, ಅವರ ಹಿಂದೆ ಆನೆಯ ಮೇಲೆ ರಾಜಪೋಷಾಕಿನಲ್ಲಿರುವ ವ್ಯಕ್ತಿ ಕುಳಿತಿದ್ದಾನೆ. ಆನೆಯ ಹಿಂದೆ ಮತ್ತೆ ಇಬ್ಬರು ಸೈನಿಕರು ಆಯುಧ ಹಿಡಿದು ನಡೆದಿದ್ದರೆ ಅವರ ಹಿಮದೆ ಕುದುರೆಯ ಮೇಲೆ ಮತ್ತೊಬ್ಬ ವ್ಯಕ್ತಿ ಕುಳಿತಿದ್ದಾನೆ. ಈ ಬಿಳಿ ಕುದುರೆಯ ಹಿಂದೆ ಮತ್ತೆ ಇಬ್ಬರು ರಾಜಭಟರು ಹಿಂಬಾಲಿಸಿದ್ದರೆ, ಅವರ ಹಿಂದೆ ಮತ್ತೊಂದು ಕುದುರೆಯ ಮೇಲೆ ಖಡ್ಗ ಹಿಡಿದ ವ್ಯಕ್ತಿ ಕುಳಿತಿದ್ದಾನೆ. ಈ ರೀತಿ ಉದ್ದ ಸಾಲಿನಲ್ಲಿ ಮೆರವಣಿಗೆ ಹೊರಟಿದೆ. ಇದರ ಕೆಳಗೆ ಋಷಿ ಮುನಿಗಳಿಗೆ ನಮಿಸುತ್ತಿರುವ ವ್ಯಕ್ತಿಗಳು ಚಿತ್ರಿತರಾಗಿದ್ದಾರೆ. ಬಲಗಡೆಗೆ ಋಷಿಮುನಿಗಳು ಯಜ್ಞ ಮಾಡುತ್ತಿದ್ದು ಇಬ್ಬರು ವ್ಯಕ್ತಿಗಳು ರಾಜ ಉಡುಗೆಯಲ್ಲಿದ್ದಾರೆ.

೨೨. ರಾವಣನು ಸೀತೆಯನ್ನು ಅಪಹರಿಸಿದುದು :

ಸನ್ಯಾಸಿ ವೇಷದಲ್ಲಿ ಬಂದು ಮೋಸದಿಂದ ಸೀತೆಯನ್ನು ಅಪಹರಿಸಿದ ರಾವಣನು ನಂತರ ತನ್ನ ನಿಜ ರೂಪದಿಂದ ಪುಷ್ಪಕ ವಿಮಾನದಲ್ಲಿ ಹೊತ್ತೊಯ್ಯುತ್ತಾನೆ. ಇಲ್ಲಿ ಕುದುರೆಯಿಂದ ಎಳೆಯಲ್ಪಟ್ಟ ರಥದಲ್ಲಿ ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾನೆ. ರಥದಲ್ಲಿ ಸಾರಥಿಯೂ ಇದ್ದು, ಹಿಂದೆ ಸೀತೆ ಮತ್ತು ರಾವಣ ಕುಳಿತಿದ್ದಾರೆ. ರಾವಣನನ್ನು ಜಟಾಯು ಅಡ್ಡಗಟ್ಟಿದೆ.

೨೩. ಜಟಾಯುವಿನ ಹೋರಾಟ :

ರಾವಣನು ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಜಟಾಯು ತನ್ನ ರೆಕ್ಕೆಗಳಿಂದ, ಕೊಕ್ಕಿನಿಂದ, ಕಾಲುಗಳಿಂದಲೂ ದಾಳಿ ಮಾಡಿ ರಾವಣನ ಕುದುರೆ, ರಥ, ಪತಾಕೆ ಎಲ್ಲವನ್ನು ನಾಶ ಮಾಡುತ್ತಾನೆ. ಕೊನೆಗೆ ಕೋಪಗೊಂಡ ರಾವಣನು ತನ್ನ ಖಡ್ಗದಿಂದ

ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿ ಅದರ ಶಕ್ತಿ ಗುಂದಿಸಿ ಹೊರಟು ಹೋಗುತ್ತಾನೆ. ಇಲ್ಲಿನ ಚಿತ್ರದಲ್ಲಿ ರಾವಣನ ರಥಕ್ಕೆ ಅಡ್ಡವಾಗಿ ಜಟಾಯು ಬಂದು ತಡೆಯುತ್ತಿದೆ. ರಥ, ಕುದುರೆ ಎಲ್ಲವನ್ನೂ ಕಳೆದುಕೊಂಡ ರಾವಣನು ನೆಲದ ಮೇಲೆ ನಿಂತುಕೊಂಡೇ ಜಟಾಯುವಿನ ರೆಕ್ಕೆ ಕತ್ತರಿಸಿ ಹಾಕುತ್ತಿದ್ದಾನೆ. ಜಟಾಯು ಪಕ್ಷಿಯು ರಾವಣನಿಗಿಂತ ದೊಡ್ಡ ಪ್ರಮಾಣದಲ್ಲಿ ರಚಿಸಿದೆ.

೨೪. ಜಟಾಯುವಿನ ಮರಣ :

ಸೀತೆಯನ್ನು ರಾವಣ ಅಪಹರಿಸಿದ ನಂತರ ಚಿಂತಾಕ್ರಾಂತನಾದ ರಾಮ–ಲಕ್ಷ್ಮಣರು ದಿಕ್ಕು ಕಾಣದೆ ತಿರುಗುತ್ತಿರಲು ದಾರಿಯಲ್ಲಿ ಅರೆಜೀವವಾಗಿಬಿದ್ದ ಜಟಾಯುವನ್ನು ಕಾಣುತ್ತಾರೆ. ಜಟಾಯು ಸೀತೆಯ ಅಪಹರಣದ ವಿಷಯ ತಿಳಿಸಿ ಪ್ರಾಣ ಬಿಡುತ್ತದೆ. ಚಿತ್ರದಲ್ಲಿ ರಾಮಲಕ್ಷ್ಮಣರು ನಡೆದು ಬರುತ್ತಿದ್ದು ಜಟಾಯು ದಾರಿಯಲ್ಲಿ ಬಿದ್ದುಕೊಂಡಿದೆ.

೨೫. ಕಂಬಂಧ ರಾಕ್ಷಸನ ಸಂಹಾರ :

ಜಟಾಯುವಿನಿಂದ ವಿಷಯ ತಿಳಿದ ರಾಮ–ಲಕ್ಷ್ಮಣರು ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸುತ್ತಾರೆ. ದಾರಿಯಲ್ಲಿ ಕಬಂಧನೆಂಬ ರಾಕ್ಷಸನು ಹುಲಿರೂಪದಿಂದ ಅವರನ್ನು ತಡೆಯುತ್ತಾನೆ. ರಾಮ–ಲಕ್ಷ್ಮಣರು ಆತನನ್ನು ಸಂಹರಿಸಿ ಮುಂದೆ ಹೋಗುತ್ತಾರೆ. ಚಿತ್ರದಲ್ಲಿ ಹುಲಿಯು ದೊಡ್ಡದಾಗಿ ಬಾಯಿ ತೆರೆದುಕೊಂಡು ನುಗ್ಗಿ ಬರುತ್ತಿದೆ. ರಾಮ–ಲಕ್ಷ್ಮಣರು ಇಲ್ಲಿಯೂ ಕಿರೀಟ ಧರಿಸಿದ್ದು ಉದ್ದ ತೋಳಿನ ಅಂಗಿ, ಧೋತರ ಉಟ್ಟುಕೊಂಡಿದ್ದಾರೆ.

೨೬. ಶಬರಿಯನ್ನು ಭೇಟಿ ಮಾಡಿದ್ದು :

ಕಬಂಧ ರಾಕ್ಷಸನನ್ನು ಸಂಹರಿಸಿ ಮುಂದೆ ಸಾಗುತ್ತಿರುವಾಗ ಶಬರಿ ಎಂಬ ಭಕ್ತಳಿಂದ ರಾಮ–ಲಕ್ಷ್ಮಣರು ಅದರ ಆತಿಥ್ಯವನ್ನು ಪಡೆಯುತ್ತಾರೆ. ತನ್ನ ಆಶ್ರಮದಲ್ಲಿದ್ದ ಬೋರೆ ಹಣ್ಣುಗಳನ್ನೇ ಅವರಿಗೆ ತಿನ್ನಲು ಕೊಡುತ್ತಾಳೆ. ಈ ಚಿತ್ರದಲ್ಲಿ ಗಿಡಗಳ ಬುಡದಲ್ಲಿರುವ ಶಬರಿಯು ರಾಮ–ಲಕ್ಷ್ಮಣರನ್ನು ಬರ ಮಾಡಿಕೊಳ್ಳುತ್ತಿರುವಂತೆ ಚಿತ್ರಿಸಿದೆ.

೨೭. ಸುಗ್ರೀವನು ರಾಮ–ಲಕ್ಷ್ಮಣರನ್ನು ಕಂಡದ್ದು :

ಶಬರಿಯ ಆತಿಥ್ಯದಿಂದ ಸಂಪ್ರೀತರಾದ ರಾಮ–ಲಕ್ಷ್ಮಣರಿಗೆ ಶಬರಿಯು ಋಷ್ಯ ಮೂಕ ಪರ್ವತಕ್ಕೆ ಹೋಗಿ ಸುಗ್ರೀವನ ಸ್ನೇಹ ಮಾಡಿರೆಂದು ಹೇಳುತ್ತಾಳೆ. ಅದರಂತೆ ಋಷ್ಯಮೂಕ ಪರ್ವತಕ್ಕೆ ಬಂದ ರಾಮ–ಲಕ್ಷ್ಮಣರು ಸೀತೆಯ ಅಪಹರಣದಿಂದ ವ್ಯಾಕುಲ ಚಿತ್ತರಾಗಿ ತಿರುಗುತ್ತಿರುವರು, ವಾಲಿಯ ಭಯದಿಂದ ಭೀತನಾದ ಸುಗ್ರೀವನು ಋಷ್ಯಮೂಕ ಪರ್ವತದ ಮೇಲೆ ತನ್ನ ಸಂಗಡಿಗರೊಂದಿಗೆ ಕಾಲ ಕಳೆಯುತ್ತಿದ್ದಾಗ ರಾಮ–ಲಕ್ಷ್ಮಣರು ಆತನ ಕಣ್ಣಿಗೆ ಬೀಳುತ್ತಾರೆ. ಚಿತ್ರದಲ್ಲಿ ಪರ್ವತದ ಮೇಲೆ ಬೀಡು ಬಿಟ್ಟ ಸುಗ್ರೀವ ಮತ್ತು ಆತನ ಸಂಗಡಿಗರಾದ ಇತರ ವಾನರು ಪರ್ವತದ ಬಂಡೆಗಳ ಮೇಲೆ ಕುಳಿತಿದ್ದಾರೆ. ಕೆಳಗೆ ರಾಮ–ಲಕ್ಷ್ಮಣರು ತಿರುಗಾಡುತ್ತಿದ್ದಾರೆ.

೨೮. ಆಂಜನೇಯ ರಾಮ-ಲಕ್ಷ್ಮಣರನ್ನು ಕಂಡದ್ದು :

ರಾಮಲಕ್ಷ್ಮಣರನ್ನು ಕಂಡ ಸುಗ್ರೀವನು ವಾಲಿಯ ಕಡೆಯಿಂದ ಪ್ರೇರಿತರಾಗಿ ಬಂದ ವೇಷಧಾರಿಗಳು ಎಂದು ತಿಳಿದು, ಹನುಮಂತನನ್ನು ಕರೆದು ಅವರಾರೆಂದು ತಿಳಿದು ಬಾ ಎನಲು ಆಂಜನೇಯನು ನಿಧಾನವಾಗಿ ತೆರಳಿ ಅವರನ್ನು ವಿಚಾರಿಸಿ ನಿಜ ವಿಷಯ ತಿಳಿದು ಅವರೀರ್ವರ ದಿವ್ಯ ಪ್ರಭೆಯನ್ನು ಕಂಡು ಶಿರಬಾಗಿ ನಮಿಸುತ್ತಾನೆ. ಚಿತ್ರದಲ್ಲಿ ಗಿಡದ ಬುಡದಲ್ಲಿ ಲಕ್ಷ್ಮಣನ ತೊಡೆಯ ಮೇಲೆ ತಲೆ ಇಟ್ಟು ರಾಮನು ಮಲಗಿಕೊಂಡಿದ್ದು. ಹನುಮಂತನು ಚಿಕ್ಕ ರೂಪದಿಂದ ಮರದಲ್ಲಿ ಅಡಗಿ ಕುಳಿತು ಅವರ ಚಲನವಲನ ವೀಕ್ಷಿಸುತ್ತಿದ್ದಾನೆ. ಕೆಳಗಿನ ಅಂಕಣದಲ್ಲಿ ಅವರಿಂದ ನಿಜ ತಿಳಿದು ರಾಮನ ಪಾದಗಳಿಗೆ ಶಿರಬಾಗಿ ನಮಿಸುತ್ತಿದ್ದಾನೆ.

೨೯. ರಾಮ-ಸುಗ್ರೀವರ ಸ್ನೇಹ :

ರಾಮಲಕ್ಷ್ಮಣರಿಂದ ಅವರ ವಿಷಯ ತಿಳಿದ ಆಂಜನೇಯನು ಅವರನ್ನು ಸುಗ್ರೀವನ ಬಳಿಗೆ ಕರೆದೊಯ್ಯುತ್ತಾನೆ. ಅಲ್ಲಿ ಸುಗ್ರೀವನಿಗೂ ರಾಮ-ಲಕ್ಷ್ಮಣರಿಗೂ ಸ್ನೇಹವುಂಟಾಗುತ್ತದೆ. ಚಿತ್ರದಲ್ಲಿ ಆಂಜನೇಯನು ರಾಮ-ಲಕ್ಷ್ಮಣರನ್ನು ಕರೆತಂದಿದ್ದು ಸುಗ್ರೀವ ಮತ್ತು ಇತರ ವಾನರರು ಆದರದಿಂದ ಬರಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಕೈಮುಗಿದು ನಮಿಸಿ ಸುಗ್ರೀವನು ತನ್ನ ವೃತ್ತಾಂತ ಹೇಳುತ್ತಿರುವುದು ಚಿತ್ರಿಸಲ್ಪಟ್ಟಿದೆ.

೩೦. ಸುಗ್ರೀವನು ರಾಮನ ಶಕ್ತಿಯನ್ನು ಮನಗಾಣುವುದು :

ಸುಗ್ರೀವನು ವಾಲಿಯಿಂದ ತನಗಾದ ಅನ್ಯಾಯವನ್ನು ರಾಮ-ಲಕ್ಷ್ಮಣರಿಗೆ ಹೇಳಿ, ವಾಲಿಯನ್ನು ಸಂಹರಿಸಲು ಸಹಾಯ ಮಾಡಬೇಕೆಂದು ಕೇಳುತ್ತಾನೆ. ಅದಕ್ಕೆ ರಾಮನು ಒಪ್ಪಿದಾಗ ಸುಗ್ರೀವನಿಗೆ ರಾಮನು ಬಲಶಾಲಿಯಾದ ವಾಲಿಯನ್ನು ಸಂಹರಿಸಬಲ್ಲನೇ ? ಎಂಬ ಅನುಮಾನ ಉಂಟಾಗಿ ರಾಮನ ಶಕ್ತಿ ಪರೀಕ್ಷೆಗೆ ತೊಡಗುತ್ತಾನೆ. ವಾಲಿಯಿಂದ ಸಂಹರಿಸಲ್ಪಟ್ಟ ದುಂದುಭಿ ಎಂಬ ರಾಕ್ಷಸನ ಕಳೇಬರವು ಪರ್ವತಾಕಾರವಾಗಿ ಬಿದ್ದುಕೊಂಡಿದೆ ಅದನ್ನು ಬರೀ ಪಾದದಿಂದ ಹೊರಳಿಸು ಎಂದು ರಾಮನಿಗೆ ಸುಗ್ರೀವ ಹೇಳಿದಾಗ, ರಾಮನು ತನ್ನ ಎಡಪಾದದಿಂದ ದುಂದುಭಿಯ ಶವವನ್ನು ಒದೆದಾಗ ಯೋಜನೆಗಳ ದೂರ ಹೋಗಿ ಬೀಳುತ್ತದೆ. ಚಿತ್ರದಲ್ಲಿ ರಾಮನು ಎಡಪಾದದಿಂದ ದುಂದುಭಿಯ ಶವವನ್ನು ಒದೆಯುತ್ತಿರುವುದನ್ನು ಲಕ್ಷ್ಮಣನು ಹಿಂದೆ ನಿಂತು ವೀಕ್ಷಿಸುತ್ತಿದ್ದಾನೆ. ಇನ್ನೊಂದು ಅಂಕಣದಲ್ಲಿ ಸುಗ್ರೀವನು ತೋರಿಸಿದ ಸಾಲಾದ ಏಳು ತಾಳ ವೃಕ್ಷಗಳನ್ನು ಒಂದೇ ಬಾಣದಿಂದ ರಾಮನು ಭೇದಿಸುತ್ತಿರುವ ದೃಶ್ಯವಿದೆ. ಇಲ್ಲಿಯೂ ಲಕ್ಷ್ಮಣನು ಹಿಂದೆ ನಿಂತು ವೀಕ್ಷಿಸುತ್ತಿದ್ದಾನೆ.

೩೧. ವಾಲಿ-ಸುಗ್ರೀವರ ಕಾಳಗ, ವಾಲಿಯ ಸಂಹಾರ :

ಸುಗ್ರೀವನು ರಾಮನ ಸಲಹೆಯಂತೆ ವಾಲಿಯನ್ನು ಕಾಳಗಕ್ಕೆ ಕರೆಯುವುದು. ವಾಲಿ-ಸುಗ್ರೀವರು ಹೋರಾಡುವಾಗ ರಾಮನು ಮರೆಯಲ್ಲಿ ನಿಂತು ಬಾಣ ಪ್ರಯೋಗಿಸುವುದು

ಚಿತ್ರಿಸಲಾಗಿದೆ. ವಾಲಿ-ಸುಗ್ರೀವರು ಕಾದಾಡುತ್ತಿರುವಾಗ ಇಬ್ಬರ ರೂಪವೂ ಒಂದೇ ತೆರನಾಗಿ ಕಂಡು ರಾಮನಿಗೆ ವಾಲಿಯನ್ನು ಗುರುತಿಸಿ ಬಾಣ ಪ್ರಯೋಗಿಸಲು ಆಗದೇ ಸುಗ್ರೀವನನ್ನು ತಿರುಗಿ ಕರೆದು ಗುರುತಿಗಾಗಿ ಕೊರಳಲ್ಲಿ ಸಸ್ಯಗಳ ಬಳ್ಳಿಯಿಂದ ಮಾಡಿದ ಮಾಲೆ ಹಾಕಿ ಕಳಿಸುತ್ತಾನೆ. ಇಲ್ಲಿನ ಚಿತ್ರದಲ್ಲಿ ಸುಗ್ರೀವನ ಕೊರಳಲ್ಲಿ ದಪ್ಪನಾದ ಬಳ್ಳಿಯ ಮಾಲೆ ಇದೆ. ವಾಲಿ ಸುಗ್ರೀವ ಇಬ್ಬರೂ ನೀಲಿ ಬಣ್ಣದಲ್ಲಿದ್ದು, ರಾಮನು ಹಸಿರು ಬಣ್ಣದಲ್ಲಿ ಚಿತ್ರಿಸಿದ್ದಾನೆ. ವಾಲಿ ಸುಗ್ರೀವರ ಕಾಳಗದಲ್ಲಿ ಮರೆಯಲ್ಲಿ ನಿಂತು ಬಾಣ ಬಿಡುತ್ತಿರುವ ರಾಮನ ಕಾಲಿನ ಹತ್ತಿರ ಚಿಕ್ಕದಾಗಿ ಆಂಜನೇಯನು ಚಿತ್ರಿಸಲ್ಪಟ್ಟಿದ್ದಾನೆ. ಮುಂದಿನ ಅಂಕಣದಲ್ಲಿ ವಾಲಿಯು ರಾಮಬಾಣದಿಂದ ಕೆಳಗುರುಳಿ ಬಿದ್ದಿದ್ದು, ಸುಗ್ರೀವನು ಸಾಯುತ್ತಿರುವ ವಾಲಿಯು ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ. ಪಕ್ಕದಲ್ಲಿ ವಾಲಿಯ ಮಗ ಅಂಗದ ಮಡದಿ ತಾರಾ ಪ್ರಲಾಪಿಸುತ್ತಿದ್ದಾರೆ.

೩.೨. ಸುಗ್ರೀವನ ಪಟ್ಟಾಭಿಷೇಕ :

ವಾಲಿಯು ಮರಣದ ನಂತರ ಆತನ ಕಳೇಬರವನ್ನು ಅಂತ್ಯ ಸಂಸ್ಕಾರಗೊಳಿಸುತ್ತಿರುವುದು ಮತ್ತು ಸುಗ್ರೀವನಿಗೆ ಪಟ್ಟಾಭಿಷೇಕ ಮಾಡುತ್ತಿರುವುದು ಚಿತ್ರಿಸಿದೆ. ವಾಲಿಯ ಅಂತ್ಯ ಸಂಸ್ಕಾರದ ದೃಶ್ಯದಲ್ಲಿ ಆತನ ಕಳೇಬರವನ್ನು ಹಳದಿ ಬಣ್ಣದ ಒಂದು ವೃತ್ತದಲ್ಲಿ ಇರುವಂತೆ ಚಿತ್ರಿಸಿ ದಹನ ಕ್ರಿಯೆಯನ್ನು ಸಾಂಕೇತಿಸಲಾಗಿದೆ. ಚಿತೆಯ ಪಕ್ಕದಲ್ಲಿ ಅಂಗದ, ಸುಗ್ರೀವ, ತಾರಾ ನಿಂತಿದ್ದರೆ ಸ್ವಲ್ಪ ದೂರದಲ್ಲಿ ರಾಮ-ಲಕ್ಷ್ಮಣ-ಆಂಜನೇಯ ಚಿತ್ರಿಸಲ್ಪಟ್ಟಿದ್ದಾರೆ. ಸುಗ್ರೀವನ ಪಟ್ಟಾಭಿಷೇಕದ ಅಂಕಣದಲ್ಲಿ ಮಂಟಪದ ಆಕಾರದಲ್ಲಿರುವ ಸಿಂಹಾಸನದಲ್ಲಿರುವ ಸುಗ್ರೀವ ಕುಳಿತಿದ್ದು ಪಕ್ಕದಲ್ಲಿ ಅಂಗದ, ತಾರಾ, ಲಕ್ಷ್ಮಣ ನಿಂತುಕೊಂಡಿದ್ದಾರೆ.

೩.೩. ಸಂಪಾತಿ ಎಂಬ ಪಕ್ಷಿಯಿಂದ ಸೀತೆಯ ಇರುವಿಕೆ ತಿಳಿದದ್ದು :

ವಾನರರಿಗೆ ಸೀತೆಯ ಇರುವಿಕೆ ತಿಳಿಯದೇ ಚಿಂತಾಕ್ರಾಂತರಾಗಿ ಮಹೇಂದ್ರ ಪರ್ವತದಲ್ಲಿ ಕುಳಿತು ತಮ್ಮ ತಮ್ಮಲ್ಲೇ ರಾಮ, ಲಕ್ಷ್ಮಣ, ಸೀತೆ, ಜಟಾಯು ಇವರ ವಿಷಯ ಚರ್ಚಿಸುತ್ತಿರುತ್ತಾರೆ. ಆಗ ಜಟಾಯುವಿನ ಸೋದರನಾದ ಸಂಪಾತಿಯು ಜಟಾಯುವಿನ ವಿಷಯವಾಗಿ ವಾನರರನ್ನು ಕೇಳಲು ವಾನರರು ರಾವಣನು ಜಟಾಯುವನ್ನು ಕೊಂದದ್ದು, ಸೀತೆಯನ್ನು ಅಪಹರಿಸಿದ್ದು, ತಾವು ಆಕೆಯನ್ನು ಹುಡುಕಲು ಬಂದದ್ದು ಹೇಳುತ್ತಾರೆ. ಆಗ ಸಂಪಾತಿಯು ತನ್ನ ಹಾಗೂ ಜಟಾಯುವಿನ ವೃತ್ತಾಂತ ಹೇಳುತ್ತದಲ್ಲದೇ ತನ್ನ ದಿವ್ಯ ಶಕ್ತಿಯಿಂದ ಸೀತೆಯು ದಕ್ಷಿಣ ದಿಕ್ಕಿನಲ್ಲಿರುವ ಲಂಕಾ ನಗರಿಯಲ್ಲಿದ್ದಾಳೆ ಎಂಬುದಾಗಿ ಹೇಳುತ್ತದೆ. ಚಿತ್ರದಲ್ಲಿ ಸಂಪಾತಿಯು ವಾನರರಿಗೆ ಸೀತೆಯ ಇರುವಿಕೆ ತಿಳಿಸುತ್ತಿದ್ದು ಅವರು ಅದಕ್ಕೆ ಕೈ ಮುಗಿದು ನಮಿಸುತ್ತಿದ್ದಾರೆ. ಇನ್ನೂ ಕೆಲವು ವಾನರರು ಮಹೇಂದ್ರ ಪರ್ವತದಲ್ಲಿ ಇದ್ದಾರೆ. ಪರ್ವತವನ್ನು ಹಸಿರು, ಕಂದು, ಹಳದಿ ವರ್ಣದ ಗುಂಡಾಕೃತಿಯನ್ನು ಚಿತ್ರಿಸುವ ಮೂಲಕ ಸಂಕೇತಿಸಿದ್ದಾರೆ.

೩೪. ಆಂಜನೇಯನು ಸುರಸೆಯನ್ನು ಜಯಿಸಿದ್ದು :

ಲಂಕಾ ಪಟ್ಟಣಕ್ಕೆ ಹಾಕಿ ಹೋಗುತ್ತಿರುವಾಗ ದಾರಿಯಲ್ಲಿ ಸುರಸೆ ಎಂಬ ರಾಕ್ಷಸಿಯು ಅಡ್ಡಗಟ್ಟಿ ಬಾಯಿ ತೆರೆದು ಹನುಮಂತನನ್ನು ನುಂಗಲು ದೊಡ್ಡದಾಗಿ ಬಾಯಿ ತೆರೆದಾಗ ಆಂಜನೇಯನು ಚಿಕ್ಕ ರೂಪದಿಂದ ಆಕೆಯ ಬಾಯಲ್ಲಿ ಪ್ರವೇಶಿಸಿ ಹೊರಬರುತ್ತಾನೆ. ಚಿತ್ರದಲ್ಲಿ ರಾಕ್ಷಸಿಯು ಹಾಗೂ ಆನೆ, ಕುದುರೆಗಳೂ ಹತವಾಗಿವೆ. ಕಿಂಕರ ರಾಕ್ಷಸರು ಹತರಾದ ನಂತರ ರಾವಣನು ವಿರೂಪಾಕ್ಷ, ಯುಪಾಕ್ಷಮ, ದುರ್ಧರ, ಪ್ರಭ, ಭಾಸಕರ್ಣರೆಂಬ ರಾಕ್ಷಸರನ್ನು ಆಂಜನೇಯನ ಬಳಿಗೆ ಕಳಿಸುತ್ತಾನೆ. ಅವರು ಸಹಿತ ಆಂಜನೇಯನ ಪ್ರಹಾರಗಳಿಂದ ಮರಣ ಹೊಂದುತ್ತಾರೆ. ಚಿತ್ರದಲ್ಲಿ ಸಾಲಾದ ಅಂಕಣದಲ್ಲಿ ಈ ರಾಕ್ಷಸರನ್ನು ಆಂಜನೇಯನನ್ನು ಸಂಹರಿಸುತ್ತಿರುವ ದೃಶ್ಯಗಳಿವೆ.

೩೫. ಅಕ್ಷಯಕುಮಾರನ ಮರಣ :

ವೀರಾಧಿವೀರ ರಾಕ್ಷಸರೆಲ್ಲ ಹತರಾದಾಗ ರಾವಣನು ತನ್ನ ಕಿರಿಯ ಮಗ ಅಕ್ಷಯನನ್ನು ಆಂಜನೇಯನ ಬಳಿಗೆ ಕಳಿಸುತ್ತಾನೆ. ರಥಾರೂಢನಾಗಿ ಆಂಜನೇಯನೊಂದಿಗೆ ಯುದ್ಧಕ್ಕೆ ನಿಂತ ಅಕ್ಷಯ ಕುಮಾರನ ರಥ–ಕುದುರೆಗಳನ್ನು ಆಂಜನೇಯನು ನಾಶ ಮಾಡಿದಾಗ ಪಾದಾಚಾರಿಯಾಗಿಯೇ ಆಂಜನೇಯನ ಮೇಲೆ ಪ್ರಹಾರ ಮಾಡುತ್ತಾನೆ. ಚಿತ್ರದಲ್ಲಿ ಆಂಜನೇಯನ ಪದಾಘಾತದಿಂದ ರಾವಣ ಪುತ್ರನು ಹತನಾಗುತ್ತಿರುವ ದೃಶ್ಯವಿದೆ. ರಾಕ್ಷಸನಾದ ಅಕ್ಷಯಕುಮಾರನನ್ನು ದೊಡ್ಡದಾಗಿ ಆಂಜನೇಯನನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ಇಲ್ಲಿ ಎಲ್ಲ ಕಡೆಗೂ ರಾಕ್ಷಸರನ್ನು ದೊಡ್ಡದಾಗಿ ಆಂಜನೇಯನನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ.

೩೬. ಇಂದ್ರಜಿತುವು ಆಂಜನೇಯನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿದ್ದು :

ಅನೇಕ ರಾಕ್ಷಸವೀರರು, ಮಗನಾದ ಅಕ್ಷಯಕುಮಾರ ಹತರಾದ ನಂತರ ರಾವಣನು ಪರಮವೀರನಾದ ಇಂದ್ರಜಿತುವನ್ನು ಕಳಿಸುತ್ತಾನೆ. ಸ್ವಲ್ಪ ಸಮಯದವರೆಗೆ ಹೋರಾಡಿದ ಇಂದ್ರಜೀತುವು ಈತನು ಅಸಾಮಾನ್ಯ ಶೂರನೆಂದು ಬ್ರಹ್ಮಾಸ್ತ್ರ ಪ್ರಯೋಗಿಸಿ ಆಂಜನೇಯನನ್ನು ಬಂಧಿಸುತ್ತಾನೆ. ಚಿತ್ರದಲ್ಲಿ ಇಂದ್ರಜೀತುವಿನ ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟ ಆಂಜನೇಯ ಪಕ್ಕದಲ್ಲಿ ಇಂದ್ರಜೀತು ಇದ್ದಾನೆ. ಆಂಜನೇಯನಿಗೆ ಬಂಧಿಸಲ್ಪಟ್ಟಿರುವ ಪಾಶವನ್ನು ಗುಂಡು ಗುಂಡಾದ ವಿನ್ಯಾಸದಿಂದ ಚಿತ್ರಿಸಿದೆ.

೩೭. ಕಪಿಗಳು ಲಂಕೆಗೆ ಸೇತುವೆಯನ್ನು ನಿರ್ಮಿಸಿದ್ದು :

ಚಿತ್ರಪಟ್ಟಿಕೆಯನ್ನು ವಿಭಾಗಿಸುವ ಮಧ್ಯದ ಉದ್ದನಾದ ಅಂಕಣದಲ್ಲಿ ಕಪಿಗಳು ಸಮುದ್ರಕ್ಕೆ ಸೇತುವೆಯನ್ನು ಕಟ್ಟುವ ದೃಶ್ಯ ಚಿತ್ರಿತವಾಗಿದೆ. ಕಪಿಗಳು ಗುಡ್ಡ ಪರ್ವತವನ್ನು ತಂದುಕೊಡಲು ನಳನು ಅವುಗಳನ್ನು ಹೊಂದಿಸುತ್ತ ಸೇತುವೆ ಕಟ್ಟುತ್ತಿದ್ದಾನೆ. ಸೇತುವೆ ಕಟ್ಟುವ ಕೆಲಸದಲ್ಲಿ ಅಳಿಲೊಂದು ಪಾಲ್ಗೊಂಡಿದ್ದು ಅದೂ ಸಹಿತ ಚಿಕ್ಕ ಚಿಕ್ಕ ಕಲ್ಲುಗಳನ್ನು ತಂದುಕೊಡುತ್ತಿದೆ. ಸೇತುವೆ

ಕಟ್ಟಲು ಅನೇಕ ಬೃಹತ್ ಬಂಡೆಗಳನ್ನು ಹಾಕಿದರೂ ಅವುಗಳೆಲ್ಲ ಮುಳುಗಿ ಹೋಗುತ್ತಿದ್ದು ಇದರಿಂದ ಕಂಗಾಲಾದ ವಾನರರು ಚಿಂತಿಸುತ್ತಿರಲು ರಾಮನಾಮದ ಮಹಿಮೆಯನ್ನು ತಿಳಿದುಕೊಂಡ ನಳನು ಸೇತುವೆಗೆ ಬಳಸುವ ಪ್ರತಿಯೊಂದು ಕಲ್ಲುಗಳ ಮೇಲೆಯೂ 'ರಾಮ' ಎಂಬ ಅಕ್ಷರ ಬರೆದು ನೀರಿಗೆ ಹಾಕುತ್ತಾನೆ. ಆಗ ಕಲ್ಲುಗಳು ಮುಳಗದೇ ತೇಲುತ್ತ ನಿಂತು ಅದರಿಂದ ಸೇತುವೆಯ ಬೇಗ ಮುಗಿಯಿತು ಎಂದು ರಾಮಾಯಣದಲ್ಲಿ ಹೇಳಲ್ಪಟ್ಟಿದೆ. ಈ ಚಿತ್ರದಲ್ಲಿಯೂ ನಳನು ಪ್ರತಿಯೊಂದು ಕಲ್ಲುಗಳಿಗೆ 'ರಾಮ' ಎಂಬ ಅಕ್ಷರಗಳನ್ನು ಬರೆದು ಅವುಗಳನ್ನು ಹೊಂದಿಸುತ್ತಿದ್ದಾನೆ. ಕಲ್ಲುಗಳು ಚೌಕಾಕಾರವಾಗಿದ್ದು, ಕಂದು, ಹಳದಿ, ಕೆಂಪು, ಹಸಿರು, ದಟ್ಟ ನೀಲಿ ಹೀಗೆ ವಿವಿಧ ಬಣ್ಣಗಳಲ್ಲಿವೆ. ಸಮುದ್ರದಲ್ಲಿ ಮೀನು, ಹಾವು, ಏಡಿ, ಆಮೆಗಳಂತಹ ಜಲಚರಗಳಿವೆಯಲ್ಲದೇ ಮೀನುಗಳನ್ನು ತಿನ್ನಲು ಕೊಕ್ಕರೆಯು ಕುಳಿತಂತೆ ಚಿತ್ರಿಸಿದೆ. ಈ ಪಟ್ಟಿಕೆಯ ಕೆಳಗಿನ ಬಾಗದಲ್ಲಿಯ ಎಲ್ಲ ಚಿತ್ರಗಳು ಯುದ್ಧಕಾಂಡಕ್ಕೆ ಸಂಬಂಧಿಸಿದವೆ. ಸೇತುವೆಯನ್ನು ಕಟ್ಟಿ ಲಂಕೆಯನ್ನು ಪ್ರವೇಶಿಸಿದ ಕಪಿ ಸೈನ್ಯವು ರಾವಣನ ಸೈನ್ಯದ ಜೊತೆ ಯುದ್ಧ ಮಾಡುವ ವಿವಿಧ ದೃಶ್ಯಗಳು ಇಲ್ಲಿ ಚಿತ್ರಿಸಲಾಗಿತ್ತು.

೩೮. ರಾವಣ ಸುಗ್ರೀವರ ಯುದ್ಧ :

ರಾಮ-ಲಕ್ಷ್ಮಣರ ಸಮೇತ ವಾನರ ಸೈನ್ಯವು ಲಂಕೆಯಲ್ಲಿ 'ಸುವೇಲಾದ್ರಿ' ಎಂಬ ಪರ್ವತದಲ್ಲಿ ಬೀಡು ಬಿಟ್ಟಿರುವಾಗ ಅದರ ತುದಿಯಲ್ಲಿ ನಿಂತು ಲಂಕೆಯಲ್ಲಿ ನಡೆಯುವ ಚಟುವಟಿಕೆಗಳನ್ನು ವಾನರ ಸೈನ್ಯ, ರಾಮ-ಲಕ್ಷ್ಮಣರು ವೀಕ್ಷಿಸುತ್ತಲಿರುತ್ತಾರೆ. ಸುಗ್ರೀವನು ಪರ್ವತದ ಮೇಲಿನಿಂದ ರಾವಣನನ್ನು ನೋಡಿ ಅಲ್ಲಿಂದಲೇ ಲಂಘಿಸಿ ನೇರವಾಗಿ ಮೇಲೆರಗಿ ಯುದ್ಧ ಮಾಡುತ್ತಾನೆ. ಸುಗ್ರೀವನು ಮೇಲೆ ಹಾರಿ ರಾವಣನ ಹತ್ತೂ ತಲೆಯ ಕಿರೀಟಗಳು ಕೆಳಕ್ಕುರುಳುವಂತೆ ಹೊಡೆಯುತ್ತಿರಲು ರಾವಣನು ಕೋಪ ತಾಳಿ ಸುಗ್ರೀವನನ್ನು ಹೊಡೆಯುತ್ತಾನೆ. ಸುಗ್ರೀವನು ಪುನಃ ಮೇಲಕ್ಕೆ ಹಾರಿ ರಾವಣನನ್ನು ಹೊಡೆಯುತ್ತ ತನ್ನ ಚೂಪಾದ ಉಗುರುಗಳಿಂದ ಪರಚಿ ಗಾಯ ಮಾಡುತ್ತಾನೆ. ಇಲ್ಲಿ ಸುಗ್ರೀವನು ಮೇಲೆ ಹಾರಿ ರಾವಣನನ್ನು ಹೊಡೆದಿದ್ದು ಆತನ ತಲೆಯ ಮೇಲಿರುವ ಕಿರೀಟಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬೀಳುತ್ತಿವೆ. ರಾವಣನ ಕಾವಲು ಭಟರೂ ಸಹಿತ ಸುಗ್ರೀವನ ಏಟಿನಿಂದ ಕೆಳಗುರುಳಿ ಬಿದ್ದಿದ್ದಾರೆ. ಇನ್ನೊಂದು ಕಡೆಗೆ ರಾವಣನನ್ನು ಕೈಯಿಂದ ಎಳೆದಾಡಿ ಪರಚಿ ಗಾಯಗೊಳಿಸುತ್ತಿದ್ದಾನೆ. ರಾವಣನು ಉದ್ದ ತೋಳಿನ ಅಂಗಿಯನ್ನು ಧರಿಸಿದ್ದು ನಡಕ್ಕೆ ಉತ್ತರೀಯವನ್ನು ಕಟ್ಟಿಕೊಂಡಿದ್ದಾನೆ. ರಾವಣನ ಆಕಾರ ದೊಡ್ಡದಾಗಿಯೂ ಸುಗ್ರೀವನ ಆಕಾರ ಚಿಕ್ಕದಾಗಿಯೂ ಚಿತ್ರಿಸಿದೆ.

೩೯. ರಾಮಲಕ್ಷ್ಮಣರು ರಾವಣನನ್ನು ಸಂಹರಿಸುತ್ತಿರುವುದು :

ಈ ಪಟ್ಟಿಕೆಯಲ್ಲಿಯೂ ಸಹಿತ ರಾಮ-ಲಕ್ಷ್ಮಣರು ರಾವಣನೊಡನೆ ಹೋರಾಡುತ್ತಿರುವ ಚಿತ್ರ ರಚನೆ ಮಾಡಲಾಗಿದೆ. ಬೃಹದಾಕಾರದಲ್ಲಿ ಚಿತ್ರಿಸಿದ ರಾವಣನಿಗೆ ಇಪ್ಪತ್ತು ಕೈಗಳನ್ನು ರಚಿಸಲಾಗಿದೆ.

ರಾಮನು ರಾವಣನ ಮೇಲೆ ಬಾಣದ ಮಳೆಯನ್ನೇ ಸುರಿಸಿದ್ದರೆ, ಲಕ್ಷ್ಮಣನು ಖಡ್ಗದಂತಹ ಆಯುಧದಿಂದ ಪ್ರಹಾರ ಮಾಡುತ್ತಿದ್ದಾನೆ. ರಾಮನ ಬಾಣ ಪ್ರಹಾರದಿಂದ ರಾವಣನು ಕಿರುಚಿಕೊಂಡು ಹಿಂದಕ್ಕೆ ಬೀಳುತ್ತಿದ್ದಾನೆ. ರಾವಣನ ಚಿತ್ರವನ್ನು ಕೆತ್ತಿ ತೆಗೆದು ನಾಶಪಡಿಸಲಾಗಿದೆ.

೪೦. ಕೃಷ್ಣನು ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋಗುತ್ತಿರುವುದು :

ವಿದರ್ಭ ರಾಜ್ಯದ ದೊರೆಯಾದ ಭೀಷ್ಮಕರಾಜನ ಮಗಳಾಗಿ ಹುಟ್ಟಿದ ರುಕ್ಮಿಣಿಯು ಶ್ರೀಕೃಷ್ಣನನ್ನು ಗಂಡನಾಗಿ ಪಡೆಯಲು ಬಯಸುತ್ತಿರುತ್ತಾಳೆ. ಇದನ್ನು ತಿಳಿದ ಕೃಷ್ಣನು ಉಪಾಯವಾಗಿ ರುಕ್ಮಿಣಿಯನ್ನು ಅಹಪರಿಸಿಕೊಂಡು ರಥದಲ್ಲಿ ಹೋಗುತ್ತಿರುವಾಗ ಅವಳ ಅಣ್ಣನಾದ ರುಕ್ಮಾಂಗದನು ರಥವನ್ನು ಅಡ್ಡಗಟ್ಟಿ ಕೃಷ್ಣನೊಡನೆ ಯುದ್ಧ ಮಾಡುತ್ತಾನೆ. ಕೊನೆಗೆ ಕೃಷ್ಣನಿಂದ ಸೋತು ಓಡುತ್ತಾನೆ. ಚಿತ್ರದಲ್ಲಿ ಕೃಷ್ಣನ ರಥದಲ್ಲಿ ರುಕ್ಮಿಣಿಯು ಕುಳಿತಿದ್ದು ಕೃಷ್ಣನು ಎದುರು ಬಂದ ರುಕ್ಮಾಂಗದನೊಂದಿಗೆ ಯುದ್ಧ ಮಾಡುತ್ತಿದ್ದಾನೆ. ರಥದ ಸುತ್ತಲೂ ರುಕ್ಮಾಂಗದನ ಸೈನಿಕರು ಕೃಷ್ಣನನ್ನು ಮುತ್ತಿದ್ದಾರೆ. ಬಿಳಿಯ ಕುದುರೆಗಳಿಂದ ಎಳೆಯಲ್ಪಟ್ಟ ಕೃಷ್ಣನ ರಥದಲ್ಲಿ ಸಾರಥಿಯೂ ಇದ್ದಾನೆ.

೪೧. ರಾಣಿಯೊಂದಿಗೆ ಸಿಂಹಾಸನದಲ್ಲಿ ಕುಳಿತ ರಾಜ :

ಕಿರೀಟ ಧರಿಸಿದ ರಾಜನೋರ್ವನು ತನ್ನ ರಾಣಿಯ ಜೊತೆ ಸಿಂಹಾಸನದಲ್ಲಿ ಕುಳಿತಿದ್ದಾನೆ. ಎಡಬಲಗಳಲ್ಲಿ ನಾಲ್ವರು ಸ್ತ್ರೀಯರು ಛತ್ರಚಾಮರ ಹಿಡಿದು ನಿಂತಿದ್ದಾರೆ. ಇನ್ನೊಂದು ಅಂಕಣದಲ್ಲಿ ಮಂಟಪದಲ್ಲಿರುವ ಪೀಠದಲ್ಲಿ ರಾಜರಾಣಿಯರು ಕುಳಿತಿದ್ದು ನಾಲ್ವರು ಸ್ತ್ರೀಯರು ಛತ್ರಚಾಮರ ಹಿಡಿದಿದ್ದಾರೆ. ಮತ್ತೊಂದು ಇಂತಹ ಮಂಟಪದಲ್ಲಿ ಜೊತೆಯಾಗಿ ರಾಜರಾಣಿಯರು ಕುಳಿತಿದ್ದು ಇಲ್ಲಿ ಪುರುಷ ಸೇವಕರು ಸೇವೆಯಲ್ಲಿ ತೊಡಗಿದ್ದಾರೆ. ಮೇಲ್ಭಾಗದಲ್ಲಿ ಇಬ್ಬರು ಪುರುಷರು ಛತ್ರಚಾಮರ ಹಿಡಿದಿದ್ದರೆ, ಕೆಳಭಾಗದಲ್ಲಿ ಇನ್ನಿಬ್ಬರು ಪುರುಷರು ಕೈ ಮುಗಿದುಕೊಂಡು ನಿಂತಿದ್ದಾರೆ. ಇನ್ನೊಂದು ಅಂಕಣದಲ್ಲಿ ರಾಜನು ತನ್ನ ಮಡದಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಚಿತ್ರವಿದೆ. ಹಿಂದೆ ಸೇವಕಿಯೊಬ್ಬಳು ಚಾಮರ ಬೀಸುತ್ತಿದ್ದಾಳೆ. ಮಧ್ಯದಲ್ಲಿರುವ ಮತ್ತೊಂದು ಅಂಕಣದಲ್ಲಿ ರಾಜರಾಣಿಯರು ಕುಳಿತಿದ್ದು ಎಡಬಲಗಳಲ್ಲಿ ಇಬ್ಬರು ಪುರುಷರು ಛತ್ರಚಾಮರ ಹಿಡಿದುಕೊಂಡಿದ್ದಾರೆ. ರಾಜರಾಣಿಯರು ಸಿಂಹಾಸನದ ಮೇಲೆ ಹೀಗೆ ಜೊತೆಯಾಗಿ ಕುಳಿತಿರುವ ಹಲವು ಚಿತ್ರಗಳಿವೆ.

೪೨. ಆಂಜನೇಯ ಗರುಡರ ಯುದ್ಧದ ದೃಶ್ಯ :

ಆಂಜನೇಯ ಮತ್ತು ಗರುಡರು ಖಡ್ಗ, ಗುರಾಣಿ ಹಿಡಿದು ಹೋರಾಡುತ್ತಿದ್ದು ಆಂಜನೇಯನ ಪ್ರಹಾರಗಳಿಂದ ಗರುಡನು ಕೆಳಗುರುಳಿಬಿದ್ದಿದ್ದಾನೆ. ಬೆನ್ನಿಗೆ ರೆಕ್ಕೆಗಳನ್ನು ಹೊಂದಿದ ಗರುಡನ ಮೈಬಣ್ಣ ಹಳದಿಯಾಗಿದೆ. ಹದ್ದಿನ ಕೊಕ್ಕಿನಂತಿರುವ ಆತನ ಮೂಗು ಮುಂದೆ ಚಾಚಿಕೊಂಡಿವೆ. ಆಂಜನೇಯನು ನೀಲವರ್ಣದಲ್ಲಿದ್ದು ತಲೆಯ ಮೇಲೆ ಕಿರೀಟ ಧರಿಸಿದ್ದಾನೆ.

೪೩. ಕೃಷ್ಣನ ತುಲಾಭಾರ :

ಕೃಷ್ಣನ ಸಮವಾದ ಭಾರದ ಸಂಪತ್ತನ್ನು ನಾರದ ಮುನಿಗೆ ಕೊಡಬೇಕೆಂದು ಸತ್ಯಭಾಮೆಯು ಒಂದು ತಕ್ಕಡಿಯಲ್ಲಿ ಕೃಷ್ಣನನ್ನು ಕುಳ್ಳಿರಿಸಿ ಇನ್ನೊಂದು ಕಡೆಗೆ ತನ್ನಲ್ಲಿರುವ ಆಭರಣವನ್ನೆಲ್ಲ ಹಾಕಿದರೂ ಕೃಷ್ಣನ ಭಾರಕ್ಕೆ ಸಮನಾಗುವುದಿಲ್ಲ. ಆಗ ರುಕ್ಮಿಣಿಯು ಬಂದು ಭಕ್ತಿಯಿಂದ ಒಂದು ತುಳಸೀದಳವನ್ನು ತಕ್ಕಡಿಯಲ್ಲಿ ಹಾಕಲು ಕೃಷ್ಣನ ತೂಕಕ್ಕೆ ಸಮನಾಗುತ್ತದೆ. ಇಲ್ಲಿ ತಕ್ಕಡಿಯಲ್ಲಿ ಒಂದು ಕಡೆಗೆ ಸತ್ಯಭಾಮೆಯು ತನ್ನೆಲ್ಲ ಆಭರಣ ಸಂಪತ್ತು ಹಾಕಿದ್ದರೂ, ಕೃಷ್ಣನ ಸಮತೂಕ ಬಂದಿಲ್ಲ. ಎಡಭಾಗದಲ್ಲಿ ನಾರದ ಮಹರ್ಷಿ ನಿಂತಿದ್ದು ಆತನ ಪಕ್ಕದಲ್ಲಿ ರುಕ್ಮಿಣಿದೇವಿ ಕೈಯಲ್ಲಿ ತುಳಸೀದಳ ಹಿಡಿದುಕೊಂಡು ನಿಂತಿದ್ದಾಳೆ. ಸತ್ಯಭಾಮೆಯು ಬಿಳಿ ಸೀರೆ, ರುಕ್ಮಿಣಿಯು ಕಡು ಹಸಿರು ಬಣ್ಣದ ಸೀರೆ ಉಟ್ಟುಕೊಂಡಿದ್ದಾರೆ. ಚಿತ್ರದಲ್ಲಿ ಕೃಷ್ಣನಿರುವ ತಕ್ಕಡಿಯ ಭಾಗವನ್ನು ಕೆರೆದು ನಾಶಪಡಿಸಲಾಗಿದೆ. ಪಟ್ಟಿಕೆಯ ಕೆಳಭಾಗದಲ್ಲಿ ಕೃಷ್ಣನಿಗೆ ಸಂಬಂಧಿಸಿದ ಚಿತ್ರಗಳು ರಚನೆಯಾಗಿವೆ.

೪೪. ಜಾಂಬವತಿ ಕಲ್ಯಾಣ :

ಶ್ರೀಕೃಷ್ಣನು ಜಾಂಬವಂತನನ್ನು ಸೋಲಿಸಿ ಶಮಂತಕಮಣಿಯನ್ನು ತರುವಾಗ ಜಾಂಬವತಿಯನ್ನು ಜೊತೆಗೆ ಕರೆತಂದು ವಿವಾಹವಾಗುತ್ತಿರುವ ದೃಶ್ಯ ಚಿತ್ರಿಸಿದೆ. ಕೃಷ್ಣನ ಜೊತೆಗೆ ಆತನ ತೊಡೆಯ ಮೇಲೆ ಜಾಂಬವತಿ ಕುಳಿತಿದ್ದು, ಬಲಭಾಗದಲ್ಲಿ ಕರಡಿವೇಷದ ಸ್ತ್ರೀ ಆರತಿ ಬೆಳಗುತ್ತಿದ್ದಾಳೆ. ಎಡಭಾಗಕ್ಕೆ ನಾರದ ಮುನಿಗಳು ಇದ್ದು ಕೆಳಗೆ ಕರಡೀ ಮುಖದ ಪುರುಷರು ವಾದ್ಯ ಬಾರಿಸುತ್ತಿದ್ದಾರೆ. ಪಕ್ಕದಲ್ಲಿ ಇನ್ನೂ ಇಬ್ಬರು ಕರಡೀಮುಖದ ಸ್ತ್ರೀಯರು ಪೀಠದ ಮೇಲೆ ಕುಳಿತುಕೊಂಡಿದ್ದಾರೆ. ಈ ದೃಶ್ಯದಲ್ಲಿ ಕೃಷ್ಣ ನಾರದರನ್ನುಳಿದು ಉಳಿದೆಲ್ಲ ಸ್ತ್ರೀ–ಪುರುಷರು ಕರಡೀಮುಖದವರಾಗಿ ಚಿತ್ರಿತರಾಗಿದ್ದಾರೆ.

೪೫. ಯಜ್ಞದ ದೃಶ್ಯ :

ಇದರಲ್ಲಿ ಇಬ್ಬರು ಋಷಿಗಳೂ, ಇಬ್ಬರು ಭಟ್ಟರು ಯಜ್ಞಕುಂಡದ ಸುತ್ತಲೂ ಕುಳಿತುಕೊಂಡು ಯಜ್ಞ ನೆರವೇರಿಸುತ್ತಿರುವ ಈ ಚಿತ್ರದಲ್ಲಿ ಯಜ್ಞಕಟ್ಟೆಯನ್ನು ಒಂದು ಬುಟ್ಟಿಯ ಹಾಗೆ ಚಿತ್ರಿಸಿದ್ದು, ಅದರ ಸುತ್ತಲೂ ವೃತ್ತಾಕಾರದ ವಿನ್ಯಾಸವನ್ನು ರಚಿಸಿದೆ. ಯಜ್ಞದಲ್ಲಿ ತೊಡಗಿದವರು ಹೋಮಕುಂಡಕ್ಕೆ ಬೇಕಾದ ಸಾಮಾಗ್ರಿಗಳನ್ನು ಅರ್ಪಿಸುತ್ತಿದ್ದು, ಮೇಲ್ಭಾಗದಲ್ಲಿ ಮಗು ಕೃಷ್ಣನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಯಶೋಧೆ ಮತ್ತು ನಂದಗೋಪ ಕುಳಿತಿದ್ದಾರೆ. ಇದು ಕೃಷ್ಣನು ತಮಗೆ ದೊರೆತ ಸಂತೋಷದಲ್ಲಿ ನಂದಗೋಪ ಮಹಾರಾಜನು ಮಾಡಿಸುತ್ತಿರುವ ಯಜ್ಞವಾಗಿರಬಹುದು. ಚಿತ್ರಗಳು ಕೆಳಭಾಗದಲ್ಲಿರುವುದರಿಂದ ಗೀಚಿ ಭಿತ್ತಿಯನ್ನು ಹಾಳುಮಾಡಲಾಗಿದೆ. ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.

೪೬. ಪಂಚನಾರೀ ತುರಗ :

ಈ ಚಿತ್ರದಲ್ಲಿ ಐದು ಜನ ಸ್ತ್ರೀಯರಿಂದ ರೂಪಿತವಾದ ಕುದುರೆಯ ಮೇಲೆ ಕೃಷ್ಣನು ಕುಳಿತಿದ್ದಾನೆ. ಕುದುರೆಯ ದೇಹ, ಕೈಕಾಲುಗಳು ಹೀಗೆ ಪ್ರತಿಯೊಂದು ಭಾಗವೂ ಸ್ತ್ರೀಯರ ವಿವಿಧ ವಿನ್ಯಾಸಗಳಿಂದಲೇ ರೂಪಿತವಾಗಿದೆ. ಮೇಲೆ ಕುಳಿತ ಕೃಷ್ಣನು ನಾಲ್ಕು ಕೈಗಳನ್ನು ಹೊಂದಿದ್ದು ಶಂಖ-ಚಕ್ರಗಳನ್ನು ಹಿಡಿದಿದ್ದಾನೆ. ಹಿನ್ನೆಲೆಯಲ್ಲಿ ಬೃಹತ್ ಗಿಡಗಳು ಬೆಳೆದಿವೆ.

೪೭. ನವನಾರೀ ಕುಂಜರದ ಆನೆ :

ಈ ಚಿತ್ರದಲ್ಲಿ ಒಂಬತ್ತು ಜನ ಸ್ತ್ರೀಯರಿಂದ ರೂಪಿತವಾದ ಆನೆಯ ಮೇಲೆ ಕೃಷ್ಣನು ಕುಳಿತಿದ್ದಾನೆ. ಇಲ್ಲಿಯೂ ಆನೆಯ ದೇಹದ ಪ್ರತಿಯೊಂದು ಭಾಗದ ವಿನ್ಯಾಸವನ್ನು ಸ್ತ್ರೀಯರ ವಿವಿಧ ಭಂಗಿಗಳಿಂದಲೇ ನಿರೂಪಿಸಲಾಗಿದ್ದು, ಕಲಾವಿದನ ಚತುರತೆಯನ್ನು ಬಿಂಬಿಸುತ್ತದೆ. ಆನೆಯ ಪ್ರತಿಯೊಂದು ಕಾಲಿನಲ್ಲಿ ಒಬ್ಬೊಬ್ಬರು, ಸೊಂಡಿಯಲ್ಲಿ ಒಬ್ಬಳು, ಉಳಿದ ಹೊಟ್ಟೆ ಬೆನ್ನಿನ ಭಾಗದಲ್ಲಿ ನಾಲ್ವರು, ಹೀಗೆ ಒಂಭತ್ತು ಸ್ತ್ರೀಯರಿದ್ದಾರೆ. ಆನೆಯ ಮೇಲೆ ಕುಳಿತ ಕೃಷ್ಣನಿಗೆ ಛತ್ರಚಾಮರ ಹಿಡಿದಿರುವುದಕ್ಕಾಗಿ ಆನೆಯ ದೇಹ ಅಂಗವಾಗಿರುವ ಸ್ತ್ರೀಯರ ಕೈಗಳನ್ನೇ ಚಮತ್ಕಾರಿಕವಾಗಿ ಚಿತ್ರಿಸಲಾಗಿದೆ.

೪೮. ಪಂಚನಾರಿ ಪಲ್ಲಕ್ಕಿ :

ಈ ಚಿತ್ರದಲ್ಲಿ ಐದು ಜನ ಸ್ತ್ರೀಯರಿಂದ ರೂಪಿತವಾದ ಪಲ್ಲಕ್ಕಿಯಲ್ಲಿ ಕೃಷ್ಣನು ಕುಳಿತಿದ್ದಾನೆ. ಸ್ತ್ರೀಯರಿಂದ ರೂಪಿತವಾದ ಪಲ್ಲಕ್ಕಿಯನ್ನು ಸ್ತ್ರೀಯರೇ ಹೊತ್ತುಕೊಂಡಿದ್ದಾರೆ. ಪಲ್ಲಕ್ಕಿಯ ತಳಭಾಗಕ್ಕೆ ಒಬ್ಬಳು ಸ್ತ್ರೀ ಕಾಲು ಚಾಚಿದಂತೆ ಚಿತ್ರಿಸಿದ್ದು ಅವಳ ಕಾಲುಗಳೇ ಪಲ್ಲಕ್ಕಿಯ ತಳಗಳಾಗಿದ್ದು ಅವುಗಳ ಮೇಲೆ ಕೃಷ್ಣ ಕುಳಿತಿದ್ದಾನೆ. ಎಡಬಲದಲ್ಲಿ ಇಬ್ಬರು ಸ್ತ್ರೀಯರು ಪಲ್ಲಕ್ಕಿಯ ಅಂಚುಗಳಾಗಿದ್ದರೆ ಇನ್ನಿಬ್ಬರು ಸ್ತ್ರೀಯರು ಪಲ್ಲಕ್ಕಿಯ ಮೇಲಿನ ಬಾಗಿದ ಕಮಾನು ರೂಪ ತಾಳಿದ್ದಾರೆ. ಕಮಾನು ರೂಪ ತಾಳಿದ ಸ್ತ್ರೀಯರ ಕಾಲುಗಳೇ ಪಲ್ಲಕ್ಕಿಯನ್ನೇ ಹೊರುವ ಕೋಲುಗಳಾಗಿವೆ. ಈ ರೀತಿಯ ಸ್ತ್ರೀಯರಿಂದ ರೂಪಿತವಾದ ನವನಾರೀ ಕುಂಜರದ ಆನೆ, ಪಂಚನಾರಿ ತುರಗದಂತಹ ಚಿತ್ರಗಳು ಹಂಪಿಯ ಬಳಿಯ ಆನೆಗೊಂದಿಯ ಹುಚ್ಚಪ್ಪಯ್ಯ ಮಠದಲ್ಲಿ ರಚನೆ ಆಗಿದ್ದು, ಅವು ಈಗ ಸಂಪೂರ್ಣ ನಾಶವಾಗಿವೆ. ಇಂತಹ ಚಿತ್ರಗಳಲ್ಲಿ ಕಲಾವಿದನ ಕೌಶಲ್ಯತೆ ಎದ್ದು ಕಂಡುಬರುತ್ತಿದೆ.

೪೯. ಸಮುದ್ರ ಮಂಥನ ದೃಶ್ಯ :

ಗರ್ಭಗೃಹದ ಮೇಲ್ಭಾಗದ ಅಡ್ಡ ತೊಲೆಯ ಮೇಲೆ ಈ ಚಿತ್ರ ರಚನೆಯಾಗಿದೆ. ಚಿತ್ರರಚನೆಯಾದ ತೊಲೆಯ ಭಾಗವು ನಾಲ್ಕೂವರೆ ಅಡಿ ಉದ್ದ ೮ ಇಂಚು ಅಗಲವಾಗಿದೆ. ಕೆಂಪುವರ್ಣದ ಹಿನ್ನೆಲೆಯಲ್ಲಿ ಸಮುದ್ರಮಂಥನ ದೃಶ್ಯ ರಚಿಸಿದ್ದು, ಇದರಲ್ಲಿ ದೇವತೆಗಳು ಮತ್ತು ರಾಕ್ಷಸರು ಕೂಡಿಕೊಂಡು ವಾಸುಕಿ ಎಂಬ ಸರ್ಪವನ್ನು ಹಗ್ಗ ಮಾಡಿ, ಮಂದಾರ ಪರ್ವತವನ್ನೇ

ಕಡಗೋಲು ಮಾಡಿಕೊಂಡು ಸಮುದ್ರವನ್ನು ಮಂಥನ ಮಾಡುತ್ತಿದ್ದಾರೆ. ಸಮುದ್ರ ಮಂಥನದಿಂದ ಉದ್ಭವಿಸಿದ ಕಾಮಧೇನು, ಐರಾವತ, ಮಹಾಲಕ್ಷ್ಮಿ, ಶಂಕ, ಚಕ್ರಗಳಾದಿಯಾಗಿ ಇತರ ವಸ್ತುಗಳನ್ನೂ ಚಿತ್ರಿಸಿದೆ. ದೇವತೆಗಳ ಕಡೆಗೆ ಏಳುಜನರನ್ನು ಚಿತ್ರಿಸಿದ್ದು ಅವರು ಹೆಡೆಯ ಭಾಗವನ್ನು ಹಿಡಿದಿದ್ದಾರೆ. ಬಾಲದ ಕಡೆಗಿರುವ ದಾನವರು ಸಹಿತ ಏಳು ಜನರಿದ್ದು ದಷ್ಟಪುಷ್ಟವಾಗಿದ್ದಾರೆ. ಪರ್ವತವು ಸಮುದ್ರದಲ್ಲಿ ಮುಳುಗಿ ಹೋಗಲು ಶ್ರೀಹರಿಯು ಆಮೆಯ ರೂಪದಿಂದ ಅದನ್ನು ಎತ್ತಿಹಿಡಿದಿದ್ದು, ಆಮೆ ಹಳದಿಬಣ್ಣದಲ್ಲಿ ಚಿತ್ರಿಸಿದೆ. ಇಲ್ಲಿ ಪರ್ವತವನ್ನು ಒಂದು ಬೃಹದಾಕಾರದ ಗಿಡವನ್ನು ಚಿತ್ರಿಸಿ ಸಂಕೇತಿಸಲಾಗಿದ್ದು, ಕರ್ನಾಟಕದ ಇತರೆಡೆಯ ಸಮುದ್ರಮಂಥನ ದೃಶ್ಯಗಳಿಗಿಂತ ಭಿನ್ನವಾಗಿದೆ. ಸಮುದ್ರ ನೀರಿನಲ್ಲಿ ಕೆಳಗೆ ಮೀನು, ಹಾವು, ಏಡಿ, ಕಪ್ಪೆಗಳಂತಹ ಜಲಚರಗಳನ್ನು ಚಿತ್ರಿಸಿದೆ. ಸಮುದ್ರಮಂಥನದಿಂದ ಉದ್ಭವಿಸಿದ ಅಮೃತ ಕಲಶಕ್ಕಾಗಿ ದೇವತೆಗಳು ಮತ್ತು ದಾನವರಲ್ಲಿ ಕಲಹವೇರ್ಪಟ್ಟಾಗ ಅಸುರನೊಬ್ಬ ಅದನ್ನು ಕಿತ್ತುಕೊಂಡು ಓಡುತ್ತಾನೆ. ಶ್ರೀಹರಿಯು ಮೋಹಿನಿ ರೂಪತಾಳಿ ಅಮೃತವನ್ನು ದಾನವರಿಂದ ಉಪಾಯವಾಗಿ ಪಡೆದುಕೊಂಡು ದೇವತೆಗಳನ್ನು ಸಾಲಾಗಿ ಕುಳ್ಳಿರಿಸಿ ಅಮೃತವನ್ನು ಹಂಚುತ್ತಾನೆ. ಆ ಸಾಲಿನಲ್ಲಿ ದಾನವನೂ ವೇಷಮರೆಸಿಕೊಂಡು ಕುಳಿತು ಅಮೃತ ಪಡೆಯುತ್ತಾನೆ. ಇದನ್ನು ತಿಳಿದ ವಿಷ್ಣು ತನ್ನ ಚಕ್ರದಿಂದ ಆತನನ್ನು ಸಂಹರಿಸುತ್ತಾನೆ. ಇಲ್ಲಿನ ಚಿತ್ರದಲ್ಲಿ ಮೇಲ್ಭಾಗದಲ್ಲಿ ದೇವತೆಗಳು ದಾನವರು ಸಾಲಾಗಿ ಅಮೃತ ಪಡೆಯಲು ಕುಳಿತುಕೊಂಡಿದ್ದಾರೆ. ಅಮೃತಕಲಶವನ್ನು ಹಿಡಿದ ಮೋಹಿನಿಯು ಸೌಟುಹಿಡಿದು ಅಮೃತ ಹಂಚಲು ಅಣಿಯಾಗಿದ್ದಾಳೆ. ವರ್ಣವಿನ್ಯಾಸ, ರೇಖಾಲಾಲಿತ್ಯ, ಆಕೃತಿಗಳ ಪ್ರಮಾಣ ಬದ್ಧತೆಯಿಂದ ಇದೊಂದು ಉತ್ತಮ ಚಿತ್ರವೆನ್ನಬಹುದು.

೪೯. ದಶಾವತಾರ ಚಿತ್ರಗಳು :

ಸಮುದ್ರಮಂಥನ ದೃಶ್ಯದ ಎಡಬಲಗಳಲ್ಲಿನ ತೊಲೆಗಳಲ್ಲಿ ದಶಾವತಾರ ದೃಶ್ಯವನ್ನು ಚಿತ್ರಿಸಲಾಗಿದೆ. ಬಲಭಾಗದ ತೊಲೆಯ ಮೇಲೆ ಐದು ಎಡಭಾಗದ ತೊಲೆಯ ಮೇಲೆ ಐದು ಅವತಾರದ ಚಿತ್ರಗಳನ್ನು ಚಿತ್ರಿಸಿದ್ದಾರೆ. ೮ ಇಂಚು ಎತ್ತರ ೧೦ ಇಂಚು ಅಗಲವಾಗಿರುವ ಕಮಾನಿನಂತಹ ಆಕಾರಗಳನ್ನು ರೂಪಿಸಿಕೊಂಡು ಅದರಲ್ಲಿ ಚಿತ್ರ ರಚನೆ ಮಾಡಿದ್ದಾರೆ. ಬಲಭಾಗದಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಹಾಗೂ ವಾಮನ ಅವತಾರಗಳಿದ್ದರೆ, ಎಡಭಾಗದಲ್ಲಿ ಪರಶುರಾಮ, ರಾಮ, ಕೃಷ್ಣ, ಬೌದ್ಧ ಹಾಗೂ ಕಲ್ಕಿ ಅವತಾರದ ಚಿತ್ರಗಳಿವೆ. ಮತ್ಸ್ಯ ಅವತಾರದಲ್ಲಿ ಮೀನಿನ ರೂಪದಲ್ಲಿರಿವ ವಿಷ್ಣುವು ರಾಕ್ಷಸನನ್ನು ಸಂಹರಿಸುತ್ತಿದ್ದಾನೆ. ವಿಷ್ಣುವಿನ ರೂಪವು ಸೊಂಟದ ಕೆಳಗಿನ ಭಾಗ ಮತ್ಸ್ಯ ರೂಪದಲ್ಲಿದ್ದರೆ, ಸೊಂಟದ ಮೇಲ್ಭಾಗವೆಲ್ಲ ಮಾನವರೂಪದಲ್ಲಿದೆ. ಕಿರೀಟಧಾರಿಯಾಗಿ ನಾಲ್ಕು ಕೈಗಳನ್ನು ಹೊಂದಿದ ವಿಷ್ಣುವು ರಾಕ್ಷಸನ ಜುಟ್ಟು ಹಿಡಿದು ಕತ್ತಿಯಿಂದ ಆತನ ಸಂಹಾರ ಮಾಡುತ್ತಿದ್ದಾನೆ. ಇಲ್ಲಿ ವಿಷ್ಣುವಿಗೆ ನೀಲವಾದ ಮೈಬಣ್ಣವಿರದೇ ಕೆಂಪು ಮಿಶ್ರಿತ ಹಳದಿವರ್ಣವಿದೆ. ಕೂರ್ಮಾವತಾರದಲ್ಲಿಯೂ ಸೊಂಟದ ಕೆಳಗಿನ ಭಾಗ ಕೂರ್ಮರೂಪದಲ್ಲಿದೆ. ಜುಟ್ಟು ಹಿಡಿದು

ಖಡ್ಗದಿಂದ ರಾಕ್ಷಸನನ್ನು ಸಂಹರಿಸುತ್ತಿರುವ ವಿಷ್ಣುವು ಗೌರವರ್ಣದಿಂದ ಕೂಡಿದ್ದಾನೆ. ಮತ್ಸ್ಯಾವತಾರದಲ್ಲಿ ಸ್ವಲ್ಪ ದಪ್ಪನಾದ ಮೀಸೆಗಳಿದ್ದರೆ, ಕೂರ್ಮಾವತಾರದಲ್ಲಿನ ವಿಷ್ಣುವಿಗೆ ಅದಕ್ಕಿಂತ ತುಸುವೇ ತೆಳುವಾದ ಮೀಸೆಗಳಿವೆ. ಇಲ್ಲಿ ಮತ್ಸ್ಯವತಾರಿ ವಿಷ್ಣು ಸಂಹರಿಸಲ್ಪಡುತ್ತಿರುವ ರಾಕ್ಷಸನಲ್ಲದೇ ದೂರದಲ್ಲಿ ಒಬ್ಬ ಸ್ತ್ರೀ ಆರತಿ ಬೆಳಗುತ್ತಿರುವಂತೆ ಚಿತ್ರಿಸಿದೆ. ವರಾಹ ಅವತಾರದಲ್ಲಿ ದೇಹವೆಲ್ಲ ಮಾನವನಾಕಾರವಿದ್ದು ಮುಖವು ವರಾಹ ರೂಪಿನಿಂದ ಕೂಡಿದೆ. ಇಲ್ಲಿಯೂ ರಾಕ್ಷಸನನ್ನು ಕಾಲಿನಿಂದ ಮೆಟ್ಟಿ ಆತನ ಜುಟ್ಟು ಹಿಡಿದು ಸಂಹರಿಸುತ್ತಿರುವಂತೆ ಚಿತ್ರಿಸಿದೆ. ದಟ್ಟ ಹಸಿರು ವರ್ಣದ ಧೋತರವನ್ನು ವರಾಹನಿಗೆ ಚಿತ್ರಿಸಿದ್ದು ಅದರಲ್ಲಿ ನಕ್ಷೆಯ ವಿನ್ಯಾಸಗಳೀವೆ. ನರಸಿಂಹ ಅವತಾರದಲ್ಲಿ ಕಂಬವನ್ನು ಸೀಳಿಬಂದ ನರಸಿಂಹನು ಹಿರಣ್ಯಕಶ್ಯಪನನ್ನು ಹೊಟ್ಟೆಬಗೆದು ಕೊಲ್ಲುತ್ತಿದ್ದಾನೆ. ಸೀಳಿದ ಕಂಬದ ವಿನ್ಯಾಸವು ನರಸಿಂಹನ ಹಿಂಭಾಗದಲ್ಲಿರದೇ ಆತನ ಬಗಲಲ್ಲಿ ಹಾಯ್ದು ಮುಂದೆ ಚಾಚಿಕೊಂಡಿದೆ. ಸೀಳಿದ ಕಂಬದ ಸಣ್ಣ ತುಂಡುಗಳಲ್ಲೇ ನಕ್ಷಾವಿನ್ಯಾಸವನ್ನು ರಚಿಸಿದ್ದಾರೆ. ನರಸಿಂಹನ ಬಾಯಿ ಮೈಕೈಗಳಿಗೆಲ್ಲ ರಕ್ತ ಮೆತ್ತಿಕೊಂಡು, ಹಿರಣ್ಯಕಶ್ಯಪನ ಸೀಳಿದ ಹೊಟ್ಟೆಯಿಂದ ಧಾರಾಕಾರವಾಗಿ ರಕ್ತ ಹರಿಯುತ್ತಿದೆ.

ವಾಮನಾವತಾರದಲ್ಲಿ ಪ್ರಧಾನವಾಗಿರುವಂತೆ ವಾಮನ ಮೂರ್ತಿಯನ್ನೇ ಚಿತ್ರಿಸಿದ್ದು, ಬಲಿಚಕ್ರವರ್ತಿಯನ್ನು ಕೇವಲ ಮುಖಮಾತ್ರ ಚಿತ್ರಿಸಿ ಸಾಂಕೇತಿಸಿದೆ. ಹಸಿರು ಪಂಚೆ, ಕೆಂಪು ವಸ್ತ್ರ ತಲೆಯಲ್ಲಿ ಚಿತ್ರಿಸಿರುವುದು ವಿರುದ್ಧ ವರ್ಣಗಳಾದರೂ ಹಿನ್ನೆಲೆಯ ಕೆಂಪುವರ್ಣದಿಂದಾಗಿ ವರ್ಣಸಾಮರಸ್ಯ ಉಂಟಾಗಿದೆ. ಎಡಗೈಯಲ್ಲಿ ಕಮಂಡಲ, ಬಲಗೈಯಲ್ಲಿ ಛತ್ರಿಯನ್ನು ಹಿಡಿದ ವಾಮನನು ಕಾಲಿನಿಂದ ಬಲಿಯನ್ನು ಪಾತಾಳಕ್ಕೆ ತುಳಿಯುತ್ತಿದ್ದಾನೆ. ಒಂದು ಚೌಕಾದ ವಿನ್ಯಾಸ ರೂಪಿಸಿ ಅದರಲ್ಲಿ ಬಲಿಚಕ್ರವರ್ತಿಯ ತಲೆಯನ್ನು ಚಿತ್ರಿಸಲಾಗಿದೆ. ಆಕಾಶದಲ್ಲಿ ಕೆಂಪುಬಣ್ಣದ ಸೂರ್ಯನು ಚಿತ್ರಿತನಾಗಿದ್ದಾನೆ. ಪರಶುರಾಮ ಅವತಾರದಲ್ಲಿ ಸಹಸ್ರಾರ್ಜುನನ ಚಿತ್ರವನ್ನು ಚಿಕ್ಕದಾಗಿ ಪರಶುರಾಮನ ಚಿತ್ರವನ್ನು ದೊಡ್ಡದಾಗಿ ಬರೆಯಲಾಗಿದೆ. ಇಲ್ಲಿ ಸಹಸ್ರಾರ್ಜುನನಿಗೆ ನಾಲ್ಕು ಕೈಗಳನ್ನು ಚಿತ್ರಿಸಿದ್ದು ಪರಶುರಾಮನಿಗೆ ಎರಡು ಕೈಗಳಿವೆ. ಕೊಡಲಿಯು ಪರಶುರಾಮನ ಆಯುಧವಾಗಿದ್ದು ಅದರಿಂದಲೇ ಸಹಸ್ರಾರ್ಜುನನ್ನು ಸಂಹರಿಸುತ್ತಿದ್ದಾನೆ. ರಾಮಾವತಾರದಲ್ಲಿ ದಟ್ಟ ನೀಲವರ್ಣದ ರಾಮನನ್ನು ದೊಡ್ಡದಾಗಿಯೂ ಹತ್ತು ತಲೆಯ ರಾವಣನನ್ನು ಚಿಕ್ಕದಾಗಿಯೂ ಚಿತ್ರಿಸಿದೆ. ತಲೆಯ ಮೇಲೆ ಕಿರೀಟ ಧರಿಸಿದ ರಾಮನು ಕಂದುಬಣ್ಣದ ಗೆರೆಗಳ ನಕ್ಷೆ ಇರುವ ಉದ್ದತೋಳಿನ ಅಂಗಿ ಧರಿಸಿದ್ದಾನೆ. ತೆಳುಹಳದಿ ಬಣ್ಣದ ಪಂಚೆ ಉಟ್ಟುಕೊಂಡಿದ್ದು ಅದೇ ವರ್ಣದ ವಸ್ತ್ರವನ್ನು ನಡುವಿಗೆ ಕಟ್ಟಿದ್ದಾನೆ. ರಾಮನಿಂದ ಸಂಹರಿಸಲ್ಪಡುತ್ತಿರುವ ರಾವಣನು ಇಪ್ಪತ್ತು ತೋಳುಗಳನ್ನು ಹೊಂದಿದ್ದು ಅವುಗಳಲ್ಲಿ ಆಯುಧಗಳನ್ನು ಹಿಡಿದಿದ್ದಾನೆ.

ಕೃಷ್ಣಾವತಾರದಲ್ಲಿ ಕೊಳಲು ನುಡಿಸುತ್ತಿರುವಂತೆಯೇ ಕೃಷ್ಣನು ರಾಕ್ಷಸನ ಸಂಹಾರದಲ್ಲಿಯೂ ತೊಡಗಿದ್ದಾನೆ. ರಾಕ್ಷಸನ ಜುಟ್ಟು ಹಿಡಿದು ಎಳೆಯುತ್ತಿರುವ ಕೃಷ್ಣನಿಗೆ ರಾಕ್ಷಸನಿಗಿಂತ ದಪ್ಪನಾದ

ಮೀಸೆ ಚಿತ್ರಿಸಲಾಗಿದೆ. ಬೌದ್ಧಾವತಾರದಲ್ಲಿ ಪದ್ಮಾಸನದಲ್ಲಿ ಕುಳಿತ ಬುದ್ಧನು ಕೈಗಳನ್ನು ಮುಂದಿಟ್ಟುಕೊಂಡು ಕುಳಿತಿದ್ದಾನೆ. ಅಲಂಕಾರಯುಕ್ತವಾದ ಪೀಠದ ಮೇಲೆ ಬುದ್ಧ ಚಿತ್ರಿಸಲ್ಪಟ್ಟಿದ್ದು ಅತನ ಹಿಂದೆ ಆನಿಕೆಯದಿಂಬು ಚಿತ್ರಿಸಿದೆ. ಬುದ್ಧನ ಅಕ್ಕಪಕ್ಕದಲ್ಲಿ ಚಾಮರ ಬೀಸುವ ಸ್ತ್ರೀಯರು ಚಿತ್ರಿತರಾಗಿದ್ದರೆ. ಉತ್ತರ ಕರ್ನಾಟಕದ ಉಳಿದೆಡೆಯ ಬೌದ್ಧಾವತಾರ ಚಿತ್ರಗಳಿಗಿಂತ ಇದು ಭಿನ್ನ ಶೈಲಿಯಲ್ಲಿದೆ. ಕಲ್ಕಿ ಅವತಾರದಲ್ಲಿ ಕುದುರೆಯ ಮೇಲೆ ಕೊಡೆಯುನ್ನು ಕಟ್ಟಿ ಅದನ್ನು ಹಗ್ಗ ಹಿಡಿದು ನಡೆಸುತ್ತಿರುವಂತೆ ಚಿತ್ರಿಸಿದೆ. ಕುದುರೆಯ ಆಕಾರ, ಪ್ರಮಾಣಗಳು, ಅದರ ರೇಖಾವಿನ್ಯಾಸಗಳು ಉತ್ತಮವಾಗಿವೆ. ಈ ದಶಾವತಾರ ಚಿತ್ರಗಳು ಇದೆ ಜಿಲ್ಲೆಯಲ್ಲಿಯೆ ಕಾವಿ ಚಿತ್ರಗಳ ದಶಾವತಾರ ಚಿತ್ರಗಳಿಗಿಂತ ಬೇರೆ ವಿನ್ಯಾಸದಲ್ಲಿ ಚಿತ್ರಿಸಲ್ಪಟ್ಟಿವೆ.

ಪ್ರಸ್ತುತ ಇಲ್ಲಿನ ದೇವಾಲಯ ನಾಶವಾಗಿರುವುದರಿಂದ ಭಿತ್ತಿಚಿತ್ರಗಳು ಕೂಡ ಕಣ್ಮರೆಯಾಗಿರುತ್ತವೆ. ಅಂತಹ ವಿಷಯವನ್ನು ಇಲ್ಲಿ ಸಂಗ್ರಹಿಸಿ ಸಂರಕ್ಷಿಸುವ ಜವಾಬ್ದಾರಿ ಈ ಅಧ್ಯಯನದ್ದಾಗಿರುವ ಹಿನ್ನಲೆಯಲ್ಲಿ ಡಾ.ಎಸ್.ಸಿ.ಪಾಟೀಲರವರ ಬುಜರಕಂಚನಹಳ್ಳಿಯ ಭಿತ್ತಿ ಚಿತ್ರಕಲೆ ಒಂದು ಅಧ್ಯಯನದಿಂದ ಮಾಹಿತಿಯನ್ನು ಪಡೆದು ಬಳಸಿಕೊಳ್ಳಲಾಗಿರುತ್ತದೆ.

ಸೌಮ್ಯಕೇಶವ ದೇವಾಲಯ, ನಾಗಮಂಗಲ :

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿರುವ ಈ ದೇವಾಲಯವು ಮೈಸೂರು ಅರಸರ ಕಾಲಕ್ಕೆ ನಿರ್ಮಾಣವಾಗಿದೆ. ಇಲ್ಲಿನ ಕೆಲವೇ ಕೆಲವು ಚಿತ್ರಗಳು ೧೯ನೆಯ ಶತಮಾನದಲ್ಲಿ ರಚನೆಯಾಗಿದ್ದು ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದ ಕೆಲವು ಭಿತ್ತಿ ಚಿತ್ರಗಳನ್ನು ಕಾಣಬಹುದು. ಅವುಗಳ ವಿಶ್ಲೇಷಣೆ ಈ ಕೆಳಗಿನಂತಿದೆ.

ಭಿತ್ತಿಚಿತ್ರಗಳ ವಸ್ತು ವಿಷಯ :

ಚಿತ್ರ-೧ : ನಾಗಮಂಗಲ ಇರುವುದು ಮಂಡ್ಯ ಜಿಲ್ಲೆಯಲ್ಲಿ. ಇದು ಒಂದು ತಾಲ್ಲೂಕು ಪ್ರದೇಶವಾಗಿದ್ದು, ನಾಗಮಂಗಲವನ್ನು ದೇವಾನುದೇವತೆಗಳ ಬೀಡೆಂದು ಕೆರಯುತ್ತಾರೆ. ಅಷ್ಟರ ಮಟ್ಟಿಗೆ ಪಟ್ಟಣ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳು ಸಿಗುತ್ತಾ ಹೋಗುತ್ತವೆ. ಅಂತಹವುಗಳಲ್ಲಿ ಅತಿಮುಖ್ಯವಾದದ್ದು. ಈ ಸೌಮ್ಯಕೇಶವ ದೇವಾಲಯ ಇಮ್ಮಡಿ ಬಿಲ್ಲಾಳನ ಕಾಲಕ್ಕೆ ಸೇರಿದ ಕ್ರಿ.ಶ. ೧೧೭೦ರ ಶಾಸನವು ನಾಗಮಂಗಲದ ಚನ್ನಕೇಶವ ದೇವರಿಗೆ ಹಾಲತ್ತಿ (ಹಾಲ್ತಿ) ಗ್ರಾಮದಲ್ಲಿ ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ. ವಿಜಯನಗರ ಕಾಲದಲ್ಲಿ ಪಾತಾಳಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರ ಗೋಪುರ, ಬಲಕ್ಕಿರುವ ಎರಡಂಕಣದ ಕೈಸಾಲೆ ಮಂಟಪ ಮತ್ತು ಎದುರಿಗಿರುವ ೫೫ ಅಡಿ ಎತ್ತರದ ಗರಡು ಗಂಭಗಳನ್ನು ಸೇರಿಸುವ ಮೂಲಕ ದೇವಾಲಯವನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಲಾಗಿದೆ. ಈ ದೇವಾಲಯದ ಶಿಖರವು ವಿಜಯನಗರ ಕಾಲದ ದೇವಾಲಯಗಳ ಶೈಲಿಯಲ್ಲಿಯೇ ಇರುವುದು ತುಂಬಾ ವಿಶೇಷವಾಗಿದೆ.

ಚಿತ್ರ-೨ : ಈ ಚಿತ್ರವು ದೇವಾಲಯದ ಒಳ ಪ್ರದೇಶದ ಬಲಬದಿಯಲ್ಲಿ ಲಕ್ಷ್ಮಿ ಗರ್ಭಗುಡಿಯ ಹೊರಾಂಗಣದ ಗೋಡೆಯ ಮೇಲೆ ರಚಿಸಲಾಗಿದೆ. ಈ ಚಿತ್ರ ಮತ್ತು ರೇಖೆ, ಬಣ್ಣಗಳನ್ನು ನೋಡುತ್ತಿದ್ದರೆ ಬಹುಶಃ ವಿಜಯನಗರ ಕಾಲದ ಭಿತ್ತಿ ಚಿತ್ರಗಳ ಪ್ರಭಾವ ಬೀರಿದೆ ನೋಡುತ್ತಿದ್ದರೆ ಬಹುಶಃ ವಿಜಯನಗರ ಕಾಲದ ಭಿತ್ತಿಚಿತ್ರಗಳ ಪ್ರಭಾವ ಬೀರಿದೆ ಎನಿಸುತ್ತಿದೆ. ಬಣ್ಣ ಮತ್ತು ರೇಖೆಗಳು ಸ್ಪಷ್ಟತೆಯನ್ನು ನೀಡುತ್ತಿವೆ. ಗರ್ಭಗುಡಿಯ ಮೇಲಂಚಿನಲ್ಲಿರುವ ಈ ಚಿತ್ರದಲ್ಲಿ ಅನಂತಶಯನ (ವಿಷ್ಣು) ತನ್ನ ಆಸನದಲ್ಲಿ ಮಲಗಿರುವ ದೃಶ್ಯವನ್ನು ಕಾಣಬಹುದು. ಹಿಂಬದಿಯಲ್ಲಿ ಋಷಿ ಕೈಮುಗಿದು ನಿಂತಿದ್ದು, ಇಬ್ಬರ ನಡುವೆ ಸಂಭಾಷಣೆ ನಡೆಯುತ್ತಿರುವಂತೆ ಭಾಸವಾಗುತ್ತಿದೆ. ಏಳು ಅಡಿ ಸರ್ಪದ ಮೇಲೆ ಮಲಗಿರುವ ವಿಷ್ಣುವಿನ ಕಾಲಬಳಿ ಲಕ್ಷ್ಮಿ ಕುಳಿತಿರುವುದು ಸ್ಪಷ್ಟವಾಗಿಲ್ಲ. ಆದರೂ ಚಿತ್ರವನ್ನು ಚೌಕಟ್ಟಾಕಿ ತೋರಿಸಲಾಗಿದೆ. ಇದರ ಅಕ್ಕ ಪಕ್ಕದಲ್ಲಿ ದೊಡ್ಡ ಘಂಟೆಗಳನ್ನು ರೇಖೆಗಳ ಮೂಲಕ ತೋರಿಸಿರುತ್ತಾರೆ. ಇನ್ನೂ ಹಾಗೇ ಕೆಳಗಡೆ ಬಂದರೆ ಉದ್ದನೆಯ ಬಿಳಿ ನಾಮ ಮತ್ತು ಎಡ, ಬಲಭಾಗದಲ್ಲಿ ಚಕ್ರ ಮತ್ತು ಶಂಖವನ್ನು ತೋರಿಸಲಾಗಿದೆ. ವಿಷ್ಣುವಿಗೆ ಹಲವಾರು ಹೆಸರಿಗಳಿವೆ ಅದರಲ್ಲಿ ಸೌಮ್ಯ ಕೇಶವನ್ನು ಒಂದು ಎಂಬಂತೆ ಈ ದೇವಾಲಯವು ವೈಷ್ಣವ ಧರ್ಮಕ್ಕೆ ಸೇರ್ಪಡೆಯಾಗಿದೆ. ಇಲ್ಲಿ ಪೂಜಾ ವಿಧಿ ವಿಧಾನಗಳು ಬ್ರಾಹ್ಮಣರ ಆಚಾರ-ವಿಚಾರಗಳಿಗೆ ಹೊಂದಿಕೊಂಡಿವೆ. ಈ ಭಾಗದ ಚಿತ್ರಗಳು ರೇಖೆಗಳಲ್ಲಿಯೇ ಹೆಚ್ಚು ಸೌಂದರ್ಯವನ್ನು ತುಂಬಿದ್ದವುಗಳಾಗಿವೆ.

ಚಿತ್ರ-೩ : ಈ ಚಿತ್ರವು ಗರ್ಭಗುಡಿಯ ಮುಂಭಾಗಿಲಿನಲ್ಲಿ ರಚಿತವಾಗಿದ್ದು, ರೇಖೆಗಳಿಂದಲೇ ಚಿತ್ರಕ್ಕೆ ಚಾಲನೆ ನೀಡಲಾಗಿದೆ. ಬಾಗಿಲ ತೊಲೆಯಲ್ಲಿ ಹೂವಿನ ಅಲಂಕಾರವನ್ನು ರಚಿಸಲಾಗಿದ್ದು, ಅದರ ಪಕ್ಕದಲ್ಲಿ ಸೇವಕ ಬೆತ್ತವನ್ನಿಡಿದು ಕಾವಲು ಕಾಯುತ್ತಿರುವುದನ್ನು ಕಾಣಬಹುದು. ನೀಲಿ ಬಣ್ಣದಿಂದ ಬರೆದಿರುವ ಈ ಚಿತ್ರವು ಹಂಪಿಯ ವಿರೂಪಾಕ್ಷ ದೇವಾಲಯದ ನಾಗಮಂಟಪದಲ್ಲಿನ ಚಿತ್ರಗಳನ್ನು ಹೋಲುತ್ತದೆ. ಅಲ್ಲಿಯೂ ಕೂಡ ಇದೇ ರೀತಿಯ ರೇಖೆ ಮತ್ತು ಚಿತ್ರಗಳನ್ನು ಕಾಣಬಹುದು. ಇನ್ನೂ ಹೆಚ್ಚಿನ ವಿಷಯಗಳು ಇಲ್ಲಿ ಗೋಚರಿತವಾಗಿದ್ದರೂ ಅವುಗಳು ಗೌಣವಾಗಿವೆ ಅಂದರೆ ಮಾಸಿ ಹೋಗಿ ನಾಶವಾಗಿರುತ್ತವೆ. ಆದರೂ ವಿಷ್ಣುವಿನ ಆರಾಧನೆಯ ಪ್ರತೀಕ ಲಕ್ಷ್ಮಿಯ ಬದುಕಿನ ಕ್ಷಣಗಳನ್ನು ಇಲ್ಲಿ ಸ್ಮರಿಸಬಹುದು.

ಚಿತ್ರ-೪ : ಈ ಚಿತ್ರವೂ ಕೂಡ ಮೇಲಿನ ವಿವರಣೆಯ ಥರವಿದ್ದು, ಇಲ್ಲಿಯೂ ಅದೇ ಸನ್ನಿವೇಶವನ್ನು ಕಾಣಬಹುದು. ಗರ್ಭಗುಡಿಯ ಬಲಭಾಗದಲ್ಲಿ ಸೇವಕನಿದ್ದು, ಅಕ್ಕಪಕ್ಕವಿರುವ ಎರಡೂ ಚಿತ್ರಗಳಲ್ಲೂ ಒಂದೇ ಹೋಲಿಕೆಯನ್ನು ಕಾಣಬಹುದು. ಹೂವಿನ. ಎಲೆಯ ವಿನ್ಯಾಸವಿರುವ ಪಟ್ಟಿಕೆಯನ್ನು ರಚಿಸಲಾಗಿದ್ದು, ಆ ಪಟ್ಟಿಯ ಹೊರಭಾಗದಲ್ಲಿ ಕಾವಲುಗಾರರನ್ನು ನಿಲ್ಲಿಸಲಾಗಿದೆ. ಅವನ ಕೈಯಲ್ಲಿ ಬೆತ್ತವಿದ್ದು, ಕೈಕಟ್ಟಿ ನಿಂತಿದ್ದಾನೆ. ಕಚ್ಚೆಪಂಚೆ ಹಾಕಿದ್ದು, ಸೊಂಟಕ್ಕೆ ದೋತ್ರವನ್ನು ಸುತ್ತುವರಿದಂತಿದೆ. ಒಂದಿಷ್ಟು ಜುಟ್ಟು, ಹಣೆಗೆ ಮೂರುನಾಮ, ಕೊರಳಲ್ಲಿ ರುದ್ರಾಕ್ಷಿ ಸರವಿದ್ದು

ಕೈಕಟ್ಟಿ ನಿಂತಿದ್ದಾನೆ ಮೇಲೆ ಬೃಹತ್ ಶಂಖ, ನಾಮವನ್ನು ಕಾಣಬಹುದು ಇಲ್ಲಿ ಎರಡು ವರ್ಣಗಳು ಶ್ರೇಷ್ಠವೆನಿಸಿವೆ ಒಂದು ನೀಲಿ ಮತ್ತೊಂದು ಕೆಂಪುಮಿಶ್ರಿತ ನೀಲಿ ಭಕ್ತಿಯ ಪರಕಾಷ್ಟೆಗೆ ಲಭ್ಯವಾಗಿವೆ ಚಿತ್ರ ಎನಿಸುತ್ತಿದೆ.

ಚಿತ್ರ–೫ : ಈ ಚಿತ್ರದಲ್ಲಿ ಸ್ಪಷ್ಟವಾಗಿ ಮೇಲಿನ ಎರಡು ಚಿತ್ರಗಳಿಗೆ ಉತ್ತರ ಲಭ್ಯವಿದೆ. ಗರ್ಭಗುಡಿಯ ಕತ್ತಲೆಯಿಂದ ಆವೃತವಾಗಿದೆ. ಒಳಗಡೆ ಲಕ್ಷ್ಮಿದೇವಿಯ ಮೂರ್ತಿ ಪ್ರತಿಷ್ಠಾಪನೆಯಾಗಿದ್ದು ವಾರದ ದಿನ ಪೂಜೆ, ಪುರಸ್ಕಾರಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಕಲ್ಲಿನಿಂದ ಕೆತ್ತಿದ ಮೂರ್ತಿಯಿದ್ದು, ಒಡವೆ, ಸೀರೆಗಳಿಂದ ಅಲಂಕಾರವನ್ನು ಮಾಡಿರುತ್ತಾರೆ ಗರ್ಭಗುಡಿಯ ಮುಂಭಾಗದಲ್ಲಿ ಎಡ–ಬಲಭಾಗಗಳಲ್ಲಿ ಸೇವಕರು ನಿಂತಿದ್ದಾರೆ ಉಳಿದಂತೆ ಚಿತ್ರಗಳು ನಾಶಗೊಂಡು ಕಾಣಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ ಅದು ಬಿಟ್ಟರೇ ಹೂವಿನ ಅಲಂಕಾರವನ್ನು ಕಾಣಬಹುದು.

ಚಿತ್ರ–೬ : ಮೊದಲನೆ ಚಿತ್ರದಲ್ಲಿ ಸೂಚಿಸಿರುವಂತೆ ಈ ಚಿತ್ರದಲ್ಲಿಯೂ ಅದೇ ದೃಶ್ಯವಿದ್ದು, ಶ್ರೀನಿವಾಸ (ಸೌಮ್ಯಕೇಶವ) ನೀಲಿ ಮೈಯುಳ್ಳವ ತನ್ನ ಆಸನದಲ್ಲಿ ಮಲಗಿದ್ದು. ಸೇವಕರು ಚರ್ಚೆಯಲ್ಲಿ ತೊಡಗಿರುವಂತೆ ಈ ಚಿತ್ರ ಭಾಸವಾಗುತ್ತದೆ. ವೈಷ್ಣವ ಧರ್ಮಕ್ಕೆ ಸೇರಿದೆ ಎಂಬುದಕ್ಕೆ ಚಕ್ರ, ಶಂಖ ಮತ್ತು ನಾಮಗಳನ್ನು ಬೃಹತ್ತಾಗಿ ತೋರಿಸಲಾಗಿದೆ ಮತ್ತೊಂದು ವಿಶೇಷವೆಂದರೆ ಚಿತ್ರದ ಎಡಭಾಗದಲ್ಲಿ ಹನುಮಂತ ನಿಂತಿದ್ದು, ವಿಷ್ಣುವಿಗೆ ನಮಸ್ಕರಿಸುವ ದೃಶ್ಯ ಎದ್ದು ಕಾಣುತ್ತಿದೆ ಈ ಭಿತ್ತಿ ಚಿತ್ರಗಳು ಅಳುವಿನ ಅಂಚಿನಲ್ಲಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ನಾಶವಾಗುವ ಎಲ್ಲಾ ಲಕ್ಷಣಗಳು ಎದ್ದು ಕಾಣುತ್ತಿವೆ. ಆ ದೃಷ್ಠಿಯಿಂದ ಸಂಬಂಧಪಟ್ಟವರು ಇವರುಗಳನ್ನು ರಕ್ಷಿಸಬೇಕಾಗಿರುವುದು ಅನಿವಾರ್ಯವಾಗಿದೆ ಹಿಂಬದಿಯ ಕಲ್ಲಿಗೆ ತೆಳುವಾದ ಬಣ್ಣವನ್ನು ಲೇಪಿಸಲಾಗಿದ್ದು ಅದರ ಮೇಲೆ ನೀಲಿ, ಕಪ್ಪು, ಬಿಳಿ ಮತ್ತು ಕೆಂಪು ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ತೇರುಮಲ್ಲೇಶ್ವರ, ಹಿರಿಯೂರು :

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿರುವ ಈ ದೇವಸ್ಥಾನದ ಮೂಲ ಹೆಸರು ಮಲ್ಲೇಶ್ವರ, ಚಂದ್ರಮೌಳಿ, ಮಲ್ಲಯ್ಯ, ಮಲ್ಲಿನಾಥ ಎಂದೆಲ್ಲಾ ಕರೆಯುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಯುಗಟಿ ಎಂಬ ಊರಿನ ರಥೋತ್ಸವ ನೆಡೆಯುವಾಗ ಒಮ್ಮೆ ಭೀಕರ ಮಳೆ, ಗಾಳಿಗೆ ಆ ರಥವು ಹರಿಯುವ ವೇದಾವತಿ ನದಿಯಲ್ಲಿ ತೇಲುತ್ತಾ ಬಂದು ಹಿರಿಯೂರಿನ ಬಳಿ ನಿಂತಿತು. ಆ ರಥವನ್ನು ದೇವಾಸ್ಥಾನಕ್ಕೆ ತಂದು ಪುನರ್ ನಿರ್ಮಾಣ ಮಾಡಿ ಶ್ರೀ ಮಲ್ಲೇಶ್ವರನ ಸನ್ನಿದಿಯಲ್ಲಿ ಎಳೆದದ್ದರ ಪರಿಣಾಮ ಅಲ್ಲಿಂದ ಇಲ್ಲಿಯವರೆಗೂ ಅದು ತೇರುಮಲ್ಲೇಶ್ವರ ಎಂದು ಕರೆಯಲ್ಪಡುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ತನ್ನದೇಯಾದ ಐತಿಹಾಸಿಕ ಸಾಂಸ್ಕೃತಿಕ ಸ್ಥಾನವನ್ನು ಪಡೆದಿದೆ. ಇಲ್ಲಿ ವೇದಾವತಿ ನದಿಯಾಗಿ ನಿಂತಿದ್ದಾಳೆ, ಈ ನದಿಯು ಬಾಬಾಬುಡನ್ ಗಿರಿ ತಪ್ಪಲಲ್ಲಿ ಹುಟ್ಟಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು, ಹೊಸದುರ್ಗದ ಮೂಲಕ ಹರಿದು ಹಿರಿಯೂರನ್ನು ಪ್ರವೇಶಿಸುತ್ತದೆ. ಬಳ್ಳಾರಿ ಜಿಲೆ ನಾಗಾರ್ಜುನ ಅಣೆಕಟ್ಟೆಗೆ ಸೇರುತ್ತದೆ. ಈ ನದಿಯ ದಂಡೆಯಲ್ಲಿ ದಕ್ಷಿಣ ಕಾಶಿ ಎಂದು ಪ್ರಸಿದ್ದವಾದ ತೇರು ಮಲ್ಲೇಶ್ವರ ಎಂಬ ಪಟ್ಟಣವು ನಿರ್ಮಿತವಾಗಿದೆ. ಈ ನದಿಗೆ ತುಮಕೂರು ಜಿಲ್ಲೆ ಕೊರಟಗೆರೆಯಿಂದ ಬರುವ ಸುವರ್ಣಮುಖಿ ನದಿಯು ಹಿರಿಯೂರಿಗೆ ಸಂಗಮೇಶ್ವರ ದೇವಸ್ಥಾನದ ಬಳಿಯ ವೇದಾವತಿ ನದಿ ಸೇರಿ ಕೂಡಲಸಂಗಮವಾಗಿ ಪ್ರತಿ ವರ್ಷ ಶ್ರಾವಣಮಾಸದಲ್ಲಿ ಎಲ್ಲಾ ಹಳ್ಳಿಯ ದೇವಾನು ದೇವರುಗಳು ಅಲ್ಲಿಗೆ ಹೋಗಿ ಗಂಗಾ ಪೂಜೆ ನೆರವೇರಿಸುತ್ತವೆ. ಹಾಗಾಗಿ ಇದು ಪುಣ್ಯಕ್ಷೇತ್ರವೂ ಹೌದು. ಇಲ್ಲಿ ಪ್ರತಿ ಶ್ರಾವಣ ಸೊಮವಾರ ವಿಶೇಷ ಪೂಜೆಕಾರ್ಯಕ್ರಮಗಳು ಜರುಗುತ್ತಿರುತ್ತವೆ.

ಹಿರಿಯೂರು ದಕ್ಷಿಣ ಕಾಶಿಯೆಂದೇ ಪ್ರಸಿದ್ದವಾದ ಶ್ರೀತೇರುಮಲ್ಲೇಶ್ವರ ದೇವಸ್ಥಾನವು ೧೬ನೇ ಶತಮಾನದಲ್ಲಿ ನಿರ್ಮಿತವಾಗಿದೆ. ಇದರ ಪೌರಣಿಕ ಹಿನ್ನಲೆಯಲ್ಲಿ ಹೇಮರೆಡ್ಡಿ ಮಲ್ಲಮ್ಮ ವೃದ್ದೆಯಾಗಿದ್ದಾಗ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಹೋಗಲಾರದೇ ಅದೇ ಚನ್ನ ಮಲ್ಲಿಕಾರ್ಜುನ ಆಕೆಯ ಸ್ವಪ್ನದಲ್ಲಿ ಗೋಚರಿಸಿ ಇಲ್ಲಿ ನೆಲೆಸಿದನೆಂದು ಪ್ರತೀತಿ ಇದೆ. ಈ ದೇವಾಲಯವನ್ನು ಪಾಳೇಗಾರ ಕೆಂಚಪ್ಪನಾಯಕ ಕ್ರಿ.ಶ.೧೪೬೬ರಲ್ಲಿ ಕಟ್ಟಿಸಿದನೆಂದು ಇತಿಹಾಸ ಹೇಳುತ್ತದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು, ಇದರ ರಾಜಗೋಪುರ ೪೫ ಅಡಿ ಎತ್ತರವಿದೆ. ಇದು ಹಂಪಿ ವಿರೂಪಾಕ್ಷ ದೇವಸ್ಥಾನದ ರಾಜಗೋಪುರವನ್ನು ಹೋಲುತ್ತದೆ.

ಈ ಗೋಪುರದಲ್ಲಿ ದೊಡ್ಡದಾದ ಕಲ್ಲಿನಿಂದ ರಚಿಸಲ್ಪಟ್ಟ ದ್ವಾರಬಾಗಿಲು ಇರುತ್ತದೆ. ಮಹಾದ್ವಾರವನ್ನು ಪ್ರವೇಶಿಸಿದಾಗ ಎರಡು ವಿಗ್ರಹಗಳು ಕಾಣಲ್ಪಡುತ್ತವೆ ಅವುಗಳ ಕೈಯಲ್ಲಿ ಖಡ್ಗ, ಬುಜದ ಮೇಲೆ ಪಾಳಿ ಹಾಕಿಕೊಂಡಿರುವ ಹಾಗೆ ಕಾಣಲ್ಪಡುತ್ತವೆ. ಇಲ್ಲಿ ಗೋಪುರದಲ್ಲಿ ಒಟ್ಟು ಏಳು ಅಂತಸ್ತುಗಳಿವೆ. ಪ್ರತಿ ಅಂತಸ್ತಿನ ಸುತ್ತ ನೂರಾರು ಶಿಲ್ಪಗಳನ್ನು ಕಾಣಬಹುದು ಅವು ಶೈವ ಧರ್ಮಕ್ಕೆ ಸೇರಿದವುಗಳಾಗಿರುತ್ತವೆ. ಹಿರಿಯೂರಿನಲ್ಲಿರುವ ಈ ದೇವಾಲಯವು ವಿಜಯನಗರ ಕಾಲಕ್ಕೆ ನಿರ್ಮಾಣಗೊಂಡಿದೆ. ಆದರೆ ಚಿತ್ರಗಳನ್ನು ೧೭ನೇ ಶತಮಾನದ ಹೊತ್ತಿಗೆ ಬರೆಯಲಾಗಿದೆ. ಇಲ್ಲಿ ಮುಖ್ಯವಾಗಿ ಗಿರಿಜಾಕಲ್ಯಾಣ, ಯುದ್ಧದ ದೃಶ್ಯ, ಬೇಟೆಗಾರರು, ಜಟ್ಟಿಗಳು, ತ್ರಿಪುರ ಸಂಹಾರ, ಅಷ್ಟದಿಕ್ಪಾಲಕರು ಹಾಗೂ ಕೆಲವು ಸಾಮಾಜಿಕ ಚಿತ್ರಗಳು ಮುಂತಾದ ವಿಷಯಗಳು ಇಲ್ಲಿ ಚಿತ್ರಿಸಲಾಗಿವೆ.

ಶ್ರೀತೇರುಮಲ್ಲೇಶ್ವರ ದೇವಾಲಯದ ಭಿತ್ತಿ ಚಿತ್ರಗಳು :

ಹಿರಿಯೂರಿನ ಶ್ರೀ ತೇರುಮಲ್ಲೇಶ್ವರ ದೇವಾಲಯದಲ್ಲಿರುವ ಭಿತ್ತಿ ಚಿತ್ರಗಳಲ್ಲಿ ಧಾರ್ಮಿಕ, ಸಾಮಾಜಿಕ, ಐತಿಹಾಸಿಕ ಹಿನ್ನೆಲೆಯನ್ನು ಹೇಳಲಾಗಿರುತ್ತದೆ. ಇಲ್ಲಿ ಒಟ್ಟು ೯ ಅಂಕಣಗಳಲ್ಲಿ

ಭಿತ್ತಿ ಚಿತ್ರಗಳು ನಿರ್ಮಾಣವಾಗಿದ್ದವು ಆದರೆ ಪ್ರಸ್ತುತ ಇಂದು ಮೂರು ಅಂಕಣಗಳಲ್ಲಿ ಕಂಡು ಕಾಣದ ರೀತಿಯಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಕಾಣಬಹುದು. ಅವುಗಳಲ್ಲಿ ಚಿತ್ರಗಳ ಶೈಲಿ, ವರ್ಣಗಾರಿಕೆ, ಬಾಹ್ಯರೇಖೆಗಳ ವಿನ್ಯಾಸಗಳನ್ನು ಹಾಗೂ ವಸ್ತುವಿಷಯವನ್ನು ಹೇಳಲಾಗಿದೆ. ಮೂರು ಅಂಕಣದಲ್ಲಿ ಕಾಣಸಿಗುವ ಮುಖ್ಯ ಚಿತ್ರಗಳೆಂದರ ಒಂದನೆಯ ಅಂಕಣದಲ್ಲಿ ಗಿರಿಜಾ ಕಲ್ಯಾಣ, ಎರಡನೆಯ ಅಂಕಣದಲ್ಲಿ ಅಷ್ಟದೇವತೆಗಳು ಹಾಗೂ ಅಂಕಣ ಮೂರರಲ್ಲಿ ಬೇಟೆಗಾರರು, ವಾಧ್ಯಗಾರರು, ಯೋಧರು ಈ ರೀತಿ ಐತಿಹಾಸಿಕ ಹಿನ್ನೆಲೆಯುಳ್ಳ ಚಿತ್ರಗಳನ್ನು ಕಾಣಬಹುದು.

ಒಂದನೆ ಅಂಕಣ :

ಚಿತ್ರ-೧: ಗಿರಿಜಾ ಕಲ್ಯಾಣ ದೃಶ್ಯ :

ಈ ಚಿತ್ರವು ಒಂದನೆಯ ಅಂಕಣದ ಮೊದಲನೆಯ ಪಟ್ಟಿಯಲ್ಲಿ ಇದೆ. ಚಿತ್ರವು ನೋಡಲು ಮನಮೋಹಕವಾಗಿದೆ. ಈ ಚಿತ್ರದ ಕೆಲವು ಭಾಗಗಳಲ್ಲಿ ಚಿತ್ರದ ಚಕ್ಕಳಿಗಳು ಉದುರಿದ್ದು, ಚಿತ್ರವು ಹೆಚ್ಚಿನ ಪ್ರಮಾಣದಲ್ಲಿ ನಾಶವಾಗಿದೆ. ಈ ದೃಶ್ಯದಲ್ಲಿ ಶಿವನನ್ನು ಎತ್ತರವಾಗಿ ತೋರಿಸಿದ್ದು, ಗಿರಿಜೆ ಹಾಗೂ ಆಕೆಯ ತಂದೆ ತಾಯಿಯರನ್ನು ಚಿಕ್ಕ ಪ್ರಮಾಣದಲ್ಲಿ ತೋರಿಸಲಾಗಿದೆ. ಶಿವನ ಪಕ್ಕದಲ್ಲಿರುವ ವಿಷ್ಣುವನ್ನು ಸಹ ಚಿಕ್ಕ ಪ್ರಮಾಣದಲ್ಲಿ ಕಿರಿಯ ವ್ಯಕ್ತಿಯನ್ನಾಗಿ ತೋರಿಸಿರುವುದನ್ನು ಗುರುತಿಸಬಹುದು. ಈ ದೃಶ್ಯದ ಕೇಂದ್ರ ಬಿಂದುವಾದ ಶಿವನನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಕಲಾವಿದನು ಮಾಡಿದ್ದಾನೆ. ಈ ವಸ್ತುವಿಷಯದಲ್ಲಿ ಗಿರಿಜೆಯ ತಂದೆಯಾದ ದಕ್ಷಬ್ರಹ್ಮನು ತನ್ನ ಮಗಳಾದ ದ್ರಾಕ್ಷಾಯಿಣಿಯನ್ನು ಅವಳ ಆರಾಧ್ಯ ದೈವವಾದ ಶಿವನಿಗೆ ಕೊಟ್ಟು ಮದುವೆ ಮಾಡುವ ಸನ್ನಿವೇಶವಾದಂತಿದೆ.

ಮುಖ್ಯವಾಗಿ ಈ ಚಿತ್ರದಲ್ಲಿ ಶಿವನು ಕಿರೀಟಧಾರಿಯಾಗಿದ್ದು, ಅಗಲವಾದ ಕಣ್ಣುಗಳನ್ನು ಬಿಡುತ್ತಿರುವುದು, ಕೊರಳಬಂದಿ, ತೋಳ್ಬಂದಿ, ಎದೆಯ ಕವಚ, ಭುಜದಬಂದಿಗಳನ್ನು ಧರಿಸಿದ್ದು, ನಾಲ್ಕು ಕೈಯಗಳನ್ನು ಹೊಂದಿರುವನು. ಹಿಂಬದಿಯ ಬಲಗೈಯಲ್ಲಿ ಮಾಯಾಮೃಗದ ಮುದ್ರೆಯನ್ನು ಹಿಡಿದಿದ್ದು, ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದಿರುವನು. ಮುಂದಿನ ಎರಡು ಕೈಗಳಿಂದ ಗಿರಿಜೆಯನ್ನು ಸ್ವೀಕರಿಸುತ್ತಿರುವನು. ಶಿವನು ಸೊಂಟಕ್ಕೆ ಪಟ್ಟಿಯನ್ನು ಕಟ್ಟಿದ್ದು, ಎರಡು ಕಡೆ ಶಲ್ಯವನ್ನು ಬಿಟ್ಟಿರುವನು. ಕಾಲುಗಳಿಗೆ ಕಡಗಗಳನ್ನು ತೊಟ್ಟಿದ್ದು, ಎರಡು ಕಾಲುಗಳನ್ನು ಜೋಡಿಸಿ ನಿಂತಿರುವನು. ಪಕ್ಕದಲ್ಲಿ ನಿಂತಿರುವ ಸುವರ್ಣ ಹೊದಿಕೆಯಿಂದ ಗೌರಿಯು ಕಿರೀಟವನ್ನು ತೊಟ್ಟು, ಕಿವಿಗೆ ಜುಮುಕಿ, ಸೊಂಟಕ್ಕೆ ಡಾಬು, ಕೊರಳಬಂದಿ, ತೋಳ್ಬಂದಿ, ಕೈಗಳಿಗೆ ಕಡಗ, ಕೊರಳ ಮಾಲೆಯನ್ನು ತೊಟ್ಟಿದ್ದು, ಕೆಂಪು ಸೀರೆಯನ್ನು ತೊಟ್ಟಿರುವಳು. ಗೌರಿಯು ಶಿವನ ಕೈಯನ್ನು ಹಿಡಿದಿದ್ದಾಳೆ. ಈಕೆಯ ತಂದೆಯಾದ ದಕ್ಷಬ್ರಹ್ಮನು ಕಿರೀಟ ಧಾರಿಯಾಗಿದ್ದು, ಹುರಿ ಮೀಸೆಯನ್ನು ಬಿಟ್ಟು ದೊಡ್ಡಕಣ್ಣುಗಳನ್ನು ತೆರೆದಿದ್ದಾನೆ. ಇವನು ಮಹಾ ರಾಜನಾದರಿಂದ ಕಿವಿಗೆ ಕಡಗ, ತೊಳ್ಬಂದಿ. ಭುಜಬಂದಿ. ಸೊಂಟಪಟ್ಟಿ, ಕಾಲ್ಗಡಗಳನ್ನು ತೊಟ್ಟಿದ್ದಾನೆ. ದಕ್ಷಬ್ರಹ್ಮನು ಗಿರಿಜೆಯ ಕೈಹಿಡಿದು ಶಿವನಿಗೆ ಧಾರೆ ಎರಿಯುತ್ತಿದ್ದಾನೆ.

ಇವನ ಹಿಂಬದಿಯಲ್ಲಿ ನಿಂತಿರುವ ಸ್ತ್ರೀಯರು ಸಹ ಸಕಲ ವಸ್ತ್ರಾಭರಣ ಶೋಭಿತರಾಗಿದ್ದು, ನೋಡಲು ಮನಮೋಹಕವಾಗಿ ಕಾಣುವರು. ಶಿವನ ಹಿಂಬದಿಯಲ್ಲಿ ನಿಂತಿರುವ ವಿಷ್ಣು ಕಪ್ಪು ವರ್ಣದವನಾಗಿದ್ದು, ಬಟ್ಟಲು ಕಣ್ಣುಗಳನ್ನು ತೆರೆದಿದ್ದು, ಮೂರು ನಾಮಗಳನ್ನು ಧರಿಸಿದ್ದಾನೆ. ಕೈಯಿಂದ ಅಭಯವನ್ನು ತೋರಿಸುತ್ತಿದ್ದು, ಆಭರಣ ಪೂರಿತನಾಗಿದ್ದಾನೆ. ನಾಲ್ಕು ಕೈಗಳಿದ್ದು, ಹಿಂಬದಿಯ ಬಲಗೈಯಲ್ಲಿ ಚಕ್ರ ಹಾಗೂ ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಇವನ ಹಿಂಬದಿಯಲ್ಲಿ ನಿಂತಿರುವ ದೇವದೂತನೊಬ್ಬನು ಹುರಿ ಮೀಸೆಯನ್ನು ಮೇಲಕ್ಕೆ ಸುತ್ತಿರುವಂತಿದೆ. ಕಣ್ಣುಗಳನ್ನು ಅಗಲವಾಗಿ ಬಿಟ್ಟಿರುವನು. ಈತನು ಕೈಯನ್ನು ಸಹ ಅಭಯ ಮುದ್ರೆಯನ್ನು ತೋರಿಸುತ್ತಿದ್ದಾನೆ.

ಈ ಚಿತ್ರಪಟ್ಟಿಕೆ ನೋಡಲು ವಿಜಯನಗರ ಶೈಲಿಯನ್ನು ಹೋಲುವುದರ ಜೊತೆಗೆ ಇದೇ ರೀತಿಯ ಚಿತ್ರಗಳನ್ನು ನಾವು ಸಿಬಿಯಲ್ಲಿ ಕಾಣಬಹುದು. ಸಹಜವಾಗಿ ಇವು ವಿಜಯನಗರ ಭಿತ್ತಿ ಚಿತ್ರದಂತೆ ಹಿನ್ನೆಲೆಯನ್ನು ಕಡುಗೆಂಪು ವರ್ಣವನ್ನು ಲೇಪಿಸಿದ್ದು, ವಸ್ತ್ರಾಭರಣಗಳ ಶೈಲಿ, ರೇಖಾವಿನ್ಯಾಸ, ಬಣ್ಣಗಳ ವೈಖರಿ ಎಲ್ಲವೂ ವಿಜಯನಗರ ಶೈಲಿಯಂತೆ ಇಲ್ಲಿ ಹೆಚ್ಚಾಗಿ ನೀಲಿ, ಪಾಚಿ, ಬಿಳಿ, ಕಂದುಬಣ್ಣವನ್ನು ಲೇಪಿಸಲಾಗಿದೆ.

ಚಿತ್ರ–೨ ಪುರೋಹಿತರು :

ಒಂದನೆಯ ಅಂಕಣದ ಎರಡನೆಯ ಪಟ್ಟಿಕೆಯಲ್ಲಿ ಗಿರಿಜಾ ಕಲ್ಯಾಣವನ್ನು ನಡೆಸುತ್ತಿರುವ ಪುರೋಹಿತರ ಚಿತ್ರವಿದೆ. ಈ ಚಿತ್ರದಲ್ಲಿ ಋಷಿಯೊಬ್ಬನು ಯಜ್ಞ ಕುಂಡದ ಮುಂದೆ ಕುಳಿತು ಮಂತ್ರ ಪಠಿಸುತ್ತಿರುವನು. ಅಲ್ಲಿ ಒಂದು ಮರವಿದ್ದು, ರೆಕ್ಕೆಯಿರುವ ನಂದಿಯ ಚಿತ್ರವಿದೆ. ನಂದಿಯ ಹಿಂಬದಿಯಲ್ಲಿ ಗಡ್ಡಧಾರಿ ಶಿವಕಿಂಕರನಿರುವ. ಪುರೋಹಿತ್ಯ ನಡೆಸುತ್ತಿರುವ ಋಷಿಮುನಿಗಳಿಂದ ಮುಂಭಾಗದಲ್ಲಿ ಯಜ್ಞ ಕುಂಡಕ್ಕೆ ವಸ್ತುಗಳನ್ನು ಅರ್ಪಿಸುತ್ತಿರುವ ಅರಸು ಮನೆತನದವರನ್ನು ನಾವಿಲ್ಲಿ ಕಾಣಬಹುದು. ಇಲ್ಲಿ ಮೂವರು ಅರಸರಿದ್ದು, ಇವರ ಹಿಂಬದಿಯಲ್ಲಿ ನಂದೀಶ, ಶಿವಕಿಂಕರ, ಮತ್ತೊಬ್ಬ ನಂದೀಶ ಹಾಗೂ ದೇವತೆಯನ್ನು ನಾವಿಲ್ಲಿ ಕಾಣಬಹುದು. ಎಲ್ಲಾ ಚಿತ್ರಗಳ ಮೇಲ್ಭಾಗದಲ್ಲಿ ಹೂಗುಚ್ಚಗಳನ್ನು ಕಾಣಬಹುದು. ಈ ಚಿತ್ರವೂ ಸಹ ವಿಜಯನಗರ ಶೈಲಿಯನ್ನು ಹೋಲುವುದರೊಂದಿಗೆ, ಬಣ್ಣಗಾರಿಕೆಯ ಹಿನ್ನೆಲೆಯ ಬಣ್ಣವನ್ನಾಗಿ ಕಡುಗೆಂಪು ಕೆಚ್ಚಾಗಿದ್ದು, ನೀಲಿ, ಬಿಳಿ, ಹಳದಿ, ಹಸಿರು, ಕೆಂಪು ಚಿತ್ರಗಳನ್ನು ನಾವಿಲ್ಲಿ ಕಾಣಬಹುದು.

ಎರಡನೆ ಅಂಕಣ :

ಈ ಎರಡನೆಯ ಅಂಕಣವು ಅಷ್ಟತ್ರಿಭುಜ ಆಕಾರಗಳಲ್ಲಿ ಚಿತ್ರಗಳನ್ನು ಚಿತ್ರಿಸಲಾಗಿದೆ. ಹಾಗೂ ಮಧ್ಯಭಾಗದಲ್ಲಿ ಚೌಕಾಕಾರದಲ್ಲಿನ ನಕ್ಷೆಗೆ ಬಣ್ಣದ ವಿನ್ಯಾಸವನ್ನು ಮಾಡಲಾಗಿದೆ. ಈ ಅಷ್ಟತ್ರಿಭುಜದಲ್ಲಿ ಕಾಣಬಹುದಾದ ಚಿತ್ರಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಚಿತ್ರ–೩ ನಂದಿಯ ಮೇಲೆ ಶಿವ ಮತ್ತು ಪಾರ್ವತಿ :

ಒಂದನೆಯ ತ್ರಿಭುಜದಲ್ಲಿ ಗಿರಿಜಾ ಕಲ್ಯಾಣದ ಚಿತ್ರವು ನೋಡುಗರ ಮನದಲ್ಲಿ ಭಕ್ತಿಯ ರಸಭಾವವನ್ನು ಹುಟ್ಟುವಂತೆ ಮಾಡುವ ದೃಶ್ಯವಿದಾಗಿದೆ. ನಂದಿಯ ಮೇಲೆ ಶಿವ ಪಾರ್ವತಿಯರಿಬ್ಬರು ಭೂಲೋಕಕ್ಕೆ ಬಂದಿರುವ ವಿಷಯದ ದೃಶ್ಯವಾಗಿದೆ. ಈ ಚಿತ್ರದಲ್ಲಿ ಆಭರಣಪೂರಿತ ನಂದಿಯ ಮೇಲೆ ಕಿರೀಟಧಾರಿ ಶಿವಪಾರ್ವತಿಯರು ಕುಳಿತಿರುವರು. ಶಿವನು ಚಿಕ್ಕಪ್ರಮಾಣದಲ್ಲಿ ಕಾಣುವ, ಪಾರ್ವತಿಯನ್ನು ತನ್ನ ಎಡಭಾಗದ ತೊಡೆಯ ಮೇಲೆ ಕೂರಿಸಿಕೊಂಡಿದ್ದಾನೆ. ವಿಭೂತಿ ಮತ್ತು ಆಭರಣಗಳನ್ನು ಧರಿಸಿರುವ ಶಿವನು ಅಭಯ ಹಸ್ತಮುದ್ರೆಯನ್ನು ಚಿತ್ರಿಸಿದ್ದು ಹಾಗೂ ಇಲ್ಲಿಯ ಸಾರ್ವಜನಿಕರು ಕತ್ತಿ, ಖಡ್ಗ, ವಿಜಯಸ್ತಬ್ದಗಳನ್ನು ಹಿಡಿದು ಘೋಷಣೆಯನ್ನು ಕೂಗುತ್ತಿದ್ದಾರೆ. ನಂದಿಯ ಹಾಗೂ ಶಿವ, ಪಾರ್ವತಿಯರ ದೃಶ್ಯ ಪೂರ್ಣಪ್ರಮಾಣದ ವಿಜಯನಗರ ಶೈಲಿಯಲ್ಲಿದ್ದು, ಇವರ ಹಿಂಬದಿಯಲ್ಲಿರುವ ಸಾರ್ವಜನಿಕರನ್ನು ತೋರಿಸಲಾಗಿದೆ. ಹಿನ್ನೆಲೆಯನ್ನಾಗಿ ಕಡುಗೆಂಪು ಬಣ್ಣವನ್ನು ಲೇಪಿಸಲಾಗಿದೆ. ನಂದಿಯನ್ನು ಶ್ವೇತವರ್ಣದಲ್ಲಿ ತೋರಿಸಿದ್ದು, ಶಿವಪಾರ್ವತಿಯರನ್ನು ನೀಲಿವರ್ಣದಿಂದ ಪೂರ್ಣಗೊಳಿಸಲಾಗಿದೆ. ಒಟ್ಟಾರೆ ಮೇಲಿನ ಚಿತ್ರ ಸಂಯೋಜನೆಯು ಉತ್ತಮ ರೀತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಚಿತ್ರ–೪ ಕುದುರೆಯ ಮೇಲೆ ಕುಳಿತಿರುವ ಎರಡು ತಲೆಯ ದೇವರು :

ಎರಡನೆಯ ಅಂಕಣದ ಎರಡನೆಯ ತ್ರಿಭುಜದಲ್ಲಿರುವ ಈ ಚಿತ್ರದಲ್ಲಿ ಕುದುರೆಯನ್ನು ಹೋಲುವ ಪ್ರಾಣಿಯೊಂದರ ಮೇಲೆ ದೇವನೊಬ್ಬನಿಗೆ ಎರಡು ತಲೆಗಳಿವೆ. ಎರಡು ಮುಖದಲ್ಲಿಯೂ ಹುರಿಮೀಸೆ ಇದ್ದು, ಕಣ್ಣುಗಳನ್ನು ರೌದ್ರವಾಗಿ ಬಿಟ್ಟಿದ್ದಾರೆ. ಈ ದೇವತೆಯ ಎರಡು ಕಿರೀಟದ ಮೇಲೆ ಕಡವೆಯ ಕೊಂಬುಗಳು ಮುಂದಕ್ಕೆ ಬಾಗಿವೆ. ಈ ದೇವತೆಗೆ ನಾಲ್ಕು ಕೈಗಳಿದ್ದು, ಎದೆಯ ಕವಚ, ತೋಳಬಂದಿ, ಕೊರಳ ಮಾಲೆಗಳನ್ನು ಧರಿಸಿದಂತೆ ಹಾಗೂ ಬೂದುಬಣ್ಣದ ಕುದುರೆಯನ್ನು ಹೋಲುವ ಪ್ರಾಣಿಯೂ ಸಹ ಆಭರಣಗಳಿಂದ ಶೃಂಗಾರಗೊಂಡಿದೆ. ಹಿನ್ನೆಲೆಯಲ್ಲಿ ನಿಲುವಂಗಿ ತೊಟ್ಟಿರುವ ಮನುಷ್ಯರು ಕೈಯಲ್ಲಿ ಖಡ್ಗಳನ್ನು ಹಿಡಿದು ನಿಂತಿರುವುದು ಹಾಗೂ ಹೂಬಳ್ಳಿಯ ವಿನ್ಯಾಸಗಳನ್ನು ತೋರಿಸಲಾಗಿದೆ.

ಬಣ್ಣಗಾರಿಕೆಯಲ್ಲಿ ನೋಡಿದರೆ ಹೆಚ್ಚಾಗಿ ಕಡುಗೆಂಪು ವರ್ಣವಿದ್ದು, ಅಲ್ಲಲ್ಲಿ ಬಿಳಿ, ಹಳದಿ, ಬೂದುಬಣ್ಣವಿದ್ದು, ಕಂದುಬಣ್ಣದಿಂದ ಬಾಹ್ಯರೇಖೆಯನ್ನು ಎಳೆಯಲಾಗಿದೆ. ರೇಖಾವಿನ್ಯಾಸವು ಸಹ ಉತ್ತಮ ರೀತಿಯಿಂದ ಕೂಡಿದೆ. ಈ ಚಿತ್ರವು ಸ್ವಲ್ಪ ಪ್ರಮಾಣದಲ್ಲಿ ನಾಶವಾಗಿದ್ದು, ಮಸುಕಾಗಿ ಕಾಣುತ್ತದೆ. ಈ ಚಿತ್ರಗಳನ್ನು ಸರಿಯಾಗಿ ಗಮನಿಸಿದರೆ ಚಿತ್ರಗಳ ಮೇಲೆ ವಿಜಯನಗರದ ಕಲಾವಿದರ ಪ್ರಭಾವವು ತಿಳಿಯುವುದು. ವರ್ಣಗಾರಿಕೆಯನ್ನು ಬಾಹ್ಯರೇಖೆಯ ರಚನೆಯಲ್ಲಿ ವಿನ್ಯಾಸಗಳನ್ನು ಕೂಡ ಉತ್ತಮ ರೀತಿಯಲ್ಲಿ ಸಂಯೋಜಿಸಿದ್ದು, ಇದರಲ್ಲಿಯೂ ಕೂಡ ವಿಜಯನಗರ ಶೈಲಿಯ ಪ್ರಭಾವವು ದಟ್ಟವಾಗಿ ಕಂಡುಬರುತ್ತದೆ.

ಚಿತ್ರ-೫ ದೇವರನ್ನು ಹೊತ್ತೊಯ್ಯುತ್ತಿರುವ ದುರ್ಗದ ನಾಯಕ :

ಈ ಚಿತ್ರವು ಎರಡನೆಯ ಅಂಕಣದ ಮೂರನೆಯ ತ್ರಿಭುಜದಲ್ಲಿರುವುದನ್ನು ಕಾಣಬಹುದು. ಇಲ್ಲಿ ದುರ್ಗದ ನಾಯಕನೊಬ್ಬನು ಹುರಿಮೀಸೆಯನ್ನು ಬಿಟ್ಟು ಬಟ್ಟಲುಕಣ್ಣುಗಳನ್ನು ರೌದ್ರರೂಪದಲ್ಲಿ ಬಿಟ್ಟಿರುವುದನ್ನು ಗುರುತಿಸಬಹುದು. ದೇವನೊಬ್ಬನನ್ನು ತನ್ನ ಭುಜದ ಮೇಲೆ ಕೂರಿಸಿಕೊಂಡು ಸಾಗುತ್ತಿರುವ ದೃಶ್ಯವಾಗಿದೆ. ತಲೆಗೆ ರುಮಾಲನ್ನು ಸುತ್ತಿರುವ ದಡೂತಿ ದೇಹದ, ದಪ್ಪ ಮೀಸೆಯಿರುವ ಈ ವ್ಯಕ್ತಿಯು, ರೌದ್ರವಾಗಿ ಕಣ್ಣನ್ನು ತೆರೆದು ಕಿರುಮೀಸೆಯನ್ನು ಬಿಟ್ಟಿರುವ ಕಿರೀಟಧಾರಿಯಾದ ರೌದ್ರದೇವತೆಯನ್ನು ತನ್ನ ಭುಜದ ಮೇಲೆ ಕುರಿಸಿಕೊಂಡಿದ್ದಾನೆ. ಈ ದೇವತೆಯು ವಿವಿಧ ರೀತಿಯ ಆಭರಣಗಳನ್ನು ಧರಿಸಿದ್ದು, ಮೀಸೆಹೊತ್ತ ವ್ಯಕ್ತಿ ನೋಡಲು ಕಡು ನೀಲಿ ಬಣ್ಣದವನಾಗಿದ್ದಾನೆ. ಭುಜಕವಚ ಹಾಗೂ ಶಲ್ಯ, ಎದೆಕವಚ, ಕೊರಳಾಭರಣಗಳನ್ನು ಧರಿಸಿರುವುದನ್ನು ಇಲ್ಲಿ ಗುರುತಿಸಬಹುದು. ಇವರ ಹಿಂಬದಿಯಲ್ಲಿರುವ ವ್ಯಕ್ತಿಗಳು ಛತ್ರಿ, ಚಾಮರಗಳನ್ನು ಹಿಡಿದು ದೇವತೆಯ ಬರುವಿಕೆಯನ್ನು ಸ್ವಾಗತಿಸುತ್ತಿದ್ದಾರೆ. ಇನ್ನು ಕೆಲವರು ಕತ್ತಿ, ಗುರಾಣಿಗಳನ್ನು ಹಿಡಿದು ಸ್ವಾಗತಿಸಿದರೆ, ಇವರ ಕೆಳಭಾಗದಲ್ಲಿ ಇಬ್ಬರು ಖಡ್ಗವನ್ನು ಹಿಡಿದು ಯುದ್ಧಕ್ಕೆ ಮುಂದಾಗಿರುವಂತೆ ತೋರಿಸಲಾಗಿದೆ.

ಈ ಚಿತ್ರವು ನೋಡಲು ಉತ್ತಮ ಸಂಯೋಜನೆಯನ್ನು ಹೊಂದಿ, ಹೆಚ್ಚಾಗಿ ಕೆಂಪು, ಕಂದು, ಬಿಳಿ, ನೀಲಿ, ಹಳದಿ ಬಣ್ಣಗಳನ್ನು ಬಳಸಿದ್ದಾರೆ ಹಿನ್ನೆಲೆಯನ್ನು ಕಡುಗೆಂಪಿನ ವರ್ಣಗೊಳಿಸಿದ್ದು, ಈ ಶೈಲಿಯು ನೋಡಲು ವಿಜಯನಗರ ಶೈಲಿ, ವರ್ಣಗಾರಿಕೆಯನ್ನು ಹೋಲುತ್ತದೆ.

ಚಿತ್ರ-೬ ಧ್ವಜವನ್ನು ಹಿಡಿದು ಸಾಗುತ್ತಿರುವ ದೇವ :

ಈ ಚಿತ್ರವನ್ನು ಎರಡನೆಯ ಅಂಕಣದ ನಾಲ್ಕನೆಯ ತ್ರಿಭುಜದಲ್ಲಿ ಕಾಣಬಹುದಾಗಿದೆ. ವಿಶೇಷವಾಗಿ ಈ ಚಿತ್ರವು ನೋಡಲು ಅಸ್ಪಷ್ಟವೆನಿಸುತ್ತದೆ. ನೀಲವಾದ ಕೋಡುಳ್ಳ ಕಡವೆಯ ಮೇಲೆ ಕುಳಿತಿರುವ ನಾಮಧಾರಿ ವೈಷ್ಣವ ದೇವನು ತನ್ನ ಕೈಯಲ್ಲಿ ಧ್ವಜವನ್ನು ಹಿಡಿದು ಸಾಗುತ್ತಿರುವನು ತಲೆಯ ಮೇಲೆ ಕಿರೀಟ, ತೋಳ್ಬಂದಿ, ಕೊರಳಮಾಲೆ ಭುಜದ ಮೇಲೆ ವಜ್ರಕಾಯವನ್ನು ನಾವು ಕಾಣಬಹುದು. ಮಂದಸ್ಥಿತಿಯಲ್ಲಿರುವ ಕಣ್ಣು, ಸಾಮಾನ್ಯ ಮೀಸೆ ಈತ ಹೊಂದಿದ್ದಾನೆ. ತನ್ನ ಎಡಗೈಯಲ್ಲಿ ನಾಲ್ಕು ಪಟ್ಟಿಯುಳ್ಳ ಧ್ವಜವನ್ನು ಹಿಡಿದಿದ್ದಾನೆ. ಕಡವೆಯು ತಿಳಿ ನೀಲಿ ಬಣ್ಣದಿಂದಿದೆ. ಕಡವೆಯ ತಲೆಯಿಂದ ಕತ್ತಿನ ಭಾಗದವರೆಗಿನ ಭಾಗದ ಚಕ್ಕಳಿಗಳು ಎದ್ದಿದ್ದು, ಕಾಲುಗಳು ಮಾತ್ರ ಕಾಣಿಸುತ್ತವೆ. ಎದೆಯ ಕೆಳಭಾಗದಲ್ಲಿ ಹೂಗುಚ್ಛಗಳು ಜೋತಾಡುವುದನ್ನು ನಾವಿಲ್ಲಿ ಕಾಣಬಹುದು. ಚಿತ್ರದ ಮೇಲೆ ನೀಲಿ ವರ್ಣದ ಕಿರೀಟಧಾರಿ ದೇವದೂತನು ಚಾಮರವನ್ನು ಹಿಡಿದಿರುವುದು. ಇವರ ಹಿಂಬದಿಯಲ್ಲಿ ರಣಕತ್ತಿಗಳು ಹಿಡಿದು ನಿಂತಿರುವ ಯೋಧರನ್ನು ನಾವಿಲ್ಲಿ ಕಾಣಬಹುದು. ಈ ಚಿತ್ರವು ತ್ರಿಭುಜ ಪಟ್ಟಿಕೆಯಲ್ಲಿದ್ದು, ಸುತ್ತಲೂ ರೇಖೆಗಳ ವಿನ್ಯಾಸ ಮಾಡಲಾಗಿದೆ. ಮೇಲೆ ಕೆಳಭಾಗದಲ್ಲಿ ಹೂಬಳ್ಳಿಯ ವಿನ್ಯಾಸವನ್ನು ಮಾಡಲಾಗಿದೆ. ಸುಮಾರು ನಲ್ವತ್ತು ಭಾಗದಷ್ಟು ಚಿತ್ರಗಳನ್ನು ಕಾಣುವುದು.

ಒಟ್ಟಾರೆ ಈ ಚಿತ್ರವು ವಿಜಯನಗರ ಶೈಲಿಯನ್ನು ಹೋಲುತ್ತದೆ. ಹಿಂಬದಿಯಲ್ಲಿ ಕಡು ನೀಲಿ ಬಣ್ಣವನ್ನು ಲೇಪನಮಾಡಿದ್ದು, ಹೆಚ್ಚಾಗಿ ನೀಲಿ, ಬಿಳಿ, ಮಾಸುಹಳದಿ ಬಣ್ಣವನ್ನು ಲೇಪನ ಮಾಡಲಾಗಿದೆ. ರೇಖಾವಿನ್ಯಾಸವು ಸಹ ಅದ್ಭುತಪೂರ್ಣವಾಗಿದೆ. ಅಷ್ಟ ತ್ರಿಭುಜದಲ್ಲಿ ಅಷ್ಟ ದೇವತೆಗಳನ್ನು ಚಿತ್ರಿಸಿರುವುದು ವಿಶೇಷವಾಗಿದೆ.

ಚಿತ್ರ-೭ ಐರಾವತದ ಮೇಲೆ ಇಂದ್ರ :

ಐರಾವತದ ಮೇಲೆ ಸಾಗುತ್ತಿರುವ ಇಂದ್ರನ ಚಿತ್ರವನ್ನು ತ್ರಿಭುಜ ಐದರಲ್ಲಿ ನಾವು ಕಾಣಬಹುದು. ಈ ತ್ರಿಭುಜದಲ್ಲಿ ಅರ್ಧದಷ್ಟು ಚಿತ್ರದ ಚಕ್ಕಳಿಕೆಗಳು ಎದ್ದು ನೋಡುಗರಿಗೆ ೨೦ ರಿಂದ ೩೦ ಚಿತ್ರ ಕಾಣುವುದು. ಬಾಹ್ಯ ರೇಖೆಯಿಂದ ಮಾತ್ರ. ಈ ಚಿತ್ರದಲ್ಲಿ ಬಿಳಿಯ ಆನೆಯ ಐರಾವತದ ಮೇಲೆ ಸಾಗುತ್ತಿರುವ ಇಂದ್ರನು ಕಿರೀಟಧಾರಿಯಾಗಿದ್ದು, ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕೈಗಳಿಗೆ ಕಡಗ, ತೋಳ್ಬಂದಿಯನ್ನು ತೊಟ್ಟಿರುವನು. ಕೈಯಲ್ಲಿ ಹೂವು ಹಾಗೂ ವಜ್ರಾಯುಧವನ್ನು ಹಿಡಿದಿದ್ದು, ಭುಜದ ವಜ್ರಕಾಯ, ಕೊರಳಮಾಲೆಯನ್ನು ಕಾಣಬಹುದು. ಇನ್ನುಳಿದ ಹಿಂಬದಿಯಲ್ಲಿ ಮತ್ತೊಬ್ಬ ಕಿರೀಟಧಾರಿ ಉಪದೇವತೆ ಕುತ್ತಿಗೆಯವರೆಗಿನ ಭಾಗದ ಚಿತ್ರವು ಕಾಣಬಹುದು. ಇವನ ಹಿಂದೆ ಪೇಟತೊಟ್ಟು, ಸೊಂಟಕ್ಕೆ ಬಟ್ಟೆಯನ್ನು ಸುತ್ತಿರುವ ಮಾನವನು ಕೊಳಲನ್ನು ಹಿಡಿದು ನೃತ್ಯ ಮಾಡುತ್ತಿರುವನು. ಈ ಚಿತ್ರದಲ್ಲಿ ಬಣ್ಣಗಾರಿಕೆ ಮಾಸಿದಂತಿದ್ದು, ಅರ್ಧದಷ್ಟು ಚಕ್ಕಳಿ ಎದ್ದಿದೆ. ಈ ಚಿತ್ರವು ಸಹ ವಿಜಯನಗರ ಶೈಲಿಯಲ್ಲಿದೆ. ಬಾಹ್ಯ ರೇಖಾ ವಿನ್ಯಾಸವು ಚಿತ್ರದ ಚಕ್ಕಳಿಕೆಗಳು ಎದ್ದಿದ್ದರು ನೋಡಲು ಇಂದಿಗೂ ಸ್ಪಷ್ಟವಾಗಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಚಿತ್ರ-೮ ಮಹಿಷನ ಮೇಲೆ ಯಮರಾಯ :

ಆರನೆಯ ತ್ರಿಭಜದಲ್ಲಿ ಮಹಿಷನ ಮೇಲೆ ಸಾಗುತ್ತಿರುವ ಯಮರಾಯನನ್ನು ಕಾಣಬಹುದು. ಈ ದೃಶ್ಯವನ್ನು ಕಲಾವಿದನು ಜನಸಾಮಾನ್ಯರೊಂದಿಗೆ ತೋರಿಸಿದ್ದಾನೆ. ಚಿತ್ರದಲ್ಲಿರುವ ಎಮ್ಮೆಯನ್ನು ಆಭರಣಗಳಿಂದ ಶೃಂಗಾರಗೊಳಿಸಲಾಗಿದ್ದು, ಯಮನು ದಪ್ಪನಾಗಿರುವ ಹುರಿ ಮೀಸೆಯನ್ನು ಬಿಟ್ಟಿರುವನು. ದುಂಡುಮುಖ, ದಪ್ಪದೇಹ, ಎದೆಕವಚ, ಕೈಯಲ್ಲಿ ಗದೆ, ದೊಡ್ಡದಾದ ಸೊಂಟಪಟ್ಟಿಯನ್ನು ಕಟ್ಟಿದ್ದು, ಕಚ್ಚೆಯನ್ನು ತೊಟ್ಟಿದ್ದಾನೆ. ಹಿಂಬದಿಯಲ್ಲಿ ಹೂಬಳ್ಳಿಯ ವಿನ್ಯಾಸಗಳಿದ್ದು, ಒಬ್ಬ ಉಪದೇವತೆಯನ್ನು ಹಾಗೂ ಕತ್ತಿ ಗುರಾಣಿಯನ್ನು ಹಿಡಿದಿರುವ ಮಾನವನನ್ನು ಕಾಣಬಹುದು. ಒಟ್ಟಾರೆಯಾಗಿ ಈ ಚಿತ್ರದಲ್ಲಿ ಕಡುಗೆಂಪು ವರ್ಣವನ್ನು ಲೇಪಿಸಲಾಗಿದ್ದು, ಅಲ್ಲಲ್ಲಿ ಕಡುಬೂದಿ, ಹಳದಿ, ನೀಲಿ, ಬಿಳಿ, ಹಸಿರು ವರ್ಣಗಳನ್ನು ಬಳಸಿಕೊಂಡು ಬಾಹ್ಯ ರೇಖೆಯನ್ನು ಪರಿಣಾಮಕಾರಿಯಾದ ಎಳೆತದಿಂದಾಗಿ ಚಿತ್ರವು ಉತ್ತಮವಾಗಿ ಮೂಡಿಬಂದಿದೆ. ಈ ಚಿತ್ರವು ಸಹ ವಿಜಯನಗರ ಶೈಲಿಯನ್ನು ಹೊರತಾಗಿಲ್ಲ.

ಚಿತ್ರ-೯ ಗಜಸಿಂಹ ವಾಹನದ ಮೇಲೆ ದೇವತೆ :

ಏಳನೆಯ ತ್ರಿಭುಜದ ಮೇಲೆ ಗಜಸಿಂಹ ವಾಹನದ ಮೇಲೆ ಸಾಗುತ್ತಿರುವ ದೇವತೆಯನ್ನು ಕಾಣಬಹುದು. ಈ ಚಿತ್ರವು ವಿಚಿತ್ರವಾಗಿದೆ. ಆನೆಯ ಶಿರವುಳ್ಳ, ಸಿಂಹವು ತನ್ನ ಬಾಲವನ್ನು

ಎತ್ತಿದೆ. ಆನೆಯ ಶಿರವು ಸೊಂಡಿಲನ್ನು ಎತ್ತಿ ಝೇಂಕರಿಸುತ್ತಿದೆ. ಇದರ ಮೇಲೆ ಕುಳಿತಿರುವ ದೇವತೆಯು ಕಿರೀಟಧಾರಿಯಾಗಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಕೊರಳಮಾಲೆ, ಕೈಕಡಗ, ತೋಳ್ಬಂದಿ ಮತ್ತು ಕಚ್ಚೆಯನ್ನು ಧರಿಸಿದ್ದಾಳೆ. ಹಿಂಬದಿಯಲ್ಲಿ ದೇವತೆಯೊಂದು ನಿಂತಿದ್ದು, ಮುಂಭಾಗದಲ್ಲಿ ಖಡ್ಗವನ್ನು ಹಿಡಿದಿರುವ ಯೋಧನೊಬ್ಬನು ಮುಂದೆ ಸಾಗುತ್ತಿದ್ದಾನೆ. ಇವರ ಹಿಂಭಾಗದಲ್ಲಿ ಎಲೆಬಳ್ಳಿಯ ವಿನ್ಯಾಸವಿದೆ.

ಒಟ್ಟಾರೆಯಾಗಿ ಈ ಚಿತ್ರವು ನೋಡಲು ಕಣ್ಮನವನ್ನು ಸೆಳೆಯದಿದ್ದರೂ ಇದೊಂದು ಪೌರಾಣಿಕ ಚಿತ್ರವೆಂದು ಗುರುತಿಸಬಹುದಾಗಿದೆ. ಸಂಯೋಜನೆಯು ಪರಿಪೂರ್ಣವಲ್ಲದಿದ್ದರೂ ದೃಶ್ಯಕ್ಕೆ ಸಂಬಂಧಿಸಿದಂತೆ ಚಿತ್ರವನ್ನು ಪೂರ್ಣಗೊಳಿಸಲಾಗಿದೆ. ಈ ಚಿತ್ರವು ವಿಜಯನಗರ ಶೈಲಿಯಲ್ಲಿದ್ದು, ಇಲ್ಲಿ ಹೆಚ್ಚಾಗಿ ಕೆಂಪು, ನೀಲಿ, ಬಿಳಿ ವರ್ಣಗಳನ್ನು ಬಲಸಿರುವುದನ್ನು ಗಮನಿಸಬಹುದು. ಕಂದು ಬಣ್ಣದಿಂದ ಚಿತ್ರಕ್ಕೆ ಬಾಹ್ಯರೇಖೆಯನ್ನು ರಚಿಸಲಾಗಿದೆ.

ಚಿತ್ರ-೧೦ ಬಿಳಿಕುದುರೆಯ ಮೇಲೆ ದೇವತೆ :

ಬಿಳಿ ಕುದುರೆಯ ಮೇಲೆ ಸಾಗುತ್ತಿರುವ ದೇವತೆಯ ಚಿತ್ರವು ಎಂಟನೆ ತ್ರಿಭುಜದಲ್ಲಿದ್ದು, ಈ ದೇವತೆಯು ಕಿರೀಟಧಾರಿಯಾಗಿದ್ದು, ಕತ್ತಿಗುರಾಣಿಯನ್ನು ಕೈಯಲ್ಲಿ ಹಿಡಿದಿದ್ದಾಳೆ. ಕಂಗೊಳಿಸುವ ಕಪ್ಪು ಕಣ್ಣುಗಳು, ಕೊರಳಮಾಲೆ, ಕುದುರೆಯ ತಲೆಯ ಮೇಲೆ ಬಿಳಿ ಕೂದಲು ಗುಚ್ಛವಿದೆ. ಹಾಗೂ ಕೊರಳಿಗೆ, ಸೊಂಟಕ್ಕೆ ಆಭರಣಗಳಿಂದ ಅಲಂಕಾರ ಮಾಡಲಾಗಿದೆ. ಈ ಕುದುರೆಯ ಬಾಲವು ಕೊಂಚ ತುಂಡಾಗಿದಂತಿದೆ. ಮುಂಗಾಲುಗಳನ್ನು ಎತ್ತಿ ಹಾರುವ ಸನ್ನಿವೇಶದ ಕುದುರೆಯನ್ನು ಚಿತ್ರಿಸಲಾಗಿದೆ. ಇವರ ಹಿಂಬದಿಯಲ್ಲಿ ಸ್ತ್ರೀ, ಪುರುಷರಿರುವ ಮತ್ತು ಹೂ, ಎಲೆಗಳನ್ನು ಚಿತ್ರಿಸಲಾಗಿದೆ. ಈ ಚಿತ್ರದ ಹಿನ್ನೆಲೆ ಬಣ್ಣವಾಗಿ ಕಡುಗೆಂಪು ವರ್ಣವನ್ನು ಲೇಪಿಸಲಾಗಿದೆ. ಕುದುರೆಯನ್ನು ಬಿಳಿ ವರ್ಣದಿಂದ ರಚಿಸಲಾಗಿದೆ. ಇನ್ನುಳಿದಂತೆ ಹಳದಿ, ಹಸಿರು ವರ್ಣಗಳಿಂದ ಚಿತ್ರವನ್ನು ಸಂಪೂರ್ಣವಾಗಿ ಮಾಡಲಾಗಿದೆ.

ಚಿತ್ರ-೧೧ ಮದಕರಿ ನಾಯಕ :

ಎರಡನೆಯ ಅಂಕಣದ ಅಡ್ಡ ಪಟ್ಟಿಕೆಯಲ್ಲಿ ಕಾಣುವ ಈ ಚಿತ್ರದಲ್ಲಿ ಮದವೇರಿದ ಆನೆಯ ಮದವನ್ನಡಗಿಸುತ್ತಿರುವ ನಾಯಕನು ಈಟಿಯನ್ನು ಹಿಡಿದಿದ್ದಾನೆ. ಇಬ್ಬರು ಜಟ್ಟಿಗಳು ಕುಸ್ತಿಗೆ ಜಿದ್ದಿರುವುದು ಹಾಗೂ ಮಲ್ಲೇಶ್ವರಸ್ವಾಮಿ ನಂದಿಯ ಮುಂದೆ ನಿಂತು, ಸಾಷ್ಟಾಂಗವಾಗಿ ನಮಸ್ಕರಿಸುತ್ತಿರುವ ನಾಯಕ ಮತ್ತು ಸ್ತ್ರೀ,ಪುರುಷರನ್ನು ಕಾಣಬಹುದು. ಚಿತ್ರದಲ್ಲಿ ಮದವೇರಿದ ಆನೆಯೊಂದು ತನ್ನ ಮುಂಗಾಲುಗಳನ್ನು ಮೇಲೆತ್ತಿ ಮದದಿಂದ ಗೀಳಿಡುತ್ತಿದೆ. ಇಲ್ಲಿ ಆನೆಯನ್ನು ಕಪ್ಪು ವರ್ಣದಿಂದ ಚಿತ್ರಿಸಲಾಗಿದ್ದು, ಅದನ್ನು ಪ್ರತಿಭಟಿಸುತ್ತಿರುವ ನಾಯಕನೊಬ್ಬ ಈಟಿಯನ್ನು ಹಿಡಿದು ಹೆದರಿಸುತ್ತಿದ್ದಾನೆ. ಅವನ ಹಿಂಬದಿಯಲ್ಲಿ ಖಡ್ಗ ಹಿಡಿದಿರುವ ವ್ಯಕ್ತಿಯೊಬ್ಬನು ನಾಯಕನಿಗೆ

ಕಾವಲಾಗಿ ನಿಂತಿದ್ದಾನೆ. ಇವರ ಹಿಂಬದಿಯಲ್ಲಿ ಜಟ್ಟಿಗಳಿಬ್ಬರು ಕುಸ್ತಿಯನ್ನು ಆಡುತ್ತಿದ್ದಾರೆ. ಒಬ್ಬನು ಕಡು ಕಪ್ಪು ಬಣ್ಣದವನಾದರೆ, ಮತ್ತೊಬ್ಬ ತಿಳಿನೀಲಿ ವರ್ಣದವನಾಗಿದ್ದಾನೆ. ಇಬ್ಬರು ಸಹ ಹನುಮಂತನ ಚಡ್ಡಿಯನ್ನು ಧರಿಸಿದ್ದು, ದುಂಡು ಮೀಸೆಯನ್ನು ಬಿಟ್ಟಿದ್ದಾರೆ. ಇವರ ಹಿಂಬದಿಯಲ್ಲಿ ಹೂಬಳ್ಳಿಯ ವಿನ್ಯಾಸವಿದೆ.

ಚಿತ್ರ-೧೨ ಮಲ್ಲೇಶ್ವರಸ್ವಾಮಿ :

ಮಂಟಪದ ಮಧ್ಯದಲ್ಲಿ ಮಲ್ಲೇಶ್ವರಸ್ವಾಮಿ ಚಿತ್ರವಿದ್ದು, ಲಿಂಗವನ್ನು ಕಪ್ಪು ವರ್ಣದಿಂದ, ಮಂಟಪವನ್ನು ಬಿಳಿವರ್ಣದಿಂದ ರಚಿಸಲಾಗಿದೆ. ಕಲ್ಲಿನ ಬಸವನನ್ನು ತೋರಿಸಲಾಗಿದ್ದು, ಮುಖ್ಯವಾಗಿ ಬಸವನ ಕೋಡು ಮತ್ತು ಬಾಲವನ್ನು ಕಪ್ಪು ವರ್ಣದಿಂದ ಚಿತ್ರಿಸಲಾಗಿದೆ. ಇದಕ್ಕೆ ಸಾಷ್ಟಾಂಗ ಮಾಡುತ್ತಿರುವ ನಾಯಕ ಕಪ್ಪು ಬಟ್ಟೆಯನ್ನು ಧರಿಸಿದ್ದು, ದಪ್ಪ ಮೀಸೆಯನ್ನು ಬಿಟ್ಟಿರುವಂತೆ ಭಾಸವಾಗುತ್ತಿದೆ. ಇವನ ಹಿಂಬದಿಯಲ್ಲಿ ಸ್ತ್ರೀ, ಪುರುಷರಿಬ್ಬರು ಕೈಜೋಡಿಸಿ ನಮಸ್ಕರಿಸುತ್ತಿದ್ದಾರೆ. ಚಿತ್ರವನ್ನು ಗಮನಿಸಿದಾಗ ಮಲ್ಲೇಶ್ವರನ ಜಾತ್ರೆಯ ಸಂದರ್ಭದಲ್ಲಿ ಏರ್ಪಡಿಸಲಾಗುತ್ತಿದ್ದ ಕ್ರೀಡಾಕೂಟದಂತೆ ಕಾಣುವುದು. ಆ ಸಂದರ್ಭದಲ್ಲಿ ಇಲ್ಲಿರುವ ನಾಯಕನು ದೇವರಿಗೆ ನಮಸ್ಕರಿಸುತ್ತಿರುವ ದೃಶ್ಯವಿದಾಗಿದೆ. ಈ ಚಿತ್ರದಲ್ಲಿ ಕಡುಗೆಂಪು, ನೀಲಿ, ಬಿಳಿ, ಕಪ್ಪು, ಹಸಿರು ಬಣ್ಣಗಳನ್ನು ಕಾಣಬಹುದಾಗಿದೆ.

ಮೂರನೆ ಅಂಕಣ :

ಮೂರನೆಯ ಅಂಕಣವು ಒಂದು ಸಾರ್ವಜನಿಕ ಐತಿಹಾಸಿಕ ಅಂಕಣವಾಗಿದ್ದು, ಇದರಲ್ಲಿ ೮ ಉಪಾಂಕಣಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಆ ಕಾಲದ ಜನಜೀವನ, ಧಾರ್ಮಿಕ, ನಂಬಿಕೆಗಳು ಆಚಾರ-ವಿಚಾರ, ಸಾಮಾಜಿಕ ಸ್ಥಿತಿಗತಿ ಹಾಗೂ ಪ್ರಾದೇಶಿಕ ಯುದ್ಧ, ಬೇಟೆಯ ದೃಶ್ಯಗಳನ್ನು ಸಹ ಇಲ್ಲಿ ರಚಿಸಲಾಗಿದೆ. ಇಲ್ಲಿಯ ಚಿತ್ರಗಳನ್ನು ಈ ಕೆಳಕಂಡಂತಹ ವಸ್ತುವಿಷಯಗಳಲ್ಲಿ ಹೆಸರಿಸಬಹುದಾಗಿದೆ.

ಚಿತ್ರ-೧೩ ನೃತ್ಯಗಾರ್ತಿ ಮತ್ತು ಋಷಿಮುನಿ :

ಮೂರನೆಯ ಅಂಕಣದ ಮೇಲ್ಭಾಗದಲ್ಲಿ ಕಾಣುವ ಮೊದಲನೆಯ ಉಪ ಅಂಕಣದಲ್ಲಿ ಈ ನೃತ್ಯಗಾರ್ತಿ ಮತ್ತು ಋಷಿಮುನಿಯ ಚಿತ್ರಣವನ್ನು ನೋಡಬಹುದು. ಈ ಚಿತ್ರದಲ್ಲಿನ ನೃತ್ಯಗಾರ್ತಿಯ ಬಳಿಯಲ್ಲಿ ಬಣ್ಣದ ಪದರುಗಳು ಉದುರಿಹೋಗಿವೆ. ಆದರೆ ಇನ್ನುಳಿದಿರುವ ಚಿತ್ರವು ನೋಡುಗನಿಗೆ ರಸಾನುಭವವನ್ನು ಉಂಟು ಮಾಡುತ್ತದೆ. ಈ ಚಿತ್ರದಲ್ಲಿ ನೃತ್ಯಗಾರ್ತಿಯರಿಬ್ಬರು ಅರಣ್ಯದಲ್ಲಿ ನೃತ್ಯಮಾಡುತ್ತಿದ್ದು, ಋಷಿಮುನಿಯೊಬ್ಬನು ಅವನ ಪಕ್ಕದಲ್ಲಿ ಮಲಗಿರುವ ಸಿಂಹವನ್ನು ಸವರುತ್ತಾ ನಗ್ನ ದೇಹವನ್ನು ತನ್ನ ಕಣ್ಣುಗಳಲ್ಲೇ ಸವಿಯುತ್ತಿರುವಂತೆ ಬಾಸವಾಗುತ್ತಿದೆ. ಈ ದೃಶ್ಯವು ಅರಣ್ಯದಲ್ಲಿರುವಂತೆ ಚಿತ್ರಿಸಿದಂತಿರುವುದರಿಂದ ಇಲ್ಲಿ ವಿವಿಧ ರೀತಿಯ ಸಸ್ಯವರ್ಗ ಮತ್ತು ಪ್ರಾಣಿಪಕ್ಷಿವರ್ಗಗಳನ್ನು ಬಳಸಿಕೊಳ್ಳಲಾಗಿರುತ್ತದೆ. ಈ ಚಿತ್ರದ ಕೊನೆಯ ತುದಿಯಲ್ಲಿ ಬಿಲ್ಲು-ಬಾಣವನ್ನು ಹಿಡಿದಿರುವ ಅರಸನು ಋಷಿಮುನಿಗಳತ್ತ ಕೈಮುಗಿಯುತ್ತಿರುವುದನ್ನು ಗಮನಿಸಬಹುದಾಗಿದೆ.

ಪ್ರಣಯದ ನೆಲೆಯನ್ನು ಹೋಲುವ ಈ ಚಿತ್ರವು ನೋಡುಗನಲ್ಲಿ ರಸಾನುಭವವನ್ನು ಉಂಟು ಮಾಡುವುದಾಗಿರುತ್ತದೆ. ಮತ್ತೊಂದೆಡೆ ಸ್ತ್ರೀಯೊಬ್ಬಳು ತನ್ನ ಎರಡು ಕೈಗಳನ್ನು ಎತ್ತಿ ಬಲಗಾಲಲ್ಲಿ ನಿಂತು ನಾಚಿಕೆಯಿಂದ ಮುಖವನ್ನು ಬದಿಗೆ ಇರಿಸಿದ್ದಾರೆ. ಇವಳ ಸೊಂಟದ ಮೇಲ್ಭಾಗವು ನಗ್ನವಾಗಿದ್ದು, ಸ್ತನಗಳನ್ನು ಕಲಾವಿದ ಪ್ರಣಯದ ರಸಭಾವವುಂಟಾಗುವಂತೆ ಚಿತ್ರಿಸಿದ್ದಾನೆ. ಈ ನೃತ್ಯಗಾರ್ತಿಯ ಶ್ವೇತವರ್ಣದಿಂದ ಕೂಡಿದ್ದು, ಸೊಂಟದ ಕೆಳಭಾಗವನ್ನು ಬಿಳಿಯ ಕಚ್ಚೆಯಿಂದ ಶೃಂಗರಿತಳಾಗಿದ್ದಾಳೆ. ಸಿಂಹದ ಮರಿಯ ಮೇಲೆ ಕೈಯಾಡಿಸುತ್ತಾ ಅವಳ ನಗ್ನಶೃಂಗಾರ ನೃತ್ಯಭಂಗಿಯನ್ನು ತನ್ನ ಕಣ್ಣಿನಂಚಿನಲ್ಲಿ ಸೆರೆಹಿಡಿಯುತ್ತಿರುವ ಋಷಿಮುನಿಯು ಅವಳನ್ನು ಮೋಹಿಸುತ್ತಿದ್ದಾನೆ. ಈತನು ಕಚ್ಚೆಯನ್ನು ಧರಿಸಿದ್ದು, ಮೈಗೆ ವಿಭೂತಿಯನ್ನು ಹಚ್ಚಿಕೊಂಡಿದ್ದಾನೆ. ತನ್ನ ಕೇಶವನ್ನು ವಿನ್ಯಾಸಿಕೃತವಾಗಿ ಕಟ್ಟಿದ್ದು, ಗಡ್ಡವನ್ನು ಸಹ ಬಿಟ್ಟಿದ್ದಾನೆ.

ತನ್ನ ಬಲಗೈಯಿಂದ ಸಿಂಹದ ಮರಿಯನ್ನು ಸವರುತ್ತಿದ್ದು, ಆ ಮರಿಯು ಸಹ ಋಷಿಯನ್ನು ದಿಟ್ಟಿಸಿ ನೋಡುತ್ತಿದೆ. ಹಿಂಬದಿಯಲ್ಲಿ ಮರವಿದೆ, ಅದರ ಮೇಲೆ ಕೊಕ್ಕರೆಯನ್ನು ಹಾಗೂ ಮರದ ಕೊಂಬೆಯ ಮೇಲೆ ಅಳಿಲನ್ನು ಕಾಣಬಹುದು. ಈ ಎರಡು ಪ್ರಾಣಿ–ಪಕ್ಷಿಯು ಶ್ವೇತವರ್ಣದಿಂದ ಚಿತ್ರಿಸಲಾಗಿದೆ. ಮರವನ್ನು ಕೆಂಪು ಹಾಗೂ ಕಂದುಬಣ್ಣದಿಂದ ಚಿತ್ರಿಸಿದ್ದಾನೆ. ಋಷಿಮುನಿಯು ಎಡಗಾಲು ಮಂಡೆಯನ್ನೂರಿ ಕುಳಿತಿದ್ದು, ಎಡಗೈಯಲ್ಲಿ ರುದ್ರಾಕ್ಷಿಮಾಲೆಯನ್ನು ಹಿಡಿದಿದ್ದಾನೆ. ಇವನ ಹಿಂಬದಿಯಲ್ಲೂ ಸಹ ಬೃಹತ್ತಾದ ಮರವಿದೆ. ಹಲವಾರು ಕೊಂಬೆಗಳನ್ನು ಈ ಮರಹೊಂದಿದೆ. ಅದರ ಮೇಲೆ ನಾಲ್ಕು ಅಳಿಲುಗಳನ್ನು ಸಹ ಕಾಣಬಹುದು. ಇದರಿಂದ ಕಲಾವಿದನ ಸೃಜನಸ್ಮರಣ ಕೌಶಲ್ಯದ ಅಭಿವ್ಯಕ್ತತೆಯ ಮಹತ್ವವನ್ನು ತಿಳಿಯಬಹುದು. ಇನ್ನುಳಿದಂತೆ ಹಿಂಬದಿಯ ಚಿತ್ರಣವಾಗಿ ನಿಸರ್ಗವನ್ನು ತೋರಿಸಿದ್ದಾನೆ. ಇಲ್ಲಿ ತೆಂಗನ್ನು ಹೊಂದಿರುವ ಕಲ್ಪವೃಕ್ಷ, ಮಾವಿನ ಮರಗಳು, ಹೂವಿನ ಗಿಡಗಳನ್ನು ಕಾಣುತ್ತೇವೆ. ಹಿರಿಯೂರಿನ ಮುಖ್ಯ ಬೆಳೆಗಳಲ್ಲಿ ತೆಂಗು ಸಹ ಒಂದಾಗಿದೆ. ಇಲ್ಲಿ ವೇದಾವತಿ ನದಿ ಹರಿಯುವುದರಿಂದ ಹಿರಿಯೂರು ಸಮೃದ್ಧ ಹಾಗೂ ಅರೆಮಲೆನಾಡು ಕೂಡ ಹೌದು.

ಈ ದೃಶ್ಯದಲ್ಲಿ ಆ ವನ್ಯಪ್ರಾಣಿಗಳಿಗೆ ಅಗ್ರಸ್ಥಾನವಿದೆ. ಏಕೆಂದರೆ ಇಲ್ಲಿ ಹಲವು ಬಗೆಯ ವನ್ಯಜೀವಿಗಳನ್ನು ಚಿತ್ರಿಸಲಾಗಿದೆ. ಕೆಂಪು ಹಳದಿ, ಕಪ್ಪುಕರಡಿ, ಕಂದು ಜಿಂಕೆ, ಬಿಳಿ ಹಾಗೂ ಕಂದುವರ್ಣದ ನರಿಗಳು, ಅಳಿಲು, ಕೊಕ್ಕರೆ, ಗಿಳಿಗಳನ್ನು ಚಿತ್ರಿಸಲಾಗಿದೆ. ಹಿರಿಯೂರು ಅರೆಮಲೆನಾಡಾಗಿ ರುವುದರಿಂದ ಈ ರೀತಿಯ ವನ್ಯಮೃಗಗಳನ್ನು ಕಾಣಬಹುದು. ಒಟ್ಟಾರೆಯಾಗಿ ಈ ಚಿತ್ರವು ನಿಸರ್ಗರಮಣೀಯ ಸಂಯೋಜನೆಯಾಗಿದ್ದು, ಅಂದಿನ ವಾಸ್ತವಸ್ಥಿತಿಯನ್ನು ಕಟ್ಟಿಕೊಡಲು ಈ ಚಿತ್ರವು ಸಹಕಾರಿಯಾಗಿದೆ.

ಚಿತ್ರ–೧೪ ಋಷಿಮುನಿಗಳು ಯಜ್ಞ ಮಾಡುತ್ತಿರುವುದು :

ಮೂರನೆಯ ಅಂಕಣದ ಎರಡನೆಯ ಪಟ್ಟಿಯಲ್ಲಿ ಕಾಣುವ ಚಿತ್ರವು ಇದಾಗಿದ್ದು, ಈ ಚಿತ್ರದಲ್ಲಿ ಋಷಿಮುನಿಗಳು ಅರಣ್ಯದಲ್ಲಿ ಯಜ್ಞವನ್ನು ಮಾಡುವಂತಿದೆ. ಅರಣ್ಯಗಳಲ್ಲಿನ ವನ್ಯಜೀವಿಗಳನ್ನು

ಈ ಅಂಕಣದಲ್ಲಿ ಬಹು ಸುಂದರವಾಗಿ ಕಲಾವಿದನು ಚಿತ್ರಿಸಿದ್ದಾನೆ. ಆದರೆ ಈ ಪಟ್ಟಿಯ ಎಡತುದಿಯಲ್ಲಿ ಅರ್ಧಭಾಗದಷ್ಟು ಚಿತ್ರಗಳು ನಶಿಸಿದೆ. ಇಲ್ಲಿ ಕಂಡು ಬರುವಷ್ಟು ಭಾಗವನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಪಟ್ಟಿಯ ಬಲಮೂಲೆಯಲ್ಲಿ ಎರಡು ಯಜ್ಞ ಕುಂಡಗಳಲ್ಲಿ ಯಾಗ ನಡೆಯುತ್ತಿದ್ದು, ಇದರಲ್ಲಿ ಐವರು ಯುಗಾದಿಗಳನ್ನು ಇಲ್ಲಿ ಕಾಣಬಹುದಾಗಿದೆ. ಮುಂಭಾಗದಲ್ಲಿರುವ ಋಷಿಮುನಿಯ ಚಿತ್ರವು ಸಂಪೂರ್ಣವಾಗಿ ನಶಿಸಿದ್ದು, ಮತ್ತೊಬ್ಬ ಋಷಿಯು ಒಂಟಿಕಾಲಿನಲ್ಲಿ ನಿಂತು ಕರಗಳನ್ನು ಎತ್ತಿ ಕೈಮುಗಿಯುತ್ತಿದ್ದಾನೆ. ಇನ್ನು ಮೂವರು ಋಷಿಮುನಿಗಳು ಅಗ್ನಿಕುಂಡಕ್ಕೆ ಮಂತ್ರೋಚ್ಚಾರದ ಮೂಲಕ ದೈವಪ್ರಿಯ ವಸ್ತುಗಳನ್ನು ಅರ್ಪಿಸುತ್ತಿರುವಂತೆ ಭಾಸವಾಗಿರುತ್ತದೆ. ಆದರೆ ಈ ಚಿತ್ರವು ತುಂಬಾ ಹಳೆಯ ಕಾಲದ್ದಾಗಿರುವುದರಿಂದ ಬಣ್ಣಗಳು ಮಸುಕಾಗಿವೆ. ಆದರೆ ಬಾಹ್ಯ ರೇಖೆಯ ಪ್ರಭಾವದಿಂದ ಚಿತ್ರಗಳನ್ನು ಸ್ವಲ್ಪಮಟ್ಟಿಗೆ ಗುರುತಿಸಲು ಸಾಧ್ಯವಾಗುತ್ತದೆ.

ಋಷಿಮುನಿಗಳ ಹಿನ್ನೆಲೆಯಲ್ಲಿ ಅರಣ್ಯವಿದ್ದು, ಪ್ರಾಣಿಗಳ ಚಿತ್ರವಿದೆ. ಈ ಚಿತ್ರವು ನೋಡುವ ಸಹೃದಯರಿಗೆ ಉಲ್ಲಾಸವನ್ನು ನೀಡುತ್ತದೆ. ಈ ಚಿತ್ರದಲ್ಲಿ ಪ್ರಾಣಿಗಳಿಗೆ ಮಹತ್ವವನ್ನು ನೀಡಿದ್ದು, ಬಾಹ್ಯರೇಖಾ ವಿನ್ಯಾಸದ ಜೊತೆಗೆ ನೆರಳು, ಬೆಳಕಿನ ಪ್ರಭಾವವನ್ನು ತೋರಿಸಲಾಗಿದೆ. ಇಲ್ಲಿ ಕಾಣಸಿಗುವ ಪ್ರಾಣಿಗಳಲ್ಲಿ ಬಿಳಿ ಹಾಗೂ ಕೆಂಪು ಆನೆ, ಹಸು ಹಾಗೂ ಓಡುತ್ತಿರುವ ಜಿಂಕೆಗಳು, ನರಿ, ಮೊಲ ಮುಂತದ ಎಲ್ಲಾ ಪ್ರಾಣಿಗಳ ಜೊತೆಯಲ್ಲಿ ಒಂದು ಸಿಂಹದ ಚಿತ್ರವು ಕೂಡ ಇದೆ. ಇದು ಅರಣ್ಯದ ಸನ್ನಿವೇಶ ಆಗಿರುವುದರಿಂದ ದೊಡ್ಡ ದೊಡ್ಡ ಮರಗಳು, ಗುಡ್ಡ, ಉಬ್ಬು, ತಗ್ಗು ಏರಿಗಳನ್ನು ನಾವಿಲ್ಲಿ ಕಾಣಬಹುದು. ಇಲ್ಲಿರುವ ಚಿತ್ರಗಳು ನೆರಳು, ಬೆಳಕು ರೇಖಾ ವಿನ್ಯಾಸದಿಂದ ಕೂಡಿದ್ದು, ವರ್ಣಗಾರಿಕೆ ಸ್ವಲ್ಪ ಮುಸುಕಾಗಿದೆ. ಹಾಗೂ ಈ ಪಟ್ಟಿಯಲ್ಲಿ ಕಾಳಿಂಗಸರ್ಪದ ಕಲ್ಲಿನ ಸರಪಳಿಯನ್ನು ಕೂಡ ಬಣ್ಣಗಳಿಂದ ಶೃಂಗರಿಸಲಾಗಿದೆ. ಈ ಪಟ್ಟಿಯಲ್ಲಿ ಹೆಚ್ಚಾಗಿ ಕಂಡುಬರುವ ವರ್ಣಗಳೆಂದರೆ ಬಿಳಿ, ನೀಲಿ, ಹಸಿರು, ಕೆಂಪು ಹಾಗೂ ನೆರಳನ್ನು ತೋರಿಸಲು ಕಂದುಬಣ್ಣವನ್ನು ಈ ಚಿತ್ರದಲ್ಲಿ ಬಳಸಲಾಗಿರುತ್ತದೆ.

ಚಿತ್ರ–೧೫೫ ಯುದ್ಧಕ್ಕೆ ಹೋಗುತ್ತಿರುವ ಯೋಧರು ಹಾಗೂ ಪಾರ್ವತಿ ಚಂದ್ರಶೇಖರ :

ಮೂರನೆಯ ಅಂಕಣದ ಮೂರನೆಯ ಪಟ್ಟಿಕೆಯಲ್ಲಿ ಇರುವಂತ ಈ ಚಿತ್ರದಲ್ಲಿ ಕಲಾವಿದನು ತನ್ನ ಕಲಾ ಕೌಶಲ್ಯತೆಯನ್ನು ತೋರಿಸಿದ್ದಾನೆ. ಈ ಪಟ್ಟಿಕೆಯಲ್ಲಿ ಮೊದಲನೆಯ ಚಿತ್ರವಾಗಿ ಯುದ್ಧಕ್ಕೆ ಹೊರಟಿರುವ ಯೋಧರದ್ದಾಗಿದ್ದು, ಅದರಲ್ಲಿ ಎರಡು ಪ್ರಾಂತ್ಯದ ಯೋಧರನ್ನು ಕಾಣಬಹುದಾಗಿದೆ. ಮೊದಲನೆಯದಾಗಿ ಚಿತ್ರದುರ್ಗದ ನಾಯಕರು, ಮತ್ತೊಂದು ಮೈಸೂರು ಅರಸರೆಂದು ಗುರುತಿಸಬಹುದು. ಈ ಊಹೆಯನ್ನು ಅವರ ಮುಖದ ಹೋಲಿಕೆ, ವಸ್ತ್ರವಿನ್ಯಾಸ, ಮೈಕಟ್ಟುಗಳ ಗುಣಲಕ್ಷಣದ ಮೇಲೆ ಹೇಳಬಹುದು. ಚಿತ್ರವನ್ನು ಕೂಲಂಕುಶವಾಗಿ ಗಮನಿಸಿದಾಗ ಮೈಸೂರು ಯೋಧರಿಗಿಂತ, ದುರ್ಗದ ಯೋಧರು ಹೇಗೆ ಭಿನ್ನ ಎಂಬುವುದು ಗೊತ್ತಾಗುತ್ತದೆ.

ದುರ್ಗದ ಯೋಧರು ದೊಡ್ಡದಾದ ಮೀಸೆ, ರುಮಾಲನ್ನು ಸುತ್ತಿಕೊಂಡು ಹಣೆಯ ಮೇಲೆ ವಿಭೂತಿಯನ್ನು ಹಚ್ಚಿದ್ದು, ಬರ್ಮೊಡ ಧರಿಸಿ ನಡೆಯುತ್ತಿರುವುದು ಕಂಡುಬರುತ್ತದೆ ಹಾಗೂ ಮೈಸೂರಿನ ವಿಷಯಕ್ಕೆ ಬಂದರೆ ನೋಡಲು ತೆಳುವಾಗಿದ್ದು, ಕೆಲವರು ಹುರಿ ಮೀಸೆಯನ್ನು ಬಿಟ್ಟಿದ್ದರೆ ಇನ್ನೂ ಕೆಲವರು ಮೀಸೆ ಇಲ್ಲದಿರುವುದನ್ನು ಕಾಣಬಹುದು.

ಈ ಚಿತ್ರದಲ್ಲಿ ಕೆಂಪುವರ್ಣದ ಆನೆ ಹಾಗೂ ಒಂಟೆಯ ಮೇಲೆ ಕುಳಿತು ಸಾಗುತ್ತಿರುವ ಯೋಧರು ಇವರಿಗೆ ಬೇಕಾಗುವ ಈಟಿ, ಬರ್ಚಿಗಳನ್ನು ಹಿಡಿದು ಸಾಗುತ್ತಿರುವರು ಆನೆಯ ನಾಲ್ಕು ಕಾಲುಗಳಿಗೆ ಬೆಳ್ಳಿಯ ಕಡಗಗಳು, ತಲೆಗೆ ವಿನ್ಯಾಸದ ಪಟ್ಟಿ ಹಾಗೂ ಬೆನ್ನಿನ ಮೇಲೆ ವಾಡಿಕೆಯನ್ನು ಕಾಣಬಹುದು. ಒಂಟೆಯು ಸಹ ಉತ್ತಮ ರೀತಿಯಲ್ಲಿ ಚಿತ್ರಿಸಿದ್ದು, ಹಣೆಪಟ್ಟಿ, ಕೊರಳಪಟ್ಟಿ, ಬೆನ್ನವಾಡಿಕೆ ಹಾಗೂ ಅದರ ಬೆನ್ನಮೇಲೆ ರಕ್ಷಾಕವಚವನ್ನು ಹಾಕಿ ಶೃಂಗರಿಸಲಾಗಿದೆ. ಇದರ ಹಿಂಬದಿಯಲ್ಲಿ ಹಲವಾರು ಯೋಧರು ಖಡ್ಗಗಳನ್ನು ಹಿಡಿದು ಬರುತ್ತಿರುವುದನ್ನು ಗಮನಿಸಬಹುದು.

ವಿಶೇಷವಾಗಿ ಈ ಚಿತ್ರದಲ್ಲಿ ರುಮಾಲು ಸುತ್ತಿರುವ ಯೋಧರು ಎತ್ತರವಾಗಿದ್ದು, ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾರೆ. ಹಾಗೂ ಸೊಂಟದಲ್ಲಿ ಕತ್ತಿಯಿದ್ದು, ಪಕ್ಕದಲ್ಲಿ ಶೃಂಗಾರಗೊಂಡ ಸ್ತ್ರೀಯೊಬ್ಬಳು ಕಪ್ಪುವರ್ಣದ ಸೀರೆಯನ್ನು ಉಟ್ಟಿದ್ದು, ನೋಡಲು ಆಕರ್ಷಕವಾಗಿ ಕಾಣುವಳು. ತಲೆಗೆ ತುರುಬನ್ನು ಕಟ್ಟಿದ್ದು, ಆಭರಣಗಳಿಂದ ಶೃಂಗರಿಸಲಾಗಿದೆ. ಸೊಂಟಕ್ಕೆ ಬಿಗಿದಿರುವ ಡಾಬು ಹಾಗೂ ಕೊರಳ ಮಾಲೆಗಳನ್ನು ಕಲಾವಿದನು ಸೃಜನಾತ್ಮಕವಾಗಿ ಚಿತ್ರಿಸಿದ್ದಾನೆ. ಇವರಿಬ್ಬರ ಮೇಲೆ ಒಂದು ಗಿಳಿ ಹಾಗೂ ಹಂಸ ಇವರನ್ನು ಹಿಂಬಾಲಿಸುತ್ತಿರುವಂತೆ ತೋರಿಸಿದ್ದಾನೆ. ಒಟ್ಟಾರೆಯಾಗಿ ಈ ಚಿತ್ರವು ರೇಖಾಪ್ರಧಾನ ವಾಗಿದ್ದು, ಗಾಢಕೆಂಪು, ತಿಳಿನೀಲಿ, ಕಂದುಬಣ್ಣ ಹಾಗೂ ಬಿಳಿಬಣ್ಣವನ್ನು ಅಲ್ಲಲ್ಲಿ ಮಾಸಿರುವ ಹಸಿರಿನ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ. ಈ ಚಿತ್ರಗಳನ್ನು ಗಮನಿಸಿದಾಗ ಮೈಸೂರು ಸಂಸ್ಥಾನಕ್ಕೆ ಹಾಗೂ ದುರ್ಗದ ಪಾಳೆಗಾರರಿಗೂ ಇರುವ ಸಹ ಸಂಬಂಧಗಳು ತಿಳಿದುಬರುತ್ತದೆ. ಇವರು ಬರಿ ರಾಜಕೀಯವಾಗಿ ಸಹಕಾರವಲ್ಲದೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜೊತೆ ಗೂಡಿರುವುದು ವಿಶೇಷಗಳಲ್ಲೊಂದು.

ಮೂರನೆಯ ಪಟ್ಟಿಕೆಯ ಬಲ ಭಾಗದ ಮೂಲೆಯಲ್ಲಿ ಚಿತ್ರಿಸಲಾಗಿರುವ ಚಂದ್ರಶೇಖರ ಮತ್ತು ಪಾರ್ವತಿದೇವಿಯ ಚಿತ್ರವಿರುತ್ತದೆ. ಚಂದ್ರಶೇಖರ, ಪಾರ್ವತಿಯ ಚಿತ್ರವು ನೋಡಲು ಕಿರುರೂಪಚಿತ್ರದಲ್ಲಿದ್ದು, ಬಣ್ಣಗಳು ಮಾಸಿದಂತೆ ಕಾಣುತ್ತವೆ. ಪರಶಿವನು ಅರ್ಧಚಂದ್ರನನ್ನು ತಲೆಯ ಮೇಲೆ ಧರಿಸಿರುವುದರಿಂದ ಇವನನ್ನು ಚಂದ್ರಶೇಖರನೆಂದು ಕರೆಯಲಾಗುವುದು. ಈತನ ಉದ್ದನೆಯ ಕಚ್ಚೆಯನ್ನು ಧರಿಸಿ ಬಲಗಾಲನ್ನು ಕೆಳಗಿರಿಸಿ ಎಡಗಾಲನ್ನು ಮಡುಚಿ ಕುಳಿತಿದ್ದಾನೆ. ಬಲಗಾಲಿಗೆ ಕಡಗವನ್ನು ಧರಿಸಿದ್ದು, ಎಡಗಾಲಿಗೆ ಪ್ರಾಣಿಯ ಚರ್ಮವನ್ನು ಸುತ್ತಿದ್ದಾನೆ. ಸೊಂಟದಿಂದ ಮೊಣಕಾಲಿನವರೆಗೂ ಹುಲಿಯ ಚರ್ಮವನ್ನು ಸುತ್ತಿರುವುದನ್ನು ಕಾಣಬಹುದು. ಬಲಗೈಯಲ್ಲಿ ಅಭಯ ಮುದ್ರೆ ಇದ್ದು ಕೈಕಡಗಗಳನ್ನು ಧರಿಸಿದ್ದಾನೆ. ಎಡಗೈಯಿಂದ ತನ್ನ ಪತ್ನಿಯಾದ ಪಾರ್ವತಿಯನ್ನು ಹಿಡಿದು ಎಡತೊಡೆಯ ಮೇಲೆ ಕೂರಿಸಿಕೊಂಡಿದ್ದಾನೆ.

ಈ ಚಿತ್ರದಲ್ಲಿ ಪಾರ್ವತಿ, ಪರಮೇಶ್ವರ ಇಬ್ಬರೂ ಕಿರೀಟಧಾರಿಯಾಗಿದ್ದು, ಪಾರ್ವತಿದೇವಿ ಕೆಂಪು ಸೀರೆಯನ್ನುಟ್ಟು ಶೃಂಗಾರವಾಗಿ ಕಂಗೊಳಿಸುತ್ತಿರುವಳು. ಈಶ್ವರನು ಸಹ ವಿವಿಧ ಆಭರಣಗಳಿಂದ ಮದಸ್ಮಿತ ಬೋರಿತನಾಗಿ ಕಂಗೊಳಿಸುತ್ತಿರುವನು. ಶಿವನ ಎಡಭಾಗದ ಕೆಳಗೆ ಕಿರುರೂಪದ ನಂದಿಯು ಕುಳಿತಿದ್ದು, ಇದರ ಪಕ್ಕದಲ್ಲಿ ಮೂವರು ಉಪದೇವದೂತರನ್ನು ಕಾಣಬಹುದು. ಇವರ ಹಿಂಬದಿಯಲ್ಲಿ ಸೂರ್ಯದೇವನು ಕಂಗೊಳಿಸುತ್ತಿದ್ದು, ಮೇಲ್ಭಾಗದಲ್ಲಿ ಹೂಗುಚ್ಛಗಳಿಂದ ಶೃಂಗರಿಸಲಾಗಿದೆ. ಒಟ್ಟಾರೆಯಾಗಿ ಈ ಚಿತ್ರವು ಒಂದು ಉತ್ತಮ ಸಂಯೋಜನೆಯಾಗಿದ್ದು, ಬಣ್ಣಗಳು ಮಸುಕಾಗಿ ಕಾಣುತ್ತವೆ. ಇಲ್ಲಿ ಕಾಣಸಿಗುವ ವರ್ಣಗಳು ತಿಳಿಕೆಂಪು, ಗಾಡಹಸಿರು, ಕೇಸರಿ, ಬಿಳಿ, ಹಳದಿ ಹಾಗೂ ಕಂದುಬಣ್ಣಗಳಿಂದ ಕೂಡಿವೆ.

ಚಿತ್ರ-೧೬ ಹೂಬಳ್ಳಿಯ ವಿನ್ಯಾಸ :

ಎಲ್ಲ ಅಂಕಣದಲ್ಲಿ ಈ ಹೂವಿನ ವಿನ್ಯಾಸವನ್ನು ಕಾಣಬಹುದಾಗಿದೆ. ಹೂವಿನ ವಿನ್ಯಾಸವನ್ನು ಪಟ್ಟಿಕೆಗಳಿಂದ ವಿಭಾಗಿಸಿಕೊಂಡು ಚಿತ್ರಗಳನ್ನು ಬೇರ್ಪಡಿಸಿ ಚಿತ್ರಿಸಲಾಗಿದೆ. ಹೂಬಳ್ಳಿಯ ವಿನ್ಯಾಸದಲ್ಲಿ ಎರಡು ದೊಡ್ಡ ಕೆಂಪು ಪಟ್ಟಿಗಳು, ಎರಡು ಬದಿಯಲ್ಲೂ ಇದ್ದು, ವಿವಿಧ ಬಗೆಯ ಹೂವುಗಳನ್ನು ನಾವು ಇಲ್ಲಿ ಕಾಣಬಹುದು. ವಿನ್ಯಾಸಿಕೃತ ಎಲೆಗಳು ಮೊಗ್ಗು ಸುರಳಿಯ ರೂಪದಲ್ಲಿರುತ್ತವೆ. ಈ ಹೂಬಳ್ಳಿಯ ಹಿನ್ನೆಲೆಯಾಗಿ ಕೇಸರಿ, ಹಳದಿ ಮಿಶ್ರಿತ ತೆಳುಬಣ್ಣವನ್ನು ಲೇಪಿಸಿ ಅದರ ಮೇಲೆ ನೀಲಿ, ಹಸಿರು, ಹಳದಿ, ಕೇಸರಿ, ಕೆಂಪುವರ್ಣದ ಹೂಮೊಗ್ಗುಗಳನ್ನು ಚಿತ್ರಿಸಲಾಗಿದೆ. ಎಲೆಗಳನ್ನು ಹಸಿರು, ನೀಲಿ, ಹಳದಿ ಬಣ್ಣಗಳಿಂದ ಚಿತ್ರಿಸಲಾಗಿದೆ. ಮೂರನೆಯ ಅಂಕಣದ ನಾಲ್ಕು ಮೂಲೆಯಲ್ಲಿ ಚೌಕಾಕಾರವಿದೆ. ಅದರೊಳಗೆ ಮೂರು ವೃತ್ತಗಳನ್ನು ರಚಿಸಿ ಅವುಗಳಲ್ಲಿ ವಿನ್ಯಾಸ ನಕ್ಷೆಗಳನ್ನು ರಚಿಸಲಾಗಿದೆ. ಒಟ್ಟಾರೆಯಾಗಿ ಈ ವಿನ್ಯಾಸಗಳು ನೋಡುವ ಸಹೃದಯರಿಗೆ ವಿನೂತನ ಅನುಭವ ನೀಡುವುದರ ಜೊತೆಗೆ ಸೃಜನಾತ್ಮಕ ಕಲೆಯ ವಿನ್ಯಾಸವನ್ನು ತಿಳಿಸುವಂತೆ ರಚಿಸಲಾಗಿದೆ.

ಚಿತ್ರ-೧೭ ಬೇಟೆಗೆ ಹೊರಟ ಬೇಡ ನಾಯಕರು :

ಮೂರನೆಯ ಅಂಕಣದ ಮೊದಲ ಅಡ್ಡಪಟ್ಟಿಯಲ್ಲಿ ಈ ಚಿತ್ರವನ್ನು ಕಾಣಬಹುದು. ಚಿತ್ರವು ಬೇಡನಾಯಕರು ಬೇಟೆಗೆ ಹೊರಟ ಚಿತ್ರವಾಗಿದ್ದು, ಇದರಲ್ಲಿ ಆನೆ, ಕುದುರೆಗಳ ಮೇಲೆ ಸಾಗುತ್ತಿರುವ ಹಾಗೂ ನಾಯಿಗಳ ಜೊತೆ ಕತ್ತಿಗುರಾಣಿಗಳನ್ನು ಹಿಡಿದು ಬೇಟೆಗೆ ಸಾಗುತ್ತಿರುವ ಬೇಡರ ದೃಶ್ಯವನ್ನು ಕಾಣಬಹುದು. ಈ ಚಿತ್ರದಲ್ಲಿ ಮೊದಲನೆಯದಾಗಿ ಕಂದುವರ್ಣದ ಆನೆಯ ಮೇಲೆ ಕುಳಿತ ಮಾವುತನು ತನ್ನ ಕೈಯಲ್ಲಿರುವ ಅಂಕುಶದಿಂದ ಆನೆಯನ್ನು ನಿಯಂತ್ರಿಸಿದ್ದು, ಕಲಾವಿದನು ಆನೆಯನ್ನು ಬಹು ಸುಂದರವಾಗಿ, ಚಲನೀಕೃತವಾಗಿ ಚಿತ್ರಿಸಿದ್ದು, ಆನೆಯ ವೇಗವು ಸಹ ತಿಳಿಯುವಂತಿದೆ. ಮಾವುತನ ಹಿಂದೆ ಕುಳಿತ ಮತ್ತೊಬ್ಬ ವ್ಯಕ್ತಿಯು ವಾದ್ಯವನ್ನು ನುಡಿಸುತ್ತಿದ್ದಾನೆ. ಮತ್ತೊಬ್ಬ ವ್ಯಕ್ತಿಯು ತಿಳಿನೀಲಿ ಕುದುರೆಯ ಮೇಲೆ ಕುಳಿತು ಶಹನಾಮಿ

ನುಡಿಸುವಂತೆ ಭಾಸವಾಗುತ್ತಿದೆ. ಇಲ್ಲಿ ಕಾಣಸಿಗುವ ಕುದುರೆಗೆ ಹಣೆಯ ಮೇಲೆ ಪಟ್ಟಿ ಮತ್ತು ಕೊರಳಪಟ್ಟಿಗಳಿಂದ ಅಲಂಕಾರ ಮಾಡಲಾಗಿರುತ್ತದೆ. ವಾದ್ಯ ನುಡಿಸುತ್ತಿರುವ ವ್ಯಕ್ತಿಯ ಕೆಂಪು ರುಮಾಲನ್ನು ಧರಿಸಿದ್ದು, ಮೈಗೆ ನಿಲುವಂಗಿ ಮಾದರಿಯ ಜುಬ್ಬಾವನ್ನು ಧರಿಸಿದ್ದಾನೆ. ಹಾಗೂ ಸೊಂಟಕ್ಕೆ ಒಂದು ಪಟ್ಟಿಯನ್ನು ಸುತ್ತಿದ್ದಾನೆ.

ಎರಡನೆಯ ಕುದುರೆ ಸವಾರನು ಮೊದಲಿನವನಂತೆ ವಸ್ತ್ರವನ್ನು ಧರಿಸಿದ್ದು, ಅವನು ಸಹ ಶಹನಾಹಿಯ ಮಾದರಿಯಲ್ಲಿ ಇರುವ ವಾದ್ಯವನ್ನು ನುಡಿಸುತ್ತಿದ್ದಾನೆ. ಈತನು ಕಂದುಕುದುರೆಯ ಮೇಲೆ ಕುಳಿತಿರುವ ಭಂಗಿಯಲ್ಲಿದ್ದು, ನೋಡುಗನ ಕಣ್ಮನ ಸೆಳೆಯುವುದು. ಕುದುರೆಯ ಮುಖಕ್ಕೆ ಮುಖವಾಡವನ್ನು ಹಾಕಲಾಗಿದ್ದು, ಕೊರಳಿಗೆ ಕೊರಳಪಟ್ಟಿಯನ್ನು ಧರಿಸಲಾಗಿರುತ್ತದೆ. ಒಟ್ಟಾರೆಯಾಗಿ ಈ ಚಿತ್ರವು ನೋಡುಗನನ್ನು ಸೆಳೆಯುವಲ್ಲಿ ಸಫಲವಾಗುವುದು.

ಮೂರನೆಯ ಕುದುರೆಯು ಶ್ವೇತವರ್ಣದಲ್ಲಿ ಇದ್ದು, ತನ್ನ ಎರಡು ಕಾಲುಗಳನ್ನು ಎತ್ತಿ ಜಿಗಿಯುತ್ತಿರುವಂತಿದೆ. ಅದರ ಮೇಲೆ ಕುಳಿತ ವ್ಯಕ್ತಿಯು ತನ್ನ ಕೈಯಲ್ಲಿ ತಮಟೆಯನ್ನು ಹಿಡಿದು ಎರಡು ಕೈಗಳಿಂದ ಬಾರಿಸುತ್ತಿದ್ದಾನೆ. ಈ ಶಬ್ಧಕ್ಕೆ ಕುದುರೆಯು ಗಾಬರಿಗೊಂಡಂತಿದೆ. ಇವರ ಬದಿಯಲ್ಲಿ ನಡೆದುಬರುವ ಕಾಲಾಳುಗಳು ಬಲಗೈಯಲ್ಲಿ ಸೊಪ್ಪುಗಳನ್ನು ಹಿಡಿದು, ಎಡಗೈಯಲ್ಲಿ ಕೋಲನ್ನು ಹಾಗೂ ನಾಯಿಗೆ ಕಟ್ಟಿರುವ ಹಗ್ಗವನ್ನು ಹಿಡಿದು ಸಾಗುತ್ತಿರುವಂತೆ ಚಿತ್ರಿಸಿದ್ದು, ಈತನು ಕೆಂಪುವರ್ಣದ ಮನುಷ್ಯನಾಗಿದ್ದು, ತಲೆಗೆ ರುಮಾಲನ್ನು ಸುತ್ತಿದ್ದು, ಕಾಲಿಗೆ ಶಳ್ಳವನ್ನು ಧರಿಸಿದ್ದಾನೆ.

ಒಟ್ಟಾರೆಯಾಗಿ ಈ ಚಿತ್ರವನ್ನು ನೋಡಿದಾಗ ಬೇಟೆಗಾರರು ಬೇಟೆಗೆ ಹೊರಟಿದ್ದು, ವಾದ್ಯಗಳನ್ನು ಬಾರಿಸಿಕೊಂಡು ಶಬ್ಧವನ್ನು ಮಾಡುತ್ತಿದ್ದಾರ. ಕಾರಣ ಅವಿತು ಕುಳಿತಿರುವ ಪ್ರಾಣಿಗಳು ಹೊರಗೆ ಬರಲೆಂದು, ಸಾಮಾನ್ಯವಾಗಿ ಇಂದಿಗೂ ಪ್ರಾಣಿಗಳನ್ನು ಬೇಟೆಗೆ ಕರೆದೊಯ್ಯುವುದು ಬಹುಬೇಗ ವಾಸನೆಯನ್ನು ಗ್ರಹಿಸಿ ಬೇಟೆಗೆ ಸಹಾಯ ಮಾಡುತ್ತವೆ. ಈ ಚಿತ್ರವನ್ನು ಬಹಳ ಬಯಲು ಪ್ರದೇಶದಲ್ಲಿ ಚಿತ್ರಿಸುವುದರಿಂದ ಈ ದೃಶ್ಯವು ದುರ್ಗದ ಆಸುಪಾಸು ಇರಬಹುದೆಂದು ಗುರುತಿಸಬಹುದು. ಈ ಚಿತ್ರದಲ್ಲಿ ಬಣ್ಣಗಾರಿಕೆ ಹಾಗೂ ರೇಖಾವಿನ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದು, ಇದರಲ್ಲಿ ಕಲಾವಿದನು ಬಾಹ್ಯರೇಖಾವಿನ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ನೀಡಿರುವುದು ಗಮನಾರ್ಹ.

ಈ ಚಿತ್ರಪಟ್ಟಿಕೆಯಲ್ಲಿ ಹೆಚ್ಚಾಗಿ ನೀಲಿ, ಬಿಳಿ, ಕೆಂಪು ಹಾಗೂ ಕಂದುಬಣ್ಣಗಳನ್ನು ಬಿಟ್ಟರೆ ಮಾಸಿದಂತೆ ಕಾಣುವ ಹಳದಿ, ಹಸಿರು ಬಣ್ಣಗಳಿವೆ. ಈ ಕಲಾವಿದ ಬಣ್ಣವನ್ನು ಉತ್ತಮವಾಗಿ ಲೇಪಿಸಿದ್ದರೂ, ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುವುದು ಬಾಹ್ಯರೇಖೆ. ಏಕೆಂದರೆ ಆನೆ, ಕುದುರೆಯ ವಿನ್ಯಾಸವು ಕರ್ನಾಟಕದ ಮಹತ್ವದ ಭಿತ್ತಿಚಿತ್ರಗಳಿಗೆ ಸಮನಾಗಿವೆ. ಆದುದರಿಂದ ಇಂತಹ ಚಿತ್ರಗಳನ್ನು ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳಿಗೆ ಹೋಲಿಕೆ ಮಾಡಬಹುದು.

ಚಿತ್ರ-೧೮ ಮಲ್ಲೇಶ್ವರನಿಗೆ ಕೈಮುಗಿಯುತ್ತಿರುವ ಭಕ್ತಾದಿಗಳು :

ಮೂರನೆಯ ಅಂಕಣದಲ್ಲಿ ಮತ್ತೊಂದು ಅಡ್ಡಪಟ್ಟಿಯಲ್ಲಿ ಕಾಣಿಸುವ ಈ ದೃಶ್ಯವು ನೋಡಲು ಅಸ್ಪಷ್ಟವಾಗಿರುತ್ತದೆ. ಚಿತ್ರದ ಮೇಲಿನ ಚಕ್ಕಳಿಗಳು ಉದುರಿ ಮಸುಕು ಮಸುಕಾಗಿ ಕಾಣುವುದು. ಶ್ರೀ ಮಲ್ಲೇಶ್ವರನಿಗೆ ಸ್ತ್ರೀ, ಪುರುಷರು ಕೈಮುಗಿಯುತ್ತಿದ್ದು, ಪಕ್ಕದಲ್ಲಿ ಕುಸ್ತಿಯ ಸನ್ನಿವೇಶವಿದೆ. ಈ ಚಿತ್ರದಲ್ಲಿ ಮೂರು ಪ್ರಾಂತ್ಯದ ವ್ಯಕ್ತಿಗಳನ್ನು ಕಾಣಬಹುದು. ಅವರೆಂದರೆ ವಿಜಯನಗರದ ಅರಸರು, ಮೈಸೂರು ಪ್ರಾಂತ್ಯದ ಅರಸರು, ದುರ್ಗದವರು ದಪ್ಪನಾದ ಮೀಸೆಯನ್ನು ಬಿಟ್ಟಿದ್ದು, ದುಂಡುಮುಖ, ದಪ್ಪಕಣ್ಣು ಹಾಗೂ ಮದಕರಿನಾಯಕನಂತೆ ಹೋಲುವ ರುಮಾಲುಗಳನ್ನು ಧರಿಸಿರುತ್ತಾರೆ. ವಿಜಯನಗರದ ಅರಸರು ಕಿರೀಟಧಾರಿಯಾಗಿದ್ದು, ಕಚ್ಚೆಯನ್ನು ಉಟ್ಟಿದ್ದಾರೆ. ಈ ದೃಶ್ಯದಲ್ಲಿ ಮಲ್ಲೇಶ್ವರಸ್ವಾಮಿ ಒಳಭಾಗದಲ್ಲಿದ್ದು, ಲಿಂಗದಾಕಾರದಲ್ಲಿರುತ್ತದೆ. ಇದಕ್ಕೆ ಕಲಾವಿದನು ಕಣ್ಣು, ಮೂಗು, ಬಾಯಿಯನ್ನು ಸಹ ರಚಿಸಿರುತ್ತಾನೆ. ಹೂವುಗಳಿಂದ ಶೃಂಗರಿಸಲಾಗಿದೆ. ತಲೆಯ ಮೇಲೆ ಸಣ್ಣದಾದ ಕಿರೀಟದ ಮಾದರಿಯನ್ನು ಕಾಣಬಹುದು. ನಮಸ್ಕರಿಸುತ್ತಿರುವ ಸ್ತ್ರೀ, ಪುರುಷರು ಗಣ್ಯವ್ಯಕ್ತಿಗಳಂತೆ ತೋರುತ್ತಿದ್ದು, ಮೊದಲಿಗೆ ಸ್ತ್ರೀಯೊಬ್ಬಳು ದೇವರ ಸನ್ನಿಧಿಯಲ್ಲಿದ್ದು, ಇವರ ಹಿಂದೆ ಕೆಂಪು ವರ್ಣದ ಪುರುಷನಿರುವುದನ್ನು ಗಮನಿಸಬಹುದು. ಕೊರಳಮಾಲೆ, ಶಲ್ಯ, ಪೇಟವನ್ನು ಧರಿಸಿದ್ದು, ನೋಡಲು ರಾಜನಂತೆ ಕಾಣುವನು. ಇವನ ಹಿಂಬದಿಯಲ್ಲಿ ಮತ್ತೊಬ್ಬ ಪುರುಷನು ಎರಡು ಕೈಗಳನ್ನು ಜೋಡಿಸಿ ಕೈಮುಗಿಯುತ್ತಿದ್ದು, ತಲೆಯ ಮೇಲೆ ಮೈಸೂರು ಪೇಟವನ್ನು ಧರಿಸಿದ್ದಾನೆ. ಇವರ ಹಿಂಬದಿಯಲ್ಲಿ ದುರ್ಗದ ನಾಯಕನನ್ನು ಹೋಲುವ ಮೂರು ನಾಲ್ಕು ಸಭಿಕರಿದ್ದಾರೆ. ಲಿಂಗದ ಹಿನ್ನೆಲೆಯಾಗಿ ಮರಗಿಡಗಳನ್ನು ಚಿತ್ರಿಸಿದ್ದು, ತೆಂಗಿನಮರವು ಫಲವನ್ನು ಬಿಟ್ಟಿದೆ. ತೆಂಗಿನಗಿಡಗಳು ಹಿರಿಯೂರಿನ ನಿಸರ್ಗವನ್ನು ಬಿಂಬಿಸುತ್ತವೆ.

ಶ್ರೀಮಲ್ಲೇಶ್ವರ ಲಿಂಗದ ಎಡಭಾಗದಲ್ಲಿ ಹಲವಾರು ಜಟ್ಟಿಗಳನ್ನು ಕಾಣಬಹುದು. ಇವರುಗಳು ಹನುಮಂತನ ಚಡ್ಡಿಯನ್ನು ಹಾಕಿದ್ದು, ಕೈಯಲ್ಲಿ ಆಯುಧಗಳನ್ನು ಹಿಡಿದಿದ್ದಾರೆ. ಈ ದೃಶ್ಯದಲ್ಲಿ ಕಿರೀಟಧಾರಿಯಾಗಿರುವ ವಿಜಯನಗರದ ಅರಸನನ್ನು ಹೋಲುವ ವ್ಯಕ್ತಿಯು ಮೈಸೂರು ಪ್ರಾಂತೀಯ ವ್ಯಕ್ತಿಯೊಂದಿಗೆ ಕೈಮಿಲಾಯಿಸುತ್ತಿದ್ದು, ಇವರ ಬದಿಯಲ್ಲಿ ಆಭರಣಭರಿತ ಸ್ತ್ರೀಯನ್ನು ಕಾಣಬಹುದು. ಅವಳ ಹಿಂದೆ ವ್ಯಕ್ತಿಯೊಬ್ಬನು ಉದ್ದನೆಯ ಮಚ್ಚನ್ನು ಹಿಡಿದಿರುವನು. ಈ ದೃಶ್ಯವನ್ನು ನೋಡುತ್ತಿದ್ದರೆ, ಇದೊಂದು ಸಾಂಪ್ರದಾಯಿಕ ಕುಸ್ತಿಯನ್ನು ಬಿಂಬಿಸುವುದು. ಒಟ್ಟಾರೆಯಾಗಿ ಈ ದೃಶ್ಯದ ಹಿನ್ನೆಲೆಯು ಕಪ್ಪು ಮಿಶ್ರಿತ ಪಾಚಿ ಬಣ್ಣದಲ್ಲಿದ್ದು, ಕಲಾಕೃತಿಗಳನ್ನು ನೋಡಲು ವಿಜಯನಗರ ಶೈಲಿಯನ್ನು ಹೋಲಿಸಿ ನೋಡಿದರೂ ನೋಡುಗನಿಗೆ ಕುಬ್ಜವಾಗಿವೆ ಎಂದೆನಿಸುತ್ತದೆ. ಪಕ್ಕದಲ್ಲಿರುವ ಸಿಬಿ ಚಿತ್ರಗಳಿಗೂ, ಹಿರಿಯೂರಿನ ಚಿತ್ರಗಳಿಗೂ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ. ಇದರಲ್ಲಿ ಹೆಚ್ಚು ತಿಳಿಕಪ್ಪು, ಪಾಚಿ, ಕೆಂಪು, ಕಂದು, ಬಿಳಿ, ಮಾಗಿದ ಹಳದಿ, ನೀಲಿ, ಹಸಿರು ಬಣ್ಣಗಳ ಪ್ರಭಾವಗಳು ಇವೆ. ಬಾಹ್ಯ ರೇಖಾವಿನ್ಯಾಸವು ಸಹ ಉತ್ತಮ ರೀತಿಯಲ್ಲಿರುವುದನ್ನು ಗುರುತಿಸಬಹುದು.

ಚಿತ್ರ-೧೯ ವಾದ್ಯಗಾರರೊಂದಿಗೆ ಸಾಗುತ್ತಿರುವ ಅಂಬಾರಿ :

ಮೂರನೆಯ ಅಂಕಣದ ಮತ್ತೊಂದು ಅಡ್ಡಪಟ್ಟಿಯಲ್ಲಿ ಈ ಚಿತ್ರವನ್ನು ನೋಡಬಹುದು. ವಾದ್ಯಗಾರರು ಆನೆ ಅಂಬಾರಿಯನ್ನು ಚಿತ್ರಿಸಿದ್ದು, ಕೆಂಪು ಆನೆಯ ಮೇಲೆ ಸಾಗುತ್ತಿರುವ ರಾಹುತನು ಧ್ವಜವನ್ನು ಹಿಡಿದಿದ್ದು, ಆನೆಯು ವೇಗ ಗತಿಯಲ್ಲಿ ಸಾಗುತ್ತಿರುವಂತೆ ಚಿತ್ರಿತವಾಗಿದೆ. ಆನೆಯ ನಾಲ್ಕು ಕಾಲುಗಳು ಚಲನೆಯಲ್ಲಿದ್ದು, ಹಣೆಯಪಟ್ಟಿ, ಕೊರಳಪಟ್ಟಿಗಳಿಂದ ಅಲಂಕೃತಗೊಂಡಿವೆ. ಆನೆಯು ಕಡುಗೆಂಪುವರ್ಣದಿಂದ ರಚಿಸಿದ್ದು, ಶ್ವೇತವರ್ಣದ ರಾಹುತನು ಆನೆಯನ್ನು ನಿಯಂತ್ರಿಸುತ್ತಿದ್ದಾನೆ. ಅವನ ಹಿಂಬದಿಯಲ್ಲಿ ಕುಳಿತಿರುವ ವ್ಯಕ್ತಿಯೊಬ್ಬನು ಧ್ವಜವನ್ನು ಎತ್ತಿಹಿಡಿದಿದ್ದಾನೆ. ಇವನ ಹಿಂಬದಿಯಲ್ಲಿ ನಡೆದು ಬರುತ್ತಿರುವ ವಾದ್ಯಗಾರರು ನಿಲುವಂಗಿಯನ್ನು ತೊಟ್ಟು, ಸೊಂಟಕ್ಕೆ ಶಲ್ಯವನ್ನು ಸುತ್ತಿರುವರು. ಕಚ್ಚೆಯನ್ನು ಕಟ್ಟಿರುವವರು. ತಲೆಗೆ ಪೇಟವನ್ನು ಸುತ್ತಿದ್ದಾರೆ. ಈ ವಾದ್ಯಗಾರರು ಶಹನಾಯಿ, ಮೃದಂಗ, ಕೊಳಲುಗಳನ್ನು ನುಡಿಸುತ್ತಿದ್ದಾರೆ. ವಾದ್ಯಗಾರರ ಹಿಂಭಾಗದಲ್ಲಿ ಕುದುರೆಯ ಮೇಲೆ ಸಾಗುತ್ತಿರುವ ಪೂಜ್ಯ ಒಡೆಯರು ಸಾಗುತ್ತಿದ್ದಾರೆ. ಇವರು ನೀಲಿ, ಕಂದುಬಣ್ಣದ ಕುದುರೆಯ ಮೇಲೆ ಸಾಗುತ್ತಿದ್ದು, ಹಿಂಬದಿಯಲ್ಲಿ ರಾಜಮನೆತನದ ಹಲವು ಸದಸ್ಯರು ಕಿರೀಟಧಾರಿಯಾಗಿದ್ದು, ಕಚ್ಚೆಯನ್ನು ತೊಟ್ಟು ಕೈಮುಗಿದು ಸಾಗುತ್ತಿರುವುದನ್ನು ನಾವಿಲ್ಲಿ ಕಾಣುತ್ತೇವೆ. ಹಾಗೂ ತಿಳಿನೀಲಿ ವರ್ಣದ ಆನೆಯ ಮೇಲೆ ಅಂಬಾರಿಯಿದ್ದು, ಮುಂಭಾಗದಲ್ಲಿ ರಾಹುತನಿದ್ದಾನೆ. ಹಿಂಭಾಗದಲ್ಲಿ ಅಂಬಾರಿಕ ರಕ್ಷಕನಿದ್ದಾನೆ. ತಲೆಗೆ ಹಾಗೂ ಕತ್ತಿಗೆ ಪಟ್ಟಿಗಳನ್ನು ಕಟ್ಟಿದ್ದು, ಆನೆಯ ಬೆನ್ನ ಮೇಲೆ ರತ್ನಗಂಬಳಿಯನ್ನು ಹಾಕಿರಬಹುದೆಂದು ಊಹಿಸಬಹುದು.

ಒಟ್ಟಾರೆಯಾಗಿ ಚಿತ್ರವನ್ನು ಗಮನಿಸಿದರೆ ಮೈಸೂರು ದಸರಾವನ್ನು ನೆನಪಿಗೆ ತರುತ್ತದೆ. ಅಲ್ಲಿ ನಡೆಯುವಂತೆ ಆನೆಯ ಸಾಲು, ಕುದುರೆಯ ಸಾಲು, ವಾದ್ಯಗಾರರು, ಪುರೋಹಿತರು, ರಾಜಮನೆತನದ ವರನ್ನು ಕಾಣಬಹುದು. ಆದರೆ ವಿಜಯನಗರ ಕಾಲದಿಂದಲೂ ಮೈಸೂರಿನಲ್ಲಿ ಹಾಗೂ ಚಿತ್ರದುರ್ಗದ ಕಡೆಯಲ್ಲಿ ಇಂದಿಗೂ ಸಹ ನವರಾತ್ರಿಯ ಹಬ್ಬದಲ್ಲಿ ಆಚರಿಸುತ್ತಾರೆ. ಆದುದರಿಂದ ಇವರು ಬಳಸಿದ ವರ್ಣಗಾರಿಕೆಯಲ್ಲಿ ಕೆಂಪು, ನೀಲಿ, ಹಳದಿ, ಹಸಿರು ಕಂದು, ಬಣ್ಣಗಳನ್ನು ಕಾಣಬಹುದು. ರೇಖಾವಿನ್ಯಾಸವು ವಿಜಯನಗರ ಶೈಲಿಯನ್ನು ಹೋಲುತ್ತವೆ. ಆದರೆ ಇಲ್ಲಿನ ಚಿತ್ರಗಳು ವಿಜಯನಗರ ಚಿತ್ರಗಳಿಗಿಂತ ಭಿನ್ನವಾಗಿ ರಚಿಸಲ್ಪಟ್ಟಿರುತ್ತವೆ.

ಚಿತ್ರ-೨೦ ಬೇಡರ ಕಣ್ಣಪ್ಪ ಹಾಗೂ ತ್ರಿಪುರ ಸಂಹಾರದ ದೃಶ್ಯ :

ಮೂರನೆಯ ಅಂಕಣದ ಮತ್ತೊಂದು ಅಡ್ಡಪಟ್ಟಿಯಲ್ಲಿ ಬೇಡರ ಕಣ್ಣಪ್ಪ ಹಾಗೂ ತ್ರಿಪುರ ಸಂಹಾರದ ದೃಶ್ಯವಿದೆ. ಈ ದೃಶ್ಯದಲ್ಲಿ ಶಿವನ ಕಣ್ಣಿನಿಂದ ಸೋರುತ್ತಿರುವ ರಕ್ತವನ್ನು ನಿಲ್ಲಿಸಲೆಂದು ತನ್ನ ಕಾಲಿನಿಂದ ಕಣ್ಣನ್ನು ಮುಚ್ಚಿ ಒಂದೇ ಕಾಲಿನ ಮೇಲೆ ನಿಂತು, ಶಿವನಿಗೆ ತನ್ನ ಕಣ್ಣನ್ನು ದಾನಮಾಡುವ ದೃಶ್ಯವಿದಾಗಿದೆ. ಈ ದೃಶ್ಯವನ್ನು ಕಲಾವಿದ ಒಂದು ಶಿವಲಿಂಗವನ್ನು ತೋರಿಸಿ ಅದಕ್ಕೆ ಎರಡು ಕಣ್ಣುಗಳು, ಮೂಗು, ಬಾಯಿ, ವಿಭೂತಿ ಹಾಗೂ ತ್ರಿನೇತ್ರವನ್ನು ತೋರಿಸಿದ್ದು,

ಹನುಮನ ಚಡ್ಡಿಯನ್ನು ಧರಿಸಿರುವ ಬೇಡರ ಕಣ್ಣಪ್ಪನ ಕೈಯಲ್ಲಿ ಬಿಲ್ಲು, ಬಾಣಗಳನ್ನು ಹಿಡಿಸಿರುವಂತಿದೆ, ಬಲಗಾಲನ್ನು ಲಿಂಗದ ಮೇಲೆ ಇರಿಸಿ ಬಲಗೈಯಿಂದ ತನ್ನ ಕಣ್ಣನ್ನು ಕಿಳುತ್ತಿರುವಂತೆ ಚಿತ್ರಿಸಿರುವನು.[೬] ಲಿಂಗವು ತಿಳಿನೀಲಿವರ್ಣದಿಂದ ಕೂಡಿದ್ದು, ಕಣ್ಣಪ್ಪನು ಕೆಂಪುವರ್ಣದವನಾಗಿದ್ದಾನೆ. ಇವನ ಪಕ್ಕದಲ್ಲಿರುವ ಇಬ್ಬರು ಮಾನವರು ನಿಂತಿರುವುದನ್ನು ಕಾಣಬಹುದು. ಚಿತ್ರದ ಹಿನ್ನೆಲೆಯಾಗಿ ಕೆಂಪು ವರ್ಣವನ್ನು ಬಳಸಲಾಗಿದೆ.

ಶ್ರೀನರಸಿಂಹಸ್ವಾಮಿ ದೇವಾಲಯ, ಸಿಬಿ :

ಪುರಾಣ ಕಥೆಗಳು, ದಂತಕಥೆಗಳು, ಭಗವದ್ಗೀತೆ, ರಾಮಾಯಣ, ನರಸಿಂಹ ಪುರಾಣದ ಕೆಲವು ಆಯ್ದ ಭಾಗಗಳು ಸಿಬಿ ದೇವಾಲಯದ ಪ್ರಮುಖ ವಸ್ತುವಿಷಯಗಳಾಗಿವೆ. ಕಲಾವಿದರು ರಾಮಾಯಯಣದಲ್ಲಿ ಮತ್ತು ಪುರಾಣ ಕಥೆಗಳಲ್ಲಿ ಬರುವ ವೀರಕಥನಗಳನ್ನು ತಮ್ಮ ಕಲೆಯಲ್ಲಿ ಅಭಿವ್ಯಕ್ತಿ ಪಡಿಸಿದ್ದಾರೆ. ಇತಿಹಾಸ ಮತ್ತು ಪ್ರಾಕೃತಿಕ ಚಿತ್ರಗಳಿಗೆ ಕಲಾವಿದರು ಹೆಚ್ಚು ಗಮನಹರಿಸದಿದ್ದರು ಹೈದರ್ ಅಲಿ, ಟಿಪ್ಪುಸುಲ್ತಾನ್, ಕೃಷ್ಣರಾಜ ಒಡೆಯರ್, ಮತ್ತು ಇಕ್ಕೇರಿಯ ಶಿವಪ್ಪ ನಾಯಕ ಮುಂತಾದ ರಾಜರುಗಳ ಕೆಲವು ಚಿತ್ರಗಳನ್ನು ನೋಡಬಹುದು.

ಇಲ್ಲಿರುವ ಚಿತ್ರಗಳನ್ನು ಒಂದೊಂದಾಗಿ ಅಧ್ಯಯನ ಮಾಡಬಹುದು. ಭಾಗಿಲಿನ ಪಟ್ಟಿಗಳ ಮೇಲಿರುವ ಪ್ರತಿಯೊಂದು ಚಿತ್ರ ಮತ್ತೊಂದು ಚಿತ್ರಕ್ಕಿಂತ ಭಿನ್ನವಾಗಿದೆ ಆದರೆ ಪ್ರತಿ ರಚನೆಯು ಪರಸ್ಪರ ಸಂಬಂಧ ಹೊಂದಿವೆ. ಈ ಮಾದರಿಯು ಕಲಾವಿದರಲ್ಲಿದ್ದ ನಿಪುಣತೆ ಮತ್ತು ಅವರಿಗೆ ಪುರಾಣ ಕಥೆಗಳ ಬಗ್ಗೆ ಇದ್ದ ಅಗಾಧ ಜ್ಞಾನಕ್ಕೆ ಹಿಡಿದ ಕನ್ನಡಿಯಾಗಿದೆ. ಇಲ್ಲಿರುವ ಚಿತ್ರಗಳಲ್ಲಿ ಕಲಾವಿದನು ತನ್ನದೇ ಸ್ವತಂತ್ರ ಆಲೋಚನೆಗಳನ್ನು ಚಿತ್ರಿಸದೆ ಕೇವಲ ಉಡುಪು, ಆಭರಣ ಮತ್ತು ಭಂಗಿಗಳನ್ನು ಮಾತ್ರ ತನ್ನ ಇಷ್ಟದಂತೆ ಚಿತ್ರಿಸಿದ್ದಾನೆ. ಈ ಎಲ್ಲಾ ಚಿತ್ರಗಳು ೧೮ನೇ ಶತಮಾನದ ಅಂತ್ಯದಲ್ಲಿ ಬಿಡಿಸಿದವುಗಳಾಗಿವೆ.

ಸಾಮಾನ್ಯವಾಗಿ ಬೃಹದಾಕಾರದ ಭಿತ್ತಿ ಚಿತ್ರಗಳನ್ನು ಈ ಕಾಲಮಾನದಲ್ಲಿ ಚಿತ್ರಿಸಲಾಗುತ್ತಿತ್ತು. ೧೬ನೇ ಶತಮಾನದ ವಿಜಯನಗರದ ಅರಸರು ಭಿತ್ತಿಚಿತ್ರಗಳನ್ನು ಬಿಡಿಸುವಾಗ ಪ್ರತಿ ಚಿತ್ರದ ಮಧ್ಯೆ ಅಂತರವಿರುವಂತೆ ಚಿತ್ರಗಳನ್ನು ಬಿಡಿಸುವ ಹೊಸ ಪ್ರಕಾರವನ್ನು ಪರಿಚಯಿಸಿದರು. ಒಂದು ಗೋಡೆಯನ್ನು ಎರಡು ಚೌಕಟ್ಟುಗಳಾಗಿ ವಿಂಗಡಿಸಿ ಅದರೊಳಗಡೆ ಚಿತ್ರ ಬಿಡಿಸುವ ಹೊಸ ವಿಧಾನವನ್ನು ಹೆಚ್ಚು ಪ್ರಚಲಿತಗೊಳಿಸಿದರು. ಹಂಪಿಯ ವಿರುಪಾಕ್ಷ ದೇವಾಲಯದಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತದಲ್ಲಿ ಬರುವ ಅನೇಕ ದೇವತೆ ಮತ್ತು ದೇವರುಗಳ ಚಿತ್ರಗಳನ್ನು ನೋಡಬಹುದು. ಈ ಎಲ್ಲ ಚಿತ್ರಗಳು ಒಂದು ದೊಡ್ಡ ಚೌಕಟ್ಟಿನಲ್ಲಿ ಫೋಟೋಗಳನ್ನು ಜೋಡಿಸಿ ಆಲ್ಬಂ ಮಾಡಿದ ರೀತಿಯಲ್ಲಿ ನಮಗೆ ಕಾಣುತ್ತವೆ. ಈ ಬಗೆಯ ಚಿತ್ರಕಲೆ ಕಲಾವಿದನಿಗೆ ಹೆಚ್ಚು ಸ್ವತಂತ್ರ ನೀಡಿರುವುದನ್ನು ದೃಡಪಡಿಸುತ್ತದೆ. ಪ್ರತಿ ಚೌಕಟ್ಟಿನಲ್ಲಿ ತನಗೆ ಬೇಕಾದ ಚಿತ್ರಗಳನ್ನು ಚಿತ್ರಿಸಿ ಅವನು ಮತ್ತೊಂದು ಚೌಕಟ್ಟಿಗೆ ವರ್ಗಾಯಿಸಿಕೊಳ್ಳುವ ವಿಧಾವ ಹೆಚ್ಚು ಪರಿಣಾಮಕಾರಿ

ಚಿತ್ರಗಳನ್ನು ಹೊರತರಲು ಸಹಾಯವಾಯಿತು. ಆದರೆ ಕೆಲವೊಮ್ಮೆ ಒಂದು ಚೌಕಟ್ಟಿನಲ್ಲಿರುವ ಚಿತ್ರಕ್ಕು ಮತ್ತೊಂದು ಚೌಕಟ್ಟಿನಲ್ಲಿರುವ ಚಿತ್ರಕ್ಕು ಸಂಬಂಧವಿಲ್ಲದಿರುವುದನ್ನು ನೋಡಬಹುದು. ವಿಜಯನಗರದ ಭಿತ್ತಿ ಚಿತ್ರಗಳು ಇದೇ ಮಾದರಿಯನ್ನು ಅನುಸರಿಸಿರುವುದನ್ನು ನಾವು ನೋಡಬಹುದು. ಶಿರಾ, ಹಿರಿಯೂರು, ಮುಡುಕುತೊರೆ ಮತ್ತು ಶ್ರವಣಬೆಳಗೊಳದಲ್ಲಿಯೂ ಸಹ ಇಂತಹದೇ ಮಾದರಿ ಚಿತ್ರಗಳನ್ನು ನೋಡಬಹುದು. ಆದರೆ ಶ್ರೀರಂಗಪಟ್ಟಣದ ದರಿಯ ದೌಲತ್‌ನಲ್ಲಿರುವ ಭಿತ್ತಿಚಿತ್ರಗಳು ಇದಕ್ಕಿಂತ ಭಿನ್ನವಾಗಿದ್ದು, ಚಿತ್ರಗಳು ಒಂದಕ್ಕೊಂದು ಪರಸ್ಪರ ಸಂಬಂಧ ಹೊಂದಿವೆ.

ಸಿಬಿ ಚಿತ್ರಕಲೆಯು ವಿಜಯನಗರ ಕಾಲದ ವರ್ಣಚಿತ್ರಕಲೆಯಿಂದ ಪ್ರಭಾವಿತಗೊಂಡಿದೆ. ಮುಖಮಂಟಪದಲ್ಲಿ ಒಟ್ಟು ೯ ಪಟ್ಟಿಗಳಿದ್ದು, ಮಹಾದ್ವಾರದ ಮೇಲೆ ಮೂರು ಮಧ್ಯ ಪಟ್ಟಿಕೆಗಳು ಮತ್ತು ನಾಲ್ಕು ಅಡ್ಡ ಪಟ್ಟಿಕೆಗಳಿವೆ. ಈ ಚಿತ್ರಗಳನ್ನು ಅಧ್ಯಯನದ ಉದ್ದೇಶದಿಂದ ಧಾರ್ಮಿಕ, ಐತಿಹಾಸಿಕ ಮತ್ತು ನೈಸರ್ಗಿಕ ಚಿತ್ರಣಗಳನ್ನಾಗಿ ವಿಂಗಡಿಸಲಾಗಿದೆ. ಮುಖಮಂಟಪದಲ್ಲಿರುವ ಎಲ್ಲಾ ೯ ಪಟ್ಟಿಕೆಗಳಲ್ಲಿ ಧಾರ್ಮಿಕ ಚಿತ್ರಗಳಿವೆ ಮತ್ತು ಮಹಾದ್ವಾರದ ಆರು ಪಟ್ಟಿಕಗಳಲ್ಲಿ ಇತಿಹಾಸ, ಶೃಂಗಾರ ಮತ್ತು ನೈಸರ್ಗಿಕ ಚಿತ್ರಗಳಿವೆ.

ಧಾರ್ಮಿಕ ಅಂಶಗಳು :

ಮಹಾಮಂಟಪದ ಒಳಮಾಳಿಗೆಯ ಆಯಾತಾಕಾರವಾಗಿದ್ದು ಸಂಪೂರ್ಣವಾಗಿ ಚಿತ್ರರಚನಾ ಅವಕಾಶವನ್ನು ಯಾವ ರೀತಿ ವಿಭಾಗಿಸಬೇಕು, ಎಲ್ಲೆಲ್ಲಿ ಯಾವ ಚಿತ್ರಗಳು ಬರಬೇಕೆಂಬುದು, ಇಷ್ಟು ವಿಶಾಲವಾದ ಚಿತ್ರಗಳ ಸಂಯೋಜನೆ, ವರ್ಣವಿನ್ಯಾಸ, ಈ ಎಲ್ಲಾ ಅಂಶಗಳು ಪೂರ್ವ ನಿಯೋಜಿತವಾಗಿವೆ ಎಂದು ಹೇಳಬಹುದು. ಇದರಿಂದ ನಿರ್ದಿಷ್ಟ ಆಕೃತಿಯಲ್ಲಿ ಮತ್ತು ಸ್ಥಳದಲ್ಲಿ ಉದ್ದೇಶಿತ ವಿಷಯದ ನಿರೂಪಣೆ ಕಂಡುಬರುತ್ತದೆ. ಪ್ರಸ್ತುತ ಚಿತ್ರಗಳನ್ನು ನಾವು ಕೊಂಚ ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಚಿತ್ರ ರಚನೆಯ ತಾಂತ್ರಿಕತೆ, ರಚನೆಯನ್ನು ಪ್ರಾರಂಭಿಸಿರುವ ವಿಧದಲ್ಲಿ ಕುರಿತು ಚಿಂತಿಸಿದರೆ ಬಹುಶಃ ಈ ಚಿತ್ರಗಳ ರಚನೆಯ ಬಗ್ಗೆ ಒಂದು ಉತ್ತಮ ಚಿತ್ರ ದೊರೆಯಲು ಸಾಧ್ಯವಾಗುತ್ತದೆ. ಇಲ್ಲಿ ಕಲಾವಿದ ನೇರವಾಗಿ ಚಿತ್ರರಚನೆ ಪ್ರಾರಂಭಿಸಿಲ್ಲ. ಸಂಯೋಜನೆಗೆ ಚಿತ್ರವಿನ್ಯಾಸದ ಚೌಕಟ್ಟನ್ನು ಹಾಕಿಕೊಂಡು ಅದರಲ್ಲಿ ಮತ್ತು ವಿಷಯ ವ್ಯಾಪ್ತಿಗೆ ಸರಿಹೊಂದುವ ರೀತಿಯಲ್ಲಿ ಆಕೃತಿಗಳನ್ನು ದುಡಿಸಿಕೊಂಡಿದ್ದಾನೆ. ಕಲಾವಿದ ಈ ಚಿತ್ರಗಳನ್ನು ಚಿತ್ರಿಸಿರುವ ರೀತಿಯನ್ನು ಗಮನಿಸಿದರೆ, ಪ್ರಾಯಶಃ ಎಂಥ ಸಾಮಾನ್ಯನಿಗಾದರೂ ಸಂಪೂರ್ಣವಾಗಿ ಚಿತ್ರದ ಮೂಲ, ರೇಖಾಚಿತ್ರ ರಚನೆಯಾದ ಮೇಲೆಯೇ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಚಿತ್ರಗಳನ್ನು ವರ್ಣಸಂಯೋಜನೆಯೊಡನೆ ಪೂರ್ತಿಗೊಳಿಸಿರಬಹುದೆಂದು ತಿಳಿಯುತ್ತದೆ.

ದೇವಾಲಯದ ಮಹಾದ್ವಾರಕ್ಕೆ ಹೊಂದಿಕೊಂಡಂತೆ ಇರುವ ಅವಕಾಶದಲ್ಲಿ ಕ್ರಮವಾಗಿ ಕೃಷ್ಣನ ಜನ್ಮ, ಆತನ ಪರಾಕ್ರಮಗಳು ಮತ್ತು ಕೃಷ್ಣ ಮತ್ತು ರುಕ್ಮಿಣಿಯ ವಿವಾಹದ ಸಂದರ್ಭಗಳನ್ನು ಚಿತ್ರಿಸಲಾಗಿದೆ. ಮಧ್ಯದ ಚೌಕದಲ್ಲಿ ಕೃಷ್ಣನ ವಿವಿಧ ಚಿತ್ರಗಳಿವೆ. ಎರಡೂ ಬದಿಯಲ್ಲಿ ಈರ್ವರು

ದ್ವಾರಪಾಲಕರನ್ನು ತೋರಿಸಿದೆ. ಈ ಮೂರು ಚಿತ್ರಗಳಿಗೆ ಮತ್ತು ಸಾಮಾನ್ಯವಾಗಿ ಕೊನೆಯ ೨-೩ ಚಿತ್ರಗಳನ್ನು ಬಿಟ್ಟು ಈ ಭಿತ್ತಿಯ ಉಳಿದ ಬಹುತೇಕ ಎಲ್ಲ ಚಿತ್ರಗಳಿಗೆ ವಾಸ್ತುಕೃತಿಯ ಅಲಂಕಾರವಿದೆ. ಚಿತ್ರದ ಮುಖ್ಯವಸ್ತವನ್ನು ಕಮಾನಿನಲ್ಲಿ ಚಿತ್ರಿಸುವುದು, ಚಿತ್ರದ ಸಂಯೋಜನಯ ಮೇಲೆ ಹಣೆಪಟ್ಟಿ ಯಂತಿರುವ ಮತ್ತೊಂದು ಚಿತ್ರ ಅವಕಾಶದಲ್ಲಿ ಗೋಪುರಗಳನ್ನು ಕಲಾವಿದ ಚಿತ್ರಿಸಿದ್ದಾನೆ. ಚಿತ್ರಗಳ ಮೇಲೆ ಇರುವ ಗೋಪುರಗಳು ಸಾಂಕೇತಿಕವಾಗಿ ಆಯಾ ಸಂಯೋಜನೆಯಲ್ಲಿ ಇರುವ ದೇವಾನುದೇವತೆಗಳಿಗೆ ದೇವಾಲಯಗಳಂತೆ ಕಾಣುತ್ತವೆ.

ವಿವರ : ಒಂದನೇ ಪಟ್ಟಿಕೆ, ಭಾಗವತ ಪುರಾಣ :

ನಂತರದ ಸಾಲಿನಲ್ಲಿ ಗಣೇಶನೇ ಚಿತ್ರಣದ ಪ್ರಮುಖ ಕಥಾವಸ್ತು. ಚಿತ್ರದ ಮಧ್ಯದಲ್ಲಿ ವಾಸುದೇವನು ದೇವಕಿಯ ಕೈಯನ್ನು ಹಿಡಿದು ನಿಂತಿದ್ದಾನೆ. ಇದು ಇವರಿಬ್ಬರ ಮದುವೆ ಚಿತ್ರಣವಾಗಿದೆ. ಈ ಚಿತ್ರಪಟ್ಟಿಕೆಯ ಪ್ರಾರಂಭದಲ್ಲಿ ಗಣೇಶನ ಆಕೃತಿಗಳ ಜೊತೆಗೆ, ಕಂಸ, ಉಗ್ರಸೇನ ನಾರದ, ವಿಷ್ಣು ಮತ್ತು ಇನ್ನಿತರರು ಇದ್ದಾರೆ. ಇಲ್ಲಿ ವಿಷ್ಣು ಮದುವೆಯ ಪುರೋಹಿತ, ಮತ್ತು ಕನ್ಯಾದಾನ ಮಾಡುತ್ತಿದ್ದಾನೆ. ಈ ಚಿತ್ರಸಂಯೋಜನೆಯ ಕೆಳಗಡೆ ಚಿಕ್ಕ ಚಿತ್ರಪಟ್ಟಿಕೆ ಇದೆ. ಇದರಲ್ಲಿ ಕಂಸನ ವಾಹನವನ್ನು ಚಿತ್ರಿಸಿದೆ. ಇಲ್ಲೂ ಕೂಡ ಕಲಾವಿದನ ಸಮಯಪ್ರಜ್ಞೆಯನ್ನು ನಾವು ಗುರುತಿಸಬಹುದು. ಕಂಸನು ಮುಖವನ್ನು ಮೇಲಕ್ಕೆತ್ತಿ ಮದುವೆಯನ್ನು ವೀಕ್ಷಿಸುತ್ತಿರುವಂತೆ ಕುಳಿತಿದ್ದಾನೆ. ಈ ವಿವಾಹ ದೃಶ್ಯವನ್ನು ಸ್ಥಳೀಯ ದೇವತೆಗಳ ವಿವಾಹಕ್ಕೆ ಹೋಲಿಸಲಾಗಿದೆ. ಇಲ್ಲೂ ಕೂಡ ಚಿತ್ರ ಸಂಯೋಜನೆಯ ಮೇಲ್ಭಾಗದಲ್ಲಿ ಗೋಪುರಗಳ ಸಾಲು ಮತ್ತು ತಾಳೆಮರಗಳನ್ನು ತೋರಿಸುವ ಚಿತ್ರಗಳಿವೆ. ವಾಸುದೇವ ಮತ್ತು ದೇವಕಿಯರ ಕಲ್ಯಾಣದ ದೃಶ್ಯದ ಕೆಳಗಡೆಯ ಸ್ತರದಲ್ಲಿ ಅಷ್ಟದಿಕ್ಪಾಲಕರನ್ನು ಚಿತ್ರಿಸಲಾಗಿದೆ. ಇವರುಗಳಲ್ಲಿ ದಿಕ್ಪಾಲಕರು ತಮ್ಮ ವಾಹನಗಳಿಂದ ಇರುವುದು ಕೂಡಾ ಕಂಡು ಬರುತ್ತದೆ.

ಅಷ್ಟ ದಿಕ್ಪಾಲಕರ ನಂತರದ ಎರಡು ಮುಖ್ಯ ಸಂಯೋಜನೆಗಳೆಂದರೆ ಕಂಸನು ನಾರದನ ತಪಸ್ಸನ್ನು ಮುರಿಯುವುದನ್ನು ಕಲಾವಿದ ಅತ್ಯಂತ ಕ್ರಿಯಾತ್ಮಕವಾಗಿ ದೃಶ್ಯ ಸಂಯೋಜನೆಯನ್ನು ದುಡಿಸಿಕೊಂಡಿದ್ದಾನೆ. ಇಲ್ಲಿ ಚಿತ್ರದ ಒಂದು ಭಾಗದಲ್ಲಿ ನಾರದ ವಿಷ್ಣುವಿನ ತಪಸ್ಸನ್ನು ಮಾಡುತ್ತಾ ಕುಳಿತಿದ್ದಾನೆ. ಇತ್ತ ಕಂಸ ರಥವನ್ನು ಏರಿ, ಕಬ್ಬಿನ ಜಲ್ಲೆಯಿಂದ ಮಾಡಿದ ಬಿಲ್ಲಿನಿಂದ ನಾರದನತ್ತ ಬಾಣ ಬಿಡುತ್ತಿದ್ದಾನೆ. ಕಾಮನ ನಿಂತ ಭಂಗಿಯಲ್ಲಿ ಮುಮ್ಮುಖವಾದ ಚಾಲನೆ ಇದೆ ಮತ್ತು ನೈಜತೆ ಇದೆ. ಕಂಸನ ಆಕೃತಿಯಲ್ಲೂ ಕೂಡ ಪ್ರೌಢತೆ ಕಣುತ್ತದೆ. ಕೃಷ್ಣನ ಭಂಗಿ ಎದುರಿನಿಂದ ನೋಡಿದಾಗ ಇರುವಂತೆ ಇದೆ. ಇಲ್ಲಿ ನಾರದನನ್ನು ಧ್ಯಾನಮಗ್ನನಾಗಿ ಇರುವಂತೆ ತೋರಿಸದೇ ಅಗಲವಾದ ಕಣ್ಣುಗಳನ್ನು ಬಿಟ್ಟು ದಿಟ್ಟಿಸಿ ನೋಡುತ್ತಿರುವಂತೆ ಕುಳಿತಿದ್ದಾನೆ. ಚಿತ್ರದ, ತೀರ ಕೆಳಸ್ತರದಲ್ಲಿ ಜಲಾವೃತವಾದ ಭಾಗವನ್ನು ವಿವಿಧ ಆಕಾರದ ನೃತ್ಯಗಾರ್ತಿಗಳನ್ನು ಚಿತ್ರಿಸಿ ಚಿತ್ರವಲ್ಲಿ ಮತ್ತಷ್ಟು ನೈಜತೆಯನ್ನು ಕಲಾವಿದ ತುಂಬಿದ್ದಾನೆ.

ಪಟ್ಟಿಕೆ-೧, ತೊಲೆ-೨ :

ವಾಸುದೇವ ನತ್ತು ದೇವಕಿಯರು ಕಾರಾಗೃಹದಲ್ಲಿರುವುದನ್ನು ಈ ದೃಶ್ಯದಲ್ಲಿ ಚಿತ್ರಿಸಿಲಾಗಿದೆ. ಕಂಸನನ್ನು ಮೂರು ಬೇರೆ ಬೇರೆ ವೃತ್ತಗಳಲ್ಲಿ ಚಿತ್ರಿಸಿದ್ದಾನೆ. ಜೀವ ಭಯದಿಂದ ಜಲರಾಶಿಯ ನಡುವೆ ಮನೆ ಮಾಡಿ ಕುಳಿತ ಪರೀಕ್ಷಿತ ಮಹಾರಾಜನಿಗೆ ಶುಕ ಮುನಿಗಳು ಕೃಷ್ಣನ ಬಾಲ್ಯ ಲೀಲೆಯ ಕಥೆಯನ್ನು ಹೇಳುವ ದೃಶ್ಯದಿಂದ ಆರಂಭವಾಗುವ ಚಿತ್ರಗಳಲ್ಲಿ ಕಂಸನ ದರ್ಬಾರು, ದೇವಕೀ ಕಲ್ಯಾಣ, ಕಂಸನಿಂದ ದೇವಕಿಯ ಹತ್ಯೆಗೆ ಯತ್ನ, ಕಾರಾಗೃಹದಲ್ಲಿ ವಸುದೇವ ದೇವಕಿಯರು, ನವಜಾತ ಶಿಶುಗಳನ್ನು ಕೊಲ್ಲುವುದು, ಶಿಶು (ಕೃಷ್ಣ)ವನ್ನು ಹೊತ್ತ ವಸುದೇವ ನಂದಗೋಕುಲದ ಕಡೆ ಸಾಗುವುದು, ಬಾಲ ಕೃಷ್ಣನ ಬಾಲ್ಯದ ತುಂಟಾಟಗಳು, ಗೋಪಿಕಾ ಸ್ತ್ರೀಯರ ವಸ್ತ್ರಾಪಹರಣ, ಕಾಳಿಂಗ ಮರ್ದನ, ಗೋವರ್ಧನ ಗಿರಿಧಾರಿ ಹೀಗೆ ಕೃಷ್ಣನ ಬಾಲ್ಯದ ಲೀಲೆಗಳನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಜತೆಗೆ ಗಣಪತಿಯನ್ನು ಭಜಿಸುತ್ತಿರುವ ಸ್ತ್ರೀಯರು, ವಿದ್ಯಾಧಿದೇವತೆ ಸರಸ್ವತಿ, ಗರುಡವಾಹನ ವಿಷ್ಣು, ಸೀತಾರಾಮರನ್ನು ಹೊತ್ತ ಹನುಮ, ದತ್ತಾತ್ರೇಯ, ಪಾರ್ವತಿ ಗಣಪತಿಯರನ್ನು ತೊಡೆಯಲ್ಲಿ ಕೂರಿಸಿಕೊಂಡಿರುವ ಶಿವ ಮತ್ತು ಗಣಗಳು ಹೀಗೆ ಹತ್ತು ಹಲವು ಕಲಾಕೃತಿಗಳು ಇದ್ದು ಬಹಳ ಅದ್ಭುತವಾಗಿ ಮೂಡಿ ಬಂದಿವೆ. ಇನ್ನು ಶಿವನನ್ನು ಅವನ ರಥ ಹಾಗೂ ಬಿಲ್ಲುಬಾಣಗಳನ್ನು, ಕಥೆಯಲ್ಲಿಬರುವ ನಿರೂಪಣೆಗೆ ತಕ್ಕಂತೆ ನೈಜವಾಗಿ ಚಿತ್ರಿಸಿದ್ದಾನೆ. ಇಲ್ಲಿ ಭೂಮಿಯೇ ರಥ, ಬ್ರಹ್ಮನೇ ಸಾರಥಿ, ಸುರ್ಯ ಚಂದ್ರರೇ ರಥದ ಗಾಲಿಗಳು, ಇಂದ್ರ, ವರುಣ ಯಮ, ಕುಬೇರರೇ ರಥಾಶ್ವಗಳು. ಆದರೆ ಇಲ್ಲಿ ಕಲಾವಿದ ಐದು ಕುದುರೆಗಳನ್ನು ಮಾತ್ರ ಚಿತ್ರಿಸಿದ್ದಾನೆ. ಇವನ ಕೈಯಲ್ಲಿರುವ ಬಿಲ್ಲು ಮಂದಾರ ಪವತ, ವಾಸುಕೀಯೇ ಬಿಲ್ಲಿನ ದಾರ, ಅಗ್ನಿ, ವಿಷ್ಣು, ವಾಯು ಇವರು ಬಾಣಗಳಾಗಿದ್ದಾರೆ. ಇದರಿಂದಲೇ ಶಿವನು ತ್ರಿಪುರಾಸುರರನ್ನು ಧ್ವಂಸ ಮಾಡುವ ಕೆಲಸ ಅತ್ಯಂತ ಸುಗಮವಾಗುತ್ತದೆ. ಈ ಸಂಯೋಜನೆಯಲ್ಲಿನ ಎಲ್ಲ ಆಕೃತಿಗಳ ಮಧ್ಯೆ ಆಂತರಿಕವಾದ ಸಂಬಂಧವಿದೆ. ಪ್ರತಿಯೊಂದು ಆಕೃತಿಗಳು ಚಾಲನೆಯಿಂದ ಕೂಡಿವೆ. ಶಿವನ ಆಕೃತಿಯ ಮತ್ತು ಮನ್ಮಥನ ಆಕೃತಿಗಳಲ್ಲಿ ನಿಂತಿರುವ ಭಂಗಿಯನ್ನು ಗಮನಿಸಿದರೆ, ಎರಡೂ ಒಂದೇ ತೆರನಾಗಿ ಇರುವುದನ್ನು ಗಮನಿಸಬಹುದು. ಅಲ್ಲದೆ, ಆಕೃತಿಗಳಲ್ಲಿ ಮುಂದೆ ಭಾಗಿದಂತಿರುವ ಚಾಲನೆ ಕೂಡಾ ಒಂದೇ ತೆರನಾಗಿ ಇದೆ. ಈ ಎಲ್ಲ ಆಕೃತಿಗಳು ಒಂದೇ ಕಲಾವಿದನಿಂದ ರಚನೆ ಆಗಿರಬಹುದೆಂದು ತೋರುತ್ತದೆ. ಮನ್ಮಥ ವಿಜಯ ಮತ್ತು ತ್ರಿಪುರ ಸಂಹಾರದ ಚಿತ್ರಸಂಯೋಜನೆಗಳ ಕೆಳಗಿನ ಪಟ್ಟಿಕೆಯಲ್ಲಿ ದಶಾವತಾರದ ಆಕೃತಿಗಳಿವೆ. ಈ ಆಕೃತಿಗಳ ಕೊನೆಯ ಭಾಗದಲ್ಲಿ ಕಾಮರತಿಯರನ್ನು ಬೇರೆಬೇರೆಯಾಗಿ ಒಂದೊಂದು ಚೌಕದಲ್ಲಿ ಚಿತ್ರಿಸಲಾಗಿದೆ.

ಇಲ್ಲಿ ಕಾಮ ಗಜಾರೂಢನಾಗಿ ಮತ್ತು ರತಿ ಅಶ್ವಾರೂಢಳಾಗಿದ್ದಳೆ. ವಿಶೇಷವೆಂದರೆ ಈ ಎರಡೂ ವಾಹನಗಳು ಮಾನವಾಕೃತಿಗಳಿಂದ ಚಿತ್ರಿತವಾಗಿವೆ. ಅಂದರೆ. ಇಲ್ಲಿ ಮಾನವಾ ಕೃತಿಗಳೇ

ಗಜದ ಮತ್ತು ಅಶ್ವದ ರೂಪದಲ್ಲಿ ಚಿತ್ರಿತವಾಗಿವೆ. ದಶಾವತಾರದ ಚಿತ್ರಗಳಲ್ಲಿ ವಿಷ್ಣುವಿನ ಹತ್ತು ಅವತಾರದ ಚಿತ್ರಗಳು ವೈವಿಧ್ಯಮಯವಾಗಿ ಮತ್ತು ನೈಜವಾಗಿ ಮೂಡಿಬಂದಿವೆ. ಇಲ್ಲೂ ಕೂಡಾ ಪ್ರತಿಯೊಮದು ಆಕೃತಿಯ ಚೌಕವಾದ ದೃಶ್ಯಾವಕಾಶದಲ್ಲಿ ಚಿತ್ರಿತವಾಗಿದ್ದು ಮೇಲ್ಭಾಗದಲ್ಲಿ ಕಮಾನಿನ ಚಿತ್ರಣವೂ ಇದೆ. ದಶಾವತಾರದ ಚಿತ್ರಗಳ ನಂತರದಲ್ಲಿ ಬರುವುದು ಆಯತಾಕೃತಿಗಳಲ್ಲಿ ಚಿತ್ರಿತವಾಗಿರುವ ರಾಮಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳು ಇವು ಒಟ್ಟು ಮೂರು ಚಿತ್ರಗಳಿದ್ದು, ಇವುಗಳಲ್ಲಿ ಎರಡು ಚಿತ್ರಗಳು ಸೀತಾಸ್ವಯಂವರಕ್ಕೆ ಮತ್ತು ರಾಮಸೀತೆಯರ ಕಲ್ಯಾಣಕ್ಕೆ ಸಂಬಂಧಿಸಿದ್ದು, ಮೂರನೆಯದು ದ್ರೌಪದಿಯ ಸ್ವಯಂವರದಲ್ಲಿ ಅರ್ಜುನನು ಮತ್ಸಯಂತ್ರವನ್ನು ಭೇದಿಸುತ್ತಿರುವ ದೃಶ್ಯವಿದೆ. ಈ ಎರಡೂ ಚಿತ್ರಗಳು ಸ್ವಯಂವರಕ್ಕೆ ಸಂಬಂಧಿಸಿದವೇ ಆಗಿದ್ದು ಇದರಲ್ಲಿ ರಾಮ, ಸೀತೆಯರ ಕಲ್ಯಾಣದ ಒಂದೇ ಒಂದು ಚಿತ್ರಣವಿದೆ. ಈ ಚಿತ್ರಗಳಲ್ಲೂ ಕೂಡಾ ಮೇಲಿನ ಹಾಗೆಯೇ ಸಂಯೋಜನೆ ಇದ್ದು ಕೆಳಸ್ತರಗಳಲ್ಲಿ ಹಲವಾರು ಜನರನ್ನು ನೈಜವಾಗಿ ತೋರಿಸಲಾಗಿದೆ. ಸೀತಾ ಸ್ವಯಂವರದಲ್ಲಿ ರಾಮನು ಸಂಯೋಜನೆಯ ಮಧ್ಯದಲ್ಲಿ ನಿಂತು ಶಿವಧನಸ್ಸಿಗೆ ಹೆದೆ ಏರಿಸುವ ಭಂಗಿಯಲ್ಲಿ ಇದ್ದಾನೆ. ಸೀತೆ ಹಿಂಭಾಗದಲ್ಲಿ ರಾಮನನ್ನು ವರಿಸಲು ಸಿದ್ಧಳಾಗಿ ನಿಂದಿದ್ದಾಳೆ. ಕೆಳಸ್ತರದಲ್ಲಿ ಕೂಡ ಸ್ವಯಂವರದಲ್ಲಿ ಭಾಗವಹಿಸಲು ಬಂದ ರಾಜರುಗಳೇ ಆಗಿರಬೇಕು. ನಂತರದ ಸಂಯೋಜನೆಯ, ಸೀತಾ ರಾಮರ ಕಲ್ಯಾಣದ ಚಿತ್ರ, ಇದರ ಮಧ್ಯದಲ್ಲಿ ಸೀತಾ ರಾಮರನ್ನು ತೋರಿಸಲಾಗಿದೆ.

ಪಟ್ಟಿಕೆ–೧, ತೊಲೆ–೩ :

ಈ ಚಿತ್ರದಲ್ಲಿ ಕೃಷ್ಣ ಮತ್ತು ಬಲರಾಮನ ಕಥೆಯನ್ನು ಚಿತ್ರಿಸಲಾಗಿದೆ. ದೇವಕಿ ಪ್ರತಿ ಮಗುವನ್ನು ಹೆತ್ತಾಗಲೂ ಆ ನವಜಾತ ಶಿಶುಗಳನ್ನು ಕಂಸ ದಾರುಣವಾಗಿ ಕೊಂದು ಹಾಕುತ್ತಾನೆ. ದೇವಕಿಯ ಆರನೇ ಗರ್ಭ ಬಲರಾಮನದ್ದು. ಬಲರಾಮ ಆದಿಶೇಷನ ಅವತಾರ. ಆ ಗರ್ಭ ನಾಶವಾಗುವ ಹಾಗಿಲ್ಲ. ಹೀಗಾಗಿ ಅದನ್ನು ಕಾಪಾಡಲೇ ಬೇಕಿತ್ತು. ಈಗ ವಿಷ್ಣು ಮಾಯೆಯನ್ನು ಕರೆದು ನಿನ್ನ ಶಕ್ತಿಯನ್ನು ಉಪಯೋಗಿಸಿ ದೇವಕಿಯ ಗರ್ಭವನ್ನು ರೋಹಿಣಿಗೆ ವರ್ಗಾವಣೆ ಮಾಡು ಎಂದು ಆದೇಶಿಸುತ್ತಾನೆ. ಹೀಗೆ ದೇವಕಿಯ ಈ ಗರ್ಭವು ರೋಣಿಗೆ ವರ್ಗಾವಣೆಯಾಗುತ್ತದೆ. ರೋಹಿಣಿ ಕೆಲವು ದಿನಗಳ ಬಳಿಕ ಗಂಡು ಮಗುವನ್ನು ಹಡೆಯುತ್ತಾಳೆ. ಅವನೇ ಬಲರಾಮ. ಬಲರಾಮನು ರೋಹಿಣಿಯ ಆರೈಕೆಯಲ್ಲಿ ಬೆಳೆಯುತ್ತಾನೆ. ಶ್ರೀಕೃಷ್ಣ ದೇವಕಿಗೆ ಎಂಟನೇ ಮಗು. ಕೃಷ್ಣ ಹುಟ್ಟಿದ ಕೂಡಲೇ ವಸುದೇವನು ಶಿಶುವನ್ನು ತೆಗೆದುಕೊಂಡು ಹೋಗಿ ವ್ರಜದ ಅಧಿಪತಿಯಾದ ನಂದಗೋಪನ ಮಡದಿ ಯಶೋದೆಯ ಬಳಿ ಮಲಗಿಸಿ ಆಗ ತಾನೆ ಯಶೋದೆ ಹೆತ್ತ ಹೆಣ್ಣುಮಗುವನ್ನು ತಂದು ದೇವಕಿಯ ಮಡಿಲಲ್ಲಿರಿಸುತ್ತಾನೆ. ಇಲ್ಲಿರುವ ಕೊನೆಯ ಚಿತ್ರವೆಂದರೆ ಕುಬೇರನ ಮಕ್ಕಳಾದ ನಲಕುಬೇರ ಮತ್ತು ಮಣಿಗ್ರೀವರ ಕಥೆ. ಇವರಿಬ್ಬರು ಕಾಮುಕರು ಮತ್ತು ಮದ್ಯವ್ಯಸನಿಗಳಾದ್ದರಿಂದ ನಾರದನು ಇವರಿಬ್ಬರಿಗೆ ಮರಗಳಾಗುವಂತೆ ಶಾಪ ಹಾಕಿರುತ್ತಾನೆ. ನೂರು ವರ್ಷದ ತನಕ

ಶಾಪ ಅನುಭವಿಸಿದ ನಂತರ ವಿಷ್ಣುವಿನ ಅನುಗ್ರಹದಿಂದ ಶಾಪವಿಮುಕ್ತರಾಗುವಂತೆ ಈ ಚಿತ್ರದಲ್ಲಿ ಚಿತ್ರೀಕರಿಸಲಾಗಿದೆ.

ಪಟ್ಟಿಕೆ–೧, ತೊಲೆ–೪ :

೨೩ನೇ ಚೌಕಟ್ಟಿನಲ್ಲಿ ಕೃಷ್ಣ ಮತ್ತು ನರಕಾಸುರನ ಕಥೆಯನ್ನು ಚಿತ್ರಿಸಲಾಗಿದೆ. ಶ್ರೀ ಕೃಷ್ಣನು ನರಕಾಸುರ ವಧೆ ಮಾಡುತ್ತಿರುವ ಚಿತ್ರವನ್ನು ನೋಡಬಹುದು. ಈ ಚಿತ್ರದಲ್ಲಿ ಕೃಷ್ಣನು ನರಕಾಸುರ ಎದೆಯ ಮೇಲೆ ಕಾಲಿಟ್ಟು ವಧೆ ಮಾಡುತ್ತಿದ್ದಾನೆ. ಭೂಲೋಕದಲ್ಲಿ ಈತನು ಹದಿನಾರು ಸಾವಿರ ಯುವರಾಣಿಯರನ್ನು ಅವರ ದೇಶದಲ್ಲಿಯೇ ಗೆದ್ದು ತನ್ನ ಬಂಧನದಲ್ಲಿ ಇರಿಸಿಕೊಂಡಿದ್ದ. ಸ್ವರ್ಗದಲ್ಲಿಯೂ ಈತ ಇಂದ್ರನ ತಾಯಿಯ ಓಲೆಗಳನ್ನು ಕದ್ದನು. ಇನ್ನು ಪಾತಾಳದಲ್ಲಿ ಈತನು ವರುಣನ ಚಕ್ರಾಧಿಪತ್ಯದ ಕೊಡೆಯನ್ನು ವಶಪಡಿಸಿಕೊಂಡನು. ಜೊತೆಗೆ ಪರ್ವತಗಳ ರಾಜನನ್ನು ಬಂಧಿಸಿ ಕಾರಾಗೃಹದಲ್ಲಿಟ್ಟನು. ಇದೇ ಸಂದರ್ಭದಲ್ಲಿ ಇಂದ್ರನು ಈತನನ್ನು ಸಂಹರಿಸಿ, ಇಂದ್ರನ ತಾಯಿಯ ಓಲೆಗಳನ್ನು ಮರು ವಶಪಡಿಸಿಕೊಳ್ಳುವಂತೆ ಮತ್ತೆ ಲೋಕಕ್ಕೆ ಶಾಂತಿಯನ್ನು ನೀಡುವಂತೆ ಶ್ರೀಕೃಷ್ಣನನ್ನು ಕೇಳಿಕೊಂಡನು. ಹೀಗಾಗಿ ಶ್ರೀಕೃಷ್ಣನು ಈ ಅಸುರನನ್ನು ಸಂಹರಿಸಿದನು.

ಮತ್ತೊಂದು ಚೌಕಟ್ಟಿನಲ್ಲಿರುವ ಚಿತ್ರವೆಂದರೆ ನರಕಾಸುರನ ಸಂಹಾರದ ನಂತರ ಭೂದೇವಿಯು ಆತ ಕದ್ದಿದ್ದ ಎಲ್ಲಾ ವಸ್ತುಗಳನ್ನು ತಿರುಗಿ ನೀಡುತ್ತಿರುವುದು. ಇದರಲ್ಲಿ ಶ್ರೀ ಕೃಷ್ಣನು ನರಕಾಸುರನಿಂದ ಬಂದಿತರಾಗಿದ್ದ ೧೬,೦೦೦ ಮಹಿಳೆಯರನ್ನು ವಿಮುಕ್ತಗೊಳಿಸುತ್ತಿರುವ ದೃಶ್ಯವಿದೆ. ಪ್ರಾಚೀನ ಕಾಲದಲ್ಲಿ ಒಂದು ರಾಜ್ಯದ ಮೇಲೆ ದಾಳಿ ಮಾಡಿದ ರಾಜರು ಆ ರಾಜ್ಯದ ಮಹಿಳೆಯರನ್ನು ತಮ್ಮ ವಶಕ್ಕೆ ಪಡೆಯುತ್ತಿದ್ದರು. ಸೋತ ರಾಜರು ಮಹಿಳೆಯರನ್ನು ಪುನಃ ಪಡೆಯುವ ಸಾಹಸಕ್ಕೆ ಕೈ ಹಾಕುತ್ತಿದ್ದುದು ಕಡಿಮೆ. ಆದರೆ ಪುನಃ ರಾಜ್ಯ ರಾಜರ ಕೈವಶವಾದರು ಈ ಮಹಿಳೆಯರು ಕಳಂಕಿತರಾಗಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ತಮ್ಮನ್ನು ಪರ ಪುರುಷನೊಬ್ಬ ಮುಟ್ಟಿದ ಎಂಬ ಕೊರಗು ಅವರನ್ನು ಜೀವನ ಪರ್ಯಂತ ಕಾಡುತ್ತಿತ್ತು. ನರಕಾಸುರನ ಕಾರಾಗೃಹದಲ್ಲಿದ್ದ ಹದಿನಾರು ಸಾವಿರ ಮಹಿಳೆಯರಿಗೆ ಇದೇ ಕೊರಗು ಕಾಡುತ್ತಿತ್ತು. ಹಾಗಾಗಿ ಅವರೆಲ್ಲರು ತಮ್ಮನ್ನು ಪತ್ನಿಯರಾಗಿ ಸ್ವೀಕರಿಸು ಎಂದು ಕೃಷ್ಣನ ಮೊರೆ ಹೋಗುವ ದೃಶ್ಯವನ್ನೂ ಸಹ ಚಿತ್ರಿಸಲಾಗಿದೆ.

ಇದಾದ ನಂತರದ ಚೌಕಟ್ಟಿನಲ್ಲಿ ಬರುವ ಚಿತ್ರವೆಂದರೆ ಬ್ರಹ್ಮನು ಗೋವುಗಳನ್ನು ಮತ್ತು ಗೋಪಾಲಕರನ್ನು ಅಪಹರಿಸುವ ದೃಶ್ಯ. ಈ ಚಿತ್ರದಲ್ಲಿ ಗೋಪಾಲಕರು ವಿರಮಿಸುತ್ತಿರುವ ದೃಶ್ಯವಿದೆ. ಈ ಸಮಯದಲ್ಲಿ ಬ್ರಹ್ಮನು ಅಘಾ ಎಂಬ ಹಸುವನ್ನು ಅಪಹರಿಸುತ್ತಾಣೆ. ಇದನ್ನು ಮನಗಂಡ ಗೋಪಾಲಕರು ಹಸುವನ್ನು ಹುಡುಕಲು ಹೊರಡುತ್ತಾರೆ. ಅಪಹರಿಸಿದ ಗೋವನ್ನು ಬ್ರಹ್ಮನು ಕೃಷ್ಣ ಹೇಗೆ ಹುಡುಕುತ್ತಾನೆಂದು ಪರೀಕ್ಷಿಸಲು ಈ ರೀತಿ ಮಾಡುತ್ತಾನೆಂದು ಹೇಳಲಾಗಿದೆ. ಗೋವು ಮತ್ತು ಗೋಪಾಲಕರನ್ನು ಅಪಹರಿಸಿರುವ ವಿಷಯವನ್ನು ತಿಳಿದ ಕೃಷ್ಣ, ಒಂದು

ತಿಂಗಳಿನ ತನಕ ಗೋಪಾಲಕರ ಮನೆಯಲ್ಲಿ ವೇಷ ಮರೆಸಿಕೊಂಡು ವಾಸಿಸುತ್ತಾನೆ. ಬ್ರಹ್ಮನು ಅಪರಹಸಿರುವ ಗೋವು ಮತ್ತು ಗೋಪಾಲಕರನ್ನು ಹಿಂದಿರುಗಿಸುವ ತನಕ ತಾನು ವೇಷವನ್ನು ತ್ಯಜಿಸಲಾರೆಂದು ಕೃಷ್ಣ ನಿರ್ಧರಿಸುತ್ತಾನೆ. ಈ ಚಿತ್ರಗಳಲ್ಲಿ ಕೃಷ್ಣನು ಸಾಮಾನ್ಯ ಗೋಪಾಲಕರ ಮನೆಯಲ್ಲಿ ವಾಸಿಸುತ್ತಿರುವ ಕಥನಾವಳಿಗಳನ್ನು ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಕೃಷ್ಣನು ಮರದ ಕೆಳಗೆ ಕೊಳಲನ್ನು ಊದುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ.

ಪಟ್ಟಿಕೆ–೧, ಒಳಭಾವಣಿ :

ಕಾಳಿಂಗ ಸರ್ಪದ ವಧೆ : ಬಾಲ ಗೋಪಾಲ ಶ್ರೀಕೃಷ್ಣ ಪ್ರತಿ ನಿತ್ಯ ತನ್ನ ಅಣ್ಣನಾದ ಬಲರಾಮ ನೊಡನೆ ಹಸುಕರುಗಳನ್ನು ಮೇಯಿಸಲು ಗುಡ್ಡಕ್ಕೆ ಹೋಗುತ್ತಿದ್ದನು. ಹೀಗೆ ಒಂದೆರಡು ಬಾರಿ ದನ ಮೇಯಿಸಲು ಹೋಗಿದ್ದ ಶ್ರೀಕೃಷ್ಣನಲ್ಲಿಗೆ ಬಂದ ಕಂಸನ ಕಡೆಯವರಾದ ಬಕಾಸುರ, ವತ್ಸಾಸುರ ಮುಂತಾದ ಅಸುರರನ್ನೆಲ್ಲಾ ಸಂಹಾರ ಮಾಡಿದ. ಹೀಗೆ ಸಾಗುತ್ತಿರಲು ಯಮುನಾ ನದಿಯನ್ನು ಆಶ್ರಯಿಸಿದ್ದ ಪಶುಗಳು, ಪ್ರಾಣಿಗಳು ಇದ್ದಕ್ಕಿದ್ದಂತೆ ಒಂದಾದ ಮೇಲೆ ಒಂದು ಸಾಯುತ್ತಿದ್ದವು. ಇದಕ್ಕೆ ಕಾರಣ ಯಮುನಾ ನದಿಯಲ್ಲಿ ಸೇರಿಕೊಂಡಿದ್ದ ಕಾಳಿಂಗ ಎಂಬ ಸರ್ಪ. ಕಾಳಿಂಗ ಸರ್ಪ ಗಾಢ ಕಪ್ಪು ವರ್ಣದಲ್ಲಿದ್ದು, ೧೦೧ ಹೆಡೆಗಳ, ವಿಷಪೂರಿತವಾದ ಬೃಹದಾಕಾರದ ಸರ್ಪ. ಆ ಸರ್ಪ ಯಮುನೆಯಲ್ಲಿ ಸೇರಿ ನದಿಯನ್ನು ವಿಷಪೂರಿತವಾಗಿ ಮಾಡಿಬಿಟ್ಟಿತ್ತು. ಈ ಚಿತ್ರದಲ್ಲಿ ಕಾಳಿಂಗ ಸರ್ಪವು ಕೃಷ್ಣನನ್ನು ಕಚ್ಚುತ್ತಿರುವ ದೃಶ್ಯವಿದೆ. ನದಿಯ ದಂಡೆಯಲ್ಲಿ ಜನರು ಕಾತುರರಾಗಿ ಕೃಷ್ಣ ಮತ್ತು ಸರ್ಪವನ್ನು ನೋಡುತ್ತಿದ್ದಾರೆ.

ಕಾಳಿಂಗ ಮರ್ದನ : ನಂತರದ ಚೌಕಟ್ಟಿನಲ್ಲಿ ಕೃಷ್ಣನು ಕಾಳಿಂಗ ಸರ್ಪದ ಹೆಡೆಯ ಮೇಲೆ ನಿಂತು ನಾಟ್ಯ ಮಾಡುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ. ಇಲ್ಲಿ ಶ್ರೀಕೃಷ್ಣನು ಕಾಳಿಂಗ ಸರ್ಪದ ಹೆಡೆಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದಾನೆ. ಶ್ರೀ ಕೃಷ್ಣ ಲೀಲಾಜಾಲವಾಗಿ ಒಂದೊಂದೇ ಹೆಡೆಗಳನ್ನು ತುಳಿಯುತ್ತ ಹಾರುತ್ತ ನೆಗೆಯುತ್ತ ನಗುನಗುತ್ತ ನಿಂತಿದ್ದಾನೆ. ದೂರದಲ್ಲಿ ತನ್ನನ್ನು ಹುಡುಕಿಕೊಂಡು ತನ್ನ ಬಳಿ ಬರುತ್ತಿದ್ದ ತನ್ನ ಕುಟುಂಬದವರನ್ನು ಕಂಡು ಶ್ರೀಕೃಷ್ಣನಿಗೆ ಮತ್ತಷ್ಟು ಖುಷಿಯಾಗಿ ನರ್ತಿಸಲು ಶುರುಮಾಡಿದ. ಸುತ್ತಲೂ ರಂಗಮಂದಿರದಂತೆ ಇರುವ ಯಮುನಾ ನದಿ, ನದಿಯ ಮಧ್ಯದಲ್ಲಿ ಕಾಳಿಂಗನ ಹೆಡೆಯನ್ನೇ ರಂಗಸ್ಥಳ ಮಾಡಿಕೊಂಡು ಪರಮಾತ್ಮ ಅದ್ಭುತವಾಗಿ ನರ್ತಿಸುತ್ತಿದ್ದಾನೆ.

ಕಾಳ್ಗಿಚ್ಚು : ಈ ಚಿತ್ರದಲ್ಲಿ ಕೃಷ್ಣನು ಕಾಡಿನ ಬೆಂಕಿನ್ನು ನಂದಿಸುತ್ತಿರುವುದನ್ನು ನೋಡಬಹುದು. ಹಸುಗಳನ್ನು ಕಟ್ಟಿಹಾಕಿರುವ ಪ್ರದೇಶದ ಸುತ್ತ ಬೆಂಕಿ ಹತ್ತಿಕೊಂಡಿದೆ ಮತ್ತು ಹಸುಗಳನ್ನು ರಕ್ಷಿಸಲು ಗೋಪಾಲಕರು ಕೃಷ್ಣನನ್ನು ಸಹಾಯಕ್ಕೆ ಬರುವಂತೆ ಕೇಳಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ಕೃಷ್ಣನು ಬೆಂಕಿಯನ್ನು ನುಂಗುತ್ತಿರುವುದನ್ನು ಹೃದಯಂಗಮವಾಗಿ ಚಿತ್ರಿಸಲಾಗಿದೆ.

ಗೋಪಿಕೆಯರು ಕಾತ್ಯಾಯಿನಿಗೆ ಪೂಜೆ ಮಾಡುತ್ತಿರುವ ದೃಶ್ಯದಲ್ಲಿ ಕೃಷ್ಣನ ಸೌಂದರ್ಯಕ್ಕೆ ಮಾರುಹೋದ ಗೋಪಿಕೆಯರು ಕೃಷ್ಣನನ್ನು ಒಲಿಸಿಕೊಳ್ಳಲು ಕಾತ್ಯಾಯಿನ ಪೂಜೆ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಕಾತ್ಯಾಯಿನಿಯ ವಿಗ್ರಹಕ್ಕೆ ಗೋಪಿಕೆಯರು ಪೂಜೆ ಸಲ್ಲಿಸುತ್ತಿದ್ದಾರೆ. ವಿಗ್ರಹಕ್ಕೆ ಗಂಧವನ್ನು ಹಚ್ಚಿ ಊದಿನಕಡ್ಡಿ ಬೆಳಗುತ್ತಿದ್ದಾರೆ. ಗೋಪಿಕೆಯರು ಸುಂದರ ವರ್ಣದ ಬಟ್ಟೆ ಮತ್ತು ಆಕರ್ಷಕ ಆಭರಣ ಧರಿಸಿದ್ದಾರೆ.

ಕೃಷ್ಣನು ಗೋಪಿಕೆಯರ ಸೀರೆ ಕದಿಯುತ್ತಿರುವ ದೃಶ್ಯ : ಕೃಷ್ಣನ್ನು ಒಲಿಸಿಕೊಳ್ಳಲು ಕತ್ಯಾಯಿನಿಯ ಪೂಜೆ ಮಾಡಬೇಕೆಂದು ಗೋಪಿಕೆಯರು ನಿತ್ಯ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿರುವ ದೃಶ್ಯವಿದೆ. ಇದನ್ನು ತಿಳಿದುಕೊಂಡ ಕೃಷ್ಣ ಅವರ ಸೀರೆ ಕದಿಯುತ್ತಾನೆ. ಈ ಚಿತ್ರದಲ್ಲಿ ಗೋಪಿಕೆಯರು ನದಿಯಲ್ಲಿ ಸ್ನಾನ ಮಾಡುತ್ತಿದ್ದಾರೆ ಮತ್ತು ಮರದ ಹಿಂದೆ ಅವಿತಿರುವ ಕೃಷ್ಣ ಇವರನ್ನು ವೀಕ್ಷಿಸುತ್ತಿದ್ದಾನೆ. ಒಟ್ಟು ಹತ್ತು ಗೋಪಿಕೆಯರು ಕೃಷ್ಣನನ್ನು ಬೇಡುತ್ತಿದ್ದಾರೆ. ಇವರ ಸೀರೆಯನ್ನು ಕದ್ದಿರುವ ಕೃಷ್ಣ, ಮರದ ಮೇಲೆ ಕುಳಿತಿದ್ದಾನೆ ಮತ್ತು ಗೋಪಿಕೆಯರು ನಗ್ನರಾಗಿದ್ದಾರೆ. ಅವರು ತಮ್ಮ ಕೈಗಳಿಂದ ಮಾನ ಮುಚ್ಚಿಕೊಂಡಿದ್ದಾರೆ. ಗೋಪಿಕೆಯರು ನೀರಿನಲ್ಲಿ ನೆನೆದಿದ್ದಾರೆಂದು ತಿಳಿಸಿ ಹೇಳಲು ಕಲಾವಿದನು ನದಿಯನ್ನು ಚಿತ್ರಿಸಿದ್ದಾನೆ.

ಬ್ರಾಹ್ಮಣ ಪತ್ನಿಯರು ಕೃಷ್ಣನಿಗೆ ಊಟ ಬಡಿಸುತ್ತಿರುವ ದೃಶ್ಯ : ಒಮ್ಮೆ ಕೃಷ್ಣ ಮತ್ತುಅವನ ಸ್ನೇಹಿತರು ಧಾರ್ಮಿಕ ಆಚರಣೆ ಮಾಡುತ್ತಿರುವ ಬ್ರಾಹ್ಮಣ ಮಹಿಳೆಯರನ್ನು ಮಾತನಾಡಿಸಿ ತಮಗೆ ಹಸಿವಾಗಿದೆ, ಏನಾದರು ಆಹಾರವಿದ್ದರೆ ಉಪಚಾರ ಮಾಡಿರೆಂದು ಕೇಳಿಕೊಳ್ಳುತ್ತಾರೆ. ಪೂಜೆಯಲ್ಲಿ ನಿರತರಾದ ಬ್ರಾಹ್ಮಣ ಮಹಿಳೆಯರು ಇವರನ್ನು ಗಮನಿಸುವುದಿಲ್ಲ. ಇದರಿಂದ ಬೇಸರಗೊಂಡ ಕೃಷ್ಣ ಅಲ್ಲಿಂದ ತೆರಳುತ್ತಾನೆ. ನಂತರ ತಮ್ಮ ತಪ್ಪಿನ ಅರಿವಾಗಿ, ಮಹಿಳೆಯರು ಕೃಷ್ಣನಿಗಾಗಿ ಅಪಾರ ಪ್ರಮಾಣದ ಊಟ ಕಳುಹಿಸುತ್ತಾರೆ. ಆದರೆ ಕೃಷ್ಣನು ಇದನ್ನು ಸ್ವೀಕರಿಸುವುದುಇಲ್ಲ. ಮೋಕ್ಷ ಬೇಕೆಂದರೆ ತನ್ನ ತಪಸ್ಸು ಮಾಡುವುದಷ್ಟೇ ಉಳಿದ ಉಪಾಯವೆಂದು ಹೇಳಿ ಕಳುಹಿಸುತ್ತಾನೆ. ಈ ಪ್ರಸಂಗವನ್ನು ಈ ಚಿತ್ರದಲ್ಲಿ ಬಿಡಿಸಲಾಗಿದೆ.

ಗೋವರ್ಧನ ಪರ್ವತವನ್ನು ಎತ್ತುತ್ತಿರುವ ಚಿತ್ರ : ಬೃಂದಾವನದ ಗೋಪಾಲಕರು ಮಳೆಯ ಅಧಿಪತಿಯಾದ ಇಂದ್ರನನ್ನು ಪೂಜಿಸುತ್ತಿರುವ ಪ್ರಸಂಗವನ್ನು ಚಿತ್ರೀಕರಿಸಲಾಗಿದೆ. ಬೇಸಿಗೆ ಕಳೆದು ಮಳೆಗಾಲ ಆರಂಭವಾಗುವುದರಲ್ಲಿತ್ತು. ವಾಡಿಕೆಯಂತೆ ಗೋಕುಲದ ಜನರು, ಮಳೆಯ ರಾಜ ಇಂದ್ರನ ಪ್ರೀತ್ಯರ್ಥ ಹೋಮ ಯಜ್ಞಾದಿಗಳನ್ನು ಮಾಡತೊಡಗಿದರು. ಆಗ ಕೃಷ್ಣನೆಂದ: "ಒಳ್ಳೆಯ ಮಳೆ ಬೆಳೆಗಳಾಗಲೆಂದು ಇಂದ್ರನನ್ನು ಪೂಜಿಸುವುದರಲ್ಲಿ ಅರ್ಥವಿಲ್ಲ. ನಾವು ಕಷ್ಟಪಟ್ಟು ದುಡಿದರಲ್ಲವೇ ಒಳ್ಳೆ ಬೆಳೆ ಬರೋದು? ಇಂದ್ರನ ಬದಲಿಗೆ ನಮ್ಮ ಋಷಿಗಳನ್ನು, ನೆಲವನ್ನು, ಕಾಡನ್ನು, ಗೋವುಗಳನ್ನು, ಪರ್ವತವನ್ನು ಪೂಜಿಸಿ." ಇದನ್ನು ಕೇಳಿ ಇಂದ್ರನಿಗೆ ಮಹಾ ಕೋಪ ಬಂತು. ತಾನು ಕೃಷ್ಣನಿಗಿಂತ ಶಕ್ತಿವಂತ ಎಂಬುದನ್ನು ತೋರಿಸಬೇಕೆಂದು ಇಂದ್ರ ನಿರ್ಧಾರ

ಮಾಡಿದ. ಭೀಕರ ಮಳೆ, ಬಿರುಗಾಳಿಗಳನ್ನು ಅವನು ಸೃಷ್ಟಿಸಿದ. ಎಂದೂ ಇಲ್ಲದಂಥ ರಭಸದ ಮಳೆ ಬಿತ್ತು. ಯಮುನಾ ನದಿ ತುಂಬಿ ಹರಿಯಿತು. ಮರಗಳು ಕೊಚ್ಚಿಕೊಂಡು ಹೋದವು. ಪ್ರಳಯ ಆಗುವ ಸೂಚನೆ ಕಂಡಿತು. ಕೃಷ್ಣ ಎಲ್ಲ ಜನರನ್ನೂ ಅವರ ದನಕರುಗಳನ್ನೂ ಒಂದುಗೂಡಿಸಿದ. "ಗೋವರ್ಧನ ಪರ್ವತದ ಬಳಿಗೆ ನಡೆಯಿರಿ. ನಿಮ್ಮನ್ನು ನಾನು ಕಾಪಾಡ್ತೀನಿ" ಎಂದು ಅಭಯ ಕೊಟ್ಟ. ಎಲ್ಲರೂ ಗೋವರ್ಧನಗಿರಿಯನ್ನು ತಲುಪಿದೊಡನೆ, ಕೃಷ್ಣ ಪರ್ವತವನ್ನು ತನ್ನ ಕಿರುಬೆರಳಿನಲ್ಲಿ ಕೊಡೆಯಂತೆ ಎತ್ತಿ ಹಿಡಿದ. ಏಳು ಹಗಲು ಏಳು ರಾತ್ರಿ ಅವರು ಅಲ್ಲಿ ಉಳಿದರು. ಈಗ ಇಂದ್ರನಿಗೆ ತನಗಿಂತ ಕೃಷ್ಣನೇ ಶಕ್ತಿವಂತ ಎಂಬುದು ಅರಿವಾಯಿತು. ಅವನು ಮಳೆಯನ್ನು ನಿಲ್ಲಿಸಿ ಮತ್ತೆ ಆಕಾಶದಲ್ಲಿ ಸೂರ್ಯ ಬೆಳಗುವಂತೆ ಮಾಡಿದ ಜನರೆಲ್ಲರೂ ಸಂತೋಷಗೊಂಡರು. ಇಂದ್ರನು ತನ್ನ ವಾಹನವಾದ ಐರಾವತದ ಮೇಲೆ ಬಂದು ಕೃಷ್ಣನ ಕ್ಷಮೆ ಬೇಡಿದ. ಈ ಪ್ರಸಂಗವನ್ನು ಈ ಚಿತ್ರದಲ್ಲಿ ಬಿಡಿಸಲಾಗಿದೆ.

ಕೃಷ್ಣ ಕೊಳಲನ್ನು ಊದುತ್ತಿರುವ ದೃಶ್ಯ : ಈ ಚಿತ್ರದಲ್ಲಿ ತುಳಸಿ ಬೃಂದಾವನವಿದೆ. ನಡುವೆ ಎಡಗಾಲ ಮೇಲೆ ಬಲಗಾಲನ್ನಿಟ್ಟು ಕೊಳಲನ್ನು ಹಿಡಿದ ಮುರಳಿ, ಇಕ್ಕೆಲಗಳಲ್ಲಿ ವೇಣುಗಾನದಲ್ಲಿ ಭಾವ ಪರವಶವಾಗಿರುವ ಗೋವುಗಳು, ಎದುರಿಗೆ ಕೃಷ್ಣನ ದಿವ್ಯ ಸ್ವರೂಪವನ್ನು ಕಣ್ತುಂಬಿಸಿಕೊಳ್ಳುತ್ತಿರುವ ವೇದವ್ಯಾಸ, ಆಚಾರ್ಯ ಮಧ್ವ, ಶ್ರೀಪಾದರಾಜರು, ಕನಕ– ಪುರಂದರದಾಸರ ಚಿತ್ರಗಳಿವೆ.

ಗೋಪಿಕೆಯರ ಜೊತೆ ಕೃಷ್ಣನ ರಾಸಲೀಲೆ : ಈ ಚಿತ್ರದಲ್ಲಿ ಕೃಷ್ಣನು ಗೋಪಿಕೆಯರ ಜೊತೆ ನಿಂತಿದ್ದಾನೆ. ಬಲಭಾಗದಲ್ಲಿ ನಾಲ್ಕು ಮತ್ತು ಎಡ ಭಾಗದಲ್ಲಿ ನಾಲ್ಕು ಜನ ಗೋಪಿಕೆಯರು ಕೃಷ್ಣನ ಸೊಂಟವನ್ನು ಬಳಸಿ ನಿಂತಿದ್ದಾರೆ. ಇವರ ನಡುವಿರು ಕೃಷ್ಣನ ಮುಖದಲ್ಲಿ ಪ್ರನ್ನತೆಯ ಮುಖಭಾವವಿದೆ.

ಸುದರ್ಶನನ ಶಾಪ ವಿಮೋಚನೆ : ಕೃಷ್ಣನ ತಂದೆ ನಂದ ಒಮ್ಮೆ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಸರ್ಪವೊಂದು ಆತನನ್ನು ನುಂಗಲು ಬರುತ್ತದೆ. ಇದನ್ನು ಕಂಡ ಕೃಷ್ಣ ತನ್ನ ಕಾಳಿನಿಂದ ಸರ್ಪವನ್ನು ಮುಟ್ಟುತ್ತಾನೆ. ತಕ್ಷಣ, ಸರ್ಪ ತನ್ನ ಮೂಲ ರೂಪಕ್ಕೆ ಮರಳುತ್ತದೆ. ಅದೇ ಸುದರ್ಶನ ದೇವ. ಈ ಚೌಕಟ್ಟಿನಲ್ಲಿ ೫ ಚಿತ್ರಗಳಿವೆ. ಯಶೋಧೆ ಮತ್ತು ನಂದ ಯಮುನಾ ನದಿಯ ದಂಡೆಯಲ್ಲಿ ಪೂಜೆ ಸಲ್ಲಿಸುತ್ತಿದ್ದಾರೆ. ಇವರ ಎಡಕ್ಕೆ ಸುದರ್ಶನ ಮತ್ತು ಕೃಷ್ಣ ನಿಂತಿದ್ದಾರೆ. ಸುದರ್ಶನನ ಪಕ್ಕದಲ್ಲಿರುವ ಮಹಿಳೆ ಯಾರೆಂದು ತಿಳಿದಿಲ್ಲ.

ಅರಿಷ್ಟನ ಸಾವು : ಬೃಂದಾವನದಲ್ಲಿ ಒಮ್ಮೆ ಅರಿಷ್ಟ ಎಂಬ ರಾಕ್ಷಸ ಜನಸಾಮಾನ್ಯರಿಗೆ ತೊಂದರೆ ನೀಡುತ್ತಾನೆ. ಕೃಷ್ಣನಿಗೆ ಇವನ ಮೇಲೆ ಆಕ್ರೋಶ ಉಕ್ಕಿ ಬಂದು ಇವನ ವಧೆ ಮಾಡಲು ಮುಂದಾಗುತ್ತಾನೆ. ಈ ಚಿತ್ರದಲ್ಲಿ ಕೃಷ್ಣನು ಅರಿಷ್ಟನನ್ನು ದೊಡ್ಡ ಪರ್ವತಕ್ಕೆ ಅಪ್ಪಳಿಸುತ್ತಿರುವ ದೃಶ್ಯವಿದೆ. ಒಂದು ದೊಡ್ಡ ಎಮ್ಮೆಯ ರೂಪದಲ್ಲಿರುವ ಈ ರಾಕ್ಷಸನ ಕೋಡುಗಳನನು ಹಿಡಿದು ಕೃಷ್ಣ ಪರ್ವತಕ್ಕೆ ಅಪ್ಪಳಿಸುತ್ತಿದ್ದಾನೆ. ಈ ದೃಶ್ಯವನ್ನು ಬಲರಾಮ ನೋಡುತ್ತ ನಿಂತಿದ್ದಾನೆ.

ಕೇಶಿನ್ನ ವಧೆ : ಇಲ್ಲಿ ಮತ್ತೊಬ್ಬ ರಾಕ್ಷಸನಾದ ಕೇಶಿನ್ನ ವಧೆ ಮಾಡುತ್ತಿರುವ ಚಿತ್ರವಿದೆ. ಈ ರಾಕ್ಷಸನ್ನು ಕಂಸನು ಕಳುಹಿಸಿದ್ದನೆರಂದು ಪುರಾಣಗಳಲ್ಲಿ ಹೇಳಲಾಗಿದೆ. ಕುದುರೆಯ ರೂಪದಲ್ಲಿ ಬಂದ ಈ ರಾಕ್ಷಸನ್ನು ಕೃಷ್ಣ ಕಾಲು ಹಿಡಿದು ಗಾಳಿಯಲ್ಲಿ ತಿರುಗಿಸುತ್ತಿದ್ದಾನೆ. ಈ ಚಿತ್ರದಲ್ಲಿ ೫ ಜನ ಗೋಪಾಲಕರು ಕೃಷ್ಣ ಮತ್ತು ಈ ರಾಕ್ಷಸನ ನಡುವಿನ ಕಾಳಗವನ್ನು ವೀಕ್ಷಿಸುತ್ತಿದ್ದಾರೆ.

ಗೋಕುಲಕ್ಕೆ ಅಕ್ರೂರನ ಆಗಮನ : ಈ ಚಿತ್ರದಲ್ಲಿ ಸೋದರಮಾವ ಕಂಸನ ಊರಾದ ಮಥುರೆಯಲ್ಲಿ ನಡೆಯುವ ಸಂಭ್ರಮದ ಬಿಲ್ಲುಹಬ್ಬಕ್ಕೆ ಕೃಷ್ಣನನ್ನು ಆಹ್ವಾನಿಸಲು ಅಕ್ರೂರ ಹೊರಟಿದ್ದಾನೆ. ಮನಸ್ಸಿನಲ್ಲಿ ಗೋಕುಲದ ಗೊಲ್ಲನನ್ನು ಒಪ್ಪಿಸಿ ಕರೆತರುವೆನೆಂಬ ತುಂಬು ವಿಶ್ವಾಸ ನೆಲೆಸಿದೆ. ರಥವಿನ್ನೂ ಗೋಕುಲವನ್ನು ಮುಟ್ಟಿಯೇ ಇಲ್ಲ, ಆಗಲೇ ಅಕ್ರೂರನ ಮನೋರಥ ಗೋಕುಲವನ್ನು ತಲುಪಿಬಿಟ್ಟಿದೆ. . ಈ ಅವಧಿಯಲ್ಲಿ ಅಕ್ರೂರನಿಗೆ ಪ್ರಯಾಣದ ಆಯಾಸ ಬಾಧಿಸಿದಂತೆ ಕಾಣದು. ನಗೆಮೊಗದ ಗೋಪಾಲ ಅಕ್ರೂರನ ಚಿತ್ತಭಿತ್ತಿಯ ಮೇಲೆ ಸುಳಿದು ಅವನ ಉಲ್ಲಾಸವನ್ನು ಹೆಚ್ಚಿಸುತ್ತಿದ್ದಾನೆ. ತನ್ನ ಪಾಲಿಗೆ ಕೃಷ್ಣ ದರ್ಶನದ ಶುಭೋದಯವನ್ನು ಸಾರುತ್ತಿದೆಯೆಂಬ ಧನ್ಯತೆಯ ಭಾವ ಅವನಲ್ಲಿದೆ. ಅಕ್ರೂರ ಕನಸು ಕಾಣಲು ಪ್ರಾರಂಭಿಸಿದ್ದಾನೆ. ಅದು ಹಿತವಾದ ಹಗಲು ಕನಸು. ಚೆನ್ನ ಚೆಲುವ ಕೃಷ್ಣನಿರುವ ನಂದಗೋಕುಲದಲ್ಲಿ ಅಕ್ರೂರನ ಮನಸ್ಸು ವಿಹರಿಸುತ್ತಿದೆ. ತನ್ನ ಕಲ್ಪನೆಯಲ್ಲಿ ಅಕ್ರೂರ ಗೋಕುಲ ತಲುಪಿದ್ದಾನೆ. ಗೋಕುಲದ ಬೀದಿಗಳಲ್ಲಿ ಕಾಣಸಿಗುವ ಪುಟ್ಟ ಪಾದದ ಗುರುತುಗಳನ್ನು ಕಂಡು ಅಕ್ರೂರ ಭಾವಪರವಶನಾಗಿದ್ದಾನೆ. ಅವು ಹರಿಯ ಹೆಜ್ಜೆಗಳೆಂದು ಗುರುತಿಸಿದ್ದಾನೆ. ತೇರಿನಿಂದಿಳಿದು, ಆ ಪಾದಧೂಳಿನಲ್ಲಿ ಹೊರಳಾಡಿ ಪುನೀತನಾಗುತ್ತಾನೆ.

ಕೃಷ್ಣ ಮಥುರಗೆ ತೆರಳುವ ಚಿತ್ರ : ಈ ಚಿತ್ರದಲ್ಲಿ ಕೃಷ್ಣನು ಬಲರಾಮನ ಜೊತೆ ಮಥುರೆಗೆ ತೆರಳುತ್ತಿರುವ ದೃಶ್ಯವನ್ನು ಚಿತ್ರಿಸಿಲಾಗಿದೆ. ರಥವನ್ನು ಅಕ್ರೂರ ನೆಡೆಸುತ್ತಿದ್ದಾನೆ ಮತ್ತು ಇದನ್ನು ವೀಕ್ಷಿಸುತ್ತ ಕೆಲವು ಜನ ನಿಂತಿದ್ದಾರೆ.

ಅಕ್ರೂರನ ದೃಷ್ಟಿ : ಮಥುರೆಗೆ ತೆರಳುವ ಮಾರ್ಗದಲ್ಲಿ ರಥವು ಯಮುನಾ ನದಿಯ ಬಳಿ ನಿಂತಿದೆ. ಕೃಷ್ಣ ಮತ್ತು ಬಲರಾಮ ರಥದಲ್ಲಿಯೇ ಕುಳಿತಿದ್ದಾರೆ ಮತ್ತು ಅಕ್ರೂರ ಯಮುನಾ ನದಿಯಲ್ಲಿ ಈಜಾಡುತ್ತಿದ್ದಾನೆ. ನದಿಯಲ್ಲಿ ಮುಳುಗಿದಾಗ ಅಕ್ರೂರನಿಗೆ ಕೃಷ್ಣನ ಚಿತ್ರ ಕಾಣಿಸುತ್ತದೆ. ತಕ್ಷಣ ಮೇಲೆದ್ದು ನೋಡಿದರೆ ರಥದಲ್ಲಿ ಕೃಷ್ಣ ಮತ್ತು ಬಲರಾಮರು ಕುಳಿತಿರುವುದನ್ನು ನೋಡುತ್ತಾನೆ. ಮತ್ತೊಮ್ಮೆ ನದಿಯಲ್ಲಿ ಸ್ನಾನ ಮಾಡಲು ಮುಳುಗಿದಾಗ ಅವನು ವಾಸುದೇವನು ಸರ್ಪದ ಮೇಲೆ ಮಲಗಿರುವ ದೃಶ್ಯ ಕಾಣುತ್ತದೆ. ಈ ಚಿತ್ರದಲ್ಲಿ ರಥದ ಬಲಭಾಗದಲ್ಲಿ ಕೃಷ್ಣ ಮತ್ತು ಬಲರಾಮರು ಕುಳಿತಿರುವ ಭಂಗಿಯಲ್ಲಿದ್ದರೆ, ಅಕ್ರೂರನು ವಿಷ್ಣುವಿನ ಮೂರ್ತಿಗೆ ಕೈಮುಗಿದೆ ನಮಸ್ಕರಿಸುತ್ತಿದ್ದಾನೆ. ವಿಷ್ಣುವಿನ ನಾಲ್ಕು ಕೈಯಲ್ಲಿ ಆಯುಧಗಳಿವೆ ಮತ್ತು ಅವನು ತನ್ನ ಹಸ್ತವನ್ನು ಅಭಯರೂಪದಲ್ಲಿಟ್ಟುಕೊಂಡಿದ್ದಾನೆ.

ಮಥುರೆಗೆ ಕೃಷ್ಣನ ಆಗಮನ : ಕೃಷ್ಣನು ಮಥುರೆಗೆ ಆಗಮಿಸಿದಾಗ ಜನರಲ್ಲಿ ಅತೀವ ಸಂತೋಷವುಂಟಾಗುತ್ತದೆ. ಕೆಲವರು ಕೃಷ್ಣನ ಕಾಲಿಗೆ ಬಿದ್ದು ನಮಸ್ಕರಿಸಿದರೆ, ಕೆಲವರು ಆತನ ಪಾದಗಳಿಗೆ ನೀರು ಹಾಕಿ ಬರ ಮಾಡಿಕೊಳ್ಳುತ್ತಿದ್ದಾರೆ. ಆತನ ಮೇಲೆ, ಗಂಧ, ಹೂವು, ಮೊಗ್ಗು, ಸುಗಂದದ್ರವ್ಯ ಮುಂತಾದವುಗಳನ್ನು ಹಾಕಲಾಗುತ್ತಿದೆ. ಈ ಸಮಯದಲ್ಲಿ ಕೃಷ್ಣನ ಪಕ್ಕದಲ್ಲಿ ಒಬ್ಬ ಅಗಸ ಹಾದುಹೋಗುತ್ತಾನೆ. ಅವನ್ನು ತಡೆದ ಕೃಷ್ಣ ಬಡವರಿಗೆ ಕೆಲವು ಬಟ್ಟೆಗಳನ್ನು ದಾನವಾಗಿ ನೀಡಲು ಕೇಳಿದಾಗ, ಅಗಸನು ಕೃಷ್ಣನನ್ನು ನಿಂದಿಸುತ್ತಾನೆ. ಇದರಿಂದ ಸಿಟ್ಟಾದ ಕೃಷ್ಣ ಆತತನ್ನು ತನ್ನ ಬರಳಿನ ತುದಿಯಿಂದ ಕೊಲ್ಲುತ್ತಾನೆ. ಈ ಸನ್ನಿವೇಶವನ್ನು ಈ ಚವಕಟ್ಟಿನಲ್ಲಿ ಚಿತ್ರೀಕರಿಸಲಾಗಿದೆ. ಕೃಷ್ಣ ಮತ್ತು ಬಲರಾಮ ಅಗಸನನ್ನು ನಿಲ್ಲಿಸ ಮಾತನಾಡುತ್ತಿದ್ದಾರೆ. ಅಗಸನ ಕೈಯಲ್ಲಿ ಅಪಾರ ಪ್ರಮಾಣ ಬಟ್ಟೆ ಇದೆ. ಕೃಷ್ಣನು ಅಗಸನ ಕುತ್ತಿಗೆಯನ್ನು ಹಿಡಿದುಕೊಂಡಿದ್ದಾನೆ ಮತ್ತು ತನ್ನ ಕಾಳೆತ್ತಿ ಅವನ್ನು ಹೊಡೆಯಲು ಅಣಿಯಾಗಿದ್ದಾನೆ. ಇದನ್ನು ನೋಡಿದ ಅಗಸ ಭೀತಿಯಲ್ಲಿದ್ದಾನೆ.

ಮುದಕಿಯ ಭೇಟಿ : ಕಂಸನು ಆಯೋಜಿಸಿರುವ ಕುಸ್ತಿ ಪಂದ್ಯವನ್ನಾಡಲು ತೆರಳುತ್ತಿರುವ ಕೃಷ್ಣ ಮತ್ತು ಬಲರಾಮರು ತಮ್ಮ ದಾರಿ ಮಧ್ಯದಲ್ಲಿ ಸುಗಂಧ ದ್ರವ್ಯಗಳನ್ನು ತಲೆಯ ಮೇಲಿಟ್ಟುಕೊಂಡು ಹೋಗುತ್ತಿರುವ ಒಬ್ಬ ಮುದುಕಿಯನ್ನು ನೋಡುತ್ತಾರೆ. ಆಕೆಯನ್ನು ನಿಲ್ಲಿಸಿ ಮಾತನಾಡಿದಾಗ ಆ ಮುದುಕಿ ತನ್ನ ಹೆಸರು ತ್ರಿವಕ್ರನೆಂದು ಹೇಳುತ್ತಾಳೆ ಮತ್ತು ಅವಳು ಪುರುಷ ಸೇವಕನೆಂದು ಹೇಳುತ್ತಾಳೆ. ತನಗೆ ಕತ್ತು, ಸೊಂಟ ಮತ್ತು ಎದೆಯಲ್ಲಿ ಊನವಿದೆ ಎಂದು ಸಹ ಹೇಳುತ್ತಾಳೆ. ಈ ಚಿತ್ರದಲ್ಲಿ ಕೃಷ್ಣ ಮತ್ತು ಬಲರಾಮರು ಆ ಮುದುಕಿಯಿಂದ ಸುಗಂದ ದ್ರವ್ಯ ಖರೀದಿಸುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ.

ಸುಧಾಮನು ಕೃಷ್ಣನಿಗೆ ಮಾಲೆ ಹಾಕುತ್ತಿರುವುದು : ಈ ಚಿತ್ರದಲ್ಲಿ ಸುಧಾಮನು ಕೃಷ್ಣನಿಗೆ ಹೂಮಳೆ ಹಾಕುತ್ತಿದ್ದಾನೆ.

ಬಿಲ್ಲಿನ ಬಗ್ಗೆ ವಿಚಾರಣೆ : ಈ ಚಿತ್ರದಲ್ಲಿ ಕೃಷ್ಣ ಕೆಲವು ಜನರ ಜೊತೆ ಬಿಲ್ಲಿನ ಬಗ್ಗೆ ಕುರಿತು ಕೇಳುತ್ತಿದ್ದಾನೆ. ಕೆಲವು ದ್ವಾರಪಾಲಕರು ದ್ವಾರದ ಮುಂದೆ ಖಡ್ಗ ಹಿಡಿದು ನಿಂತಿದ್ದಾರೆ.

ಬಿಲ್ಲು ಮುರಿಯುತ್ತಿರುವ ಸನ್ನಿವೇಶ : ಕುಸ್ತಿಯ ಅಖಾಡವನ್ನು ಪ್ರವೇಶಿಸುತ್ತಿರುವ ಕೃಷ್ಣ, ತನ್ನ ಕೈಯಲ್ಲಿ ಬಿಲ್ಲು ಮತ್ತು ಬಾಣವನ್ನು ಹಿಡಿದಿದ್ದಾನೆ ಮತ್ತು ಇದನ್ನು ನೋಡುತ್ತಿರುವ ಕೆಲವರು ಆಕ್ರೋಶ ಭರಿತರಾಗಿದ್ದಾರೆ. ಕೃಷ್ಣ ಬಾಣವನ್ನು ಮುರಿಯುತ್ತಿದಂತೆಯೇ ಸುತ್ತಲಿನ ಜನ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ.

ಮಥುರಾದಲ್ಲಿ ಒಂದು ರಾತ್ರಿ : ಕುಸ್ತಿ ಪಂದ್ಯ ಮುಗಿದ ನಂತರ ಅಂದಿನ ಸಂಜೆ ಕೃಷ್ಣ ಮತ್ತು ಬಲರಾಮ ತಮ್ಮ ಸ್ನೇಹಿತರ ಮನೆಯಲ್ಲಿ ಭೋಜನ ಮಾಡುತ್ತಿರುವ ದೃಶ್ಯವನ್ನು ಬಿಡಿಸಲಾಗಿದೆ.

ಆನೆಯನ್ನು ಕೊಲ್ಲುತ್ತಿರುವುದು : ಈ ಚಿತ್ರದಲ್ಲಿ ಕೃಷ್ಣ ಮತ್ತು ಬಲರಾಮ ಕುಸ್ತಿಯ ಅಖಾಡವನ್ನು ಪ್ರವೇಶಿಸುತ್ತಿರುವ ದೃಶ್ಯವನ್ನು ಈ ಚಿತ್ರದಲ್ಲಿ ನೋಡಬಹುದು. ದ್ವಾರದಲ್ಲಿ ಬೃಹದಾಕಾರದ ಆನೆಯೊಂದು ಬಾಗಿಲಿಗೆ ಅಡ್ಡವಾಗಿ ನಿಂತಿದೆ. ಕೃಷ್ಣನು ಒಳ ಬರಲು ದಾರಿ ಬಿಡು ಎಂದು ಮಾವುತನನ್ನು ಕೇಳುತ್ತಿದ್ದಾನೆ, ಆದರೆ ದಾರಿ ಬಿಡುವ ಬದಲಾಗಿ ಕೃಷ್ಣನ ಮೇಲೆರಗುವಂತೆ ಮಾವುತನು ಆನೆಯನ್ನು ಜೋರಾಗಿ ಅಂಕುಶದಿಂದ ತಿವಿಯುತ್ತಿದ್ದಾನೆ. ಈ ಚಿತ್ರದಲ್ಲಿ ಮಾವುತನು ಆನೆಯ ಮೇಲೆ ಕುಳಿತಿದ್ದರೆ, ಕೃಷ್ಣ ಮತ್ತು ಬಲರಾಮ ಇಬ್ಬರು ಆನೆಯನ್ನು ಎದುರಿಸುತ್ತಿದ್ದಾರೆ.

ಆನೆಯನ್ನು ಕೊಲ್ಲುವ ದೃಶ್ಯದಲ್ಲಿನ ಈ ಚೌಕಟ್ಟಿನಲ್ಲಿ ಕೃಷ್ಣ ಒಂದೇ ಕೈಯಲ್ಲಿ ಆನೆಯೊಂದಿಗೆ ಸೆಣಸಾಡುತ್ತಿದ್ದಾನೆ. ಸೊಂಡಿಲನ್ನು ಹಿಡಿದು ನೆಲಕ್ಕೆ ಅಪ್ಪಳಿಸುತ್ತಿದ್ದಾನೆ.

ಕಾನುರಾನ ಸಾವು : ಕುಸ್ತಿಯ ಅಖಾಡದಲ್ಲಿ ಕೃಷ್ಣ ಕಾನುರಾ ಎಂಬ ರಾಕ್ಷಸನ ಜೊತೆ ಕುಸ್ತಿ ಆಡುತ್ತಾನೆ. ಈ ಚಿತ್ರದಲ್ಲಿ ಕಾನುರಾನು ಕೃಷ್ಣ ಕಡೆ ಧಾವಿಸುತ್ತಿದ್ದಾನೆ. ರಾಕ್ಷಸನು ಬಲಶಾಲಿಯಾಗಿದ್ದಾನೆಂದು ತಿಳಿಸಲು ಕಲಾವಿದ ರಾಕ್ಷಸನ ಚಿತ್ರವನ್ನು ದೊಡ್ಡದಾಗಿ ಚಿತ್ರಿಸಿದ್ದಾನೆ.

ಮುಷ್ಟಿಕ ರಾಕ್ಷಸನ ವಧೆ : ಈ ಚಿತ್ರದಲ್ಲಿ ಕೃಷ್ಣ ಕಾನುರಾ ರಾಕ್ಷಸನ ಜೊತೆ ಸೆಣಸಾಡುತ್ತಿದ್ದರೆ, ಬಲರಾಮ ಮುಷ್ಟಿಕ ಎಂಬ ಮತ್ತೊಬ್ಬ ರಾಕ್ಷಸನ ಜೊತೆ ಸೆಣಸಾಡುತ್ತಿದ್ದಾನೆ. ಇಬ್ಬರು ರಾಕ್ಷಸರನ್ನು ಕೊನೆಗೆ ವಧೆ ಮಾಡಲಾಗುತ್ತದೆ. ಈ ಚಿತ್ರದಲ್ಲಿ ಬಲರಾಮ ಮುಷ್ಟಿಕನ ಕಡೆ ಮುಖ ಮಾಡಿದ್ದಾನೆ, ಮತ್ತು ಇದನ್ನು ಕಂಸ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದಾನೆ. ಬಲರಾಮ ಮತ್ತು ಮುಷ್ಟಿಕ ಇಬ್ಬರು ಪರಸ್ಪರ ಒಬ್ಬರೊನ್ನೊಬ್ಬರು ಹಿಡಿದುಕೊಂಡಿದ್ದಾರೆ.

ಮಧ್ಯದ ಪಟ್ಟಿಕೆ–ಕೃಷ್ಣ ಮತ್ತು ಬಲರಾಮನ ಮದುವೆ: ದ್ವಾರಕೆಯಲ್ಲಿ ಕಕುದ್ಮಿ ಎಂಬ ರಾಜನಿಗೆ ಸುಂದರಿ ಮತ್ತು ಬುದ್ಧಿವಂತೆಯಾದ ರೇವತಿ ಎಂಬ ಮಗಳಿದ್ದಳು. ಮಗಳ ಮದುವೆ ವಯಸ್ಸು ಮೀರುತ್ತಾ ವರ್ಷಗಳೇ ಉರುಳಿದರೂ ಸರಿಯಾದ ಗಂಡು ಸಿಗಲಿಲ್ಲ. ಆಗ ಅವನಿಗೆ ಚಿಂತೆ ಆಗಿ, ಬ್ರಹ್ಮನನ್ನೇ ಕೇಳೋಣ ಅಂತ ನಿರ್ಧಾರ ಮಾಡ್ತಾನೆ. ಈ ಚಿತ್ರದಲ್ಲಿ ಕೃಷ್ಣ ಮತ್ತು ಬಲರಾಮ ವರನ ಉಡುಗೆಯಲ್ಲಿದ್ದಾರೆ. ಇಲ್ಲಿ ಮೂರು ಮದುವೆ ಚಪ್ಪರಗಳಿವೆ. ಚಪ್ಪರದ ಕೆಳಗೆ ಕೃಷ್ಣ ಮತ್ತು ಬಲರಾಮ ನಿಂತಿದ್ದಾರೆ. ಕೃಷ್ಣ ಬಲಗಡೆ ನಿಂತಿದ್ದರೆ, ಬಲರಾಮ ಬಲಗಡೆ ನಿಂತಿದ್ದಾನೆ. ಮದುವೆ ಸಂಭ್ರಮ ಚಿತ್ರದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಕೃಷ್ಣನ ಪಕ್ಕದಲ್ಲಿ ರುಕ್ಮಿಣಿ ನಿಂತಿದ್ದರೆ, ಬಲರಾಮ ಪಕ್ಕದಲ್ಲಿ ರೇವತಿ ನಿಂತುಕೊಂಡಿದ್ದಾಳೆ. ಈ ಚಿತ್ರದಲ್ಲಿ ಮದುವೆ ಸಂಭ್ರಮ, ತಳಿರು ತೋರಣ, ಸಡಗರಗಳು ಕಾಣುತ್ತಿವೆ.

ಪಟ್ಟಿಕೆ ೨–ಹೊರಾಂಗಣ ಚೌಕಟ್ಟು ಪಟ್ಟಿಕೆ ೨, ತಲೆ–೧ : ರಾಕ್ಷಸರನ್ನು ಕೊಂದ ಬಳಿಕ ಕೃಷ್ಣ ಕಂಸನ ಬಳಿ ಹೋಗುತ್ತಾನೆ. ಈ ಚಿತ್ರದಲ್ಲಿ ಕಂಸ ಕುಳಿತಿರುವ ಆಸೀನವನ್ನು ಕೃಷ್ಣ ಎಳೆದಾಡುತ್ತಿದ್ದಾನೆ

ಮತ್ತು ಅವನ ಸಂಹಾರ ಮಾಡುತ್ತಿದ್ದಾನೆ. ಮತ್ತೊಂದು ಚಿತ್ರದಲ್ಲಿ ಕೃಷ್ಣ ಕಂಸನ ರುಂಡ ಕಡಿಯುತ್ತಿರುವ ದೃಶ್ಯವಿದೆ. ಮೂರನೆಯ ಚೌಕಟ್ಟಿನಲ್ಲಿ ಉಗ್ರಸೇನನ ಪಟ್ಟಾಭಿಷೇಕ ನೆಡೆಯುತ್ತಿರುವ ದೃಶ್ಯವಿದೆ. ಹಾಗೆಯೇ ಇದರಲ್ಲಿ ದೇವಕಿ ಮತ್ತು ವಾಸುದೇವನ ಚಿತ್ರವೂ ಇದೆ.

ಕೃಷ್ಣ ಮತ್ತು ಬಲರಾಮರು ವಯಸ್ಕರಾಗುತ್ತಿದಂತೆಯೇ, ವಾಸುದೇವನು ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ಕುರಿತು ಯೋಚಿಸುತ್ತಾನೆ. ವೇದ ಉಪನಿಷತ್, ಯುದ್ದಾಬ್ಯಾಸ ಮುಂತಾದವುಗಳನ್ನು ಕಲಿಯಲು ಕೃಷ್ಣ ಮತ್ತು ಬಲರಾಮನನ್ನು ಸಂಧೀಪನಿ ಎಂಬ ಆಶ್ರಮಕ್ಕೆ ಕಳುಹಿಸುತ್ತಾನೆ. ಆಶ್ರಮದಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಕೃಷ್ಣ ಮತ್ತು ಬಲರಾಮರು ತಮ್ಮ ಗುರುಗಳಿಗೆ ಏನು ದಕ್ಷಿಣೆ ಕೊಡಬೇಕೆಮದು ಕೇಳುತ್ತಾರೆ. ಇದಕ್ಕೆ ಪ್ರತಿಯಾಗಿ ಗುರುಗಳು ತಮ್ಮ ಸತ್ತುಹೋದ ಮಗನನ್ನು ಮತ್ತೊಮ್ಮೆ ಜನ್ಮ ತಾಳುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಈ ಚಿತ್ರದಲ್ಲಿ ಸಂಧೀಪನಿ ಗುರುಗಳು ಸಮುದ್ರದ ಬಳಿ ನಿಂತಿದ್ದಾರೆ. ಸಮುದ್ರದಲ್ಲಿ ಒಬ್ಬ ರಾಕ್ಷಸ ಸಂಧೀಪನಿ ಋಷಿಯ ಮಗನನ್ನು ಸಾಯಿಸುತ್ತಿರುವ ದೃಶ್ಯವಿದೆ. ಗುರುಗಳ ಮಗ ತನ್ನನ್ನು ರಕ್ಷಿಸುವಂತೆ ಮೊರೆಯಿಡುತ್ತಿದ್ದಾನೆ. ಸಮುದ್ರದಲ್ಲಿ ಇನ್ನು ಹಲವಾರು ಮಕ್ಕಳು ಸತ್ತಿರುವ ಶವಗಳನ್ನು ಚಿತ್ರೀಕರಿಸಲಾಗಿದೆ. ಇದರ ಅರ್ಥ ರಾಕ್ಷಸನು ಹಲವಾರು ಮಕ್ಕಳನ್ನು ಕೊಂದಿದ್ದಾನೆ. ಪುರಾಣದ ಪ್ರಕಾರ ಕೃಷ್ಣ ಯಮಲೋಕಕ್ಕೆ ಹೋಗಿ ಸಂದೀಪನಿಯ ಮಗನನ್ನು ಮತ್ತೊಮ್ಮೆ ಭೂಲೋಕಕ್ಕೆ ಕರೆದುಕೊಂಡು ಬರುತ್ತಿದ್ದಾನೆ.

ಒಪಟ್ಟಿಕೆ–೨, ತೊಲೆ–೨ : ಈ ಚಿತ್ರದಲ್ಲಿ ಕಂಸನ ವಧೆ ಮಾಡಿರುವುದನ್ನು ತಿಳಿಸಲು ಜರಾಸಂಧನ ಪುತ್ರಿಯರು ಅರಮನೆಗೆ ಧಾವಿಸುತ್ತಿದ್ದಾರೆ. ವಿಷಯವನ್ನು ಕೇಳಿದ ಜರಾಸಂಧ ಕುಪಿತನಾಗಿದ್ದಾನೆ. ಯದು ಕುಲವನ್ನು ನಾಶ ಮಾಡಬೇಕೆಂದು ನಿರ್ಧರಿಸುತ್ತಾನೆ. ಹೀಗಾಗಿ ಯದು ಮತ್ತು ಮಗಧ ಎಂಬ ಎರಡು ಸೈನ್ಯಗಳು ಸತತವಾಗಿ ೧೭ ಬಾರಿ ಯುದ್ಧ ಮಾಡುತ್ತಾರೆ. ೧೮ನೇ ಬಾರಿ ಯುದ್ಧ ಮಾಡುವುದಕ್ಕೂ ಮುನ್ನ ನಾರದ ಮುನಿ ಜರಾಸಂಧನ್ನು ಕೊಲ್ಲುವಂತೆ ಕಾಳಯವನ ಎಂಬ ಪರಾಕ್ರಮಿಯನ್ನು ಕಳುಹಿಸುತ್ತಾನೆ. ಜರಾಸಂಧ ಇವನು ಮಗಧ ದೇಶದ ಅರಸ. ದೊಡ್ಡ ಶಿವಭಕ್ತ. ಇವನ ತಂದೆ ಬೃಹದ್ರಥ. ಯಾದವರೊಂದಿಗೆ ಶತ್ರುತ್ವ ಇದ್ದುದರಿಂದ ಕೃಷ್ಣನು ಭೀಮಸೇನನ ಮೂಲಕ ಇವನ ಸಂಹಾರ ಮಾಡುತ್ತಾನೆ. ಜರಾಸಂಧ ಒಂದು ದೊಡ್ಡ ನಗಾರಿಯನ್ನು ಮಾಡಿಸಿ ತನ್ನ ರಾಜಧಾನಿಯ ಹೆಬ್ಬಾಗಿಲಿನಲ್ಲಿ ತೂಗುಹಾಕಿದ್ದ. ಆ ನಗಾರಿಯನ್ನು ಬಡಿದರೆ ಅದರಿಂದ ಹೊರಡುವ ಶಬ್ಧ ಶತೃಗಳ ಎದೆಯಲ್ಲಿ ಬಹುದೊಡ್ಡ ಕಂಪನವನ್ನುಂಟು ಮಾಡುತ್ತಿತ್ತು. ಆ ನಗಾರಿಯ ಶಬ್ಧಕ್ಕೆ ಶತೃಗಳು ಹೃದಯ ಒಡೆದು ಸತ್ತು ಹೋಗುತ್ತಿದ್ದರು.

ಆ ನಗಾರಿಯನ್ನು ಯಾರು ಒಡೆದು ಹಾಕುತ್ತಾರೋ ಅವರಿಂದ ಜರಾಸಂಧನ ಮರಣ ಎಂಬ ಒಂದು ನಂಬಿಕೆಯಿತ್ತು. ಯುಧಿಷ್ಠಿರನು ಇಂದ್ರಪ್ರಸ್ಥದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅವನಿಗೆ ರಾಜಸೂಯ ಯಾಗ ಮಾಡಬೇಕೆನಿಸಿತು. ಅದನ್ನು ಮಾಡಬೇಕೆಂದರೆ ಭೂ ಮಂಡಲದ

ರಾಜರೆಲ್ಲರೂ ಯುಧಿಷ್ಠನಿಗೆ ಸಾಮಂತರಾಗಬೇಕು. ಸ್ನೇಹದಿಂದ ಕೆಲವರು, ಭಕ್ತಿ ಗೌರವಗಳಿಂದ ಕೆಲವರು, ಭಯದಿಂದ ಕೆಲವರು ಪಾಂಡವರ ಸಾಮಂತರಾದರು. ಕೆಲವು ಬಲಿಷ್ಠ ರಾಜರನ್ನು ಯುದ್ಧ ಮಾಡಿಯೇ ಮಣಿಸಬೇಕಾಯ್ತು. ಈ ಪೈಕಿ ಜರಾಸಂಧನೂ ಪಾಂಡವರ ಪಟ್ಟಿಯಲ್ಲಿದ್ದ. ಒಂದು ದಿನ ಶ್ರೀಕೃಷ್ಣ, ಭೀಮಾರ್ಜುನರನ್ನು ಕರೆದು ಕೊಂಡು ಮಗಧಕ್ಕೆ ಬಂದ. ಅರ್ಧರಾತ್ರಿಯಲ್ಲಿ ನಗರ ಪ್ರವೇಶ ಮಾಡಿದ ಈ ಮೂವರೂ ಸೇರಿ ರಾಜಧಾನಿಯ ಹೆಬ್ಬಾಗಿಲಿನಲ್ಲಿದ್ದ ಆ ಬೃಹತ್ ಗಾತ್ರದ ನಗಾರಿಯನ್ನು ಒಡೆದುಹಾಕಿದರು. ಗಸ್ತಿನ ಸೈನಿಕರು ಇದನ್ನು ನೋಡಿ ದಿಗಿಲುಗೊಂಡರು. ರಾಜ್ಯಕ್ಕೆ ಯಾವುದೋ ಆಪತ್ತು ಬಂತೆಂದು ಮನಗಂಡರು. ಜರಾಸಂಧನಿಗೆ ಈ ವಿಷಯ ಮುಟ್ಟಿಸಿದರು. ಜರಾಸಂಧ ಕೂಡಲೇ ಕೃಷ್ಣಾರ್ಜುನ ಭೀಮರನ್ನು ತನ್ನ ಬಳಿಗೆ ಕರೆಸಿದ. ಮೂವರೂ ಮಾರುವೇಷದದಲ್ಲಿದ್ದರು. ಮೂವರನ್ನು ಕುರಿತು ನೀವ್ಯಾರು, ಇಲ್ಲೀಗೆಕೆ ಬಂದಿರಿ, ನಿಮಗೇನು ಬೇಕು ಎಂದು ಕೇಳಿದ. ಶ್ರೀಕೃಷ್ಣನು ನಾವು ಯಾರಾದರೇನು ನಿನ್ನೊಡನೆ ಯುದ್ಧ ಮಾಡಲು ಬಂದಿದ್ದೇವೆ, ಅನಗತ್ಯ ರಕ್ತಪಾತ ನಮಗಿಷ್ಟವಿಲ್ಲ ಆದ್ದರಿಂದ ನೀನು ನಮ್ಮಲ್ಲಿ ಯಾರಾದರೂ ಒಬ್ಬರನ್ನು ಆಯ್ದುಕೊಂಡು ಮಲ್ಲಯುದ್ಧ ಮಾಡಬಹುದು ಎಂದು ಹೇಳಿದ. ಇದಕ್ಕೆ ಒಪ್ಪಿದ ಜರಾಸಂಧ ಕೃಷ್ಣನನ್ನು ನೋಡಿ ನೀನು ಪೀಚು ನನಗೆ ಸಾಟಿಯಾಗುವುದಿಲ್ಲ, ಅರ್ಜುನನನ್ನು ಕುರಿತು ಇವನಿನ್ನೂ ಶಿಶುವಿನ ಹಾಗಿದ್ದಾನೆ ಇವನೂ ನನಗೆ ಸಾಟಿಯಾಗಲಾರ, ಎನ್ನುತ್ತ ಭೀಮನ ಬಳಿಬಂದು ಅವನ ದಷ್ಟಪುಷ್ಟವಾದ ಮಾಂಸಲ ಶರೀರವನ್ನು ನೋಡುತ್ತಾ ಇವನೇನೋ ಗೂಳಿಯ ಹಾಗಿದ್ದಾನೆ ನನಗೆ ಇವನೇ ಸರಿ ಇವನೊಂದಿಗೆ ಮಲ್ಲಯುದ್ಧ ಮಾಡುತ್ತೇನೆ ಎಂದ. ಸರಿ ಯುದ್ಧ ಪ್ರಾರಂಭವಾಯಿತು. ಅನೇಕ ದಿನಗಳವರೆಗೂ ಇಬ್ಬರೂ ದಣಿವಿಲ್ಲದೆ ಯುದ್ಧ ಮಾಡಿದರು. ಆದರೆ ಯುವಕನಾದ ಭೀಮನ ಮುಂದೆ ಮುದುಕನಾದ ಜರಾಸಂಧ ಸೋಲುತ್ತ ಬಂದ. ಒಮ್ಮೆ ಭೀಮ ಜರಾಸಂಧನನ್ನು ಮೇಲೆತ್ತಿ ಗಿರಗಿರನೆ ತಿರುಗಿಸಿ ನೆಲಕ್ಕೆ ಒಗೆದು ಅವನ ದೇಹವನ್ನು ಎರಡಾಗಿ ಸೀಳಿ ಬೀಸಾಡಿದ. ಆದರೆ ಆಶ್ಚರ್ಯವೆಂಬಂತೆ ಎರಡೂ ದೇಹವೂ ಒಂದಾಗಿ ಜರಾಸಂಧ ಮತ್ತೆ ಬದುಕಿದ.

ಈ ರೀತಿ ಹಲವಾರು ಬಾರಿ ನಡೆಯಿತು. ಜರಾಂಧನನ್ನು ವಧಿಸುವ ಉಪಾಯ ಕಾಣದೆ ಭೀಮ ಕಕ್ಕಾಬಿಕ್ಕಿಯಾದ. ಎರಡಾಗಿ ಸೀಳಿದಷ್ಟೂ ಅವನು ಮತ್ತೆ ಹುಟ್ಟಿಬರುತ್ತಿದ್ದ. ಕೃಷ್ಣನಿಗೆ ಜರಾಂಸಂಧನ ಹುಟ್ಟಿನ ಹಿನ್ನೆಲೆ ಗೊತ್ತಿತ್ತು. ತಕ್ಷಣ ಚುರುಕಾಗಿ ತಲೆ ಓಡಿಸಿದ ಕೃಷ್ಣ ಒಂದು ಹಂಚಿಕಡ್ಡಿಯನ್ನು ಎರಡಾಗಿ ಸೀಳಿ ಅದನ್ನು ಉಲ್ಟಾ ಮಾಡಿ ಬಿಸಾಡಿದ. ಇದನ್ನು ಕಂಡ ಭೀಮನಿಗೆ ಅರ್ಥವಾಯಿತು. ಅವನು ಈಗ ಜರಾಸಂಧನನ್ನು ಎರಡಾಗಿ ಸೀಳಿ ಎರಡು ಭಾಗವನ್ನೂ ತಲೆಯನ್ನು ಕಾಲಿಗೆ ಕಾಲನ್ನು ತಲೆಗೆ ಜೋಡಿಸಿ ಬಿಸಾಡಿದ. ಜರಾಸಂಧ ಸತ್ತುಬಿದ್ದ. ಅವನ ಶರೀರ ಬೃಹದಾಕಾರದ ಪರ್ವತದಂತೆ ಭೂಮಿಯಲ್ಲಿ ಬಿತ್ತು. ಜರಾಸಂಧ ಸೆರೆಯಲ್ಲಿಟ್ಟಿದ್ದ ರಾಜರನ್ನೆಲ್ಲಾ ಕೃಷ್ಣಾರ್ಜುನಭೀಮರು ಬಿಡಿಸಿದರು. ಯುಧಿಷ್ಠಿರನ ಸಾರ್ವಭೌಮತ್ವವನ್ನು ಅವರೆಲ್ಲರೂ

ಒಪ್ಪಿಕೊಂಡರು. ರಾಜಸೂಯಾಗಕ್ಕೆ ಬಂದು ಸಹಕರಿಸುವುದಾಗಿ ವಚನವಿತ್ತರು. ಲೋಕಕ್ಕೆ ಜರಾಸಂಧನ ಕಂಟಕ ನಿವಾರಣೆಯಾಯಿತು.

ಮತ್ತೊಂದು ಚಿತ್ರದಲ್ಲಿ ಜರಾಸಂಧನೊಂದಿಗೆ ಕೃಷ್ಣನಿಗೆ ಅನೇಕ ಸಲ ಯುದ್ಧವಾಗುವ ದೃಶ್ಯಗಳಿವೆ. ಜರಾಸಂಧನ ಬಾಧೆ ತಾಳಲಾರದೆ ಕೃಷ್ಣ ದ್ವಾರಕೆಗೆ ಬಂದು ಅಲ್ಲಿ ಸಮುದ್ರದ ಮೇಲೆ ಒಂದು ನಗರವನ್ನು ನಿರ್ಮಿಸಿ ಅಲ್ಲಿ ರಾಜ್ಯವಾಳುತ್ತಾನೆ. ಈ ಸನ್ನಿವೇಶವನ್ನಿ ಇಲ್ಲಿ ಚಿತ್ರಿಸಲಾಗಿದೆ. ಮತ್ತೊಂದು ಚಿತ್ರದಲ್ಲಿ ರಾಜನ ತಂಗಿ ರುಕ್ಮಿಣಿಯನ್ನು ಮದುವೆಯಾಗಲು ಶ್ರೀಕೃಷ್ಣ ಬಯಸುವ ದೃಶ್ಯವಿದೆ. ರುಕ್ಮನಿಗೆ ಶ್ರೀಕೃಷ್ಣನನ್ನು ಕಂಡರೆ ದ್ವೇಷ. ಹೀಗಾಗಿ ರುಕ್ಮಿಣಿಯನ್ನು ಅಪಹರಿಸಿಕೊಂಡು ಬಂದು ಕೃಷ್ಣ ಮದುವೆಯಾಗುತ್ತಾನೆ. ಮುಂದೆ ಜಾಂಬವತಿ ಮತ್ತು ಸತ್ಯಭಾಮೆ ಎಂಬ ಕನ್ಯೆಯರನ್ನೂ ಕೃಷ್ಣ ವಿವಾಹವಾಗುತ್ತಾನೆ.

ಪಟ್ಟಿಕೆ–೨, ತೊಲೆ–೩ : ಈ ಚಿತ್ರದಲ್ಲಿ ಕೃಷ್ಣ ಮತ್ತು ರುಕ್ಮಿಣಿಯ ಕುರಿತಾದ ಉಲ್ಲೇಖವಿದೆ. ವಿಧರ್ಭದ ರಾಜ ಭೀಷ್ಮಕನಿಗೆ ಐದು ಜನ ಗಂಡು ಮಕ್ಕಳು ಮತ್ತು ರುಕ್ಮಿಣಿ ಎಂಬ ಮಗಳಿದ್ದಳು. ಅವಳು ಬಹು ಸುಂದರಳು ಮತ್ತು ಪರಿಶುದ್ಧಳಾಗಿದ್ದಳು. ಅವಳನ್ನು ಶ್ರೀಕೃಷ್ಣನಿಗೆ ಕೊಟ್ಟು ಮದುವೆ ಮಾಡಲು ನಿಶ್ಚಯವಾಗಿತ್ತು. ಆದರೆ ಇತರರೆಲ್ಲರ ಅಪೇಕ್ಷೆಯನ್ನು ಅಲಕ್ಷಿಸಿ ಅವಳ ಅಣ್ಣ ರುಕ್ಮಿಯು, ಶ್ರೀಕೃಷ್ಣನ ಕಡು ವೈರಿಯಾದ ಶಿಶುಪಾಲನೊಂದಿಗೆ ಅವಳ ಮದುವೆಯನ್ನು ನಿಶ್ಚಯಿಸಿದನು. ಇದನ್ನು ತಿಳಿದ ರುಕ್ಮಿಣಿ ಸಾಕಷ್ಟು ಯೋಚನೆ ಮಾಡಿ ಯೋಗ್ಯ ಬ್ರಾಹ್ಮಣನೊಂದಿಗೆ ಶ್ರೀಕೃಷ್ಣನಿಗೆ ಸಂದೇಶವನ್ನು ಕಳುಹಿಸಿದಳು. ಆ ಬ್ರಾಹ್ಮಣನು ದ್ವಾರಕೆಯನ್ನು ತಲುಪಿ ಶ್ರೀಕೃಷ್ಣನಿಗೆ ರುಕ್ಮಿಣಿಯ ಸಂದೇಶವನ್ನು ತಲುಪಿಸಿದನು. ರುಕ್ಮಿಣಿಯ ಇಚ್ಚೆಯನ್ನು ಅರಿತ ಶ್ರೀಕೃಷ್ಣನು ಅವಳ ಸೂಚನೆಯಂತೆ ನಡೆಯಲು ವಿದರ್ಭ ರಾಜ್ಯಕ್ಕೆ ಆ ಬ್ರಾಹ್ಮಣನ ಸಹಿತ ಹೊರಟನು. ಶ್ರೀಕೃಷ್ಣನು ವಿದರ್ಭ ರಾಜ್ಯಕ್ಕೆ ಒಬ್ಬನೇ ಹೋದನೆಂದು ತಿಳಿದ ಬಲರಾಮನು ಸೈನ್ಯದೊಡನೆ ಅವನನ್ನು ಹಿಂಬಾಲಿಸಿದನು. ಶ್ರೀಕೃಷ್ಣ ಮತ್ತು ಬಲರಾಮರು ಬಂದಿರುವರೆಂದು ಭೀಷ್ಮಕ ರಾಜನಿಗೆ ತಿಳಿದಾಗ ತನ್ನ ಮಗಳ ವಿವಾಹ ಮಹೋತ್ಸವವನ್ನು ನೋಡುವಂತೆ ಅವರನ್ನು ಆಹ್ವಾನಿಸಿದನು. ಬಹು ಸೊಗಸಾಗಿ ಉಡುಪು ಧರಿಸಿ ಅಂಗರಕ್ಷಕರಿಂದ ರಕ್ಷಿತಳಾದ ರುಕ್ಮಿಣಿಯು, ದುರ್ಗಾದೇವಿಯ ಪೂಜೆಯನ್ನು ಮುಗಿಸಿಕೊಂಡು ಹೊರಬರುತ್ತಿದ್ದಾಗ ಶ್ರೀಕೃಷ್ಣನು ಎಲ್ಲಾ ರಾಜರುಗಳ ಸಮಕ್ಷಮದಲ್ಲಿ ರುಕ್ಮಿಣಿಯನ್ನು ಅಪಹರಿಸಿಕೊಂಡು ತನ್ನ ರಥದಲ್ಲಿ ಕೂಡಿಸಿಕೊಂಡು ಹೊರಟನು. ನಂತರ ಜರಾಸಂಧನ ನಾಯಕತ್ವದಲ್ಲಿ ಸೇರಿದ್ದ ರಾಜರೆಲ್ಲಾ ಶ್ರೀಕೃಷ್ಣನೊಂದಿಗೆ ಹೋರಾಡಲು ಸಿದ್ಧರಾದಾಗ ಅಲ್ಲಿಗೆ ಬಂದ ಬಲರಾಮನು ಅವರನ್ನೆಲ್ಲಾ ಸೋಲಿಸಿದನು. ನಂತರ ರುಕ್ಮಿಣಿಯ ಅಣ್ಣ ರುಕ್ಮಿಯು ಶ್ರೀಕೃಷ್ಣನನ್ನು ಹಿಂಬಾಲಿಸಿ ತನ್ನೊಡನೆ ಯುದ್ಧಮಾಡುವಂತೆ ಹೇಳಿದನು. ಆ ಯುದ್ಧದಲ್ಲಿ ಶ್ರೀಕೃಷ್ಣನು ಅವನನ್ನು ಸೋಲಿಸಿ ಕೊಲ್ಲಬೇಕೆಂದಿದ್ದಾಗ ರುಕ್ಮಿಣಿಯು ತನ್ನ ಅಣ್ಣನನ್ನು ಕೊಲ್ಲಬಾರದೆಂದು ಶ್ರೀಕೃಷ್ಣನಲ್ಲಿ ವಿನಂತಿಸಿಕೊಂಡಳು. ಆಗ ಶ್ರೀಕೃಷ್ಣನು ರುಕ್ಮಿಣಿಯನ್ನು ಕೊಲ್ಲದೆ ಅವನ ತಲೆ, ಗಡ್ಡ

ಮತ್ತು ಮೀಸೆಗಳನ್ನು ಅಲ್ಲಲ್ಲಿ ಕತ್ತರಿಸಿ ಅವಮಾನಗೊಳಿಸಿ ಅವನನ್ನು ಬಿಟ್ಟುಬಿಟ್ಟನು. ಅನಂತರ ದ್ವಾರಕೆಯಲ್ಲಿ ಶ್ರೀಕೃಷ್ಣನು ರುಕ್ಮಿಣಿಯೊಂದಿಗೆ ವೈದಿಕ ವಿವಾಹ ಪದ್ಧತಿಯಂತೆ ಮದುವೆಯಾದನು.

ಪಟ್ಟಿಕೆ-೨, ತೊಲೆ-೪ : ಇಲ್ಲಿ ಕೇವಲ ಒಂದು ಚಿತ್ರವಿದೆ. ಇಲ್ಲಿ ಕೃಷ್ಣ ಮತ್ತು ರುಕ್ಮಿಣಿ ಪರಸ್ಪರ ಕೈಹಿಡಿದು ನಿಂತಿದ್ದಾರೆ. ಇದು ಅವರಿಬ್ಬರ ಮದುವೆಯಾದ ನಂತರದ ಚಿತ್ರವಾಗಿದೆ.

ಪಟ್ಟಿ ಎ೨-ಒಳಾಂಗಣ ಚೌಕಟ್ಟು : ಈ ಪಟ್ಟಿಕೆಯಲ್ಲಿ ಒಟ್ಟು ೩೨ ಚಿಕ್ಕ ಚೌಕಟ್ಟುಗಳಿವೆ. ಇಲ್ಲಿರುವ ಚಿತ್ರಗಳಲ್ಲಿ ಕೃಷ್ಣನೇ ಕೇಂದ್ರಬಿಂದು. ಆದರೆ ಇಲ್ಲಿರುವ ಚಿತ್ರಗಳು ಭಾಗವತದಲ್ಲಿರುವ ಕಥೆಯನ್ನು ನಿರೂಪಿಸುವುದಿಲ್ಲ. ಇಲ್ಲಿ ಕೇವಲ ಕುತೂಹಲಕಾರಿ ಸನ್ನಿವೇಶಗಳು ಮಾತ್ರ ಚಿತ್ರೀಕರಿಸಲಾಗಿವೆ. ಇಲ್ಲಿರುವ ಚಿತ್ರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಪ್ರದ್ಯುಮ್ನನ ಜನನ : ವಾಸುದೇವನ ಒಂದು ಅಂಶವಾದ ಮತ್ತು ಹಿಂದೆ ಶಿವನ ಕೋಪದಿಂದ ಉರಿದು ಬೂದಿಯಾಗಿದ್ದ ಮನ್ಮಥನು ಕೃಷ್ಣನ ಮಗನಾಗಿ ರುಕ್ಮಿಣಿಯ ಗರ್ಭದಲ್ಲಿ ಜನಿಸಿದ ಎಂದು ಹೇಳುತ್ತಾರೆ. ಶಿವನ ಕೋಪದಿಂದ ಮನ್ಮಥನು ಸುಟ್ಟು ಹೋದಾಗ ಅವನು ವಾಸುದೇವನ ದೇಹದಲ್ಲಿ ಲೀನನಾದನು. ತನ್ನ ದೇಹವನ್ನು ಮತ್ತೆ ಪಡೆಯಲು ಅವನು ಕೃಷ್ಣನ ಮಗನಾಗಿ ಹುಟ್ಟಿದನು. ಶಂಬಾರಾಸುರನೆಂಬ ರಾಕ್ಷಸನು ಪ್ರದ್ಯುಮ್ನನ ಕೈಯಲ್ಲಿ ಸಾಯುವುದು ವಿಧಿನಿಯಮವಾಗಿತ್ತು. ಇದು ಆ ರಾಕ್ಷಸನಿಗೆ ತಿಳಿದಿತ್ತು. ಪ್ರದ್ಯುಮ್ನನ ಜನನವಾಯಿತೆಂದು ಈ ಚಿತ್ರದಲ್ಲಿ ಹೇಳಲಾಗಿದೆ.

ಪ್ರದ್ಯುಮ್ನನ ವಿಪತ್ತು : ಪ್ರದ್ಯುಮ್ನನ ಜನನವಾಯಿತೆಂದು ತಿಳಿಯುತ್ತಲೇ ಅವನು ಒಬ್ಬ ಸ್ತ್ರೀಯ ರೂಪವನ್ನು ತಾಳಿ ಮಗುವು ಹುಟ್ಟಿದ ಹತ್ತು ದಿನಗಳಲ್ಲಿ ಅವನನ್ನು ಪ್ರಸೂತಿ ಗೃಹದಿಂದ ಅಪಹರಿಸಿ ಮಗುವನ್ನು ಸಮುದ್ರದಲ್ಲಿ ಎಸೆದನು. ಮಗುವನ್ನು ಒಂದು ದೊಡ್ಡ ಮೀನು ನುಂಗಿತು. ಆ ಮೀನನ್ನು ಹಿಡಿದ ಬೆಸ್ತದವನು ಅದನ್ನು ಶಂಬರಾಸುರನಿಗೆ ಮಾರಿದನು. ಅಡುಗೆಯವನು ಮೀನನ್ನು ಕತ್ತರಿಸುತ್ತಿದ್ದಾಗ ಅದರ ಹೊಟ್ಟೆಯಲ್ಲಿ ಒಂದು ಸುಂದರವಾದ ಮಗುವನ್ನು ಕಂಡನು. ಕೂಡಲೇ ಅವನಿಗೆ ಅಡುಗೆ ಮಾಡುವುದರಲ್ಲಿ ಸಹಾಯಕಳಾಗಿದ್ದ ಮಾಯಾವತಿಗೆ (ಹಿಂದಿನ ಜನ್ಮದಲ್ಲಿ ಮನ್ಮಥನ ಹೆಂಡತಿಯಾಗಿದ್ದ ರತಿ) ಕೊಟ್ಟನು. ಮೀನಿನ ಹೊಟ್ಟೆಯಲ್ಲಿ ಸುಂದರವಾದ ಮಗುವಿರುವುದು ಹೇಗೆ ಎಂದು ಅವಳಿಗೆ ಆಶ್ಚರ್ಯವಾಯಿತು. ಆಗ ನಾರದ ಮುನಿಗಳು ಕಾಣಿಸಿಕೊಂಡು ಅವಳಿಗೆ ಎಲ್ಲವನ್ನು ವಿವರಿಸಿದರು. ಪವಾಡದಂತೆ ಮಗುವು ಬಹುಬೇಗನೆ ಬೆಳೆದು ಸುಂದರವಾದ ಯುವಕನಾದನು. ತನ್ನ ಹಿಂದಿನ ಪತಿ ಮನ್ಮಥನು ಹುಟ್ಟಿ ಇಷ್ಟು ಆಕರ್ಷಕ ತರುಣನಾಗಿ ಬೆಳೆದಿದ್ದನ್ನು ನೋಡಿ ಅವಳು ಅವನಿಗೆ ಮಾರುಹೋಗಿ ಕಾಮಾಸಕ್ತಳಾದಳು. ಇದನ್ನು ಗಮನಿಸಿದ ಪ್ರದ್ಯುಮ್ನನು ಅವಳಿಗೆ ಸ್ವಲ್ಪ ಸಮಯದ ಮುಂಚೆ ನೀನು ನನ್ನಲ್ಲಿ ಮಾತೃ ವಾತ್ಸಲ್ಯವನ್ನು ತೋರುತ್ತಿದ್ದೆ ಆದರೆ ನಿನ್ನಲ್ಲಿ ಈಗ ಕಾಮಾಭಿಲಾಷೆಯ ಹೆಂಗಸಿನ ಲಕ್ಷಣಗಳು ಕಾಣುತ್ತಿವೆ ಇದು ಹೇಗೆ ಸಾಧ್ಯವೆಂದು ಕೇಳಿದನು? ಮಾಯಾವತಿಯು ನಡೆದಿರುವುದೆಲ್ಲವನ್ನು ಅವನಿಗೆ ವಿವರಿಸಿದಳು. ಶಂಬರಾಸುರನಿಗೆ ಹಲವಾರು ಯೋಗಶಕ್ತಿಗಳಿವೆ. ಆದುದರಿಂದ ಅವನು

ನಿನ್ನನ್ನು ಕೊಲ್ಲಲು ಪ್ರಯತ್ನಿಸುವ ಮೊದಲೇ ದಯವಿಟ್ಟು ನಿನ್ನ ದೈವೀ ಶಕ್ತಿಯನ್ನು ಬಳಸಿ ಅವನನ್ನು ಕೊಲ್ಲು. ಶಂಬರನು ನಿನ್ನನ್ನು ಕದ್ದೊಯ್ದ ನಂತರ ನಿನ್ನ ತಾಯಿ ರುಕ್ಮಿಣಿದೇವಿಯು ಮರಿಗಳನ್ನು ಕಳೆದುಕೊಂಡ ಕೋಗಿಲೆಯಂತೆ ತುಂಬ ದುಃಖದಲ್ಲಿದ್ದಾಳೆ. ಅವಳಿಗೆ ನಿನ್ನಲ್ಲಿ ಬಹು ಪ್ರೀತಿ. ನಿನ್ನನ್ನು ಕಳೆದುಕೊಂಡು ಅವಳು ಕರುವನ್ನು ಕಳೆದುಕೊಂಡ ಹಸುವಿನಂತೆ ದುಃಖಪಡುತ್ತಿದ್ದಾಳೆ ಎಂದು ಹೇಳಿದಳು. ಪ್ರದ್ಯುಮ್ನನು ಕೂಡಲೇ ಶಂಬರನ ಬಳಿಗೆ ಹೋಗಿ ಅವನನ್ನು ದ್ವಂದ್ವ ಯುದ್ಧಕ್ಕೆ ಕರೆದನು. ಪ್ರದ್ಯುಮ್ನನ ಮಾತುಗಳನ್ನು ಕೇಳಿ ಶಂಬರಾಸುರನಿಗೆ ಒದೆಯನ್ನು ತಿಂದಂತಾಯಿತು. ಅವನು ಕೂಡಲೇ ತನ್ನ ಗದೆಯನ್ನು ತೆಗೆದುಕೊಂಡು ಪ್ರದ್ಯುಮ್ನನೊಡನೆ ಹೋರಾಡಲು ನಿಂತನು. ನಂತರ ಬಹಳ ಸಮಯದ ಯುದ್ಧದ ನಂತರ ಪ್ರದ್ಯುಮ್ನನು ತನ್ನ ಕತ್ತಿಯನ್ನು ಹೊರಸೆಳೆದು, ಕಿರೀಟ ಮತ್ತು ಬೆಲೆಬಾಳುವ ಒಡವೆಗಳಿಂದ ಅಲಂಕೃತವಾಗಿದ್ದ ರಾಕ್ಷಸನ ತಲೆಯನ್ನು ಕತ್ತರಿಸಿ ಹಾಕಿದಾಗ ಮೇಲಿನ ಲೋಕದ ದೇವತೆಗಳು ಅವನ ಮೇಲೆ ಪುಷ್ಪವೃಷ್ಟಿ ಮಾಡಿದರು. ಪ್ರದ್ಯುಮ್ನನ ಹೆಂಡತಿ ಮಾಯಾವತಿಗೆ ಆಕಾಶದಲ್ಲಿ ಸಂಚರಿಸುವ ಶಕ್ತಿಯು ಇದ್ದಿತು. ಆದುದರಿಂದ ಅವರು ನೇರವಾಗಿ ಅವನ ತಂದೆಯ ರಾಜಧಾನಿ ದ್ವಾರಕೆಗೆ ವಾಯುಮಾರ್ಗದಲ್ಲಿ ಹೋದರು.

ದ್ವಾರಕೆಯ ಅರಮನೆಯಲ್ಲಿದ್ದ ಸ್ತ್ರೀಯರು ಪ್ರದ್ಯುಮ್ನನನ್ನು ನೋಡಿ ಕೃಷ್ಣನೇ ಬಂದನೆಂದು ಕೊಂಡರು. ಆದರೆ ನಂತರ ಅವರಿಗೆ ಅವನು ಕೃಷ್ಣನಲ್ಲವೆಂದು ತಿಳಿಯಿತು. ರುಕ್ಮಿಣಿಗೆ ಪ್ರದ್ಯುಮ್ನನನ್ನು ನೋಡಿ ತನ್ನ ಮಗನ ನೆನಪಾಯಿತು. ಅಂತರ್ ಭೋಧೆಯಿಂದಲೇ ಅವಳಿಗೆ ಪ್ರದ್ಯುಮ್ನನು ತನ್ನ ಮಗನೆಂದು ತಿಳಿಯಿತು. ಪ್ರದ್ಯುಮ್ನನು ಕೃಷ್ಣನನ್ನು ಎಲ್ಲ ರೀತಿಗಳಲ್ಲಿ ಹೋಲುತ್ತಿದ್ದ ಎನ್ನುವುದನ್ನು ಕಂಡಳು. ಕೃಷ್ಣನ ಲಕ್ಷಣಗಳನ್ನೆಲ್ಲಾ ಅವನು ಹೇಗೆ ಪಡೆದನೆಂದು ಅವಳಿಗೆ ಆಶ್ಚರ್ಯವಾಯಿತು. ಆಗ ಕೃಷ್ಣನು ತನ್ನ ತಾಯಿತಂದೆ ದೇವಕಿ ಮತ್ತು ವಸುದೇವರೊಂದಿಗೆ ಅಲ್ಲಿಗೆ ಬಂದನು. ದೇವೋತ್ತಮ ಪರಮ ಪುರುಷನಾದ ಕೃಷ್ಣನಿಗೆ ಎಲ್ಲವೂ ಅರ್ಥವಾಗುತ್ತಿತ್ತು. ಆದರೆ ಆ ಸನ್ನಿವೇಸದಲ್ಲಿ ಅವನು ಮೌನವಾಗಿದ್ದನು. ಆದರೆ ಅವನ ಅಪೇಕ್ಷೆಯಂತೆ ನಾರದ ಮುನಿಗಳು ಅಲ್ಲಿ ಕಾಣಿಸಿಕೊಂಡು ಎಲ್ಲವನ್ನು ವಿವರಿಸಿದರು. ಪ್ರದ್ಯುಮ್ನನು ಹೇಗೆ ಬೆಳೆದು ದೊಡ್ಡವನಾದ ಎಂದು ಕೇಳಿದವರಿಗೆಲ್ಲ ಆಶ್ಚರ್ಯವಾಯಿತು. ಏಕೆಂದರೆ ಕಳೆದುಹೋದ ಮಗನು ಹಿಂದಿರುಗುವ ಆಸೆಯನ್ನೇ ಅವರು ಬಿಟ್ಟು ಬಿಟ್ಟಿದ್ದಾಗ ಅವರ ಮಗನು ಹಿಂದಕ್ಕೆ ಬಂದು ಅಲ್ಲಿದ್ದವನು ಪ್ರದ್ಯುಮ್ನ ಎಂದು ಅವರಿಗೆ ಅರ್ಥವಾದಾಗ ಅವನನ್ನು ಬಹು ಸಂತೋಷದಿಂದ ಬರಮಾಡಿಕೊಂಡರು. ಪುರಜನರು ಪ್ರದ್ಯುಮ್ನನನ್ನು ನೋಡಲು ಬಹು ಕಾತರರಾಗಿ ಬಂದರು. ಅವರು, "ಸತ್ತುಹೋಗಿದ್ದ ಮಗನು ಹಿಂದಕ್ಕೆ ಬಂದಿದ್ದಾನೆ. ಇದಕ್ಕಿಂತ ಸಂತೋಷವೇನಿದೆ" ಎಂದು ಹೇಳುತ್ತಿದ್ದರು.

ಕೃಷ್ಣ ಮತ್ತು ರುಕ್ಮಿಣಿಯ ಭೇಟಿ :

ಈ ಚಿತ್ರವು ಹಿಂದಿನ ಚಿತ್ರದ ಮುಂದುವರಿದ ಭಾಗದಂತಿದೆ. ಮರುಜನ್ಮ ಪಡೆದ ಪ್ರದ್ಯುಮ್ನನನ್ನು ಕೃಷ್ಣ ಮತ್ತು ರುಕ್ಮಿಣಿಯ ಮುಂದೆ ತರಲಾಗಿದೆ. ಈ ಚಿತ್ರದ ಮೇಲೆ ಜಿಡಿಸಲಾಗಿರುವ ಚಿತ್ರಗಳಲ್ಲಿ

ಕೃಷ್ಣನು ನರಕಾಸುರ ಜೊತೆ ಮಾಡಿದ ಯುದ್ಧಗಳ ಚಿತ್ರೀಕರಣವಿದೆ. ನರಕಾಸುರನ ವಧೆಯ ನಂತರ ಅವನ ವಶದಲ್ಲಿದ್ದ ೧೬,೦೦೦ ಮಹಿಳೆಯರನ್ನು ಕೃಷ್ಣ ಮದುವೆಯಾಗುತ್ತಾನೆ. ಈ ಚಿತ್ರದಲ್ಲಿ ಕೃಷ್ಣ ತನ್ನ ಪತ್ನಿಯೊಂದಿಗೆ ವರಿಮಿಸುತ್ತಿದ್ದಾನೆ ಮತ್ತು ಇವನ ಪಕ್ಕದಲ್ಲಿ ಒಬ್ಬ ಸೇವಕಿಯು ಇವನಿಗೆ ಗಾಳಿ ಬೀಸುತ್ತಿದ್ದಾಳೆ. ಈ ಚಿತ್ರದಲ್ಲಿ ಕೃಷ್ಣ ತನ್ನ ೧೬,೦೦೦ ಪತ್ನಿಯರಿಗೆ ಕಟ್ಟಿಸಿದ ಮನೆಗಳ ಚಿತ್ರಣವಿದೆ. ಪುರಾಣದ ಪ್ರಕಾರ ಕೃಷ್ಣ ತನ್ನ ಎಲ್ಲಾ ಪತ್ನಿಯರೊಂದಿಗೆ ಸಂತೋಷದಿಂದ ಇದ್ದನೆಂದು ಹೇಳಲಾಗಿದೆ. ಈ ಚಿತ್ರದಲ್ಲಿ ಕೃಷ್ಣನು ತನ್ನ ಪತ್ನಿಯರೊಂದಿಗೆ ವಿರಮಿಸುತ್ತಿರುವ ದೃಶ್ಯ ಇದನ್ನು ದೃಡೀಕರಿಸುತ್ತದೆ.

ಉಷ ಮತ್ತು ಅನಿರುದ್ದನ ಮದುವೆ :

ಬಾಲಿಯ ಮಗನಾದ ಬಾಣನು ವಿಷ್ಣುವಿಗೆ ಇಡೀ ಭೂಲೋಕವನ್ನೆ ದಾನದ ರೂಪದಲ್ಲಿ ನೀಡುತ್ತಾನೆ. ಇದರಿಂದ ಸಂತೋಷಗೊಂಡ ಶಿವ ಇವನಿಗೆ ಸಾವಿರ ಕೈಗಳನ್ನು ದಯಪಾಲಿಸುತ್ತಾನೆ. ಆದರೆ ಸಾವಿರ ಕೈಗಳನ್ನು ಪಡೆದ ಬಾಣ ತನ್ನನ್ನು ಸೋಲಿಸುಲು ಯಾರೂ ಪರಾಕ್ರಮಿಗಳಿಲ್ಲದಿರುವುದರಿಂದ ತನ್ನ ಕೈಗಳಿಗೆ ಕೆಲಸವಿಲ್ಲದಂತಗಿದೆ ಎಂದು ಶಿವನ ಬಳಿ ತನ್ನ ನೋವು ಹೇಳಿಕೊಳ್ಳುತ್ತಾನೆ. ಆದರೆ ಬಾಣನಿಗೆ ತನ್ನ ಸಾವು ತುಂಬ ಹತ್ತಿರವಿದೆಯೆಂಬ ಸತ್ಯ ತಿಳಿದಿರುವುದಿಲ್ಲ. ಬಾಣನಿಗೆ ಉಷ ಎಂಬ ಮಗಳಿದ್ದಳು. ಇವಳ ಮಗಳು ಪ್ರದ್ಯುಮ್ನನ ಮಗನಾದ ಅನಿರುದ್ಧನ ಜೊತೆ ಪ್ರೇಮಕ್ಕೆ ಸಿಲುಕುತ್ತಾಳೆ. ಇದನ್ನು ಅರಿತ ಉಷೆಯ ಗೆಳತಿ ತನ್ನ ದೈವೀಶಕ್ತಿಯಿಂದ ಅನಿರುದ್ಧನನ್ನು ಉಷೆಯ ಅರಮನೆಗೆ ಬರುವಂತೆ ಮಾಡುತ್ತಾಳೆ. ಈ ಚಿತ್ರದಲ್ಲಿ ಉಷೆ ನಿದ್ರಿಸಿತ್ತಿದ್ದಾಳೆ ಮತ್ತು ಅವಳ ಕನಸಿನಲ್ಲಿ ಅನಿರುದ್ಧನನ್ನು ಕಾಣುತ್ತಿದ್ದಾಳೆ. ಎರಡನೇ ಚಿತ್ರದಲ್ಲಿ ಉಷೆ ಮತ್ತು ಅನಿರುದ್ಧ ಪಗಡೆಯಾಟ ಆಡುತ್ತಿರುವ ದೃಶ್ಯವಿದೆ.ಇದನ್ನು ನೋಡಿದ ಪ್ರದ್ಯುಮ್ನ ಇಬ್ಬರನ್ನು ತನ್ನ ಸರ್ಪದಿಂದ ಇಬ್ಬರನ್ನು ಬಂದಿಯಾಗಿಸುತ್ತಾನೆ. ಇದನ್ನು ಈ ಚಿತ್ರದಲ್ಲಿ ವರ್ಣಿಸಲಾಗಿದೆ. ಇದಾದ ನಂತರದ ಚಿತ್ರದಲ್ಲಿ ಬಾಣನು ತನ್ನ ಸಾವಿರ ಕೈಗಳಿಂದ ಅನಿರುದ್ಧನನ್ನು ಹೊಡೆಯುತ್ತಿರುವ ದೃಶ್ಯವಿದೆ. ಈ ವಿಷಯವನ್ನು ಅರಿತ ಕೃಷ್ಣ, ಬಲರಾಮ ಇಬ್ಬರೂ ಅನಿರುದ್ಧನನ್ನು ರಕ್ಷಿಸಲು ಧಾವಿಸುತ್ತಿರುವ ಚಿತ್ರವಿದೆ. ಈ ಚಿತ್ರದಲ್ಲಿ ಶಿವ ತನ್ನ ರುದ್ರಾವತಾರದಲ್ಲಿದ್ದಾನೆ ಮತ್ತು ಬಾಣನ ರಕ್ಷಣೆಗೆ ಬಂದಿದ್ದಾನೆಂದು ತಿಳಿಯುತ್ತದೆ. ಕೃಷ್ಣನು ಶಿವನ ವಾಹನವಾದ ಕೋಣದ ಜೊತೆ ಸೆಣಸಾಡುತ್ತಿದ್ದಾನೆ. ಈ ಚಿತ್ರದಲ್ಲಿ ಶಿವನ ಮಗನಾದ ಸ್ಕಂದನೂ ಸಹ ಹೋರಾಟಕ್ಕಿಳಿದಿದ್ದಾನೆ. ಕೊನೆಯ ಚಿತ್ರದಲ್ಲಿ, ಅನಿರುದ್ಧ ಮತ್ತು ಉಷ ಕೃಷ್ಣನಿಂದ ಆಶೀರ್ವಾದ ಪಡೆಯುತ್ತಿರುವ ದೃಶ್ಯವಿದೆ.

ಭಸ್ಮಾಸುರನ ವಧೆ :

ಮೋಹಿನ ಭಸ್ಮಾಸುರನ ಸನ್ನಿವೇಸವನ್ನು ಇಲ್ಲಿ ಚಿತ್ರೀಕರಿಸಲಾಗಿದೆ. ಭಸ್ಮಾಸುರನಿಗೆ ಈಶ್ವರನಿಂದ ಒಂದು ವರ ಪ್ರಾಪ್ತಿಯಾ ಗಿತ್ತು. ಯಾರ ತಲೆಯ ಮೇಲೆ ಕೈ ಇಟ್ಟರೂ ತಕ್ಷಣವೇ ಅವರು

ಸುಟ್ಟು ಬೂದಿಯಾಗುತ್ತಿದ್ದರು. ಈ ವರದಿಂದಾಗಿ ಭಸ್ಮಾಸುರನಿಗೆ ಅಹಂಕಾರ ಉಂಟಾಯಿತು. ಸಿಕ್ಕ ಸಿಕ್ಕವರ ತಲೆಯ ಮೇಲೆ ಕೈಯಿಡುವುದು, ಅವರೆಲ್ಲಾ ಸುಟ್ಟು ಬೂದಿಯಾಗುವುದು ಕಂಡು ಭಸ್ಮಾಸುರ ತನ್ನ ಸಮಾನ ಯಾರೂ ಇಲ್ಲವೆಂದು ಜಂಭದಿಂದ ಮೆರೆಯುತ್ತಿದ್ದ. ಒಮ್ಮೆ ಈ ವರವನ್ನು ಕೊಟ್ಟ ಶಿವನನ್ನೇ ಧ್ವಂಸ ಮಾಡಬೇಕೆಂದು ಯೋಚಿಸಿ ಶಿವನನ್ನು ಅಟ್ಟಿಸಿಕೊಂಡು ಓಡುತ್ತಾ ಅವನ ಶಿರದ ಮೇಲೆ ಕೈಯಿಡಲು ಮುಂದಾದ. ಈ ಕೃತ್ಯದಿಂದ ಶಿವನಿಗೆ ಭಯವುಂಟಾಯಿತು. ತಕ್ಷಣವೇ ಶ್ರೀಮನ್ನಾರಾಯಣನ ಬಳಿಗೆ ಓಡಿ ತನಗೆ ಬಂದಿರುವ ವಿಪತ್ತನ್ನು ಹೇಳಿಕೊಂಡು ಅವನ ಸಹಾಯ ಬೇಡಿದ. ಈಗ ನಾರಾಯಣ ಕಾರ್ಯೋನ್ಮುಖ ನಾದ. ಮೋಹಿನಿ ಎಂಬ ಸ್ತ್ರೀ ಇವನ ಮುಂದೆ ಪ್ರತ್ಯಕ್ಷಳಾದಳು. ಭಸ್ಮಾಸುರನು ಮೋಹಿನಿಯನ್ನು ಕಂಡು ಅವಳಲ್ಲಿ ಅನುರಕ್ತನಾದನು. ತನಗೆ ನೃತ್ಯ ಮಾಡಲು ಬರುತ್ತದೆಯೆಂದೂ, ಅವನೂ ತನ್ನಂತೆ ನೃತ್ಯ ಮಾಡಲು ಕಲಿಯ ಬೇಕೆಂದೂ ಪ್ರೇರೇಪಿಸಿದಳು. ಮೋಹಿನಿಯ ನೃತ್ಯ ಭಂಗಿಗೆ ಭಸ್ಮಾಸುರನು ಸೋತು ಹೋದನು. ಅವಳು ಮಾಡು ವಂತೆಯೇ ಇವನೂ ನೃತ್ಯ ಮಾಡುವನು. ಈ ಮಧ್ಯೆ ತಾನುಯಾರ ತಲೆಯ ಮೇಲೆ ಕೈ ಇಡುತ್ತೇನೆಯೋ ಆ ವ್ಯಕ್ತಿ ಸುಟ್ಟು ಬೂದಿಯಾಗುವನು ಎಂಬ ಈಶ್ವರನಿಂದ ವರವನ್ನು ಪಡೆದಿದ್ದುದು ಮರೆತೇ ಬಿಟ್ಟಿದ್ದ. ಶಿವ ಮತ್ತು ನಾರಾಯಣರುಗಳ ಪ್ರೇರಣೆಯಿಂದ ಮೋಹಿನಿ ಈ ಭಸ್ಮಾಸುರನ ನಾಶಕ್ಕಾಗಿ ಕಾಯುತ್ತಿದ್ದಳು. ಒಂದು ದಿನ ನೃತ್ಯ ಮಾಡುವಾಗ ತನ್ನ ಕೈಯನ್ನು ತನ್ನ ತಲೆಯ ಮೇಲೆಯೇ ಇಟ್ಟಕೊಂಡಳು. ಅವಳಂತೆಯೇ ಭಸ್ಮಾಸುರನು ಮಾಡಲು ಹೋಗಿ ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟನು. ತಕ್ಷಣವೇ ಭಸ್ಮವಾಗಿಬಿಟ್ಟನು! ಅಂದಿನಿಂದ ಲೋಕದಲ್ಲಿ ಶಾಂತಿ ನೆಲೆಗೊಂಡಿತು. ಈ ರೀತಿ ಶ್ರೀಮನ್ನಾರಾಯಣನು ಮೋಹಿನಿ ರೂಪದಿಂದ ರಾಕ್ಷಸ ರೂಪಿ ಭಸ್ಮಾಸುರನನ್ನು ಸಂಹರಿಸಿ ಲೋಕಕಂಟಕಕ್ಕೆ ಮುಕ್ತಿ ಕಾಣಿಸಿದನು. ಈ ಎಲ್ಲ ಚಿತ್ರಗಳನ್ನು ಇಲ್ಲಿ ನೋಡಬಹುದಾಗಿದೆ. ಭಸ್ಮಾಸುರನ ಚಿತ್ರ ಅತಿ ಆವೇಶದಿಂದ ಕೂಡಿರುವಂತೆ ಕಾಣಲು ಕಲಾವಿದನು ಆತನ ಕಣ್ಣುಗಳಿಗೆ ಕೆಂಪು ಬಣ್ಣ ಹಚ್ಚಿದ್ದಾನೆ.

ಪಟ್ಟಿಕೆ ೨ ಮಧ್ಯದ ಪಟ್ಟಿಕೆ : ಕೃಷ್ಣ ಮತ್ತು ಅವನ ಆಸ್ಥಾನ: ಈ ಚೌಕಟ್ಟಿನಲ್ಲಿ ವಿಷ್ಣುವಿನ ಚಿತ್ರವಿದೆ. ಇದನ್ನು ಅಷ್ಟಬಾರ್ಯ ಎಂದು ಕರೆಯಲಾಗುತ್ತದೆ. ಈ ಚಿತ್ರದಲ್ಲಿ ಒಟ್ಟು ೯ ಜನ ಮಹಿಳೆಯರು ಕೃಷ್ಣನ ಪಕ್ಕ ನಿಂತಿದ್ದಾರೆ. ಇವರಲ್ಲಿ ಒಬ್ಬರು ಸೇವಕಿಯೆರಂದು ಪರಿಗಣಿಸಿದರೆ ಉಳಿದ ೮ ಜನ ಕೃಷ್ಣನ ಪತ್ನಿಯರಾಗಿದ್ದಾರೆ. ರುಕ್ಮಿಣಿ ಮತ್ತು ಸತ್ಯಭಾಮ ಕೃಷ್ಣನ ತೊಡೆಯ ಮೇಲೆ ಆಸೀನರಾಗಿದ್ದಾರೆ. ಸತ್ಯಬಾಮೆಯನ್ನು ಕಪ್ಪ ವಣಜದಲ್ಲಿ ಚಿತ್ರಿಸಲಾಗಿದೆ. ಸತ್ಯಬಾಮೆಯನ್ನ ಸ್ವಲ್ಪ ಎತ್ತರದಲ್ಲಿರುವಂತೆ ಚಿತ್ರೀಕರಿಸಲಾಗಿದೆ. ಇದು ಕೃಷ್ನನಿಗೆ ಸತ್ಯಭಾಮೆಯ ಮೇಲಿದ್ದ ಪ್ರೀತಿಯ ದ್ಯೋತಕವಾಗಿದೆ. ಈ ಚಿತ್ರದಲ್ಲಿರುವ ಎಲ್ಲಾ ಮಹಿಳೆಯರನ್ನು ವಿಶಿಷ್ಟ ಆಭರಣಗಳಿಂದ ಚಿತ್ರೀಕರಿಸಲಾಗಿದೆ. ಎಲ್ಲಾ ಮಹಿಳೆಯರ ಕಣ್ಣುಗಳ ವಿಶಾಲವಾಗಿವೆ ಮತ್ತು ಇವರೆಲ್ಲರ ಮುಖದಲ್ಲಿ

ಅವ್ಯಕ್ತ ಸಂತೋಷ ವ್ಯಕ್ತವಾಗಿದೆ. ಕೃಷ್ಣನನ್ನು ನೀಲಿ ವರ್ಣದಿಂದ ಚಿತ್ರೀಕರಿಸಲಾಗಿದೆ. ಈ ಕೆಳಗಿನ ಪಟ್ಟಿಕೆಯಲ್ಲಿ ಭಕ್ತರು ಸಾಲಾಗಿ ನಿಂತಿರುವ ದೃಶ್ಯವಿದೆ. ಇವರೆಲ್ಲರು ತಮ್ಮ ಕೈಯಲ್ಲಿ ತುಳಸಿ ಎಲೆಯನ್ನು ಹಿಡಿದಿದ್ದಾರೆ ಮತ್ತು ವಿಷ್ಣುವಿನ ಪೂಜೆಗಾಗಿ ಕಾಯುತ್ತಿದ್ದಾರೆ. ಈ ಚಿತ್ರದಲ್ಲಿರುವ ಮಹಿಳೆಯರು ಸೀರೆಯನ್ನುಟ್ಟು ನಿಂತಿದ್ದಾರೆ.

ಪಟ್ಟಿಕೆ–೩, ಹೊರಾಂಗಣ ಚೌಕಟ್ಟು : ಮಹಾಭಾರತ : ಈ ಚೌಕಟ್ಟಿನಲ್ಲಿ ಒಟ್ಟು ಏಳು ಚಿತ್ರಗಳಿವೆ. ಮೊದಲನೆಯ ಚಿತ್ರದಲ್ಲಿ ಹಲವಾರು ರಾಜರು ಆಸೀನರಾಗಿರುವ ಚಿತ್ರಣವಿದೆ. ಇವರ ಪಕ್ಕದಲ್ಲಿ ಇಬ್ಬರು ಯೋಧರು ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದಾರೆ, ಮೊದಲನೇ ತೊಲೆಯಲ್ಲಿರುವ ಚಿತ್ರದಲ್ಲಿ ಬ್ರಾಹ್ಮಣರು ವಿಷ್ಣುವಿನ ಬೇಟಿಗಾಗಿ ನಿಂತಿದ್ದಾರೆ. ಎರಡನೇ ಚೌಕಟ್ಟಿನಲ್ಲಿ ಮಹಿಳೆಯರು ಕೈಯಲ್ಲಿ ಗಂಧ ಮತ್ತು ಹಣ್ಣುಗಳನ್ನು ಹಿಡಿದಿದ್ದಾರೆ. ಮೂರನೆಯ ಚಿತ್ರದಲ್ಲಿ ಯುದ್ಧದ ಚಿತ್ರಣವಿದೆ. ಸೈನಿಕರು ತಮ್ಮ ಕೈಯಲ್ಲಿ ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದಾರೆ. ನಾಲ್ಕನೆಯ ಚಿತ್ರದಲ್ಲಿ ಕೌರವ ಮತ್ತು ಪಾಂಡವರ ಚಿತ್ರಣವಿದೆ.

ಪಟ್ಟಿಕೆ–೩, ತೊಲೆ–೨ : ಈ ತೊಲೆಯ ಮೇಲೆ ಚಿತ್ರಣವಿರುವ ಚೌಕಟ್ಟಿನಲ್ಲಿ ಆನೆ ಮತ್ತು ಒಂಟೆಗಳನ್ನು ಹಿಡಿದಿರುವ ಮನುಷ್ಯರ ಚಿತ್ರಗಳಿವೆ. ಕುದುರೆ ಸವಾರರು ನಿಂತಿರುವ ಸಾಲಿನಲ್ಲಿ ಎಲ್ಲರಿಗೂ ಮುಂದೆ ಸೈನ್ಯಾಧಿಕಾರಿ ನಿಂತಿದ್ದಾನೆ. ಇದು ಬಹುಷಃ ಯುದ್ಧಕ್ಕೆ ಹೊರಡುವ ಮುನ್ನ ಚಿತ್ರೀಕರಿಸಿರುವ ದೃಶ್ಯವಾಗಿದೆ.

ಪಟ್ಟಿಕೆ–೩, ತೊಲೆ–೩ : ಇದು ಸಹ ಸಿಪಾಯಿಗಳಿರುವ ಚಿತ್ರವಾಗಿದೆ. ಒಂಟೆ, ಕುದುರೆ ಮತ್ತು ಆನೆಗಳ ಮೇಲೆ ಸವಾರರಾಗಿರುವ ಸೈನಿಕರಿದ್ದಾರೆ. ಆನೆ ಎಲ್ಲರಿಗೂ ಮುಂಚಿತವಾಗಿ ಮುನ್ನುಗ್ಗುತ್ತಿದೆ. ಕುದುರೆಗಳು ಒಮ್ಮೆಲೆ ಯಾರದೋ ಮೇಲೆ ಎಗರಿ ಹೋಗುವಂತೆ ಮುನ್ನುಗ್ಗುತ್ತಿವೆ. ಪ್ರಾಣಿಗಳ ಮೇಲೆ ಸವಾರರಾಗಿರುವ ಸೈನಿಕರು ಸಮವಾಗಿ ಉದ್ದಂಗಿಗಳನ್ನು ಧರಿಸಿದ್ದಾರೆ. ಸೊಂಟಕ್ಕೆ ಬಟ್ಟೆಯನ್ನು ಬಿಗಿದುಕೊಂಡಿದ್ದಾರೆ. ಕೆಲವರ ಮೀಸೆಗಳು ಉದ್ದವಾಗಿವೆ. ಇಲ್ಲಿ ಕಲಾವಿದನು ಪ್ರತಿಯೊಂದು ಸೈನಿಕನನ್ನು ಚಿತ್ರೀಕರಿಸಲು ಅಪಾರ ಪ್ರಮಾಣದ ತಾಳ್ಮೆ ಮತ್ತು ಕೌಶಲ್ಯವನ್ನು ಪ್ರದರ್ಶಿಸಿದ್ದಾನೆ.

ಪಟ್ಟಿಕೆ–೩, ತೊಲೆ–೪ : ಈ ಚಿತ್ರದಲ್ಲಿ ಡೋಲು ಮತ್ತು ನಗಾರಿಗಳನ್ನು ಬಾರಿಸುತ್ತಿರುವ ದೃಶ್ಯಗಳಿವೆ. ಸೈನಿಕರು ಯುದ್ಧದ ಪ್ರಾರಮಭವನ್ನು ಘೋಷಿಸುತ್ತಿರುವಂತೆ ಕಂಡುಬರುತ್ತಿದೆ. ಕೆಲವರು ಶಂಕ, ನಗಾರಿ, ಕೊಳಲು, ಡೋಲು, ನಗಾರಿ ಮತ್ತಿತರೆ ಉಪಕರಣಗಳನ್ನು ಬಾರಿಸುತ್ತಿದ್ದಾರೆ. ಈ ಚಿತ್ರದಲ್ಲಿ ಪ್ರತಿಯೊಬ್ಬನ ಕೈಯಲ್ಲಿ ವಿವಿದ ರೀತಿಯ ಉಪಕರಣಗಳಿವೆ.

ಪಟ್ಟಿಕೆ–೩, ಒಳಾಂಗಣ ಚೌಕಟ್ಟು : ಮಹಾಭಾರತದ ಯುದ್ಧ: ಕುಕ್ಷೇತ್ರವನ್ನು ಈ ಯುದ್ಧದಲ್ಲಿ ಚಿತ್ರೀಕರಿಸಲಾಗಿದೆ. ಮೊದಲನೆಯ ಚಿತ್ರದಲ್ಲಿ ಕುರುಕ್ಷೇತ್ರ ಯುದ್ಧ ನಡೆದು ಲಕ್ಷಾಂತರ ಜನರು ಪ್ರಾಣಾರ್ಪಣೆ ಮಾಡಿದ ಸನ್ನಿವೇಶವಿದೆ. ಜನರೇ ಅಲ್ಲದೆ ಆನೆ, ಕುದುರೆ ಮುಂತಾದ ಮೂಕ

ಜೀವಿಗಳೂ ಪ್ರಾಣ ಕಳೆದುಕೊಂಡಿವೆ. ಪಾಂಡವರು ತಮಗೆ ಸಿಕ್ಕ ಗೆಲುವಿಗಾಗಿ ತಮ್ಮ ಬಂಧುಬಾಂಧವರನ್ನೆಲ್ಲಾ ಕಳೆದುಕೊಳ್ಳುವ ದರಶ್ಯವಿದೆ. ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನೂ, ಅಣ್ಣತಮ್ಮಂದಿರನ್ನೂ ಕಳೆದುಕೊಳ್ಳಬೇಕಾಯಿತು. ಈ ಸನ್ನಿವೇಶವನ್ನು ಚಿತ್ರಿಸಲಾಗಿದೆ.

ಎರಡನೇ ಚಿತ್ರದಲ್ಲಿ ಈ ಕುರುಕ್ಷೇತ್ರ ಯುದ್ಧ ನಡೆಯದಿರಲು ಕೃಷ್ಣನೂ ಸೇರಿದಂತೆ ಕುರುವಂಶದ ಹಿರಿಯರೆಲ್ಲರೂ ತಮ್ಮ ಕೈಲಾದಂತೆ ಶ್ರಮಿಸುತ್ತಿರುವ ದರಶ್ಯವಿದೆ. ಆದರೆ ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ದುರ್ಯೋಧನ ಯಾರ ಮಾತೂ ಕೇಳಲಿಲ್ಲ. ಕೌರವರಿಂದ ಎಷ್ಟೇ ಅನ್ಯಾಯವಾದರೂ ಅವರಿಗೆ ತಕ್ಕಶಾಸ್ತಿ ಮಾಡಬೇಕೆಂಬ ಎಷ್ಟೇ ತುಡಿತದ್ದರೂ ಪಾಂಡವರು ಒಂದು ಹಂತದಲ್ಲಿ ರಾಜಿಗೆ–ಸಂಧಾನಕ್ಕೆ ಸಿದ್ಧರಿದ್ದರು. ಐದು ಊರುಗಳನ್ನು ಕೊಟ್ಟರೂ ತಾವು ಯುದ್ಧಮಾಡುವುದಿಲ್ಲವೆಂದು ಹೇಳಿದ್ದರು. ಆದರೆ ಈ ಮಾತನ್ನು ಕೇಳಿದ ದ್ರೌಪದಿ ಕೆರಳಿಬಿಟ್ಟಳು. ತುಂಬಿದ ಸಭೆಯಲ್ಲಿ ತನ್ನ ಹೆಣ್ತನಕ್ಕೆ ಅಪಮಾನವಾಗಿದ್ದನ್ನು ಅವಳು ಅಷ್ಟು ಸುಲಭವಾಗಿ ಮರೆತಿರಲಿಲ್ಲ. ಮರೆಯಲು ಸಾಧ್ಯವೂ ಇರಲಿಲ್ಲ. ಅವಳು ಒಂದು ವೇಳೆ ಆ ಅಪಮಾನವನ್ನು ಮರೆತು ಕ್ಷಮೆ ನೀಡಿದ್ದರೆ ಯುದ್ಧವಾಗುತ್ತಿರಲಿಲ್ಲವೇನೋ? ಈ ಕೆಲವು ಸಂಗತಿಗಳನ್ನು ಕಲಾವಿದ ಚಿತ್ರೀಕರಿಸಿದ್ದಾನೆ. ಮೂರನೇ ಚಿತ್ರದಲ್ಲಿ ಅಣ್ಣ ತಮ್ಮಂದಿರ ಮಧ್ಯೆ ದೂತವಾಡಿಸುವುದನ್ನು ಭೀಷ್ಮ ದ್ರೋಣ ವಿದುರ ಮೊದಲಾದ ಹಿರಿಯರು ವಿರೋಧಿಸುತ್ತಿರುವ ಚಿತ್ರಣವಿದೆ. ಮಹಾರಾಜನಾದ ದೃತರಾಷ್ಟ್ರನು ಪಟ್ಟು ಹಿಡಿದು ವಿರೋಧಿಸುತ್ತಿದ್ದಾನೆ. ನೀತಿವಂತನಾದ ಕರ್ಣನು ಈ ಅನ್ಯಾಯವನ್ನು ಗೆಳೆಯ ದುರ್ಯೋಧನನನಿಗೆ ಮನವರಿಕೆ ಮಾಡಿಕೊಡುತ್ತಿದ್ದಾನೆ. ನಾಲ್ಕನೆ ಚಿತ್ರದಲ್ಲಿ ಕರ್ಣನಿಗೆ ತನ್ನ ಜನ್ಮ ರಹಸ್ಯ ಗೊತ್ತಾದಾಗ ಅವನು ಮನಸ್ಸು ಮಮ್ಮಲ ಕರಗುತ್ತದೆ. ಈ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಇನ್ನು ಶ್ರೀಕೃಷ್ಣ ರಾಯಭಾರಿಯಾಗಿ ಹಸ್ತಿನಾವತಿಗೆ ಬಂದಾಗ ಅವನ ಹಿತವಚನಗಳನ್ನು, ಧರ್ಮಸೂಕ್ಷ್ಮಗಳನ್ನು ಕೇಳಿ, ದುರ್ಯೋಧನ ಮತ್ತವನ ಸಂಗಡಿಗರು ಯುದ್ಧದ ಬಗ್ಗೆ ಮತ್ತೂಮ್ಮೆ ಯೋಚಿಸುತ್ತಿದ್ದಾರೆ.

ಪಟ್ಟಿಕೆ ೪, ಹೊರಾಂಗಣ ಚೌಕಟ್ಟು ತೊಲೆ ೧ : ಈ ಚಿತ್ರದಲ್ಲಿ ರಾಮಾಯಣದ ಬಾಲಕಾಂಡವನ್ನು ಚಿತ್ರೀಕರಿಸಲಾಗಿದೆ. ರಾಮನ ಜನನ, ಬಾಲ್ಯ, ವನವಾಸಕ್ಕೆ ಹೋಗುವ ಮುನ್ನ ಅಯೋಧ್ಯೆಯಲ್ಲಿ ರಾಮ ಕಳೆದ ದಿನಗಳು, ವಿಶ್ವಾಮಿತ್ರನ ಕೋರಿಕೆಯಂತೆ ರಾಕ್ಷಸರನ್ನು ಸಂಹರಿಸಲು ಅವನೊಡನೆ ಅರಣ್ಯಕ್ಕೆ ತೆರಳುವುದು, ಸೀತಾ ಸ್ವಯಂವರ– ಈ ಘಟನೆಗಳನ್ನು ಇದು ಒಳಗೊಂಡಿದೆ. ಮೊದಲನೆಯ ಚಿತ್ರದಲ್ಲಿ ಬಾಲಕಾಂಡದ ಕೆಲವು ಸನ್ನಿವೇಶಗಳಿವೆ. ಅಯೋಧ್ಯೆಯ ರಾಜ ದಶರಥನಿಗೆ ಮಕ್ಕಳಿಲ್ಲವೆನ್ನುವ ಕೊರಗು. ಗುರುಹಿರಿಯರ ಆದೇಶದಂತೆ ಪುತ್ರಕಾಮೇಷ್ಟಿ ಯಜ್ಞವನ್ನು ಕೈಗೊಳ್ಳುತ್ತಾನೆ. ಯಜ್ಞದಿಂದ ಪ್ರಸನ್ನಗೊಂಡ ಯಜ್ಞಪುರುಷನು ಪಾಯಸದೊಂದಿಗೆ ಪ್ರತ್ಯಕ್ಷನಾಗುತ್ತಾನೆ. ಯಜ್ಞಪ್ರಸಾದವನ್ನು ದಶರಥನು ತನ್ನ ಪತ್ನಿಯರಿಗೆ ಹಂಚುತ್ತಾನೆ. ಪರಿಣಾಮವಾಗಿ ಕೌಸಲ್ಯೆಯು ರಾಮನಿಗೆ, ಕೈಕೇಯಿಯು ಭರತನಿಗೆ, ಸುಮಿತ್ರೆಯು ಲಕ್ಷಣ, ಶತೃಘ್ನರಿಗೆ ಜನ್ಮ ಕೊಡುತ್ತಾರೆ. ರಾಜನ ಆನಂದಕ್ಕೆ ಪಾರವೇ ಇಲ್ಲ. ಮನೆ ತುಂಬಾ ಮಕ್ಕಳು. ಅಪಾರ ಪ್ರೀತಿಯ ಜೊತೆಗೆ

ಯೋಗ್ಯ ಶಿಕ್ಷಣವನ್ನೂ, ಶಸ್ತ್ರಾಸ್ತ್ರ ಕಲೆಯನ್ನೂ ಕಲಿಸುತ್ತಾನೆ. ಕೌಸಲ್ಯೆಯ ಕಣ್ಮಣಿಯಾದ ರಾಮನೆಂದರೆ ದಶರಥನಿಗೆ ಪಂಚಪ್ರಾಣ. ಒಂದು ಕ್ಷಣವೂ ರಾಮನನ್ನು ಬಿಟ್ಟಿರಲಾಗದಷ್ಟು ಪ್ರೀತಿ. ಈ ಚಿತ್ರಣವನ್ನು ಇಲ್ಲಿ ಕಾಣಬಹುದು. ಎರಡನೇ ಚಿತ್ರದಲ್ಲಿ ಒಂದು ದಿನ ಬ್ರಹ್ಮರ್ಷಿ ವಿಶ್ವಾಮಿತ್ರರು ಅಯೋಧ್ಯೆಗೆ ಬರುತ್ತಾರೆ. ತಮ್ಮ ಯಾಗ ರಕ್ಷಣೆಗೆ ರಾಮನನ್ನು ಕಳುಹಿಸಿಕೊಡಬೇಕೆಂದು ದಶರಥನಲ್ಲಿ ಕೇಳುತ್ತಾರೆ. ರಾಮನನ್ನು ಬಿಟ್ಟಿರಲಾಗದಿದ್ದರೂ ಕುಲಗುರು ವಶಿಷ್ಠರ ಆಣತಿಯಂತೆ ದೃಢ ಮನಸ್ಸು ಮಾಡಿ ರಾಮನನ್ನು ಕಳುಹಿಸುತ್ತಾನೆ. ರಾಮನ ಜೊತೆ ಲಕ್ಷ್ಮಣನೂ ಹೊರಡುತ್ತಾನೆ. ಮಹರ್ಷಿ ವಿಶ್ವಾಮಿತ್ರರು ರಾಮ, ಲಕ್ಷ್ಮಣರಿಗೆ ಬಲ, ಅತಿಬಲವೆಂಬ ವಿದ್ಯೆಯನ್ನೂ, ಹಲವು ದೈವಿಕ ಶಸ್ತ್ರಾಸ್ತ್ರ ಪ್ರಯೋಗಗಳನ್ನು ಹೇಳಿಕೊಡುತ್ತಾರೆ. ದಂಡಕಾರಣ್ಯ ದಟ್ಟವಾದ ಕಾಡು. ರಾಕ್ಷಸಿಯಾದ ತಾಟಕಿ ಮತ್ತವಳ ಮಕ್ಕಳ ಉಪಟಳದಿಂದಾಗಿ ಸುಂದರವಾದ ಕಾಡು ಗೊಂಡಾರಣ್ಯವಾಗಿ ಮಾರ್ಪಾಡಾಗಿತ್ತು. ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆ ತಾಟಕಿ ಧನುರ್ಬಾಣಗಳನ್ನು ಧರಿಸಿರುವ ರಾಮ-ಲಕ್ಷ್ಮಣರ ಮೇಲೆರಗುತ್ತಾಳೆ. ಭಯಂಕರ ಯುದ್ಧ ನಡೆಯುತ್ತದೆ. ಮುನಿ ವಿಶ್ವಾಮಿತ್ರರ ಆದೇಶದಂತೆ ರಾಮನು ತಾಟಕಿಯನ್ನು ಸಂಹರಿಸುತ್ತಾನೆ. ಮುನಿಗಳ ಇಚ್ಛೆಯಂತೆ ಯಜ್ಞಕ್ಕೆ ರಕ್ಷಣೆಯಿತ್ತು, ಉಪಟಳ ಕೊಡುತ್ತಿದ್ದ ಸುಬಾಹುವನ್ನೂ ರಾಮನ ಬಾಣಗಳು ಸಂಹರಿಸುತ್ತವೆ. ಮಾರಕವಾಗಿ ಗಾಯಗೊಂಡ ಮಾರೀಚನು ಸುಮಾರು ಯೋಜನ ದೂರದ ಸಾಗರ ದಡದಲ್ಲಿ ಬೀಳುತ್ತಾನೆ. ಯಜ್ಞ ಸುಸೂತ್ರವಾಗಿ ನಡೆದ ಕಾರಣ ಮುನಿವರ್ಯರು ತುಂಬಾ ಪ್ರಸನ್ನವಾಗಿದ್ದರು.

ಮೂರನೇ ಚಿತ್ರದಲ್ಲಿ ಸೀತೆ ಮಿಥಿಲೆಯ ರಾಜ ಜನಕನ ಮಗಳು. ಜನಕರಾಜನು ತನ್ನ ಮಗಳ ಸ್ವಯಂವರವನ್ನೇರ್ಪಡಿಸಿದ್ದನು. ಆಮಂತ್ರಣವನ್ನು ಸ್ವೀಕರಿಸಿದ ಮುನಿ ವಿಶ್ವಾಮಿತ್ರರು ರಾಮ-ಲಕ್ಷ್ಮಣರೊಂದಿಗೆ ಮಿಥಿಲೆಗೆ ಪ್ರಯಾಣ ಬೆಳೆಸುತ್ತಾರೆ. ದಾರಿಯಲ್ಲಿ ಋಷಿ ಗೌತಮರ ಆಶ್ರಮ ಸಿಗುತ್ತದೆ. ಶ್ರೀರಾಮನ ಪಾದಸ್ಪರ್ಷದಿಂದ ಕಲ್ಲಾಗಿದ್ದ ಅಹಲ್ಯೆಯ ಶಾಪ ವಿಮೋಚನೆಯಾಗುತ್ತದೆ. ಮಿಥಿಲೆಯಲ್ಲಿ ರಾಜೋಚಿತ ಸ್ವಾಗತ ದೊರೆಯುತ್ತದೆ. ನಗರವೆಲ್ಲಾ ಸ್ವಯಂವರದ ಸಂಭ್ರಮದಿಂದ ಅಮರಾವತಿಯಂತೆ ನಳನಳಿಸುತ್ತಿತ್ತು. ರಾಮ-ಲಕ್ಷ್ಮಣರು ನಗರವನ್ನು ಸುತ್ತಾಡುತ್ತಾ ಉದ್ಯಾನವನದ ಕಡೆಗೆ ಬರುತ್ತಾರೆ. ದೇವಿ ಗೌರಿಯ ಪೂಜೆಗಾಗಿ ಬಂದ ಸೀತೆಯನ್ನು ರಾಮ ನೋಡುತ್ತಾನೆ. ಒಬ್ಬರನ್ನೊಬ್ಬರು ನೋಡುತ್ತಾ ಮೈಮರೆಯುತ್ತಾರೆ. ಶ್ರೀರಾಮನೇ ತನ್ನನ್ನು ವರಿಸಲಿಯೆಂದು ಮಾತೆ ಗೌರಿಯನ್ನು ಸೀತೆ ಪ್ರಾರ್ಥಿಸುತ್ತಾಳೆ. ಕೊನೆಯ ಚಿತ್ರದಲ್ಲಿ ಸ್ವಯಂವರದ ದಿನದಂದು ಸಭಾಂಗಣದಲ್ಲಿ ದೇಶ-ವಿದೇಶದ ರಾಜಕುಮಾರರು ಸೀತೆಯನ್ನು ವರಿಸುವ ಇಚ್ಛೆಯಿಂದ ನೆರೆದಿದ್ದರು. ಸ್ವಯಂವರದ ನಿಯಮದಂತೆ ಶಿವ ಧನುಸ್ಸನ್ನೆತ್ತಿ ಹೆದೆ ಏರಿಸಬೇಕಿತ್ತು. ಎಲ್ಲಾ ರಾಜಕುಮಾರರು ಪ್ರಯತ್ನಿಸಿ ಸೋತು ಹೋದರು. ಕೊನೆಗೆ ಶ್ರೀರಾಮನು ಸಭಾಂಗಣದ ಮಧ್ಯೆ ಬಂದು ಗುರುಹಿರಿಯರಿಗೂ, ಧನುಸ್ಸಿಗೂ ನಮಸ್ಕರಿಸುತ್ತಾನೆ, ಧನುಸ್ಸನ್ನು ಎತ್ತಿ ಹೆದೆಯೇರಿಸುತ್ತಿದ್ದಂತೆ ಮೇಘಗಳ ಗರ್ಜನೆಯಂತೆ ಸದ್ದಾಗಿ ಧನುಸ್ಸು ಮುರಿದು ಬೀಳುತ್ತದೆ. ಸಂಪ್ರೀತೆಯಾದ ಸೀತೆಯು ಶ್ರೀರಾಮನಿಗೆ ವರಮಾಲೆಯನ್ನು

ತೊಡಿಸುತ್ತಾಳೆ. ಮಿಥಿಲೆಯಲ್ಲಿನ ವಿಷಯ ತಿಳಿದು ದಶರಥನ ಹಾಗೂ ರಾಣಿಯರ ಆನಂದಕ್ಕೆ ಪಾರವೇ ಇರಲಿಲ್ಲ. ಸಂಪೂರ್ಣ ರಾಜ ಪರಿವಾರ ವಿವಾಹದಲ್ಲಿ ಪಾಲ್ಗೊಳ್ಳಲು ಮಿಥಿಲೆಗೆ ತೆರಳುತ್ತದೆ.

ಪಟ್ಟಿಕೆ ೪, ತೊಲೆ ೨ : ಅಸುರ ಸಂಹಾರಕ್ಕಾಗಿ ವಿಶ್ವಾಮಿತ್ರ ಋಷಿ ರಾಮ ಲಕ್ಷ್ಮಣರನ್ನು ತನ್ನೊಂದಿಗೆ ಕರೆದುಕೊಂಡು ಹೋಗುತ್ತಾನೆ. ರಕ್ಕಸನನ್ನು ಕೊಂದು ಹಿಂತಿರುಗುವ ದಾರಿಯಲ್ಲಿ ಗಂಗೆ ಎದುರಾಗುತ್ತಾಳೆ. ಗಂಗೆಯಲ್ಲಿ ಮುಳುಗೇಳುವ ರಾಮಚಂದ್ರ ನದಿಯನ್ನು ದಾಟಿ ಜಾನಕಿ ಇರುವ ಊರು ತಲುಪುತ್ತಾನೆ ಎನ್ನುವುದು ಪುರಾಣದ ಕಥೆ. ಈ ಜಾಗದಲ್ಲಿ ಗಂಗೆಯನ್ನು ರಾಮ ಸ್ಪರ್ಶಿಸುವುದರಿಂದ ಅದು ಪವಿತ್ರ ಜಾಗವೆಂದು ಪ್ರತೀತಿ ಪಡೆದಿದೆ. ಈ ಚಿತ್ರದಲ್ಲಿ ರಾಮ, ಲಕ್ಷ್ಮಣ ಮತ್ತು ವಿಶ್ವಾಮಿತ್ರಮುನಿಗಳ ಚಿತ್ರವಿದೆ. ಇವರು ತಾಟಕಿ ವನದಲ್ಲಿದ್ದ ಅಸುರನನ್ನು ಕೊಲ್ಲುತ್ತಿರುವ ದೃಶ್ಯಾವಳಿಗಳನ್ನು ಚಿತ್ರಿಕರಿಸಲಾಗಿದೆ. ಮತ್ತೊಂದು ಚಿತ್ರದಲ್ಲಿ ರಾಮ ಲಕ್ಷ್ಮಣರು ಸರಯೂ ನದಿಯಲ್ಲಿ ಸ್ನಾನ ಮಾಡುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ. ಮಿಥಿಲೆಯ ರಾಜ ತನ್ನ ಮಗಳನ್ನು ರಾಮನಿಗೆ ಕೊಟ್ಟು ಮದುವೆ ಮಾಡಿಸಲು ಉತ್ಸುಕನಾಗಿರುವ ದೃಶ್ಯವೂ ಇದೆ.

ಪಟ್ಟಿಕೆ–೪, ತೊಲೆ–೩ : ಈ ತೊಲೆಯ ಮೇಲೆ ಚಿತ್ರಿಸಿರುವ ದೃಶ್ಯದಲ್ಲಿ ದಶರಥನು ತನ್ನ ಮಕ್ಕಳು ಮತ್ತು ಸೊಸೆಯನ್ನು ಮಿಥಿಲೆಯಿಂದ ಅಯೋಧ್ಯೆಗೆ ಕರೆದುಕೊಂಡು ಹೋಗುತ್ತಿದ್ದಾನೆ. ದಾರಿಯ ಮಧ್ಯೆ ವಿಷ್ಣುವಿನ ಅವತಾರವಾದ ಪರಶುರಾಮನು ರಾಮನಿಗೆ ಬಿಲ್ಲನ್ನು ಮುರಿಯುವಂತೆ ಸವಾಲು ಹಾಕುತ್ತಾನೆ. ಇದನ್ನು ಮುರುಇದರೆ ಮಾತ್ರ ತನಗಿಂತಲು ಪರಾಕ್ರಮಿ ಎಂದು ಒಪ್ಪಿಕೊಳ್ಳುರತ್ತೇನೆಂದು ಹೇಳುತ್ತಾನೆ. ಈ ಚಿತ್ರದಲ್ಲಿ ರಾಮನು ಬಿಲ್ಲಿನ್ನು ಹೂಡುತ್ತಿರುವ ದೃಶ್ಯವಿದೆ. ಈ ಚಿತ್ರದಲ್ಲಿ ವಶಿಷ್ಠ ಮುನಿಗಳು, ಜನಕ, ಶತ್ರುಘ್ನ, ಭರತ, ಲಕ್ಷ್ಮಣ, ರಾಮ ಮತ್ತು ದಶರಥರು ಪರಶುರಾಮನ ಮುಂದೆ ನಿಂತಿದ್ದಾರೆ.ಪರಶುರಾಮನು ಬಿಲ್ಲನ್ನು ಮುರಿಯುವಂತೆ ಆಹ್ವಾನಿಸುತ್ತಿದ್ದಾನೆ. ದಶರಥನು ರಾಮನಿಗೆ ಈ ಸವಾಲು ಹಾಕಬಾರದೆಂದು ಪರಶುರಾಮನಿಗೆ ಕೇಳಿಕೊಳ್ಳುತ್ತಿದ್ದಾನೆ.

ಇದರ ನಂತರದ ಚೌಕಟ್ಟಿನಲ್ಲಿ ರಾಮ ಮತ್ತು ಸೀತೆ ವನದಲ್ಲಿ ವಿಹರಿಸುತ್ತಿರುವ ದೃಶ್ಯವಿದೆ. ಜಿಂಕೆಗಳು, ಪಕ್ಷಿಗಳು, ಮತ್ತು ಇತರೆ ಪ್ರಾಣಿಗಳು ಸಹ ವನದಲ್ಲಿವೆ. ಕೊನೆಯ ಚಿತ್ರದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯರು ಎಲ್ಲೋ ಹೋಗುತ್ತಿರುವ ದೃಶ್ಯವಿದೆ. ಇದು ಬಹುಷಃ ಅರಣ್ಯಕಾಂಡದ ಭಾಗವಾಗಿದೆಯೆಂದು ಕಾಣುತ್ತದೆ.

ಪಟ್ಟಿಕೆ–೪, ತೊಲೆ–೪ : ಇಲ್ಲಿ ರಾಮ, ಸೀತೆ ಮತ್ತು ಲಕ್ಷ್ಮಣರು ಕಾಡಿಗೆ ಬಂದಿದ್ದಾರೆ. ಸೀತೆಯು ರಾಮನ ಜೊತೆ ಕಾಡಿಗೆ ಹೋಗಬೇಕೆಂದು ತವಕಿಸುತ್ತಿದ್ದಾಳೆ ಮತ್ತು ಲಕ್ಷ್ಮಣನೂ ಸಹ ರಾಮನೊಂದಿಗೆ ಕಾಡಿಗೆ ತೆರಳಲು ಸಿದ್ಧನಾಗಿದ್ದಾನೆ. ರಾಮಾಯಣದ ಕೆಲವು ಪ್ರಸಂಗಗಳನ್ನು ಹೇಳಿದ ನಂತರ, ಮತ್ತೊಂದು ಚಿತ್ರದಲ್ಲಿ ಭರತನು ತನ್ನ ಅಣ್ಣನಾದ ರಾಮನನ್ನು ಬೇಟಿಯಾಗಲೆಂದು

ಕಾಡಿಗೆ ಬಂದಿದ್ದಾನೆ. ಅಯೋಧ್ಯೆಗೆ ವಾಪಸ್ ಬರುವಂತೆ ಬೇಡಿಕೊಳ್ಳುತ್ತಿದ್ದಾನೆ. ಈ ಚೌಕಟ್ಟಿನಲ್ಲಿ ರಾಮ ಮತ್ತು ಸೀತೆಯರು ಪರ್ವತದ ಮೇಲೆ ನಿಂತಿದ್ದಾರೆ. ಪರ್ವತದ ಕೆಳಗೆ ಭರತ ಮತ್ತು ಶತ್ರುಜ್ಞರು ನಿಂತಿದ್ದಾರೆ.ಅವರ ಹಿಂದೆ ಆನೆ ಮತ್ತು ಕುದುರೆಗಳನ್ನು ಹಿಡಿದಿ ನಿಂತಿರುವ ಜನಸಾಮಾನ್ಯರಿದ್ದಾರೆ. ಇವರೆಲ್ಲರು ಭರತನ ಜೊತೆ ರಾಮನನ್ನು ಭೇಟಿಯಾಗಲೆಂದು ಬಂದವರಿದ್ದಿರಬಹುದು. ಇದರ ಪಕ್ಕದಲ್ಲಿರುವ ಚಿತ್ರದಲ್ಲಿ ಭರತ ತನ್ನ ಅಣ್ಣನಾದ ರಾಮನ ಪಾದರಕ್ಷೆಗಳನ್ನು ಸಿಂಹಾಸನದ ಮೇಲಿಟ್ಟು ರಾಜ್ಯಭಾರ ಮಾಡಲು ನಿರ್ಧರಿಸಿದ ಭರತ ಕಣ್ಣೀರಿಡುತ್ತಿದ್ದಾನೆ. ಇದರ ಪಕ್ಕದಲ್ಲಿರುವ ಚಿತ್ರ ಮಾಸಿ ಹೋಗಿರುವ ಕಾರಣ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಆದರೂ ಸಹ ಈ ಚಿತ್ರದಲ್ಲಿ ಗಣೇಶನನ್ನು ಪೂಜಿಸುತ್ತಿರುವ ಚಿತ್ರಣವಿದೆ.

ಪಟ್ಟಿಕೆ ೪ ಒಳಾಂಗಣ ಚೌಕಟ್ಟು ಅನಸೂಯಳ ಭೇಟಿ : ರಾಮ, ಸೀತೆ ಮತ್ತು ಲಕ್ಷ್ಮಣರು ಚಿತ್ರಕೂಟವನ್ನು ಬಿಟ್ಟು ಬೇರೆಡೆಗೆ ತೆರಳುತ್ತಿರುವ ದೃಶ್ಯವಿದೆ. ದಾರಿಯಲ್ಲಿ ಅವರಿಗೆ ಆಶ್ರಮವೊಂದು ಸಿಗುತ್ತದೆ. ಈ ಆಶ್ರಮದಲ್ಲಿ ಅತ್ರಿಯನ ಹೆಂಡತಿಯಾದ ಅನಸೂಯಳನ್ನು ಸೀತೆ ಭೇಟಿಯಾಗುತ್ತಾಳೆ. ಈ ಚಿತ್ರದಲ್ಲಿ ವೃದ್ಧ ಅನಸೂಯಳು ಸೀತೆಗೆ ಉಡುಗೊರೆ ನೀಡಿ ಸ್ವಾಗತಿಸುತ್ತಿರುವ ಚಿತ್ರಣವಿದೆ.

ವಿರಾಧನ ಹಲ್ಲೆ : ಈ ಚೌಕಟ್ಟಿನಲ್ಲಿ ರಾಮನು ದಂಡಕಾರಣ್ಯವನ್ನು ಪ್ರವೇಶಿಸುತ್ತಿರುವ ದೃಶ್ಯವಿದೆ. ಇಲ್ಲಿಗೆ ಬರುವ ಮಾರ್ಗಮಧ್ಯದಲ್ಲಿ ವಿರಾಧನೆಂಬ ಅಸುರ ಎದುರಾಗುತ್ತಾನೆ. ಈ ಚಿತ್ರದಲ್ಲಿ ಸೀತೆಯನ್ನು ಕಬಳಿಸಿರುವ ವಿರಾಧ ರಾಮನನ್ನು ಕೊಲ್ಲುತ್ತೇನೆಂದು ಬೆದರಿಸುತ್ತಿದ್ದಾನೆ. ಆದರೆ ರಾಮನು ಅವನ ಜೊತೆ ಸೆಣಸಾಡಿ ಸೀತೆಯನ್ನು ಅವನಿಂದ ಪಾರು ಮಾಡುತ್ತಾನೆ. ಈ ಚಿತ್ರದಲ್ಲಿ ರಾಮ ಮತ್ತು ಅಸುರನ ಮಧ್ಯೆ ನಡೆಯುತ್ತಿರು ಹೋರಾಟವನ್ನು ಚಿತ್ರಿಸಲಾಗಿದೆ.

ಅಗಸ್ತ್ಯನ ಭೇಟಿ : ಈ ಚೌಕಟಿನಲ್ಲಿ ರಾಮ ಮತ್ತು ಸೀತೆ ಅಗಸ್ತ್ಯ ಮುನಿಗಳನ್ನು ಭೇಟಿಮಾಡುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ. ಈ ಚಿತ್ರದಲ್ಲಿ ರಾಮನನ್ನು ಭೇಟಿ ಮಾಡಿದ ಅಗಸ್ತ್ಯ ಮುನಿಯು ಪ್ರಸನ್ನ ಮನೋಭಾವದಲ್ಲಿರುವುದನ್ನು ನೋಡಬಹುದು.

ಗುಹನ ಭೇಟಿ : ಈ ಚೌಕಟ್ಟಿನಲ್ಲಿ ರಾಮನು ಗುಹನನ್ನು ಬೇಟಿ ಮಾಡುತ್ತಿರುವುದನ್ನು ನೋಡಬಹುದು. ಗುಹ ರಾಮನ ಭಕ್ತನಾಗಿದ್ದು ಇವನು ಮೂಲತಃ ಒಬ್ಬ ರಾಜನಾಗಿದ್ದ. ಈ ಚಿತ್ರದಸಲ್ಲಿ ಗುಹನು ಬೇಟೆಗಾರನ ವೇಷದಲ್ಲಿದ್ದಾನೆ. ರಾಮನನ್ನು ಭೇಟಿಯಾದ ನಂತರ ಈತ ರಾಮನನ್ನು ಹೊಗಳುತ್ತಿರುವ ದೃಶ್ಯವನ್ನು ಇಲ್ಲಿ ನೋಡಬಹುದು.

ಶೂರ್ಪನಖಿಯನ್ನು ಗಾಯಗೊಳಿಸುವ ದೃಶ್ಯ :

ಶೂರ್ಪನಖಿ ರಾವಣನ ಸಹೋದರಿ. ವಾಲ್ಮೀಕಿಯ ಅನುಸಾರ ರಾಮಾಯಣದ ಎಲ್ಲಾ ಘಟನೆಗಳಿಗೆ ಮೂಲ ಪ್ರೇರಣೆಯ ಎರಡು ಪಾತ್ರಗಳಲ್ಲಿ ಒಬ್ಬಳು. ಇನ್ನೊಬ್ಬಳು ಕೈಕೇಯಿ ರಾಮಾಯಣದ ಅನುಸಾರ ಶೂರ್ಪನಖಿಯನ್ನು ದುಷ್ಟಬುದ್ಧಿ ಎಂಬ ರಾಕ್ಷಸನಿಗೆ ಮದುವೆ

ಮಾಡಿಕೊಡಲಗಿತ್ತು. ದುಷ್ಟಬುದ್ದಿಯನ್ನು ರಾವಣ ಕೊಲ್ಲಿಸಿದ ನಂತರ ಅಣ್ಣನ ಮೇಲ ಸಿಟ್ಟಾಗಿ ಶೂರ್ಪನಖಿ ದಂಡಕಾರಣ್ಯದ ಕಾಡುಗಳಲ್ಲಿ ತಿರುಗಾಡುತ್ತಿದ್ದಳು. ಹೀಗೆ ತಿರುಗಾಡುತ್ತಿದ್ದಾಗ ರಾಮನನ್ನು ಕಂಡು ಮೋಹಿಸಿ ಮದುವೆಯಾಗಲು ಪೀಡಿಸುತ್ತಾಳೆ. ರಾಮನು ಮದುವೆಯಾಗಲು ಒಪ್ಪದೆ ತಮ್ಮ ಲಕ್ಷ್ಮಣನಲ್ಲಿಗೆ ಕಳುಹಿಸುತ್ತಾನೆ. ಅವನು ಒಪ್ಪದಿದ್ದಾಗ ಸಿಟ್ಟಾಗಿ ಸೀತೆಯ ಮೇಲೆ ಏರಿ ಹೋಗುತ್ತಾಳೆ. ಇದನ್ನು ತಡೆದ ಲಕ್ಷಣ ಶೂರ್ಪನಖಿಯ ಮೂಗು ಕತ್ತರಿಸುತ್ತಾನೆ. ಆಪಮಾನ ತಾಳಲಾಗದ ಶೂರ್ಪನಖಿ ಅಣ್ಣ ಖರಾಸುರನಲ್ಲಿಗೆ ಹೋಗಿ ದೂರು ಕೊಡುತ್ತಾಳೆ. ಖರಾಸುರನು ರಾಮನೊಂದಿಗೆ ಯುದ್ದ ಮಾಡಿ ಮಡಿಯುತ್ತಾನೆ. ಅಲ್ಲಿಂದ ನೇರ ಶೂರ್ಪನಖಿ ತನ್ನ ಅಣ್ಣ ರಾವಣನಲ್ಲಿ ದೂರು ಕೊಡಲು ಲಂಕೆಗೆ ಹೋಗುತ್ತಾಳೆ. ರಾವಣನಲ್ಲಿ ತನ್ನ ಬವಣೆಯನ್ನು ಹೇಳಿಕೊಂಡು ಸೀತೆಯ ಗುಣ ಹಾಗೂ ಸೌಂದರ್ಯವನ್ನು ಉತ್ಪ್ರೇಕ್ಷೆ ಮಾಡಿ ಹೇಳಿ ರಾವಣನು ಸೀತೆಯನ್ನು ಅಪಹರಿಸುವಂತೆ ಮಾಡುತ್ತಾಳೆ. ಈ ಚೌಕಟ್ಟಿನಲ್ಲಿ ಶೂರ್ಪನಖಿಯ ತಮ್ಮಂದಿರಾದ ಖರ ಮತ್ತು ದುಶಾನನರು ರಾಮ ಮತ್ತು ಲಕ್ಷ್ಮಣರ ಜೊತೆ ಸೆಣಸಾಡುತ್ತಿರುವ ದೃಶ್ಯವಿದೆ.

ಬಂಗಾರದ ಜಿಂಕೆ : ಶೂರ್ಪನಖಿ ತನ್ನ ಅಣ್ಣನಾದ ರಾವಣನಲ್ಲಿಗೆ ಹೋಗಿ ದೂರು ಕೊಟ್ಟಳು. ಅವನು ಮಾರೀಚನೆಂಬ ರಾಕ್ಷಸನ ಜೊತೆಗೆ ಆ ಅರಣ್ಯಕ್ಕೆ ಬಂದನು. ಮಾರೀಚ ಬಂಗಾರದ ಜಿಂಕೆಯಂತೆ ಸುಳಿದಾಡಬೇಕೆಂದೂ ರಾಮಲಕ್ಷಣರಿಲ್ಲದಾಗ ರಾವಣನು ಸೀತೆಯನ್ನು ಅಪಹರಿಸುವುದೆಂದೂ ನಿಶ್ಚಯ ಆಯಿತು. ತಮ್ಮ ಗುಡಿಸಲ ಮುಂದೆ ಸುಳಿದಾಡಿದ ಸುಂದರವಾದ ಬಂಗಾರದ ಜಿಂಕೆಯನ್ನು ನೋಡಿ ಸೀತೆ ಅದಕ್ಕೆ ಮನಸೋತಳು. ನನಗೆ ಆ ಜಿಂಕೆ ಬೇಕೆಂದು ಸೀತೆ ಹಟ ಹಿಡಿದಳು. ರಾಮನು ತನ್ನ ಬಿಲ್ಲು ಬಾಣಗಳನ್ನು ತೆಗೆದುಕೊಂಡು ಜಿಂಕೆಯ ಹಿಂದೆ ಹೋಗುತ್ತಾನೆ ಈ ಚಿತ್ರದಲ್ಲಿ ಜಿಂಕೆಯ ಹಿಂದೆ ಓಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ.

ರಾವಣನ ಪ್ರವೇಶ : ಇತ್ತ ಸೀತೆಯೊಬ್ಬಳೇ ಕಾತರದಿಂದ ಗುಡಿಸಲ ಬಾಗಿಲಲ್ಲಿನಿಂತಳು. ಆಗ ರಾವಣನು ಸನ್ಯಾಸಿಯ ವೇಷದಲ್ಲಿ ಬಂದು ಸೀತೆಯ ಸೌಂದರ್ಯಕ್ಕೆ ಮಾರುಹೋಗುತ್ತಾನೆ. ಈ ಚಿತ್ರದಲ್ಲಿ ರಾವಣ ಸೀತೆಯನ್ನು ಅಪಹರಿಸಲು ಸಜ್ಜಾಗುತ್ತಿರುವುದನ್ನು ನೋಡಬಹುದು. ಇದರ ನಂತರ ಚಿತ್ರದಲ್ಲಿ ಜಟಾಯುವೆಂಬ ಮುದಿ ಹದ್ದೊಂದು ಸೀತೆಯನ್ನು ರಕ್ಷಿಸಲೆಂದು ಹಾರಿ ಬಂದು ರಾವಣನ ಮೂಗು ಕಣ್ಣುಗಳಿಗೆ ಬಡಿಯುವ ದೃಶ್ಯವಿದೆ. ಮಹಾಪರಾಕ್ರಮಿಯಾದ ರಾವಣ ಅದರ ರೆಕ್ಕೆಗಳನ್ನು ಕತ್ತರಿಸಿ, ಕೆಳಗೆ ಕೆಡವುತ್ತಿದ್ದಾನೆ. ರಾಮ ಮತ್ತು ಲಕ್ಷ್ಮಣರು ಗಾಯಗೊಂಡಿರುವ ಜಟಾಯುವನ್ನು ನೋಡುತ್ತಿರುವ ದೃಶ್ಯವಿದೆ.

ಶಬರಿಯ ಭೇಟಿ : ಈ ಚೌಕಟ್ಟಿನಲ್ಲಿ ರಾಮಮ ಮತ್ತು ಶಬರಿಯ ಬೇಟಿಯನ್ನು ವಿಸ್ತಾರವಾಗಿ ಚಿತ್ರೀಕರಿಸಲಾಗಿದೆ. ರಾಮನು ಸೀತೆಯನ್ನು ಹುಡುಕುತ್ತ ಋಷ್ಯಮೂಕ ಪರ್ವತಕ್ಕೆ ಬಂದನು. ಅಲ್ಲಿ ಅನೇಕ ಮಹರ್ಷಿಗಳು ತಪಸ್ಸಿನಲ್ಲಿ ನಿರತರಾಗಿದ್ದರು. ಅವರೆಲ್ಲಾ ರಾಮನ ಬರುವಿಕೆಗಾಗಿ

ಕಾಯುತ್ತಿದ್ದರು. ಆದರೆ ರಾಮನು ಲಕ್ಷ್ಮಣನೊಡನೆ ಶಬರಿಯ ಬಡ ಗುಡಿಸಿಲಿಗೆ ಬಂದನು. ಶಬರಿ ರಾಮನನನ್ನು ನೋಡಿ ಆನಂದತುಂದಿಲಳಾದಳು. ರಾಮಲಕ್ಷ್ಮಣರಿಗೆ ತಾನು ತೆಗೆದಿರಿಸಿದ್ದ ಹಣ್ಣುಗಳನ್ನು ಕೊಟ್ಟಳು. ಲಕ್ಷ್ಮಣನು ಅವು ಎಂಜಲು ಹಣ್ಣುಗಳೆಂದು ಆಕ್ಷೇಪಿಸಿದರೂ ರಾಮನು ಶಬರಿಯ ಭಕ್ತಿಗೆ ಸೋತು ಅವುಗಳನ್ನು ತಿಂದನು. ರಾಮನು ಅಲ್ಲಿಗೆ ಬಂದ ಕಾರಣವೇನೆಂದು ಶಬರಿ ವಿಚಾರಿಸಿದಳು. ಸೀತೆಯನ್ನು ಹುಡುಕುತ್ತಿರುವ ವಿಚಾರವನ್ನು ರಾಮ ತಿಳಿಸಿದನು. ತುಂಗಭದ್ರಾ ತೀರದಲ್ಲಿನ ಕಿಷ್ಕಿಂದೆಯಲ್ಲಿರುವ ಸುಗ್ರೀವನಿಂದ ನಿನಗೆ ಸಹಾಯವಾಗುವುದು. ನೀನು ಸೀತೆಯನ್ನು ಮರಳಿ ಹೊಂದಿ ಅಯೋಧ್ಯೆಯ ಚಕ್ರವರ್ತಿಯಾಗುತ್ತೀಯ ಎಂದು ಹೇಳುತ್ತಾ ರಾಮನ ಪಾದಕ್ಕೆ ಕುಸಿದಳು. ರಾಮನ ಪಾದತಲದಲ್ಲಿಯೇ ಶಬರಿಯ ಪ್ರಾಣಪಕ್ಷಿ ಹಾರಿಹೋಗಿರುವ ದೃಶ್ಯವಿದೆ.

ಸುಗ್ರೀವನ ಭೇಟಿ : ಈ ಚಿತ್ರದಲ್ಲಿ ಹನುಮಂತನು ರಾಮ ಮತ್ತು ಲಕ್ಷ್ಮಣರನ್ನು ಸುಗ್ರೀವನ ಭೇಟಿಗೆ ಕರೆದೊಯ್ಯುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ. ರಾಮ ತನ್ನ ಪತ್ನಿ ಸೀತೆಯನ್ನು ಹುಡುಕುತ್ತಾ ಲಂಕೆಯ ಕಡೆಗೆ ಹೊರಟಾಗ ರಿಷಿಮುಖ ಪರ್ವತದಲ್ಲಿ ಸುಗ್ರೀವನ ಭೇಟಿಯಾಗುತ್ತದೆ. ಸುಗ್ರೀವ ಅಲ್ಲಿ ತನ್ನ ಮಂತ್ರಿಗಳ ಜೊತೆಗೆ ವಾಸವಾಗಿರುತ್ತಾನೆ. ಸುಗ್ರೀವನ ಸಹೋದರ ವಾಲಿ. ಕೆಲವೊಂದು ಆಂತರಿಕ ಕಾರಣದಿಂದ ಇಬ್ಬರ ನಡುವೆ ಕಲಹ ಉಂಟಾಗಿ ವಾಲಿ ಸುಗ್ರೀವನನ್ನು ಕಿಷ್ಕಿಂದದಿಂದ ಹೊರಹಾಕಿ ಆತನ ಸಂಪತ್ತನ್ನೆಲ್ಲಾ ದೋಚಿಕೊಂಡಿರುತ್ತಾನೆ. ಜೊತೆಗೆ ಆತನ ಹೆಂಡತಿಯನ್ನು ಸಹ ಸೆರೆ ಹಿಡಿಯುತ್ತಾನೆ. ಹನುಮಾನ್ ರಾಮ ಮತ್ತು ಸುಗ್ರೀವನ ನಡುವೆ ಸ್ನೇಹ ಬೆಳೆಯಲು ಕಾರಣನಾಗುತ್ತಾನೆ. ಇಬ್ಬರು ಭೇಟಿಯಾದಾಗ ಒಬ್ಬರಿಗೊಬ್ಬರು ಸಹಾಯ ಮಾಡುವುದಾಗಿ ಶಪಥ ಮಾಡುತ್ತಾರೆ. ಕೊನೆಗೆ ರಾಮ ವಾಲಿಯನ್ನು ಸಾಯಿಸಿ, ಕಿಷ್ಕಿಂಧೆಯನ್ನು ಸುಗ್ರೀವನಿಗೆ ನೀಡುತ್ತಾನೆ. ರಾಮ ಸೀತೆಯನ್ನು ಹುಡುಕುತ್ತ ಲಂಕೆಯನ್ನು ತಲುಪಿದಾಗ ಸುಗ್ರೀವ ತನ್ನ ಸಂಪೂರ್ಣ ಸೇನೆಯೊಂದಿಗೆ ರಾಮನಿಗೆ ಸಹಾಯ ನೀಡುತ್ತಾನೆ. ಈ ಎಲ್ಲಾ ದೃಶ್ಯಗಳನ್ನು ಈ ಚೌಕಟ್ಟಿನಲ್ಲಿ ನೋಡಬಹುದು.

ಸಂಪತಿಯ ಭೇಟಿ : ಈ ಚಿತ್ರದಲ್ಲಿ ಜಟಾಯುವಿನ ಸಹೋದರನಾದ ಪಂಪಾಪತಿಯು ರಾಮನಿಗೆ ಸಹಾಯ ಮಾಡುವ ದೃಶ್ಯಾವಳಿಗಳಿವೆ. ತಮ್ಮ ಹುಡುಕಾಟವನ್ನು ಮುಂದುವರೆಸಿ ರಾಮ ಲಕ್ಷ್ಮಣರು ಕಿಷ್ಕಿಂದೆಯ ವಾನರ ರಾಜನಾದ ಸುಗ್ರೀವ ಹಾಗೂ ಹನುಮಂತನನ್ನು ಭೇಟಿಯಾಗುತ್ತಾರೆ. ಹನುಮಂತ ಸುಗ್ರೀವನ ಸೈನ್ಯಕ್ಕೆ ಸೇನಾಧಿಪತಿ. ಸೀತೆ ರಾವಣನ ರಥದಿಂದ ಎಸೆದ ಆಭರಣಗಳು ವಾನರರಿಗೆ ದೊರೆತಿರುತ್ತದೆ. ರಾಮ, ಸುಗ್ರೀವರು ಸೀತೆಯನ್ನು ಹುಡುಕಲು ತಮ್ಮ ವಾನರಸೇನೆಯನ್ನು ನಾನಾ ದಿಕ್ಕಿಗೆ ಕಳಿಸಿದರು. ಅವರು ರಾವಣನಿಂದ ಹತನಾದ ಜಟಾಯುವಿನ ಸೋದರ. ಸಂಪಾತಿಯನ್ನು ಭೇಟಿಯಾಗುವವರೆಗೆ ಅವರ ಪ್ರಯತ್ನಗಳಿಗೆ ವಿಶೇಷ ಫಲ ದೊರೆಯಲಿಲ್ಲ. ಸಂಪಾತಿಯು ಅಂಗವೈಕಲ್ಯದಿಂದಾಗಿ ಹಾರಲು ಅಸಮರ್ಥನಾಗಿದ್ದನು. ಅವನು ಸೂರ್ಯನ ಅತಿ

ಸಮೀಪಕ್ಕೆ ಹಾರಿದ್ದರಿಂದ ಅವನ ರೆಕ್ಕೆಗಳು ಸುಟ್ಟು ಹೋಗಿದ್ದವು. ಬಲಶಾಲಿಯಾದ ಜಟಾಯುವು ಅವನನ್ನು ಸಾವಿನಿಂದ ರಕ್ಷಿಸಿದ್ದನು. ಇಬ್ಬರಲ್ಲಿ ಜಟಾಯು ದೇಹಬಲದಿಂದ ಗಟ್ಟಿಗನಾದರೂ ಸಂಪಾತಿಗೆ ಕಣ್ಣಿನ ಹೆಚ್ಚಿನ ದೃಷ್ಟಿಯಿದ್ದು ನೂರಾರು ಯೋಜನಗಳಷ್ಟು ದೂರ ನೋಡಬಲ್ಲವನಾಗಿದ್ದನು. ಈ ಚೌಕಟ್ಟಿನಲ್ಲಿ ಸಂಪಾತಿಯು ಆಕಾಶದ ಮೇಲೆ ಹಾರುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ.

ಸೀತೆಯನ್ನು ಹುಡುಕಲು ಹನುಮಂತನನನ್ನು ಕಳುಹಿಸುತ್ತಿರುವ ದೃಶ್ಯ : ಈ ಚೌಕಟ್ಟಿನಲ್ಲಿರುವ ದೃಶ್ಯದಲ್ಲಿ ಹನುಮಾನ್ ಸರೋವರವನ್ನು ಹಾರುತ್ತಿರುವ ದೃಶ್ಯವಿದೆ. ಸುಗ್ರೀವನು ತನ್ನ ವಾನರ ಸೈನ್ಯವನ್ನು ಅಂಗದನ ನೇತೃತ್ವದಲ್ಲಿ ದಕ್ಷಿಣಕ್ಕೆ ಕಳಿಸಿದನು. ಹನುಮಂತನು ಅಂಗದನ ಸೇನಾಪತಿಯಾಗಿ ತೆರಳಿದನು. ಅವರು ದಕ್ಷಿಣದಲ್ಲಿ ಬಹುದೂರ ಹೋದಮೇಲೆ ತಮ್ಮ ಮತ್ತು ಲಂಕಾದ್ವೀಪದ ನಡುವೆ ಮಹಾಸಾಗರವನ್ನು ಕಂಡರು. ಆ ಸಮುದ್ರವನ್ನು ದಾಟುವ ಬಗೆ ಹೇಗೆಂದು ತಿಳಿಯದಾದರು. ತನ್ನ ಸೈನಿಕರಿಗೆ ಅಲ್ಲಿಯೇ ಇರಹೇಳಿ ಹನುಮಂತನು ತನ್ನದೇಹವನ್ನು ಹಿಗ್ಗಿಸಿ ಮಹಾರೂಪ ತಾಳಿ ಅಪಾರ ಜಲರಾಶಿಯನ್ನು ಜಿಗಿದು ದಾಟಿ ತ್ರಿಕೂಟ ಪರ್ವತದ ಮೇಲೆ ಇಳಿದು ಲಂಕಾಪಟ್ಟಣದತ್ತ ನೋಡುತ್ತಿದ್ದಾನೆ. ನಗರಕ್ಕೆ ಭಾರೀ ಪಹರೆ ಇದ್ದದ್ದರಿಂದ ಬೆಕ್ಕಿನ ರೂಪತಾಳಿ ನಗರವನ್ನು ನುಸುಳಿ ನಗರವನ್ನು ವೀಕ್ಷಿಸುತ್ತಿದ್ದಾನೆ. ರಾವಣನು ತನ್ನ ಅಂತಃಪುರದಲ್ಲಿ ಸುಂದರ ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿದ್ದಾನೆ.

ಹನುಮಂತ ಮತ್ತು ಲಂಕಿಣ : ಈ ಚಿತ್ರದಲ್ಲಿ ಹನುಮಂತನು ಲಂಕಿಣಿಯನ್ನು ಕೊಲ್ಲುತ್ತಿರುವ ದೃಶ್ಯವಿದ್ದು, ಈ ಚಿತ್ರದಲ್ಲಿ ಹನುಮಂತ ಲಂಕೆಯನ್ನು ಪ್ರವೇಶಿವುದರ ಕುರಿತು ಯೋಚಿಸುತ್ತಿದ್ದಾನೆ. ಈ ಅವಧಿಯಲ್ಲಿ ಲಂಕಿಣಿಯೆಂಬ ದೇವತೆ ಹನುಮಂತನು ತಡೆದು ಒಳಗೆ ಪ್ರವೇಶ ಮಾಡದಂತೆ ತಡೆಯುತ್ತಿದ್ದಾಳೆ, ಇದರಿಮದ ಕುಪಿತನಾದ ಹನುಮಾನ್ ಅವಳನ್ನು ಸಾಯಿಸುತ್ತಿರುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ.

ರಾವಣ ಸೀತೆಯನ್ನು ಭೇಟಿಯಾಗುತ್ತಿರುವುದು : ಈ ಚತ್ರದಲ್ಲಿ ರಾವಣನು ತನ್ನ ಹತ್ತು ತಲೆಗಳನ್ನು ತೋರಿಸುತ್ತಿದ್ದಾನೆ. ಸೀತೆ ತನ್ನನ್ನು ಮದುವೆಯಾಗು ಎಂದು ಕೇಳಿಕೊಳ್ಳುತ್ತಿದ್ದಾನೆ. ಈ ಚೌಕಟ್ಟಿನಲ್ಲಿ ಸೀತೆಯನ್ನು ಸುತ್ತುವರಿದು ಕೆಲವರು ಮಹಿಳೆಯರು ನಿಂತಿದ್ದಾರೆ.

ಹನುಮಾನ್ ಸೀತೆಯನ್ನು ಭೇಟಿಯಾಗುತ್ತಿರುವ ದೃಶ್ಯ : ಆಶೋಕವನದಲ್ಲಿ ಮರದ ಕೆಳಗೆ ರಾಕ್ಷಸಿಯರಿಂದ ಸುತ್ತುವರೆಯಲ್ಪಟ್ಟು ದುಃಖದಿಂದ ಕಳೆಗುಂದಿದ ಸೌಂದರ್ಯವುಳ್ಳ ಸೀತೆಯನ್ನು ಈ ಚಿತ್ರದಲ್ಲಿ ನೋಡಬಹುದು. ಸಣ್ಣ ಕಪಿಯೊಂದರ ವೇಷ ತಾಳಿ ಹನುಮಂತನು ಮರದಿಂದ ಕೆಳಗೆ ಜಿಗಿಯುತ್ತಿದ್ದಾನೆ. ಅವಳಿಗೆ ರಾಮನ ಉಂಗುರವನ್ನು ಕೊಟ್ಟು ಅವಳಿಂದ ಒಂದು ಉಂಗುರವನ್ನು ತೆಗೆದುಕೊಳ್ಳುತ್ತಿದ್ದಾನೆ. ಅವಳನ್ನು ತನ್ನೊಡನೆ ಕೊಂಡೊಯ್ಯಲು ಸಿದ್ಧವಾಗಲು, ರಾಮನೇ ತನ್ನನ್ನು ರಕ್ಷಿಸಲು ಬರಬೇಕೆಂದು ಹೇಳಿ ತನ್ನನ್ನು ಹುಡುಕಿದ್ದಕ್ಕೆ ಸಾಕ್ಷಿಯಾಗಿ ಒಂದು ಬೆಲೆಯುಳ್ಳ ವಜ್ರವನ್ನು ರಾಮನಿಗೆ ಕೊಡುವುದ ಕ್ಕಾಗಿ ಹನುಮಂತನಿಗೆ ಕೊಡುತ್ತಿದ್ದಾಳೆ. ಅವರು

ಮಾತನಾಡುತ್ತಿರುವಾಗ ಅಲ್ಲಿ ಬಂದ ರಾವಣನು ಅವಳ ಮನವೊಲಿಸಲು ವ್ಯರ್ಥ ಪ್ರಯತ್ನ ಮಾಡಿ ಅವಳು ಇನ್ನೆರಡು ತಿಂಗಳಲ್ಲಿ ತನ್ನ ವಶವಾಗದಿದ್ದರೆ, ತನ್ನ ಬೆಳಗಿನ ಉಪಾಹಾರಕ್ಕಾಗಿ ಅವಳ ಅಂಗಾಂಗಗಳನ್ನು ತುಂಡರಿಸುವುದಾಗಿ ಬೆದರಿಸುತ್ತಿದ್ದಾನೆ.

ಹನುಮಾನ್ ಮತ್ತು ಇಂದ್ರಜಿತನ ಕಾಳಗ : ರಾವಣನ ಮಾತಿನಿಂದ ಸಿಟ್ಟಿಗೆದ್ದ ಹನುಮಂತನು ಮಾವಿನ ತೋಟವನ್ನು ಹಾಳು ಮಾಡುತ್ತಿರುವ ದೃಶ್ಯವನ್ನು ಇಲ್ಲಿ ನೋಡಬಹುದು. ಅವನನ್ನು ರಾಕ್ಷಸರು ಬಂಧಿಸಿ ರಾವಣನ ಮುಂದೆ ಕೊಂಡೊಯ್ಯುತ್ತಿದ್ದಾರೆ. ಹನುಮಂತನು ತಾನು ರಾಮನ ದೂತನೆಂದು ಹೇಳಿ, ಸೀತೆಯನ್ನು ರಾಮನಿಗೆ ಒಪ್ಪಿಸು ಎಂದು ಹೇಳುತ್ತಿದ್ದಾನೆ. ಅವನ ಮಾತುಗಳನ್ನು ಕೇಳಿ ಸಿಟ್ಟಿಗೆದ್ದ ರಾವಣನು ಅವನನ್ನು ಕೊಲ್ಲಲು ಆಜ್ಞೆ ಮಾಡುತ್ತಿದ್ದಾನೆ. ಈ ಚಿತ್ರದಲ್ಲಿ ರಾವಣನ ಮಗನಾದ ಇಂದ್ರಜಿತ್ ಮತ್ತು ಹನುಮಂತರಿಬ್ಬರು ಸೆಣಸಾಡುತ್ತಿರುವ ದೃಶ್ಯವಿದೆ.

ಲಂಕೆಗೆ ಬೆಂಕಿ : ಬಾಲಕ್ಕೆ ಬೆಂಕಿ ಹತ್ತಿದ ನಂತರ ಹನುಮಂತನು ತನ್ನ ಶರೀರವನ್ನು ಸಣ್ಣದಾಗಿ ಮಾಡಿಕೊಂಡು ಕಟ್ಟುಗಳಿಂದ ಪಾರಾಗಿ ಮನೆಗಳ ಮೇಲೆಲ್ಲ ಜಿಗಿಯುತ್ತ ಹೋಗಿ ಲಂಕೆಯಲ್ಲೆಲ್ಲ ಬೆಂಕಿಯನ್ನು ಹರಡುತ್ತಿರುವ ದೃಶ್ಯವನ್ನು ಈ ಚೌಕಟ್ಟಿನಲ್ಲಿ ನೋಡಬಹುದು.

ರಾಮಾಯಣ ಯುದ್ಧಕಾಂಡ :

ಪಟ್ಟಿಕೆ-೫, ತೊಲೆ-೧ : ಈ ಚಿತ್ರದಲ್ಲಿ ಕೆಲವು ರಾಕ್ಷಸರು ಹನುಮಂತನ ಬಾಲವನ್ನು ಹಿಡಿದಿರುವ ದೃಶ್ಯ, ಎರಡನೇ ಚಿತ್ರದಲ್ಲಿ ಹನುಮಂತನ ಬಾಲ ಬೆಳೆಯುತ್ತಿರುವ ದೃಶ್ಯ, ಮೂರನೇ ಚಿತ್ರದಲ್ಲಿ ಸೀತೆಯನ್ನು ಭೇಟಿ ಮಾಡಿ ನಿರ್ಗಮಿಸುತ್ತಿರುವ ದೃಶ್ಯ, ನಾಲ್ಕನೇ ದೃಶ್ಯದಲ್ಲಿ ನಿರ್ಗಮಿಸುತ್ತಿರುವ ದೃಶ್ಯ, ಐದನೇ ಚಿತ್ರದಲ್ಲಿ ಮಧುವನದಲ್ಲಿ ಮಂಗಗಳು ಮಧುಪಾನ ಮಾಡುತ್ತಿರುವ ದೃಶ್ಯಗಳಿರುವುದನ್ನು ಗುರುತಿಸಲಾಗಿದೆ.

ಪಟ್ಟಿಕೆ-೫, ತೊಲೆ-೨ : ಈ ಚಿತ್ರದಲ್ಲಿ ಹನುಮಂತ ಸೀತೆಯನ್ನು ಭೇಟಿ ಮಾಡಿದ ಪ್ರಸಂಗವನ್ನು ರಾಮನಿಗೆ ಹೇಳುತ್ತಿದ್ದಾನೆ. ಹನುಮಂತ, ರಾಮ ಮತ್ತು ಲಕ್ಷ್ಮಣರ ಮುಂದೆ ತಲೆ ಬಾಗಿ ನಿಂತಿದ್ದಾನೆ. ಇವನ ಹಿಂದೆ ವಾನರ ಸೈನ್ಯವಿದೆ. ನಂತರದ ಚಿತ್ರದಲ್ಲಿ ರಾಮ ವಿಭೀಷಣನನ್ನು ಬೇಟಿ ಮಾಡುತ್ತಿರುವ ದೃಶ್ಯವಿದೆ. ಇದರ ಪಕ್ಕದ ಚಿತ್ರದಲ್ಲಿ ರಾಮನು ಯುದ್ಧಕ್ಕೆ ತಯಾರಾಗುತ್ತಿರುವ ದೃಶ್ಯವಿದೆ. ಮುಂದಿನ ಚಿತ್ರದಲ್ಲಿ ರಾಮನು ಸಮುದ್ರದೇವತೆಗೆ ಪೂಜೆ ಸಲ್ಲಿಸುತ್ತಿರುವ ದೃಶ್ಯವಿದೆ. ಇವನ ಹಿಂದೆ ಅನೇಕ ಸೈನಿಕರು ನಿಂತಿದ್ದಾರೆ. ಮೂರು ದಿನಗಳ ತನಕ ಸಮುದ್ರದೇವತೆಯ ಪೂಜೆ ಮಾಡುತ್ತಾನೆ. ಇದಾದ ನಂತರವೂ ಸಮುದ್ರ ತನ್ನ ನೀರನ್ನು ಇಂಗಿಸುವುದಿಲ್ಲದರಿಂದ ಕುಪಿತನಾದ ರಾಮ ಸಮುದ್ರದ ನೀರು ಇಂಗುವಂತೆ ಶಾಪ ಹಾಕುತ್ತಿದ್ದಾನೆ. ನಂತರದ ಚಿತ್ರದಲ್ಲಿ ರಾಮನು ಬಾಣವನ್ನು ಹೂಡುತ್ತಿರುವುದನ್ನು ನೋಡಬಹುದು.

ಪಟ್ಟಿಕೆ–೫, ತೊಲೆ–೩ : ಈ ಚಿತ್ರದಲ್ಲಿ ನಾವು ನೊಡುವುದೇನೆಂದರೆ ವ್ಯರ್ಥವಾಗಿ ಮೂರು ದಿನ ಕಾದರೂ ತನ್ನನ್ನು ಅಲಕ್ಷಿಸಿದ್ದಕ್ಕಾಗಿ ಸಿಟ್ಟಿಗೆದ್ದ ರಾಮನು ತನ್ನ ಬಾಣಗಳನ್ನು ಸಮುದ್ರಕ್ಕೆ ಗುರಿಯಿಟ್ಟಿದ್ದಾನೆ. ನಂತರದ ಚಿತ್ರದಲ್ಲಿ ವರುಣನು ಪ್ರತ್ಯಕ್ಷವಾಗಿದ್ದಾನೆ. ಸಮುದ್ರದೇವತೆಯಾದ ಅವನು ಸೇತುವೆಯನ್ನು ಕಟ್ಟುವುದಾದರೆ ನೆಲದ ಮೇಲೇ ಕಟ್ಟಿದಷ್ಟು ದೃಢವಾಗಿರುವಂತೆ ಸೇತುವೆಗೆ ಅಲೆಗಳು ಅನುಕೂಲವಾಗಿರುವಂತೆ ಏರ್ಪಡಿಸುವುದಾಗಿ ಮಾತು ಕೊಡುತ್ತಿದ್ದಾನೆ.

ಪಟ್ಟಿಕೆ–೫, ತೊಲೆ–೪ : ಈ ಚೌಕಟ್ಟಿನಲ್ಲಿ ಯುದ್ಧಕೆ ಮಾಡಿಕೊಳ್ಳುತ್ತಿರುವ ಸಿದ್ದತೆಯನ್ನು ಚಿತ್ರೀಕರಿಸಲಾಗಿದೆ. ರಾಮನು ಲಂಕೆಯನ್ನು ಪ್ರವೇಶಿಸುತ್ತಿರುವ ದೃಶ್ಯ, ರಾಮನು ಬಾಣಗಳನ್ನು ನೀಡುತ್ತಿರುವ ದೃಶ್ಯ, ಮತ್ತು ಇನ್ನು ಇತರೆ ದೃಶ್ಯಗಳನ್ನು ಚಿತ್ರೀಕರಿಸಲಾಗಿದೆ.

ಪಟ್ಟಿಕೆ–೫ ಒಳಾಂಗಣ ಚಾವಣಿಯ ಚೌಕಟ್ಟು : ಈ ಚೌಕಟ್ಟಿನಲ್ಲಿ ಒಟ್ಟು ೩೨ ಚಿತ್ರಗಳಿವೆ. ಈಲ್ಲಿರುವ ಎಲ್ಲಾ ಚಿತ್ರಗಳು ರಾಮಾಯಣದ ಯುದ್ಧಕಾಂಡಕ್ಕೆ ಸಂಬಂದಿಸಿದವುಗಳಾಗಿವೆ. ಮೊದಲನೆಯ ಚಿತ್ರದಲ್ಲಿ ವಾನನರು ಮತ್ತು ರಾಕ್ಷಸರು ಹೋರಾಡುತ್ತಿರುವ ದೃಶ್ಯವಿದೆ. ಎಲ್ಲರ ಕೈಯಲ್ಲಿ ಆಯುಧಗಳಿವೆ. ಎರಡನೇ ಚಿತ್ರದಲ್ಲಿ ನಾಗಪಾಶವನ್ನು ಹಿಡಿದಿರುವ ಇಂದ್ರಜಿತನಿದ್ದಾನೆ. ಹಾಗೆಯೇ ಮತ್ತೊಮದು ಚಿತ್ರದಲ್ಲಿ ರಾವಣನ ತಮ್ಮನಾದ ಕುಂಭಕರ್ಣ ಮತ್ತು ಸುಗ್ರೀವ ಮತ್ತು ಕುಂಭಕರ್ಣನ ನಡುವೆ ನೆಡೆಯುವ ಹೋರಾಟದ ಚಿತ್ರಗಳೂ ಇವೆ. ಈ ಚೌಕಟ್ಟಿನ ಕೆಳಭಾಗದಲ್ಲಿ ರಾವಣ ತನ್ನ ತಮ್ಮಂದಿರ ಮೃತ್ಯುವಿನ ವಿಷಯ ಕೇಳಿ ಕುಪಿತನಾಗಿರುವ ದೃಶ್ಯವಿರುತ್ತದೆ.

ಪಟ್ಟಿಕೆ–೫ ಒಳಾಂಗಣ ಚೌಕಟ್ಟು, ರಾಮನ ಪಟ್ಟಾಭಿಷೇಕ : ಈ ಚೌಕಟ್ಟಿನಲ್ಲಿ ರಾಮನ ಪಟ್ಟಾಭಿಷೇಕವನ್ನು ಚಿತ್ರೀಕರಿಸುವುದನ್ನು ನೋಡಬಹುದು. ಇ ಚಿತ್ರದಲ್ಲಿ ರಾಮನ ಬಲ ಭಾಗಕ್ಕೆ ಸೀತೆ ಮತ್ತು ಎಡ ಭಾಗಕ್ಕೆ ಲಕ್ಷ್ಮಣ ನಿಂತಿದ್ದಾರೆ. ಹಾಗೆಯೇ ಇವರ ಬಲಬಾಗದ ಅಂತ್ಯದಲ್ಲಿ ಭರತ ಮತ್ತು ಶತ್ರುಜ್ಞರು ನಿಂತಿದ್ದಾರೆ.

ಪಟ್ಟಿಕೆ–೬ ರಾಮಾಯಣ ಯುದ್ಧಕಾಂಡ – ಅಂತಿಮ ಕಾಳಗ : ಈ ಚೌಕಟ್ಟಿನಲ್ಲಿ ರಾಮಾಯಣದ ಯುದ್ಧಕಾಂಡದ ಚಿತ್ರಣವಿದ್ದು, ರಾಮ ಮತ್ತು ಲಕ್ಷ್ಮಣರು ಇಂದ್ರಜಿತ ಜೊತೆ ಹೋರಾಡುತ್ತಿರುವುದನ್ನು ಗಮನಿಸಬಹುದು. ಮತ್ತೊಂದು ಚಿತ್ರದಲ್ಲಿ ಲಕ್ಷ್ಮಣನು ಕುಂಭಕರ್ಣನ ಜೊತೆ ಹೋರಾಡುತ್ತಿರುವ ಚಿತ್ರವಿದೆ. ಕೊನೆಯ ತೊಲೆಯಲ್ಲಿ ಹಲವಾರು ಬಾಣಗಳು ಆಕಾಶದಲ್ಲಿ ತೇಲಾಡುತ್ತಿವೆ ಮತ್ತು ವಾನನರು ಮತ್ತು ರಾಕ್ಷಸರು ಪರಸ್ಪರ ಯುದ್ಧ ಮಾಡುತ್ತಿದ್ದಾರೆ. ಕೊನೆಯಲ್ಲಿ ರಾಮ ಅಶೋಕವನದಲ್ಲಿ ಸೀತೆಯನ್ನು ಭೇಟಿ ಮಾಡುತ್ತಿರುವ ಸನ್ನೀವೇಶವನ್ನು ಕಾಣಬಹುದು.

ಪಟ್ಟಿಕೆ ೬ ಒಳಾಂಗಣ ಚೌಕಟ್ಟು : ಈ ಚಿತ್ರದಲ್ಲಿ ರಾಮ ಮತ್ತು ವಿಭೀಷಣರು ಪರಸ್ಪರ ಮಾತನಾಡುತ್ತಿರುವ ಚಿತ್ರಣವಿದೆ. ಇದಾದ ನಂತರದದ ಚಿತ್ರದಲ್ಲಿ ರಾಮನು ರಾವಣನ ಮಕ್ಕಳ ಜೊತೆ ಹೋರಾಡುತ್ತಿರುವ ದರಶ್ಯವನ್ನು ಚಿತ್ರಿಸಲಾಗಿದೆ. ಇದರ ಪಕ್ಕದ ಚಿತ್ರದಲ್ಲಿ ಸೀತೆಯನ್ನು

ಪಲ್ಲಕ್ಕಯಲ್ಲಿ ತರುತ್ತಿರುವ ಚಿತ್ರಣವಿದೆ. ಮೂರನೆ ಚಿತ್ರದಲ್ಲಿ ರಾಮ ಮತ್ತು ರಾವಣರು ಪರಸ್ಪರ ಯುದ್ಧ ಮಾಡುತ್ತಿರುವ ಸನ್ನಿವೇಶವೆಂದು ನೋಡುತ್ತಲೆ ಗುರುತಿಸಬಹುದು. ನಾಲ್ಕನೇ ಚಿತ್ರದಲ್ಲಿ ರಾಮನು ರಾವಣನ ಹೆಂಡತಿಯಾಗಿದ್ದ ಮಂಡೋದರಿಯನ್ನು ಸಾಂತ್ವನಗೊಳಿಸುತ್ತಿದ್ದಾನೆ. ಐದನೇ ಚಿತ್ರದಲ್ಲಿ ಲಂಕೆಯ ಜನ ರಾಮ ಮತ್ತು ಸೀತೆಯ ಸುತ್ತುವರಿದು ನಿಂತಿರುವ ದರಶ್ಯವಿದೆ. ಆರನೇ ಚಿತ್ರದಲ್ಲಿ ರಾಮ ಮತ್ತು ಸೀತೆ ಅಯೋಧ್ಯೆಗೆ ವಾಪಸ್ಸಾಗುತ್ತಿರುವ ದೃಶ್ಯವಿದೆ. ಈ ಚಿತ್ರದಲ್ಲಿ ರಾಮ, ಭರತ, ಶತ್ರುಜ್ಞ ಮತ್ತು ಲಕ್ಷ್ಮಣರು ರಥದಲ್ಲಿರುವುದನ್ನು ಕಾಣಬಹುದು. ವರ್ಣಗಳಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ ಎಲ್ಲಾ ಚಿತ್ರಗಳಿಗೂ ಕೆಂಪು, ಹಳದಿ, ಕಪ್ಪು, ಹಸಿರು ಬಿಳಿ ವರ್ಣಗಳನ್ನು ಹೆಚ್ಚು ಬಳಸಿರುವುದನ್ನು ಗುರುತಿಸಲಾಗಿದೆ.

ಪಟ್ಟಿಕೆ ೭ ನರಸಿಂಹ ಪುರಾಣ : ಈ ಪಟ್ಟಿಕೆಯಲ್ಲಿ ನರಸಿಂಹ ಮತ್ತು ಆತನ ಹೆಂಡತಿಯಾದ ಚೆಂಚುಲಾಕ್ಷ್ಮಿಯ ಮದುವೆ ಪ್ರಸಂಗವನ್ನು ಚಿತ್ರತೀಕರಿಸಲಾಗಿದೆ. ಈ ಪಟ್ಟಕಿಯಲ್ಲಿ ನಾಲ್ಕು ತೊಲೆಗಳಿದ್ದು ಪ್ರತಿ ತೊಲೆಯಲ್ಲಿ ಲಕ್ಷ್ಮಿ ನರಸಿಂಹ, ಉಗ್ರ ನರಸಿಂಹ, ಯೋಗ ನರಸಿಂಹ ಮತ್ತು ಶೇಷನ ಚಿತ್ರಗಳಿವೆ. ವಿಷ್ಣು ಪಂಥವು ಹಿಂದೂ ಧರ್ಮದ ಪ್ರಮುಖ ಶಾಖೆಗಳ ಪೈಕಿ ಒಂದು. ಅದು ಪರಮಶ್ರೇಷ್ಠ ಭಗವಂತ ವಿಷ್ಣುವಿನ ಪೂಜ್ಯ ಭಾವನೆಯ ಮೇಲೆ ಕೇಂದ್ರೀಕೃತವಾಗಿದೆ. ವೈಷ್ಣವರು, ಅಥವಾ ವಿಷ್ಣುವಿನ ಅನುಯಾಯಿಗಳು, ಭಗವಂತ ವಿಷ್ಣು ಮತ್ತು ಅವನ ದಶಾವತಾರಗಳಿಗೆ ಪ್ರಾಮುಖ್ಯ ಕೊಡುವ, ಪ್ರತ್ಯೇಕವಾಗಿಸಲ್ಪಟ್ಟ ಏಕದೇವತಾವಾದವನ್ನು ಏಕದೇವನಿಷ್ಠೆ ಪ್ರಚಾರಮಾಡುವ ಜೀವನದ ಒಂದು ದಾರಿಯಲ್ಲಿ ನಡೆಯುತ್ತಾರೆ. ವಿಷ್ಣುವನ್ನು ಅನೇಕ ವಿಭಿನ್ನ ಅವತಾರಗಳಲ್ಲಿ ಪೂಜಿಸುತ್ತಾರೆ ಇದರಲ್ಲಿ ಸಂಪ್ರದಾಯ, ಅದರ ಅವತಾರ ಸಿದ್ಧಾಂತ ಗಮನಾರ್ಹವಾಗಿದೆ. ಇವುಗಳಲ್ಲಿ, ವಿಷ್ಣುವಿನ ಹತ್ತು ಅವತಾರಗಳನ್ನು ಅಭ್ಯಸಿಸುತ್ತಿದ್ದಾರೆ. ರಾಮ, ಕೃಷ್ಣ, ವಾಸುದೇವ, ನಾರಾಯಣ, ಹರಿ, ವಿಠ್ಠಲನಿಗೆ ಕೇಶವ, ಮಾಧವ, ಗೋವಿಂದ, ಜಗನ್ನಾಥ ಮುಂತಾದವುಗಳು ಜನಪ್ರಿಯ ಹೆಸರುಗಳಾಗಿವೆ. ಈ ಪಟ್ಟಿಕೆಯಲ್ಲಿ ೪೨ ಚಿಕ್ಕ ಚಿತ್ರಗಳಿವೆ ಮತ್ತು ಎಲ್ಲಾ ಚಿತ್ರಗಳ ಕೇಂದ್ರ ನರಸಿಂಹ ಮತ್ತು ಚೆಂಚುಲಕ್ಷ್ಮಿಯ ಮದುವೆಯನ್ನು ಆಧರಿಸಿ ಚಿತ್ರೀಕರಿಸಲಾಗಿದೆ. ಮಧ್ಯದ ಚೌಕಟ್ಟಿನಲ್ಲಿ ಚಿತ್ರಿಸಿರುವ ನರಸಿಂಹನ ಚಿತ್ರದಲ್ಲಿ ದೇವರಿಗೆ ನಾಲ್ಕು ಕೈಗಳಿವೆ ಮೇಲಿನ ಎರಡು ಕೈಗಳು ಶಂಕ ಮತ್ತು ಚಕ್ರವನ್ನು ಹಿಡಿದಿದ್ದರೆ ಕೆಳಗಿನ ಕೈಗಳು ವರದ ಮುದ್ರೆ ಮತ್ತು ಲಕ್ಷ್ಮಿಯನ್ನು ಹಿಡಿದಿವೆ. ನರಸಿಂಹನ ತೊಡೆಯ ಮೇಲೆ ಲಕ್ಷ್ಮಿಯನ್ನು ಕಳ್ಳರಿಸಿಕೊಳ್ಳಲಾಗಿದೆ. ನರಸಿಂಹನ ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರು ನಿಂತಿದ್ದಾರೆ. ನರಸಿಂಹನ ಬಲಭಾಗಕ್ಕೆ ಬ್ರಹ್ಮ ಮತ್ತು ಎಡ ಭಾಗಕ್ಕೆ ಶಿವ ಮತ್ತು ಪಾರ್ವತಿಯರು ನಿಂತಿದ್ದಾರೆ.

ಪಟ್ಟಿಕೆ–೮ ವಿಷ್ಣು ಪುರಾಣ : ಮಧ್ಯದ ಪಟ್ಟಿಕೆಯಲ್ಲಿ ೨೦ ಚಿಕ್ಕ ಚೌಕಟ್ಟುಗಳಿದ್ದು ವಿಷ್ಣು ಪುರಾಣದಿಂದ ಆಯ್ದ ಕೆಲವು ಪ್ರಸಂಗಳಿವೆ. ಪಕ್ಕದ ತೊಲೆಯಲ್ಲಿ ಚಿತ್ರೀಕರಿಸಿರುವ ದೃಶ್ಯಗಳು ಸಾಮಾಜಿಕ ಚಿತ್ರಗಳಾಗಿದ್ದು ಪುರಾಣದ ಕತೆಗಳಿಗಿಂತ ಭಿನ್ನವಾಗಿವೆ.

ಪಟ್ಟಿಕೆ–೮, ತೊಲೆ–೧ : ಇಲ್ಲಿರುವ ನಾಲ್ಕು ತೊಲೆಗಳಲ್ಲಿ ಮಹಿಳೆಯರು ಮತ್ತು ಪುರುಷರು ಯಾರನ್ನೊ ಭೇಟಿ ಮಾಡಲು ಸಿದ್ದತೆ ಮಾಡಿಕೊಂಡಿರುವುದನ್ನು ಹೇಳುತ್ತದೆ. ಮೊದಲನೆಯ ತೊಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳಿದ್ದಾರೆ. ಇವರು ಯಾರನ್ನೋ ನಿರೀಕ್ಷಿಸುತ್ತಿರುವಂತಿದೆ. ಮಕ್ಕಳು ತಮ್ಮ ತಾಯಂದಿರನ್ನು ಸತಾಯಿಸುತ್ತಿದ್ದರೆ, ತಾಯಂದಿರು ಅವರನ್ನು ಸಮಾಧಾನ ಪಡಿಸುತ್ತಿದ್ದಾರೆ. ಇಲ್ಲಿ ಕಲವು ಮಹಿಳೆಯರು ತಮ್ಮ ತಲೆಯ ಮೇಲ ಸೆರಗು ಹಾಕಿಕೊಂಡಿದ್ದಾರೆ. ಇವರು ಬಹುಷಃ ವಿಧವೆಯರಾಗಿದ್ದು, ನಿರೀಕ್ಷಿಸುತ್ತಿರುವ ವ್ಯಕ್ತಿಯಿಂದ ಆಶೀರ್ವಾದ ಪಡೆಯಬೇಕೆಂದು ನಿಂತಿರುವಂತಿದೆ.

ಪಟ್ಟಿಕೆ–೮, ತೊಲೆ–೨ : ಈ ಚಿತ್ರದಲ್ಲಿ ಮುನಿಯೊಬ್ಬರು ತಪಸ್ಸಿಗೆ ಕುಳಿತಿದ್ದಾರೆ. ಬಹುಷಃ ಇವರು ಸೀಬಿ ಋಷಿಯಿರಬಹುದೆಂದು ಅಂದಾಜಿಸಲಾಗಿದೆ. ಇವರ ಮೈಮೇಲೆ ಇರುವೆಗಳು ಹತ್ತಿವೆ ಆದರೆ ಇದರ ಪರಿವೆಯಲ್ಲದೆ ಮುನಿಗಳು ತಪಸ್ಸಿಗೆ ಕುಳಿತಿದ್ದಾರೆ. ಇವರ ಪಕ್ಕದಲ್ಲಿರುವ ಮುನಿಯೊಬ್ಬರು ಬ್ರಾಹ್ಮಣ ಮಹಿಳೆಯರಿಗೆ ಆಶೀರ್ವಾದ ನಿಡುತ್ತಿರುವುದನ್ನು ನೋಡಬಹುದು. ಇದರ ಹಿಂಭಾಗದಲ್ಲಿ ಶಿವಾಲಯವನ್ನು ನೋಡಬಹುದು.

ಪಟ್ಟಿಕೆ–೮, ತೊಲೆ–೩ ಮತ್ತು ೪ : ಮೇಲೆ ತಿಳಿಸಿದ ಚಿತ್ರವನ್ನೇ ಇಲ್ಲಿಯೂ ಚಿತ್ರಿಸಲಾಗಿದೆ. ಬ್ರಾಹ್ಮಣ ಮಹಿಳೆಯರು ಯಾರದೋ ಪ್ರತೀಕ್ಷೆಯಲ್ಲಿದ್ದಾರೆ. ಚಿತ್ರದ ಮತ್ತೊಂದು ಬಾಗದಲ್ಲಿ ಪುರುಷರು ಸ್ವಚ್ಚ ಬಟ್ಟೆಗಳನ್ನು ತೊಟ್ಟು ಕೈಯಲ್ಲಿ ಹೂವು ಹಿಡಿದು ನಿಂತಿದ್ದಾರೆ. ಇವರಲ್ಲಿ ಕೆಲವರು ರಾಜರಂತೆ ಕಾಣುತ್ತಿದ್ದಾರೆ. ಇನ್ನು ಕೆಲವರು ಇಸ್ಲಾಮಿಕ್ ಶೈಲಿಯಲ್ಲಿ ಬಟ್ಟೆ ಧರಿಸಿದ್ದಾರೆ.

ಪಟ್ಟಿಕೆ–೮, ಒಳಾಂಗಣ ಚೌಕಟ್ಟು ಮಧ್ಯದ ಚೌಕಟ್ಟು : ಇಲ್ಲಿ ಬೃಹದಾಕಾರದ ವಿಶ್ವರೂಪವಿದೆ. ವಿಷ್ಣು ತನ್ನ ನಾಲ್ಕು ಕೈಗಳನ್ನು ಎತ್ತಿದ್ದಾನೆ. ಮೇಲಿನ ಎರಡು ಕೈಗಳಲ್ಲಿ ಶಂಕ ಮತ್ತು ಚಕ್ರವಿದ್ದರೆ ಕೆಳಗಿನ ಕೈಗಳಲ್ಲಿ ವರದ ಮುದ್ರೆ ಮತ್ತು ಅಭಯ ಮುದ್ರೆಗಳಿವೆ. ವಿಷ್ಣುವಿನ ನಾಭಿಯಲ್ಲಿ ಹಾವಿನ ಚಿತ್ರವಿದೆ. ವಿಷ್ಣುವಿನ ಎಡ ಮತ್ತು ಬಲ ಭಾಗದಲ್ಲಿ ನಾರದ ಮತ್ತು ತುಂಬುರು ದೇವರಿದ್ದಾರೆ. ಈ ಚಿತ್ರದ ಪಕ್ಕದಲ್ಲಿ ವಿಷ್ಣು, ಮೋಹಿನಿ, ಶ್ರೀನಿವಾಸ, ನಾರಾಯಣ, ಪಾಂಡುರಂಗ, ವರಾಹಸ್ವಾಮಿ, ಕೃಷ್ಣ, ತ್ರಿವಿಕ್ರಮ, ಗಜೇಂದ್ರ ಮೋಕ್ಷ, ಬಲರಾಮ, ಇನ್ನು ಮುಂತಾದವರ ಚಿತ್ರಗಳಿವೆ.

ಪಟ್ಟಿಕೆ–೯ ಶಿವ ಪುರಾಣ : ಈ ಚಿತ್ರದಲ್ಲಿ ಅಂಧಕಾಸುರನ ಮಕ್ಕಳು ಕಟ್ಟಿದ್ದ ಕಬ್ಬಿಣ, ಬೆಳ್ಳಿ ಮತ್ತು ಚಿನ್ನದ ಅರಮನೆಗಳನ್ನು ಶಿವನು ದ್ವಂಸ ಮಾಡುತ್ತಿರುವ ಚಿತ್ರಣಗಳಿವೆ. ಈ ಚಿತ್ರವು ಹರದನಹಳ್ಳಿಯಲ್ಲಿ ಬಿಡಿಸಿರುವ ಚಿತ್ರವನ್ನು ಹೋಲುತ್ತದೆ.

ಪಟ್ಟಿಕೆ–೯, ತೊಲೆ–೨ : ಈ ತೊಲೆಯ ಮೇಳೆ ಗಿರಿಜ ಕಲ್ಯಾಣದ ದೃಶ್ಯಗಳನ್ನು ಚಿತ್ರಿಸಲಾಗಿದೆ. ಶಿವ ಮತ್ತು ಪಾರ್ವತಿಯ ಮದುವೆಗೆ ದೇವಾನುದೇವತೆಗಳು ಆಗಮಿಸಿದ್ದಾರೆ. ಪಾರ್ವತಿಯು ಎಲ್ಲರಿಗೂ ಮಧ್ಯ ಭಾಗದಲ್ಲಿದ್ದಾಳೆ.

ಪಟ್ಟಿಕೆ–೯, ತೊಲೆ–೩ : ಈ ತೊಲೆಯಲ್ಲಿರುವ ಚಿತ್ರವು ಅಸ್ಪಷ್ಟವಾಗಿದೆ ಮತ್ತು ಇದರ ಕಥಾವಸ್ತು ತಿಳಿಯುವುದಿಲ್ಲ. ಒಂದು ದೊಡ್ಡ ಪರ್ವತದ ಮೇಲೆ ಮುನಿಗಳು ತಪಸ್ಸಿಗೆ ಕುಳಿತಿರುವುದನ್ನು ನೋಡಬಹುದು. ಮುನಿಗಳ ಮಧ್ಯೆ ಶಿವ ಕುಳಿತಿದ್ದಾನೆ ಮತ್ತು ಪಾರ್ವತಿ ತನ್ನ ಕೈಯಲ್ಲಿ ಹೂಮಾಲೆ ಹಿಡಿದು ಶಿವನ ಮುಂದೆ ನಿಂತಿದ್ದಾಳೆ. ಚಿತ್ರದ ಮೂಲೆಯಲ್ಲಿ ಅರ್ಜುನ ಒಂಟಿ ಕಾಲಿನ ಮೇಲೆ ನಿಂತಿದ್ದಾನೆ. ಉಳಿದ ಚಿತ್ರಗಳು ಅಸ್ಪಷ್ಟವಾಗಿವೆ. ಇಲ್ಲಿರುವ ಚಿತ್ರಗಳು ಕಿರಾತರ್ಜುನೀಯದ ಪ್ರಸಂಗಗಳನ್ನು ಹೋಲುತ್ತವೆ.

ಪಟ್ಟಿಕೆ ೯ ತೊಲೆ ೪ ಈ ತೊಲೆಯ ಮೇಲಿರುವ ಯುದ್ದದ ಚಿತ್ರಣವು ಮಾಸಿ ಹೋಗಿರುವುದರಿಂದ ಅಸ್ಪಷ್ಟವಾಗಿದೆ.

ಪಟ್ಟಿಕೆ–೯ ಒಳಾಂಗಣ ಚೌಕಟ್ಟು : ಈ ತೊಲೆಯಲ್ಲಿರುವ ಮಧ್ಯದ ಪಟ್ಟಿಕೆಯಲ್ಲಿ ಹಲವಾರು ಚಿತ್ರದ ಚೌಕಟ್ಟುಗಳಿವೆ. ಎಲ್ಲಾ ಚಿತ್ರಗಳು ಶಿವನನ್ನು ಕೇಂದ್ರಿತವಾಗಿವೆ. ಮಧ್ಯದಲ್ಲಿ ಉಮಾ ಮಹೇಶ್ವರನ ಚಿತ್ರವಿದೆ. ಇದರಲ್ಲಿ ಶಿವ ಸಿಂಹಾಸನದ ಮೇಲೆ ಕುಳಿತಿದ್ದು ಎಡ ಭಾಗದಲ್ಲಿ ಉಮ ಮತ್ತು ಬಲ ಭಾಗದಲ್ಲಿ ಗಂಗ ಇದ್ದಾರೆ. ಶಿವನಿಗೆ ನಾಲ್ಕು ಕೈಗಳಿದ್ದು, ಮೇಲಿನ ಕೈಗಳಲ್ಲಿ ಡಮರುಗವಿದ್ದರೆ, ಎಳಗಿನ ಕೈಗಳಲ್ಲಿ ಅಭಯ ಮುದ್ರೆ ಇದೆ. ಈ ಚಿತ್ರದಲ್ಲಿ ಮೂರು ಗೋಪುರಗಳಿದ್ದು ಎಡ ಭಾಗದಲ್ಲಿರುವ ಗೋಪುರದಲ್ಲಿ ಗಣೇಶನಿದ್ದಾನೆ. ಇದರ ಕೆಳಗಿನ ಚಿತ್ರಗಳಲ್ಲಿ ಸಂಗೀತಗಾರರು ಮತತು ನೃತ್ಯಗಾರರು ಇದ್ದಾರೆ. ಮಧ್ಯದ ಪಟ್ಟಿಕೆಯಲ್ಲಿ ಹಲವಾರು ಚಿಕ್ಕ ಚಿಕ್ಕ ಚಿತ್ರಗಳಿವೆ. ಮೊದಲನೆಯದು ಯೋಗಾಸನಮೂರ್ತಿ, ಕಿರಾತಾರ್ಜುನೀಯ ಮೂರ್ತಿ, ನರಾಜ, ನಂದೀಶ್ವರ, ಗಜಾಸುರ, ವೇದಮೂರ್ತಿ, ಚಂಡೇಶ್ವರ, ಶರಭೇಶಮೂರ್ತಿ, ರಾವಣೇಶ್ವರ, ನೀಲಕಂಠ, ಶಿವ, ಪಾರ್ವತಿ, ಶಣ್ಮುಖ ಮತ್ತು ದಕ್ಷಿಣಾಮೂರ್ತಿಗಳಿದ್ದಾರೆ. ಈ ಎಲ್ಲಾ ಚಿತ್ರಗಳು ಮುಖಮಂಟಪದ ಮೇಲ್ಭಾಗದಲ್ಲಿವೆ. ಪ್ರವೇಶದ್ವಾರದಲ್ಲಿ ದೊಡ್ಡ ತೊಲೆಯಿದ್ದು ವಿಷ್ಣುವಿನ ರೂಪವಾದ ಅನಂತಶಯನನ ಚಿತ್ರವಿದೆ. ವಿಷ್ಣು ವಿರಾಮಿಸುತ್ತಿದ್ದಾನೆ. ಇವನ ಬಲಗೈ ತಲೆಯ ಕೆಳಗಿದ್ದರೆ ಎಡಗೈ ತೊಡೆಯ ಮೇಲಿದೆ. ಅವನ ತಲೆಯ ಬಳಿ ನಾರದ, ಶ್ರೀದೇವಿ ಮತ್ತು ಭೂದೇವಿಯರಿದ್ದಾರೆ. ಈ ತೊಲೆಯಲ್ಲಿ ಹಲವಾರು ಹೂವುಗಳ ಚಿತ್ರಗಳಿವೆ.

ಐತಿಹಾಸಿಕ ಚಿತ್ರಗಳು :

ಮಹಾದ್ವಾರದ ಮೇಲೆ ಕೆಲವು ಐತಿಹಾಸಿಕ ಚಿತ್ರಗಳನ್ನು ಬಿಡಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಮಹಾದ್ವಾರದ ಪುನರುಜ್ಜೀವನ ಕಾರ್ಯ ನೆಡೆದಿರುವುದರಿಂದ ಕೆಲವು ಚಿತ್ರಗಳು ಮಾಸಿಹೋಗಿವೆ. ಈ ಪಟ್ಟಿಕೆಯಲ್ಲಿ ಮೂರು ಪಂಕ್ತಿಗಳಿವೆ. ಮೊದಲನೆಯದು ಪ್ರಾಯಶಃ ಕೃಷ್ಣಲೀಲೆಗೆ ಸಂಬಂದಿಸಿದೆ. ಎರಡನೆಯದು ಕಾರ್ಣಿಕ ನಲ್ಲಪ್ಪನವರು ಕೃಷ್ಣರಾಜ ಒಡೆಯರ್‌ರವರ ಆಸ್ಥಾನದಲ್ಲಿ ಕುಳಿತಿರುವ ಚಿತ್ರವಿದೆ. ಈ ಚಿತ್ರದಲ್ಲಿ ಮೈಸೂರು ಒಡೆಯರ್ ರವರು ಅತಿ ಚಿಕ್ಕ ವಯಸ್ಸಿನಲ್ಲಿದ್ದಾರೆ. ಕಟ್ಟಿಗೆಯ ಆಸನದ ಮೇಲೆ ಕುಳಿತಿರುವ ಇವರ ಕೈಯಲ್ಲಿ ಹೂ ಇದೆ. ಇವರ ಹಿಂದೆ ಇಬ್ಬರು ಸೇವಕರು

ನಿಂತಿದ್ದಾರೆ. ನಲ್ಲಪ್ಪನವರು ರಾಜನ ಜೊತೆ ಮಾತನಾಡುವ ಭಂಗಿಯಲ್ಲಿ ಕುಳಿತಿದ್ದಾರೆ. ಮೂರನೆಯದು ಹೈದರ್ ಅಲಿಯ ಆಸ್ಥಾನದ ಚಿತ್ರಣವಿದೆ. ಹೈದರ್ ಅಲಿಯ ಬಲಭಾಗಕ್ಕೆ ಕಚೇರಿ ಕೃಷ್ಣಪ್ಪನವರಿದ್ದಾರೆ. ಇವರ ಪಕ್ಕದಲ್ಲಿ ಸುಬೇದಾರ್‌ಗಳಾದ ರೇವಣಪ್ಪ, ವೆಂಕಟಪ್ಪ ಇದ್ದಾರೆ.

ಶ್ರೀಲಕ್ಷ್ಮೀ ದೇವಾಲಯ, ಅಮೃತೂರು :

ಕುಣಿಗಲ್ ತಾಲ್ಲೂಕಿನ ಒಂದು ಹೋಬಳಿಯಾಗಿರುವ ಅಮೃತೂರು ತಾಲ್ಲೂಕು ಕೇಂದ್ರದಿಂದ ಸುಮಾರು ೨೦ ಕಿ.ಮೀ. ದೂರವಿದ್ದು, ಸುತ್ತ-ಮುತ್ತಲ ಹಳ್ಳಿಗಳಿಗೆ ಕೇಂದ್ರ ಬಿಂದುವಾಗಿದೆ. ಈ ಊರು ಹಿಂದೊಮ್ಮೆ ರಾಜಾಡಳಿತವಧಿಯಲ್ಲಿ ಕೇಂದ್ರಾಡಳಿತವಾಗಿತ್ತು. ಪ್ರಾಚೀನ ಯುಗದಿಂದ ರಾಜಾಡಳಿತದ ಕಾಲದವರೆಗೆ ಜಿಲ್ಲೆಯ ಮುಖ್ಯ ಕೇಂದ್ರ ಸ್ಥಳವಾಗಿ ಬೆಳೆದು ಬಂದಿದ್ದು, ಇದರ ಇತಿಹಾಸವುಳ್ಳ ಬರಹದ ಶಾಸನಗಳು ಸಿಕ್ಕಿರುವುದು ವಿಶೇಷಗಳಲ್ಲೊಂದು. ಅಮೃತೂರಿನಿಂದ ಒಂದುವರೇ ಕಿ.ಮೀ ದೂರವಿರುವ ಹೊಸಹಳ್ಳಿ ಎಂಬ ಪುಟ್ಟಗ್ರಾಮದಲ್ಲಿ ಶ್ರೀಪಟಲದಮ್ಮ ಮತ್ತು ಶ್ರೀಲಕ್ಷ್ಮೀದೇವಿಯ ದೇವಾಲಯವಿದೆ. ಈ ದೇವಾಲಯ ಹೊರನೋಟಕ್ಕೆ ತುಂಬ ಸರಳ, ಸಾಧಾರಣ ದೇವಾಲಯವೆನಿಸಿದರೂ ಇದರಲ್ಲಿ ೧೯ನೆಯ ಶತಮಾನದ ಅಂತ್ಯದಲ್ಲಿ ರಚನೆಗೊಂಡ ಭಿತ್ತಿ ಚಿತ್ರಗಳನ್ನು ಕಾಣಬಹುದು. ದೇವಾಲಯವು ಪಡಸಾಲೆ, ವಿಶಾಲವಾದ ಗರ್ಭಗುಡಿ ಅದರ ಸುತ್ತಲೂ ಗೋಡೆಯಿದ್ದು, ಈ ದ್ವಾರದ ಎದುರು ಗೋಡೆಯಲ್ಲಿ ಮತ್ತು ಮೆಲ್ಚಾವಣಿಯ ತೋಲೆಗಳಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಕಾಣಬಹುದು. ಇಲ್ಲಿಯು ಕೂಡ ವಿಜಯನಗರ ಭಿತ್ತಿ ಚಿತ್ರಗಳಿಗೆ ಹೊಂದಿಕೊಂಡಿರುವಂತಿದ್ದು, ಶ್ರೀರಾಮ ಬಿಲ್ಲು, ಬಾಣವನ್ನಿಡಿದುಕೊಂಡಿರುವ ದೃಶ್ಯ ಸ್ಪಷ್ಟವಾಗಿದೆ. ಹಾಗೆಯೇ ದೇವತೆಯರ ಬಲಭಾಗದಲ್ಲಿ ಆಂಜನೇಯನ ಚಿತ್ರವನ್ನು ಕಾಣಬಹುದು.

ಭಿತ್ತಿ ಚಿತ್ರಗಳ ವಸ್ತವಿಷಯ :

ನೂರಕ್ಕಿಂತ ಅಧಿಕ ವರ್ಷಗಳ ಇತಿಹಾಸವಿರುವ ಈ ದೇವಾಲಯದಲ್ಲಿ ಎರಡು ದೇವತೆಗಳಿದ್ದು, ಒಂದು ಲಕ್ಷ್ಮಿ ಮತ್ತೊಂದು ಪಟಲದಮ್ಮನನ್ನು ಕಾಣಬಹುದು. ಲಕ್ಷ್ಮಿಗೆ ಹೂವಿನ ಅಭಿಷೇಕವಾದರೆ ಪಟಲದಮ್ಮನಿಗೆ ರಕ್ತದಿಂದಲೇ ಶಾಂತಿ ಮಾಡಬೇಕು. ಒಬ್ಬರು ಸಸ್ಯಹಾರಿಯಾದರೆ ಮತ್ತೊಬ್ಬರು ಮಾಂಸಹಾರಿ, ಪ್ರತಿ ಅಮವಾಸೆ ಮತ್ತು ಹುಣ್ಣಿಮೆಗೆ ಪೂಜೆ, ಪುರಸ್ಕಾರಗಳು ನಡೆಯುತ್ತಲೇ ಇರುತ್ತವೆ. ಇಂತಹ ಐತಿಹಾಸಿಕತೆವುಳ್ಳ ದೇವಾಲಯದ ಗರ್ಭಗುಡಿಯಲ್ಲಿ ಸಾಕಷ್ಟು ಭಿತ್ತಿ ಚಿತ್ರಗಳಿದ್ದವು ಎಂಬುದಕ್ಕೆ ಕೆಲವೇ ಕೆಲವು ಇಲ್ಲಿರುವ ಭಿತ್ತಿಚಿತ್ರಗಳನ್ನು ಗಮನಿಸಿದರೆ ಬಹು ನಮಗೆ ತಿಳಿಯುತ್ತದೆ. ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳನ್ನು ಇಲ್ಲಿ ಕಾಣಬಹುದು. ರಾಮ, ರಾವಣ, ಲಕ್ಷ್ಮಣ, ಸೀತೆಗಳನ್ನೊಳಗೊಂಡಂತೆ ಹನುಮಂತ, ಸೈನಿಕರು, ಸಾರ್ವಜನಿಕ ಚಿತ್ರಗಳು ಸಹ ಇದ್ದವು ಎಂಬುದು ಇಲ್ಲಿನ ಅರ್ಚಕ ಆಂಜನೇಯ ರವರ ಮಾತು ಅದೇ ರೀತಿ ಇಲ್ಲಿ ಪ್ರಸ್ತುತ ಉಳಿದಿರುವ ಕೆಲವೇ ಕೆಲವು ಚಿತ್ರಗಳ ಕುರಿತು ಈ ಕೆಳಗೆ ವಿವರಿಸಲ್ಪಟ್ಟಿವೆ.

ಚಿತ್ರ–೧ : ಗೋಡೆ ಮೇಲೆ ರಚಿತವಾಗಿರುವ ಈ ಚಿತ್ರವೂ ಸಾಮಾಜಿಕ ಘಟನೆಯನ್ನೊಂದಿದೆ. ಕಾಡಿನ ದೃಶ್ಯದಂತೆ ಗೋಚರಿತವಾಗಿದ್ದು, ಗಿಡ, ಮರ, ಬಳ್ಳಿಯನ್ನೊಳಗೊಂಡಂತೆ ಮನುಷ್ಯರಿರುವುದನ್ನು ಕಾಣಬಹುದಾಗಿದೆ. ಅಕ್ರಾಲಿಕ್ ಮತ್ತು ತೈಲವರ್ಣದಂತೆ ಗೋಚರಿಸಿದರೂ ಇದು ನೈಜ ಬಣ್ಣಗಳಿಂದ ತಯಾರಾದ ಚಿತ್ರವಾಗಿದ್ದು, ಗೋಡೆ (ಭಿತ್ತಿ) ಸಿದ್ಧತೆಯ ಮೇಲೆ ಬಣ್ಣಗಳು ಉಳಿದಿರುವ ಪರಿಯಾಗಿದೆ. ಕುದುರೆಯನ್ನು, ಒಬ್ಬ ವ್ಯಕ್ತಿ ಅದರ ಮೇಲೆ ಭಾರವನ್ನು ಏರಲು ಪ್ರಯತ್ನಿಸುತ್ತಿದ್ದಾನೆ. ಮತ್ತೊಂದೆಡೆ ಹೆಂಗಸು ಆ ಕುದುರೆಯ ಎದುರಿಗೆ ಬರುತ್ತಿರುವಂತೆ ಭಾಸವಾಗುತ್ತಿದೆ. ಒಂದು ರೀತಿಯಲ್ಲಿ ಯುಗಾದಿಯಾದಿಯಲ್ಲಿರುವ ನಿಸರ್ಗವನ್ನು ನಾವಿಲ್ಲಿ ಕಾಣಬಹುದು. ಕೆಂಪು, ಹಳದಿ, ಆರೆಂಜ್, ನೀಲಿ, ಕಪ್ಪು, ಹಸಿರು ವರ್ಣಗಳನ್ನಿಲ್ಲಿ ಹೆಚ್ಚು ಕಾಣಬಹುದು. ನೈಜವೂ ಇಲ್ಲಿ ಮಾರ್ಡನ್ ಇಲ್ಲ. ಸಾಂಪ್ರದಾಯಿಕ ಶೈಲಿಯಲ್ಲಿ ಇಲ್ಲದಂತೆ ಚಿತ್ರ ಕಾಣುತ್ತಿದೆ. ಆದರೂ ಶತಮಾನಗಳನ್ನು ಕಾಯ್ದಿರುವ ಚಿತ್ರವಾಗಿರುವುದರಿಂದ ಉತ್ತಮ ಚಿತ್ರವೆಂದೇ ಹೇಳಬಹುದು.

ಚಿತ್ರ–೨ : ಇಲ್ಲಿ ಎರಡು ಪಟ್ಟಿಗಳಿದ್ದು, ಸ್ತ್ರೀಯರು ಬಿಂದಿಗೆಯನ್ನು ಹೊತ್ತು ಸಾಗುತ್ತಿರುವುದನ್ನು ಕಾಣಬಹುದು. ಸಮೃದ್ಧಿಯಾದ ಸಾಲುಗಟ್ಟಿ ಸಾಗುತ್ತಿರುವಂತೆ ಭಾಸವಾಗುವ ದೃಶ್ಯ ಇದಾಗಿದ್ದು, ರಾಮಾಯಣದಲ್ಲಿನ ಸಾಮಾಜಿಕ ಸನ್ನಿವೇಶವಾಗಿರುತ್ತದೆ. ಇದರ ಹಿಂಭಾಗದಲ್ಲಿ ಅರ್ಧಂಬರ್ಧ ರಾವಣ ಚಿತ್ರ ಕಂಡುಬಂದಿದ್ದು, ಅದನ್ನು ಪರಿಗಣಿಸಿದಾಗ ಇದೊಂದು ರಾಮಾಯಣದ ದೃಶ್ಯವೆಂದು ಹೇಳಲಾಗಿರುತ್ತದೆ. ಅಷ್ಟೇ ಅಲ್ಲದೇ ಈ ದೇವಾಲಯದಲ್ಲಿ ವಿವಿಧ ಆಯಾಮದ ದುಂಡನೆಯೇ ಶಿಲ್ಪಗಳನ್ನು ಕಾಣಬಹುದು. ಈ ಚಿತ್ರದಲ್ಲಿ ವಿಶೇಷವಾಗಿ ಸೀರೆಯನ್ನುಟ್ಟ ಮಹಿಳೆಯರು ಸೌಂದರ್ಯವತಿಯರಾಗಿದ್ದಾರೆ. ನೀಲಿ, ಕೆಂಪು, ಹಸಿರು ಮತ್ತು ಕಪ್ಪು ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಶಂಕರೇಶ್ವರ ದೇವಾಲಯ, ಕೆರಗೋಡಿ :

ಕೆರೆಗೋಡಿ ಕ್ಷೇತ್ರ ತಿಪಟೂರು ತಾಲ್ಲೂಕಿನಲ್ಲಿದ್ದು, ಇದಕ್ಕೆ ೪೦೦ ವರ್ಷಗಳ ಇತಿಹಾಸವಿದೆ. ತಿಪಟೂರಿನಿಂದ ಸುಮಾರು ಮೂರು ಕಿ.ಮೀ ಅಂತರದಲ್ಲಿರಿವ ಶ್ರೀ ಕಂಠೇಶ್ವರ ಮತ್ತು ಶ್ರೀ ರಂಗನಾಥ ದೇವಾಲಯಗಳು ತನ್ನದೇಯಾದ ಐತಿಹಾಸಿಕತೆಯನ್ನು ಹೊತ್ತುಕೊಂಡಿರುವಂತೆ ಬಿಂಬಿಸುತ್ತಿರುವುದನ್ನು ಇಂದಿಗೂ ಅಲ್ಲಿನ ವಿಶಿಷ್ಟ ಆಚರಣೆ ಹಾಗು ವಾರದ ದಿನದಂದು ನೆಡೆಯುವ ಪೂಜೆ, ಪುರಸ್ಕಾರಗಳು ಸಾಕ್ಷಿಯಾಗಿವೆ. ಇವು ಶೈವ ಮತ್ತು ವೈಷ್ಣವ ಧರ್ಮದ ಅನುಯಾಯಿಯಾಗಿರುವಂತೆ ಕಾಣುವಲ್ಲಿ ಪ್ರಮುಖ ಪಾತ್ರವಹಿಸಿರುವ ಭಿತ್ತಿಚಿತ್ರಗಳು ಸಾಮರಸ್ಯದ ದ್ಯೋತಕವಾಗಿವೆ.

ಕೆರೆಗೋಡಿಯ ದ್ವಾರಬಾಗಿಲ ಬಳಿ ನಿಂತಿರುವ ದೇವಾಸ್ಥಾನದಲ್ಲಿ ಉಪ್ಪರಿಗೆ ಮಂಚ, ಪ್ರತ್ಯೇಕ ದ್ವಾರ, ಎರಡುವರೆ ಅಡಿ ಎತ್ತರದ ಜಗುಲಿಯ ಪಡಸಾಲೆಯಿದೆ. ಛಾವಣಿಯಲ್ಲಿ ಮೂರು

ಅಂಕಣಗಳ ವಿಭಜನೆಯಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ. ದೇವಾಲಯದ ಎಡಭಾಗದಲ್ಲಿರುವ ಭಿತ್ತಿ ಚಿತ್ರಗಳು ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳಾಗಿದ್ದು, ಒಂದೊಂದು ಚೌಕುಗಳಲ್ಲೂ ಒಂದೊಂದು ಸನ್ನಿವೇಶದ ಚಿತ್ರಗಳಿವೆ. ಇಲ್ಲಿ ವಿಶೇಷವೇನೆಂದರೆ ಒಂದೊಂದು ದೃಶ್ಯದ ಸಂಧರ್ಭವನ್ನು ಅದರ ಮುಂದೆ ಅಕ್ಷರಗಳಲ್ಲಿ ಬರೆದಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಇಲ್ಲಿ ಮುಖ್ಯವಾಗಿ ವಿಷ್ಣುವಿನ ದಶಾವತಾರದ ದೃಶ್ಯಗಳಿದ್ದು, ಇವುಗಳಲ್ಲಿ ಬುದ್ದ ಮತ್ತು ಬಲರಾಮನ ಭಾವಚಿತ್ರವನ್ನು ಕಾಣಬಹುದಾಗಿದೆ. ಇನ್ನೂ ಎರಡನೇ ಅಂಕಣದಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಶಿವನ ಅವತಾರವುಳ್ಳ ಭಿತ್ತಿಚಿತ್ರಗಳನ್ನು ಕಾಣಬಹುದು. ವಿಶೇಷವೆಂದರೆ ಈ ರೀತಿಯ ಚಿತ್ರಗಳನ್ನು ಸಿಭಿ, ಹಂಪಿ, ಚಿದಂಬರಂ ಮತ್ತು ಲೇಪಾಕ್ಷಿಗಳಲ್ಲಿ ಮಾತ್ರ ಕಾಣಬಹುದಾಗಿದೆ.

ಮೂರನೇ ಅಂಕಣದಲ್ಲಿ ಯುದ್ದದ ಸನ್ನಿವೇಶದಂತೆ ಗೋಚರಿಸುತ್ತಿದ್ದು, ಸಂಯೋಜನೆ ಸಂಪೂರ್ಣವಾಗಿದ್ದಂತೆ ಕಂಡರೂ ಪರಿಪೂರ್ಣವಾಗಿ ಕಾಣಲಾರದ ಸ್ಥಿತಿಯಲ್ಲಿವೆ. ಇನ್ನೂ ರೇಖೆಗಳು ತನ್ನ ಮೌಲ್ಯವನ್ನು ಕಾಪಾಡಿಕೊಂಡಂತೆ ತನ್ನ ಲಲನೆಯಲ್ಲಿ ಗಟ್ಟಿಯನ್ನು ಗೊಳಿಸಿಕೊಂಡಿರುವುದು ಸ್ಪಷ್ಟವಾಗಿ ಕಾಣಬಹುದಾಗಿದೆ. ಬಣ್ಣಗಳ ಪಾತ್ರ ಪ್ರಮುಖವಾಗಿದ್ದರ ಹಿಂದೆ ಅವುಗಳಲ್ಲಿರುವ ಸೌಂದರ್ಯವೇ ಸಾಕ್ಷಿಯಾಗಿದೆ. ಇನ್ನೊಂದು ಅಂಕಣದಲ್ಲಿ ತ್ರಿಪುರ ಸಂಹಾರವಿರುವ ಚಿತ್ರವಿದ್ದು, ಯುದ್ದದ ಸನ್ನಿವೇಶದಲ್ಲಿ ಭೂಮಿ ಒಡೆದು ರಕ್ತ ಆಕಾಶದಂಚಿನವರೆಗೂ ಸಾಗಿದಂತೆ ಬ್ರಾಸವಾಗುವ ರೀತಿಯಲ್ಲಿದ್ದು, ನೋಡುಗನ ಮನಸ್ಸಲ್ಲಿ ಆತ್ಮಸ್ಥೈರ್ಯತೆ ಕುಸಿಯುವಂತೆ ಕಾಣುತ್ತಿರುವುದರಲ್ಲಿ ಯಾವುದೆ ಅನುಮಾನಬೇಡ. ಅಷ್ಟರ ಮಟ್ಟಿಗೆ ಚಿತ್ರವನ್ನು ಗೋಡೆ ಮೇಲೆ ಚಿತ್ರಿಸಿರುವುದು ಸ್ಪಷ್ಟವಾಗಿ ಕಾಣಲ್ಪಡುತ್ತದೆ.

ಇಲ್ಲಿ ಪ್ರಮುಖವಾಗಿ ಕೆರೆಗೋಡಿಯಲ್ಲಿ ರಾಮಾಯಣ, ಪುರಾಣ, ಭಾಗವತ. ವಿಷ್ಣುವಿನ ದಶಾವತಾರ, ರಾಮಾಯಣದ ಯುದ್ದದ ಸನ್ನಿವೇಷಗಳನ್ನು ಮುಖ್ಯವಾಗಿ ಕಾಣಬಹುದು. ಜೊತೆಗೆ ಮುಮ್ಮಡಿಯವರ ದರ್ಬಾರ್ ಐತಿಹಾಸಿಕ ಕಥಾನಿರೂಪಣವಿರುವ ಭಿತ್ತಿ ಚಿತ್ರಗಳು ಸಹ ಇದ್ದವು ಎಂಬುದಕ್ಕೆ ರಾಜರ ದರ್ಬಾರಿನ ಕೆಲವು ದೃಶ್ಯಗಳನ್ನು ಇಲ್ಲಿ ಕಾಣಬಹುದು. ಸಿಬಿ ಭಿತ್ತಿಚಿತ್ರಗಳು ವಿಜಯನಗರ ಶೈಲಿಗೆ ಹೋಲಿಕೆಯಾದರೂ ಮೈಸೂರು ಒಡೆಯರು ಮತ್ತು ಟಿಪ್ಪು ಸುಲ್ತಾನ್‌ನು ಘೋಷಿಸಿರುವುದರಿಂದ ಈ ಚಿತ್ರಗಳು ಮೈಸೂರು ಸಾಂಪ್ರದಾಯಿಕ ಹಾಗೂ ಸಾಮಾಜಿಕ ಚಿತ್ರಗಳ ಜನಪದ ಶೈಲಿಯನ್ನು ಹೋಲುತ್ತವೆ. ಕೆರೆಗೋಡಿ ಭಿತ್ತಿಚಿತ್ರಗಳು[5] ವಿಜಯನಗರ ಮತ್ತು ಮೈಸೂರು ಎರಡು ಶೈಲಿಯಲ್ಲಿರುವುದನ್ನು ಕಾಣಬಹುದು.

ಈ ದೇವಾಲಯದ ಹೊರಭಾಗದ ಮೇಲ್ಚಾವಣಿಯಲ್ಲಿ ಪ್ರಮುಖವಾಗಿ ಮೂರು ಅಂಕಣಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು.

ವಿಷ್ಣು ಅವತಾರಗಳು :

ಸವಿಸ್ತಾರವಾದ ಮೇಲ್ಚಾವಣಿಯಲ್ಲಿ ಹದಿನೆಂಟು ಅಡಿ ಎತ್ತರ, ಹನ್ನೆರಡು ಅಡಿ ಉದ್ದದಲ್ಲಿ ವಿಷ್ಣುವಿನ ದಶಾವತಾರವಿರುವ ಚಿತ್ರಗಳನ್ನು ಕಾಣಬಹುದು ಅವುಗಳು ಈ ಕೆಳಗಿನಂತಿವೆ. ೧. ಬಲರಾಮ ೨. ಕೋದಂಡರಾಮ ೩. ಪರುಶುರಾಮ ೪. ಬುದ್ದ ೫. ಮಹಾವಿಷ್ಣು ೬. ವಾಮನ ೭. ಕಲ್ಕ್ಯಾವತಾರ ೮. ಕೃಷ್ಣ ೯. ನರಸಿಂಹ ೧೦. ಮತ್ಸ್ಯ ೧೧. ಕೊರ್ಮ ೧೨. ವರಹ

ಈ ಮೇಲ್ಕಂಡ ಚಿತ್ರಗಳನ್ನು ಬೇರೆ ಬೇರೆ ಪಟ್ಟಿಕೆಗಳಲ್ಲಿ ಗುರುತಿಸಲಾಗಿದೆ. ಮೂರು ಅಂಕಣಗಳಲ್ಲಿ ಈ ಅಂಕಣ ತುಂಬಾ ವಿಶೇಷವಾದದ್ದಾಗಿದೆ.

ಶಿವಪಂಚ ವಿಷಂತಿ ಲೀಲೆಗಳು :

ಈ ದೇವಾಲಯದ ಮೇಲ್ಚಾವಣಿಯ ಎರಡನೇ ಅಂಕಣದಲ್ಲಿ ಶೈವಧರ್ಮಕ್ಕೆ ಸಂಬಂದಿಸಿದ ಭಿತ್ತಿಚಿತ್ರಗಳನ್ನು ಕಾಣಬಹುದು. ಸುಮಾರು ಇಪ್ಪತ್ತೈದು ಶಿವಪಂಚ ವಿಷಂತಿ ಲೀಲೆಗಳನ್ನು ಪ್ರತ್ಯೇಕ ಪಟ್ಟಿಯನ್ನು ರಚಿಸಿ ಬರೆಯಲಾಗಿರುತ್ತದೆ. ಅವುಗಳು ಈ ಕೆಳಕಂಡಂತಿವೆ.

೧. ಗಜಸಂಹಾರ ೨. ಗಣೇಶ ವರಪುತ್ರ ೩. ಚಕ್ರದಾನಪತಿ ೪. ಕಾಲಭೈರವ

೫. ಸುಖಾಶೀನ ೬.ಕಾಲಸಂಹಾರ ೭. ಹಾರಿಹಾಪತಿ ೮. ದಕ್ಷಿಣಾಮೂರ್ತಿ

೯. ಮಹಾಲಿಂಗೋದ್ಬವ ೧೦. ತ್ರಿಪುರ ಸಂಹಾರ ೧೧. ಅರ್ಧನಾರಿಶ್ವರ

೧೨. ಕಾಮಧಹನಪತಿ ೧೩. ಕಂಕಲಾಧರಪತಿ ೧೪. ಶರಭಾವತಾರ

೧೫. ವೀರಭದ್ರ ೧೬. ಆಲಂಧರಾ ಸಂಹಾರಣಿ ೧೭. ಶಂಭುಶಂಕರ

೧೮. ವೃಕ್ಷನವನಪತಿ ೧೯. ರುದ್ರದರಲೀಲೆ ೨೦. ಉಮಾಸುಕೋಶಪತಿ

೨೧. ವೃಷಭಾರೂಡಪತಿ ೨೨. ಕಾಡವಮೂರ್ತಿ ೨೩. ಚಂಡೇಶ್ವರಪತಿ

೨೪. ವಿಷಧರಪತಿ ೨೫. ಗಿರೀಜಾ ಕಲ್ಯಾಣ

ಈ ಶೈವ ಚಿತ್ರಗಳ ಜೊತೆ ಕೆಲವು ಚೌಕಟ್ಟುಗಳಲ್ಲಿ ವೈಷ್ಣವ ಧರ್ಮದ(ರಾಮಾಯಣ) ಭಿತ್ತಿ ಚಿತ್ರಗಳಿವೆ. ಅವುಗಳಲ್ಲಿ ಸೀತಾರಾಮಕಲ್ಯಾಣ, ರಾಮಪಟ್ಟಾಭಿಷೇಕದ ದೃಶ್ಯ, ವಿಶ್ವಾಮಿತ್ರನಲ್ಲಿ ರಾಮಲಕ್ಷ್ಮಣರ ಅಭ್ಯಾಸ, ಅಹಲ್ಯೋದ್ಧಾರಣೆ, ಸೀತಾಪಹರಣ, ವಾಲಿನಿಗ್ರಹಣ, ಜಟಾಯು, ರಾಮರಾವಣರ ಯುದ್ಧ, ಅಶೋಕವನದಲ್ಲಿ ಸೀತೆ, ಶ್ರೀದೇವಿ ಭೂದೇವಿ ಸಮೇತ ವಿಷ್ಣುವಿದ್ದು ಸುತ್ತಲಿನ ಅಂಕಣಗಳಲ್ಲಿ ದಶಾವತಾರಗಳನ್ನು ಚಿತ್ರಿಸಲಾಗಿದೆ.

ಇನ್ನೂ ಮೂರನೇ ಅಂಕಣದಲ್ಲಿ ಯುದ್ದದ ದೃಶ್ಯವಿದ್ದು ಸಂಪೂರ್ಣ ನಾಶಹೊಂದಿರುತ್ತದೆ.

ದೇವಾಲಯದಲ್ಲಿರುವ ಕಂಬ ಮತ್ತು ತೊಲೆಗಳಲ್ಲಿ ನಕ್ಷಾವಿನ್ಯಾಸವಿರುವ ಚಿತ್ರಗಳನ್ನು ಕಾಣಬಹುದು. ಅದರಲ್ಲಿ ಹೂ ಹಾಗೂ ಹೂ ಬಳ್ಳಿಯ ದೃಶ್ಯ ಹೆಚ್ಚಾಗಿದ್ದು, ಜಾನಪದ ರೇಖೆಗಳಂತೆ ಬಿಂಬಿತವಾಗಿರುವ ಇಲ್ಲಿನ ಚಿತ್ರಗಳಲ್ಲಿ ದಟ್ಟವಾದ ನೀಲಿ ಬಣ್ಣವನ್ನ ಬಳಸಲಾಗಿದೆ. ಅರ್ಧಕ್ಕೆ ನಿಂತಿರುವ ಅದೇಷ್ಟೋ ರೇಖಾ ವಿನ್ಯಾಸಗಳಿಗೆ ಸ್ಥಳಿಯ ಚಿತ್ರಕಲಾವಿದ ಯು.ಎಲ್.ಸಿ ಲಿಂಗಾಚಾರ್ಯರಿಂದ್ ಪೂರ್ಣಗೊಳಿಸಲಾಗಿದೆ.

ರಂಗನಾಥ ದೇವಾಲಯ, ರಂಗಾಪುರ :

ಇಲ್ಲಿನ ರಂಗನಾಥ ದೇವಾಲಯವು ಒಂದು ಮುಖ್ಯದ್ವಾರ, ಹಜಾರ ಮತ್ತು ಗರ್ಭಗುಡಿಯಿಂದ ಕೂಡಿದೆ. ದೇವಾಲಯದ ಚಂದ್ರಹಾಸದಲ್ಲಿ ಮೂರು ಅಂಕಣಗಳಿದ್ದು, ಅವುಗಳಲ್ಲಿ ಮಧ್ಯದ ಅಂಕಣದಲ್ಲಿ ಮಾತ್ರ ಭಿತ್ತಿ ಚಿತ್ರಗಳಿರುವುದನ್ನು ಕಾಣಬಹುದು. ಉಳಿದ ಅಕ್ಕ-ಪಕ್ಕದ ಅಂಕಣದಲ್ಲಿ ಚಿತ್ರಗಳು ಉಳಿದಿಲ್ಲ. ಹಿಂದೆ ಈ ಸ್ಥಳದಲ್ಲಿ ಅನೇಕ ಚಿತ್ರಗಳಿದ್ದವು ಎಂಬ ಇತಿಹಾಸ ಪುಟದಲ್ಲಿನ ಮಾತು. ಆದರೆ ಯಾವುದೇ ಅಧಾರ ಕಂಡು ಬರುವುದಿಲ್ಲ. ಉಳಿದ ಅಂಕಣವು ವೈಷ್ಣವ ಧರ್ಮ ಹಿನ್ನೆಲೆಯಲ್ಲಿ ರಚಿತವಾಗಿದ್ದು, ವಿಷ್ಣುವಿನ ದಶಾವತಾರದ ಚಿತ್ರಗಳನ್ನು ಹೊಂದಿದೆ.

ಕಲಾವಿದನು ಈ ಅಂಕಣದಲ್ಲಿನ ಮಧ್ಯಭಾಗವನ್ನು ಚನ್ನಕೇಶ್ವರ ಮತ್ತು ಶ್ರೀದೇವಿ, ಭೂದೇವಿ ಚಿತ್ರಕ್ಕೆ ಮಿಸಲಿಟ್ಟು, ಉಳಿ ಭಾಗವನ್ನು ಹತ್ತು ವಿಭಾಗಗಳಾಗಿ ಮಾಡಿಕೊಂಡಿರುತ್ತಾರೆ. ಅವುಗಳಲ್ಲಿ ಸಾಮ್ಯತೆವಿರದೆ ವ್ಯತ್ಯಾಸಗಳು ಕಂಡು ಬರುವಂತಿದೆ. ಮೇಲೆ ಮತ್ತು ಕೆಳಗೆ ಚಿಕ್ಕ ಚಿಕ್ಕ ಭಾಗಗಳಾಗಿ ಮಾಡಿಕೊಂಡು ಪ್ರಮುಖ ಚಿತ್ರವಾದ ಚನ್ನಕೇಶವ ಅಂಕಣದ ಎರಡು ಬದಿಯಲ್ಲಿ ಆಯಾಕಾರವಾಗಿ ಪಟ್ಟಿಯನ್ನು ವಿಂಗಡಿಸಿ ಚಿತ್ರಿಸಲಾಗಿದೆ.

ವಿಷ್ಣುವಿನ ದಶಾವತಾರಗಳು :

೧. ಕಲ್ಕಿ

೨. ಕೃಷ್ಣ

೩. ಕೊದಂಡರಾಮ

೪. ಬಲರಾಮ

೫. ವಾಮನ

೬. ಪರುಶುರಾಮ

೭. ಮತ್ಸ್ಯ

೮. ಕೂರ್ಮ

೯. ವರಾಹ

೧೦.ನರಸಿಂಹ

೧೧.ಶ್ರೀದೇವಿ, ಚನ್ನಕೇಶವ, ಭೂದೇವಿ

ಶ್ರೀರಂಗನಾಥ ದೇವಾಲಯದ ಭಿತ್ತಿ ಚಿತ್ರಗಳು ಸಂಪ್ರದಾಯವಾಗಿಯೂ, ಶಾಸ್ತ್ರಬದ್ದವಾಗಿಯೂ ರೇಖೆಗಳಿಂದ ಚಿತ್ರಿಸಿದ್ದು, ಸಂಯೋಜನೆ, ರೇಖೆ, ಬಣ್ಣಗಳು ಪ್ರಬುದ್ಧತೆಯಿಂದ ಕೂಡಿದ್ದವುಗಳಾಗಿವೆ. ಗರ್ಭಗುಡಿಯ ತೊಲೆಯ ಮೇಲೆ ಶ್ರೀರಾಮನ ಪಟ್ಟಾಭಿಷೇಕದ ಚಿತ್ರವನ್ನು ಚಿತ್ರಿಸಲಾಗಿದೆ. ರಾಮನ ಬಲಬದಿಯಲ್ಲಿ ಲಕ್ಷ್ಮಣ, ಆಂಜನೇಯ ಸೇರಿದಂತೆ ಋಷಿಮುನಿಗಳು, ದೇವಾಧಿದೇವತೆಗಳು ಪಟ್ಟಾಭಿಷೇಕಕ್ಕೆ ಆಗಮಿಸಿರುವಂತಹ ದೃಶ್ಯ ಗೋಚರಿಸಿದೆ. ಹಾಗೆಯೇ ರಾಮನ ಎಡಬದಿಯಲ್ಲಿ ಸೀತೆ ಹಾಗೂ ದೇವತೆಗಳ ಸಾಲು. ವಿಶೇಷ ಸಿಂಹಾಸನದೊಂದಿಗೆ ರಾಮನ ಪಟ್ಟಾಭಿಷೇಕದ ದೃಶ್ಯವು ಇದಾಗಿದೆ.

ಗರ್ಭಗುಡಿಯ ಬಲಭಾಗದ ತೊಲೆಯ ಮೇಲೆ ಗಿರಿಜಾ ಕಲ್ಯಾಣ ಚಿತ್ರವಿದ್ದು, ಪರ್ವತರಾಜನು ತನ್ನ ಮಗಳಾದ ಗಿರಿಜೆಯನ್ನು ಶಿವನಿಗೆ ಧಾರೆ ಎರೆಯುವ ದೃಶ್ಯ ಮಧ್ಯದಲ್ಲಿದೆ. ದೇವಾನುದೇವತೆಯರ ದಂಡೆ ಒಂದೆಡೆ ಸೇರಿರುವಂತೆ ಚಿತ್ರಿಸಿರುವುದು. ಕಲಾವಿದರ ನೈಜತೆಗೆ ಸಾಕ್ಷಿಯೆಂಬಂತಿದೆ. ಗರ್ಭಗುಡಿಯ ಎದುರು ತೊಲೆಯ ಮೇಲೆ ದರ್ಬಾರಿನಲ್ಲಿ ವಿರಾಜಮಾನರಾಗಿರುವ ಗಿರಿಜಾ ಮೀಸೆಯ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರವಿದೆ. ಉಳಿದಂತೆ ತೊಲೆಯ ಕೆಳಭಾಗದಲ್ಲಿ ವಿಶಾಲವಾದ ಹಸಿರಿನಿಂದ ಕೂಡಿದ ಹೂ ಬಳ್ಳಿಯ ನಕ್ಷೆಗಳಿಂದ ಅಲಂಕರಿಸಲಾಗಿದೆ. ಅಲ್ಲದೇ ಅಲಂಕಾರಿಕ ಮಾದರಿಯು ಬಹುತೇಕ ಸುರಪುರದ ಶೈಲಿಯನ್ನು ಹೋಲುವುದರಿಂದ ಇಲ್ಲಿನ ಕಲಾವಿದರ ಗುಂಪಿನಲ್ಲಿ ಸುರಪುರದ ಶೈಲಿಯ ಕಲೆ ಸೇರಿರುವ ಸಾಧ್ಯತೆಯಿದೆ ಎನ್ನುವ ಪುರಾವೆಗಳು ಇಲ್ಲದಿಲ್ಲ. ಇವುಗಳಲ್ಲದೆ ಮುಮ್ಮಡಿಯವರ ದರ್ಬಾರು ದೃಶ್ಯದ ಎರಡು ಬದಿಯಲ್ಲಿ ಪ್ರತ್ಯೇಕ ಸಣ್ಣ ಎರಡು ಅಂಕಣಗಳಿದ್ದವು ಎಂಬುದು ಹಿರಿಯರ ಅಭಿಪ್ರಾಯ.

ಕೆರೆಗೊಡಿ ಮತ್ತು ರಂಗಾಪುರದ ಭಿತ್ತಿ ಚಿತ್ರಗಳು ಎರಡು ಪ್ರತ್ಯೇಕ ಶೈಲಿಯ ಕಲೆಯಿಂದ ಕೂಡಿದ ಭಿತ್ತಿ ಚಿತ್ರದ ನೆಲೆಗಳಿವೆ. ಅವು ಒಂದಾದ ಮೇಲೆ ಒಂದರಂತೆ ಚಿತ್ರಿಸಿರುವ ಸಾಧ್ಯತೆಯಿದೆ. ಮತ್ತೊಂದು ವಿಶೇಷವೆಂದರೆ ಕೆರೆಗೊಡಿಯಲ್ಲಿ ತ್ರಿಪುರ ಸಂಹಾರ ಚಿತ್ರವಿರುವ ಅಂಕಣದಲ್ಲಿ ಚಿತ್ರಕಾರನ ಹೆಸರು, ಚಿತ್ರ ಬರೆಸಿದ ವಿವರಗಳಿವೆ. ಆ ಚಿತ್ರ ಬರೆಯಲು ಕಲಾವಿದರಿಗೆ ನೀಡಿದ ಸಂಭಾವನೆಯನ್ನು(೬೦ ರೂಪಾಯಿ) ಮಂಜೂರಿ ಎಂಬ ವಿವರಗಳನ್ನು ಬರೆಯಲಾಗಿದೆ. ಅಲ್ಲದೇ ಕಲಾವಿದ ನೋಣವಿನಕೆರೆ ಚಿತ್ರಗಾರ್ ಸುಬ್ಬಣ್ಣ ಮಾಡಿದ ಚಿತ್ರ ಕೆಲಸಕ್ಕೆ ಮಂಜೂರಿ ೬೦ ರೂಪಾಯಿ ಎಂದು, ಇದನ್ನು ಅಣಗವಳಿ ಶಂಕರೇಗೌಡರು ಮಾಡಿಸಿದ ಭಕ್ತಿಸೇವೆ ಎಂದು ಬರೆಯಲಾಗಿದೆ. ಚಿತ್ರ ಬರೆಸಿದ್ದಕ್ಕೆ ಹಲವಾರು ಮಾಹಿತಿಗಳು ದೊರಕುತ್ತವೆ. ಇಲ್ಲಿಯವರೆಗೂ ಯಾವುದೇ ಪುಸ್ತಕಗಳಲ್ಲಿ ದೊರಕಿಲ್ಲ. ಆದರೆ ಸಂಶೋಧನಾ ಕಿರು ಪ್ರಬಂಧಗಳಲ್ಲಿ ಕಾಣಬಹುದಾಗಿದೆ.

ಇಲ್ಲಿಯ ಬಣ್ಣಗಾರಿಕೆಯು ಕಡುಕೆಂಪು, ಕಡುನೀಲಿ, ಹಸಿರು, ಶ್ವೇತ ವರ್ಣ ಮತ್ತು ಹಳದಿ ವರ್ಣಗಳಿಂದ ಕೂಡಿದೆ. ಜಿಲ್ಲೆಯಲ್ಲಿ ಹೇರಳವಾಗಿ ಕೆಂಪನ್ನು ಬಳಸಲಾಗಿದ್ದು, ಬಾಹ್ಯರೇಖೆಗಳಿಗೆ

ಕಪ್ಪು ಬಣ್ಣವನ್ನು ಉಪಯೋಗಿಸಲಾಗಿದೆ. ನಕ್ಷೆಗಳಿಗೆ ಕಡುನೀಲಿಯನ್ನು ಹೆಚ್ಚಾಗಿ ಬಳಸಲಾಗಿದೆ. ಇಲ್ಲಿನ ಚಿತ್ರಗಳು ಸಿಬಿ, ತುಮಕೂರು, ಶಿರಾ ಮತ್ತು ಹಿರಿಯೂರು ಚಿತ್ರಗಳ ಚಿತ್ರರಚನೆಯ ವಿಧಾನವನ್ನು ಹೋಲುತ್ತವೆ. ಹೆಚ್ಚಿನ ವಿವರಗಳು ಹಾಗೂ ಭಿತ್ತಿ ಚಿತ್ರಗಳ ಇತಿಹಾಸ, ಚಿತ್ರಗಳ ಸಂರಕ್ಷಣೆಯ ದೃಷ್ಟಿಯಿಂದ ಸಂಶೋಧನೆಯಲ್ಲಿ ಪ್ರಗತಿಹೊಂದಿಬೇಕಾಗಿರುವುದು ತುಂಬಾ ಅವಶ್ಯಕತೆಯಿದ್ದು ಮುಂದಿನ ದಿನಗಳಲ್ಲಿ ಅಳಿದುಳಿದ ಭಿತ್ತಿ ಚಿತ್ರಗಳ ಕುರಿತು ಸಂಶೋಧನೆ ನಡೆಸಿ ಈ ಅಧ್ಯಯನದಲ್ಲಿ ಸೇರಿಸಲಾಗುವುದು.

ಯಡೆಯೂರು :

ಕುಣಿಗಲ್ ತಾಲ್ಲೂಕಿನ ಯಡೆಯೂರು ಶ್ರೀಸಿದ್ಧಲಿಂಗಸ್ವಾಮಿಯ ಪುಣ್ಯಕ್ಷೇತ್ರ. ಈ ದೇವಾಲಯದ ಮುಖ್ಯ ಮಂಟಪದ ಚಾವಣಿಯಲ್ಲಿ ನೂರಾರು ಚಿತ್ರಗಳು ಇದ್ದವು. ಅಲ್ಲಿ ಶ್ರೀಸಿದ್ಧಲಿಂಗಸ್ವಾಮಿಗಳಿಗೆ ಸಂಬಂಧಿಸಿದ ಅವರ ಪವಾಡಗಳನ್ನು ಕುರಿತಾದ ಸಚಿತ್ರಗಳು ಚಿತ್ರಿತವಾಗಿದ್ದವು. ನಂತರ ಅವುಗಳನ್ನು ಮರು ಬಣ್ಣ ಲೇಪನಮಾಡಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ದೇವಾಸ್ಥಾನವನ್ನು ಮರುನಿರ್ಮಾಣದ ನಿಮಿತ್ತ ಇಲ್ಲಿರುವ ಅನೇಕ ಚಿತ್ರಗಳು ಮಾಯವಾಗಿವೆ. ಅದರೆ ಗರ್ಭಗುಡಿಯ ಮೇಲ್ಚಾವಣಿಯಲ್ಲಿ ಚಿತ್ರಗಳು ಅಸ್ಪಷ್ಟವಾಗಿ ಕಂಡರೂ ಅವುಗಳು ಪ್ರಯೋಜನಕಾರಿಯಾಗದ ಸ್ಥಿತಿಯಲ್ಲಿವೆ. ದೇವಸ್ಥಾನ ಮತ್ತು ಮಠದ ಉಸ್ತುವಾರಿಯರ್ವರು ಚಿತ್ರವನ್ನು ಅಳಿಸುವುದಕ್ಕೂ ಮುಂಚೆ ಎಲ್ಲಾ ಚಿತ್ರಗಳನ್ನು ಛಾಯಚಿತ್ರ ಮಾಡಲಾಗಿರುವುದರಿಂದ ಅವುಗಳನ್ನು ಪಡೆದು ಸಂಶೋದನೆಗೆ ಬಳಸಿಕೊಳ್ಳಲಾಗುವುದು. ಇಲ್ಲಿ ಚಿತ್ರಗಳಿದ್ದುದ್ದರ ಬಗ್ಗೆ ೧೯೩೦ನೇ[೧೦] ಗ್ಯಾಸೆಟಿಯರ್‌ನಲ್ಲಿ ವಿವರಣೆ ಸಿಗುತ್ತದೆ. ಇಲ್ಲಿ ಸಿಗುವ ಚಿತ್ರಗಳು ಸಂಪೂರ್ಣವಾಗಿ ಶ್ರೀ ಸಿದ್ಧಲಿಂಗೇಶ್ವರನ ಪವಾಡದ ದೃಶ್ಯ ಹಾಗೂ ದೇಶದ ವಿವಿಧ ಮಠ, ಮಂದಿರಗಳಿಗೆ ಭೇಟಿ ನೀಡಿ ತನ್ನಲ್ಲಿರುವ ದೈವಶಕ್ತಿಯನ್ನು ಸಮಾಜಕ್ಕೆ ಪರಿಚಯಿಸಿದ ಸಂಧರ್ಭಗಳು ಗೋಡೆಯ ಪಟ್ಟಿಕೆಗಳಲ್ಲಿ ಚಿತ್ರಗಳು ರಚನೆಗೊಂಡಿದ್ದವಾಗಿವೆ. ಪ್ರಸ್ತುತ ಈ ಚಿತ್ರಗಳು ನಾಶಗೊಂಡಿವೆಯಾದರೂ ಸಿಕ್ಕಮ ಮಾಹಿತಿಗೆ ಅನುಸರ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಬಳಸಿಕೊಳ್ಳಲಾಗಿರುತ್ತದೆ.

ಭಿತ್ತಿ ಚಿತ್ರಗಳ ವಸ್ತುವಿಷಯ :

ಚಿತ್ರ-೧ : ಕೈಲಾಸದಲ್ಲಿ ಶಿವನು ಒಡ್ಡೋಲಗದಲ್ಲಿದ್ದಾಗ ನಾರದ ಮಹರ್ಷಿಗಳು ಬಂದು ಭೂಲೋಕದಲ್ಲಿ ಹೆಚ್ಚುತ್ತಿರುವ ನಾಸ್ತಿಕತೆ, ಅನಾಚಾರ, ಅತ್ಯಾಚಾರಗಳಿಂದ ಅಳಿಯುತ್ತಿರುವ ಶಿವಧರ್ಮವನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಲು ಪರಶಿವನು ನಿರಂಜನಗಣಾಧೀಶ್ವರನಿಗೆ ಭೂಲೋಕದಲ್ಲಿ ಶಿವಧರ್ಮೋದ್ಧಾರಕ್ಕಾಗಿ ಅವತರಿಸಬೇಕೆಂದು ಆಜ್ಞೆ ಮಾಡಿದನು. ಎಂಬ ಸನ್ನಿವೇಶದ ಚಿತ್ರಕೃತಿಯಿದಾಗಿದ್ದು, ಶಿವ, ಪಾರ್ವತಿ ಮತ್ತು ಗಣೇಶನನ್ನು ಮುಖ್ಯವಾಗಿ ಚಿತ್ರಿಸಲಾಗಿದೆ. ಈ ಮೂವರ ಮುಂದೆ ಬೃಹತ್ತಾದ ನಂದಿಯನ್ನು ತೋರಿಸಲಾಗಿದೆ. ಚಿತ್ರದ ಎಡಭಾಗದಲ್ಲಿ ನಾರದ ತನ್ನ ಎಡಗೈಯನ್ನು ಮೇಲೆತ್ತಿ ಏನೋ ಹೇಳುತ್ತಿರುವಂತೆ ಭಾಸವಾಗುತ್ತಿದ್ದರೆ, ಬಲಭಾಗದಲ್ಲಿ

ತನ್ನವಾಹನದೊಂದಿಗೆ ಮಯೂರ ತನ್ನ ಬಲಗೈಯನ್ನು ಮೇಲೆತ್ತಿ ಶಿವನಿಗೆ ವರವನ್ನು ಕೇಳುತ್ತಿರುವ ದೃಶ್ಯದಂತೆ ಕಂಡುಬರುತ್ತಿದೆ. ತೀರಾ ಇತ್ತೀಚೆಗೆ ಆಗಿರುವ ಚಿತ್ರಗಳಂತೆ ಕಂಗೊಳಿಸುತ್ತಿರುವ ಈ ಚಿತ್ರದಲ್ಲಿ ಬಣ್ಣಗಳು ಮಾಸಿರುವುದಿಲ್ಲ. ನೀಲಿವರ್ಣದ ಶಿವ, ಬಿಳಿ ಬಣ್ಣದ ಕಚ್ಚೆಯನ್ನುಟ್ಟಿದ್ದಾನೆ, ಅಭರನಗಳ ಸಹಿತ ಪಾವ್ತಿ ಕೆಂಪು ಸೀರೆಯನ್ನುಟ್ಟು ಶೃಂಗರಿಸಲಾಗಿದೆ. ಇನ್ನೂ ಗಣೇಶನನ್ನು ಕೆಂಪು ವನ್ದ ಮೈಯನ್ನು ತೋರಿಸಿದ್ದು, ಹಂದ ಕಚ್ಚೆಯನ್ನು ತೊಡಿಸಲಾಗಿದೆ. ಮುಮದೆ ಕುಳಿತಿರುವ ನಂದಿಯು ಬಿಳಿವರ್ಣವಿದ್ದು, ಅಲಂಕಾರವನ್ನು ಮಾಡಲಾಗಿರುತ್ತದೆ. ಹಿಂಬದಿಯಲ್ಲಿ ತಿಳಿ ನೀಲಿವರ್ಣವನ್ನು ತೋರಿಸಲಾಗಿರುತ್ತದೆ. ಕೆಂಪು, ತಿಳಿನೀಲಿ, ಹಳದಿ, ಬಿಳಿ ಮತ್ತು ಹಸಿರು ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿರುತ್ತದೆ.

ಚಿತ್ರ–೨ : ಶ್ರಿಸಿದ್ದಲಿಂಗೇಶ್ವರರು ಕ್ರಿ.ಶ.೧೩೮೮ರ ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು. ಮಲ್ಲಿಕಾರ್ಜುನ ಮತ್ತು ಜ್ಞಾನಾಂಬಿಕೆ ಎಂಬ ದಂಪತಿಗಳಿಗೆ ಸಂತಾನವಿರಲಿಲ್ಲ. ಗುರುಗೋಸಲ ಚನ್ನಬಸವೇಶ್ವರರ ಆಶೀರ್ವಾದ ಮತ್ತು ದಂಪತಿಗಳ ತಪಸ್ಸು ಇವುಗಲ ಫಲವಾಗಿ, ನಿರಂಜನ ಗಣಾಧೀಶ್ವರರು ಅವರಿಗೆ ಅಯೋನಿಜ ಪುತ್ರರಾಗಿ ಉದಯಿಸಿದರು. ಎಂಬ ಸನ್ನಿವೇಶಕ್ಕೆ ಪೂರಕವಾದ ಚಿತ್ರವಿದಾಗಿರುತ್ತದೆ. ಇಲ್ಲಿ ಇಬ್ಬರು ದಂಪತಿಗಳು ತಪಸ್ಸು ಮಾಡುತ್ತಿರುವಂತೆ ಚಿತ್ರಸಿದ್ದು, ಅವರ ಹಿಂಬದಿಯಲ್ಲಿ ದೊಡ್ಡ ಮರವೊಂದಿದೆ. ಇವರ ತಪಸ್ಸಿಗೆ ಮೆಚ್ಚಿ ಒಂದು ಮಗುವನ್ನು ಇವರ ಮುಂಭಾಗದಲ್ಲಿ ತೋರಿಸಲಾಗಿರುತ್ತದೆ. ತೈಲವರ್ಣ್ದಿಮದ ರಚಿತವಾದ ಈ ಭಿತ್ತಿಚಿತ್ರವೂ ಮಾಸದ ರೀತಿಯಲ್ಲಿ ವಿಜೃಂಬಿಸಿದ್ದಾದರೂ ಪ್ರಸ್ತುತ ಈ ಚಿತ್ರವಿರುವುದಿಲ್ಲ. ಕಾರಣ ದೇವಾಲಯ ಜೀರ್ಣೋದ್ದಾರವಾಗಿರುವ ಹಿನ್ನಲೆಯಲ್ಲಿ ಇಲ್ಲಿನ ಸುಮಾರು ಭಿತ್ತಿಚಿತ್ರಗಳ ನಾಶಗೊಂಡಿರುತ್ತವೆ. ಅವುಗಳಲ್ಲಿ ಇದುವೊಂದು.

ಚಿತ್ರ–೩ : ಗರ್ಭಗುಡಿಯ ಮುಂಭಾಗದ ಗೋಡೆಯ ಮೇಲೆ ರಚಿಸಿರುವ ಚಿತ್ರಗಳಲ್ಲಿ ಇದು ಒಂದು. ಅವತಾರವೆತ್ತಿದ ನಿರಂಜನ ಗಣಾಧೀಶ್ವರನನ್ನೆತ್ತಿಕೊಂಡು ದಂಪತಿಗಳು ಗೋಸಲ ಚನ್ನಬಸವೇಶ್ವರರ ದರ್ಶನಕ್ಕಾಗಿ ಮಠಕ್ಕೆ ನಡೆದರು. ಶ್ರೀಮಠದ ಬಾಗಿಲಲ್ಲಿ ಪವಾಡವೊಂದು ಜರುಗಿತು. ಸಿಮಹ, ಆನೆ ಮೊದಲಾದ ಮೃಗರೂಪದಲ್ಲಿದ್ದ ಗಂಧರ್ವರು ಮಗುವಿನ ದರ್ಶನ ಮಾತ್ರದಿಂದ ತಮ್ಮ ಶಾಪವನ್ನು ನೀಗಿಕೊಂಡು ಮುನ್ನಿನ ರೂಪ ತಾಳಿದರು. ಲಿಂಗಸ್ವರೂಪಿಯಾದ ಈ ಸಿದ್ದಜೀವಿಗೆ ಗುರುಗಳು ಸಿದ್ದಲಿಂಗ ಎಂದು ನಾಮಕರಣ ಮಾಡಿದರು. ಆ ಸಂದರ್ಭದ ಚಿತ್ರವಾದ ಇದು ಒಂದು ಪರಿಪೂರ್ಣ ಸಂಯೋಜನ ಚಿತ್ರಕೃತಿಯಾಗಿರುತ್ತದೆ.

ಚಿತ್ರ–೪ : ಶ್ರೀಸಿದ್ದಲಿಂಗೇಶ್ವರರಿಗೆ ಎಂಟು ವರ್ಷ ತುಂಬಿದಾಗ, ಮಲ್ಲಿಕಾರ್ಜುನ ಮತ್ತು ಜ್ಞಾನಾಂಬಿಕೆ ದಂಪತಿಗಳು ತಮ್ಮ ಮಗುವನ್ನು ಜ್ಞಾನಾರ್ಜನೆಗಾಗಿ ಗೋಸಲ ಚನ್ನಬಸವೇಶ್ವರರ ಮಠಕ್ಕೆ ಸೇರಿಸಿದರು. ಆ ಸಂದರ್ಭದಲ್ಲಿ ಗುರುಗಳ ಶಿವಪೂಜಾ ಸಮಯದಲ್ಲಿ ನಂದಾದೀಪದಲ್ಲಿದ್ದ ಎಣ್ಣೆಯೂ ಮುಗಿದು ನಂದಿ ಹೋಗುವುದರಲ್ಲಿತ್ತು ಆಗ ಪಕ್ಕದಲ್ಲಿದ್ದ ಸಿದ್ದಲಿಂಗೇಶ್ವರ ತಕ್ಷಣಕ್ಕೆ

ದೀಪಕ್ಕೆ ನೀರನ್ನು ಹಾಕಿ, ಶಕ್ತಿ ತುಂಬುವುದರ ಮೂಲಕ ದೇವರ ಮುಂದಿನ ದೀಪ ಆರದಂತೆ ನೋಡಿಕೊಂಡ ಕ್ಷಣವಾಗಿರುವ ದೃಶ್ಯ ಇದಾಗಿರುತ್ತದೆ. ಗುರುಗಳು ಮತ್ತು ಶಿಷ್ಯನ ನಡುವಿನ ಶಿವ ಭಕ್ತಿಯನ್ನು ಇಲ್ಲಿ ಪ್ರಸ್ತುತ ಪಡಿಸಿರುವ ಕಲಾವಿದ ನೈಜವಾಗಿ ಚಿತ್ರಿಸಲ್ಪಟ್ಟಿರುತ್ತಾನೆ. ನೊಡಿದ ತಕ್ಷಣ ಎಂತವರಿಗೂ ಅರಿವಾಗುವ ಹಾಗೇ ಕಂಡುಬರುತ್ತಿದೆ. ದೀಪದ ಕಂಬ, ವಿವಿಧ ಹಣ್ಣುಗಳು ತುಂಬಿರುವ ಬುಟ್ಟಿ, ಸ್ವಾಮಿಯ ಪಕ್ಕದಲ್ಲಿ ಮಡಿಕೆಯ ವಸ್ತುಗಳನ್ನು ಕಾಣಬಹುದಾಗಿದೆ.

ಚಿತ್ರ-೫ : ಈ ಚಿತ್ರದಲ್ಲಿ ಶ್ರೀಸಿದ್ದಲಿಂಗೇಶ್ವರರು ಕಲ್ಲುಬಸವನಿಗೆ ಎಡೆಯುಣಿಸುತ್ತಿದ್ದಾರೆ. ಮಠದ ಇತರೆ ಬಾಲಕರು ಆಶ್ಚರ್ಯದಿಮದ ನೋಡುತ್ತಿರುವಂತೆ ಭಾಸವಾಗಿದೆ. ಅದಕ್ಕೆ ಕಾರಣವೂ ಇದೆ. ಅದೇನೆಂದರೆ ಸಿದ್ದಲಿಂಗ ಇಲ್ಲಿಗೆ ಬರುವುದಕ್ಕೂ ಮುಂಚೆ ಅಲ್ಲಿನ ಬಾಲಕರು ಈ ನಂದಿಗೆ ನೈವೇಧ್ಯವನ್ನು ಮಾಡಿಕೊಂಡು ಹೋಗುತ್ತಿದ್ದರು. ಇದನ್ನು ಗಮನಿಸಿದ ಬಾಲಕರು ಗುರುಗಳಿಗೆ ತಿಳಿಸಿದಾಗ ಆಶ್ಚರ್ಯದಿಂದ ಬಂದು ಪರಿಶೀಲಿಸಿದಾಗ ಶ್ರೀಸಿದ್ದಲಿಂಗೇಶ್ವರರು ಕಲ್ಲುಬಸವನ ಮುಂದೆ ಎಡೆಯಿಟ್ಟು 'ಸ್ವೀಕರಿಸಬೇಕು' ಎಂದಾಕ್ಷಣ ಕಲ್ಲುಬಸವನು ನಿಜರೂಪಧರಿಸಿ ತನ್ನ ಮುಂದಿದ್ದ ಎಡೆಯನ್ನು ಸ್ವೀಕರಿಸುತ್ತಿದ್ದುದನ್ನು ಕಂಡಕ್ಷಣ ಇದಾಗಿರುತ್ತದೆ. ಇದೊಮದು ಪರಿಪೂರ್ಣ ಸಂಯೋಜನಾ ಚಿತ್ರವಾಗಿರುತ್ತದೆ. ಕಂದು ಬಣ್ಣದ ನಂದಿಯೇ ಈ ಚಿತ್ರದ ವಿಶೇಷ. ತಲೆಗೆ, ಕೈಗೆ ಲಿಂಗದ ಸರವನ್ನು ಸುತ್ತಿರುವ ಗುರು ಶಿಷ್ಯರ ಬಳಗವನ್ನು ನಾವಿಲ್ಲಿ ಕಾಣಬಹುದು. ನೀಲಿ, ಹಸಿರು, ಕೆಂಪು, ಹಳದಿ, ಬಿಳಿ ಮತ್ತು ಕಂದು ಬಣ್ಣಗಳನ್ನು ಹೆಚ್ಚು ಕಾಣಬಹುದು.

ಚಿತ್ರ-೬ : ಈ ಚಿತ್ರದಲ್ಲಿ ವಯಸ್ಸಿಗೆ ಬಂದ ಮೇಲೆ ಗುರುಗಳ ಅಪ್ಪಣೆಯನ್ನು ಪಡೆದು ಸಿದ್ದಲಿಂಗೇಶ್ವರರು ಭಾರತಾಧ್ಯಂತ ಸಂಚರಿಸಿ ಧರ್ಮೋದ್ದಾರ ಕಾರ್ಯಕೈಗೊಮಡರು. ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ತಂಗಿದ್ದಾಗ ಅರುಣಾಚಲೇಶ್ವರನು ಪ್ರತ್ಯಕ್ಷನಾಗಿ ಶ್ರೀಸಿದ್ದಲಿಂಗೇಶ್ವರರ ಕಾರ್ಯವು ಜಯಪ್ರದವಾಗಲೆಂದು ಹರಸಿ, ಅವರ ಕೊರಳಿಗೆ ಪಂಚತಾವಡ ಹಾರವನ್ನು ಹಾಕಿ ಆಶಿರ್ವದಿಸಿದ ಸಂದರ್ಭದ್ದಾಗಿರುತ್ತದೆ.

ಚಿತ್ರ-೭ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಆಂದ್ರಪ್ರದೇಶ ಸಂಚಾರದಲ್ಲಿ ಸಿದ್ದಲಿಂಗೇಶ್ವರರು ಹುಲ್ಲು, ನೀರನ್ನು ಮುಟ್ಟದೇ ನಿಂತಿದ್ದ ವೃಷಭವನ್ನು ನೋಡಿದರು. ಎಳೆಯ ಪೈರನ್ನು ತಿಂದರೆ 'ಸಿದ್ದಲಿಂಗನಾಣೆ' ಎನ್ನಲು ಹಾಗೆಯೇ ನಿಂತಿದೆಯೆಂದು ಹೊಲದೊಡೆಯನು ತಿಳಿಸಿದನು. ಆಗ ಶ್ರೀಸಿದ್ದಲಿಂಗಸ್ವಾಮಿಯವರು ಬಸವನ ಮೈನೇವಿ "ಆಣೆಬಿಟ್ಟಿತು" ಎಂದಾಕ್ಷಣ ವೃಷಭವು ಸಂತೋಷದಿಂದ ಹುಲ್ಲು ಮೇಯಲಾರಂಬಿಸಿತು. ಈ ದೃಶ್ಯವೂ ದೈವಶಕ್ತಿಯನ್ನೊಂದಿದ್ದ ಸಿದ್ದಲಿಂಗನ ಪವಾಡಗಳಲ್ಲಿ ಇದು ಒಂದು ಎಂಬಂತೆ ಕಲಾವಿದ ವಿಷಯಕ್ಕನುಸಾರ ನವಿರಾಗಿ ಚಿತ್ರವನ್ನು ಸಂಯೋಜನೆ ಮಾಡಿದ್ದಾನೆ. ಕೆಂಪು, ಬಿಳಿ, ಹಸಿರು, ನೀಲಿ, ಹಳದಿ ಮತ್ತು ಕಪ್ಪು ವರ್ಣಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡಿದ್ಧಾನೆ.

ಚಿತ್ರ-೮ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ದ್ರಾವಿಡ ನಾಡಿನ ಸುಪ್ರಸಿದ್ದ ಕ್ಷೇತ್ರ

ಮಹಾಬಲೇಶ್ವರಕ್ಕೆ ಶ್ರೀಸಿದ್ದಲಿಂಗೇಶ್ವರರು ಪಾದಯಾತ್ರೆ ಮುಂದುವರಿಸಿದರು. ಪೂರ್ವಜನ್ಮದ ಪಾಪ ಕರ್ಮದ ಫಲವಾಗಿ ಕುಷ್ಠ, ತೊನ್ನು ಇತರೆ ವ್ಯಾಧಿ ಪೀಡಿತಳಾದ ಕುಂತಳೆ ಸುಶೀಲೆ ಸಿದ್ದಲಿಂಗೇಶ್ವರರ ದರ್ಶನ ಪಡೆದಳು. ಅವರು ಆಶಿರ್ವದಿಸಿ ಕೊಟ್ಟ ಭಸ್ಮವನ್ನು ತನ್ನ ಮೈಗೆ ಲೇಪಿಸಿಕೊಂಡಾಗ ಸರ್ವವ್ಯಾಧಿ ಮುಕ್ತಳಾದಳು. ಎಂಬುದನ್ನು ಚಿತ್ರದ ಮೂಲಕ ತೋರಿಸಲಾಗಿದ್ದು, ಕಲಾವಿದನ ಕಲ್ಪನೆ ಅದ್ಬುತವಾಗಿದೆ. ಇದೊಮದು ವ್ಯವಸ್ಥಿತ ಸಂಯೋಜನಾ ಚಿತ್ರವಾಗಿದ್ದು, ಜುಟ್ಟು ಮತ್ತು ಗಡ್ಡದಾರಿಯಾಗಿರುವ ವ್ಯಕ್ತಿಯೇ ಇಲ್ಲಿ ಪವಡವನ್ನೊಂದಿರುವ ಸಿದ್ದಲಿಂಗೇಶ್ವರಸ್ವಾಮಿ. ಹಿಂಬದಿಯಲ್ಲಿ ದೇವಾಯದ ಗೋಪುರಗಳನ್ನು ತೋರಿಸಿದ್ದು, ಪಕ್ಕದಲ್ಲಿ ಶಿಷ್ಯರನ್ನು ನಿಲ್ಲಿಸಲಾಗಿದೆ. ಹಳದಿ, ಕೆಂಪು, ಕಪ್ಪು, ಬಿಳಿ, ನೀಲಿ ಬಣ್ಣಗಳನ್ನು ಇಲ್ಲಿ ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ-೯ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಮಹಾಬಲೇಶ್ವರ ಸಮೀಪದಲ್ಲಿರುವ ಕೃಷ್ಣಾ ನದಿಯು ಬತ್ತಿಹೋಗಿ ಜಲಕ್ಷಾಮವುಂಟಾಗಿತ್ತು. ಈ ಕ್ಷೇತ್ರದ ಅರ್ಚಕರ ಪ್ರಾರ್ಥನೆಯಂತೆ ಶ್ರೀಸಿದ್ದಲಿಂಗೇಶ್ವರರು ಲಿಂಗದ ಮಸ್ತಕವನ್ನೇರಿದಾಗ ಬತ್ತಿ ಹೋಗಿದ್ದ ಜಲ ಪ್ರವಾಹೋಪಾದಿಯಲ್ಲಿ ಮತ್ತೆ ಉಕ್ಕಿ ಹರಿಯಿತು. ಎಂಬ ಸನ್ನಿವೇಶವನ್ನರಿತು ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ತಿಳಿಸುವ ಸುಲಭ ಮಾಹಿತಿಯಲ್ಲಿ ಇದು ಒಂದು ಭಿನ್ನ ಆಯಾಮ. ಸಮಯೋಜನೆಯ ಚಿತ್ರವಾಗಿದ್ದು, ಪವಾಡದ ಪ್ರತಿರೂಪ ಮುಂದುವರೆದ ಭಾಗವಾಗಿರುವ ಚಿತ್ರಕೃತಿಯಾಗಿದೆ. ಇಲ್ಲಿ ಕೆಂ ಪು, ಹಳದಿ, ನೀಲಿ, ಹಸಿರು, ಬಿಳಿ ವರ್ಣಗಳನ್ನು ಬಳಸಲಾಗಿದೆ.

ಚಿತ್ರ-೧೦ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ನಿರಂಜನ ಪಟ್ಟಾಧಿಕಾರಿ ಗುರುಗೋಸುಲ ಚನ್ನಬಸವೇಶ್ವರರು ಶ್ರೀಸಿದ್ದಲಿಂಗೇಶ್ವರರ ಬುದ್ದಿಶಕ್ತಿ, ಧರ್ಮಜ್ಞಾನ, ವೈರಾಗ್ಯಗಳನ್ನು ಕಂಡು ಸಂತೋಷಪಟ್ಟು, ಪರಂಪರಾಗತವಾಗಿ ಬಂದಿರುವ ನಿರಂಜನ ಪೀಠದ ಪಟ್ಟಾಧಿಕಾರವನ್ನು ಅವರಿಗೆ ವಹಿಸಿಕೊಟ್ಟು ಆಶೀರ್ವದಿಸಿದ ಸಂದರ್ಭದ ಚಿತ್ರವಿದಾಗಿದ್ದು, ಪರಿಪೂರ್ಣ ಸಂಯೋಜನೆಯಿಂದ ಕೂಡಿದ್ದಾಗಿದೆ.

ಚಿತ್ರ-೧೧ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಪ್ರಮಿಳಾ ರಾಜ್ಯ ಮಲೆಯಾಳ ದೇಶಕ್ಕೆ ಶ್ರೀಸಿದ್ದಲಿಂಗೇಶ್ವರರ ಆಗಮನ. ಆಳುತ್ತಿದ್ದ ಮಹಾರಾಣಿಗೆ ಧರ್ಮಭೋಧನೆ ಮಾಡಿ, 'ಪ್ರಜೆಗಳನ್ನೆಲ್ಲಾ ನೀತಿವಂತರನ್ನಾಗಿಸುವ ಸುಖೀ ಸಾಮ್ರಾಜ್ಯ ನಡೆಸು' ಎಂದು ಆದೇಶ ನೀಡಿ. ಕೊಡಗು, ಕೊಂಕಣ ದೇಶಗಳೆಡೆಗೆ ಸಂಚಾರವನ್ನು ಮುಂದುವರಿಸಿದರು. ಎಂಬ ಸನ್ನಿವೇಶಕ್ಕೆ ಪೂರಕವಾಗಿ ಈ ಚಿತ್ರವನ್ನು ರಚಿಸಲಾಗಿದೆ. ಇದೊಮದು ಪರಿಪೂರ್ಣ ಸಂಯೋಜನ ಚಿತ್ರವೆಂಬುದನ್ನು ಇಲ್ಲಿರುವ ಒಟ್ಟು ಚಿತ್ರದ ಸಾರಾಂಶವನ್ನು ತಿಳಿದು ಘಟ್ಟಿಗೊಳಿಸಬಹುದಾಗಿದೆ.

ಚಿತ್ರ-೧೨ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಸದಾಚಾರಿ ಸದ್ಭಕ್ತ ಪಡುವಣ ದೇಶದ ಪರಬ್ರಹ್ಮಯ್ಯನ ಮನೆಗೆ ನಾಸ್ತಿಕರಿಂದ ಬೆಂಕಿ ಬೀಳಲು ಆತ ಶ್ರೀಸಿದ್ದಲಿಂಗೇಶ್ವರರನ್ನು ಧ್ಯಾನಿಸಿದ. ಬೆಂಕಿ ಆರಿತು, ಇತ್ತ ನಾಸ್ತಿಕರ ಮನೆಗೆ ಬೆಂಕಿ ಹತ್ತಲು ಅವರು ಸ್ವಾಮಿಯ ಕ್ಷಮೆ ಕೇಳಿದರು. ಶ್ರೀಸಿದ್ದಲಿಂಗೇಶ್ವರರು ಅವರನ್ನು ಕ್ಷಮಿಸಿ, ನಂತರ ಆಸ್ತಿಕರನ್ನಾಗಿ ಮಾಡಿದ ಸಂದರ್ಭದ

ಚಿತ್ರವಿದಾಗಿರುತ್ತದೆ.

ಚಿತ್ರ–೧೩ : ಮಧ್ಯ ಭಾರತದಲ್ಲಿ ಶ್ರೀಸಿದ್ದಲಿಂಗೇಶ್ವರರ ಸಂಚಾರ ಮುಂದುವರೆಯಿತು. ನಡುಬೇಸಿಗೆ ಸಮಯದಲ್ಲಿ ನೇರಳೆ ಮರದಡಿ ವಾಸ್ತವ್ಯ ಹೂಡಿದರು. ಜಂಗಮರು ನೇರಳೆ ಹಣ್ಣನ್ನು ಬಯಸಿದರು. ಶ್ರೀಸಿದ್ದಲಿಂಗೇಶ್ವರರು ಅಕಾಲದಲ್ಲಿ ನೇರಳೆ ವೃಕ್ಷದಲ್ಲಿ ಫಲಗಳನ್ನುಂಟುಮಾಡಿ ಜಂಗಮರನ್ನು ತೃಪ್ತಿ ಪಡಿಸಿದರು. ಎಂಬ ಸಂದರ್ಭವನ್ನು ಇಲ್ಲಿ ತೋರಿಸಿರುವ ಚಿತ್ರಕೃತಿಯಲ್ಲಿ ಸಿದ್ದಲಿಂಗೇಶ್ವರರು ಮತ್ತು ಅವರ ಶಿಷ್ಯರ ತಂಡವಿದ್ದು, ಎಲ್ಲಾರೂ ಕಾವಿ ಬಟ್ಟೆಗಳನ್ನು ಧರಿಸಿದ್ದಾರೆ. ಅರಳಿ ಮರದ ಕೆಳಗೆ ತಪಸ್ಸಿಗೆ ಕುಳಿತಂತಿರುವ ಶ್ರೀಗಳ ಮಾತನ್ನು ಎಲ್ಲಾ ಶಿಷ್ಯವೃಂದ ಆಲಿಸುತ್ತಿರುವಂತೆ ಭಾಸವಾಗುತ್ತಿದೆ. ನೀಲಿ, ಕೆಂಪು, ಹಳದಿ, ಹಸಿರು ಮತ್ತು ಬಿಳಿ ವರ್ಣಗಳನ್ನು ಇಲ್ಲಿ ಹೆಚ್ಚು ಬಳಸಿರುತ್ತಾರೆ.

ಚಿತ್ರ–೧೪ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಮ್ಲೇಚ್ಛರಾಜ ಸಂಚಾರದಲ್ಲಿದ್ದ ಶ್ರೀಸಿದ್ದಲಿಂಗೇಶ್ವರರನ್ನು ಹಿಡಿದು ತರಲು ಕಳುಹಿಸಿದನು. ಭೂತಗಳಿಂದ ಆ ಸೈನ್ಯ ನಾಶವಾಯಿತು. ರಾಜನಿಗೆ ಪ್ರಾಣಭಯವುಂಟಾಗಿ ಶ್ರೀಸಿದ್ದಲಿಂಗೇಶ್ವರಸ್ವಾಮಿಯ ಮೋರೆಹೋಗಲು ಪ್ರಾಣದಾನ ಮಾಡಿದ ಸಂದರ್ಭದ ಚಿತ್ರಕೃತಿಯಾಗಿದ್ದು, ಸಿದ್ದಲಿಂಗಸ್ವಾಮಿಯು ಧ್ಯಾನಸ್ಥರಾಗಿದ್ದು, ಇಬ್ಬರು ಸೈನಿಕರು ಮತ್ತು ಅಶ್ವಗಳು ಅವರ ಭಕ್ತಿಗೆ ತಲೆಭಾಗಿ ನಿಂತಿರುವುದನ್ನು ಕಾಣಬಹುದು.

ಚಿತ್ರ–೧೫ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ಸ್ವಾಮಿ ವಿದ್ಯಾಪುರಿಯಲ್ಲಿ ಶಿವಶರಣೆ ಬಸಮ್ಮನ ಸೇವೆ ಸ್ವೀಕರಿಸಿದರು. ಗಂಗಾಜಲ ಮತ್ತು ಶರಣರ ಪಾದೋದಕ ಇವೆರಡರಲ್ಲಿ ಶ್ರೇಷ್ಠ ಯಾವುದೆಂಬ ಪ್ರಶ್ನೆ ಉದ್ಭವಿಸಲು ಶ್ರೀಸಿದ್ದಲಿಂಗೇಶ್ವರರು ಎರಡರ ಸಮ ಪ್ರಮಾಣವನ್ನು ತಕ್ಕಡಿಯಲ್ಲಿ ತೂಗಿಸಿದರು. ಪಾದೋದಕ ಭಾರವು ಹೆಚ್ಚಾಯಿತು ಮತ್ತು ಗಂಗಾಜಲ ತುಂಬಾ ಹಗುರವಾಯಿತು. ಸನ್ನಿವೇಶಕ್ಕೆ ತಕ್ಕಂತೆ ಚಿತ್ರವನ್ನು ಕಲಾವಿದ ರಚಿಸಿದ್ದಾನೆ.

ಚಿತ್ರ–೧೬ : ಗೋಡೆ ಮೇಲೆ ರಚಿತವಾದ ಈ ಚಿತ್ರದಲ್ಲಿ ವಿಜಯನಗರ (ಆಂದ್ರಪ್ರದೇಶ) ಶರಣೆ ಸೋಮವಾರದ ಬಸಮ್ಮನವರು ಭಕ್ತಿಯಿಂದ ಸೇವಿಸುತ್ತಿದ್ದ ಪಾದೋದಕದ ಪಾವಿತ್ರ್ಯವನ್ನು ಹೀಗಳೆದುದಕ್ಕಾಗಿ ಆ ನಿಂದಕನನ್ನು ವಜ್ರದುಂಬಿಗಳು ಮುತ್ತಿ ಮಾಂಸವನ್ನು ತಿನ್ನತೊಡಗಿದವು. ಮಾಡಿದ ತಪ್ಪನನು ಮನ್ನಿಸಿ, ಶ್ರೀಸ್ವಾಮಿಗಳು ಅವನನ್ನು ಪವಿತ್ರನನ್ನಾಗಿ ಮಾಡಿದರು. ಎಂಬ ಸನ್ನಿವೇಶಕ್ಕೆ ತಕ್ಕಂತೆ ಈ ಚಿತ್ರವನ್ನು ಕಲಾವಿದ ರಚಿಸಿದ್ದಾನೆ.

ಇನ್ನು ಹಲವಾರು ಚಿತ್ರಕೃತಿಗಳು ಈ ಭಾಗದಲ್ಲಿ ಇದ್ದದ್ದು ಸತ್ಯವಾದರೂ ಪ್ರಸ್ತುತ ಅವು ನಾಶಹೊಂದಿವೆ.

ಪ್ರಸನ್ನಕೃಷ್ಣ ದೇವಾಲಯ :

ಮಾನವ ಭಾವನೆಯು ಅಭಿವ್ಯಕ್ತಿಯಾದ ಕಲೆಯ ವಿವಿಧ ರೂಪಗಳಲ್ಲಿದ್ದು, ಅದರಲ್ಲಿ

ಚಿತ್ರಕಲೆಯು ಪ್ರಮುಖವಾಗಿದೆ. ಚಿತ್ರಕಲೆಯಲ್ಲಿಯೂ ಅನೇಕ ಪ್ರಕಾರಗಳಿದ್ದೂ ಅದರಲ್ಲಿ ಭಿತ್ತಿ ಚಿತ್ರಕಲೆ ಪ್ರಾಚೀನತೆಯ ಶಿಲಾಶ್ರಯಗಳಲ್ಲಿ ರಚನೆಯಾಗಿರುವ ವರ್ಣರಹಿತ ಮತ್ತು ವರ್ಣಚಿತ್ರಗಳು ಪ್ರಾರಂಭಿಕ ಭಿತ್ತಿ ಚಿತ್ರಕಲೆಯೆಂದು ಗುರುತಿಸುತ್ತಾರೆ. ಭಾರತದಲ್ಲಿ ಹಲವು ನೆಲೆಗಳಲ್ಲಿ ಕ್ರಿ.ಪೂ. ಹಿಂದಿನಿಂದಲೂ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಕಲೆಗಳಿವೆ. ನಂತರ ಕಾಲವಾದಂತಹ ಐತಿಹಾಸಿಕ ಕಾಲದಲ್ಲಿ ದೊಡ್ಡ ಪ್ರಮಾಣದ ಸಾಂಪ್ರದಾಯಿಕ ಪ್ರಕಾರಗಳಲ್ಲಿ, ರಾಜವಂಶಸ್ಥರ ಆಶ್ರಯದಲ್ಲಿ ಬೆಳೆದಿರುವುದನ್ನು ಸಿಂಧೂ ನಾಗರೀಕತೆ, ವೇದಕಾಲ ಆ ನಂತರದ ರಾಮಾಯಣ, ಮಹಾಭಾರತಗಳಲ್ಲಿ ಅರಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಲಾಗಿತ್ತು ಎಂಬುದು ಹಲವು ಸಾಹಿತ್ಯಗಳಲ್ಲಿ ಗುರುತಿಸಿದ್ದಾರೆ.[೧೧]

ಸಾಂಸ್ಕೃತಿಕವಾಗಿ ಹೆಚ್ಚು ಕಾಣಿಕೆ ನೀಡಿದ ಕರ್ನಾಟಕದಲ್ಲಿ ಭಿತ್ತಿ ಚಿತ್ರಕಲೆಯ ಒಂದು ಶಿಷ್ಟ ಪರಂಪರೆ ಯಾಗಿ ಕಾಲಕಾಲಕ್ಕೆ ಶ್ರೀಮಂತಗೊಳ್ಳುತ್ತಾ ಬೆಳೆದಿರುತ್ತದೆ. ಅದು ಕದಂಬರಿಂದಲೇ ಆದರೂ ಬಾದಾಮಿ ಚಾಲುಕ್ಯರಿಂದ ಪ್ರತಿಬಿಂಬಿಸುತ್ತಾ ಹೊಯ್ಸಳ, ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರವಾಗಿ ಬೆಳೆಯಿತು. ಆ ನಂತರ ದೊರೆಗಳಾದ ಮೈಸೂರು ಒಡೆಯರು ಪ್ರವರ್ಧನಮಾನಕ್ಕೆ ಬಂದಾಗ ಮೈಸೂರಿನ ಆಡಳಿತಕ್ಕೆ ಒಳಪಟ್ಟಂತಹ ಪ್ರಾಂತ್ಯಗಳಲ್ಲಿ ಭಿತ್ತಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನಿಡಿದವರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ೧೭ನೇ ಶತಮಾನ, ಚಾಮರಾಜ ಒಡೆಯರು ೧೮ನೇ ಶತಮಾನ, ನಾಲ್ವಡಿಕೃಷ್ಣರಾಜ ಒಡೆಯರು ಇವರ ಕಾಲದಲ್ಲಿ ಚಿತ್ರಕಲೆಯು ಸಮೃದ್ಧವಾಗಿ ಬೆಳೆದು ಬಂತು. ಹಾಗಾಗಿ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ ಅಂದಿನ ಕಲೆಯ ನೆಲೆಗಳು ಕಲಾರಾಧಕರಿಗೆ, ಕಲಾಶಿಕ್ಷಣಕ್ಕೆ ದೇವಾಲಯಗಳಾಗಿ ಸಂಶೋಧನೆಗೆ ದೊಡ್ಡ ಆಕಾರ ಸಾಮಾಗ್ರಿಯಾಗಿದೆ.

ಇಲ್ಲಿನ ಭಿತ್ತಿ ಚಿತ್ರ ರಚನೆಯಲ್ಲಿ ಪ್ರೊಸ್ಕೋ, ಸೆಕ್ಕೋ ಎಂಬ ಒಣ ಭಿತ್ತಿ ವಿಧಾನದಿಂದ ಚಿತ್ರ ರಚಿಸಿದ್ದಾರೆ. ಶಾಸ್ತ್ರ ನಿಯಮಾನುಸಾರ ಸಂಪ್ರದಾಯ ಬದ್ಧ ಮಾನವ, ದೇವ-ದೇವತೆಯರು ಹಾಗೂ ಪ್ರಾಣಿ-ಪಕ್ಷಿಗಳ ಅಳತೆಯ ಸೂತ್ರವಾದ ತಾಳಮಾನಗಳಲ್ಲಿ ಚಿತ್ರಿಸಿದ್ದಾರೆ. ಷಡಂಗಗಳ ಅರಿವಿನಿಂದಲೇ ಅಲಂಕಾರಿಕ ನಕ್ಷೆ ಸಹ ಚಿತ್ರಿಸಿದ್ದಾರೆ. ಚಿತ್ರಕಾರರು ಈ ಚಿತ್ರಗಳನ್ನು ಆರು ಹಂತಗಳಲ್ಲಿ ಪೂರ್ತಿಗೊಳಿಸುತ್ತಿದ್ದರು, ಎಂದು ತಿಳಿದುಬರುತ್ತದೆ. ಅದನ್ನು ಗೋಡೆ, ಕಿಟಕಿಯ ಬಾಗಿಲು, ಕಂಬ, ಮೇಲ್ಛಾವಣಿಗಳಿಗೆ ಅಳವಡಿಸಿದ ಕಲ್ಲು, ಮರ, ಗಾಜು, ಲೋಹ ಹಾಳೆಯತರದ ಮಾಧ್ಯಮಗಳ ಮೇಲೂ ಮೈಸೂರಿನ ಭಿತ್ತಿಚಿತ್ರ ರಚನೆಗೊಂಡಿ ರುತ್ತದೆ. ಅದರಲ್ಲಿ ಮೂರು ರೀತಿಯ ವಿಧಿವಿಧಾನಗಳಿಂದ ಚಿತ್ರ ರಚಿಸಿರುವುದು ಕಂಡುಬರುತ್ತದೆ. ಅದನ್ನು ಒಣಗಾರೆಯ ಭಿತ್ತಿಯ ಮೇಲೆ ರಚಿಸಿರುತ್ತಾರೆ. ಎರಡನೆಯದಾಗಿ ಗೋಡೆಯ ಮೇಲೆ ಬಟ್ಟೆ (ಕ್ಯಾನ್‌ವಾಸ್) ಅಚಿಡಿಸಿ ಚಿತ್ರಿಸಿರುವುದು ಅಂತಿಮವಾಗಿ ಆಧುನಿಕ ಮಾಧ್ಯಮ ಪರಿಕರಗಳಿಂದ ಭಿತ್ತಿಚಿತ್ರ ರಚನೆಗೊಂಡಿರುತ್ತದೆ. ಇಲ್ಲಿ ವಿಶೇಷವಾಗಿ ೧೭ನೇ ಶತಮಾನದ ನಂತರ ೨೦ನೆಯ ಶತಮಾನದ ಆಸುಪಾಸಿನಲ್ಲಿ ದೇಶೀಯ ಗುಣಲಕ್ಷಣಗಳಿಂದ ಕೂಡಿದ ಸಂಪ್ರದಾಯಬದ್ಧವಾದ ಧಾರ್ಮಿಕ

ಭಿತ್ತಿಚಿತ್ರಕಲೆ ಒಂದು ಪ್ರಕಾರವಾದರೆ, ಇನ್ನೊಂದು ಬ್ರಿಟಿಷ್‌ರ ಪ್ರೇರಣೆಗೊಳಗೊಂಡ ರಿಯಾಲಿಸ್ಟಿಕ್.

ಮೈಸೂರು ಜಿಲ್ಲೆಯಲ್ಲಿ ಭಿತ್ತಿಚಿತ್ರ ರಚನಾ ಕಾರ್ಯ ಪ್ರಾಚೀನ ಐತಿಹಾಸಿಕದ ಕಾಲದಿಂದಲೂ ಇರುವುದು ಕೆಲವು ಸಾಹಿತ್ಯಾಧಾರಗಳಲ್ಲಿ ಮತ್ತು ಅರಮನೆಯ ಚರಿತ್ರೆ ನೋಡಿದರೆ ತಿಳಿದುಬರುತ್ತದೆ. ಯದುರಾಯರ ಹಿಂದಿನಿಂದಲೂ ಅರಮನೆ ಇತ್ತು. ಆ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಒಡೆಯರು ಹಲವು ದೇವತೆಗಳ ಸುಂದರ ಭಿತ್ತಿ ಚಿತ್ರಗಳಿಂದ ಅಲಂಕರಿಸಿದ ಅರಮನೆಯಲ್ಲಿ ವಾಸಿಸುತ್ತಿದ್ದರು ಎಂದು ಭೇಟಿ ನೀಡಿದ ಪ್ರವಾಸಿಗರ ಪತ್ರ ಮತ್ತು ಅನೇಕ ಸಾಹಿತ್ಯ ಗ್ರಂಥದಲ್ಲಿ ಉಲ್ಲೇಖಗೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಮುಂದೇ ೧೭ನೇ ಶತಮಾನದ ಟಿಪ್ಪು ಆಡಳಿತದಲ್ಲಿ ಆ ಅರಮನೆಯನ್ನು ಕೆಡವಿದ್ದರಿಂದ ಅಲ್ಲಿದ್ದ ಭಿತ್ತಿಚಿತ್ರಗಳು ನಾಶವಾಯಿತು ಎಂದು ತಿಳಿದುಬರುತ್ತದೆ. ೧೮ನೇ ಶತಮಾನದಲ್ಲಿ ಅದೇ ಜಾಗದಲ್ಲಿ ಎರಡನೇ ಅರಮನೆಯನ್ನು ಇನ್ನೂ ದೊಡ್ಡದಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಮರದಿಂದ ಅರಮನೆಯನ್ನು ಕಟ್ಟಿಸಿದರು. ಹಿಂದೂ ಶೈಲಿಯಲ್ಲಿ ಸುಂದರ ಕೆತ್ತನೆಗಳಿಂದ ಕೂಡಿದ ಶಿಲ್ಪಗಳ ಜೊತೆಗೆ ದರ್ಬಾರ್ ಸಭಾಂಗಣವನ್ನು ಬಣ್ಣಬಣ್ಣದ ಭಿತ್ತಿ ಚಿತ್ರಗಳಿಂದಲೂ ಚಿನ್ನದ ಮುಲಾಯಿನಿಂದಲೂ ಅಲಂಕೃತವಾಗಿತ್ತು. ಅಲ್ಲಿ ಕೆಲವು ಯೂರೋಪಿಯನ್ ಕಲಾವಿದರ ಚಿತ್ರಗಳು ಸಹ ಹಲವು ಇದ್ದವು ಎಂದು ತಿಳಿದು ಬರುತ್ತದೆ. ೧೮೯೭ರ ಮದುವೆಯ ಸಂದರ್ಭದಲ್ಲಿ ಆ ಮರದ ಅರಮನೆಯ ಕೆಲವು ಭಾಗವು ಬೆಂಕಿಗೆ ತುತ್ತಾಯಿತು. ಆ ನಂತರದಲ್ಲಿ ಮತ್ತೊಂದು ಅರಮನೆಯನ್ನು ಇಲ್ಲಿನ ಅರಸರು ಕಟ್ಟಿಸಿದ್ದರು.

೧೯ನೆಯ ಶತಮಾನದಲ್ಲಿ ಈ ದೇಶದ ಅಗ್ರಗಣ್ಯ ಕಲಾಕಟ್ಟಡವನ್ನು ಮಹಾರಾಣಿ ವಾಣಿ ವಿಲಾಸಮ್ಮ ಅವರ ಆಸೆಯಂತೆ ಹೊಸ ಅರಮನೆ ಕಟ್ಟಿಸಲಾಯಿತ್ತು. ಅದಕ್ಕೆ ಅಂಬಾವಿಲಾಸ ಅರಮನೆ ಅದು ಮೈಸೂರು ಅರಮನೆ ಎಂದು ಇಂದು ಪ್ರಪಂಚದಲ್ಲೆ ಖ್ಯಾತಿ ಗಳಿಸಿದೆ. ಇದು ಇಂಡೋಸಾರ್ಸೆನಿಕ್ ಮತ್ತು ಮುಸ್ಲಿಂ ಶೈಲಿಯ ಸಮ್ಮಿಲನವನ್ನು ಇದರಲ್ಲಿದ್ದು ಒಳ ಎಲ್ಲಾ ಭಾಗದಲ್ಲಿ ಹೊಯ್ಸಳ ಶೈಲಿ, ಮೈಸೂರು ಶೈಲಿಯ ಶಿಲ್ಪಮೂರ್ತಿಗಳು, ಅಲಂಕಾರಿಕ ಉಬ್ಬು ಕೆತ್ತನೆ, ನಕ್ಷೆಗಳು ಹಾಗೂ ಸೂಕ್ಷ್ಮತೆ ಒಳಗೊಂಡಂತಹದ್ದು ಕಲ್ಯಾಣಮಂಟಪ ಮತ್ತು ದರ್ಬಾರ್ ಹಾಲ್‌ಗಳಲ್ಲಿ ಭಿತ್ತಿ ಚಿತ್ರಕಲೆ ಇರುವುದು ಕಂಡುಬರುತ್ತದೆ.

ಅರಮನೆ ಕೋಟೆಯ ಆವರಣದಲ್ಲಿರುವ ದೇವಾಲಯಗಳ ಭಿತ್ತಿ ಚಿತ್ರಗಳಲ್ಲಿ ಮೊದಲನೆಯದಾಗಿ ೧೮ನೇ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರಿಯ ದೇವರಾದ ಪ್ರಸನ್ನ ಕೃಷ್ಣನಿಗೆ ಮತ್ತು ಅವರ ತಾಯಿಯ ಆಸೆಯಂತೆ ಆ ದೇವರಿಗೆ ಒಂದು ದೇವಾಲಯ ಸ್ಥಾಪಿಸಿದರು. ಆ ದೇವಾಲಯದ ನವರಂಗದ ಸುತ್ತಲೂ ಅದ್ಭುತವಾದಂತಹ ಭಾಗವತದ ಕೃಷ್ಣನ ಬಾಲಲೀಲೆಗೆ ಸಂಬಂಧಪಟ್ಟಂತಹ ಭಿತ್ತಿ ಚಿತ್ರಗಳನ್ನು ರಚಿಸಿದ್ದಾರೆ. ನವರಂಗದ ಸುತ್ತಲೂ ಸಾಲಾಗಿ ಉದ್ದಪಟ್ಟಿಗಳಲ್ಲಿ ಹಾಗೂ ಕಂಬಗಳ ಮೇಲೆ ಚಿತ್ರಿಸಿದ್ದಾರೆ. ಅದು ಹಳದಿ ಹಿನ್ನೆಲೆಯಿಂದ ಕೂಡಿದಲ್ಲದೆ ರೇಖೆಯು

ಲಾಲಿತ್ಯ ಪೂರ್ಣದಿಂದ ಉತ್ತಮವಾಗಿದ್ದು, ಕಥೆಯು ಶೌಕಮುನಿಯಿಂದ ಪಿರಮಿಡ್ ರಾಜನ್ನು ಕೃಷ್ಣನ ಜನನ ಕಥೆಯನ್ನು ಕೇಳುತ್ತಿರುವುದರಿಂದ ಭಿತ್ತಿ ಚಿತ್ರಗಳು ಪ್ರಾರಂಭವಾಗುತ್ತದೆ. ವಿಷ್ಣುವನ್ನು ದೇವತೆಗಳು ಪ್ರಾರ್ಥಿಸುತ್ತಿರುವ ಚಿತ್ರ, ದೇವಕಿ ಮತ್ತು ವಸುದೇವನನ್ನು ಕಂಸು ಸಂತೋಷದಿಂದ ಕರೆದು ಹೋಗುತ್ತಿರುವ ಚಿತ್ರ, ನಾರಾಯಣನನು ಪ್ರತ್ಯಕ್ಷವಾಗಿರುವ ಚಿತ್ರ, ಶಂಕಸುರವಧೆ, ವರ್ಕಾಸುರ ಸಂಹಾರ, ಮುಳಾರ್ಜುನ ಭಂಜನ ಚಿತ್ರ, ವೃಷಾಭಸುರ ಸಂಹಾರ, ಪ್ರಲಂಭಾಸುರವಧೆ, ಜಲಕ್ರೀಡೆಚಿತ್ರ, ಗೋವರ್ಧನ ಪೂಜೆಯ ಚಿತ್ರ, ಗೋವಿಂದ ಪಟ್ಟಾಭಿಷೇಕದ ಚಿತ್ರ ಗುರುವಿನ ಬಳಿ ವಿದ್ಯಾಭ್ಯಾಸಾಂಗಚಿತ್ರ, ಇಲ್ಲಿನ ಚಿತ್ರಗಳಲ್ಲಿ ಅನೇಕ ರಾಕ್ಷಸರನ್ನು ಸಂಹಾರಮಾಡುವ ದೃಶ್ಯಗಳು, ರುಕ್ಮಿಣಿಯ ಮದುವೆ, ಕಂಸಸಂಹಾರ, ಮಧುರೆಗೆ ಹೋಗುವರೆಗಿನ ಕಥೆಯ ಭಿತ್ತಿ ಚಿತ್ರಗಳು ಇಲ್ಲಿ ಕಂಡುಬರುತ್ತದೆ. ಹೆಚ್ಚು ರೇಖೆಗಳಿಂದಲೇ ಕೂಡಿ ಚಿಕ್ಕ ಚಿಕ್ಕ ಚಿತ್ರಗಳಾದರು ಸುಂದರವಾಗಿ ಮನಮೋಹಕ ಭಕ್ತಿ ಸಾರುವ ಚಿತ್ರಗಳಾಗಿದೆ. ವರ್ಣಸಂಯೋಜನೆ ಹಿತಮಿತವಾಗಿದ್ದು. ಹಿನ್ನಲೆಯ ವರ್ಣಸೇರಿಸಿ ಆಕೃತಿಗಳನ್ನು ರಚಿಸಿದ್ದಾರೆ.

ಭಿತ್ತಿ ಚಿತ್ರಗಳ ವಸ್ತು ವಿಷಯ :

ಚಿತ್ರ–೧ : ಪೂತ ಪುರಾಣಿಕರು ಮತ್ತು ಮಹರ್ಷಿ :

ಒಂದು ಕಥೆಯ ಹಿನ್ನೆಲೆಯನ್ನು ಹೇಳುವ ಹಿರಿಯರನ್ನು ಕಾಣುತ್ತೇವೆ. ಅದೇ ರೀತಿ ಈ ಒಂದು ದೃಶ್ಯವು ನಮ್ಮ ಕಣ್ಣಿಗೆ ಗೋಚರಿಸುತ್ತಿದೆ. ಸೂತ ಪುರಾಣಿಕರನ್ನೊಳಗೊಂಡ ಈ ಚಿತ್ರದಲ್ಲಿ ಮಹರ್ಷಿಯೊಬ್ಬರು ತನ್ನ ಶಿಷ್ಯ ಬಳಗಕ್ಕೆ ಕೃಷ್ಣ ಬೆಳೆದು ಬಂದ ಬಗೆಯನ್ನು ಜೀವನದ ವಿಸ್ತಾರ ಘಟನೆಗಳು ಸವಿಸ್ತಾರವಾಗಿ ಹೇಳುತ್ತಿರುವಂತೆ ಭಾಸವಾಗುತ್ತಿದೆ. ಇದೇ ಸನ್ನಿವೇಶವನ್ನಿಟ್ಟುಕೊಂಡೇ ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಗರ್ಭಗುಡಿಯ ಮುಂಭಾಗದ ಹಾಲ್‌ನಲ್ಲಿ ಭಿತ್ತಿ ಚಿತ್ರಗಳನ್ನು ರಚಿಸಲಾಗಿದೆ. ಈ ಚಿತ್ರಕೃತಿಯನ್ನು ಗೋಡೆಯ ಮೇಲೆ ರಚಿಸಲಾಗಿದ್ದು, ಒಂದು ಮರದ ಕೆಳಗೆ ಒಬ್ಬ ಮಹರ್ಷಿ ಎಡಮೊಣಕಾಲಿನ ಮೇಲೆ ಒಂದು ಕೈ ಇಟ್ಟು, ಮತ್ತೊಂದು ಕೈಯಿಂದ ಆಶೀರ್ವದಿಸುತ್ತ, ದೇವರು ಹೇಗಿರುತ್ತಾನೆ. ಕೃಷ್ಣನ ಲೀಲೆಗಳು ಯಾವ ರೀತಿಯಲ್ಲಿದ್ದವು. ಅವನ ತತ್ವಗಳೆಗಿದ್ದವು. ಪವಾಡಗಳು ಜನರನ್ನು ತಲುಪಿದ ಹಂತಗಳಾವುವು. ಮಹಾಭಾರತದಲ್ಲಿ ಕೃಷ್ಣ ಪಾತ್ರ ಎಂತಹದ್ದು, ತಾಯಿ, ತಂದೆ, ಅಣ್ಣನ ಪರಿಶ್ರಮವೇನು ಎಂಬಿತ್ಯಾದಿ ಬದುಕಿನ ಕ್ಷಣಗಳನ್ನು ಇಲ್ಲಿನ ಚಿತ್ರಗಳ ಮೂಲಕ ಸವಿಯಬಹುದು ಎಂಬಂತೆ ಚಿತ್ರದ ಹಿನ್ನೆಲೆಯ ಕೊನೆಯ ಘಟ್ಟಕ್ಕೆ ಬಂದು ನಿಂತಿರುವಂತೆ ಗ್ರಾಸವಾಗುತ್ತಿರುವ ಈ ಚಿತ್ರಕೃತಿಯಲ್ಲಿ ಮೂವರು ಶಿಷ್ಯರು ಗುರುವಿಗೆ ನಮನವನ್ನು ಸಲ್ಲಿಸುತ್ತಿದ್ದಾರೆ. ಕೃಷ್ಣ ಕಥೆ ಕೇಳಿದ ನಾವೇ ಧನ್ಯ ಎಂಬ ಮಹದಾಶ್ಚರ್ಯ ಶಿಷ್ಯಬಳಗದ್ದಾಗಿದೆ. ಈ ಚಿತ್ರದಲ್ಲಿರುವ ನಾಲ್ವರು ಗಡ್ಡದಾರಿಗಳಾಗಿದ್ದು, ಕೈಯಲ್ಲಿ ರುದ್ರಾಕ್ಷಿ ಸರ, ಕೊರಳಲ್ಲಿ ಬಟ್ಟೆಯ ಸರ, ತೋಳಲ್ಲಿ ಸರ, ಎದೆಗೆ ಶಲ್ಯ, ಸೊಂಟಕ್ಕೆ ಪಂಚೆ ಹಾಕಿರುವುದನ್ನು ಕಾಣಬಹುದು. ಹಚ್ಚ ಹಸಿರಿನ ಮರ, ಹಳದಿ ಪರಿಸರ ಸಮೃದ್ಧಿಯನ್ನು ಸೂಚಿಸುತ್ತದೆ. ಇದರಲ್ಲಿ

ಒಟ್ಟು ಐದು ವರ್ಣಗಳನ್ನು ಕಾಣಬಹುದು. ಹಳದಿ, ಕೆಂಪು, ಬಿಳಿ, ಹಸಿರು, ಕಪ್ಪು ಮುಖ್ಯವಾಗಿವೆ. ರೇಖೆಗಳಲ್ಲಿ ಸ್ಪಷ್ಟತೆಯಿಲ್ಲವಾದರೂ ನೋಡಿದವರಿಗೆ ಈ ಚಿತ್ರ ಇದೇ ದೃಶ್ಯವೆಂಬಂತೆ ಗೋಚರಿಸುತ್ತದೆ.

ಚಿತ್ರ-೨ : ಶುಕಮಹರ್ಷಿಯು ರಾಜನಿಗೆ ಭಾಗವತನ ಕಥೆ ಹೇಳಿದ್ದು :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯು ಮೂರು ವ್ಯಕ್ತಿಗಳನ್ನು ಬಿಂಬಿಸಿರುತ್ತದೆ, ಒಬ್ಬ ರಾಜ, ಸೇವಕ ಮತ್ತು ಮಹರ್ಷಿ, ಶೀರ್ಷಿಕೆ ಹೇಳುವಂತೆ ಭಾಗವತನ ಕಥೆಯನ್ನು ಹೇಳುತ್ತಿರುವಂತೆ ಭಾಸವಾಗುವ ಈ ಕೃತಿಯಲ್ಲಿ ಮಹರ್ಷಿಯ ಚಿತ್ರ ಸ್ವಲ್ಪ ಭಿನ್ನವಾಗಿದೆ. ಅದಕ್ಕೆ ಕಾರಣವೂ ಇದೆ. ಕೃಷ್ಣನ ಬಣ್ಣವೆನ್ನುತ್ತ ಮಹರ್ಷಿ ಗಿಣಿಮೂಗು, ದುಂಡಾದ ಕಣ್ಣನ್ನು ಹೊಂದಿರುತ್ತಾನೆ. ತಲೆಗೆ ಕಿರೀಟ ಸಂದಿರುತ್ತದೆ. ರಾಜನಿಗೆ ಆಶೀರ್ವದಿಸುವ ದಿಕ್ಕಿನಲ್ಲಿ ಸಾಗಿದಂತಿರುವ ಮಹರ್ಷಿಯ ನಡೆಯಲ್ಲಿ ಗಾಂಭೀರ್ಯತೆಯಿದೆ. ಅದನ್ನು ರಾಜನು ಅಷ್ಟೇ ವಿನಮ್ರತೆಯಿಂದ ಸ್ವೀಕರಿಸಿದ ಮನೋಲಗ್ನತೆ ಹೊಂದಿದ್ದಾರೆ. ರಾಜ ತನ್ನ ಆಸನದಲ್ಲಿ ಕುಳಿತುಕೊಂಡಿದ್ದು, ಸೇವಕ ಗಾಳಿ ಭೀಸುತ್ತಾ ಮಹರ್ಷಿಯ ಕಡೆ ತನ್ನ ಕಣ್ಣನ್ನು ವಾಲಿಸಿದ್ದಾನೆ. ಈ ಸೂಕ್ಷ್ಮತೆ ಕಲಾವಿದರಲ್ಲಿ ಬಂದಿರುವುದೇ ಆಶ್ಚರ್ಯ, ಕಥೆಯ ಹಿನ್ನಲೆಯನ್ನು ಪರಿಗಣಿಸಿ ಚಿತ್ರರಚಿಸುವುದು ಕಲಾವಿದನಿಗೆ ಚಾಲೆಂಜ್ ಆದರೂ ನೋಡುಗರು ಸ್ವೀಕರಿಸಿದಾಗ ಮಾತ್ರ ಅದರ ಶ್ರೇಯಸ್ಸು ಕಲಾವಿದನಿಗೆ ತಟ್ಟುತ್ತದೆ. ತೆಳುವಾದ ಹಳದಿ ಬಣ್ಣವನ್ನು ಹಿಂಬದಿಯಲ್ಲಿ ತೋರಿಸಿದ್ದು, ಯಾರೊಬ್ಬರಿಗೂ ಯಾವುದೇ ಕೊರತೆಯಾಗದ ರೀತಿಯಲ್ಲಿ ಚಿತ್ರಕೃತಿ ಮೂಡಿಸಿದ್ದಾರೆ. ಹಳದಿ, ಕೆಂಪು, ಬಿಳಿ ಹಸಿರು ಮತ್ತು ನೀಲಿ ವರ್ಣಗಳು ಮಾತ್ರ ಗೋಚರಿಸುತ್ತಿವೆ.

ಚಿತ್ರ-೩ : ವಿಷ್ಣುವನ್ನು ದೇವತೆಗಳು ಪ್ರಾರ್ಥಿಸುತ್ತಿರುವ ದೃಶ್ಯ :

ಗೋಡೆ ಮೇಲೆ ಚಿತ್ರಿತವಾಗಿರುವ ಈ ಕೃತಿಯು ಎರಡು ಅಡಿ ಉದ್ದ, ಆರು ಅಡಿ ಅಗಲವನ್ನು ಹೊಂದಿರುತ್ತದೆ. ಈ ಕೃತಿಯ ಕೇಂದ್ರ ಬಿಂದು ವಿಷ್ಣು, ಆರಾಧ್ಯದೈವ ಸ್ವರೂಪಿಯಾಗಿರುವ ವಿಷ್ಣು, ಏಳುತಲೆಯ ಬೃಹದಾಕಾರ ಹೊಂದಿರುವ ಸಿಂಬೆ ಹೊಯ್ದು ತಲೆ ಎತ್ತಿ ನಿಂತ ಹಾವಿನ ಮೇಲೆ ಮಲಗಿದ್ದು, ಕಾಲಬಳಿಯಲ್ಲಿ ಇಬ್ಬರು ಪತ್ನಿಯರು ಪಾರವನ್ನೊತ್ತುತ್ತಾ ವಿಶ್ರಾಂತಿಗೆ ಸಹಕರಿಸುತ್ತಿದ್ದರೆ, ಇತ್ತ ಎಡಭಾಗದಲ್ಲಿ ನಾಲ್ವರು ದೇವತೆಗಳು, ನಿಂತಿರುವ ವಿಷ್ಣುವನ್ನು ಭಕ್ತಿಯಿಂದ ಕೈಮುಗಿದು ನಮಸ್ಕರಿಸುವ ದೃಶ್ಯ, ಹಳದಿ ಗೋಡೆಯ ಮೇಲೆ ರೇಖೆಗಳನ್ನು ಹಾಕಿ, ಬಣ್ಣದಿಂದ ಜೀವ ತುಂಬಿರುವ ಕಲಾವಿದ ಇಲ್ಲಿ ಗೆದ್ದಿದ್ದಾನೆ. ವಿಷ್ಣುವಿನ ಕಥೆಯಲ್ಲಿ ಬರುವ ಈ ದೃಶ್ಯ ಭಕ್ತಿ, ಭಾವವನ್ನು ಸೂಸುತ್ತದೆ. ದೇವರನ್ನು ಯಾಕೆ? ಮತ್ತು ಹೇಗೆ? ನೋಡಬೇಕು. ಅವನ ಶಕ್ತಿ ಎಂತಹದ್ದು, ಶೌರ್ಯದ ಮನೋಭಾವ ಹೇಗಿರುತ್ತೆ! ಶಾಂತಿ ಎಂದರೆ ಯಾವುದು, ಸಹನೆಯೊ/ ಸಹಬಾಳ್ವೆಯೋ ಎಂಬಿತ್ಯಾದಿ ಅಂಶಗಳ ಕಡೆಗೆ ಗಮನ ಹರಿಸಿದಾಗ ಈ ಚಿತ್ರದ ಕೇಂದ್ರ ಬಿಂದು ವಿಷ್ಣು ಸ್ವರೂಪಿ ಸೌಂದರ್ಯದಂತೆ ಬಿಂಬಿತವಾಗಿರುತ್ತದೆ. ಮಲಗಿರುವ ವಿಷ್ಣು, ದೇವತೆಗಳತ್ತ

ನೋಟ ಬೀರಿರುವುದು. ಬಲಗೈ ತಲೆಗೆ ಹೊರಗಿಕೊಂಡು ಎಡಗೈ ತೊಡೆಯನ್ನು ಮೇಲೆ ಇಟ್ಟಿದ್ದು ಹಾವನ್ನೆ ಹಾಸಿಗೆಯನ್ನಾಗಿ ಮಾಡಿಕೊಂಡಿರುವುದು ವಿಶೇಷಗಳಲ್ಲೊಂದು, ಮತ್ತೊಂದು ವಿಶೇಷತೆಯೆಂದರೆ ಶಿವ ಮತ್ತು ಪಾರ್ವತಿಯರು ಕೂಡ ಇಲ್ಲಿ ನಿಂತಿರುವುದನ್ನು ಕಾಣಬಹುದು. ಆರು ವರ್ಣಗಳನ್ನು ಬಳಸಿ ಕಲಾಕೃತಿಗಳನ್ನು ರಚಿಸಲಾಗಿದ್ದು, ಸಂಯೋಜನೆಯಿಂದ ಕೂಡಿರುತ್ತದೆ. ರೇಖೆಗಳಲ್ಲಿ ಸ್ಪಷ್ಟತೆಯಿದ್ದು, ಬಟ್ಟೆಗಳಲ್ಲಿ ನೆರಿಗೆಯನ್ನು ತೋರಿಸಿ ಸ್ತ್ರೀ ಸೌಂದರ್ಯವನ್ನು ಹೆಚ್ಚಿಸಲಾಗಿದೆ.

ಚಿತ್ರ-೪ : ರುಕ್ಮಿಣಿ ಹರಣ :

ಇದು ಗೋಡೆಯಲ್ಲಿರುವ ನಾಲ್ಕನೇ ಚಿತ್ರಕೃತಿ. ಕಥೆಗೆ ಸಂಬಂಧಿಸಿದ ಚಿತ್ರ ಇದಾಗಿರುವುದರಿಂದ ಈ ಚಿತ್ರಕ್ಕೆ ಶಿರ್ಷಿಕೆಯನ್ನು ನೀಡಲಾಗಿದೆ. ಅದು ರುಕ್ಮಿಣಿ ಹರಣ ಅಂದರೆ ಹರಣವೆಂದರೆ ಅಪಹರಣ, ಕದ್ದು ಹೊಯ್ಯುತ್ತಿರುವುದು. ಈ ಚಿತ್ರಕೃತಿಯಲ್ಲಿ ಪ್ರಮುಖವಾಗಿ ಕುದುರೆ ರಥದಲ್ಲಿ ಇಬ್ಬರು ವ್ಯಕ್ತಿಗಳು ಕುಳಿತು ಮೌನದಲ್ಲಿರುವಂತೆ ಕೈಯಲ್ಲಿ ದುಂಬಿಯನ್ನು ಹಿಡಿದಿರುವುದನ್ನು ಕಾಣಬಹುದು. ಬಹುವೇಗವಾಗಿರುವ ರಥದಲ್ಲಿ ಒಟ್ಟು ಮೂವರನ್ನು ಕಾಣಬಹುದು. ಇದರ ಹಿಂಬದಿಯಲ್ಲಿ ಸೈನಿಕರು ಕುದುರೆಯನ್ನೇರಿ ಕೈಯಲ್ಲಿ ಕತ್ತಿಯನ್ನಿಡಿದುಕೊಂಡು ಸಾಗುತ್ತಿರುವಂತೆ ಭಾಸವಾಗುತ್ತಿದೆ. ಮೈಸೂರು ಮತ್ತು ವಿಜಯನಗರ ಶೈಲಿಯನ್ನೋಲುವ ಈ ಚಿತ್ರದಲ್ಲಿ ತೆಳುವರ್ಣಗಳನ್ನು ಬಳಸಲಾಗಿದೆ. ಅಲಂಕಾರವಿರುವ ಕುದುರೆಗಳು ರುಕ್ಮಿಣಿ ಮತ್ತು ಸಹಪಾಠಿಯು ಕೂಡ ಅಲಂಕಾರವನ್ನೊಂದಿದ್ದು ರಾಜ ವಾಹನದಲ್ಲೇ ಕರೆದುಕೊಂಡು ಹೋಗುವ ಪರಿ ಕಣ್ಮುಂದೆ ಬಂದು ನಿಂತಂತೆ ಭಾಸವಾಗುತ್ತಿದೆ. ಕೆಂಪು, ಹಳದಿ, ನೀಲಿ ಮತ್ತು ಬಿಳಿ, ಕಪ್ಪು ವರ್ಣಗಳನ್ನಷ್ಟೇ ಬಳಸಿ ಚಿತ್ರಕೃತಿಯನ್ನು ಮುಗಿಸಲಾಗಿದೆ.

ಚಿತ್ರ-೫ : ರುಕ್ಮಿಣಿ ಮಾನಭಂಗ :

ಗೋಡೆಯ ಮೇಲೆ ರಚಿತವಾಗಿರುವ ಐದನೆ ಕೃತಿಯಾಗಿದ್ದು, ಹಿಂದಿನ ಚಿತ್ರದಂತೆ ಕಂಡುಬಂದರೂ, ಈ ಕೃತಿಯಲ್ಲಿ ಅಲ್ಪ ಬದಲಾವಣೆಯನ್ನು ಕಾಣಬಹುದು. ಅದೇ ಅಶ್ವಗಳು, ರಥದ ಹಿಂದೆ ಸೈನಿಕರು, ರಥದಲ್ಲಿ ನಾಲ್ವರು ವ್ಯಕ್ತಿಗಳಾದರೂ ರುಕ್ಮಿಣಿಯನ್ನು ಅಪಹರಣದ ಮುಂದಿನ ಭಾಗವಾದಂತಿದೆ. ಅಪಹರಣದ ಜೊತೆ ಮಾನಭಂಗ ಮಾಡುವ ದೃಶ್ಯದಂತೆ ಕಂಡುಬರುತ್ತಿದೆ. ಈ ರಥ ಮೇಲ್ಭಾಗದಲ್ಲಿ ಒಬ್ಬ ರಾಜ ಕುದುರೆಯನ್ನೇರಿ ರಥದ ಹಿಂದೆ ಬರುತ್ತಿದ್ದಾನೆ. ಈ ಅಪಹರಣದ ಹಿಂದೆ ಅವನ ಕೈವಾಡವಿರಬಹುದೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ತುಂಬಾ ವೇಗವಾಗಿರುವ ಕುದುರೆಗಳು, ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಇದು ಮೈಸೂರು ಮತ್ತು ವಿಜಯನಗರ ಶೈಲಿಯಲ್ಲಿ ರಚನೆಯಾಗಿರುವುದನ್ನು ಗಮನಿಸಬಹುದು. ಕೆಂಪು, ಹಳದಿ, ನೀಲಿ, ಹಸಿರು, ಕಪ್ಪು ಮತ್ತು ಬಿಳಿ ವರ್ಣಗಳನ್ನು ಈ ಚಿತ್ರಕ್ಕೆ ಬಳಸಲಾಗಿದೆ.

ಚಿತ್ರ-೬ : ಆಕಾಶವಾಣಿ ನುಡಿದದ್ದು :

ಈ ಚಿತ್ರ ತುಂಬಾ ಚಿಕ್ಕದಾಗಿದೆ. ಒಬ್ಬ ದೇವಿ ಕಂಸನ ಎದುರಿಗೆ ಪ್ರತ್ಯಕ್ಷಳಾಗಿ ಮುಂದೆ ನಡೆಯುವ ಘಟನೆಗಳನ್ನು ಹೇಳುತ್ತಾಳೆ. ನಿನ್ನ ಸೊಕ್ಕನ್ನು ಅಡಗಿಸಲು ಒಬ್ಬ ವ್ಯಕ್ತಿ ಗೋಕುಲಗೆ ಬರುತ್ತಿದ್ದಾನೆ. ಎಂದು ಹೇಳಿ ಮಾಯವಾಗುವ ಒಂದು ಸನ್ನಿವೇಶ ಶ್ರೀಕೃಷ್ಣನ ಜೀವನಾಧಾರಿತ ಕಥೆಯಲ್ಲಿರುವಂತೆ ಇಲ್ಲೊಂದು ದೇವಿಯಂತೆ ಚಿತ್ರವನ್ನು ರಚಿಸಲಾಗಿದೆ. ಹಣೆಗೆ ಕುಂಕುಮ ತಲೆಯಲ್ಲಿ ಕಿರೀಟ, ಅಲಂಕಾರವನ್ನೊತ್ತ ದೇಹ, ಮುಗ್ದತೆಯ ಮುಖಭಾವ, ಆಶೀರ್ವದಿಸುವ ಶೈಲಿಯಲ್ಲಿ ಕುಳಿತು ಕೊಂಡಿರುವಂತಿದೆ. ಕೆಂಪು ಸೀರೆಯನ್ನುಟ್ಟಿದ್ದು, ಸೊಂಟಕ್ಕೆ ಡಾಬು, ಕುತ್ತಿಗೆಗೆ ಸರ, ಕೈಗೆ ಬಳೆಯನ್ನು ಧರಿಸಿದ್ದಾಳೆ. ಈ ಚಿತ್ರವು ಮೈಸೂರು ಶೈಲಿಯನ್ನು ಹೋಲುತ್ತಿದೆ. ಕೆಂಪು, ಬಿಳಿ ಮತ್ತು ಹಳದಿ ಬಣ್ಣಗಳನ್ನಷ್ಟೆ ಬಳಸಲಾಗಿರುತ್ತದೆ.

ಚಿತ್ರ–೭ : ದೇವಕಿ, ವಸುದೇವರನ್ನು ಕಂಸನು ಕರೆದುಕೊಂಡು ಹೋಗುತ್ತಿರುವ ದೃಶ್ಯ :

ಆಕಾಶವಾಣಿ ನುಡಿಯುತ್ತಲೇ ಕಂಸನು ದೇವಕಿ ಮತ್ತು ವಸುದೇವನನ್ನು ಜೈಲಿನಲ್ಲಿರಿಸಲು ಮುಂದಾಗುತ್ತಾನೆ. ಹುಟ್ಟಿದ ಮಕ್ಕಳನ್ನು ಕೊಲ್ಲಲು ಪ್ರಾರಂಭಿಸುತ್ತಾನೆ. ಇದರ ಹಿಂದಿನ ಕಥೆಯೇ ಈ ದಂಪತಿಗಳನ್ನು ಕರೆದುಕೊಂಡು ಹೋಗುತ್ತಿರುವ ದೃಶ್ಯ. ನಾಲ್ಕು ಕುದುರೆಗಳನ್ನು ಕಟ್ಟಿದ ರಥದಲ್ಲಿ ಕಂಸನೇ ಸಾರಥಿ, ಗಡ್ಡದಾರಿ ವಸುದೇವ ತನ್ನ ಅಳಲನ್ನು ತೋಡಿಕೊಳ್ಳುವಂತಿದೆ. ಈ ಮಾತನ್ನು ಆಲಿಸದ ಹಾಗೇ ಘರ್ಜಿಸುತ್ತಲೇ ರಥವನ್ನು ಮುನ್ನಡೆಸುವ ರೀತಿಯಲ್ಲಿ ಈ ದೃಶ್ಯ ಸಂಯೋಜನೆ ಗೊಂಡಿರುತ್ತದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ಅಶ್ವಗಳು ಮೋಹಕತೆಯಿಂದಿದ್ದು, ಅಲಂಕಾರಯುತ ರಥದಕ್ಕೆ ವರ್ಣಗಳು ರಂಜಿಸುತ್ತಿವೆ. ಕಂಸನ ಆರ್ಭಟ ಬಲಗೈ ಮುಂದೆ ಸಾಗಿ, ಬಾರಕೋಲು ಬಾಗಿನಿಂತಂತಿದೆ. ರಥದ ಮೇಲೆ ಕಪ್ಪು, ಕೆಂಪು ಬಾವುಟಗಳು ರಾರಾಜಿಸುತ್ತಿವೆ. ನೀಲಿ ಸೀರೆಯನ್ನುಟ್ಟು ದೇವಕಿ ಕಂಸನನ್ನು ನೋಡುತ್ತಿರುವಂತೆ ಬಾಸವಾಗುತ್ತಿದೆ. ಬಿಳಿ, ಕೆಂಪು, ಹಳದಿ, ನೀಲಿ ಮತ್ತು ಕಪ್ಪು ವರ್ಣಗಳನ್ನು ಬಳಸಿ ಈ ಚಿತ್ರಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ–೮ : ಕಂಸನು ದೇವಕಿಯನ್ನು ವಧೆ ಮಾಡುತ್ತಿರುವುದು :

ವಸುದೇವನ ಹೆಂಡತಿ, ಕೃಷ್ಣನ ತಾಯಿ ದೇವಕಿಯನ್ನು ಶಿರವನ್ನು ಕಡಿಯಲು ಮುಂದಾದಾಗ ತಡೆಯಲು ಓಡಿ ಬರುತ್ತಿರುವ ವಸುದೇವ ಈ ಸಂಯೋಜನಾ ಕೃತಿಯಲ್ಲಿ ಮೂರು ಪ್ರಮುಖ ವ್ಯಕ್ತಿಗಳನ್ನು ಕಾಣಬಹುದು. ಕಂಸ, ವಸುದೇವ ಮತ್ತು ದೇವಕಿ, ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಚಿತ್ರಕೃತಿಯನ್ನು ಗೋಡೆಯ ಮೇಲೆ ರಚಿಸಲಾಗಿದೆ. ಆಕಾಶವಾಣಿ ನುಡಿದಂತೆ ನನ್ನ ಶತೃ ಇವಳ ಹೊಟ್ಟೆಯಿಂದಲೇ ಬರಬಹುದು. ಇವಳನ್ನೇ ಸಾಯಿಸಿದರೆ ಎಲ್ಲಿಂದ ಬರುತ್ತಾನೆ ಎಂಬ ಆಲೋಚನೆಯಲ್ಲಿ ದೇವಕಿಯನ್ನು ನೆಲಕ್ಕೆ ಕೆಡವಿ ಕತ್ತಿಯಿಂದ ಶಿರ ಕಡಿಯಲು ಬರುತ್ತಿರುವ ಚಿತ್ರದಲ್ಲಿ ಇವರೇ ಈ ವ್ಯಕ್ತಿ ಎಂದು ಗುರುತಿಸುವಷ್ಟರ ಮಟ್ಟಿಗೆ ಚಿತ್ರಕೃತಿಯನ್ನು ರಚಿಸಿದ್ದಾರೆ.

ಬರಿ ಮೈಯಲ್ಲಿರುವ ಕಂಸ ಮತ್ತು ವಸುದೇವನ ದೇಹದಲ್ಲಿ ಆಭರಣಗಳನ್ನು ತೋರಿಸಲಾಗಿದೆ. ತಲೆಗೆ ಕಿರೀಟಗಳು, ಕಚ್ಚೆ ಪಂಚೆ ಹುಟ್ಟಿರುವ ಇಬ್ಬರಲ್ಲಿ ಕಂಸನು ಅಲ್ಪ ಶ್ರೀಮಂತನಂತೆ ತೋರ್ಪಡಿಸಲಾಗಿದೆ. ಏನೂ ಅರಿಯದ ಮುಗ್ಧ ದೇವಕಿ ತಾವು ತೋಚಿದಂತೆ ಮಾಡಿ ಎಂದು ಸಪ್ಪೆ ಮೋರೆಹಾಕಿ ಕುಳಿತು ಕೈ ತೋರಿಸಿ ಏನೋ ಹೇಳುವಂತೆ ಕಂಡುಬರುತ್ತಿದೆ. ಹಸಿರು, ಹಳದಿ, ಬಿಳಿ ಮತ್ತು ಕೆಂಪು, ಕಪ್ಪು ಬಣ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೯ : ದೇವಕಿ, ಮಗು :

ಗೋಡೆಯ ಮೇಲೆ ಮುಂದುವರೆದ ಚಿತ್ರಗಳಲ್ಲಿ ಮುಂದಿನ ಚಿತ್ರವಾಗಿರುವ ಈ ಕೃತಿಯಲ್ಲಿ ದೇವಕಿ ಮಗು ಎಂದು ಹೇಳಲಾಗಿದೆ. ತಾಯಿ ದೇವಕಿಯ ಬಳಿ ಮಗ ಕೃಷ್ಣನು ಕುಳಿತುಕೊಂಡಿದ್ದಾನೆ. ಪಕ್ಕದಲ್ಲಿ ನೋಡುತ್ತಾ ಚಿಂತಾಜನಕದಂತೆ ಕುಳಿತಿರುವ ದೇವಕಿಯು ಮಗುವನ್ನು ಹಿಡಿದುಕೊಂಡಿದ್ದಾಳೆ. ಚಿತ್ರ ಅಸ್ಪಷ್ಟತೆಯಿಂದ ಕೂಡಿದ್ದಾಗಲೂ ಅವುಗಳು ಕಾಣುವುದಿಲ್ಲ. ತುಂಬಾ ಸೂಕ್ಷ್ಮವಾಗಿ ನೋಡಿದಾಗ ಅದರ ತಪ್ಪುಗಳು ಎದ್ದು ಕಾಣುತ್ತವೆ. ರೇಖೆಗಳಲ್ಲಿ ಅವಸರ ಎದ್ದುಕಾಣುತ್ತಿದೆ ಬಿಳಿ, ಕೆಂಪು, ಕಪ್ಪು ಮತ್ತು ಬಿಳಿ ಬಣ್ಣಗಳನ್ನು ಬಳಸಿ ಚಿತ್ರವನ್ನು ಮುಗಿಸಲಾಗಿದೆ.

ಚಿತ್ರ-೯.೧. : ನಾರಾಯಣನು ಪ್ರತ್ಯಕ್ಷವಾದದ್ದು :

ದೇವಕಿ ಮತ್ತು ವಸುದೇವ ದಂಪತಿಗಳ ಕಷ್ಟವನ್ನು ಆಲಿಸಿ, ನೇರವಾಗಿ ಅವರ ಕಣ್ಮುಂದೆ ಬಂದು ನಿಂತ ನಾರಾಯಣ, ಈ ಚಿತ್ರವು ಗೋಡೆಯ ಮೇಲೆ ರಚನೆಯಾಗಿದ್ದು, ಮಂಟಪದ ಮುಂದೆ ನಿಂತಿರುವಂತೆ ಕಾಣಬಹುದು. ಶ್ರೀನಾರಾಯಣನು ತನ್ನ ಬಲಗೈ ಮೇಲೆ, ಎಡಗೈ ಕೆಳಗೆ ಮಾಡಿ, ಆಶೀರ್ವದಿಸುವಂತೆ ಚಿತ್ರ ಕಂಡುಬರುತ್ತಿದೆ. ಕಪ್ಪು ದೇಹವನ್ನೊತ್ತ ಏನನ್ನೋ ನಾರಾಯಣ ಎಂದು ಗುರುತಿಸಬಹುದು, ಈ ಸನ್ನಿವೇಶವು ಕಂಸನ ಜೈಲಿನಲ್ಲಿ ನಡೆಯುತ್ತದೆ. ಕಪ್ಪು ಸೀರೆಯನ್ನುಟ್ಟ ದೇವಕಿ, ಗಡ್ಡದಾರಿ ವಸುದೇವ ಭಕ್ತಿಯಿಂದ ನಾರಾಯಣನಿಗೆ ನಮಸ್ಕರಿಸುತ್ತಾ ತಮ್ಮ ಅಳಲನ್ನು ತೋಡಿಕೊಳ್ಳುವಂತೆ ಭಾಸವಾಗಿರುತ್ತದೆ ಈ ಚಿತ್ರಕೃತಿ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯೂ ಹಳದಿ, ಕೆಂಪು, ಕಪ್ಪು ಮತ್ತು ಬಿಳಿ ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ. ರೇಖೆಗಳಲ್ಲಿ ಅಸ್ಪಷ್ಟತೆ ಕಂಡುಬರುತ್ತಿದೆ ಆದರೆ ಮುಖದ ಹೋಲಿಕೆ ಇವರೇ ಎಂದು ಗುರುತಿಸುವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಚಿತ್ರಕಲಾವಿದರು.

ಚಿತ್ರ-೧೦ : ವಸುದೇವ ಕೃಷ್ಣನನ್ನು ತೆಗೆದುಕೊಂಡು ಹೋಗುತ್ತಿರುವ ದೃಶ್ಯ :

ಈ ಚಿತ್ರವು ಗೋಡೆಯಲ್ಲಿ ಮುಂದುವರಿದ ಭಾಗವಾಗಿದ್ದು, ಕಂಸನ ಆರ್ಭಟಕ್ಕೆ ಹುಟ್ಟಿದ ಮಕ್ಕಳು ಬಲಿಯಾಗುತ್ತಿರುವುದನ್ನು ನೋಡಿದ ದೇವಕಿ ಮತ್ತು ವಸುದೇವ ದಂಪತಿಗಳು ಆಗ ತಾನೇ ಹುಟ್ಟಿದ ಮಗುವನ್ನು ಯಶೋಧೆ ಬಳಿ ಸೇರಿಸಲು ಮುಂದಾಗುತ್ತಾರೆ. ಶ್ರೀಕೃಷ್ಣ ಹುಟ್ಟಿದ ತಕ್ಷಣ ಈ ಇಬ್ಬರಲ್ಲಿ ನವಚೈತನ್ಯ ಬಂದಂತಾಗುತ್ತದೆ. ಜೈಲಲ್ಲಿದ್ದ ಇವರನ್ನು ಸರಪಳಿಯಿಂದ

ಕಟ್ಟಿರುತ್ತಾರೆ. ಹುಟ್ಟಿದ ಮಗುವು ಸುಂದರವಾಗಿದ್ದು, ಮುಖದಲ್ಲಿ ನಗು ಬೀರುತ್ತಿರುವುದನ್ನು ಕಂಡ ತಂದೆ, ತಾಯಿ ಖುಷಿಪಟ್ಟರು. ಜೈಲಲ್ಲಿ ಭದ್ರವಾಗಿ ಕೂಡಿ ಹಾಕಿ ಹೋಗುವುದಾದರೂ ಹೇಗೆ ಎಂದು ಮಾತನಾಡಿಕೊಳ್ಳುತ್ತಿರುವಾಗ ಜೈಲಿನ ಬಾಗಿಲುಗಳು ತನ್ನಿಂದ ತಾನೇ ತೆರೆದುಕೊಳ್ಳಲು ಪ್ರಾರಂಭಿಸುತ್ತವೆ. ಇದನ್ನು ಆಲಿಸಿದ ಈ ದಂಪತಿಗಳು ಆಶ್ಚರ್ಯದಿಂದ ನೋಡಿ ವಸುದೇವ ಮಗುವನ್ನು ತೆಗೆದುಕೊಂಡು ಹೊರಡಲು ಶುರು ಮಾಡುತ್ತಾನೆ. ಹೊರಗಡೆ ಹೋಗುತ್ತಿರುವಾಗ ಮಳೆ, ಗಾಳಿ ಪ್ರಾರಂಭವಾಗುತ್ತದೆ. ಹಳ್ಳಿಗೆ ಹೋಗುವಾಗ ನದಿ ಅಡ್ಡ ಬರುತ್ತದೆ. ಆದರೂ ಅಂಜದೆ ಕಲೆಯ ಮೇಲೆ ಮಗುವನ್ನು ಹೊತ್ತು ನೀರಿನಲ್ಲಿ ಕಾಲಿಟ್ಟು ದಾಟುವಾಗ ಬಿರುಗಾಳಿ ಎದ್ದು, ಭರಪೂರ ಮಳೆ ಬರಲು ಪ್ರಾರಂಭವಾಗುತ್ತದೆ. ಶ್ರೀಕೃಷ್ಣ ಪರಮಾತ್ಮ ಎಂದು ಗೊತ್ತಾದ ಏಳು ಅಡಿ ಸರ್ಪಕ್ಕೆ ನೀರಿನಿಂದ ಎದ್ದು ನಿಲ್ಲುತ್ತೆ. ಅದನ್ನು ನೋಡಿದ ವಸುದೇವನಿಗೆ ಭಯ ಶುರುವಾಗುತ್ತೆ ಆದರೆ ಹೆದರುವುದಿಲ್ಲ. ತನ್ನ ಪಾಡಿಗೆ ತಾನು ಹೋಗಲು ಶುರು ಮಾಡಿರುತ್ತಾರೆ. ಈ ಸರ್ಪ ಹಾಗೇ ಹತ್ತಿರ ಬರಲು ಪ್ರಾರಂಭಿಸಿದಾಗ ಆಶ್ಚರ್ಯದಿಂದ ವಸುದೇವ ನೋಡುತ್ತಾನೆ. ಆದರೆ ಆ ಸರ್ಪ ಒಂದು ಹೆಣ್ಣು ರೂಪವನ್ನು ತಾಳಿ ಮಾತನಾಡಲು ಪ್ರಾರಂಭಿಸುತ್ತದೆ. ಏ ವಸುದೇವ ನೀನು ಹೆದರುವ ಪ್ರಮೇಯವೇ ಬೇಡ. ನಾನು ನಿನ್ನ ಸೇವಕನಾಗಿರುವೆ ಎದು ಬರುವ ಮಳೆಗೆ ಕೊಡೆಯಾಗಿ ನಿಲ್ಲುತ್ತದೆ. ದಡ ಮುಟ್ಟುವವರೆಗೂ ಶ್ರೀಕೃಷ್ಣನಿಗೆ ಆಸರೆಯಾಗುತ್ತೆ ಈ ನಾಗರಸರ್ಪ, ಅಲ್ಲಿಂದ ಪುಟ್ಟಿಯಲ್ಲಿ ಹೊತ್ತ ಮಗುವನ್ನು ಯಶೋಧ ಬಳಿಗೆ ಕೊಂಡೊಯ್ದು, ಆಗ ತಾನೇ ಹೆಣ್ಣು ಜನ್ಮಕ್ಕೆ ಜೀವವಿಟ್ಟಿದ್ದ ಯಶೋಧೆಗೆ ಇಲ್ಲಿರುವ ಪರಿಸ್ಥಿತಿಯನ್ನು ತಿಳಿಸಿ ಹೇಳುತ್ತಾನೆ. ಆಗ ಅವಳು ಸರಿ ಈ ಮಗುವನ್ನು ನಾನು ಸಾಕುತ್ತೇನೆ. ನನ್ನ ಮಗುವನ್ನು ನೀವು ತೆಗೆದುಕೊಂಡು ಹೋಗಿ ಎಂದು ಆ ಮಗುವನ್ನು ಪಡೆದು ತನ್ನ ಮಗುವನ್ನು ವಸುದೇವನ ಕೈಗೆ ಹಿಡುತ್ತಾಳೆ. ಈ ಕಥೆಯನ್ನೋಲುವ ದೃಶ್ಯ ಈ ಚಿತ್ರದ್ದಾಗಿದ್ದು, ವಸುದೇವ, ಮಗು ಮತ್ತು ಏಳುತಲೆಯ ಸರ್ಪವನ್ನು ಪ್ರಾಸಂಗಿಕವಾಗಿ ಚಿತ್ರಿಸಲಾಗಿದೆ. ಇದು ಕೂಡ ಮೈಸೂರು ಶೈಲಿಯನ್ನು ಹೋಲುವಂತಿದೆ. ಕೆಂಪು, ಹಳದಿ, ಬಿಳಿ, ಕಪ್ಪು ವರ್ಣಗಳೇ ಮುಂದುವರಿಸಿವೆ.

ಚಿತ್ರ-೧೧ : ಶರಬಾಸುರ ವಧೆ :

ಈ ಚಿತ್ರವು ಸಹ ಗೋಡೆಯಲ್ಲಿ ಬರೆಯಲಾಗಿದ್ದು, ಶಂಬರಾಸುರ ವಧೆಯ ಶೀರ್ಷಿಕೆಯಂತೆ ರಾಕ್ಷಸನು ಕಂಸನ ಮೇಲೆ ಯುದ್ಧಕ್ಕೆ ನೀಡಿರುವ ದೃಶ್ಯ ಇದಾಗಿದ್ದು, ಇಬ್ಬರ ಕೈಯಲ್ಲೂ ಕತ್ತಿಯಿರುವುದನ್ನು ಕಾಣಬಹುದು. ರಾಕ್ಷಸನ ಎಡಗೈಯಲ್ಲಿ ಗುರಾಣಿ ಹಿಡಿದು ಹೊಡೆಯುವ ಹಂತಕ್ಕೆ ಸಜ್ಜಾಗುತ್ತಿದ್ದಾನೆ. ಕಂಸ ರಾಕ್ಷಸನ ತಲೆಯ ಜುಟ್ಟನ್ನು ಹಿಡಿದು ಹೊಡೆಯಲು ಕೈ ಮೇಲೆತ್ತಿದ್ದಾನೆ. ಇಬ್ಬರಲ್ಲೂ ಮೈ ತುಂಬಾ ಆಬರಣಗಳಿದ್ದು, ಕಾಲಿಗೆ ಗೆಜ್ಜೆಯನ್ನು ಹಾಕಲಾಗಿದೆ. ಕಂಸನನ್ನು ಸುಂದರವಾಗಿ, ರಾಕ್ಷಸನನ್ನು ಅಸಹ್ಯದಿಂದ ತೋರಿಸಿ ರಾಜನೆ ಗೆಲ್ಲುವುದು ಎಂಬಂತೆ

ಚಿತ್ರಕೃತಿ ಬಿಂಬಿತವಾಗಿದೆ. ಈ ಚಿತ್ರವು ಮೈಸೂರು ಶೈಲಿಯನ್ನು ಹೋಲುವಂತಿದೆ. ಹಿಂಭಾಗದಲ್ಲಿ ತೆಳುನೀಲಿಯನ್ನು ಬಳಸಲಾಗಿದ್ದು, ಹಳದಿ ವರ್ಣವನ್ನು ಹೆಚ್ಚು ತೋರ್ಪಡಿಸಲಾಗಿದೆ. ಕಪ್ಪು, ಬಿಳಿ, ಹಳದಿ, ನೀಲಿ, ಕೆಂಪು ವರ್ಣಗಳನ್ನು ಬಳಸಿ ಪೂರ್ಣಗೊಳಿಸಲಾಗಿದೆ.

ಚಿತ್ರ–೧೨ : ಮತ್ಸ್ಯಾವತಾರ :

ಗೋಡೆಯ ಮೇಲೆ ಚಿತ್ರಿತವಾಗಿರುವ ಈ ಕೃತಿಯು ಅರ್ಧನಾಶ ಹೊಂದಿದ್ದು, ಶ್ರೀಕೃಷ್ಣನು ಮತ್ಸ್ಯಾವತಾರವನ್ನು ತಾಳಿರುವುದನ್ನು ಕಾಣಬಹುದು. ಪಕ್ಕದಲ್ಲಿ ರುಕ್ಮಿಣಿಯು ಸೌಹಾರ್ದಯುತವಾಗಿ ಮಾತನಾಡುವುದು. ಅದನ್ನು ಬಲರಾಮನು ಆಲಿಸುತ್ತಿರುವಂತೆ ಚಿತ್ರ ಭಾಸವಾಗುತ್ತದೆ. ಮೀನಿನ ಹೋಲಿಕೆ, ಅರ್ಧ, ಇನ್ನರ್ಧ ಮನುಷ್ಯನ ದೇಹದಲ್ಲಿ ಕೂಡಿರುವ ಹಿನ್ನೆಲೆಯಲ್ಲಿ ಮತ್ಸ್ಯಾವತಾರ ಎಂದು ಕರೆದಿರುವುದು. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯನ್ನು ಶೀರ್ಷಿಕೆಯನುಸಾರ ರಚಿಸಲಾಗಿದೆ. ಮೂವರ ಮುಖಗಳು ಒಂದೇ ಹೋಲಿಕೆ ಇರುವುದನ್ನು ಕಾಣಬಹುದು. ಮೈತುಮಬಾ ಸೀರೆ ಸುತ್ತಿಕೊಂಡಿರುವ ರುಕ್ಮಿಣಿ, ತಲೆಗೆ ಕಿರೀಟ, ಮೈಮೇಲೆ ಆಭರಣ ಹೊತ್ತ ಶ್ರೀಕೃಷ್ಣ ಸಮಾಲೋಚನೆಯಲ್ಲಿ ತೊಡಗಿರುವ ದೃಶ್ಯ ಇದಾಗಿದೆ. ಮತ್ಸ್ಯ ತೋರಿಸಿರುವ ಕಾರಣ ಕಾಲಬಳಿ ನೀರಿನ ಅಂಶವನ್ನು ತೋರಿಸಲಾಗಿದೆ. ನೀಲಿ, ಹಸಿರು, ಹಳದಿ, ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಈ ಚಿತ್ರಕೃತಿಗೆ ಬಳಸಲಾಗಿದೆ.

ಚಿತ್ರ–೧೩ : ದೇವಕನ್ಯೆ :

ದೇವಾಲಯದ ಬಲಭಾಗದ ಗೋಡೆಯಲ್ಲಿ ರಚಿತವಾಗಿರುವ ಈ ಚಿತ್ರಕೃತಿಯು ಶೀರ್ಷಿಕೆಯಂತೆ ದೇವಕನ್ಯೆ ಎಂದು ಗುರುತಿಸಬಹುದಾಗಿದೆ. ಪ್ರತ್ಯಕ್ಷಳಾಗಿ ರಾಜನಿಗೆ ಉಪದೇಶವನ್ನು ನೀಡುತ್ತಿರುವ ದೃಶ್ಯ ಇದಾಗಿದ್ದು, ಇಬ್ಬರು ವ್ಯಕ್ತಿಗಳನ್ನು ಮಾತ್ರ ಕಾಣಬಹುದು. ರಾಜ ಕೈಮುಗಿಯುತ್ತಿದ್ದು, ಅದಕ್ಕೆ ಪೂರಕವಾಗಿ ದೇವಿ ಆಶೀರ್ವದಿಸುವಂತಿದೆ. ಹಾಸಿಗೆಯ ಮೇಲೆ ಕುಳಿತಿರುವ ಭಂಗಿಯಲ್ಲಿದ್ದು ಮೈಸೂರು ಶೈಲಿಯಲ್ಲಿ ಚಿತ್ರಕೃತಿ ರಚನೆಯಾಗಿರುತ್ತದೆ. ರೇಖೆಗಳಿಗೆ ಅಷ್ಟು ಮಹತ್ವವನ್ನು ಕೊಟ್ಟಿರುವುದಿಲ್ಲ. ಚಿತ್ರಗಳು ಸ್ಪಷ್ಟತೆಯನ್ನು ಕಳೆದುಕೊಂಡಿರುತ್ತದೆ. ಆದರೆ ಸನ್ನಿವೇಶಕ್ಕೆ ಬೇಕಾದದ್ದನ್ನು ಪೂರ್ಣ ಪ್ರಮಾಣದಲ್ಲಿ ನೀಡಿರುತ್ತಾರೆ. ನೀಲಿ, ಹಳದಿ, ಕೆಂಪು, ಕಪ್ಪು ಮತ್ತು ಬಿಳಿ ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ–೧೪ : ಪಗಡೆಯಾಟ :

ಕೃಷ್ಣ ಮತ್ತು ರುಕ್ಮಿಣಿಯು ಪಗಡೆಯಾಟವನ್ನು ಆಡುತ್ತಿರುವ ದೃಶ್ಯ ಇದಾಗಿದ್ದು, ರೇಖೆಯಲ್ಲಿ ಪಗಡೆ ಚಿತ್ರವನ್ನು ರಚಿಸಿ, ಕವಡೆಯ ಮೂಲಕ ಆಟವನ್ನು ಆಡುತ್ತಿರುವಂತೆ ದೃಶ್ಯ ಭಾಸವಾಗುತ್ತಿದೆ. ಇಲ್ಲಿಯೂ ಕೂಡ ರೇಖೆಗಳಲ್ಲಿ ಸ್ಪಷ್ಟತೆಯಿಲ್ಲ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಚಿತ್ರಕೃತಿಯೂ ಸೌಂದರ್ಯದಿಂದ ಕೂಡಿದೆ ಎನ್ನುವುದಕ್ಕೆ ಬಳಸಿರುವ ವರ್ಣಗಳೇ ಸಾಕ್ಷಿ. ಕಪ್ಪು

ವರ್ಣದ ದೇಹವನ್ನೊತ್ತಿರುವ ಶ್ರೀಕೃಷ್ಣನಿಗೆ ತಿಳಿನೀಲಿ ವರ್ಣವನ್ನು ಬಳಿಯಲಾಗಿದ್ದು ಮೈತುಂಬಾ ಆಭರಣಗಳನ್ನು ಹಳದಿ ಬಣ್ಣದಿಂದ ತೋರಿಸಲಾಗಿದೆ. ವಿಶೇಷ ಅಂದ್ರೆ ಪಗಡೆ ಆಟದ ಚಿತ್ರವು ಕೂಡ ಕಪ್ಪು ಮತ್ತು ಹಳದಿ ಬಣ್ಣಗಳಿಂದ ತೋರಿಸಲಾಗಿದೆ. ನೂರುವರ್ಷಕ್ಕೂ ಅಧಿಕ ಸಮಯವಾಗಿರುವ ಕಾರಣಕ್ಕೆ ಚಿತ್ರ ಅಳಿಸಿಹೋಗುವ ಸನಿಹಕ್ಕೆ ಬಂದಿರುತ್ತದೆ. ಹಾಗಾಗಿ ವ್ಯಕ್ತಿಗಳ ಮುಖಗಳಲ್ಲಿ ಅಸ್ಪಷ್ಟತೆ ಗೋಚರಿಸುತ್ತಿದೆ ಹಸಿರು ಸೀರೆಯನ್ನುಟ್ಟ ರುಕ್ಮಿಣಿ ಕುಳಿತುಕೊಂಡು ಆಟವಾಡುತ್ತಿದ್ದಾಳೆ. ಚಿತ್ರದ ಹಿಂಬದಿಯಲ್ಲಿ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಹಳದಿ, ಕೆಂಪು, ಬಿಳಿ, ತಿಳಿನೀಲು, ಹಸಿರು ಮತ್ತು ಕಪ್ಪು ವರ್ಣಗಳನ್ನು ಇಲ್ಲಿ ಬಳಸಲಾಗಿರುತ್ತದೆ.

ಚಿತ್ರ-೧೫ : ಚದುರಂಗ :

ಇದು ಕೂಡ ಪಗಡೆ ಆಟದ ಮುಂದುವರಿದ ಭಾಗ. ಇನ್ನೊಂದು ಭಾಷೆಯಲ್ಲಿ ಚೌಕಭಾರ ಎಂದು ಕೂಡ ಕರೆಯುತ್ತಾರೆ. ಚಿಕ್ಕ ಹಲಗೆಯ ಮೇಲೆ ಕರಿಹಲಗೆಯನ್ನು ಬಳಸಿಕೊಂಡು ಚಿತ್ರವನ್ನು ರಚಿಸಲಾಗಿದೆ. ಎಡಕ್ಕೆ ಕೃಷ್ಣ, ಬಲಕ್ಕೆ ರಾಧೆ ಕುಳಿತುಕೊಂಡಿದ್ದು, ಆಟವನ್ನಾಡುವ ದೃಶ್ಯವನ್ನು ಕಾಣಬಹುದು. ಈ ಹಿಂದಿನ ಚಿತ್ರದಂತೆ ಇದು ಕಾಣಲ್ಪಟ್ಟಿದ್ದರೂ, ಶ್ರೀಕೃಷ್ಣ ಇಲ್ಲಿ ಬಾಲಕನಂತೆ ಕಂಡುಬರುತ್ತಾನೆ. ತಲೆಯಲ್ಲಿ ಚಿನ್ನದ ಸರ, ತಲೆಯಲ್ಲಿ ಭೂ ಚಕ್ರ, ಡಾಬು, ಕುತ್ತಿಗೆಯಲ್ಲಿ ಸರ, ಕೈಕಾಲಿನಲ್ಲಿ ಚೈನುಗಳಿರುವುದನ್ನು ಕಾಣಬಹುದು. ಅದೇ ರೀತಿಯಲ್ಲಿ ರಾಧೆಯೂ ಕೂಡ ಇವುಗಳನ್ನು ಹೊರತಾಗಿಲ್ಲ. ಆಭರಣಪ್ರಿಯಳು. ದುಂಡಾಗಿರುವ ದೇಹಗಳನ್ನು ನೋಡುತ್ತಿದ್ದರೆ ಇದು ಮೈಸೂರು ಶೈಲಿಯ ಚಿತ್ರವೆಂಬುದು ಗೊತ್ತಾಗುತ್ತದೆ. ಅದರಂತೆ ಹಿಂದಿನ ಚಿತ್ರಗಳಲ್ಲಿ ಬಳಸಿರುವ ಬಣ್ಣಗಳನ್ನೇ ಹೆಚ್ಚು ಬಳಸಲಾಗಿದೆ. ಕೃಷ್ಣನಿಗೆ ಮಾತ್ರ ಬಿಳಿಯ ಬಣ್ಣವನ್ನು ಬಳಿದಿರುವುದು ಸ್ವಲ್ಪ ಬದಲಾವಣೆ ಎನ್ನಬಹುದು. ಹಳದಿ, ಹಸಿರು, ಬಿಳಿ, ಕಪ್ಪು, ಕೆಂಪು ವರ್ಣಗಳನ್ನು ಬಳಸಿಕೊಂಡು ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೧೬ : ವಸುದೇವನು ಮಗುವನ್ನು ಕಂಸನಿಗೆ ಕೊಡುವುದು :

ಗೋಡೆಯ ಮೇಲೆ ಚಿತ್ರಿತವಾಗಿರುವ ಈ ಕೃತಿಯಲ್ಲಿ ಕಂಸನು ತನ್ನ ಬಲಗೈಯಲ್ಲಿ ಕತ್ತಿಯನ್ನಿಡಿದು ಆರ್ಭಟಿಸುತ್ತಾ ಮುಂದೆ ಸಾಗುವ ದಾಟಿಯಲ್ಲಿದೆ. ತಲೆಯಲ್ಲಿ ವಜ್ರದ ಕಿರೀಟ, ಮೈತುಂಬಾ ಅಲಂಕಾರ, ಕಪ್ಪು, ಶಲ್ಲೆ, ದೋತ್ರ, ಕಚ್ಚೆಪಂಜೆ ತೊಟ್ಟಿರುವ ದಢೂತಿ ದೇಹವನ್ನೊತ್ತ ಕಂಸನು ನೋಡಲು ಭಯಂಕರವಾಗಿದ್ದಾನೆ. ಆದರೂ ಮುಖದಲ್ಲಿ ಸೌಮ್ಯತೆಯಿದೆ. ಈ ಚಿತ್ರದ ಪಕ್ಕ ಶೀರ್ಷಿಕೆ ಬರೆದಿರುವುದನ್ನು ಪರಿಗಣಿಸಿ ವಿಮರ್ಶೆ ಮಾಡುವಾಗ ವಸುದೇವ ಮತ್ತು ಮಗು ಕಾಣೆಯಾಗಿರುವುದು, ಮಗು ಹುಟ್ಟಿದ ತಕ್ಷಣ ಅಳುವ ಶಬ್ದವನ್ನು ಕೇಳಿ ಜೈಲಿಗೆ ಹೋಗುವ ಸನ್ನಿವೇಶವನ್ನು ಪಟ್ಟಿಗೊಳಿಸಲಾಗಿದೆ. ಈ ಚಿತ್ರವು ಮೈಸೂರು ಶೈಲಿಯಲ್ಲಿ ರಚನೆಯಾಗಿರುತ್ತದೆ. ಬಿಳಿ, ಕಪ್ಪು, ಹಳದಿ, ಕೆಂಪು, ತಿಳಿನೀಲಿ ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೧೭ : ದುರ್ಗಾದೇವಿ ಪ್ರತ್ಯಕ್ಷ :

ಮೇಲ್ಭಾಗದಲ್ಲಿರುವ ದುರ್ಗಾದೇವಿ, ಕೆಂಪುಸೀರೆ, ತೆಳುನೀಲಿ ವರ್ಣಗಳಿಂದ ಕೂಡಿರುತ್ತದೆ. ತಲೆಗೆ ಕಿರೀಟ, ಆಭರಣಗಳನ್ನೊತ್ತ ಕೈಗಳು, ಶಾಂತಚಿತ್ತದಿಂದ ಕುಳಿತಿರುವಂತೆ ಭಾಸವಾಗುತ್ತಿದೆ. ಗೋಡೆ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ದೇವಿಯ ಬಲಭಾಗದಲ್ಲಿ ಮೂವರು ಸೇವಕಿಯರು ಭಕ್ತಿಯಿಂದ ದೇವಿಗೆ ನಮಸ್ಕರಿಸುತ್ತಿದ್ದಾರೆ. ಅವರ ತಲೆಯಲ್ಲೂ ಕಿರೀಟವಿದ್ದು, ಹಸಿರು ಜಾಕೆಟ್, ಕೆಂಪು ಸೀರೆಯನ್ನುಟ್ಟು ಭಾಗಿರುವಂತೆ ಬಿಂಬಿಸಲಾಗಿದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ತೆಳುನೀಲಿ, ಕೆಂಪು, ಹಳದಿ, ಬಿಳಿ ಮತ್ತು ಕಪ್ಪು ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ-೧೮ : ವಸುದೇವನು ಕಂಸನನ್ನು ಸಮಾಧಾನ ಪಡಿಸುತ್ತಿರುವುದು :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ಕಂಸ, ವಸುದೇವ ಮತ್ತು ದೇವಕಿ ಇರುವುದನ್ನು ಕಾಣಬಹುದು. ವಸುದೇವನ ಮಕ್ಕಳನ್ನು ಸಾಯಿಸಲು ಬಂದಿರುವ ಕಂಸನಿಗೆ ವಸುದೇವ ಸಮಾಧಾನ ಮಾತುಗಳನ್ನು ಹೇಳುವ ಸಂದರ್ಭವಿದು. ದೇವಕಿ ವಿನಮ್ರತೆಯಿಂದ ಗೌರವಿಸುತ್ತಿದ್ದಾರೆ. ಆದರೂ ಕಂಸ ಅವರಿಗೆ ಗೌರವ ಸೂಚಕವಾಗಿ ಏನನ್ನೊ ಹೇಳುತ್ತಿರುವಂತೆ ಚಿತ್ರ ಭಾಸವಾಗುತ್ತಿದೆ.

ಚಿತ್ರ-೧೯ : ಯಶೋಧ ಕೃಷ್ಣ :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ಪ್ರಮುಖವಾಗಿ ಸಾಕುತಾಯಿ ಯಶೋಧೆ ತನ್ನ ಪುಟ್ಟ ಮಗು ಕೃಷ್ಣನನ್ನು ಪಕ್ಕದಲ್ಲಿ ಮಲಗಿಸಿಕೊಂಡಿರುವುದು. ಬಾಲಗೋಪಾಲನ ತಲೆಯಲ್ಲಿ ನವಿಲುಗರಿಯನ್ನು ತೋರಿಸಿರುವುದು ಶ್ರೀಕೃಷ್ಣನಲ್ಲಿರುವ ವಸ್ತುಗಳ ಹಿನ್ನೆಲೆ, ಅಸ್ಪಷ್ಟವಾದ ರೇಖೆ ಮತ್ತು ಬಣ್ಣಗಲಲ್ಲಿ ಸಾಮ್ಯತೆ ಇರುವುದಿಲ್ಲ. ಕಿವಿಗೆ ಕೈಹಿಟ್ಟು, ತಲೆಭಾರವನ್ನೆಲ್ಲ ಕೈಗೇರಿ, ತನ್ನ ಬಲಗಾಲಿನ ಮೇಲೆ ಎಡಗಾಲನ್ನು ಹಾಕಿ, ಮಲಗಿರುವ ಯಶೋಧೆಯ ಮುಖದಲ್ಲಿ ಗಾಂಭೀರ್ಯತೆ ಎದ್ದು ಕಾಣುತ್ತಿದೆ. ಹಳದಿ, ಕೆಂಪು, ಕಪ್ಪು ಮತ್ತು ಬಿಳಿವರ್ಣಗಳನ್ನು ಹೆಚ್ಚು ಬಳಸಲಾಗಿದೆ.

ಚಿತ್ರ-೨೦ : ಪೂತನಾಸಂಹಾರ :

ಶೀರ್ಷಿಕೆಯಲ್ಲಿ ಸೂಚಿಸುವಂತೆ ರಾಕ್ಷಸನ ಸಂಹಾರ. ಹಿಡಿಂಬಿ ಎಂಬ ರಾಕ್ಷಸಿ ಕೃಷ್ಣನನ್ನು ಕೊಲ್ಲಲು ಬಂದಾಗ ಚಿಕ್ಕ ಕಂದ ಶ್ರೀಕೃಷ್ಣ ರಾಕ್ಷಸನನ್ನು ಆಟ ಆಡಿಸುವುದರ ಮುಖೇನ ನೆಲಕ್ಕೆ ಬಿಳಿಸಿ ಸಾಯಿಸುವ ದೃಶ್ಯ ಪುರಾಣ, ಕಥೆಗಳಲ್ಲಿ ನೋಡಬಹುದು ಎಂಬಂತೆ ಯಥಾವತ್ತಾಗಿ ಚಿತ್ರವನ್ನು ರೂಪಿಸಲಾಗಿದೆ. ದಢೂತಿ ದೇಹವೊಂದಿರುವ ಹಿಡಂಬಿ ರಾಕ್ಷಸಿ ಎಂತಹವರಿಗೂ ಮಾರಿ. ಅಂತಹ ದಢೂತಿ ರಾಕ್ಷಸಿ ಮಗುವನ್ನು ಕರೆತಂದು ಕೊಲ್ಲಲು ಪಡುವ ಪಾಡು ಅಷ್ಟಿಷ್ಟಲ್ಲ.

ಆದರೂ ಮಗು ಕಾಣಲಿಲ್ಲವೆಂಬ ದುಗುಡದಲ್ಲಿ ಯಶೋಧೆ ಹುಡುಕಾಟದಲ್ಲಿರುವಾಗ ಕೃಷ್ಣ ರಾಕ್ಷಸನ ಕೈಯಲ್ಲಿ ಸಿಕ್ಕಿದ್ದಾನೆ ಎಂಬ ಕೂಗು ಯಶೋಧೆಗೆ ಅಪ್ಪಳಿಸಿದ ಸಂದರ್ಭದಲ್ಲಿ ಊರ ಹೊರಗೆ ಓಡಿ ಬಂದು ನೋಡಿದಾಗ, ರಾಕ್ಷಸಿಯ ಹೊಟ್ಟೆಯ ಮೇಲೆ ಕುಳಿತು ಆಟವಾಡುತ್ತಿರುವುದನ್ನು ನೋಡಿ ಆಶ್ಚರ್ಯಚಕಿತಳಾಗುತ್ತಾಳೆ. ಅದೇ ಹಿನ್ನೆಲೆಯನ್ನಿಟ್ಟುಕೊಂಡು ರಚಿಸಲಾದ ಕೃತಿಯಲ್ಲಿ ಬಾಲಕ ಕೃಷ್ಣ, ತಾಯಿ ಯಶೋಧೆ ಮತ್ತು ರಾಕ್ಷಸಿ ಮೂವರನ್ನು ಈ ಚಿತ್ರದಲ್ಲಿ ಕಾಣಬಹುದು ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಚಿತ್ರದಲ್ಲಿ ರೇಖೆಗಳ ಅಸ್ಪಷ್ಟತೆ ಎದ್ದು ಕಾಣುತ್ತಿದೆ. ಅವುಗಳನ್ನು ಬಣ್ಣಗಳಲ್ಲಿ ಸರಿಮಾಡಲಾಗಿದೆ. ಕೆಂಪು, ಹಳದಿ, ತಿಳಿನೀಲಿ, ಹಸಿರು, ಕಪ್ಪು ಮತ್ತು ಬಿಳಿ ವರ್ಣಗಳನ್ನು ಹೆಚ್ಚು ಬಳಸಿ ಚಿತ್ರಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ–೨೧ : ಶಕಟಾಸುರ ಸಂಹಾರ :

ಗೋಡೆಯ ಮೇಲೆ ರಚಿತ ಚಿತ್ರ ಇದಾಗಿದ್ದು, ಶಕಟ ಅಸುರ ಎಂಬ ವ್ಯಕ್ತಿಯನ್ನು ಕೊಲ್ಲುತ್ತಿರುವ ಸುಸಂದರ್ಭದ ಚಿತ್ರವಿದಾಗಿದೆ. ಬಾಲಕ ಶ್ರೀಕೃಷ್ಣನನ್ನು ಸಾಯಿಸಲು ಬಂದ ಶಕಟಾಸುರ ಕೃಷ್ಣನ ಕೈಗೆ ಸಿಕ್ಕು ನಲುಗುತ್ತಾನೆ. ನರಳಿ ಪ್ರಾಣ ಬಿಡುತ್ತಾನೆ ಇದರ ಸಂಪೂರ್ಣ ವಿವರವನ್ನು ತಿಳಿಸಿ ಕಲಾವಿದರು ವಿಸ್ತೃತ ರೂಪವನ್ನು ರೇಖೆ ಮತ್ತು ಬಣ್ಣಗಳ ಮೂಲಕ ವಿಸ್ತರಿಸಿದ್ದಾರೆ. ಹಾಗಾಗಿ ಅಲಂಕಾರಿತನಾಗಿರುವ ಶ್ರೀಕೃಷ್ಣನ ಕೊರಳಲ್ಲಿ ಹಾರವಿದೆ, ತಲೆಯಲ್ಲಿ ತುಂಬು ಸುತ್ತಿದ ಕೂದಲಿಗೆ ಹೂವಿನಿಂದ ಅಲಂಕರಿಸಲಾಗಿದೆ ಕೈಗೆ ಕಾಲಿಗೆ ತೋಳುಬಂದಿಗಳನ್ನು ಹಿಡಲಾಗಿದೆ. ಕೃಷ್ಣ ರಾಕ್ಷಸನ ಜುಟ್ಟನ್ನಿಡಿದು ತಲೆಯ ಮೇಲಿಂದ ಚಾಕುವನ್ನು ಎತ್ತಿ ತೋರಿಸಲಾಗಿದೆ. ಇನ್ನೇನು ಸಾಯಿಸುವ ಕೊನೆಯ ಹಂತವಿದು ಎಂಬಂತೆ ಚಿತ್ರ ಬಿಂಬಿತವಾಗಿದೆ. ಮೈಸೂರು ಶೈಲಿಯಲ್ಲಿಯೇ ರಚಿತವಾಗಿರುವ ಈ ಚಿತ್ರವು ಗಾಂಭೀರ್ಯತೆಯನ್ನು ಕಾಪಾಡಿಕೊಂಡು ಬಂದಿರುತ್ತದೆ. ಬಿಳಿ, ಹಸಿರು, ಕೆಂಪು, ಕಪ್ಪು ಮತ್ತು ಹಳದಿ ಬಣ್ಣಗಳನ್ನು ಹೆಚ್ಚು ಬಳಸಲಾಗಿದೆ.

ಚಿತ್ರ–೨೨ : ಕೃಣಾವರ್ಕಾಸುರ ಸಂಹಾರ :

ಗೋಡೆ ಮೇಲೆ ಚಿತ್ರಿತವಾಗಿರುವ ಈ ಕೃತಿಯಲ್ಲಿ ಕೃಣಾವರ್ಕಾ ಎಂಬ ರಾಕ್ಷಸ ಗೋಕಲೆಗೆ ಬಂದು ದಾಂದಲೆ ಮಾಡುತ್ತಾ ಸಿಕ್ಕ ಸಿಕ್ಕವರನ್ನು ಹಿಡಿದು, ನೆಲಕ್ಕೆ ಬಡಿದು ರಕ್ತ ಹೀರುತ್ತಿದ್ದ ಸಂದರ್ಭದಲ್ಲಿ ಊರಿನ ಜನರೆಲ್ಲಾ ಗಾಬರಿಯಾಗಿ ಹೊರಬರಲು ಕಷ್ಟಪಡುತ್ತಿದ್ದ ಸಂದರ್ಭದಲ್ಲಿ ಮಗು ಕೃಷ್ಣ ಆಟವಾಡುತ್ತೇನೆಂದು ಯಶೋಧೆಗೆ ತಿಳಿಸಿ, ರಾಕ್ಷಸನಿರುವ ಊರ ಹೊರಗಿನ ಸ್ಥಳಕ್ಕೆ ಬಂದು ಹೋರಾಡುವ ದೃಶ್ಯವಿದ್ದು, ಅದು ಮರದ ಮೇಲೆ ಕುಳಿತಿರುವುದು ಆದರೆ ಮರವನ್ನು ಅಳಿಸಿದಂತೆ (ವಿರೂಪ) ಕಂಡುಬರುತ್ತಿದೆ. ರಾಕ್ಷಸನು ದಢೂತಿ ದೇಹ, ಕಪ್ಪು ಬಣ್ಣ, ಹಣೆಗೆ, ಹೊಟ್ಟೆ, ಕೈಗೆ ವಿಭೂತಿಯಿಂದ ನಾಮವನ್ನು ಹಾಕಿರುತ್ತಾನೆ. ದೈತ್ಯ ಕಣ್ಣು, ಮೂಗು, ಮೀಸೆಯ ಜೊತೆ ಕೋರೆ ಹಲ್ಲುಗಳು ಬಾಯಿಂದ ಜಾರಿರುವುದು. ದಪ್ಪನೆಯ ಕೂದಲು ಬೆನ್ನಿಗಂಟಿಕೊಂಡಂತಿವೆ. ಇವನನ್ನು ಹಿಡಿದುಕೊಂಡು ಸೆಣಸಾಡುವ ದೃಶ್ಯವನ್ನು ಸೂಕ್ಷ್ಮವಾಗಿ ನಿವೇದಿಸಿದ್ದಾರೆ. ಚಿತ್ರಕಲಾವಿದರು.

ಸೆಣಸಾಡುವುದನ್ನು ನೋಡುತ್ತಿರುವ ಹಳ್ಳಿಯ ಜನ ಕೃಷ್ಣ, ಕೃಷ್ಣ ಎಂದು ಕೂಗುತ್ತಾ ಆತೊರೆಯುತ್ತಿದ್ದಾರೆ ಎಂಬಂತಿದೆ. ಇದು ಮೈಸೂರು ಶೈಲಿಯಲ್ಲಿ ರಚನೆಗೊಂಡಿರುತ್ತದೆ.

ಚಿತ್ರ–೨೩ : ಅಸುರ ಸಂಹಾರ :

ಗೋಡೆಯ ಮೇಲೆ ರಚಿತವಾಗಿರುವ ಈ ಕೃತಿಯಲ್ಲಿ ಕಂಸನು ಗೋವನ್ನು ಎತ್ತಿಹಿಡಿದಿದ್ದಾನೆ. ಅದು ಬಲಗೈಯಲ್ಲಿ. ಪಕ್ಕದಲ್ಲಿ ಕೃಷ್ಣನು ನೆಲಕ್ಕೆ ಕೈ ತೋರಿಸಿ, ಅದನ್ನು ಕೆಳಗೆ ಬಿಟ್ಟುಬಿಡು. ನನ್ನ ಮೇಲಿನ ದ್ವೇಷಕ್ಕೆ ಅವುಗಳನ್ನು ಸಾಯಿಸುವುದು ಥರವಲ್ಲ ಎಂಬ ಮಾತನ್ನು ಹೇಳುತ್ತಾ ಇರುವಂತೆ ಚಿತ್ರ ಬಿಂಬಿಸುತ್ತಿದೆ. ಕಂಸನ ಪಕ್ಕದಲ್ಲಿರುವ ಎಮ್ಮೆ, ಹಸು, ಆಕಳುಗಳು ಎತ್ತಿಹಿಡಿಯುವ ಗೋವನ್ನೇ ನೋಡುತ್ತಿದ್ದಾನೆ. ಮರದ ಕೆಳಗೆ ಈ ದೃಶ್ಯವನ್ನು ಸಂಯೋಜನೆ ಮಾಡಲಾಗಿದೆ. ಕೃಷ್ಣನ ಮುಖದಲ್ಲಿ ಆವೇಶವಿದ್ದು, ತುಂಬಾ ಕೋಪದಿಂದ ನೋಡುತ್ತಿರುವಂತಿದೆ. ಅದಕ್ಕೆ ವಿರುದ್ಧವಾಗಿ ಕಂಸನೂ ಕೂಡ ಪ್ರತಿಕ್ರಿಯೆಯನ್ನು ನೀಡಿರುತ್ತಾರೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ರೇಖೆಗಳಿಗೆ ಜೀವ ತುಂಬಲಾಗಿದೆ. ಆಭರಣಗಳು, ವಸ್ತ್ರಗಳು ಅಚ್ಚುಕಟ್ಟಾಗಿ ಕಾಣಸಿಗುತ್ತವೆ. ಬಿಳಿ, ಕೆಂಪು, ಹಸಿರು, ಕಪ್ಪು ಮತ್ತು ಹಳದಿ ವರ್ಣಗಳನ್ನು ಹೆಚ್ಚು ಬಳಸಲಾಗಿದೆ. ಇದೊಂದು ಪರಿಪೂರ್ಣ ಸಂಯೋಜನೆಯಿಂದ ಕೂಡಿರುತ್ತದೆ.

ಚಿತ್ರ–೨೪ : ಹಂಸರೂಪದ ರಾಕ್ಷಸನ ಸಂಹಾರ :

ಇಲ್ಲಿರುವ ಚಿತ್ರವನ್ನು ಬಾಗಿಲ ಪಕ್ಕದಲ್ಲಿ ತುಂಬಾ ಚಿಕ್ಕದಾಗಿ ಚಿತ್ರಿಸಲಾಗಿದ್ದು, ಶ್ರೀಕೃಷ್ಣ ಹಂಸನ ಬಾಯಿಯನ್ನು ಹಿಡಿದು ಮುರಿಯುತ್ತಿರುವಂತೆ ಭಾಸವಾಗುತ್ತಿದೆ. ಇದರ ಹಿನ್ನೆಲೆಯ ಕಥೆ ತುಂಬಾ ಸ್ವಾರಸ್ಯಕರವಾಗಿದೆ. ಆಟವಾಡುವ ಬಾಲಕ ಕೃಷ್ಣನ್ನು ಕಂಸನ ಆದೇಶದಂತೆ ರಾಕ್ಷಸ ಹಂಸನ ವೇಷಧಾರಿಯಾಗಿ ಬಂದು (ಬೃಹತ್ ಹಂಸ) ಕೃಷ್ಣನ್ನು ನುಂಗುತದೆ. ಆಗ ಜನರ ಅಳಲು ಹೇಳತೀರದು. ದೇವಾನು ದೇವತೆಗಳು (ಇಂದ್ರ, ವಾಯು, ವಿಷ್ಣು, ಜ್ವಾಲಾಮುಖಿ) ಬಂದು ನಾಶಮಾಡಲು ಪ್ರಯತ್ನಿಸಿದರೂ ಅದು ಭಸ್ಮವಾಗುವುದಿಲ್ಲ. ಅದರ ಹೊಟ್ಟೆಯಲ್ಲಿ ಕೃಷ್ಣ ಸೇರಿರುತ್ತಾನೆ. ಯಾವ ದೇವತೆಗಳೂ ಇದನ್ನು ಸಾಯಿಸಲು ಆಗಲಿಲ್ಲ ತುಂಬಾ ನಿರಾಶ್ರಿತರಾಗುತ್ತಾರೆ. ಕೊನೆಗೆ ನಾನೇ ಗೆದ್ದೆ ಎಂಬ ಹಮ್ಮಿನಿಂದ ತೇಲುತ್ತಿರುವಾಗ ದಿಡೀರನೆ ಹೊಟ್ಟಯಿಂದ ಜಿಗಿದ ಕೃಷ್ಣ ಹಂಸನಿಗೆ ಆಟವಾಡಿಸಿ ಕೊಕ್ಕೆಗಳನ್ನು ಬಿಗಿಯಾಗಿ ಹಿಡಿದು, ಮುರಿಯುತ್ತಾನೆ ಅಲ್ಲಿಗೆರ ಹಂಸ ಸಾವನ್ನಪ್ಪುತ್ತದೆ. ಇದೇ ದೃಶ್ಯ ಇಲ್ಲಿ ತೋರಿಸಲಾಗಿದೆ. ಬೃಹದಾಕಾರದ ಹಂಸನನ್ನು ಸಾಧಾರಣವಾಗಿ ಚಿತ್ರಿಸಿದ್ದು, ಹಂಸನಿಗಿಂತ ದೊಡ್ಡವನನ್ನಾಗಿ ಕೃಷ್ಣನನ್ನು ತೋರಿಸಲಾಗಿದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ಹಸಿರು, ಬಿಳಿ, ಕೆಂಪು ಮತ್ತು ಕಪ್ಪು ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ ೨೫ : ಬ್ರಹ್ಮನು ಗೋವು ಗೋಪಾಲಕರನ್ನು ಬಚ್ಚಿಟ್ಟಿದ್ದು :

ಮೂರು ತಲೆಯನ್ನೊತ್ತ ಬ್ರಹ್ಮನಿಗೆ ಇಲ್ಲಿ ನಾಲ್ಕು ತಲೆಗಳಿವೆ. ಅವರ ನೇರಕ್ಕೆ ಒಂದು ಮರವನ್ನು ತೋರಿಸಲಾಗಿದೆ. ಆ ಮರದ ಕೆಳಗೆ ಕಿ.ಮೀ. ತೋರಿಸುವ ಕಲ್ಲಿನಂತಹ ವಸ್ತುವಿನಲ್ಲಿ ನಾಲ್ಕು ವ್ಯಕ್ತಿಗಳು ಇಣುಕಿ ನೋಡುತ್ತಿದ್ದಾರೆ. ಅದರ ಎದುರಿಗಿರುವ ಕಲ್ಲಿನಲ್ಲಿ ನಾಲ್ಕು ಗೋವಿನ ಮುಖಗಳನ್ನು ಕಾಣಬಹುದು. ಇದು ಎದುರಿಗಿರುವ ಕಲ್ಲಿನಲ್ಲಿ ನಾಲ್ಕು ಗೋವುಗಳು ಮುಖಗಳನ್ನು ಕಾಣಬಹುದು. ಇದು ಗೋಡೆಯ ಮೇಲೆ ರಚನೆಯಾಗಿರುವ ಇಪ್ಪತ್ತೈದನೆಯ ಚಿತ್ರದ ಅರ್ಧದೃಶ್ಯ. ಕೆಳಗೆ ಬಾಲಕ ಕೃಷ್ಣ ಬಾಲಕಿಯರಿಗೆ ಏನೋ ಹೇಳುತ್ತಿರುವಂತೆ ಭಾಸವಾಗುತ್ತಿದೆ. ಈ ಎರಡೂ ಚಿತ್ರಕ್ಕೂ ಒಂದಕ್ಕೊಂದು ಸಂಬಂಧವಿರುವಂತೆ ತೋರಿಸಲಾಗಿದೆ. ಇಲ್ಲಿ ರೇಖೆಗೆ ಹೆಚ್ಚು ಪ್ರಾಧಾನ್ಯತೆ ನೀಡಲಾಗಿದ್ದು, ಗುಡ್ಡ ಮತ್ತು ಮೋಡ ಒಂದೇ ಬಣ್ಣದಲ್ಲಿ ಚಿತ್ರಿಸಿ ಅಂತರ ಕಾಯುವಲ್ಲಿ ವಿಫಲವಾಗಿರುತ್ತದೆ. ಶೀರ್ಷಿಕೆಗೆ ತಕ್ಕಂತೆ ಗೋವು, ಗೋಪಾಲಕರನ್ನು ಬಚ್ಚಿಟ್ಟಿದ್ದು ಎಂಬುದನ್ನು ತಿಳಿಯಬಹುದು. ಮೈಸೂರು ಶೈಲಿಯಲ್ಲಿ ರಚಿಸಲಾಗಿರುವ ಈ ಚಿತ್ರಕ್ಕೆ ಹಳದಿ, ನೀಲಿ, ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳೇ ಶ್ರೇಷ್ಠವಾಗಿವೆ.

ಚಿತ್ರ ೨೬ : ಯಮಳಾರ್ಜುನ ಭಂಜನ :

ಗೋಡೆಯ ಮೇಲೆ ರಚನೆಯಾಗಿರುವ ಈ ಚಿತ್ರವು ಒಂದು ಕಥೆಯನ್ನು ನೆನಪಿಸುತ್ತದೆ. ಅದು ಬೆಳಗಿನ ಜಾವ ಕೃಷ್ಣ ಹಾಸಿಗೆಯಿಂದ ಎದ್ದೊಡನೆ ಹೊಟ್ಟೆ ಹಸಿವಾಗಿರುತ್ತೆ, ಏನು ತಿನ್ನೋದು ಎಂದು ತಿಳಿಯಲಾರದೇ ಅಡುಗೆ ಮನೆ ಕಡೆ ಹೋಗುತ್ತಾ ಸಾಗುವಾಗ ಅಮ್ಮ ಯಶೋಧ ಮೊಸರನ್ನ ಕಡಿದು ಬೆಣ್ಣೆಯನ್ನು ಗಡಿಗೆಯಲ್ಲಿ ಹಾಕುತ್ತಾ ತುಂಬಿಸಿರುತ್ತಾಳೆ. ಅವಳಲ್ಲಿಗೆ ಹೋದ ಕೃಷ್ಣ ಹಸಿವು ತಾಳಲಾರದೇ ಬೆಣ್ಣೆಯನ್ನು ತಿನ್ನಲು ಶುರು ಮಾಡುವನು. ಯಶೋಧೆ ಅದನ್ನು ನೋಡಿ ಕೃಷ್ಣನನ್ನು ಹಿಡಿದು ಹೊರಗಿನ ಕಲ್ಲುಕಂಬಕ್ಕೆ ಕಟಿಟ ಹಾಕುವಳು ಕಟ್ಟಿದ್ದ ಕಂಬದ ಎದುರಿಗೆ ಎರಡು ಮರಗಳಿರುತ್ತವೆ. ಒಂದಕ್ಕೊಂದು ಹತ್ತಿರವಾಗಿರುವುದನ್ನು ಕಂಡ ಶ್ರೀಕೃಷ್ಣ, ಕಟ್ಟಿದ ಕಲ್ಲನ್ನು ಎಳೆದುಕೊಂಡು ಹೋಗಿ ಆ ಮರಕ್ಕೆ ಗುದ್ದಿದಾಗ ದಿಡೀರನೆ ಆ ಮರಗಳು ದರೆಗುರುಳುತ್ತವೆ. ಆಗ ಅದರಲ್ಲಡಗಿದ್ದ ಇಬ್ಬರು ಶಾಪಗ್ರಸ್ತ ಯಮಳ, ಅರ್ಜುನರು ಹಾರಿ ಬಂದು, ಬಾಲಕ ಕೃಷ್ಣನಿಗೆ ಕೈ ಮುಗಿದ ಇಂದ್ರನ ಸ್ಥಳಕ್ಕೆ ಹಾರಿ ಹೋಗುತ್ತಾರೆ. ಇದನ್ನು ನೋಡಿದ ಯಶೋಧೆ, ಬೆಣ್ಣೆಯನ್ನು ತಂದುಕೊಡುವ ದೃಶ್ಯ ಇಲ್ಲಡಗಿದೆ. ಬಾಲಕ ಕೃಷ್ಣನಾದರೂ ಚಿತ್ರದಲ್ಲಿ ದೊಡ್ಡವನಂತೆ ಗೋಚರಿಸಿದೆ. ಆ ಮರ, ಒಬ್ಬ ಭಕ್ತೆ ಕೃಷ್ಣನಿಗೆ ಕೈ ಮುಗಿಯುತ್ತಿರುವ ದೃಶ್ಯ ಕಣ್ಣೆದುರಿಗಿದೆ. ಇಲ್ಲಿರುವ ಪಾತ್ರಗಳೆಲ್ಲಾವು ಪುರಾಣ ಪುಣ್ಯ ಕಥೆಗಳಿಂದ ಬಂದಂತವುಗಳಾಗಿದ್ದು, ಮೈಸೂರು ಶೈಲಿಯನ್ನು ಹೊಂದಿರುತ್ತದೆ. ಇಲ್ಲಿನ ಮರ ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರಿಸಲಾಗಿದೆ. ಅಲಂಕಾರವುಳ್ಳ ಕೃಷ್ಣ ಮತ್ತು ಯಶೋಧೆ ಮೌನದಿಂದಲೇ ಉತ್ತರಿಸುವಂತೆ ಕಾಣುತ್ತಿದೆ. ಹಿನ್ನೆಲೆಯಲ್ಲಿ ಹಳದಿ ಲೇಪಿಸಿ, ಅದರಲ್ಲೆ ರೇಖೆಗಳನ್ನು ರಚಿಸಿ ಬಣ್ಣವನ್ನು ಹಾಕಲಾಗಿದೆ. ಹಳದಿ, ಬಿಳಿ, ನೀಲಿ, ಹಸಿರು ಮತ್ತು ಕಪ್ಪು ವರ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ ೨೭ : ರಾಕ್ಷಸನ ಸಂಹಾರ :

ಗೋಡೆ ಮೇಲೆ ರಚಿತವಾಗಿರುವ ಈ ಕೃತಿಯಲ್ಲಿ ಗೋವನ್ನು ಹಿಡಿದ ಕಂಸನು ರಾಕ್ಷಸನ ಕಡೆ ಹೊಡೆಯಲು ಎತ್ತಿದಂತೆ ಕಂಡುಬರುತ್ತಿದ್ದು, ರಾಕ್ಷಸನು ನೆಲಕ್ಕೆ ಅಪ್ಪಳಿಸಿರುತ್ತಾನೆ. ತೆಂಗಿನ ಮರದ ರೆಂಬೆಗೆ ಒದಗಿರುವ ದೇಹವನ್ನು ಗಮನಿಸಿದರೆ ಸೋತಿರುವ ಲಕ್ಷಣಗಳು ಗೋಚರಿಸುತ್ತಿವೆ. ರಾಜ ತನ್ನ ಗಾಂಭೀರ್ಯವನ್ನು ಬಿಟ್ಟುಕೊಡದ ರೀತಿಯಲ್ಲಿ ತನ್ನ ದರ್ಪವನ್ನು ಮೆರೆದಿದ್ದಾನೆ. ಸಾಂಪ್ರದಾಯಿಕ ಶೈಲಿಯಲ್ಲಿ ತೆಲಗಿನ ಮರಗಳು ಕಂಡುಬರುವಂತಿವೆ. ಚಿತ್ರಗಳು ಮೈಸೂರು ಶೈಲಿಯಲ್ಲಿ ರಚಿತವಾಗಿವೆ. ಹಣೆಗೆ, ದೇಹದ ಭಾಗಕ್ಕೆ ವಿಭೂತಿಯನ್ನು ಬಳಿದುಕೊಂಡಿರುವ ರಾಕ್ಷಸನು ಶಿವನ ಆರಾಧಕನೇ ಇರಬಹುದು. ಹಳದಿ ಗೋಡೆಗೆ ಚಿತ್ರವನ್ನು ರಚಿಸಲಾಗಿದೆ. ಹಳದಿ, ಕೆಂಪು, ನೀಲಿ, ಕಪ್ಪು, ಕೆಂಪು, ಬಿಳಿ ಬಣ್ಣಗಳನ್ನು ಉಪಯೋಗಿಸಲಾಗಿದೆ. ಕಂಸನ ಪಕ್ಕ ಶ್ರೀಕೃಷ್ಣ, ನಿಂತಿರುವುದನ್ನು ಗಮನಿಸಿದರೆ ಶ್ರೀಕೃಷ್ಣ ಈ ರಾಕ್ಷಸನ ವಿರುದ್ಧ ಹೋರಾಡಿ ಸಾವನ್ನಪ್ಪಿದ ಸಂದರ್ಭದಲ್ಲಿ ಕಂಸ ಹೊಡೆಯುವ ನಾಟಕವಾಡಿರಬಹುದು. ಗಿಡ, ಬಳ್ಳಿಗಳನ್ನು ಸಹ ಇಲ್ಲಿ ಕಾಣಬಹುದು.

ಚಿತ್ರ ೨೮ : ಪ್ರಲಭಾಸುರ ವಧೆ :

ಗೋಡೆ ಮೇಲೆ ರಚಿತವಾಗಿರುವ ಈ ಕೃತಿಯಲ್ಲಿ ಪ್ರಲಭಾಸುರನು ಬಾಲಕ ಕೃಷ್ಣನನ್ನು ತನ್ನ ಕಂಕುಳದಲ್ಲಿಟ್ಟುಕೊಂಡು ಹೋಗುತ್ತಿರುವುದನ್ನು ಬಲರಾಮ ಮತ್ತು ಸ್ನೇಹಿತರು ತಲೆ ಎತ್ತಿ ನೋಡುತ್ತಿದ್ದಾರೆ ಅಂದರೆ ಅಷ್ಟು ಎತ್ತರದ ರಾಕ್ಷಸ ಅವನಾಗಿದ್ದ. ಕೃಷ್ಣನ ಬಾಲ್ಯದ ಗೆಳೆಯರು ಕೈಮುಗಿದು ಕೃಷ್ಣನನ್ನು ಕೆಳಗಿಳಿಸು ಎಂದು ಬೇಡಿಕೊಳ್ಳುತ್ತಿದ್ದಾರೆ ಆದರೂ ಕೃಷ್ಣ ದೃತಿಗೆಡದೆ ಮೇಲೆ ನೋಡಿ ಕೈಮುಗಿದು ಪ್ರಾರ್ಥಿಸುತ್ತಿರುವಂತೆ ಕಂಡುಬರುತ್ತಿದೆ. ರಾಕ್ಷಸನನ್ನು ಸೇರಿಕೊಂಡು ಒಟ್ಟು ಹನ್ನೊಂದು ವ್ಯಕ್ತಿಗಳನ್ನು ಈ ಚಿತ್ರದಲ್ಲಿ ತೋರಿಸಿರುವ ಕಲಾವಿದ ಶೀರ್ಷಿಕೆಯ ಅನುಸಾರ ಹಿರಿಯರ ಮಾರ್ಗದರ್ಶನದಲ್ಲಿ ಚಿತ್ರವನ್ನು ಚಿತ್ರಿಸಿರುವ ಸಾಧ್ಯತೆಗಳೇ ಹೆಚ್ಚು, ಕೈಯಲ್ಲಿ ಕೋಲು ಹಿಡಿದಿರುವ ಬಲರಾಮ ಕುಸ್ತಿಗೆ ನಿಂತಿರುವಂತೆ ಕಂಡುಬರುತ್ತಿದೆ. ಇದು ಕೂಡ ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಚಿತ್ರ ಹಳದಿಯ ಹಿನ್ನೆಲೆಯ ಬಣ್ಣದಲ್ಲಿ ಚಿತ್ರವನ್ನು ರಚಿಸಲಾಗಿದೆ. ಹಳದಿ, ಕೆಂಪು, ನೀಲಿ, ಕಪ್ಪು ಮತ್ತು ಬಿಳಿ ಬಣ್ಣಗಳೇ ಇಲ್ಲಿ ಪ್ರಧಾನವಾಗಿವೆ.

ಚಿತ್ರ ೨೯ : ಜಲಕ್ರೀಡೆ :

ಗೋಡೆ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯು ತುಂಬಾ ವಿಶೇಷವಾಗಿದ್ದು, ಸ್ತ್ರೀಯರು ಹೊಳೆಯಲ್ಲಿ ಸ್ನಾನ ಮಾಡುತ್ತಿಉರವ ಸಂದರ್ಭದಲ್ಲಿ ತುಂಟ ಕೃಷ್ಣನು ಆ ಸ್ತ್ರೀಯರ ಬಟ್ಟೆಯನ್ನೆಲ್ಲಾ ತೆಗೆದುಕೊಂಡು ಮರದಲ್ಲಿಟ್ಟು, ಕೊಳಲನ್ನು ಊದುತ್ತಿರುವ ದೃಶ್ಯವಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರಿಸಿರುವ ಮರದಲ್ಲಿ ಪುಟ್ಟ ಮಕ್ಕಳ ಬಟ್ಟೆಯಂತೆ ಸಾಮೂಹಿಕವಾಗಿ ತೋರಿಸಲಾಗಿದೆ.

ಒಬ್ಬ ಸ್ತ್ರೀ ಬಟ್ಟೆಯಿಲ್ಲದೆ, ನೀರಲ್ಲಿದ್ದಾಳೆ. ಉಳಿದ ಏಳು ಜನರು ಸೀರೆಯನ್ನುಟ್ಟು ಕೃಷ್ಣನನ್ನು ಕರೆಯುತ್ತಿದ್ದಾರೆ. ಆ ಮಟ್ಟಕ್ಕೆ ಚಿತ್ರವನ್ನು ಬಿಂಬಿಸಲಾಗಿದೆ. ಪುರಾಣಗಳ ಕಥೆಯ ಹಿನ್ನಲೆಯ ದೃಶ್ಯ ಇದಾಗಿದ್ದು, ಚಿತ್ರ ಪೂರ್ಣ ಪ್ರಮಾಣದಲ್ಲಿ ಪೂರೈಸುವಲ್ಲಿ ವಿಫಲಗೊಂಡಂತಿದೆ. ಪ್ರಸ್ತುತ ಈಗಿನ ಮಕ್ಕಳು ಶೀರ್ಷಿಕೆಯನ್ನು ಸೂಚಿಸಿದಂತೆ ಕಲ್ಪನೆಯಲ್ಲಿಯೇ ಅದ್ಭುತ ಚಿತ್ರಗಳನ್ನು ಬರೆದು ತೋರ್ಪಡಿಸುತ್ತಾರೆ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗಿರುವ ಈ ಚಿತ್ರ ಪರಿಪೂರ್ಣತೆ ತರುವಲ್ಲಿ ಸೋತಿದೆ ಅಂತಾನೇ ಹೇಳಬೇಕು. ಸಾಮಾನ್ಯರು ನೋಡಿದಾಗ ಒಪ್ಪಿಕೊಳ್ಳುವುದು ಸಾಮಾನ್ಯದ ಸಂಗತಿಯಾದರು, ಹಿರಿಯರು, ವಿದ್ವಾಂಸರು, ಕಲಾವಿದರು ಇಂತಹ ಚಿತ್ರಗಳನ್ನು ಒಪ್ಪಿಕೊಳ್ಳುವುದು ತುಂಬಾ ವಿರಳವಾಗಿರುತ್ತದೆ. ರೇಖೆಗಳಲ್ಲಿ ಅಸ್ಪಷ್ಟತೆ, ಬಣ್ಣಗಳಲ್ಲಿ ತುಂಬಾ ಅವಸರವಿದೆ. ನೋಡುವ ನೋಟಗಳಲ್ಲಿ ಗಾಂಭೀರ್ಯತೆಯಿಲ್ಲ ಆದರೂ ಚಿತ್ರದ ಶೀರ್ಷಿಕೆಗೆ ಅನುಸಾರ ಅಲ್ಪಮಟ್ಟಕ್ಕೆ ತರುವಲ್ಲಿ ಕಲಾವಿದ ಯಶಸ್ವಿಯಾಗಿದ್ದಾನೆ. ತಲೆಯಲ್ಲಿ ನವಿಲುಗರಿ, ಹಣೆಯಲ್ಲಿ ನಾಮ, ಕೈಯಲ್ಲಿ ಕೊಳಲು ತುದಿಯನ್ನು ತುಟಿಯಲ್ಲಿಟ್ಟು ಊದುತ್ತಾ ಸ್ತ್ರೀಯರನ್ನು ನೋಡುತ್ತಿರುವುದನ್ನು ಕಲಾವಿದ ಗ್ರಹಿಸಿದ್ದಾನೆ ಬಿಳಿ, ಕಪ್ಪು, ಹಳದಿ, ಹಸಿರು, ನೀಲಿ, ಕೆಂಪು ಬಣ್ಣಗಳೇ ಇಲ್ಲಿಯೂ ಪ್ರಮುಖವಾಗಿರುತ್ತವೆ.

ಚಿತ್ರ ೩೦ : ಗೋವರ್ಧನ ಪೂಜೆ :

ಬೆಟ್ಟದ ಮೇಲೊಂದು ಗುಡಿಯ ಮಾಡಿ ಎಂಬಂತೆ ಬೆಟ್ಟ, ಗುಡ್ಡಗಳ ಸಾಲಿನಲ್ಲಿ ಕೃಷ್ಣ ಪರಮಾತ್ಮ ನಿಂತಿದ್ದಾನೆ. ಅದುವೇ ಗೋವು ಎಂಬುದು ಕೆಳಗಿರುವ ಭಕ್ತರಿಗೆ ಅರಿವಾಗಿದೆ. ಪೂಜಾ ಸಾಮಾಗ್ರಿಗಳನ್ನೆಲ್ಲಾ ಎದುರಿಗಿಟ್ಟು ಕೈಮುಗಿಯುತ್ತಿರುವ ದೃಶ್ಯವನ್ನು ಕಾಣಬಹುದು. ಬಹುಪಾಲು ಸ್ತ್ರೀಯರೇ ಹೆಚ್ಚಾಗಿದ್ದು ಇಬ್ಬರು ಗಂಡಸರು (ರಾಜ) ಮತ್ತು (ಪೂಜಾರಿ) ನಿಂತು ದೇವರ ಆಶೀರ್ವಾದ ಪಡೆಯುತ್ತಿದ್ದಾರೆ. ಚಿತ್ರ ಸುಂದರವಾಗಿದ್ದು, ಸಂಯೋಜನೆಯಿಂದ ಕೂಡಿರುತ್ತದೆ. ಹಳದಿ ಬಣ್ಣದ ಹಿನ್ನೆಲೆಯಲ್ಲಿಯೇ ರೇಖಾಚಿತ್ರದ ಮೂಲಕ ಬಣ್ಣವನ್ನು ಲೇಪಿಸಿರುವ ಸಾಧ್ಯತೆಯೇ ಹೆಚ್ಚು. ಗೋವರ್ಧನ ಎಲ್ಲಾ ಭಕ್ತಾದಿಗಳನ್ನು ಗಮನಿಸಿ ಆಶೀರ್ವದಿಸುವ ನೋಟವನ್ನು ಚಿತ್ರದಲ್ಲಿ ಕಾಣಬಹುದು. ಈ ಚಿತ್ರವು ಕೂಡ ಮೈಸೂರು ಶೈಲಿಯನ್ನು ಹೋಲುತ್ತಿದೆ. ಹಳದಿ, ಬಿಳಿ, ಕೆಂಪು, ಕಪ್ಪು, ಹಸಿರು ಬಣ್ಣಗಳನ್ನು ಬಳಸಿ ಚಿತ್ರವನ್ನು ಮೂಡಿಸಲಾಗಿರುತ್ತದೆ.

ಚಿತ್ರ ೩೧ : ಗೋವರ್ಧನೋದ್ಧಾರ

ಗೋಡೆಯ ಮೇಲೆ ರಚಿತವಾಗಿರುವ ಈ ಕೃತಿಯಲ್ಲಿ ಗೋವುಗಳದ್ದೆ ಸದ್ದು, ಶ್ರೀಕೃಷ್ಣ ಪರಮಾತ್ಮ ನಿಂತ ಭಂಗಿಯಲ್ಲಿದ್ದು, ಭಕ್ತಾದಿಗಳಿಗೆ ತನ್ನ ವಿಶ್ವರೂಪವನ್ನು ತೋರಿಸುತ್ತಿದ್ದಾನೆ ತನ್ನ ಎಡಗೈ ತೋರುಬೆರಳ ತುದಿಯಲ್ಲಿ ಬೆಟ್ಟವನೆನ್ನಿತ್ತು, ಇದರಲ್ಲಡಗಿರುವ ಗೋವುಗಳನ್ನು ಕಾಯುವುದೇ ನನ್ನ ಕೆಲಸ, ಅವುಗಳ ಜೊತೆಯೇ ನನ್ನ ಒಡನಾಟ ಎಂಬಂತಹ ಉಪಯುಕ್ತ ಮಾಹಿತಿಯೊಂದಿಗೆ ಗೋವುಗಳ ಬೆಲೆಯನ್ನು ಜನಸಮುದಾಯಕ್ಕೆ ತಿಳಿಸುತ್ತಾ ಹೋಗುವ ದೃಶ್ಯವಿದು. ಎತ್ತರದ

ಶ್ರೀಕೃಷ್ಣನ ಕೆಳಗಡೆ ಹತ್ತಾರು ಹಸುಗಳಿರುವುದನ್ನು ಕಾಣಬಹುದು. ರೇಖೆಗಳಲ್ಲಿ ಸ್ಪಷ್ಟತೆ ಇದ್ದು, ಬಣ್ಣವು ಕೂಡ ನವಿರಾಗಿರುತ್ತದೆ. ಹಳದಿ, ಬಿಳಿ, ಕೆಂಪು, ನೀಲಿ, ಹಸಿರು ಬಣ್ಣಗಳೇ ಈ ಕೃತಿಯಲ್ಲಿ ಹೆಚ್ಚು. ಹಾಗೆಯೇ ಸಮೃದ್ಧಿಯಿಂದಿರುವ ಶ್ರೀಕೃಷ್ಣನ ಮುಖದಲ್ಲಿ ಗಾಂಭೀರ್ಯತೆ ಎದ್ದು ಕಾಣುತ್ತಿದೆ. ಸಾಂಪ್ರದಾಯಿಕ ಶೈಲಿಯಲ್ಲಿಯೇ ರಚನೆಯಾಗಿರುವ ಚಿತ್ರವಾಗಿರುತ್ತದೆ.

ಚಿತ್ರ ೩೨ : ಯಶೋಧೆಯ ತೊಡೆಯ ಮೇಲೆ ಬಾಲಕ ಕೃಷ್ಣ :

ಗೋಡೆಯ ಮೇಲೆ ಚಿತ್ರಿತವಾಗಿರುವ ಈ ಕೃತಿಯಲ್ಲಿ ಯಶೋಧೆ, ತನ್ನ ಸಾಕುಮಗ ಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡಿರುವುದು ದೊಡ್ಡ ಕುರ್ಚಿಯಲ್ಲಿ ಕುಂತುಕೊಂಡಿರುವ ಯಶೋಧೆ ಮಗುವನ್ನು ಸಂತೈಸುವ ಸನ್ನಿವೇಶದಂತೆ ಚಿತ್ರಿಸಲಾಗಿದೆ. ಹಸಿರು ಸೀರೆಯನ್ನುಟ್ಟು ಯಶೋಧೆ ಅಲಂಕಾರಿತಳಲ್ಲದೇ ಸಾಮಾನ್ಯಳಂತೆ ಕಂಡುಬರುತ್ತಿದ್ದು, ಕೃಷ್ಣನಿಗೆ ಜುಟ್ಟು ಹಾಕಿ ಅಲಂಕಾರ ಮಾಡಿ ನೋಡುತ್ತಿರುವಂತೆ ಭಾಸವಾಗುತ್ತಿದೆ. ರೇಖೆಗಳಲ್ಲಿ ಅಸ್ಪಷ್ಟತೆ ಎದ್ದು ಕಾಣುತ್ತಿದ್ದು, ಎಡ, ಬಲ ಕಾಲುಗಳಲ್ಲಿ ವ್ಯತ್ಯಾಸವಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಮೈಸೂರು ಶೈಲಿಯ ಬಣ್ಣ ರೇಖೆಗಳಲ್ಲಿ ಸಾಮ್ಯತೆ ಉಳಿಸಿಕೊಂಡಂತೆ ಕಂಡುಬರುತ್ತಿದೆ. ಬಿಳಿ, ಹಳದಿ, ಹಸಿರು, ಕಪ್ಪು ವರ್ಣಗಳೇ ಈ ಕೃತಿಯ ಮೆರಗು.

ಚಿತ್ರ–೩೩ : ಗೋವಿಂದ ಪಟ್ಟಾಭಿಷೇಕ :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ಗೋವಿಂದನಿಗೆ ಪಟ್ಟಾಭಿಷೇಕ ಆಗುತ್ತಿರುವುದನ್ನು ಕಾಣಬಹುದು. ನವಿಲುಗರಿಯನ್ನು ಹೊತ್ತ ಗೋವು ಸ್ತ್ರೀಮುಖವನ್ನು ತೊಡಿಸಲಾಗಿದೆ. ಅದರಲ್ಲಿ ಅಕ್ಕ, ಪಕ್ಕ ಇಬ್ಬರು ಸ್ತ್ರೀ ಸೇವಕರು ನಿಂತಿದ್ದಾರೆ. ಬಲಭಾಗದಲ್ಲಿ ಆನೆಯ ಚಿತ್ರವನ್ನು ತೋರಿಸಲಾಗಿದ್ದು, ಸೊಂಡಿಲನ್ನು ಎತ್ತಿ ಗೋವಿಗೆ ನಮಸ್ಕರಿಸುತ್ತಿರುವಂತೆ ಭಾಸವಾಗುತ್ತಿದೆ. ಹಾಗೆಯೇ ಕೆಳಗಡೆ ಬಂದರೆ ಗೋವಿಂದನಿಗೆ ಮಹರ್ಷಿಗಳು ಹೂವನ್ನು ತಲೆಯ ಮೇಲೆ ಸುರಿಯುವುದರೊಂದಿಗೆ ಗೌರವವನ್ನು ಸೂಚಿಸುವಂತಿದೆ. ಅಕ್ಕಪಕ್ಕದಲ್ಲಿ ದೇವ, ವಸುದೇವ ಕುಳಿತುಕೊಂಡು ಆಶಿಸುತ್ತಿದ್ದಾರೆ. ಇನ್ನು ಈ ಪಟ್ಟ ಅಭಿಷೇಕ ನಡೆಯುವ ಸ್ಥಳದಲ್ಲಿ ಪೂಜಾ ಸಾಮಾಗ್ರಿಗಳನ್ನು ತೋರಿಸಿರುತ್ತಾರೆ. ಅದ್ರಲ್ಲಿ ದೂಪ ಹಾಕುವ ವಸ್ತು, ಹಣ್ಣು ಕಾಯಿ ಇಟ್ಟಿರುವ ಬಟ್ಟಲು, ಹೂವು ಹೀಗೆ ಬೇಕಾದ ಸಾಮಾಗ್ರಿಗಳನ್ನೆಲ್ಲಾ ಬಿಡಿ ಬಿಡಿಯಾಗಿ ತೋರಿಸಿರುತ್ತಾರೆ. ಈ ಚಿತ್ರ ಅಲ್ಪ ಭಿನ್ನವಾಗಿದೆ. ಹೋಲಿಕೆಯಲ್ಲಿ ಭಿನ್ನವಾಗಿದೆ. ಹಿಂಬದಿಗೆ ಕೆಂಪುಬಣ್ಣವನ್ನು ಬಳಿದು, ರೇಖೆಯ ಮುಖಾಂತರ ಚಿತ್ರವನ್ನು ರಚಿಸಲಾಗಿದೆ. ಹಸಿರು, ಹಳದಿ, ಕಪ್ಪು, ಬಿಳಿ ಮತ್ತು ಬಿಳಿ ಬಣ್ಣಗಳೇ ಇಲ್ಲಿ ಪ್ರಾಧಾನ್ಯ.

ಚಿತ್ರ ೩೪ : ಯಜ್ಞಾ ಪೂಜೆಯಲ್ಲಿ ತೊಡಗಿರುವುದು :

ಗೋಡೆಯ ಮೇಲೆ ಅಲಂಕೃತಗೊಂಡ ಈ ಚಿತ್ರವು, ಪೂಜಾ ಕಾರ್ಯದಲ್ಲಿ ತೊಡಗಿರುವ

ಶ್ರೀಕೃಷ್ಣ ರಾಧೆಯ ಜೊತೆಯಲ್ಲಿ ಬಲರಾಮ, ಭಕ್ತ ಸಮೂಹ ನಿಂತಿರುತ್ತದೆ. ಭಕ್ತ ಮಹರ್ಷಿಗಳು ಪೂಜೆಯಲ್ಲಿ ತೊಡಗಿದ್ದು, ಹೋಮದಲ್ಲಿ ತುಪ್ಪವನ್ನು ಸುರಿಯುತ್ತಾ, ಮಂತ್ರಗಳನ್ನು ಪಟಸುತ್ತಿರುವಂತೆ ಚಿತ್ರ ಭಾಸವಾಗುತ್ತಿದೆ. ಈ ಪೂಜೆಗೆ ಮೇಲಿನಿಂದ ಭಕ್ತ, ಸಮೂಹ ನೋಡಿ ಆಶಿಸುತ್ತಾ ಬೆಂಬಲವನ್ನು ಸೂಚಿಸಿರುತ್ತದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ಶ್ರೀಕೃಷ್ಣ ರಾಧೆಯೇ ಎಲ್ಲಾರ ಕಣ್ಣು ತೆರೆಸಿದಂತೆ ರೂಪಿಸಲಾಗಿದೆ. ಬಿಳಿ, ಹಸಿರು, ಹಳದಿ, ಕಪ್ಪು, ಬಿಳಿ ವರ್ಣಗಳನ್ನು ಬಳಸಲಾಗಿದೆ.

ಚಿತ್ರ ೩೫-೩೬ : ವಿದ್ಯಾಭ್ಯಾಸ ಮತ್ತು ಗುರುಗಳಿಗೆ ಕಾಣಿಕೆ ನೀಡುತ್ತಿರುವ ದೃಶ್ಯ :

ಈ ಚಿತ್ರದಲ್ಲಿ ಎರಡು ಪ್ರಮುಖ ಘಟ್ಟಗಳಿರುತ್ತವೆ. ತನಗೆ ವಿದ್ಯೆ ಕಲಿಸಿದ ಗುರುಗಳಿಗೆ ಕಾಣಿಕೆಯನ್ನು ಅಣ್ಣ ಬಲರಾಮನ ಜೊತೆಗೂಡಿ ಅರ್ಪಿಸುತ್ತಿರುವ ದೃಶ್ಯ. ಹಾಗೂ ಗುರುವಿನ ಬಳಿ ವಿದ್ಯಾಭ್ಯಾಸ ಮಾಡುತ್ತಿರುವ ಸುಸಂದರ್ಭದ ಸನ್ನಿವೇಶ ಕುಳಿತ ಗುರುವೃಂದಕ್ಕೆ ಭಕ್ತಿಯಿಂದ ನಮಿಸುತ್ತಾ ಕೃಷ್ಣ ಮತ್ತು ಬಲರಾಮ ಕಾಣಿಕೆಯನ್ನು ನೀಡುತ್ತಿದ್ದಾನೆ. ಪಕ್ಕದಲ್ಲಿರುವ ಬಲರಾಮ ನಮಸ್ಕರಿಸುತ್ತಿದ್ದಾನೆ. ಹಾಗೆಯೇ ಕೆಳಗಡೆ ಬಂದರೆ ಕೃಷ್ಣನ ಬಳಗ ಗುರುವಿನ ಪಾಠವನ್ನು ಆಲಿಸುತ್ತಿದ್ದಾರೆ. ಕೃಷ್ಣ ಎಂದು ಗುರುತಿಸುವುದಕ್ಕೆ ತೆಳು ನೀಲಿವರ್ಣವನ್ನು ಬಳಸಲಾಗಿದ್ದು, ಉಳಿದ ಎಲ್ಲದ ದೇಹದ ಬಣ್ಣ ಒಂದೇ ಆಗಿರುತ್ತದೆ. ಬಲರಾಮನು ಮಾತ್ರ ಕಿರೀಟವನ್ನು ತೊಟ್ಟಿದ್ದಾನೆ. ಭಕ್ತ ಸಮೂಹ ಸಾಮಾನ್ಯರಲ್ಲ ಸಾಮಾನ್ಯರಂತೆ ತೋರಿಸಲಾಗಿರುತ್ತದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯು ಸುಂದರವಾಗಿದೆ. ಹಳದಿ, ಕೆಂಪು, ನೀಲಿ, ಹಸಿರು ಮತ್ತು ಬಿಳಿ, ಕಪ್ಪು ವರ್ಣಗಳೇ ಇಲ್ಲಿ ಮುಖ್ಯ ಪಾತ್ರಧಾರಿಗಳು ಈ ಚಿತ್ರ ಶ್ರೀಮಂತಿಕೆಯಿಂದ ರಾರಾಜಿಸುತ್ತಿದೆ.

ಚಿತ್ರ ೩೭ : ಕುಬ್ಜೆಯನ್ನು ಸುಂದರಿಯನ್ನಾಗಿ ಮಾಡಿದ್ದು :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರ ಕೃತಿಯು ತುಂಬಾ ಸುಂದರವಾಗಿರುತ್ತದೆ. ಕಂಸನ ಅಡ್ಡಕ್ಕೆ ಕೃಷ್ಣ, ಬಲರಾಮ ಹೋಗುತ್ತಿರುವ ಸಂದರ್ಭದಲ್ಲಿ ಒಬ್ಬ ಕುಬ್ಜ ಸ್ತ್ರೀ ಪೂಜಾ ಸಾಮಾಗ್ರಿಗಳೊಂದಿಗೆ ರಸ್ತೆಯಲ್ಲಿ ಕಾದು ಕುಳಿತಿರುತ್ತಾಳೆ. ರಥದಲ್ಲಿ ಮೆರವಣಿಗೆ ಮಾಡಿಕೊಂಡು ಬರುತ್ತಿರುವ ಸಂದರ್ಭದಲ್ಲಿ ಶ್ರೀಕೃಷ್ಣ ಈ ಕುಬ್ಜೆಯನ್ನು ನೋಡಿ, ಆಶ್ಚರ್ಯಚಕಿತರಾಗಿ ಬಂಡಿಯಿಂದ ಇಳಿದು ಅತಿಥಿಸತ್ಕಾರ ಸ್ವೀಕರಿಸುತ್ತಾನೆ. ಆಗ ಅವಳಿಗೆ ಇದ್ದ ಶಾಪವನ್ನು ಬಹಿಷ್ಕರಿಸಿ ಅದರಿಂದ ವಿಮುಕ್ತಿಯನ್ನು ನೀಡಿ ಬಹುಸುಂದರಿಯನ್ನಾಗಿ ಮಾಡುವುದೇ ಈ ಚಿತ್ರದ ಮುಖ್ಯ ವಿಷಯ. ಅದರಂತೆ ಬಲರಾಮ ಜೊತೆಗಿದ್ದು ಅವಳನ್ನು ವಿಚಾರಿಸುವ ಹಂತದಲ್ಲಿದೆ. ಕೆಂಪು ಸೀರೆಯನ್ನುಟ್ಟ ಸ್ತ್ರೀಯು ಸೌಂದರ್ಯವತಿಯಾಗಿದ್ದಾಳೆ. ಪಕ್ಕದಲ್ಲಿ ಅವಳ ಸ್ನೇಹಿತೆಯು ಇದ್ದಾಳೆ. ಈ ಚಿತ್ರವು ಕೂಡ ಮೈಸೂರು ಶೈಲಿಯಲ್ಲಿ ರಚನೆಯಾಗಿರುತ್ತದೆ. ಹಳದಿ ಬಣ್ಣವೇ ಇಲ್ಲಿ ಪ್ರಧಾನ.

ಚಿತ್ರ ೩೮ : ಕೃಷ್ಣ, ರಾಧೆ ಮತ್ತು ಬಲರಾಮ :

ಗೋಡೆಯ ಮೇಲೆ ಮುಂದುವರಿದ ಚಿತ್ರ ಇದಾಗಿದ್ದು, ಕೃಷ್ಣ, ಅಣ್ಣ ಬಲರಾಮ ಮತ್ತು ಸೀತೆಯನೊಳಗೊಂಡ ಸನ್ನಿವೇಶ ಇದಾಗಿರುತ್ತದೆ. ಇಲ್ಲಿನ ಶೀರ್ಷಿಕೆಗೆ ಅನುಗುಣವಾಗಿ ಮಾತನಾಡಲು ಪ್ರಾರಂಭಿಸಿದಾಗ ಕೃಷ್ಣನು ರಾಧೆಯನ್ನು ಸಹಕರಿಸಿದ್ದು ಎಂಬುದು ಯಾವ ಅರ್ಥದಲ್ಲಿ ನೀಡುತ್ತಿದೆ ಎಂದು ಅರಿವಾಗದು. ಆದರೆ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ ರಾಧೆ ಕೃಷ್ಣನಲ್ಲಿ ಏನೋ ಬೇಡುತ್ತಿರುವಂತೆ (ಕೇಳುತ್ತಿರುವಂತೆ) ಗೋಚರಿಸುತ್ತಿದೆ. ಅದಕ್ಕೆ ಬಾಲರಾಮನಿಂದ ಮಾತುಗಳು ಬರಲಾರಂಭಿಸಿವೆ ಎಂಬುದನ್ನು ತಿಳಿಯಬಹುದು ಹಿಂಬದಿಯಲ್ಲಿ ಮನೆಗಳನ್ನು ಚಿತ್ರಿಸಲಾಗಿದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯು ಹಳದಿ ಮತ್ತು ಬಿಳಿ ಬಣ್ಣಗಳಿಂದ ತನ್ನ ಮೆರಗನ್ನು ಹೆಚ್ಚಿಸಿಕೊಂಡಿರುತ್ತದೆ.

ಚಿತ್ರ ೩೯, ೪೦ : ಕುಚೇಲಾ ಲಿಂಗನ :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯು ಕೃಷ್ಣ ಮತ್ತು ಬಲರಾಮ ಕುಚೇಲನನ್ನು ಆಲಿಂಗನ ಮಾಡುತ್ತಿರುವ ದೃಶ್ಯ ಕಂಡುಬರುತ್ತಿದೆ. ಕುಚೇಲನನ್ನು ತಬ್ಬಿಕೊಂಡಿದ್ದು, ಪ್ರೀತಿಯಿಂದ ಬರಮಾಡಿಕೊಂಡವನಂತೆ ಕುಚೇಲನು ತೋರಿಸುತ್ತಾನೆ. ಇನ್ನು ಶ್ರೀ ಕೃಷ್ಣ ಕುಚೇಲನಿಗೆ ಕಾಣಿಕೆ ರೂಪದಲ್ಲಿ ನೀಡುತ್ತಿರುವ ವಸ್ತುವನ್ನು ಕೈಯಲ್ಲಿ ಹಿಂದಿರುವುದು. ಪಕ್ಕದಲ್ಲಿರುವ ಬಲರಾಮ ಪ್ರೀತಿಯಿಂದ ಗೌರವಿಸುತ್ತಿದ್ದಾನೆ. ಒಟ್ಟು ಆರು ವ್ಯಕ್ತಿಗಳನ್ನು ತೋರಿಸಲಾಗಿರುವ ಈ ಸನ್ನಿವೇಶದಲ್ಲಿ ಒಂದು ಪಾತ್ರವನ್ನು ಎರಡು ಭಾರಿ ತೋರಿಸಲಾಗಿರುತ್ತದೆ. ಈ ಚಿತ್ರವು ಕೂಡ ಮೈಸೂರು ಶೈಲಿಯನ್ನು ಹೋಲುತ್ತದೆ. ಕೆಂಪು, ಬಿಳಿ, ಕಪ್ಪು, ಹಳದಿ ಮತ್ತು ನೀಲಿ ವರ್ಣಗಳನ್ನು ಗುರುತಿಸಬಹುದು.

ಚಿತ್ರ ೪೧ : ಕಂಸನ ವಧೆ :

ಶ್ರೀ ಕೃಷ್ಣ ಪರಮಾತ್ಮನು ಕಂಸನನ್ನು ವಧೆ ಮಾಡುತ್ತಿರುವ ಈ ಚಿತ್ರವನ್ನು ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ಮುಖ್ಯವಾಗಿ ಮೂರು ಮಹಡಿಯುಳ್ಳ ಕಟ್ಟಡದಲ್ಲಿ ಕಂಸನ ಜೊತೆ ಕುಸ್ತಿ ಮಾಡುತ್ತಿರುವ ಕೃಷ್ಣ ಎರಡನೇ ಮಹಡಿಯಲ್ಲಿದ್ದಾನೆ. ದಪ್ಪ ಮೀಸೆ, ದಡೂತಿ ದೇಹವನ್ನೊತ್ತ ಕಂಸನ ಜೊತೆ ಕುಸ್ತಿ ಮಾಡುತ್ತಿದ್ದು, ಸುತ್ತುವರಿದು ಜನ ಅಲ್ಲಲ್ಲಿ ವೀಕ್ಷಿಸುತ್ತಿದ್ದಾರೆ. ಕೆಳಗಡೆ ದ್ವಾರಬಾಗಿಲ ಬಳಿ ಇಬ್ಬರು ಸೇವಕರು ದ್ವಾರಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಕಂಸನನ್ನು ಅವನಿದ್ದ ಸ್ಥಳಕ್ಕೆ ಬಂದು ಅವರ ಹಿಂಬಾಲಕರನ್ನು ಸೋಲಿಸಿ ಕೊನೆಗೆ ಕಂಸನನ್ನು ಸಾಯಿಸುವ ದೃಶ್ಯವನ್ನು ಈ ರೀತಿ ಕಲಾವಿದರು ಚಿತ್ರಿಸಿದ್ದಾರೆ. ಮೆಟ್ಟಿಲುಗಳು, ಕಂಬಗಳು, ತೊಲೆಗಳು ಎಲ್ಲಾ ಬಂಗಾರದ ಬಣ್ಣಗಳಿಂದಲೇ ಅಲಂಕರಿಸಲಾಗಿರುವ ಈ ಚಿತ್ರದಲ್ಲಿ ಹಳದಿ ಶ್ರೀಮಂತ ಎಂಬುದನ್ನು ಸಾಬೀತು ಪಡಿಸುತ್ತದೆ. ಕೃಷ್ಣ ಎಂಬುದಕ್ಕೆ ಜುಟ್ಟು ನವಿಲುಗರಿಯೇ ಗುರುತುಗಳು. ಪೇಟ ಸುತ್ತಿದ ಸೇವಕರು ತುಂಬಾ ಆಳವಾಗಿ ಗಮನಿಸುತ್ತಿದ್ದಾರೆ. ಈ ಕುಸ್ತಿಯಲ್ಲಿ ಕಂಸ ಸೋತು ಸಾವನ್ನಪ್ಪುತ್ತಾನೆ.

ಅಸ್ಪಷ್ಟವಾದ ರೇಖೆಗಳು, ಬಣ್ಣಗಳು, ವ್ಯಕ್ತಿಗಳಿಂದ ಕೂಡಿರುವ ದೃಶ್ಯ ಇದಾಗಿದ್ದು, ಹೀಗೆ-ಇತ್ತು ಎಂಬುದನ್ನು ಸ್ಥೂಲವಾಗಿ ತಿಳಿಸಿದ್ದಾರೆಷ್ಟೆ ಎನ್ನಬಹುದು!

ಚಿತ್ರ ೪೨ : ರಾಮಕೃಷ್ಣರ ಮಲ್ಲಯುದ್ಧ :

ಒಂದು ಕಡೆ ಬಲರಾಮ ಒಬ್ಬನ ಜೊತೆ ಕಾಳಗಕ್ಕಿಳಿದಿದ್ದರೆ ಕೃಷ್ಣ ಮತ್ತೊಬ್ಬ ಜಟ್ಟಿಯ ಜೊತೆ ಕಾಳಗಕ್ಕಿಳಿದಿದ್ದಾರೆ. ಇದೊಂದು ಸಂಪೂರ್ಣ ಯುದ್ಧದ ಸನ್ನಿವೇಶವಾಗಿದ್ದು, ಸಂಯೋಜನೆಯಿಂದ ಕೂಡಿದ್ದಾಗಿದೆ. ಕಂಸನು ಆಯೋಜಿಸಿದ್ದ ಈ ಮಲ್ಲಯುದ್ಧದಲ್ಲಿ ಗೋಕುಲದಿಂದ ಕೃಷ್ಣ, ಬಲರಾಮ ಭಾಗವಹಿಸಿದ್ದರು. ರಣರಂಗದಂತೆ ಚಿತ್ರಿಸಲಾಗಿರುವ ಈ ಕೃತಿಯಲ್ಲಿ ಸೈನಿಕರು, ಆನೆ ಸಾಲುಗಟ್ಟಿ ನಿಂತ ಜಟ್ಟಿಗಳನ್ನು ತೋರಿಸಲಾಗಿದ್ದು, ಸೈನಿಕರು ಭರ್ಚಿಯನ್ನಿಡಿದು ವೈರಿಗಳ ನಾಶಕ್ಕೆ ಸಜ್ಜಾಗಿರುವಂತೆ ನಿಂತಿದ್ದಾರೆ. ಎಡಭಾಗದ ತುದಿಯಲ್ಲಿ ಕೈಯಲ್ಲಿ ಕತ್ತಿಯನ್ನಿಡಿದು ರಾಕ್ಷಸರು ನಿಂತಿದ್ದಾರೆ. ಕಂಸನ ಹಿಂದೆ ಸಾಲು ಸಾಲು ಸೈನಿಕರು ಬೆಂಬೆತ್ತಿ ಬರುತ್ತಿದ್ದಾರೆ ಒಟ್ಟಾರೆ ಗೋಡೆ ಮೇಲೆ ರಚಿತವಾಗಿರುವ ಈ ಕೃತಿಯು ಪೂರ್ಣಪ್ರಮಾಣದ ಸಂಯೋಜನೆಯನ್ನು ಹೊಂದಿರುತ್ತದೆ. ಮೈಸೂರು ಶೈಲಿಯಲ್ಲಿ ಹೋಲುವ ಈ ಕೃತಿಯಲ್ಲಿ ಹಳದಿಯನ್ನು ಹಿನ್ನೆಲೆಯಾಗಿ ಬಳಸಿಕೊಂಡು ದಪ್ಪ ರೇಖೆಗಳ ಮೂಲಕ ಚಿತ್ರವನ್ನು ಪೂರ್ಣಗೊಳಿಸಲಾಗಿದೆ. ಹಸಿರು, ಕಪ್ಪು, ಬಿಳಿ, ನೀಲಿ, ಕೆಂಪು, ವರ್ಣಗಳೇ ಮುಖ್ಯವಾಗಿವೆ.

ಚಿತ್ರ ೪೩ : ಕೊವಲಾಯ ಪೀಡ :

ಬೃಹತ್ ಆನೆ ತನ್ನ ಸೊಂಡಿಲಿನ ಮೂಲಕ ಕೃಷ್ಣ, ಬಲರಾಮನನ್ನು ತಿವಿಯಲು ಬಂದಿರುವ ದಋಶ್ಯವನ್ನು ಗೋಡೆಯ ಮೇಲೆ ರಚಿಸಲಾಗಿದ್ದು, ಕೃಷ್ಣನು ಮಧವೇರಿದ ಆನೆಯನ್ನು ಪಳಗಿಸುತ್ತಿರುವುದನ್ನು ಕಾಣಬಹುದು. ಸೊಂಡಿಲ ಮೇಲೆ ಕಾಲಿಟ್ಟು, ಆನೆಯ ಮೇಲೆ ಎತ್ತುತ್ತಿರುವಂತೆ ಚಿತ್ರ ಭಾಸವಾಗಿರುತ್ತದೆ. ಪಕ್ಕದಲ್ಲಿ ಬಲರಾಮ ವೀಕ್ಷಿಸುತ್ತಿದ್ದಾನೆ. ಇದರ ಕೆಳಗೆ ಸೈನಿಕರು ಆಶ್ಚರ್ಯದಿಂದ ಗಮನಿಸುತ್ತಿದ್ದಾರೆ. ಒಂದು ಸನ್ನಿವೇಶಕ್ಕೆ ಪೂರಕವಾಗಿ ರಚಿತವಾಗಿರುವ ಈ ಕೃತಿಯು ಸಂಯೋಜನೆಯಿಂದ ಕೂಡಿದ್ದಾಗಿದೆ. ಹಳದಿ ಬಣ್ಣವನ್ನು ಹಿಂಬದಿಯ್ಲಿ ಬಳಿಯಲಾಗಿದ್ದು, ನೀಲಿ, ಹಳದಿ, ಬಿಳಿ, ಕೆಂಪು ಮತ್ತು ಕಪ್ಪು ವರ್ಣಗಳೇ ಮುಖ್ಯ ಪಾತ್ರಗಳಾಗಿವೆ. ರೇಖೆಗಳಲ್ಲಿ ಅಸ್ಪಷ್ಟತೆ ಎದ್ದು ಕಾಣುತ್ತಿದೆ. ಈ ಕೃತಿಯು ಮೈಸೂರು ಶೈಲಿಯನ್ನು ಓಲುತ್ತಿದೆ.

ಚಿತ್ರ ೪೪ : ರಾಮ, ಕೃಷ್ಣರ ಮಥುರೆ ಪ್ರಯಾಣ :

ಕಂಸನ ವಧೆಯ ಸಂದರ್ಭವೇ ಮಥುರೆಗೆ ಪ್ರಯಾಣ ಮಾಡುವ ಸಂದರ್ಭವಿದು. ಗೋಡೆಯ ಮೇಲೆ ಅಲಂಕೃತಗೊಂಡಿರುವ ಈ ಚಿತ್ರಕೃತಿಯಲ್ಲಿ ಬಲರಾಮ. ಕೃಷ್ಣ ಎಂದು ಸಂಬೋಧಿಸಲಾಗಿದ್ದು. ಅಶ್ವಗಳ ಬಂಡಿಯಲ್ಲಿ ಸಾರಥಿಯೊಂದಿಗೆ ಬಲರಾಮ, ಕೃಷ್ಣರಿಬ್ಬರು ಕುಳಿತುಕೊಂಡು ಪ್ರಯಾಣ ಮಾಡುತ್ತಿರುವ ದೃಶ್ಯವಿದು. ಹಳದಿ ಹಿಂಬದಿಯ ಬಣ್ಣದ ಜೊತೆ ರೇಖೆಯನ್ನು ಜೋಡಿಸಿ

ವ್ಯಕ್ತಿಗಳಿಗೆ ಬಿಳಿ, ನೀಲಿ, ಹಸಿರು ಮತ್ತು ಕಪ್ಪು ಬಣ್ಣಗಳಿಂದ ಜೋಡಿಸಲಾಗಿರುತ್ತದೆ. ಈ ಚಿತ್ರಕೃತಿಯು ಸಂಯೋಜನೆಯಿಂದ ಕೂಡಿದ್ದಾಗಿದ್ದು, ಮೈಸೂರು ಶೈಲಿಯನ್ನೋಲುತ್ತದೆ.

ಚಿತ್ರ ೪೫ : ವೈಕುಂಟವಾಸ :

ವಿಷ್ಣು ವೈಕುಂಟವಾಸಕ್ಕೆ ಬಂದ ಸಂದರ್ಭದ ಹಿನ್ನೆಲೆಯಲ್ಲಿ ಈ ಚಿತ್ರವನ್ನು ಪ್ರಸನ್ನ ಕೃಷ್ಣದೇವಾಲಯದ ಗೋಡೆ ಮೇಲೆ ರಚಿತವಾಗಿದ್ದು, ಕೃಷ್ಣ ಬಲರಾಮರನ್ನು ಪ್ರೀತಿಯಿಂದ ವೈಕುಂಟಕ್ಕೆ ಬರಮಾಡಿಕೊಳ್ಳುತ್ತಿರುವ ಸೇವಕನ ಚಿತ್ರದ ತುಣುಕಾಗಿದೆ. ಮನೆಗಳ ಆವರಣದಂತೆ ಗೋಚರಿಸುವ ಸನ್ನಿವೇಶದಲ್ಲಿ ಕೃಷ್ಣ, ಬಲರಾಮ ಮತ್ತು ಸೇವಕ ಮೂವರನ್ನು ಇಲ್ಲಿ ಮುಖ್ಯವಾಗಿ ತೋರಿಸಲಾಗಿದೆ. ಮೈತುಂಬಾ ಆಭರಣಗಳನ್ನೊತ್ತ ಕೃಷ್ಣ, ಬಲರಾಮ, ಆಶ್ಚರ್ಯಚಕಿತರಾಗಿ ನೋಡುತ್ತಿರುವಂತೆ ಹಳದಿ ಪ್ರಧಾನ ಬಣ್ಣವಾಗಿದ್ದು, ಕೆಂಪು, ಬಿಳಿ, ಹಸಿರು, ನೀಲಿ ಮತ್ತು ಕಪ್ಪು ವರ್ಣಗಳೊಂದಿಗೆ ಪಾತ್ರಕ್ಕೆ ಮಂಗಳ ಹಾಡಲಾಗಿದೆ.

ಚಿತ್ರ ೪೬ : ಅಗಸನನ್ನು ಕತ್ತರಿಸಿದ್ದು :

ಬಟ್ಟೆಯನ್ನೊತ್ತ ಅಗಸನ ತಲೆ ಕೆಳಗುರುಳಿದೆ. ಅವನ ತಲೆಯ ಮೇಲೆ ಕೃಷ್ಣನ ಕೈಯಿದೆ. ಬಟ್ಟೆಯ ಗಂಟನ್ನೊತ್ತ ಅಗಸ ಹಾಗೆಯೇ ನಿಂತಿದ್ದಾನೆ. ನೀಲಿವರ್ಣದ ಮೈಯುಳ್ಳ ಅಗಸನ ರುಂಡವನ್ನು ಕತ್ತರಿಸಿದ ಸನ್ನಿವೇಶ ಈ ದೇವಾಲಯದ ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ಚಿತ್ರ ೪೬ ಆಗಿರುತ್ತದೆ. ಇದನ್ನು ಗಂಭೀರವಾಗಿ ನೋಡುತ್ತಿರುವ ಬಲರಾಮ ಮತ್ತು ಸೇವಕರು ದೋಷಯುಕ್ತವನ್ನು ನೀಡುವ ಸಲುವಾಗಿ ಈ ರೀತಿ ಮಾಡಲಾಗಿದೆ ಎಂಬ ಅಂಶವನ್ನು ಪರಿಗಣಿಸಬಹುದು. ಐದು ಪ್ರಮುಖ ವ್ಯಕ್ತಿಗಳಲ್ಲಿ ಕೃಷ್ಣ, ಬಲರಾಮರೇ ಇಲ್ಲಿ ಆರಾಧ್ಯರಾಗಿದ್ದಾರೆ. ಹಿನ್ನೆಲೆಯಲ್ಲಿ ಹಳದಿ ವರ್ಣವನ್ನು ಬಳಸಿ ರೇಖೆಗಳ ಮೂಲಕ ಚಿತ್ರಕ್ಕೂ ಮೆರಗನ್ನು ನೀಡಿರುತ್ತಾರೆ.

ಚಿತ್ರ ೪೭ : ದೇವಿಯ ದರ್ಶನ :

ಏಳು ಅಡಿ ಸರ್ಪದ ನೆರಳಿನಂಚಿನಲ್ಲಿ ಆಸೀನರಾಗಿರುವ ಶ್ರೀದೇವಿಯನ್ನು ಕಂಸರಾಜ ಭಕ್ತಿಯಿಂದ ಕೈಮುಗಿದು ನಮಸ್ಕರಿಸುವ ದೃಶ್ಯ ಇದಾಗಿರುತ್ತದೆ. ಗೋಡೆಯ ಮೇಲೆ ರಚಿತವಾಗಿರುವ ಈ ಸನ್ನಿವೇಶವು ದೇವಿಯ ದರ್ಶನ ಎಂಬುದನ್ನು ನೋಡುತ್ತಲೇ ಹೇಳಬಹುದು. ಅಷ್ಟರಮಟ್ಟಿಗೆ ತನ್ನ ನಿಲುವನ್ನು ಭದ್ರಪಡಿಸಿದೆ. ಕಂಸನ ಹಿಂದೆ ಸೇವಕರು ಕೈಮುಗಿದು ನಿಂತಿದ್ದಾರೆ. ದೇವಿಯ ಗಾಂಭೀರ್ಯತೆ ಚಿತ್ರದಲ್ಲಿ ತುಸು ಹೆಚ್ಚಿದೆ. ಕೈಯಲ್ಲಿ ಹೂವು, ಶಂಖ, ಎಡಗೈಯಲ್ಲಿ ಗದೆ. ಬಲಗೈಯಿಂದ ಆಶೀರ್ವಚನ ನೀಡುತ್ತಿರುವ ಹಾಗೆ ಕಲಾವಿದರು ಚಿತ್ರಿಕರಿಸಿದ್ದಾರೆ. ಕಂಸನು ತುಂಬಾ ಗಾಂಭೀರ್ಯವಾಗಿ ನಮಸ್ಕರಿಸುತ್ತಿರುವುದನ್ನು ಕಾಣಬಹುದು. ಹಳದಿಪೂರಿತ ಚಿತ್ರ ಕೃತಿಯಲ್ಲಿ ರೇಖೆಗಳನ್ನು ರಚಿಸಿ ತೆಳುವಾಗಿ ಬಣ್ಣವನ್ನು ಲೇಪಿಸಲಾಗಿದೆ. ಹಳದಿ, ಹಸಿರು, ಕೆಂಪು, ಕಪ್ಪು ಮತ್ತು ಬಿಳಿ ವರ್ಣಗಳಿಂದ ಪೂರ್ಣಗೊಳಿಸಲಾಗಿದೆ.

ಚಿತ್ರ ೪೮ : ರಾಮಕೃಷ್ಣರು ಹಾಲು ಕರೆಯುವ ಭಾವ :

ಚಿತ್ರ ೪೮ರಲ್ಲಿ ಸೂಚಿಸಿರುವಂತೆ ದನಗಳ ಸಂತೆ, ಹೆಚ್ಚು ಸ್ತ್ರೀಯರೇ ಗೋವುಗಳ ಮುಂದೆ ನಿಂತಿದ್ದಾರೆ. ಅವುಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿದ್ದು, ಬಲರಾಮ ಮತ್ತು ಕೃಷ್ಣ ಗೋವಿನ ಕೆಳಗಡೆ ಕುಳಿತು ಹಾಲು ಹಿಂಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಸ್ತ್ರೀಯರ ಚಿತ್ರಕ್ಕೂ ಕೃಷ್ಣ, ಬಲರಾಮರ ಚಿತ್ರಕ್ಕೂ ವ್ಯತ್ಯಾಸಗಳಿವೆ. ತುಂಬಾ ಚಿಕ್ಕದಾಗಿ ಬಲರಾಮ, ಕೃಷ್ಣರನ್ನು ತೋರಿಸಲಾಗಿದೆ. ಆದರೆ ಗೋವುಗಳನ್ನು ಸುಂದರವಾಗಿ ಚಿತ್ರಿಸಿರುವುದು ಶ್ಲಾಘನೀಯ. ಉತ್ತರಾಭಿಮುಖವಾಗಿ, ದಕ್ಷಿಣಾಭಿಮುಖವಾಗಿ ನಿಂತಿರುವ ಗೋವುಗಳು ತಲೆ ಎತ್ತಿ ನಿಂತಿರುತ್ತವೆ. ಗೋಪಿಕಾಸ್ತ್ರೀಯರು ನಿಂತಿರುವ ಭಂಗಿಯಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಇಲ್ಲೊಬ್ಬ ರಾಜ ಬಗ್ಗಿ ನಿಂತು ಕೃಷ್ಣರಲ್ಲಿ ಸಂಭಾಷಣೆ ಮಾಡುತ್ತಿರುವುದನ್ನು ಕಾಣಬಹುದು. ಈ ಚಿತ್ರವು ಮೈಸೂರು ಜಿಲ್ಲೆಯಲ್ಲಿ ರಚಿತವಾಗಿರುತ್ತದೆ. ಹಳದಿ, ನೀಲಿ, ಕೆಂಪು, ಬಿಳಿ, ಕಪ್ಪು ವರ್ಣಗಳಿಂದ ಪೂರ್ಣಗೊಳಿಸಲಾಗಿದೆ.

ಚಿತ್ರ–೪೯: ಅಕ್ರೂರ ಕೃಷ್ಣನನ್ನು ಬೇಡುವುದು :

ಹಿಂದಿನ ಚಿತ್ರದ ಮುಂದುವರಿದ ಭಾಗವಾಗಿರುವ ಈ ಚಿತ್ರದಲ್ಲಿ ಅಕ್ರೂರ ರಾಜನು ಕೃಷ್ಣನಲ್ಲಿ ಬೇಡುತ್ತಿರುವುದನ್ನು ಕಾಣಬಹುದು. ಬಂಡಿಯ ಹೆಗಲಕೊಟ್ಟ ಅಶ್ವಗಳನ್ನು ಇಲ್ಲಿ ಕಾಣಬಹುದು. ಹಳದಿ ಹಿನ್ನೆಲೆಯಲ್ಲಿ ರೇಖೆಗಳನ್ನು ಬರೆದು ಬಣ್ಣವನ್ನು ಲೇಪಿಸಲಾಗಿರುತ್ತದೆ.

ಚಿತ್ರ ೫೦ : ಕೃಷ್ಣ ಹಾಲು, ಮೊಸರು ಲೂಟಿ ಮಾಡಿದ್ದು :

ಶೀರ್ಷಿಕೆಯಲ್ಲಿ ತಿಳಿಸಿರುವಂತೆ ಹಾಲು, ಮೊಸರೆಂದರೇ ಕೃಷ್ಣನಿಗೆ ವಿಪರೀತ ಪ್ರೀತಿ, ಅಷ್ಟೇ ಬೆಣ್ಣೆ ಎಂದರೆ ಇನ್ನೂ ಹೆಚ್ಚು. ಹಾಗಾಗಿ ತಾಯಿ ಯಶೋಧೆ ಮನೆಯಲ್ಲಿ ಹಾಲು, ಮೊಸರನ್ನು ಸಂಗ್ರಹ ಮಾಡಿ ಮಡಿಕೆಯಲ್ಲಿ ಕೂಡಿಟ್ಟದ್ದನ್ನು ಕೃಷ್ಣ ಕದ್ದು ತಿನ್ನುತ್ತಿದ್ದ ಎನ್ನುವುದನ್ನೆ ಇಲ್ಲಿ "ಲೂಟಿ" ಎಂದು ಪದಪ್ರಯೋಗ ಮಾಡಲಾಗಿದೆ. ಬಾಲಕನಾದ ಕೃಷ್ಣನನ್ನು ಥಳಿಸಲು ಎತ್ತಿರುವ ಕೈಗೆ ಬೆದರಿದವನಂತೆ ಕೃಷ್ಣ ಕಂಡುಬರುತ್ತಾನೆ. ಇತ್ತ ಚಿತ್ರದ ಎಡಭಾಗದಲ್ಲಿ ಮೊಸರನ್ನ ಕಡಿಯುತ್ತಿರುವ ದೃಶ್ಯವಿದೆ. ಅತ್ತ ತಾಯಿ, ಮಗನ ಗಲಾಟೆಯ ಕಡೆ ನೋಡುತ್ತಿರುವಂತೆಯೂ ಕಂಡುಬರುತ್ತದೆ. ಚಿತ್ರಕ್ಕೂ, ಶೀರ್ಷಿಕೆಗೂ ಸಂಬಂಧವಿಲ್ಲವೆಂಬಂತೆ ತೋರಿಸಿರುವುದು ವಿಪರ್ಯಾಸದ ಸಂಗತಿಯಾಗಿದೆ ಮೊದಲಿಂದ ಕೃಷ್ಣನ ದೇಹದಲ್ಲಿ ಯಾವುದೇ ಬದಲಾವಣೆಗಳಿಲ್ಲ. ಹಿಂಬದಿಯಲ್ಲಿ ಕೆಂಪು ಬಣ್ಣವನ್ನು ಲೇಪಿಸಲಾಗಿದ್ದು, ಕೃಷ್ಣ ಮತ್ತು ತಾಯಿ ಯಶೋಧೆಯನ್ನು ಬಿಳಿವರ್ಣದಿಂದ ತೋರಿಸಲಾಗಿದೆ. ಈ ಚಿತ್ರದಲ್ಲಿ ಮೂವರನ್ನು ಮುಖ್ಯವಾಗಿ ತೋರಿಸಲಾಗಿದೆ. ಹಳದಿ, ಬಿಳಿ, ನೀಲಿ, ಹಸಿರು ಕೆಂಪು ಮತ್ತು ಕಪ್ಪು ವರ್ಣಗಳನ್ನು ಬಳಸಲಾಗಿರುತ್ತದೆ.

ಚಿತ್ರ ೫೧ : ಅಮೃತ ಪ್ರಧಾನ :

ಸ್ವಾಯಂಭುವ ಮನುವಿನ ತಪಶ್ಚರ್ಯೆಯು ಚೆನ್ನಾಗಿ ಕೀರ್ತಿತವಾಗಿದೆ. ಅಲ್ಲಿಯೇ

(ಮನುಚಕ್ರವರ್ತಿಯ ದೌಹಿತ್ರನಾದ) ಯಜ್ಞನಾಮಕನಾದ ಶ್ರೀಹರಿಯಿಂದ ದೈತ್ಯರ ಸಂಹಾರವು ವರ್ಣಿಸಲ್ಪಟ್ಟಿದೆ. ಕ್ಷೀರ ಸಮುದ್ರದಲ್ಲಿ ಉಚ್ಚೈಶ್ರವಸ್ಸೆಂಬ ಕುದುರೆ, ಐರಾವತವೆಂಬ ಆನೆ, ಪಾರಿಜಾತಾದಿಗಳ ಉತ್ಪತ್ತಿ, ರಮಾದೇವಿಯ ಅವತಾರ, ರಮಾ ಸೌಂದರ್ಯವರ್ಣನೆ, ಆಕೆಯ ವರಾನ್ವೇಷಣೆಯ ಮಹತ್ವ, ಅಜೀತನಾಮಕ ಹರಿಯೊಡನೆ ವಿವಾಹಾದಿಗಳೂ ಹೇಳಲ್ಪಟ್ಟಿವೆ. ವಾರುಣಿ(ಹೆಂಡತಿ)ಯ ಉತ್ಪತ್ತಿ, ಅಮೃತ ಸಂಭವ, ಧನ್ವಂತರಿಯ ಅವತಾರ, ಸುಧಾಕಲಶದ ಅಪಹಾರ, ಶ್ರೀಹರಿಯ ಮೋಹಿನಿ ಅವತಾರ ವರ್ಣನೆ, ಆಗ ದೈತ್ಯರ ವಂಚನೆ, ದೈತ್ಯರಿಗೆ ಅಮೃತ ಪ್ರಧಾನ ಮಾಡುವಾಗ ರಾಹುವಿನ ಶಿರಃಛೇದನವೂ ಸವಿಸ್ತಾರವಾಗಿ ಚಿತ್ರದ ಮೂಲಕ ವರ್ಣಿಸಲಾಗಿದೆ. ದೇವಿಯ ಸ್ವರೂಪವನ್ನು ತಾಳಿರುವ ಈಕೆಗೆ ಎಲ್ಲಾರೂ ನಮಸ್ಕರಿಸುತ್ತಿದ್ದಾರೆ. ರಾಜರು ಮತ್ತು ಸೇವಕರನ್ನು ಇಲ್ಲಿ ಮುಖ್ಯವಾಗಿ ಕಾಣಬಹುದು. ಮೈಸೂರು ಶೈಲಿಯಲ್ಲಿಯೇ ಚಿತ್ರವನ್ನು ರೂಪಿಸಲಾಗಿದೆ.

ಚಿತ್ರ ೫೨ : ಪಾಂಚಜನ್ಯ ಕಂದರು :

ಗೋಡೆಯ ಮೇಲೆ ರಚಿತವಾಗಿರುವ ಈ ಚಿತ್ರಕೃತಿಯಲ್ಲಿ ಪಾಂಚಜನ್ಯವನ್ನು ನೆಲಕ್ಕೆ ಉರುಳಿಸಿರುವುದು ಕೃಷ್ಣನ ಕಾಲಿಗೆ ಬಿದ್ದು ಮಾಡಿದ ಕರ್ಮವನ್ನು ಹೋಗಲಾಡಿಸು ಎಂದು ಅಂಗಲಾಚುವ ದೃಶ್ಯದಂತೆ ಗೋಚರಿಸಲ್ಪಡುತ್ತಿದೆ. ರಥದಲ್ಲಿ ಬಲರಾಮ, ಕೃಷ್ಣ, ಬರುತ್ತಿದ್ದು ಅವರನ್ನು ದಿಟ್ಟಿಸಿ ನೋಡುತ್ತಿರುವ ಕಂಸ, ಕೃಷ್ಣನನ್ನು ಸಾಯಿಸಲು ಮಾಡಿರುವ ಉಪಾಯದಲ್ಲಿ ಇದು ಒಂದಾಗಿದೆ. ತೆಳು ನೀಲಿ ಬಣ್ಣವನ್ನು ಹಿಂಬದಿಗೆ ಲೇಪಿಸಿರುವ ಈ ಚಿತ್ರಕೃತಿಯಲ್ಲಿ ಸಂಯೋಜನೆಯ ಕೊರತೆ ಎದ್ದು ಕಾಣುತ್ತಿದೆ. ಬೆಟ್ಟವಾಗಿ ಬಿಳಿಗೋಡೆಯನ್ನು ತೋರಿಸಲಾಗಿದ್ದು, ಅದರ ಕೆಳಗಡೆ ಈ ದೃಶ್ಯವನ್ನು ಮುಂದುವರಿಸಲಾಗಿದೆ. ನೀಲಿ, ಬಿಳಿ, ಹಳದಿ ಮತ್ತು ಕೆಂಪು ಬಣ್ಣಗಳೇ ಇಲ್ಲಿ ಶ್ರೇಷ್ಠ ಎನಿಸಿಕೊಂಡಿವೆ. ಮೈಸೂರು ಶೈಲಿಯಲ್ಲಿ ಚಿತ್ರವನ್ನು ರಚಿಸಲಾಗಿದೆ.

ಚಿತ್ರ ೫೩ : ಯಮನು ರಾಮಕೃಷ್ಣರಿಗೆ ಗುರುಪುತ್ರನನ್ನು ಅರ್ಪಿಸಿದ್ದು :

ಚಿತ್ರ ೫೪ : ಕೃಷ್ಣ ಬಲರಾಮನು ಗುರುವಿಗೆ ಪುತ್ರನನ್ನು ಒಪ್ಪಿಸಿದ್ದು :

ಇದು ಒಂದೇ ಅಂಕಣ, ಎರಡು ದೃಶ್ಯಗಳು, ಒಂದು ಯಮನು ಕೃಷ್ಣ ಬಲರಾಮರ ಮುಂದೆ ಪ್ರತ್ಯಕ್ಷರಾಗಿ ಗುರುಪುತ್ರನನ್ನು ಒಪ್ಪಿಸುತ್ತಿರುವ ದೃಶ್ಯ, ಅಶ್ವದ ಬಂಡಿಯಲ್ಲಿ ಕುಳಿತಿರುವ ಕೃಷ್ಣ ಬಲರಾಮ, ಕಿರೀಟದಾರೆ ಯಮ ಮಗುವನ್ನೊತ್ತು ನಿಂತಿದ್ದಾನೆ. ಮತ್ತೊಂದು ಚಿತ್ರದಲ್ಲಿ ಯಮನಿಂದ ಪಡೆದ ಗುರುಪುತ್ರನನ್ನು ಖುದ್ದು ಗುರುವನ್ನು ಭೇಟಿ ಮಾಡಿ ಬಲರಾಮ, ಕೃಷ್ಣನು ಅವರ ಮಗುವನ್ನು ಒಪ್ಪಿಸುತ್ತಿರುವ ಸನ್ನಿವೇಶ. ಮೊದಲ ಚಿತ್ರದಲ್ಲಿ ಯಮನಿಗೆ ತೆಳುನೀಲಿ ವರ್ಣವನ್ನು ಬಳಸಲಾಗಿದ್ದರೆ ಎರಡನೇ ಚಿತ್ರದಲ್ಲಿ ಅದೇ ಬಣ್ಣವನ್ನು ಕೃಷ್ಣನಿಗೆ ಲೇಪಿಸಲಾಗಿದೆ. ಮೈಸೂರು ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ವ್ಯಕ್ತಿಗಳಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ.

ಬಣ್ಣಗಳ ಸಾಲು ಸಾಲು ಇಲ್ಲೂ ಮುಂದುವರಿದಿರುತ್ತದೆ.

ಚಿತ್ರ ೫೫, ೫೬, ೫೭, ೫೮ :

ವರದರಾಜ ಸ್ವಾಮಿಯ ಗರ್ಭಗುಡಿಯ ಮೇಲಂಚಿನಲ್ಲಿ ಅಡ್ಡವಾಗಿ ಚಿತ್ರಿಸಿರುವ ಈ ಕೃತಿಯಲ್ಲಿ ನಾಲ್ಕು ದೃಶ್ಯವನ್ನು ಕಾಣಬಹುದು. ಒಂದು ಮುದುಕನಿಗೆ ವರಪ್ರಸಾದ, ಎರಡು ಕೇಶಿಮಥನ, ಮೂರು ವೃಷಭಾಸೂರ ಸಂಹಾರ ಮತ್ತು ನಾಲ್ಕು ಕೃಷ್ಣನಿಗೆ ಪಾರಿಜಾತ ಪುಷ್ಪವನ್ನು ನೀಡುತ್ತಿರುವ ಸನ್ನಿವೇಷಗಳು, ತುಂಬಾ ಚಿಕ್ಕದಾಗಿ ರಚಿಸಿರುವ ಈ ಕೃತಿಯಲ್ಲಿ ಗವಿಯೊಳಗಿರುವ ಮುಚುಕಂದನಿಗೆ ಶ್ರೀಕೃಷ್ಣ, ವರಪ್ರಸಾದವನ್ನು ನೀಡುತ್ತಿರುವ ಚಿತ್ರ ಸಾಮಾನ್ಯವಾಗಿದೆ. ಕೃಷ್ಣನ ಜೊತೆ ಒಬ್ಬ ಮಹರ್ಷಿ ನಿಂತಿರುವುದನ್ನು ಇಲ್ಲಿ ಕಾಣಬಹುದು.

ಎರಡನೆಯದಾಗಿ ಕೇಶಿಮಥನ ಹಾರುತ್ತಿರುವ ಕುದುರೆಯನ್ನು ಸಂತೈಸುತ್ತಿರುವ ಕೃಷ್ಣ, ಬಾಲವನ್ನು ನಿಗುರಿಸಿಕೊಂಡು ಮುಂದಿನ ಕಾಲು ಎತ್ತಿ ಆರ್ಭಟಿಸುವಂತಿದೆ. ಕೇಶಿ, ಅದನ್ನು ತುಂಬಾ ತಾಳ್ಮೆಯಿಂದಲೇ ಮದವಡಗಿಸುವ ಕೃಷ್ಣನ ಒಂದು ತುಣುಕು ಚಿತ್ರದ ಮೂಲಕ ಅಭಿವ್ಯಕ್ತವಾಗಿರುತ್ತದೆ.

ಮೂರನೆಯದು ವೃಷಭಾಸುರ ಸಂಹಾರ ಚಿತ್ರವಾಗಿದ್ದು, ವೃಷಭನನ್ನು ಸಂಹಾರ ಮಾಡುವ ಉದ್ದೇಶವನ್ನು ಈ ಚಿತ್ರ ಹೊಂದಿರುವುದರಿಂದ ಕೃಷ್ಣನ ಜೊತೆ ಸೆಣಸಾಡುವುದನ್ನು ಕಾಣಬಹುದು. ಮುಂದುವರೆದ ಚಿತ್ರದಲ್ಲಿ ಗೋಪಿಕಾ ಸ್ತ್ರೀಯರು ಕೃಷ್ಣನಿಗೆ ಪುಷ್ಪವನ್ನು ನೀಡುತ್ತಿರುವ ಚಿತ್ರವಾಗಿರುತ್ತದೆ. ಇದನ್ನು ಮೈಸೂರು ಶೈಲಿ ಎಂದು ಗುರುತಿಸಬಹುದು.

ಚಿತ್ರ ೫೯ : ರಾಜನಂದನ ಯುದ್ಧ :

ಗೋಡೆ ಮೇಲೆ ರಚಿತವಾಗಿರುವ ಚಿತ್ರಕೃತಿಯಲ್ಲಿ ಕಂಸನಿಗೂ ರಾಜನಂದನಿಗೂ ಯುದ್ಧ ನಡೆಯುವ ದೃಶ್ಯ ಇದಾಗಿದ್ದು, ಹೆಣ್ಣಿನ ನಡುವಿನ ಸಂಬಂಧ ಈ ಇಬ್ಬರ ಕಾಳಗದಲ್ಲಿ ಹೇಗೆಲ್ಲಾ ಇತ್ತು. ಯಾರು, ಯಾರಿಗೆ ಸಂಹಾರ ಮಾಡಿದರು ಎಂಬುದನ್ನು ಚಿತ್ರದಲ್ಲಿ ತೋರಿಸಿಲ್ಲವಾದರೂ ಯುದ್ಧ ಸನ್ನಿವೇಶವನ್ನು ಬಿಚ್ಚಿಡಲಾಗಿದೆ. ಅಶ್ವಗಳೂ ಕೂಡ ಒಂದಕ್ಕೊಂದು ಎರಗುವ ಸೂಚನೆಯನ್ನು ನೀಡುತ್ತಿವೆ. ಕತ್ತಿಯನ್ನೆತ್ತುವ ರಾಜ ಎದುರಾಳಿಯನ್ನು ಮುಗಿಸುವ ಹಂತಕ್ಕೆ ತಲುಪಿದ್ದಾರೆ. ರಥದ ಕೆಳಗೆ ಹಿಂಬಾಲಕ ಯುದ್ಧವನ್ನು ವೀಕ್ಷಿಸುತ್ತಿದ್ದಾಳೆ. ಹಳದಿ ಬಣ್ಣದ ರಥದಲ್ಲಿ ರಾಜರು ನಿಂತಿದ್ದಾರೆ. ಒಬ್ಬರು ಕುಳಿತಿದ್ದಾರೆ. ಮತ್ತೊಂದು ರಥದಲ್ಲಿ ರುಕ್ಮಿಣಿ ಕುಳಿತಿದ್ದಾಳೆ. ಹಿಂಬದಿಯಲ್ಲಿ ತಿಳಿನೀಲಿ ವರ್ಣವನ್ನು ಲೇಪಿಸಲಾಗಿದ್ದು, ಮೈಸೂರು ಶೈಲಿಯಲ್ಲಿ ಚಿತ್ರ ರಚನೆಯಾಗಿರುತ್ತದೆ. ಹಳದಿ, ನೀಲಿ. ಬಿಳಿ, ಕೆಂಪು ವರ್ಣಗಳಿಂದ ಚಿತ್ರವನ್ನು ಪೂರ್ಣಗೊಳಿಸಲಾಗಿರುತ್ತದೆ.

ಚಿತ್ರ ೬೦ : ೧. ಕೃಷ್ಣವಿಲಾಸ ೨. ಸಪ್ತಋಷಿಗಳ ಶಾಪ ವಿಮೋಚನೆ ೩. ರಸಕ್ರೀಡೆ ೪. ಅಘಾಸೂರ ವಧೆ :

ವೆಂಕಟರಮಣ ಸ್ವಾಮಿ ಗರ್ಭಗುಡಿಯ ಮೇಲ್ಭಾಗದಲ್ಲಿರುವ ಈ ನಾಲ್ಕು ಚಿತ್ರಗಳು ಚಿಕ್ಕದಾಗಿವೆ. ಮೊದಲನೆಯದಾಗಿ ಕೃಷ್ಣ ವಿಲಾಸ ಚಿತ್ರದಲ್ಲಿ ಕೃಷ್ಣ ತನ್ನ ಬಲಗೈಯನ್ನು ರಾಧೆಯ ಭುಜದ ಮೇಲೆ ಹಾಕಲಾಗಿರುವಂತೆ ಕಂಡುಬರುತ್ತಿದೆ. ರಾಧೆಯ ಕೈಯಲ್ಲಿ ಗಿಳಿಯನ್ನು ತೋರಿಸಲಾಗಿದೆ. ಕೃಷ್ಣ ತನ್ನ ವಿಲಾಸದಲ್ಲಿ ಸ್ತ್ರೀಯರೊಂದಿಗೆ ಕಾಲ ಕಳೆಯುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ.

ಎರಡನೆಯ ಚಿತ್ರ ಸಪ್ತ ಋಷಿಗಳ ಶಾಪ ವಿಮೋಚನೆಯ ದೃಶ್ಯವಾಗಿದ್ದು, ಇಲ್ಲಿ ಒಂದು ಬೃಹದಾಕಾರದ ಮರ, ಅದರ ಮುಂದೆ ಕೃಷ್ಣ ನಿಂತಿದ್ದು ಏಳು ಮಹಿಳೆಯರ ಪೈಕಿ ಒಬ್ಬ ಸ್ತ್ರೀ ಕಾಲಿಗೆ ಬಿದ್ದು ನಮಸ್ಕರಿಸುತ್ತಿರುವಂತೆ ಗೋಚರಿಸುತ್ತಿದೆ. ಕಮೂಲವನ್ನು ಎತ್ತಿ ಹಿಡಿದು ಆಶೀರ್ವದಿಸುತ್ತಿರುವ ಶ್ರೀ ಕೃಷ್ಣ ಋಷಿವರ್ಗದಿಂದ ಸ್ತ್ರೀ ಮಾನವ ವರ್ಗಕ್ಕೆ ವರ್ಗಾಯಿಸಿ ಇದ್ದು ಶಾಪವನ್ನು ವಿಮೋಚಿಸಲಾಗಿದೆ. ಎಂಬುದನ್ನು ತಿಳಿಸುವತ್ತಾ ಈ ಚಿತ್ರ ಕೃತಿ ಮುಖಮಾಡಿ ನೀಂತಿದೆ.

ಮೂರನೇ ಚಿತ್ರ ರಸಕ್ರೀಡೆಯಾಗಿದ್ದು ಕೊಳಲನ್ನು ನುಡಿಸುವುದರಲ್ಲಿ ಕೃಷ್ಣನು ಬಹು ನಿಪುಣ. ಆ ನಾದಕ್ಕೆ ಗೋಪಿಯರು ಮಾರು ಹೋದರು. ಆ ನಾದವು ಅವರಿಗೆ ಮಾತ್ರವಲ್ಲ ಅದನ್ನು ಕೇಳಿದ ಎಲ್ಲಾ ಜೀವಿಗಳಿಗೂ ಆಕರ್ಷಕವಾಗಿತ್ತು. ಗೋಪಿಯರಲ್ಲಿ ಒಬ್ಬಳು "ಕೃಷ್ಣ ಬಲರಾಮರು ಕಾಡನ್ನು ಪ್ರವೇಶಿಸುತ್ತಾ, ಕೊಳಲನ್ನು ನುಡಿಸುತ್ತಾ ತಮ್ಮ ಗೆಳೆಯರೊಡನೆ ಗೋವುಗಳನ್ನು ಕಾಯುವುದನ್ನು ನೋಡುವುದೇ ಕಣ್ಣುಗಳ ಪರಮಭಾಗ್ಯ" ಎಂದಳು[೧೨] ಹೀಗೆ ಸ್ತ್ರೀಯರೇ ಅಚ್ಚುಮೆಚ್ಚಿನ ನಾಯಕ ಶ್ರೀಕೃಷ್ಣ ಈ ಚಿತ್ರಕೃತಿಯಲ್ಲಿ ಕ್ರೀಡೆಯಲ್ಲಿ ಪಾಲ್ಗೊಂಡಿದ್ದು ಕಮಲದ ಮೇಲೆ ನಿಂತು ಕೊಳಲನ್ನು ಊದುತ್ತಿರುವ ಕೃಷ್ಣನಿಗೆ ಸ್ನೇಹ ಬಳಗ ಸಹಕರಿಸುತ್ತಾ ಸುತ್ತು ಹಾಕುತ್ತಿದ್ದಾರೆ. ಒಟ್ಟು ಆರು ಜನ ಸ್ನೇಹ ಬಳಗದಲ್ಲಿ ಮೂವರು ಸ್ತ್ರೀಯರು ಸೇರಿರುತ್ತಾರೆ. ಆಟಗಳಿಂದಲೇ ಗೋಕುಲದ ಜನತೆಗೆ ಹತ್ತಿರವಾಗಿದ್ದ ಶ್ರೀಕೃಷ್ಣ ತುಂಟಾಟಕ್ಕೆ ಎಂಥವರು ಮರುಳಾಗುವರು ಅಂತಹ ಚಾಣಕ್ಯನಾಗಿದ್ದ ಬಾಲಕ ಕೃಷ್ಣ, ಅದನ್ನು ಇಲ್ಲಿ ರಸಕ್ರೀಡೆ ಎಂದು ವಿಷಯವನ್ನು ಸೂಚಿಸಲಾಗಿದೆ. ಎಲ್ಲಾರ ಮುಖದಲ್ಲೂ ಮುಗುಳುನಗೆಯನ್ನು ಕಾಣಬಹುದು.

ನಾಲ್ಕನೇ ಚಿತ್ರವೇ ಅಘಾಸುರ ವಧೆ, ರಾಕ್ಷಸ ಅಘಾಸುರನು ಕೃಷ್ಣನ ಮತ್ತು ಅವನ ಗೆಳೆಯರ ಮುಂದೆ ಬಂದು ನಿಲ್ಲುತ್ತಾನೆ. ಇವರು ಪೂತಿನಿ ಮತ್ತು ಬಕಾಸುರರ ತಮ್ಮ ಕೃಷ್ಣನು ನನ್ನ ಅಕ್ಕ ಅಣ್ಣನನ್ನು ಕೊಂದಿದ್ದಾನೆ. ಈಗ ನಾನು ಅವನನ್ನು ಕೊಲ್ಲಲು ಬಂದಿದ್ದೇನೆ ಎನ್ನುತ್ತಾನೆ. ಅದಕ್ಕೂ ಮೊದಲು ಕಂಸನು ಅಘಾಸುರನನ್ನು ಪ್ರಚೋದಿಸಿರುತ್ತಾನೆ. ಅವನು ದೃಢನಿಶ್ಚಯ ಮಾಡಿ ಬಂದಿದ್ದ. ತಾನು ತನ್ನ ಅಣ್ಣನಿಗೆ ತರ್ಪಣ ನೀಡಿ ಕೃಷ್ಣನನ್ನೂ ಎಲ್ಲಾ ಗೋಪಾ ಬಾಲರನ್ನು ಕೊಂದಾಗ ವೃಂದಾವನದ ನಿವಾಸಿಗಳೆಲ್ಲಾ ಸತ್ತೆ ಸಾಯುತ್ತಾರೆ ಎಂದೂ ಅಘಾಸುರನು ಯೋಚಿಸಿದ. ಯಾಕೆಂದರೆ ಈ ಅಘಾಸುರ ರಾಕ್ಷಸ ಮಹಿಮಾ ಎನ್ನುವ ಯೋಗಸಿದ್ಧಿಯಿಂದ

ಅಗಾಧವಾಗಿ ಬೆಳೆದವನು. ಯೋಗ ಪದ್ಧತಿಯಲ್ಲಿ ಮಹಿಮಾ ಸಿದ್ಧಿಯನ್ನು ಸಂಪೂರ್ಣವಾಗಿ ವಶಮಾಡಿಕೊಂಡವನು ಬಯಸಿದಂತೆ ದೇಹವನ್ನು ಹಿಗ್ಗಿಸಿಕೊಳ್ಳಬಹುದು. ಅಘಾಸುರನು ತನ್ನದೇಹವನ್ನು ಎಂಟು ಮೈಲಿಗಷ್ಟು ಹಿಗ್ಗಿಸಿಕೊಂಡ. ಒಂದು ಬೃಹದಾಕಾರದ ಸರ್ಪದ ಆಕಾರವನ್ನು ತಳೆದ. ಈ ಅಚ್ಚರಿಗೊಳಿಸುವ ದೇಹವನ್ನು ಪಡೆದುಕೊಂಡು ತನ್ನ ಬಾಯಿಯನ್ನು ಪರ್ವತದ ಗುಹೆಯಂತೆ ತೆರೆದ. ಕೃಷ್ಣ ಬಲರಾಮನನ್ನು ಸೇರಿಸಿ ಎಲ್ಲಾ ಹುಡುಗರನ್ನು ಒಟ್ಟಿಗೆ ನುಂಗಬೇಕೆಂದು ಅವರು ದಾರಿಯಲ್ಲಿ ಕುಳಿತವನು.

ಬೃಹದಾಕಾರದ ಸರ್ಪದ ರೂಪದಲ್ಲಿದ್ದ ರಾಕ್ಷಸನು ತನ್ನ ತುಟಿಗಳನ್ನು ಭೂಮಿಯಿಂದ ಆಕಾಶದವರೆಗೆ ವಿಸ್ತರಿಸಿದ. ಅವನ ಕೆಳತುಟಿಯು ಭೂಮಿಯನ್ನು ಮುಟ್ಟಿತ್ತು. ಮೇಲಿನ ತುಟಿಯು ಆಕಾಶವನ್ನು ಮುಟ್ಟಿತ್ತು. ಅವನ ದವಡೆಗಳು ಕೊನೆಯೇ ಇಲ್ಲದ ಪರ್ವತದ ಗುಡ್ಡ ಗುಹೆಯಂತಿತ್ತು. ಅವನ ಹಲ್ಲುಗಳು ಪರ್ವತದ ಶಿಖರಗಳಂತೆ ಕಾಣುತ್ತಿದ್ದವು. ಅವನ ನಾಲಿಗೆಯು ರಾಜಮಾರ್ಗದಂತಿತ್ತು. ಚಂಡಮಾರುತದಂತೆ ಅವನು ಉಸಿರಾಡುತ್ತಿದ್ದ, ಅವನ ಕಣ್ಣುಗಳಲ್ಲಿ ಉರಿಯು ಪ್ರಜ್ವಲಿಸುತ್ತಿತ್ತು. ಮೊದಮೊದಲು ಹುಡುಗರು ರಾಕ್ಷಸನನ್ನು ಕಂಡು ಅದೊಂದು ಪ್ರತಿಮೆ ಅಂದುಕೊಂಡಿದ್ದರು. ಆದರೆ ಅದು ನಿಜವೆಂದು ತಿಳಿದ ಮೇಲೆ ಭಯಂಕರವಾಗಿ ದಿಕ್ಕಾಪಾಲು ಓಡಿಹೋಗಲು ಶುರು ಮಾಡಿದರು. ಅದು ರಸ್ತೆಗೆ ಮಲಗಿ ಬಾಯಿಯನ್ನು ತೆರೆದ ಸರ್ಪದಂತೆ ಇತ್ತು. ಎಂದು ಹೇಳುತ್ತಿದ್ದ ಹುಡುಗರ ಮಾತು ಆಲಿಸಿ, ಆ ಸರ್ಪಗ ಬಳಿ ಹೋಗಿ ಕೃಷ್ಣ ಯುದ್ಧ ಮಾಡುತ್ತಾ, ತನ್ನ ಶಕ್ತಿಯನ್ನು ಪ್ರದರ್ಶಿಸಿ, ಏಳು ಎಡೆಯಿರುವ ನೂರಾರು ಅಡಿ ಉದ್ದದ ಸರ್ಪದ ಮೇಲೆ ನಿಂತು ದಡಕ್ಕೆ ಬಂದಾಗ ಊರಿನ ಎಲ್ಲಾರೂ ಆಶ್ಚರ್ಯರಾಗುತ್ತಾರೆ. ಅಲ್ಲಿಗೆ ಅಘಾಸುರನ ವಂಶ ಪರಿಪೂರ್ಣವಾಗಿ ನಾಶವಾಗಿ ಜನರ ಬದುಕು ಸುಂದರವಾಗಲು ಕಾರಣವಾಗುತ್ತೆ. ಹೀಗೆ ಅಘಾಸುರನ ಕಥೆಯಲ್ಲಿ ಹಾವು ಮತ್ತು ಕೃಷ್ಣನನ್ನು ತೋರಿಸಿರುವ ಹಿನ್ನೆಲೆಯಲ್ಲಿ ಇಂತಹ ಕಥೆಯನ್ನು "ಕೃಷ್ಣ ದೇವೋತ್ತಮ ಪರಮ ಪುರುಷ" ಎಂಬ ಪುಸ್ತಕದಲ್ಲಿ ವಿವರವಾಗಿ ಶೇಷಗಿರಿರಾವ್ ಎಲ್.ಎಸ್.ರವರು ವಿಸ್ತರಿಸಿ ಹೇಳಿರುತ್ತಾರೆ. ಈ ನಾಲ್ಕು ಚಿತ್ರಗಳಿಗೂ ಒಂದೇ ಬಣ್ಣ, ರೇಖೆಗಳನ್ನು ಉಪಯೋಗಿಸುತ್ತಾರೆ. ಈ ಮೇಲಿನ ಎಲ್ಲಾ ಚಿತ್ರಗಳೂ ಮೈಸೂರು ಶೈಲಿಯನ್ನು ಹೊಂದಿರುತ್ತವೆ.

ಶ್ವೇತವರಹಾಸ್ವಾಮಿ ದೇವಾಲಯ :

೧. ಶ್ವೇತಾವರಹ ದೇವಾಲಯ

೨. ಕೃಷ್ಣನ ಜೀವನಾಧಾರಿತ ಚಿತ್ರ

೩. ಕೃಷ್ಣನ ಲೀಲೆ

೪. ರಾಕ್ಷಸರ ಸಂಹಾರ

೫. ಕುಂಭಕರ್ಣನು ರಾಮನ ಮೇಲೆ ಯುದ್ಧಕ್ಕೆ ಬರುತ್ತಿರುವ ಚಿತ್ರ

೬. ಹನುಮಂತ ಸಂಜೀವಿನಿ ಪರ್ವತವನ್ನು ಹೊಯ್ಯುತ್ತಿರುವುದು

೭. ಕೃಷ್ಣ ಮತ್ತು ವಾಸುದೇವ, ಯಶೋಧ

೮. ಹತ್ತು ತಲೆಯ ರಾವಣ ಯುದ್ಧಕ್ಕೆ ಹೋಗುತ್ತಿರುವ ಚಿತ್ರ

೧೮ನೇ ಶತಮಾನದಲ್ಲಿ ದಿವಾನ್ ಪೂರ್ಣಯ್ಯ ಅಪಾರ ಆಸ್ಥೆ ವಹಿಸಿ ನಿರ್ಮಿಸಿದಂತ ಚಿತ್ರಗಳನ್ನು ಇಲ್ಲಿ ಕಾಣಬಹುದು. ಅರಮನೆಯ ಕೋಟೆಯ ಒಳಗೆ ಇರುವ ಈ ದೇವಾಲಯವು ಶ್ವೇತವರಾಹ ಹಾಗೂ ಅಂಬುಜವಲ್ಲಿ ದೇವಿಯ ದೇವಾಲಯದ ಭಿತ್ತಿಚಿತ್ರ ಕಲೆಯು ಹಿಂದಿನ ದೇವಾಲಯದ ಕಥಾವಸ್ತುವೇ ಇದ್ದರೂ ರಾಮಾಯಣದ ವಸ್ತು ವಿಷಯ ಸಹ ಈ ದೇವಾಲಯಗಳಲ್ಲಿ ಚಿತ್ರಿಸಿದ್ದಾರೆ. ಎಡಭಾಗದಲ್ಲಿ ಕೃಷ್ಣಬಾಲಲೀಲೆಗಳು ಕೃಷ್ಣನಕಥೆಗೆ ಸೇರಿದ ಚಿತ್ರಗಳು ಸೂತಪುರಾಣಿಕರ ಚಿತ್ರ, ಶೌಣಕಾರಿ ಮಹರ್ಷಿಯು ಪರಿಪಿಕ್ ರಾಜನಿಗೆ ಕಥೆ ಹೇಳುತ್ತಿರುವ ಚಿತ್ರ, ವಿಷ್ಣುವನ್ನು ದೇವತೆಗಳು ಪ್ರಾರ್ಥಿಸುತ್ತಿದ್ದು, ಆಕಾಶವಾಣಿ ನುಡಿಯುತ್ತಿರುವ ಚಿತ್ರ, ಕಂಸನು ದೇವಕಿಯನ್ನು ವಧೆ ಮಾಡುವಾಗ ವಸುದೇವನು ಬೇಡಿಕೊಳ್ಳುತ್ತಿರುವ ಚಿತ್ರ, ವತ್ಸಾವತಾರಚಿತ್ರ, ಕುಬ್ಜೆಯನ್ನು ಸುಂದರಿ ಮಾಡಿದ್ದು, ಕೃಷ್ಣರಾಧೆಯನ್ನು ಸಹಕರಿಸಿದ್ದು, ರಾಮಕೃಷ್ಣರ ಮಲ್ಲಯುದ್ಧ, ಪಾಂಚಜನ್ಯ ಕಂಡಿದ್ದು, ಕೇಶಿಮಥನ, ಮಚ್ಚುಕಂದನಿಗೆ ವರಪ್ರಸಾದ ಚಿತ್ರ, ರಾಜನಂದನಯುದ್ಧ, ಅಘಾಸೂರುವಧೆ, ರಾಮಕೃಷ್ಣರ ಅಗ್ನಿಪ್ರವೇಶ, ರಕ್ಷ್ಮೀಣಿಯು ಕಾಳಿಕಾದೇವಾಲಯಕ್ಕೆ ಹೋಗುವ ಚಿತ್ರ, ರುಕ್ಷ್ಮೀಣಿಯ ಕಾಳಿಕಾ ಅಮ್ಮನವರನ್ನು ಪೂಜಿಸುವ ಚಿತ್ರಗಳಿದ್ದು ಅವುಗಳ ವಿಮರ್ಶೆಯನ್ನು ಈ ಕೆಳಗೆ ರಚಿಸಿಲಾಗಿದೆ.

ಚಿತ್ರ-೧ : ಶ್ವೇತಾವರಹ ದೇವಾಲಯದ ಮುಂಭಾಗದ ಆವರಣದ ಚಿತ್ರವಾಗಿರುತ್ತದೆ. ಇಲ್ಲಿ ೧೧-೧೨ನೇ ಶತಮಾನಕ್ಕೆ ಸೇರಿದ ಒಂದು ಶಾಸನವಿದ್ದು, ಅದರಲ್ಲಿ ವಿಸ್ತರಿಸಿದಂತೆ ಶ್ವೇತ ಎಂದರೆ ಬಿಳಿಯ ಬಣ್ಣ, ಬೆಳ್ಳಿ ಎಂದು, ವರಹಾ ಎಂದರೆ ಹಂದಿ ಮುಖವುಳ್ಳ, ಮನುಷ್ಯಾಕೃತಿಯನ್ನು ಹೊಂದಿದ ಮೂರ್ತಿ ಸ್ವರೂಪಿ ಅಂದರೆ ಸ್ವಾಮಿ ಎಂದರ್ಥ. ಸ್ವಾಮಿ ಎಂದರೆ ಪರಮಾತ್ಮ, ಅಂತಹ ಪರಮಾತ್ಮನ ಸ್ಥಾನವೇ ಈ ದೇವಾಸ್ಥಾನವಾಗಿದೆ. ಅಂದ್ರೆ ವಿಷ್ಣುವೇ ನರಸಿಂಹನ ಅವತಾರ ಹೊಂದಿ ಹಿರಣ್ಯಕಶ್ಯಪನನ್ನು ಕೊಂದ ಸಂದರ್ಭದಲ್ಲಿ ಹೊಂದಿದ್ದ ಅವತಾರವೇ ವರಹಾ ಅವತಾರ. ಅಂತಹ ಅವತಾರ ಪುರುಷ ಇಲ್ಲಿ ಶ್ವೇತಾವರಹ ಎಂಬುದಾಗಿದ್ದು, ಈ ದೇವಾಲಯವು ೧೬೭೩ರಲ್ಲಿ ಶ್ರೀರಂಗಪಟ್ಟಣದಲ್ಲಿ ಸ್ಥಾಪನೆಯಾಗಿದೆ. ನಂತರ ಇದನ್ನು ಸಂರಕ್ಷಿಸುವ ಮತ್ತು ಬೆಳೆಸುವ ಹಿತದೃಷ್ಟಿಯಿಂದ ಮೈಸೂರಿಗೆ ೧೯ನೇ ಶತಮಾನದಲ್ಲಿ ಪ್ರಾರಂಭ ಮಾಡಿದರು. ದೇವಾಲಯ ಅಷ್ಟಾಗಿ ದೊಡ್ಡದಿಲ್ಲದಿದ್ದರೂ ಗರ್ಭಗುಡಿಯ ಮುಂದಿನ ಹಾಲ್‌ನ ನಾಲ್ಕು ಅಂಕಣಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಅವುಗಳು ಹೆಚ್ಚು ರಾಮಾಯಣ ಮತ್ತು ಭಾಗವತಕ್ಕೆ ಸಂಬಂಧಿಸಿದ ಚಿತ್ರಗಳಿದ್ದು, ವಿಶೇಷವಾಗಿ ಕೃಷ್ಣನ ಬದುಕಿನ ಸವಿಸ್ತಾರವನ್ನು ಇಲ್ಲಿಯೂ ಕಾನಬಹುದು. ಅವುಗಳ ಬಗ್ಗೆ ಇದೇ ಆವರಣದಲ್ಲಿರುವ ಪ್ರಸನ್ನಕೃಷ್ಣ ದೇವಾಲಯುವಲ್ಲಿದ್ದು.

ಅವುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಆದ್ದರಿಂದ ಈ ಅಧ್ಯಯನದಲ್ಲಿ ಪುನರಾವರ್ತನೆ ಆಗದಿರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಸೇರಿಸಿರುವ ಮಾಹಿತಿಯನ್ನು ಬಿಟ್ಟು ಇಲ್ಲದ ವಿಷಯವನ್ನು ಇಲ್ಲಿ ಸೇರಿಸಲು ಪ್ರಯತ್ನಿಸಲಾಗಿರುತ್ತದೆ.

ಚಿತ್ರ-೨, ೩ ಮತ್ತು ೪ : ಸೂತಪುರಾಣಕರು ಚಿತ್ರವಿದೆ, ಶೌಣಕಾರಿ ಮಹಾರ್ಷಿ ಪರಿಪಿಕ್ ರಾಜನಿಗೂ ಭಾಗವತಕಥೆ ಹೇಳುತ್ತಿದ್ದಾರೆ ಚಿತ್ರವಿದೆ, ವಿಷ್ಣುವನ್ನು ದೇವತೆಗಳು ಪ್ರಾರ್ಥಿಸಿದ್ದು ಚಿತ್ರವಿದೆ, ರುಕ್ಮೀಣೀಹರಣ ಚಿತ್ರವಿದೆ, ರುಕ್ಮೀಣಿ ಮಾನಭಂಗ ಚಿತ್ರವಿದೆ, ದೇವಕಿ ವಸುದೇವನನ್ನು ಕಂಸನು ಸಂತೋಷದಿಂದ ಕರೆದುಕೊಂಡು ಹೋಗುತ್ತಿರುವುದು ಚಿತ್ರವಿದೆ, ಕಂಸನು ದೇವಕಿಯನ್ನು ವದೆ ಮಾಡುವಾಗ ವಸುದೇವನು ಬೇಡುವುದು ಚಿತ್ರವಿದೆ, ದೇವಕಿ ಮಗು ಚಿತ್ರವಿದೆ, ನಾರಾಯಣನು ಪ್ರತ್ಯಕ್ಷನಾದುದ್ದು ಚಿತ್ರವಿದೆ, ಕೃಷ್ಣರಾಧೆಯನ್ನು ಸಹಕರಿಸಿದ್ದು ಚಿತ್ರವಿದೆ, ಕೃಷ್ಣರಾಧೆಯನ್ನು ಸಹಕರಿಸಿದ್ದು ಚಿತ್ರವಿದೆ, ಉಗ್ರಸೇನ ಪಟ್ಟಾಭಿಷೇಕ ಚಿತ್ರವಿದೆ, ಕುಚೆಲಾಲಿಂಗನ ಚಿತ್ರವಿದೆ, ಕಂಸನ ವದೆ ಚಿತ್ರವಿದೆ, ರಾಮಕೃಷ್ಣ ಮಲ್ಲಯುದ್ಧ ಚಿತ್ರವಿದೆ, ಕೌವಲಯಾಪೀಡ ಚಿತ್ರವಿದೆ, ರಾಮಕೃಷ್ಣಾರು ಮಧುರೆ ಪ್ರಯಾಣ ಚಿತ್ರವಿದೆ, ವೈಕುಂಠವಾಸ ಚಿತ್ರವಿದೆ, ಅಗಸನನ್ನು ಕತ್ತರಿಸಿದ್ದು ಚಿತ್ರವಿದೆ, ರಾಮಕೃಷ್ಣರು ಮಾರ್ಕರನಿಗೆ ಅವಮಾನ ಮಾಡಿದ್ದು ಚಿತ್ರವಿದೆ, ರಾಮಕೃಷ್ಣರು ಹಾಲು ಕರೆಯುವ ಭಾವಚಿತ್ರವಿದೆ, ಅರ್ಕೂರ ಕೃಷ್ಣನನ್ನು ಬೇಡುವುದು ಚಿತ್ರವಿದೆ, ಕೃಷ್ಣನು ಮುಚ್ಚು ಕಂಸನ ಗುಹೆಗೆ ಪ್ರವೇಶ ಮಾಡುವುದು ಚಿತ್ರವಿದೆ, ಅಮೃತ ಪ್ರಧಾನ ಚಿತ್ರವಿದೆ, ಪಾಂಚಜನ್ಯ ಕಂಡಿದ್ದು ಚಿತ್ರವಿದೆ, ಯಮನು ರಾಮಕೃಷ್ಣರಿಗೆ ಗುರು ಪುತ್ರನನ್ನು ಒಪ್ಪಿಸಿದ್ದು ಚಿತ್ರವಿದೆ, ಕೃಷ್ಣನು ಗುರುವಿಗೆ ಪುತ್ರನನ್ನು ಒಪ್ಪಿಸಿದ್ದು ಚಿತ್ರವಿದೆ, ಮಚು ಕುಂದನನಿಗೆ ವರ ಪ್ರಸಾದ ಚಿತ್ರವಿದೆ, ಕೇಶಿಮಥನ ಚಿತ್ರವಿದೆ, ವೃಷಭಸೂರ ಸಂಹಾರ ಚಿತ್ರವಿದೆ, ಕೃಷ್ಣನನಿಗೆ ಪಾರಿಜಾತ ಪುಷ್ಪವನ್ನು ಕೊಡುವುದು ಚಿತ್ರವಿದೆ, ರಾಜಾನಂದನ ಯುದ್ಧ ಚಿತ್ರವಿದೆ, ಕಾಲಯವನ್ನು ಯದುರಾ ಪಟ್ಟಣಕ್ಕೆ ಮುತ್ತಿಗೆ ಹಾಕಿದು ಚಿತ್ರವಿದೆ, ವಸುದೇವನು ಮಗುವನ್ನೆ ತೆಗೆದುಕೊಂಡು ಹೋಗುವಾಗ ಯಮುನಾನದಿ ದಾರಿಬಿಟ್ಟದು ಚಿತ್ರವಿದೆ, ಶಂಬರಾಸುವರ ವದೆ ಚಿತ್ರವಿದೆ, ಮತ್ಸಾವತಾರ ಚಿತ್ರವಿದೆ, ದೇವಕಿ ಬಲರಾಮ ಚಿತ್ರವಿದೆ, ದುರ್ಗದೇವಿ ಪ್ರತ್ಯಕ್ಷ ಚಿತ್ರವಿದೆ, ವಸುದೇವನು ಕಂಸನಿಗೆ ಮಗುವನ್ನು ಕೊಡುವುದು ಚಿತ್ರವಿದೆ, ವಸುದೇವನು ಕಂಸನನ್ನು ಸಮಧಾನ ಪಡಿಸುವುದು ಚಿತ್ರವಿದೆ, ಯಶೋಧ ಕೃಷ್ಣ ಚಿತ್ರವಿದೆ, ಪೂಕನಾ ಸಂಹಾರ ಚಿತ್ರವಿದೆ, ಬ್ರಹ್ಮನು ಗೋಪಾಲಕರನ್ನು ಬಚ್ಚಿಡುವುದು ಚಿತ್ರವಿದೆ. ಮತ್ತು ಬಕಾಸುರ ಸಂಹಾರ ಚಿತ್ರವಿದೆ, ವ್ರತಾಸುರಸಂಹಾರ ಚಿತ್ರವಿದೆ, ಕೃಪಾವರ್ಕಾಸುರ ಸಂಹಾರ ಚಿತ್ರವಿದೆ, ಶಕಟಾಸುರ ಸಂಹಾರ ಚಿತ್ರವಿದೆ, ಮುಳಾರ್ಜುನ ಭಂಜನ ಚಿತ್ರವಿದೆ. ಖರಾಸುರ ಸಂಹಾರ ಚಿತ್ರವಿದೆ. ಫ್ರಲಂಭಾ ಸುರನವದೆ ಚಿತ್ರವಿದೆ. ಜಲಕ್ರೀಡೆ ಚಿತ್ರವಿದೆ, ಗೋವರ್ಧನ ಪೂಜ ಚಿತ್ರವಿದೆ. ಗೋವರ್ಧನ ದಾರ ಚಿತ್ರವಿದೆ. ಬಲರಾಮ ಕೃಷ್ಣದಾವಾಗ್ನಿ ಚಿತ್ರವಿದೆ ಮತ್ತು ಗೋವಿಂದ ಪಟ್ಟಾಭಿಷೇಕ ಚಿತ್ರವಿದೆ, ಕೃಷ್ಣರುಕ್ಮೀಣಿಯಾಗ ಕಾರ್ಯ ಚಿತ್ರವಿದೆ, ಕೃಷ್ಣ ಬಲರಾಮ ಗುರುವಿಗೆ ಕಾಣಿಕೆ ಒಪ್ಪಿಸಿದ್ದು ಚಿತ್ರವಿದೆ.

ಗುರುವಿನ ಬಳಿ ವಿದ್ಯಾಭ್ಯಾಸಂಗ ಚಿತ್ರವಿದೆ, ಕುಬ್ಜೆಯನ್ನು ಸುಂದರಿ ಮಾಡಿದ್ದು ಚಿತ್ರವಿದೆ, ಕೃಷ್ಣವಿಲಾಸ ಚಿತ್ರವಿದೆ, ಸಪ್ತ ಋಷಿಗಳ ಶಾಪ ವಿಮೋಚನೆ ರಾಸಕ್ರೀಡೆ ಚಿತ್ರವಿದೆ, ಅಘಾಸೂರ ವದೆ ಚಿತ್ರವಿದೆ, ಕಾಲಯ ಮನು ಮುಚ್ಚು ಕುಂದನನ್ನು ಒದ್ದದ್ದು ಚಿತ್ರವಿದೆ, ರುಕ್ಮಿಣಿ ಯುದ್ಧ ಜನಮೂಲಕ ಕೃಷ್ಣನಿಗೆ ತಿಳಿಸುವಂತೆ ಹೇಳಿದ್ದು ಚಿತ್ರವಿದೆ, ದ್ವಿಜನ ರುಕ್ಮಿಣಿ ವಿಷಯವನ್ನು ಕೃಷ್ಣನಿಗೆ ತಿಳಿಸಿದ್ದು ಚಿತ್ರವಿದೆ, ರುಕ್ಮೀಣಿಯ ಕಾಳಿ ಕಾಲಕ್ಕೆ ಹೋಗುವ ಭಾವ ಹೊಂದಿದ ಚಿತ್ರವಿದೆ, ರುಕ್ಮೀಣಿಯ ಕಾಳಿಕಾ ಅಮ್ಮನವರನ್ನು ಪೂಜಿಸುವ ಭಾವ ಹೊಂದಿದ ಚಿತ್ರವಿದೆ, ರಾಮಕೃಷ್ಣರ ಅಗ್ನಿಪ್ರವೇಶ ಚಿತ್ರವಿದೆ, ಕಾಲಯಮನಿಗೆ ಮೋಕ್ಷ ಚಿತ್ರವಿದೆ. ಒಟ್ಟಾರೇ ಈ ಮೂರು ಅಂಕಣಗಳಲ್ಲಿ ಚಿಕ್ಕದಾಗಿ ದೃಶ್ಯಗಳನ್ನು ರಚಿಸಿರುವುದನ್ನು ಕಾಣಬಹುದು. ಕೆಂಪು. ಹಳದಿ, ಹಸಿರು ವರ್ಣಗಳದ್ದೆ ಇಲ್ಲಿ ಸದ್ದು ಹೆಚ್ಚು.

ಚಿತ್ರ–೫ : ಇದು ಗೋಡೆಯ ಮೇಲೆ ರಚಿತವಾಗಿರುವ ಚಿತ್ರಕೃತಿಯಾಗಿದ್ದು, ಒಟ್ಟು ಒಂದೇ ಅಂಕಣದಲ್ಲಿ ಎರಡು ಪಟ್ಟಿಕೆಗಳನ್ನು ಮಾಡಿಕೊಂಡು ಒಂದೇ ವಿಷಯವನ್ನು ಭಿನ್ನವಾಗಿ ರಚಿಸಲಾಗಿದೆ. ಒಂದು ಪಟ್ಟಿಯಲ್ಲಿ ರಾಮ ತನ್ನ ಕಪಿಗಳ ಗುಂಪಿನೊಂದಿಗೆ ಕೈಯಲ್ಲಿ ಬಿಲ್ಲು, ಬಾಣಗಳನ್ನಿಡಿದು ಹೋಗುತ್ತಿರುವಂತೆ ಭಾಸವಾದರೇ, ಮತ್ತೊಂದು ಪಟ್ಟಿಕೆಯಲ್ಲಿ ಯುದ್ದದ ಕಡೆ ರಾಮನು ರಥದ ಮೇಲೆ ಕುಳಿತು ಯುದ್ಧಕ್ಕೆ ಹೋಗುತ್ತಿರುವ ವಿತ್ರ ಇದಾಗಿದ್ದು, ಈ ಚಿತ್ರಗಳು ತುಂಬಾ ವಿಶಾಲವಾಗಿದ್ದು, ಎರಡುವರೆ ಮತ್ತು ಐದು ಅಡಿ ಅಳತೆಯಲ್ಲಿ ಚಿತ್ರಿಸಿದ್ದಾರೆ. ಇದರಲ್ಲಿ ರಾಮನು ರಥವೇರಿ ಬಿಲ್ಲು, ಬಾಣಗಳ ಹಿಡಿದು ಮತ್ತು ಕಪಿಸೈನ್ಯಗಳ ಜೊತೆ ರಾವಣನ ವಿರುದ್ಧ ಯುದ್ಧಕ್ಕೆ ಹೊರಟಿದ್ದಾನೆ. ರಾಮನ ಹಿಂದೆ ಮುಂದೆ ಕಪಿಗಳೂ ನಿಂತಿದ್ದಾರೆ. ಅವರು ಮರವನ್ನು ಎತ್ತಿಕೊಂಡು ಅವರು ಹೊರಟಿದ್ದಾರೆ. ಯುದ್ಧಕ್ಕೆ ಹಸಿರು ನೆಲದ ಹಾಸಿನ ಮೇಲೆ ಎಲ್ಲಾರು ಹೋಗುತ್ತಿದ್ದಾರೆ. ಹಿನ್ನೆಲೆಯು ಕೆಂಪುವರ್ಣದಿಂದ ತೋರಿಸಿದ್ದಾರೆ. ಮತ್ತು ಹಿನ್ನೆಲೆಯಲ್ಲಿ ಬೇರೆ ಯಾವುದೇ ಆಕೃತಿಗಳು ಕಂಡುಬರುವುದಿಲ್ಲ. ಕಪಿಗಳ ಮೈವರ್ಣವು ನೀಲಿ, ಕೇಸರಿ, ಹಸಿರು ವರ್ಣಗಳಿಂದ ತೋರಿಸಿದ್ದಾರೆ. ರಾಮನ ಮೈವರ್ಣವು ಸಹ ಹಸಿರುವರ್ಣವನ್ನು ತೋರಿಸಲಾಗಿದೆ.

ಚಿತ್ರ– ೬ : ಇದು ಗೋಡೆಯ ಮೇಲೆ ರಚಿತವಾಗಿರುವ ಚಿತ್ರಕೃತಿಯಾಗಿದ್ದು, ಒಟ್ಟು ಒಂದೇ ಅಂಕಣದಲ್ಲಿ ಎರಡು ಪಟ್ಟಿಕೆಗಳನ್ನು ಮಾಡಿಕೊಂಡು ಒಂದೇ ವಿಷಯವನ್ನು ಭಿನ್ನವಾಗಿ ರಚಿಸಲಾಗಿದೆ. ಹನುಮಂತನು ಸಂಜೀವಿನಿ ಪರ್ವತವನ್ನು ಹೊತ್ತುತರುತ್ತಿರುವ ಚಿತ್ರ ಈ ಚಿತ್ರವು ಹನುಮಂತನು ಲಕ್ಷ್ಮಣನಿಗೋಸ್ಕರ ಈ ಪರ್ವತವನ್ನು ತೆಗೆದುಕೊಂಡು ಬರುತ್ತಿದ್ದಾನೆ. ಹನುಮಂತನ ಸುತ್ತ ತನ್ನ ಪರಿವಾರವಾದ ಕಪಿಸೈನ್ಯವು ಸುತ್ತಲು ಇದೆ. ಆ ಕಪಿಗಳು ಸಹ ಒಂದೊಂದು ಗಿಡಗಳನ್ನು ಕೈಯಲ್ಲಿ ಇಡಿದಿರುವಾಗೆ ಕಲಾವಿದರು ಚಿತ್ರಿಸಿದ್ದಾರೆ. ಹಿನ್ನೆಲೆಯ ವರ್ಣವು ಕೆಂಪುವರ್ಣವು ಕಂಡುಬರುತ್ತದೆ. ಬೇರೆ ಯಾವ ಸಣ್ಣ ಆಕೃತಿಗಳು ಸಹ ಕಂಡುಬರುವುದಿಲ್ಲ. ಹನುಮಂತ ಮತ್ತು ಕಪಿಗಳ ಮೈವರ್ಣವು ಹಸಿರು, ನೀಲಿ, ಕೇಸರಿ ವರ್ಣದಿಂದ ಕಂಡುಬರುತ್ತದೆ. ಹಸಿರು

ನೆಲಹಾಸಿನ ಮೇಲ ಮುಂದೆ ಸಾಗುತ್ತಿದ್ದಾರೆ. ಎಲ್ಲಾ ಸಾಧಾರಣವಾದ ಆಭರಣವನ್ನು ತೊಟ್ಟಿರುತ್ತಾರೆ. ನಡವಿಗೆ ಕಚ್ಚೆಯನು ಧರಿಸಿದ್ದಾರೆ. ಎಲ್ಲಾ ಆಕೃತಿಗಳು ಮುಂದೆ ಮುಂದೆ ಸಾಗುತ್ತಿರುವಂತೆ ಕಂಡುಬರುತ್ತಾರೆ. ಇಲ್ಲಿರುವ ಎರಡು ಪಟ್ಟಿಯಲ್ಲಿನ ಚಿತ್ರವೂ ಒಮದೇ ಮಾರ್ಗವನ್ನು ಸಾಗಿದಂತೆ ಕಂಡು ಬಂದಿರುತ್ತದೆ.

ಚಿತ್ರ–೭ : ಇದು ಗೋಡೆಯ ಮೇಲೆ ರಚಿತವಾಗಿರುವ ಚಿತ್ರಕೃತಿಯಾಗಿದ್ದು, ಈ ದೃಶ್ಯದಲ್ಲಿ ಒಟ್ಟು ಹನ್ನೆರಡು ಸಣ್ಣ ಸಣ್ಣ ಪಟ್ಟಿಕೆಗಳನ್ನಾಗಿ ರಚಿಸಿಕೊಮಡು ನಂತರ ಅವುಗಳಲ್ಲಿ ಶ್ರೀಕೃಷ್ಣನನ ಜಾತಕ ಕಥೆಗಳಂತೆ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಅವುಗಳೆಂದರೆ ಕಂಸನು ದೇವಕಿ ಮತ್ತು ವಸುದೇವನನ್ನು ಮದುವೆಯ ನಂತರ ತನ್ನ ರಥದಲ್ಲಿ ಆಕೆಯ ಗಂಡನ ಮನೆಗೆ ಬಿಡಲು ಹೋಗುತ್ತಿರುವ ಚಿತ್ರದಲ್ಲಿ ರಥವು ಚಲಿಸುತ್ತಿರುವಂತೆ ಕಾಣಲು ಕುದುರೆಗಳು ಮುಂದೆ ಸಾಗುತ್ತಿರುವಾಗೆ ಇದ್ದು, ಮತ್ತು ರಥವು ಮದುವೆಯ ಸಡಗರವನ್ನು ಸೂಚಿಸಲು ಅಲಂಕರಣಾಗೊಂಡಿದೆ. ಮತ್ತು ಆಕಾಶವಾಣಿ ದೇವತೆಯನ್ನು ಸಹ ಚಿಕ್ಕದಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯ ವರ್ಣವು ಕೆಂಪುವರ್ಣನೆ ಮುಖವಾಗಿ ಕಂಡುಬರುತ್ತದೆ. ಇನ್ನೊಂದು ಯಶೋಧೆಯು ಕೃಷ್ಣನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಟವಾಡಿಸುವಂತಿದೆ. ಹಾಗೂ ಮುಂದಿನ ಚಿತ್ರ ನಾರಾಯಣನು ಪ್ರತ್ಯಕ್ಷನಾಗಿ ದೇವಕಿ ಹಾಗೂ ವಸುದೇವನಿಗೆ ಅಭಯವನ್ನು ಕೊಡುತ್ತಿದ್ದಾನೆ. ಈ ಸಂಯೋಜನೆಯು ಅರಮನೆಯಿಂದ ಕೂಡಿದೆ. ಎಲ್ಲಾರು ಅರಮನೆಯಲ್ಲಿ ಇದ್ದಾರೆ ನಾರಾಯಣನನ್ನು ಕೈಮುಗಿದು ನಮಿಸುತ್ತಿದ್ದಾರೆ. ನಾರಾಯಣನನ್ನು ನೀಲಿ ವರ್ಣದಲ್ಲಿ ತೋರಿಸಿದ್ದಾರೆ. ಮಿಕ್ಕವರನ್ನು ಮೈವರ್ಣ ಕಂಡು ಬರುತ್ತಿದೆ.

ಒಟ್ಟಾರೆ ಈ ಚಿತ್ರವು ಸರಣಿ ಭಿತ್ತಿ ಚಿತ್ರವಾಗಿದೆ, ಬ್ರಹ್ಮನು ಗೋವು ಮತ್ತು ಬಾಲಕರು, ಬಕಾಸುರ ಸಂಹಾರ, ಪ್ರಲಂಬಸುರ ವಧೆ, ವತ್ರಾಸುರ ಸಂಹಾರ, ಶಕಟಾಸುರ ಸಂಹಾರ ಹೀಗೆ ಸರಣಿಯಾಗಿ ನಾಲ್ಕು ದೃಶ್ಯಗಳು ಸಾರುವ ಚಿತ್ರಗಳು ಇವೆ.

ಒಂದು ಮತ್ತು ಅರ್ಧ, ಒಂದು ಮತ್ತು ಒಂದುವರೆ ಅಳತೆಯಲ್ಲಿ ಕಂಡುಬರುತ್ತದೆ. ಎಲ್ಲಾ ಆಕೃತಿಗಳಲ್ಲಿ ಆಭರಣ ಮತ್ತು ಸಂದರ್ಭಕ್ಕೆ ತಕ್ಕ ಭಾವನೆಗಳು ಇದ್ದು, ಎಲ್ಲಾ ಆಕೃತಿಗಳಲ್ಲಿ ಕೃಷ್ಣನು ಕಂಡುಬರುತ್ತಾನೆ. ಹಿನ್ನೆಲೆಯ ವರ್ಣವು ಕೆಂಪು ಬಣ್ಣವು ಪ್ರಧಾನವಾಗಿ ಕಂಡುಬರುತ್ತದೆ. ರಾಕ್ಷಸನನ್ನು ಬೆಟ್ಟವನ್ನು ನೀಲಿ, ವರ್ಣದಿಂದ ತೋರಿಸಿದರೆ, ಆಕಾಶವನ್ನು ನೀಲಿ ವರ್ಣದಿಂದ ನೈತಿಕತೆಯನ್ನು ಪ್ರದರ್ಶಿಸಿದ್ದಾರೆ. ಇಲ್ಲಿ ಮುಖ್ಯವಾಗಿ ನಾಲ್ಕು ಚಿತ್ರಗಳು ಸಂಹಾರ ಚಿತ್ರಗಳಿವೆ. ಈ ಭಿತ್ತಿ ಚಿತ್ರಗಳಲ್ಲಿ ಎಲ್ಲಾರು ಆಭರಣವನ್ನು ಧರಿಸಿದ್ದಾರೆ. ವಸ್ತ್ರವೂ ಹೆಚ್ಚಾಗಿ ಹಸಿರು ವರ್ಣದಲ್ಲಿ ತೋರಿಸಿದ್ದಾರೆ.

ಈ ಚಿತ್ರಗಳು ಬಲರಾಮನು ಗೋಕುಲದಲ್ಲಿ ತನ್ನ ಜನತೆಗೆ ಅಭಯವನ್ನು ಕೊಡುತ್ತಿರುವ. ಕೃಷ್ಣನು ಗೋವರ್ಧನ ಬೆಟ್ಟವನ್ನು ತನ್ನ ಕಿರುಬೆರಳಿನಲ್ಲಿ ಎತ್ತಿರುವ ಚಿತ್ರ, ಕೃಷ್ಣನಸುತ್ತ ಗೋಕುಲದ

ಜನರು ಹಾಗೂ ಕಾಮಧೇನು ಸಹ ಚಿತ್ರಿಸಿದ್ದಾರೆ. ನಂತರ ಚಿತ್ರವು ಬಲರಾಮ ಕೃಷ್ಣರು ಅಗ್ನಿಯನು ಕುಡಿಯುತ್ತಿರುವ ದೃಶ್ಯ, ಹಾಗೂ ವೃತಾಸುರ ಸಂಹಾರ ಚಿತ್ರ ಈ ಚಿತ್ರಗಳಲ್ಲಿ ಸಂಯೋಜನೆಯು ತುಂಬ ಉತ್ಕೃಷ್ಟವಾಗಿದೆ ಏಕೆಂದರೆ ಚಿಕ್ಕ ಜಾಗದಲ್ಲಿ ಸುಂದರವಾಗಿ ಹಾಗೂ ಆಕೃತಿಗಳು ಚಲನೆಯಿಂದ ಕೂಡಿದ್ದು, ಕಥೆಗೆ ಪೂರಕವಾಗಿ ಚಿತ್ರಿಸಿದ್ದಾರೆ. ಈ ಚಿತ್ರಗಳಲ್ಲಿ ಗೋವರ್ಧನ ಚಿತ್ರವೂ ತುಂಬ ಸುಂದರವಾಗಿದೆ. ಈ ಚಿತ್ರದಲ್ಲಿ ಕೃಷ್ಣನು ದ್ವಿಭಂಗಿಯಲ್ಲಿ ನಿಂತಿರುತ್ತಾನೆ ಮತ್ತು ಗೋವು ಬಾಲಕರು ಹಾಗೂ ಭಕ್ತರು ನಮಿಸುತ್ತಿದ್ದಾರೆ. ಹಿನ್ನೆಲೆಯ ವರ್ಣನು ಕೆಂಪು ವರ್ಣವೇ ಮುಖ್ಯವಾಗಿದೆ. ಎಲ್ಲಾ ಚಿತ್ರದಲ್ಲಿ ಈ ಸರಣಿ ಚಿತ್ರದಲ್ಲಿ ಆಕೃತಿಗಳಲ್ಲ ಗಂಡಸು, ಹೆಂಗಸು, ಬಾಲಕರು, ಪ್ರಾಣಿ, ಪ್ರಕೃತಿ ಅನೇಕ ವಸ್ತುಗಳು ಸಂಯೋಜಿಸಿದ್ದಾರೆ, ಹಿನ್ನೆಲೆಯು ಸರಳವಾಗಿದೆ, ಎಲ್ಲಾರಲ್ಲಿಯೂ ಆಭರಣವು ಕಂಡುಬರುತ್ತದೆ. ಈ ಚಿತ್ರದಲ್ಲಿ ರೇಖೆಯು ಸೂಕ್ಷ್ಮವಾಗಿ ರೇಖಿಸಿದ್ದಾರೆ. ಈ ಚಿತ್ರದ ಹಿಂಬದಿಯ ವರ್ಣವು ಕೆಂಪು ವರ್ಣವನ್ನೇ ಹೆಚ್ಚು ಬಳಸಿದ್ದಾರೆ.

ಚಿತ್ರ–೮ : ಕುಂಭಕರ್ಣನು ರಾಮನ ಮೇಲೆ ಯುದ್ಧಕ್ಕೆ ಬರುತ್ತಿರುವ ಚಿತ್ರ ಇದಾಗಿದ್ದು,ಈ ಚಿತ್ರವು ಒಂದುವರೆ ಅಡಿ ಎತ್ತರ ನಾಲ್ಕು ಅಡಿ ಉದ್ದದ ಅಳತೆಯಲ್ಲಿ ರಚಿಸಿದ್ದಾರೆ. ನವರಂಗದ ಬಲಭಾಗದ ಗೋಡೆಯ ಮೇಲೆ ಕುಂಭಕರ್ಣನು ರೋಷ ಆವೇಷದಿಂದ ಯುದ್ಧಕ್ಕೆ ಹೋಗುತ್ತಿದ್ದಾರೆ. ರಾವಣನ ತಮ್ಮನಾಗಿ ತುಂಬ ಬಲಿಷ್ಠವಾದ ದೊಡ್ಡದಾದ ದೇಹವನ್ನು ದೊಡ್ಡದಾಗಿಯೇ ಚಿತ್ರಿಸಿದ್ದಾರೆ. ರಾಮನ ಮೇಲೆ ಅಣ್ಣನ ಆಜ್ಞೆಯ ಮೇರೆಗೆ ದೊಡ್ಡ ಕಾಲುಧಳ ಸೈನ್ಯದೊಂದಿಗೆ ಯುದ್ಧ ಮಾಡಲು ರಣರಂಗಕ್ಕೆ ಕೋಪದಿಂದ ಯುದ್ಧಕ್ಕೆ ಬೇಕಾದ ಆಯುಧಗಳನ್ನು ತನ್ನ ಎಡಕೈಯಲ್ಲಿ ಗಧೆ, ತ್ರಿಶೂಲ ಎತ್ತಿಕೊಂಡು ಹೋಗುತ್ತಿದ್ದಾನೆ. ಸೈನಿಕರ ಕೈಯಲ್ಲಿಯೂ ಕತ್ತಿ, ಗುರಾಣಿ ಜಳಪಳಿಸುತ್ತ ಕುಂಭಕರ್ಣನ ಹಿಂದೆ ಮುಂದೆ ರಕ್ಷಕರಂತೆ ಸೈನಿಕರು ಬಲಕೈಯಲ್ಲಿ ಕತ್ತಿ ಎಡಕೈಯಲ್ಲಿ ಗುರಾಣಿಯನ್ನು ಹಿಡಿದು ಯುದ್ಧಕ್ಕೆ ಮುನ್ನುಗ್ಗುತ್ತಿದ್ದಾರೆ. ಪ್ರತಿಯೊಬ್ಬರು ಕಚ್ಚೆಯನ್ನು ಮಾತ್ರ ಉಟ್ಟಿರುತ್ತಾರೆ. ಸಾಧರಣವಾದ ಆಭರಣದಿಂದ ಅಲಂಕೃತರಾಗಿದ್ದಾರೆ. ಕುಂಭಕರ್ಣನು ಈ ಚಿತ್ರದಲ್ಲಿ ಮುಖ್ಯವಾಗಿ ಹಾಗೂ ದೊಡ್ಡದಾಗಿ ಚಿತ್ರಿಸಿದ್ದಾರೆ. ಕುಂಭಕರ್ಣನು ಕಿರೀಟ, ಕೈಕಾಲು ಕಡಗವನ್ನು ಮತ್ತು ಕೊರಳಿಗೆ ಮುತ್ತಿನಹಾರವನ್ನು ಹಾಗೂ ರಕ್ಷಕವಚವನ್ನು ಧರಿಸಿದ್ದಾನೆ. ಮೈವರ್ಣವು ಹಸಿರು ಆಗಿದ್ದು ದೈನ್ಯ ಪುರುಷನಾಗಿ ಕಥೆಯಲ್ಲಿ ಇವನ ವರ್ಣನೆಯ ತಕ್ಕಂತೆ ದೊಡ್ಡದಾಗಿ ಚಿತ್ರಿಸಿದಾರೆ. ರಾಮಾಯಣದ ಕೊನೆಯ ಹಂತದ ಯುದ್ಧದ ಸಮಯದ ಚಿತ್ರವಾಗಿದೆ. ಸೈನಿಕರ ಮೈವರ್ಣವು ಹಸಿರು, ಕಂದು, ತೆಳುಕೆಂಪು ವರ್ಣದಲ್ಲಿ ತೋರಿಸಿದ್ದಾರೆ. ಸೈನಿಕರು ಸಹ ದಷ್ಟಪುಷ್ಟವಾಗಿಯೇ ಕಲಾವಿದರು ಚಿತ್ರಿಸಿದ್ದಾರೆ. ನಾಯಕನ ಪರವಾಗಿ ಯುದ್ಧ ಮಾಡಲು ಹೊರಟಿದ್ದಾರೆ. ನೆಲವನ್ನು ಹಸಿರು ಹುಲ್ಲಿನಿಂದ ತೋರಿಸಿದ್ದಾನೆ. ಅದರ ಮೇಲೆ ರುಂಡಗಳು ಬಿದ್ದಿರುತ್ತವೆ. ಹಿನ್ನೆಲೆಯನ್ನು ಕೆಂಪುವರ್ಣದಿಂದ ಸಾಧಾರಣವಾಗಿ ತೋರಿಸಿದ್ದಾರೆ.

ಈ ಸನ್ನಿವೇಶಕ್ಕೆ ಸರಿಹೊಂದುವ ಕೆಂಪು ವರ್ಣವೇ ಸೂಕ್ಷ್ಮವಾಗಿ ಕಂಡುಬರುತ್ತದೆ. ಈ ಚಿತ್ರದ ಮೇಲೆ-ಕೆಳಗೆ ಚಿಕ್ಕದಾಗಿ ಅಲಂಕಾರಿಕ ನಕ್ಷಚಿತ್ರವನ್ನು ಬಿಡಿಸಿದ್ದಾರೆ.

ಅಂಬುಜವಲ್ಲಿ ದೇವಾಲಯ :

ಶ್ವೇತವರಾಹ ದೇವಾಲಯ ಆವರಣದಲ್ಲಿಯೆ ಇರುವ ಅಂಬುಜವಲ್ಲಿ ಲಕ್ಷ್ಮೀದೇವಾಲಯವು ಸಹ ಇದೇ ಕಾಲದಲ್ಲಿಯೆ ನಿರ್ಮಿಸಿದ್ದಾರೆ. ಇದನ್ನು ಸಹ ಮುಮ್ಮಡಿಕೃಷ್ಣರಾಜ ಒಡೆಯರವರೆ ನಿರ್ಮಿಸಲು ಆದೇಶಿಸಿದರು, ವರಾಹಸ್ವಾಮಿ ಹೆಂಡತಿಯಾದ ಅಂಬುಜವಲ್ಲಿದೇವಿಯ ಅಂದರೆ ವಿಷ್ಣುವಿನ ಹೆಂಡತಿ ವರಾಹಸ್ವಾಮಿ ವಿಷ್ಣುವಿನ ಅವತಾರ ಆಗಾಗಿ ಲಕ್ಷ್ಮಿಯು ಯಾವಾಗಲು ವಿಷ್ಣು ಜೊತೆಯಲ್ಲಿಯೇ ಇರುತ್ತಾಳೆ. ಉದಾಹರಣೆಗೆ ಆದಿತ್ಯನಾದಾಗ ಪದ್ಮದಿಂದ ಉದಯಿಸಿದಳು. ಪರಶುರಾಮನಾದಾಗ ಧರಣಿಯಾಗಿ. ಶ್ರೀರಾಮನಾದಾಗ, ಸೀತೆಯಾಗಿ, ಕೃಷ್ಣನಾದಾಗ ರುಕ್ಮಿಣಿಯಾಗಿ, ವಿಷ್ಣುವಿನ ಜೊತೆಗೆ ಶ್ರೀದೇವಿಯಾಗಿ ತಪ್ಪದೆ ಇರುತ್ತಾಳೆ. ಆಗಾಗಿ ಅಂಬುಜವಲ್ಲಿ ದೇವಿಯ ದೇವಸ್ಥಾನ ನಿರ್ಮಿಸಿದ್ದಾರೆ, ಅಂಬುಜವಲ್ಲಿ ಯಮ್ಮನವರ ವಿಗ್ರಹ ಕಪ್ಪು ಶಿಲೆಯಿಂದ ಕೂಡಿದೆ. ಹಾಗೂ ಈ ದೇವಾಲಯದ ವಿಶೇಷವೆಂದರೆ ನವರಂಗದಲ್ಲಿ ಕೃಷ್ಣನ ಲೀಲಾಸರಣಿ ಚಿತ್ರಗಳು ಹಾಗೂ ರಾಮಾಯಣದ ಚಿತ್ರಗಳು ಗೋಡೆ, ಕಂಬ, ಕಿಟಕಿ, ಮೇಲುಛಾವಣಿಯ ಮೇಲೆ ಭಿತ್ತಿಚಿತ್ರವನ್ನು ನಿರ್ಮಿಸಿದ್ದಾರೆ. ಅಂಬುಜವಲ್ಲಿ ದೇವಾಲಯವು ಸಹ ವರಾಹಸ್ವಾಮಿ ದೇವಾಲಯ ಆವರಣದಲ್ಲಿಯೆ ನಿರ್ಮಿಸಿದ್ದಾರೆ. ಇದು ಹೊಯ್ಸಳ ಶೈಲಿಯಿಂದ ದೇವಾಲಯ ಕೂಡಿದೆ. ಇಲ್ಲಿಯು ಸಹ ನವರಂಗದ ಗೋಡೆಯ ಮೇಲೆ, ಬಾಗಿಲ ಮೇಲೆ ಹಾಗೂ ಕಿಟಕಿಯ ಮೇಲೆ ಚಿತ್ರಿಸಿದ್ದಾರೆ. ರಾಮಾಯಣ ದೃಶ್ಯ ಚಿತ್ರಗಳು ಗೋಡೆಯ ಮೇಲೆ ಕೃಷ್ಣನ ಬಾಲಲೀಲೆಯ ಚಿತ್ರಗಳನ್ನು ಚಿತ್ರಿಸಿದ್ದಾರೆ, ಆಗಲೂ ರಾಮಯಣ ಚಿತ್ರಗಳು ದೊಡ್ಡದಾಗಿ ಚಿತ್ರಿಸಿದ್ದಾರೆ. ಕೃಷ್ಣನ ಚಿತ್ರಗಳು ಚಿಕ್ಕ ಚಿಕ್ಕದಾಗಿ ಕಿಟಕಿಯ ಬಾಗಿಲಿನ ಮೇಲೆ ಚಿತ್ರಿಸಿದ್ದಾರೆ. ಎಲ್ಲಾ ಚಿತ್ರಗಳು ನವರಂಗದಲ್ಲಿ ಕಾಣಸಿಗುತ್ತದೆ. ಈ ರಾಮನ ಸಂಬಂಧಪಟ್ಟ ಚಿತ್ರಗಳಲ್ಲಿ ಚೌಕಟ್ಟಿಗೆ ಹಳದಿ ಹಾಗೂ ಕೆಂಪು, ಹಸಿರು, ಕಪ್ಪು ಬಣ್ಣಗಳಿಂದ ನಿರ್ಮಿಸಿದ್ದಾರೆ.

ಭಿತ್ತಿ ಚಿತ್ರಗಳ ವಸ್ತುವಿಷಯ :

ಚಿತ್ರ-೧ : ಶಂಬರಾಸುವರ ವಧೆಯ ಚಿತ್ರವಾಗಿದ್ದು, ಈ ಭಿತ್ತಿಚಿತ್ರದಲ್ಲಿ ಬಲರಾಮನು ರಾಕ್ಷಸನನ್ನು ಸಂಹರಿಸುವ ಸನ್ನಿವೇಶವಿದೆ. ಇಲ್ಲಿ ವಿಶೇಷವೆಂದರೆ ಭಿತ್ತಿಚಿತ್ರಗಳನ್ನು ಮರದ ಹಲಗೆಯ ಮೇಲೆ ಚಿತ್ರಿಸಿರುತ್ತಾರೆ. ಹಿನ್ನೆಲೆಯು ಕೆಂಪುವರ್ಣವೇ ಮುಖ್ಯವಾಗಿ ಕಂಡುಬರುತ್ತದೆ. ಈ ಚಿತ್ರದಲ್ಲಿ ಆಕಾಶವು ದಟ್ಟ ನೀಲಿ ವರ್ಣದಿಂದ ತೋರಿಸಿದ್ದಾರೆ. ಕೃಷ್ಣನು ರಾಕ್ಷಸನನ್ನು ತನ್ನ ಮುಷ್ಟಿಯಿಂದ ಗುದ್ದುತ್ತಿರುವಂತೆ ಚಿತ್ರಿಸಿದ್ದಾರೆ. ಇಬ್ಬರು ವೀರಾವೇಶದಿಂದ ಕಾದಾಡುವಂತೆ

ಭಾಸವಾಗುತ್ತಿದೆ. ಇಬ್ಬರು ಆಲಂಕಾರವಾಗಿ ಕಂಡುಬರುತ್ತಿದ್ದಾರೆ. ಸಂಯೋಜನೆಯು ತುಂಬ ಮನೋಹರವಾಗಿದೆ. ಇಲ್ಲಿರುವ ಇಬ್ಬರ ಮೈವರ್ಣವು ಒಂದೇ ಅನ್ನಿಸುತ್ತದೆ. ಕೃಷ್ಣನು ಶಾಲು ಮತ್ತು ಪಂಚೆಯನ್ನು ಧರಿಸಿದರೆ, ರಾಕ್ಷಸನು ಸಾಲು ಮತ್ತು ಕಚ್ಚೆಯನು ತೊಟ್ಟಿರುತ್ತಾನೆ. ಈ ಭಿತ್ತಿಚಿತ್ರಕ್ಕೆ ವಾರ್ನಿಶ್ ಲೇಪಿಸಲಾಗಿದೆ.

ಚಿತ್ರ–೨ : ಇದು ಕೃಷ್ಣ ಗೋಪಾಲನಾಗಿ ಕೊಳಲು ನುಡಿಸುತ್ತಿರುವ ಸನ್ನಿವೇಶವಾಗಿದ್ದು, ಇದು ಮರದ ಹಲಗೆ ಮೇಲೆ ಸುಂದರವಾದ ಚಿತ್ರವಾಗಿ ಮೂಡಿಬಂದಿದೆ. ಇದು ಬೀರುವಿನ ಮೇಲೆ ಕಂಡುಬರುತ್ತದೆ. ಈ ಭಿತ್ತಿಚಿತ್ರದಲ್ಲಿ ಕೃಷ್ಣನೇ ಕೇಂದ್ರ ಬಿಮದುವಾಗಿದ್ದು, ಕೊಳಲು ನುಡಿಸುತ್ತಿದ್ದಾನೆ, ಸುತ್ತಲು ಗೋಪಾಲಕರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಆದರೆ ಹಸು ಮತ್ತು ಕರುಗಳು ಆಕೃತಿಗಳಿಗಿಂತ ಚಿಕ್ಕದಾಗಿ ಚಿತ್ರಿಸಿದ್ದಾರೆ. ಏಕೆಂದರೆ ಕೃಷ್ಣನನ್ನು ದೇವಮಾನವನೆಂಬ ಕಾರಣವಿರಬಹುದು. ಹಿನ್ನೆಲೆಯಲ್ಲಿ ಕೆಂಪುವರ್ಣವು ಮುಖ್ಯವಾಗಿದೆ ಹಾಗೂ ಗಿಡ, ಮರಗಳು ಹೂವನ್ನು ಸಹ ತೋರಿಸಿದ್ದಾರೆ. ನೆಲವು ಸಹ ಹಚ್ಚ ಹಸಿರಿನಿಂದ ಕಂಡುಬರುತ್ತದೆ.

ಚಿತ್ರ–೩ : ಕಂಸನ ವಧೆ ಶಿರ್ಷಿಕೆಯ ಈ ಚಿತ್ರವು ಸಹ ಮರದ ಹಲಗೆಯ ಚಿತ್ರವು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ಅರಮನೆಯ ಒಳ ಆವರಣವು ಚಿನ್ನದ ವರ್ಣವು ಲೇಪಿಸಿದ್ದಾರೆ ಅದು ವಿಶೇಷವಾಗಿದೆ. ಕೃಷ್ಣನು ತನ್ನ ಸೋದರ ಮಾವನಾದ ಕಂಸನನ್ನು ಸಂಹರಿಸಲು ಕುತ್ತಿಗೆ ಬಿಗಿಯಾಗಿ ಹಿಡಿದಿದ್ದಾನೆ. ಮತ್ತೊಂದು ಕೈಯಿಂದ ಮೇಲಕ್ಕೆ ಎತ್ತಿದ್ದಾನೆ. ಅದು ಬಲವಾಗಿ ಹೊಡೆಯಲು, ಕಂಸನು ಸಿಂಹಾಸನದ ಮೇಲೆ ಕುಳಿತಿದ್ದಾನೆ. ಕೆಂಪು ವಸ್ತ್ರ ತೊಟ್ಟಿರುವ ಕಂಸನು, ಹಳದಿಬಣ್ಣದ ಕಚ್ಚೆಯನ್ನುಟ್ಟಿದ್ದಾನೆ. ಕೃಷ್ಣನು ಸಹ ಕೇಸರಿ ಕಚ್ಚೆಯನ್ನು ಹುಟ್ಟಿದ್ದಾನೆ. ವಿಶೇಷವಾಗಿ ಇಬ್ಬರು ಹಸಿರು ಸಾಲು ಹಾಕಿದ್ದಾರೆ.

ಚಿತ್ರ–೪ : ಖರಸುರ ಸಂಹಾರ ಎಂಬ ಈ ಭಿತ್ತಿ ಚಿತ್ರವು ಸಹ ಬೀರುವಿನ ಮರದ ಹಲಗೆಯ ಮೇಲೆ ಚಿತ್ರಿಸಿದ್ದಾರೆ. ಖರಾಸುರನು ಕತ್ತೆಯ ವೇಷಹಾಕಿ ಕೃಷ್ಣನ ಮೇಲೆ ಯುದ್ಧಕ್ಕೆ ಬರುತ್ತಾನೆ. ಆದರೆ ಕೃಷ್ಣನಿಗೆ ಇವನೇ ಖರಸುರ ಎಂಬುದು ಗೊತ್ತಾಗಿ ತನ್ನ ಕಾಲಿನಿಂದ ಮೆಟ್ಟಿ ತನ್ನ ಬಲಗೈಯಿಂದ ಹೊಡೆಯುತ್ತಾನೆ. ಆಗ ಅವನ ನಿಜಸ್ವರೂಪ ಬಯಲಾಗುತ್ತೆ, ಅಗ ಅವನ ತಪ್ಪು ಅರಿವಾಗುವ ಒಂದು ಸನ್ನಿವೆಶವನ್ನು ಕಲಾವಿದ ತನ್ನದೇ ಜಾಣ್ಮೆಯಿಂದ ಚಿತ್ರವನ್ನು ರಚಿಸಿದ್ದಾನೆ. ಓನ್ನೆಲೆಯ ವರ್ಣವು ಕೆಂಪಾಗಿದ್ದು, ನೆಲವು ಹಸಿರಿನಿಂದ ಚಿತ್ರಿಸಲಾಗಿದೆ. ಸುತ್ತಲೂ ಅಲಂಕಾರಿಕ ನಕ್ಷೆಯಿಂದ ಕಲಾವಿದರು ಸುಂದರವಾಗಿ ಚಿತ್ರಿಸಿದ್ದಾರೆ. ಈ ಚಿತ್ರವು ಒಂದು ಮತ್ತು ಒಂದು ಅಳತೆಯಲ್ಲಿದೆ.

ಚಿತ್ರ–೫ : ರುಕ್ಮಿಣಿ ಮದುವೆಯ ಸಂದರ್ಭದ ಈ ಭಿತ್ತಿ ಚಿತ್ರವು, ಕೃಷ್ಣನು ಮತ್ತು ರುಕ್ಮಿಣಿಯ ಮದುವೆಯ ಸಂಭ್ರಮದಿಂದ ಕೂಡಿರುವ ಚಿತ್ರವಾಗಿದೆ. ಈ ಚಿತ್ರದಲ್ಲಿ ಕೃಷ್ಣ–ರುಕ್ಮಿಣಿಯು ಸರ್ವ ಅಲಂಕಾರರಾಗಿ ಕಾಣುತಿದ್ದು, ಸುತ್ತಲೂ ಸಂಬಂಧಿಕರಿರುವುದನ್ನು ಕಾಣಬಹುದು. ಇವರ ಕೆಳಗೆ

ರಾಜಋಷಿಗಳು ಮದುವೆಯ ಸಿದ್ಧತೆಯಲ್ಲಿ ತೊಡಗಿದ್ದಾರೆ. ಹಿನ್ನೆಲೆಯ ವರ್ಣವು ಕೆಂಪುಮಯವಾಗಿದೆ. ಜೊತೆಗೆ ಮದುವೆಯ ಮಂಟಪವನ್ನು ಇಲ್ಲಿ ವಿಜೃಂಬಿಸಿ ತೋರಿಸಲಾಗಿದೆ. ಅದು ಸ್ವರ್ಣವರ್ಣದಿಂದ ತೋರಿಸಿದ್ದಾರೆ. ಈ ಚಿತ್ರದಲ್ಲಿ ಅನೇಕ ಆಕೃತಿಗಳು ಹೆಚ್ಚಾಗಿ ಕಂಡರೂ, ಅದು ಚೊಕ್ಕವಾಗಿ ಸುಂದರವಾಗಿ ಚಿತ್ರಿಸಿದ್ದಾರೆ. ಚಿತ್ರದ ಸುತ್ತಲೂ ನಕ್ಷಾಚಿತ್ರಗಳಿಂದ ಪೂರ್ಣಗೊಳಿಸಿದ್ದಾರೆ. ಹಿನ್ನೆಲೆಯ ವರ್ಣವು ಕೆಂಪು ಹಾಗೂ ಹಸಿರಿನಿಂದ ಕೂಡಿದೆ.

ಚಿತ್ರ–೬ : ಗೋವರ್ಧನಗಿರಿ ಈ ಭಿತ್ತಿ ಚಿತ್ರವು ಸಹ ಬಾಗಿಲಿನ ಮರದ ಹಲಗೆಯ ಮೇಲೆ ಚಿತ್ರಿಸಿದ್ದಾರೆ. ಇದು ವಿಶಿಷ್ಟವಾದ ಪುರಾಣಗಳಲ್ಲಿ ಹೆಚ್ಚು ಪ್ರಚಲಿತವಿರುವ ಚಿತ್ರವಾಗಿದೆ. ಕೃಷ್ಣನು ತನ್ನ ಒಂದೇ ಕೈ ಕಿರುಬೆರಳಿನ ತುದಿಯಿಂದ ಬೆಟ್ಟವನ್ನು ಎತ್ತಿ ಹಿಡಿದಿದ್ದಾನೆ. ಸುತ್ತಲೂ ಹೆಂಗೆಳೆಯರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ತನ್ನ ಶಕ್ತಿ ಪ್ರದರ್ಶನವನ್ನು ತೋರಿಸುವಂತೆ ಭಾಸವಾಗುತ್ತಿದೆ. ಕೃಷ್ಣನ ಹಿಂದೆಯಿಂದ ಬಂದ ಹಾಗೆ ಒಂದು ಹಸುವು, ಕೃಷ್ಣನ ಪಾದವನ್ನು ತನ್ನ ನಾಲಿಗೆಯಿಂದ ಪ್ರೀತಿಯಿಂದ ನೆಕ್ಕುತ್ತಿದೆ. ಈ ಭಿತ್ತಿಚಿತ್ರದ ಹಿನ್ನಲೆಗೆ ಕೆಂಪುವರ್ಣವನ್ನು ಲೇಪಿಸಲಾಗಿದೆ. ಕಪ್ಪು, ಹಸಿರು ಹಾಸಿನ ಮೇಲೆ ಎಲ್ಲಾರು ನಿಂತಿದ್ದಾರೆ. ಚಿತ್ರದ ಸುತ್ತಲು ನಕ್ಷಾಚಿತ್ರದಿಂದ ಈ ಚಿತ್ರದ ಸೌಂದರ್ಯವು ಹೆಚ್ಚಾಗಿ ಕಂಡುಬರುವಂತಿದೆ.

ಚಿತ್ರ–೭ : ಸೀತೆಯ ಬಳಿ ಹನುಮಂತನು ಚೂಡಮಣಿಯನ್ನು ಪಡೆಯುತ್ತಿರುವ ಚಿತ್ರ ಇದಾಗಿದ್ದು, ಈ ಚಿತ್ರವು ರಾಮಾಯಣಕ್ಕೆ ಸಂಬಂಧಪಟ್ಟಂತಹ ಚಿತ್ರವಾಗಿರುತ್ತದೆ. ಇದನ್ನು ಗೋಡೆಯ ಮೇಲೆ ದೊಡ್ಡದಾಗಿ ಚಿತ್ರಿಸಿದ್ದಾರೆ. ಹನುಮಂತನು ರಾವಣನ ಸೈನಿಕರ ಜೊತೆ ಕಾದಾಡುತ್ತಿರುವ ದೃಶ್ಯವಿದಾಗಿದೆ. ಹಿನ್ನೆಲೆಯಲ್ಲಿ ಮರ, ಗಿಡದಿಂದ ತುಂಬಿರುವಾಗೆ ಚಿತ್ರಿಸಿದ್ದಾರೆ. ಹನುಮಂತನನ್ನು ಗಾಢ ಹಸಿರಿನ ಬಣ್ಣದಿಂದ ತೋರಿಸಿದ್ದಾರೆ. ರಾಕ್ಷಸರನ್ನು ನೀಲಿ ವರ್ಣದಲ್ಲಿ ಹಾಗೂ ಸೀತಾದೇವಿಯನ್ನು ಮತ್ತು ಸಖಿಯರನ್ನು ತೆಳು ಕೆಂಪುವರ್ಣದಿಂದ ಚಿತ್ರಿಸಿದ್ದಾರೆ. ರಾಕ್ಷಸರು ಕತ್ತಿಯನ್ನು ಹಿಡಿದು ಹನುಮಂತನನ್ನು ಹೊಡೆಯಲು ಬರುತ್ತಿದ್ದಾರೆ. ಈ ಚಿತ್ರದ ಸುತ್ತಲು ಕಪ್ಪು ಮತ್ತು ಹಳದಿ ವರ್ಣದಿಂದ ಬಾರ್ಡರ್ ಹಾಕಿರುವುದನ್ನು ಗಮನಿಸಬಹುದು.

ಚಿತ್ರ–೮ : ಬಲಭಾಗದ ಗೋಡೆಯ ಮೇಲಿನ ರಾಮಾಯಣದ ಭಿತ್ತಿ ಚಿತ್ರವನ್ನು ರಚಿಸಲಾಗಿದ್ದು, ಈ ಚಿತ್ರವು ರಾಮಾಯಣದ ಒಂದು ಸನ್ನಿವೇಶಕ್ಕೆ ಸೇರಿದ ಚಿತ್ರವಾಗಿರುತ್ತದೆ. ಇದರ ಅಳತೆಯು ಎರಡು ಅಡಿ ಅಗಲ ಎರಡುವರೆ ಅಡಿ ಎತ್ತರದಿಂದ ಕೂಡಿದೆ. ಇದರಲ್ಲಿ ಹನುಮಂತನು ಸೀತೆಯ ಬಳಿ ಬಂದು ರಾಮನ ವಿಚಾರವನ್ನು ತಿಳಿಸಿ, ಗುರುತಿಗೆ ಅವಳ ಹತ್ತಿರ ತಲೆಯಲ್ಲಿ ಇದ್ದ ಒಂದು ಆಭರಣವನ್ನು ಪಡೆಯುತ್ತಿದ್ದಾನೆ. ಹನುಮಂತನಿಗೆ ಈ ಚಿತ್ರವು ರಾಮಾಯಣದಲ್ಲಿ ರಾಮನ ಪತ್ನಿಯಾದ ಸೀತೆಯನ್ನು ರಾವಣನು ಅಪಹರಿಸಿಕೊಂಡು ಬಂದು ಆತನ ರಾಜ್ಯದ ಅಶೋಕವನದಲ್ಲಿ ಸೆರೆಹಿಟ್ಟಿರುತ್ತಾರೆ. ಆಗ ಹನುಮಂತನು ಇಲ್ಲಿ ಕಂಡು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದಾನೆ.

ಈ ಚಿತ್ರದಲ್ಲಿ ಮೂರು ಭಾಗವಾಗಿಸಿಕೊಂಡು ಕಲಾವಿದನು ಚಿತ್ರಿಸಿದ್ದಾನೆ. ಮೇಲಿನ ಭಾಗದಲ್ಲಿ ಹಸಿರಿನ ಎಲೆಗಳು ಇರುತ್ತದೆ. ನಂತರದಲ್ಲಿ ಸೀತಾದೇವಿ ಮರದ ಕೆಳಗೆ ಸಣ್ಣ ಜಗುಲಿಯ ಮೇಲೆ ಕುಳಿತಿದ್ದಾಳೆ. ಕೆಳಭಾಗದಲ್ಲಿ ರಾವಣನ ಭಂಟರು ಸೀತಾದೇವಿಯನ್ನು ಕಾವಲು ಕಾಯುತ್ತಿದ್ದಾರೆ. ಈ ಸೇವಕರು ಕತ್ತಿ ಗುರಾಣಿಗಳನ್ನು ಕೈಗಳಲ್ಲಿ ಹಿಡಿದು ಆರ್ಭಟಿಸುತ್ತಿದ್ದಾರೆ. ಹನುಮಂತನಿಗೆ ಹೊಡೆಯಲು ಮೇಲೆ ಎರುಗುತ್ತಿದ್ದಾರೆ. ಆದರೆ ಹನುಮಂತನು ಇವರಿಗೆ ಬಲವಾಗಿ ತನ್ನ ಬಲಗಾಲಿನಿಂದ ಹೊದೆಯುತ್ತಿದ್ದಾನೆ. ಮೈವರ್ಣ ಹಸಿರು ವರ್ಣದಿಂದ ಕೂಡಿದೆ. ರಾಕ್ಷಸರನ್ನು ಸಹ ತಿಳಿಹಸಿರು, ಕೇಸರಿ, ಕೆಂಪು, ಕಂದು ವರ್ಣದಿಂದ ಕಲಾವಿದನು ತೋರಿಸಿದ್ದಾನೆ. ಕಪ್ಪುರೇಖೆಯಿಂದ ಆಕೃತಿಯ ಚಿತ್ರವನ್ನು ರಚಿಸಿದ್ದಾರೆ.

ಎರಡನೆಯ ಭಾಗದಲ್ಲಿ ಸೀತಾದೇವಿಯ ಕಟ್ಟೆಯ ಮೇಲೆ ಕುಳಿತಿದ್ದಾಳೆ ಹಿಂದೆ ಮುಂದೆ ಸೇವಕಿಯರು ಕತ್ತಿ ಮತ್ತು ವಸ್ತುಗಳನ್ನು ಹಿಡಿದು ನಿಂತಿರುತ್ತಾರೆ. ಸೀತಾದೇವಿಯನ್ನು ಸ್ವಲ್ಪ ಎತ್ತರವಾಗಿ ಚಿತ್ರಿಸಿದ್ದಾರೆ. ಇಲ್ಲಿ ಸೀತೆಯನ್ನು ಚೆನ್ನಾಗಿ ಖುಷಿಯಾಗಿರುವಾಗೆ ರಚನೆ ಮಾಡಿದ್ದಾರೆ. ಹನುಮಂತನು ಭಕ್ತಿಯಿಂದ ಕಾಣಿಕೆ ಪಡೆಯುತ್ತಿದ್ದಾನೆ. ರಾಕ್ಷಸಿಯರನ್ನು ಸಹ ಸುಂದರವಾಗಿಯೇ ಚಿತ್ರಿಸಿದ್ದಾನೆ. ಸೀತೆಯನ್ನು ಸ್ವಲ್ಪ ಬಿಳಿವರ್ಣದಿಂದ ಸೂಕ್ಷ್ಮವಾಗಿ ತೋರಿಸಿ ಸೇವಕಿಯರನ್ನು ಕೇಸರಿವರ್ಣದಿಂದ ರಚನೆ ಮಾಡಿದ್ದಾರೆ. ಹಿಂಬದಿವರ್ಣವು ಕೆಂಪುವರ್ಣ ಹಾಗಿದ್ದು ಚಿತ್ರಕ್ಕೆ ಅದು ಒಂದು ಮೆರಗನ್ನು ತಂದಿದೆ.

ಈ ಎಲ್ಲಾ ದೇವಾಲಯಗಳಲ್ಲಿ ಆಕೃತಿಯ ಸಂಯೋಜನೆಯು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ ರಾಮಾಯಣ ಮತ್ತು ಕೃಷ್ಣನ ಚಿತ್ರಗಳನ್ನು ಚಿಕ್ಕದಾಗಿದೆ, ಹಾಗೆ ಕೃಷ್ಣನ ಕಥೆಯುಳ್ಳ ಚಿತ್ರಗಳು ಚಿಕ್ಕದಾಗಿದ್ದರೂ ತುಂಬ ಸುಂದರವಾಗಿ ಸಂಯೋಜಿಸಿ ಹೆಚ್ಚಿನ ಚಿತ್ರಗಳನ್ನು ರಚಿಸಿದ್ದಾರೆ. ಎರಡು ದೇವಾಲಯಗಳಲ್ಲಿಯೂ ಕೆಂಪು ವರ್ಣವು ಹಿನ್ನೆಲೆಯ ವರ್ಣವಾಗಿದ್ದು ಪ್ರಧಾನವಾಗಿದ್ದು ಕಂಡುಬರುತ್ತದೆ. ಭಿತ್ತಿಚಿತ್ರಗಳಲ್ಲಿ ರೇಖೆಯ ಜೀವಾಳವಾಗಿದ್ದು ಅದನ್ನು ಸರಿಯಾಗಿ ಕಲಾವಿದರು ನಿರ್ವಹಿಸಿರುತ್ತಾರೆ. ಈ ಶೈಲಿಯ ಉನ್ನತವಾದ ಚಿತ್ರಗಳಿಗೆ ಮಾದರಿಯೆಂಬಂತೆ ಚಿತ್ರಿಸಿರುವರು. ಉತ್ತಮ ತಂತ್ರಗಾರಿಕೆಯಿಂದ ಕಥೆಯನ್ನು ಸ್ಪಷ್ಟವಾಗಿ ಸಾರುವ ಧಾರ್ಮಿಕ ಕಥಾನಿರೂಪಣ ಚಿತ್ರಗಳಾಗಿರುತ್ತವೆ. ವರ್ಣಗಾರಿಕೆಯನ್ನು ಅತ್ಯುತ್ತಮವಾಗಿ ಲೇಪನ ಮಾಡಿರುತ್ತಾರೆ. ಇಲ್ಲಿ ಕೆಂಪುವರ್ಣವೇ ಪ್ರಧಾನವಾಗಿದ್ದರೂ ಜೊತೆಗೆ ಬೇರೆ ಬೇರೆ ವರ್ಣವನ್ನು ದುಡಿಸಿಕೊಂಡಿರುವುದು ಕಲಾವಿದರ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ರೇಖೆಯ ಚಲನಶೀಲವಾಗಿದ್ದು ಬಹುಮುಖ್ಯ ಪಾತ್ರವಹಿಸಿದೆ.

ಕ್ರೈಸ್ತ ಧರ್ಮ :

ಪ್ರಪಂಚದ ಧರ್ಮಗಳಲ್ಲಿ ಹಿರಿದಾದ ಧರ್ಮ ಕ್ರೈಸ್ತ ಧರ್ಮ. ಇದು ವಿಶಿಷ್ಟವಾದ ಹಾಗೂ ವಿನೂತನವಾದ ಧರ್ಮ. ಮಾನವ ಈ ಧರ್ಮದ ಕೇಂದ್ರ ವ್ಯಕ್ತಿ ಮಾನವೀಯ ಮೌಲ್ಯಗಳು

ಈ ಧರ್ಮದ ದೀಪ ಸ್ತಂಭಗಳು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವುದು ಇದರ ಧ್ಯೇಯೋದ್ದೇಶ, ಯೇಸು ಕ್ರಿಸ್ತ ಕ್ರೈಸ್ತ ಧರ್ಮದ ಸ್ಥಾಪಕನೆಂಬುದು ಬಹುಜನ ವಿದ್ವಾಂಸರ ಅಭಿಪ್ರಾಯವಾಗಿದೆ.

ಕರ್ನಾಟಕಕ್ಕೆ ಕ್ರೈಸ್ತಮತ, ಹಿಂದಿನಿಂದಲೂ ಯೂರೋಪಿನೊಂದಿಗೆ ವ್ಯಾಪಾರ ಸಂಬಂಧಗಳಿದ್ದ ಕಾರಣ, ಕೊಂಕಣಿ ಕರಾವಳಿಗೆ ಬಂದಿತ್ತು. ಕ್ರಿ.ಶ. ೧೩೨೪ ರಲ್ಲಿ ಡೊಮಿನಿಕನ್ ಪಂಥಕ್ಕೆ ಸೇರಿದ ಪಾದ್ರಿಗಳು ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರೇ ಕರ್ನಾಟಕಕ್ಕೆ ಬಂದ ಮೊದಲ ಮಿಷನರಿಗಳು ಇವರು ಕೆನರಾ, ಮೈಸೂರು, ಮಲಬಾರ್ ಮತ್ತು ಟ್ರಾವಂಕೂರುಗಳಲ್ಲಿ ಮತ ಪ್ರಚಾರವನ್ನು ಪ್ರವೇಶಿಸಿದ ವಿವಿಧ ಸಂಘಗಳು, ಕೆನರಾ ಮಿಷನ್ (೧೫೩೮) ಮೈಸೂರು ಮಿಷನ್ (೧೬೪೮), ಕರ್ನಾಟಕ ಮಿಷನ್ (೧೭೦೦) ರಾಜ್ಯಾದ್ಯಂತ ಧರ್ಮ ಪ್ರಸಾರ ಕಾರ್ಯವನ್ನು ಮುಂದುವರೆಸಿದವು. ಕರ್ನಾಟಕದ ಭವ್ಯ ಪರಂಪರೆಯ ಪ್ರಕಾಶಕ್ಕೆ ಕಾರಣವಾಗಿ ಸಾವಿರಾರು ಚರ್ಚುಗಳು ಇಂದು ಮುಗಿಲೆತ್ತರಕ್ಕೆ ಮೂಡಿ ನಿಂತಿವೆ. ನಾನಾ ಬಗೆಯ ಭವ್ಯಬಂದದಿಂದ ಬಗೆ ಬಗೆಯ ಭಂಗಿಗಳಲ್ಲಿ ಕ್ರೈಸ್ತ ಸಂತರ ಹೆಸರನ್ನು ಹೊತ್ತು ಇವು ಕನ್ನಡ ಸಂಸ್ಕೃತಿಯ ಭಾಗವಾಗಿವೆ. ಕರಾವಳಿ ಕನ್ನಡದ ಕ್ರೈಸ್ತರು ನಾಡು ನುಡಿಗೆ ಸಲ್ಲಿಸುತ್ತಿರುವ ಸೇವೆ ಅಪಾರ. ಪರಸೇವೆಯೇ ಪರಮಾತ್ಮನ ಸೇವೆಯೆಂಬ ಧರ್ಮನಿಷ್ಠೆಯ ಜೊತೆಗೆ ಸೇವೆಯನ್ನು ಮೈಗೂಡಿಸಿಕೊಂಡು ತಾಳ್ಮೆ, ಸಹನೆ, ಸಹಕಾರಕ್ಕೆ ಹೆಸರಾಗಿದ್ದಾರೆ, ಕಾರವಾರ, ಮಂಗಳೂರು, ಉಡುಪಿ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಶಾಲಾ, ಕಾಲೇಜುಗಳು ಸೇವಾಶ್ರಮಗಳು, ಆಸ್ಪತ್ರೆಗಳು ಅನ್ನ ಛತ್ರಗಳು ಇಂದು ಬಹುಮಂದಿಯ ಮೆಚ್ಚುಗೆಗೆ ಪಾತ್ರವಾಗಿದೆ. ಎಲ್ಲಾ ಧರ್ಮಗಳಿಗೂ ಸರಿಸಮಾನ ವೆಂಬಂತೆ ಬಿಂಬಿತವಿರುವ ಕ್ರೈಸ್ತ ಧರ್ಮವು ಕರಾವಳಿ ಕರ್ನಾಟಕದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದ್ದು ಈ ಭಾಗದಲ್ಲಿ ಸಮಾರು ಇನ್ನೂರ ಐವತ್ತ ರಿಂದ ಮೂರು ನೂರು ದೇವಾಲಯಗಳನ್ನು ನಿರ್ಮಿಸಿರುವುದು ಅವರ ನಿಷ್ಠೆಯ ಸಂಕೇತವೆಂಬಂತೆ ದೇವರ ಪ್ರೀತಿಗೆ ಪಾತ್ರರಾಗಿದ್ದಾರೆ.

ದಕ್ಷಿಣ ಕರ್ನಾಟಕದ ಕ್ರೈಸ್ತರು ಮತ್ತು ದೇವಾಲಯಗಳು :

ದಕ್ಷಿಣ ಕರ್ನಾಟಕದ ಕ್ರೈಸ್ತೇತರ ಪರಿಸರದಲ್ಲಿ ಕ್ರೈಸ್ತ ಧರ್ಮವು ಹುಟ್ಟಿಬೆಳೆದದ್ದಕ್ಕೆ ಕಾರಣ ವಿಜಯನಗರ ಮತ್ತು ಕೆಳದಿಯ ಅರಸರು, ದೇವ ಪ್ರಭುತ್ವವಾಗದೆಯೂ ಧರ್ಮ ಸಂರಕ್ಷಣ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದದ್ದು, ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಕ್ರೈಸ್ತ ಧರ್ಮವು ಆಗಮಿಸಿದುದರಿಂದ ರಾಜಕೀಯ, ಆರ್ಥಿಕ ಧಾರ್ಮಿಕ ಹಾಗೂ ಬೌದ್ಧಿಕ ಪರಿಣಾಮಗಳು ಕಾಣಿಸಿಕೊಂಡವು. ಕ್ರೈಸ್ತ ಧರ್ಮವು ಕರ್ನಾಟಕಕ್ಕೆ ಒಂದು ಭಾರೀ ಬಂಡೆಯೆಂತೆ ಬಂದೆರಗಲಿಲ್ಲ. ಏಕೆಂದರೆ ಕರಾವಳಿ ಕರ್ನಾಟಕಕ್ಕೆ ಬಂದ ಯುರೋಪಿಯನ್ ಕ್ರೈಸ್ತರಿಗೆ ಈ ಪ್ರದೇಶದ ಆಸಕ್ತಿಗಳಲ್ಲಿ ಘರ್ಷಣೆಗಳು ಎದುರಾದವು ಅದು ಪೋರ್ಚ್‌ಗೀಸ್‌ರಿಗೂ ಡಚ್ಚರಿಗೂ.

ಪೋರ್ಚ್‌ಗೀಸರಿಗೂ ಫ್ರೆಂಚರಿಗೂ, ಮತ್ತು ಪೋರ್ಚಗೀಸ್‌ರಿಗೂ ಮತ್ತು ಬ್ರಿಟೀಷರಿಗೂ ಹೀಗೆ ದೇಶಿಯ ಶಕ್ತಿಗಳು ಎಲ್ಲೆಲ್ಲಿ ಯಾವಾಗ ಸಾಧ್ಯವೋ ಅಲ್ಲೆಲ್ಲಾ ಆ ಕಾಲಾವಧಿಯಲ್ಲೆಲ್ಲಾ ಕ್ರೈಸ್ತ ಶಕ್ತಿಗಳ ನಡುವೆ ಬೇದ, ಭಿನ್ನಾಭಿಪ್ರಾಯಗಳನ್ನು ಮೂಡಿಸಿ, ಒಡಕು ತರಲು ಪ್ರಯತ್ನಿಸಿದುದನ್ನು ಇಂದು ನಾವು ಕಾಣಬಹುದು.

ಮುಖ್ಯವಾಗಿ ಈ ಅಧ್ಯಯನದ ಉದ್ದೇಶ ಕ್ರೈಸ್ತರ ಚಿತ್ರಗಳ ಕುರಿತು ಶೋಧಿಸುವಂತಹದ್ದಾಗಿದ್ದು, ಜೊತೆಗೆ ಹೆಚ್ಚು ಕರಾವಳಿಯಲ್ಲಿನ ಕ್ರೈಸ್ತರ ಇತಿಹಾಸವನ್ನು ತಿಳಿಸುವ ಉದ್ದೇಶವು ಸ್ವಲ್ಪ ಮಟ್ಟಿಗೆ ಇದ್ದು, ವಿಜಯನಗರದ ಹಿಂದೂ ಸಾಮ್ರಾಜ್ಯದ ಅರಸರು ಮತ್ತು ಕೆಳದಿಯ ನಾಯಕರೊಂದಿಗೆ ಕ್ರೈಸ್ತರು ಹೊಂದಿದ್ದ ಸಂಬಂಧ ಇವುಗಳನ್ನು ಗುರುತಿಸುವುದು ಮತ್ತು ಆ ಪ್ರದೇಶದಲ್ಲಿ ವಿದೇಶಿಯ ಹಾಗೂ ದೇಶಿಯ ಕ್ರೈಸ್ತರ ಚಟುವಟಿಕೆಗಳನ್ನು ದಾಖಲಿಸುವುದು ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ, ಕ್ರೈಸ್ತ ಧರ್ಮವು ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಹಂತಗಳೆರಡರಲ್ಲೂ ಹಲವು ಬಗೆಯಾಗಿ ಒಡೆದಿದ್ದನ್ನು ಇತಿಹಾಸದಲ್ಲಿ ನೋಡುತ್ತೇವೆ. ಉದಾಹರಣೆಗೆ ಯುರೋಪಿಯನ್ ದೇಶಗಳ ಲೌಕಿಕ ಸ್ತರದಲ್ಲಿ ಅಂತರ್ವಾಹಿನಿಯಾಗಿ ರಾಷ್ಟ್ರಿಯತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳು ಹರಿಯುತ್ತಿದ್ದವು. ಹಾಗೆಯೇ ಆಧ್ಯಾತ್ಮಿಕ ಸ್ತರದಲ್ಲಿ ಕ್ರೈಸ್ತ ಧರ್ಮವು ಕ್ಯಾಥೋಲಿಕರು, ಪ್ರಾಟೆಸ್ಟೆಂಟರು, ಆಂಗ್ಲಿಕನ್ನರು ಮತ್ತು ಕಾಲ್ವಿನಿಷವಿರು ಎಂದು ಹಲವು ಪಂಗಡಗಳಾಗಿ ಒಡೆದಿತ್ತು. ಹಂಗಾಗಿ ಆಧ್ಯಾತ್ಮಿಕ ಸ್ತರದಲ್ಲಾಗಲಿ ಲೌಕಿಕ ಸ್ತರದಲ್ಲಾಗಲಿ ಕ್ರೈಸ್ತ ಧರ್ಮವು. ಒಂದು ಅಖಂಡ ಶಕ್ತಿಯಾಗಿರಲಿಲ್ಲ. ಈ ಅವಧಿಯಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕ್ರೈಸ್ತ ಧರ್ಮವು ಕಾಲಿರಿಸಿದ್ದನ್ನು ಅಧ್ಯಯನ ಮಾಡುವ ಮೊದಲು ತಿಳಿಯಲು ಅವಶ್ಯವಾದ ಅಂಶವಾಗಿದೆ.

ಕ್ರಿ.ಶ. ೧೫೦೦ಕ್ಕಿಂತ ಮೊದಲೇ ಇಲ್ಲಿ ಕ್ರೈಸ್ತಧರ್ಮವಿದ್ದಿತು. ಆದರೆ ಪಶ್ಚಿಮ ಕರಾವಳಿಯ ಸಣ್ಣ ಸಣ್ಣ ಪ್ರದೇಶಗಳಿಗೆ ಅದು ಸೀಮಿತವಾಗಿದ್ದಿತು. ಅದರ ಪ್ರಭಾವ ಅಷ್ಟಾಗಿ ಗಮನಾರ್ಹವಾಗಿರಲಿಲ್ಲ. ಕ್ರಿ.ಶ. ೧೫೦೦ರ ನಂತರ ಅದು ಹೊಸ ರಭಸದಿಂದ ದಕ್ಷಿಣ ಭಾರತವನ್ನು ಪ್ರವೇಶಿಸಿತು. ಈ ಕಾಲಾವಧಿಯಲ್ಲಿ ಕ್ರೈಸ್ತ ಧರ್ಮವು ರಾಜಕೀಯ, ಆರ್ಥಿಕ, ಧಾರ್ಮಿಕ ಹೀಗೆ ಹಲವು ಆಯಾಮಗಳನ್ನು ಹೊಂದಿದ್ದಿತು. ಅವೆಲ್ಲಾ ಪರಸ್ಪರ ಸಂಬಂಧಿಸಿದವು. ಹಾಗಾಗಿ ಈ ಅವಧಿಯ ಕ್ರೈಸ್ತ ಧರ್ಮವು ವಿದ್ವಾಂಸರ ವಿಶೇಷ ಗಮನವನ್ನು ಆಕರ್ಷಿಸುತ್ತದೆ. ಕ್ರೈಸ್ತಧರ್ಮದ ಎರಡನೇ ಅಲೆಖೀಸಿದ ಕಾಲವು ಪೋರ್ಚ್‌ಗೀಸ್ ವಿಸ್ತರಣೆ, ವಿಜಯನಗರದ ಪ್ರಬಲ ಸಾಮ್ರಾಜ್ಯದ ಬೆಳವಣಿಗೆ, ೧೫೬೫ರ ಅನಂತರ ಕೆಳದಿನಾಯಕರ ಪ್ರಾಬಲ್ಯ ಇವುಗಳಿಗೆ ಹೊಂದಿಕೆಯಾಗುತ್ತದೆ. ಕೆಳದಿ ಅರಸರ ಕಾಲದಲ್ಲಿ ಕ್ರೈಸ್ತರ ಚಟುವಟಿಕೆ ಚುರುಕಾಗಿತ್ತು. ಈ ರೀತಿಯಲ್ಲಿ ಕ್ರೈಸ್ತರ ಇತಿಹಾಸ ತುಂಬ ಪ್ರಮುಖವಾದದ್ದು, ಜೊತೆಗೆ ವಿಜಯನಗರ ಮತ್ತು ಕೆಳದಿ ಕಾಲದಲ್ಲಿ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕಂಡುಬಂದಿದ್ದ ಕ್ರೈಸ್ತರ ಅನೇಕ ಚಟುವಟಿಕೆಗಳ ವಿವಿಧ ಆಯಾಮಗಳನ್ನು

ಒಟ್ಟಿಗೆ ತರಲು ಈ ಅಧ್ಯಯನವು ಪ್ರಯತ್ನಿಸಲ್ಪಟ್ಟಿದೆ. ಇದು ಕೇವಲ ಧಾರ್ಮಿಕ ಅರ್ಥದಲ್ಲಿ ಅಥವಾ ಚರ್ಚೆಗಳ ಇತಿಹಾಸವೆಂಬ ಅರ್ಥದಲ್ಲಿ ಕ್ರೈಸ್ತ ಧರ್ಮದ ಅಧ್ಯಯನವಷ್ಟೇ ಅಲ್ಲ, ಅದಕ್ಕಿಂತ ಭಿನ್ನವಾದದ್ದು, ನಮ್ಮ ಭಾರತಕ್ಕೆ ಪೋರ್ಚ್‌ಗೀಸ್ ಕ್ರೈಸ್ತರು, ಡಚ್‌ಕ್ರೈಸ್ತರು, ಇಂಗ್ಲೀಷ್ ಕ್ರೈಸ್ತರು ಹಾಗೂ ಫ್ರೆಂಚ್ ಕ್ರೈಸ್ತರು ಎಂಬ ಹೆಸರಿನ ವಿದೇಶಿ ಕ್ರೈಸ್ತರು, ಕೆಲವು ವಿದ್ವಾಂಸರಿಗೆ ಇಲ್ಲಿ ಸಾಂಸ್ಕೃತಿಕವಾದ ವಾತಾವರಣದಲ್ಲಿ ಧರ್ಮವನ್ನು ನೆಲೆ ನಿಲ್ಲಿಸುವ ಕಾರಣಕ್ಕೆ, ಹಾಗೂ ತಮ್ಮಲ್ಲೆ ಭಿನ್ನ ರೀತಿಯ ಕ್ರೈಸ್ತರನ್ನು ತೋರಿಸುವ ಹುನ್ನಾರದ ಪ್ರತೀಕವಾಗಿ ಒಳಜಗಳಗಳು ನಡೆದು, ಸಮಕಾಲೀನ ಜಗತ್ತಿನಲ್ಲಿ ಕ್ರೈಸ್ತರನ್ನು ಅವರ ರಾಷ್ಟ್ರೀಯತೆ, ಕುಲ ಮತ್ತು ನೀತಿ, ನಿಯಮಗಳ ಬಗೆಗಳಿಂದ ವಿಭಾಗಿಸಿ ಗುರುತಿಸಲಾಗಿತ್ತು. ಪ್ರಸ್ತುತ ಅಧ್ಯಯನವು ಈ ಕ್ಷೇತ್ರದಲ್ಲಿನ ಇತರ ಕೃತಿಗಳಿಗಿಂತ ಒಂದು ರೀತಿಯಲ್ಲಿ ಭಿನ್ನವರಿದೇಳಬಹುದು. ಕಾರಣ ಲಲಿತಕಲೆಗಳಲ್ಲಿ ಪ್ರಮುಖವಾದ ಅಂಗಗಳಾದ ಚಿತ್ರಕಲೆ ಮತ್ತು ಶಿಲ್ಪಕಲೆಗಳ ಕುಶಲೋಪರಿಗಳನ್ನು ಮುಖ್ಯವಾಗಿಟ್ಟುಕೊಂಡು, ಕರಾವಳಿ ಕರ್ನಾಟಕದಲ್ಲಿನ ಕ್ರೈಸ್ತರ ಕುರಿತು ಹಾಗೂ ದೇವಾಲಯಗಳು, ಅದರೊಳಗಡಗಿರುವ ಚಿತ್ರ, ಬಿತ್ತಿಚಿತ್ರ, ಶಿಲ್ಪ ಮತ್ತು ಗಾಜಿನ ಮೇಲೆ ರಚಿಸಿರುವ ಕಲಾಕೃತಿಗಳ ಕುರಿತು ಚರ್ಚಿಸಿ ಒಂದೆಡೆ ಕ್ರೋಡೀಕರಿಸುವ, ಸಂಶೋದಿಸುವ ಕೆಲಸ ಪ್ರಮುಖವಾಗಿ ಈ ಅಧ್ಯಯನದ್ದಾಗಿದೆ.

ಅಭಿವ್ಯಕ್ತಿ ಪ್ರಧಾನವಾದ ಚಿತ್ರಕಲೆಯನ್ನು ಎರಡು ರೀತಿಗಳಿಂದ ಪರಿಗಣಿಸಬೇಕಾಗುತ್ತದೆ. ಈಗಾಗಲೇ ರಚಿತವಾಗಿರುವ ಚಿತ್ರಕಲಾಕೃತಿಗಳನ್ನು ಇರಿಸಿ, ಅವುಗಳ ಮೂಲಕ ಅಲ್ಲಿಯ ಸಂಸ್ಕೃತಿಯನ್ನು ನೋಡುವುದು ಒಂದಾದರೆ ಒಂದು ಜನಾಂಗದ ಆಚರಣೆಯ ಸಂದರ್ಭದಲ್ಲಿ ರಚಿತವಾಗುವ ಕಲಾಕೃತಿಗಳಿಂದ ಅಲ್ಲಿಯ ಸಂಸ್ಕೃತಿಯನ್ನು ಪರಿಶೀಲಿಸುವುದು ಇನ್ನೊಂದು ಎಂಬಂತೆ ಸಾಮಾಜಿಕ ಜೀವನದಲ್ಲಿ ಆ ಸಂದರ್ಭದಲ್ಲಿ ಪರಿಸರದಲ್ಲಿ ನಡೆದಿರುವ ಘಟನೆಗಳನ್ನು ಚಿತ್ರಗಳ ಮೂಲಕ ತೋರಿಸುವುದು ಪ್ರಸ್ತುತ ಇಂದಿನ ಸಮಾಜಕ್ಕೆ ಅನಿವಾರ್ಯವಾಗಿದೆ.

ಸಂಸ್ಕೃತಿಯ ಮೂಲಕ ಪ್ರಕಟಗೊಳ್ಳುವ ಉತ್ಪಾದಿಸಲ್ಪಡುವ ಕಲೆಯ ಕುರಿತಾದ ಲೇಖನಗಳು, ವ್ಯಾಖ್ಯಾನಗಳು, ಚಿತ್ರಗಳು ವಿವಿಧ ರೀತಿಯಲ್ಲಿವೆ. ಮುಖ್ಯವಾಗಿ ಕಲೆ ಎಂದರೇನು? ಎಂಬ ಪ್ರಶ್ನೆ ಜೀವನಕ್ಕೆ ಸರಿಸಮಾನವಾಗಿದ್ದು, ಈ ನಿಟ್ಟಿನಲ್ಲಿ ಪಾಶ್ಚಾತ್ಯ ಮತ್ತು ಪೌರಾತ್ಯ ಕಲಾ ವಿದ್ವಾಂಸರು ಕಲೆಯ ಕುರಿತು ಅನೇಕ ವ್ಯಾಖ್ಯಾನಗಳನ್ನು ಕೊಡುತ್ತಾ ಬಂದಿದ್ದಾರೆ. ಆದರೆ ಅದೆಷ್ಟರಮಟ್ಟಿಗೆ ಸರಿ ಎಂಬ ಊಹಾ ಪ್ರಶ್ನೆಗೆ ಪ್ರತಿಯಾಗಿ ಉತ್ತರವನ್ನು ಹುಡುಕಬೇಕಾಗಿದೆ.

ಭಿತ್ತಿ ಚಿತ್ರವನ್ನು ಒಂದು ದೇಶ ಬದ್ದ ಕಲೆ ಎಂದು ಗುರುತಿಸಲಾಗುತ್ತದೆ. ಅದರಂತೆಯೇ ಸಂಗೀತ ನಾಟಕಗಳನ್ನು ಕಾಲಬದ್ದ ಎಂದೂ ಗುರುತಿಸುತ್ತೇವೆ. ಚಲನಲರಹಿತವಾದ ಕಾಲಬದ್ಧವಾದ ಕಲೆಗಿಂತ ಪ್ರಭಾವಿ ಎಂಬುದನ್ನು ಪ್ರಪಂಚದಲ್ಲಿ ಪ್ರಮುಖ ಚಿತ್ರ ನೆಲೆಗಳನ್ನು ಆಧರಿಸಿ ಹೇಳಬಹುದಾಗಿದೆ. ಗ್ರೀಕ್ ಕವಿ ಪೋಚಾರ್ಕ್ ಅದಕ್ಕೆಂದೆ ಚಿತ್ರವನ್ನು ನಿಶ್ಯಬ್ಧವಾದ ಕವಿತೆ ಎಂದು ವರ್ಣಿಸುತ್ತಾನೆ.

ಒಂದು ಚಿತ್ರ ಒಬ್ಬೊಬ್ಬ ನೋಡುಗನಿಗೆ ವೈವಿಧ್ಯಮಯ ಅನುಭವವನ್ನು ನೀಡಬಹುದಾದ ಸಾಧ್ಯತೆಗಳೇ ಹೆಚ್ಚು. ಅದರಲ್ಲೂ ಇತ್ತೀಚೆಗೆ ಆಧುನಿಕ ಚಿತ್ರಗಳ ಒಲವು ವಿಭಿನ್ನ ಅನುಭವಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿದ್ದು ನಮ್ಮ ಪ್ರಾಚೀನ ಚಿತ್ರಕಲೆಯ ಸ್ವರೂಪ ಇಂದು ಇಲ್ಲದಿದ್ದರೂ ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾ ಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ ಪುನರಾವರ್ತಿಸಿಕೊಳ್ಳುತ್ತವೆ. ಅದು ಹೇಗೆಂದರೆ ನಮ್ಮ ನಡುವಿನ ಆಧುನಿಕೋತ್ತರ ಕಲಾ ಚಳುವಳಿಯಲ್ಲಿ ಪ್ರಕಟಗೊಳ್ಳುತ್ತಿರುವ ಚಿತ್ರಗಳಲ್ಲಿ ಪ್ರಾಚೀನ ಎನ್ನುವಂತಹ ಸಾಂಪ್ರದಾಯಿಕ ರೂಪಾಂಶಗಳು ವಿಕೃತತೆಯ ರೂಪದಲ್ಲಿ ಆಧುನಿಕ ಸಂವೇದನೆಗಳನ್ನು ಹೊತ್ತು ಬರುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದಾಗಿದೆ.

ಭಾರತೀಯ ಚಿತ್ರಕಲೆಯಲ್ಲಿ ಪ್ರಧಾನವಾದ ಎರಡು ಭಾಗಗಳನ್ನು ಮಾಡಬಹುದು. ಭಿತ್ತಿ ಚಿತ್ರಗಳು ಮತ್ತು ಚಿಕ್ಕ ಪ್ರತಿಯ ಚಿತ್ರಗಳು ಅಥವಾ ಪ್ರತಿ ಚಿತ್ರಗಳು ಎಂದು ಇವನ್ನು ಕರೆಯಬಹುದು. ನಮಗೆ ದೊರೆತಿರುವ ಪ್ರಾಚೀನ ಚಿತ್ರಗಳೆಲ್ಲಾ ಮುಖ್ಯವಾಗಿ ಭಿತ್ತಿಚಿತ್ರಗಳೇ ಅಜಂತಾ, ಎಲ್ಲೋರಾ, ಬದಾಮಿ ಗುಹೆಗಳ ಚಿತ್ರಗಳು, ವಿಜಯ ನಗರ, ಲೇಪಾಕ್ಷಿ ಮೊದಲಾದ ಕಡೆಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇವೆಲ್ಲವು ಇತಿಹಾಸದಿಂದ ಕಂಡಂತಹ ಪ್ರಾಚೀನ ಚಿತ್ರಗಳೆಂದೇ ಕರೆಯಬಹುದು. ಹಾಗೆಯೇ ಮುಂದುವರೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕ್ರೈಸ್ತ ಧರ್ಮದ ಚರ್ಚ್‌ಗಳಲ್ಲಿ ವಿವಿಧ ರೀತಿಯ ಚಿತ್ರಕಲೆಗಳನ್ನು ರಚಿಸಲು ಪ್ರಾರಂಭಿಸಿದರು. ಮುಖ್ಯವಾದ ಕೆಲವು ಹಿರಿಯ ಚರ್ಚ್‌ಗಳಲ್ಲಿ ಇಟಾಲಿಯನ್ ಶೈಲಿಯ ಗೋಡೆವರ್ಣ ಚಿತ್ರವನ್ನು ರಚಿಸಲಾಗಿದ್ದು, ಅವು ೧೮೯ರ ನಂತರ ಜೊತೆಗೆ ಸಂಯೋಜನಾ ಚಿತ್ರಗಳು, ಬಟ್ಟೆಮಾಧ್ಯಮದ ಚಿತ್ರಗಳನ್ನು ರಚನೆಮಾಡಿದ್ದಾರೆ. ಪ್ರಮುಖವಾಗಿ ಭಿತ್ತಿ ಚಿತ್ರಗಳಲ್ಲಿ ಎರಡು ರೀತಿಯದ್ದಾಗಿ ಪರಿಗಣಿಸಿದೆ. ಅದು ಹದಿನೈದನೇಯ ಶತಮಾನದ ಹಿಂದಿನ ದಿನಮಾನಗಳಲ್ಲಿ ಭಿತ್ತಿ ಚಿತ್ರಗಳನ್ನು ಗೋಡೆಯ ಮೇಲೆ ರಚಿಸುತ್ತಿದ್ದರು. ಆದರೆ ಸಿಮೆಂಟ್ ಮಾಡಿದ ಹಸಿಗೋಡೆಯ ಮೇಲೆ ರೇಖೆಗಳನ್ನು ಗುರುತಿಸಿ, ನಂತರದಲ್ಲಿ ಬಣ್ಣವನ್ನು ತುಂಬುತ್ತಿದ್ದರು. ಹಾಗೆಯೇ ಒಣಗಿದ ಗಾರೆಯ ಗೋಡೆಯ ಮೇಲೆ ರೇಖೆಗಳನ್ನು ಮೊದಲು ಚಿತ್ರಿಸಿ ನಂತರ ಪೌಡರನ್ನು ಹಾಕಿ ಬಣ್ಣಗಳಿಂದ ಪೂರ್ಣಗೊಳಿಸುತ್ತಿದ್ದರು.

೧೯ನೇ ಶತಮಾನದ ಕೊನೆಯ ಭಾಗದಲ್ಲಿ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅನೇಕ ಕ್ರೈಸ್ತ ಧರ್ಮದ ದೇವಾಲಯಗಳಲ್ಲಿ ಭಿತ್ತಿ(ಗೋಡೆ)ಯ ಮೇಲೆ ತೈಲವರ್ಣದಿಂದ ಚಿತ್ರವನ್ನು ರಚನೆಮಾಡಲಾಗಿದೆ. ಇಂದಿಗೂ ಸೆಂಟ್ ಅಲೋಷಿಯಸ್ ಚರ್ಚ್, ಕುಲಶೇಖರ ಚಚ್, ಕೇಥಡ್ರಲ್, ಸೆಂಟ್ ಥಾಮಸ್ ಚರ್ಚ್ ಹೋಳಿಕ್ರಾಸ್ ಚರ್ಚ್, ದಿ ಅವರ್ ಲೇಡಿ ಆಫ್ ಚರ್ಚ್, ಸೆಂಟ್ ಪೀಟರ್ಸ್ ಚರ್ಚ್, ರೋಸರಿ ದಿ. ಅವರ್ ಲೇಡಿ ಆಫ್ ಚರ್ಚ್ ಮಂಗಳೂರು. ಹಾಗೂ ಕಾರವಾರ ಜಿಲ್ಲೆಯಸುತ್ತಮುತ್ತ ಅನೇಕ ಚರ್ಚ್‌ಗಳಿದ್ದರೂ ಕೆಲವೇ ಕೆಲವು ಕ್ರೈಸ್ತ ದೇವಾಲಯಗಳಲ್ಲಿ ಮಾತ್ರ ಭಿತ್ತಿ(ಗೋಡೆ)ಯ ಮೇಲೆ ರಚಿಸಿರುವ ಚಿತ್ರಕೃತಿಗಳನ್ನು,

ಕಾಣಬಹುದಾಗಿದೆ.

ಕ್ರೈಸ್ತ ಧರ್ಮದ ಆದ್ಯಪ್ರವರ್ತಕನಿಂದ ಯೇಸುವಿನ ಕುರಿತು ಅನೇಕ ಚಿತ್ರಕೃತಿಗಳನ್ನು ರಚನೆಮಾಡಲಾಗಿದೆ. ಹಾಗೆಯೇ ದೇವಮಾನವರು, ಪಾದ್ರಿಗಳು, ಹನ್ನೆರಡು ಮಂದಿ ಶಿಷ್ಯಂದಿರರು, ದೇವಾಲಯಕ್ಕೆ ಸಹಾಯ ನೀಡಿದವುರು, ಕಂಬಗಳಲ್ಲಿ ಭಿತ್ತಿಚಿತ್ರ, ಚಿತ್ರವಿನ್ಯಾಸಗಳು ಹೀಗೆ ವಿವಿಧ ಆಯಾಮಗಳಲ್ಲಿ ಭಿತ್ತಿ ಚಿತ್ರಗಳನ್ನು ರಚನೆ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕರಾವಳಿ ಭಾಗಕ್ಕೆ ಇಟಲಿಯ ಪ್ರಸಿದ್ಧ ಕಲಾವಿದ ಆಂಟೋನಿಯಾ ಮಾಶ್ಚಿನಿಯು ೧೯೪೯ರಲ್ಲಿ ಬಂದು ಭಿತ್ತಿಚಿತ್ರ, ತೈಲಚಿತ್ರ ಹೀಗೆ ವಿವಿಧ ಆಯಾಮಗಳಲ್ಲಿ ಕಾಲಿಗೋಡೆಗೆ ಧರ್ಮದ ಪ್ರಚಾರಮಾಡುವ ಉದ್ದೇಶದಿಂದ ಕಲಾ ಕೃತಿಗಳನ್ನು ರಚನೆಮಾಡಿದನು. ಅವು ಇಂದಿಗೂ ಅಚ್ಚಳಿಯದೆ ಉಳಿದಿವೆ.

ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ, ಸುಣ್ಣವು ಇನ್ನೂ ಹಸಿಯಾಗಿರುವಾಗಲೇ ಚಿತ್ರವನ್ನು ಸಂಪೂರ್ಣವಾಗಿ ಚಿತ್ರಿತವಾಗಿರುವಂತೆ ಪ್ರೇಸ್ಕೋ ಪದ್ಧತಿಯ ವೈಶಿಷ್ಯವಾಗಿದೆ. ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವು ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಪ್ರೇಸ್ಕೊ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿರುತ್ತವೆ. ಇದರ ಜೊತೆಗೆ ಗೋಡೆಗಳಿಗೆ ಬಣ್ಣ ಹಚ್ಚುವ ವಿಧಾನಗಳು ಅನೇಕ ತೈಲವರ್ಣ ಮತ್ತು ಮೇಣದ ವರ್ಣಗಳನ್ನು ಸಹ ಬಳಸಬಹುದೆಂಬುದಕ್ಕೆ ಸಾಕ್ಷಿ ವೆನಿಸ್ ಮತ್ತು ಇತರೆ ಅನೇಕ ಕಡೆಗಳಲ್ಲಿ ಬಟ್ಟೆಯ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೆ ಒಳಮಾಳಿಗೆಯಲ್ಲಿ ಅಂಟಿಸಿರುವುದು ಕಂಡುಬರುತ್ತದೆ. ಸುಣ್ಣವು ಹಸಿಯಾಗಿರುವಾಗಲೇ ಚಿತ್ರಕರಣ ಕಾರ್ಯವು ಮುಗಿಯಲೇ ಬೇಕಾಗಿರುವುದರಿಂದ ಈ ಪದ್ದತಿಯು ತುಂಬಾ ಕಠಿಣವಾಗಿದ್ದು, ಚಿತ್ರಣ ಕಾರ್ಯವು ಸಾಧ್ಯವಾಗುವ ಮಟ್ಟಿಗೆ ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ ಅದರ ಮೇಲೆ ತೈಲವರ್ಣದಿಂದ ಚಿತ್ರರಚನೆ ಮಾಡಬಹುದಾಗಿದೆ.

ಸುತ್ತಮುತ್ತ ಅನೇಕ ಚರ್ಚ್‌ಗಳಿದ್ದರೂ ಕೆಲವೇ ಕೆಲವು ಕ್ರೈಸ್ತ ದೇವಾಲಯಗಳಲ್ಲಿ ಮಾತ್ರ ಭಿತ್ತಿ(ಗೋಡೆ)ಯ ಮೇಲೆ ರಚಿಸಿರುವ ಚಿತ್ರ ಕೃತಿಗಳನ್ನು ಕಾಣಬಹುದಾಗಿದೆ. ಕ್ರೈಸ್ತ ಧರ್ಮದ ಆದ್ಯಪ್ರವರ್ತಕನಿಂದ ಯೇಸುವಿನ ಕುರಿತು ಅನೇಕ ಚಿತ್ರ ಕೃತಿಗಳನ್ನು ರಚನೆಮಾಡಲಾಗಿದೆ. ಹಾಗೆಯೇ ದೇವಮಾನವರು, ಪಾದ್ರಿಗಳು, ಹನ್ನೆರಡು ಮಂದಿ ಶಿಷ್ಯಂದಿರರು, ದೇವಾಲಯಕ್ಕೆ ಸಹಾಯ ನೀಡಿದವುರು, ಕಂಬಗಳಲ್ಲಿ ಭಿತ್ತಿಚಿತ್ರ, ಚಿತ್ರವಿನ್ಯಾಸಗಳು ಹೀಗೆ ವಿವಿಧ ಆಯಾಮಗಳಲ್ಲಿ ಭಿತ್ತಿ ಚಿತ್ರಗಳನ್ನು ರಚನೆ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕರಾವಳಿ ಭಾಗಕ್ಕೆ ಇಟಲಿಯ ಪ್ರಸಿದ್ಧ ಕಲಾವಿದ ಆಂಟೋನಿಯಾ ಮಾಶ್ಚಿನಿಯು ೧೯೪೯ರಲ್ಲಿ ಬಂದು ಭಿತ್ತಿಚಿತ್ರ, ತೈಲಚಿತ್ರ ಹೀಗೆ ವಿವಿಧ ಆಯಾಮಗಳಲ್ಲಿ ಕಾಲಿಗೋಡೆಗೆ ಧರ್ಮದ

ಪ್ರಚಾರಮಾಡುವ ಉದ್ದೇಶದಿಂದ ಕಲಾ ಕೃತಿಗಳನ್ನು ರಚನೆಮಾಡಿದನು. ಅವು ಇಂದಿಗೂ ಅಚ್ಚಳಿಯದೆ ಉಳಿದಿವೆ. ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ, ಸುಣ್ಣವು ಇನ್ನೂ ಹಸಿಯಾಗಿರುವಾಗಲೇ ಚಿತ್ರವನ್ನು ಸಂಪೂರ್ಣವಾಗಿ ಚಿತ್ರಿತವಾಗಿರುವಂತೆ ಪ್ರೇಸ್ಕೋ ಪದ್ಧತಿಯ ವೈಶಿಷ್ಯವಾಗಿದೆ. ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವು ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಪ್ರೇಸ್ಕೊ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿರುತ್ತವೆ. ಇದರ ಜೊತೆಗೆ ಗೋಡೆಗಳಿಗೆ ಬಣ್ಣ ಹಚ್ಚುವ ವಿಧಾನಗಳು ಅನೇಕ ತೈಲವರ್ಣ ಮತ್ತು ಮೇಣದ ವರ್ಣಗಳನ್ನು ಸಹ ಬಳಸಬಹುದೆಂಬುದಕ್ಕೆ ಸಾಕ್ಷಿ ವೆನಿಸ್ ಮತ್ತು ಇತರೆ ಅನೇಕ ಕಡೆಗಳಲ್ಲಿ ಬಟ್ಟೆಯ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೆ ಒಳಮಾಳಿಗೆಯಲ್ಲಿ ಅಂಟಿಸಿರುವುದು ಕಂಡುಬರುತ್ತದೆ. ಸುಣ್ಣವು ಹಸಿಯಾಗಿರುವಾಗಲೇ ಚಿತ್ರಕರಣ ಕಾರ್ಯವು ಮುಗಿಯಲೇ ಬೇಕಾಗಿರುವುದರಿಂದ ಈ ಪದ್ದತಿಯು ತುಂಬಾ ಕಠಿಣವಾಗಿದ್ದು, ಚಿತ್ರಣ ಕಾರ್ಯವು ಸಾಧ್ಯವಾಗುವ ಮಟ್ಟಿಗೆ ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ ಅದರ ಮೇಲೆ ತೈಲವರ್ಣದಿಂದ ಚಿತ್ರರಚನೆ ಮಾಡಬಹುದಾಗಿದೆ.

ಈ ಪ್ರಾರ್ಥನಾ ಮಂದಿರದ ಮುಂಭಾಗ, ಮೇಲ್ಛಾವಣಿ ಹಾಗೂ ಅಕ್ಕಪಕ್ಕಗಳಲ್ಲಿ ಭಿತ್ತಿಚಿತ್ರ ಹಾಗೂ ಬಟ್ಟೆ ಮೇಲೆ ರಚಿಸಿರುವ ಕ್ರೈಸ್ತ ಧರ್ಮದ ರೂವಾರಿಗಳು, ಪಾದ್ರಿಗಳು, ದೇವದೂತರು, ಯೇಸುವಿನ ಹನ್ನೆರಡು ಮಂದಿ ಶಿಷ್ಯಂದಿರರು ಹಾಗೂ ಯೇಸುವಿನ ಪವಾಡಗಳು, ಯೇಸುವಿಗೆ ಚಿತ್ರಹಿಂಸೆ ಕೊಡುತ್ತಿರುವ ವಿರೋಧಿಗಳು, ತಾಯಿ, ತಂದೆಯ ಜೊತೆ ಯೇಸು, ಮೇರಿ ಮತ್ತು ಯೇಸು, ಅಲೋಷಿಯಸ್ ಬೋಧನೆ ಮಾಡುತ್ತಿರುವುದು. ಜ್ಞಾನ ಸ್ನಾನ, ನೀರನ್ನು ದ್ರಾಕ್ಷಿರಸ ಮಾಡಿದ ಸನ್ನಿವೇಶ, ಯೇಸುವು ಜನರಿಗೆ ಮಕ್ಕಳ ಕುರಿತು ಅರಿವು ಮೂಡಿಸುವುದು. ಗಾಡ್ ಆಫ್ ದ ಫಾದರ್, ಕಪ್ಪು, ಅಲೋಷಿಯಸ್‌ನು ಅಧಿಕಾರವನ್ನು ತ್ಯಾಗಮಾಡುತ್ತಿರುವುದು. ಹೀಗೆ ನೂರಾರು ಚಿತ್ರಗಳನ್ನು ಈ ಪ್ರಾರ್ಥನ ಮಂದಿರದ ಮುಂಭಾಗದಲ್ಲಿ ಕಾಣಬಹುದಾಗಿದೆ. ಇಲ್ಲಿನ ಕಂಬಗಳಲ್ಲಿಯು ಭಿತ್ತಿಯ ಚಿತ್ರಕಲೆ ಇರುವುದನ್ನು ಕಾಣಬಹುದಾಗಿದ್ದು, ಕಿಟಕಿಗಳಲ್ಲಿ ಸ್ಟೈನ್ಡ್ ಗ್ಲಾಸ್‌ಗಳನ್ನು ಹೊಂದಿಸಲಾಗಿದ್ದು, ಅವುಗಳಲ್ಲಿಯು ಚಿತ್ರರಚನೆಮಾಡಿರುವುದನ್ನು ಕಾಣಬಹುದಾಗಿದೆ.

ಈ ಚರ್ಚ್‌ನ ಒಳಬಾಗಿಲಿನಿಂದ ಫಾದರ್‌ಗಳು ಅಥವಾ ಗಾಯಕರು ಕೋರುವ ಸ್ಥಳದವರೆಗೂ ಒಂದು ಮಧ್ಯಂಕಣ ಎರಡು ಅಥವಾ ನಾಲ್ಕು ಇಕ್ಕೆಲದ ಹಜಾರಗಳು ಅರ್ಧವೃತ್ತಾಕಾರದ ಉಚ್ಚಸ್ಥಾನಗಳಲ್ಲದೇ ಕೆಲವೊಮ್ಮೆ ಶಿಲುಬೆಯಾಕಾರದ ಅಷ್ಟಭಾಗ ದೇವಾಲಯದ ಮುಖಮಂಟಪದ ತೊಟ್ಟಿಯ ಬಳಿ ಅಂತಸ್ತುಳ್ಳ ಅರ್ಧವೃತ್ತಾಕಾರದ ಉಚ್ಛಾಸಗಳ ಮೇಲೆ ಮಾತ್ರ ಗುಮ್ಮಟಾಕಾರದ ಛಾವಣಿ ಇದ್ದು, ಈ ಕಟ್ಟಡಗಳಲ್ಲಿ ಬೀದಿಯ ಕಡೆಗಿರುವ ಮುಂಭಾಗ ಮತ್ತು ಗೋಡೆಯ ಕಂಭಗಳ ಮುಖಮಂಟಪಗಳ ಮೇಲೆ ತ್ರಿಕೋನಾಕೃತಿಯ ರಚನೆಯ ಅಲಂಕಾರ ಇತ್ಯಾದಿಗಳನ್ನು ಈ ಸಂದರ್ಭಗಳಲ್ಲಿ ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳಲಾಗಿದೆ. ಮುಂದಿನ ಬಲಬದಿಯಲ್ಲಿ

ಬಲಿಪೀಠವನ್ನು ಕತ್ತಲೆ ಇರುವುದರ ಕಾರಣ ಸಿಗುವುದಿಲ್ಲ. ಜೊತೆಗೆ ಈ ಕಟ್ಟಡಗಳು, ಮಧ್ಯಂಗಣ, ಮುಂಭಾಗದಲ್ಲಿ ಜೊಡಣೆ ಭೋದಿಕೆಗಳಿಂದ ಕೂಡಿದೆ. ಕಂಭ ಸಾಲುಗಳ ಸೇರ್ಪಡೆಗಳಿಂದ ಆಕಾರ ಹಾಗೂ ವಿಸ್ತರಣೆಗಳಲ್ಲಿ ಅಸಮರೂಪವನ್ನು ತಾಳಿದವು. ಕ್ರಮೇಣ ಅಸಮರೂಪ ರಚನೆ ಒಂದು ಶೈಲಿಯಾಗಿ ಉಳಿಯಿತು. ಹಾಗೆಯೇ ಮೇಲಿನ ಛಾವಣಿ, ಕಂಬಗಳು, ಗೋಡೆಗಳ ಎಲ್ಲಾ ಕಡೆಗಳಲ್ಲಿಯೂ ಕೂಡ ಚಿತ್ರವಿನ್ಯಾಸಗಳನ್ನು ಕಾಣಬಹುದು. ಕರಾವಳಿ ಕರ್ನಾಟಕದಲ್ಲಿರುವ ಅತಿ ದೊಡ್ಡ ಚರ್ಚ್ ಸೆಂಟ್ ಅಲೋಷಿಯಸ್ ಎಂದೇಳಬಹುದು. ವಿಶೇಷವಾಗಿ ಚಿತ್ರಕಲೆಯ ಆಗರವನ್ನೊತ್ತಿರುವುದು[೧೫] ಕ್ರೈಸ್ತಧರ್ಮದ ಭಿತ್ತಿಚಿತ್ರಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಭಿತ್ತಿ ಚಿತ್ರಗಳ ವಸ್ತುವಿಷಯ :

ಚಿತ್ರ–೧ : ಪ್ರಾರ್ಥನಾ ಮಂದಿರ : ಮಂಗಳೂರಿನ ಸೆಂಟ್ ಅಲೋಶಿಯಸ್ ಕ್ರೈಸ್ತ ಚರ್ಚಿನ ಮುಖ್ಯ ದ್ವಾರಬಾಗಿಲಿನಿಂದ ಹೋಗುವ ಮಧ್ಯದ ದಾರಿಯಲ್ಲಿ ಈ ಧರ್ಮದ ದೇವದೂತರಾದ ಯೇಸುವಿನ ಮೂರ್ತಿಯು ಕಂಡುಬರುತ್ತಿದ್ದು, ಜೊತೆಗೆ ಪ್ರಾರ್ಥನ ಮಂದಿರದಲ್ಲಿ ಸೆಂಟ್ ಅಲೊಷಿಯಸ್‌ನ ಮೂರ್ತಿಯನ್ನು ಪ್ರತಿಷಾವಿಪಿಸಲಾಗಿದೆ. ಎಡ ಮತ್ತು ಬಲ ಭಾಗದಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ. ಸಂತ ಎಲೋಷಿಯಸ್ ಇರುವ ಮೂರ್ತಿಯ ಕೆಳಗೆ ನಾಲ್ಕು ವ್ಯಕ್ತಿಗಳ ಶಿಲ್ಪಗಳಿರುವುದನ್ನು ಕಾಣಬಹುದು. ಭಿತ್ತಿ ಚಿತ್ರಗಳು ಶಿಲ್ಪಗಳಂತೆ ಕಂಡರೂ ಇಲ್ಲಿ ಶಿಲ್ಪಗಳು ತುಂಬಾ ಕಡಿಮೆ ಕಲಾಕೃತಿಗಳ ಆಗರದಂತಿರುವ ಈ ಚರ್ಚ್‌ನಲ್ಲಿ ಸೌಂದರ್ಯ ತುಂಬಿದೆ. ಅದಕ್ಕೆ ಕಾರಣ ಇಲ್ಲಿನ ಆಡಳಿತ ಪ್ರಮುಖವಾಗಿ ಗೋಡೆಗಳ ಮೇಲೆ ಭಿತ್ತಿ ಚಿತ್ರಗಳು ಅಲ್ಪ ಮಟ್ಟಕ್ಕೆ ಮಾಸಿರುವುದು. ಶತಮಾನಗಳು ಕಳೆದೆ ಹೋಗಿರುವುದರಿಂದ, ಆದರೆ ಕೆಲವೇ ದಿನಗಳ ಹಿಂದೆ ಎಲ್ಲಾ ಕಲಾಕೃತಿಗಳನ್ನು ಇಳಿಸಿ, ಮೈ ಒರೆಸುವುದರೊಂದಿಗೆ ಕಿತ್ತು ಹೋಗಿರುವಂತಹ ಕಲಾಕೃತಿಗಳಿಗೆ ಜೋಡಣೆಮಾಡಿರುವುದು ಹಾಗೆಯೇ ಶತಮಾನಗಳ ಕಲಾಕೃತಿಗಳೂ ದಶಕದ ರೀತಿ ಗೋಚರಿಸುತ್ತಿವೆ.

ಈ ಪ್ರಾರ್ಥನಾ ಮಂದಿರದ ಮುಂಭಾಗ, ಮೇಲ್ಛಾವಣಿ ಹಾಗೂ ಅಕ್ಕಪಕ್ಕಗಳಲ್ಲಿ ಭಿತ್ತಿಚಿತ್ರ ಹಾಗೂ ಬಟ್ಟೆ ಮೇಲೆ ರಚಿಸಿರುವ ಕ್ರೈಸ್ತ ಧರ್ಮದ ರೂವಾರಿಗಳು, ಪಾದ್ರಿಗಳು, ದೇವದೂತರು, ಯೇಸುವಿನ ಹನ್ನೆರಡು ಮಂದಿ ಶಿಷ್ಯಂದಿರರು ಹಾಗೂ ಯೇಸುವಿನ ಪವಾಡಗಳು, ಯೇಸುವಿಗೆ ಚಿತ್ರ ಹಿಂಸೆಕೊಡುತ್ತಿರುವ ವಿರೋಧಿಗಳು ತಾಯಿ ಮತ್ತು ತಂದೆಯ ಜೊತೆ, ಯೇಸು, ಮೇರಿ ಮತ್ತು ಯೇಸು, ಅಲೋಷಿಯಸ್ ಬೋಧನೆ ಮಾಡುತ್ತಿರುವುದು. ಜ್ಞಾನ ಸ್ನಾನ, ನೀರನ್ನು ದ್ರಾಕ್ಷಿರಸ ಮಾಡಿದ ಸನ್ನಿವೇಶ, ಯೇಸುವು ಜನರಿಗೆ ಮಕ್ಕಳ ಕುರಿತು ಅರಿವು ಮೂಡಿಸುವುದು. ಗಾಡ್ ಆಫ್ ದ ಫಾದರ್, ಕಪ್ಪು ಅಲೋಷಿಯಸ್‌ನು ಅಧಿಕಾರವನ್ನು ತ್ಯಾಗಮಾಡುತ್ತಿರುವುದು. ಹೀಗೆ ನೂರಾರು ಚಿತ್ರಗಳನ್ನು ಈ ಪ್ರಾರ್ಥನ ಮಂದಿರದ ಮುಂಭಾಗದಲ್ಲಿ ಕಾಣಬಹುದಾಗಿದೆ. ಇಲ್ಲಿನ ಕಂಬಗಳಲ್ಲಿಯು ಭಿತ್ತಿಯ ಚಿತ್ರಕಲೆ ಇರುವುದನ್ನು ಕಾಣಬಹುದಾಗಿದ್ದು, ಕಿಟಕಿಗಳಲ್ಲಿ ಸ್ಟೈನ್ಡ್

ಗ್ಲಾಸ್‌ಗಳನ್ನು ಹೊಂದಿಸಲಾಗಿದ್ದು, ಅವುಗಳಲ್ಲಿಯು ಚಿತ್ರರಚನೆ ಮಾಡಿರುವುದನ್ನು ಕಾಣಬಹುದಾಗಿದೆ.

ಈ ಚರ್ಚ್‌ನ ಒಳಬಾಗಿಲಿನಿಂದ ಫಾದರ್‌ಗಳು ಅಥವಾ ಗಾಯಕರು ಕೋರುವ ಸ್ಥಳದವರೆಗೂ ಒಂದು ಮಧ್ಯಂಕಣ ಎರಡು ಅಥವಾ ನಾಲ್ಕು ಇಕ್ಕೆಲದ ಹಜಾರಗಳು ಅರ್ಧವೃತ್ತಾಕಾರದ ಉಚ್ಛಸ್ಥಾನಗಳಲ್ಲದೇ ಕೆಲವೊಮ್ಮೆ ಶಿಲುಬೆಯಾಕಾರದ ಅಷ್ಟಭಾಗ ದೇವಾಲಯದ ಮುಖಮಂಟಪದ ತೊಟ್ಟೆಯ ಬಳಿ ಅಂತಸ್ತುಳ್ಳ ಅರ್ಧವೃತ್ತಾಕಾರದ ಉಬ್ಬಾಸಗಳ ಮೇಲೆ ಮಾತ್ರ ಗುಮ್ಮಟಾಕಾರದ ಛಾವಣಿ ಇದ್ದು, ಈ ಕಟ್ಟಡಗಳಲ್ಲಿ ಬೀದಿಯ ಕಡೆಗಿರುವ ಮುಂಭಾಗ ಮತ್ತು ಗೋಡೆಯ ಕಂಭಗಳ ಮುಖಮಂಟಪಗಳ ಮೇಲೆ ತ್ರಿಕೋನಾಕೃತಿಯ ರಚನೆಯ ಅಲಂಕಾರ ಇತ್ಯಾದಿಗಳನ್ನು ಈ ಸಂದರ್ಭಗಳಲ್ಲಿ ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳಲಾಗಿದೆ. ಮುಂದಿನ ಬಲಬದಿಯಲ್ಲಿ ಬಲಿಪೀಠವನ್ನು ಕತ್ತಲೆ ಇರುವುದರ ಕಾರಣ ಸಿಗುವುದಿಲ್ಲ. ಜೊತೆಗೆ ಈ ಕಟ್ಟಡಗಳು, ಮಧ್ಯಂಗಣ, ಮುಂಭಾಗದಲ್ಲಿ ಜೊಡಣೆ ಭೋದಿಕೆಗಳಿಂದ ಕೂಡಿದೆ. ಕಂಭ ಸಾಲುಗಳ ಸೇರ್ಪಡೆಗಳಿಂದ ಆಕಾರ ಹಾಗೂ ವಿಸ್ತರಣೆಗಳಲ್ಲಿ ಅಸಮರೂಪವನ್ನು ತಾಳಿದವು. ಕ್ರಮೇಣ ಅಸಮರೂಪ ರಚನೆ ಒಂದು ಶೈಲಿಯಾಗಿ ಉಳಿಯಿತು. ಹಾಗೆಯೇ ಮೇಲಿನ ಛಾವಣಿ, ಕಂಬಗಳು, ಗೋಡೆಗಳ ಎಲ್ಲಾ ಕಡೆಗಳಲ್ಲಿಯೂ ಕೂಡ ಚಿತ್ರವಿನ್ಯಾಸಗಳನ್ನು ಕಾಣಬಹುದು. ಕರಾವಳಿ ಕರ್ನಾಟಕದಲ್ಲಿರುವ ಅತಿ ದೊಡ್ಡ ಚರ್ಚ್ ಸೆಂಟ್ ಅಲೋಷಿಯಸ್ ಎಂದೇಳಬಹುದು. ವಿಶೇಷವಾಗಿ ಚಿತ್ರಕಲೆಯ ಆಗರವನ್ನೊತ್ತಿರುವುದು ಈ ದೇವಾಲಯದಲ್ಲಿನ ೮ ದಿಕ್ಕುಗಳಲ್ಲಿಯೂ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ.

ಚಿತ್ರ–೨: ಯೇಸುವಿನ ಜನನ : ಮಂಗಳೂರಿನ ಕೆಥೋಡ್ರಾಲ್‌ನಲ್ಲಿರುವ ಈ ಕಲಾಕೃತಿಯು ಸುಮಾರು ೧೦*೮ ಅಡಿ ಎತ್ತರವಿದ್ದು, ಭಿತ್ತಿ ಮಾಧ್ಯಮದ ಚಿತ್ರವಾದ್ದರಿಂದ ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಕ್ರಿಸ್ ಮಸ್ ದಿನದ ರಾತ್ರಿಯ ವೇಳೆಯಲ್ಲಿ ಧನದ ಕೊಟ್ಟಿಗೆಯಲ್ಲಿ ಯೇಸುವಿನ ಜನನವಾಯಿತು. ಈ ಕಲಾಕೃತಿಯಲ್ಲಿ ಸಂಯೋಜನೆ ಪ್ರಕಾಶಮಾನವಾದ ಬೆಳಕು ಹೊರಹೊಮ್ಮುತ್ತಿರುವುದು ಕಂಡುಬರುತ್ತದೆ. ಕೊಟ್ಟಿಗೆಯ ಒಳಗೆ ಮೇರಿಯು ತನ್ನ ಚೊಚ್ಚಲ ಮಗುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಿರುವ ದೃಶ್ಯವು ಸ್ಪಷ್ಟವಾಗಿದ್ದು, ರಾತ್ರಿ ವೇಳೆಯಲ್ಲಿ ಜನನವಾಗಿರುವಂತೆ ಸುತ್ತಲು ಕತ್ತಲು ಆವರಿಸಿರುವುದು ಸ್ಪಷ್ಟವಾಗಿ ರಾತ್ರಿಯಲ್ಲೆ ಜನನವಾಗಿದ್ದೆಂದೆಳಬಹುದು. ಸುತ್ತಲು ಕತ್ತಲಿದ್ದು, ಮೇರಿ ಮತ್ತು ಮಗು ಯೇಸುವಿಗೆ ಮಾತ್ರ ಪ್ರಕಾಶಮಾನದ ಅರಿವಿದ್ದಂತಿದೆ ಮೇರಿಯ ಹಿಂಬದಿಯಲ್ಲಿ ಒಬ್ಬ ಮುದುಕ ಕೈ ಜೋಡಿಸಿ ಮತ್ತು ಕೈಯಲ್ಲಿ ಕೋಲು ಹಿಡಿದು ನಿಂತಿರುವುದನ್ನು ಕಾಣಬಹುದು. ಎಲ್ಲರೂ ಆಸ್ಚರ್ಯವಾಗಿ ಯೇಸುವನ್ನು ನೋಡುತ್ತಿದ್ದು, ಮೇಲಿನ ಛಾವಣಿಯು ಕೆಂಪು ಮೋಡಗಳಂತೆ ಕಂಡು, ಜಂಕಿಯಂತೆ ಝುಳಪಿಸುತ್ತಿದೆ. ಅದಕ್ಕಾಗಿ ಕಲಾವಿದನು ಕೆಂಪು ಮಿಶ್ರಿತ, ಚಾಂಬಳಿ ಕಪ್ಪು ಬಣ್ಣವನ್ನು ಲೇಪಿಸಲಾಗಿದೆ. ಯೇಸುವಿನ ತಂದೆ ಜೋಸೆಫ್ ತುಂಬಾ ಗಂಭೀರವಾಗಿ ಮಗುವನ್ನು ವೀಕ್ಷಿಸುತ್ತಿದ್ದಾರೆ.

ಬಿಳಿ, ನೀಲಿ, ಕಪ್ಪು, ಹಳದಿ, ಆಕಾರ್ ಎಲ್ಲೊ ಮುಂತಾದ ಬಣ್ಣಗಳ ಜೊತೆಗೆ ನೆರಳು ಬೆಳಕನ್ನು ಸೂಕ್ಷ್ಮವಾಗಿ ತೋರಿಸಿ ನೋಡುಗರ ಮನಗೆದ್ದಿರುವುದಂತೂ ನಿಜ. ಈ ಕಲಾಕೃತಿಯನನು ಆಂಟೋನಿ ಮೋಶ್ಚಿನಿಯು ೧೮೯೯ರಲ್ಲಿ ಕಲಾಕೃತಿಯನ್ನು ಚಿತ್ರಿಸಿದ್ದಾನೆ.

ಚಿತ್ರ–೩: ಸ್ವರ್ಗಕ್ಕೆ ಹಾರುತ್ತಿರುವ ಯೇಸು : ಈ ಕಲಾಕೃತಿಯನ್ನು ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿತವಾಗಿದ್ದು, ಭೂಮಿಯಿಂದ ಸ್ವರ್ಗಕ್ಕೆ ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ವ್ಯಕ್ತಿ ಚಿತ್ರದಂತೆ ಬ್ರಾಸವಾಗಿರುವ ಈ ಕೃತಿಯು ಎರಡು ಕೈಯನ್ನು ಅಗಲಿಸಿ, ನಿಮ್ಮಿಂದ ದೂರ ಹೋಗುತ್ತಿರುವೆ ಎಂದು ಸಾರುವಂತಿದೆ. ಬಿಳಿ ಉಡುಪನ್ನು ಧರಿಸಿದ್ದು, ಅದರ ಮೇಲೆ ಕೆಂಪು ವಸ್ತ್ರವು ಜಾರಿದೆ. ಕೂದಲನ್ನು ಬಿಟ್ಟಿರುವ ಯೇಸುವು ದೇವದೂತರತ್ತ ಕೈ ಬಿಸಿ ಹೋಗುತ್ತಿರುವಂತೆ ಚಿತ್ರಿಸಿದ್ದು, ಹಿಂದೆ ಮೋಡವು ಘರ್ಜಿಸುತ್ತಿದೆ. ಒಟ್ಟಾರೆ ಕಲಾಕೃತಿಯು ಬಿಳಿ, ನೀಲಿ, ಕೆಂಪು ವರ್ಣಗಳಿಂದಾವೃತ್ತವಾಗಿರುವ ಕೃತಿಯು ರಂಜನೆಯಲ್ಲಿರುವುದಂತೂ ನಿಜ. ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿ ನೆಲೆಗೊಂಡಿರುವ ಈ ಚಿತ್ರಕಲಾಕೃತಿಯನ್ನು ಆಂಟೋನಿ ಮೋಶ್ಚಿನಿ ರಚಿಸಿದ್ದಾನೆ.

ಚಿತ್ರ–೪ : ಭಕ್ತನನ್ನು ಸಂತೈಸುತ್ತಿರುವ ಯೇಸು : ೪ ಅಡಿ ಉದ್ದ, ೬ ಅಡಿ ಅಗಲವಿರುವ ಈ ಭಿತ್ತಿ ಚಿತ್ರದಲ್ಲಿ ಭಕ್ತನನ್ನು ಸಂತೈಸುತ್ತಿರುವ ಯೇಸು, ಕಲ್ಲು, ಮುಳ್ಳುಗಳ ಹತ್ತಿರ ಬಿದ್ದಿರುವ ಒಬ್ಬ ಪುರುಷನು ಬಿದ್ದಗಾಯಗಳಿಂದ ನರಳುತ್ತಿರುವುದನ್ನು ಕಂಡ ಯೇಸು ಅವನ ಗಾಯಗಳಿಗೆ ದ್ರವ್ಯವನ್ನು ಹಾಕುತ್ತಿದ್ದಾರೆ, ಯೇಸುವಿನ ಮುಖದಲ್ಲಿ ಸಂತೈಸುತ್ತಿರುವುದನ್ನು ಕಾಣಬಹುದು. ಅವರ ಇಬ್ಬರ ಮುಖಭಾವಗಳಿಗೆ ಕೇಸರಿ, ಕಂದು, ಕೆಂಪು, ಬಿಳಿ ವರ್ಣಗಳನ್ನು ಬಳಸಿ ಮೆದುವಾದ ತೇಪೆಗಳನ್ನು ಹಾಕಲಾಗಿದೆ. ಅವನ ವರ್ಣದಲ್ಲಿಯೂ ಸಹ ಇದೇ ರೀತಿ ತೇಪೆಗಳಿದ್ದು ಉತ್ತಮವಾದ ನೆರಳು ಬೆಳಕನ್ನು ಕಾಣಬಹುದು. ಕುದುರೆ ಹಾಗೂ ಗಾಯಗೊಂಡ ಪುರುಷ ಇಬ್ಬರಿಗೂ ಒಂದೇ ವರ್ಣದ ವಸ್ತ್ರ ಬಳಸಿ, ಯೇಸುವಿಗೆ ಬಿಳಿ ವರ್ಣದಲ್ಲಿ ಚಿತ್ರಿಸಿದ್ದಾರೆ. ಇದರಿಂದ ಉತ್ತಮವಾದ ವರ್ಣಗಳ ಹೊಂದಾಣಿಕೆಯನ್ನು ಕಾಣಬಹುದು. ಸುತ್ತಲಿನ ಪರಿಸರವನ್ನು ನೈಜತೆಗಿಂತಲೂ ಹೆಚ್ಚು ಸುಂದರವಾಗಿ ಚಿತ್ರಿಸಲಾಗಿದೆ. ತೈಲವರ್ಣದಿಂದ ರಚಿಸಿರುವ ಈ ಕಲಾಕೃತಿಯು ಸೆಂಟ್ ಆಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ಸಂಗ್ರಹಿಸಿದೆ.

ಚಿತ್ರ–೫: ಶಿಕ್ಷೆಗೊಳಗಾಗುತ್ತಿರುವ ಯೇಸು : ಈ ಕಲಾಕೃತಿಯು ೮ ಅಡಿ ಉದ್ದ, ೧೦ ಅಡಿ ಅಗಲವಿದ್ದು, ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಲಾಗಿದೆ. ರೋಮನ್‌ರು ಯೇಸುವಿಗೆ ಚಿತ್ರ ಹಿಂಸೆ ಕೊಟ್ಟು ನಂತರ ಜನರ ಅಭಿಪ್ರಾಯವನ್ನು ಕೇಳಲು ತಂದು ನಿಲ್ಲಿಸಿದ ಪರಿ. ಸುಸ್ತಾಗಿ ನಿಂತಿರುವ ಯೇಸು ಅವರ ಮುಂದೆ ಆಡಳಿತಾಧಿಕಾರಿ ಹಾಗೂ ಅನೇಕ ಜನ ಸೈನಿಕರಿದ್ದು, ಇಲ್ಲಿನ ಜನರು ವಿವಿಧ ಸಂದೇಶಗಳನ್ನು ಹೇಳುತ್ತಿರುವಂತೆ ಚಿತ್ರ ರಚಿಸಲಾಗಿದೆ. ಹಾಗೆಯೇ ಯೇಸುವು ಬರಿ ಮೈಯಲ್ಲಿದ್ದು, ಕೆಂಪು ಬಟ್ಟೆಯು ಸ್ವಲ್ಪ ಸುತ್ತುವರೆದಿದೆ. ಬಿಳಿ ಬಟ್ಟೆಯು

ಅಧಿಕಾರಿ ಜನರಿಗೆ ವರದಿ ಒಪ್ಪಿಸುವಂತಿದೆ ಒಟ್ಟಾರೆ ಈ ಕಲಾಕೃತಿಯಲ್ಲಿರುವ ದೃಶ್ಯವು ಯೇಸುವಿಗೆ ಮರಣದಂಡನೆಯನ್ನು ನೀಡಿ ಎಂದು ಪ್ರಬಲ ಘೋಷಣೆಗಳು ಬರುವಂತಿದ್ದು, ಮಕ್ಕಳು ದೊಡ್ಡವರು ಭಾಗವಹಿಸಿದ್ದಾರೆ. ಹಿಂದೆ ಮೋಡಗಳನ್ನು ತೋರಿಸಲಾಗಿದ್ದು, ಸುಮಾರು ದೂರದಲ್ಲಿ ದೊಡ್ಡ ಕಟ್ಟಡವನ್ನು ಚಿತ್ರಿಸಲಾಗಿದೆ. ಸೈನಿಕರು ತಮ್ಮ ತಮ್ಮ ಉಡುಪನ್ನು ಧರಿಸಿದ್ದಾರೆ. ಕೈಯಲ್ಲಿ ಬಂದೂಕು ಹಿಡಿದಿರುವುದನ್ನು ಕಾಣಬಹುದು. ಮುಂದೆ ಕಾಣುವಂತಹವರಲ್ಲಿ ಸುಮಾರು ಜನರು ತಲೆಗೆ ಶಲ್ಲೆಯನ್ನು ಸುತ್ತುವರೆಸಿಕೊಂಡಿದ್ದಾರೆ. ಈ ಕಲಾಕೃತಿಯಲ್ಲಿ ಸಂಯೋಜನೆ ತುಂಬಾ ಸೂಕ್ಷ್ಮವಾಗಿದ್ದು, ಕಟ್ಟಡ ಮತ್ತು ಮಾನವರಿಗೆ ಸಂಬಂಧವನ್ನು ಕಲ್ಪಿಸಿದ್ದಾರೆ. ಯೇಸುವು ಮೇಲೆ ಇದ್ದು ಜನರನ್ನು ಕೆಳಗಡೆ ನಿಂತಿರುವಂತೆ ಚಿತ್ರಿಸಲಾಗಿದೆ. ಬಿಳಿ, ಕೆಂಪು, ಕಪ್ಪು, ಹಸಿರು, ನೀಲಿ, ಹಳದಿ ಹೀಗೆ ವಿವಿಧ ವರ್ಣಗಳಿಂದ ಈ ಕಲಾಕೃತಿಯನ್ನು ರಚಿಸಿದ್ದು, ೧೯೦೦ರಲ್ಲಿ ಆಂಟೋನಿ ಮೋಶ್ಚಿನಿಯು ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿಗೆ ಬಂದ ಸಂದರ್ಭದಲ್ಲಿ ಚಿತ್ರಿಸಿದ್ದು, ಇಲ್ಲಿ ಸಂಗ್ರಹವಾಗಿದೆ.

ಚಿತ್ರ–೬: ನೀರನ್ನು ಮಧ್ಯವನ್ನಾಗಿಸಿದ ಯೇಸು : ಈ ಕಲಾಕೃತಿಯು ತೈಲವರ್ಣದಿಂದ ೧೮೯೯ರಲ್ಲಿ ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ಕರಾವಳಿ ಭಾಗದ ಚರ್ಚ್‌ಆದ ಸೆಂಟ್ ಆಲಾಯಿಸಿಸ್‌ನಲ್ಲಿ ಕಾಣಬಹುದಾಗಿದೆ. ಇದರಲ್ಲಿ ಸುಮಾರು ಜನರನ್ನು ಕಾಣಬಹುದು. ಇದು ಶುಭ ಸಮಾರಂಭವಾದುದ್ದರಿಂದ ಅನೇಕ ಜನರನ್ನು ಕಾಣಬಹುದು. ಹಾಗೆಯೇ ಮುಖ್ಯ ಭಾಗವಾಗಿರುವ ಯೇಸುವು ಇಲ್ಲಿ ಪ್ರಮುಖ, ಸಮಾರಂಭದ ಪ್ರಾರಂಭಕ್ಕೆ ಮಧ್ಯಖಾಲಿಯಾಗುವುದು ಜನರ ಉತ್ಸಾಹ ಕಡಿಮೆಯಾದಾಗ ಜನರ ಅಪೇಕ್ಷೆ ಹಾಗೂ ಆನಂದವನ್ನು ಕೊಡುವುದು ಯೇಸುವಿನ ಕರ್ತವ್ಯ ಅದರಂತೆ ದೇವಮಾನವನಾಗಿರುವಂತಹ ದಿನಗಳು ಆ ಸಂದರ್ಭ ಒದಗಿದಾಗ, ಪವಾಡಗಳು ನಡೆಯಬೇಕಾಗಿರುವು ಅನಿವಾರ್ಯವೆಂಬಂತೆ ಒಂದು ಮಗುವಿನಿಂದ ಖಾಲಿಕೊಡಗಳಿಗೆ ನೀರನ್ನು ತುಂಬಿಸುತ್ತಿರುವುದು ನಂತರದಲ್ಲಿ ಅವೆಲ್ಲಾದ್ರಾಕ್ಷಾರಸವಾಗಿ ಮಧ್ಯದ ರೂಪಕ್ಕೆ ಬಂದು ಎಲ್ಲಾರು ಆಶ್ಚರ್ಯಪಡುವಂತೆ ಪವಾಡ ನಡೆಸುವರು. ಈ ಕಲಾಕೃತಿಯು ಸಂಯೋಜನೆಯನ್ನು ಹೊಂದಿದ್ದು, ಎಲ್ಲಾರ ಕಣ್ಣು ಯೇಸುವಿನ ಕಡೆವಾಲಿದೆ, ಕೆಂಪು ಬಟ್ಟೆಯನ್ನು ತೊಟ್ಟಿರುವ ಯೇಸುವು ಸೊಂಟಕ್ಕೆ ನೀಲಿ ಪಟ್ಟಿಯನ್ನು ಕಟ್ಟಿಕೊಂಡಿದ್ದಾರೆ. ಬಿಳಿ ವರ್ಣದ ಬಟ್ಟೆಯನ್ನು ತೊಟ್ಟಿರುವ ಮಗುವು ಖಾಲಿಕೊಡಕ್ಕೆ ನೀರಾಕುತ್ತಿದ್ದಾನೆ. ಹಸಿರು, ನೀಲಿ, ಬಿಳಿ, ಹಳದಿ, ವರ್ಣದಿಂದನೇಕರು ಹಿಂದೆ ಇರುವುದು ವಿಶೇಷ. ಈ ಕಲಾಕೃತಿಯು ನೋಡುಗನನ್ನು ಬೆರಗಾಗಿಸುವಂತಿದೆ. ಸಂಯೋಜನೆಯಲ್ಲಿ ಉತ್ತಮ ಬಾಂಧವ್ಯಹೊಂದಿದ್ದಾರೆ ಎಂಬುದಕ್ಕೆ ಇದೊಂದೆ ಸಾಕ್ಷಿ ಸಾಕು. ಇದನ್ನು ಆಂಟೋನಿ, ಮೋಶ್ಚಿನಿಯು ರಚಿಸಿದ್ದಾನೆ.

ಚಿತ್ರ–೭: ಸಮುದ್ರದಲ್ಲಿ ದೋಣಿಯ ದುರಂತದ ದೃಶ್ಯ : ಈ ಕಲಾಕೃತಿಯು ೧೦ ಫ ೮

ಅಡಿಯಿದ್ದು, ತೈಲವರ್ಣದಿಂದ ಚಿತ್ರಸಲಾಗಿದ್ದು, ಸಿಡಿಲು, ಮಿಂಚು ಇದರ ಮಧ್ಯೆ ರಾತ್ರಿ ಸಮಯವನ್ನು ಎಂಥಹವರು ಗುರುತಿಸುವಂತೆ ಈ ಕಲಾಕೃತಿ ಕಾಣುತ್ತಿದ್ದು, ಸಮುದ್ರದಲ್ಲಿ ಊರಿಗೆ ದೋಣಿಯ ಮೂಲಕ ಬರುತ್ತಿದ್ದ ಸಂದರ್ಭವದು, ಅಂದು ಸುನಾಮಿಯ ಅಲೆ ಶುರುವಾಯಿತು. ಆ ಸಂದರ್ಭಕ್ಕೆ ಸರಿಯಾಗಿ ಯೇಸುವುದೋಣಿಯಲ್ಲಿದ್ದಿದ್ದು, ಸುಮಾರು ಎತ್ತರದ ದೋಣಿ ಅದು, ಗಾಳಿಗೆ ಅಲುಗಾಡುವಂತಿರುವ ಇದು ಬಿರುಗಾಳಿ, ಅಲೆಯೆತ್ತರ ಬಂದಾಗ ಅದರಲ್ಲಿದ್ದವರು ಹಾಗೆ ಜಾರುವುದಂತೂ ಸರಿ, ಆದರೆ ಇಲ್ಲಿ ಜನರಿಗೆ ಭಯವಾದರೂ ಅವರಿಗೆ ಜೀಸಸ್ ಎಂಬ ಮಂತ್ರ ಜೊತೆಗಿದ್ದದ್ದು, ಆ ಬಿರುಗಾಳಿಯನ್ನು ಕೈ ಮೇಲಕ್ಕೆತ್ತಿ ಕೆಳಗಿಳಿಸುವ ಹೊತ್ತಿಗೆ ಸರಿಹೋಯಿತು. ಬಿರುಗಾಳಿಯಿಂದ ಆಶ್ಚರ್ಯ ಚಕಿತರಾದ ಜನರು ಜೋರಾಗಿ ಕೂಗಿ ದೇವರನ್ನು ಜ್ಞಾಪಿಸಿಕೊಂಡರು. ಇಲ್ಲಿ ಕಲಾವಿದನು ವಿಜೃಂಭಣೆಯಿಂದ ಭಯಂಕರ ಹುಟ್ಟುವ ರೀತಿಯಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಬಣ್ಣ, ರೇಖೆಗಳನ್ನು ಬಳಸಿದ್ದಾನೆ. ಯೇಸುವಿನ ಜೊತೆ ನಾಲ್ಕೈದು ಜನ ಕಾಣುವ ಈ ದೃಶ್ಯದಲ್ಲಿ ಎಲ್ಲಾರೂ ನೀರೊಳಗೆ ಜಾರಿದ್ದಾರೆ ಎಂಬಂತೆ ಚಿತ್ರಿಸಲಾಗಿದೆ. ಯೇಸುವು ನಿಂತಿದ್ದು, ಕಂದು ಗೆಂಪು ಬಟ್ಟೆಯನ್ನು ಹಾಕಿಕೊಂಡು ನೀಲಿ ಬಣ್ಣದ ಶಾಲನ್ನು ಹೆಗಲ ಮೇಲೆ ಹಾಕಿಕೊಂಡಿದ್ದಾರೆ. ಸಮುದ್ರದ ಅಲೆಗಳು ಅಪ್ಪಳಿಸಿದ್ದು, ಆಕಾಶದಲ್ಲಿ ಮಿಂಚನ್ನು ಬೇರ್ಪಡಿಸಿರುವುದು ಆಶ್ಚರ್ಯ. ರಾತ್ರಿ ಸಮಯವನ್ನು ಬಿಂಬಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ದೋಣಿಯು ಹಿಂದೆ ಮುಳುಗಿದಂತಿದ್ದು, ಮೇಲೆರಗಿದೆ ಎಂಬುದನ್ನು ನೋಡಬಹುದು. ದೋಣಿ ಎತ್ತರಕ್ಕೆ ನೀರು ಚಿಮ್ಮುತ್ತಿದೆ. ಬಿಳಿ, ಹಳದಿ, ನೀಲಿ, ಕಂದುಗೆಂಪು, ಆರೆಂಜ್, ಆಕಾರ್ ಎಲ್ಲೊ ಬಣ್ಣಗಳು ಇಲ್ಲಿ ಪ್ರಮುಖವಾಗಿವೆ. ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ನೆಲೆಗೊಂಡಿದೆ.

ಚಿತ್ರ–೮: ಕಪ್ಪು ಅಲೋಶಿಯಸ್‌ನು ತಮ್ಮನಿಗೆ ಅಧಿಕಾರ ತ್ಯಾಗಮಾಡುತ್ತಿರುವುದು : ಈ ಕಲಾಕೃತಿಯು ತೈಲವರ್ಣದ ಸಹಾಯದಿಂದ ಬಟ್ಟೆಯ ಮೇಲೆ ರಚಿಸಲಾಗಿದ್ದು ಕ್ರೈಸ್ತ ಧರ್ಮದ ಸಂಸ್ಕೃತಿಗೆ ಅನುಸಾರವಾಗಿ, ಸೆಂಟ್ ಅಲೋಷಿಯಸ್‌ರ ಆಡಳಿತದ ಅವಧಿಯನ್ನು ಹದಿನಾಲ್ಕು ವರ್ಷಕ್ಕೆ ಕಡಿತಗೊಳಿಸಿ ತನ್ನ ತಮ್ಮನಿಗೆ ವಹಿಸುವಂತಹ ಜವಾಬ್ದಾರಿ ಅಣ್ಣನಿಗೆ ಇರಬೇಕಾಗದೆ. ಅದರ ಪ್ರಯುಕ್ತ ಕಪ್ಪು ಅಲೋಷಿಯಸ್‌ನು ತನ್ನ ಅಧಿಕಾರವನ್ನು ಹಸ್ತಾಂತರ ಮಾಡುವ ದೃಶ್ಯವನ್ನು ಈ ಕ್ಯಾನ್ವಾಸ್‌ನಲ್ಲಿ ಕಾಣಬಹುದಾಗಿದೆ. ಮುಖ್ಯವಾಗಿ ಅಣ್ಣ ತಮ್ಮರನ್ನು ಗುರುತಿಸುವ ರೀತಿಯಲ್ಲಿ ಹೊಳಪನ್ನು ಕೊಟ್ಟಿರುವುದು ಕಲಾವಿದರ ಚಾಣಾಕ್ಷತನ, ರಾಜರ ವೇಷದಲ್ಲಿರುವ ತಮ್ಮ ಕಪ್ಪು ಬಟ್ಟೆಯನ್ನು ಧರಿಸಿರುವ ಅಣ್ಣ ಅಕ್ಕಪಕ್ಕದಲ್ಲಿ ರಾಜರು ಮಂತ್ರಿಗಳೆಂಬಂತೆ ಆಡಳಿತ ನಡೆಸುವ ಮುಖ್ಯ ಅಧಿಕಾರಿಗಳು ಸಾಕ್ಷಿಯಾಗಿದ್ದಾರೆ. ಇದು ರಾಜರ ಮನೆಯಾಗಿದ್ದು, ಅರಮನೆಯಂತಿದೆ. ವಿಶಾಲವಾದ ರೂಂನಲ್ಲಿ ಈ ಕಾರ್ಯಕ್ರಮ ನಡೆದಿದೆಯಂತೆ ಟೇಬಲ್‌ನ ಸುತ್ತ ನಾಲ್ವರು ಕುಳಿತಿದ್ದು ವಿಶೇಷ, ಎಲ್ಲಾರೂ ಆಶ್ಚರ್ಯ ಚಕಿತರಾಗಿ ನೋಡುತ್ತಿದ್ದಾರೆ. ಬಿಳಿ, ಕಪ್ಪು, ಕೆಂಪು, ಬೂದುಗೆಂಪು, ಹಸಿರು, ಹಳದಿ ಹೀಗೆ ಸಂದರ್ಭ ಸಂಯೋಜನೆಯ ವಸ್ತುವಿಗೆ

ತಕ್ಕಂತೆ ಬಣ್ಣಗಳನ್ನು ಬಳಸಲಾಗಿದೆ. ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಚಿತ್ರ–೯ : ಜ್ಞಾನ ಸ್ನಾನದ ದೃಶ್ಯ : ಈ ಕಲಾಕೃತಿಯು ಹತ್ತು ಅಡಿ ಉದ್ದ, ಹನ್ನೆರಡು ಅಡಿ ಅಗಲ ಇದ್ದು, ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನ ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಸೆಂಟ್‌ಜಾನ್ ದಿ ಬ್ಯಾಕ್ಟೀಸನ್ ಮುಖಾಂತರ ಜೀಸಸ್‌ಗೆ ಜೋಡಾನ್ ನದಿಯದಡದಲ್ಲಿ ಜ್ಞಾನೋದಯವಾಗುತ್ತಿರುವ ದೃಶ್ಯ ಇದಾಗಿದ್ದು, ನದಿಯ ದಡದಲ್ಲಿ ಕುಳಿತಿರುವ ಯೇಸು ಇದರ ಆಳದಿಂದ ಬೆಳಕು ಮತ್ತು ದಿವ್ಯ ತೇಜಸ್ಸು ಹೊರಹೊಮ್ಮುವ ದೃಶ್ಯವನ್ನು ಈ ಕಲಾಕೃತಿಯು ಸೂಚಿಸುತ್ತದೆ. ಆತ್ಮದ ಸಂಕೇತವಾದ ಪಾರಿವಾಳವು ಆಕಾಶದಿಂದಿಳಿದುಬರುತ್ತಿರುವಂತೆ ಕಾಣುತ್ತಿದ್ದು, ಭಕ್ತರ ಸಮೂಹವೇ ಇಲ್ಲಿ ನೆರವೇರಿದೆ. ಸುಮಾರು ಭಕ್ತಾದಿಗಳು ಯೇಸುವಿನ ಭಕ್ತಿಗೆ ಶರಣಾದವರಂತೆ ಮುಂದೆನಾಗುವುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಮೂರ್‍ನಾಲ್ಕು ಜನ ತಮ್ಮ ಮಕ್ಕಳನ್ನು ಎತ್ತಿಕೊಂಡಿದ್ದು, ಮೂವರು ಕೆಳಗಡೆ ಕುಳಿತುಕೊಂಡಿದ್ದಾರೆ. ಯೇಸುವು ಗಂಭೀರವಾಗಿ ತನ್ನ ಭಕ್ತಿಯಲ್ಲಿ ತೊಡಗಿದ್ದಾರೆ. ಎರಡು ಮೊಣಕಾಲೂರಿ ಎದೆಗೆ ತನ್ನ ಎರಡು ಕೈಗಳನ್ನಿತ್ತು ದ್ಯಾನಿಸುತ್ತಿರುವುದು ಕಾಣಬಹುದು. ಆಕಾಶವನ್ನು ನೀಲಿ ಬಣ್ಣದಿಂದ ತೋರಿಸಿ, ಮೋಡಗಳನ್ನು ಬೂದು ಬಣ್ಣಗಳಿಂದ ವರ್ಣಿಸಲಾಗಿದೆ. ಗಿಡಗಳನ್ನು ನೀಲಿ ಮತ್ತು ಹಸಿರು ಬಣ್ಣಗಳಿಂದ ಚಿತ್ರಿಸಿರುವುದು ವಿಶೇಷವಾಗಿದೆ. ಕೆಳಗಡೆ ಬರೀ ಮೈಯಲ್ಲಿ ಕುಳಿತಿರುವ ಮನುಷ್ಯನ ಮೈಯಲ್ಲಿರುವ ಗೆರೆಗಳು ಸಹಜವಾಗಿ ಕಾಣುವಂತೆ ಚಿತ್ರಿಸಿದ್ದಾರೆ. ದೇಹಕ್ಕೆ ಕೆಂಪು ಬಣ್ಣವನ್ನು ಲೇಪಿಸಿದ್ದಾರೆ. ಯೇಸು ಧರಿಸಿದ ಬಟ್ಟೆಯು ಕೆಂಪು ಮಿಶ್ರಿತ ಜಾಂಬಳಿ ಮತ್ತು ಸ್ವಲ್ಪ ಬೂದು ಬಣ್ಣದಲ್ಲಿರುಪ ಶಾಲನ್ನು ಹೊದಿಸಲಾಗಿದೆ. ಪಕ್ಕದಲ್ಲಿರುವ ಒಬ್ಬ ಮುದುಕ ಟೋಪಿಯನ್ನು ಧರಿಸಿದ್ದಾನೆ. ಜೊತೆಗೆ ಹಳದಿ ಬಣ್ಣದ ಉಡುಪನ್ನು ಧರಿಸಿರುವುದು ಇನ್ನೊಬ್ಬ ಕಂದು ಕೆಂಪು ಬಣ್ಣದ ಉಡುಪನ್ನು ಧರಿಸಿ ಎರಡು ಕೈಯಿಂದ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಆಕಾಶದಲ್ಲಿ ಮೋಡಗಳು ನೀಲಿ ಮತ್ತು ಬಿಳಿ ಇದ್ದು, ನೀರಿನಂತೆ ಹರಿಯುತ್ತಿದೆ. ಅದೇ ದೃಶ್ಯವು ನೀರಿನಲ್ಲಿ ಹಾಯ್ದುದರಿಂದ ನೀರಿನಲ್ಲಿ ಮೋಡಕಾಣುವಂತೆ, ಹೆಚ್ಚು ಬಿಳಿಯ ಬಣ್ಣದಿಂದ ಚಿತ್ರಿಸಲಾಗಿದೆ. ಕಪ್ಪು, ಬಿಳಿ, ನೀಲಿ ಕೆಂಪು, ಕಂದು, ಹಸಿರು, ಹಳದಿ ಕಂದು ಹೀಗೆ ಎಲ್ಲಾ ರೀತಿಯ ಬಣ್ಣಗಳಿಂದ ಈ ಕಲಾಕೃತಿಯನ್ನು ಸಂಯೋಜಿಸಿ ಯಶಸ್ವಿಯಾಗಿದ್ದಾರೆ. ಈ ಕಲಾಕೃತಿಯು ೧೯೦೦ಲ್ಲಿ ಆಂಟೋನಿ ಮೋಶ್ಚಿನಿಯವರು ರಚಿಸಿದ್ದಾರೆ.

ಚಿತ್ರ–೧೦ : ಮಕ್ಕಳೊಂದಿಗೆ ಯೇಸು : ೧೦ ಅಡಿ ಉದ್ದ, ೮ ಅಡಿ ಅಗಲವಿರುವ ಈ ಕಲಾಕೃತಿಯು ತೈಲವರ್ಣದಿಂದ ಚಿತ್ರಿಸಲಾಗಿದ್ದು, ಮುಖ್ಯ ಭೂಮಿಕೆಯಲ್ಲಿ ಯೇಸುವಿಗೆ ಮಕ್ಕಳೆಂದರೆ ತುಂಬ ಪ್ರೀತಿ. ಅವರೊಂದಿಗೆ ಯಾವಾಗಲೂ ಮಕ್ಕಳಿರುವುದು ಭಿತ್ತಿ ಹಾಗೂ ಕ್ಯಾನ್ವಾಸ್ ಕಲಾಕೃತಿಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಇಲ್ಲಿಯು ಅವರಲ್ಲಿ ಒಂದು ಭಿತ್ತಿ ಚಿತ್ರದಲ್ಲಿ

ಯೇಸುವು ಕೆಂಪು ವಸ್ತ್ರದಲ್ಲಿ ಮಕ್ಕಳೊಂದಿಗೆ ಕುಳಿತುಕೊಂಡಿದ್ದಾನೆ. ಅವರ ಮುಖಭಾಗಕ್ಕೆ ಕೆಂಪು, ಕೇಸರಿ, ಬಿಳಿ, ವರ್ಣಗಳ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಅವರ ವರ್ಣದಲ್ಲಿ ಕೆಂಪು, ಕಂದು ವರ್ಣದಿಂದ ಮೆದುಗೊಳಿಸಿದ ನಂತರ ಗಾಢ ವರ್ಣಗಳಿಂದ ಗೆರೆಗಳನ್ನು ಹಾಕಲಾಗಿದೆ. ಸುತ್ತಲೂ ಮಕ್ಕಳಿಗೆ ಬೇರೆ ಬೇರೆ ವರ್ಣಗಳ ಬಳಕೆಯನ್ನು ಬಳಸಿಕೊಂಡು ಚಿತ್ರಿಸಲಾಗಿದೆ. ಯೇಸುವಿನ ಮನಸ್ಸು ಮಗುವಿನಂತಹದ್ದು ಎಂದು ಈ ಚಿತ್ರದ ಮೂಲಕ ತಿಳಿಯಬುದಾಗಿದೆ. ಕಾರವಾರದ ತಾಯಿ ಮೇರಿ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಚಿತ್ರ–೧೧: ಮೇರಿ ಮತ್ತು ಮಗು : ನಾಲ್ಕು ಅಡಿ ಉದ್ದ, ಎರಡು ಅಡಿ ಅಗಲ ಗೋಡೆಯ ಮೇಲೆ ಚಿತ್ರಿತವಾಗಿರುವ ಕಲಾಕೃತಿಯು ತೈಲವರ್ಣದಿಂದ ರಚಿತವಾಗಿದೆ. ಕಪ್ಪು ಬಟ್ಟೆಯನ್ನು ಧರಿಸಿರುವ ಮೇರಿಯು ಮಗನಿಗಾಗಿ ಎರಡು ಕೈ ಚಾಚಿ ಕರೆಯುವಂತಿದೆ. ಬಾಲಯೇಸುವು ಕೈ ಮುಂದೆ ಮಾಡಿ ಮೇಲಿಂದ ಹಾರಿ ಬರುತ್ತಿದ್ದಾನೆ. ಹೂಗಳ ಮಧ್ಯೆ ನಿಂತಿರುವಂತಿದ್ದು, ಮಲ್ಲಿಗೆಯ ಬಿಳಿ ಬಣ್ಣದ ಹಗಲಿರುವುದನ್ನು ಕಾಣಬಹುದಾಗಿದೆ. ಇದು ಮಂಗಳೂರಿನ ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಚಿತ್ರ–೧೨: ಜಾನ್ ದಿ ಬ್ರೇಟ್ : ಗೋಡೆಯ ಮೇಲೆ ರಚಿತವಾಗಿರುವ ಚಿತ್ರಕೃತಿ ಇದಾಗಿದ್ದು, ಯೇಸುವಿನ ಭಕ್ತ ಅವರ ಅನುಯಾಯಿಗಳಾಗಿ ಸೇವಾ ಕಾರ್ಯದಲ್ಲಿ ತೊಡಗಿ ಯಶಸ್ಸನ್ನ ಕಂಡವರಲ್ಲಿ ಜಾನ್ ದಿ ಬ್ರೇಟ್ ಅವರು ಒಬ್ಬರು. ಅಂತಹ ಮಹಾನ್ ವ್ಯಕ್ತಿಯನ್ನು ಕುಲಶೇಖರ ಚರ್ಚ್‌ನಲ್ಲಿ ಕಾಣಬಹುದು. ಸಾಧಾರಣ ಮನುಷ್ಯನಂತೆ ಕಂಡರೂ ಅಭೂತಪೂರ್ವ ವಿಚಾರವಂತರೂ, ಯೇಸುವಿನ ಕುರಿತು ಪ್ರಚುರ ಪಡಿಸುತ್ತಾ ತಮ್ಮ ಸಮುದಾಯವನ್ನು ಎತ್ತರೋತ್ತರಕ್ಕೆ ಕೊಂಡ್ಯೆಯುವ ಬಹುದೊಡ್ಡ ಜವಾಬ್ದಾರಿಯನ್ನು ಹೊತ್ತು ಯಶಸ್ವಿಯಾದವರು. ಅಂತವರ ಚಿತ್ರವನ್ನು ಪ್ರೇರಣೆಯ ಸಲುವಾಗಿ ಬರೆಸುವ ಮತ್ತು ಅವರನ್ನು ಹಿಂಬಾಲಿಸುವ ಯುವ ಮನಸ್ಸುಗಳಿಗೆ ಆಸರೆಯಾಗಬೇಕೆಂಬ ಕಾರಣಕ್ಕೆ ಅಂತವರನ್ನು ಇಲ್ಲಿ ಬರೆಸಲಾಗಿದೆ ಎಂದು ಮಾರ್ಟಿನ್ ಎಂಬುವವರು ತಿಳಿಸುತ್ತಾರೆ. ಅದರಂತೆ ಇಲ್ಲಿ ಕಾಣುತ್ತಿರುವ ವ್ಯಕ್ತಿ ಮೈತುಂಬಾ ಆರೆಂಜ್ ಶಾಲೊದ್ದುಕ್ಕೊಂಡು ಬಲಗೈಯಲ್ಲಿ ಗರಿ ಹಿಡಿದು ಎಡಗೈಯಿಂದ ಆಶೀರ್ವದಿಸುವ ಲಕ್ಷಣಗಳು ಎದ್ದು ಕಾಣಲ್ಪಡುತ್ತಿವೆ. ಯೇಸುಸ್ವಾಮಿಯ ಓಲಿಕೆಯನ್ನು ಕಾಣುತ್ತಿರುವ ಜಾನ್ ಅವರು ಪಕ್ಕಾ ಅವರ ಅನುಯಾಯಿಗಳೆಂದು ನೋಡುತ್ತಲೇ ಗುರುತಿಸಬಹುದು.

ಚಿತ್ರ–೧೩: ಶಿಲುಬೆಗೇರಿರುವ ಯೇಸು : ೧೦ x ೧೨ ಅಡಿ ಇರುವ ಈ ಕಲಾಕೃತಿಯನ್ನು ಕ್ಯಾನ್ವಾಸ್ (ಬಟ್ಟೆ ಮಾಧ್ಯಮ)ನಲ್ಲಿ ತೈಲವರ್ಣದಿಂದ ರಚನೆಮಾಡಿದ್ದು, ಚಿತ್ರದಲ್ಲಿ ಯೇಸುವಿಗೆ ಶಿಲುಬೆಯನ್ನೇರಿಸಿರುವುದು ತುಂಬಾ ಮುಖ್ಯವಾದ ಅಂಶವಾಗಿದ್ದು, ಈ ಕಲಾಕೃತಿಯಲ್ಲಿ ಒಟ್ಟು ಐದು ಜನರನ್ನು ಗುರುತಿಸಲಾಗಿದ್ದು, ಕೆಂಪು ಉಡುಪನ್ನು ಧರಿಸಿರುವ ವ್ಯಕ್ತಿಯು ಎಡ ಪಕ್ಕೆಯಲ್ಲಿ ಬಲವಾಗಿ ಹಿಡಿದಿರುವ ಶಿಲುಬೆಯನ್ನು ಯೇಸುವಿನ ಬಲ ಬುಜದ ಮೇಲೆ ಇಡುತ್ತಿರುವುದು.

ರೂರಿಕ್‌ನ ಅಧಿಕಾರ ಹಾಗೂ ಸೈನಿಕ ಕಪ್ಪು ಬಟ್ಟೆ, ಟೊಪ್ಪಿಗೆ, ಕೈಯಲ್ಲಿ ಬರ್ಚಿ ಹಿಡಿದುಕೊಂಡಿರುವುದನ್ನು ಕಾಣಬಹುದು. ತಾಯಿ ಮೇರಿಯು ನೀಲಿ ಉಡುಪನ್ನು ದರಿಸಿ ಮಗನಿಗಾಗಿ ಬಿಳಿ ಬಣ್ಣದ ಉಡುಪನ್ನು ಕೊಡುತ್ತಿರುವುದು ಎರಡು ಮೊಣಕಾಲೂರಿ ಹಾಗೆ ಮುಂದೆ ಕೈ ಚಾಚಿ, ಬಗ್ಗಿತೆಗೆದುಕೊಳ್ಳುತ್ತಿರುವ ಮುಖ್ಯ ದೃಶ್ಯ ಎದುರಿಗಿದೆ. ಯೇಸುವಿನ ತಲೆಯ ಸುತ್ತಲು ದೇವರ ಶಕ್ತಿಯ ಪ್ರತಿರೂಪ ಇದ್ದಂತಿದ್ದು, ನನಗೇನು ಆಗೋದಿಲ್ಲ ಎಂಬ ಸೂಚನೆ ಕಾಣುತ್ತಿದೆ. ಇದು ಸಂಯೋಜನಾ ಚಿತ್ರವಾಗಿದ್ದು, ಐದು ಜನರನ್ನೊಳಗೊಂಡಿದೆ. ಕೆಂಪು, ನೀಲಿ,ಬಿಳಿ, ಕಂದು, ಕಪ್ಪು ಹಸಿರು ಹೀಗೆ ವಿವಿಧ ಬಣ್ಣಗಳನ್ನು ಬಳಸಿರುವುದು ಕಾಣಬಹುದು. ನೆಲದ ಮೇಲೆ ಹೋಗುತ್ತಿರುವ ಇವರು ಹಸಿರು ಹಾಸಿಗೆಯ ಮೇಲ ನಡೆದಂತಿದೆ. ಕಾರವಾರದ ಅವರ್ ಲೇಡಿ ರಿಸಪ್ಷನ್, ಕ್ಯಾಥಡ್ರಲ್ ಚರ್ಚ್‌ನಲ್ಲಿರುವ ಈ ಕೃತಿಯು ಯೇಸುವಿಗೆ ಶಿಕ್ಷೆಯನ್ನು ಕೊಡುತ್ತಿರುವ ಅಂಶವನ್ನು ಕಾಣಬಹುದು.

ಚಿತ್ರ-೧೪: ಯೇಸು ಮತ್ತು ಗರುಡ : ಈ ಕಲಾಕೃತಿಯು ಸುಮಾರು ೮ ಅಡಿ ಅಗಲ ೧೦ ಉದ್ದವಿರುವ ಅಡಿವುಳ್ಳದ್ದಾಗಿದ್ದು, ತೈಲವರ್ಣದಿಂದ ರಚನೆಮಾಡಲಾಗಿದ್ದು, ಪ್ರಮುಖವಾಗಿ ಈ ಕಲಾಕೃತಿಯಲ್ಲಿ ಯೇಸು ಮತ್ತು ಗರುಡ ಪಕ್ಷಿ ಇರುವುದನ್ನು ಚಿತ್ರಿಸಲಾಗಿದೆ. ಎಡಗೈಯಲ್ಲಿ ಪುಸ್ತಕವಿದ್ದು, ಬಲಗೈಯಲ್ಲಿ ಪೆನ್ನನ್ನು ಹಿಡಿದಿರುವುದು ಹಾಗೆಯೇ ಯೇಸುವು ಮೇಲೆ ಆಕಾಶ ನೋಡುತ್ತಿರುವಂತೆ ಕಾಣುತ್ತದೆ ರೆಕ್ಕೆ ಬಿಚ್ಚಿಹಾರುತ್ತಿರುವ ಗರುಡವನ್ನು ಸ್ಪಷ್ಟವಾಗಿ, ಬಲಿಷ್ಟವಾಗಿರುವಂತೆ ಚಿತ್ರಿಸಲಾಗಿದೆ. ದೇವಮಾನವನನ್ನೆ ವೀಕ್ಷಿಸುತ್ತಿದೆ. ಈ ಸ್ವಾಮಿ ಮಾತ್ರ ಏನೋ ಆಲೋಚನೆಯಲ್ಲಿ ಬರೆಯುವ ಮುನ್ನ ಯೋಚಿಸುವ ಪರಿ ಇದ್ದು, ಕಲಾವಿದನ ಸೃಜನಶೀಲತೆ ಮೆರೆದಾಡಿದೆ ಏಕೆಂದರೆ ಬಣ್ಣಗಳ ಲೋಕವೇ ಇಲ್ಲಿ ಸೃಷ್ಟಿಯಾಗಿದೆ. ಸೆಂಟ್ ಎಲೋಷಿಯಸ್ ಚರ್ಚ್‌ವೊಂದರ ಬಲಭಾಗದಲ್ಲಿರುವ ಈ ಕೃತಿಯಲ್ಲಿ ಹಳದಿ, ಕೆಂಪು, ನೀಲಿ, ಬಿಳಿ, ಕೆಂಪು, ವರ್ಣಗಳಿಂದ ಚಿತ್ರಸಲಾಗಿದೆ. ಮೇಲ್ಮುಖಮಾಡಿರುವ ಯೇಸು ನೈಜವಾಗಿ ಮೂಡಿಬಂದು ಬಣ್ಣಗಳ ಸಂಯೋಜನೆಯಿಂದ ಈ ಕೃತಿಯು ಸಮತೋಲನವಾಗಿದೆ, ಗೋದಿ ಕೆಂಪು ಮೈಬಣ್ಣವನ್ನು ಹೊಂದಿದ ಯೇಸು, ಏನೋ ಬರೆಯಲು ಮುಂದಾಗಿರುವಂತೆ ಬ್ರಾಸವಾಗಿರುವುದಂತೂ ಸತ್ಯ. ಹಳದಿ ವರ್ಣದಿಂದ ಕೂಡಿದ ಶಾಲನ್ನು ಹೊದಿಕೆಯಾಗಿ ಬಳಸಿದ್ದಾನೆ. ನೀಲಿವರ್ಣದ ನಿಲುವಂಗಿ ಧರಿಸಿದ್ದು, ಈ ಚಿತ್ರದಲ್ಲಿ ನೋಡಬಹುದಾಗಿದೆ. ಜೊತೆಯಲ್ಲಿ ಗರುಡವು ಯೇಸುವಿನ ಮುಖವನ್ನು ನೋಡುತ್ತಾ ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಮುಖ್ಯವಾಗಿ ಕಲಾಕೃತಿಯು "ಸಂಟ್ ಅಲೋಷಿಯಸ್ ಚರ್ಚ್"ನಲ್ಲಿ ಸಂಗ್ರಹಗೊಂಡಿದ್ದು, ನೆರಳು ಬೆಳಕಿನಿಂದ ಕೂಡಿದ್ದಾಗಿದ್ದು, ಪರಿಪಕ್ವತೆಯ ನರ್ತನೆಯಿಂದ ಕಂಗೊಳಿಸುತ್ತಿದೆ. ಇದರ ಜೊತೆಯಲ್ಲಿಯೇ ಕುಲಶೇಖರ ಚರ್ಚ್, ಜಪ್ಪೋಚರ್ಚ್ ಮತ್ತು ಸೆಂಟ್ ಫಿಲೋಮಿನ ಚರ್ಚ್‌ಗಳ ಅತಿ ಹಳೆಯದವು ಮತ್ತು ಬೃಹತ್ತಾದ ಕಟ್ಟಡಗಳಾದರೂ ದೇವಾಲಯಗಳ ಜೀರ್ಣೋದ್ದಾರದ ಸಮಯದಲ್ಲಿ ಅನಿವಾರ್ಯವೆಂಬಂತೆ ಭಿತ್ತಿ ಚಿತ್ರಗಳು ನಾಶವಾಗಿರುತ್ತವೆ.

ಇತ್ತೀಚೆಗೆ ಗಾಜಿನ ಮೇಲಿನ ಚಿತ್ರಗಳನ್ನು ಹೆಚ್ಚೆಚ್ಚು ಮಾಡಿಸಲಾಗುತ್ತಿದ್ದು ಅವುಗಳನ್ನು ಇಲ್ಲಿ ಹೇಳಲಾಗಿರುವುದಿಲ್ಲ. ಪರಿಪೂರ್ಣವಾದ ಭಿತ್ತಿ ಚಿತ್ರಗಳನ್ನು ಮಾತ್ರ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿರುತ್ತದೆ.

ಕಾವಿ ಚಿತ್ರಕಲೆ :

ಕರ್ನಾಟಕದ ನೆಲವು ಅನೇಕ ಕಲೆಗಳ ಆಗರವಾಗಿದೆ. ಅಪೂರ್ವವಾದ ಹಲವು ಬಗೆಯ ಕಲೆಗಳು ಇಲ್ಲಿ ಮೇಳೈಸಿವೆ. ಅವುಗಳ ವೈವಿಧ್ಯ, ವೈಭವ, ಧಾರ್ಮಿಕ ಸಂಬಂಧವನ್ನು ಹಿಡಿದು ಅವುಗಳ ಪರಿಶೋಧನೆಗೆ ಹೊರಟಾಗ ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಬಗೆಗೆ ವಿಶೇಷ ಬೆಳಕನ್ನು ಅವು ಚೆಲ್ಲುತ್ತವೆ.೧೫ ಕಲಾದೃಷ್ಟಿಯಿಂದ ಶೋಧನೆಗೆ ಹೊರಟಾಗಲೂ ನಮ್ಮ ಭವ್ಯ ಪರಂಪರೆಯ ಅರಿವನ್ನು ಉಂಟುಮಾಡುವ ಈ ಕಲೆಗಳು ಆಯಾನಾಡಿನ ಸತ್ವಪೂರ್ಣ ಹಾಗೂ ಮಹತ್ವ ಪೂರ್ಣ ಸ್ವತ್ತಾಗಿ ಪರಿಣಮಿಸುತ್ತವೆ. ಹಾಗಾಗಿ ಇಂತಹ ಅಪೂರ್ವ ಕಲೆಗಳನ್ನು ಗುರುತಿಸುವುದು ಒಂದು ನಾಡಿನ ಅಥವಾ ಪ್ರದೇಶದ ಸಂಸ್ಕೃತಿಯ ಅರಿವಿನ ದೃಷ್ಟಿಯಿಂದ ಮಹತ್ವದ್ದೆನಿಸುತ್ತದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಇತರ ಕಲೆಗಳಂತೆ ಚಿತ್ರ ಕಲೆಯೂ ಸಮೃದ್ಧವಾಗಿ ಬೆಳೆದು ಬಂದಿದೆ.[೧೬] ಜನಪದರಿಂದ ಸೃಷ್ಟಿಗೊಂಡು ಜನಪದರ ಜೀವಭಾವವಾಗಿ ಬೆಳೆದು ಬಂದ ಜನಪದ ಚಿತ್ರಕಲೆಯಲ್ಲಿ ಇಂದಿನ ಆಧುನಿಕ ಶಿಷ್ಟಪದದ ಅಂಶಗಳು ಸಮ್ಮಿಶ್ರಗೊಂಡು ಮತ್ತೊಂದು ಪ್ರಕಾರದ ಕಲೆಯಾಗಿ ಆಕಾರ ಪಡೆದಿವೆ. ಅದನ್ನು ಶಿಷ್ಟಜನಪದ ಚಿತ್ರಕಲೆಯೆಂದು ಇಲ್ಲಿ ಗುರುತಿಸಿ ಅಧ್ಯಯನ ಮಾಡಲಾಗಿದೆ. ಈ ಕಲೆ ವಿವಿಧ ಹಂತಗಳಲ್ಲಿ ವಿಕಸನಗೊಂಡು ಇಂದು ಸ್ಪಷ್ಟ ಪರಿಪೂರ್ಣ ಕಲಾಪ್ರಕಾರವಾಗಿ ಹೊರಹೊಮ್ಮಿದೆ. ಇಲ್ಲಿ ಶಿಷ್ಟ ಜನಪದ ಕಲೆಯೆಂದರೆ "ಕಾವಿ" ಕಲೆಯಾಗಿದ್ದು, ವಿಶೇಷವಾಗಿ ಕರಾವಳಿ ಕರ್ನಾಟಕದ ಭವ್ಯ ಪರಂಪರೆಯನ್ನು ಹೊಂದಿರುವ ಸಾಂಪ್ರದಾಯಿಕ ಈ ಕಾವಿ ಚಿತ್ರಕಲೆ ಶ್ರೀಮಂತವಾಗಿ ಬೆಳೆದು ಬಂದಿದೆ. ದೃಶ್ಯಕಲಾ ಕ್ಷೇತ್ರಕ್ಕೆ ಈ ಕಲೆಯ ಕೊಡುಗೆ ನಗಣ್ಯವೇನಲ್ಲ.[೧೭] ಈ ಪ್ರದೇಶದ ಭಿತ್ತಿ ಚಿತ್ರಕಲೆಯ ಒಡಲೊಳಗೆ ಶ್ರೀಮಂತವಾಗಿ ಬೆಳೆದು ಬಂದ ಕಲಾಪ್ರಕಾರಗಳಲ್ಲೊಂದು "ಕಾವಿ" ಚಿತ್ರಕಲೆ ಇದರ ಹುಟ್ಟು-ಬೆಳವಣಿಗೆ ಅತ್ಯಂತ ಕುತೂಹಲಕಾರಿಯಾಗಿದೆ. ಈ ಕಲಾಪ್ರಕಾರದ ಸಮಗ್ರ ಶೋಧನೆ, ದಾಖಲೆ ಮತ್ತು ಅಧ್ಯಯನ ಅತ್ಯಂತ ಮುಖ್ಯವಾಗಿರುತ್ತದೆ.

ಪ್ರಾಚೀನ ಕಾಲದಲ್ಲಿ ರೂಪುಗೊಂಡಿರಬಹುದಾದ ಈ ಚಿತ್ರಕಲೆಯ ಕಾಲದ ಪ್ರಶ್ನೆಗಿಂತಲೂ ನಮ್ಮ ನಾಡಿನ ಸಂಸ್ಕೃತಿಗೆ ಈ ಪ್ರದೇಶದ ಕಾವಿಚಿತ್ರಕಲೆ ಜನರ ಧಾರ್ಮಿಕ ಮತ್ತು ಸಾಮಾಜಿಕ ಬದುಕಿನ ಆತ್ಮವಾಗಿ ಜೀವವಾಗಿ ಹೇಗೆ ತನ್ನ ಚಲನೆಯ ಅಸ್ತಿತ್ವವನ್ನು ಉಳಿಸಿಕೊಂಡು ಕೊಡುಗೆಯನ್ನು ನೀಡಿದೆ ಎಂಬುದರ ವಿಷಯವನ್ನು ತಿಳಿಯಬೇಕಿದೆ. ಈಗಾಗಲೇ ಅನೇಕ

ವಿದ್ವಾಂಸರು ಕರಾವಳಿ ಪ್ರದೇಶದ ವಿವಿಧ ಆಯಾಮದ ಕಲೆಗಳನ್ನು ತಿಳಿಸಿದ್ದಾರೆ. ವಿಶೇಷವಾಗಿ ಕಾವಿ ಚಿತ್ರಕಲೆಯಂತಹ ಸೂಕ್ಷ್ಮ ವಿಷಯದ ಸಮಗ್ರ ಅಧ್ಯಯನವನ್ನು ಡಾ.ಆನಂದ ಕೆ.ಪೂಜಾರ ಅವರು ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ ಎಂಬ ವಿಷಯಾಧ್ಯಯನವನ್ನು ಮಾಡಿರುತ್ತಾರೆ ಅದರ ಕುರಿತು ವಿಸ್ತೃತವಾಗಿ ಹೇಳುವ ಅವಶ್ಯಕತೆಯಿರುವುದಿಲ್ಲ. ಅದರ ಕುರಿತು ಸಮಗ್ರ ಅಧ್ಯಯನ ಆಗಿರುವುದರಿಂದ, ಈ ಅಧ್ಯಯನಕ್ಕೆ ಪೂರಕವಾಗಿ ಅವಶ್ಯವಾಗಿ ಹೇಳಬೇಕಾಗಿರುವುದರಿಂದ ಕಾವಿ ಕಲೆಯ ಪ್ರಸ್ತಾಪವನ್ನು ಇಲ್ಲಿ ಹೇಳಲಾಗಿದೆ.

ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ

I. ಚಿತ್ರಕಲಾ ಕೃತಿಗಳು	II. ಅಲಂಕಾರಿಕ ನಕ್ಷಾ ಚಿತ್ರಗಳು
೧. ಧಾರ್ಮಿಕ ಚಿತ್ರಗಳು	೨. ಧಾರ್ಮಿಕೇತರ ಚಿತ್ರಗಳು
೧. ಆಕೃತಿ ಪ್ರಧಾನ	೨. ವಲ್ಲರಿ ಪ್ರಧಾನ
	೨.೧. ಸಾಮಾಜಿಕ
	೩. ಆಕೃತಿ–ವಲ್ಲರಿ ಪ್ರಧಾನ
	೨.೨. ಸಮರಾಂಗಣ
	೨.೩. ನೈಸರ್ಗಿಕ
೧.೧. ದೇವಾದಿ ದೇವತೆಗಳು	೧.೨ ದಶಾವತಾರ
೧.೧.೧. ದೇವತೆಗಳ ಚಿತ್ರಗಳು	೧.೨.೧. ವಿಷ್ಣು
೧.೧.೧.೧. ಗಣಪತಿ	೧.೨.೨. ಮತ್ಸ್ಯಾವತಾರ
೧.೧.೧.೨. ಪರಮೇಶ್ವರ	೧.೨.೩. ಕೂರ್ಮಾವತಾರ
೧.೧.೧.೩. ಸರಸ್ವತಿ	೧.೨.೪. ವರಾಹವತಾರ
೧.೧.೧.೪. ಲಕ್ಷ್ಮೀ	೧.೨.೫. ನರಸಿಂಹ ಅವತಾರ
೧.೧.೧.೫. ಶಕ್ತಿ ದೇವತೆಗಳು	೧.೨.೬. ವಾಮನಾವತಾರ
೧.೧.೧.೬. ದೇವಲೋಕ	೧.೨.೭. ಪರಶುರಾಮಾವತಾರ
೧.೨.೮. ರಾಮಾವತಾರ	೧.೧.೨. ಕಥಾ ಸಂಬಂಧಿತ ಚಿತ್ರಗಳು
೧.೨.೯. ಕೃಷ್ಣಾವತಾರ	೧.೧.೨.೧. ಜಯ–ವಿಜಯ
೧.೨.೧೦. ಬೌದ್ಧಾವತಾರ	
೧.೧.೨.೨. ಗರುಡ	೧.೨.೧೧. ಕಲ್ಕಿ ಅವತಾರ

೧.೧.೨.೩. ಕಾಮಧೇನು

೧.೧.೨.೪. ಧೃವ ಮತ್ತು ಸುರುಚಿ

೧.೧.೨.೫. ಸಮುದ್ರಮಥನ

೧.೧.೨.೬. ಮೋಹಿನಿ-ಭಸ್ಮಾಸುರ

೧.೧.೨.೭. ಗಜೇಂದ್ರ ಮೋಕ್ಷ

೧.೧.೨.೮. ಗಂಗಾವತರಣ

೧.೧.೨.೯. ಅನಂತಶಯನ

೧.೧.೩. ಶಾಸ್ತ್ರ ಸಂಬಂಧಿತ ಚಿತ್ರಗಳು

೧.೧.೩.೧. ಶ್ರೀ ದತ್ತಾತ್ರೇಯ

೧.೧.೩.೨. ಶ್ರೀ ಮಧ್ವಾಚಾರ್ಯರು

೧.೧.೩.೩. ಹಯಗ್ರೀವ

೧.೧.೩.೪. ಸೂರ್ಯಮಂಡಲ

೧.೩. ರಾಮಾಯಣ

೧.೩.೧. ರಾಮ-ಲಕ್ಷ್ಮಣ

೧.೩.೨. ಸೀತಾದೇವಿ

೧.೩.೩. ವಿಷ್ಣು-ದಶರಥ-ವಾಲಿಸುಗ್ರೀವ

೧.೩.೪. ರಾವಣ

೧.೩.೫. ಹನುಮಂತ

೧.೪. ಮಹಾಭಾರತ

೧.೪.೧. ಕರ್ಣ

೧.೪.೨. ಭೀಮ

೧.೪.೩. ಅರ್ಜುನ

೧.೪.೪. ಕೃಷ್ಣ ವಿರಾಟ ದರ್ಶನ

೧.೪.೫. ನಕುಲ-ಸಹದೇವ

೧.೪.೬. ದ್ರೌಪದಿ

೧.೫. ಸಂಕೀರ್ಣ ಚಿತ್ರಗಳು (ಅಷ್ಟ ದಿಕ್ ಪಾಲಕರು)

೧.೫.೧. ಸೂರ್ಯ (ಇಂದ್ರ)

೧.೫.೨. ವರುಣ

೧.೫.೩. ಯಮ

೧.೫.೪. ಅಗ್ನಿ

೧.೫.೫. ಈಶ್ವರ

೧.೫.೬. ಬುಧನ ಅಧಿದೇವತೆ

ಈ ಕಾವಿ ಚಿತ್ರಕಲೆಯೂ ಕೂಡ ಭಿತ್ತಿ ಚಿತ್ರಕಲೆಯಲ್ಲಿನ ಒಂದು ಭಾಗವಾಗಿದ್ದು, ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಳಸಿಕೊಳ್ಳಬಹುದಾದರೂ ಅದರ ಬಗ್ಗೆ ಪರಿಪೂರ್ಣ ಅಧ್ಯಯನ ಈಗಾಗಲೇ ಡಾ.ಆನಂದ ಕೆ ಪೂಜಾರ[೧೫] ಅವರಿಂದಾಗಿರುವ ಹಿನ್ನಲೆಯಲ್ಲಿ ಪರಿಚಯ ರೂಪದಲ್ಲಿ ಹೇಳಲಾಗಿದೆ. ಹೆಚ್ಚಿನ ವಿವರಕ್ಕಾಗಿ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆಯನ್ನು ಗಮನಿಸಬಹುದು.

ಅಡಿ ಟಿಪ್ಪಣಿ

೧. ಪ್ರೊ.ಎಸ್.ಸಿ.ಪಾಟೀಲ: ಬುಜರಕಂಚನಹಳ್ಳಿಯ ಭಿತ್ತಿಚಿತ್ರಕಲೆ, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಪು.ಸ.೧

೨. ಪ್ರೋ.ಜಿ.ಎಸ್.ಶಿವರುದ್ರಪ್ಪ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.ಸ.೭೯

೩. ಸಿ.ಶಿವರಾಮಮೂರ್ತಿ : ಭಾರತೀಯ ಚಿತ್ರಕಲೆ, ಪು.ಸಂ.–೧೦

೪. ಪ್ರೊ.ಎಸ್.ಸಿ.ಪಾಟೀಲ: ಬುಜರಕಂಚನಹಳ್ಳಿಯ ಭಿತ್ತಿಚಿತ್ರಕಲೆ, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಪು.ಸ.೧

೫. ಡಾ.ಎಚ್.ಎಂ.ನಾಗರಾಜು: ನಾಗಮಂಗಲ ತಾಲ್ಲೂಕಿನ ಮಹತ್ವದ ಸ್ಥಳಗಳು,ಪ್ರಸಾರಾಂಗ, ಮೈಸೂರು ವಿವಿ, ಪು.೧೨

೬. ರಾಜೀವ: ತೇರುಮಲ್ಲೇಶ್ವರ ದೇವಾಲಯದ ಭಿತ್ತಿ ಚಿತ್ರಗಳು, ಕಿರುಯೋಜನಾವರದಿ, ಕವಿವಿಹಂಪಿ, ೨೦೦೯, ಪು.೩೫

೭. ವೀಣಾಶೇಖರ್: ಮ್ಯೂರಲ್ ಪೇಂಟಿಂಗ್ಸ್ ಆಫ್ ಸಿಬಿ,ಕಿರುಪ್ರಬಂಧ,ಬೆಂ.ವಿವಿ

೮. ಕಾಂತರಾಜು: ತುಮಕೂರು ಜಿಲ್ಲೆಯ ಚಿತ್ರಕಲೆ, ಎಂಫಿಲ್ ಸಂಪ್ರಬಂಧ,ಕವಿವಿ.ಹಂಪಿ,೨೦೦೯

೯. ಅದೇ

೧೦. ಸಿ.ಶಿವರಾಮಮೂರ್ತಿ : ಭಾರತೀಯ ಚಿತ್ರಕಲೆ, ಪು.ಸಂ.–೧೦

೧೧. ಪ್ರೊ.ಜಿ.ಎಂ.ಶ್ರೀನಿವಾಸಯ್ಯ: ತುಮಕೂರು ಜಿಲ್ಲೆಯ ಸಂಕ್ಷಿಪ್ತ ಇತಿಹಾಸ,ಪು.೭೧

೧೨. ಕೃಷ್ಣ : ಪ್ರೊ.ಎಲ್.ಎಸ್.ಶೇಷಗಿರಿರಾವ್, ಭಕ್ತಿ ವೇದಾಂತ, ಬುಕ್ ಟ್ರಸ್ಟ್ ೨೦೧೧, ಪು. ೧೫೯

೧೩. ಹೇಮಂತಕುಮಾರ: ಮೈಸೂರು ಜಿಲ್ಲೆಯ ಚಿತ್ರಕಲೆ, ಎಂಫಿಲ್ ಸಂಪ್ರಬಂಧ, ಕವಿವಿ.ಹಂಪಿ,೨೦೧೪

೧೪. ಡಿ.ಆರ್.ಸುರೇಂದ್ರನಾಥ: ಕರಾವಳಿ ಕರ್ನಾಟಕದ ಕ್ರೈಸ್ಥ ಚಿತ್ರಕಲೆ, ಎಂಫಿಲ್,ಸಂಪ್ರಬಂಧ, ಕ.ವಿ.ವಿ.ಹಂಪಿ,ಪು.೮೩

೧೫. ಡಾ.ಡಿ.ಕೆ.ರಾಜೇಂದ್ರ: ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಪುಟ–೯

೧೬. ಡಾ.ಆನಂದ ಕೆ.ಪೂಜಾರ: ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ ಪು.ಸಂ.–೪

೧೭. ಅದೇ ಪು–೫

೧೮. ಡಾ.ಆನಂದ ಕೆ.ಪೂಜಾರ: ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಕ.ವಿ.ವಿ. ಹಂಪಿ. ಡಿ.ಲಿಟ್. ಮಹಾಪ್ರಬಂಧ ೨೦೦೫

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೧



ಚಿತ್ರ-೨



ಚಿತ್ರ-೩

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೪




ಚಿತ್ರ-೫



ಚಿತ್ರ-೬

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೭



ಚಿತ್ರ-೮



ಚಿತ್ರ-೯

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೧೦



ಚಿತ್ರ-೧೧



ಚಿತ್ರ-೧೨

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೧೩



ಚಿತ್ರ-೧೪



ಚಿತ್ರ-೧೫



ಚಿತ್ರ-೧೬

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೧೭



ಚಿತ್ರ-೧೮



ಚಿತ್ರ-೧೯



ಚಿತ್ರ-೨೦

ಚಿತ್ರ-೨೧

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೨೨



ಚಿತ್ರ-೨೩



ಚಿತ್ರ-೨೪



ಚಿತ್ರ-೨೫

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೧೬



ಚಿತ್ರ-೧೭



ಚಿತ್ರ-೧೮



ಚಿತ್ರ-೧೯


ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೩೦



ಚಿತ್ರ-೩೧



ಚಿತ್ರ-೩೨

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೨೨



ಚಿತ್ರ-೨೪



ಚಿತ್ರ-೨೫



ಚಿತ್ರ-೨೬

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೩೭



ಚಿತ್ರ-೩೮



ಚಿತ್ರ-೩೯

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೪೦



ಚಿತ್ರ-೪೧

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೪೨



ಚಿತ್ರ-೪೩



ಚಿತ್ರ-೪೪



ಚಿತ್ರ-೪೫

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೪೬



ಚಿತ್ರ-೪೭



ಚಿತ್ರ-೪೮

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ



ಚಿತ್ರ-೨೮

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ

ದಶಾವತಾರಗಳು



ಮತ್ಸ್ಯ



ಕೂರ್ಮ



ವರಾಹ



ವಾಮನ



ನರಸಿಂಹ

ಶ್ರೀರಾಮ ದೇವಾಲಯ, ಬುಜರಕಂಚನಹಳ್ಳಿ

ದಶಾವತಾರಗಳು



ಪರುಶುರಾಮ



ರಾಮ



ಕೃಷ್ಣ



ಬೌದ್ಧ



ಕಲ್ಕಿ

ಶ್ರೀಸೌಮ್ಯಕೇಶವ ದೇವಾಲಯ,ನಾಗಮಂಗಲ



ಚಿತ್ರ-೧



ಚಿತ್ರ-೨



ಚಿತ್ರ-೩



ಚಿತ್ರ-೪

ಶ್ರೀಸೌಮ್ಯಕೇಶವ ದೇವಾಲಯ, ನಾಗಮಂಗಲ



ಚಿತ್ರ-೫



ಚಿತ್ರ-೬

ಶ್ರೀತೇರುಮಲ್ಲೇಶ್ವರ ದೇವಾಲಯ, ಹಿರಿಯೂರು








ಚಿತ್ರ-೨

ಚಿತ್ರ-೧

ಶ್ರೀತೇರುಮಲ್ಲೇಶ್ವರ ದೇವಾಲಯ. ಹಿರಿಯೂರು




ಚಿತ್ರ-೩



ಚಿತ್ರ-೪

ಶ್ರೀತೇರುಮಲ್ಲೇಶ್ವರ ದೇವಾಲಯ, ಹಿರಿಯೂರು



ಚಿತ್ರ-೫



ಚಿತ್ರ-೬



ಚಿತ್ರ-೭

ಶ್ರೀತೇರುಮಲ್ಲೇಶ್ವರ ದೇವಾಲಯ. ಹಿರಿಯೂರು



ಚಿತ್ರ-೮



ಚಿತ್ರ-೯



ಚಿತ್ರ-೧೦

ಚಿತ್ರ-೧೧

ಚಿತ್ರ-೧೨

ಚಿತ್ರ-೧೩

ಚಿತ್ರ-೧೪

ಶ್ರೀತೇರುಮಲ್ಲೇಶ್ವರ ದೇವಾಲಯ. ಹಿರಿಯೂರು



ಚಿತ್ರ-೧೫



ಚಿತ್ರ-೧೬



ಚಿತ್ರ-೧೭

ಶ್ರೀತೇರುಮಲ್ಲೇಶ್ವರ ದೇವಾಲಯ, ಹಿರಿಯೂರು





ಚಿತ್ರ-೧೮

ಶ್ರೀಲಕ್ಷ್ಮೀನರಸಿಂಹ ದೇವಾಲಯ,ಸಿಬಿ



ಶ್ರೀನರಸಿಂಹ ದೇವಾಲಯ



ಭಾಗವತ ಪುರಾಣ-೧

ಶ್ರೀಲಕ್ಷ್ಮೀನರಸಿಂಹ ದೇವಾಲಯ, ಸಿಬಿ



ಭಾಗವತ ಪುರಾಣ-೨



ಮಹಾಭಾರತ ದೃಶ್ಯ

ಶ್ರೀಲಕ್ಷ್ಮೀನರಸಿಂಹ ದೇವಾಲಯ,ಸಿಬಿ



ರಾಮಾಯಣದ ಸನ್ನಿವೇಶ



ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಸೇವಕರು

ಶ್ರೀಲಕ್ಷ್ಮೀನರಸಿಂಹ ದೇವಾಲಯ, ಸಿಬಿ



ವಿಷ್ಣು ದಶಾವತಾರ



ಶಿವಪುರಾಣ

ಶ್ರೀಲಕ್ಷ್ಮೀನರಸಿಂಹ ದೇವಾಲಯ,ಸಿಬಿ



ವಿಷ್ಣು ದಂಪತಿಗಳು



ಮೈಸೂರು ಒಡೆಯರು ಮತ್ತು ಸೇವಕರು

ಶ್ರೀಲಕ್ಷ್ಮೀನರಸಿಂಹ ದೇವಾಲಯ, ಸಿಬಿ





ಲೈಂಗಿಕ ಚಿತ್ರಗಳು

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೧



ಚಿತ್ರ-೨

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೩



ಚಿತ್ರ-೪

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೫



ಚಿತ್ರ-೬

ಶ್ರೀಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯ



ಚಿತ್ರ-೭



ಚಿತ್ರ-೮

ಶ್ರೀಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯ



ಚಿತ್ರ-೯



ಚಿತ್ರ-೧೦

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೧೧



ಚಿತ್ರ-೧೨

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೧೩



ಚಿತ್ರ-೧೪

ಶ್ರೀಎಡೆಯೂರು ಸಿದ್ದಲಿಂಗೇಶ್ವರ ದೇವಾಲಯ



ಚಿತ್ರ-೧೫



ಚಿತ್ರ-೧೬

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೧



ಚಿತ್ರ-೨

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೩



ಚಿತ್ರ-೪



ಚಿತ್ರ-೫

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೬,೭,೮



ಚಿತ್ರ-೯,೧೦

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೧೧



ಚಿತ್ರ-೧೨

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೧೩



ಚಿತ್ರ-೧೪

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೧೫



ಚಿತ್ರ-೧೬,೧೭,೧೮,೧೯,೨೦



ಚಿತ್ರ-೨೧,೨೨,೨೩,೨೪

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೨೫



ಚಿತ್ರ-೨೬



ಚಿತ್ರ-೨೭

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೨೮



ಚಿತ್ರ-೨೯

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೩೦




ಚಿತ್ರ-೩೧

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೩೨



ಚಿತ್ರ-೩೩



ಚಿತ್ರ-೩೪

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೩೫,೩೬



ಚಿತ್ರ-೩೭

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೩೮



ಚಿತ್ರ-೪೦

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೪೧



ಚಿತ್ರ-೪೨

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೪೪



ಚಿತ್ರ-೪೫

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೪೬



ಚಿತ್ರ-೪೭

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೪೮, ೪೯



ಚಿತ್ರ-೫೦



ಚಿತ್ರ-೫೧

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೫೨



ಚಿತ್ರ-೫೩, ೫೪



ಚಿತ್ರ-೫೫, ೫೬, ೫೭

ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಾಲಯ,ಮೈಸೂರು



ಚಿತ್ರ-೫೮



ಚಿತ್ರ-೫೯



ಚಿತ್ರ-೬೧, ೬೨, ೬೩, ೬೪

ಶ್ರೀಲಕ್ಷ್ಮೀ ಮತ್ತು ಶ್ರೀಪಟಲದಮ್ಮ ದೇವಾಲಯ, ಹೊಸಹಳ್ಳಿ



ಚಿತ್ರ-೧



ಚಿತ್ರ-೨

ಶ್ರೀಶ್ವೇತಾವರಹ ದೇವಾಲಯ,ಮೈಸೂರು



ಚಿತ್ರ-೧



ಚಿತ್ರ-೨

ಶ್ರೀಶ್ವೇತಾವರಹ ದೇವಾಲಯ,ಮೈಸೂರು



ಚಿತ್ರ–೩



ಚಿತ್ರ–೪

ಅಂಬುಜಾವಲ್ಲಿ ದೇವಾಲಯ, ಮೈಸೂರು




೧



೨



೩



೪



೫



೬

ದೇವಾಲಯದ ಬಾಗಿಲ ಮೇಲಿರುವ ಚಿತ್ರಗಳು

ಅಂಬುಜಾವಲ್ಲಿ ದೇವಾಲಯ, ಮೈಸೂರು



ಚಿತ್ರ-೭



ಚಿತ್ರ-೮


ಕ್ರೈಸ್ತ ದೇವಾಲಯಗಳು



ಚಿತ್ರ-೧



ಚಿತ್ರ-೨



ಚಿತ್ರ-೩



ಚಿತ್ರ-೪

ಕ್ರೈಸ್ಥ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು



ಸೆಂಟ್ ಅಲೋಷಿಯಸ್ ಚರ್ಚ್‌ನ ಒಳ ಆವರಣದಲ್ಲಿರುವ ಚಿತ್ರಗಳು



ಯೇಸುವಿನ ಜನನ



ಸ್ವರ್ಗಕ್ಕೆ ಹಾರುತ್ತಿರುವ ಯೇಸು

ಕ್ರೈಸ್ಥ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು



ಮಕ್ಕಳೊಂದಿಗೆ ಯೇಸು



ಮೇರಿ ಮತ್ತು ಯೇಸು

ಕ್ರೈಸ್ತ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು




ಕಪ್ಪು ಅಲೋಷಿಯಸ್ ತಮ್ಮನಿಗಾಗಿ ಅಧಿಕಾರ ತ್ಯಾಗ ಮಾಡುತ್ತಿರುವುದು



ಜ್ಞಾನ ಸ್ನಾನದ ದೃಶ್ಯ

ಕ್ರೈಸ್ತ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು



ನೀರನ್ನು ಮಧ್ಯವನ್ನಾಗಿಸುತ್ತಿರುವ ಯೇಸು



ಸಮುದ್ರವಲ್ಲಿ ದೋಣಿಯ ದುರಂತ



ಭಕ್ತನನ್ನು ಸಂತೈಸುತ್ತಿರುವ ಯೇಸು



ಶಿಕ್ಷೆಗೊಳಗಾಗುತ್ತಿರುವ ಯೇಸು

ಕ್ರೈಸ್ತ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು



ಜಾನ್ ದಿ ಬ್ರೇಟ್



ಶಿಲುಬೆಗೇರಿರುವ ಯೇಸು



ಯೇಸು ಮತ್ತು ಗರುಡ

ಕ್ರೈಸ್ತ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು



ಸೆಂಟ್ ಅಲೋಷಿಯಸ್ ಚರ್ಚ್

ಅಧ್ಯಾಯ : ೫

ದಕ್ಷಿಣ ಕರ್ನಾಟಕದ ಮಠಗಳಲ್ಲಿ ಭಿತ್ತಿ ಚಿತ್ರಕಲೆ

ಅಧ್ಯಾಯ – ಐದು

ದಕ್ಷಿಣ ಕರ್ನಾಟಕದ ಮಠಗಳಲ್ಲಿರುವ ಭಿತ್ತಿ ಚಿತ್ರಕಲೆ

ಮಾನವನು ಆದಿಕಾಲದಿಂದಲೂ ತನ್ನ ಸುತ್ತಲಿನ ಪ್ರಕೃತಿಯನ್ನು ನೋಡಿ ಉಂಟಾದ ಆನಂದವನ್ನು ವಿವಿಧ ಕಲೆಗಳಲ್ಲಿ ವ್ಯಕ್ತಪಡಿಸುತ್ತಿರುವನು. ನಾಟ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳೆಲ್ಲಾವೂ ಈ ಆನಂದದ ಪ್ರತಿಬಿಂಬಗಳು. ಭೂಮಿಯ ಮೇಲೆ ಮನುಷ್ಯನ ಜನನವಾಗಿ ಸುಮಾರು ಹತ್ತಿಪ್ಪತ್ತು ಲಕ್ಷ ವರ್ಷಗಳಾಗಿವೆಯೆಂಬುದು ಮಾನವ ಶಾಸ್ತ್ರಜ್ಞರ ಮತ. ಇದರಲ್ಲಿ ಮನುಷ್ಯನು ನಾಗರೀಕತೆಯ ಹಂತವನ್ನು ಏರಿದಿದು ಇಂದಿಗೆ ಸುಮಾರು ಐದಾರು ಸಾವಿರ ವರ್ಷಗಳಿಂದೀಚೆಗೆ, ಈ ಐದಾರು ಸಾವಿರ ವರ್ಷಗಳ ನಾಗರೀಕ ಇತಿಹಾಸದ ನಂತರದಲ್ಲಿಯೂ ಇನ್ನೂ 'ಕಲೆ' ಎಂದರೇನೆಂಬುದು ಚರ್ಚಾಸ್ಪದವಾಗಿಯೇ ಉಳಿದಿದೆ. ಸ್ಥೂಲವಾಗಿ ನೋಡಿದಲ್ಲಿ ಕಲೆಯು ಮನುಷ್ಯನ ಸೌಂದರ್ಯನುಭವದ ಪ್ರತಿಬಿಂಬ.[೧]

ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಚರಿತ್ರೆಯಲ್ಲಿಯ ಹಲವಾರು ಮಹತ್ವದ ಸಾಧನೆಗಳಲ್ಲಿ ಚಿತ್ರಕಲೆಯು ಒಂದು. ಇದನ್ನು ತುಂಬಾ ಹಿಂದಿನ ಕಾಲದಿಂದಲೂ ಬೆಳೆಸಿ, ಪೋಷಿಸಿಕೊಂಡು ಬಂದಿದ್ದಾನೆ. ಚಿತ್ರಕಲೆಯೆಂದೊಡನೇ ಭಾರತೀಯ ಇತಿಹಾಸದ ಪರಿಚಯವುಳ್ಳವರಿಗೆ ಈಗಾಗಲೇ ಜಗತ್ಪ್ರಸಿದ್ಧವಾಗಿರುವ ಅಜಂತಾ, ಎಲ್ಲೋರಾ, ಬದಾಮಿ, ಸಿತ್ತನಿವಾಸಲ್ ಮೊದಲಾದೆಡೆಗಳಲ್ಲಿರುವ ಶ್ರೇಷ್ಠ ತರಗತಿಯ ವರ್ಣಚಿತ್ರಗಳು ಸ್ಮೃತಿಪಟಲದಲ್ಲಿ ಬರುವುದು ಸಹಜ[೨] ಅದರಂತೆ ಚಿತ್ರಕಲೆ ಮತ್ತು ಸಮಾಜ ಇವೆರಡರ ಪರಸ್ಪರ ಸಂಬಂಧ ಮತ್ತು ಪ್ರಭಾವಗಳನ್ನು ಚರ್ಚಿಸುವ ಸಂದರ್ಭದಲ್ಲಿ ನಾವು ಸಮಾಜ ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಬಳಸುತ್ತೇವೆ. ಈ ವಿಸ್ತಾರದಲ್ಲಿ ಸುತ್ತಲಿನ ಜನಸಮುದಾಯ ಅವರ ಪರಂಪರೆಗಳು ಮೌಲ್ಯಗಳು, ನಂಬಿಕೆಗಳು, ಜನರ ಭೌತಿಕ ಪರಿಸರ ದೇಶಕಾಲ-ಸನ್ನಿವೇಶದ ಮಿತಿಗಳು, ಸಂಸ್ಕೃತಿಯ ವಿಭಿನ್ನ ಪೈಲುಗಳನ್ನೆಲ್ಲಾ ಒಳಗೊಳ್ಳುತ್ತವೆ. ಪ್ರಮುಖವಾಗಿ ಕಲೆ ಯಾವುದೇ ಇರಲಿ ಅದು ಹೇಗೆ ಹುಟ್ಟುತ್ತದೆ ಮತ್ತು ಹೇಗೆ ಪ್ರಕಟಗೊಳ್ಳುತ್ತದೆ.

ವಿಭಿನ್ನ ಪಂಥಗಳೂ, ಪ್ರಕರಗಳೂ ಹೇಗೆ ಹುಟ್ಟುತ್ತವೆ ಎಂಬಿತ್ಯಾದಿ ವಿಷಯಗಳನ್ನು ಸಮಾಜ, ಸಂಸ್ಕೃತಿಗಳು ಏಕಮುಖವಾಗಿ, ಏಕಪಕ್ಷೀಯವಾಗಿ ನಿರ್ಣಯಿಸಿಬಿಡುತ್ತವೆ ಎಂದು ವಾದಮಾಡುವರು. ಮುಖ್ಯವಾಗಿ ಇಲ್ಲಿ ಚಿತ್ರಕಲೆಯ ಮಟ್ಟಿಗಂತೂ ಇಂಥ ಅತಿರೇಕಕ್ಕೆ ಹೋದವರಲ್ಲಿ ಮಾನವನ ಸೃಜನಶೀಲ ಮನಸ್ಸಿನ ಅಭಿವ್ಯಕ್ತಿಯ ರೂಪಗಳಲ್ಲೊಂದಾದ ಚಿತ್ರಕಲೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಲವು ಉದ್ದೇಶ ಮತ್ತು ಮಾಧ್ಯಮಗಳನ್ನಾದರಿಸಿ ರಚನೆಯಾಗುತ್ತಾ ಬಂದಿದೆ. ಅಂದ್ರೇ ಪ್ರಾಗ್ಯೆತಿಹಾಸಿಕ ಕಾಲದಲ್ಲಿ ಮಾನವರಿಂದ ಗುಹೆಗಳಲ್ಲಿ ರಚನೆಯಾದ ಚಿತ್ರಗಳು, ಚಿತ್ರಕಲೆಯ ಪ್ರಾರಂಭಿಕ ಹಂತವನ್ನು ಪ್ರತಿನಿಧಿಸುವುದರ ಜೊತೆಗೆ ಅವರ ಸೌಂದರ್ಯನುಭೂತಿ ಜೀವನ ವಿಧಾನ, ಧಾರ್ಮಿಕ ಮತ್ತು ತಾಂತ್ರಿಕ ಆಚರಣೆಗಳಂತಹ ವಿಷಯಗಳನ್ನು ತಿಳಿಸಿಕೊಡುವ ಆಕಾರಗಳಾಗಿದ್ದು, ಮುಂದುವರಿದಂತೆ ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿಚಿತ್ರಗಳಿಗೆ ತನ್ನದೇಯಾದ ಮಹತ್ವದ ಸ್ಥಾನಮಾನವಿದೆ.

ಕನ್ನಡ ನಾಡಿನ ಜನತೆ ಭಿತ್ತಿ ಚಿತ್ರಗಳನ್ನು ರಚಿಸುವ ಮೂಲಕ ಕಲಾಕಾರರಾಗಿ ಭಿತ್ತಿ ಚಿತ್ರಗಳನ್ನು ಬರೆಯಿಸುವುದರೊಂದಿಗೆ ಕಲಾಪೋಷಕರಾಗಿರುತ್ತಾರೆ. ಈ ಭಿತ್ತಿಚಿತ್ರ ಪರಂಪರೆ ವ್ಯಕ್ತಿಯಿಂದ ವ್ಯಕ್ತಿಗೆ, ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯಾಗಿ ಸೃಷ್ಟಿಗೊಂಡಿದೆ. ಪ್ರಾದೇಶಿಕತೆ ಆ ಪ್ರದೇಶದ ಜನರ ಜೀವನ ವಿಧಾನ, ಆಚಾರ-ವಿಚಾರ, ಧಾರ್ಮಿಕ ನಂಬಿಕೆ ಮುಂತಾದವುಗಳು ಅವರ ಭಿತ್ತಿ ಚಿತ್ರಗಳು ಆಯಾಕಾಲದ ಜನಜೀವನದ ವಿವರಗಳನ್ನು ಒಳಗೊಂಡಿರುತ್ತವೆ. ಹಾಗೆಯೇ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇವು ಮಹತ್ವದ ಆಕಾರಗಳಾಗಿರುತ್ತವೆ.

ಭಿತ್ತಿ ಚಿತ್ರಕಲಾ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮಪ್ರಚಾರದ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ ಮನರಂಜನೆಗಾಗಿ, ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಧರ್ಮ, ದೇವರು, ಆರಾಧನೆ, ಪಂಥ, ಪಂಗಡ ಹಾಗೂ ಸಾಮಾಜಿಕ ಶ್ರೇಣೀಕರಣಗಳ ಸಂಕೀರ್ಣ ಬದುಕುಗಳಲ್ಲದೇ ನಾಡಿನ ಜನರ ಕಲಾಭಿಮಾನ, ಸೌಂದರ್ಯೋಪಾಸನೆಯ ಬೆಳವಣಿಗೆಯಂತಹ ಆಂತರಿಕ ವಿಷಯಗಳು ಈ ಭಿತ್ತಿಚಿತ್ರ ಪರಂಪರೆಯಲ್ಲಿ ಅಡಕಗೊಂಡಿವೆ. ಹಾಗೆಯೇ ಭಿತ್ತಿಚಿತ್ರಗಳು ಸಮಕಾಲೀನ ಜನಜೀವನ, ಸಸ್ಯವರ್ಗ, ಪ್ರಾಣಿವರ್ಗಗಳ ಕುರಿತು ತಿಳಿಸಿಕೊಡುವ ಮಹತ್ವದ ಚಿತ್ರಲಿಪಿಗಳಾಗಿವೆ ಎನ್ನಬಹುದು.

ಭಿತ್ತಿ ಚಿತ್ರವನ್ನು ಆಂಗ್ಲ ಭಾಷೆಯಲ್ಲಿ mural painting ಎಂದು ಕರೆಯಲಾಗಿದೆ. ಅದರಂತೆ ಅನೇಕ ಶಬ್ದಕೋಶ ಮತ್ತು ವಿಶ್ವಕೋಶಗಳು ಭಿತ್ತಿಚಿತ್ರಕಲೆಯ ಅರ್ಥವ್ಯಾಪ್ತಿಯ ಬಗೆಗೆ ವಿವರಣೆ ಕೊಟ್ಟಿರುತ್ತವೆ. ಕ್ಯಾಂಬ್ರಿಜ್ ವಿಶ್ವಕೋಶವು ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಭಿತ್ತಿ ಚಿತ್ರವೆನಿಸಿದರೆ, ಗೋಡೆಯ ಮೇಲೆ ಕೆತ್ತಿ, ಕೊರೆದು, ಅಂಟಿಸಿ ರೂಪಿಸಿದ ಕೃತಿಗಳು ಭಿತ್ತಿ ಶಿಲ್ಪದ ವ್ಯಾಪ್ತಿಯಲ್ಲಿ ಬರುತ್ತವೆಂದು ಹೇಳಿದೆ. ಅದೇರೀತಿ ಆಕ್ಸ್‌ಫರ್ಡ್ ಶಬ್ದಕೋಶವು ಗೋಡೆ ಮತ್ತು

ಮೆಲ್ಭಾವಣಿಗಳ ಮೇಲೆ ರಚನೆಯಾದ ಚಿತ್ರಗಳನ್ನು ಭಿತ್ತಿ ಚಿತ್ರಗಳೆಂದು ಹೇಳಲಾಗಿದೆ. ವಿಶೇಷವಾಗಿ ಭಿತ್ತಿ ಚಿತ್ರಗಳನ್ನು ಗೋಡೆ ಮತ್ತು ಮೆಲ್ಭಾವಣಿಗೆ ಲೇಪಿಸಿದ ಗಾರೆ ಲೇಪನದ ಮೇಲೆ ಸಾಮಾನ್ಯವಾಗಿರುವುದನ್ನು ಕಾಣಬಹುದು. ಪ್ರಮುಖವಾಗಿ ಇಲ್ಲಿ ಕರ್ನಾಟಕದಲ್ಲಿರುವ ಮಠಗಳಲ್ಲಿನ ಭಿತ್ತಿಚಿತ್ರಕಲೆಯ ವೈಶಿಷ್ಟತೆಯನ್ನು ಎತ್ತಿಹಿಡಿಯುವುದು. ಆದ್ದರಿಂದ ದಕ್ಷಿಣ ಕರ್ನಾಟಕದ ಭಾಗದಲ್ಲಿ ಸಿಗುವ ಮಠಗಳನ್ನು ಇಲ್ಲಿ ಗುರುತಿಸುವುದಾಗಿದೆ. ಅವುಗಳಲ್ಲಿ ಮುಖ್ಯವಾಗಿ ಐತಿಹಾಸಿಕ ಭಿತ್ತಿ ಚಿತ್ರಗಳನ್ನು ಹೊಂದಿರುವ ಮಠಗಳೆಂದರೆ ೧. ಅಂಕಲಿಮಠ ೨. ಶ್ರೀಮಠ, ಶ್ರವಣಬೆಳಗೋಳ ೩. ಶ್ರೀಮಠ, ಮೂಡಬಿದರೆ ೪. ಶ್ರೀಮಠ, ಕಾರ್ಕಳ ಈ ಮಠಗಳಲ್ಲಿರುವ ಭಿತ್ತಿ ಚಿತ್ರಗಳ ವಸ್ತುವಿಷಯವನ್ನು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ಚಿತ್ರದುರ್ಗದ ಅಂಕಲಿಮಠವು ನೂರಾರು ವರ್ಷಗಳ ಐತಿಹ್ಯವನ್ನು ಹೊಂದಿರುವ ಹಾಗೂ ತನ್ನದೇ ವೈಶಿಷ್ಟತೆಯಲ್ಲಿ ಗುರುತಿಸಿಕೊಂಡಿರುವುದು ಒಂದು ಕಡೆಯಾದರೇ ಈ ಮಠದ ಒಳಾಂಗಣದಲ್ಲಿ ಗಾರೆಯ ಮೇಲೆ ಬಣ್ಣ ಬಣ್ಣದ ಚಿತ್ತಾರವನ್ನು ನೋಡುವುದು ಮತ್ತೊಂದು ವಿಶೇಷ.

ಅಂಕಲಿಮಠದಲ್ಲಿ ವಿಶೇಷವಾಗಿ ಭಿತ್ರ ಚಿತ್ರಕಲೆ ಮತ್ತು ಗಾರೆಶಿಲ್ಪ ಮತ್ತು ಗಾರೆಶಿಲ್ಪದ ಮೇಲೆ ಬಣ್ಣ ಲೇಪಿಸಿರುವ ವಾಸ್ತವವನ್ನು ಕಾಣಬಹುದು. ಎಂತಹ ಚಿತ್ರಗಳನ್ನು ಇಲ್ಲಿ ಕಾಣಬಹದು ಎಂದಾದರೇ, ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳಳನ್ನು(ಸಂಪೂರ್ಣವಾಗಿ ಕಾಣುವುದಲ್ಲ ಉದಾಹರಣೆಗೆ ಶ್ರೀತೆರುಮಲ್ಲೇಶ್ವರ ದೇವಾಲಯದಲ್ಲಿರುವ ಭಿತ್ತಿಚಿತ್ರಗಳಿಗೆ ಅನುಗುಣವಾದ ಚಿತ್ರಗಳು ಮತ್ತು ಆ ಥರದ ಬಣ್ಣಗಳನ್ನು ಕಾಣಬಹುದಾಗಿದೆ) ಬಿಟ್ಟರೇ (ಅವು ಪ್ರಸ್ತುತ ಉಳಿದಿರುವುದಿಲ್ಲ) ಒಳಗಡೆ ಅಲ್ಲಲ್ಲಿ ಚಿಕ್ಕ ಚಿಕ್ಕ ಮೂರ್‍ನಾಲ್ಕು ಗೂಡುಗಳಿದ್ದು, ಅವುಗಳಿಗೆ ಬಣ್ಣದಿಂದ ಅಲಂಕಾರಿಸಲಾಗಿದೆ ಮತ್ತು ಅವುಗಳ ಪಟ್ಟಿಗೆ ಬಣ್ಣವನ್ನು ಲೇಪಿಸಲಾಗಿದೆ, ಪೂರ್ಣಕುಂಭದ ಚಿತ್ರ, ಅಲಂಕಾರಿಕ ಗೂಡುಗಳು, ಕತ್ತಲ ಕೋಣೆಯಲ್ಲಿರುವ ಈ ಚಿತ್ರಗಳಿಗೆ ಬೆಳಕಿನ ಅಭಾವ ಎದ್ದು ಕಾಣುತ್ತಿದ್ದು, ಭಿತ್ತಿಚಿತ್ರ ನೋಡಬೇಕಾದರೇ ಟಾರ್ಚ್ ಅವಶ್ಯಕತೆ ತುಂಬಾ ಮುಖ್ಯವಾಗಿದೆ.

ವಿಜಯನಗರ ಕಾಲದಲ್ಲಿನ ಚಿತ್ರಗಳಿಗೂ ಇಲ್ಲಿರುವ ಭಿತ್ತಿಚಿತ್ರಗಳಿಗೂ ವ್ಯತ್ಯಾಸಗೇನೂ ಕಂಡುಭಾರದಿದ್ದರೂ, ಇಲ್ಲಿರುವ ದೃಶ್ಯಗಳು ಅಲ್ಪಪ್ರಮಾಣದಲ್ಲಿ ಉಳಿದುಕೊಂಡಿರುವ ಕಾರಣ ಮಾಹಿತಿಯ ಕೊರತೆ ಎದ್ದು ಕಾಣುತ್ತಿದೆ. ವಶೇಷವಾಗಿ ಇಲ್ಲಿರುವ ಚಿತ್ರಕಲೆಗಳಲ್ಲಿ ನಕ್ಷಾವಿನ್ಯಾಸವೇ ಹೆಚ್ಚು ಆ ದೃಷ್ಟಿಯಲ್ಲಿ ಇಂಥಹದ್ದೆ ಗಿಡ ಮತ್ತು ಮರ, ಬಳ್ಳಿ ಎಂಬಂತಹ ಆಲೋಚನೆಯಲ್ಲಿ ನೋಡುಗ ಗುರುತಿಸುವ ಮಟ್ಟಗೆ ಬಣ್ಣದ ಚಿತ್ರಗಳು ಕಂಡುಬರುತ್ತಿರುವುದು ತುಂಬಾ ವಿಶೇಷವಾಗಿದ್ದು, ಹೆಚ್ಚು ನೀಲಿ, ಕಪ್ಪು, ಕೆಂಪು, ಬಿಳಿ, ನಸುಗೆಂಪು, ಹಸಿರು ಬಣ್ಣಗಳನ್ನು ಗಮನಿಸಬಹುದಾಗಿದೆ. ಜ್ಯಾಮಿತಿಯ ವಿನ್ಯಾಸದ ನಕ್ಷೆಗಳಲ್ಲಿ ರಚಿತವಾಗಿರುವ ಚಿತ್ರಗಳಲ್ಲಿ ರೇಖೆಗಳ ಪಾತ್ರ ಬಹುಮುಖ್ಯವಾದದ್ದಾಗಿದೆ.

ಜೈನ ಮಂಟಪ, ಶ್ರವಣಬೆಳಗೊಳ :

ಕರ್ನಾಟಕದಲ್ಲಿ ಅನೇಕ ಕಡೆ ಜೈನ ಭಿತ್ತಿ ಚಿತ್ರಗಳನ್ನು ಕಾಣಬಹುದು. ನನ್ನ ಅಧ್ಯಯನದ ವ್ಯಾಪ್ತಿಗೆ ಬರುವುದು. ಮುಖ್ಯವಾಗಿ ದಕ್ಷಿಣ ಕರ್ನಾಟಕದಲ್ಲಿ ಸಿಗುವಂತಹ ಭಿತ್ತಿ ನೆಲೆ ಹಾಗೂ ಅಲ್ಲಿರುವ ಕಲೆಯ ಕುರಿತು ಅದು ಮಠವಿರಬಹುದು, ಬಸದಿಯಿರಬಹುದು ಮತ್ತು ಜೈನ ಶ್ರಾವಕ ಮನೆಯಲ್ಲಿನ ಭಿತ್ತಿ ಚಿತ್ರವಿರಬಹುದು ಒಟ್ಟಾರೆ ಇತಿಹಾಸ ಕಂಡಂತಹ ಜೈನ ಭಿತ್ತಿಚಿತ್ರಗಳನ್ನು ಸಂಶೋಧನೆಯ ಮೂಲಕ ಬೆಳಕು ಹರಿಸಬೇಕು ಎಂಬ ಸದುದ್ದೇಶದಿಂದ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಮುಖ್ಯವಾಗಿ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿರುವ ಜೈನಮಠ ಮತ್ತು ಅದಲ್ಲಿರುವ ವಿಶೇಷ ಭಿತ್ತಿ ಚಿತ್ರಗಳ ಕುರಿತು ಇಲ್ಲಿ ಹೇಳಲಾಗಿದೆ.

ಜೈನ ಪರಂಪರೆಯ ಅನುಸಾರ ಅವಸರ್ಪಿಣೀ ಕಾಲದಲ್ಲಿ ಹ್ರಾಸವು ಆಗುತ್ತಾ ಆಗುತ್ತ ಭೋಗ ಭೂಮಿಯ ಸ್ಥಾನವನ್ನು ಕರ್ಮಭೂಮಿಯು ತೆಗೆದುಕೊಂಡಾಗ ಭಗವಾನ್ ಋಷಭದೇವರು ಜನರ ಯೋಗಕ್ಷೇಮಕ್ಕೋಸ್ಕರ ಪುರುಷರಿಗೆ ಎಪ್ಪತ್ತೆರಡು ಕಲೆಗಳನ್ನು, ಸ್ತ್ರೀಯರಿಗೆ ಅರವತ್ತು ನಾಲ್ಕು ಗುಣಗಳನ್ನು ಬೋಧಿಸಿದರು. ಜೈನ ಅಂಗ ಸಾಹಿತ್ಯದ ಹದಿಮೂರನೆಯ ಪರ್ವದಲ್ಲಿ ಅವುಗಳ ವಿಸ್ತೃತ ವರ್ಣನೆಯು ಮಾಡಲ್ಪಟ್ಟಿದೆ.

"ಕಲಾ ಬಹತ್ತರ ಪುರುಷಕೀ, ತಾಮೋ ದೋ ಸರದಾರ।

ಏಕ ಜೀವಕೀ ಜೀವಿಕಾ, ತಾಮೇ ದೋ - ಉದ್ದಾರ।।"

ಜೈನಧರ್ಮದ ಪ್ರಧಾನ ಲಕ್ಷ್ಯವೇ ಜೀವದ ಉದ್ದಾರ. ಒಂದುವೇಳೆ ಜೀವದ ಉದ್ದಾರಕ್ಕಾಗಿ ಮಾಡಲ್ಪಡುವ ಸತ್ಪ್ರಯತ್ನಗಳ ಹೆಸರೇ ಜೈನಧರ್ಮವೆಂದರೂ ಅನುಚಿತವಾಗಲಾರದು. ಆದುದ್ದರಿಂದಲೇ ಇಂದು 'ಸತ್ಯಂ-ಶಿವಂ-ಸುಂದರಂ" ಅಂದರೆ ಸತ್ಯವೂ, ಕಲ್ಯಾಣಕರವೂ, ಸುಂದರವೂ ಆದುದೇ ಕಲೆಯೆಂದು ಮಾಡಲ್ಪಡುವ ಕಲೆಯ ಪರಿಭಾಷೆಯು ಜೈನ ಕಲೆಯಲ್ಲಿ ಸುಘಟಿತವಾಗುವುದು. ಏಕೆಂದರೆ ಜೈನಧರ್ಮಕ್ಕೆ ಸಂಬಂಧಪಟ್ಟ ಚಿತ್ರಕಲೆ, ಮೂರ್ತಿಕಲೆ ಹಾಗೂ ಸ್ಥಾಪತ್ಯ ಕಲೆಗಳು ಸುಂದರವಾಗಿರುವುದರೊಡನೆ ಕಲ್ಯಾಣಕರವು ಸತ್ಯವು ಆಗಿವೆ. ಕರ್ನಾಟಕದಲ್ಲಿ ಜೈನಧರ್ಮವು ಕ್ರಿಸ್ತ ಪೂರ್ವದಿಂದಲೇ ಹರಡಿರಬೇಕೆಂಬುದಕ್ಕೆ ಹಲವು ಶಾಸನ ಮತ್ತು ಸಾಹಿತ್ಯಿಕ ಆಧಾರಗಳು ದೊರೆಯುತ್ತದೆ. ಉತ್ತರ ಭಾರತದಲ್ಲಿ ಈ ಧರ್ಮವು ಉಗಮವಾದುದಾದರೂ ಕರ್ನಾಟಕದಲ್ಲಿ ಪ್ರಚಾರಗೊಂಡಂದಿನಿಂದ ಇಲ್ಲಿನ ಸಾಹಿತ್ಯ, ಕಲೆ, ಭಾಷೆ, ವಿದ್ಯಾಪ್ರಸಾರ ಹಾಗೂ ಸಾಮಾನ್ಯ ಜನರ ಜೀವನ ವಿಧಾನ, ನೈತಿಕ ಮೌಲ್ಯಗಳ ಪ್ರತಿಪಾದನೆಗಳಲ್ಲಿ ಪ್ರಮುಖ ಪಾತ್ರವನ್ನು ಈ ಧರ್ಮವಹಿಸಿದೆ. ಜೈನ ತೀರ್ಥಂಕರೆಲ್ಲರೂ ಉತ್ತರ ಭಾರತದಲ್ಲಿ ಜನಿಸಿ, ಧರ್ಮ ಪ್ರಚಾರ ಮಾಡಿದರೂ, ಜೈನ ಶಾಸ್ತ್ರಗ್ರಂಥಗಳು ರಚಿಸಿದ ಆಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರು. ಕರ್ನಾಟಕಕ್ಕೆ ಜೈನಧರ್ಮದ ಆಗಮನದ ಕಾಲವನ್ನು ಎಲ್ಲಾ ವಿದ್ವಾಂಸರು ಚಂದ್ರಗುಪ್ತ ಮತ್ತು ಭದ್ರಬಾಹು ಮುನಿಗಳ ಆಗಮನದ ಘಟನೆಯೊಡನೆ ಹೇಳುತ್ತಾರೆ.

ಕ್ರಿಸ್ತಪೂರ್ವ ಕಾಲದಲ್ಲಿ ಭದ್ರಬಾಹು ಭಟ್ಟಾರಕರು ಉಜ್ಜಯನಿಯಲ್ಲಿದ್ದಾಗ ಉತ್ತರ ದೇಶದಲ್ಲಿ ಹನ್ನೆರಡು ವರ್ಷಗಳ ಕಾಲ ಕ್ಷಾಮವುಂಟಾಗುತ್ತದೆಂಬುದನ್ನು ಅರಿತು ಚಂದ್ರಗುಪ್ತ ಮೊದಲಾದ ಶಿಷ್ಯರೊಡಗೂಡಿ ದಕ್ಷಿಣಕ್ಕೆ ಬಂದು ಕಳ್ಬಪ್ಪು ನಾಡಿನಲ್ಲಿ ಅಂದರೆ ಶ್ರವಣಬೆಳಗೊಳದಲ್ಲಿ ನೆಲೆ ನಿಂತರೆಂದು ಹೇಳಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಶ್ರವಣಬೆಳಗೊಳದಲ್ಲಿ ಶಾಸನಗಳು ಪತ್ತೆಯಾಗಿರುತ್ತವೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಜೈನ ಚಿತ್ರಕಲೆಯಲ್ಲಿ ಮುಖ್ಯವಾಗಿ ಶ್ರವಣಬೆಳಗೊಳ, ಮೂಡಬಿದರೆ, ಕಾರ್ಕಳ, ಸ್ಥಳಗಳಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದು. ಪ್ರಸ್ತುತ ಕ್ಷೇತ್ರಕಾರ್ಯ ಕೈಗೊಂಡ ಶ್ರವಣಬೆಳಗೊಳದಲ್ಲಿ ಸಿಗುವ ಜೈನ ಭಿತ್ತಿಚಿತ್ರಗಳನ್ನು ವಿಶ್ಲೇಷಿಸುವುದು ಇಲ್ಲಿ ಮುಖ್ಯವಾಗಿದೆ.

ಜೈನ ಚಿತ್ರಕಲೆ :

ಸಿರಗುಜಾ ರಾಜ್ಯಾಂತರ್ಗತ ಲಕ್ಷ್ಮಣಪುರದಿಂದ ಹನ್ನೆರಡು ಮೈಲುಗಳ ದೂರದಲ್ಲಿ ರಾಮಗಿರಿ ಎಂಬ ಪರ್ವತವಿದೆ. ಅಲ್ಲಿ ಜೋಗಿಮರಾ ಗುಹೆಗಳಿವೆ. ಗುಹೆಯ ಬಾಗಿಲಲ್ಲಿ ಬಹುಸುಂದರವಾದ ಚಿತ್ರಗಳಿರುವವು. ಈ ಚಿತ್ರಗಳು ಐತಿಹಾಸಿಕ ದೃಷ್ಟಿಯಿಂದ ಪ್ರಾಚೀನವಾಗಿವೆ. ಇವು ಜೈನಧರ್ಮಕ್ಕೆ ಸಂಬಂಧಪಟ್ಟವು. ಆದರೆ ರಕ್ಷಣೆಯ ಅಭಾವದಿಂದ ಚಿತ್ರಗಳ ಸ್ಥಿತಿಯು ತುಂಬಾ ಕೆಟ್ಟು ಹೋಗಿದೆ. ಪುದುಕೋಟೆಯ ರಾಜ್ಯದಲ್ಲಿ ರಾಜಧಾನಿಯಿಂದ ಒಂಬತ್ತು ಮೈಲುಗಳ ಉತ್ತರದಲ್ಲಿ ಒಂದು ಜೈನ ಗುಹಾಮಂದಿರವಿದೆ. ಇದನ್ನು ಸಿತ್ತನ್ನಿವಾಸಲವೆಂದು ಕರೆಯುತ್ತಾರೆ. ಸಿತ್ತನ್ನಿವಾಸಲದ ಪ್ರಾಕೃತ ರೂಪ ಸಿದ್ದ ನಿವಾಸ ಅಂದರೆ ಸಿದ್ದರ ನಿವಾಸ. ಇದರ ಭಿತ್ತಿ ಚಿತ್ರಗಳಲ್ಲಿ ಪೂರ್ವ ಪಲ್ಲವ ರಾಜರ ಶೈಲಿಯ ಚಿತ್ರಗಳಿವೆ. ಇವು ತಮಿಳು ಸಂಸ್ಕೃತಿ ಹಾಗೂ ಸಾಹಿತ್ಯದ ಮಹಾನ್ ಸಂರಕ್ಷಕನೂ ಪ್ರಸಿದ್ಧ ಕಲಾಕಾರನೂ ಆದ ರಾಜಮಹೇಂದ್ರ ವರ್ಮ, ಪ್ರಥಮ (ಕ್ರಿ.ಶ.೬೦೦–೬೨೫) ದಿಂದ ನಿರ್ಮಿಸಲ್ಪಟ್ಟವು. ಇವು ಅತ್ಯಂತ ಸುಂದರವಾಗಿರುವುದೇ ಮಾತ್ರವಲ್ಲ. ಎಲ್ಲದಕ್ಕಿಂತ ಪ್ರಾಚೀನ ಜೈನ ಚಿತ್ರಗಳು ಅಜಂತಾ ಸರ್ವೋತ್ಕೃಷ್ಟ ಚಿತ್ರಗಳೊಡನೆ ಸಿತ್ತನ್ನಿವಾಸಲದ ಚಿತ್ರಗಳ ತುಲನೆಯನ್ನು ಮಾಡುವುದು ಅನ್ಯಾಯವಾಗಬಹುದೆಂಬ ಮಾತು ನಿಸ್ಸಂದೇಹವಾದುದು. ಆದರೆ ಈ ಚಿತ್ರಗಳು ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಗೌರವಪೂರ್ಣವಾದ ಸ್ಥಾನವನ್ನು ಗಳಿಸಲರ್ಹವಾಗಿವೆ. ಇವುಗಳ ರಚನಾ ಶೈಲಿ ಬಹಳಮಟ್ಟಿಗೆ ಅಜಂತಾದ ಭಿತ್ತಿ ಚಿತ್ರಗಳನ್ನು ಹೋಲುತ್ತವೆ.

ಇಲ್ಲಿ ಈಗ ಭಿತ್ತಿ ಹಾಗೂ ಛತ್ತಿನಲ್ಲಿ ಕೇವಲ ಕೆಲವೇ ಚಿತ್ರಗಳು ಸ್ವಲ್ಪ ಉತ್ತಮ ಸ್ಥಿತಿಯಲ್ಲಿ ಉಳಿದಿವೆ. ಅವು ಬಹಳ ಕಡಿಮೆಯಾದರೂ ಸ್ಥಿರವೂ, ದೃಢವೂ ಆದ ರೇಖೆಗಳಿಂದ ಅತ್ಯಂತ ಸುಂದರವಾದ ಆಕೃತಿಗಳನ್ನು ಬಹಳ ನಿಪುಣತೆಯಿಂದ ಚಿತ್ರಿಸಿರುವುದೇ ಇದರ ವೈಶಿಷ್ಟ್ಯವಾಗಿದೆ. ಈ ಚಿತ್ರಗಳು ಸಜೀವಗಳಂತೆ ಕಾಣುತ್ತವೆ. ಒಳಗೆ ಪರ್ಯಂಕ ಮುದ್ರೆಯಲ್ಲಿ ಪುರುಷ ಪ್ರಮಾಣವುಳ್ಳ ಅತ್ಯಂತ ಸುಂದರವಾದ ಐದು ತೀರ್ಥಂಕರರ ಮೂರ್ತಿಗಳಿವೆ. ಮೂರ್ತಿ ವಿಧಾನ ಕಲೆಯ

ದೃಷ್ಟಿಯಿಂದಲೂ ಇವು ಉಲ್ಲೇಖನೀಯವಾಗಿವೆ. ವಾಸ್ತವಿಕವಾಗಿ ಪಲ್ಲವಕಾಲೀನ ಚಿತ್ರಗಳು ಭಾರತೀಯ ವಿದ್ವಾಂಸರಿಗೆ ಅಧ್ಯಯನ ವಸ್ತುವಾಗಿದೆ.

ಸಿತ್ತಿನ್ನಿವಾಸಲದ ಬಳಿಕ ಜೈನಧರ್ಮಕ್ಕೆ ಸಂಬಂಧಪಟ್ಟ ಚಿತ್ರಕಲೆಯ ಉದಾಹರಣೆಗಳು ಹತ್ತನೆಯ ಹಾಗೂ ಹನ್ನೊಂದನೆಯ ಶತಮಾನದಿಂದ ಹಿಡಿದು ಹದಿನೈದನೆಯ ಶತಮಾನದವರೆಗಿನವು ದೊರೆಯುತ್ತವೆ. ಈ ಮಧ್ಯಕಾಲೀನ ಚಿತ್ರಕಲೆಯ ಅವಶೇಷಗಳಿಗಾಗಿ ಭಾರತವು ಜೈನ ಭಂಡಾರಗಳಿಗೆ ಋಣಿಯಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಏಕೆಂದರೆ ಒಂದನೆಯ ಕಾರಣ ಈ ಕಾಲದಲ್ಲಿ ಪ್ರಾಯಶಃ ಒಂದು ಸಾವಿರ ವರುಷಗಳ ತನಕ ಜೈನಧರ್ಮದ ಪ್ರಭಾವವು ಭಾರತದಲ್ಲಿ ವರ್ಷಗಟ್ಟಲೆ ಒಂದು ಬಹಳ ದೊಡ್ಡ ಸಂಖ್ಯೆಯಲ್ಲಿ ಧಾರ್ಮಿಕ ಗ್ರಂಥಗಳನ್ನು ತಾಳೆಯೋಲೆಯಲ್ಲಿ ಬರೆಸಿದರು ಹಾಗೂ ಚಿತ್ರಿಸಿದರು. ವಿ.ಸಂ.೧೧೫೭ರಲ್ಲಿ ಚಿತ್ರಿತ ನಿಶೀಥಚೂರ್ಣಿಯ ಪ್ರತಿಯು ಇಂದು ಉಪಲಬ್ಧವಾಗುತ್ತದೆ. ಇದು ಜೈನಾಶ್ರಿತ ಕಲೆಯಲ್ಲಿ ಅತೀ ಪ್ರಾಚೀನವಾದುದು. ಹದಿನೈದನೆಯ ಶತಮಾನದ ಪೂರ್ವದ ಉಪಲಬ್ಧ ಎಲ್ಲಾ ಕಲಾತ್ಮಕ ಚಿತ್ರಕೃತಿಗಳು ಕೇವಲ ಜೈನಗ್ರಂಥಗಳಲ್ಲಿಯೇ ಸಿಗಬಲ್ಲವು[೭] ಎಂಬುದನ್ನು ಗಮನಿಸಬಹುದಾಗಿದೆ.

ವಿಜಯನಗರ ರಾಜ್ಯ :

ದಕ್ಷಿಣ ಭಾರತದಲ್ಲಿ ಜೈನಧರ್ಮವು ರಾಜಾಶ್ರಯದಿಂದ ವಂಚಿತವಾಯಿತು. ಆದರೂ ಗುಣಗ್ರಾಹಿ ರಾಜರು ಜೈನ ಗುರುಗಳಿಗೂ, ವಿದ್ವಾಂಸರಿಗೂ, ಮುಂದಾಳುಗಳಿಗೂ ಯಥೋಚಿತವಾದ ಗೌರವವನ್ನು ನೀಡುತ್ತಿದ್ದರು. ಅಂತಹ ರಾಜರುಗಳಲ್ಲಿ ವಿಜಯನಗರ ಸಾಮ್ರಾಜ್ಯದ ನಾಯಕರ ಹೆಸರು ಉಲ್ಲೇಖಾರ್ಹವಾಗಿದೆ. ಈ ರಾಜ್ಯವು ವೈದಿಕ ಧರ್ಮದ ಪೋಷಕವಾಗಿತ್ತು. ಆದರೆ ಇದರ ನಿರೇಶರು ಬೇರೆ ಬೇರೆ ಧರ್ಮಾವಲಂಬಿಗಳ ಸಂಬಂಧದಲ್ಲಿಯೂ ಉದಾರತೆಯನ್ನು ತೋರಿಸುತ್ತಿದ್ದರು. ಈ ರಾಜ್ಯದ ಉನ್ನತಾಧಿಕಾರಿಗಳಲ್ಲಿ ಹೆಚ್ಚಾಗಿ ಜೈನಧರ್ಮಾವಲಂಬಿಗಳೇ ಇದ್ದರು. ಆದುದ್ದರಿಂದ ರಾಜರೂ ಜೈನಧರ್ಮದ ಸಂಬಂಧದಲ್ಲಿ ವಿಶೇಷ ನಿಗಾ ತೆಗೆದುಕೊಳ್ಳಬೇಕಾಗಿತ್ತು. ಎರಡನೇ ಹರಿಹರನ ಸೇನಾಪತಿಯಾದ ಇರುಗಪ್ಪನು ದೃಢವಾದ ಜೈನ ಧರ್ಮಾನುಯಾಯಿಯಾಗಿದ್ದನು. ಅವನು ೫೯ ವರ್ಷಗಳ ತನಕ ವಿಜಯನಗರ ರಾಜ್ಯದ ಅತ್ಯುನ್ನತವಾದ ಪದವಿಗಳನ್ನು ಯೋಗ್ಯತೆಯಿಂದ ನಿರ್ವಹಿಸಿದನು. ವಿಜಯನಗರದ ರಾಣಿಯರೂ ಜೈನಧರ್ಮವನ್ನು ಪಾಲಿಸುತ್ತಿದ್ದರು. ಶ್ರವಣಬೆಳಗೊಳದ ಒಂದು ಶಿಲಾಲೇಖದಿಂದ ಮಹಾರಾಜ ದೇವರಾಯನ ರಾಣಿ ಭೀಮಾದೇವಿಯು ಜೈನಗಳಾಗಿದ್ದಳೆಂದು ತಿಳಿದುಬರುತ್ತದೆ. ಸನ್ ೧೩೬೮ನೆಯ ಒಂದು ಶಿಲಾಲೇಖದಂತೆ ಜೈನರು ಮೊದಲನೆಯ ಬುಕ್ಕರಾಯರಲ್ಲಿ ವೈಷ್ಣವರು ನಮಗೆ ಬಹಳ ಅನ್ಯಾಯವನ್ನು ಮಾಡುತ್ತಿದ್ದಾರೆಂದು ಪ್ರಾರ್ಥಿಸಿಕೊಂಡಾಗ ರಾಜನು ಪರ್ಯಾಪ್ತ ಶೋಧನೆಯನ್ನು ನಡೆಸಿ, ಜೈನ ಹಾಗೂ ವೈಷ್ಣವರೊಡನೆ ಮೈತ್ರಿಯನ್ನುಂಟುಮಾಡಿ ಈ ಕೆಳಗಿನ ಆಜ್ಞೆಯನ್ನಿತ್ತನು.

ಜೈನ ದರ್ಶನವು ಮೊದಲಿನಂತೆಯೇ ಪಂಚಮಹಾಶಬ್ದಕ್ಕೂ, ಕಲಶಕ್ಕೂ ಅಧಿಕಾರಿಯಾಗಿದೆ. ಯಾವನಾದರೊಬ್ಬ ವೈಷ್ಣವನು ಜೈನರಿಗೆ ಯಾವ ಪ್ರಕಾರವಾದ ಹಾನಿಯನ್ನುಂಟು ಮಾಡಿದರೂ ವೈಷ್ಣವರು ಅದನ್ನು ತಮ್ಮ ಧರ್ಮದ ಹಾನಿಯನ್ನಾಗಿಯೇ ತಿಳಿಯಬೇಕು. ವೈಷ್ಣವರು ಈ ಮಾತಿನ ಕಟ್ಟಪ್ಪಣೆಯ ಶಾಸನವನ್ನು ಸ್ಥಾನ-ಸ್ಥಾನಗಳಲ್ಲಿ ಬರೆಸಬೇಕು. ಸೂರ್ಯ, ಚಂದ್ರರು ಇರುವ ತನಕ ವೈಷ್ಣವರು ಜೈನ ದರ್ಶನವನ್ನು ಕಾಪಾಡುವರು. ವೈಷ್ಣವರೂ, ಜೈನರೂ ಒಂದೇ ಆಗಿದ್ದಾರೆ. ಅವರನ್ನು ಬೇರೆ ಬೇರೆಯಾಗಿ ತಿಳಿಯಬಾರದು. ವೈಷ್ಣವರಿಂದಲೂ ಹಾಗೂ ಜೈನರಿಂದಲೂ ವಸೂಲು ಮಾಡಲ್ಪಡುವ ಕರದಿಂದ ಶ್ರವಣಬೆಳಗೊಳದಲ್ಲಿ ರಕ್ಷಕರನ್ನಿಡಬೇಕು. ಅನಿಯುಕ್ತ ವೈಷ್ಣವರಿಂದಲೇ ನಡೆಯಬೇಕು. ಅದರಲ್ಲಿ ಉಳಿಯುವ ಹಣವನ್ನು ಜಿನಾಲಯಗಳ ದುರಸ್ತಿ ಹಾಗೂ ಅವುಗಳಿಗೆ ಸುಣ್ಣ ಬಳಿಯುವ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬೇಕು. ಹೀಗೆ ಅವರು ಪ್ರತಿವರ್ಷ ದಾನ ಕೊಡುವುದಕ್ಕೆ ತಪ್ಪದೇ ಕೀರ್ತಿಯನ್ನು, ಸಮ್ಮಾನವನ್ನು ಗಳಿಸಬೇಕು. ಈ ಆಜ್ಞೆಯನ್ನು ಮೀರುವವನು ರಾಜದ್ರೋಹಿಯು, ಸಂಘ ದ್ರೋಹಿಯು, ಸಂಪ್ರದಾಯ ದ್ರೋಹಿಯು ಆಗುವುದು[೮] ಎಂಬ ಅಪ್ಪಣೆಯಂತೆ ವೈಷ್ಣವಕ್ಕೂ, ಜೈನಕ್ಕೂ ಅವಿನಾಭಾವ ಸಂಬಧವಿದ್ದು ಅದೇ ರೀತಿ ಶ್ರವಣಬೆಳಗೊಳದ ಮಠವೊಂದರಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಗಮನಿಸಬಹುದು.

ಶ್ರೀಮಠ :

ಶ್ರವಣಬೆಳಗೊಳದ ಭಂಡಾರಿ ಬಸದಿಯ ಬಲಭಾಗದಲ್ಲಿ ಒಳಗಡೆ ಪಶ್ಚಿಮಕ್ಕೆ ಮುಖ ಮಾಡಿರುವ ಜೈನ ಮಠವು ಮಧ್ಯೆ ತೊಟ್ಟಿ ಮನೆಯಂತಿದ್ದು ಅನೇಕ ಕೋಣೆಗಳನ್ನೊಳಗೊಂಡಿದೆ. ಬಾಗಿಲಿನ ಎದುರಿಗೆ ಇರುವ ಮೂರು ಕೋಣೆಗಳಲ್ಲಿ ಅನೇಕ ಜಿನ ಯಕ್ಷ-ಯಕ್ಷಿಯರ ಪ್ರತಿಮೆಗಳಿವೆ ಹಾಗೂ ಅನೇಕ ಪ್ರಾಚೀನ, ಅರ್ವಾಚೀನ ವಿಗ್ರಹಗಳು ಇಲ್ಲಿವೆ. ಈ ಮಠದ ಪರಂಪರೆ ಎಷ್ಟು ಹಳೆಯದೆಂಬುದು ನಿರ್ಧರಿಸುವುದು ಕಷ್ಟ. ಆದರೆ ೧೦ನೆಯ ಶತಮಾನದಲ್ಲಿಯೇ ಸ್ವಾಮಿಗಳ ಉಲ್ಲೇಖ ಬಂದಿರುವುದರಿಂದ ಆ ಕಾಲದಲ್ಲಿಯೇ ಇಲ್ಲಿ ಮಠವಿದ್ದಿರಬಹುದೆಂದು ಊಹಿಸಬಹುದಾಗಿದೆ. ಪ್ರಸ್ತುತ ಈ ಮಠದ ಕಟ್ಟಡವು ಮೈಸೂರು ಅರಸರ ಕಾಲದಾಗಿದ್ದು, ಬಹುಶಃ ಇಲ್ಲಿನ ಹಳೆಯ ಕಟ್ಟಡವನ್ನು ಕಿತ್ತು ಹೊಸದಾಗಿ ಕಟ್ಟಿಸಿರಬಹುದು. ಭಂಡಾರಿ ಹುಳ್ಳಮಯ್ಯನು ಭಂಡಾರಿ ಬಸದಿಯನ್ನು ಇಲ್ಲಿ ಕಟ್ಟಿಸಿದ ಮೇಲೆ ಮಠವು ಅಕ್ಕನ ಬಸದಿ ಕಡೆಯಿಂದ (ದಾನಸಾಲಾ ಬಸದಿ ಹಾಗೂ ಸಿದ್ಧಾಂತ ಬಸದಿಯಿಂದ) ಇಲ್ಲಿಗೆ ಬದಲಾಯಿಸಿರಬಹುದು. ಈಗಿರುವ ಕಟ್ಟಡದ ಮೇಲುಪ್ಪರಿಗೆಯನ್ನು ಈ ಶತಮಾನದ ಸುಮಾರು ೧೯೩೦ರಲ್ಲಿ ನಿರ್ಮಿಸಿರುತ್ತಾರೆ. ಮಠದ ಸುತ್ತಲೂ ಅಲಂಕಾರಿಕವಾಗಿ ನಿರ್ಮಿಸಿರುವ ಗಾರೆಯ ಗೂಡುಗಳಲ್ಲಿ ಸರಸ್ವತಿ, ಅಂಬಿಕೆ, ಪದ್ಮಾವತಿ ಹಾಗೂ ಇಂದ್ರ ಮುಂತಾದ ಗಾರೆಯ ಮಾಧ್ಯಮದ ಸುಂದರವಾದ ಮೂರ್ತಿಗಳಿವೆ. ಈ ಮೂರ್ತಿಗಳಿಗೆ ಬಣ್ಣವನ್ನು ಹಚ್ಚಿರುವ ಕುರುಹುಗಳನ್ನು ಕಾಣಬಹುದಾಗಿದೆ. ಜೈನ ಮಠದ ಭಿತ್ತಿಚಿತ್ರ ಕಲಾಕೃತಿಗಳ ಅಪೂರ್ವ ಭಂಡಾರವನ್ನು ಈಗಲೂ ಕಾಣಬಹುದು.

ಇಲ್ಲಿ ಮಠವನನು ಪ್ರವೇಶ ಮಾಡಿದೊಡನೆ ಎದುರುಗಡೆ ಕಾಣುವ ಗರ್ಭಗೃಹದ ಬಲಭಾಗದಲ್ಲಿ ಗೋಡೆಯ ಮೇಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ಅವರ ದಸರಾ ದರ್ಬಾರಿನ ಚಿತ್ರಗಳು ನಮ್ಮ ಗಮನವನ್ನು ಸೆಳೆಯುತ್ತದೆ. ಆದರೆ ಎಡಗಡೆ ಗೋಡೆಯ ಮೇಲೆ ಮೂರು ಸಾಲು ಚಿತ್ರಗಳಿವೆ. ಅವುಗಳಲ್ಲಿ ಮೇಲಿನಿಂದ ಮೊದಲನೆಯ ಸಾಲಿನಲ್ಲಿ ಪಂಚಪರಮೇಷ್ಠಿಗಳನ್ನು ಚಿತ್ರಿಸಲಾಗಿದೆ. ಮಧ್ಯದ ಸಾಲಿನಲ್ಲಿ ನೇಮಿನಾಥ, ಯಕ್ಷ–ಯಕ್ಷಿಯರ ಚಿತ್ರಗಳು, ಕೆಳಗಡೆ ಸಾಲಿನಲ್ಲಿ ಮಠದ ಸ್ವಾಮಿಗಳ ಚಿತ್ರಗಳೂ ಇವೆ. ತಮ್ಮ ಶಿಷ್ಯರಿಗೆ ಧಾರ್ಮಿಕ ಉಪದೇಶವನ್ನು ಮಾಡುತ್ತಿರುವಂತೆ ಈ ಸ್ವಾಮಿಗಳನ್ನು ಚಿತ್ರಿಸಲಾಗಿದೆ. ಉತ್ತರ ದಿಕ್ಕಿನ ಗೋಡೆಯ ಮೇಲೆ ಪಾರ್ಶ್ವನಾಥನ ಸಮವಸರಣದ ಚಿತ್ರ ವಸ್ತುವನ್ನು ಮುಖ್ಯವಾಗಿ ಚಿತ್ರಿಸಲಾಗಿದೆ. ಇದರ ಸುತ್ತಲೂ ಇರುವ ವೃತ್ತಾಕಾರದಲ್ಲಿ ಕುತೂಹಲಕರವಾದ ಅನೇಕ ಚಿತ್ರಗಳಿವೆ. ದಕ್ಷಿಣ ದಿಕ್ಕಿನ ಗೋಡೆಯ ಮೇಲೆ ಸ್ವಾಮಿಗಳು ಇರುವ ಕೋಣೆಯ ಬಲಭಾಗದಲ್ಲಿ ಭರತ ಚಕ್ರವರ್ತಿಯ ಜೀವನವನ್ನು ಆಧರಿಸಿದ ಸನ್ನಿವೇಶಗಳು ನಿರೂಪಿಸಲ್ಪಟ್ಟಿವೆ. ಪಶ್ಚಿಮ ದಿಕ್ಕಿನ ಗೋಡೆಯ ಮೇಲಿರುವ ಎರಡು ಸಾಲುಗಳಲ್ಲಿಯೂ ಈ ಕಥೆಯೇ ಮುಂದುವರೆದಿದೆ. ಇಲ್ಲಿನ ಚಿತ್ರಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಇವುಗಳಲ್ಲಿ ಕೆಲವಾದರೂ ಪ್ರಾಚೀನವಾಗಿದ್ದಿರಬೇಕು. ಆದರೆ ಬಹುಪಾಲು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದವುಗಳೆನ್ನಬಹುದು. ಮೈಸೂರು ಶೈಲಿಯ ಭಿತ್ತಿ ಚಿತ್ರಗಳಲ್ಲಿ ಬಹಳ ಪ್ರಮುಖವಾದ ಸ್ಥಾನವನ್ನು ಹೊಂದಿರುವುದು ಕಂಡುಬರುತ್ತದೆ. ಇಲ್ಲಿರುವ ಕೆಲವು ಭಿತ್ತಿ ಚಿತ್ರಗಳು ಆಕರ್ಷಣೀಯವಾಗಿವೆ.

ಭಿತ್ತಿ ಚಿತ್ರಗಳ ವಸ್ತುವಿಷಯ :

ರಾಜ ವಿಶ್ವಸೇನರಾಣಿ ಬ್ರಾಹ್ಮೀಯಚಿತ್ರ, ಮಕ್ಕಳು ಮತ್ತು ಇಂದ್ರನ ದೃಶ್ಯ, ಅಂಬಾರಿ ಮೇಲೆ ಮಗು ಪಾರ್ಶ್ವನ ಮೆರವಣಿಗೆ ದೃಶ್ಯ, ಈತನೊಬ್ಬನು ಭೋದನೆ ಮಾಡುತ್ತಿರುವ ದೃಶ್ಯ, ನಾತೇಂದ್ರ ಮತ್ತು ಪದ್ಮಾವತಿ ಶ್ರೀಸ್ವಾಮಿಯ ರಕ್ಷಣೆಗೈಯುತ್ತಿರುವುದು, ಆನಂದರಾಜ ಮತ್ತು ಸಿಂಹದ ದೃಶ್ಯ, ಪಾರ್ಶ್ವಕುಮಾರ ಮತ್ತು ಮುನಿ, ಮುನಿ ಮತ್ತು ಬೇಟೆಗಾರ,ಸಮವಸರಣ ವೃತ್ತ,ಜೈನಲೇಶ್ಯಗಳು (ಮೂರು ಒಳ್ಳೆಯ ಮೂರು ಕೆಟ್ಟ ಗುಣಗಳು), ಅಪರಾಧಿಗೆ ಶಿಕ್ಷೆ ವಿಧಿಸುತ್ತಿರುವುದು, ಹೆಬ್ಬಾವು, ಮುನಿಯನ್ನು ನುಂಗುತ್ತಿರುವ ದೃಶ್ಯ, ಮುನಿ ಮತ್ತು ಆನೆ ದೃಶ್ಯ, ಕೆಸರಿನಲಿ ಸಿಲುಕಿರುವ ಆನೆ ದೃಶ್ಯ, ದಿವ್ಯ ಸಮವಸರಣ ದೃಶ್ಯ,, ಮೆರವಣಿಗೆ ದೃಶ್ಯ, ರಾಣಿಯೊಂದಿಗೆ ಸೇವಕಿಯರು, ಮೆರವಣಿಗೆಯಲ್ಲಿ ವಾದ್ಯಗಾರರು, ಆರುಲೇಶ್ಯದ ಚಿತ್ರ, ಮಂಟಪದಲ್ಲಿ ಬ್ರಾಹ್ಮಿಲಾದೇವಿ ಹಾಗೂ ವಾದ್ಯಾಗಾರರು, ಮೆರವಣಿಗೆಯಲ್ಲಿ ನೃತ್ಯದ ದೃಶ್ಯ, ಮುನಿಗಳಿಗೆ ಕಾಡುಜನರಿಂದ ಹೆದರಿಸುವ ಸನ್ನಿವೇಶ, ತಿರ್ಥಂಕರರು ಹಾಗೂ ದೇವತೆಗಳ ದೃಶ್ಯ, ಕಮ್ಮಠ ಮರಭೂತಿ ತಲೆಗೆ ಬಂಡೆಗಲ್ಲು ಹಾಕುವ ದೃಶ್ಯ, ಮುನಿಗಳಿಗೆ ದೀಕ್ಷೆ ನೀಡುವ ದೃಶ್ಯ, ಸರ್ಪಗಳಿಗೆ ಹೊಡೆಯಬೇಡಿ ಎನ್ನುತ್ತಿರುವ ಮರುಭೂತಿ, ಯುದ್ಧದ ದೃಶ್ಯ, ಮಾರುಕಟ್ಟೆಯ ದೃಶ್ಯ, ಪಲ್ಲಕ್ಕಿ ಮೆರವಣಿಗೆಯ ದೃಶ್ಯ, ಮುನಿಗಳ

ಧ್ಯಾನಕ್ಕೆ ಸಿಂಹವು ಅಡ್ಡಿವುಂಟು ಮಾಡುತ್ತಿರುವ ದೃಶ್ಯ, ವಿಶ್ವಸೇನರಾಜ ಹಾಗೂ ಬ್ರಾಹ್ಮಿಲಾದೇವಿ, ಅರಮನೆಯಲ್ಲಿ ಚರ್ಚೆಯ ದೃಶ್ಯ, ಮದವೇರಿದ ಆನೆ, ಮಾರುಕಟ್ಟೆಯ ದೃಶ್ಯ, ಪೂಜಾ ಸಾಮಾಗ್ರಿಗಳು, ದ್ವಾರಪಾಲಕರು, ಶ್ರೀಮಠದ ಮಹಾದ್ವಾರ, ಪ್ರವೇಶದ ಎಡಬದಿಯ ಗೋಪುರದಲ್ಲಿನ ಶಿಲ್ಪಗಳು ಮೂರ್ತಿಶಿಲ್ಪಗಳಿರುವುದನ್ನು ಕಾಣಬಹುದು. ಈ ಮಠದ ಒಟ್ಟು ವಿಸ್ತರಣ ೫೦* ೫೦' ಚಂದ್ರ ಬಸದಿಯನ್ನು ಪ್ರವೇಶಿಸಿದೊಡನೆ ಎಡಭಾಗದಲ್ಲಿನ ಆರಂಭಿಕ ಭಿತ್ತಿಚಿತ್ರಗಳು ಚೌಕಾಕಾರ ಆಯತಾಕಾರ ಸುಮಾರು ೧೨ ಅಡಿ ಎತ್ತರ ೧೮ ಅಡಿ ಅಗಲ ಅಳತೆಯವು ಮತ್ತು ೧೦ ಅಡಿ ಎತ್ತರ, ೧೪ ಅಡಿ ಉದ್ದ ಅಳತೆಯ ಭಿತ್ತಿಚಿತ್ರಗಳನ್ನು ಗೋಡೆ ಮೇಲೆ ರಚಿಸಲಾಗಿರುತ್ತದೆ.

ಚಿತ್ರ–೧ : ಈ ಅಂಕಣದ ಚಿತ್ರವೂ ಹನ್ನೆರೆಡು ಅಡಿ ಎತ್ತರ ಮತ್ತು ಹದಿನೆಂಟು ಅಡಿ ಉದ್ದವಿದ್ದು, ಈ ಪಟ್ಟಿಕೆಯಲ್ಲಿ ಹನ್ನೆರಡು ಬಿಡಿ ಭಾಗಗಳನ್ನಾಗಿ ಮಾಡಿಕೊಂಡು ಭಿತ್ತಿಯ ಮೇಲೆ ಬಣ್ಣಗಳಿಂದ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ. ಈ ಚಿತ್ರದಲ್ಲಿ ಮೇಲಿನಿಂದ ಕೆಳಗಡೆ ಮೂರು ಸಾಲುಗಳಲ್ಲಿ ಚಿತ್ರಗಳಿದ್ದು, ಮೊದಲನೆ ಸಾಲಿನಲ್ಲಿ ಪಂಚ ಪರಮೇಷ್ಠಿಗಳನ್ನು ಚಿತ್ರಿಸಲಾಗಿದೆ. ಇವುಗಳಲ್ಲಿ ಅರಿಹಂತರು ದರ್ಶನಾವರಣ, ಜ್ಞಾನಾವರಣ, ಮೊಹನೀಯ ಮತ್ತು ಅಂತರಾಯಗಳೆಂಬ ನಾಲ್ಕು ಘಾತಿ ಕರ್ಮಗಳನ್ನು ಗೆದ್ದಿರುತ್ತಾರೆ. ಸಿದ್ದರು ಎರಡನೇ ಪರಮೇಷ್ಠಿಗಳು ಇವರು ಸಕಲ ಕರ್ಮಗಳಿಂದ ಬಿಡುಗಡೆ ಹೊಂದಿರುತ್ತಾರೆ. ಮತ್ತೆ ಸಂಸಾರಕ್ಕೆ ಬರುವುದಿಲ್ಲ. ಆಚಾರ್ಯರು ಮೂರನೇ ಪರಮೇಷ್ಠಿಗಳು ಇವರು ಶುದ್ಧ ತತ್ವಗಳನ್ನು ಇತರರಿಗೆ ಬೋಧಿಸುತ್ತಾರೆ. ಅವುಗಳನ್ನು ಸ್ವತಃ ಆಚರಿಸುತ್ತಾರೆ. ಉಪಾಧ್ಯಯರು ನಾಲ್ಕನೇ ಪರಮೇಷ್ಠಿಗಳು ಇವರಿಗೆ ಇಪ್ಪತ್ತೊಂದು ಗುಣಗಳಿರುತ್ತವೆ. ಇವರದು ಚಿನ್ನದ ಬಣ್ಣ ಸಾಧುಗಳು ಐದನೇ ಪರಮೇಷ್ಠಿಗಳು ಶಿಷ್ಯರಿಗೆ ಬೋಧಿಸುತ್ತಾರೆ. ಇಲ್ಲಿ ಚಿತ್ರಿಸಿರುವ ಚಿತ್ರಗಳು ಅತಿ ಕಡಿಮೆ ವರ್ಣಗಳಿಂದ ರಚಿಸಲಾಗಿದ್ದು, ಈ ಚಿತ್ರದಲ್ಲಿ ವಿಶೇಷವೆಂದರೆ ಯುದ್ದದ ಸನ್ನಿವೇಶ. ಮೋಡಗಳತ್ತ ಸುರಿಯುತ್ತಿರುವ ಬಾಣಗಳ ಸದ್ದಿಗೆ ದೇವಾನು ದೇವತೆಗಳು ತಮ್ಮ ಶಕ್ತಿಯನುಸಾರ ಅವುಗಳಿಂದ ಪಾರಾಗುವ ರೀತಿಯನ್ನು ಸೌಜನ್ಯವಾಗಿಯೇ ಕಲಾವಿದರು ಚಿತ್ರಿಸಿರುವುದುಂಟು.

ಪಾರ್ಶ್ವನಾಥ ತೀರ್ಥಾಂಕರರ ಒಂಭತ್ತು ಭವಗಳ ಸರಣಿ ಚಿತ್ರಗಳು ಇಲ್ಲಿಂದ ಮುಂದುವರೆಯುತ್ತವೆ. ಭರತದೇಶ ಜಂಬುದ್ವೀಪ ಸುರಮ್ಯ ಎಂಬ ನಗರದಲ್ಲಿ ಅರವಿಂದ ಮಹಾರಾಜ ಒಬ್ಬ ಮಹಾ ಪುಣ್ಯವಂತ ರಾಜ ಇವನ ಆಡಳಿತದ ಚಿತ್ರಗಳು ಇವೆ. ಅರವಿಂದ ಮಹಾರಾಜನ ಆಸ್ಥಾನದಲ್ಲಿ ವಿಶ್ವಭೂತಿ ಎಂಬ ಪುರೋಹಿತ ಮತ್ತು ಮಂತ್ರಿ ಇವರಿಗೆ ಇಬ್ಬರು ಮಕ್ಕಳು ಕಮಠ ಹಾಗೂ ಮರುಭೂತಿ. ಈ ಮರುಭೂತಿಯೇ ಪಾರ್ಶ್ವನಾಥ ತೀರ್ಥಂಕರರ ಮೊದಲ ಜನ್ಮವಾಗಿರುತ್ತದೆ.

ಅರವಿಂದ ಮಹಾರಾಜರ ಆಸ್ಥಾನದ ದೃಶ್ಯ, ರಾಜನು ವಿಜಯನಗರ ಕಾಲದ ಕಿರೀಟ ಧರಿಸಿದ್ದು ಹಾಗೂ ಸುತ್ತಲೂ ಸೇವಕರು ಸೇವಕಿಯರು ನಿಂತಿರುತ್ತಾರೆ. ಎಲ್ಲರ ಮುಖ ಬಣ್ಣಗಳು ಕೆಂಪು ಮಿಶ್ರಿತ ಹಳದಿ ಬಣ್ಣದಿಂದ ಕೂಡಿದ್ದು ಉಡುಗೆ ತೊಡುಗೆಗಳು ಕಡುಗೆಂಪು ದಟ್ಟ ನೀಲಿ

ಹಾಗೂ ಹಸಿರು ವರ್ಣಗಳಿಂದ ಚಪ್ಪಟೆ ವರ್ಣಗಳಿಂದ ಕೂಡಿದ್ದು, ಬಟ್ಟೆಗಳಲ್ಲಿ ಸಣ್ಣ ಸಣ್ಣ ಹೂಗಳು, ರೇಖೆಗಳು ಮತ್ತು ಚುಕ್ಕೆ ಆಕಾರಗಳಿಂದ ಅಲಂಕೃತಗೊಳಿಸಲಾಗಿದೆ. ಇಲ್ಲಿ ಬರುವ ಎಲ್ಲಾ ಮನುಷ್ಯಾಕೃತಿಗಳು ಮುಖ ಮತ್ತು ಪಾದಗಳು ಒಂದು ಬದಿಗೆ ಹೊರಳಿದ ಹಾಗೆ ಇದ್ದುದು ಕೆಲವು ಆಕೃತಿಗಳು ಮಾತ್ರ ಎದುರು ಮುಖಗಳಿಂದ ಕೂಡಿವೆ. ವಿಶಾಲವಾದ ಕಣ್ಣು ಎತ್ತರವಾಗಿ ತಿದ್ದಿದ ಹಾಗೆ ಕಾಣುವ ಉಬ್ಬು, ಚೂಪಾದ ತ್ರಿಕೋನಾಕಾರದ ಮೂಗು ಅಲಂಕಾರಿಕವಾಗಿ ತುಟಿ ಮತ್ತು ಗದ್ದ ಕೂಡಿದು ದುಂಡಾದ ಮುಖಗಳಾಗಿವೆ ಹಾಗೂ ಕೆಳಪಟ್ಟಿಯಲ್ಲಿ ದಾಸವಾಳ ಹೂ ಎಲೆಯಿಂದ ಪುನರಾವರ್ತನೆಯಾದ ನಕ್ಷೆಯನ್ನು ಕಾಣಬಹುದು ಹೂ ಕೆಂಪು ಬಣ್ಣ ಬಳಸಿದ್ದು ದಟ್ಟ ಹಸಿರಿನ ಎಲೆ ಬಳ್ಳಿ ಕಾಣುವುದು.

ಅರವಿಂದ ಮಹಾರಾಜರು ಮತ್ತು ಮರುಭೂತಿ ಇರ್ವರು ಯುದ್ಧಕ್ಕೆ ಹೋಗುವ ಪ್ರಸಂಗ ಬರುತ್ತದೆ. ಇದಕ್ಕೆ ಸಂಬಂಧಿಸಿದ ಚಿತ್ರಗಳು ಇಲ್ಲಿವೆ. ಇಲ್ಲಿ ಆನೆಯ ಮೇಲೆ ಅರವಿಂದ ಮಹಾರಾಜರು ಕುಳಿತಿದ್ದು, ಕುದುರೆ ಸಾಲು ಸೈನಿಕರು ಹೊರಟ ದೃಶ್ಯವಿದೆ. ಕಪ್ಪು ಆನೆಗಳು, ಬಿಳಿ ಕುದುರೆಗಳ ಬಂಡಿಯಲ್ಲಿ ರಾಜರು ಕುಳಿತು ಸಾಗುತ್ತಿರುವ ದೃಶ್ಯವಿದೆ. ಸೈನಿಕರು ಕೈಯಲ್ಲಿ ಭರ್ಜಿಗಳನ್ನು ಹಿಡಿದುಕೊಂಡು ಹೋಗುತ್ತಿರುವ ಹಿನ್ನೆಲೆಯಲ್ಲಿ ಚಪ್ಪಟೆಯಾಗಿ ಪಾಚಿ ಬಣ್ಣದಿಂದ ತುಂಬಿಸಲಾಗಿರುವುದನ್ನು ಕಾಣಬಹುದು.

ನಂತರದ ಚಿತ್ರಗಳಲ್ಲಿ ಯುದ್ಧದ ಸನ್ನಿವೇಶಗಳಿದ್ದು, ಬಿಲ್ಲು ಬಾಣಗಳಿಂದ ಹೊಡೆಯುತ್ತಿರುವ ದೃಶ್ಯ ಇಲ್ಲಿ ಬಾಣಗಳು ಆಕಾಶದಲ್ಲಿ ಕಾಣುವ ಹಲವಾರು ಬಾಣಗಳು ಕಂಡುಬರುತ್ತವೆ. ಸಹೋದರ ಇತ್ತರ ಮರುಭೂತಿಯ ಸೋದರ ಕಮಠನು ಮರುಭೂಮಿಯ ಹೆಂಡತಿಯಾದ ವಸುಂಧರೆಯನ್ನು ಮೋಹಿಸಿ ಅವಳ ಶೀಲ ಹರಣ ಮಾಡುತ್ತಾನೆ. ಇವನಿಗೆ ಕೆಟ್ಟ ವಿಚಾರಗಳನ್ನು ಪ್ರಚೋದಿಸಲು ಇವನ ಸ್ನೇಹಿತ ಹಂಸನಿರುತ್ತಾನೆ. ಈ ಚಿತ್ರವು ಸುಂದರವಾಗಿದೆ ಎಲ್ಲಾ ಭಾಗಗಳಲ್ಲಿ ಚಪ್ಪಟೆ ವರ್ಣಗಳಿದ್ದು, ಇಲ್ಲಿ ಹಲವಾರು ಚಿತ್ರಗಳು ನಶಿಸಿ ಹೋಗಿರುತ್ತವೆ.

ಚಿತ್ರ–೨ : ಅರವಿಂದ ಮಹಾರಾಜ ಹಾಗೂ ಮರುಭೂತಿಯ ಯುದ್ಧದಿಂದ ಮರಳಿ ಬಂದ ಮೇಲೆ ಕಮಠನು ಮರುಭೂತಿಯ ಹೆಂಡತಿಯ ಶೀಲಹರಣ ಮಾಡಿದ್ದುದನ್ನು ತಿಳಿದು ಕಮಠನ ಮೇಲೆ ಸಿಟ್ಟಿನಿಂದ ಹೊಡೆಯುವನಂತೆ ಆದರೂ ಸ್ವಲ್ಪ ಸ್ವಲ್ಪ ಕ್ಷಮಿಸಿ, ಸಹೋದರ ಕಮಠನಿಗೆ ಬುದ್ಧಿವಾದ ಹೇಳಿ ನಿನ್ನ ಈ ವರ್ತನೆ ಒಳ್ಳೆಯದಲ್ಲಾ ಎಂದು ಶಾಂತವಾಗಿ ಹೇಳುವ ದೃಶ್ಯವನ್ನು ಚಿತ್ರಿಸಲಾಗಿದೆ. ಅರವಿಂದ ಮಹಾರಾಜ ಕಮಠನಿಗೆ ಶಿಕ್ಷೆ ನೀಡಿ ಊರಿಂದ ಹೊರಹಾಕುವ ಕತ್ತೆ ಮೇಲೆ ಕುಳ್ಳಿರಿಸಿ ಮೆರವಣಿಗೆ ದೃಶ್ಯವನ್ನು ಚಿತ್ರಿಸಿದ್ದಾರೆ. ಕಮಠನು ಮಿತ್ಯಾ ತಪಸ್ಸು ಮಾಡುತ್ತಿರುವ ಚಿತ್ರವಿದ್ದು ಇಲ್ಲಿ ಸಾಕಷ್ಟು ಆನೆಗಳು, ನರಿಗಳು, ಸಿಂಹ, ನಾಯಿಗಳು, ಹುಲಿಗಳು ಮುಂತಾದ ಪ್ರಾಣಿಗಳನ್ನು ತೋರಿಸಲಾಗಿದೆ. ಧ್ಯಾನದ ಸಂಕೇತವಾಗಿ ಇಲ್ಲಿ ತೋರಿಸಲ್ಪಟ್ಟಿರುವ ಸನ್ನಿವೇಶವನ್ನು ತಪಸ್ಸು ಎಂದು ಕರೆಯುವುದರ ಹಿನ್ನಲೆಯಲ್ಲಿ ಆಳವಾದ ಭಕ್ತಿ ಮೈಮನಗಳಲ್ಲಿ ಮಹಾರಾಜನಿಗೆ

ಅರಿವಿಲ್ಲದೆ ತನ್ನ ಸಾಧನೆಯನ್ನು ಮಾಡುವತ್ತ ಆಸಕ್ತಿ ವಹಿಸಿದ್ದಾರೆ. ಕೆಂಪು, ಹಳದಿ, ಕಪ್ಪು, ಬಿಳಿ ಬಣ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿರುತ್ತದೆ.

ಚಿತ್ರ-೩ : ಆರು ಲೇಶ್ಯದ ಚಿತ್ರವಾಗಿದ್ದು, ಒಂದು ಮರ ಅದರ ಬೇರೆ ಬೇರೆ ಟೊಂಗೆಯಲ್ಲಿ ನಾಲ್ಕು ಜನ ಮತ್ತು ಇಬ್ಬರು ಕೆಳಗೆ ನಿಂತಿದ್ದು, ಒಟ್ಟು ಆರು ಜನರ, ಆರು ವಿಚಾರದ ಆರು ಲೇಶ್ಯದ ಕಥೆ ಇದಾಗಿದೆ. ನೋಡಲು ಅತಿ ಸುಂದರವಾದ ಚಿತ್ರ ಇದಾಗಿದೆ. ಈ ಚಿತ್ರದಲ್ಲಿ ಜೈನ ಸಂಸ್ಕೃತಿಯ ನೀತಿ ಸಿದ್ಧಾಂತಗಳು ಹಾಗೂ ನ್ಯಾಯನೀತಿ ಧರ್ಮವನ್ನು ಒಬ್ಬ ಸಾಮಾನ್ಯ ಮನುಷ್ಯನಿಗೆ ಒಂದು ಸಂಸ್ಕೃತಿಯ ಅರಿವನ್ನು ಮೂಡಿಸುವ ಚಿತ್ರ ಇದಾಗಿದೆ. ಒಂದು ಮರದಲ್ಲಿನ ಫಲಗಳನ್ನು ತಿನ್ನುವುದಕ್ಕಾಗಿ ಆರು ಲೇಶ್ಯಗಳಲ್ಲಿ ಮೂರು ಪುಣ್ಯ ಪ್ರದವಾಗಿರುವವು. ಮತ್ತೆ ಮೂರು ಪಾಪಕಾರವು ಇವು ಒಳಿತು ಮತ್ತು ಕೆಡಕನ್ನು ಜೀವನಕ್ಕೆ ಅಂಟಿಸಲು ಇವೆ. ಮೂಲ ಕಾರಣಗಳು ಇವುಗಳಲ್ಲಿ ಪುಣ್ಯ ಪ್ರದವಾದವು. ಒಳ್ಳೆಯದಕ್ಕೆ ಕಾರಣವಾದ ಲೇಶ್ಯವನ್ನು ಸೂಚಿಸುತ್ತದೆ. ಕಿತ್ತಳೆ ವರ್ಣ, ಪದ್ಮವರ್ಣ ಮತ್ತು ಶುಲ್ಕ ವರ್ಣಗಳನ್ನು ಬಳಸಲಾಗಿದೆ. ಪಾಪಕಾರಕವಾದ ಲೇಶ್ಯಗಳನ್ನು ಕೃಷ್ಣವರ್ಣ, ನೀಲಿವರ್ಣ ಮತ್ತು ಕಪೋತ ವರ್ಣಗಳನ್ನು ಸೂಚಿಸುತ್ತದೆ. ಈ ಅಧಮ ಲೇಶ್ಯಗಳು-ನರ ಜನ್ಮ, ಗಿಡ, ಮರ, ಪ್ರಾಣಿ ಜನ್ಮವಾಗಿ ಹುಟ್ಟುತ್ತವೆ. ಮೊದಲ ಮೂರು ಉತ್ತಮ ಲೇಶ್ಯಗಳು ಮಾನವ ಜನ್ಮಕ್ಕೆ ಹಾಗೂ ಅಲ್ಲಿಂದ ದೇವ ಜನ್ಮಕ್ಕೆ ಹಾಗೂ ಕೊನೆಯದಾಗಿ ಮುಕ್ತಿಗೆ ಕಾರಣವಾಗುತ್ತವೆ. ಈ ವಿವಿಧ ಲೇಶ್ಯಗಳಿಂದ ಮನುಷ್ಯನ ಗುಣಗಳಲ್ಲಿ ಆಗಬಹುದಾದ ಕ್ರಿಯೆಗೆ ಈ ಚಿತ್ರ ಅರ್ಥವಾಗುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಮರದಲ್ಲಿ ಬಿಟ್ಟಿರುವ ಹಣ್ಣುಗಳನ್ನು ತಿನ್ನಲು ಆರು ಜನ ಪಡುವ ಪ್ರಯತ್ನಕ್ಕೆ ಈ ಲೇಶ್ಯದಲ್ಲಿ ಒಳಗಾದವರು.

ಕೃಷ್ಣ ಲೇಶ್ಯ : ಒಂದು ಮರದ ಹಣ್ಣನ್ನು ಫಲಗಳನ್ನು ತಿನ್ನುವುದಕ್ಕೆ ಕೃಷ್ಣ ವರ್ಣವುಳ್ಳ ವ್ಯಕ್ತಿಯು ಪೂರ್ಣ ಗಿಡವನ್ನೆ ಕಡೆದು ಹಾಕುತ್ತಾನೆ. ಇಲ್ಲಿನ ಎಲ್ಲಾ ಫಲವು ಹಣ್ಣುಗಳು ನನಗೊಬ್ಬನಿಗೆ ಮಾತ್ರ ದಕ್ಕ ಬೇಕು. ಬೇರೆಯವರಿಗೆ ದಕ್ಕಬಾರದೆಂಬ ಸ್ವಾರ್ಥತೆಯಿಂದ ಫಲವತ್ತತೆಯ ಮರವನ್ನೆ ಕಡೆಯುತ್ತಿದ್ದು ಕೃಷ್ಣವರ್ಣದ ಲೇಶ್ಯಯ ಗುಣಗಳು ಸಿಟ್ಟಿನಿಂದಿರುವುದು, ರೌದ್ರವಾಗಿರುವುದು, ಬಿರ್ಭಮನಾಗಿರುವುದು, ವೈರತ್ವ ಸಾದಿಸುವುದು, ನಾನು ನನ್ನದು ಎಂಬ ಸ್ವಾರ್ಥ ಭಾವನೆಯುಳ್ಳವನ ಗುಣಗಳು ಇಲ್ಲಿವೆ. ಈ ಗುಣದ ಚಿತ್ರವು ಭಿತ್ತಿಯಲ್ಲಿ ಮರದ ಎಡಭಾಗದಲ್ಲಿದ್ದು ಅರ್ಧ ಕತ್ತರಿಸಿದ ಮರ ಕೊಡಲಿಯಿಂದ ಮರ ಕಡಿಯುವವನು ಇವನ ಮೈಯ ಬಣ್ಣ ಕಂದು ಬಣ್ಣದ್ದಾಗಿದೆ.

ನೀಲ ವರ್ಣವುಳ್ಳ ಲೇಶ್ಯ : ಈ ವ್ಯಕ್ತಿಯು ಈ ಮರದ ಎಡಭಾಗದಲ್ಲಿ ಒಂದು ದೊಡ್ಡದಾದ ಕೊಂಬೆಯಲ್ಲಿ ಕುಳಿತು ಈ ಕೊಂಬೆಯನ್ನು ಕತ್ತರಿಸುತ್ತಿರುವ ಚಿತ್ರ ಅದರ ದೊಡ್ಡ ದೊಡ್ಡ ಟೊಂಗೆಯನ್ನು ಕಡಿದು ಹಾಕುತ್ತಾನೆ. ಏಕೆಂದರೆ ನೀಲವರ್ಣ ಲೇಶ್ಯಯ ಈ ಒಂದು ಮರವನ್ನು ಕಂಡು ನನಗೆ ಅರ್ಧ ಅರ್ಧ ಹಣ್ಣುಗಳನ್ನು ಫಲವನ್ನು ತಿನ್ನಬಲ್ಲೆ ಇವನ ಗುಣಗಳು ಮಂದಬುದ್ಧಿ, ಸ್ತ್ರೀಲುಬ್ಧ, ಸೋಮಾರಿತನ, ಅಂಜುಬುರುಕ, ಮಾನವಂತ, ಈ ತರಹದ ಗುಣಗಳ

ಈ ಲೇಶ್ಯಯಲ್ಲಿ ಬರುವವು. ಈ ಮರ ಕತ್ತರಿಸುವ ವ್ಯಕ್ತಿಯ ಮೈ ಬಣ್ಣ ನೀಲವರ್ಣದ್ದಾಗಿದೆ.

ಕಾಪೋತ ಲೇಶ್ಯ : ಈ ವ್ಯಕ್ತಿಯ ಎಡಭಾಗದಲ್ಲಿ ಒಂದು ದೊಡ್ಡ ಟೊಂಗೆಯನ್ನು ಕಡಿಯುತ್ತಿರುವ ದೊಡ್ಡದಾದ ಕೊಂಬೆಯ ಮೇಲೆ ಕುಳಿತ ಈ ಚಿತ್ರವು ಅದರ ಚಿಕ್ಕ ಟಿಸಿಲುಗಳನ್ನು ಕಡಿಯುತ್ತಿದ್ದು ಕಾಪೋತ ಲೇಶ್ಯಯು ಒಂದು ಕೊಂಬೆಯಲ್ಲಿನ ಫಲವನ್ನು ಹಣ್ಣನ್ನು ಮಾತ್ರ ತಿನ್ನಬಲ್ಲೆ ಎನ್ನುವುದು ಇವನ ಆಸೆಯಾಗಿದ್ದು ಇವನ ಗುಣಗಳು ಮತ್ತೊಬ್ಬರ ಗುಣಗಳನ್ನು ನಿಂದಿಸುವ ಯಾವಾಗಲೂ ದುಃಖ ಮಾಡುವವ. ಸಿಟ್ಟು ಮಾಡುವವ ಮತ್ತು ಯುದ್ಧದಲ್ಲಿ ಮರಣವನ್ನು ಬಯಸುವ ಗುಣ ಲಕ್ಷಣಗಳನ್ನು ಕಾಪೋತ ಲೇಶ್ಯಯು ಹೊಂದಿದ್ದು ಈ ಟೊಂಗೆಯನ್ನು ಕಡಿಯುತ್ತಿರುವ ವ್ಯಕ್ತಿಯ ಮೈ ಬಣ್ಣವು ಕಂದು ಬಣ್ಣದ್ದಾಗಿದೆ.

ಶ್ವೇತ (ಪಿತ) ಲೇಶ್ಯ : ಈ ಚಿತ್ರವು ಮರದ ಬಲಗಡೆ ಮೇಲಕ್ಕೆ ಇದ್ದು ಕೊಂಬೆಯ ಮೇಲ್ಭಾಗಕ್ಕೆ ಕುಳಿತು ಮರದಲ್ಲಿನ ಒಂದು ಗೊಂಚಲು ಫಲವನ್ನು ಹಣ್ಣನ್ನು ನಾನು ತಿನ್ನಬಹುದು ಎಂದು ತಿಳಿದ ಈ ಮನುಷ್ಯನು ಒಂದು ಗೊಂಚಲಿಗೆ ಕೈ ಹಾಕಿ ಕೀಳುತ್ತಿದ್ದು ಇವನ ಗುಣಗಳು ದಯಾವಂತ, ಸದ್ವಿಚಾರವುಳ್ಳವ, ಎಷ್ಟೇ ಲಾಭವಾದರೂ ಯಾವಾಗಲೂ ಸಂತೋಷದಲ್ಲಿ ಇರುವಂತವನು. ಈ ವ್ಯಕ್ತಿಯ ಮೈ ಬಣ್ಣವು ಬಿಳಿ ಮಿಶ್ರಿತ ಕಂದು ಬಣ್ಣದ್ದಾಗಿದೆ.

ಪದ್ಮ ಲೇಶ್ಯ : ಈ ವ್ಯಕ್ತಿಯು ಮರದ ಬಲ ಭಾಗದಲ್ಲಿ ಕೆಳಗಿರುವ ಟೊಂಗೆಯ ಮೇಲೆ ಕುಳಿತುಕೊಂಡಿದ್ದು, ಅರ್ಧ ಗೊಂಚಲು ಫಲವನ್ನು ಕೀಳುತ್ತಿರುವ ಚಿತ್ರ ರಚಿಸಿದ್ದಾರೆ. ನನಗೆ ಬರೀ ಅರ್ಧ ಗೊಂಚಲು ಹಣ್ಣನ್ನು ಮಾತ್ರ ತಿನ್ನಬಲ್ಲೆ ಎಂದು ತಿಳಿದು ಗೊಂಚಲನ್ನು ಕೀಳುತ್ತಿದ್ದಾನೆ. ಇವನ ಗುಣಗಳು ಉದಾರ ಮನೋಭಾವನೆ, ದಯಾವಂತ, ದೇವವಂತ, ದೇವ ಪೂಜ, ಸಿದ್ಧಿ ಪುರುಷ, ಶುದ್ಧ ಮತ್ತು ನಿತ್ಯ ಅನಂತ, ಆನಂದ, ಸುಖ ಸಂತೋಷದಲ್ಲಿರುವವನು ಈ ವ್ಯಕ್ತಿಯ ಮೈ ಬಣ್ಣ ಬಿಳಿ ಬಣ್ಣದ್ದಾಗಿದೆ.

ಶುಕ್ಲ ಲೇಶ್ಯ : ಈ ವ್ಯಕ್ತಿಯು ಮರದ ಕೆಳಗೆ ಬಲ ಭಾಗದಲ್ಲಿ ನಿಂತಿದ್ದು ಇವನ ವೇಷಭೂಷಣವು ರಾಜರ ಹಾಗೇ ತೋರಿಸಿದ್ದು ಕಿರೀಟಧಾರಿಯಾಗಿ ಹಾಗೂ ಕೈಯಲ್ಲಿ ಶಾಲನ್ನು ಹಿಡಿದು ನಿಂತಿದ್ದಾನೆ. ಈ ವ್ಯಕ್ತಿಯ ಕೈಗಳು ಮರ ಕಡಿಯುವುದನ್ನು ಟೊಂಗೆಯನ್ನು ಕತ್ತಿರಿಸುವುದನ್ನು ನಿಲ್ಲಿಸಿ ಎಂದು ಹೇಳುವಂತೆ ಭಾಸವಾಗುತ್ತಿದೆ. ಈ ವ್ಯಕ್ತಿಯ ಮೈ ಬಣ್ಣವು ಬಿಳಿ ಮಿಶ್ರಿತ ಕಂದು ಬಣ್ಣದ್ದಾಗಿದೆ. ಈ ವ್ಯಕ್ತಿಯು ಶಾಂತಿಯ ಸ್ವರೂಪದಂತೆ ಅಹಿಂಸೆಯ ಬಗ್ಗೆ ಅರಿವನ್ನು ನಿಡುವ ವ್ಯಕ್ತಿಯಾಗಿದ್ದಾನೆ. ವೈರತ್ವ, ಸಿಟ್ಟು, ಶೋಕ, ದುಃಖ ಇವುಗಳು ಇಲ್ಲದೇ ಪರಮಾತ್ಮನಲ್ಲಿ ತಲ್ಲೀನನಾದವನು ಶುಕ್ಲ ಲೇಶ್ಯಯವನೆಂದು ಹೇಳುವರು. ಈ ಕಥಾನಕದ ಸಾರಂಶವೆಂದರೆ ಜೈನ ಧರ್ಮದ ಅಹಿಂಸಾ ಪರಮ ಧರ್ಮ ಸಕಲ ಜೀವಿಗಳಿಗೆ ಲೇಸು ಬಯಸುವವನೆ ಕುಲಜನು. ಹಿಂಸೆಯು ಮನುಷ್ಯನ ಪಾಪದ ವಾಕ್ಯ ಎಂದು ತಿಳಿಸಿ ಈ ಸುಂದರವಾದ ಭಿತ್ತಿಚಿತ್ರ ರಚಿಸಿದ್ದಾರೆ.

ಚಿತ್ರ-೪ : ಉತ್ತರ ಗೋಡೆಯ ಮೊದಲ ಅಂಕಣದಲ್ಲಿ ಭಿತ್ತಿ ಚಿತ್ರಗಳು ಪಾರ್ಶ್ವನಾಥ ತೀರ್ಥಂಕರರಿಗೆ ಸಂಬಂಧಿಸಿದ ಪಂಚಕಲ್ಯಾಣದ ಚಿತ್ರಗಳಿವೆ. ತೀರ್ಥಂಕರರು ಜಿನಾ ಮಾತೃವಿನ ಗರ್ಭಕ್ಕೆ ಅವತರಿಸಿದಂದಿನಿಂದ ಹಿಡಿದು ಮುಕ್ತಿಯನ್ನು ಪಡೆಯುವವರೆಗಿನ ಗರ್ಭ, ಜನ್ಮ, ದೀಕ್ಷೆ, ಮತ್ತು ಮೋಕ್ಷವೆಂಬ ಈ ಸಂದರ್ಭಗಳಲ್ಲಿ ದೇವೇಂದ್ರವನು ಬಂದು ಪೂಜಿಸುತ್ತಾನೆ. ಇವುಗಳಿಗೆ ಪಂಚ ಕಲ್ಯಾಣ ಎಂದು ಹೆಸರು ಇದಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳು ಇಲ್ಲಿವೆ ಹಾಗೂ ಚಿಕ್ಕ ಅಳತೆಯಲ್ಲಿ ಸಮವಸರಣದ ಚಿತ್ರವು ಈ ಭಾಗದಲ್ಲಿ ಇದೆ.

ವಿಶ್ವ ಸೇನರಾಜ ಮತ್ತು ಪತ್ನಿಯಾದ ಬ್ರಾಹ್ಮಿಲಾದೇವಿಯು ರಾಜ ಮಂಟಪದಲ್ಲಿ ಕುಳಿತಿದ್ದು ಎದುರುಗಡೆ ಮತ್ತೊಂದು ಮಂಟಪದಲ್ಲಿ ಎಂಟು ಜನ ರಾಜ ಪರಿವಾರದವರನ್ನು ಚಿತ್ರಿಸಲಾಗಿದ್ದು ಎಲ್ಲರಿಗೂ ಕಿರೀಟವನ್ನು ಧರಿಸಲಾಗಿದ್ದು ಹಿನ್ನೆಲೆಯು ನೀಲಿ ಬಣ್ಣದಿಂದ ಬರೆಯಲಾಗಿದೆ ಹಾಗೂ ಈ ಎಂಟು ಜನರು ವಿಶ್ವಸೇನ ಮಹಾರಾಜರಿಗೆ ಪುಷ್ಪ ಅಭಿಷೇಕ ಮಾಡುತ್ತಿರುವುದು ಈ ಚಿತ್ರದಲ್ಲಿ ಕಾಣಬಹುದು. ಬ್ರಾಹ್ಮಿದೇವಿಯು ನೀಲಿ ಬಣ್ಣದ ಸೀರೆಯನ್ನು ಧರಿಸಿದ್ದು ಕಿರೀಟ ವಸ್ತ್ರಾಭರಣದಿಂದ ಅಲಂಕರಿಸಲ್ಪಟ್ಟಿದ್ದು ವಿಶ್ವಸೇನ ಮಹಾರಾಜರು ಮೈಮೇಲೆ ಶಾಲನ್ನು ಹೊದಿಸಲಾಗಿದೆ. ಇವರ ಹಿಂದೆ ಕೆಂಪು ಬಣ್ಣದಿಂದ ಹಿನ್ನೆಲೆ ತೋರಿಸಲಾಗಿದೆ. ಮುಂದಿನ ಮತ್ತೊಂದು ಮಂಟಪದಲ್ಲಿ ನಾಲ್ಕು ಜನ ನೃತ್ಯ ಗಾರ್ತಿಯರು ನರ್ತನ ಮಾಡುತ್ತಿದ್ದು ಒಬ್ಬೊಬ್ಬರು ಒಂದು ಶೈಲಿಯಲ್ಲಿ ನೃತ್ಯ ಮಾಡುತ್ತಿದ್ದಾರೆ. ಇಲ್ಲಿ ನೀಲಿ ಬಣ್ಣವನ್ನು ಹೆಚ್ಚಾಗಿ ಬಳಸಿದ್ದು ಕಂಡುಬರುತ್ತದೆ. ಹಿಂಭಾಗದಲ್ಲಿ ಕೇಸರಿ ಬಣ್ಣದಿಂದ ಕೂಡಿದ್ದಾಗಿದೆ.

ಮುಂದಿನ ಮತ್ತೊಂದು ಮಂಟಪದಲ್ಲಿ ನಾಲ್ವರು ಸಂಗೀತಗಾರರ ಚಿತ್ರವಿದ್ದು ನಾಲ್ಕು ಜನರ ಹಾವ ಭಾವ ವಿಭಿನ್ನವಾಗಿ ಕಾಣುವುದು. ಒಬ್ಬರು ಕಂಸಾಳೆ ಬಾರಿಸುತ್ತಿದ್ದಾರೆ. ಮತ್ತೊಬ್ಬರು ಶಂಕ ಊದುತ್ತಿದ್ದು, ಹಿಂದೆ ಡೋಲು ಬಾರಿಸುವವನಿದ್ದು ಇವನ ಹಿಂದೆ ಕೊಳಲು ನುಡಿಸುತ್ತಿದ್ದಾನೆ. ಇವರಿಗೆ ಕೆಂಪು, ನೇರಳೆ, ಹಳದಿ, ಹಸಿರು ವಸ್ತ್ರಗಳನ್ನು ಧರಿಸಿದ್ದು ಕಂಡುಬರುತ್ತದೆ.

ಚಿತ್ರ-೫ : ಈ ಚಿತ್ರಣದಲ್ಲಿ ಬ್ರಾಹ್ಮಿಲಾದೇವಿಯು ಒಂದು ಮಂಟಪದಲ್ಲಿ ಆಸೀನಳಾಗಿದ್ದು ಬಿಳಿಯದಾದ ವಸ್ತ್ರ ಧರಿಸಿದ್ದು, ವಸ್ತ್ರದಲ್ಲಿ ಸಣ್ಣ ಸಣ್ಣ ಎಲೆ, ಹೂಗಳನ್ನು ಬಿಡಿಸಲಾಗಿದೆ. ಹಾಗೂ ಕಿರೀಟ ಕಂಠಹಾರದಿಂದ ವಿನ್ಯಾಸಗೊಳಿಸಲಾಗಿದೆ. ಎಡಭಾಗದಲ್ಲಿ ಚಿಕ್ಕ ಮನುಷ್ಯರಂತೆ ಮೂವರು ಸಖಿಯರನ್ನು ಚಿತ್ರಿಸಲಾಗಿದ್ದು, ಒಬ್ಬರು ಮೊಣಕಾಲಿಗೆ ಹತ್ತಿರವಿದ್ದು, ತುಂಬಾ ಚಿಕ್ಕಗಾತ್ರದಲ್ಲಿ ಚಿತ್ರಿಸಿದ್ದಾರೆ. ಬಲಬದಿಗೆ ಮತ್ತೊಬ್ಬ ಹೆಂಗಸು ಕೈ ಮುಗಿಯುತ್ತ ನಿಂತಿರುವುದು ಕುಬ್ಜಾಕಾರದಲ್ಲಿ ಕಾಣುತ್ತದೆ. ಇವರಿಗೆ ಕೆಂಪು, ನೇರಳೆ ಬಣ್ಣದ ಉಡುಗೆಯನ್ನು ತೊಡಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಈ ಚಿತ್ರದಷ್ಟೆ ಎತ್ತರದಲ್ಲಿ ಎರಡು ಭಾಗಗಳನ್ನು ಮಾಡಿ ಮೇಲೆ ಮತ್ತು ಕೆಳಗೆ ಎರಡು ಸಂಯೋಜನೆ ಮಾಡಿದ್ದು ಮೇಲಿನಲ್ಲಿ ಮೂವರು ಹೆಂಗಸರು ಕುಳಿತಿದ್ದು ಅದೇ ರೀತಿ ಕೆಳಗಿನ ಭಾಗದಲ್ಲಿ ಮೂವರು ಹೆಂಗಸರು ಕುಳಿತಿದ್ದು, ಅವರು ವೀಣೆ ನುಡಿಸುತ್ತಿದ್ದುದು ಕಂಡುಬರುತ್ತದೆ. ಹಿನ್ನೆಲೆಯಲ್ಲಿ ನೇರಳೆ ಬಣ್ಣ ಬಳಸಿದ್ದು ಕಂಡುಬರುತ್ತದೆ.

ಇದರ ಪಕ್ಕದ ಚಿತ್ರದಲ್ಲಿ ರಾಜ ಮತ್ತು ರಾಣಿ ಇಬ್ಬರು ಮಲಗಿದ್ದು ಈ ಸಂಯೋಜನಾ ಚಿತ್ರಣವನ್ನು ಮೇಲಿಂದ ನೋಡಿದ ಅನುಭವವಾಗುತ್ತದೆ. ಉಡುಗೆ, ತೊಡುಗೆಗಳು ಬಟ್ಟೆಗಳಿಗೆ ಹೂವು ಎಲೆಗಳಿಂದ ಕೂಡಿದ ಅಲಂಕಾರ ಮಾಡಲಾಗಿದ್ದು ಇಬ್ಬರ ತಲೆಗೂ ಒಂದೇ ದಿಂಬನ್ನು ರಚಿಸಿದ್ದು ಇದು ನೇರಳೆ ಬಣ್ಣದಿಂದ ಚಿತ್ರಿತವಾಗಿದೆ.

ಬ್ರಾಹ್ಮಿಲಾದೇವಿ ಮಲಗಿರುವ ಚಿತ್ರವಿದ್ದು, ವೈಶಾಖ ಕೃಷ್ಣ ಪಕ್ಷದ ದ್ವೀತಿಯದಲ್ಲಿ ವಿಶಾಖ ನಕ್ಷತ್ರದ ಬೆಳಗಿನ ಜಾವದ ೧೬ ಶುಭ ಸ್ವಪ್ನಗಳು ಮತ್ತು ಒಂದು ದೊಡ್ಡ ಆನೆಯು ತನ್ನ ಮುಖವನ್ನು ಪ್ರವೇಶಿಸಿದ ಚಿತ್ರವು ಒಂದೇ ಸಾಲಿನಲ್ಲಿ ರಚನೆಯಾಗಿದ್ದು, ದೊಡ್ಡದಾದ ಆನೆ, ವೃಷಭ, ಸಿಂಹ, ಲಕ್ಷ್ಮಿ, ಹೂವಿನಮಾಲೆ, ಚಂದ್ರ, ಸೂರ್ಯ, ಎರಡು ಚಿನ್ನದ ಕಲಶಗಳು, ಎರಡು ಮೀನುಗಳು, ತಾವರೆಯ ಕೊಳ, ಸಮುದ್ರ, ಸಿಂಹಾಸನ, ದೇವತೆಗಳ ವಿಮಾನ, ನಾಗಭವನ, ರತ್ನಗಳು ರಾಶಿ, ಬೆಂಕಿ, ಹೀಗೆ ಹದಿನಾರು ಶುಭ ಸ್ವಪ್ನಗಳನ್ನು ಬ್ರಾಹ್ಮಿಲಾದೇವಿ ಕಂಡಿದ್ದ ಈ ಸ್ವಪ್ನಗಳನ್ನು ಒಳಗೊಂಡ ಚಿತ್ರವು ಒಂದೇ ಸಾಲಿನಲ್ಲಿ ರಚನೆಯಾಗಿದ್ದು, ಅದರ ಪಕ್ಕದ ಚಿತ್ರದಲ್ಲಿ ರಾತ್ರಿ ಕಂಡಂತ ಕನಸಿನ ಬಗ್ಗೆ ವಿಶ್ವಸೇನ ಮಹಾರಾಜನ ಬಳಿ ಹೇಳಿ ಸಿಂಹಾಸನದ ಮೇಲೆ ಇಬ್ಬರು ಕುಳಿತುಕೊಂಡು ಸ್ವಪ್ನದ ಫಲವನ್ನು ಕೇಳುತ್ತಿರುವುದು ಹಿಂದೆ ಇಬ್ಬರು ಸೇವಕಿಯರಿದ್ದುದು ಕಂಡುಬರುತ್ತದೆ.

ಚಿತ್ರ-೬ : ಈ ಚಿತ್ರದಲ್ಲಿ ನಾವು ಮೊದಲಿಗೆ ಆರು ಜನ ತೀರ್ಥಂಕರರ ಭಾವ ಚಿತ್ರಗಳನ್ನು ಕಾಣಬಹುದು. ಏಳು ಹೆಣ್ಣು ದೇವತೆಗಳನ್ನು ಕಾಣಬಹುದು. ಹಾಗೇ ಕೆಳಗಡೆ ಜಾರಿದರೆ ದೇವಾಲಯದ ಎಡ ಮತ್ತು ಬಲ ಭಾಗದಲ್ಲಿ ದ್ವಾರಪಾಲಕರ ಚಿತ್ರವನ್ನು ಕಾಣಬಹುದು. ಈ ಚಿತ್ರಗಳ ಹಿಂಬದಿಯಲ್ಲಿ ತೆಳುಕೆಂಪು ಬಣ್ಣವನ್ನು ಲೇಪಿಸಲಾಗಿದ್ದು, ಕಪ್ಪು, ನೀಲಿ, ಬಿಳಿ, ಕೆಂಪು, ಹಸಿರು ಮತ್ತು ಹಳ:ದಿ ಬಣ್ಣಗಳಿಂದ ಪೂರ್ಣಗೊಳಿಸಲಾಗಿರುತ್ತದೆ.

ಚಿತ್ರ-೭ : ಈ ಚಿತ್ರವು ಸಂಪೂರ್ಣವಾಗಿ ನಾಶವೊಂದಿದ್ದು, ಮಹಾರಾಜರ ಜೀವನದ ಬದುಕಿನ ಕ್ಷಣಗಳನ್ನು ಇಲ್ಲಿ ಸೂಚಿಸಲಾಗಿರುತ್ತದೆ. ಆದರೆ ಉಳಿದಿರುವ ಅಂಶಗಳೂ ತೀರಾ ಕಡಿಮೆಯಾಗಿರುತ್ತದೆ. ರಾಜ ಆನೆ ಮೇಲೆ ಹೋಗುತ್ತಿರು ದೃಶ್ಯ ಮತ್ತು ಕುದುರೆ ಮೇಲೆ ಸವಾರಿ ಮಾಡುತ್ತಿರುವ ಚಿತ್ರಗಳನ್ನು ಕಾಣಬಹುದು.

ಚಿತ್ರ-೮ : ಆಮ್ರ ಕೂಷ್ಮಾಂಡಿನಿ ದೇವಿಯ ಗರ್ಭಗುಡಿಯ ಗೋಡೆಯ ಮೇಲೆ ಅಲಂಕೃತವಾಗಿರುವ ಭಿತ್ತಿ ಚಿತ್ರಗಳನ್ನು ಕಾಣಬಹುದಾದರೂ ಅವುಗಳ ವೈಶಿಷ್ಟತೆಯ ಕಡೆ ಗಮನಹರಿಸುವಷ್ಟು ಚಿತ್ರಗಳು ಮೌಲ್ಯವನ್ನೊಂದಿರುವುದಿಲ್ಲ. ಆದರೆ ಈ ದೇವಿಯ ಪುರಾಣದ ಹಿನ್ನಲೆಯನ್ನು ಇಲ್ಲಿ ಕಾಣಬಹುದಾಗಿರುತ್ತದೆ.

ಚಿತ್ರ-೯ : ಪಾರ್ಶ್ವನಾಥರ ದಿವ್ಯ ಸಮವಸರಣದ ಭಿತ್ತಿಚಿತ್ರವು ಎಡಭಾಗದ ಮಧ್ಯದಲ್ಲಿ ಗೋಡೆಯ ಎಲ್ಲಾ ಭಾಗವನ್ನು ಆವರಿಸಿಕೊಂಡು ಇಲ್ಲಿರುವ ಎಲ್ಲಾ ಚಿತ್ರಗಳಲ್ಲಿ ಅತಿ ದೊಡ್ಡವಾದ

ಚಿತ್ರವು ಇದಾಗಿದೆ. ಒಂದರೊಳಗೆ ಒಂದರಂತೆ ಒಟ್ಟು ಎಂಟು ವೃತ್ತಗಳನ್ನು ಇದಕ್ಕೆ ಬಳಸಲಾಗಿದ್ದು, ಒಂಭತ್ತನೆಯ ಮಧ್ಯದ ವೃತ್ತದಲ್ಲಿ ಪಾರ್ಶ್ವನಾಥರು ನಿಂತಿರುವ ಪಾಚಿ ವರ್ಣದ ಚಿತ್ರ ಇದಾಗಿದೆ. ಹಿಂಭಾಗ ಗೋಪುರವುಳ್ಳ ದೇವಸ್ಥಾನವನ್ನು ಕೆಂಪು ಬಣ್ಣದಿಂದ ಚಿತ್ರಿಸಲಾಗಿದೆ. ಎಡಕ್ಕೆ ಹಾಗೂ ಬಲಕ್ಕೆ ಗ್ರಂಥಗಳಿರುವವು. ಒಟ್ಟು ವೃತ್ತದ ಮಧ್ಯಭಾಗದಲ್ಲಿ ಎಡದಿಂದ ಬಲಕ್ಕೆ ಮೇಲಿಂದ ಕೆಳಕ್ಕೆ ಎಂಟು ಪಟ್ಟಿಯಂತೆ ಮಾಡಿದ್ದು, ಅವುಗಳ ಮಧ್ಯದಲ್ಲಿ ಗೋಪುರಗಳನ್ನು ಚಿತ್ರಿಸಲಾಗಿದೆ. ಎಡಭಾಗದಲ್ಲಿ ಮಾನಸ ಸ್ತಂಭ ಹಾಗೂ ಅರ್ಧ ಚಂದ್ರನನ್ನು ತೋರಿಸಲಾಗಿದೆ. ಬಲಬದಿಗೆ ಮಾನಸ ಸ್ತಂಭ ಹಾಗೂ ಸೂರ್ಯನನ್ನು ಚಿತ್ರಿಸಲಾಗಿದ್ದು ಕೆಳಗೆ ಎಡಭಾಗ ಬಲಭಾಗಗಳಲ್ಲಿ ಮಾನಸ ಸ್ಥಂಭಗಳನ್ನು ರಚಿಸಿದ್ದಾರೆ. ಸಮವಸರಣದ ಎಡಕ್ಕೆ ಹಾಗೂ ಬಲಕ್ಕೆ ಮೂರು ಕಿಟಕಿಗಳನ್ನು ಮಾಡಿದ್ದು ಅವುಗಳಲ್ಲಿ ಎಡಕ್ಕೆ ಮೂರು ಬಲಕ್ಕೆ ಮೂರು ದೇವತೆಗಳಿದ್ದು ಪುಷ್ಪ ವಿಸರ್ಜನೆ ಮಾಡುವುದು ಕಂಡುಬರುತ್ತದೆ. ಹಾಗೂ ಒಂದೊಂದು ವೃತ್ತಾಕಾರದಲ್ಲಿ ಸಮವಸರಣದ ಸ್ವಯಂಭೋ ಮೊದಲಾದ ಹತ್ತು ಗಣಧರರು ಹಾಗೂ ಶಾಸ್ತ್ರಧಾರಿಗಳಾದ ಮುನ್ನೂರ ಐವತ್ತು ಮುನಿಗಳು, ಹತ್ತು ಸಾವಿರದ ಒಂಭತ್ತು ನೂರು ಶಿಕ್ಷಕ ಮುನಿಗಳು ಒಂದು ಸಾವಿರದ ನಾಲ್ಕು ನೂರು ಮಂದಿ ಅವಧಿಜ್ಞಾನಿಗಳು, ಒಂದು ಸಾವಿರ ಕೇವಲ ಜ್ಞಾನಿಗಳು ಮತ್ತು ವಿಕೇಂದ್ರಿಗಳು, ಒಂದು ಸಾವಿರದ ಏಳುನೂರ ಐವತ್ತು ಮನಪರ್ಯಾಯ ಜ್ಞಾನಿಗಳು, ಆರುನೂರು ಮಂದಿ ವಾದಿಗಳು ಸುಲೋಚನ ಮೊದಲಾದ ಮೂವತ್ತು ಸಾವಿರ ಮಂದಿ ಆರ್ಯಿಕೆಯರು ಒಂದು ಲಕ್ಷ ಶ್ರಾವಕರು, ಮೂರು ಲಕ್ಷ ಶ್ರಾವಕಿಯರು ಹಾಗೂ ಹಲವಾರು ದೇವಾನು ದೇವತೆಗಳು ಹಾಗೂ ಪ್ರಾಣಿಗಳು ಇರುವ ಸುಂದರವಾದ ಅಲಂಕಾರಿಕವಾದ ಸಮವಸರಣದ ಭಿತ್ತಿ ಚಿತ್ರವಾಗಿದ್ದು ಇಷ್ಟು ಜನರಿರುವರೆಂಬ ಕಲ್ಪನೆ ಇಲ್ಲಿ ರಚಿಸಿದ ಕಲಾವಂತಿಕೆಯು ಕಲಾವಿದನದು. ಮುಂದಿನ ಭಾಗದ ಮೇಲಿನ ಗೋಡೆಗೆ ಉದ್ದನೆಯ ಹಾವನ್ನು ಚಿತ್ರಿಸಿದ್ದು ಅದರ ಒಳಗೆ ವ್ಯಕ್ತಿಗಳಿರುವುದು ಕಂಡುಬರುತ್ತದೆ. ಹಾಗೂ ಈ ಭಾಗದ ಹಲವಾರು ಚಿತ್ರಗಳು ನಶಿಸಿ ಹೋಗಿದ್ದು ಭಗವಾನ ಚಂದ್ರನಾಥನ ಪ್ರತಿಮಾ ಇರುವ ಎಡ ಮತ್ತು ಬಲಭಾಗದ ಎರಡು ಗೋಡೆಗಳಲ್ಲಿಯ ಭಿತ್ತಿ ಚಿತ್ರಗಳಿದ್ದವು ಎನಿಸುವುದು ಹಾಗೂ ಈ ಕೋಣೆಯ ಬಾಗಿಲಿಗೆ ಸುಂದರವಾದ ಇತ್ತೀಚಿನ ಪ್ರಭಾವಳಿ ಇದ್ದು ಇದರ ಹಿಂದೆ ಕೂಡ ಭಿತ್ತಿ ಚಿತ್ರಗಳು ಕಾಣದ ಹಾಗೆ ಇರುವವು.

ಈ ಕೋಣೆಯಿಂದ ಬಲಬದಿಗೆ ಭರತ ಚಕ್ರವರ್ತಿಯ ರಾಜಾಡಳಿತ, ಯುದ್ಧದ ದೃಶ್ಯ ಇನ್ನು ಹಲವಾರು ದೃಶ್ಯಗಳು ಇಲ್ಲಿವೆ. ನಂತರದ ಭಾಗದಲ್ಲಿ ನಾಗಕುಮಾರ ಚರಿತ್ರೆಯ ಚಿತ್ರಗಳಿದ್ದು, ಅದರಲ್ಲಿ ಒಬ್ಬ ರಾಜ ಬಾವಿಗೆ ಬಿದ್ದಾಗ ನಾಗರ ಹಾವು ಅವನನ್ನು ರಕ್ಷಿಸುತ್ತಿರುವುದು ಆ ಚಿತ್ರಗಳ ರಾಜನು ಆನೆಗಳ ಜೊತೆ ಹಾಗೂ ಯುದ್ಧ ಯೋಧರ ದೃಶ್ಯಾವಳಿಗಳಿವೆ. ರಾಜಕುಮಾರ ಬರುವಾಗ ದಾರಿಯಲ್ಲಿ ವಿಶ್ರಾಂತಿಯಲ್ಲಿರುವ ಆನೆ, ದಾರಿಯಲ್ಲಿ ಹೋಗುವವರು ಹಾಗೂ ಅವರ ಜೊತೆ ರಾಜನ ಯುದ್ಧದ ವಿಜಯವನ್ನು ಸಾರುವ ಚಿತ್ರಗಳಿವೆ. ಮುಂದಿನ ಭಾಗದಲ್ಲಿ ಪ್ರವೇಶ

ಬಾಗಿಲಿನ ಬಲ ಬದಿಯಲ್ಲಿ ಪೂರ್ವ ದಿಕ್ಕಿಗೆ ಕೆಲವು ಭಿತ್ತಿ ಚಿತ್ರಗಳಿದ್ದು ಅವುಗಳಲ್ಲಿ ಮುಖ್ಯವಾಗಿ ಜಾತ್ರೆ ದೃಶ್ಯ, ಮಾರ್ಕೇಟಿನ ದೃಶ್ಯಗಳಿವೆ.

ಮಾರುಕಟ್ಟೆಯ ದೃಶ್ಯಗಳು ಗುಂಪು ಗುಂಪಾಗಿ ಚಿತ್ರಿಸಿದ್ದು, ವ್ಯಾಪಾರಿಯು ತಕ್ಕಡಿಗಳನ್ನು ಹಿಡಿದು ತೂಕ ಮಾಡುತ್ತಿದ್ದು, ಕೊಂಡು ಕೊಳ್ಳುವವರು ಚರ್ಚಿಸುವ ಹಾಗಿದೆ. ಹಿಂಭಾಗದಲ್ಲಿ ನೇರಳೆ, ಕೆಂಪು, ಹಸಿರು, ಬಣ್ಣಗಳನ್ನು ಬಳಸಿರುವರು ವ್ಯಕ್ತಿಗಳ ದೇಹಕ್ಕೆ ಮುಖಕ್ಕೆ ಬಿಳಿ ಮಿಶ್ರಿತ ಕೆಂಪು, ಬೀಲಿ ಮಿಶ್ರಿತ ಹಳದಿ ಬಣ್ಣಗಳನ್ನು ಬಳಸಿದ್ದು ಬಟ್ಟೆಗಳಿಗೆ ಬಿಳಿ ಮಿಶ್ರಿತ ಹಸಿರು, ನೇರಳೆ, ಕೆಂಪು ಬಣ್ಣಗಳನ್ನು ಬಳಸಿದ್ದಾರೆ. ವ್ಯಕ್ತಿಗಳಿಗೆ ಮರಾಠ ಶೈಲಿಯ ಪೇಟಾ ಹಾಗೂ ಉಡುಗೆ ತೊಡುಗೆಯನ್ನು ಬಳಸಲಾಗಿದ್ದು ವ್ಯಕ್ತಿಗಳಿಗೆ ಗಾಂಭೀರ್ಯದ ದಪ್ಪನೆಯ ಮೀಸೆಯನ್ನು ಬರೆಯಲಾಗಿದೆ. ಹಾಗೂ ಬಗಲಲ್ಲಿ ಎತ್ತಿಕೊಂಡ ಮಕ್ಕಳ ಚಿತ್ರಗಳು ನೋಡಲು ದೊಡ್ಡವರ ಹಾಗೆ ಕಾಣುವವು. ಬಟ್ಟೆಗಳ ಮೇಲೆ ಚುಕ್ಕೆ ಸಣ್ಣ ಸಣ್ಣ ಹೂಗಳಿಂದ ಅಲಂಕೃತಗೊಳಿಸಲಾಗಿದೆ ಮತ್ತು ಮಾರುಕಟ್ಟೆಯಲ್ಲಿ ಮಹಿಳೆಯರ ಚಿತ್ರಗಳಿದ್ದು, ಕಾಲಿಗೆ ಆಭರಣ ತೊಡಿಸುವ ಮತ್ತು ಕಾಲುಂಗುರದ ಮಾರಾಟದ ದೃಶ್ಯಗಳು ಮತ್ತು ಕೈ ಬಳೆ ಮಾರಾಟದ ದೃಶ್ಯಗಳು ಕಂಡುಬರುತ್ತವೆ. ಇವುಗಳು ವಿಜಯನಗರ ಶೈಲಿಯ ಚಿತ್ರಗಳಿದ್ದು, ತಿದ್ದಿದ ಹುಬ್ಬು ದೊಡ್ಡದಾದ ಕಣ್ಣುಗಳು ಅಲಂಕಾರಿಕ ಕೇಶ ವಿನ್ಯಾಸ ಕಿವಿಗೆ ಅಲಂಕಾರಿಕ ಆಭರಣಗಳ ಕಂಠಹಾರ ಕಾಲಿಗೆ ಕಡಗ ತೊಡಿಸಿದ್ದು, ಸ್ವಲ್ಪ ಕುಬ್ಜಾಕಾರದ ಚಿತ್ರಗಳು ಇಲ್ಲಿ ಕಂಡುಬರುತ್ತವೆ.

ಇಲ್ಲಿನ ಜೈನ ಚಿತ್ರಕಲೆಯ ಭಿತ್ತಿ ಚಿತ್ರಗಳು ಪೂರ್ವ ಶೈಲಿಯದ್ದಾಗಿ ಕಂಡುಬರುವವು. ಪಶ್ಚಿಮ ಭಾಗದ ಗುಜರಾತಿ, ರಾಜಸ್ಥಾನ ಹಾಗೂ ವಿಜಯನಗರ, ಮೈಸೂರು, ತಾಂಜಾವೂರು ಶೈಲಿಗಳ ಚಿತ್ರಗಳು ಅಲ್ಲಲ್ಲಿ ಕಂಡುಬರುವವು. ಸುಂದರವಾದ ಭಿತ್ತಿ ಚಿತ್ರಗಳಿಗೆ ಬೇಕಾದಂಥ ತಂತ್ರಗಾರಿಕೆ ವರ್ಣ ಸಂಯೋಜನೆ ಹಾಗೂ ಬೇರೆ ಬೇರೆ ಶೈಲಿಗಳನ್ನು ಇಲ್ಲಿ ಬೇಕೆನಿಸಿದಲ್ಲಿ ಬಳಕೆ ಮಾಡಿದ್ದರೆ. ಇದೆ ಪಶ್ಚಿಮಕ್ಕೆ ಮುಖ ಮಾಡಿರುವ ಭಿತ್ತಿ ಚಿತ್ರದಲ್ಲಿ ಜೈನ ಧರ್ಮದ ಆರು ಲೇಶ್ಯಗಳ ಚಿತ್ರ ಈ ಚಿತ್ರವು ಆಯತಾಕಾರದ ಚಿತ್ರ ಚಿಕ್ಕದಾದರೂ ಇದರ ವಿವರಣೆ ಬಹಳ ಇದೆ.

ಚಿತ್ರ-೧೦ : ೧೬ ಸ್ವಪ್ನದ ಚಿತ್ರಣವು ದೊಡ್ಡ ಆನೆಯನ್ನು ನೋಡಿದ್ದರಿಂದ ಆನೆಯ ಚಿತ್ರ ಬಿಳಿ ಬಣ್ಣದ್ದಾಗಿದೆ. ಆನೆ ಮೇಲಿನ ಹೊದಿಕೆಯು ನೇರಳೆ ಬಣ್ಣದಾಗಿದ್ದು ಮತ್ತು ಕೆಂಪು ಬಣ್ಣದಿಂದ ಕೂಡಿದೆ. ಆನೆಯನ್ನು ನೋಡಿದ್ದರಿಂದ ಪುತ್ರನು ಜನಿಸುವನೆಂಬ ಸಂಕೇತವನ್ನು ತೋರಿಸಲಾಗಿದೆ. ವೃಷಭದ ಚಿತ್ರವು ಬಿಳಿ ಬಣ್ಣದಿಂದ ಕೂಡಿದ್ದು, ಬೆನ್ನಿನ ಮೇಲೆ ನೀಲಿ ಹಾಗೂ ಕೆಂಪು ಬಣ್ಣದ ಅಲಂಕಾರಿಕ ಹೊದಿಕೆ ಇದ್ದು, ಇದರ ಸಂಕೇತ ತ್ರಿಲೋಕದ ಒಡೆಯನ ಜನನ ಎಂದು ಸೂಚಿಸುತ್ತದೆ. ಸಿಂಹವು ಬಿಳಿ ಬಣ್ಣದಿಂದ ರಚಿಸಿದ್ದು, ಇದು ಅನಂತ ಶಕ್ತಿಯ ಸಂಕೇತವಾಗಿದೆ. ಲಕ್ಷ್ಮಿ ಚಿತ್ರವು ಕೆಂಪು ಸೀರೆ ಮತ್ತು ಅಲಂಕಾರಿಕ ವಸ್ತ್ರಾಭರಣಗಳಿಂದ ರಚಿಸಿದ್ದು ಮೈ ಬಣ್ಣವು ಬಿಳಿಯದ್ದಾಗಿದೆ. ಇದರ ಸಂಕೇತವು ಮೇರು ಪರ್ವತದಲ್ಲಿ ಜನ್ಮಾಭಿಷೇಕವು ಎಂದು

ಸೂಚಿಸುತ್ತದೆ. ಪುಷ್ಪಮಾಲೆ ಎರಡು ಇದು ಹಳದಿ ಬಣ್ಣದಿಂದ ಕೂಡಿದ್ದು ಆದರ್ಶ ವ್ಯವಹಾರ ಮತ್ತು ನಿಶ್ಚಯ ಧರ್ಮದ ಸಂಕೇತವನ್ನು ಸೂಚಿಸುತ್ತದೆ. ಚಂದ್ರನ ದರ್ಶನದಿಂದ ತ್ರೈಲೋಕ್ಯವೆಂಬ ಚಂದ್ರನ ಕುಮುದ ಪುಷ್ಪಕ್ಕೆ ಪ್ರಿಯನೂ ಎಂಬ ಸಂಕೇತ ಈ ಚಿತ್ರ ಬಿಳಿ ಬಣ್ಣದಿಂದ ಕೂಡಿದೆ ಹಾಗೂ ಸೂರ್ಯನ ಚಿತ್ರವು ತೆಳು ಹಳದಿ ಬಣ್ಣದ್ದಾಗಿದ್ದು ಸೂರ್ಯನ ಸಂಕೇತ ಕಾಂತಿ, ಓಜಸ್ಸು, ತೇಜಸ್ವಿಯನ್ನು ಸೂಚಿಸುತ್ತದೆ.

ಎರಡು ಮೀನುಗಳನ್ನು ಬಿಳಿ ಬಣ್ಣದಿಂದ ಚಿತ್ರಿಸಿದ್ದು, ಇದರ ಸಂಕೇತ ನಿಧಿಗಳಿಗೆ ನಾಯಕನು ಆಗುವನು. ಕುಂಭದ ಚಿತ್ರ ಪೂರ್ಣ ಕುಂಭದ ಚಿತ್ರವು ಆಕಾಶ ನೀಲಿ ಬಣ್ಣದ್ದಾಗಿ ಕಂಡುಬರುತ್ತದೆ. ತಾವರಕೊಳ ಸರೋವರ ಚಿತ್ರವು ಬಿಳಿ ಬಣ್ಣದಿಂದ ತೋರಿಸಲಾಗಿದ್ದು, ಇದರ ಸಂಕೇತ ಸರ್ವ ಲಕ್ಷಣ ಯುಕ್ತನೂ ಆಗುವನೆಂಬುದು. ಸಮುದ್ರದ ಚಿತ್ರವು ಬಿಳಿ ಬಣ್ಣದಿಂದ ಚಿತ್ರಿಸಿದ್ದು, ಇದರ ಸಂಕೇತ ಸರ್ವಜ್ಞನೂ ಆಗುವನು ಎಂಬುದು.

ಸಿಂಹಾಸನದ ಚಿತ್ರವು ಬಿಳಿ ಹಾಗೂ ಕೆಂಪು ಬಣ್ಣದಿಂದ ಕೂಡಿದ್ದು ಇದರ ಸಂಕೇತವು ಸಮಸ್ತ ಲೋಕಕ್ಕೆ ಒಳಿತನ್ನು ಬಯಸುವವ, ಸನ್ಮಾನ್ಯನೂ ಎಂದು ಹೇಳುವರು. ವಿಮಾನ ಇದರ ಚಿತ್ರವು ಹಳದಿ ಮತ್ತು ಕೆಂಪು ಬಣ್ಣದಿಂದ ಕೂಡಿದ್ದು, ಇದರ ಸಂಕೇತ ಸ್ವರ್ಗದಿಂದ ಅವರಿಸುವನು ಎಂದು ಸೂಚಿಸುತ್ತದೆ.

ನಾಗೇಂದ್ರ ಭವನ ಇದು ಕೆಂಪು ಮತ್ತು ಬಿಳಿವರ್ಣದಿಂದ ಕೂಡಿದ್ದಾಗಿ ಕಂಡುಬರುತ್ತದೆ. ರತ್ನರಾಶಿಯ ಚಿತ್ರವು ಕೆಂಪು ಬಣ್ಣ ಲೇಪಿಸಿದ್ದು ಇದರ ಸಂಕೇತ ಆಲಂಗಿತನೂ ಎಂದಾಗುತ್ತದೆ. ಹೊಗೆ ಇಲ್ಲದ ಬೆಂಕಿ ಇದು ಕರ್ಮಗಳನ್ನು ದಹಿಸುವುದು ಇದರ ಬಣ್ಣವು ಕೆಂಪು ಬಣ್ಣದಿಂದ ಕೂಡಿದೆ.

ಗರ್ಭಾವತಾರ ಕಲ್ಯಾಣ ಈ ಚಿತ್ರದಲ್ಲಿ ದೇವೇಂದ್ರ ಹಾಗೂ ಇನ್ನು ಅನೇಕ ದೇವತೆಗಳು ಭಗವಂತನ ಅವತಾರವನ್ನು ತಿಳಿದು ವಾರಾಣಾಸಿಗೆ ಬಂದು ರಾಜ ದಂಪತಿಗಳನ್ನು ಸ್ತುತಿಸಿ ಭಕ್ತಿ ಸಂತೋಷಗಳಿಂದ ಗೀತೆ, ವಾದ್ಯ, ನೃತ್ಯ, ಮೊದಲಾದವುಗಳಿಂದ ಗರ್ಭಾವತಾರ ಕಲ್ಯಾಣದ ಚಿತ್ರವು ಚಿತ್ರಿಸಲಾಗಿದೆ. ಇದೇ ಗೋಡೆಯ ಕೆಳಭಾಗದಲ್ಲಿ ಬ್ರಾಹ್ಮಿಲಾದೇವಿಯು ಗರ್ಭವತಿಯಾಗಿ ವಿಶ್ರಾಂತಿ ಪಡೆಯುತ್ತಿರುವ ಚಿತ್ರವನ್ನು ಬಿಡಿಸಲಾಗಿದ್ದು, ಚಿತ್ರದ ಹಿಂದೆ ಇರುವ ಬಣ್ಣವು ಹಸಿರು ವರ್ಣದಿಂದ ಕೂಡಿದ್ದಾಗಿದೆ. ಪಾರ್ಶ್ವನಾಥ ತೀರ್ಥಂಕರರ ಜನನದ ಚಿತ್ರ ಕಪ್ಪು ಬಣ್ಣದ ಕಿಟಕಿಯನ್ನು ಚಿತ್ರಿಸಿದ್ದು, ಕಿಟಕಿಯ ಹಿಂದೆ ಬ್ರಾಹ್ಮಿಲಾದೇವಿ ನಿದ್ರಿಸುತ್ತಿದ್ದು ಪಕ್ಕದಲ್ಲಿ ಮಗುವು ಇದ್ದು, ತಾಯಿ ನಿದ್ರೆಯಲ್ಲಿದ್ದಿದು ಕಂಡುಬರುತ್ತದೆ. ಅಲ್ಲಿ ಮಗುವಿನ ಹಾಗೆ ಒಂದು ಗೊಂಬೆಯನ್ನು ಮಲಗಿಸಿದ್ದು ಅದಕ್ಕೆ ಜೀವವಿಲ್ಲ. ಅದು ಮಾಯಶಿಶು.

ಮುಂದಿನ ಭಾಗದಲ್ಲಿ ದೇವೇಂದ್ರನು ಐರಾವತವನ್ನೇರಿ ಬಂದು ಸಚ್ಚಿದೇವಿ ಆ ಮಗುವನ್ನು ಎತ್ತಿಕೊಂಡು ಒಂದು ಐರಾವತದಲ್ಲಿರುವ ದೇವೇಂದ್ರನಿಗೆ ಕೊಡುತ್ತಿರುವ ಚಿತ್ರ ಸುಂದರವಾಗಿದ್ದು,

ಇಲ್ಲಿ ಸಚ್ಚಿದೇವಿಗೆ ಕೆಂಪು ಸೀರೆ ಉಡಿಸಲಾಗಿದ್ದು ಹಾಗೂ ಕಿರೀಟ ಧರಿಸಿದ್ದು ಕೈಯಲ್ಲಿ ಮಗುವನ್ನೆತ್ತಿಕೊಡುತ್ತಿರುವಂತಿದ್ದು, ಮಗುವು ಕೆಂಪು ಬಣ್ಣದಿಂದ ರಚಿತವಾಗಿದೆ. ಐರಾವತದಲ್ಲಿ ಕುಳಿತುಕೊಂಡ ದೇವೇಂದ್ರನು ಮಗುವನ್ನು ಎತ್ತಿಕೊಳ್ಳುತ್ತಿರುವ ಹಿಂಭಾಗ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ದೇವೇಂದ್ರನಿಗೆ ತೆಳುವಾದ ಹಳದಿ ಬಿಳಿ ಮಿಶ್ರಿತ ಬಣ್ಣ ಲೇಪಿಸಲಾಗಿದೆ. ಕೆಳಗಡೆ ಕಾಲು ಮಡಚಿಕೊಂಡು ಕುಳಿತ ಆನೆಯನ್ನು ಚಿತ್ರಿಸಲಾಗಿದ್ದು ಇದಕ್ಕೂ ಕೂಡಾ ದೇವೇಂದ್ರನಿಗೆ ಲೇಪಿಸಿದ ಬಣ್ಣವನ್ನೆ ಹಚ್ಚಲಾಗಿದೆ.

ಇಲ್ಲಿ ಆನೆಯನ್ನು ಸುಂದರವಾಗಿ ಅಲಂಕರಿಸಿದ್ದು, ಆನೆಯ ದಂತ ಒಂದು ಬದಿಗೆ ಎರಡು ಮತ್ತೊಂದು ಬದಿಗೆ ಎರಡನ್ನು ಚಿತ್ರಿಸಿದ್ದು, ಸೊಂಡಿಲು ಮಾತ್ರ ಒಂದನ್ನು ತೋರಿಸಲಾಗಿದೆ. ಆನೆಯ ಕಣ್ಣಲ್ಲಿ ಆಶ್ಚರ್ಯ, ಆನಂದ ಭಾವನೆಯನ್ನು ತೋರಿಸಲಾಗಿದೆ ಹಾಗೂ ಹಣೆ ಮೇಲೆ ಕತ್ತಿಗೆ ಕಾಲು ಇತ್ಯಾದಿಗಳಿಗೆ ಚಿನ್ನದ ಆಭರಣಗಳನ್ನು ತೊಡಿಸಲಾಗಿದ್ದು ಹಲವು ಬಣ್ಣಗಳ ಮಿಶ್ರಣದ ಹಸಿರು ಬಣ್ಣ ಬಳಸಲಾಗಿದೆ. ಹಿನ್ನೆಲೆಯಲ್ಲಿ ಆನೆಯ ಬೆನ್ನ ಮೇಲೆ ಹೊದಿಸಿದ ಅಲಂಕಾರಿಕ ಬಟ್ಟೆಯು ಕೆಂಪು ಹಾಗೂ ನೇರಳೆ ಬಣ್ಣದ್ದಾಗಿದೆ. ಮಧ್ಯ ಕೆಂಪು ಬಣ್ಣದ ಚಪ್ಪಟೆಯಾಗಿ ಲೇಪಿಸಿದ ಬಣ್ಣಗಳ ಮೇಲೆ ಸರಳವಾಗಿ ನಕ್ಷೆಯನ್ನು ಬರೆಯಲಾಗಿದೆ. ಒಟ್ಟಾರೆಯಾಗಿ ನೋಡಲು ಈ ಚಿತ್ರವು ಸುಂದರವಾಗಿದೆ.

ಮುಂದಿನ ಚಿತ್ರದಲ್ಲಿ ದೇವೇಂದ್ರನು ಮಗುವನ್ನು ಕರೆದುಕೊಂಡು ಹೋಗುವ ಮೆರವಣಿಗೆಯ ಚಿತ್ರವಾಗಿದೆ. ಇಲ್ಲಿ ಆನೆಯನ್ನು ಚಿತ್ರಿಸಿದ ರೀತಿ ಅದ್ಭುತವಾಗಿದೆ ಹಾಗೂ ವಿಶೇಷ ಎನ್ನುವಂತೆ ಎಂಟು ಸೊಂಡಿಲನ್ನು ಒಂದೊಂದು ಭಾವ ಭಂಗಿಯೊಂದಿಗೆ ಚಿತ್ರಿಸಲಾಗಿದೆ. ಇದರ ಬಣ್ಣವು ಬಿಳಿಯದಾಗಿದೆ ಹಾಗೂ ಈ ಚಿತ್ರದಲ್ಲಿ ಮಾವುತನನ್ನು ಕುಳ್ಳಿರಿಸಿದ್ದು ಹಿಂದಿನ ಅಂಬಾರಿಯಲ್ಲಿ ದೇವೇಂದ್ರ ಸಚ್ಚಿದೇವಿ ಮಗುವನ್ನು ಚಿತ್ರಿಸಿದ್ದು ಇರುವಂತ ಸ್ಥಳಾವಕಾಶದಲ್ಲಿ ಎಲ್ಲವನ್ನು ತೋರಿಸುವ ಉದ್ದೇಶದಿಂದ ಒಬ್ಬರ ತಲೆಮೇಲೆ ಒಬ್ಬರಂತೆ ಚಿತ್ರಿಸಿದ್ದಾರೆ. ಮೇಲೆ ಆನೆಯ ಎಡಕ್ಕೆ ಇಬ್ಬರು ಹಾಗೂ ಮುಂದೆ ಇಬ್ಬರು ಚಾಮರ ಬೀಸುವ ದೃಶ್ಯವಿದೆ. ಇವರ ಬಟ್ಟೆ ನೇರಳೆ ಹಾಗೂ ಬಿಳಿ ಮಿಶ್ರಿತ ಹಳದಿ ಬಣ್ಣದ್ದಾಗಿದೆ. ಇದೆ ಬಣ್ಣವನ್ನು ಮುಂದೆಯು ಬಳಸಿದ್ದಾರೆ ಹಾಗೂ ಆನೆಯ ಹಿಂಭಾಗ ಮುವರು ವ್ಯಕ್ತಿಗಳು ಮತ್ತು ಆನೆಯ ಕೆಳಗೆ ನಾಲ್ಕು ಜನರನ್ನು ಚಿತ್ರಿಸಲಾಗಿದೆ. ಈ ಚಿತ್ರವು ನೋಡಲು ಸುಂದರವಾಗಿದೆ ಇದರ ಮುಂದಿನ ಸಾಲಿನಲ್ಲಿ ನಾಲ್ಕು ದೇವತೆಗಳ ಹಾಗೆ ನಾಲ್ಕು ಸಾಲುಗಳ ಹಾಗೆ ಒಟ್ಟು ಹದಿನಾರು ದೇವತೆಗಳ ಚಿಕ್ಕ ಚಿಕ್ಕ ಚಿತ್ರಗಳಿದ್ದು ಹಾಗೂ ಚಿಕ್ಕ ಚಿಕ್ಕ ಗಾತ್ರದ ಸಿಂಹಾಸನಗಳನ್ನು ಇದರ ಮೇಲೆ ಚಿತ್ರಿಸಿದ್ದಾರೆ. ಇಲ್ಲಿ ಹಸಿರು ಬಣ್ಣವನ್ನು ಹೆಚ್ಚಾಗಿ ಬಳಸಿದ್ದು ಕಂಡುಬರುತ್ತದೆ.

ಮುಂದಿನ ಭಾಗದ ಚಿತ್ರದಲ್ಲಿ ಐರಾವತದಿಂದ ಕರೆದುಕೊಂಡು ಬಂದು ಜಿನ ಬಾಲಕನನ್ನು ದೇವಾಸುದೇವತೆಗಳು ಸೇರಿ ಮಹಾ ಮೇರು ಪರ್ವತಕ್ಕೆ ಬಂದು ಶಿಶುವನ್ನು ಪಾಂಡುಕ ಶಿಲೆಯ

ಮೇಲೆ ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಕ್ಷೀರ ಸಮುದ್ರದಿಂದ ನೀರನ್ನು ತಂದು ಸ್ನಾನ ಮಾಡಿಸುತ್ತಿರುವ ಚಿತ್ರವಿದು ಬಲಬದಿಗೆ ಕ್ಷೀರ ಸಮುದ್ರವನ್ನು ವಿಶಾಲವಾಗಿ ಬಿಳಿ ಬಣ್ಣದಲ್ಲಿ ಚಿತ್ರಿಸಿದ್ದು ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ಕೊಡದಲ್ಲಿ ತುಂಬಿ ತರುತ್ತಿರುವ ದೃಶ್ಯವಿದ್ದು ಅಭಿಷೇಕದ ನಂತರ ಶಿಶುವಿಗೆ "ಪಾರ್ಶ್ವನಾಥ" ಎಂದು ನಾಮಕರಣ ಮಾಡಿ ಅವನ ತಂದೆ ತಾಯಿಗೆ ಒಪ್ಪಿಸುವ ಅರ್ಥಭರಿತ ಭಿತ್ತಿ ಚಿತ್ರಗಳು ಈ ಮಠದಲ್ಲಿವೆ.

ಮರುಭೂತಿಯು ಒಬ್ಬ ಸನ್ಯಾಸಿಯ ರೂಪದಲ್ಲಿ ಜನ್ಮ ತಾಳಿದ್ದು ಕಮಠನು ಒಂದು ಸಿಂಹವಾಗಿ ಹುಟ್ಟಿದ್ದು (ಶಾರ್ದೂಲ, ಸಿಂಹ) ಒಂದು ಕಾಲ್ಪನಿಕ ರೀತಿ. ಸನ್ಯಾಸಿಯು ತಪಸ್ಸಿಗೆ ಕುಳಿತಿದ್ದು ಸಿಂಹವು ಸನ್ಯಾಸಿಯ ಕೈಗೆ ಕಚ್ಚಲು ಬರುತ್ತಿರುವ ಚಿತ್ರವಿದ್ದು, ಕೆಳಗಡೆ ಜಿಂಕೆ, ಹಾವು ಇವುಗಳ ಚಿತ್ರವನ್ನು ಚಿತ್ರಿಸಲಾಗಿದೆ. ಹಿಂಭಾಗದಲ್ಲಿ ಎರಡು ಒಣಗಿದ ಮರಗಳಿರುವುದನ್ನು ಕಾಣಬಹುದು.

ಈ ಚಿತ್ರದ ಕೆಳಗಡೆ ಮತ್ತೊಂದು ಚಿತ್ರದಲ್ಲಿ ಮರುಭೂತಿಯು ಒಬ್ಬ ಸನ್ಯಾಸಿಯ ಜನ್ಮದಲ್ಲಿದ್ದು ತಪಸ್ಸಿಗೆ ಕುಳಿತಿದ್ದಾನೆ. ಮೂರು ಜನ ಬಿಲ್ಲು ಬಾಣಗಳಿಂದ ಸನ್ಯಾಸಿಗೆ ಹೊಡೆಯುತ್ತಿದ್ದು ಇಲ್ಲಿ ಹಾವು ಜಿಂಕೆಗಳು ಮತ್ತು ಒಂದು ನಾಯಿ ಹಿಂಭಾಗದಲ್ಲಿ ಮರಗಳು ಕಂಡುಬರುತ್ತದೆ. ಮತ್ತೊಂದರಲ್ಲಿ ಅದೇ ತರಹದ ಸನ್ಯಾಸಿಯ ಸಂಯೋಜನ ಚಿತ್ರದಲ್ಲಿ ಇಬ್ಬರು ವ್ಯಕ್ತಿಗಳು ಸನ್ಯಾಸಿಗೆ ಭಕ್ತಿ ಪೂರ್ವಕ ನಮನ ಸಲ್ಲಿಸುತ್ತಿರುವ ಚಿತ್ರ ಕಂಡುಬರುತ್ತದೆ.

ಪಾರ್ಶ್ವನಾಥರ ತಂದೆ ತಾಯಿಯವರಾದ ವಿಶ್ವಸೇನ ಮತ್ತು ಬಾಹಿಲ ಮಹಾದೇವಿ ಇವರ ವಿವಾಹವಾದ ಚಿತ್ರವಿದ್ದು, ವಿಶ್ವಸೇನ ಇವರ ಮುಖವು ನೇರವಾಗಿ ಕಾಣುತ್ತಿದೆ. ಕೊರಳಲ್ಲಿ ಉದ್ದನೆಯ ಹಾರವಿದ್ದು ಕಡುಕೆಂಪು ಮೈ ಬಣ್ಣದಿಂದ ರಚಿಸಲಾಗಿದ್ದು ನೋಡಲು ಶಿವನ ಹಾಗೆ ಕಾಣುವುದು ಬಾಹ್ಮಿಲಾದೇವಿಯ ವಿಶ್ವಸೇನನ ಕೈ ಬೆರಳನ್ನು ಹಿಡಿದು ನಿಂತಿದ್ದು, ತೆಳುವಾದ ಬಿಳಿ ಮಿಶ್ರಿತ ಹಳದಿ ಬಣ್ಣವನ್ನು ಮುಖ ಕೈ ಕಾಲುಗಳಿಗೆ ಬಳಸಲಾಗಿದೆ.

ಇಬ್ಬರು ಕಿರೀಟ ಧರಿಸಿದ್ದು ಬ್ರಾಹ್ಮೀಲಾದೇವಿಯ ಸೀರೆಯ ಒಳಗೆ ಸಣ್ಣ ಸಣ್ಣ ಚುಕ್ಕೆ ಹೂಗಳ ಅಲಂಕಾರ ಮಾಡಲಾಗಿದ್ದು, ಎಡಗಡೆ ಇಬ್ಬರು ಸೇವಕಿಯರು ಬಲಗಡೆ ಇಬ್ಬರು ಸೇವಕರು, ಮಧ್ಯ ಒಂದು ಕಂದು ಬಣ್ಣದ ಒಂದು ಮರವನ್ನು ಚಿತ್ರಿಸಲಾಗಿದೆ. ಹಾಗೂ ಹಿಂದೆ ಕಮಠನು ಒಬ್ಬ ಸನ್ಯಾಸಿಯ ಅವತರಣೆಯಲ್ಲಿದ್ದು, ಅವನು ಎರಡು ಮರದ ತುಂಡುಗಳಿಗೆ ಕೊಡಲಿಯಿಂದ ಕತ್ತರಿಸುತ್ತಿದ್ದು ಆಗ ಅಲ್ಲಿಗೆ ಮರುಭೂತಿಯು ಒಬ್ಬ ಕಿರೀಟ ಧಾರಿಯಾದ ವ್ಯಕ್ತಿಯ ರೂಪದಲ್ಲಿ ಬಂದು ಆ ಸನ್ಯಾಸಿಗೆ ಈ ಮರಗಳನ್ನು ಕತ್ತರಿಸಬೇಡ ಅದರ ಒಳಗಡೆ ಎರಡು ಸರ್ಪಗಳಿವೆ ಎಂದು ಹೇಳುತ್ತಿದ್ದು ಅದನ್ನು ಕೇಳದೆ ಆ ಮರವನ್ನು ತುಂಡರಿಸುತ್ತಿದ್ದು ಅದರಲ್ಲಿ ಎರಡು ಸರ್ಪಗಳಿಗೆ ಏಟು ಬಿದ್ದು ಅವುಗಳಿಗೆ ಆರೈಕೆ ಮಾಡಿ ಮೋಕ್ಷ ದೊರಕಿದಾಗ ಆ ಸರ್ಪಗಳು ಧರಣೇಂದ್ರ ಹಾಗೂ ಪದ್ಮಾವತಿಯ ರೂಪದಲ್ಲಿ ಜನನವಾಗಿ ಪಾರ್ಶ್ವನಾಥ ತೀರ್ಥಂಕರ ಹತ್ತಿರ ಇರುವ ದೃಶ್ಯವಿರುವುದು ಕಂಡುಬರುತ್ತವೆ.

ಈ ದೃಶ್ಯದಲ್ಲಿ ಹಿನ್ನೆಲೆ ಎರಡು ಒಣಗಿದ ಮರಗಳಿದ್ದು, ಮುಕ್ಕಾಲು ಭಾಗ ನೆಲವನ್ನು ತೋರಿಸಿದ್ದಾರೆ. ಹಾಗೂ ಕಿರೀಟ ಧಾರಿ ವ್ಯಕ್ತಿಯ ವೇಷ ಭೂಷಣ ಬಟ್ಟೆಗೆ ಚುಕ್ಕೆ ಚುಕ್ಕೆಗಳಿಂದ ಅಲಂಕರಿಸಲಾಗಿದ್ದು ಸೊಂಟಕ್ಕೆ ಒಂದು ಪಟ್ಟಿಯನ್ನು ಕಟ್ಟಲಾಗಿದ್ದು ಸನ್ಯಾಸಿಯು ಗಡ್ಡ ಮೀಸೆಯುಳ್ಳವನಾಗಿದ್ದು ಕೊರಳಲ್ಲಿ ರುದ್ರಾಕ್ಷಿ ಧರಿಸಿದ್ದು ಕಂಡುಬರುತ್ತದೆ. ಎಲ್ಲಾ ವರ್ಣಗಳನ್ನು ಚಪ್ಪಟೆಯಾಗಿ ಬಳಸಲಾಗಿದೆ.

ಚಿತ್ರ–೧೧ : ಈ ಚಿತ್ರದಲ್ಲಿ ನಾಲ್ಕು ಅಂಕಣಗಳಿದ್ದು, ಒಟ್ಟು ಹದಿನಾರು ದೃಶ್ಯಗಳಿರುವುದನ್ನು ಕಾಣಬಹುದು. ರಾಜ ಮತ್ತು ಸೇವಕರು, ಯುದ್ಧದ ಚರ್ಚೆ, ಯುದ್ಧಕ್ಕೆ ರಣಕಹಳೆ ಊದುತ್ತಿರುವ ದೃಶ್ಯ, ಕುದುರೆ ಮೇಲೆ ಸವಾರಿ ಹೊರಟಿರುವುದನ್ನು ಕಾಣಬಹುದು. ಇನ್ನೂ ಡೆಕೋರಿಟೀವ್ ಶೈಲಿಯಲ್ಲಿ ರಚಿತವಾಗಿರುವ ಈ ಚಿತ್ರಗಳಲ್ಲಿ ಸೌಮ್ಯತೆ ಹೆಚ್ಚಿದೆ. ನೀಲಿ, ಬಿಳಿ, ಹಸಿರು, ಕೆಂಪು, ಕಪ್ಪು ಬಣ್ಣಗಳನ್ನು ಇಲ್ಲಿ ಹೆಚ್ಚು ಬಳಸಿರುತ್ತಾರೆ.

ಚಿತ್ರ–೧೨ : ಈ ಚಿತ್ರದಲ್ಲಿ ಒಟ್ಟು ಐದು ಪಟ್ಟಿಕೆಯಲ್ಲಿ ಚಿತ್ರಗಳಿದ್ದು, ಸಾಮಾಜಿಕ ದೃಶ್ಯಗಳನ್ನು ರಚಿಸಲಾಗಿದೆ. ರಾಜ ಮಲಗಿರುವುದು, ರಾಣಿಯನ್ನು ಮಾತನಾಡಿಸುತ್ತಿರುವ ದೃಶ್ಯ, ಬಿದ್ದಿರುವ ರಾಜನನ್ನು ಮೇಲೆಬ್ಬಿಸುತ್ತಿರುವ ದೃಶ್ಯ, ಕುದುರೆ ಮತ್ತು ಆನೆಯ ಮೇಲೆ ಸವಾರಿ ಎಂಬಿತ್ಯಾದಿ ಚಿತ್ರಕೃತಿಗಳನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿ ರಚಿಸಲಾಗಿರುವ ಒಟ್ಟಾರೆ ಕಲಾಕೃತಿಗಳಿಗೆ ಒಂದೆ ಬಣ್ಣಗಳನ್ನು ಬಳಸಿರುತ್ತಾರೆ. ಜೈನ ಸಂಪ್ರದಾಯ ಮತ್ತು ಆಚಾರ, ವಿಚಾರದಂತೆ ಸಾಮಾಜಿಕ ಚಿತ್ರಗಳು ಧರ್ಮದ ಕಥೆಯನ್ನು ಒತ್ತಿ ಹೇಳಲ್ಪಟ್ಟಿರುವುದಂತೂ ಸತ್ಯ.

ಗ್ರಂಥಗಳ ಕಥಾನಕದ ಆಧಾರದ ಮೇಲೆ ಸಣ್ಣ ಸಣ್ಣ ಸ್ಥಳಾವಕಾಶವನ್ನು ಮಾಡಿಕೊಂಡು ಕಥಾ ನಿರೂಪಣಾ ಚಿತ್ರಗಳನ್ನು ಗುರುತಿಸಲಾಗಿರುತ್ತದೆ.

ಈ ಜೈನಮಂಟಪವನ್ನು ಹೊಯ್ಸಳರ ಕಾಲಕ್ಕೆ ಕಟ್ಟಲಾಗಿದ್ದು, ಇದನ್ನು ಸಾರ್ವಜನಿಕರಿಗಾಗಿ ಕಟ್ಟಿಸಿದ ಮಂಟಪವಾಗಿದೆ. ದಾರಿಹೋಕರಿಗೆ ಮತ್ತು ನಿರ್ಗತಿಕರಿಗೆ ತಂಗಲು ಅನುಕೂಲವಾಗುವಂತಹ ಮಂಟಪ ಇದಾಗಿದ್ದು ಇಲ್ಲಿಯ ಭಿತ್ತಿ ಚಿತ್ರವನ್ನು ೧೭೮೦ರ ಸುಮಾರಿಗೆ ಮೈಸೂರು ಅರಸರ ಕಾಲಕ್ಕೆ ಮಾಡಲಾಗಿದೆ. ಇಲ್ಲಿನ ಚಿತ್ರಗಳು ಜೈನ ತೀರ್ಥಂಕರರಿಗೆ ಸಂಬಂಧಪಟ್ಟದ್ದು. ಅಲ್ಲದೆ ಮೈಸೂರು ಅರಸರ ವಂಶಾವಳಿ, ಪುಣ್ಯ ಮತ್ತು ಪಾಪಗಳ ಲೇಶ್ಯಗಳನ್ನು ಕುರಿತು ಇವುಗಳನ್ನು ಸಾಂಕೇತಿಕವಾಗಿ ಮರಗಳ ಹಿನ್ನೆಲೆಯಿಂದ ತೋರಿಸಲಾಗಿದೆ.

ದಕ್ಷಿಣ ಕರ್ನಾಟಕದ ಸಾರ್ವಜನಿಕ ಕಟ್ಟಡಗಳಲ್ಲಿ ಇರುವ ಚಿತ್ರಗಳನ್ನು ಗಮನಿಸಿದಾಗ ವೈವಿಧ್ಯತೆ ಕಂಡುಬರುತ್ತದೆ. ಕೆಲವು ಚಿತ್ರಗಳು ಮಂಟಪದಂತಹ ವಾಸ್ತುವಿನಲ್ಲಿ ಕಂಡುಬಂದರೆ, ಮತ್ತೆ ಕೆಲವು ಗರಡಿ ಮನೆಗಳಲ್ಲಿ ಕಂಡುಬಂದಿವೆ. ಆಗಾಗಿ ಇಲ್ಲಿನ ಚಿತ್ರಗಳಲ್ಲಿ ಧಾರ್ಮಿಕತೆಯಲ್ಲಿ ಹೆಚ್ಚಿನ ವಿಂಗಡನೆ ಕಂಡುಬರುವುದಿಲ್ಲ. ಜೈನ ಮತ್ತು ಹಿಂದೂ ಧರ್ಮದಲ್ಲಿ ವೈಷ್ಣವ ಧರ್ಮವನ್ನು ಪ್ರತಿಬಿಂಬಿಸುವ ಚಿತ್ರಗಳು ಮಾತ್ರ ರಚನೆಗೊಂಡಿವೆ.

ಮೂಡಬಿದಿರೆಯ ಜೈನ ಮಠ :

ಮೂಡಬಿದಿರೆಯು ಸುಂದರ ಪಟ್ಟಣವಾಗಿದೆ. ಹಾಗೂ ಇದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಮುಖ ಯಾತ್ರಾ ಸ್ಥಳ. ಈ ಊರಿನ ನಾಲ್ಕೂ ಕಡೆ ಪ್ರಕೃತಿಯ ಸೊಬಗಿನಂಥ ಚಂದವಾದ, ಸಸ್ಯ ಶ್ಯಾಮಲವಾಗಿ ಕಂಗೊಳಿಸುವ ಗದ್ದೆಗಳ ಸಾಲುಗಳು, ಅಲ್ಲಲ್ಲಿ ಜಲಭರಿತವಾದ ೧೮ ಸರೋವರಗಳು ಈ ಊರಿಗೆ ಮೆರುಗನ್ನು ನೀಡುತ್ತದೆ. ಹತ್ತಿರದಲ್ಲಿ ಕಡಲ ಕೆರೆ ಅನ್ನುವ ಪ್ರಕೃತಿ ಧಾಮ ಪ್ರದೇಶದ ಅಭಿವೃದ್ಧಿಯಾಗಿದೆ. ಇಲ್ಲಿ ತೆಂಗು, ಅಡಿಕೆ, ಬಾಳೆ, ಗೇರುಬೀಜ, ವೀಳ್ಯದ ಎಲೆ, ಭತ್ತ, ಕಬ್ಬು, ಕರಿಮೆಣಸು, ಅನನಾಸು ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ಶ್ರೀ ಜೈನಮಠ, ಅರಮನೆ, ಬಸದಿಗಳು, ಕೆಲವು ಮನೆಗಳು, ಶಿಲ್ಪಕಲೆಯ ಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸಗಳಿಂದ ಕಣ್ಮನ ಸೆಳೆಯುತ್ತವೆ. ಇಲ್ಲಿನ ಜಲವಾಯು ಸಮಶೀತೋಷ್ಣವನ್ನು ಆರೋಗ್ಯಕ್ಕೆ ಹಿತಕರವಾಗಿದೆ. ಮೂಡಬಿದಿರೆಯ ಗುರುಪೀಠವು ಭಗವಾನ್ ಮಹಾವೀರರ ನಂತರದ ಆಚಾರ್ಯ ಕುಂದಕುಂದರ ದೇಶೀಯ ಗಣ ಪರಂಪರೆಯಾಗಿದ್ದು, ಇಲ್ಲಿಯ ಪೀಠದ ಬಿರುದಾವಳಿಯು ಶ್ರೀಮದ್ ಡೆಲ್ಲಿ ಕನಕಾದ್ರಿಶ್ವೇತಪುರ, ಸುಧಾಪುರ, ಸಂಗೀತಪುರ, ಶ್ರೀಮದ್ ಬೆಳಗೊಳ, ಕ್ಷೇಮ ವೇಣ್ಪುರ, ಸಿದ್ಧ ಸಿಂಹಾಸನಾಧೀಶ್ವರ ಎಂಬುದಾಗಿದೆ. ಭಟ್ಟಾರಕರೆಂದರೆ "ಸರ್ವಶಾಸ್ತ್ರ ಕಲಾಬಿಜ್ಞೊ ಸರ್ವಗಜ್ಞಾಭಿ ವರ್ಧಕಃ ಮಹಾತ್ಥಾನಂ ಪ್ರಭಾವಿ ಭಟ್ಟಾರಕ ಇತಿಷ್ಯತಿ" ಅಂದರೆ ಧರ್ಮಶಾಸ್ತ್ರದಲ್ಲಿ ಪ್ರವೀಣರೂ, ಮುನಿಗಳ ಶ್ರೇಯಸ್ಸನ್ನು ಬಯಸುವವರು. ಮಹಾತ್ಮರು ಧರ್ಮ ಭೋದನೆ ಪ್ರಚಾರವನ್ನು ಮಾಡುವವರು ಎಂಬುದಾಗಿದೆ. ಇಲ್ಲಿನ ಗುರುಪೀಠ (ಮಠ)ದ ಸ್ಥಾಪನೆಯು ಸುಮಾರು ಕ್ರಿ.ಶ. ೧೨೨೦ರಲ್ಲಾಯಿತು. "ಶ್ರವಣ ಬೆಳಗೊಳ ಮಠದ ಸ್ವಸಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರಿಂದ ನೆರವೇರಿತು."

ದ್ವಾರಸಮುದ್ರ (ಹಳೇಬೀಡು)ದ ರಾಜನಾದ ಬಿಟ್ಟಿ ದೇವನು (೧೧೦೪-೧೧೪೧) ಜೈನ ಧರ್ಮವನ್ನು ತೊರೆದು ವೈಷ್ಣವ ಧರ್ಮ ಸ್ವೀಕರಿಸಿದನು. ನಂತರ ಅವನು ಬಿಟ್ಟಿದೇವ ಎಂಬ ಹೆಸರನ್ನು ಬದಲಿಸಿ "ವಿಷ್ಣುವರ್ಧನ"ನೆಂದು ನಾಮಾಂಕಿತನಾದನು. ವಿಷ್ಣುವರ್ಧನನು ಮತಾಂತರ ಹೊಂದಿದ ಬಳಿಕ ಅನೇಕ ಬಸದಿಗಳನ್ನು ಧ್ವಂಸಗೊಳಿಸಿದನು. ಜೈನ ಶ್ರಾವಕರನ್ನು ಹಿಂಸಿಸಿ ವಧಿಸಿದನು. ಈ ಅತ್ಯಾಚಾರ, ಅನಾಚಾರದ ಪರಿಣಾಮವಾಗಿ ಪ್ರಕೃತಿ ವಿಕೋಪಕ್ಕೊಳಗಾಗಿ ಅನೇಕ ಜನರು, ಪ್ರಾಣಿಗಳು ಬಲಿಯಾದವು. ಕ್ರಿ.ಶ. ೧೧೭೩-೧೨೯೯ ತನಕ ಇಲ್ಲಿ ರಾಜ್ಯವಾಳಿದ ವೀರಬಲ್ಲಾಳನು ಈ ಘೋರ ದುರಂತವನ್ನು ದೂರಗೊಳಿಸುವುದಕ್ಕಾಗಿ ಶ್ರವಣಬೆಳಗೊಳದ ಪೂಜ್ಯಶ್ರೀ ಸ್ವಾಮಿಗಳವರು ದ್ವಾರ ಸಮುದ್ರಕ್ಕೆ (ಈಗಿನ ಹಳೇಬೀಡು ಬಳಿಯ ಅಡಗೂರು) ಚಿತ್ತೈಸಿದರು. ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಯ ಕಲಿಕುಂಡ ಆರಾಧನೆಯನ್ನು ವಿಧಿವತಾಗಿ ಆರಾಧಿಸಿ ಮಂತ್ರ ಪೂರಿತವಾದ ಕುಂಬಳಕಾಯಿ (ಕೂಷ್ಮಾಂಡ) ಗಳಿಂದ ಸಿದ್ಧಾಂತವೆತ್ತರು, ತಪೋಧನ ಜೈನ ಮಂತ್ರದಷ್ಟಾರರು, ತಪೋಶೀಲ ನಿರತರೂ ಆಗಿದ್ದರು. ಹೊಯ್ಸಳ ರಾಜ

ಬಲ್ಲಾಳರಾಯನ ರಾಜ್ಯದ ವಿಪತ್ತನ್ನೂ, ದುಃಖವನ್ನೂ ದೂರ ಮಾಡಿರುವುದರಿಂದ ರಾಜನು ನಾಲ್ಕು ಕಡೆಯಲ್ಲಿ ಧರ್ಮ ಜಾಗೃತಿಯನ್ನು ಮೊಳಗಿಸಿದ ಪೂಜ್ಯರಿಗೆ ತನ್ನ ಮಂತ್ರಿ, ಪರಿವಾರ ಸಮೇತ ವಿನಯಪೂರ್ವಕವಾಗಿ 'ಚಾರುಕೀರ್ತಿ' ಎಂಬ ಅಭಿಧಾನವನ್ನಿತ್ತು ಗೌರವಿಸಿದ, ಅವರೇ ಚಾರು ಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು. ಅಲ್ಲಿಂದ ಸ್ವಾಮಿಗಳವರು ನೇರವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ನಲ್ಲೂರಿಗೆ ಬಂದು ಅಲ್ಲೊಂದು ಮಠವನ್ನು ಸ್ಥಾಪಿಸಿದರು. ನಂತರ ಮೂಡಬಿದಿರೆಗೆ ಸಿದ್ಧಾಂತ ಗ್ರಂಥಗಳ ಪ್ರದರ್ಶನಕ್ಕೆಂದು ಚಿತ್ತೈಸಿ ಇಲ್ಲೊಂದು ಮಠವನ್ನು ಸನ್ ೧೨೨೦ನೇ ಇಸವಿಯಲ್ಲಿ ಸ್ಥಾಪಿಸಿ ಖಾಲಿಯಾಗಿದ್ದ ಪ್ರಾಚೀನ ಪೀಠವನ್ನು ಅಲಂಕರಿಸಿದರು. ಹೀಗೆ ಇವೆರಡು ಮಠಗಳು ಶ್ರವಣಬೆಳಗೊಳದ ಮಠಗಳೊಂದಿಗೆ ಅನಂತ ನೇರ ಸಂಬಂಧ ಹೊಂದಿರುವ ಗೌರವ ಪಾತ್ರವಾದ ಸ್ವತಂತ್ರ ಪೀಠಗಳಾಗಿವೆ. ಅಂದಿನಿಂದ ಎರಡೂ ಗೌರವಾನ್ವಿತ ಪೀಠದ ಮಠಾಧಿಪತಿಗಳು ಕೂಡಾ ಹೊಯ್ಸಳ ರಾಜ ಬಲ್ಲಾಳರಾಯನಿಂದ ಕೊಡಮಾಡಿದ 'ಚಾರುಕೀರ್ತಿ' ಎಂಬ ಅಭಿದಾನದಿಂದ ವಿಖ್ಯಾತರಾದರು. ಅಂದರೆ ಮೂಡಬಿದಿರೆಯ ಶ್ರೀ ಜೈನ ಮಠವು ಇಂದಿಗೆ ೭೮೦ ವರ್ಷಗಳ ಮೊದಲು ಸ್ಥಾಪನೆಗೊಂಡಿದೆ ಎಂದು ತಿಳಿದುಬರುತ್ತದೆ. ಜೈನ ಮಠದ ಬಸದಿಯ ಗರ್ಭಗುಡಿಯ ಹೊರಭಾಗದಲ್ಲಿ ಕೆಲವಾರು ಭಿತ್ತಿ ಚಿತ್ರಗಳಿವೆ. ಇದನ್ನು ಒಂದೊಂದಾಗಿ ಕೆಳಗೆ ವಿವರಿಸಲಾಗಿದೆ.

ಭಿತ್ತಿ ಚಿತ್ರಗಳ ವಸ್ತು ವಿಷಯ : ಚಿತ್ರ–೧: ಎರಡುವರೆ ದ್ವೀಪದ ಪಕ್ಷಿನೋಟ (ಜೈನ ಭೂಗೋಳ) ಈ ಚಿತ್ರವುಮಠದ ಬಸದಿಯ ಗರ್ಭಗುಡಿಯ ಪೂರ್ವದಿಂದ ಬಲಭಾಗದ ಗೋಡೆಯಲ್ಲಿದೆ. ಇಲ್ಲಿ ಸುಮಾರು ೫½ x ४½ ಅಡಿ ವಿಸ್ತೀರ್ಣದ ಭಿತ್ತಿಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿ ಚಿತ್ರವನ್ನು ರಚಿಸಿದ್ದಾರೆ. ಈ ಭಿತ್ತಿಯ ಮಧ್ಯದಲ್ಲಿ ವಿಶಾಲ ಪ್ರದೇಶದಲ್ಲಿ ಜೈನ ಧರ್ಮದಲ್ಲಿರುವ ಭೌಗೋಳಿಕ ನಕ್ಷೆಯನ್ನು ಚಿತ್ರಿಸಿದ್ದಾರೆ. ಇದನ್ನು ೨½ ದ್ವೀಪ ಎಂದೂ ಕರೆಯುತ್ತಾರೆ. ಇದು ಪಕ್ಷಿ ನೋಟದಲ್ಲಿದೆ. ಇಲ್ಲಿ ವೃತ್ತದ ಒಳಗೆ ವೃತ್ತವಿರುವಂತೆ ರಚಿಸಲಾಗಿದೆ. ಈ ವೃತ್ತದ ಮಧ್ಯದಲ್ಲಿ ಅನೇಕ ಜ್ಯಾಮಿತಿಕ ಆಕೃತಿಗಳ ಅನೇಕ ಚಿತ್ರಗಳಿವೆ. ಜೈನ ಧರ್ಮದ ಪ್ರಕಾರ ಈ ದ್ವೀಪದಲ್ಲಿ ಅಸಂಖ್ಯಾದಿ ದೇಶಗಳು, ೧೪ ನದಿಗಳು (ಗಂಗಾ ಬ್ರಹ್ಮಪುತ್ರ ಇತ್ಯಾದಿ) ನದಿ ಹುಟ್ಟುವ ಸರೋವರಗಳು, ಅನೇಕ ಪರ್ವತ ಹಾಗೂ ಕ್ಷೇತ್ರಗಳು, ಸಮುದ್ರ ಹಾಗೂ ಜೀವ ವಿಶೇಷಗಳ ಚಿತ್ರಗಳಿವೆ. ಈ ೨½ ದ್ವೀಪದ ಹೊರ ಭಾಗದಲ್ಲಿ ಅನೇಕ ಬಗೆಯ ಹೂಬಳ್ಳಿಗಳ ನಡುವೆ ಅಲ್ಲಲ್ಲಿ ಹೂ ಅರಳಿದಂತೆ ಚಿತ್ರಿಸಿದ್ದಾರೆ. ಇದನ್ನು ಸುಮಾರು ೧೫ನೇ ಶತಮಾನಕ್ಕಿಂತ ಮೊದಲು ವಿಶೇಷವಾದ ಔಷಧೀಯ ಸಸ್ಯಗಳಿಂದ ತಯಾರಿಸಿದ ಸಂಪ್ರದಾಯಬದ್ಧವಾದ ಬಣ್ಣಗಳಿಂದ ರಚಿಸಿದ್ದಾರೆ. ಬಣ್ಣವನ್ನು ಲೇಪಿಸುವಾಗ ವಿಶೇಷವಾಗಿ ಕೆಂಪು, ಹಳದಿ, ಕಡು ಹಸಿರು ಹಾಗೂ ಕೃಷ್ಣವರ್ಣವನ್ನು ಅಗಲವಾಗಿ, ಚಪ್ಪಟೆಯಾಗಿ ಲೇಪಿಸಿರುತ್ತಾರೆ.

ಚಿತ್ರ–೨: ಪಂಚಪಾಂಡವರೊಂದಿಗೆ ದ್ರೌಪದಿ : ಇದು ಮಠದ ಪ್ರವೇಶ ದ್ವಾರದ ಎಡಬದಿಯ ಕೋಣೆಯಲ್ಲಿರುವ ಚಿತ್ರ. ಇದು ಜೈನ ಮಹಾಭಾರತಕ್ಕೆ ಸಂಬಂಧ ಪಟ್ಟದ್ದಾಗಿದೆ. ಇಲ್ಲಿ ಸಿಂಹಾಸನದಲ್ಲಿ ಧರ್ಮರಾಯ ದ್ರೌಪದಿಯೊಂದಿಗೆ ಕುಳಿತಿದ್ದಾನೆ. ಸುತ್ತಲೂ ನಾಲ್ಕು ಜನ ಪಾಂಡವರು ಆಯುಧರೂಢರಾಗಿದ್ದಾರೆ. ಇವರ ವೇಷ ಭೂಷಣ ಬಹಳ ಸೊಗಸಾಗಿ ವೈವಿಧ್ಯಮಯವಾಗಿದೆ. ಆಕಾಶದಲ್ಲಿ ರೆಕ್ಕೆಯುಳ್ಳ ಇಬ್ಬರು ಗಂಧರ್ವ ಸ್ತ್ರೀಯರು ಹೂಮಳೆಗರೆಯುತ್ತಿದ್ದಾರೆ. ಇದರ ಒಟ್ಟು ಸಂಯೋಜನೆಯು ಚಿಕಣಿ ಚಿತ್ರವನ್ನು ಹೋಲುತ್ತದೆ. ಈ ಚಿತ್ರದ ನಾಲ್ಕೂ ಅಂಚುಗಳು ಹೂವುಗಳಿಂದ ಅಲಂಕೃತವಾಗಿದೆ. ಚಿತ್ರ ರಚಿಸಿ ಬಹಳ ವರ್ಷಗಳೇ ಕಳೆದುದರಿಂದ ಚಿತ್ರ ಮಾಸುವ ಹಂತದಲ್ಲಿದೆ.

ಚಿತ್ರ–೩ ಮತ್ತು ೪: ಯುದ್ಧಕ್ಕೆ ಎದುರಾಗುತ್ತಿರುವ ಭರತ, ಬಾಹುಬಲಿ : ಮಠದ ಬಸದಿಯ ಪ್ರವೇಶದ್ವಾರದ ಬಲಬದಿಯ ಕೋಣೆಯಲ್ಲಿ ಈ ಚಿತ್ರವಿದೆ. ಇದು ಭರತ–ಬಾಹುಬಲಿಯು ಯುದ್ಧಕ್ಕೆ ಮುಖಾಮುಖಿಯಾಗುತ್ತಿರುವ ದೃಶ್ಯವಾಗಿದ್ದು, ನೋಡಲು ಚಿಕಣಿ ಚಿತ್ರದಂತೆ ಭಾಸವಾಗುತ್ತಿದೆ. ಯುದ್ಧದ ಸನ್ನಿವೇಶದಂತೆ ಕಂಡುಬರುವ ದೃಶ್ಯದಲ್ಲಿ ಆನೆ, ಒಂಟೆ ಮತ್ತು ಕುದುರೆಗಳು ನಿಂತಿರುವ ಹಾಗಿದೆ. ಅಲಂಕೃತ ಆನೆಗಳು, ಕುದುರೆಗಳು, ಎರಡೂ ಪಡೆಯಲ್ಲಿರುವ ರಾಜರ, ಯೋಧರ ನಿಲುವು, ಸೈನಿಕರು ವಿವಿಧ ಬಣ್ಣದ ಅಂಗಿಗಳಲ್ಲಿ, ರುಮಾಲುಗಳನ್ನು ಸುತ್ತಿಕೊಂಡು ವೈವಿಧ್ಯ, ಬಣ್ಣಗಾರಿಕೆಯಲ್ಲಿರುವುದು ವಿಶೇಷಗಳಲ್ಲೊಂದಾಗಿದೆ. ಒಟ್ಟು ಸಂಯೋಜನೆಯು ಚಿಕಣಿ ಚಿತ್ರವನ್ನು ನೆನಪಿಗೆ ತರುತ್ತದೆ. ಇಲ್ಲಿ ಬಣ್ಣಗಾರಿಕೆಯು 'ಪಂಚವರ್ಣ'ಗಳಲ್ಲಿವೆ. ಸೂಕ್ಷ್ಮವಾಗಿ ಗಮನಹರಿಸಿದಾಗ ಇತ್ತಂಡದಲ್ಲಿಯೂ ಯೋಧರಿಬ್ಬರು ದುರ್ಬೀನು ಹಿಡಿದು ನೋಡುತ್ತಿದ್ದಾರೆ. ಎಲ್ಲ ಚಿತ್ರದಲ್ಲಿರುವಂತೆ ಪರಿಧಿಯು ಹೂ ಬಳ್ಳಿಗಳಿಂದ ಅಲಂಕೃತವಾಗಿದೆ. ಹೆಚ್ಚು ವರ್ಣರಂಜಿತ ಚಿತ್ರವೆಂಬುದು ಕೆಂಪು, ಆರೆಂಜ್ ವರ್ಣಗಳಿಂದ ತಿಳಿಯಬಹುದಾಗಿದೆ.

ಚಿತ್ರ–೫: ತ್ರಿಲೋಕ ಚಿಹ್ನೆ : ಈ ಚಿತ್ರವು ಗರ್ಭಗುಡಿಯ ದ್ವಾರದ ಪೂರ್ವದ ಬಲಭಾಗದ ಗೋಡೆಯಲ್ಲಿ ಜೈನ ಭೂಗೋಳಕ್ಕೆ ತಾಗಿದಂತೆ ಇದೆ. ಇದನ್ನು 'ತ್ರಿಲೋಕ ನಕ್ಷೆ' ಎಂದು ಕರೆಯುತ್ತಾರೆ. ತ್ರಿಲೋಕ ಎಂದರೆ 'ಮೂರು ಲೋಕ' ಎಂದರ್ಥ. ಇದು ಕ್ರಮವಾಗಿ ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವ ಲೋಹ. ಮನುಷ್ಯನು ನಿಂತುಕೊಂಡು ಕಾಲುಗಳನ್ನು ಅಗಲಮಾಡಿ ಸೊಂಟದ ಮೇಲೆ ಎರಡು ಕೈಗಳನ್ನು ಇಟ್ಟಾಗ ಯಾವ ಆಕಾರ ಉಂಟಾಗುವುದೋ ಆ ಪುರುಷಾಕಾರದಂತೆ ಈ ಚಿತ್ರದ ನಕ್ಷೆ ಇದೆ. ಇದರ ಕೆಳಗೆ ಕಲೆವು ಚಿತ್ರಗಳಿವೆ. ಇದರ ಕೆಳಗೆ ಧರ್ಮಚಕ್ರ ಮಾದರಿಯ ರಚನೆಯಿದೆ. ಇದೇ ರೀತಿಯ ಚಕ್ರವು ಚಿತ್ರದ ಮೇಲಿನ ಭಾಗದಲ್ಲೂ ಇದೆ. ಇದು ಚಿತ್ರದ ಕಳೆಯನ್ನು ಹೆಚ್ಚಿಸಿದೆ. ಚಿತ್ರದ ಪರಿಧಿಯಲ್ಲಿ ಅಲಂಕಾರಿಕ ಹೂಬಳ್ಳಿಗಳ ರಚನೆಯಿದೆ. ಚಿತ್ರದಲ್ಲಿ ಕೆಂಪು, ಹಳದಿ ಮತ್ತು ಕಡು ಹಸಿರು ಬಣ್ಣಗಳನ್ನು ಬಳಸಲಾಗಿದೆ.

ಚಿತ್ರ–೬. ಮಾನಸ್ತಂಭ : ಇದು ಗರ್ಭಗುಡಿಯ ಪೂರ್ವದ ಗೋಡೆಯ ಭಿತ್ತಿಯಲ್ಲಿರುವ ಮೊದಲ ಚಿತ್ರ. ಜೈನ ಧರ್ಮದಲ್ಲಿ ಜೈನ ಬಸದಿಯ ಎದುರು ಕಲ್ಲಿನಲ್ಲಿ ಬೃಹತ್ ಪೀಠದ ಮೇಲೆ ಒಂದು ಸ್ತಂಭವನ್ನು ರಚಿಸಿದ್ದಾರೆ. ಇದನ್ನು 'ಮಾನಸ್ತಂಭ' ಎಂದು ಕರೆಯುತ್ತಾರೆ. ಅದನ್ನು ಇಲ್ಲಿ ಭಿತ್ತಿಯ ಮೇಲೆ ರಚಿಸಿದ್ದಾರೆ. ಎತ್ತರವಾದ ಒಂದು ಸ್ತಂಭದ ಮೇಲೆ ಒಂದು ಗುಡಿಯಂತಹ ರಚನೆಯಿದೆ. ಅದರ ಒಳಗೆ ತೀರ್ಥಂಕರರ ಚಿತ್ರವಿದೆ. ಗುಡಿಯ ಒಳಗೆ ಹಿನ್ನೆಲೆಯಲ್ಲಿ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಸ್ತಂಭಕ್ಕೆ ಚಿನ್ನದ ಬಣ್ಣವನ್ನು ಲೇಪಿಸಿದ್ದಾರೆ. ಚಿತ್ರದ ಪರಿಧಿಯ ಸುತ್ತ ಹೂ ಬಳ್ಳಿಗಳ ಸಾಲನ್ನು ಚಿತ್ರಿಸಿದ್ದಾರೆ. ಈ ಚಿತ್ರವು ಇದೇ ಭಿತ್ತಿಯಲ್ಲಿದೆ. ಇದು ಕೂಡ ಮಾನಸ್ತಂಭವಾಗಿದೆ. ಸ್ತಂಭವು ಕೆಳಭಾಗದಲ್ಲಿ ಸ್ವಲ್ಪ ದಪ್ಪವಾಗಿದ್ದು, ಮೇಲೆ ಹೋದಂತೆ ಸಪೂರವಾಗತೊಡಗುತ್ತದೆ. ಸ್ತಂಭದ ಮೇಲೆ ಹೇಳಿದ ಸ್ತಂಭದಲ್ಲಿರುವಂತೆ ಒಂದು ಸಣ್ಣ ಗುಡಿಯಿದ್ದು, ಅದರ ಒಳಗೆ ತೀರ್ಥಂಕರರ ಚಿತ್ರವಿದೆ. ಗುಡಿಯ ಎರಡೂ ಬದಿಯ ಅಂಚಿನ ಕೆಳಭಾಗದಲ್ಲಿ ಒಂದೊಂದು ಗಂಟೆಯನ್ನು ನೇತಾಡುತ್ತಿರುವಂತೆ ಚಿತ್ರಿಸಿದ್ದಾರೆ. ಚಿತ್ರಕ್ಕೆ ಮೇಲಿನ ಮಾನಸ್ತಂಭಕ್ಕೆ ಕೊಟ್ಟಂತಹ ಬಣ್ಣವನ್ನೇ ಇಲ್ಲಿಯೂ ಕೊಡಲಾಗಿದೆ.

ಚಿತ್ರ–೭: ಜಂಭೂ ವೃಕ್ಷ : ಇದೊಂದು ವಿಶೇಷ ಚಿತ್ರವೆನ್ನಬಹುದು. ಹಿಂದೂ ಸಂಪ್ರದಾಯದಲ್ಲಿ ವ್ಯಕ್ತಿಗಳಿಗೆ ಹೆಚ್ಚಿನ ದೈವಶಕ್ತಿಯ ಕಲ್ಪನೆಯನ್ನು ಮುಡಿಸಿದಂತೆ, ಶಿವನಿಗೆ ಬಿಲ್ವಪತ್ರೆ ಹಾಗೂ ಬನ್ನಿಮರ, ಭೋದಿವೃಕ್ಷಗಳನ್ನು ಹೇಗೆ ಪೂಜೆ ಮಾಡುವರೋ, ಹಾಗೆಯೇ ಬೌದ್ಧಧರ್ಮದಲ್ಲಿ ಬೌದ್ಧನ ಧ್ಯಾನಸ್ಥ ಸ್ಥಳ ಅರಳಿಮರ ಎಂಬುದಂತೆ ಜೈನ ಧರ್ಮದಲ್ಲಿ ಈ ಜಂಭೂವೃಕ್ಷ(ನೇರಳೆಮರ)ವನ್ನು ಪೂಜಿಸುವುದುಂಟು. ಈ ಹಿನ್ನಲೆಯಲ್ಲಿ ಮಠದ ಭಾವಡಿಯ ದಕ್ಷಿಣ ಗೋಡೆಯಲ್ಲಿ ಈ ಚಿತ್ರವನ್ನು ರಚಿಸಲಾಗಿರುತ್ತದೆ. ಈ ಚಿತ್ರವು ಜ್ಯಾಮಿತಿಯ ಆಕಾರದಿಂದ ಕೂಡಿದ್ದಾಗಿರುತ್ತದೆ. ಈ ವೃಕ್ಷವು ವಿಶಾಲವಾಗಿದ್ದು, ಎಲೆಗಳನ್ನು ಕಡು ಹಸಿರು ಬಣ್ಣದಲ್ಲಿ ಚಿತ್ರಿಸಲಾಗಿದೆ. ರೆಂಬೆ, ಕೊಂಬೆ ಮತ್ತು ಕಾಂಡವನ್ನು ಹಳದಿ ಬಣ್ಣದಿಂದ ಲೇಪಿಸಿದ್ದಾರೆ. ಹಿನ್ನಲೆಯಲ್ಲಿ ಕೆಂಪು ಬಣ್ಣವನ್ನು ಅಗಲವಾಗಿ ಲೇಪಿಸಿದ್ದಾರೆ. ಈ ಮರದ ಮೇಲೆ ಒಂದು ಮಂಟಪದಲ್ಲಿ ತೀರ್ಥಂಕರ ಧ್ಯಾನದಾವಸ್ಥೆಯಲ್ಲಿ ಕುಳಿತಿರುವುದನ್ನು ಕಾಣಬಹುದು. ಸುತ್ತಲೂ ಪರಿಧಿಯಲ್ಲಿ ಎಲೆಗಳನ್ನು ರಚಿಸಿ, ಹೂಗಳನ್ನು ಎದ್ದು ಕಾಣುವಂತೆ ರಚಿಸಿದ್ದಾರೆ. ಹಳದಿ, ಹಸಿರು, ಕೆಂಪು ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಿರುತ್ತಾರೆ.

ಚಿತ್ರ–೮: ದ್ವಾರಪಾಲಕ : ಗರ್ಭಗುಡಿಯ ಪ್ರವೇಶ ದ್ವಾರದ ಎಡಭಾಗದಲ್ಲಿ ಜೈನದ್ವಾರಪಾಲಕನ ಚಿತ್ರವಿದೆ. ಎಲ್ಲಾ ಜೈನ ಬಸದಿಗಳಲ್ಲಿ ಈ ರೀತಿಯ ದ್ವಾರಪಾಲಕರ ಚಿತ್ರಗಳಿರುತ್ತವೆ. ದ್ವಾರಪಾಲಕ ಗಧಾಪದ್ಮಧಾರಿಯಾಗಿರುತ್ತಾನೆ. ದ್ವಾರಪಾಲಕನ ಎರಡು ಕೈಗಳಲ್ಲಿ ಹೂವುಗಳನ್ನಿಡಿದುಕೊಂಡಿದ್ದಾನೆ. ದ್ವಾರಪಾಲಕನ ಹೊರಭಾಗದಲ್ಲಿ ಮಹಾದ್ವಾರದ ರಚನೆಯಿದ್ದು, ಇದು ತಮಿಳುನಾಡಿನ ಚೋಳಶೈಲಿಯನ್ನು ಹೋಲುತ್ತದೆ. ಗೋಪುರದ ಎಡ ಮತ್ತು ಬಲಭಾಗದ ದ್ವಾರಪಾಲಕರನ್ನು ಚಿತ್ರಿಸಿದ್ದಾರೆ. ರಾಜನ ವೇಷದಲ್ಲಿ ರಾರಾಜಿಸುವ ದ್ವಾರಪಾಲಕ ಸಮೃದ್ಧಿಯ ಸಂಕೇತದಂತಿದೆ. ದ್ವಾರಪಾಲಕರ ಕಾಲ

ಬಳಿಯಲ್ಲಿ ಎಡ ಬಲದಲ್ಲಿ ಸಿಂಹವನ್ನು ರಚಿಸಿಲಾಗಿದ್ದು, ಪರಿಧಿಯನ್ನು ಆಕರ್ಷಕ ಹೂಬಳ್ಳಿಗಳಿಂದ ಚಿತ್ರಿಸಿದ್ದಾರೆ. ಹಳದಿ, ಕೆಂಪು ಮತ್ತು ಆರೆಂಜ್ ಬಣ್ಣಗಳನ್ನು ಇಲ್ಲಿ ಕಾಣಬಹುದು. ಇದನ್ನು ತುಂಬಾ ವಿಶೇಷವಾದ ದ್ವಾರಪಾಲಕರ ಭಿತ್ತಿ ಚಿತ್ರವೆನ್ನಬಹುದು.

ಚಿತ್ರ-೯: ಪಟ್ಟಾಭಿಷಕ್ತರಾದ ರಾಮ-ಸೀತೆ : ಇದು ಅದೇ ಕೋಣೆಯಲ್ಲಿರುವ ಇನ್ನೊಂದು ಚಿತ್ರ. ಇದು ಜೈನ ರಾಮಾಯಣದಲ್ಲಿ ಬರುವ ಚಿತ್ರವಾಗಿದ್ದು, ಸಿಂಹಾರೂಢರಾಗಿ ರಾಮ ಮತ್ತು ಸೀತೆ ಕುಳಿತಿದ್ದಾರೆ. ಸಿಂಹಾಸನದ ಹಿಂಬದಿಯಲ್ಲಿ ಲಕ್ಷ್ಮಣ ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಎಡ ಬಲದಲ್ಲಿ ಸೇವಕರು ಚಾಮರ ಬೀಸುತ್ತಿದ್ದಾರೆ. ರಾಮನ ಬಲಭಾಗದಲ್ಲಿ ಹನುಮಂತನಿದ್ದಾನೆ. ಇಲ್ಲಿ ಸೀತೆ ಮತ್ತು ಸೇವಕರ ಶರೀರಕ್ಕೆ ಹಳದಿ ಬಣ್ಣ ಹಚ್ಚಿದ್ದಾರೆ. ಹಾಗೂ ಉಳಿದವರಿಗೆ ಕೃಷ್ಣವರ್ಣವನ್ನು ಹಚ್ಚಿದ್ದಾರೆ. ಚಿತ್ರದ ಅಂಚನ್ನು ಹೂ, ಬಳ್ಳಿಗಳಿಂದ ಸುಂದರವಾಗಿ ಸಿಂಗರಿಸಿದ್ದಾರೆ. ಈ ಚಿತ್ರವು ಕಾಲದ ಹೊಡೆತಕ್ಕೆ ಸಿಕ್ಕಿ ಮಾಸಿಹೋಗುವಂತಾ ಗಿದೆ.

ಚಿತ್ರ-೧೧. ಅಲಂಕಾರಿಕ ಮಾದರಿ ಅಂಚುಗಳು : ಜೈನ ಭಿತ್ತಿ ಚಿತ್ರಗಳಲ್ಲಿ, ಚಿತ್ರವು ಅಂದವಾಗಿ ಕಾಣಲು ಅಂಚುಗಳನ್ನು ಅಲಂಕಾರಿಕ ನಕ್ಷೆಗಳು, ಹೂ, ಬಳ್ಳಿಗಳನ್ನು ಚಿತ್ರಿಸಿದ್ದಾರೆ. ಬಳ್ಳಿ, ಎಲೆಗಳಿಗೆ ಕಡು ಹಸಿರು ಬಣ್ಣವನ್ನು ಲೇಪಿಸಿರುವುದು ವಿಶೇಷವೆನಿಸಿದರು ಇಲ್ಲಿ ಜೈನ ಪರಂಪರೆಯನ್ನು ಉಳಿಸುವ ಸಲುವಾಗಿ ಮತ್ತು ಮುಂದಿನ ಪೀಳಿಗೆಯ ಸಮುದಾಯದ ಆಸ್ಥೆಗೋಸ್ಕರವೂ ಕೂಡ ಚಿತ್ರಗಳನ್ನು ತೋರಿಸಿರುವುದು ಮೇಲ್ನೋಟಕ್ಕೆ ಗುರುತಿಸಬಹುದು.

ಶ್ರೀಮಠ, ಕಾರ್ಕಳ :

ಚಿತ್ರ-೧ : ಶ್ರೀಮಠ ಕಾರ್ಕಳವು ಜೈನ ಮಠವಾಗಿದ್ದು, ಜೈನ ಮಸದಿಯಲ್ಲಿನ ಗರ್ಭಗುಡಿಯ ಮುಂಭಾಗದಲ್ಲಿ ದ್ವಾರಪಾಲಕರನ್ನು ಕಾಣಬಹುದು. ಗರ್ಭಗುಡಿಯ ಪ್ರವೇಶದ್ವಾರದ ಎಡಭಾಗದಲ್ಲಿ ಜೈನ ದ್ವಾರಪಾಲಕನ ಚಿತ್ರವಿದೆ. ಇಲ್ಲಿ ಸಿಗುವ ಎಲ್ಲಾ ಜೈನ ಬಸದಿಗಳಲ್ಲೂ ಈ ರೀತಿಯ ದ್ವಾರಪಾಲಕನ ಚಿತ್ರಗಳಿರುತ್ತವೆ. ದ್ವಾರಪಾಲಕ ಗಧಾಪದ್ಮಧಾರಿಯಾಗಿದ್ದಾನೆ. ದ್ವಾರಪಾಲಕನ ಮೂರು ಕೈಗಳಲ್ಲಿ ಹೂವು ಮತ್ತೊಂದು ಕೈಯಲ್ಲಿ ಸರ್ಪದ ಜೊತೆ ಗದೆಯನ್ನು ಹಿಡಿದಂತೆ ಚಿತ್ರಿಸಲಾಗಿದೆ. ದ್ವಾರಪಾಲಕನ ಹೊರಭಾಗದಲ್ಲಿ ಮಹಾದ್ವಾರದ ರಚನೆಯಿದ್ದು ಇದು ತಮಿಳುನಾಡಿನ ಚೋಳರ ಶೈಲಿಯನ್ನು ಹೋಲುವಂತಿದೆ. ಗೋಪುರದ ಎಡ ಮತ್ತು ಬಲಭಾಗದ ಕಂಬಗಳ ಮೇಲೆ ಪುಟ್ಟದಾದ ಆನೆಗಳು ಸೊಂಡಿಲನ್ನೆತ್ತಿದಂತೆ ಚಿತ್ರಿಸಿದ್ದಾರೆ. ಮೇಲೆ ಆಕಾಶದಲ್ಲಿ ದೇವತೆಗಳು ಪುಷ್ಪವೃಷ್ಟಿಯನ್ನು ದ್ವಾರಕ್ಕೆ ಮಾಡುತ್ತಿರುವುದು ಕಂಡುಬರುತ್ತದೆ.[೧೦] ಅದೇ ರೀತಿ ಬಲಭಾಗದಲ್ಲಿರುವ ದ್ವಾರಪಾಲಕನು ಕೂಡ ಮೂರು ಕೈಗಳನ್ನು ಹೊಂದಿದ್ದು, ಹೂವನ್ನು ಹಿಡಿದಿರುತ್ತಾನೆ. ಕಿರೀಟಧಾರಿಯಾಗಿರುವ ಇವನು ತನ್ನ ಬಲಗಾಲನ್ನು ಸ್ವಲ್ಪ ಎತ್ತಿರುತ್ತಾನೆ. ಈ ಚಿತ್ರ ಮೊದಲನೇ ಚಿತ್ರಕ್ಕೆ ವಿರುದ್ಧವಾಗಿರುತ್ತದೆ. ಕೆಂಪು, ಹಳದಿ ಮತ್ತು ಕೃಷ್ಣ ವರ್ಣವನ್ನು ಬಳಸಲಾಗಿದ್ದು, ದ್ವಾರಪಾಲಕನ ಎಡ, ಬಲದಲ್ಲಿ ಸಿಂಹವನ್ನು ರಚಿಸಿದ್ದಾರೆ. ಅಂದರೆ ಇದರರ್ಥ ಧೈರ್ಯವಂತ ದ್ವಾರಪಾಲಕರು, ಕಿಡಿಗೇಡಿಗಳಿಗೆ ಸಿಂಹಸ್ವಪ್ನರು ಎಂಬಂತೆ ಭಾಸವಾಗುತ್ತಿದೆ.

ಚಿತ್ರ–೨ : ಗೋಡೆ ಮೇಲೆ ಬೃಹದಾಕಾರವಾಗಿರುವ ಈ ಚಿತ್ರವು ವೃತ್ತಾಕಾರವನ್ನೊಂದಿದ್ದು, ಅದರೊಳಗೆ ನಾಲ್ಕು ಚಿಕ್ಕ ವೃತ್ತಗಳನ್ನು ರಚಿಸಿ ಕವಡೆ ಆಟದ ರೇಖೆಯಂತೆ ಪಟ್ಟಿಕೆಗಳನ್ನು ರಚಿಸಿದ್ದಾರೆ. ಜೈನಧರ್ಮದ ಆಚರಣೆಗಳಲ್ಲೊಂದಾದ ಇದು, ನಿಷ್ಠೆ, ಪ್ರಾಮಾಣಿಕತೆ, ಸಂಯಮ, ಸೌಹಾರ್ದತೆಯ ಪ್ರತೀಕವನ್ನು ವಿವರಿಸುವಂತಿದೆ. ತನ್ನ ಧರ್ಮದ ಚೌಕಟ್ಟನ್ನು ಈ ರೀತಿಯಲ್ಲಿ ಬಿಂಬಿಸಲಾಗಿದೆ ದೊಡ್ಡ ವೃತ್ತದ ಹೊರಭಾಗದ ನಾಲ್ಕು ವಿಭಾಗಗಳಲ್ಲೂ ಸಿಂಹವನ್ನು ತೋರಿಸಲಾಗಿದೆ. ಸುತ್ತಲೂ ಕಾವಲಿನಂತೆ ಸಿಂಹಗಳು ಘರ್ಜಿಸುತ್ತಿವೆ. ನೀಲಿ, ಹಳದಿ, ಕೆಂಪು, ಕಪ್ಪು ವರ್ಣಗಳನ್ನು ಇಲ್ಲಿ ಕಾಣಬಹುದು.

ಅಂಕಲಿ ಮಠ, ಚಿತ್ರದುರ್ಗ : ಚಿತ್ರದುರ್ಗ ನಗರ ಪ್ರದೇಶದಿಂದ ಸುಮಾರು ಐದು ಕಿ.ಮೀ ದೂರದಲ್ಲಿರುವ ಪಂಚಲಿಂಗೇಶ್ವರ ಗುಹಾದೇವಾಲಯದ ಪಕ್ಕದಲ್ಲಿರುವ ಕಲ್ಲುಮಂಟಪವನ್ನು ಅಂಕಲಗಿಮಠ ಅಥವಾ ಪರದೇಶಪ್ಪನ ಗವಿಮಠ ಎಂತಲೂ ಕರೆಯುತ್ತಾರೆ. ಇಲ್ಲಿ ವೀರಭದ್ರನ ಹೆಂಡತಿಯೇ ಅಂಕಾಳಮ್ಮ, ಭೈರವೇಶ್ವರನ ಗುಡಿ ಹತ್ತಿರದಲ್ಲಿರುವುದರಿಂದ ಹೆಂಡತಿಯ ಹೆಸರಿನಲ್ಲಿ ಈ ಗವಿಯನ್ನು ಹಿಂದಿನವರು ಹೆಸರಿಸಿದ್ದಾರೆ. ವಿಶೇಷವಗಿ ಸಿದ್ದರು, ನಾಥಪಂಥದವರು ತಮ್ಮ ಸಾಧನೆಯ ಗೃಹಗಳನ್ನಾಗಿ ಈ ಮಠವನ್ನು ಉಪಯೋಗಿಸಿ ಕೊಂಡಿದ್ದರಂತೆ.! ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಈ ದೇವಾಲಯ ಮತ್ತು ಗವಿಯಲ್ಲಿ ಪರದೇಶಪ್ಪ ಎಂಬ ಸನ್ಯಾಸಿ ವಸವಿದ್ದ ಕಾರಣ ಪರದೇಶಪ್ಪನ ಗವಿಯೆಂತಲೇ ಜನರವಾಣಿಯಾಗಿ ಬಂದಿದೆ ಎಂಬ ಹಿರಿಯರ ಮಾತು.

ಚಿತ್ರದುರ್ಗದ ಪ್ರಮುಖ ಪ್ರೇಕ್ಷಣೀಯ ನೆಲೆಗಳಲ್ಲೊಂದಾದ ಚಂದ್ರವಳ್ಳಿ ಅಥವಾ ಹುಲಿಗೊಂದಿ ಪ್ರದೇಶದ ಅಂಕಲಗಿಮಠ(ಜನರು ಇದನ್ನು ಅಂಕಳಸ್ವಾಮಿ ಮಠ ಎಂತಲೂ ಕರೆಯುವುದುಂಟು), ಹುಲಿಗೊಂದಿಯ ಬೈರವೇಶ್ವರ(ಸಿದ್ದೇಶ್ವರ)ದೇವಾಲಯವನ್ನು ದಾಟಿ ಅದೇ ರಸ್ತೆಯಲ್ಲಿ ಮುಂದೆ ಸಾಗಿ ಬಲಕ್ಕೆ ತಿರುಗಿ ಮೆಟ್ಟಿಲುಗಳ ಮೇಲೇರಿ ಹೋದರೆ ಎದುರಿಗೆ ಪಂಚಲಿಂಗೇಶ್ವರ ಗುಹಾಲಯ ಅಲ್ಲಿಂದ ಎಡಕ್ಕೆ ಕಾಣುವುದೇ ಅಂಕಲಗಿಮಠ. ಪಂಚಲಿಂಗ ಗುಹಾಲಯದ ಬಲಬದಿಗೆ ಇರುವ ಸಾಲುಕಂಬಗಳ ವಿಶಾಲ ಚಾವಡಿ ಮತ್ತು ಅದಕ್ಕೆ ಸೇರಿದ ಕೆಳಗಿನ ಹಾಗೂ ಹಿಂದಿನ ಭಾಗ ಎಲ್ಲಾವೂ ಸೇರಿ ಸುತ್ತಮುತ್ತಲ ಪ್ರದೇಶವನ್ನೆಲ್ಲಾ ಅಂಕಲಿಕ ಮಠ ಎಂದು ವಾಚಿಸುವುದುಂಟು, ಚಿತ್ರದುರ್ಗ ಪರಿಸರದ ಸುಂದರ ತಾಣಗಳಲ್ಲಿ ಇದು ಒಂದು.

ಉತ್ತರ ಕರ್ನಾಟಕದ ಅಂಕಲಗಿ ಎನ್ನುವ ಕಡೆಯಿಂದ ಇಲ್ಲಿಗೆ ಬಂದು ನೆಲೆಸಿದ ವೀರಶೈವ ಗುರುಗಳೊಬ್ಬರಿಂದ ಇದಕ್ಕೆ ಅಂಕಲಗಿಮಠ ಎಂದು ಹೆಸರು ಬಂದಿತೆಂದು ಇತಿಹಾಸದ ಮೂಲಗಳಿಂದ ತಿಳಿಯಬಹುದು.ನೂರು ವರ್ಷಗಳಿಗೂ ಹಿಂದೆ ತಮ್ಮ ಅನುಯಾಯಿಗಳೊಂದಿಗೆ ಇಲ್ಲಿ ವಾಸ್ತವ ಹೂಡಿದ್ದರೆಂಬ ಮಾತಿದೆ. ಅದರ ಇತಿಹಸದ ಹಿನ್ನಲೆಯಲ್ಲಿ ೧೯ನೇ ಶತಮಾನಕ್ಕೂ ಪೂರ್ವದಲ್ಲಿಯೇ ಈ ಸ್ಥಳದಲ್ಲಿ ಜನ ವಾಸವಿದ್ದದ್ದು ಮತ್ತು ಪೂಜೆ ವಿಧಿವಿಧಾನಗಳ ಆಚರಣೆಗಳು ನಡೆದಿರುವಂತಹ

ಸಾಧ್ಯತೆಗೆ ಅನೇಕ ಪೂರಾವೆಗಳು ಲಭ್ಯವಿರುತ್ತವೆ. ಇದರೊಂದಿಗೆ ನೆಲಗವಿಯ ಒಂದು ಮಠ ಕ್ರಿ.ಶ.೧೮ನೇ ಶತಮಾನದಲ್ಲಿಯೇ ಪ್ರಚಲಿತಕ್ಕೆ ಬಂದಿದೆ ಎಂಬುದನ್ನು ನಾಡಿನ ಡಾ.ಎಂ.ಎಚ್.ಕೃಷ್ಣಯ್ಯರವರು ಅಭಿಪ್ರಾಯಿಸಿರುತ್ತಾರೆ.

ಚಿತ್ರ-೧ : ಚಿತ್ರದುರ್ಗ ನಗರದಿಂದ ಮೂರು ಕಿ.ಮೀ. ದೂರದಲ್ಲಿರುವ ಚಂದ್ರಾವಳಿ ನೋಡಲು ಸುಂದರವಾಗಿದೆ. ಬೆಟ್ಟ, ಗುಡ್ಡಗಾಡು ಪ್ರದೇಶ ಮತ್ತು ಗುಡ್ಡ ಇಳಿಜಾರಿಗೆ ಹರಿದ ಝುರಿಯ ತಾಣವು ಇಲ್ಲಿರುವುದರಿಂದ ಸರೋವರವನ್ನು ಕಾಣಬಹುದು. ಇಲ್ಲಿ ಹೆಚ್ಚು ಪ್ರಾಗ್ಯೈತಿಹಾಸಿಕ ಚಿತ್ರಗಳು ಸಹ ಕಂಡುಬಂದಿರುತ್ತವೆ. ಈ ಚಿತ್ರದಲ್ಲಿ ಪ್ರಮುಖವಾಗಿ ಬೃಹತ್ ಬಂಡೆ, ಅದರ ಮಡಿಲಲ್ಲಿ ಕಲ್ಲು ಕಂಬಗಳಿಂದ ಕೂಡಿದ ಮನೆಯಂತಿರುವ ಮಠ. ನೂರಕ್ಕೂ ಹೆಚ್ಚಿನ ವರ್ಷಗಳ ಆಯಸ್ಸಿನ ಈ ಮಠಕ್ಕೆ ಅಂಕಲಿಮಠ ಎಂತಲೂ ಕರೆಯುತ್ತಾರೆ. ಐತಿಹಾಸಿಕ ಸ್ಥಳವು ಕೂಡ. ಅಂತಹ ವೈಶಿಷ್ಟ್ಯತೆಯನ್ನೊಂದಿರುವ ಈ ಮಠದ ಒಳಾಂಗಣದಲ್ಲಿ ಚಿತ್ರಗಳ ಸುಗ್ಗಿ ಇತ್ತಾದರೂ ನೆರಳು-ಬೆಳಕಿನ ಆ ಭಾವಕ್ಕೆ ಸಿಲುಕಿ ನಲುಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ ಆಳಿದುಳಿದ ಕೆಲವು ಚಿತ್ರಗಳನ್ನು ಈ ಕೆಳಗಿನಂತೆ ಕಾಣಬಹುದು.

ಚಿತ್ರ-೨ : ಈ ಚಿತ್ರಗಳನ್ನು ನೋಡಿದರೆ ತಟ್ಟಂಥ ನೆನಪಿಗೆ ಬರೋದು. ಟಿಪ್ಪು ಅರಮನೆ ಬೆಂಗಳೂರು, ಯಾಕಂದ್ರೆ ಆ ಅರಮನೆಯಲ್ಲಿ ಇದೇ ತರಹದ ಚಿತ್ರಗಳನ್ನು ಕಾಣಬಹುದು. ಚಿತ್ರ ಕೋಣೆಯಾಕಾರದಲ್ಲಿ ಎಲೆಬಳ್ಳಿಯ ಚಿತ್ರವಿನ್ಯಾಸವನ್ನು ಕಾಣಬಹುದು. ಕತ್ತಲಕೋಣೆಯಾಗಿರುವುದರಿಂದ ದೀಪ ಹಚ್ಚಲು ಈ ರೀತಿಯ ವಿನ್ಯಾಸವುಳ್ಳ ಗೋಡೆಯನ್ನು ರಚಿಸಿರಬಹುದು ಎನ್ನುವಂತಿದೆ. ಇದರಲ್ಲಿ ದೀಪ ಹಚ್ಚಿದಾಗ ಹಿಂಬದಿಯ ಚಿತ್ರವು ಗೋಡೆಗೆ ಮತ್ತು ಚಿತ್ರಕ್ಕೆ ಬೆಳಕು ಸೂಸಿ ಸೌಂದರ್ಯವನ್ನು ಹೆಚ್ಚಿಸುತ್ತದೆ. ಆ ಹಿನ್ನೆಲೆಯಲ್ಲಿ ಈ ರೀತಿಯ ಚಿತ್ರಗಳು ಉಪಲಬ್ಧವಾಗಿವೆ. ಇನ್ನು ಹೊರಗೋಡೆಯಲ್ಲಿ ಪಟ್ಟಿಯನ್ನು ರಚಿಸಲಾಗಿದ್ದು, ಅದರಲ್ಲಿ ಬಳ್ಳಿಯನ್ನು ಸುತ್ತಲಾಗಿದೆ. ಕೆಳಹಂಚಿನಲ್ಲಿ ಹೂವಿನ ಅಲಂಕಾರವನ್ನು ಮಾಡಲಾಗಿರುತ್ತದೆ. ಬಿಳಿ, ಕೆಂಪು, ಹಸಿರು, ಕಪ್ಪು, ಆರೆಂಜ್ ಬಣ್ಣಗಳನ್ನು ಹೆಚ್ಚು ಬಳಸಲಾಗಿರುತ್ತದೆ.

ಚಿತ್ರ-೩ : ಒಳಾಂಗಣದಲ್ಲಿ ಮುರಿದು ಬಿದ್ದಂತಿರುವ ಗೋಡೆಯಲ್ಲಿ ಶಿಲ್ಪ ಮತ್ತು ಚಿತ್ರಗಳು ಲಭ್ಯವಾಗಿವೆ. ಶಿಲ್ಪದ ಸುತ್ತುವರಿದ ಗೋಡೆಯ ಮುಂಚಿನಲ್ಲಿ ಬಣ್ಣವನ್ನು ಲೇಪಿಸಲಾಗಿದೆ. ಹೂವು ಮತ್ತು ಎಲೆ ಬಳಿಯಾಕಾರದ ದೃಶ್ಯವೊಂದು ಕಡೆಯಾದರೆ ಮತ್ತೊಂದೆಡೆ ವಿನ್ಯಾಸಗಳಿರುವುದನ್ನು ಕಾಣಬಹುದು. ಇನ್ನೂ ಮೂರು ಕೋಣೆಗಳಿದ್ದು ಅವುಗಳಲ್ಲಿ ಚಿಗುರಿದ ಎಲೆಯ ಗಿಡವನ್ನು ಕಾಣಬಹುದಾಗಿದೆ ಅಲ್ಲಲ್ಲಿ ಹಸಿರು, ಬಿಳಿ ಬಣ್ಣಗಳಿಂದ ಚಿತ್ರಿಸಿದ ನೋಟವನ್ನು ಗುರುತಿಸಬಹುದು. ಹಸಿರು, ಬಿಳಿ, ಕೆಂಪು ವರ್ಣಗಳೇ ಹೆಚ್ಚು. ವರ್ಣರಂಜಿತ ಕಲ್ಲುಬಂಡೆಗೆ ಈ ಬಣ್ಣಗಳು ಇನ್ನಷ್ಟು ಮೆರಗನ್ನು ನೀಡಿರುತ್ತದೆ.

ಚಿತ್ರ-೪ : ಅಂಕಲಿ ಮಠ ಎಷ್ಟು ಹಾಳಾಗಿದೆ ಎನ್ನುವುದಕ್ಕೆ ಈ ಚಿತ್ರದಲ್ಲಿ ಕಾಣುವ ದೃಶ್ಯವೇ ಸಾಕು. ಅಷ್ಟರ ಮಟ್ಟಿಗೆ ಸೌಂದರ್ಯವಿಲ್ಲದೆ ಅಳಿಸಿ ಹೋದ ಚಿತ್ರವು ಬಿಳಿಗೋಡೆಗೆ ತಿರುಗಿ.

ಐತಿಹಾಸಿಕತೆಗೆ ಜೀವವಿಲ್ಲದ ಹಾಗೇ ಕಾಣುತ್ತಿರುವುದು ಪ್ರಸ್ತುತ ನೋವಿನ ವಿಚಾರವೂ ಆಗಿರುತ್ತದೆ. ಅಲಂಕಾರಿಕ ಶಿಲ್ಪವನ್ನೊತ್ತ ಗೋಡೆಯು ಸಂರಕ್ಷಣೆಯಿಲ್ಲದೇ ಬೀಳುತ್ತಿರುವುದು ಕಲೆಗೆ ದೊಡ್ಡ ಪೆಟ್ಟು ಎಂದೇಳಬಹುದು. ಭಿತ್ತಿ ಚಿತ್ರಗಳು ಎಂದಾಗ ಈ ಗೋಡೆಯ ತುಂಬಾ ವಿಷಯಕ್ಕನುಸಾರ ಚಿತ್ರವನ್ನು ರಚನೆ ಮಾಡಿರುವಂತೆ ಗೋಚರವಾದರೂ ಗುರುತಿಸುವಲ್ಲಿ ನಾವು ವಿಫಲರಾಗುತ್ತವೆ. ಆ ಮಟ್ಟಕ್ಕೆ ವಾತಾವರಣ ಸೃಷ್ಟಿಯಾಗಿದೆ. ಕೆಂಪು, ಎಲೆಗಳ ಅಲ್ಲಲ್ಲಿ ಇದ್ದು, ಕೆಳ ಅಂಚಿನಲ್ಲಿ ಕೆಂಪು ಪಟ್ಟಿಯನ್ನು ಹಾಕಿರುವುದನ್ನು ಕಾಣಬಹುದು. ಕೆಂಪು, ಕಪ್ಪು ವರ್ಣಗಳೇ ಹೆಚ್ಚು ಈ ಕೃತಿಯಲ್ಲಿ ಇಲ್ಲಿ ಚಿತ್ರಗಳಿರುವುದಲ್ಲದ ಕಾರಣ ಪ್ರಸ್ತುತ ಕಲಾವಿದರ ಕ್ರಿಯೇಟಿವಿಟಿ ಚಿತ್ರಗಳಿರುವಂತೆ ಕಂಡುಬರುತ್ತದೆ.

ಒಟ್ಟಾರೆಯಾಗಿ ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದ ಭಿತ್ತಿಚಿತ್ರಗಳ ವಸ್ತು ವಿಷಯವನ್ನು ಗಮನಿಸಿದಾಗ ಹಲವಾರು ಸಂಗತಿಗಳು ಬೆಳಕಿಗೆ ಬರುತ್ತವೆ. ಅವುಗಳಲ್ಲಿ ವಿಶೇಷವಾಗಿ ದೇವಾಲಯದ ಚಿತ್ರಗಳು, ಅರಮನೆಯಲ್ಲಿನ ಚಿತ್ರಗಳು, ಬಸದಿಗಳಲ್ಲಿನ ಚಿತ್ರಗಳು, ಚರ್ಚುಗಳಲ್ಲಿನ ಚಿತ್ರಗಳು, ಸಾರ್ವಜನಿಕ ಕಟ್ಟಡಗಳಲ್ಲಿನ ಚಿತ್ರಗಳು ಹೀಗೆ ಅವು ರಚನೆಗೊಂಡ ನೆಲೆಗಳನ್ನು ವಿಂಗಡಿಸಿ ವಿಶ್ಲೇಷಣೆ ಮಾಡಿದಾಗ ಹೆಚ್ಚಾಗಿ ದೇವಾಲಯದಲ್ಲಿನ ಚಿತ್ರಗಳು ಕಂಡುಬರುತ್ತವೆ. ಅಲ್ಲದೇ ದೇವಾಲಯದ ಚಿತ್ರಗಳು ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗದೆ ಬೇರೆ ಬೇರೆ ಪಂಥಗಳನ್ನು ಅನುಸರಿಸಿ ರಚನೆಗೊಂಡಿದ್ದು, ಧಾರ್ಮಿಕ ಸಮನ್ವಯತೆಯನ್ನು ಬಿಂಬಿಸುವ ಮತ್ತು ಸಾಮಾಜಿಕ ಬದುಕನ್ನು ಸಾಮರಸ್ಯಗೊಳಿಸುವ ನಿಟ್ಟಿನಲ್ಲಿ ಅವು ರಚನೆಗೊಂಡಿರುವುದನ್ನು ಗುರುತಿಸಲಾಗಿದೆ. ಇನ್ನು ಎರಡನೆಯದಾಗಿ ಅರಮನೆಯ ಚಿತ್ರಗಳನ್ನು ಗಮನಿಸಿದಾಗ ಈ ಚಿತ್ರಗಳು ರಾಜರ ಧಾರ್ಮಿಕ ಭಾವನೆಯ ಜೊತೆಗೆ ಅವರ ವೈಯಕ್ತಿಕ ಬದುಕು, ಅವರ ಸಾಮಾಜಿಕ ಬದುಕು, ರಾಜಕೀಯ ಘಟನಾವಳಿಗಳು, ಯುದ್ಧದಂತಹ ಘಟನೆಗಳು ಅಲ್ಲದೇ ಅವರ ರತಿ ಬದುಕಿನ ಒಳಗುಟ್ಟುಗಳನ್ನು ಬಿಚ್ಚಿಡುವ ಸಂಕೇತಗಳಾಗಿ ಕಂಡುಬರುತ್ತವೆ.

ಸಾರ್ವಜನಿಕ ಕಟ್ಟಡಗಳನ್ನು ಗಮನಿಸಿದಾಗ ಇಲ್ಲಿ ಹೆಚ್ಚಾಗಿ ಜನಸಾಮಾನ್ಯರು ಇಷ್ಟಪಡುವ ಧರ್ಮ ಸಮನ್ವಯದ ಚಿತ್ರಗಳು, ರಾಜಕೀಯ ಜೀವನದ ಚಿತ್ರಗಳು, ನಿತ್ಯ ಜೀವನದ ಚಿತ್ರಗಳು, ಪ್ರಾಣಿ–ಪಕ್ಷಿ ಮತ್ತು ನಕ್ಷಾ ವಿನ್ಯಾಸದ ಚಿತ್ರಗಳು ಸಾಮಾನ್ಯವಾಗಿರುವುದು ಕಂಡುಬರುತ್ತದೆ. ಅದೇ ರೀತಿ ಗರಡಿ ಮನೆಯಲ್ಲಿರುವ ಚಿತ್ರಗಳು ವಿಶೇಷವಾಗಿ ಕುಸ್ತಿ ಪಟುಗಳು ಅನುಸರಿಸುವ ಬದುಕಿನ ಹಿನ್ನೆಲೆಯನ್ನು ಒಳಗೊಂಡಿವೆ. ಇದಲ್ಲದೆ ಬಸದಿಗಳಲ್ಲಿರುವ ಚಿತ್ರಗಳು ಜೈನ ಧರ್ಮದ ತತ್ವಾದರ್ಶಗಳನ್ನು ಪ್ರಸಿದ್ಧಿಪಡಿಸುವ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು ಗಮನಾರ್ಹವಾಗಿದೆ. ದಕ್ಷಿಣ ಕರ್ನಾಟಕದ ವ್ಯಾಪ್ತಿಯಲ್ಲಿ ಕಂಡುಬರುವ ಎಲ್ಲಾ ಭಿತ್ತಿ ಚಿತ್ರಗಳ ಅತ್ಯಂತ ಸ್ಥೂಲವಾದ ಮಾಹಿತಿ ಇದಾಗಿದ್ದು ಇಲ್ಲಿ ಯಾವುದೇ ರೀತಿಯ ವಿಶ್ಲೇಷಣೆ, ಹೆಚ್ಚಿನ ವಿವರಗಳು ಮತ್ತು ವಿವರಿಸುವ ಪ್ರಯತ್ನಗಳಿರದೆ ಕೇವಲ ಸಂಕ್ಷಿಪ್ತ ಮಾಹಿತಿಯನ್ನು ಸಾಂಕೇತಿಕವಾಗಿ ನೀಡುವ ಪ್ರಯತ್ನ ಮಾಡಲಾಗಿದೆ.

ಅಡಿ ಟಿಪ್ಪಣಿ

೧. ಪಿ.ಆರ್. ತಿಪ್ಪೇಸ್ವಾಮಿ(ಪ್ರ.ಸಂ): ಚಿತ್ರಕಲಾ ಪ್ರಪಂಚ(ಪ್ರಾಚೀನ ಚಿತ್ರಕಲೆ ಲೇ:ಬಿ.ವಿ.ಕೆ. ಶಾಸ್ತ್ರಿ),ಕ.ಲ.ಕ.ಅ. ಬೆಂಗಳೂರು,೨ಪುಟ-೧

೨. ಪ್ರೋ.ಲಕ್ಷ್ಮಣ ತೆಲಗಾವಿ(ಸಂ): ಹರತಿಸಿರಿ(ಲೇ:ಅ.ಸುಂದರ),ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ,ಪು.೧

೩. ಡಾ.ಎಸ್.ಸಿ.ಪಾಟೀಲ(ಸಂ): ನಿಜದ ನೆಲೆ(ಲೇ:ಪ್ರೋ.ಎಚ್.ವಿ.ನಾಗೇಶ, ಚಿತ್ರಕಲೆ ಮತ್ತು ಸಮಾಜ), ವೈರಾಗ್ಯದ ಮಲ್ಲಣ್ಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩,ಪು.೩೧೭

೪. ಡಾ.ಎಸ್.ಸಿ.ಪಾಟೀಲ(ಸಂ): ನಿಜದ ನೆಲೆ(ಲೇ:ಯಾದಪ್ಪ ಪರದೇಶಿ),ವೈರಾಗ್ಯದ ಮಲ್ಲಣ್ಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩, ಪು.೪೬೧

೫. ಪಂಡಿತ ಕೈಲಾಸ ಚಂದ್ರಶಾಸ್ತ್ರಿ, ಜೈನಧರ್ಮ, ಪು.೩೨೧

೬ ಡಾ.ಎಸ್.ಡಿ.ಶೆಟ್ಟಿ, ಜೈನ ಬಸದಿಗಳು, ಪು.೩

೭ ಪಂಡಿತ ಕೈಲಾಸ ಚಂದ್ರಶಾಸ್ತ್ರಿ, ಜೈನಧರ್ಮ, ಪು.೩೨೩

೮. ಪಂಡಿತ ಕೈಲಾಸ ಚಂದ್ರಶಾಸ್ತ್ರಿ, ಜೈನಧರ್ಮ, ಪು.೭೩

೯. ಉಮೇಶ್.ಎಸ್, ಕರ್ನಾಟಕ ಜೈನ ಚಿತ್ರಕಲೆ, ಪು.೨೯

೧೦.ಅದೇ, ಪುಸ.೩೬

ಶ್ರೀಮಠ,ಶ್ರವಣಬೆಳಗೊಳ



ಚಿತ್ರ-೧



ಚಿತ್ರ-೨

ಶ್ರೀಮಠ,ಶ್ರವಣಬೆಳಗೊಳ



ಚಿತ್ರ-೩



ಚಿತ್ರ-೪

ಶ್ರೀಮಠ,ಶ್ರವಣಬೆಳಗೋಳ



ಚಿತ್ರ-೫



ಚಿತ್ರ-೬

ಶ್ರೀಮಠ,ಶ್ರವಣಬೆಳಗೋಳ



ಚಿತ್ರ-೭



ಚಿತ್ರ-೮

ಶ್ರೀಮಠ,ಶ್ರವಣಬೆಳಗೊಳ



ಚಿತ್ರ-೯



ಚಿತ್ರ-೧೦

ಶ್ರೀಮಠ,ಶ್ರವಣಬೆಳಗೊಳ




ಚಿತ್ರ-೧೧



ಚಿತ್ರ-೧೨

ಶ್ರೀಮಠ,ಮೂಡಬಿದರೆ



ಚಿತ್ರ-೧



ಚಿತ್ರ-೨

ಶ್ರೀಮಠ,ಮೂಡಬಿದರೆ



ಚಿತ್ರ-೩



ಚಿತ್ರ-೪

ಶ್ರೀಮಠ,ಮೂಡಬಿದರೆ



ಚಿತ್ರ-೫



ಚಿತ್ರ-೬

ಶ್ರೀಮಠ,ಮೂಡಬಿದರೆ



ಚಿತ್ರ-೭



ಚಿತ್ರ-೮

ಶ್ರೀಮಠ,ಕಾರ್ಕಳ



ಚಿತ್ರ-೧



ಚಿತ್ರ-೨

ಶ್ರೀಮಠ,ಕಾರ್ಕಳ



ಚಿತ್ರ-೩



ಚಿತ್ರ-೪

ಅಂಕಲಿಮಠ, ಚಿತ್ರದುರ್ಗ



ಚಿತ್ರ-೧




ಚಿತ್ರ-೨

ಅಂಕಲಿಮಠ, ಚಿತ್ರದುರ್ಗ



ಚಿತ್ರ-೩



ಚಿತ್ರ-೪

ಅಧ್ಯಾಯ : ೬

ದಕ್ಷಿಣ ಕರ್ನಾಟಕದ ಸಂಕೀರ್ಣ ಮಾಧ್ಯಮ ಚಿತ್ರಕಲೆ

ಅಧ್ಯಾಯ-ಆರು

ದಕ್ಷಿಣ ಕರ್ನಾಟಕದ ಸಂಕೀರ್ಣ ಮಾಧ್ಯಮ ಚಿತ್ರಕಲೆ

ಆದಿಮಾನವನ ಕಾಲದಿಂದಲೂ ಚಿತ್ರಕಲೆ ಕೇವಲ ಬರಿದಾದ ಭಿತ್ತಿಯಲ್ಲಿ ಅಲಂಕಾರ ಮಾಡುವುದಕ್ಕಿಂತ ಹೆಚ್ಚಿನ ಅರ್ಥದಲ್ಲಿ ಒಂದು ವಿಧಿಕ್ರಿಯೆಯಾಗಿ ಬಂದಿರುವುದರಿಂದ ಒಂದು ಪ್ರದೇಶದ ಸಂಸ್ಕೃತಿಯ ಮೇಲೆ ಚಿತ್ರಕಲೆಯ ಪ್ರಭಾವವನ್ನು ಗುರುತಿಸಬಹುದಾಗಿದೆ. ಒಂದು ಪ್ರದೇಶದ, ಒಂದು ಕಾಲದ ಸಂಸ್ಕೃತಿಯನ್ನು ಅರಿತುಕೊಂಡು ಅಧ್ಯಯನ ಮಾಡುವ ಸಂದರ್ಭದಲ್ಲಿ ಅಲ್ಲಿಯ ಉಳಿದ ಕಲಾ ಪ್ರಕಾರಗಳಂತೆ ಚಿತ್ರಕಲೆಯನ್ನು ಅವಶ್ಯಕವಾಗಿ ಪರಿಗಣಿಸಬೇಕಾಗುತ್ತದೆ. ಇಲ್ಲಿ ಚಿತ್ರಕಲೆ ಎರಡು ರೀತಿಯಿಂದ ಮುಖ್ಯವಾಗಿರುತ್ತದೆ. ಈಗಾಗಲೇ ರಚಿತವಾಗಿರುವ ಚಿತ್ರಕಲಾ ಕೃತಿಗಳನ್ನು ಅಧ್ಯಯನ ಮಾಡಿ ಅವುಗಳ ಮೂಲಕ ಅಲ್ಲಿಯ ಸಂಸ್ಕೃತಿಯನ್ನು ನೋಡುವುದು ಒಂದಾದರೆ, ಇನ್ನೊಂದು ಜನಾಂಗದ ಆಚರಣೆಯ ಸಂದರ್ಭದಲ್ಲಿ ರಚಿತವಾಗಿರುವ ಕಲಾಕೃತಿಗಳಿಂದ ಅಲ್ಲಿಯ ಸಂಸ್ಕೃತಿಯನ್ನು ಪರಿಶೀಲಿಸುವುದು.

ನಮ್ಮ ದೇಶದಲ್ಲಿ ಚಿತ್ರಕಲೆಗೆ ಸುದೀರ್ಘವಾದ ಚರಿತ್ರೆ ಮತ್ತು ಪರಂಪರೆಯಿದ್ದು, ನಮ್ಮ ಜನ ತಮ್ಮ ಬದುಕಿನ ಒಂದು ಭಾಗವಾಗಿ ಈ ಕಲೆಯನ್ನು ಪೋಷಿಸಿಕೊಂಡು ಬಂದಿದ್ದಾರೆ. ಈ ಜನ ಸಾಮಾನ್ಯರ ಸೌಂದರ್ಯ ಪ್ರಜ್ಞೆಗೆ ಪೂರಕವಾಗಿ ಅವರ ಜೀವನದ ಒಡನಾಡಿಯಾಗಿ ಇದು ಬೆಳೆದುಬಂದಿರುವುದು ಚಾರಿತ್ರಿಕ ಸತ್ಯವಾಗಿದೆ. ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ ಚಿತ್ರಕಲೆಗೆ ಮಹತ್ವದ ಸ್ಥಾನವಿದೆ. ಕರ್ನಾಟಕವೂ ಈ ಕಲೆಯನ್ನು ವ್ಯಾಪಕವಾಗಿ ಬೆಳೆಸುತ್ತಾ ಬಂದಿದೆ. ಇಂದಿಗೂ ಈ ಚಿತ್ರಕಲೆಯನ್ನು ಉಳಿಸಿ ಸಂರಕ್ಷಿಸಿದವರು ಹಲವಾರು ರಾಜರು, ಪೋಷಕರು ಮತ್ತು ಕಲಾವಿದರಾಗಿದ್ದಾರೆ. ಕರ್ನಾಟಕದಲ್ಲಿ ರಾಜರು, ಸಂಸ್ಥಾನಿಕರು, ಮಠಾಧೀಶರು

ಮತ್ತು ದೇವಾಲಯದವರು ಪ್ರಾದೇಶಿಕವಾಗಿ ಹಾಗೂ ಧರ್ಮಕ್ಕನುಗುಣವಾಗಿ ಒಂದೊಂದು ಕಲೆಯನ್ನು ಪ್ರೋತ್ಸಾಹಿಸಿ, ಬೆಳೆಸಿ ಪ್ರಚಾರ ಮಾಧ್ಯಮಕ್ಕಿಂತಲೂ ಜನಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡುವ ಭಾವನೆಯಿಂದ ಈ ಕಲೆಯನ್ನು ನೆಲೆಯೂರಿಸಿದ್ದಾರೆ. ಪ್ರಾಗೈತಿಹಾಸಿಕ ಕಾಲದಿಂದಲೂ ಬೆಳೆದು ಬಂದ ಚಿತ್ರಕಲೆ ಮುಂದುವರೆಯುತ್ತಾ ಅನೇಕ ಬದಲಾವಣೆಗಳನ್ನು ಪಡೆದುಕೊಂಡು ಜನಸಾಮಾನ್ಯರಿಂದ ರಚಿತವಾಗುತ್ತಾ ಬೆಳೆದು ಬಂದಿದೆ.[೧]

ಚಿತ್ರಕಲೆ ಸ್ಥಳ (Space) ಹಾಗೂ ಅದರ ಉದ್ದಗಲಗಳನ್ನು ಮಾತ್ರ ಉಪಯೋಗಿಸಿಕೊಳ್ಳುತ್ತದೆ; ಆಳವನ್ನಲ್ಲ, ಬಣ್ಣದ ಉಪಯೋಗ ಮೊದಲು ಅನುಷಂಗಿಕವಾಗಿ ಆಗುತ್ತಿತ್ತು. ರೇಖೆಗಳೇ ಮೂಲಧನವಾಗಿದ್ದವು. ಆದರೆ ಕ್ರಮೇಣ ಕಲಾವಿದನ ಸೂಕ್ಷ್ಮ ಮನೋಧರ್ಮವನ್ನು ಅಭಿವ್ಯಕ್ತಿಸಲು ಚಿತ್ರಕಲೆಯಲ್ಲಿ ಬಣ್ಣದ ಉಪಯೋಗುತ್ತಾ ಬಂತು. ಬಣ್ಣದ ಮೂಲಕ ಒಂದು ಚಿತ್ರವು. ಇಂದ್ರಗನ್ನಡಿಯಲ್ಲಿ ಮಾಡಿದ ಛಾಯೆಯಂತೆ ಶೋಭಿಸುತ್ತದೆ. ಆದ್ದರಿಂದ ಅದು ಪ್ರಬಲ ಭಾವನೆಗಳನ್ನು ಉದ್ದೀಪಿಸಬಲ್ಲದು. ಒಂದು ರಮಣೀಯ ದೃಶ್ಯವನ್ನು ಚಿತ್ರಿಸುವ ಚಿತ್ರವು ಸಹ ಸೃಷ್ಟಿಯನ್ನು ಚಿತ್ರಿಸುವುದಿಲ್ಲ. ವ್ಯಕ್ತಿಗತ ಭಾವನಾ ಲಹರಿಯನ್ನು ಚಿತ್ರಿಸುತ್ತದೆ. ಚಿತ್ರಿಸಲು ವಿದ್ಯುಕ್ತವಾಗಲಿಲ್ಲ. ತನ್ನ ಭಾವನೆಗಳನ್ನು ಹೊರಹೊಮ್ಮಿಸಿದ ಚಿತ್ರಕಲಾವಿದನು ಜ್ಯೋತಿಯಾರಾಧಕ. ಬೆಳಕೇ ಅವನ ದೇವರು, ಆದರೆ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳು ಬೆಳಕನ್ನೇ ಪ್ರಧಾನವಾಗಿ ಆರಾಧಿಸಲಾರವು. ಪ್ರಮುಖವಾಗಿ ಮೂರ್ತಿಶಿಲ್ಪದಲ್ಲಿ ಅದರ ಘನತ್ವ (Solidity) ಅದರ ದೇವರು ಆಗಿರುತ್ತದೆ. ವಾಸ್ತುಶಿಲ್ಪದಲ್ಲಿ ಅದರ ಉಪಯೋಗದ (ಪ್ರಯೋಜನದ) ಪಂಚಮಹಾಭೂತಗಳ ಚಿರಪ್ರಜ್ಞೆಯೇ ಅದರ ದೇವರಾಗಿರುತ್ತದೆ. ಮೂರ್ತಿಶಿಲ್ಪಕ್ಕಿಂತ ಚೆನ್ನಾಗಿ ಚಿತ್ರಕಲೆಯು ಒಂದು ಕಥೆಯನ್ನು ನಿರೂಪಿಸಬಲ್ಲದು ಆದರೂ ಮೂರ್ತಿಶಿಲ್ಪದಂತೆ ಎಲ್ಲಾ ಬದಿಗಳನ್ನು ಚಿತ್ರಿಸಲು ಹವಣಿಸಿದಾಗ ಚಿತ್ರಕಲಾವಿದ ಅಷ್ಟೊಂದು ಯಶಸ್ವಿಯಾಗಲಾರ;ಅವನು ಅಣಿಗೊಳಿಸುವ ಚಿತ್ರ ಕೇವಲ ಒಂದೇ ಮೈಗೆ ಮಾತ್ರ ಸೀಮಿತವಾದದ್ದು. ಒಂದು ಕೋನದಲ್ಲಿ ಮಾತ್ರ ಚಿತ್ರಗಳನ್ನು ನೋಡಿದಾಗ ಆತ ಒಳ್ಳೆಯ ಚಿತ್ರಕಾರನಾಗಬಲ್ಲನೆಂದೆನಿಸುತ್ತದೆ. ಆದರೆ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಗಳಂತೆ ಎಲ್ಲಾ ಬದಿಗಳ ತದ್ರೂಪಗಳನ್ನು ಚಿತ್ರ ಕಲಾವಿದ ಬಿಂಬಿಸಲು ಸಾಧ್ಯವಿಲ್ಲ.[೨] ಎಂಬಂತೆ ಶಿಲ್ಪಕಲೆಗೂ ಹಾಗೂ ಚಿತ್ರಕಲೆಗೂ ಅವಿನಾಭಾವ ಸಂಬಂಧಗಳಿವೆ. ದೃಶ್ಯಕಲೆಗಳಾಗಿ ಕೂಡಿರುವ ಈ ಎರಡು ಕಲೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ರೇಖೆಗಳಲ್ಲದೇ ಯಾವುದೇ ಚಿತ್ರ, ಶಿಲ್ಪ ರಚನೆಯಾಗಲು ಸಾಧ್ಯವಿಲ್ಲ. ಒಂದು ಚಿತ್ರವನ್ನು ರಚಿಸುವ ಕಲಾವಿದ ರೇಖೆಗಳನ್ನು ಸೃಷ್ಟಿಸುತ್ತಲೇ ಅದಕ್ಕೆ ಬಣ್ಣಗಳಿಂದ ಮೆರಗನ್ನು ನೀಡಬಹುದು. ಹಾಗೆಯೇ ಕಲ್ಲಿನ ಮೇಲೆ ರೇಖೆಗಳನ್ನು ಒತ್ತಿಕೊಂಡೇ ಶಿಲ್ಪರಚನೆಗೆ ಅನುಕೂಲ ಮಾಡಿಕೊಳ್ಳಬಹುದು, ಇಲ್ಲಿ ಎಷ್ಟೋ ದೇವಾಲಯಗಳಲ್ಲಿ ಆ ರೀತಿಯ ಚಿತ್ರಕಲೆಯಿರುವುದನ್ನು ಕಾಣಬಹುದು.

ದರಿಯಾ ದೌಲತ್ ಅರಮನೆಯಲ್ಲಿರುವ ಸಂಕೀರ್ಣ :

ಶ್ರೀರಂಗಪಟ್ಟಣದಲ್ಲಿರುವ ಈ ಅರಮನೆಯನ್ನು ಹೈದರಲಿ ಹಾಗೂ ಟಿಪ್ಪುವಿನ ಕಾಲದಲ್ಲಿ ನಿರ್ಮಾಣ ಮಾಡಲಾಯಿತು. ಇಡೀ ಕಟ್ಟಡವು ಆಯತಾಕಾರದ ಸುಮಾರು ಐವತ್ತು ಅಡಿ ಎತ್ತರದ ಒಂದು ವೇದಿಕೆ ಮೇಲೆ ನಿರ್ಮಿತವಾಗಿದೆ. ಈ ವೇದಿಕೆಯ ಮೇಲೆ ಕಂಬಗಳು ನಿಂತು ಛಾವಣಿಗೆ ಆಧಾರವಾಗಿವೆ. ಕಮಲದ ಮೊಗ್ಗುಗಳಂತೆ ಅವುಗಳ ತುದಿ ಸಣ್ಣದಾದ ಮರದ ಕಂಬಗಳು ಮೂರು ಮಡಿಕೆಯ ಕಮಾನುಗಳನ್ನು ಕಾಣಬಹುದು. ಈ ಅರಮನೆಯ ಸ್ವಾರಸ್ಯಮಯವಾದ ಒಂದು ಅಂಶವೆಂದರೆ ಅದರ ಗೋಡೆಗಳು ಕಂಬಗಳು ಮತ್ತು ಕಮಾನುಗಳು ವಿಧ-ವಿಧವಾದ ಬಣ್ಣಗಳಿಂದ ಅಲಂಕಾರ ಮಾಡಿರುವುದು. ಈ ಚಿತ್ರಗಳಲ್ಲಿ ಬಣ್ಣಗಳ ಜೊತೆಗೆ ಧಾರಾಳವಾಗಿ ಚಿನ್ನವನ್ನು ಉಪಯೋಗಿಸಿದ್ದಾರೆ. ದರ್ಬಾರ್‌ನಲ್ಲಿರುವ ಸಭಾಂಗಣಕ್ಕೆ ಆಧಾರವಾಗಿರುವ ಸ್ತಂಭಗಳು ಕಮಲದ ಆಕಾರದಲ್ಲಿದ್ದು, ಕೆಳಗಿನಿಂದ ಮೇಲಕ್ಕೆ ಗಾತ್ರ ಚಿಕ್ಕದಾಗುತ್ತಾ ಹೋಗುವ ಎತ್ತರವಾದ ಈ ಕಂಬಗಳ ಮೇಲಿನ ಕೆತ್ತನೆಗಳು, ಹುಲಿಯ ಪಟ್ಟೆಗಳು ಹಾಗಿವೆ. ಚಜ್ಜಗಳು, ಬೋದಿಕೆಗಳಿಂದ ಹೊರಡುವ ಕಮಾನುಗಳು, ಈ ಕಮಾನುಗಳ ಎರಡು ಬದಿಗಳಲ್ಲಿರುವ ಸುಂದರ ಹೂಗಳ ವಿನ್ಯಾಸಗಳು ಮೋಹಕವಾಗಿವೆ. ಛಾವಣಿಯನ್ನು ನೋಡಿದರೆ ಎತ್ತರದಲ್ಲಿ ನೇಯ್ದಿರಿಸಿದ ಪರ್ಶಿಯನ್ ರತ್ನಗಂಬಳಿಯಂತೆ ಶೋಭಿಸುತ್ತದೆ. ಬಾಲ್ಕನಿಯು ಮೊಗಲ್ ಕಲೆಯ ಭವ್ಯತೆಯನ್ನು ಸೌಂದರ್ಯತೆಯನ್ನು ಎತ್ತಿ ಹಿಡಿದಿರುತ್ತದೆ.[5]

ದಕ್ಷಿಣ ಕರ್ನಾಟಕದ ಭಾಗದಲ್ಲಿರುವ ದೇವಾಲಯ, ಮಠ, ಕ್ರೈಸ್ತ ದೇವಾಲಯ, ಮಸೀದಿ, ಸಮಾಧಿ ಮತ್ತು ಅರಮನೆಗಳಲ್ಲಿಯೂ ಕೆಲವು ಸಂಕೀರ್ಣ ಮಾಧ್ಯಮದ ಭಿತ್ತಿ ಚಿತ್ರಕಲೆಯನ್ನು ಕಾಣಬಹುದು. ಅವುಗಳೆಂದರೆ ಸಿಬಿಯ ನರಸಿಂಪ ದೇವಾಲಯ, ಕೃಷ್ಣ ದೇವಾಲಯ ಮೈಸೂರು, ಸೆಂಟ್ ಅಲೋಷಿಯಸ್ ಚರ್ಚ್,ಕುಲಶೇಖರ ಚರ್ಚ್,ಮಾಗಡಿ ಸೊಮೇಶ್ವರ ದೇವಾಲಯ,ಕೊಳ್ಳೆಗಾಲದ ಪರಿವಾರದ ಚಾವಡಿ, ಅಮೃತೂರಿನ ಲಕ್ಷ್ಮೀದೇವಾಲಯ, ಶ್ರವಣಬೆಳಗೊಳದ ಮಠ, ದರಿಯಾ ದೌಲತ್ ಅರಮನೆ, ಟಿಪ್ಪು ಅರಮನೆ, ಬೆಂಗಳೂರು, ಟಿಪ್ಪು ಸಮಾಧಿ ಶ್ರೀರಂಗಪಟ್ಟಣ ಮುಂತಾದ ಕಡೆ ವಿಶಿಷ್ಟ ಭಿತ್ತಿ ಚಿತ್ರಗಳನ್ನು ಕಾಣಬಹುದು.

ಪ್ರಾಗೈತಿಹಾಸಿಕ ಭಿತ್ತಿ ಚಿತ್ರಕಲೆ :

ವಿಶ್ವದಲ್ಲಿ ಭಿತ್ತಿಚಿತ್ರಗಳ ರಚನೆ ಅತ್ಯಂತ ಚಾರಿತ್ರಿಕವಾದದ್ದು, ಆದಿ ಮಾನವರು ಚಿತ್ರಗಳನ್ನು ಕಲ್ಲು ಬಂಡೆಗಳ ಮೇಲೆ ಚಿತ್ರಿಸಿರುವುದೇ ಪ್ರಥಮ ಭಿತ್ತಿಚಿತ್ರಗಳು ಎನ್ನಬಹುದು. ನಂತರದಲ್ಲಿ ಅಜಂತೆಯಾ ಚಿತ್ರಗಳು ಎನ್ನಬಹುದು. ನಂತರದಲ್ಲಿ ಅಜಂತೆಯ ಚಿತ್ರಗಳು. ಚಾಲುಕ್ಯ ಚಿತ್ರಗಳು, ವಿಜಯನಗರ ಚಿತ್ರಗಳು, ಭಿತ್ತಿಚಿತ್ರಗಳ ಪರಂಪರೆಯಲ್ಲಿ ಮಹತ್ವದ ಕೃತಿಗಳು ಎಂದೇ ಇತಿಹಾಸ ಬಣ್ಣಿಸುತ್ತದೆ. ಸಾವಿರಾರು ವರ್ಷಗಳ ಇತಿಹಾಸವಿರುವ ಭಿತ್ತಿಚಿತ್ರ ಪರಂಪರೆ ತನ್ನದೇ ಆದ ಸಾಂಪ್ರದಾಯಿಕ ವಿಧಿ-ವಿಧಾನಗಳಿಂದ ರಚಿತಗೊಂಡು ಅದು ಹೊರ ಜಗತ್ತಿಗೆ ಪ್ರಕಟವಾಗುತ್ತದೆ.

ಅಜಂತೆಯ ಚಿತ್ರಗಳು ಅಂತಹ ಸಾಂಪ್ರದಾಯಿಕ ವಿಧಾನಗಳಿಂದ ರಚಿತಗೊಂಡ ಚಿತ್ರಗಳು ಆಗಿವೆ. ಅದರಂತೆಯೇ ಚಾಲುಕ್ಯರು ನಿರ್ಮಿಸಿದ ಗುಹಾಲಯಗಳಲ್ಲಿ ಕಲ್ಲಿನ ಮೇಲೆ ಗಾರೆಯ ಲೇಪನವನ್ನು ಮಾಡಿಕೊಂಡು ಬಹುವರ್ಣಗಳಿಂದ ಭಿತ್ತಿಚಿತ್ರಗಳನ್ನು ರಚಿಸಿದ ಕುರುಹುಗಳು ಸಾಕಷ್ಟು ಕಡೆ ಕಂಡು ಬರುತ್ತವಾದರೂ ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ಚಿತ್ರದುರ್ಗ, ತುಮಕೂರು, ಉತ್ತರ ಕನ್ನಡ ಜಿಲ್ಲೆಯ ಕೆಲವೊಂದು ನೆಲೆಗಳನ್ನು ಗುರುತಿಸಬಹುದು.[೪]

ಆದಿಮಾನವನ ಬದುಕನ್ನು ಗುಡ್ಡ ಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಕಳೆದ ಸಂದರ್ಭದಲ್ಲಿ ಜೀವನಧಾರೆಯ ಬದುಕಿನ ಕ್ಷಣಗಳನ್ನು ಅವರು ವಾಸಿಸಿದ ಜಾಗದಲ್ಲಿ ರೇಖೆಗಳನ್ನು ಬರೆಯುವುದರ ಮೂಲಕ ದಾಖಲಿಸಿರುವುದು. ಮೊದಲು ಭಾಷೆ ಎಂದರೆ "ಚಿತ್ರಭಾಷೆ" ಎಂದೇ ಹೇಳಬೇಕು. ಆದಿಮಾನವನ ಜೀವನದ ಬದುಕಿನ ಆ ಕ್ಷಣಗಳನ್ನು ಪ್ರಸ್ತುತ ದಿನಮಾನಗಳಲ್ಲಿ ಕಂಡುಕೊಳ್ಳುವ ಮತ್ತು ಕ್ರಿ.ಪೂ.ದ ಆರಂಭ ಕಾಲದ ಹಿಂದಿನ ಜನರ ಜೀವನ ಹೇಗೆಲ್ಲಾ ಇತ್ತು ಎಂಬುದಕ್ಕೆ ಆ ಚಿತ್ರಗಳು ಸಾಕ್ಷಿಯಾಗಿರುತ್ತವೆ.

ಭಾರತ ದೇಶದಲ್ಲಿ ಗವಿವರ್ಣ ಮತ್ತು ಬಂಡೆ ಚಿತ್ರಗಳ ಶೋಧನೆ ಆಕಸ್ಮಿಕವಾಗಿ ಅಲ್ಲಲ್ಲಿ ೧೮೮೦ರಿಂದ ಪ್ರಾರಂಭವಾಯಿತೆನ್ನಬಹುದು. ಹ್ಯೂಬರ್ಟ್‌ನಾಕ್ಸ್ ಬಳ್ಳಾರಿಯ ಸಮೀಪವಿರುವ ಕುಪ್ಪಗಲ್ಲು ಗ್ರಾಮದಲ್ಲಿಯ ಗುಡ್ಡಗಳಲ್ಲಿ ದೊಡ್ಡ ದೊಡ್ಡ ಗುಂಡುಕಲ್ಲುಗಳ ಮೇಲೆ ಕುಟ್ಟಿ ಊರಿ ಬಿಡಿಸಿದ ಚಿತ್ರಗಳನ್ನು ಸಮಾರು ೧೮೮೭ರ ಸಮಯದಲ್ಲಿ ನೋಡಿ, ಅವುಗಳ ಛಾಯಾಚಿತ್ರವನ್ನು ತೆಗೆದು ರಾಬಟ್ ಬ್ರೂಸ್ ಫುಟ್ ಅವರಿಗೆ ಕಳುಹಿಸಿಕೊಟ್ಟರು. ಹೀಗೆ ಪ್ರಾಗೈತಿಹಾಸಿಕ ಭಾರತದಲ್ಲಿ ಪ್ರಮುಖವಾಗಿ ಕರ್ನಾಟಕದ ಶೋಧನೆಗಳು ನಡೆದು ಅತಿ ಹೆಚ್ಚು ಕೊರೆದ ನೀರು, ಕುಟು, ರೇಖಾ ಚಿತ್ರಗಳು ಬಂಡೆಗಳ ಮೇಲಿರುವುದು ಬೆಳಕಿಗೆ ಬಂದಿರುತ್ತದೆ. ಕಾಲ ಮತ್ತು ಇತಿಹಾಸ ಲಲಿತಕಲೆಗಳ ವಿಷಯದಲ್ಲಿ ಒಂದು ಸಂಪೂರ್ಣ ಆವರ್ತನವನ್ನು ಪೂರೈಸಿದೆ ಎನ್ನಬಹುದು. ಪ್ರಾಗೈತಿಹಾಸಿಕ ಕಾಲದ ಕಲೆ, ಐತಿಹಾಸಿಕ ಕಾಲದ ವಿವಿಧ ಘಟ್ಟಗಳು ಆಧುನಿಕ ಕಾಲದ ಕಲಾದೃಷ್ಟಿಗಳನ್ನು ಗಮನಿಸಿದಾಗ ಆದಿಮ ಮಾನವನ ಕಲೆಯ ಸಹಜ, ಸರಳತೆ ಸಾಂಕೇತಿಕತೆಯೇ ವಿಕಾಸದ ಹಾದಿಯಲ್ಲಿ ಸಾಗುತ್ತಾ ಸಂಕೀರ್ಣತೆಯ ವಿವಿಧ ರೂಪ ತಳೆದು ಮತ್ತೆ ಆಧುನಿಕ ಕಾಲದಲ್ಲಿ ಆ ಹಿಂದಿನ ಸರಳತೆ, ಸಾಂಕೇತಿಕತೆಯ ಮಹತ್ವವನ್ನು ತಿಳಿಸಿಕೊಡುವ ಪ್ರಯತ್ನ ಇಂತಹ ಅಧ್ಯಯನಗಳಿಂದ ಮಾತ್ರ ಸಾಧ್ಯ.

ಮಾನವನ ಎಲ್ಲಾ ಕಲಾ ಚಟುವಟಿಕೆಗಳ ಮೂಲ ನಿಸರ್ಗ ಇಂದಿಗಿಂತಲೂ ಆದಿಮಾನವ ನಿಸರ್ಗಕ್ಕೆ ಹೆಚ್ಚು ಹತ್ತಿರವಾಗಿದ್ದ. ನಿಸರ್ಗದ ಒಡಲಲ್ಲಿ ಬದುಕಿದ್ದ ಅವನಿಗೆ ಪ್ರಕೃತಿಯಲ್ಲಾಗುತ್ತಿದ್ದ ಋತುಚಕ್ರದ ಅರಿವಾಗಿರಬೇಕು. ಪಕ್ಷಿಗಳ ಹಾಡು, ಜಿಂಕೆಗಳ ಲಯಬದ್ಧ ನೆಗೆತ, ಹಾರಾಟ, ಹೊಟ್ಟೆತುಂಬಿ, ಮನಸ್ಸು ತೃಪ್ತಿಯಾಗಿದಾಗ ಪಕ್ಷಿಗಳ ಗಾನದ ಹಿನ್ನೆಲೆಯಲ್ಲಿ ಅಂತಃಸ್ಫುರಣೆಯಿಂದ ಇವನದೂ ದನಿಗೂಡಿಸಿರಬಹುದು. ಮಾತಿನಲ್ಲಿ ಹೇಳಲಾಗದ ಆನಂದ ದನಿಯಲ್ಲಿ ಅಂಗಭಂಗಿಯಲ್ಲಿ

ಲಯಗೂಡಿ ಹರಿದಿರಬೇಕು. ಋತುಚಕ್ರ ಉರುಳಿದರೂ ಆನಂದದ ಸೊಕ್ಕು ಅಳಿದಿರಲಿಲ್ಲ. ಅಸಾಧ್ಯ ಮಳೆಯಲ್ಲಿ ಗುಹೆ ಸೇರಿ ಉಳಿದಾಗಲೂ ಒಮ್ಮೊಮ್ಮೆ ನೆನಪು ಕಾಡದೆ ಬಿಡಲಿಲ್ಲ. ಕಣ್ಣೆದುರಿಗೆ ದೃಶ್ಯ ಕಂಡಂತೆ ಸ್ಫೂರ್ತಿಯುತ ಅನುಕರಣೆ, ಸುಪ್ತಕಲಾ ಪ್ರಜ್ಞೆಯ ಮೂಲಸೆಲೆ ಕಾಣಿಸಿಕೊಂಡಿತು. ಆಗ ಅವನು ವಾಸಿಸುತ್ತಿದ್ದಿದ್ದು ನೈಸರ್ಗಿಕ ಗುಹೆಗಳಲ್ಲಿ, ಚಾಚು ಬಂಡೆಯಾಸರೆಗಳಲ್ಲಿ ಬೇಟೆಯಾಡುವ ಹೊತ್ತಿನಲ್ಲಿ ಗುಹೆಯಲ್ಲಿದ್ದಾಗ ಬಂಡೆಯ ಉಬ್ಬುತಗ್ಗು ಅವನ ಚುರುಕು ಕಣ್ಣುಗಳಿಗೆ ನೆನಪನ್ನು ಕೆದಕಿರಬಹುದು. ಆ ಬಂಡೆಯ ಒರಟೊರಟಾದ ಉಬ್ಬು, ತಗ್ಗನ್ನು ಸ್ಪರ್ಶಿಸಿದಾಗ ತಾನು ಕಂಡಿದ್ದ ಪ್ರಾಣಿಯ ಮೈಮಾಟದ ನೆನಪು ತಂದಿರಬಹುದು.[೫] ಎನ್ನುವ ಎಂ.ಎಚ್.ಕೃಷ್ಣಯ್ಯನವರ ಮಾತು ಸ್ಪಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆಯ ಬಗ್ಗೆ ಪ್ರೊ.ಲಕ್ಷ್ಮಣ ತೆಲಗಾವಿಯವರು ಹೆಚ್ಚಿನ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಕಲಾದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯೂ ಕೂಡ. ಪ್ರಮುಖವಾಗಿ ದಕ್ಷಿಣ ಕರ್ನಾಟಕದ ಚಿತ್ರದುರ್ಗ, ಉತ್ತರ ಕನ್ನಡ, ರಾಮನಗರ, ಕೋಲಾರ ಜಿಲ್ಲೆಗಳಲ್ಲಿ ಶಿಲಾಶ್ರಯ ಚಿತ್ರಗಳು ಕಂಡುಬಂದಿರುತ್ತವೆ. ಕ್ರಿ.ಪೂ. ೧೦,೦೦೦ ವರ್ಷಗಳಿಂದ ಕ್ರಿ.ಪೂ. ೧೦೦೦-೨೦೦ರ ಬೃಹತ್ ಶಿಲಾಯುಗದವರೆಗೂ ಇಲ್ಲಿನ ಚಿತ್ರಗಳು ಬೇರೆ ಬೇರೆ ಕಾಲಗಳಲ್ಲಿ ರಚಿತವಾಗಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[೬] ಚಿತ್ರದುರ್ಗದಲ್ಲೆ ೪೩ ಚಿತ್ರ ನೆಲೆಗಳು ಕಂಡುಬಂದಿವೆ. ಅಷ್ಟೆ ಅಲ್ಲ ಉತ್ತರ ಕರ್ನಾಟಕ ಭಾಗಗಳಲ್ಲಿ ಹೆಚ್ಚು ಪ್ರಾಗೈತಿಹಾಸಿಕ ಚಿತ್ರಗಳು ಕಂಡುಬರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಈ ಭಾಗದಲ್ಲಿ ಕಂಡುಬರುವ ಆಕೃತಿಗಳು ಪ್ರಮಾಣಬದ್ಧವಾಗಿ ಭಾವಪೂರ್ಣವಾಗಿರುತ್ತವೆ. ಧಾರ್ಮಿಕ ಇಲ್ಲವೆ ಬೇರೆ ಯಾವ ಉದ್ದೇಶವೇ ಇದ್ದರೂ ಚಿತ್ರಕಾರನು ತನ್ನ ಆಕೃತಿಯು ಚೆಂದವಾಗಿರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಪ್ರಯತ್ನ ಪಟ್ಟಿರುತ್ತಾನೆಂದು ಭಾಸವಾಗುತ್ತದೆ. ತನ್ನ ಧಾರ್ಮಿಕ (ಅಥವಾ ಬೇರೆ) ಉದ್ದೇಶಕ್ಕೆ ಕೇವಲ ಪ್ರಾಣಿಯ ಒಂದು ಸಂಕೇತವಿದ್ದರಾಯಿತು ಎಂಬ ಒಂದು ಸಂಕುಚಿತ. ಒಣ ಭಾವನೆಯಿದ್ದ ಪಕ್ಷದಲ್ಲಿ ಆ ಚಿತ್ರದಲ್ಲಿ ಅಂದದ ಅಂಶ ಅನಾವಶ್ಯಕವೆಂದು ಕಡೆಗಣಿಸಬಹುದಾಗಿತ್ತು. ಆದರೆ ಈ ಚಿತ್ರಗಳಲ್ಲಿ ಸೌಂದರ್ಯದ ಅಂಶವಿದೆ. ಗೂಳಿ ಹಾಗೂ ಕಾಡುಕೋಣ, ಬಹುಮಟ್ಟಿಗೆ ಜಿಂಕೆಯು ಸಹ ಇವನ ಚಿತ್ರಕ್ಕೆ ಬಲುಪ್ರಿಯವಾದ ವಸ್ತು. ಚಿತ್ರದುರ್ಗದ ಕಾಡೆಮ್ಮೆಯ ರೇಖಾಚಿತ್ರಕ್ಕೂ ಕುಂದಾಪುರ ತಾಲ್ಲೂಕಿನ ಹಲ್ಲಾಡಿ-ಹಿರ್ಕಾಡಿ ಹಳ್ಳಿಯ ಒಂದು ಭಾಗವಾದ ಗವಳಿಯಲ್ಲಿಯೆ ಎರಡು ಗೂಳಿಯ ಚಿತ್ರಗಳಲ್ಲಿ ಒಂದೆರಡು ವಿಶೇಷ ಲಕ್ಷಣಗಳಿವೆ.[೭] ಇಷ್ಟೆ ಅಲ್ಲ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಅಲ್ಲಲ್ಲಿ ಮನುಷ್ಯನ ಚಿತ್ರಗಳಿರುವುದನ್ನು ಕಾಣಬಹುದು. ಹೆಚ್ಚಾಗಿ ಕಂಡುಬರುವ ಚಿತ್ರದುರ್ಗ ಪರಿಸರವು ಬೆಟ್ಟ, ಗುಡ್ಡಗಳಿಂದ ಕೂಡಿದ ಪ್ರದೇಶವಾಗಿರುತ್ತದೆ. ಇಲ್ಲಿ ಹೆಚ್ಚು ಗುಹಾ ಚಿತ್ರಗಳು ಕಂಡುಬಂದಿರುತ್ತವೆ. ಅನೇಕ ನೆಲೆಗಳಿವೆ. ಗಂಡು-ಹೆಣ್ಣುಗಳು, ಜಿಂಕೆ, ಎತ್ತುಗಳು, ಹದ್ದು, ಬೇಟೆಗೆ ಹೊರಟ ಜನ,

ಕೈ ಕೈ ಹಿಡಿಯುತ್ತಿರುವ ಗಂಡು ಹೆಣ್ಣಿನ ಜೋಡಿಗಳು, ವಿಚಿತ್ರಕಾರದ ಮಂಡಲಗಳು, ಪಕ್ಷಿಗಳು ಇಲ್ಲಿ ಚಿತ್ರಗಳು ರೇಖೆಗಳಿಂದಲೇ ರಚಿತವಾಗಿವೆ ಎದೆಯ ಭಾಗದಲ್ಲಿ ಎರಡು ಚುಕ್ಕಿಗಳಿದ್ದರೆ ಅದು ಹೆಣ್ಣೆಂದು ಅವು ಸ್ತನಗಳು! ಎದೆಯ ಭಾಗದಲ್ಲಿ ಚಿತ್ರಕೋನಾಕಾರದಲ್ಲಿ ಚಿತ್ರಿಸಿತೆಂದರೆ ಗಂಡೆಂದು ಅರ್ಥೈಸುವಂತಹ ಕ್ಷಣಗಳು ಇಲ್ಲಿ ನಿರ್ಮಾಣವಾಗಿರುತ್ತವೆ. ಇದೇ ರೀತಿ ಕನಕಪುರ ತಾಲೂಕು ಸೂಳೆಕಲ್ ಮಠದಲ್ಲಿ ಕೆಲವು ಚಿತ್ರಗಳು ಪತ್ತೆಯಾಗಿರುವುದನ್ನು ಅ.ಸುಂದರ ಅವರು ಗುರುತಿಸಿರುತ್ತಾರೆ.

ಭಾಷೆಯೆಂಬುದು ಭಾವಾಭಿವ್ಯಕ್ತಿಗೆ ಮಾಧ್ಯಮ, ವಾಹಕ, ಇದು ಪೂರ್ಣವಾಗಿ ರೂಪುಗೊಳ್ಳದ ಕಾಲದಲ್ಲಿ ಭಾಷೆ ಮಾಡುವ ಅದೆಷ್ಟೋ ಕೆಲಸವನ್ನು ಗುಹಾ ಚಿತ್ರಗಳು ಮಾಡಿವೆ. ಸಂಸ್ಕೃತಿಯ ವಿಕಾಸದೊಡನೆ ಚಿತ್ರ ರಚನೆ ಚಿತ್ರಕಲೆಯಾಯಿತು. ಇದು ಸೌಂದರ್ಯ ಮಿಮಾಂಸೆಯ ಹುಟ್ಟಿಗೂ ನಿಮಿತ್ತವಾಯಿತು. ಚಿತ್ರಕಲೆಯಿಂದು ಸಂಕೀರ್ಣವಾಗಿದೆ; ಸಾಂಕೇತಿಕತೆಯನ್ನು ಧ್ವನಿಸುತ್ತದೆ. ವಿದ್ಯಾವಂತ ಸಮಾಜದಲ್ಲಿ ಚಿತ್ರಕಲೆಯ ಈ ಬೆಳವಣಿಗೆಯನ್ನು ಗುರುತಿಸಿದರೆ ಇಂದಿಗೂ ಗುಡ್ಡಗಾಡು, ಬುಡಕಟ್ಟು ಜನಾಂಗಗಳಲ್ಲಿ ಗುಹಾಚಿತ್ರಗಳಿರುವಂತಹ ರಚನೆಗಳೇ ಜೀವಂತವಾಗಿರುವುದನ್ನು ಕಾಣಬಹುದು. ಒಂದು ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಅವರ ಶಿಲ್ಪಕಲೆ, ಚಿತ್ರಕಲೆ ಎಷ್ಟೊಂದು ಮುಖ್ಯವಾದುದ್ದೆಂದು ಈಗಾಗಲೇ ಸಿದ್ಧವಾಗಿರುವ ವಿಷಯ.[೮] ಈ ನಿಟ್ಟಿನಲ್ಲಿ ಬಯಲಿಗೆ ಬಂದಿರುವ ಗುಹಾ ಚಿತ್ರಗಳೇ ಸಾಕ್ಷಿ. ಅದೇ ರೀತಿ ಭಿತ್ತಿಚಿತ್ರಗಳ ರಚನೆಗೆ ಪೂರಕವಾಗಿ ಸಹಾಯವಾದ ಆದಿಮಾನವನ ಚಿತ್ರಗಳನ್ನು ಸಂಕೀರ್ಣ ಮಾಧ್ಯಮವಾಗಿ ಬಳಸಿಕೊಳ್ಳಲಾಗಿರುತ್ತದೆ. ಅದರಂತೆ ಆ ಚಿತ್ರಗಳು, ನೆಲೆಗಳು ಅವುಗಳ ವೈಶಿಷ್ಟ್ಯತೆಯನ್ನು ಹಿರಿಯ ಸಂಶೋಧಕರಾದ ಪ್ರೊ.ಲಕ್ಷ್ಮಣ ತೆಲಗಾವಿ, ಅ.ಸುಂದರ. ಎಚ್.ಶ್ರೀಶೈಲ ಆರಾಧ್ಯರವರ ಲೇಖನಗಳನ್ನು ಗಮನಿಸಬಹುದು.

ಅಷ್ಟೇ ಅಲ್ಲ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಭಾಗದಲ್ಲಿ ಕಾವಿಚಿತ್ರವನ್ನು ಕೂಡ ಕಾಣಬಹುದು. ಇದು ಕೂಡ ಜನಪದರ ಕಲೆಗಳಲ್ಲೊಂದಾಗಿದ್ದು, ಕಾವಿಕಲೆಯಷ್ಟೇ ಮಹತ್ವವನ್ನು ಸಾರುವಂತಿದೆ. ಆದರೂ ದಕ್ಷಿಣ ಕರ್ನಾಟಕದ ಭಾಗದಲ್ಲಿ ಶಿಲ್ಪದ ಮೇಲೆ ಬಣ್ಣ ಲೇಪನವಾಗಿರುವ ಚಿತ್ರಗಳನ್ನೇ ಇಲ್ಲಿ ಮುಖ್ಯವಾಗಿ ಸಂಕೀರ್ಣ ಮಾಧ್ಯಮವೆಂದು ಪ್ರತ್ಯೇಕಿಸಲಾಗಿರುತ್ತದೆ. ಆದರೂ ಆದಿ ಮಾನವನ ಚಿತ್ರಗಳು ಹಿಂದಿನ ಚಿತ್ರಗಳಿಗೆ ಪೂರಕವಾಗಿರುವ ಹಿನ್ನಲೆಯಲ್ಲಿ ಇಲ್ಲಿ ಪ್ರಸ್ತಾವಿಕವಾಗಿ ಹೇಳಲಾಗಿರುತ್ತದೆ.

ಅಡಿ ಟಿಪ್ಪಣಿ

೧. ಆನಂದ ಕೆ. ಪೂಜಾರ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ : ಡಿ.ಲಿಟ್ ಮಹಾಪ್ರಬಂಧ ಕ.ವಿ.ವಿ. ಹಂಪಿ. ೨೦೦೫,೨೧

೨. ಡಿ.ಎ.ಉಪಾಧ್ಯ : ದೃಶ್ಯಕಲೆಗಳು ಒಂದು ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ ಕ.ವಿ.ವಿ.ಹಂಪಿ. ೨೦೦೫ ಪು.ಸಂ. ೪೦

೩. ವಜಿರಾಬಾಷ: ಮ.ಬಾಗಾಯತ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ. ಕ.ವಿ.ವಿ.ಹಂಪಿ. ೨೦೦೪ ಪು. ೨೭೧

೪. ಆನಂದ ಕೆ.ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ. ಡಿ.ಲಿಟ್. ಮಹಾಪ್ರಬಂಧ ಕ.ವಿ.ವಿ.ಹಂಪಿ. ೨೦೦೫ ಪು. ೫೧

೫. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಸಪ್ನ ಬುಕ್ ಹೌಸ್, ಬೆಂಗಳೂರು. ಪು.ಸಂ. ೩೧

೬. ಎಂ.ಎಚ್.ಕೃಷ್ಣಯ್ಯ : ಕಲಾಸಂಸ್ಕೃತಿ, ಸಪ್ನ ಬುಕ್ ಹೌಸ್, ಪು.ಸ.೩೫

೭. ಪ್ರೊ.ಲಕ್ಷ್ಮಣ ತೆಲಗಾವಿ (ಸಂ) : ಹರತಿಸಿರಿ, ಪು.ಸ. ೨೦

೮. ಪ್ರೊ.ಲಕ್ಷ್ಮಣ ತೆಲಗಾವಿ (ಸಂ) : ಹರತಿಸಿರಿ, ಪು.ಸ. ೩೮

ಅಧ್ಯಾಯ : ೭

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಸುಂದರಗೊಳಿಸುವ ಕೌತುಕಮಯ ದೃಶ್ಯಧ್ಯಾನದಲ್ಲಿ ನಿರತನಾದ ಮನುಷ್ಯ ತನ್ನ ಆನಂದವನ್ನೇ ಅಲ್ಲದೆ ಇನ್ನಿತರ ಭಾವಗಳನ್ನು ಹಲವು ರೀತಿಯಲ್ಲಿ ಪ್ರದರ್ಶಿಸಿರುತ್ತಾನೆ[೨] ಎಂಬುದಕ್ಕೊಂದು ಉದಾಹರಣೆ ಕಲ್ಲು,ಬಂಡೆಗಳ ಮೇಲೆ, ಗೋಡೆಗಳ ಮೇಲೆ ರಚಿತವಾಗಿರುವ ಭಿತ್ತಿ ಚಿತ್ರಗಳೇ ಸಾಕ್ಷಿ.

ಕಲಾನಾಂ ಪ್ರವರಂ ಚಿತ್ರಧರ್ಮಕಾಮಾರ್ಥಮೋಕ್ಷದಂ॥

ಮಂಗಲ್ಯಂ ಪರಮಂ ಚೈತದ್ಗೃಹೇ ಯತ್ರ ಪ್ರತಿಷ್ಟಿತಂ ॥೩೮॥

ಕಲೆಗಳಲ್ಲಿ ಚಿತ್ರಕಲೆ ಶ್ರೇಷ್ಟ, ಅದು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕೊಡುತ್ತದೆ ಎಂದೂ ಹೇಳಲಾಗಿದೆ. ಲಲಿತಕಲೆಯೇ ಅಲ್ಲದೇ ಅದರ ಕುರಿತು ಸಾಹಿತ್ಯವೂ ಕಾಲಕಾಲಕ್ಕೆ ವಿಶಿಷ್ಟವಾಗಿ ಪ್ರಕಟಗೊಂಡಿದೆ. ಹೀಗಾಗಿಯೇ ಶತಮಾನಗಳ ಹಿಂದಿನ ಚಿತ್ರಸೂತ್ರವೂ, ೨೧ನೇಯ ಶತಮಾನದಲ್ಲಿಯೂ ಅಧ್ಯಯನಕ್ಕೆ ಯೋಗ್ಯವಾಗಬಲ್ಲದು[೩] ಎಂಬುದಕ್ಕಿಂತ ಮುಂಚಿತವಾಗಿ ಭಾರತದ್ಯಾಂತ ಲಕ್ಷಗಟ್ಟಲೇ ಸಿಕ್ಕಿರುವ ಸಾಂಸ್ಕೃತಿಕ ಶ್ರೀಮಂತಿಕೆಯ ಬದುಕಿನ ಹಿನ್ನಲೆಯ ದೃಶ್ಯಗಳನ್ನು ಸಂಗ್ರಹಿಸುವ ಮತ್ತು ಅವುಗಳನ್ನು ಪಾಲನೆ ಮತ್ತು ಪೋಷಣೆ ಮಾಡುವ ಹಿನ್ನಲೆಯಲ್ಲಿ ಚಿತ್ರಕಲೆಯನ್ನು ಉಳಿಸಿಬೆಳೆಸಬೇಕಾಗಿರುವುದು ಆದ್ಯ ಕರ್ತವ್ಯವೂ ಕೂಡ.

ಜೀವನಕ್ಕೂ ಕಲೆಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿ ತಾನು ಅನುಭವಿಸಿದ ನೋವು-ನಲಿವುಗಳಿಂದ ಒಂದೊಂದು ರೀತಿಯ ಸಂವೇಧನೆಯನ್ನು ಪಡೆಯುತ್ತಾನೆ. ಪ್ರಕೃತಿ ಮಡಿಲಿನಲ್ಲಿರುವ ಗಿಡ-ಮರ, ಹೂ-ಬಳ್ಳಿ ಹೀಗೆ ಅವನು ನೆಲೆಸಿರುವ ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತದೆ. ಈ ಪರಿಸರದ ವಾತಾವರಣವನ್ನು ಕಲಾವಿದನು ಆಸ್ವಾಧಿಸಿದಾಗ ಅವನಿಂದ ಕಲಾಕೃತಿಗಳು ಹೊರಹೊಮ್ಮುತ್ತವೆ. ಒಂದರ್ಥದಲ್ಲಿ ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸೂಕ್ಷ್ಮಾತಿಸೂಕ್ಷ್ಮವಾಗಿ ಅವರ ಮೇಲೆ ಪ್ರಭಾವ ಬೀರುತ್ತದೆ[೪] ಎಂಬುದಂತೂ ನಿಜ. ಈ ರೀತಿ ಪ್ರಭಾವ, ಪ್ರೇರಣೆ ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಭಿತ್ತಿ ಚಿತ್ರಗಳನ್ನು ರಚಿಸಿರುವ ಕಲಾವಿದರಲ್ಲೂ ಕಾಣುತ್ತೇವೆ.

ಮುಖ್ಯವಾಗಿ ಚಿತ್ರಗಳ ಸಂಗ್ರಹವಿರುವ ಸ್ಥಳಗಳಿಗೆ ಚಿತ್ರಶಾಲೆಯಂತಲೇ ಕರೆಯಬೇಕು, ಶಾಸ್ತ್ರ ಗ್ರಂಥಗಳು, ದೇವಾಲಯಗಳಲ್ಲಿ ಚಿತ್ರಗಳು ಇರಬೇಕಾದ ರೀತಿಯ ಬಗ್ಗೆ ಹೇಳಬೇಕೆಂದರೆ ಕಾವ್ಯಗಳಲ್ಲಿ ಅರಮನೆ, ಮನೆ, ರಂಗಮಂದಿರ, ಮಂಟಪ, ಇತ್ಯಾದಿಗಳಲ್ಲಿ ಚಿತ್ರಗಳು ಇದ್ದ ಬಗ್ಗೆ ತಿಳಿದುಬರುತ್ತದೆ. ಪ್ರಸ್ತುತ ದಕ್ಷಿಣ ಕರ್ನಾಟಕದ ಅರಮನೆ, ದೇವಾಲಯ, ಮಠಗಳಲ್ಲಿ ಭಿತ್ತಿ ಚಿತ್ರಗಳು ಉಳಿದಿರುವುದನ್ನು ಕಾಣಬಹುದು.

ಡಿ.ಕೆ.ಭಾರದ್ವಜ್ ಅವರು ಕರ್ನಾಟಕ ಕುರಿತು ಕೈಪಿಡಿಯೊಂದನ್ನು ೧೯೨೪ರಲ್ಲಿ ಬರೆದಿದ್ದು. ೨ನೇ ಪುಲಕೇಶಿಯಿಂದ ಅಜಂತೆಯಲ್ಲಿ ಚಿತ್ರಗಳು ರಚನೆಯಾಯಿತೆಂದು. ಸಿತ್ತನ್ನವಾಸಲ್.

ಸಿಗಿರಿಯಾ, ಎಲ್ಲೋರಗಳಲ್ಲಿ ಭಿತ್ತಿ ಚಿತ್ರಗಳಿರುವುದೆಂದೂ, ಇದು ಕರ್ನಾಟಕದಲ್ಲಿ ಹಳೆಯದೆಂದು ಹೇಳಲಾಗುವ ಯಾವ ಚಿತ್ರಗಳು ಇಲ್ಲವೆಂದೂ ತಿಳಿಸುತ್ತಾರೆ.

ಇದೇ ಸ್ಥಿತಿ ೧೯೩೦ರಲ್ಲಿ ಇತ್ತು. ಇತ್ತೀಚೆಗೆ ನಮ್ಮ ಚಿತ್ರಕಲೆಯ ಬಗ್ಗೆ ನಮಗೇನೂ ಗೊತ್ತಿಲ್ಲವೆಂದರೂ ಸಲ್ಲುವುದು, ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ಚಿತ್ರಗಾರ ತಿಪ್ಪಣ್ಣನವರ ಹೆಸರು, ಜಗನ್ಮೋಹನ ಚಿತ್ರಕಲಾ ಶಾಲೆಯಲ್ಲಿರುವ ಕೆಲವೊಂದು ಚಿತ್ರಗಳೂ, ಹಂಪೆಯ ವಿರೂಪಾಕ್ಷನ ರಂಗಮಂಟಪದ ಮೇಲ್ಗಡೆ ಬರೆಯಲ್ಪಟ್ಟ ಎರಡು ವಿಶಾಲ ಚಿತ್ರಗಳೂ ಮತ್ತು ವಿಜಾಪುರದ ವಸ್ತು ಸಂಗ್ರಾಹಾಲಯದಲ್ಲಿರುವ ಕೆಲವು ಚಿತ್ರಗಳನ್ನು ಬಿಟ್ಟರೇ ಬೇರೆ ಇಲ್ಲವೇ ಇಲ್ಲವೆಂದರೂ ತಪ್ಪಾಗಲಾರದು' ಎಂಬ ಅಭಿಪ್ರಾಯಕ್ಕೆ 'ರಸಯೋಗಿ' ಅವರು ಬರಲು ಕಾರಣ, ಪಂಡಿತರಿಗೆ ಕಲೆಯ ಬಗ್ಗೆ ಇದ್ದ ಅಗೌರವ ಹಾಗೂ ವ್ಯಾಪಕವಗಿ ಸರ್ವೇಕ್ಷಣೆಯಾಗದೇ ಇದ್ದುದ್ದೆಂದು ಹೇಳಬಹುದು. ಆದರೆ ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳು (Mysore Archaeological Report) ಭಿತ್ತಿ ಚಿತ್ರಗಳ ಬಗ್ಗೆಯೂ ವರದಿ ಮಾಡಿದ್ದು, ಇವುಗಳನ್ನು ಆಧರಿಸಿ ಸಿ. ಹಯವದನರಾಯರು ಹಳೆಯ ಮೈಸೂರು ಪ್ರಾಂತದಲ್ಲಿಯ ಹದಿನೈದು ಸ್ಥಳಗಳಲ್ಲಿ ಭಿತ್ತಿಚಿತ್ರಗಳನ್ನು ೧೯೩೦ರಲ್ಲಿಯೇ ಗುರುತಿಸಿದ್ದರು. ಇದಾಗಿ ೮೮ ವರ್ಷಗಳು ಕಳೆದಿದ್ದರೂ ಇಂದಿಗೂ ನಮಗೆ ಕರ್ನಾಟಕದಲ್ಲಿ ಭಿತ್ತಿ ಚಿತ್ರಗಳು ಇರುವ ಬಗ್ಗೆ ಸಮಗ್ರ ನೋಟವಾಗಲಿ 'ಚಿತ್ರಶಾಲೆಗಳ' ಪೂರ್ಣಪಟ್ಟಿಯಾಗಲಿ ದೊರೆಯುತ್ತಿಲ್ಲ. ಇದರ ನಂತರ ದೊರೆತ ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕನ್ನಡ ವಿಷಯ ವಿಶ್ವಕೋಶದಲ್ಲಿ ಹಾಗೂ ಶಿವರಾಮಕಾರಂತರ 'ಚಿತ್ರಶಾಲೆ'ಯಲ್ಲಿ ಪಟ್ಟಿಯನ್ನು ಪಡೆಯಬಹುದು. ಇವರಲ್ಲದೆ ಕಲಾವಿದರು, ಸಂಶೋಧಕರು ಇನ್ನೂ ಕೆಲವಾರು ಸ್ಥಳಗಳನ್ನು ಗುರುತಿಸಿದ್ದಾರೆ. ಇವುಗಳೊಂದಿಗೆ ನನ್ನ ಅಧ್ಯಯನದ ಅವಧಿಯಲ್ಲಿ ಪರಿವೀಕ್ಷಣೆ ನಡೆಸಿದಾಗ ಕಂಡುಬಂದ ಹಾಗೂ ಹಿಂದೆ ಭಿತ್ತಿ ಚಿತ್ರವಿದ್ದು, ಈಗ ನಾಶವಾಗಿದೆಯೆಂದು ಖಚಿತವಾಗಿ ತಿಳಿದುಬಂದ ಸ್ಥಳಗಳನ್ನು ಇಲ್ಲಿ ಸೇರಿಸಲಾಗಿದೆ.

ಹಯವದನರಾಯರು ಹೇಳುವ ಯಡೆಯೂರಿನ ಚಿತ್ರಗಳಲ್ಲಿ ದ್ವಾರವೊಂದರಲ್ಲಿ ಕೆಲವು ಚಿತ್ರಗಳು ಮಸುಕಾಗಿ ಉಳಿದಿದೆ ಎಂಬುದನ್ನು ಹೇಳಿರುತ್ತಾರೆ.[೫] ಆದರೆ ಪ್ರಸ್ತುತ ದಿನಮಾನಗಳಲ್ಲಿ ಯಡೆಯೂರಿನಲ್ಲಿ ಚಿತ್ರಗಳೆ ಕಂಡುಬರುವುದಿಲ್ಲ. ದೇವಾಲಯದ ಅಭಿವೃದ್ಧಿಯ ಹಿನ್ನಲೆಯಲ್ಲಿ ಚಿತಗಳನ್ನು ಸಂಪೂರ್ಣವಾಗಿ ನಾಶಮಾಡಲಾಗಿದೆ. ಇತಿಹಾಸವನ್ನು ಅಳಿಸಿಹಾಕಿರುವುದು ನೋವಿನ ಸಂಗತಿ. ಇದಕ್ಕಿಂತ ಮುಂಚಿತವಾಗಿದ್ದ ಹಳೆಯ ಚಿತ್ರಗಳು ಪ್ರಕೃತಿ ವಿಕೋಪಕ್ಕೆ ಬಲಿಯಾಗಿವೆ ಎಂಬುದು ತಜ್ಞರ ಅಭಿಮತವಾದರೂ, ತೀರಾ ಇತ್ತೀಚೆಗೆ ೧೮ನೇ ಶತಮಾನದಲ್ಲಾದ ಚಿತ್ರಗಳೂ ಕೂಡ ಇಂದಿಲ್ಲ. ಇದೇ ರೀತಿ ಗುಬ್ಬಿಯ ವೇಲಪ್ಪ ದೇವಾಲಯದಲ್ಲಿ ಚಿತ್ರಗಳಿವೆಯೆಂದೂ ಹಯವದನರಾಯರು ಹೇಳಿದ್ದರೂ, ಅಲ್ಲಿ ಯಾವ ಸಾಲಿನಲ್ಲಿ ಚಿತ್ರಗಳಿದ್ದವು ಎಂಬ ಗುರುತು ಕಂಡು ಬರುವುದಿಲ್ಲ. ಅಲ್ಲಿದ್ದ ಚಿತ್ರಗಳೆಂದು ಕೊಡುವ ವಿವರಗಳು ಸಮೀಪದ ತಿಪುಟೂರು

ಬಳಿಯ ಕೆರೆಗೋಡಿ, ರಂಗಾಪುರದಲ್ಲಿಯ ಚಿತ್ರಗಳ ವಿವರಗಳಿಗೆ ಸರಿ ಹೊಂದದಿರುವುದರಿಂದ ಕಣ್ತಪ್ಪಿನಿಂದಾಗಿ ಅದಲು ಬದಲಾಗಿರಬಹುದೆಂದು ಸಂಶೋಧಕ ಅ.ಲ.ನರಸಿಂಹನ್ ಅವರ ಅಭಿಮತ ಇರಲೂಬಹುದು.

ಕಾರಣಾಂತರದಿಂದ ಅವರ ಪಟ್ಟಿಯಲ್ಲಿ ಸಿಬಿ ನರಸಿಂಹಸ್ವಾಮಿ ದೇವಾಲಯದ ಚಿತ್ರಗಳ ಬಗ್ಗೆ ಬಿಟ್ಟುಹೋಗಿದೆ. ಆದ್ರೆ'ಪ್ರೇಕ್ಷಣೀಯ ಸ್ಥಳ'ಗಳಲ್ಲಿ ಸಿಬಿ ಚಿತ್ರಗಳ ಕುರಿತು ಮಾಹಿತಿಯನ್ನು ಹಯವದನರಾಯರು ನೀಡಿರುತ್ತಾರೆ. ಈ ಅಧ್ಯಯನದಲ್ಲಿ ಸಿಬಿಯ ಚಿತ್ರಗಳ ಕುರಿತು ಸಮಗ್ರವಾಗಿ ತಿಳಿಸಲಾಗಿರುತ್ತದೆ. ಅಂತೆಯೇ ಚಾಮರಾಜನಗರದ ಜನ್ಮಮಂಟಪದ ಚಿತ್ರಗಳ ಕಾಲದ್ದೇ ಆದ ಅಲ್ಲಿಯ ಚಾಮರಾಜೇಶ್ವರ ದೇವಾಲಯದ ಚಿತ್ರಗಳ ಬಗ್ಗೆ ಹಯವದನರಾಯರು ಹೇಳುವುದಿಲ್ಲ. ಶ್ರವಣಬೆಳಗೋಳದ ಚಿತ್ರಗಳ ಬಗ್ಗೆ ೧೯೨೩ರಲ್ಲಿ ನರಸಿಂಹಾಚಾರ್ಯರು ೧೯೩೦ರಲ್ಲಿ ಹಯವದನರಾಯರು, ೧೯೪೦ರಲ್ಲಿ ಎಂ.ಎಚ್.ಕೃಷ್ಣ[೬] ಮತ್ತು ಅ.ಲ.ನರಸಿಂಹನ್ ಮುಂತಾದವರೂ ಹೇಳಿರುತ್ತಾರೆ.

೧೯೭೦ರ ಸುಮಾರಿಗೆ ಕಾರಂತರು ಶ್ರವಣಬೆಳಗೊಳಕ್ಕೆ ಬಂದಿದ್ದು, ಅಲ್ಲಿರುವ ಶ್ರವಣಬೆಳಗೊಳದ ಮಹಾ ಗೊಮ್ಮಟಮೂರ್ತಿಯಿಂದಾಗಿ ಭಾರತಕ್ಕೆ ತಿಳಿದ ವಿಖ್ಯಾತ ಕ್ಷೇತ್ರವಾಗಿದೆಯಾದರೂ ಅಲ್ಲಿಯೇ ಹಳೆಕಾಲದ ಭಿತ್ತಿಚಿತ್ರಗಳಿವೆಯೆಂಬ ವಿಚಾರ ಪ್ರಸಿದ್ಧಿ ಪಡೆದಿರುವುದಿಲ್ಲ. ಅವುಗಳನ್ನು ಕುರಿತು ತಿಳಿದವರೂ ಕಡಿಮೆ, ಬರೆದವರಂತೂ ಇನ್ನೂ ಕಡಿಮೆ ಎಂದು ಹೇಳಿರುತ್ತಾರೆ ಶಿವರಾಮಕಾರಂತರು.

ಇತಿಹಾಸಕಾರರ ಗಮನ ಸೆಳೆದ ದಕ್ಷಿಣ ಕರ್ನಾಟಕದಲ್ಲಿರುವ 'ಚಿತ್ರಶಾಲೆ'ಗಳೆಂದರೆ ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆ ಮತ್ತು ಸಿಬಿ ನರಸಿಂಹಸ್ವಾಮಿ ದೇವಾಲಯ. ದರಿಯಾ ದೌಲತ್ ಅರಮನೆಯಲ್ಲಿನ ಚಿತ್ರಗಳ ಬಗ್ಗೆ ಮೊದಲಿಗೆ ಹೇಳಿದವನು ಫ್ರಾನ್ಸಿಸ್ ಬುಕಾನನ್. ಈತ ತೋಟದ ಮಧ್ಯೆಯಿರುವ ಅರಮನೆಯಲ್ಲಿಯ ಚಿತ್ರಗಳ ಬಗ್ಗೆ, ಚಿತ್ರಿತ ವಿಷಯಗಳ ಬಗ್ಗೆ ತಿಳಿಸುತ್ತಾನೆ. ಆತ ೧೮೦೦ರ ವೇಳೆಗೆ ಆ ಸ್ಥಳಕ್ಕೆ ಬೇಟಿನೀಡಿದ್ದಾಗ ಚಿತ್ರ ಬರೆಯಿಸಿ ಕೆಲವೇ ವರ್ಷಗಳಾಗಿತ್ತಷ್ಟೇ. ಸ್ಥಳಿಯ ಕಲಾವಿದನೊಬ್ಬನಿಂದ ಅಲ್ಲಿರುವಂತೆ ಸ್ತ್ರೀ, ಪುರುಷ ಹಾಗೂ ಮಗುವೊಂದರ ಚಿತ್ರ ಬರೆಯಿಸಿ ತನ್ನ ಪುಸ್ತಕದಲ್ಲಿ ಮುದ್ರಿಸಿರುತ್ತಾನೆ. ಮುಂದೆ ಡಾಲ್‌ಹೌಸಿ ಇಲ್ಲಿಯೇ ತಂಗಿದ್ದು(೧೮೫೫), ಇಲ್ಲಿಯ ಚಿತ್ರಗಳನ್ನು ರಕ್ಷಿಸುವಂತೆ ತಿಳಿಸಿರುತ್ತಾರೆ. ಪಾರಸನ್ ಅವರು ೧೯೩೧ರಲ್ಲಿ ಶ್ರೀರಂಗಪಟ್ಟಣದ ಕೈಪಿಡಿಯನ್ನು ಬರೆಯುತ್ತಾ ಇಲ್ಲಿಯ ಚಿತ್ರಗಳ ವಸ್ತುವಾದ ಕಾಂಜೀವರಂ ಯುದ್ದದ ಬಗ್ಗೆ ತುಲನಾತ್ಮಕ ಅಧ್ಯಯನ ಮಾಡಿರುವರು. ಹಾಗೆಯೇ ಬೇರೆ ಬೇರೆ ಕಾಲದಲ್ಲಿ ದರಿಯಾ ದೌಲತ್‌ನಲ್ಲಿ ನೆಲೆಸಿದವರ ಬಗ್ಗೆ ಅವರು ಚಿತ್ರಗಳನ್ನು ರಕ್ಷಿಸಿದ ಬಗ್ಗೆ ಹಾಗೂ ಪೂರ್ವಭಾಗದ ಗೋಡೆಯಲ್ಲಿರುವ ಭಾವಚಿತ್ರಗಳ ಕುರಿತು ಪುರಾತತ್ವ ಶೋಧನೆಯ ವರದಿ ಚಿತ್ರಸಹಿತ ೧೯೩೫ರಲ್ಲಿ[೬] ಬಂದಿರುತ್ತದೆ. ಮುಖ್ಯವಾಗಿ ಇಲ್ಲಿರುವ ಚಿತ್ರಗಳ ಪ್ರಭಾವ ಜನ ಮನ್ನಣೆಯನ್ನು ಗಳಿಸಿರುತ್ತದೆ.

ಅಷ್ಟೇ ಅಲ್ಲದೇ ದಕ್ಷಿಣ ಕರ್ನಾಟಕದುದ್ದಕ್ಕೂ ಕಾಣುವ ಭಿತ್ತಿ ಚಿತ್ರಕಲೆಯ ನೆಲೆಗಳಲ್ಲಿ ಕಾಲ ಕಾಲಕ್ಕೂ ಬದಲಾದ ಸಂವೇದನಾತೀತ ಸಂದರ್ಭಗಳಲ್ಲಿ ಚಿತ್ರಗಳ ಮೇಲೆ ಅತಿಯಾದ ವ್ಯಾಮೋಹವೂ ಕೂಡ ಪ್ರಭಾವವಾಗಿ ಕಂಡು ಬಂದಿರುತ್ತದೆ. ಅವುಗಳಲ್ಲಿ ಮುಖ್ಯವಾಗಿ ಸಿಬಿ ನರಸಿಂಹ ದೇವಾಲಯ, ಮೈಸೂರಿನ ಅರಮನೆ, ಬೆಂಗಳೂರಿನ ಟಿಪ್ಪು ಅರಮನೆ, ಶ್ವೇತಾವರಹ ದೇವಾಲಯ, ಕೃಷ್ಣ ದೇವಾಲಯ, ಮೈಸೂರು, ಹಿರಿಯೂರಿನ ತೇರುಮಲ್ಲೇಶ್ವರ, ಶಿರಾದ ರೇವಣಸಿದ್ದೇಶ್ವರ, ನಾಲ್ಕುನಾಡು ಅರಮನೆ, ಕೊಡಗು. ಜೈನ ಮಠಗಳು ಮತ್ತು ಬಸಿದಿಗಳು, ಮಸೀದಿಗಳು ಮತ್ತು ಕ್ರೈಸ್ತ ದೇವಾಲಯಗಳಲ್ಲಿ ಕಂಡು ಬರುವ ಭಿತ್ತಿ ಚಿತ್ರಗಳ ಮಹತ್ವ ಮತ್ತು ಅವುಗಳ ಮೇಲಾದ ಪ್ರಭಾವಗಳನ್ನು ಅರಿಯಬಹುದಾಗಿದೆ.

ದಕ್ಷಿಣ ಕರ್ನಾಟಕ ಭಿತ್ತಿ ಚಿತ್ರಗಳಲ್ಲಿ ಹಲವು ಬಗೆಯ ಶೈಲಿಗಳನ್ನು ಕಾಣಬಹುದು ಅಲ್ಲದೇ ಒಂದೊಂದು ಭಿತ್ತಿಚಿತ್ರ ನೆಲೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ಚಿತ್ರಶೈಲಿಗಳ ಸಮಿಶ್ರ ಸ್ವರೂಪ ಕಂಡುಬರುತ್ತದೆ. ಈ ಭಾಗದಲ್ಲಿ ರಚನೆಯಾದ ಚಿತ್ರಗಳಲ್ಲಿ ಮೊಗಲ್, ಇಂಡೋ–ಪರ್ಷಿಯನ್, ಮರಾಠ, ಮೈಸೂರು, ವಿಜಯನಗರ, ತಂಜಾವೂರು, ನಾಯಕ ಶೈಲಿ, ಜೈಪುರದ ಸ್ಥಳಿಯ ಜಾನಪದ ಶೈಲಿಗಳು ಹೀಗೆ ವಿವಿಧ ಚಿತ್ರಶೈಲಿಗಳನ್ನು ಈ ಭಾಗದಲ್ಲಿ ಕಾಣಬಹುದು. ಮೈಸೂರು ಭಾಗದಲ್ಲಿ ಕಂಡುಬರುವ ಚಿತ್ರಗಳಲ್ಲಿ ಸಮಿಶ್ರಣದ ಪ್ರಭಾವಗಳಿರುವುದು ಕಂಡುಬರುತ್ತದೆ. ಅದೇ ರೀತಿಯಲ್ಲಿ ಟಿಪ್ಪುವಿನ ಕಾಲದಲ್ಲಿ ರಚನೆಯಾದ ಬೆಂಗಳೂರಿನ ಟಿಪ್ಪು ಅರಮನೆಯ ಚಿತ್ರಗಳಲ್ಲಿ ಮೊಗಲ್ ಮತ್ತು ಮರಾಠ ಶೈಲಿಗಳ ಪ್ರಭಾವ ಗೋಚರಿಸುತ್ತಿವೆ. ಮೈಸೂರಿನಲ್ಲಿ ಕಂಡುಬರುವ ಭಿತ್ತಿಚಿತ್ರಗಳು ಮೈಸೂರು ಶೈಲಿಯಲ್ಲಿದ್ದರೂ ಅದರಲ್ಲಿ ಕೆಲವು ಜೈಪುರ ಶೈಲಿಯ ಪ್ರಭಾವವಿರುವುದನ್ನು ಸ್ವಲ್ಪ ಮಟ್ಟಿಗೆ ಗುರುತಿಸಬಹುದು.

ಭಿತ್ತಿಚಿತ್ರಗಳ ಸಿದ್ಧತೆ :

ಭಾರತೀಯ ಭಿತ್ತಿ ಚಿತ್ರಗಳ ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದು ಪ್ರಪಂಚದಲ್ಲಿ ವಿಭಿನ್ನ ಸ್ಥಾನವನ್ನು ಪಡೆದುಕೊಂಡಿದೆ. ಭಿತ್ತಿ ಪದ್ಧತಿಯ ಬಹಳ ಪ್ರಾಚೀನವಾದದ್ದು ಎಂಬುದನ್ನು ಹಲವಾರು ಗ್ರಂಥಗಳಿಂದ ಕಂಡುಕೊಳ್ಳಬಹುದು. 'ಬ್ರಹ್ಮತ್ವ ಸಂಹಿತೆ' ಕ್ರಿ.ಶ. ೬ನೇ ಶತಮಾನದ ಗ್ರಂಥ 'ವಿಷ್ಣುಧರ್ಮೋ ತ್ತರ ಪುರಾಣ' ಕ್ರಿ.ಶ. ೫ನೇ ಶತಮಾನದ ಗ್ರಂಥ 'ಅಭಿಲಾಷ ತರ್ಕ ಚಿಂತಾಮಣಿ' ಕ್ರಿ.ಶ. ೧೧ನೇ ಶತಮಾನದ ಗ್ರಂಥ ಶಿಲ್ಪರತ್ನ, ಕ್ರಿ.ಶ.೧೬ನೇ ಶತಮಾನದ ಮೇಲೆ ಹೇಳಿದ ಈ ಎಲ್ಲಾ ಗ್ರಂಥಗಳಲ್ಲಿ ಭಿತ್ತಿ ಪದ್ಧತಿ ಬಗ್ಗೆ ಹಂತಗಳನ್ನು ವಿವರಿಸಿದ್ದಾರೆ.

ಭಿತ್ತಿಯ ತಯಾರಿಕೆಯಲ್ಲಿ ಎರಡು ವಿಧಾನವಿದೆ (೧) ಹಸಿಗಾರೆಭಿತ್ತಿ (೨) ಒಣಗಿದ ಗಾರೆಭಿತ್ತಿ. ಹಸಿಗಾರೆ ಭಿತ್ತಿಯ ಪಾಶ್ಚಿಮಾತ್ಯದಲ್ಲಿ ಹೆಚ್ಚಾಗಿ ಕಂಡುಬಂದಿದೆ. ಅಜಂತೆಯ ಭಿತ್ತಿಚಿತ್ರಗಳು ಒಣಗಿದ ಗಾರೆಯ ಭಿತ್ತಿಯ ಮೇಲೆ ರಚನೆಗೊಂಡಿವೆ ಇದೇ ಮಾದರಿಯು ಭಾರತಾದ್ಯಂತ

ಇರುವ ಭಿತ್ತಿ ಚಿತ್ರಗಳಲ್ಲಿ ಕಾಣುತ್ತೇವೆ. ಹಸಿಭಿತ್ತಿಯು ಗೋಡೆ ಹಸಿ ಇದಾಗಲೇ ಅದರ ಮೇಲೆ ಚಿತ್ರ ರಚನೆ ಮಾಡುವುದು ಈ ಮೊದಲು ಕರ್ನಾಟಕ ಕರಾವಳಿ ಕಾವಿ ಚಿತ್ರಕಲೆಯಲ್ಲಿ ಚಾಲ್ತಿಯಲ್ಲಿತ್ತು. ಒಣಗಿದ ಗಾರೆ ವಿಧಾನವು ಗಾರೆಯು ಒಣಗಿದ ನಂತರ ಪೂರ್ಣವಾಗಿ ಕೀಸೆಟ್ ಮಾಡಿಕೊಂಡು ನಂತರ ಬಣ್ಣದ ಕಾರ್ಯ ಮುಂದುವರೆಯುತ್ತಿತ್ತು. ಸಿಬಿ ಮತ್ತು ಕೆರೆಗೋಡಿ ರಂಗಾಪುರದ ಭಿತ್ತಿ ಚಿತ್ರಗಳು ಒಣಗಿದ ಗಾರೆ ಭಿತ್ತಿಯ ಮೇಲೆ ರಚನೆಗೊಂಡಿರುವುದು ತಜ್ಞರು ಸ್ಪಷ್ಟಪಡಿಸಿದ್ದಾರೆ.

ಗಾರೆ ಭಿತ್ತಿ ತಯಾರಿಕೆ ವಿಧಾನ :

"ಗೋಡೆಯನ್ನು ಮೊದಲಿಗೆ ಸಿದ್ಧಪಡಿಸಿಕೊಳ್ಳಬೇಕು. ಅದು ನುಣುಪಾಗಿಯೂ ಸಮತಲವಾಗಿಯೂ ಇದ್ದ ಬಿರುಕುಗಳು ಇರಬಾರದು. ಗೋಡೆ ಒಣಗಿದ ಮೇಲೆ ಬಿಳಿಯ ಮಣ್ಣು ಮತ್ತು ವಜ್ರ (ಜಿಲೊಟೆಸ್) ವನ್ನು ಬೆರೆಸಿ ಒಂದಾದ ಮೇಲೆ ಒಂದು ಒಣಗಿದಂತೆ ಮೂರು ಸಲ ಹಾಕಬೇಕು. ನಂತರ ಶಂಖ ಚೂರ್ಣ ಕಲ್ಲು ಸಕ್ಕರೆಯ ನಯವಾದ ಪುಡಿಯನ್ನು ಮರ ವಜ್ರದೊಂದಿಗೆ ಬೆರೆಸಿ ಒಂದರ ನಂತರ ಇನ್ನೊಂದನ್ನು ಹಾಕಬೇಕು. ಆಮೇಲೆ ನೀಲಗಿರಿಯಲ್ಲಿ ಪುಡಿಯನ್ನು ಮರ ವಜ್ರದೊಂದಿಗೆ ಬೆರೆಸಿ ಒಂದರ ನಂತರ ಇನ್ನೊಂದನ್ನು ಹಾಕಬೇಕು. ಆಮೇಲೆ ನೀಲಗಿರಿಯಲ್ಲಿ ಸಿಗುವ ನಗ ಎಂಬ ಬಿಳಿಯ ಮಣ್ಣನ್ನು ನಯವಾಗಿ ಪುಡಿ ಮಾಡಿ ಮರ ವಜ್ರದೊಂದಿಗೆ ಸೇರಿಸಿ ಕೈಯಿಂದ ಭಿತ್ತಿಗೆ ಬಳಿಯಬೇಕು ಎಂದು ಅಭಿಲಕ್ಷತಾರ್ಥ ಚಿಂತಾಮಣಿ ಗ್ರಂಥದಲ್ಲಿ ತಿಳಿಸುತ್ತದೆ. ಇದನ್ನೇ ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಇನ್ನೂ ವಿಸ್ತಾರವಾಗಿ ತಿಳಿಸುತ್ತದೆ. ಮೂರು ಬಗೆಯ ಇಟ್ಟಿಗೆಯ ಪುಡಿಯನ್ನು ಸಮ ಪ್ರಮಾಣದಲ್ಲಿ ಸೇರಿಸಿ ಮೂರರಷ್ಟು ಜೇಡಿಮಣ್ಣಿನೊಂದಿಗೆ ಗುಗ್ಗಲು, ಜೇನು ಮೇಣ, ಅತಿಮಧುರ ಮೂರು ಬೆಲ್ಲ ಕುಸುಂಭಗಳನ್ನು ಎಣ್ಣೆಯಲ್ಲಿ ಸೇರಿಸಿ ಮಿಶ್ರಮಾಡಬೇಕು. ಅದಕ್ಕೆ ಮುಕ್ಕಾಲು ಸುಟ್ಟಿರುವ ಸುಣ್ಣದೊಂದಿಗೆ ಬಿಲ್ವಪತ್ರೆ ಮೇಣ, ಅರೆದ ಉದ್ದಿನ ಹಿಟ್ಟನ್ನು ಸೇರಿಸಿ ಎಲ್ಲವನ್ನು ತಿಂಗಳ ಕಾಲ ಜಿಡ್ಡು ಮಿಶ್ರಿತ ನೀರಿನಿಂದ ಲೇಪನ ಮಾಡಿ ಚಿತ್ರ ರಚಿಸುವ ಗೋಡೆಗೆ ಸಮವಾಗಿ ಹಚ್ಚಬೇಕು. ಒಣಗಿದಂತೆಲ್ಲಾ ಪುನಃ ಪುನಃ ಲೇಪಿಸುತ್ತ ಹಾಗೂ ಎಣ್ಣೆಯಲ್ಲಿ ಮಿಶ್ರ ಮಾಡಿದ ಮಣ್ಣಿನ ಲೇಪನ ಮಾಡುತ್ತಿರಬೇಕು. ಆಗಾಗ್ಗೆ ಹಾಲನ್ನು ಎರಚಿ ತೊಳೆಯುತ್ತಿರಬೇಕು. ಈ ಬಗೆಯ ಲೇಪನದಿಂದ ಭಿತ್ತಿ ನೂರಾರು ವರ್ಷ ಉಳಿಯುತ್ತದೆ ಎಂದು ಗ್ರಂಥದಲ್ಲಿ ಹೇಳಿದೆ" ಪ್ರಾಯಶಃ ಇಂದಿಗೂ ಉಳಿದು ಬಂದಿರುವ ಕೆಲವು ಹಳೆಯ ಚಿತ್ರಗಳ ಬಿತ್ತಿಯನ್ನು ಎಷ್ಟೇ ಎಚ್ಚರಿಕೆಯಿಂದ ಮಾಡಿದ್ದಿರಬೇಕು.

ಸಿಬಿ ಮತ್ತು ಕೆರೆಗೋಡಿ ರಂಗಾಪುರದ ಭಿತ್ತಿ ರಚನೆ :

ದಕ್ಷಿಣ ಕರ್ನಾಟಕದ ಭಾಗದಲ್ಲಿ ಕಂಡುಬರುವ ಭಿತ್ತಿ ಚಿತ್ರಗಳನ್ನು ಪರಿಶೀಲಿಸಿದಾಗ ಅದು ಗಾರೆ ಭಿತ್ತಿಯಿಂದ ಹೆಚ್ಚು ರಚನೆಯಾಗಿದ್ದು ಕಂಡುಬರುತ್ತದೆ. ಅಲ್ಲದೆ ಡಾ.ಅ.ಲ.ನರಸಿಂಹನ್ ಮತ್ತು ಕೆ.ಎಂ.ವೆಂಕಟೇಶ್‌ಮೂರ್ತಿ ಇವರು ಸಹ ತಮ್ಮ ಲೇಖನದಲ್ಲಿ ಈ ರೀತಿಯ ಅಭಿಪ್ರಾಯ

ನೀಡಿದ್ದಾರೆ. ಈ ಗಾರೆ ಭಿತ್ತಿ ರಚನೆಯಲ್ಲಿ ಸುಣ್ಣವು ಪ್ರಮುಖ ವಸ್ತು ಅದರ ಜೊತೆಗೆ ಮರಳು, ಕಲ್ಲಿನ ಪುಡಿ, ವಜ್ರಸರಿ ಇವುಗಳನ್ನು ಉಪಯೋಗಿಸ ಲಾಗಿರುತ್ತದೆ. ಇಲ್ಲದ ಲೋಳೆಸರ ಎಂಬ ಸಸ್ಯದ ರಸ ಬೆಲ್ಲ ಬೆಲ್ಲದಕಾಯಿ ಅಂಟು ಮತ್ತು ಹಾಲು ಹೀಗೆ ವಿವಿಧ ರೀತಿಯ ವಸ್ತುಗಳನ್ನು ಬಳಸಿರಬಹುದು.

ಕುಂಚಗಳ ತಯಾರಿಕೆ :

ಕುಂಚ ತಯಾರಿಕೆಯು ಒಂದು ವಿಶಿಷ್ಟವಾದ ಕಲೆಯೇ ಆಗಿತ್ತು. ಇಂದು ಆಧುನಿಕ ಬಣ್ಣ ಹಾಗೂ ಕುಂಚಗಳನ್ನು ಬಳಸುತ್ತೇವೆ. ಆದರೆ ಭಿತ್ತಿ ಚಿತ್ರ ರಚನೆಗೆ ಬೇಕಾಗುವ ಅಳತೆಯ ಕುಂಚಗಳನ್ನು ಸ್ವತಃ ಕಲಾವಿದನೇ ತಯಾರಿಸಿಕೊಳ್ಳುತ್ತಿದ್ದ. ಮೊದಲು ತೆಂಗಿನ ಮೊಟ್ಟೆಯ ತುದಿಯನ್ನು ಚೆನ್ನಾಗಿ ಕುಟ್ಟಿ ಅದರಿದ ಬೇಕಾದ ಅಳತೆಯ ಕುಂಚವನ್ನು ಮಾಡಿಕೊಳ್ಳುತ್ತಿದ್ದರು. ಮರದ ಬೇರು, ಒಂದು ಬಗೆಯ ಕುಂಚದ ಅಜಂತೆಯ ಚಿತ್ರ ರಚನೆಯ ಪ್ರಾಣಿಯ ಕೂದಲಿನಿಂದ ಮಾಡಿದ ಕುಂಚವನ್ನು ಬಳಸಿರುವುದು ಅಲ್ಲಿನ ಸೂಕ್ಷ್ಮ ಆಕರ್ಷಣೆ ರೇಖೆಗಳಿಂದ ತಿಳಿದುಬರುತ್ತದೆ. ಇಲ್ಲಿಯೂ ಸಹಿತ ಪ್ರಾಣಿಯ ಕೂದಲಿಯ ಕುಂಚವನ್ನು ಬಳಸಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಭಿತ್ತಿ ಚಿತ್ರಗಳಲ್ಲಿ ಬಣ್ಣಗಳು :

ಭಿತ್ತಿಚಿತ್ರ ವಿಧಾನವು ಗೋಡೆಯ ಮೇಲೆ ಚಿತ್ರಣಗೊಳ್ಳುವ ಕಲಾಕೃತಿಗಳಿಗೆ ಸಂಬಂಧಿಸಿದುದಾಗಿದೆ. ಗೋಎಡಗಳ ಮೇಲ್ಮೈಯನ್ನು ಸಮ ಮಾಡಿಕೊಂಡು ಮರಳು, ಭತ್ತದ ಹುಲ್ಲು ಅಥವಾ ಪಾಚಿ, ಕೆಂಪು ಅಥವಾ ಕಪ್ಪೆಚಿಪ್ಪು ಮೊದಲಾದವುಗಳನ್ನು ದೀರ್ಘಕಾಲ ಬೆಲ್ಲದ ನೀರಿನಲ್ಲಿ ನೆನೆಸಿಟ್ಟು ನಂತರ ಅರೆದು ನುಣ್ಣಗೆ ಮಾಡಿಕೊಂಡು, ಗೋಡೆಗೆ ಲೇಪಿಸಿ ಮೇಲೆ ಸುಣ್ಣವನ್ನು ಬಳಿದು, ಚಿತ್ರದ ಆಧಾರ ತಲವನ್ನು ಸಿದ್ಧಪಡಿಸಿಕೊಳ್ಳುವುದು. ನಂತರ ಈ ಗಾರೆ ಹಾಗೂ ಸುಣ್ಣದ ಲೇಪನ ಆರುವ ಮೊದಲೇ ಚಿತ್ರಣಕಾರ್ಯ ವನ್ನು ಪೂರ್ತಿಗೊಳಿಸುವುದು ಈ ವಿಧಾನದ ವೈಶಿಷ್ಟ್ಯವಾಗಿದೆ. ಸುಣ್ಣ ಹಾಗೂ ಗಾರೆಗಳು ಆರುವ ಮೊದಲೇ ಚಿತ್ರಣ ಕಾರ್ಯವು ಮುಗಿಯಲೇ ಬೇಕಾಗಿರುವುದರಿಂದ ಈ ವಿಧಾನ ಬಹು ಕಷ್ಟಸಾಧ್ಯವಾಗಿದೆ. ಒಂದು ಬಾರಿ ಬಣ್ಣವನ್ನು ಬಳಿದ ನಂತರ ತಿದ್ದುಪಡಿಗಳನ್ನು ಮಾಡಿಕೊಳ್ಳಲು ಸಾಧ್ಯವಾಗಲಾರದು. ಅಲ್ಲದೆ ಬಣ್ಣವು ಒಣಗಿದ ನಂತರ ಬಣ್ಣದ ರೂಪು ಬದಲಾವಣೆಗಳ್ಳುವುದರಿಂದ ಸರಿಯಾದ ಬಣ್ಣವನ್ನು ತಯಾರಿಸಿಕೊಳ್ಳುವಲ್ಲಿ ಕಲಾವಿದನಿಗೆ ಅಸಾಮಾನ್ಯವಾದ ಜಾಣ್ಮೆ, ಕಲ್ಪನೆಗಳಿರಬೇಕಾದುದು ಅಗತ್ಯವಾಗಿದೆ. ಗಾರೆ ಹಸಿಯಾಗಿರುವಾಗ ಅದರ ಮೇಲೆ ನೇರವಾಗಿ ಚಿತ್ರದ ಬಾಹ್ಯ ರೇಖೆಗಳನ್ನು ಎಳೆಯುವುದು ಸಾಧ್ಯವಿಲ್ಲವಾದ್ದರಿಂದ ಗೋಡೆಯನ್ನಾವರಿಸುವಷ್ಟು ಹರವಾದ ಕಾಗದದ ಮೇಲೆ ಚಿತ್ರಿಸಲಿರುವ ವಸ್ತುವಿನ ಬಾಹ್ಯ ರೇಖೆಗಳನ್ನು ಚಿತ್ರಿಸಿ. ರೇಖೆಗಳ ಮೇಲೆ ಗುಂಡ್‌ಪಿನ್ ಇಲ್ಲವೆ ಮೊನಚಾದ ಮೊಳೆಯಿಂದ ಸಣ್ಣ ಸಣ್ಣ ರಂಧ್ರಗಳನ್ನು ಮಾಡಿಕೊಂಡು ಕಾಗದವನ್ನು ಗೋಡೆಗೆ ಅಂಟಿಸಿ ಬಾಹ್ಯರೇಖೆಗಳನ್ನು ಹಸಿ

ಸುಣ್ಣದ ಲೇಪನದ ಮೇಲೆ ಮೂಡಿಸಿಕೊಳ್ಳುವ ಕಾರ್ಟೂನ್‌ಗಳನ್ನು ತಯಾರಿಸಿಕೊಂಡು ಚಿತ್ರಣಕಾರ್ಯವನ್ನು ಮುಂದುವರಿಸಬೇಕಾಗುತ್ತದೆ. ವಿಸ್ತಾರವಾದ ಚಿತ್ರರಚನೆಗೆ ಹೆಚ್ಚು ಕಾಲಾವಕಾಶಗಳು ಬೇಕಾಗುವುದರಿಂದ ಸಾಧ್ಯವಾಗುವ ಮಟ್ಟಿನ ಗೋಡೆಯ ಭಾಗದಲ್ಲಿ ಮಾತ್ರ ಚಿತ್ರಿಸುತ್ತ ಸಂಪೂರ್ಣ ಭಿತ್ತಿಯನ್ನು ಬಣ್ಣದ ಚಿತ್ರಗಳಿಂದ ಅಲಂಕರಿಸಬೇಕಾಗುತ್ತದೆ. ಹೀಗೆ ಸಹಿಯಾದ ಗಾರೆ, ಬಣ್ಣಗಳ ಲೇಪನದ ಮೇಲೆ ವಿವಿಧ ಬಣ್ಣಗಳಿಂದ ಚಿತ್ರಿಸಿದ ಚಿತ್ರಗಳು ಗಾರೆ, ಸುಣ್ಣಗಳೊಂದಿಗೆ ಒಣಗಿ ಅವುಗಳ ಜಾಗವೇ ಆಗಿಬಿಡುವುದರಿಂದ ಚಿತ್ರಗಳು ಬಹುಕಾಲ ಬದುಕಿ ಉಳಿಯುತ್ತವೆ. ಅಜಂತಾ, ಬಾದಾಮಿ, ಯಲ್ಲೋರಾ ಮುಂತಾದ ಕಡೆಗಳಲ್ಲಿರುವ ವಿಶ್ವವಿಖ್ಯಾತವಾದ ಭಿತ್ತಿ ಚಿತ್ರಗಳು ಇದೇ ವಿಧಾನದಲ್ಲಿ ಚಿತ್ರಗೊಂಡವುಗಳಾಗಿರುತ್ತವೆಯಲ್ಲದೆ ಕನ್ನಡ ಅರಸರ ಪೋಷಣೆಯಲ್ಲಿ ಕನ್ನಡ ಕಲಾವಿದರಿಂದ ರಚಿತಗೊಂಡ ಕಲಾಕೃತಿಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತವೆ.

ಬಣ್ಣ ಅಥವಾ ರಂಗು ಒಂದು ಸಂಕೀರ್ಣ ಸಂಯೋಜನೆ, ಕಚ್ಚಾ ಪದಾರ್ಥಗಳಿಂದ ಅಸಂಖ್ಯಾತ ಬೇಕಾದ ಬಣ್ಣಗಳನ್ನು ತಯಾರಿಸಲಾಗುತ್ತದೆ. ಕಚ್ಚಾಪದಾರ್ಥಗಳೆಂದರೆ ನೈಸರ್ಗಿಕವಾದ ಜೇಡಿಮಣ್ಣು, ವಿವಿಧ ಬಣ್ಣದ ಮಣ್ಣುಗಳು. ಖನಿಜಗಳು ವಿವಿಧ ಸಸ್ಯಗಳು ಇವುಗಳನ್ನು ಸಂಸ್ಕರಣೆಯಿಂದ ಅನೇಕ ಬಣ್ಣಗಳನ್ನು ತಯಾರಿಸಲಾಗುತ್ತದೆ. ಮೊದಲು ಬಳಕೆಗೆ ಬಂದ ಬಣ್ಣಗಳೆಲ್ಲ ಸಸ್ಯಗಳಿಂದ ಮತ್ತು ಪ್ರಾಣಿಗಳಿಂದ ತಯಾರಿಸಿದ ನೈಸರ್ಗಿಕ ಪದಾರ್ಥಗಳಾಗಿದ್ದವು. ಮದರಂಗಿ, ಕೇಸರಿ, ಕಿರುಮಂಜಿ ಮತ್ತು ಲಾಗ್‌ವುಡ್ ವಿವಿಧ ಸಸ್ಯಗಳಿಂದ ಹಳದಿ ಮತ್ತು ಕಂದು ಬಣ್ಣದ ದ್ರಾವಣಗಳು, ಸ್ವಾಭಾವಿಕಗಳು ನಿಸರ್ಗದಲ್ಲಿ ದೊರೆಯುವ ಎಲೆ, ಹೂವು, ಮರದ ತೊಗಟೆಗಳ ರಸದಿಂದ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಿತ್ತು. ಇಂಡಿಗೊ ಎಂಬ ನೀಲಿ ಬಣ್ಣದ ಬಳಕೆ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ವಂಶ ಪಾರಂಪರ್ಯವಾಗಿ ಬೆಳೆದುಕೊಂಡು ಬಂದಿರುತ್ತದೆ. ಈ ಬಣ್ಣದ ತಯಾರಿಕೆ ಕಷ್ಟಕರವಾಗಿದೆ ಯಾದರೂ ಸಾವಿರಾರು ವರ್ಷಗಳ ಹಿಂದೆಯೇ ಈ ಬಣ್ಣದ ಬಳಕೆಯಾಗುತ್ತಿತ್ತು ಎಂಬುದು ಆಶ್ಚರ್ಯವನ್ನುಂಟು ಮಾಡುತ್ತದೆ. ಕಷ್ಟಸಾಧ್ಯವಾದ ಈ ಬಣ್ಣದ ತಯಾರಿಕೆಯ ಕಲೆಯು ಬಹಳ ಗೌಪ್ಯವಾಗಿಯೇ ಬೆಳೆದು ಬಂದಿತು. ಹಾಗೆಯೇ ಖನಿಜಗಳಿಂದ ತಯಾರಿಸಿದ ಬಣ್ಣಗಳು ಸಹ ಆದಿಮಾನವನ ಕಾಲದಿಂದಲೂ ಬಳಕೆಯಲ್ಲಿವೆ.

ಹೀಗೆ ಅನಾದಿ ಕಾಲದಿಂದಲೂ ಬಣ್ಣಗಳ ಅದ್ವಿತೀಯ ಬಳಕೆಯೂ ಕಲಾವಿದರ ಬದುಕಿನೊಂದಿಗೆ ಬೆಳೆದು ಬಂದ ಒಂದು ಮಾಧ್ಯಮವಾಗಿರುತ್ತದೆ. ಬಹುತೇಕ ಭಿತ್ತಿಗಳಲ್ಲಿ ಒಳಲಾದ ಬಣ್ಣಗಳು, ಕುಂಚಗಳು ಸ್ವತಃ ಕಲಾವಿದರೇ ತಯಾರಿಸಿಕೊಂಡವುಗಳಾಗಿದ್ದು ತಮ್ಮ ಪರಿಸರದಲ್ಲಿಯೇ ದೊರೆಯುವ ಖನಿಜ ಬಣ್ಣಗಳ ಮತ್ತು ಸಸ್ಯಜನ್ಯ ಬಣ್ಣಗಳಾಗಿವೆ.

ಸಿಬಿ ಮತ್ತು ರಂಗಾಪುರ, ಕೆರೆಗೋಡಿನ ಭಿತ್ತಿ ಚಿತ್ರಗಳ ಬಣ್ಣಗಳಲ್ಲಿ ಒಂದು ಸ್ವಾರಸ್ಯವಿದ್ದರೆ, ಪ್ರಸನ್ನ ಕೃಷ್ಣ ದೇವಾಲಯ, ಶ್ವೇತಾವರಹ ದೇವಾಲಯ, ಅಂಬುಜಾವಲ್ಲಿಯಲ್ಲಿ ಮತ್ತೊಂದು

ಶೈಲಿಯನ್ನು ಕಾಣಬಹುದು. ಸಿಬಿಯ ಭಿತ್ತಿ ಚಿತ್ರಗಳಲ್ಲಿ ಹೆಚ್ಚಾಗಿ ಬಣ್ಣವನ್ನು ಉಪಯೋಗಿಸಿದ್ದಾರೆ. ಸಿಬಿ ಭಿತ್ತಿ ಚಿತ್ರಗಳಲ್ಲಿ ಕೆಂಪು, ಹಳದಿ, ಹಸಿರು, ಶ್ವೇತ, ನೀಲಿ, ನೇರಳೆ ಇತ್ಯಾದಿ ಬಣ್ಣಗಳನ್ನು ಕಾಣಬಹುದು. ಬಾಹ್ಯರೇಖೆಯನ್ನು ಕಪ್ಪು ಬಣ್ಣದಿಂದ ಎಳೆಯಲಾಗಿದೆ. ಆದರೆ ಕೆರೆಗೋಡಿ ರಂಗಾಪುರದಲ್ಲಿ ಭಿತ್ತಿ ಚಿತ್ರಗಳಲ್ಲಿ ಬಳಸಿದ ಬಣ್ಣ, ಕಂದು ಗೆಂಪು, ಹಳದಿ ಕಪ್ಪು ಈ ಮೂರು ಬಣ್ಣಗಳು ಬಳಕೆಯಾಗಿರುವುದು ಕಂಡುಬರುತ್ತದೆ. ಇಲ್ಲಿ ಮೈಸೂರು ಅರಸರ ಚಿತ್ರದಲ್ಲಿ ತಿಳಿನೀರಲಿ ವರ್ಣ ಹಾಗೂ ಕಡುನೀಲಿ ಬಣ್ಣವನ್ನು ಹೇರಳವಾಗಿ ಬಳಸಲಾಗಿದೆ.

ಆದರೆ ನಿಸರ್ಗದ ಪ್ರಭಾವದಿಂದ ರಕ್ಷಣೆಯಿಲ್ಲದೆ ಚಿತ್ರಗಳಲ್ಲಿನ ಮೂಲ ವರ್ಣಗಳು ಇಂದು ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆ. ಆದರೂ ಕಲಾವಿದ ಮೂಲವಾಗಿ ಬಳಸಿದ ಚಿತ್ರಗಳಲ್ಲಿಯ ವರ್ಣಗಾರಿಕೆ ಹಾಗೂ ಬಳಸಿರುವ ವಿಧಾನಕ್ಕೂ ನಂತರದ ಕಲಾವಿದರು ಬಳಸಿರುವ ವಿಧಾನಗಳಿಗೂ ಇರುವ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಪ್ರತಿಯೊಂದು ಕಲೆಗೂ ಒಂದಲ್ಲಾ ಒಂದರ ಪ್ರಭಾವ ಇದ್ದೇ ಇರುತ್ತದೆ. ಕಲೆಯು ಹುಟ್ಟಿದ್ದೇ ಸಂತೋಷಕ್ಕಾಗಿ. ಪ್ರಾಗಿತಿಹಾಸ ಚಿತ್ರಕಲೆಗೆ ಪ್ರಕೃತಿಯಲ್ಲಿ ತಾನು ಕಂಡ ಪ್ರಾಣಿ ಪಕ್ಷಿ ಗಿಡ, ಮರ, ಸೂರ್ಯ, ಚಂದ್ರ ಇತ್ಯಾದಿಗಳು ಆದಿಮಾನವನಿಗೆ ಪ್ರೇರಣೆಯಾದವು. ಅವುಗಳ ಸೌಂದರ್ಯ, ಆಕರ್ಷಣೆ ಕಲೆಗೆ ಸ್ಫೂರ್ತಿಯಾಯಿತು. ಆದಿಮಾನವನಿಂದ ಇಂದಿನವರೆಗೂ ಒಂದರ ಪ್ರೇರಣೆ, ಸ್ಫೂರ್ತಿ ಮತ್ತೊಂದಕ್ಕೆ ಇರುವುದು ಸಹಜವಾಗಿದೆ. ಈ ಬೆಳವಣಿಗೆಯು ಮುಂದುವರೆದಂತೆ ಭಿತ್ತಿಚಿತ್ರಕಲೆಗೆ ಇದೇ ಮಾದರಿಯ ಪ್ರೇರಣೆ ಆಗಿರುವುದು ಕಂಡುಬರುತ್ತದೆ.

ಆಯಾ ಪರಿಸರಕ್ಕನುಗುಣವಾಗಿ ಭಿತ್ತಿ ಚಿತ್ರಗಳು ಚಿತ್ರಿತವಾಗಿರುತ್ತವೆ. ಹಳೆ ಮೈಸೂರು ರಾಜ್ಯವು ಕಲೆ ಮತ್ತು ಸಂಸ್ಕೃತಿಗೆ ಹೆಚ್ಚು ಆದ್ಯತೆ ನೀಡಿದೆ. ಈ ಹಿಂದೆ ಇದ್ದ ಆಡಳಿತ ಅಧಿಕಾರಿಗಳು ಮತ್ತು ಅಲ್ಲಿ ಸಾಂಸ್ಕೃತಿಕ ಪರಿಸರವೇ ಕಾರಣ. ಸೀಬಿ ಮತ್ತು ಕೆರೆಗೋಡಿ ರಂಗಾಪುರದ ಭಿತ್ತಿಚಿತ್ರಗಳು ಕೆಲವು ಮೈಸೂರು ಶೈಲಿಯ ಪ್ರಭಾವ ಹೊಂದಿದ್ದರೂ ಮೂಲತಃ ವಿಜಯನಗರದ ಚಿತ್ರಶೈಲಿಯ ಪ್ರಭಾವ ಗಾಢವಾಗಿ ಎದ್ದು ಕಾಣುತ್ತದೆ. ಅಲ್ಲಲ್ಲಿ ಜಾನಪದೀಯ ಭಿತ್ತಿಚಿತ್ರಗಳು ಕಂಡುಬಂದಿದ್ದು ಇವುಗಳು ಸುತ್ತಮುತ್ತಲಿನ ಗ್ರಾಮೀಣ ಭಿತ್ತಿ ಚಿತ್ರಗಳ ಪ್ರಭಾವವಾಗಿದೆ.

ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭಿತ್ತಿಚಿತ್ರ, ಕೆರೆಗೋಡು, ರಂಗಾಪುರ, ಶಿರಾ, ಹೊಸಹಳ್ಳಿ ಮತ್ತು ಸಿಬಿ ಭಿತ್ತಿ ಚಿತ್ರಗಳ ಮೇಲೆ ವಿಜಯನಗರ ಶೈಲಿಯ ಪ್ರಭಾವ ಬೀರಿರುತ್ತದೆ. ಚಿತ್ರಗಳಲ್ಲಿ ಕೆಲವು ಪ್ರಾದೇಶಿಕ ಬದಲಾವಣೆಗಳೂ ಹಾಗೂ ಕಲಾವಿದರ ಕೈ ಚಳಕವನ್ನು ಪ್ರದರ್ಶಿಸುವ ಸಲುವಾಗಿ ಕೇವಲ ಬದಲಾವಣೆಗಳು ಆಗಿವೆಯಾದರೂ ಬಹುತೇಕ ವಿಜಯನಗರ ಶೈಲಿಯ ಪ್ರಭಾವ ಕಂಡುಬರುವುದು. ಅಲ್ಲಲ್ಲಿ ಹಿನ್ನೆಲೆ, ಮುನ್ನಲೆ, ಬಣ್ಣ ವಸ್ತ್ರಾಲಂಕಾರ, ರೇಖೆ, ಸಂಯೋಜನೆ, ಕ್ಷೇತ್ರ ವಿಂಗಡಣೆ ಚಿತ್ರಗಳ ಸಂಕ್ಷಿಪ್ತ ವಿವರಣೆ ಮುಂತಾದ ಹತ್ತಾರು ಅಂಶಗಳಲ್ಲಿ ವಿಜಯನಗರದ ಚಿತ್ರಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಹಿನ್ನೆಲೆಯ ಪ್ರಭಾವಳಿಯಾಗಿ

ಅರಮನೆಯ ನಕ್ಷೆಯ ಅಲಂಕಾರವನ್ನು ಬಳಸಿಕೊಳ್ಳಲಾಗಿದೆ. ಇದು ಮೈಸೂರು ಅರಮನೆಯ ವಾಸ್ತುಶೈಲಿಯಾಗಿದ್ದು ಸಿಬಿ ಮತ್ತು ಕೆರೆಗೋಡು ರಂಗಾಪುರ ಭಿತ್ತಿಚಿತ್ರಗಳಲ್ಲಿ ವಿಶೇಷವಾಗಿದೆ. ಅದೇ ರೀತಿ ವಿಜಯನಗರ ಶೈಲಿಯ ಹಿನ್ನೆಲೆಯಾಗಿ ವಿಜಯನಗರದ ವಾಸ್ತು ವಿನ್ಯಾಸವನ್ನು ಬಳಸಲಾಗಿದೆ. ಇದೂ ಕೂಡ ಹಿನ್ನೆಲೆಗೆ ಪ್ರಭಾವವೆ ಸರಿ.

ಕೆರೆಗೋಡಿ ಭಿತ್ತಿ ಚಿತ್ರಗಳ ಸಂಯೋಜನೆಯು ಮೂರು ಅಂಕಣದಲ್ಲಿದ್ದು ಮೊದಲ ಅಂಕಣದಲ್ಲಿ ಚಿತ್ರಿತವಾದ ತ್ರಿಪುರ ಸಂಹಾರವು ಸಂಯೋಜನೆಯಲ್ಲಿ ಭಿನ್ನತೆ ಕಂಡರೂ ವಸ್ತು ವಿಷಯವು ವಿಜಯನಗರದ ಮಾದರಿಯಲ್ಲಿದೆ. ಚಿತ್ರಗಳ ಆಕಾರ, ಹಿನ್ನಲೆ, ಮುನ್ನಲೆಗಳು, ಬಣ್ಣಗಾರಿಕೆ ರೇಖೆ ಸಂಯೋಜನೆ ಮೈಸೂರು ಸಾಂಪ್ರದಾಯಿಕ ಶೈಲಿಯ ಪ್ರಭಾವ ಕಂಡುಬರುತ್ತದೆ. ಉಳಿದಂತೆ ಎರಡು ಅಂಕಣದಲ್ಲಿ ಜಾನಪದ ಚಿತ್ರಗಳು ಸ್ಥಳೀಯ ಕಲಾವಿದರು ಹಿಂದೆ ಅದೇ ಸ್ಥಳದಲ್ಲಿ ಭಿತ್ತಿಚಿತ್ರಗಳು ಇದ್ದುದ್ದನ್ನು ನೋಡಬಹುದು ಅಥವಾ ರಂಗಾಪುರ ಹತ್ತಿರದ ಗುಬ್ಬಿಮ ತುಳಸೀಕಟ್ಟೆ ಮುಂತಾದ ಚಿತ್ರರಚನೆಯ ಪ್ರಭಾವ ಅಲ್ಲಿನ ಜಾನಪದ ಭಿತ್ತಿ ಚಿತ್ರಗಳ ಮೇಲೆ ಪ್ರಭಾವ ಬೀರಿದೆ. ಅಲ್ಲದೆ ಜಾನಪದ ಶೈಲಿಯು ವಂಶಪಾರಂಪರ್ಯವಾಗಿ ತಂದೆಯಿಂದ ಮಕ್ಕಳಿಗೆ ಸಹಜವಾಗಿ ಬರುವುದರಿಂದ ಜಾನಪದ ಶೈಲಿಯು ಪ್ರಭಾವ ಇಲ್ಲಿ ಎದ್ದು ಕಾಣುತ್ತದೆ.

ಪ್ರೇರಣೆ :

ಸಿಬಿ ಮತ್ತು ಕೆರೆಗೋಡಿ, ರಂಗಾಪುರ ಭಿತ್ತಿಚಿತ್ರಗಳ ರಚನೆಗೆ ಮೈಸೂರು ಒಡೆಯರು, ಟಿಪ್ಪುಸುಲ್ತಾನ್ ಮುಖ್ಯವಾಗಿ ಪ್ರೋತ್ಸಾಹ ನೀಡಿದ್ದು, ಜೊತೆಗೆ ಪೌಜುದಾರರು, ಊರಿನ ಗಣ್ಯರು, ಮಠಾಧೀಶರು, ಸ್ಥಳೀಯು ನಾಗರೀಕರು ಸೇರಿದಂತೆ ಹಲವಾರು ಮೂಲಗಳಿಂದ ಭಿತ್ತಿ ಚಿತ್ರ ರಚನೆಗೆ ಉತ್ಸಾಹ ತುಂಬಿ ಆರ್ಥಿಕ ನೆರವು ನೀಡಿರುವುದು ಕಂಡುಬರುತ್ತದೆ. ಭಿತ್ತಿ ಚಿತ್ರಕ್ಕಷ್ಟೇ ಅಲ್ಲದೆ ವಾಸ್ತು ಶಿಲ್ಪಕಲೆಗಳಿಗೂ ಇದೇ ರೀತಿಯ ಪ್ರೋತ್ಸಾಹ ದೊರಕಿರುವುದು ಹಲವಾರು ಶಾಸನಗಳಿಂದ ತಿಳಿಯುತ್ತದೆ. ವಿಜಯನಗರದ ಅರಸರ ಕಾಲವನ್ನು ಅಂದರೆ ೧೫೦೦ ಕಾಲ ಭಾರತೀಯ ಚಿತ್ರಕಲಾ ಇತಿಹಾಸದ ಪುನರುತ್ಥಾನದ ಸಮಯವೆಂದೂ ಕಲಾ ಇತಿಹಾಸತಜ್ಞರ ಅಭಿಪ್ರಾಯವಾಗಿದೆ. ಈ ಕಲಾ ಪರಂಪರೆಯು ದಕ್ಷಿಣ ಭಾರತದಲ್ಲಿ ಇಪ್ಪತ್ತನೇ ಶತಮಾನದ ಅಂತ್ಯದವರೆಗೂ ವಿರಾಜಮಾನರಾಗಿ ಚಿತ್ರಕಲೆಯ ಕೀರ್ತಿಯಿಂದ ಮೆರೆದಿದೆ ಎನ್ನುವುದಕ್ಕ ಮೈಸೂರು ಅರಮನೆ, ಹಂಪಿ, ಆನೆಗುಂದಿ, ಲೇಪಾಕ್ಷಿ, ವಾಡೆ ಭಿತ್ತಿ ಚಿತ್ರಗಳು, ಮನೆಗಳಲ್ಲಿ, ಮಠಗಳಲ್ಲಿ ರಚನೆಗೊಂಡಿರುವ ಭಿತ್ತಿಚಿತ್ರ ಹಾಗೂ ಚಿತ್ರಗಳು ಕಲಾಪರಂಪರೆ ಯಿಂದ ತಿಳಿದು ಬರುತ್ತದೆ.

ರಾಜ ಮನೆತನಗಳು ಕಲಾವಿದರಿಗೆ ಆರ್ಥಿಕ ನೆರವು ಮತ್ತು ಆಶ್ರಯ ನೀಡುವುದರ ಮೂಲಕ ಉತ್ತಮ ಕಲಾಪರಂಪರೆಯ ಬೆಳವಣಿಗೆಗೆ ಕಾರಣವಾಗಿವೆ. ಜಿಲ್ಲೆಯಲ್ಲಿನ ಕೆರೆಗೋಡಿಯ ಭಿತ್ತಿಚಿತ್ರದಲ್ಲಿ ಕಲಾವಿದನ ಹೆಸರು ಹಾಗೂ ಚಿತ್ರಕಾರ್ಯಕ್ಕೆ ನೀಡಿದ ಸಂಭಾವನೆ ೬೦ರೂ. ಮಂಜೂರು ಎಂದು

ಬರೆಸಿರುವುದು, ರಾಜ ರವಿವರ್ಮನ ಕಲೆಯನ್ನು ಮೆಚ್ಚಿ ಹೆಚ್ಚಿನ ಸಂಭಾವನೆಯನ್ನು ನೀಡಿ ಮೂರ್ನಾಲ್ಕು ಬಾರಿ ಮೈಸೂರು ಅರಮನೆಯ ಚಿತ್ರ ರಚನೆ ಕಾರ್ಯಕ್ಕೆ ಕರೆಸಿದ್ದರು ಎಂಬುದು ದಾಖಲೆಗಳ ಮೂಲಕ ಖಚಿತವಾಗುತ್ತದೆ. ಹೀಗೆ ಕಲಾವಿದರಿಗೆ ಪ್ರೋತ್ಸಾಹ ನೆರವು ನೀಡುವುದರ ಮೂಲಕ ಕಲಾವಿದರ ಆರ್ಥಿಕ ಬವಣೆ ನೀಗಿಸುವುದರ ಮೂಲಕ ನಾಗರೀಕ ಸಮಾಜಕ್ಕೆ ಉತ್ತಮ ಉದಾಹರಣೆಯಾಗಿರುವುದು. ನಾಗರೀಕರು, ಶ್ರೀಮಂತರು ಹಾಗೂ ಜನಸಾಮಾನ್ಯರೂ ಕೂಡ ಚಿತ್ರ ಬರೆಸುವ ಹಾಗೂ ಮನೆಗೊಂದು ಚಿತ್ರ ಎಂಬಂತೆ ಪ್ರೇರೇಪಿಸಿದರು. ಈ ಬೆಳವಣಿಗೆಯ ಉತ್ತಮ ಕಲಾ ಶೈಲಿ ಪರಂಪರೆ ಹಾಗೂ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದೆ.

ತಂತ್ರಗಾರಿಕೆ :

ಕಲಾವಿದನು ತಮ್ಮ ಕಾರ್ಯ ವೈಖರಿಯಲ್ಲಿ ಹಲವಾರು ತಂತ್ರಗಳಿಂದ ಕೂಡಿದ ಕಲಾಕೃತಿ ಭಿತ್ತಿಚಿತ್ರ ರಚನೆಯಲ್ಲಿ ತೊಡಗಿಕೊಂಡಿರುತ್ತಾನೆ. ಕಲಾಕೃತಿಯ ರಚನೆ ಸಂದರ್ಭದಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಅಂದರೆ ಭಿತ್ತಿ ರಚನೆ ಮಾಡಿಕೊಳ್ಳುವುದು ಪ್ರಾರಂಭವಾದರೆ ಮುಕ್ತಾಯದ ಗೆರೆಗಳನ್ನು ಹಾಗೂ ಸಂರಕ್ಷಣೆಯ ಕಾರ್ಯದವರೆಗೂ ಜಾಣ್ಮೆಯಿಂದ ಕಾರ್ಯನಿರ್ವಹಿಸುತ್ತಾರೆ. ಕಲಾಕೃತಿಯ ಸಂಯೋಜನೆ, ರೇಖೆ, ಬಣ್ಣ, ಕುಂಚ, ಭಿತ್ತಿ ಇವು ಹಲವಾರು ವಿನೂತನ ವಿಧಾನದಿಂದ ಕೂಡಿರುತ್ತದೆ. ಭಿತ್ತಿ ಚಿತ್ರ ರಚನೆಯ ಪ್ರತಿಯೊಂದು ಹಂತದಲ್ಲೂ ವಿಭಿನ್ನ ಮಾದರಿಯ ರಚನೆಯಿಂದ ಕೂಡಿರುತ್ತದೆ. ಕಲಾವಿದನು ಭಿತ್ತಿಯ ರಚನೆಯನ್ನು ಸಾಂಪ್ರದಾಯಿಕವಾಗಿ ರಚನೆ ಮಾಡಿಕೊಂಡು ಬಂದಿರುವುದು ಇಂದಿನವರೆಗೂ ಭಿತ್ತಿ ಚಿತ್ರಗಳ ಇರುವಿಕೆಗೆ ಸಹಕಾರಿಯಾಗಿದೆ.

ಭಾರತದ ಚಿತ್ರಗಳು ಸಂಕೇತ ಪ್ರಧಾನವಾದ ಹಾಗೂ ಬಣ್ಣಗಳಿಂದ ರಚಿಸಿದ ಧಾರ್ಮಿಕ ತತ್ವಗಳು, ಶಿವ, ಕೃಷ್ಣ, ರಾಮ, ರಾವಣ, ಕುಂಬಕರ್ಣ ಮುಂತಾದ ದೇವತೆಗಳ ಚಿತ್ರಗಳನ್ನು ಕೃಷ್ಣನಿಗೆ ನೀಲಿ, ಶಿವನಿಗೆ ಬೂದು ಹಾಗೂ ದೇವತೆಗಳ ಆಯುಧಗಳು ಸಂಕೇತಗಳಾಗಿವೆ. ಶಂಕ, ಚಕ್ರ, ತ್ರಿಶೂಲ, ಢಮರುಗ, ಮುಂತಾದವುಗಳು ಹಾಗೂ ದೇವತೆಗಳ ವಾಹನದಲ್ಲಿಯೂ ನಂದಿ, ನವಿಲು, ಗರುಡ ಹೀಗೆ ರಥದ ಸವಾರಿಗಳು, ಗಿಳಿ, ಕೋಣ, ಮುಂತಾದವು ಧ್ವಜ, ಆಂಜನೇಯ, ಗರುಡ ಹೀಗೆ ಹಲವಾರು ಸಂಕೇತಗಳನ್ನು ಆಯಾ ದೇವತೆಗಳ ಜೊತೆಯಲ್ಲಿ ಚಿತ್ರಿಸುವುದು ಕಲಾವಿದ ತಂತ್ರವಾಗಿ ಆ ಚಿತ್ರಗಳಿಗೆ ಕೆಂಪು, ಹಳದಿ, ಕಪ್ಪು, ನೀಲಿ, ಬಣ್ಣಗಳನ್ನು ಹಿನ್ನಲೆಯಾಗಿ ಬಳಸುವುದು ಸಂದರ್ಭಚಿತವಾಗಿ ಬಳಸುವುದು ಉಂಟು. ಕುಂಚ ತಯಾರಿಕೆಯಲ್ಲಿ ಹಲವಾರು ವಿಧಾನಗಳನ್ನು ಬಳಸುವುದು ಕಾಲಾನುಕ್ರಮೇಣ ಅವುಗಳ ಬದಲಾವಣೆಗೆ ಹಾಗೂ ವಿಥ ವಿಧವಾದ ಕುಂಚಗಳ ತಯಾರಿಕೆಯು ಕಲಾವಿದನ ತಂತ್ರವಾಗಿದೆ.

ವಿಷ್ಣುಧರ್ಮೋತ್ತರ ಪುರಾಣ, ಮಾನಸೋಲ್ಲಾಸ, ಶಿವತತ್ವ ರತ್ನಾಕರ, ಶ್ರೀತತ್ವನಿಧಿ ಮುಂತಾದ ಗ್ರಂಥಗಳಲ್ಲಿ ಭಿತ್ತಿಯ ರಚನಾ ವಿಧಾನವನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ವಿಷ್ಣು ಧರ್ಮೋತ್ತರ

ಪುರಾಣವು ಸುಮಾರು ೫ನೇ ಶತಮಾನದ್ದು ಎಂದು ಗುರುತಿಸಲಾಗಿದೆ. ಈ ಗ್ರಂಥದಲ್ಲಿ ಭಿತ್ತಿ ರಚನಾ ವಿಧಿ ವಿಧಾನದ ಬಗ್ಗೆ ತಿಳಿಸಿದ್ದಾರೆ. ಇದರಲ್ಲಿ ಮೂರು ಖಂಡಗಳಿವೆ. ಮೂರನೇಯ ಖಂಡದ ಮೂವತ್ತೈದನೇಯ ಅಧ್ಯಾಯದಲ್ಲಿ 'ಚಿತ್ರಸೂತ್ರಂ' ಎಂಬ ಪ್ರಕರಣವಿದೆ. ಈ ಅಧ್ಯಾಯದಿಂದ ಚಿತ್ರಕಲೆಯ ಬಗ್ಗೆ ಮಹತ್ವಪೂರ್ಣವಾದ ಮಾಹಿತಿ ದೊರೆಯುತ್ತದೆ.

ಪುರಾಣ ಗ್ರಂಥಗಳು ಭಿತ್ತಿ ರಚನೆಯ ತಂತ್ರಗಾರಿಕೆಯ ಬಗ್ಗೆ ಹಾಗೂ ಶಿಲ್ಪ, ವಾಸ್ತು ಶಿಲ್ಪ ಹಾಗೂ ಚಿತ್ರಗಳ ಬಗ್ಗೆ ಅಳತೆ, ಪ್ರಮಾಣ, ಬಣ್ಣಗಳ ತಯಾರಿಕೆ, ಕುಂಚಗಳ ತಯಾರಿಕೆ, ಶಿಲ್ಪಶಾಸ್ತ್ರದ ಬಗ್ಗೆಯೂ ತಿಳಿಸಿವೆ. ಇದೇ ಮಾದರಿಯಲ್ಲಿ ಭಿತ್ತಿಚಿತರಗಳು ರಚನೆಗೊಂಡಿರುವುದು ಕಂಡುಬರುತ್ತದೆ. ಚಿತ್ರರಚನೆಯ ಮುನ್ನ ಭಿತ್ತಿ ರಚನಾ ಶಾಸ್ತ್ರದ ಪ್ರಕಾರ ಸುಣ್ಣ, ಬೆಲ್ಲ, ಮರಳು, ಅಂಟುದ್ರಾವಣ, ನಾರು ಮುಂತಾದ ಮಿಶ್ರಣದೊಂದಿಗೆ ಗಾರೆ ತಯಾರಿಸಿ ನಂತರ ಚಿತ್ರ ರಚನೆ ಮಾಡುತ್ತಿದ್ದರು. ಜೊತೆಯಲ್ಲಿ ಮಣ್ಣು ಮತ್ತು ಮರಳುಗಳೊಂದಿಗೆ ಸಸ್ಯ ಸಂಬಂಧಿಯಾದ ವಸ್ತುಗಳನ್ನು ಗೋಡೆಗೆ ಮೇಲೆ ಸಣ್ಣದ ಪದರ ಹಚ್ಚಿ ನಂತರ ಚಿತ್ರ ರಚನೆಗೆ ತೊಡಗುತ್ತಿದ್ದರು. ಆದರೆ ಏಳನೇಯ ಶತಮಾನದ ಶಾಸ್ತ್ರ ಗ್ರಂಥಗಳ ರಚನೆಯಾಗಿದ್ದು ಅದರಲ್ಲಿ ಭಿತ್ತಿ ಸಿದ್ಧತೆಯ ಬಗ್ಗೆ ಸಾಕಷ್ಟು ಸಂಗತಿಗಳು ತಿಳಿದುಬರುತ್ತದೆ. ಹೀಗೆ ಪೂರ್ವ ಸಿದ್ಧತೆಯಲ್ಲಿ ಚಿತ್ರದ ಗುಣಮಟ್ಟ ಸಂಯೋಜನೆ ಹಾಗೂ ಬಣ್ಣಗಳ ಸಂಯೋಜನೆಯನ್ನು ಮೊದಲೇ ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ರೀತಿಯ ಭಿತ್ತಿ ಚಿತ್ರ ರಚನೆಯ ಹಾಗೂ ಭಿತ್ತಿಯ ತಂತ್ರಗಾರಿಕೆಯನ್ನು ಸಿಬಿ ಮತ್ತು ಕೆರೆಗೋಡಿ ರಂಗಾಪುರ ಭಿತ್ತಿ ಚಿತ್ರಗಳಲ್ಲಿ ಕಂಡುಬರುತ್ತದೆ.

ಸಿಬಿ ಭಿತ್ತಿ ಚಿತ್ರದಲ್ಲಿ ಮುಖ್ಯವಾದ ಅಂಕಣಗಳನ್ನು ಭಾಗವತ ಪುರಾಣ, ವಿಷ್ಣುವಿನ ವಿಶ್ವರೂಪ, ಕೃಷ್ಣಲೀಲೆಗಳ ಚಿತ್ರಗಳನ್ನು ಚಿಕ್ಕ ಚಿಕ್ಕ ಅಂಕಣವನ್ನಾಗಿಸಿ ಪುರಾಣದ ಸಂದರ್ಭವನ್ನು ಒಂದೊಂದು ಅಂಕಣದಲ್ಲೂ ಸಂಕ್ಷಿಪ್ತವಾಗಿ ನಿರೂಪಿಸಿರುವುದು ಕಲಾವಿದನ ಕಲೆಯ ತಂತ್ರವಾಗಿದೆ. ಇದೇ ಮಾದರಿಯು ಕೆರೆಗೋಡಿ ರಂಗಾಪುರದ ಭಿತ್ತಿ ಚಿತ್ರಗಳಲ್ಲಿಯೂ ಕಾಣುತ್ತೇವೆ. ದೇವತೆಗಳ ತಾಳಮಾನವನ್ನು ಅವುಗಳ ಅಳತೆಯಲ್ಲಿ ತೋರಿಸುವುದರ ಮೂಲಕ ಮುಖ್ಯ ದೇವತೆಯ ಪ್ರಧಾನ ಪಾತ್ರವನ್ನು ಸೂಚಿಸುತ್ತದೆ. ಉಳಿದಂತೆ ಅದಕ್ಕಿಂತ ಚಿಕ್ಕದಾಗಿ ರಚಿಸುವುದು ಕಲಾವಿದರ ಜಾಣ್ಮೆಯಾಗಿದೆ. ಅಜಂತ ಭಿತ್ತಿ ಚಿತ್ರಗಳಲ್ಲಿ ಬುದ್ಧ ಮತ್ತು ಯಶೋಧರೆಯ ಚಿತ್ರವನ್ನು ಬುದ್ಧನ ಚಿತ್ರವು ದೊಡ್ಡದಾಗಿಯೂ ಯಶೋಧರೆಯ ಚಿತ್ರವು ಚಿಕ್ಕದಾಗಿಯೂ ಅವನ ಮಗ ರಾಹುಲನ ಚಿತ್ರವು ಅತಿ ಚಿಕ್ಕದಾಗಿಯೂ ಚಿತ್ರಿಸಲಾಗಿದೆ. ಹಿನ್ನೆಲೆಯಾಗಿ ಚಿಕ್ಕ ಗಾತ್ರದ ಬುದ್ಧನ ಅನುಯಾಯಿಗಳನ್ನು ತೋರಿಸಲಾಗಿದೆ. ಉಗ್ರನರಸಿಂಹ, ಈಶ್ವರ ಪಾರ್ವತಿ, ವಿಷ್ಣು-ಸರಸ್ವತಿ, ಬ್ರಹ್ಮ-ಲಕ್ಷ್ಮಿ ಇವರುಗಳ ಚಿತ್ರ ಬರೆಯಬೇಕಾದರೆ ಗಂಡು ದೇವತೆಯ ಚಿತ್ರಗಳನ್ನು ಎತ್ತರ ಮತ್ತು ದೊಡ್ಡದಾಗಿಯೂ, ಹೆಣ್ಣು ದೇವತೆಗಳ ಚಿತ್ರಗಳು ಚಿಕ್ಕದಾಗಿಯೂ ತಮ್ಮ ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವಂತೆ ಚಿತ್ರಿಸುವುದರ ಮೂಲಕ ಪ್ರಭಲತೆಯನ್ನು ಗಾತ್ರದ ಮಾನದಂಡದ ಮೇಲೆ ನಿರೂಪಿಸಿದ್ದಾರೆ.

ಟಿಪ್ಪುಸುಲ್ತಾನ್ ಅವರ ಆಡಳಿತದಲ್ಲಾದ ಟಿಪ್ಪು ಅರಮನೆ ಮತ್ತು ದರಿಯಾದೌಲತ್ ಅರಮನೆಯಲ್ಲಿನ ಭಿತ್ತಿಚಿತ್ರಗಳಿಗೆ ಸಂಬಂಧಿಸಿದಂತೆ ತಂತ್ರಗಾರಿಕೆ, ಪ್ರಭಾವ ಒಂದಕ್ಕೊಂದು ಸಂಬಂಧವನ್ನು ಕಲ್ಪಿಸುವಂತಿವೆ. ಈ ಭಾಗದಲ್ಲಿ ಕಂಡುಬರುವ ಚಿತ್ರಗಳಲ್ಲಿ ಸಾಮ್ಯತೆ ಇದ್ದು, ಅಷ್ಟೇ ಆವೇಶವೂ ಕೂಡ. ನೋಡುಗನಲ್ಲಿ ಆಶ್ಚರ್ಯವೂ ಮತ್ತು ಆತಂಕವೂ ಮೂಡಿಸುವಂತಹ ಕ್ಷಣಗಳನ್ನು ಸೃಷ್ಟಿಸಿದ್ದಾರೆನ್ನಬಹುದು. ದರಿಯಾ ದೌಲತ್ ಅರಮನೆಯ ಭಿತ್ತಿಚಿತ್ರಗಳಂತೂ ಅದ್ಭುತವಾಗಿವೆ. ಇಲ್ಲಿನ ಚಿತ್ರಗಳಿಗೆ ಕಲಾವಿದ ಪ್ರಭಾವ ಆಗಿರುವುದು ರೇಖೆ, ಬಣ್ಣಗಳಲ್ಲಿಯೇ ಸ್ಪಷ್ಟಪಡಿಸಿದಂತಿದೆ.

ಅದೇ ರೀತಿ ದಕ್ಷಿಣ ಕರ್ನಾಟಕದ ಜೈನಮಠಗಳಲ್ಲಿ ಕಂಡುಬರುವ ಭಿತ್ತಿ ಚಿತ್ರಗಳಲ್ಲಿ ಅಲ್ಪ ಬದಲಾವಣೆಯನ್ನು ಗುರುತಿಸಬಹುದು. ಶ್ರವಣಬೆಳಗೋಳ ಮತ್ತು ಮೂಡಬಿದರೆಯಲ್ಲಿನ ಚಿತ್ರಗಳ ಬಣ್ಣಗಳಲ್ಲಿ ಸಾಮ್ಯತೆಗಳನ್ನು ಕಂಡರೆ, ಕಾರ್ಕಳದಲ್ಲಿ ಅಲ್ಪ ಭಿನ್ನವಾಗಿರುವುದನ್ನು ಕಾಣಬಹುದು.

ಒಟ್ಟಾರೆ ದಕ್ಷಿಣ ಕರ್ನಾಟಕದಲ್ಲಿ ಸಿಗುವ ಭಿತ್ತಿಚಿತ್ರಗಳು ಹೊಯ್ಸಳ, ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಲ್ಲಾಗಿರುವ ಕಾರಣ ಪರಿಸರಕ್ಕೆ ಹೊಂದಿಕೊಂಡಂತೆ ಆಗಿನ ಸಂದರ್ಭದ ಪ್ರಭಾವಗಳಿಗೆ ಮಾರುಹೋಗಿ ತಮ್ಮದೇ ಶೈಲಿ ಮತ್ತು ತಂತ್ರಗಳನ್ನು ಬಳಸಿಕೊಂಡು ಚಿತ್ರಗಳನ್ನು ರಚಿಸಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು

೧. ಎಂ.ಎಚ್.ಕೃಷ್ಣಯ್ಯ: ಕಲಾ ಸಂಸ್ಕೃತಿ(ಕರ್ನಾಟಕದಲ್ಲಿ ಚಿತ್ರಕಲಾ ಪರಂಪರೆ), ಸ್ವಪ್ನ ಬುಕ್ ಹೌಸ್, ಬೆಂಗಳೂರು,೨೦೧೨.ಪು.ಸ.೩೦

೨. ಕೆ.ವಿ.ಸುಬ್ರಹ್ಮಣ್ಯಂ: ಲಲಿತಕಲೆಗಳು,ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು೨೦೧೫,ಪು.ಸ,೦೩

೩. ಕೆ.ವಿ.ಸುಬ್ರಹ್ಮಣ್ಯಂ: ಲಲಿತಕಲೆಗಳು,ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು೨೦೧೫,ಪು.ಸ,೧೦

೪. ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ: ಸುರಪುರ ಚಿತ್ರಕಲೆ,ಸರಚಂದ್ರ ಪ್ರಕಾಶನ, ಚಿತ್ತಾಪುರ,೨೦೧೦, ಪು.ಸ.೧೦೮

೫. ಡಾ.ಅ.ಲ.ನರಸಿಂಹನ್: ಕರ್ನಾಟಕದ ಭಿತ್ತಿ ಚಿತ್ರಪರಂಪರೆ,ಕ.ಲ.ಕ.ಅ,ಬೆಂಗಳೂರು,೧೯೯೮,ಪು.ಸ.೧೬೪

೬. ಅದೇ ಪುಟ

ಅಧ್ಯಾಯ : ೮

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಸ್ಥಿತಿಗತಿ, ಸಂರಕ್ಷಣೋಪಾಯಗಳು

ಅಧ್ಯಾಯ–ಎಂಟು

ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳ ಸ್ಥಿತಿಗತಿ ಮತ್ತು ಸಂರಕ್ಷಣೋಪಾಯಗಳು

ಭಾರತದಲ್ಲಿ ಚಿತ್ರಕಲೆಗೆ ತನ್ನದೇ ಆದ ಇತಿಹಾಸವಿದ್ದು, ಭಾರತೀಯ ಸಂಸ್ಕೃತಿಯಲ್ಲಿ ಅದು ಪ್ರಮುಖವಾಗಿರುತ್ತದೆ. ಪ್ರಾಚೀನ ಚಿತ್ರಕಲೆಯನ್ನು ಸಾಮಾನ್ಯವಾಗಿ ಗುಹಾಲಯಗಳಲ್ಲಿಯೂ ದೇವಾಲಯಗಳಲ್ಲಿಯ ಛಾವಣಿ ಮತ್ತು ಭಿತ್ತಿಗಳಲ್ಲಿಯೂ, ಅರಮನೆ, ಮಠ ಮತ್ತು ಗುರುಮನೆಗಳಲ್ಲಿ ಅಲ್ಲದೇ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿಯೂ ಈ ಭಿತ್ತಿ ಚಿತ್ರಗಳ ರಚನೆಯನ್ನು ಕಾಣಬಹುದಾಗಿದೆ. ಹಿಂದಿನವರು ವಿಶೇಷವಾಗಿ ಗೋಡೆಗಳ ಮೇಲೆ ಚಿತ್ರಗಳನ್ನು ರಚನೆ ಮಾಡುತ್ತಿದ್ದರು. ಅಂತಹ ಚಿತ್ರಗಳ ಕುರಿತೆ ವಿಶೇಷವಾಗಿ ಅಧ್ಯಯನ ಕೈಗೊಂಡಿರುವ ಹಿನ್ನಲೆಯಲ್ಲಿ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಕಂಡು ಬರುವ ಭಿತ್ತಿ ಚಿತ್ರಗಳ ಸ್ಥಿತಿಗತಿ ಮತ್ತು ಅವುಗಳ ಸಂರಕ್ಷಣೆಯ ಉಪಾಯಗಳೇನು? ಎಂಬುದನ್ನು ಮುಖ್ಯವಾಗಿ ತಿಳಿಯುವ ಉದ್ದೇಶವೇ ಈ ಅಧ್ಯಾಯನದ್ದಾಗಿದೆ.

ಭಾರತದಲ್ಲಿ ಹಿಂದೂ, ಮುಸಲ್ಮಾನ, ಜೈನ, ಬೌದ್ಧ, ಪಾರಸಿ ಹಾಗೂ ಕ್ರಿಶ್ಚಿಯನ್ ಮೊದಲಾದ ಅನೇಕ ಧರ್ಮಗಳ ಆಶ್ರಯ ಸ್ಥಾನವಾಗಿರುವ ಭಾರತದ ಕಲಾಕೃತಿಗಳು, ಸುಮಾರು ಎರಡು ಸಾವಿರ ವರ್ಷಗಳಿಂದಲೂ ಚೇತೋಹಾರಿಯಾಗಿ ಬೆಳೆದು ಬಂದ ಮಹಾನ್ ಚರಿತ್ರೆಯಾಗಿದೆ. ನೆರೆಯ ಬರ್ಮಾ, ಸಿಲೋನ್. ಅಪಘಾನಿಸ್ಥಾನ, ಟಿಬೇಟ್. ಸಯಾಮ, ಇಂಡೋನೇಷಿಯ. ಇಂಡೋಚೈನಾ ಮುಂತಾದ ದೇಶಗಳ ಕಲೆಯ ಮೇಲೆ ಭಾರತೀಯ ಕಲೆಯು ತುಂಬಾ ಪ್ರಭಾವ ಬೀರಿದೆ, ಇಲ್ಲವೆ ಈ ಎಲ್ಲಾ ದೇಶಗಳ ಕಲೆಯು ಭಾರತೀಯ ಕಲೆಯ ತಳಹದಿಯ ಮೇಲೆಯೇ ಬೆಳೆದು ಬಂದಿರುತ್ತದೆ.

ಭಾರತದಲ್ಲಿ ಸಾಕಷ್ಟು ದೇವಾಲಯಗಳು, ಸ್ತೂಪಗಳು, ಅರಮನೆಗಳು, ಮಸೀದಿಗಳು, ಗೋರಿಗಳು, ಚರ್ಚುಗಳು, ಗುರುದ್ವಾರಗಳು ಮತ್ತು ವಿಜಯಸ್ತಂಭಗಳು ಮೊದಲಾದವುಗಳ ಅವಶೇಷಗಳ ಜೊತೆ

ಸಾವಿರಕ್ಕೂ ಹೆಚ್ಚಾಗಿರುವ ಗುಹಾಂತರ ದೇವಾಲಯಗಳೂ ಸಂಘರಾಮ-ಚೈತ್ಯಾಲಯಗಳೂ ಇರುತ್ತವೆ. ಪ್ರಾಚೀನ ಕಾಲದ ಅನೇಕ ಅರಮನೆಗಳು, ದೇವಾಲಯಗಳು ಇಂದಿಗೂ ಬಳಕೆಯಲ್ಲಿರುವುದನ್ನು ಕಾಣಬಹುದು.

ಭಾರತದಾದ್ಯಂತ ಮುಖ್ಯವಾಗಿ ಭಿತ್ತಿ(ಗೋಡೆ) ಚಿತ್ರಗಳನ್ನು ದೇವಾಲಯಗಳಲ್ಲಿ, ಜೈನಮಠಗಳಲ್ಲಿ, ಚರ್ಚ್‌ಗಳಲ್ಲಿ, ಬಸದಿಗಳಲ್ಲಿ, ಮಸೀದಿಗಳಲ್ಲಿ ಮತ್ತು ಅರಮನೆಗಳಲ್ಲಿ ವಿಶೇಷವಾಗಿ ಕಾಣಬಹುದು. ಪ್ರಾಚೀನರಲ್ಲಿ ಕಾಗದ, ಮರ ಇತ್ಯಾದಿ ಫಲಕದ ಮೇಲೆ ಚಿತ್ರಿಸುವ ಪದ್ದತಿ ಇತ್ತಾದರೂ ಚಿತ್ರಕ್ಕೆ ಭಿತ್ತಿಯೇ ಮುಖ್ಯವಾಗಿತ್ತೆನ್ನಬಹುದು

ಭಿತ್ತಿ ಚಿತ್ರಗಳ ಆಪತ್ತುಗಳು :

ಕಲೆ ಯಾವತ್ತೂ ಶಾಶ್ವತ. ಅದೇ ಕಲ್ಲು ಲೋಹಗಳಂತಹ ಗಟ್ಟಿ ಪದಾರ್ಥಗಳಿಂದಾದ ಶಿಲ್ಪಗಳೇ ಕಾಲಕ್ರಮೇಣ ಸವೆದು, ಬಿರಿದು, ಶಿಥಿಲಗೊಳ್ಳುವಾಗ ಮಣ್ಣು, ಮರ, ಸುಣ್ಣ, ಹುಲ್ಲು, ಹೊಟ್ಟುಗಳಂತಹ ಮೆದು ಪದಾರ್ಥಗಳಿಂದ ಹಿನ್ನೆಲೆ ನಿರ್ಮಿಸಿ ರಚಿಸಿದ ಭಿತ್ತಿ ಚಿತ್ರಗಳು ಅಚ್ಚಳಿಯದೇ ಉಳಿಯಬಲ್ಲವೇ? ಎಂಬ ಅನುಮಾನ ಇತ್ತೀಚಿನ ಭಿತ್ತಿ ಚಿತ್ರಗಳನ್ನು ನೋಡಿದಾಗ ಕಾಣಬಹುದು. ಪ್ರಸ್ತುತ ಅನೇಕ ಭಿತ್ತಿ ಚಿತ್ರಗಳು ಆಪತ್ತುಗಳಿಗೀಡಾಗಿ ನಾಶವಾಗುತ್ತಲಿವೆ. ಕಾಲಾಂತರದಲ್ಲಿ ಸ್ವಾಭಾವಿಕವಾದ ಸವಕಳಿಯಿಂದ ನಾಶವಾಗುವುದಲ್ಲದೇ ಪ್ರಕೃತಿವಿಕೋಪ. ಮನುಷ್ಯ. ಪ್ರಾಣಿಪಕ್ಷಿಗಳು, ಹಾಗೂ ಕ್ರಿಮಿಕೀಟಗಳಿಂದಲೂ ಪ್ರಾಚೀನ ಭಿತ್ತಿ ಚಿತ್ರಗಳಿಗೆ ಹಾನಿಸಂಭವಿಸುತ್ತಿದೆ. ಹೀಗೆ ವಿವಿಧ ಕಾರಣಗಳಿಂದ ಭಿತ್ತಿ ಚಿತ್ರಗಳಿಗೆ ಸಂಭವಿಸುವ ಆಪತ್ತುಗಳೆಂದರೆ ೧. ಸ್ವಾಭಾವಿಕಗಳಿಂದಾಗುವ ಆಪತ್ತು ೨. ಪ್ರಕೃತಿಗಳಿಂದಾಗುವ ಆಪತ್ತು ೩. ವ್ಯಕ್ತಿಗತದಿಂದಾಗುವ ಆಪತ್ತು ೪. ಪ್ರಾಣಿಗಳಿಂದಾಗುವ ಆಪತ್ತು ೫. ಪಕ್ಷಿಗಳಿಂದಾಗುವ ಆಪತ್ತು ೬. ಕ್ರಿಮಿಕೀಟಗಳಿಂದಾಗುವ ಆಪತ್ತು ೭. ಮನುಷ್ಯರಿಂದಾಗುವ ಆಪತ್ತು

೧. ಸ್ವಾಭಾವಿಕಗಳಿಂದಾಗುವ ಆಪತ್ತು :

ಕಾಲಕ್ರಮೇಣ ಭಿತ್ತಿಚಿತ್ರಗಳಿಗೆ ಉಪಯೋಗಿಸಲಾದ ವಸ್ತುಗಳ ಸತ್ವ ಕಡಿಮೆಯಾಗಿ ಭಿತ್ತಿ ಚಿತ್ರಗಳು ಹಾಳಾಗುವುದನ್ನು ಇಲ್ಲಿ ಸ್ವಾಭಾವಿಕ ಆಪತ್ತು ಎಂದು ಪರಿಗಣಿಸಲಾಗಿದೆ. ಭಿತ್ತಿ ಚಿತ್ರಗಳಿಗೆ ಉಪಯೋಗಿಸಿದ ಬಣ್ಣಗಳು ಕಾಲಾಂತರದಲ್ಲಿ ಮುಸುಕಾಗುವುದು. ಉದುರಿ ಹೋಗುವುದು. ಸಹಜಕ್ರಿಯೆ. ಹೀಗೆ ಬಣ್ಣ ಮಸುಕಾಗಿರುವುದು. ಉದುರಿಹೋಗುವುದು. ಹೆಚ್ಚಿನ ಎಲ್ಲ ಪ್ರಾಚೀನ ಭಿತ್ತಿ ಚಿತ್ರಗಳಲ್ಲಿಯೂ ಕಾಣಬಹುದು. ಭಿತ್ತಿ ಚಿತ್ರಗಳಲ್ಲಿ ವರ್ಣವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಉದುರಿಹೋಗಿದ್ದರೆ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭಿತ್ತಿ ಚಿತ್ರವು ರೇಖೆಗಳ ಸಮೇತ ಬಣ್ಣವು ಕಾಂತಿಹೀನವಾಗಿದೆ. ಹಾಗೇ ಕುಣಿಗಲ್ ತಾಲ್ಲೂಕಿನ ಅಮೃತೂರು ಸಮೀಪವಿರುವ ಹೊಸಹಳ್ಳಿಯ ಪಟಲದಮ್ಮ ಮತ್ತು ಲಕ್ಷ್ಮೀ ದೇವಾಲಯದಲ್ಲಿನ ಭಿತ್ತಿ ಚಿತ್ರಗಳಲ್ಲಿ ಬಣ್ಣ ಉದುರಿಹೋಗಿರುವುದನ್ನು ಗಮನಿಸಬಹುದು. ಮತ್ತು ಅಲ್ಲಿನ ಉಸ್ತುವಾರಿಯ ಜನ ಆಧುನಿಕ

ಬಣ್ಣ ಬಳಿದು ನಾಶಪಡಿಸಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಇನ್ನೂ ನಾಗಮಂಗಲದ ಸೌಮ್ಯಕೇಶವ ದೇವಾಲಯದ ಭಿತ್ತಿ ಚಿತ್ರಗಳ ಬಣ್ಣದ ಕಾಂತಿ ಮಸುಕಾಗಿರುತ್ತದೆ. ಇನ್ನೂ ಕೆಲವು ಕಡೆ ಅಳಿಸಿ ಹೋಗಿರುವ ಕಾರಣ ದೇವಾಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ನೆಪದಲ್ಲಿ ಭಿತ್ತಿ ಚಿತ್ರಗಳನ್ನು ಸಂಪೂರ್ಣವಾಗಿ ನಾಶ ಮಾಡಲಾಗಿರುತ್ತದೆ. ಅಂತಹುಗಳಲ್ಲಿ ಶಿರಾದ ರೇವಣಸಿದ್ದೇಶ್ವರ ದೇವಾಲಯ, ಹರದನಹಳ್ಳಿ ಲಕ್ಷ್ಮೀ ದೇವಾಲಯ, ಯಡೆಯೂರಿನ ಸಿದ್ದೇಶ್ವರ ದೇವಾಲಯ. ಹಾಳಾಗಿರುವ ಭಿತ್ತಿ ರಚನೆಯಲ್ಲಿ ಉಪಯೋಗಿಸಲಾದ ವಸ್ತುಗಳ ಸತ್ವ ಕಡಿಮೆಯಾಗಿಯೂ ಕೆಲವು ಭಿತ್ತಿ ಚಿತ್ರಗಳು ಹಾಳಾಗಿರಬಹುದು ಮತ್ತೆ ಕೆಲವು ಚಿತ್ರಗಳನ್ನು ದೇವಾಲಯದ ನೆಪದಲ್ಲಿ ಅಳಿಸಿ ಹಾಕಿರುವುದುಂಟು.

ಮಣ್ಣಿನ ಭಿತ್ತಿಯು ಬೇಗನೆ ತನ್ನ ಸತ್ವ ಕಳೆದುಕೊಳ್ಳುವುದರಿಂದ ಉಳಿದ ಭಿತ್ತಿಚಿತ್ರಗಳಿಗಿಂತ ಇದು ಬೇಗನೇ ನಾಶವಾಗುತ್ತದೆ. ಹಾಗೆಯೇ ಲೋಹಫಲಕದ ಮೇಲೆ ಚಿತ್ರಿಸಿದಾಗಲೂ ಬೇಗನೆ ಹಾಳಾಗುವ ಸಾಧ್ಯತೆ ಇದೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ, ನಾಲ್ಕುನಾಡು ಅರಮನೆ, ರಂಗಾಪುರ ಮತ್ತು ಕೆರೆಗೋಡಿಯ ದೇವಾಲಯ, ಮಾಗಡಿ, ಶಿರಾದ ರೇವಣಸಿದ್ದೇಶ್ವರ, ಯಡೆಯೂರಿನ ಸಿದ್ದಲಿಂಗೇಶ್ವರ ದೇವಾಲಯ ಹೀಗೆ ಇನ್ನೂ ಅನೇಕ ಸ್ಥಳಗಳಲ್ಲಿ ಭಿತ್ತಿ ಕೆಳಗುದುರಿ ಬಿದ್ದು ಚಿತ್ರಗಳು ನಾಶವಾಗಿದೆ. ಹೀಗೆ ಕಾಲಕ್ರಮೇಣ ಸಹಜವಾಗಿ ನಾಶಹೊಂದುವುದನ್ನು ಸ್ವಾಭಾವಿಕ ಅಪತ್ತುಗಳೆಂದು ಹೇಳಬಹುದಾಗಿದೆ.

೨. ಪ್ರಕೃತಿಯಿಂದಾಗುವ ಆಪತ್ತು :

ಪ್ರಕೃತಿಯಲ್ಲಿನ ಮಳೆನೀರು, ಬೆಂಕಿ, ಬಿರುಗಾಳಿ, ಬಿಸಿಲುಗಳಿಂದ ಭಿತ್ತಿ ಚಿತ್ರಗಳಿಗಾಗುವ ಹಾನಿಗಳನ್ನು ಮತ್ತು ಭೂಕಂಪ, ಪ್ರಳಯಗಳಂತ ವಿಕೋಪಗಳನ್ನು ಪ್ರಕೃತಿಗಳ ಆಪತ್ತುಗಳೆಂದು ಕರೆಯಬಹುದು. ಅವುಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

ನೀರು : ಭಿತ್ತಿ ಚಿತ್ರಗಳಿಗೆ ಒದಗುವ ಹಲವಾರು ಆಪತ್ತುಗಳಲ್ಲಿ ನೀರಿನಿಂದಲೇ ಅತ್ಯಂತ ಹೆಚ್ಚಿನ ಹಾನಿಯುಂಟಾಗುತ್ತದೆ. ದೇವಾಲಯದ ಮೇಲ್ಭಾಗದಲ್ಲಿ ನೀರು ಬೀಳುವುದರಿಂದ ಕಲ್ಲಿನ ದೇವಾಲಯಗಳು ಹೆಚ್ಚು ಇರುವುದರಿಂದ ಕಲ್ಲಿನ ಸೆಳೆವುಗಳಿಂದ ನೀರು ಹರಿದು ಬರುವುದು. ಅದರಿಂದ ಭಿತ್ತಿ ಚಿತ್ರದ ಕಡೆವಾಲಿ ಚಿತ್ರಗಳು ಹಾಳಾಗಿರುತ್ತವೆ. ಮೇಲ್ಛಾವಣೆಯಿಂದ ನೀರು ಸೋರುವುದು, ಗೋಡೆಯಲ್ಲಿನ ಬಿರುಕುಗಳಿಂದ ನೀರು ಜಿನುಗುವುದು. ಇಲ್ಲವೇ ಚಿತ್ರಗಳು ಕಟ್ಟಡದ ಹೊರಭಾಗದಲ್ಲಿದ್ದಾಗ ನೇರವಾಗಿ ನೀರಿನ ಹೊಡೆತಕ್ಕೆ ಸಿಕ್ಕುವುದು. ಹೀಗೆ ಯಾವುದೇ ರೀತಿಯಿಂದ ನೀರಿನ ಸಂಪರ್ಕ ಭಿತ್ತಿ ಚಿತ್ರಗಳಿಗಾದರೂ ಹಾನಿಯಾಗುವುದು ತಪ್ಪಿದ್ದಲ್ಲ.

ಅ. ಮೇಲ್ಛಾವಣೆ ಅಥವಾ ಗೋಡೆಯ ಬಿರುಕುಗಳಿಂದ ನೀರು ಸೋರುವುದು :

ಮೇಲ್ಛಾವಣೆಯಿಂದ ಭಿತ್ತಿ ಚಿತ್ರಗಳ ಮೇಲೆ ನೀರು ಸೋರಿದಾಗ ಚಿತ್ರಗಳ ಮೇಲೆ ಸವಳು

(ಉಪ್ಪು) ಮಣ್ಣು, ಖನಿಜಯುಕ್ತ ವಸ್ತುಗಳ ಸಂಗ್ರಹವಾಗುತ್ತದೆ. "ಹೀಗೆ ಸಂಗ್ರಹವಾಗುವ ಕ್ಯಾಲ್ಸಿಯಂ ಕಾರ್ಬೋನೆಟ್, ಕ್ಯಾಲ್ಸಿಯಂ ಫಾಸ್‌ಫೇಟ್, ಕ್ಯಾಲ್ಸಿಯಂ ಸಲ್ಫೇಟ್, ಸೋಡಿಯಂ ಕ್ಲೋರೈಡ್, ಮ್ಯಾಂಗನೀಜ್, ಆಕ್ಸೈಡ್‌ಗಳೆಂಬ ಲವಣಯುಕ್ತ ವಸ್ತುಗಳಿಂದ ತೇವಾಂಶ ಹೆಚ್ಚಾಗಿ ಚಿತ್ರಗಳಿಗೆ ಲೇಪಿಸಿದ ವರ್ಣ ಮತ್ತು ಭಿತ್ತಿಯು ನೆನೆದು, ಕೆಳಗುದುರಿ ಬೀಳುವುದು ನೀರಿನ ಸೋರುವಿಕೆಯಿಂದ ಹೀಗೆ ಲವಣಯುಕ್ತ ವಸ್ತುಗಳು ಸಂಗ್ರಹಗೊಳ್ಳುವುದಲ್ಲದೇ ಖನಿಜಯುಕ್ತ ಮಣ್ಣು ಸಂಗ್ರಹಗೊಂಡಾಗ ಚಿತ್ರಗಳು ನಶಿಸುತ್ತವೆ. ಖನಿಜಯುಕ್ತ ವಸ್ತುಗಳು ಸಂಗ್ರಹಗೊಂಡಾಗ ಅದರಲ್ಲಿರುವ ಖನಿಜದ ಗುಣದಿಂದ ರಾಸಾಯನಿಕ ಕ್ರಿಯೆನಡೆದು ಚಿತ್ರಗಳ ಮೇಲೆ ವಿವಿಧ ರೀತಿಯ ಕಲೆಗಳು ಉಂಟಾಗುತ್ತವೆ. ಮಣ್ಣಿನಲ್ಲಿ ಮ್ಯಾಂಗನೀಜ್ ಅಂಶವಿದ್ದಾಗ ಚಿತ್ರಗಳು ಕಂದು ಮತ್ತು ಕಪ್ಪು ಮಿಶ್ರಿತ ಕಲೆಗಳಿಂದ ಆವರಿಸುತ್ತದೆ. ಹೀಗೆ ನೀರಿನ ಸೋರುವಿಕೆಯಿಂದಲೇ ಇಂದು ಹೆಚ್ಚಿನ ಭಿತ್ತಿಚಿತ್ರಗಳು ನಾಶವಾಗುತ್ತಲಿವೆ. ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಶಿರಾ, ಕೆರೆಗೋಡಿ ಮತ್ತು ರಂಗಾಪುರದ ಭಿತ್ತಿಚಿತ್ರಗಳು ಮಳೆಯ ನೀರು ಮೇಲ್ಛಾವಣಿಯಿಂದ ಸೋರಿ ನಾಶವಾಗಿವೆ.

ಬ. ತೇವದಿಂದ ಚಿತ್ರಗಳಿಗೆ ಬೂಷ್ಟು ಆವರಿಸುವುದು : ಭಿತ್ತಿ ಚಿತ್ರಗಳ ಮೇಲೆ ಉಂಟಾಗುವ ಹೆಚ್ಚು ತೇವಾಂಶದಿಂದ ಬೂಷ್ಟು ನಿರ್ಮಾಣವಾಗುವುದಲ್ಲದೇ ಇದರಲ್ಲಿರುವ ಸೂಕ್ಷ್ಮಾಣು ಜೀವಿ (ಬ್ಯಾಕ್ಟೀರಿಯಾ)ಗಳು ಭಿತ್ತಿ ಚಿತ್ರಗಳಿಗೆ ಹಾನಿಮಾಡುತ್ತವೆ. ತೇವವಿದ್ದಾಗ ಹಳದಿ ಮತ್ತು ಹಸಿರು ವರ್ಣದಿಂದ ಕೂಡಿದ ಈ ಪಾಚಿಯು ಒಣಗುತ್ತ ಬಂದಂತೆ ಕಂದು ಮತ್ತು ಕಪ್ಪು ವರ್ಣಕ್ಕೆ ತಿರುಗುತ್ತದೆ. ಈ ರೀತಿ ಪಾಚಿ ಬೆಳೆಯುವುದು ತೇವಾಂಶ ಅಧಿಕವಿರುವ ಮಲೆನಾಡ ಭಾಗದ ಕಾವಿಚಿತ್ರಗಳಲ್ಲಿ ಸಾಮಾನ್ಯವಾಗಿದೆ. ಇದನ್ನು ಆಗಾಗ ಸ್ವಚ್ಛಗೊಳಿಸದಿದ್ದರೆ ಚಿತ್ರಗಳು ಕಪ್ಪಾಗಿ ನಾಶವಾಗುತ್ತವೆ. ಹೊನ್ನಾವರದಲ್ಲಿನ ಮಾರುತಿ ದೇವಾಲಯದ ಕಾವಿ ಭಿತ್ತಿ ಚಿತ್ರಗಳು ಇದೇ ರೀತಿಯಲ್ಲಿ ಪಾಚಿಗಟ್ಟಿ ಕಪ್ಪಾಗಿದೆ.

ಕ.ತೇವದಿಂದ ಉಂಟಾಗುವ ಕೀಟಗಳು : ಭಿತ್ತಿಚಿತ್ರಗಳ ಮೇಲೆ ವ್ಯಾಪಿಸುವ ಹೆಚ್ಚಿನ ತೇವದಿಂದ ಬ್ಯಾಕ್ಟೀರಿಯಾಗಳಿಂದ ಬೂಷ್ಟು ಬೆಳೆಯುವಂತೆ ಕಣಜದ ಹುಳು (Wasp) ಎಂಬ ಜಾತೀಯ ಕೀಟಗಳು ಚಿಕ್ಕ ಚಿಕ್ಕ ಗೂಡುಗಳನ್ನು ಮಣ್ಣಿನಿಂದ ಕಟ್ಟುತ್ತವೆ. ಇದು ಕಾಡಿನಲ್ಲಿರುವ ಶಿಲಾಶ್ರಯ ಭಿತ್ತಿ ಚಿತ್ರಗಳಲ್ಲಿ ಹೆಚ್ಚಾಗಿ ಸಂಭವಿಸುವ ಹಾನಿಯಾಗಿದೆ. ಈ ಕೀಟಗಳು ಕಟ್ಟಿದ ಬೋಗುಣಿಯಾಕಾರದ ಮಣ್ಣಿನ ಗೂಡುಗಳ ಮೇಲೆ ನೀರು ಸೋರಿದಾಗ ಅವು ಕರಗಿ ಚಿತ್ರಗಳ ಮೇಲೆ ವ್ಯಾಪಿಸುತ್ತವೆ. ಅಲ್ಲದೇ ಈ ಗೂಡುಗಳಲ್ಲಿನ ಮಣ್ಣು ಚಿಕ್ಕ ಸಸ್ಯ ಬೆಳೆಯಲು ಫಲವತ್ತಾದ ಸ್ಥಳವಾಗಿರುತ್ತದೆ ಎಂಬುದು ನೈಜವಾದದ್ದಾಗಿದೆ.

ಡ. ತೇವದಿಂದ ಬೆಳೆಯುವ ಸಸ್ಯಗಳು : ಭಿತ್ತಿ ಚಿತ್ರಗಳ ಮೇಲೆ ಉಂಟಾಗುವ ಹೆಚ್ಚು ತೇವಾಂಶದಿಂದ ಒಂದು ರೀತಿಯ ಚಿಕ್ಕದಾದ ಸಸ್ಯ ಬೆಳೆಯುವುದು. ಇದು ಎತ್ತರವಾಗಿ ಬೆಳೆಯದೇ ವಿಶಾಲವಾಗಿ ಹಬ್ಬುವುದರಿಂದ ಚಿತ್ರದ ಹರವನ್ನೆಲ್ಲ ವ್ಯಾಪಿಸುತ್ತದೆ. ಈ ರೀತಿಯ

ಇಲ್ಲವೆ ಕುಳಿ ಉಂಟಾದಲ್ಲಿ ಕುರುಚಲುಗಿಡ, ಬಳ್ಳಿಗಳು, ಬೀಳಲು[೨] (Shrubs, Vines, Creeper) ಗಳಂತಹ ಸಸ್ಯಗಳು ಬೆಳೆಯುವವು. ಇವು ಬೆಳೆದಂತೆಲ್ಲ ವಿಶಾಲವಾಗಿ ಹಬ್ಬಿ ಚಿತ್ರದ ಮೇಲೆ ವ್ಯಾಪಿಸುತ್ತವಲ್ಲದೇ ಬೇರುಗಳು ಆಳಕ್ಕಿಳಿದು ಗೋಡೆಯ ನಾಶಕ್ಕೆ ಕಾರಣವಾಗುತ್ತವೆ. ಈ ರೀತಿ ಬೆಳೆದ ಸಸ್ಯಗಳು ಗಾಳಿಬಿಟ್ಟಾದ ಚಿತ್ರಗಳ ಮೇಲೆ ಎಳೆದಾಡುವುದರಿಂದ ಇನ್ನೂ ಹೆಚ್ಚಿನ ಹಾನಿ ಸಂಭವಿಸುತ್ತದೆ. ಹೀಗೆ ತೇವದಿಂದ ಸಸ್ಯ ಬೆಳೆದು ಹಾನಿ ಸಂಭವಿಸುವುದು ಶಿಲಾಶ್ರಯ ಮತ್ತು ಶಿಲಾಗುಹೆಗಳ ಭಿತ್ತಿಚಿತ್ರಗಳಲ್ಲಿ ಅಧಿಕವಾಗಿದೆ.

೨.೧ ಪ್ರವಾಹದಿಂದ ಆಗುವ ಹಾನಿ :

ಪ್ರವಾಹವು ಪ್ರಕೃತಿವಿಕೋಪವೇ ಆಗಿದ್ದರೂ ನೀರಿನಿಂದ ಸಂಭವಿಸುವ ಹಾನಿಯಾಗಿದ್ದರಿಂದ ಇದನ್ನು ನೀರಿನಿಂದಾಗುವ ಆಪತ್ತುಗಳಲ್ಲಿ ಹೇಳಿದೆ. ಪ್ರವಾಹಗಳಿಂದ ಭಿತ್ತಿ ಚಿತ್ರಗಳು ನಾಶವಾಗಿರಬಹುದಾದರೂ ಅಂತಹ ಉದಾಹರಣೆಗಳು ಕಡಿಮೆ ಎನ್ನಬಹುದು. ಕರ್ನಾಟಕದ ಯಡೆಯೂರಿನ ಸಿದ್ದೇಶ್ವರ ದೇವಾಲಯದ ಸಮೀಪದಲ್ಲಿಯೇ ಇದ್ದಂತಹ ಭಿತ್ತಿ ಚಿತ್ರಗಳಿಂದ ಅಲಂಕೃತವಾದ ಮಠವೊಂದು ಹಳೆಯ ಪಕ್ಕದಲ್ಲಿದ್ದು[೩] ಪ್ರವಾಹದಲ್ಲಿ ನಾಶವಾಯಿತೆಂದು ತಿಳಿದುಬರುವುದು.

ಬೆಂಕಿ : ಭಿತ್ತಿ ಚಿತ್ರಗಳಿಗೆ ಬೆಂಕಿಯಿಂದಲೂ ಹಾನಿ ಸಂಭವಿಸಿರುವುದು ತಿಳಿದು ಬರುತ್ತದೆ. ಜಪಾನಿನ ಹೆರ್‍ಯಾಜಿ ಬುದ್ಧ ಮಂದಿರದಲ್ಲಿದ್ದಂತಹ ಕ್ರಿ.ಶ. ೭ನೇ ಶತಮಾನದ ಅತ್ಯಮೂಲ್ಯ ಭಿತ್ತಿಚಿತ್ರಗಳು ಕ್ರಿ.ಶ. ೧೯೪೯ನೇ ಇಸ್ವಿಯಲ್ಲಿ ನಡೆದ ಅಗ್ನಿ ಅನಾಹುತದಿಂದಾಗಿ ನಾಶವಾದವು.[೪] ಅದರಂತೆ ರಾಜ್ಯದ ಮೈಸೂರು ಅರಸಗ ಮೊದಲಿನ ಅರಮನೆಯು ಬೆಂಕಿ ಅನಾಹುತದಲ್ಲಿ ಸುಟ್ಟುಹೋಗಿರುವುದು. ಅದರಲ್ಲಿ ಇದ್ದ ಅಮೂಲ್ಯವಾದ ಭಿತ್ತಿ ಚಿತ್ರಗಳು ನಾಶವಾಗಿರಬೇಕು. ಹಾಗೇ ವಿಜಯನಗರ ಸಾಮ್ರಾಟವು ತಾಳೀಕೋಟೆ ಕದನದಲ್ಲಿ ಮುಸ್ಲಿಮರಿಗೆ ಸೋತಾಗ, ಮುಸ್ಲಿಮರು ಹಿಂದುಗಳನ್ನು ಬೆನ್ನಟ್ಟಿ ಒಂದು ವಿಜಯನಗರ ರಾಜಧಾನಿಯನ್ನು ಕೊಳ್ಳೆ ಹೊಡೆದರೆಂದು ಇತಿಹಾಸದಿಂದ ತಿಳಿದುಬರುವುದು. ಈ ಸಂದರ್ಭದಲ್ಲಿ ಅವರು ರಾಜಧಾನಿಯಲ್ಲಿನ ಅರಮನೆ, ದೇವಾಲಯ, ಮನೆ, ಮಠ ಮುಂತಾದ ಕಟ್ಟಡಗಳಲ್ಲಿ ಹುಲ್ಲು ತುಂಬಿ ಬೆಂಕಿ ಹಚ್ಚಿದರೆಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಆ ಕಟ್ಟಡಗಳಲ್ಲಿರುವ ಭಿತ್ತಿ ಚಿತ್ರಗಳು ನಾಶವಾಗಿರುವುದನ್ನು ನಾವು ಊಹಿಸಬಹುದು. ವಿಜಯನಗರ ರಾಜಧಾನಿಯ ಅರಮನೆ, ದೇವಾಲಯ ಮನೆ ಮಠಗಳು ಭಿತ್ತಿ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದವು ಎಂದು ಪ್ರವಾಸಿಗರು ಹೇಳಿದ್ದನ್ನು ಈ ಹಿಂದೆ ಹೇಳಲಾಗಿದೆ. ಹಂಪೆಯಲ್ಲಿ ಈಗಲೂ ಕೆಲವು ಕಟ್ಟಡಗಳಲ್ಲಿ ಬೆಂಕಿಯಿಂದುಂಟಾದ ಕಪ್ಪು ಉಳಿದುಕೊಂಡಿದೆ.

ಗಾಳಿ : ವಾತಾವರಣದಲ್ಲಿನ ಗಾಳಿಯ ಒತ್ತಡದಿಂದ ಭಿತ್ತಿಚಿತ್ರಗಳು ಸೂಕ್ಷ್ಮವಾಗಿ ನಾಶವಾಗುತ್ತದೆ.[೫]

ಚಿತ್ರಗಳು ಕಟ್ಟಡದ ಹೊರಭಾಗದಲ್ಲಿದ್ದಾಗ ಗಾಳಿಯ ನೇರ ಸಂಪರ್ಕಕ್ಕೆ ಬರುವುದರಿಂದ ಹೆಚ್ಚಿನ ಹಾನಿ ಸಂಭವಿಸುತ್ತದೆ. ಕೆರೆಗೋಡಿಯ ಶಂಕರೇಶ್ವರ ದೇವಾಲಯ, ರಂಗಾಪುರದ ರಂಗನಾಥ ದೇವಾಲಯಗಳಲ್ಲಿ ಹೊರ ಅಂಚಿನಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಕಾಣಬಹುದು. ಇದರಿಂದ ಇಲ್ಲಿನ ಕೆಲವು ಚಿತ್ರಗಳು ಸಂಪೂರ್ಣವಾಗಿ ಅಳಿಸಿ ಹೋಗಿರುತ್ತವೆ.

ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿ ಹೊರಭಾಗದ ಮುಖ್ಯಮಂಟಪದಲ್ಲಿ ಭಿತ್ತಿ ಚಿತ್ರಗಳಿರುವುದರಿಂದ ರಸ್ತೆಗೆ ಸಮೀಪವಾಗಿರುವುದರಿಂದ ಹೆಚ್ಚಿನ ಧೂಳು ತಗುಲುತ್ತದೆ. ಟಿಪ್ಪು ಅರಮನೆ, ಬೆಂಗಳೂರಿನ ಭಿತ್ತಿಚಿತ್ರಗಳು ಹೆಚ್ಚು ಧೂಳಿನಿಂದ ಆವರಿಸಲ್ಪಟ್ಟಿವೆ. ಕಾರಣ ನೀರಿನ ಸಂಪರ್ಕ ಉಂಟಾದರೆ ಧೂಳು ಚಿತ್ರಗಳ ಮೇಲೆ ಶಾಶ್ವತವಾಗಿ ಅಂಟಿಕೊಂಡುಬಿಡುವುದು.

ಉತ್ತರ ಕನ್ನಡದ ಜಿಲ್ಲೆಯ ಕಾವಿ ಭಿತ್ತಿಚಿತ್ರಗಳು ಹೆಚ್ಚಾಗಿ ದೇವಾಲಯದ ಹೊರಭಾಗದಲ್ಲಿಯೇ ರಚನೆಯಾಗಿರುವುದರಿಂದ ಈ ತೊಂದರೆಗೆ ಸಿಲುಕಿರುವುದು ಸಾಮಾನ್ಯವಾಗಿದೆ. ಹೀಗೆ ನೇರವಾಗಿ ಗಾಳಿಯ ಸಂಪರ್ಕದಿಂದ ನಾಶವಾಗುವುದಲ್ಲದೇ ಗಾಳಿಯಲ್ಲಿನ ಧೂಳಿನಿಂದಲೂ ಭಿತ್ತಿಚಿತ್ರಗಳು ಹಾನಿಗೊಳಗಾಗುತ್ತವೆ. ವಾತಾವರಣದ ವಾಯುಮಂಡಲದಲ್ಲಿರುವ ಧೂಳು ಪ್ರತಿಯೊಂದು ವಸ್ತುವಿಗೂ ಅಂಟುವುದು. ಸಾಮಾನ್ಯವಾದುದೇ ಆಗಿದೆ. ಹಾಗೇ ಭಿತ್ತಿ ಚಿತ್ರಗಳಿಗೆ ಧೂಲು ತಗುಲಿದಾಗ ಅವು ಹಾನಿಗೀಡಾಗುತ್ತವೆ. ವಾತಾವರಣದ ಸಹಜವಾದ ಧೂಳು ಅಲ್ಲದೇ ಚಟುವಟಿಕೆ ಹೆಚ್ಚಾಗಿರುವ ಸ್ಥಳದ ಸಮೀಪ ಭಿತ್ತಿ ಚಿತ್ರಗಳಿದ್ದರೆ ಇನ್ನೂ ಹೆಚ್ಚಿನ ಪ್ರಮಾಣದ ಧೂಳು ಆವರಿಸುತ್ತದೆ.

ಬಿಸಿಲು : ಬಿಸಿಲಿನಿಂದಲೂ ಕುಡ ಭಿತ್ತಿ ಚಿತ್ರಗಳಿಗೆ ಹೆಚ್ಚು ಹಾನಿ ಸಂಭವಿಸುತ್ತದೆ. ಬಿಸಿಲಿನಿಂದ ಉಪಯೋಗಿಸಲಾದ ಭಿತ್ತಿ ಚಿತ್ರಗಳ ಬಣ್ಣದ ಕಾಂತಿಯು ಕುಗ್ಗಿ ಮಸುಕಾಗುತ್ತವೆ. ಅಲ್ಲದೇ ಕೆಲವೇಳೆ ನಿರಂತರ ಬಿಸಿಲಿನ ಸಂಪರ್ಕದಿಂದ ಬಣ್ಣ ಸಂಪೂರ್ಣ ನಾಶವಾಗುವುದಲ್ಲದೇ, ಭಿತ್ತಿಯೂ ನಾಶವಾಗುವುದು. ಕರಾವಳಿ ಭಾಗದಲ್ಲಿ ಸಿಗುವ ಬಹುತೇಕ ಕಾವಿ ಭಿತ್ತಿ ಚಿತ್ರಗಳು ಬಿಸಿಲಿನಿಂದ ಹಾನಿಗೊಳಗಾಗಿವೆ.

ಜ್ವಾಲಾಮುಖಿ : ಪ್ರಕೃತಿವಿಕೋಪದಲ್ಲಿ ಒಂದಾದ ಜ್ವಾಲಾಮುಖಿಯಿಂದಲೂ ಭಿತ್ತಿಚಿತ್ರಗಳ ಹಾನಿ ಸಂಭವಿಸಿರುವುದು ತಿಳಿಯುತ್ತದೆ. ಇಟಲಿಯ ನೇಪಲ್ಲ ಸಮೀಪದ 'ಪಾಂಪಿ' ನಗರದಲ್ಲಿ ಮನೆ, ಅರಮನೆ, ದೇವಾಲಯ ಹೀಗೆ ಕಟ್ಟಡಗಳೆಲ್ಲ ಭಿತ್ತಿಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದವು. ಇಲ್ಲಿ ಕ್ರಿ.ಶ.೭೯ ರಲ್ಲಿ ಉಕ್ಕಿಹರಿದ ಜ್ವಾಲಾಮುಖಿಗೆ ಇಡೀ ನಗರ ಆಹುತಿಯಾಯಿತು. ಮುಂದೆ ಕ್ರಿ.ಶ. ೧೭೫೦ರಲ್ಲಿ ಉತ್ಖನನ ಮಾಡಿದಾಗ ಇಲ್ಲಿ ಸುಮಾರು ಮೂರು ಸಾವಿರ ಐನೂರು ಭಿತ್ತಿ ಚಿತ್ರಗಳು ಕಂಡುಬಂದವೆಂದು ಹೇಳುತ್ತಾರೆ. ಭೂಕಂಪ ಮತ್ತು ಜ್ವಾಲಾಮುಖಿಯಂತಹ ಪ್ರಕೃತಿವಿಕೋಪಗಳಿಂದ ಭಿತ್ತಿಚಿತ್ರಗಳು ನಾಶವಾದ ಉದಾಹರಣೆ ಕರ್ನಾಟಕದಲ್ಲಿ ದಾಖಲಾಗಿಲ್ಲ.

ಕಿಡಿಗೇಡಿತನದಿಂದಾಗುವ ಆಪತ್ತು : ಇದರಲ್ಲಿ ಮತ್ತೆ (೧) ಚಿತ್ರಗಳನ್ನು ವಿರೂಪಗೊಳಿಸುವುದು. (೨) ಚಿನ್ನಬಂಗಾರ ಲೇಪನ ಕಿತ್ತುಕೊಳ್ಳುವುದು (೩) ಸಿನೇಮಾ ಚಿತ್ರೀಕರಣದಿಂದಾಗುವ

ಆಪತ್ತು ಎಂಬುದಾಗಿ ಮೂರು ಬಗೆಯಲ್ಲಿ ವಿಂಗಡಿಸಿದೆ.

ವ್ಯಕ್ತಿಗತ ಆಪತ್ತು :

೧. **ಚಿತ್ರಗಳನ್ನು ವಿರೂಪಗೊಳಿಸುವುದು :** ಮಾನವನು ಭಿತ್ತಿ ಚಿತ್ರಗಳ ಮೌಲ್ಯ ತಿಳಿಯದೇ ಅವುಗಳನ್ನು ಮುಟ್ಟುವುದು, ತಟ್ಟುವುದು. ಅದೇನಿದ್ದೀತೆಂದು ಕುತೂಹಲದಿಂದ ಕೆರೆಯುವುದು. ಚಿತ್ರಗಳನ್ನು ವಿರೂಪಗೊಳಿಸುವುದು. ಚಿತ್ರಗಳ ಮೇಲೆ ಪ್ರತಿ ಚಿತ್ರಣ ಮಾಡುವಂತಹ ಕ್ರಮಗಳನ್ನನುಸರಿಸುತ್ತಿದ್ದು. ಇಂತಹ ಚಟುವಟಿಕೆಗಳನ್ನು ಇಲ್ಲಿ ಕಿಡಿಗೇಡಿತನ ಎಂದು ಪರಿಗಣಿಸಲಾಗಿದೆ.

ಅಗ್ನಿಮೂಶಿ ಚೋರೇಭ್ಯೇ ಶಿವೋರಕ್ಷಂತು ಪುಸ್ತಕಂ ।
ತೈಲಾದ್ರಕ್ಷೇಜ್ಜಲಾದ್ರಕ್ಷೇಚ್ಚಿಥಿಲ ಬಂಧಯಾತ್
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ॥

ಅಗ್ನಿ, ಮೂಷಿಕ, ತೈಲ, ಜಲ, ಚೋರ ಶಿಥಿಲ ಬಂಧನಗಳಿಂದ ಹಸ್ತಪ್ರತಿಗಳನ್ನು ಸಂರಕ್ಷಿಸುವಂತೆಯೇ ಅವುಗಳ ಮೌಲ್ಯ ತಿಳಿಯದೇ ನಾಶಪಡಿಸುವ ಮೂರ್ಖಹಸ್ತದ ಕೈಗೆ ಹಸ್ತಪ್ರತಿಗಳು ಸಿಗದಂತೆ ಎಚ್ಚರಿಕೆ ವಹಿಸಬೇಕೆಂದು ಪ್ರಾಚೀನ ಗ್ರಂಥಗಳಲ್ಲೇ ಹೇಳಿದ್ದನ್ನು ಡಾ.ಬಿ.ಕೆ.ಹಿರೇಮಠ ಅವರು[೬] ಹಸ್ತಪ್ರತಿಯ ಆಪತ್ತುಗಳನ್ನು ಹೇಳುವಾಗ ಉಲ್ಲೇಖಿಸುತ್ತಾರೆ. ಭಿತ್ತಿ ಚಿತ್ರಗಳನ್ನು ಹೀಗೆ ಮುಟ್ಟುವುದು, ತಟ್ಟುವುದು, ಕೆರೆಯುವುದರಿಂದ ನಾಶಮಾಡುವುದಲ್ಲದೇ ಕೆಲವರು ಚಿತ್ರಗಳ ಕೆಳಗೆ ಅಥವಾ ಪಕ್ಕದಲ್ಲಿ ಅಥವಾ ಚಿತ್ರಗಳ ಮೇಲೆಯೇ ತಮ್ಮ ಹೆಸರನ್ನೋ ಅಥವಾ ಇನ್ನೇನಾದರೂ ಗೀಚುತ್ತಾರೆ. ಇದಕ್ಕಾಗಿ ಇದ್ದಿಲು, ಕಟ್ಟಿಗೆ ತುಂಡು, ಸಣ್ಣದ ಕಲ್ಲುಗಳಂತಹ ತಕ್ಷಣ ಲಭ್ಯವಾಗುವ ವಸ್ತುಗಳನ್ನು ತೆಗೆದುಕೊಂಡು ಚಿತ್ರಗಳಿರುವ ಸ್ಥಳದಲ್ಲೇ ತಮ್ಮ ಕಲಾಕುಶಲತೆಯನ್ನೂ ಪ್ರದರ್ಶಿಸುತ್ತಾರೆ. ಇಂತಹ ಕ್ರಮಗಳಿಂದಲೂ ಭಿತ್ತಿ ಚಿತ್ರಗಳಿಗೆ ಸಾಕಷ್ಟು ಹಾನಿ ಸಂಭವಿಸುತ್ತದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಪ್ರಾಗೈತಿಹಾಸ ಕಾಲದ ಭಿತ್ತಿಚಿತ್ರಗಳಿಗೆ ಸಹಿತ ಈ ರೀತಿಯ ಹಾನಿ ತಪ್ಪಿದ್ದಲ್ಲ. ಕಾಡಿನಲ್ಲಿರುವ ಈ ಚಿತ್ರಗಳು ದನಗಾಹಿಗಳ ಕಣ್ಣಿಗೆ ಬಿದ್ದಾಗ ತಾವೂ ಆ ರೀತಿಯ ಚಿತ್ರ ರಚಿಸಬೇಕೆಂಬ ಅಪೇಕ್ಷೆಯಿಂದ ಚಿತ್ರಗಳಿರುವ ಅದೇ ಬಂಡೆಯ ಮೇಲೆ ಮತ್ತೊಂದು ಚಿತ್ರ ರಚಿಸುತ್ತಾರೆ. ಇಲ್ಲವೆ ತಮ್ಮ ಹೆಸರನ್ನೂ ಕೆತ್ತಬಹುದು. ಚಿತ್ರದುರ್ಗ ಗಳಲ್ಲಿನ ಪ್ರಾಗಿತಿಹಾಸ ಭಿತ್ತಿ ಚಿತ್ರಗಳಲ್ಲಿ ಈ ರೀತಿಯ ಹಾನಿಯಾಗಿದೆ.

೨. **ಬೆಳ್ಳಿ, ಬಂಗಾರ ಲೇಪನ ಕಿತ್ತುಕೊಳ್ಳುವುದು :** ಪ್ರಾಚೀನ ಭಿತ್ತಿಚಿತ್ರ ಕಲಾವಿದರ ಕೆಲವು ಸಂದರ್ಭದಲ್ಲಿ ಚಿತ್ರ ರಚನೆಯಲ್ಲಿ ಬಂಗಾರ, ಬೆಳ್ಳಿಯಿಂದ ತಯಾರಿಸಿದ ವರ್ಣಗಳನ್ನೇ ಬಳಸಿದ್ದು ಕಂಡುಬರುವುದು ಚಿತ್ರಗಳಿಗೆ ಲೇಪಿಸಲಾದ ಈ ಬಂಗಾರ, ಬೆಳ್ಳಿಯನ್ನು ಪಡೆದುಕೊಳ್ಳಲು ಕೆಲವು ಜನರು ಚಿತ್ರಗಳನ್ನು ಕೆತ್ತಿ ತೆಗೆದು ವಿರೂಪಗೊಳಿಸಿದ್ದು ಉಂಟು. ಜನರಿಂದಾಗುವ ಈ ರೀತಿಯ ತೊಂದರೆಗಾಗಿ ಈಗ ಭಿತ್ತಿ ಚಿತ್ರಗಳಿರುವ ಕೋಣೆಯನ್ನು ಬೀಗಹಾಕಿ ಮುಚ್ಚಲಾಗಿದೆ. ನಿಪ್ಪಾಣಿಯ

ರಾಜವಾಡೆಯಲ್ಲಿಯೂ ಆಭರಣಗಳು, ವಸ್ತ್ರಗಳ ಅಂಚುಗಳು ಕೆಲವು ನಕ್ಷೆಗಳಿಗೆ ಬಂಗಾರ, ಬೆಳ್ಳಿಯ ವರ್ಣವನ್ನೇ ಬಳಸಲಾಗಿದೆ. ಇಲ್ಲಿಯೂ ಜನ ಚಿತ್ರಗಳನ್ನು ಕೆದರಿ ಬಂಗಾರ, ಬೆಳ್ಳಿ ಅಂಶವನ್ನು ತೆಗೆದುಕೊಂಡು ಹೋಗಿದ್ದಾರೆ. ವಿಜಯ ದಶಮಿಯ ಸಂದರ್ಭದಲ್ಲಿ ಬನ್ನಿ ಮುಡಿಯುವ ಸಂದರ್ಭದಲ್ಲಿ ಹೆಚ್ಚಿನ ಜನ ಸೇರುತ್ತಿದ್ದು ಜನರು ಬನ್ನಿಯ ಬಂಗಾರ ವಿನಿಮಯ ಕಾಲದಲ್ಲಿ ಚಿತ್ರಗಳಲ್ಲಿರುವ ಬಂಗಾರದ ಅಂಶವನ್ನೇ ಕೆರೆದು ತೆಗೆದುಕೊಳ್ಳುತ್ತಿದ್ದರೆಂದು ವಾಡೆಯ ಈಗಿನ ವಾರಸುದಾರರು ಹೇಳುತ್ತಾರೆ. ಇಂತಹ ಕಾರಣಗಳಿಗಾಗಿ ಈಗ ಚಿತ್ರಳಿರುವ ಕೋಣೆಗಳಿಗೆ ಜನರ ಪ್ರವೇಶವನ್ನು ನಿರ್ಬಂದಿಸಿದ್ದಾರೆ.

ಹಿಂದಿನ ದಿನಗಳಲ್ಲಿ ವಿಜಯದಶಮಿ, ಗಣೇಶ ಹಬ್ಬಗಳಲ್ಲಿ ಚಿತ್ರಗಳಿರುವ ಈ ಕೋಣೆಯಲ್ಲಿ ಹೆಚ್ಚಿನ ಜನರು ಸೇರುತ್ತಿದ್ದರಲ್ಲದೇ ಈ ಸಂದರ್ಭಗಳಲ್ಲಿ ಒಂದು ಜನರು ಇದೊಂದು ಕಲಾ ಸಂಗ್ರಹಾಲಯವೆಂದು ತಿಲಿದು ಚಿತ್ರಗಳನ್ನು ನೋಡಲು, ಸಾಲುಗಟ್ಟಿ ನಿಲ್ಲುತ್ತಿದ್ದರೆಂದು ಮನೆಯವಾರಸುದಾರರು ಹೇಳುತ್ತಾರೆ. ಈ ಸಂದರ್ಭದಲ್ಲಿ ಕೆಲವು ಜನರು ಚಿತ್ರಗಳನ್ನು ಕೆರೆದು ಅದರಲ್ಲಿನ ಬಂಗಾರ, ಬೆಳ್ಳಿಯ ಅಂಶವನ್ನು ಪಡೆದುಕೊಳ್ಳಲು ಹವಣಿಸುತ್ತಿದ್ದರೆಂದೂ, ಇಂತಹ ಪ್ರಯತ್ನಗಳಿಂದ ಈ ಭಿತ್ತಿ ಚಿತ್ರಗಳು ಹೆಚ್ಚು ನಾಶವಾಗಿವೆ ಎಂದೂ ತಿಳಿದುಬಂದಿರುತ್ತದೆ.

೩.ಚಲನಚಿತ್ರ ಚಿತ್ರೀಕರಣದಿಂದ ಆಗುವ ಆಪತ್ತು : ಭಿತ್ತಿ ಚಿತ್ರಗಳಿರುವ ನೆಲೆಗಳಲ್ಲಿ ಚಿತ್ರೀಕರಣ ನಡೆದಾಗ ಭಿತ್ತಿ ಚಿತ್ರಗಳಿಗೆ ಹಾನಿಸಂಭವಿಸಿರುವುದು ಉಂಟು. ಚಿತ್ರೀಕರಣದಲ್ಲಿ ಬಳಸುವ ಪ್ರಖರ ಲೈಟುಗಳಿಂದ ಸೂಕ್ಷ್ಮವಾದ ಹಾನಿ ಸಂಭವಿಸುವುದು ಒಂದು ಕಾರಣವಾದರೆ, ಭಿತ್ತಿ ಚಿತ್ರಗಳ ನೆಲೆಗಳನ್ನು ತಮ್ಮ ಚಿತ್ರೀಕರಣದ ಅವಶ್ಯಕತೆಗೆ ತಕ್ಕಂತೆ ಪರಿವರ್ತಿಸಿಕೊಳ್ಳುವುದರಿಂದಲೂ ಚಿತ್ರಗಳಿಗೆ ಅಪಾಯ ಒದಗುತ್ತದೆ. ಬದಾಮಿಯ ಸಮೀಪದ ಶಿಡಿಲಫಡಿಯ ಪ್ರಾಗಿತಿಹಾಸ ಚಿತ್ರಕಲೆಯ ನೆಲೆಯನ್ನು ಕನ್ನಡ ಚಲನ ಚಿತ್ರವೊಂದರ ಚಿತ್ರೀಕರಣ ನಡೆದಾಗ, ಚಿತ್ರಗಳಿರುವ ಬಂಡೆಗೆ ಕಾಗದ, ಅಂಟು, ಬಣ್ಣಗಳನ್ನು ಲೇಪಿಸಲಾಗಿದ್ದರಿಂದ ಚಿತ್ರಗಳಿಗೆ ಹಾನಿ ಸಂಭವಿಸಿದೆ. ತೀರ ಇತ್ತೀಚೆಗೆ ಮೂಡಬಿದಿರೆಯ ಸಾವಿರ ಕಂಬದ ಬಸದಿಯಲ್ಲಿ ಕನ್ನಡ ಚಲನಚಿತ್ರದ ಚಿತ್ರೀಕರಣ ನಡೆದಾಗ ಸರ್ಚ್‌ಲೈಟ್‌ನ್ನು ಎಳೆಯುತ್ತಿರುವಾಗ ಮೇಲ್ಭಾವಣೆಗೆ ಹಾನಿ ಸಂಭವಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೪. ಪ್ರಾಣಿಗಳಿಂದಾಗುವ ಆಪತ್ತು : ಮಾನವ ರಚಿಸಿದ ಭಿತ್ತಿ ಚಿತ್ರಗಳಿಗೆ ಮಾನವನಿಂದಲೇ ಆಪತ್ತು ಸಂಭವಿಸುವಂತೆಯೇ ಪ್ರಾಣಿಗಳಿಂದಲೂ ಹಾನಿ ಉಂಟಾಗುತ್ತದೆ. ಪ್ರಾಣಿಗಳಿಂದ ಒದಗುವ ಆಪತ್ತುಗಳನ್ನು ಮತ್ತೆ

I. ಕಾಡು ಪ್ರಾಣಿಗಳಿಂದಾಗುವ ಆಪತ್ತು

II. ಸಾಕು ಪ್ರಾಣಿಗಳಿಂದಾಗುವ ಆಪತ್ತು – ಎಂದು ವರ್ಗೀಕರಿಸಿಕೊಂಡು ಅಧ್ಯಯನ

ಮಾಡಬಹುದು

I. ಕಾಡು ಪ್ರಾಣಿಗಳಿಂದಾಗುವ ಆಪತ್ತು :

ಪ್ರಾಗೈತಿಹಾಸಿಕ ಮಾನವರು ತಾವು ವಾಸಿಸಿದ ಗುಹೆ, ಶಿಲಾಶ್ರಯತಾಣಗಳಲ್ಲಿ ಚಿತ್ರರಚನೆ ಮಾಡಿದ್ದು ಕಂಡುಬರುತ್ತದೆ. ನಾಗರೀಕತೆ ಬೆಳೆದಂತೆ ಈ ಮಾನವರು ಇಂತಹ ಸ್ಥಳಗಳೀಂದ ತಮ್ಮವಾಸದ ತಾಣಗಳನ್ನು ಬದಲಾಯಿಸಿಕೊಂಡರು. ಅವರು ಬಿಟ್ಟುಹೋದ ಈ ಗುಹೆ ಶಿಲಾಶ್ರಯತಾಣಗಳು ನಂತರ ಕಾಡು ಪ್ರಾಣಿಗಳ ವಾಸಸ್ಥಳಗಳಾದವು. ಚಿತ್ರಗಳಿರುವ ಇಂತಹ ಸ್ಥಳಗಳಲ್ಲಿ ಕಾಡು ಪ್ರಾಣಿಗಳ ವಾಸದಿಂದ ಚಿತ್ರಗಳಿಗೆ ಹಾನಿಸಂಭವಿಸುವುದು ಸ್ವಾಭಾವಿಕವೇ ಆಗಿದೆ. ಕಾಡು ಪ್ರಾಣಿಗಳಲ್ಲಿ ಇಂತಹ ಪ್ರಾಣಿಗಳೇ ಚಿತ್ರಗಳಿರುವ ಶಿಲಾಶ್ರಯತಾಣಗಳಲ್ಲಿ ವಾಸಮಾಡುತ್ತವೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆದರೂ ಕರಡಿ, ಕಾಡುಹಂದಿ, ಕಾಡೆಮ್ಮೆಗಳಂತಹ ಪ್ರಾಣಿಗಳಿಂದ[೮] ಚಿತ್ರಗಳಿಗೆ ಹಾನಿಯಾಗುತ್ತದೆ ಎನ್ನಲಾಗಿದೆ. ಈ ಪ್ರಾಣಿಗಳು ಅದರಲ್ಲೂ ಕಾಡುಹಂದಿ ಕಾಡೆಮ್ಮೆಗಳು ನೀರಿನಲ್ಲಿ ಹೊರಳಾಡಿ ತಮ್ಮ ಮೈಯನ್ನು ಶಿಲಾಶ್ರಯದ ಗೋಡೆಗೆ ಉಜ್ಜುವುದರಿಂದ ಆ ಪ್ರದೇಶದಲ್ಲಿರುವ ಚಿತ್ರಗಳು ನಾಶವಾಗುತ್ತವೆ. ಭಿತ್ತಿ ಚಿತ್ರಗಳಿಗೆ ಕಾಡುಪ್ರಾಣಿಗಳಿಂದಾಗುವ ಹಾನಿಯಲ್ಲಿ ಮಂಗನಿಂದ ಒದಗುವ ಅಪತ್ತು ಅತೀ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಅಡವಿಯ ಇಂತಹ ಶಿಲಾಶ್ರಯತಾಣಗಳಲ್ಲಿ ಅವು ಹಿಂಡುಹಿಂಡಾಗಿ ವಾಸಮಾಡುತ್ತವಲ್ಲದೇ ಮಂಗಗಳು ವಿಸರ್ಜಿಸುವ ಮಲಮೂತ್ರದಲ್ಲಿರುವ ಕ್ಷಾರ ಮತ್ತು ಆಮ್ಲದ ಗುಣಧರ್ಮದಿಂದ ಚಿತ್ರಗಳಿಗೆ ಹೆಚ್ಚಿನ ಹಾನಿ ಸಂಭವಿಸುತ್ತದೆ.[೯] ಎಂಬುದಾಗಿ ತಿಳಿದುಬರುವುದು. ಭಿಂಬೇಟ್ಕಾದಂತಹ ದಟ್ಟ ಅರಣ್ಯ ಪ್ರದೇಶದಲ್ಲಿನ ಶಿಲಾಶ್ರಂಉತಾಣಗಳ ಚಿತ್ರಗಳಿಗೆ ಈ ರೀತಿಯ ಕಾಡು ಪ್ರಾಣಿಗಳಿಂದ ಹಾನಿ ಸಂಭವಿಸುವುದು. ಅಧಿಕ ಪ್ರಮಾಣದಲ್ಲಿರುತ್ತದೆ. ಬಾದಾಮಿಯ ಸುತ್ತಲ ಪರಿಸರದಲ್ಲೂ ಹಲವು ಕೆಡಗೆ ಪ್ರಾಗೈತಿಹಾಸಕಾಲದ ಮತ್ತು ಇತಿಹಾಸ ಕಾಲದ ಶಿಲಾಶ್ರಯ ವರ್ಣಚಿತ್ರಗಳಿದ್ದು ಇಲ್ಲಿಯೂ ಮಂಗಗಳು ಹಿಂಡುಹಿಂಡಾಗಿ ಓಡಾಡುತ್ತಿರು ವುದನ್ನು ಕಾಣಬಹುದಾಗಿದೆ.

II. ಸಾಕು ಪ್ರಾಣಿಗಳಿಂದಾಗುವ ಆಪತ್ತು :

ಪ್ರಾಚೀನ ಶಿಲಾಶ್ರಯ ಭಿತ್ತಿ ಚಿತ್ರಗಳಲ್ಲೇ ದನಗಳು ಆಡು, ಕುರಿ, ಕುದುರೆಗಳಂತಹ ಸಾಕು ಪ್ರಾಣಿಗಳ ಚಿತ್ರಗಳು ರಚನೆಯಾಗಿದ್ದು ನೊಡಿದರೆ ಈ ಪ್ರಾಣಿಗಳು ಅಂದಿನಿಂದಲೇ ಮಾನವನ ಒಡನಾಡಿಗಳಾಗಿದ್ದವಲ್ಲದೇ ಆಗಲೇ ಅವನ್ನು ಸಾಕಿ ತನ್ನ ಉಪಯೋಗಕ್ಕೆ ಮಾನವ ಬಳಸಿಕೊಳ್ಳುತ್ತಿದ್ದನೆಂದು ತಿಳಿದುಬರುವುದು. ಸಾಕುಪ್ರಾಣಿಗಳ ಚಿತ್ರಗಳಿರುವ ಶಿಲಾಶ್ರಯಗಳು ಮಧ್ಯಭಾರತದ ಭೆಂಬಿಟ್ಕಾ, ಫಿರಂಗೀ, ಕಾಟೋತಿ, ಲಡಿ-ಕಿ-ಕರಾರ್, ಸಾತಕುಂದ ಪ್ರದೇಶದ ಬೆಟ್ಟಗಳಲ್ಲಿ[೧೦] ಹೆಚ್ಚಾಗಿ ಕಂಡುಬರುತ್ತದೆ ಎನ್ನಲಾಗಿದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿಯೂ ದನಗಳು, ಕುದುರೆಗಳು ಶಿಲಾಶ್ರಯಗಳು ಚಿತ್ರಗಳಲ್ಲಿ ಕಂಡುಬಂದಿದೆ. ಗೂಳಿಗಳು, ಆಕಳುಗಳು ಸಾಮಾನ್ಯವಾಗಿ

ಎಲ್ಲ ಕಡೆಗೂ ಕಂಡುಬಂದಿದೆ. ಪ್ರಾಚೀನ ಮಾನವರ ಚಿತ್ರರಚನೆಗೆ ಸ್ಫೂರ್ತಿಕೊಟ್ಟ ಈ ಸಾಕುಪ್ರಾಣಿಗಳೇ ಕೆಲವು ಸಂದರ್ಭದಲ್ಲಿ ಆ ಚಿತ್ರಗಳ ಹಾನಿಗೂ ಕಾರಣವಾಗುತ್ತವೆ ಎನ್ನಬಹುದು. ಬೆಟ್ಟದ ಮೇಲೆ ಉನ್ನತ ಪ್ರದೇಶದಲ್ಲಿರುವ ಗುಹೆ. ಶಿಲಾಶ್ರಯ ತಾಣಗಳನ್ನು ಹೊರತುಪಡಿಸಿ ಭೂಮಟ್ಟದಲ್ಲಿರುವ ಅಥವಾ ಸುಲಭವಾಗಿ ತಲುಪಬಹುದಾದ ಶಿಲಾಶ್ರಯತಾಣಗಳಲ್ಲಿ ಯಾವಾಗಲೂ ದನಗಳು, ಆಡು, ಕುರಿಗಳು, ಅದರ ನೆರಳಲ್ಲಿ ವಿಶ್ರಮಿಸುವುದು ಸಾಮಾನ್ಯವಾದ ಸಂಗತಿಯಾಗಿದೆ.[೧೧] ವಿಶೇಷವಾಗಿ ಬೇಸಿಗೆಯಲ್ಲಿ ಈ ರೀತಿ ಸಾಕು ಪ್ರಾಣಿಗಳು ನೆರಳಿಗೆ ತಂಗುವುದು ಹೆಚ್ಚು. ಅಲ್ಲದೇ ಮಳೆಗಾಲದಲ್ಲೂ ರಕ್ಷಣೆಗಾಗಿ ಇಂತಹ ಸ್ಥಳಗಳಲ್ಲೇ ಪ್ರಾಣಿಗಳು ವಿರಮಿಸುವುದು ಕಂಡುಬರುವುದು.

ಪಕ್ಷಿಗಳಿಂದಾಗುವ ಆಪತ್ತು :

ಪ್ರಾಣಿಗಳಿಂದ ಭಿತ್ತಿ ಚಿತ್ರಗಳಿಗೆ ಆಪತ್ತು ಉಂಟಾಗುವಂತೆ ಕೆಲವು ಪಕ್ಷಿಗಳಿಂದಲೂ ಹಾನಿ ಸಂಭವಿಸುತ್ತದೆ. ಅವುಗಳಲ್ಲಿ I.ಬಾವಲಿಗಳು, II.ಸ್ವಾಲೋಜಾತಿಯ ಹಕ್ಕಿಗಳು III. ಗುಬ್ಬಿಗಳು ಭಿತ್ತಿ ಚಿತ್ರಗಳಿಗೆ ಹಾನಿ ಮಾಡುವ ಪಕ್ಷಿಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

I. ಬಾವಲಿಗಳು : ಬಾವಲಿಗಳು ವಾಸಮಾಡಲು ಕತ್ತಲಿನಿಂದ ಕೂಡಿದ ತಂಪು ಪ್ರದೇಶವು ಅನುಕೂಲಕರವಾಗಿದೆ. ಭಿತ್ತಿ ಚಿತ್ರಗಳು ರಚನೆಯಾಗಿರುವ ಶಿಲಾಶ್ರಯ ತಾಣಗಳು, ಗುಹೆಗಳು, ಕಟ್ಟಡಗಳ ಮೇಲ್ಛಾವಣೆ, ಜಂತಿ, ತೊಲೆ, ಬೋದಿಗೆ, ಮಂಟಪಗಳು, ಮೊದಲಾದ ಕತ್ತಲು ಹಾಗೂ ತಂಪಾಗಿರುವ ಪ್ರದೇಶಗಳಲ್ಲಿ ಬಾವಲಿಗಳು ವಾಸಮಾಡುವುದು ಸಹಜವೇ ಆಗಿದೆ. ಬಾವಲಿಗಳು ತಾವು ವಾಸಮಾಡುವ ಸ್ಥಳದಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದು ಸ್ವಾಭಾವಿಕ ಬಾವಲಿಗಳ ಮೂತ್ರವು ಅಕ್ಸಲೈಟ್ಸ್, ಫಾಸ್ಫೇಟ್, ಕ್ಯಾಲ್ಸಿಯಂ, ಸಾಲ್ಡ್ ಮತ್ತು ಯೂರಿಯಾಗಳಂತಹ ರಾಸಾಯನಿಕಗಳಂತಹ ಸಂಯುಕ್ತಗೊಂಡಿದ್ದು, ಚಿತ್ರಗಳ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತದೆ. ಇದರಿಂದ ಚಿತ್ರಗಳ ಮೇಲೆ ಕಪ್ಪು, ಕಂದು ವರ್ಣದ ಕಲೆಗಳು ಉಂಟಾಗುತ್ತವಲ್ಲದೇ ಕ್ರಮೇಣ ವರ್ಣ ಮತ್ತು ಭಿತ್ತಿಯ ನಾಶಕ್ಕೂ[೧೨] ಕಾರಣವಾಗುತ್ತದೆ. ಬಿಹಾರದ ಪಾಟ್ನಾಜಿಲ್ಲೆಯ ಬೈಕಾಟಿಪುರದಲ್ಲಿರುವ ರಾಜಾಮಾನಸಿಂಗನ ತಾಯಿಯ ನೆನಪಿನ ಕಟ್ಟಡದಲ್ಲಿ ಕ್ರಿ.ಶ.೧೯ನೇ ಶತಮಾನದಲ್ಲಿ ರಚನೆಯಾದ ಭಿತ್ತಿ ಚಿತ್ರಗಳಿದ್ದು ಅವು ಈಗಾಗಲೇ ಬಾವಲಿ, ಪಕ್ಷಿಗಳ ಮಲ ಮೂತ್ರದಿಂದ ಹಾಳಾಗಿದೆ. ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿರುವ ಗುಹೆಗಳಲ್ಲಿನ ಕ್ರಿ.ಶ. ೭ನೇ ಶತಮಾನದ ಚಿತ್ರಗಳು. ಇದೇ ಜಿಲ್ಲೆಯ ಫಿಥಲ್‌ಕೋರಾ ಗುಹೆಯ ಇದೇ ಕಾಲಮಾನದ ಚಿತ್ರಗಳು. ಪುನಾ ಜಿಲ್ಲೆಯಲ್ಲಿರುವ ಕಾರ್ಲೆ ಗುಹಾಲಯಗಳಲ್ಲಿನ ಚಿತ್ರಗಳು ಬಾವಲಿಗಳು ಮತ್ತು ಪಕ್ಷಿಗಳ ಮಲ ಮೂತ್ರದಿಂದ ಹಾನಿಗೊಂಡಿದೆ. ಇಂತಹ ಉದಾಹರಣೆಯನ್ನು ಇನ್ನೂ ಹೇಳಬಹುದು. ಕರ್ನಾಟಕದ ಬದಾಮಿಯಲ್ಲಿ ೩ನೇ ಗುಹೆಯ ಭಿತ್ತಿ ಚಿತ್ರಗಳು ನಾಶವಾಗಲು ಬಾವಲಿಗಳು ಪ್ರಮುಖ ಕಾರಣ. ಈಗಲೂ ಈ ಗುಹೆಯಲ್ಲಿ ಬಾವಲಿಗಳು ವಾಸವಾಗಿರುವುದನ್ನು ನೋಡಬಹುದು.

II. ಸ್ವಾಜಾತಿಯ ಹಕ್ಕಿಗಳಿಂದಾಗುವ ಆಪತ್ತು : ಸ್ವಾಲೋ ಜಾತಿಯ ಹಕ್ಕಿಗಳು ಕುಡಾ ಬಾವಲಿಗಳಂತೆ

ತಂಪು ಮತ್ತು ಕತ್ತಲು ಇರುವ ಪ್ರದೇಶಗಳಲ್ಲೇ ವಾಸಮಾಡುತ್ತವೆ. ಇಂತಹ ಹಕ್ಕಿಗಳು ಭಿತ್ತಿ ಚಿತ್ರಗಳಿರುವ ನೆಲೆಗಳಲ್ಲಿ ವಾಸಮಾಡಿದಾಗ ಚಿತ್ರಗಳಿಗೆ ಹಾನಿಸಂಭವಿಸುವುದನ್ನು[೧೩] ಕಂಡುಕೊಳ್ಳಲಾಗಿದೆ. ಈ ಹಕ್ಕಿಗಳ ತೊಂದರೆ ದಟ್ಟ ಅರಣ್ಯದಲ್ಲಿರುವ ಶಿಲಾಶ್ರಯ ಚಿತ್ರಗಳಿಗೆ ಹಚ್ಚು ಉಂಟಾಗುತ್ತದೆ ಎನ್ನಲಾಗಿದ್ದು, ಮಧ್ಯಭಾರತದ ಭೆಂಬಿಟ್ಕಾ, ರೈಜಿನ್, ಲಡಿಕಿ–ಕರಾರ್, ಸಾತಕುಂಡ, ಕಟೋತಿಗಳಂತಹ ಪ್ರದೇಶಗಳಲ್ಲಿ[೧೪] ಶಿಲಾಶ್ರಯ ಚಿತ್ರಗಳಿಗೆ ಈ ತೊಂದರೆ ಇದೆ ಎಂದು ತಿಳಿದು ಬರುವುದು.

III. ಗುಬ್ಬಿಗಳಿಂದಾಗುವ ಆಪತ್ತು : ಬಾವಲಿಗಳಂತಹ ಪಕ್ಷಿಗಳಿಂದಲ್ಲದೇ ಗುಬ್ಬಿಗಳಂತಹ ಪಕ್ಷಿಗಳಿಂದಲೂ ಭಿತ್ತಿ ಚಿತ್ರಗಳಿಗೆ ಹಾನಿ ಸಂಭವಿಸುತ್ತದೆ. ಭಿತ್ತಿ ಚಿತ್ರಗಳಿರುವ ಗೋಡೆಯಲ್ಲಿರಬಹುದಾದ ಮಾಡುಗಳಲ್ಲಿ, ಕಿಂಡಿಗಳಂತಹ ಅನುಕೂಲಕರ ಸ್ಥಳಗಳಲ್ಲಿ ಗುಬ್ಬಿಗಳು ಗೂಡುಕಟ್ಟಿ ವಾಸಮಾಡುತ್ತವಲ್ಲದೇ ಮಲ ಮೂತ್ರ ವಿಸರ್ಜಿಸಿ, ಚಿತ್ರಗಳ ನಾಶಕ್ಕೆ ಕಾರಣವಾಗುತ್ತವೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಬಿಳಿಗಿಯಲ್ಲಿನ ಬಾಳಗೊಂಡ ಸೀತಾರಾಮಚಂದ್ರ, ಬೇಡ್ಕಣಿ ಸೀತಾರಾಮಚಂದ್ರ ದೇವಾಲಯಗಳಲ್ಲಿ ಗರ್ಭಗೃಹದ ಮೇಲಿನ ಹಂಚಿನ ಛಾವಣಿಯ ಬುಡದಲ್ಲಿ ಗುಬ್ಬಿಗಳು ಗೂಡುಕಟ್ಟಿ ವಾಸಮಾಡುತ್ತಿದ್ದು, ಆ ಗೂಡುಗಳ ಬುಡದಲ್ಲೇ ಕಾವಿ ಭಿತ್ತಿ ಚಿತ್ರಗಳು ರಚನೆಯಾಗಿವೆ. ಇದರಿಂದ ಗುಬ್ಬಿಗಳು ವಿಸರ್ಜಿಸುವ ಮಲಮೂತ್ರವು ಚಿತ್ರಗಳ ಮೇಲೆ ಅಂಟಿಕೊಂಡಿದೆ. ಗುಬ್ಬಿಗಳ ಈ ರೀತಿಯ ತೊಂದರೆ ಹೆಚ್ಚಿನ ಭಿತ್ತಿ ಚಿತ್ರಗಳಲ್ಲಿ ಕಂಡುಬರುತ್ತದೆ.

೬. ಕ್ರಿಮಿಕೀಟಗಳಿಂದಾಗುವ ಆಪತ್ತು : ಮನುಷ್ಯರು, ಪ್ರಾಣಿಗಳಿಂದ ಭಿತ್ತಿ, ಚಿತ್ರಗಳಿಗೆ ಅಪಾಯ ಉಂಟಾಗದಂತೆ ಕೆಲವು ಕೀಟಗಳು ಮತ್ತು ಸೂಕ್ಷ್ಮಾಣು ಜೀವಿ ಕ್ರಿಮಿಕೀಟಗಳಿಂದಲೂ ಹಾನಿ ಸಂಭವಿಸುವುದನ್ನೂ ಗುರುತಿಸಬಹುದು. ಭಿತ್ತಿಚಿತ್ರಗಳಿಗೆ ಹಾನಿ ಮಾಡುವ ಕೀಟಗಳಲ್ಲಿ I.ಜೇನುಹುಳು, II. ಗೆದ್ದಲು III. ಬೆಳ್ಳಿಮೀನು (ಬಿಳಿಜಿರಳೆ) IV. ಕಣಜದ ಹುಳು V. ಜೇಡದ ಹುಳು VI. ಸೂಕ್ಷ್ಮಾಣು ಜೀವಿ ಶಿಲೀಂಧ್ರಗಳು ಪ್ರಮುಖವಾಗಿವೆ.

I. ಜೇನುಹುಳು : ಭಿತ್ತಿಚಿತ್ರಗಳು ರಚನೆಯಾಗಿರುವ ಗುಹೆ, ಶಿಲಾಶ್ರಯ, ಕಟ್ಟಡಗಳ ಮೇಲ್ಛಾವಣೆ ಕಂಬ, ಬೋದಿಗೆ, ಮಂಟಪ, ಮಾಡುಗಳಂತಹ ಸ್ಥಳದಲ್ಲಿ ಜೇನುಹುಳುಗಳು ಗೂಡುಕ್ಕಿ ವಾಸ ಮಾಡಿದಾಗ ಅಲ್ಲಿರುವ ಚಿತ್ರಗಳು ಅಪಾಯಕ್ಕೀಡಾಗುತ್ತವೆ. ಕೆಲವು ಸಲ ವಾತಾವರಣದಲ್ಲಿ ಉಷ್ಣತೆ ಹೆಚ್ಚಾದಾಗ ಜೇನುಹುಟ್ಟಿನಲ್ಲಿಯ ಮೇಣವು ಕರಗಿ ಚಿತ್ರಗಳ ಮೇಲೆ ಸೇರುವುದಲ್ಲದೇ ಅದರ ಮೇಲೆ ಧೂಳು ಕುಳಿತು ಮತ್ತಷ್ಟು ದಪ್ಪನಾದ ಧೂಳಿನಪದರ ನಿರ್ಮಾಣವಾಗುವುದು. ಜೇನುಹುಳುಗಳ ತೊಂದರೆ ಅರಣ್ಯ ಪ್ರದೇಶದಲ್ಲಿರುವ ಶಿಲಾಶ್ರಯ ಚಿತ್ರಗಳಿಗೆ ಹೆಚ್ಚಾದರೂ ಮಾನವ ನಿರ್ಮಿತ ಕಟ್ಟಡಗಳಲ್ಲಿ ರಚನೆಯಾದ ಶಿಷ್ಟಪರಂಪರೆಯ ಭಿತ್ತಿ ಚಿತ್ರಗಳಿಗೂ ಆಗಾಗಾ ಜೇನುಹುಳುಗಳಿಂದ ಹಾನಿಸಂಭವಿಸುತ್ತಿರುತ್ತದೆ.

II. ಗೆದ್ದಲುಗಳು : ಭಿತ್ತಿಚಿತ್ರಗಳಿಗೆ ಗೆದ್ದಲು ಹುಳುಗಳ ಕಾಟ ತೊಡಗಿಕೊಂಡರೆ ಬರೀ ಚಿತ್ರಗಳಲ್ಲದೇ ಚಿತ್ರ ರಚಿಸಿದ ಭಿತ್ತಿ ಆಧಾರವೇ ನಾಶವಾಗುತ್ತದೆ. ಗೆದ್ದಲು ಹುಳುಗಳು ಮರ

(ಕಟ್ಟಿಗೆ) ಮಣ್ಣು, ಎರಡೂ ಮಾಧ್ಯಮದ ಭಿತ್ತಿಚಿತ್ರಗಳಿಗೂ ಅಂಟಿಕೊಳ್ಳುತ್ತವೆ. ಈ ಹುಳುಗಳು ಇರುವೆಗಳ ಹೋಲಿಕೆಯಲ್ಲಿದ್ದು ಹಿಂಭಾಗದಲ್ಲಿ ಬೇರೆ ಆಕಾರದಿಂದ ಕೂಡಿರುತ್ತವೆ. ಇವು ಒಂದೇ ತೆರನಾಗಿರದೇ ಭಿನ್ನ ಭಿನ್ನ ರೂಪಗಳಲ್ಲಿರುವುದೂ ಕಂಡುಬರುವುದು. ಗೆದ್ದಲು ಹುಳುಗಳು ತಾವು ವಾಸಮಾಡುವ ಸ್ತವನ್ನು ಕೊರೆದು ಪಡಿ ಮಾಡುತ್ತವೆ. ಸ್ವಲ್ಪ ತೇವ ವಾತಾವರಣ ನಿರ್ಮಾಣವಾದರೆ ಈ ಕೀಟಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಿಡಾರ ಹೂಡುತ್ತವೆ. ಹಳಿಯಾಳ ಸಮೀಪದ ಬಿ.ಕೆ.ಹಳ್ಳಿಯ ಭಿತಿ ್ತಚಿತ್ರಗಳು, ದರಿಯಾ ದೌಲತ್ ಅರಮನೆಯ ಭಿತ್ತಿ ಚಿತ್ರಗಳು, ಕೆರೆಗೋಡಿ ಮತ್ತು ರಂಗಾಪುರದ ಭಿತ್ತಿ ಚಿತ್ರಗಳು, ತೇರುಮಲ್ಲೇಶ್ವರದ ಭಿತ್ತಿ ಚಿತ್ರಗಳು, ನಾಲ್ಕುನಾಡು ಅರಮನೆಯ ಭಿತ್ತಿ ಚಿತ್ರಗಳು ಗೆದ್ದಿಲು ಹುಳುಗಳಿಗೆ ತುತ್ತಾಗಿ ಕೆಲವು ಚಿತ್ರಗಳು ಸಂಪೂರ್ಣವಾಗಿ ನಾಶವಾಗಿರುತ್ತವೆ.

ಭಿತ್ತಿ ನಿರ್ಮಾಣದಲ್ಲಿ ಆಕಳ ಸೆಗಣಿ, ಹೊಟ್ಟು ಸಸ್ಯಜನ್ಯ ಅಂಟುಗಳಂತಹ ಸಾರಜನಕ ವಸ್ತುಗಳು ಉಪಯೋಗಿಸಲಪಟ್ಟಾಗ ಅವುಗಳು ಇಂತಹ ಕೀಟಗಳ ಆಹಾರವಾಗಿ ಅವುಗಳ ಹಾವಳಿ ಹೆಚ್ಚಾಗುತ್ತದೆ[೧೫] ಎನ್ನಲಾಗಿದೆ. ಈ ಜಿರಳೆಯಂತಹ ಕೀಟಗಳು ವರ್ಣವನ್ನು ತಿಂದುಹಾಕುತ್ತವಲ್ಲದೆ ಭಿತ್ತಿಯನ್ನು ಕೊರೆದು ಹಾಕಿ ಪುಡಿಪುಡಿ ಮಾಡಿ ಅದರಲ್ಲಿರುವ ಸಾರಜನಕ ವಸ್ತುವನ್ನು ತಿನ್ನಲು ತೊಡಗುತ್ತವೆ. ಇದರಿಂದ ಕೆಲವು ಕಡೆ ವರ್ಣವು ಕಿತ್ತು ಹೋದಂತೆ ಹಿನ್ನೆಲೆ ಭಿತ್ತಿಯು ಗೋಚರಿಸಿದರೆ, ಕೆಲವುಭಾಗದಲ್ಲಿ ವರ್ಣದ ಜೊತೆಗೆ ಭಿತ್ತಿಯೇ ಕೆಳಗುದುರಿ ಪುಡಿಪುಡಿಯಾಗಿ ಬಿದ್ದಿರುತ್ತದೆ.

IV. ಕಣಜದ ಹುಳು : ಕಣಜದ ಹುಳು ಎಂಬ ಒಂದು ರೀತಿಯ ಕಿಟವು ಭಿತ್ತಿಚಿತ್ರಗಳ ಮೇಲೆ ಗೂಡುಕಟ್ಟಿ ವಾಸಮಾಡುವುದರಿಂದ ಚಿತ್ರಗಳಿಗೆ ಹಾನಿ ಸಂಭವಿಸುತ್ತದೆ. ಈ ಪ್ರಕಾರದ ಕೀಟಗಳು ಮಣ್ಣು ಉಪಯೋಗಿಸಿ ಗೂಡುಕಟ್ಟುತ್ತವಲ್ಲದೇ ಆ ಗೂಡುಗಳಿಗೆ ನೀರಿನ ಸಂಪರ್ಕ ಉಂಟಾದಾಗ ಮಣ್ಣು ಕರಗಿ ಚಿತ್ರಗಳ ಮೇಲೆಲ್ಲ ವ್ಯಾಪಿಸುವುದು. ಈ ರೀತಿ ಕೀಟಗಳು ಭಿತ್ತಿಚಿತ್ರಗಳ ಮೇಲೆ ಗೂಡು ಕಟ್ಟಿರುವುದನ್ನು ಅಲ್ಲಲ್ಲಿ ನೋಡಬಹುದು. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಪರ್ತಗಾಳಿಮಠ ಸಿದ್ದಾಪುರ ತಾಲೂಕಿನ ಬಿಳಗಿಯ ಬೇಡ್ಕಣಿ ಸೀತಾರಾಮಚಂದ್ರ ದೇವಾಲಯ, ಪಕ್ಕದಲ್ಲಿರುವ ತಿಮ್ಮಣ್ಣ ಪೈಬುದರ ಮನೆಯ ಭಿತ್ತಿ ಚಿತ್ರಗಳ ಮೇಲೆ ಈ ಬಗೆಯ ಕೀಟವು ಗೂಡುಕಟ್ಟಿದ್ದನ್ನು ನೋಡಬಹುದಾಗಿದೆ.

V. ಜೇಡದ ಹುಳು : ನಿರ್ವಾಸಿತ ಪ್ರದೇಶದಲ್ಲಿ ಸಾಮಾನ್ಯವಾಗಿಸುವ ಕೀಟ ಜೇಡ. ಇದು ತನ್ನ ಜೊಲ್ಲಿನಿಂದಲೇ ಬಲೆ ಕಟ್ಟುವುದಲ್ಲದೇ ಅದು ಕಟ್ಟಿದ ಬಲೆಯಲ್ಲಿ ಅನೇಕ ಸೂಕ್ಷ್ಮ ಕೀಟಗಳು ಸಿಕ್ಕಿಕೊಳ್ಳುವುದು ಸಾಮಾನ್ಯ ಸಂಗತಿ. ಜೇಡದ ಹುಳುವಿನ ಮಲ ಮೂತ್ರವಲ್ಲದೇ ಅದರ ಬಲೆಯಲ್ಲಿ ಸಿಕ್ಕಿಕೊಂಡ ಇತರ ಕೀಟಗಳ ತ್ಯಾಜ್ಯವಸ್ತುಗಳೂ ಭಿತ್ತಿ ಚಿತ್ರಗಳ ಮೇಲೆ ಪರಿಣಾಮ ಉಂಟುಮಾಡುತ್ತವೆ. ಜೇಡವು ಬಲೆಕಟ್ಟಿ ವಾಸಿಸವುದು ಹೆಚ್ಚಿನ ಭಿತ್ತಿ ಚಿತ್ರಗಳಲ್ಲಿ ಕಂಡುಬರುವುದು.

ಅದರಲ್ಲೂ ವಸತಿ ಇತರ ಕೋಣೆಗಳಲ್ಲಿ ಈ ತೊಂದರೆ ಹೆಚ್ಚು.

VI. ಸೂಕ್ಷ್ಮಾಣು ಜೀವಿ ಶಿಲೀಂಧ್ರಗಳು : ಪ್ರಾಚೀನ ದೇವಾಲಯಗಳ ಕಲ್ಲಿನ ಕೆತ್ತನೆ ಮೇಲೆ ಕೆಲವು ಸೂಕ್ಷ್ಮಾಣು ಜೀವಿ ಶಿಲೀಂಧ್ರಗಳು ವಾಸಮಾಡಿ ತಾವು ಬಿಡಗಡೆಗೊಳಿಸುವ ಗಂಧಕಾಮ್ಲದಿಂದ ಶಿಲ್ಪಗಣ್ನು ಪದರ ಪದರವಾಗಿ ನಾಶಗೊಳಿಸುತ್ತದೆ ಎನ್ನಲಾಗಿದ್ದು ಅದೇ ಪ್ರಕಾರ ಭಿತ್ತಿ ಚಿತ್ರಗಳ ಮೇಲೂ ಸೂಕ್ಷ್ಮಾಣು ಜೀವಿಗಳು ವಾಸಮಾಡಿ ಚಿತ್ರಗಳಿಗೆ ಹಾನಿಮಾಡುತ್ತವೆ. ಅಜಂತಾ ಭಿತ್ತಿ ಚಿತ್ರಗಳ ಮೇಲೆ ಇಂತಹ ಸೂಕ್ಷ್ಮಾಣುಜೀವಿಗಳು ವಾಸಮಾಡುತ್ತಿರುವುದನ್ನು[೧೬] ಗುರುತಿಸಲಾಗಿದೆ. ಸೂಕ್ಷ್ಮಾಣುಜೀವಿಗಳ ದಾಳಿಯಿಂದ ಶಿಲ್ಪಗಳು ಪದರ ಪದರವಾಗಿ ಉದುರಿ ನಾಶವಾದರೆ. ಭಿತ್ತಿ ಚಿತ್ರಗಳು ಭಿತ್ತಿ ಸಮೇತವಾಗಿ ಪುಡಿಪುಡಿ ಯಾಗಿ ಉದುರುತ್ತವೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಪರ್ತಗಾಳಿ ಮಠದ ಕಾವಿಭಿತ್ತಿ ಚಿತ್ರಗಳಲ್ಲಿ ವರ್ಣ ಮತ್ತು ಭಿತ್ತಿಯು ಪುಡಿಯಾಗಿ ಕೆಳಗುದುರಿ ಬೀಳುತ್ತಿರುವುದು ಸೂಕ್ಷ್ಮಾಣು ಜೀವಿಗಳ ದಾಳಿಯಿಂದಲೇ ಎನ್ನಬಹುದು. ಭಿತ್ತಿಚಿತ್ರಗಳ ಮೇಲೆ ತೇವ ಹೆಚ್ಚಾದಾಗ ಕೆಲವು ಬ್ಯಾಕ್ಟೀರಿಯಾ ರೂಪದ ಸೂಕ್ಷ್ಮಾಣು ಜೀವಿಗಳು ವಾಸಮಾಡುವುದರಿಂದ ಹಸಿರು ಹಳದಿ ಮಿಶ್ರಿತ ಪಾಚಿಯು ಬೆಳೆಯುವುದನ್ನು ಈ ಹಿಂದೆ ಹೇಳಿದೆ. ಈ ತೊಂದರೆ ತಂಪು ಹೆಚ್ಚಾಗಿರುವ ಕರಾವಳಿ ಪ್ರದೇಶದ ಕಾವಿ ಭಿತ್ತಿ ಚಿತ್ರಗಳಲ್ಲಿ ಹೆಚ್ಚಾಗಿ ಕಂಡುಬರುವುದು. ಇದುವರೆಗೂ ಚರ್ಚಿಸಲಾದ ವಿವಿಧ ರೀತಿಯ ವಿಪತ್ತುಗಳಿಗೊಳಗಾದ ಭಿತ್ತಿ ಚಿತ್ರಗಳನ್ನು ಹಲವು ವಿಧಾನಗಳಿಂದ ಸಂರಕ್ಷಿಸಬಹುದಾಗಿದೆ. ಪ್ರಾಚೀನರು ಭಿತ್ತಿ ಚಿತ್ರಗಳು ಅಳಿದು ಹೋಗದಂತೆ ತಮ್ಮದೇ ಆದ ವಿಧಾನಗಳಿಂದ ಸಂಸ್ಕಾರಗೊಳಿಸುತ್ತಿದ್ದುದೂ ತಿಳಿದುಬರುವುದು. ಪ್ರಾಚೀನ ಭಿತ್ತಿ ಚಿತ್ರಗಳನ್ನು ಹೇಗೆ ಸಂರಕ್ಷಿಸಬಹುದು ಎನ್ನುವ ಕ್ರಮಗಳನ್ನು ಕುರಿತು ಚರ್ಚಿಸುವುದು ಅವಶ್ಯವೆನಿಸುವ ಅಂಶವಾಗಿದೆ.

ಭಿತ್ತಿ ಚಿತ್ರಕಲೆಯ ಸಂರಕ್ಷಣೋಪಾಯಗಳು

೧. ನೇರ ಕ್ರಮಗಳು

I. ಪುನಃ ರೂಪಿಸುವುದು

II. ಪ್ರತಿಮಾಡುವುದು

III. ನಕಲು ಮಾಡುವುದು

IV. ಛಾಯಾಚಿತ್ರಣ ಮಾಡುವುದು

V. ಸ್ಲೈಡ್ಸ್ ಮಾಡುವುದು

VI. ವಿಡಿಯೋ ಚಿತ್ರೀಕರಣ ಮಾಡುವುದು

VII. ಮೈಕ್ರೋಫಿಲಂನಲ್ಲಿ ಅಳವಡಿಸುವುದು

೨. ಪೂರಕ ಕ್ರಮಗಳು

I. ಪುಸ್ತಕಗಳಲ್ಲಿ ಭಿತ್ತಿಚಿತ್ರಗಳನ್ನು ಮುದ್ರಿಸುವುದು

II. ಅಲಂಕಾರಿಕ ವಾಣಿಜ್ಯ ವಸ್ತುಗಳಲ್ಲಿ ಭಿತ್ತಿಚಿತ್ರಗಳನ್ನು ರೂಪಿಸುವುದು

ಭಿತ್ತಿ ಚಿತ್ರಕಲೆಯ ಸಂರಕ್ಷಣೆ :

ನೂರಾರು ಸಾವಿರಾರು ವರ್ಷಗಳ ಹಿಂದೆ ರಚಿಸಿದ, ಶಿಥಿಲಗೊಂಡ ಅಥವಾ ಬಹುತೇಕ ವಿನಾಶಕ್ಕೀಡಾದ ಚಿತ್ರ, ಶಿಲ್ಪ, ಮೊದಲಾದ ಕಲಾಕೃತಿಗಳನ್ನು ಇನ್ನೂ ಅನೇಕ ತಲೆಮಾರುಗಳ ಕಾಲ ಉಳಿಸಿ ಕಾಪಾಡುವವರಾದರೂ ಹೇಗೆನ್ನುವ ಪ್ರಶ್ನೆ ಇಂದು ನಿನ್ನೆಯದಾಗಿರನೇ ಅನೇಕ ವರ್ಷಗಳಿಂದಲೂ ಕಾಡುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಈ ಶತಮಾನದ ಮೊದಲಿಂದಾಗಿ ತೀವ್ರ ಮುನ್ನಡೆ ಕಲಾ ಪ್ರಪಂಚದಲ್ಲೂ ತನ್ನ ಪ್ರಭಾವ ಬೀರಿ ಈ ಪ್ರಶ್ನೆಗೆ ಸ್ವಲ್ಪಮಟ್ಟಿನ ಉತ್ತರವನ್ನೊದಗಿಸಿದೆ. ಕಲಾಕೃತಿಯೊಂದರ ಮೇಲಾಗಿರುವ ವಿರೂಪವನ್ನು ವೈಜ್ಞಾನಿಕ ವಿಧಾನಗಳಿಂದ ಹೋಗಲಾಡಿಸಿ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಮೂಲತಃ ಇದ್ದ ಸ್ಥಿತಿಗೆ ಸಮೀಪ ತರುವ ತಂತ್ರ ಕೆಲವು ರಾಸಾಯನಿಕಗಳ ಮೂಲಕ ಸಾಧ್ಯವಾಗುತ್ತದೆ[೨೭] ಎಂದು ತಿಳಿದುಬರುತ್ತದೆ. ಆದರೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿದಾಗ್ಯೂ ಹೊಸ ಹೊಸ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಕಲಾಕೃತಿಗಳನ್ನು ಸಂರಕ್ಷಣೆಗೊಳಪಡಿಸಿದಾಗಲೂ ಅವು ಅತಿಹೆಚ್ಚು ದಿನಗಳವರೆಗೆ ಬಾಳಿಕೆ ಬರುತ್ತದೆ ಎಂದು ಹೇಳುವಂತಿಲ್ಲ. ಕೆಲವು ದಿನಗಳಲ್ಲೇ ಮತ್ತೆ ವಿವಿಧ ಬಗೆಯ ಆಪತ್ತಿಗಳಿಗೀಡಾಗಿ ಶಿಥಿಲವಾಗುತ್ತ ಸಾಗುತ್ತದೆ. ಆದುದರಿಂದ ಪ್ರಾಚೀನ ಕಲಾಕೃತಿಗಳು ಹೆಚ್ಚು ದಿನ ಬಾಳಿಕೆ ಬರುವಂತಾಗಲು ಅವುಗಳ ಸಂರಕ್ಷಣಾ ವಿಧಾನಗಳಲ್ಲಿ ಇನ್ನೂ ಹೊಸ ಹೊಸ ಸಂಶೋಧನೆಗಳಾಗಬೇಕಿದೆ. ಈ ದಿಸೆಯಲ್ಲಿ ಪ್ರಾಚೀನರು ಕಲಾಕೃತಿಗಳ ಸಂರಕ್ಷಣೆಯಲ್ಲಿ ಅನುಸರಿಸುತ್ತಿದ್ದ ಕ್ರಮಗಳತ್ತ ನಾವು ಮತ್ತೆ ಹಿಂತಿರುಗಿ ನೋಡಬೇಕಿದೆ. ಅಜಂತಾ ಮತ್ತಿತರ ಗುಹೆಗಳ ಭಿತ್ತಿ ಸೂರುಗಳಲ್ಲಿ ಕೆಂಪು, ಕೆಂಗಾವಿ, ಬಿಳುಪು ಮತ್ತು ಕಪ್ಪು ಲೇಪಗಳು ಇಂದಿಗೂ ಪ್ರಖರವಾಗಿ ಉಳಿದಿರುವುದಕ್ಕೆ ಅವುಗಳಲ್ಲಿಯ ಪ್ರಕೃತಿ ಸಹಜ ಕ್ರಿಮಿನಾಶಕ ಗುಣಗಳಿಂದ[೨೮] ಎನ್ನಲಾಗುತ್ತದೆ. ಅದೇ ರೀತಿ ಕೆಂಗಾವಿಯನ್ನು ಲೇಪಿಸುರುವುದು ಹಂಪೆಯ ವಿರೂಪಾಕ್ಷ ದೇವಾಲಯದಲ್ಲೂ ಕಾಣಬಹುದು. ಇಲ್ಲಿನ ಕಂಬಗಳು, ಗೋಡೆ, ಮೇಲ್ಛಾವಣಿ ಎಲ್ಲ ಕಡೆಗೂ ಕೆಂಗಾವಿಲೇಪನವಿದೆ. ಹಾಗೇ ಬಾದಾಮಿಯ ಗುಹಾಲಯಗಳಲ್ಲೂ ಶಿಲ್ಪಗಳಿಗೆ ಛತ್ತುಗೋಡೆಗಳಿಗೆ ಇನ್ನೂ ಅನೇಕ ಪ್ರಾಚೀನ ದೇವಾಲಯಗಳಲ್ಲಿ ಕೆಂಗಾವಿಯಂತೆ ಕಪ್ಪು, ಬಿಳಿ ಲೇಪನವಿರುವುದನ್ನು ನೋಡಬಹುದು. ಪ್ರಾಚೀನರು ಈ ಲೇಪನಗಳನ್ನು ಸೌಂದರ್ಯದ ಜೊತೆಗೆ ಸಂರಕ್ಷಣೆಯ ದೃಷ್ಟಿಯಿಂದಲೂ ಲೇಪಿಸುತ್ತಿರಬಹುದು ಎನಿಸುತ್ತದೆ. ಸೂಕ್ಷ್ಮಾಣುಜೀವಿ ಶಿಲೀಂಧ್ರಗಳ ದಾಳಿಯಿಂದ ಶಿಲ್ಪಗಳು ನಾಶವಾಗದೇ ಇರಲಿ ಎನ್ನುವ ಕಾರಣಕ್ಕಾಗಿ ಲೇಪಿಸುತ್ತಿರಬಹುದು. ಹಾಗೇ ಪ್ರಾಚೀನರು ಭಿತ್ತಿ ಚಿತ್ರರಚನೆಯ ನಂತರ ಅವುಗಳು ಹೆಚ್ಚು ಕಾಲ ಉಳಿದುಬರಲು ತಮ್ಮದೇ ಆದ ವಿಧಾನಗಳನ್ನು ಅನುಸರಿಸುತ್ತಿದ್ದರು ಚಿತ್ರರಚನೆಯ ನಂತರ ಚಿತ್ರದ ಮೇಲೆ ರಕ್ಷಣೆಗಾಗಿ 'ರಾಳ' (dammar) ಮರದಂಟು[೨೯] ಮತ್ತು ಹರಿದಳ. ದೇವದಾರು ಮರದ ಎಣ್ಣೆ. ಪಟಕದ ಹರಳು[೩೦] ಗಳಂತಹ ವಿವಿಧ ವಸ್ತುಗಳಿಂದ ಸಂಸ್ಕಾರ ಮಾಡುತ್ತಿದ್ದರೆಂದು ತಿಳಿದು ಬರುವುದು. ಇವು

ಕಾಲಕ್ರಮೇಣ ಹಳದಿ ಇಲ್ಲವೇ ದಟ್ಟ ಕಂದು ಬಣ್ಣಕ್ಕೆ ತಿರುಗಿದರೂ ಅವುಗಳಲ್ಲಿರುವ ಕ್ರಿಮಿನಾಶಕಗುಣಗಳಿಂದ ಸೂಕ್ಷ್ಮಾಣುಜೀವಿಗಳ ದಾಳಿಯಿಂದ ಹೆಚ್ಚಿನ ಸಮಯದವರೆಗೆ ಚಿತ್ರಗಳನ್ನು ರಕ್ಷಿಸುತ್ತಿದ್ದವೆನ್ನುವುದೂ ಸತ್ಯಸಂಗತಿ. ಆದುದರಿಂದ ಪ್ರಾಚೀಲರು ಶಿಲ್ಪಗಳಿಗೆ ಲೇಪಿಸುತ್ತಿದ್ದ ಕೆಂಗಾವಿಯಂತಹ ಲೇಪನಗಳು, ಭಿತ್ತಿಚಿತ್ರಗಳಿಗೆ ಲೇಸುತ್ತಿದ್ದ ವಿವಿಧ ದ್ರಾವಕಗಳ ಬಗೆಗೆ ಹೆಚ್ಚಿನ ವೈಜ್ಞಾನಿಕ ಸಂಶೋಧನೆ ನಡೆಯಬೇಕಾಗಿದೆ ಎನ್ನುವ ಮಾತನ್ನು ಹೇಳಿ ಭಿತ್ತಿ ಚಿತ್ರಕಲೆಯ ಸಂರಕ್ಷಣೆಯ ಕ್ರಮಗಳನ್ನು ನೋಡಬಹುದು. ಇಲ್ಲಿ ಭಿತ್ತಿ ಚಿತ್ರಗಳ ಸಂರಕ್ಷಣೆಯಲ್ಲಿ ಅನುಸರಿಸುವ ವೈಜ್ಞಾನಿಕ ವಿಧಾನಗಳನ್ನು ಕುರಿತು ವಿವರಣೆ ನೀಡದೆ ಭಿತ್ತಿ ಚಿತ್ರಗಳ ಸಂರಕ್ಷಣೆಯಲ್ಲಿ ಕೈಗೊಳ್ಳಬಹುದಾದ ಕ್ರಮಗಳನ್ನು ಸೂಚಿಸಲಾಗಿದೆ.

ಭಿತ್ತಿ ಚಿತ್ರಗಳ ಸಂರಕ್ಷಣೆಯಲ್ಲಿ ಕೈಗೊಳ್ಳಬಹುದಾದ ಕ್ರಮಗಳನ್ನು ನೇರಕ್ರಮಗಳು, ಪೂರಕಕ್ರಮಗಳೆಂದು ಎರಡು ಭಾಗಗಳಲ್ಲಿ ವರ್ಗೀಕರಿಸಿಕೊಂಡು ವಿವರಿಸಬಹುದು. ನೇರಕ್ರಮಗಳಲ್ಲಿ, ಭಿತ್ತಿ ಚಿತ್ರಗಳನ್ನು ವಿವಿಧ ವಿಧಾನಗಳಿಂದ ಸಂರಕ್ಷಣೆಗೊಳಿಸಿ ಕಾಯ್ದಿಡುವುದಾದರೆ, ಪೂರಕ ಕ್ರಮಗಳಲ್ಲಿ ಭಿತ್ತಿ ಚಿತ್ರಗಳನ್ನು ಮತ್ತೊಂದು ಮಾಧ್ಯಮದ ಮೂಲಕ ಉಳಿಸಿಕೊಳ್ಳುವುದಾಗಿದೆ.

೧. **ನೇರ ಕ್ರಮಗಳು** : ನೇರ ಕ್ರಮಗಳಲ್ಲಿ ಮತ್ತೆ ಉಪವಿಭಾಗಗಳನ್ನು ಹೀಗೆ ಮಾಡಬಹುದು.

I. ಪುನಃ ರೂಪಿಸುವುದು

II. ಪ್ರತಿಮಾಡುವುದು

III. ನಕಲು ಮಾಡುವುದು

IV. ಛಾಯಾಚಿತ್ರಣ ಮಾಡುವುದು

V. ಸ್ಲೈಡ್ಸ್ ಮಾಡುವುದು

VI. ವಿಡಿಯೋ ಚಿತ್ರೀಕರಣ ಮಾಡುವುದು

VII. ಮೈಕ್ರೋಫಿಲಂನಲ್ಲಿ ಅಳವಡಿಸುವುದು

I. ಪುನಃ ರೂಪಿಸುವುದು : ಭಿತ್ತಿ ಚಿತ್ರಗಳ ಸಂರಕ್ಷಣೆಯ ನೇರಕ್ರಮಗಳಲ್ಲಿ ಹಾಳಾದ ಭಿತ್ತಿ ಚಿತ್ರಗಳನ್ನು ಪುನಃರೂಪಿಸುವುದೂ ಒಂದು ಎನ್ನಬಹುದು. ಪುನಃ ರೂಪಿಸುವ ಮೊದಲ ಹಂತವಾಗಿ ಭಿತ್ತಿ ಚಿತ್ರಗಳ ಮೇಲೆ ಆವರಿಸಿರುವ ಧೂಳನ್ನು ನವಿರಾದ ಕುಂಚದಿಂದ ತೆಗೆದು ಸ್ವಚ್ಛಗೊಳಿಸಬೇಕು. ಆಮೇಲೆ ಚಿತ್ರಕ್ಕೆ ಅಂಟಿರುವ ಕಾಡಿಗೆ, ಜಿಡ್ಡು ಹಾಗೂ ಇತರರೆ ಕಲೆಗಳಲ್ಲದೇ ಚಿತ್ರದ ಮೇಲೆ ಲೇಪಿಸಿರಬಹುದಾದ ಹಳೆಯ ಲೇಪನಗಳನ್ನು ಯೋಗ್ಯ ರಾಸಾಯನಿಕ ದ್ರವ್ಯಗಳನ್ನು ಬಳಸಿ ತೆಗೆಯಬೇಕು[೨೧] ಈ ರೀತಿ ಸ್ವಚ್ಛಗೊಳಿಸುವಾಗ ಚಿತ್ರಗಳಿಗೆ ಹಾನಿಯಾಗದಂತೆ ಎಚ್ಚರ ವಹಿಸಬೇಕಾದುದು ಅತ್ಯವಶ್ಯ. ಈ ರೀತಿ ಸ್ವಚ್ಛಗೊಳಿಸುವಾಗ ಈ ಮೊದಲೇ ಆ ಚಿತ್ರ ಸಂರಕ್ಷಣೆಗೊಳಗಾಗಿದ್ದರೆ ಸಂರಕ್ಷಣೆಯ ಸಮಯದಲ್ಲಿ ತುಂಬಲಾದ ಭಿತ್ತಿಯ ಸತ್ವಕಳೆದುಕೊಂಡ ಭಾಗ. ಅಲ್ಲಲ್ಲಿ ಲೇಪಿಸಿದ ಬಣ್ಣ ಮತ್ತು ಚಿತ್ರಣ ಮಾಡಿದ ಹೊಂದಾಣಿಕೆಯಾಗದ ಅಂಶವನ್ನೂ

ತೊಳೆದು ತೆಗೆಯಬೇಕಾಗುವುದು. ಇವುಗಳನ್ನು ಸಹಿತ ಸೂಕ್ತ ರಾಸಾಯನಿಕಗಳಿಂದ ತೊಳೆದು ತೆಗೆದ ನಂತರ ಮುಂದಿನ ಹಂತವಾಗಿ ಹಾನಿಗೊಳಗಾದ ಭಾಗವನ್ನು ಪುನಃ ರೂಪಿಸುತ್ತ ಸಾಗಬೇಕು.[೨೨] ಎಂಬ ವಿವರಗಳು ಸಿಗುತ್ತವೆ. ಅಲ್ಲಲ್ಲಿ ಉದುರಿದ, ಕಳಚಿಬಿದ್ದ, ಇಲ್ಲವೇ ಕೀಟಗಳ ಧಾಳಿಯಿಂದ ಉಂಟಾದ ಕುಳಿಗಳ ಭಾಗವನ್ನು ಪ್ಯಾರೇಥರ್ಮ (Pytethrum) ದ್ರಾವಣದಿಂದ ಉಪಚರಿಸಬೇಕು.

ಭಿತ್ತಿಯ ನಾಶವಾದ ಭಾಗವನ್ನು ಹೀಗೆ ಪ್ಯಾರೇಥರ್ಮ ದ್ರಾವಣದಿಂದ ಉಪಚರಿಸುವುದರಿಂದ ಕೀಟಗಳ ಚಟುವಟಿಕೆಯನ್ನು ತಕ್ಕಮಟ್ಟಿಗೆ ಹತೋಟಿಯಲ್ಲಿಡಬಹುದೆಂದು[೨೩] ಹೇಳಲಾಗುತ್ತದೆ. ಹೀಗೆ ಉಪಚರಿಸಿದ ನಂತರ ಹಾಳಾದ ಕಡೆಯಲ್ಲೆಲ್ಲ ಮೂಲಭಿತ್ತಿಗೆ ಹೊಂದಾಣಿಕೆಯಾಗುವ ಗಾರೆಯ ಮಿಶ್ರಣವನ್ನು ತುಂಬಬೇಕು. ಈ ಗಾರೆ ಮಿಶ್ರಣ ಆರಿದ ನಂತರ ಭಿತ್ತಿ ಚಿತ್ರದ ಹಿನ್ನೆಲೆ ವರ್ಣವನ್ನು ನೋಡಿಕೊಂಡು ಸರಿಹೊಂದುವ ಹಿನ್ನೆಲೆ ಲೇಪನವನ್ನು ಹೊಸದಾಗಿ ಗಾರೆತುಂಬಿದ ಸ್ಥಳಗಳಿಗೆ ಲೇಪಿಸಬೇಕೆಂದು[೨೪] ತಿಳಿದುಬರುವುದು. ಮುಂದಿನ ಹಂತವಾಗಿ ವರ್ಣವು ಉದುರಿಹೋದ ಕಡೆ, ಮತ್ತು ಹೊಸದಾಗಿ ಭಿತ್ತಿ ಲೇಪನ ಮಾಡಿದ ಕಡೆ ಮೂಲಚಿತ್ರದ ವರ್ಣಗಳಿಗೆ ಚ್ಯುತಿಬಾರದಂತೆ ಯೋಗ್ಯವರ್ಣ ವನ್ನು ತುಂಬಬೇಕು. ಈ ನಡುವೆ ಭಿತ್ತಿಯಾ ಗಾರೆ ಲೇಪನ ಮಾಡಲು ಮತ್ತು ಹಿನ್ನೆಲೆ ವರ್ಣಲೇಪಿಸಲು ಯೋಗ್ಯ ಅಂಟುದ್ರಾವಕವನ್ನು ಬಳಸಬೇಕಾಗುವುದು. ಇದಕ್ಕಾಗಿ ಪ್ರಾಚೀನ ಪದ್ಧತಿಯ ಅಂಟುದ್ರಾವಕಗಳನ್ನು ಬಳಸದೇ ಹೊಸದಾಗಿ ಸಂಶೋಧಿಸಿದ ಅಂಟುದ್ರಾವಕಗಳನ್ನು ಬಳಸಬೇಕು[೨೫] ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ.

ಸಾಂಪ್ರದಾಯಿಕ ಪದ್ಧತಿಯ ಅಂಟುದ್ರಾವಕಗಳನ್ನು ಬಳಸಿದಾಗ ಕೆಲವು ತೊಂದರೆಗಳು ಮುಂದೆ ಕಾಣಿಸಿಕೊಳ್ಳುತ್ತದೆ. ಸಾಂಪ್ರದಾಯಿಕ ಅಂಟುಮಾಧ್ಯಮವಾದ ಮೇಣವನ್ನು ಭಿತ್ತಿ ಚಿತ್ರಗಳ ರಚನಾ ಸಂದರ್ಭದಲ್ಲಿ ಬಳಸಿದಾಗ ಮುಂದಿನ ದಿನಗಳಲ್ಲಿ ಚಿತ್ರಗಳ ವರ್ಣವು ಆಂತರಿಕವಾಗಿ ಸತ್ವ ಕಳೆದುಕೊಂಡು ಮಸುಕಾಗಿ, ಶಕ್ತಿಹೀನವಾಗಿ ಬೇಗನೆ ಉದುರುವುದು. ಅಲ್ಲದೇ ಭಾರತದಂತಹ ಉಷ್ಣವಾತಾವರಣವಿರುವ ಪ್ರದೇಶದಲ್ಲಿ ಮೇಣವನ್ನು ಅಂಟು ಮಾಧ್ಯಮವಾಗಿ ಬಳಸಿದಾಗ ಉಷ್ಣತೆಯ ಪ್ರಭಾವದಿಂದ ಮೇಣವು ಕರಗಿ ಭಿತ್ತಿಯ ಸೂಕ್ಷ್ಮ ರಂಧ್ರಗಳಲ್ಲಿ ಇಳಿದು ಮುಂದಿನ ದಿನಗಳಲ್ಲಿ ಸ್ವಚ್ಛಗೊಳಿಸಲು ಸುಲಭವಾಗಿ ಬರಲಾರದು. ಹಾಗೇ ಪ್ರಾಣಿಗಳ ಮೂಲದ ವಜ್ರಸರಿ. ಸಸ್ಯಮೂಲದ ಅಂಟುಗಳನ್ನು ಬಳಸಿದಾಗ ಇವುಗಳಲ್ಲಿರುವ ಸಾರಜನಕ ಪದಾರ್ಥವು ಕಿಟಗಳಿಗೆ ಆಹಾರವಾಗಿ ಭಿತ್ತಿ ಚಿತ್ರಗಳು ಬೇಗನೇ ಹಾಳಾಗುತ್ತವೆ. ಅಲ್ಲದೇ ತೇವಾಂಶ ಮತ್ತು ಉಷ್ಣಾಂಶದ ಏರುಪೇರಿನಿಂದ ಚಿತ್ರಗಳ ವರ್ಣವು ಚಕ್ಕಳೆಯಾಗಿ ಉದುರಿ ಹೋಗುವ ಸಾಧ್ಯತೆಯೂ ಇದೆ[೨೬] ಎನ್ನುವಂತಹ ಎಚ್ಚರಿಕೆಗಳನ್ನು ಪ್ರಾಚೀನ ಅಂಟುದ್ರಾವಕಗಳನ್ನು ಬಳಸುವಲ್ಲಿ ನೀಡಲಾಗಿದೆ. ಅದಕ್ಕಾಗಿ ಭಿತ್ತಿ ಚಿತ್ರಗಳನ್ನು ಪುನಃ ರೂಪಿಸುವ ಸಂದರ್ಭದಲ್ಲಿ ಈ ಪ್ರಾಚೀನ ಅಂಟುದ್ರಾವಕಗಳ ಬದಲಿಗೆ ಹೊಸದಾಗಿ ಸಂಶೋಧಿಸಲಾದ 'ಸಿಂಥೆಟಿಕ್ ಅಕ್ರಾಲಿಕ್ ಪಾಲಿಮರ್' (Synthetic

Acrelie Polymer), ಪಾಲಿವಿನ್ನೈಲ್ ಅಸಿಟೇಟ್ (olyvinnyl Accetate) ಕೇಟೋನ್ ಗೊಂದು (Ketone resiņ) ವಿವಿಧ ಬಗೆಯ 'ಅಕ್ರಾಲಿಕ್ಸ್'ಗಳನ್ನು ಆಯಾ ಮಾಧ್ಯಮವಾಗಿ ಬಳಸಬೇಕೆಂದು[೨೭] ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹೀಗೆ ಯೋಗ್ಯ ಮಾಧ್ಯಮ ಬಳಸಿ ಗಾರೆ ಮಿಶ್ರಣ. ಹಿನ್ನೆಲೆ ಲೇಪನ ಬಣ್ಣಗಾರಿಕೆಯನ್ನೂ ಮಾಡಿದ ನಂತರವೂ ಚಿತ್ರಕ್ಕೆ ಅವಶ್ಯವಿದ್ದಲ್ಲಿ ಹೊರರೇಖೆ ಎಳೆಯಬೇಕು. ಹೀಗೆ ಹೊರರೇಖೆ ಎಳೆಯುವಾಗಲೂ ಮೂಲ ಚಿತ್ರಗಳಿಗೆ ಹೊಂದಾಣಿಕೆಯಾಗದಂತೆ ಎಚ್ಚರಿಕೆ ವಹಿಸಬೇಕಾಗುವುದು. ಈ ರೀತಿಯ ಎಲ್ಲ ಪುನಃ ರೂಪಿಸುವ ಕೆಲಸಗಳು ಮುಗಿದ ನಂತರ ಇಡೀ ಚಿತ್ರದ ಮೇಲೆ ರಕ್ಷಣೆಗಾಗಿ ವಾರ್ನಿಸ್ ಪದರ ಲೇಪಿಸಲಾಗುವುದು. ಮೊದಮೊದಲು ಸೆಲ್ವಾಕ್ ವಾರ್ನಿಸ್ (Shellac Varnish) ಅನ್ನು ಭಿತ್ತಿ ಚಿತ್ರಗಳ ಮೇಲೆ ರಕ್ಷಣೆಗಾಗಿ ಲೇಪಿಸಲಾಗುತ್ತಿತ್ತು. ಆದರೆ ಈ 'ಸೆಲ್ಲಾಕ್ ವಾರ್ನಿಸ್' ಕೆಲವು ಕಾಲಾನಂತರ ದಟ್ಟ ಹಳದೀ ವರ್ಣಕ್ಕೆ ತಿರುಗಿ ಚಿತ್ರವನ್ನು ಮಸುಕಾಗಿ ಕಾಣುವಂತೆ ಮಾಡುತ್ತದಲ್ಲದೇ ಮೂಲಚಿತ್ರದ ವರ್ಣವೈವಿಧ್ಯ ಮತ್ತು ಹೊಳಪನ್ನೇ ಮರೆಮಾಡುತ್ತದೆ[೨೮] ಎನ್ನಲಾಗುತ್ತದೆ. ಅಜಂತಾ ಭಿತ್ತಿ ಚಿತ್ರಗಳನ್ನು ಹೈದರಾಬಾದ್ ನಿಜಾಮನ ಕಾಲಕ್ಕೆ ೧೯೨೨ ರಲ್ಲಿ ಮೊದಲು ಸಂರಕ್ಷಣೆಗೊಳಪಡಿಸಿದಾಗ ಈ ಸೆಲ್ಲಾಕ್ ವಾರ್ನಿಸ್‌ನ್ನೇ ಲೇಪಿಸಲಾಗಿತ್ತು.[೨೯] ನಂತರದ ದಿನಗಳಲ್ಲಿ ಅವು ದಟ್ಟ ಹಳದಿ ವರ್ಣಕ್ಕೆ ತಿರುಗಿಕೊಂಡದ್ದು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಹಾಗಾಗಿ 'ಸೆಲ್ಲಾಕ್ ವಾರ್ನಿಸ್' ಲೇಪಿಸುವುದು ಅಷ್ಟೊಂದು ಪರಿಣಾಮಕಾರಿಯಾದುದಲ್ಲ. ಅದರ ಬದಲಾಗಿ ಭಿತ್ತಿ ಚಿತ್ರಗಳ ಸಂರಕ್ಷಣೆಗೆ ಈಗ 'ಐಸೋಲೇಟಿಂಗ್ ಸಿಂಥೆಟಿಕ್ ವಾರ್ನಿಸ್' (Isolating Synthetic Varnish) ದ ಪದರವನ್ನು ಲೇಪಿಸಲಾಗುತ್ತದೆ[೩೦] ಎಂದು ತಿಳಿದುಬರುವುದು. ಇದು ಮುಂಬರುವ ದಿನಗಳಲ್ಲಿ ಕಪ್ಪಾಗದೇ, ಹಳದಿ ವರ್ಣಕ್ಕೆ ತಿರುಗದೇ ಹೆಚ್ಚು ದಿನಗಳವರೆಗೆ ಉಳಿದುಬರುವುದು. ಹೀಗೆ ರಕ್ಷಣೆಗಾಗಿ ಇಡೀ ಚಿತ್ರಕ್ಕೆ ಐಸೋಲೇಟಿಂಗ್ ಸಿಂಥೆಟಿಕ್ ವಾರ್ನಿಸ್‌ದ ಪದರವನ್ನು ಲೇಪಿಸಿದ ನಂತರ ಈ ಹಂತದಲ್ಲಿ ಮತ್ತೊಮ್ಮೆ ಇಡೀ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಮೂಲಚಿತ್ರಕ್ಕೆ ಚ್ಯುತಿ ಉಂಟಾಗುವ ಅಂಶಗಳಿದ್ದರೆ ಅವುಗಳನ್ನು ತೆಗೆದು ಸರಿಹೊಂದುವಂತೆ ಪುನಃರೂಪಿಸಿ, ಇಡೀ ಚಿತ್ರಕ್ಕೆ ಮತ್ತೊಮ್ಮೆ 'ಐಸೋಲೇಟಿಂಗ್ ಸಿಂಥಟಿಕ್ ವಾರ್ನಿಸ್'ನ್ನು ಸ್ಪ್ರೇ ಮಾಡಬೇಕು[೩೧] ಎಂದು ತಿಳಿದುಬರುವುದು. ವಾರ್ನಿಸ್‌ದ ಈ ಪದರವು ಚಿತ್ರದ ಮೇಲ್ಮೈ ಮೇಲೆ ಗಾಜಿನಮತೆ ಕೆಲಸ ಮಾಡಿ ಚಿತ್ರಕ್ಕೆ ರಕ್ಷಣೆ ಕೊಡುವುದಲ್ಲದೇ ಚಿತ್ರವು ಗಾಜಿನ ಹಾಗೆ ಹೊಳಪುಳ್ಳದ್ದಾಗುವುದು. ಹಾಳಾದ ಭಿತ್ತಿ ಚಿತ್ರಗಳನ್ನು ಹೀಗೆ ಪುನರೂಪಿಸಿ ಸಂರಕ್ಷಿಸುವುದಲ್ಲದೇ ಇದ್ದಂತಹ ಭಿತ್ತಿ ಚಿತ್ರಗಳನ್ನು ಸಂರಕ್ಷಣೆಗೊಳಪಡಿಸುವ ಇತರ ಕ್ರಮಗಳನ್ನೂ ನೋಡಬಹುದು.

II. ಭಿತ್ತಿಚಿತ್ರಗಳ ಪ್ರತಿ ಮಾಡುವುದು : ಭಿತ್ತಿ ಚಿತ್ರಕಲೆಯ ರಕ್ಷಣೆಯ ಇನ್ನುಳಿದ ಕೆಲವು ಕ್ರಮಗಳೆಂದರೆ ಯೋಗ್ಯ ಕಲಾವಿದರಿಂದ ಅವುಗಳನ್ನು ಪ್ರತಿ ಮಾಡಿಸುವುದೂ ಒಂದು ಮೂಲಕೃತಿಯ ಮೇಲೆ ನಕಲು ಕಾಗದ (Tracing paper) ಎಟ್ಟು ಯಥಾವತ್ತಾಗಿ ಚಿತ್ರಗಳನ್ನು ಮೂಡಿಸಿಕೊಂಡು

ಮೂಲ ಚಿತ್ರವನ್ನು ಹೋಲುವಂತೆಯೇ ವರ್ಣ ಲೇಪಿಸುವುದು ಒಂದು ಕ್ರಮ. ಅಜಂತೆಯ ಚಿತ್ರಗಳನ್ನು ಲೇಡಿ ಹೆರಿಂಗ್ ಹೆಮ್ ನೇತೃತ್ವದ ಕಲಾವಿದರ ತಂಡ.[೨೧] ಮತ್ತು ಸಿಬಿ ನರಸಿಂಹ ದೇವಾಲಯದ ಭಿತ್ತಿ ಚಿತ್ರಗಳನ್ನು ಆರ್.ಎಂ.ಹಡಪದ್ ತಂಡದವರು ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಶಿಬಿರದ ರೀತಿಯಲ್ಲಿ[೨೨] ಪ್ರತಿ ಮಾಡಿರುವುದು ಗೊತ್ತಿರುವ ವಿಷಯವೇ ಆಗಿದೆ. ಹೀಗೆ ಚಿತ್ರಗಳನ್ನು ಪ್ರತಿ ಮಾಡಿ ಕಾಯ್ದಿರಿಸಬಹುದಾದರೂ ಅದರಲ್ಲಿ ಮೂಲಚಿತ್ರಕ್ಕಿಂತ ಅಲ್ಪಸ್ವಲ್ಪ ಭಿನ್ನತೆಗಳು ಕಂಡುಬರುತ್ತವೆ. ಮೂಲ ಚಿತ್ರಗಳ ಬಾಹ್ಯರೇಖೆಗಳ ದಪ್ಪಳತೆ, ಹರಿವಿಕೆ, ಚಿತ್ರಗಳ ಕೆಲವು ಸೂಕ್ಷ್ಮ ಲಕ್ಷಣಗಳು ಮಾರ್ಪಾಟಾಗುವ ಸಾಧ್ಯತೆಗಳಿವೆ. ಅಲ್ಲದೇ ಪ್ರತಿ ಮಾಡುವ ಇಂದಿನವರು ಮೂಲಚಿತ್ರಗಳಲ್ಲಿ ಪುರಾತನರು ಬಳಸಿದ ಖನಿಜಮೂಲ, ಸಸ್ಯಮೂಲ ವರ್ಣಗಳ ಬಗ್ಗೆ ಗೊತ್ತಿಲ್ಲದವರಾಗಿ ರುತ್ತಾರೆ. ಹಾಗಾಗಿ ಇಂದಿನ ಸಿದ್ಧ ರಾಸಾಯನಿಕ ವರ್ಣ ಬಳಸಿದಾಗ ಮೂಲಚಿತ್ರಗಳ ವರ್ಣ ವೈವಿಧ್ಯತೆಗಿಂತ ಬೇರೆಯಾದ ಹೊಳಪು ಎಂದರೆ ತಪ್ಪಿಲ್ಲ. ಚಿತ್ರಗಳು ಭಿನ್ನವಾಗಿದ್ದು ನಿಜವಾದ ಚಿತ್ರಗಳ ಸ್ವರೂಪ. ಲಕ್ಷಣಗಳನ್ನು ತಿಳಿಯುವಲ್ಲಿ ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ. ಬದಾಮಿಯ ಚಿತ್ರಗಳನ್ನು ನಾವು ಇಂದು ಪ್ರತಿಮಾಡಿಟ್ಟ ಚಿತ್ರಗಳಿಂದಲೇ ನೋಡಬೇಕಾಗುತ್ತದೆ. ಅನೇಕ ರೀತಿಯ ಅಡಚಣೆಗಳು ಈ ವಿಧಾನದಲ್ಲಿದ್ದರೂ ದಾಖಲೆಯ ದೃಷ್ಟಿಯಿಂದ ಚಿತ್ರಗಳನ್ನು ಪ್ರತಿ ಮಾಡಿ ಇಡಬಹುದಾಗಿ.

III. ನಕಲು ಮಾಡುವುದು : ಭಿತ್ತಿ ಚಿತ್ರಗಳ ದಾಖಲೆಗಾಗಿ ಚಿತ್ರಗಳನ್ನು ಪ್ರತಿ ಮಾಡುವಂತೆ ಎದುರಿಗೆ ಕುಳಿತು ಅದು ಇದ್ದಂತೆ ರಚಿಸಿ ನಕಲು ಮಾಡುವ ವಿಧಾನವೂ ಇದೆ. ಹೀಗೆ ನಕಲು ಮಾಡುವಾಗ ಭಿತ್ತಿ ಹಾಳಾಗಿದ್ದರೆ, ಗಾರೆಉದುರಿ, ಬಣ್ಣ ಮಾಸಿ ಹೋಗಿದ್ದರೂ ಅದರು ಹೇಗೆ ಕಾಣುವುದೇ ಹಾಗೇ ನಕಲು ಮಾಡುವುದು. ಅರೆಬರೆಯಾಗಿ ಕಾಣುವ ಆಕಾರಗಳನ್ನು ಪೂರ್ತಿ ಮಾಡುವುದು. ಹಾಗೂ ಏನೂ ಉಳಿವಿಲ್ಲದ ಭಾಗದಲ್ಲಿ ಉಹಾಪಾಠದಂತೆ ಊಹಿಸಿ ಚಿತ್ರಿಸುವುದು[೨೩] ಹೀಗೆ ಮೂರು ರೀತಿ ಅನುಸರಿಸುತ್ತಾರೆ. ನಕಲು ಮಾಡಲು ಪದ್ಧತಿಯಲ್ಲಿ ಪ್ರತಿಮಾಡುವ ವಿಧಾನಕ್ಕಿಂತ ಹೆಚ್ಚಿನ ಅಡಚಣೆಗಳು ವ್ಯತ್ಯಾಸಗಳು ಕಂಡುಬರುತ್ತವೆ. ಯೋಗ್ಯ ಕಲಾವಿದರಲ್ಲದಿದ್ದರೆ ಚಿತ್ರಗಳ ಶೈಲಿ, ರೇಖಾ ವಿನ್ಯಾಸ ವರ್ಣಗಾರಿಕೆಯಲ್ಲಿ ಭಿನ್ನತೆ ಕಂಡುಬರುವುದು ಮಾತ್ರವಲ್ಲದೇ ಮೂಲ ಚಿತ್ರಗಳನ್ನು ಹೋಲಲಾರವು. ಅಲ್ಲದೇ ಕಲಾವಿದ ಎಷ್ಟೇ ಪ್ರಬುದ್ಧನಿದ್ದರೂ ಮೂಲಚಿತ್ರಗಳ ಶೈಲಿ, ರೇಖಾವಿನ್ಯಾಸ, ವರ್ಣಗಾರಿಕೆಯನ್ನು ಆತನ ಕೃತಿಗಳು ಸರಿಗಟ್ಟಲಾರದು ಪ್ರಾಚೀನ ವರ್ಣಗಳ ಹೊಳಪು ಆಧುನಿಕ ವರ್ಗಗಳ ಹೊಳಪು ವ್ಯತ್ಯಾಸವಾಗುವುದು. ಪ್ರತಿಮಾಡಿದ ಚಿತ್ರಗಳು ಮೂಲಚಿತ್ರಕ್ಕಿಂತ ಬೇರೆಯಾಗಿ ಕಂಡುಬರುವ ಸಂಭವವೇ ಅಧಿಕ. ಆದರೂ ಭಿತ್ತಿ ಚಿತ್ರಗಳ ದಾಖಲೆಯಿಂದ ಚಿತ್ರಗಳ ಪ್ರತಿ ಮಾಡಿಸಬಹುದು.

IV. ಛಾಯಾಗ್ರಹಣ (ಫೋಟೋಗ್ರಾಫ್) ಮಾಡುವುದು : ಭಿತ್ತಿ ಚಿತ್ರಗಳ ರಕ್ಷಣೆಯ ಮತ್ತೊಂದು ಕ್ರಮವೆಂದರೆ ಫೋಟೋಗ್ರಾಫ್ ಮಾಡಿಸುವುದು. ವರ್ಣ ಫೋಟೋಗ್ರಾಫ್‌ನಲ್ಲಿ

ಇಂದು ಅತ್ಯಾಧುನಿಕ ವಿಧಾನಗಳು ಬಂದಿದ್ದು, ಚಿತ್ರಗಳನ್ನು ಯಥಾವತ್ತಾಗಿ ಸೆರೆ ಹಿಡಿಯುವುದಷ್ಟೇ ಅಲ್ಲದೇ ಚಿತ್ರಗಳ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಸೆರೆಹಿಡಿಯಬಲ್ಲ ಆಧುನಿಕ ಕ್ಯಾಮರಾಗಳೂ ಲಭ್ಯವಿದೆ. ಫೋಟೋಗ್ರಾಫ್ ವಿಧಾನದಲ್ಲಿ ಚಿತ್ರಗಳ ಮೂಲಸ್ವರೂಪ. ಬಣ್ಣಗಳು. ಚಿತ್ರದ ಮೈವಳಿಕೆ (Texture)ಗಳು ಯಥಾವತ್ತಾಗಿ ಮೂಡಿಬಂದು ಮೂಲಚಿತ್ರಕ್ಕೆ ಅತೀ ಸಮೀಪವಾಗಿ ಕಂಡುಬರುತ್ತದೆ. ಫೋಟೋಗ್ರಾಫ್ ಮಾಡಿದ ಚಿತ್ರಗಳು. ಮನುಷ್ಯನು ನಕಲು ಮಾಡಿದ ಮತ್ತು ಪ್ರತಿಮಾಡಿದ ಚಿತ್ರಗಳಿಗಿಂತ ಮೂಲಚಿತ್ರಗಳ ಸ್ವರೂಪವನ್ನು ಒದಗಿಸುವುದರಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡುತ್ತದೆ. ಭಿತ್ತಿಚಿತ್ರಗಳ ರಕ್ಷಣೆಯ ದೃಷ್ಟಿಯಿಂದ ವರ್ಣ ಫೋಟೋಗ್ರಾಫ್ ಮಾಡಿಸುವ ಈ ರೀತಿಯಲ್ಲಿಯೂ ಕೆಲವು ಕೊರತೆಗಳು ಕಂಡುಬರುತ್ತವೆ ಎಂದು ಶಿವರಾಮ ಕಾರಂತ ಹೇಳುತ್ತಾರೆ. "ಅಜಂತಾಗಳಲ್ಲಿರುವಂತಹ ವಿಶಾಲವಾದ ಭಿತ್ತಿಚಿತ್ರಗಳನ್ನು, ಫೋಟೋಗ್ರಾಫ್ ಮಾಡಿ ಅವನ್ನು ಚಿಕ್ಕಗಾತ್ರಕ್ಕೆ ಇಳಿಸಿ ಮುದ್ರಿಸುವ ಕಾಲದಲ್ಲಿ ಮೂಲಚಿತ್ರದ ಅನೇಕ ಗುಣಗಳನ್ನು ಗುರುತಿಸುವುದೇ ಕಷ್ಟವಾಗುತ್ತದೆ. ಮೂಲವರ್ಣಗಳಿಗೂ ಮುದ್ರಣ ವರ್ಣಗಳಿಗೂ ಏನೂ ವ್ಯತ್ಯಾಸ ಉಂಟಾಗಿಲ್ಲ ಎಂದು ಖಚಿತಪಡಿಸಿಕೊಂಡರೂ ಕೂಡಾ ಚಿತ್ರದ ಮೈವಳಿಕೆಯ ವಿವರ. ಸೂಕ್ಷ್ಮ ವರ್ಣವ್ಯತ್ಯಾಸ ಮೊದಲಾದವು ಸಣ್ಣಚಿತ್ರಗಳಲ್ಲಿ ಕಾಣಸಿಲಾರವು. ಚಿತ್ರರೇಖೆಗಳನ್ನು ಸಣ್ಣದಾಗಿಸುವಾಗ ಅವುಗಳ ದಪ್ಪ ಕಡಿಮೆಯಾಗುತ್ತ ಸರಿದು ಮೂಲದ ಶಕ್ತಿಯನ್ನೂ ತೊರಗೊಡುವುದಿಲ್ಲ."[೩೫] ಇಂತಹ ಅನೇಕ ಕೊರತೆಗಳು ಕಂಡುಬರುತ್ತವೆ ಎಂದು ತಿಳಿಸುತ್ತಾರೆ.

ಇಂತಹ ಸಣ್ಣಪುಟ್ಟ ಕೊರತೆಗಳ ಮಧ್ಯೆಯೂ ನಕಲು ಮತ್ತು ಪ್ರತಿಮಾಡಿದ ಚಿತ್ರಗಳಿಗಿಂತಲೂ ವರ್ಣಛಾಯಾಚಿತ್ರಣ (ಫೋಟೋಗ್ರಾಫ್) ಮಾಡಿದ ಚಿತ್ರಗಳು ಮೂಲ ಚಿತ್ರಗಳನ್ನು ತಿಳಿದುಕೊಳ್ಳುವಲ್ಲಿ ಹೆಚ್ಚು ಸೂಕ್ತವಾಗಿದ್ದು ಹಾಳಾಗುತ್ತಿರುವ ಭಿತ್ತಿ ಚಿತ್ರಗಳನ್ನು ಫೋಟೋಗ್ರಾಫ್ ಮಾಡಿಸಬಹುದಾಗಿದೆ. ಹೀಗೆ ಫೋಟೋಗ್ರಾಫ್ ಮಾಡಿಸುವಾಗ ಒಂದೊಂದು ಸ್ಥಳದ ಭಿತ್ತಿ ಚಿತ್ರಗಳನ್ನು ಒಂದೊಂದು ಕಡೆಗೆ ಕೂಡಿಸಿ ಸಂಪುಟಗಳಲ್ಲಿ ಹೊರತರಬಹುದು. ಇಂತಹ ಚಿತ್ರಸಂಪುಟಗಳ ಎಡಗಡೆಯ ಪುಟದಲ್ಲಿ ಚಿತ್ರಗಳ ವರ್ಣ ಫೋಟೋಗಳನ್ನು ಬಲಭಾಗದಲ್ಲಿ ಚಿತ್ರಗಳಿಗೆ ಸಂಬಂಧಿಸಿದ ಅವಶ್ಯಕ ಮಾಹಿತಿಗಳನ್ನು ಮುದ್ರಿಸಬಹುದು.

V. ಸ್ಲೈಡ್ಸ್ ಮಾಡುವುದು : ಫೋಟೋಗ್ರಾಫ್ ಮಾಡಿ ಭಿತ್ತಿ ಚಿತ್ರಗಳನ್ನು ಕಾಯ್ದಿರಿಸಿದಂತೆಯೇ ಸ್ಲಾಯಿಡ್ಸ್‌ಗಳನ್ನು ಮಾಡಿಯೂ ಇಡಬಹುದು. ಅವಶ್ಯಕತೆಬಿದ್ದಾಗ ಅಥವಾ ನಮಗೆ ಬೇಕಾದಾಗ ಸ್ಲಾಯಿಡ್ಸ್‌ಗಳನ್ನು ಹಾಕಿಕೊಂಡು ನೋಡಿ ಚಿತ್ರಗಳ ಸ್ವರೂಪ ತಿಳಿಯಬಹುದು. ಒಂದೊಂದು ನೆಲೆಗಳ ಸ್ಲೈಡ್ಸ್‌ಗಳನ್ನು ಒಂದೊಂದು ಕಡೆಗೆ ವ್ಯವಸ್ಥಿತವಾಗಿ ಹೊಂದಿಸಿ, ಅವುಗಳಿಗೆ ಅನುಕ್ರಮವಾಗಿ ಸಂಖ್ಯೆಗಳನ್ನು ಕೊಟ್ಟು ಆಯಾಸಂಖ್ಯೆಯ ಸ್ಲೈಡ್ಸ್ ಮಾಹಿತಿಯನ್ನು ಅಲ್ಲಲ್ಲಿ ಬರೆದಿರಬಹುದು. ಇದರಿಂದ ಆಯಾ ನಂಬರಿನ ಸ್ಲೈಡ್ಸ್‌ನ್ನು ಸ್ಕ್ರೀನಿನ ಮೇಲೆ ಮೂಡಿಸಿದಾಗ ಅದರ ಮಾಹಿತಿಯು

ಆ ನಂಬರಿನ ಕಾರ್ಡಿನಲ್ಲಿ ದೊರೆಯುವುದು. ಈ ಮಾಹಿತಿಯನ್ನು ಚಿತ್ರಗಳ ನೆಲೆ, ಚಿತ್ರಶೈಲಿ, ವಸ್ತು ವಿಷಯ, ಬೇರೆ ಚಿತ್ರಶೈಲಿಯ ಯಾವ ಪ್ರಭಾವ ಅದರ ಮೇಲಾಗಿದೆ. ಎಂಬಂತಹ ವಿವರಗಳನ್ನು ಬರೆದಿರಿಸಬಹುದು.

VI. ವಿಡಿಯೋ ಚಿತ್ರೀಕರಣ ಮಾಡುವುದು : ಭಿತ್ತಿ ಚಿತ್ರಗಳನ್ನು ವಿಡಿಯೋ ಚಿತ್ರೀಕರಣ ಮಾಡುವುದು ರಕ್ಷಣೆಯ ದೃಷ್ಟಿಯಿಂದ ಮತ್ತು ದಾಖಲೆ ದೃಷ್ಟಿಯಿಂದ ಇನ್ನುಳಿದ ಕ್ರಮಗಳಾದ ನಕಲು ಮಾಡುವುದು, ಪ್ರತಿಮಾಡುವುದು, ಫೋಟೋಗ್ರಾಫ್ ಮಾಡುವ ವಿಧಾನಗಳಿಗಿಂತ ಸೂಕ್ತವಾದುದು. ವಿಡಿಯೋ ಚಿತ್ರೀಕರಣ ಮಾಡಿದ ದೃಶ್ಯಗಳನ್ನು ನೊಡಿದಾಗ ಅದು ನಮಗೆ ಕಣ್ಣೆದುರಿಗೆ ನೇರ ನೋಡಿದ ಅನುಭವ ಕೊಡುತ್ತದೆ. ಉಳಿದವು ಸ್ಥಿರ ಚಿತ್ರಗಳಂತೆ ಕಂಡುಬಂದರೆ ಇದು ಚಲನಚಿತ್ರವಾಗಿರುವುದರಿಂದ ನೇರವಾಗಿ ಚಿತ್ರಗಳ ನೆಲೆಯಲ್ಲಿ ಎದುರಿಗೇ ನಿಂತು ನೋಡಿದ ಅನುಭವದಂತೆ ಭಾಸವಾಗುತ್ತದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯವರು ರಾಜ್ಯದ ಕೆಲವು ಭಾಗಗಳ ಭಿತ್ತಿ ಚಿತ್ರಗಳನ್ನು ವಿಡಿಯೋ ಚಿತ್ರೀಕರಣ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು. ಅದೇ ರೀತಿ ರಾಜ್ಯದ ಎಲ್ಲ ಭಿತ್ತಿ ಚಿತ್ರಗಳನ್ನು ವಿಡಿಯೋ ಚಿತ್ರೀಕರಣ ಮಾಡಿಡಬೇಕು. ಈ ಕೆಲಸವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಡಿರುತ್ತದೆ. ಇದರಿಂದಾಗಿ ಭಿತ್ತಿ ಚಿತ್ರಗಳನ್ನು ದಾಖಲೆಗೊಳಿಸಿಡುವುದರ ಜೊತೆಗೆ ಮುಂದಿನ ಅಧ್ಯಯನಕಾರರಿಗೆ, ನೋಡುಗರಿಗೆ ಚಿತ್ರಗಳನ್ನು ಮೂಲಸ್ವರೂಪದಲ್ಲಿ ದೊರಕಿಸುವಲ್ಲಿ, ಉಳಿಸಿಕೊಟ್ಟಲ್ಲಿ ಸ್ವಲ್ಪಮಟ್ಟಿನ ಸಹಾಯ ಮಾಡಿದಂತೆ ಆಗುವುದು.

VII. ಮೈಕ್ರೋ ಫಿಲಂನಲ್ಲಿ ಅಳವಡಿಸುವುದು : ಭಿತ್ತಿ ಚಿತ್ರಗಳನ್ನು ವಿಡಿಯೋ ಚಿತ್ರೀಕರಣ ಮಾಡಿದಂತೆಯೇ ಮೈಕ್ರೋ ಫಿಲಂನಲ್ಲಿ ಅಳವಡಿಸಿಯೂ ಕಾಯ್ದಿಡಬಹುದು. ಅತ್ಯಂತ ಕಡಿಮೆ ಸ್ಥಳಾವಕಾಶದಲ್ಲಿ ಅತೀ ಹೆಚ್ಚಿನ ಮಾಹಿತಿಯನ್ನು ತುಂಬಲು ಈ ವಿಧಾನದಲ್ಲಿ ಸಾಧ್ಯವಿದ್ದು, ಹೆಚ್ಚಿನ ಭಿತ್ತಿ ಚಿತ್ರಗಳನ್ನು ಒಂದೆಡೆಗೆ ಅಳವಡಿಸಬಹುದಾಗಿದೆ. ಯಾವುದೇ ಮಾಹಿತಿಯನ್ನು ಕಾಯ್ದಿಡಲು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಈ ವಿಧಾನ ಅತ್ಯಂತ ಸೂಕ್ತವಾದುದು. ಭಿತ್ತಿ ಚಿತ್ರಗಳನ್ನು ರಕ್ಷಣೆ ಮಾಡುವ ಕ್ರಮಗಳಲ್ಲಿ ಇಡೀ ಚಿತ್ರವನ್ನು ಬೇರೆ ಬರೆಯುವ. ಇಲ್ಲವೇ ಗಾರೆಯಲ್ಲಿ ಕೀಳಿಸಿ ಬೇರೆಯದೇ ಹಾಕಿಸಿ ಮತ್ತೆ ಬರೆಸುವ ಪದ್ಧತಿಯೂ ರಕ್ಷಣೆ ಎಂದೇ ಪರಿಗಣಿಸಬಹುದು ಎಂದು ಆ.ಲ.ನರಸಿಂಹನ್[೩೬] ಅಭಿಪ್ರಾಯ ಪಡುತ್ತಾರೆ. ಆದರೆ ಈ ಕ್ರಮಗಳಿಂದ ಹಳೆಯ ಭಿತ್ತಿ ಚಿತ್ರಗಳ ಯಾವ ಅಂಶಗಳೂ ಅಲ್ಲಿ ಉಳಿದುಕೊಳ್ಳದೇ ಬೇರೆಯಾದ ಚಿತ್ರಗಳೇ ಅಲ್ಲಿ ರಚನೆಯಾಗುವುದರಿಂದ ಇದ್ದ ಚಿತ್ರಗಳ ರಕ್ಷಣೆಯ ವ್ಯಾಪ್ತಿಯಲ್ಲಿ ಈ ವಿಧಾನಗಳು ಬರಲಾರವು. ಆದರೆ ಹಳೆಯ ಭಿತ್ತಿ ಚಿತ್ರಗಳು ಇದ್ದ ಸ್ಥಳದಲ್ಲಿ ಪರ್ಯಾಯವಾಗಿ ಹೊಸದಾಗಿ ಭಿತ್ತಿ ಚಿತ್ರಗಳನ್ನು ಬರೆಸುವ ಕ್ರಮಗಳೆಂದು ಇವುಗಳನ್ನು ಕರೆಯಬಹುದು.

ಎರಡು ಪೂರಕ ಕ್ರಮಗಳು : ಭಿತ್ತಿ ಚಿತ್ರಕಲೆಯ ಸಂರಕ್ಷಣೆಯಲ್ಲಿ ಅನುಸರಿಸುವ ನೇರ ಕ್ರಮಗಳಂತೆ ಪೂರಕವಾಗಿಯೂ ಕೆಲವು ಕ್ರಮಗಳಿಂದ ಭಿತ್ತಿ ಚಿತ್ರಕಲೆಯನ್ನು ಸ್ವಲ್ಪಮಟ್ಟಿಗಾದರೂ ಸಂರಕ್ಷಣೆ ಗೊಳಿಸಬಹುದು. ಪೂರಕ ಕ್ರಮಗಳಲ್ಲಿ ಮತ್ತೆ

I. ಪುಸ್ತಕಗಳಲ್ಲಿ ಭಿತ್ತಿ ಚಿತ್ರಗಳನ್ನು ಮುದ್ರಿಸುವುದು

II. ಅಲಂಕಾರಿಕ ವಾಣಿಜ್ಯ ವಸ್ತುಗಳಲ್ಲಿ ಭಿತ್ತಿ ಚಿತ್ರಗಳನ್ನು ರೂಪಿಸುವುದು ಎಂಬುದಾಗಿ ವಿವರಿಸಬಹುದು.

I. ಪುಸ್ತಕಗಳಲ್ಲಿ ಭಿತ್ತಿ ಚಿತ್ರಗಳನ್ನು ಮುದ್ರಿಸುವುದು : ಮೊದಲನೆಯದಾಗಿ ಇತಿಹಾಸ ಪುಸ್ತಕಗಳಲ್ಲಿ, ಇತಿಹಾಸದ ಪಠ್ಯಪುಸ್ತಕಗಳಲ್ಲಿ ಹೀಗೆ ವಿವಿಧ ಪುಸ್ತಕಗಳಲ್ಲಿ ಅವಶ್ಯಕತೆ ಇದ್ದಲ್ಲಿ ಸಂಬಂಧಿಸಿದ ಭಿತ್ತಿ ಚಿತ್ರಗಳ ನೇರವಾಗಿ ಫೋಟೋಗ್ರಾಫ್ ಮಾಡಿದ ಬಣ್ಣದ ಚಿತ್ರಗಳನ್ನು ಹಾಕುವುದು ಉದಾಹರಣೆಯಾಗಿ ಹೇಳಬೇಕೆಂದರೆ, ಚಾಲುಕ್ಯ ಇಮ್ಮಡಿ ಪುಲಕೇಶಿಯ ಇತಿಹಾಸ ಹೇಳುವ ಸಂದರ್ಭದಲ್ಲಿ ಅಜಂತಾ ಗುಹೆಯಲ್ಲಿ ಇದೆ ಎಂದು ನಂಬಲಾಗಿರುವ ಆತನ ಚಿತ್ರವನ್ನೇ ಬಳಸುವುದು. ಶ್ರೀರಂಗಪಟ್ಟಣದಲ್ಲಿರುವ ಟಿಪ್ಪುವಿನ ಚಿತ್ರಗಳು ಇತಿಹಾಸ ಹೇಳುವ ಸಂದರ್ಭದಲ್ಲಿ ಸಂಬಂಧಿಸಿದ ಅಂತಹ ಭಿತ್ತಿ ಚಿತ್ರಗಳನ್ನೇ ಬಳಸುವುದು ಹೆಚ್ಚು ಸೂಕ್ತವಾದುದು. ಮಕ್ಕಳ ಪಠ್ಯಪುಸ್ತಕಗಳಲ್ಲಿ ಸಂಬಂಧವೇ ಇರದ ಐತಿಹಾಸಿಕ ವ್ಯಕ್ತಿಗಳ ಚಿತ್ರಗಳನ್ನು ಬರೆಸಿ ಅವರನ್ನು ನಂಬಿಸುವುದಕ್ಕಿಂತಲೂ ಆ ವ್ಯಕ್ತಿಗಳ ಮೂಲರೂಪಕ್ಕೆ ಸ್ವಲ್ಪವಾದರೂ ಹತ್ತಿರವಿರುವ ಪ್ರಾಚೀನ ಭಿತ್ತಿ ಚಿತ್ರಗಳನ್ನು ಉಪಯೋಗಿಸಿ, ಮಕ್ಕಳಿಗೆ ತಿಳುವಳಿಕೆ ಕೊಡುವುದು ಯೋಗ್ಯವಾದುದು. ಇದರಿಂದ ಐತಿಹಾಸಿಕ ವ್ಯಕ್ತಿಗಳ ಮೂಲರೂಪವನ್ನು ಸ್ವಲ್ಪವಾದರೂ ತಿಳಿಯಲು ಸಹಾಯಕವಾಗುತ್ತದಲ್ಲದೇ ಆ ಮೂಲಕ ಪ್ರಾಚೀನ ಭಿತ್ತಿ ಚಿತ್ರಕಲೆಯನ್ನು ಪರಿಚಯಿಸಿದಂತೆಯೂ ಆಗುವುದು. ಇದೇ ರೀತಿಯಾಗಿ ಪುಸ್ತಕಗಳ ಮುಖಪುಟ. ರಕ್ಷಾಪುಟಗಳನ್ನು ಪ್ರಾಚೀನ ಭಿತ್ತಿ ಚಿತ್ರಗಳಿಂದ ಅಲಂಕರಿಸುವ ಕ್ರಮವನ್ನು ಅನುಸರಿಸಬಹುದು. ಇದರಿಂದ ನಮ್ಮ ಪುರಾತನ ಭಿತ್ತಿ ಚಿತ್ರ ಪರಂಪರೆಯನ್ನು ಜನರಿಗೆ ತಿಳಿಸಿದಂತಾಗುವುದಲ್ಲದೇ ಅದರಿಂದ ಪರೋಕ್ಷವಾಗಿ ಭಿತ್ತಿ ಚಿತ್ರಗಳ ಸಂರಕ್ಷಣೆಯೂ ಆಗುವುದು.

II. ಅಲಂಕಾರಿಕ ವಾಣಿಜ್ಯ ವಸ್ತುಗಳಲ್ಲಿ ಭಿತ್ತಿಚಿತ್ರಗಳನ್ನು ರೂಪಿಸುವುದು : ಭಿತ್ತಿ ಚಿತ್ರಗಳನ್ನು ಪುಸ್ತಕದಲ್ಲಿ ಮುದ್ರಿಸುವುದು ಮಾತ್ರವಲ್ಲದೇ ಅಲಂಕಾರಿಕ ವಸ್ತುಗಳಾದ ಹೂಜಿ, ಹೂಕುಂಡಗಳು, ವಿವಿಧ ರೀತಿಯ ವಸ್ತ್ರಗಳು, ಬಾಗಿಲ ಪರದೆ, ಹಾಸುವ ಹೊದೆಯುವ ವಸ್ತ್ರಗಳು. ಕೈವಸ್ತ್ರ, ಗ್ರೀಟಿಂಗ್ಸ್ ಕಾರ್ಡುಗಳು ಹೀಗೆ ಹತ್ತು ಹಲವು ಅಲಂಕಾರಿಕ ವಸ್ತುಗಳಲ್ಲಿ ಪ್ರಾಚೀನ ಭಿತ್ತಿ ಚಿತ್ರಗಳನ್ನು ರೂಪಿಸಿ ಅವುಗಳ ಅಂದ ಹೆಚ್ಚಿಸುವುದು. ಇದರಿಂದ ಪುರಾತನ ಭಿತ್ತಿ ಚಿತ್ರ ಪರಂಪರೆಯನ್ನು ಪರೋಕ್ಷವಾಗಿ ಸಂರಕ್ಷಣೆ ಮಾಡಿದಂತಾಗುವುದಲ್ಲದೇ ಅದರ ಬಗ್ಗೆ ಜನರಿಗೆ

ತಿಳಿಸಿದಂತಾಗುವುದು. ಚೀನಾದೇಶದವರು ಈ ನಿಟ್ಟಿನಲ್ಲಿ ಒಳ್ಳೆಯ ಅಭಿರುಚಿ ಉಳ್ಳವರಾಗಿದ್ದಾರೆ ಎಂದು ಹೇಳಬಹುದು. ಅಲ್ಲಿರುವ "ಮೊಗಾಪೋಗ್ರೋಟಸ್" ಪ್ರದೇಶದ ಚೋಟಾನ್, ಬಜಾಲಿಕ್, ಟುರ್‌ವಾನ್ ಮತ್ತು ಟುನ್‌ಹ್ಯಾಂಗ್ ಸ್ಥಳಗಳಲ್ಲಿ ಕ್ರಿ.ಶ. ೭ನೇ ಶತಮಾನದ ಭಿತ್ತಿ ಚಿತ್ರಗಳಿದ್ದು, ಅವುಗಳನ್ನು ಅವರು ಚೆನ್ನಾಗಿ ಕಾಯ್ದುಕೊಂಡಿದ್ದಾರಲ್ಲದೇ, ಆ ಗುಹಾ ಭಿತ್ತಿಚಿತ್ರಗಳಲ್ಲಿ ಕಂಡುಬರುವ ಯಕ್ಷಯಕ್ಷಿಯರು. ಅಪ್ಸರೆಯರು, ತರುಲತೆ, ಹೂ, ಪ್ರಾಣಿಪಕ್ಷಿಗಳ ಚಿತ್ರಗಳನ್ನು ಅಲ್ಲಿ ಮಾರಲಾಗುವ ಹೂಜಿ, ಹೂಕುಂಡ, ವಸ್ತ್ರಗಳು, ಗ್ರೀಟಿಂಗ್ಸ್ ಕಾರ್ಡ್ಸ್‌ಗಳು ಹೀಗೆ ಹತ್ತು ಹಲವು ಅಲಂಕಾರಿಕ ವಸ್ತುಗಳಲ್ಲೆಲ್ಲಾ[೩೭] ಬಳಸಿಕೊಂಡಿದ್ದಾರೆ. ಇದು ಅವರ ಕಲಾಪ್ರೇಮವನ್ನು ತೋರಿಸುತ್ತದಲ್ಲದೇ ತಮ್ಮ ನಾಡಿನ ಪ್ರಾಚೀನ ಭಿತ್ತಿ ಚಿತ್ರಕಲೆಯ ಬಗ್ಗೆ ಅವರಿಗಿರುವ ಅಭಿಮಾನವನ್ನೂ ತೋರಿಸುತ್ತದೆ.[೩೮] ಇಂತಹ ಹತ್ತು ಹಲವು ಕ್ರಮಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಿತ್ತಿ ಚಿತ್ರಕಲೆಯ ರಕ್ಷಣೆಯಲ್ಲಿ ಕೈಕೊಳ್ಳಬಹುದು. ಎಲ್ಲಾಕ್ಕಿಂತ ಮುಖ್ಯವಾಗಿ ಲಭ್ಯವಿದ್ದ ಚಿತ್ರಗಳನ್ನು ಅವು ಅಳಿದು ಹೋಗುವ ಮುಂಚೆ ಅಧ್ಯಯನಕ್ಕೊಳಪಡಿಸುವುದು ಅತೀ ಮಹತ್ವದ್ದಾಗಿದೆ.

ಈ ಮೆಲ್ಕಂಡ ಕಾರಣಗಳಿಂದಲೇ ಹೆಚ್ಚು ಭಿತ್ತಿ ಚಿತ್ರಗಳು ನಾಶಗೊಂಡಿದ್ದು, ಈ ಅಧ್ಯಯನಕ್ಕೊಳಪಡುವ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಬಹುತೇಕ ಚಿತ್ರಗಳು ಹಾಳಾಗುತ್ತಿದ್ದು, ಇದಕ್ಕೆ ಸಮಾಜವೇ ಸುಧಾರಿಸುವ ಜವಾಬ್ದಾರಿ ಪಡೆಯಬೇಕಾಗಿರುವುದು ಅನಿವಾರ್ಯವೂ ಆಗಿರುತ್ತದೆ. ಇವಾಗಲೇ ಸಾಕಷ್ಟು ಸಂಸ್ಕೃತಿಯ ಬೀಡನ್ನು ಕಳೆದುಕೊಂಡ ಈ ಹೊತ್ತಲ್ಲಿ ಕಲೆಯನ್ನು ಉಳಿಸಿ ಬೆಳೆಸಬೇಕಾಗಿರುತ್ತದೆ. ಆ ದೃಷ್ಟಿಯಿಂದ ಈ ಅಧ್ಯಾಯದಲ್ಲಿ ಭಿತ್ತಿ ಚಿತ್ರಗಳ ಸಂರಕ್ಷಣೆಗೆ ಕೈಗೊಳ್ಳಬೇಕಾದ ಅಗತ್ಯತೆಗೆ ಅನುಸಾರ ಕೆಲವು ಉಪಾಯಗಳನ್ನು ಇಲ್ಲಿ ನೀಡಲಾಗಿರುತ್ತದೆ.

ಅಡಿ ಟಿಪ್ಪಣಿ

೧. ಡಾ.ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ,ಕವಿವಿ.ಹಂಪಿ,೨೦೦೧

೨. ಗಜೇಂದ್ರ ಎಸ್.ತ್ಯಾಗಿ: ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ, ೧೧೪

೩. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು ಬೆಂಗಳೂರು ವಿವಿಗೆ ಸಲ್ಲಿಸಿದ ಬೆರಳಚ್ಚು ಮಹಾಪ್ರಬಂಧ ಪುಟ, ೫೨೪

೪. ಬಿ.ಪಿ.ಬಾಯಿರಿ : ಜಾಗತಿಕ ಚಿತ್ರಕಲೆ : ಪುಟ, ೭೨

೫. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೬

೬. ಡಾ.ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ ಪುಟ ೨೩೭

೭. ಡಾ.ಅ.ಲ.ಸುಂದರ : ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಪುಟ ೫೪

೮. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೫

೯. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೫

೧೦. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೫

೧೧. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೫

12. J.C.Nagpal : Mural paintings in India. Page 31

೧೩. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೪

೧೪. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೪

15. J.C.Nagpal : Mural paintings in India. Page 14

೧೬. ಗಜೇಂದ್ರ ಎಸ್.ತ್ಯಾಗಿ : ಪ್ರಿಹಿಸ್ಟಾರಿಕ್ ಆರ್ಟ್ಸ್ ಇನ್ ಇಂಡಿಯಾ, ಪುಟ ೧೧೪

೧೭. ಪ್ರಜಾವಾಣಿ ಸಾಪ್ತಾಹಿಕ ಪುರಣಿ : ೨೪ ಸೆಪ್ಟಂಬರ್ ೧೯೯೫, ಪುಟ. ೧ ಅಜಂತಾ ಭಿತ್ತಿಚಿತ್ರ ಶಿಲ್ಪ ಸಂರಕ್ಷಣೆ ಸಾಧ್ಯವೇ? ಕೆ.ವಿ.ಸುಬ್ರಹ್ಮಣ್ಯಂ

೧೮. ಸುಧಾ(ವಾರಪತ್ರಿಕೆ): ಮಾರ್ಚ್ ೨, ೧೯೯೭, ಪುಟ. ೪೨ ಮಾಸಿಹೋದ ಚಿತ್ರಕ್ಕೆ ಮತ್ತೆ ಕಾಯಕಲ್ಪ, ಕೆ.ಎಸ್.ರಮಣ್

೧೯. ಪ್ರಜಾವಾಣಿ ಸಾಪ್ತಾಹಿಕ ಪುರಾವಣಿ :೨೪ ಸೆಪ್ಟಂಬರ್ ೧೯೯೫, ಪುಟ ೧ ಅಜಂತಾ ಭಿತ್ತಿಚಿತ್ರ ಶಿಲ್ಪ ಸಂರಕ್ಷಣೆ ಸಾಧ್ಯವೇ? ಕೆ.ವಿ.ಸುಬ್ರಹ್ಮಣ್ಯಂ

20. Marg : Vol 49, No. 2 December 1997 Page 68

೨೧. ಡಾ.ಬಿ.ಕೆ.ಹಿರೇಮಠ :ಕನ್ನಡ ಹಸ್ತಪ್ರತಿಗಳು, ಒಂದು ಅಧ್ಯಯನ ಪುಟ ೨೩೨

೨೨. ಸುಧಾ (ವಾರಪತ್ರಿಕೆ) :ಮಾರ್ಚ್ ೨, ೧೯೯೭, ಪುಟ. ೪೩ ಮಾಸಿಹೋದ ಚಿತ್ರಕ್ಕೆ ಮತ್ತೆ ಕಾಯಕಲ್ಪ. ಕೆ.ಎಸ್.ರಮಣ್

23. Marg : Vol 49, No. 2 December 1997 Page 69

24. J.C.Nagpal : Mural paintings in India. Page 14

25. Marg : Vol 49, No. 2 December 1997 Page 74

26. Marg : Vol 49, No. 2 December 1997 Page 75

27. Marg : Vol 49, No. 2 December 1997 Page 75

28. Marg : Vol 49, No. 2 December 1997 Page 75

29. J.C.Nagpal : Mural paintings in India. Page 34

30. J.C.Nagpal : Mural paintings in India. Page 34

31. Marg : Vol 49, No. 2 December 1997 Page 77

32. Marg : Vol 49, No. 2 December 1997 Page 77

೩೩. ಎಸ್.ಕೆ.ರಾಮಚಂದ್ರರಾವ್ : ಕಲಾತಪಸ್ವಿ ವೆಂಕಟಪ್ಪ, ೨೨

೩೪. ಡಾ.ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ ಪುಟ ೩೫

೩೫. ಅ.ಲ.ನರಸಿಂಹನ್ ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು (ಬೆಂಗಳೂರು ವಿವಿಗೆ ಸಲ್ಲಿಸಿದ ಬೆರಳಚ್ಚು ಮಹಾಪ್ರಬಂಧ) ಪುಟ ೫೦೩

೩೬. ಡಾ.ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ ಪುಟ ೩೪

೩೭. ಅ.ಲ.ನರಸಿಂಹನ್ ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪುಟ ೫೦೧

೩೮. ಡಾ.ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೦೦,ಪು ಸ.೫೨೧

ಅಧ್ಯಾಯ : ೯

ಸಮಾರೋಪ

ಅಧ್ಯಾಯ-ಒಂಬತ್ತು
ಸಮಾರೋಪ

ಕಲೆ ಮನುಷ್ಯನ ಆಂತರಿಕ ಮತ್ತು ಬಾಹ್ಯ ಬದುಕಿನ ನಿರ್ದೇಶನಗಳನ್ನು ನೀಡುತ್ತದೆ. ಜೊತೆಗೆ ಅವನ ಈ ಎರಡು ಬದುಕುಗಳನ್ನು ಸುಂದರವಾಗಿ ಕಟ್ಟಿಕೊಡುವ ಮಾಧ್ಯಮವೂ ಕೂಡ ಕಲೆಯೇ ಆಗಿರುತ್ತದೆ. ಈ ಹಿನ್ನಲೆಯಲ್ಲಿ ಕಲೆ ಮತ್ತು ಕಲಾವಿದ ಸಮಾಜದ ಆಗುಹೋಗುಗಳನ್ನು ನಿಯಂತ್ರಿಸುವ ಮತ್ತು ಸಮಾಜವನ್ನು ತಿದ್ದುವ, ಸಮಾಜವನ್ನು ಸರಿದಾರಿಗೆ ತರುವ ಮತ್ತು ಸಮಾಜವನ್ನು ಸ್ವಾಸ್ಥ್ಯದಿಂದ ಕಾಪಾಡುವ ಜವಾಬ್ಧಾರಿಯುತ ನೆಲೆಯಲ್ಲಿ ಕಲಾವಿದನಿದ್ದಾನೆ ಎಂದರೆ ಬಹುಶಃ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಪ್ರಾಚೀನ ಕಾಲದ ಚಿತ್ರಕಲಾವಿದರು ತಮ್ಮ ಕೆಲಸವನ್ನು ಅತ್ಯಂತ ಪ್ರಮಾಣಿಕತೆ ಮತ್ತು ದಕ್ಷತೆಯಿಂದ ನಿರ್ವಹಿಸಿದ್ದಾರೆ ಎನ್ನುವುದಕ್ಕೆ ದಕ್ಷಿಣ ಕರ್ನಾಟಕದಲ್ಲಿ ಸಿಗಲ್ಪಡುವ ಸುಂದರ ಭಿತ್ತಿಚಿತ್ರಗಳೇ ಸಾಕ್ಷಿ.

ಕಲೆಯು ಸುಸಂಸ್ಕೃತ ಜೀವನದ ಪ್ರತಿಬಿಂಬ ಮಾತ್ರವಲ್ಲದೆ ನಾಗರೀಕ ಜೀವನದ ತಳಹದಿಯು ಆಗಿದೆ. ಒಂದು ದೇಶದ ಸಾಂಸ್ಕೃತಿಕ ಇತಿಹಾಸದಲ್ಲಿ ಅಲ್ಲಿನ ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳು ಪ್ರಮುಖ ಪಾತ್ರ ವಹಿಸುತ್ತವೆ. ನಾಡಿನ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಪಾತ್ರವಹಿಸುತ್ತವೆ. ಕರ್ನಾಟಕದ ಕಲಾ ಇತಿಹಾಸದಲ್ಲಿ ಸಿಬಿಯ ನರಸಿಂಹದೇವಾಲಯ, ಹಿರಿಯೂರಿನ ತೇರುಮಲ್ಲೇಶ್ವರ, ಕೆರೆಗೋಡಿ ಶಂಕರೇಶ್ವರ, ರಂಗಾಪುರದ ರಂಗನಾಥ ದೇವಾಲಯ, ಮಿಂಚುಕಲ್ಲು ಗೊಲ್ಲಹಳ್ಳಿಯ ಆಂಜನೇಯ ದೇವಾಲಯ, ಹೊಸಹಳ್ಳಿಯ ಲಕ್ಷ್ಮೀದೇವಾಲಯ, ಯಡೆಯೂರಿನ ಸಿದ್ದೇಶ್ವರ ದೇವಾಲಯದಲ್ಲಿ, ಮೈಸೂರಿನ ಪ್ರಸನ್ನಕೃಷ್ಣಸ್ವಾಮಿ ದೇವಾಲಯ, ಶ್ವೇತಾವರಹ ದೇವಾಲಯ, ಅಂಬುಜಾವಲ್ಲಿ, ಮಾಗಡಿಯ ಸೋಮೇಶ್ವರ ದೇವಾಲಯ, ನಾಗಮಂಗಲದ ಸೌಮ್ಯಕೇಶವ

ದೇವಾಲಯಗಳಲ್ಲಿ ಅಷ್ಟೇ ಅಲ್ಲ, ನಾಲ್ಕುನಾಡು ಅರಮನೆ, ಮೈಸೂರು ಅರಮನೆ, ಟಿಪ್ಪುಸುಲ್ತಾನ್ ಅರಮನೆ ಮತ್ತು ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಗಳಲ್ಲಿಯೂ ಕೂಡ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇನ್ನೂ ಜೈನ ಬಸದಿಗಳಲ್ಲಿ ಮತ್ತು ಜೈನ ಮಠಗಳಲ್ಲಿರುವ ಭಿತ್ತಿ ಚಿತ್ರಗಳು ಮತ್ತು ಕ್ರೈಸ್ಥ ದೇವಾಲಯಗಳಲ್ಲಿರುವ ಯೇಸುವಿನ ಬದುಕಿನ ನೋಟವನ್ನು ಗೋಡೆ ಮೇಲೆ ಅಲಂಕರಿಸುವ ಮೂಲಕ ಕ್ರೈಸ್ತ ಧರ್ಮದ ಪ್ರಚಾರ ಕೈಗೊಂಡಿರುವ ಅಂಶಗಳನ್ನು ಕೂಡ ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಸಿಗುವ ಭಿತ್ತಿ ಚಿತ್ರಗಳಿಗೆ ತನ್ನದೆ ಆದ ವಿಶಿಷ್ಟ ಸ್ಥಾನವಿದ್ದು, ಇವುಗಳ ಮಹತ್ವವನ್ನು ಪ್ರಸ್ತುತ ಅಧ್ಯಯನವು ಕಟ್ಟಿಕೊಟ್ಟಿರುತ್ತದೆ. ಈ ಅಧ್ಯಯನವನ್ನು ಒಟ್ಟು ಒಂಬತ್ತು ಅಧ್ಯಾಯಗಳನ್ನಾಗಿ ಮಾಡಿಕೊಂಡು ವಿಶ್ಲೇಶಿಸಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿತಗೊಂಡ ವಿಷಯಗಳ ಸ್ಥೂಲನೋಟವು ಕೆಳಗಿನಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ. ಇಲ್ಲಿ ಯಾವ ಕಾರಣಗಳಿಗೆ ಅಧ್ಯಯನವನ್ನು ಕೈಗೊಳ್ಳಲಾಯಿತು, ಇದರ ಮಹತ್ವವೇನು ಎಂಬುದನ್ನು ಹೇಳಲಾಗಿದೆ. ಅಲ್ಲದೆ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕಲಾತ್ಮಕವಾಗಿ ಈ ಅಧ್ಯಯನವು ಯಾವ ರೀತಿಯ ಪ್ರಸ್ತುತತೆಯನ್ನು ಪಡೆದುಕೊಂಡಿದೆ ಎಂಬುದನ್ನು ಹೇಳಲಾಗಿರುತ್ತದೆ. ಇದರ ಜೊತೆಗೆ ಈ ಅಧ್ಯಯನವು ಸಮಕಾಲೀನ ಬದುಕಿಗೆ, ಕಲಾಕ್ಷೇತ್ರಕ್ಕೆ ಯಾವ ರೀತಿಯ ಪ್ರಯೋಜನಗಳನ್ನು ಉಂಟುಮಾಡುತ್ತದೆ ಎಂಬುದನ್ನು ಉದ್ದೇಶಗಳ ಹಿನ್ನೆಲೆಯಲ್ಲಿ ಹೇಳಲಾಗಿದೆ. ಅಲ್ಲದೇ ಈ ಅಧ್ಯಯನದಲ್ಲಿ ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿ ಇವುಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಯಾವ ವಿಧಾನದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ ಮತ್ತು ಈ ಅಧ್ಯಯನದ ವ್ಯಾಪ್ತಿ ಎಲ್ಲಿಯವರೆಗೆ ವಿಸ್ತರಿಸಲಾಗಿದೆ ಎಂಬುವುದನ್ನು ತಿಳಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆಯ ನೆಲೆಗಳ ಹಿನ್ನಲೆ ಮತ್ತು ಸ್ವರೂಪ ವರ್ಗೀಕರಣ ಎಂಬುದಾಗಿದ್ದು, ಭಿತ್ತಿ ಚಿತ್ರಗಳಿಗೆ ಅನುಗುಣವಾಗಿ ದೇವಾಲಯ, ಅರಮನೆಗಳು, ಮಠಗಳು, ಜೈನ ಬಸದಿಗಳು, ಕ್ರೈಸ್ಥ ದೇವಾಲಯಗಳ ಇತಿಹಾಸವನ್ನು ಕಟ್ಟಿಕೊಡುವುದರ ಜೊತೆ ಸಾಂಸ್ಕೃತಿಕ ಪರಿಸರದ ಲಕ್ಷಣಗಳನ್ನು ಕುರಿತು ಹೇಳಲಾಗಿದೆ. ದಕ್ಷಿಣ ಕರ್ನಾಟಕದ ಭಿತ್ತಿಚಿತ್ರಗಳ ಪ್ರಾಚೀನ ಪರಂಪರೆ, ಈ ಭಾಗದಲ್ಲಿ ಬೆಳೆದುಬಂದ ಸಾಂಸ್ಕೃತಿಕ ಪರಿಸರ, ಈ ಭಾಗದಲ್ಲಿ ಆಳ್ವಿಕೆ ಮಾಡಿದ ರಾಜರುಗಳು ಯಾವಾಗ ದೇವಾಲಯಗಳನ್ನು ನಿರ್ಮಿಸಲ್ಪಟ್ಟಿತು, ಆ ದೇವಾಲಯಗಳ ಧಾರ್ಮಿಕ ಪರಂಪರೆಯೊಂದಿಗೆ ಬೆಸೆದುಕೊಂಡಿರುವ ಸಂಬಿಕೆ ಆಚರಣೆಗಳನ್ನು ಕುರಿತು ಹೇಳಲಾಗಿರುವುದರ ಜೊತೆಗೆ ಅಲ್ಲಿರುವ ಸಂಗತಿಗಳನ್ನು ವಿವೇಚನೆ ಮಾಡಲಾಗಿದೆ. ಇದರೊಂದಿಗೆ ದಕ್ಷಿಣ ಕರ್ನಾಟಕ ಭಾಗದಲ್ಲಿರುವ ಭಿತ್ತಿ ಚಿತ್ರಗಳ ಸಂಗ್ರಹದ ನೆಲೆಗಳು ಯಾವ ಶೈಲಿಯಲ್ಲಿ ಕಟ್ಟಲಾಗಿದೆ, ಅವುಗಳ ಗೋಪುರ, ಒಳಾಂಗಣ, ಗರ್ಭಗೃಹ, ಮುಖಮಂಟಪ,

ಸಭಾಮಂಟಪ ಮುಂತಾದವುಗಳು ಮತ್ತು ಒಟ್ಟಾರೆ ಇಲ್ಲಿ ಸಿಗುವ ಭಿತ್ತಿಚಿತ್ರಗಳ ರಚನೆಗೆ ಪೂರಕವಾದ ಮಾಹಿತಿಯನ್ನು ಒದಗಿಸಲಾಗಿರುತ್ತದೆ.

ಮೂರನೆ ಅಧ್ಯಾಯದಲ್ಲಿ ದಕ್ಷಿಣ ಕರ್ನಾಟಕದ ಅರಮನೆಗಳಲ್ಲಿ ಭಿತ್ತಿಚಿತ್ರಗಳ ವಸ್ತು ವಿಷಯವನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದ್ದು, ದಕ್ಷಿಣ ಕರ್ನಾಟಕ ಭಾಗದಲ್ಲಿ ಪ್ರಮುಖವಾಗಿ ಅರಮನೆಗಳೆಂದರೆ ಟಿಪ್ಪುಸುಲ್ತಾನ್ ಅರಮನೆ. ಬೆಂಗಳೂರು, ದರಿಯಾ ದೌಲತ್ ಅರಮನೆ. ಶ್ರೀರಂಗಪಟ್ಟಣ, ನಾಲ್ಕುನಾಡು ಅರಮನೆ. ಕೊಡಗು, ಮೈಸೂರು ಅರಮನೆ, ಮೈಸೂರು, ಈ ನಾಲ್ಕು ಅರಮನೆಗಳು ಐತಿಹಾಸಿಕ ಇತಿಹಾಸವನ್ನು ಹೊಂದಿರುತ್ತವೆ. ಮುಖ್ಯವಾಗಿ ಇಲ್ಲಿ ನೂರಾರು ಚಿತ್ರಗಳನ್ನು ಕಾಣಬಹುದು. ಟಿಪ್ಪು ಅರಮನೆಯು ವಿಶ್ರಾಂತಿ ಪಡೆಯುವ ಸಲುವಾಗಿ ಟಿಪ್ಪುಸುಲ್ತಾನ್ ಕಟ್ಟಿದನೆನ್ನಲಾಗಿದೆ. ಅದಕ್ಕೆ ಪೂರಕವಾದ ದಾಖಲೆಗಳನ್ನು ಪರಿಶೀಲಿಸಬಹುದು.

ಎರಡು ಅಂತಸ್ತಿನ ಬೃಹತ್ತಾದ ಕಟ್ಟಡವಿರುವುದು ಬೆಂಗಳೂರಿನ ಮಾರ್ಕೇಟ್ ರಸ್ತೆಯಲ್ಲಿ, ಸಧ್ಯ ಭಾರತೀಯ ಪ್ರಾಚೀನ ಮತ್ತು ಪುರಾತತ್ವ ಇಲಾಖೆಯ ಉಸ್ತುವಾರಿಯಲ್ಲಿ ವಿಶ್ರಾಂತತೆಯನ್ನು ಹೊಂದಿರುವ ಈ ಅರಮನೆಯನ್ನು ಬೇಸಿಗೆ ಅರಮನೆಯಂತಲೂ ಕರೆಯುತ್ತಾರೆ. ಇಲ್ಲಿ ಚಿತ್ರಗಳ ಸಂಖ್ಯೆ ತೀರಾ ಕಡಿಮೆ ಆದರೆ ಚಿತ್ರ ವಿನ್ಯಾಸಗಳದ್ದೆ ಅಬ್ಬರ ಹೆಚ್ಚು ಎರಡು ಮಹಡಿಯ ಮೇಲೆ ಕೆಳಗೆ ಮತ್ತು ಗೋಡೆಯ ಸುತ್ತಲೂ ಹೂವಿನ ಅಲಂಕಾರ ಮತ್ತು ವಿನ್ಯಾಸಗಳು ಇನ್ನೂ ಅಚ್ಚಳಿಯದೇ ರಂಜಿಸುತ್ತಿವೆ. ಇಲ್ಲಿನ ಮತ್ತೊಂದು ವಿಶೇಷವೇನೆಂದರೆ ಮುಖ್ಯದ್ವಾರಗಳು ಎರಡು ಕಡೆಯೂ ಕೂಡ ಒಂದೇ ಹೋಲಿಕೆಯನ್ನು ಹೊಂದಿರುತ್ತದೆ. ಇದೇ ಮಾದರಿಯಲ್ಲಿ ಅಂದರೇ ಬೇಸಿಗೆ ವಿಶ್ರಾಂತಿ ಸ್ಥಳ ಎಂದುಕೊಂಡರೂ ದರಿಯಾ ದೌಲತ್ ಅರಮನೆಯೂ ಕೂಡ ದೀಪದ ಅಲಂಕಾರದಂತೆ ಚಿತ್ರಗಳಿಂದ ಕಂಗೊಳಿಸುತ್ತಿದೆ. ಟಿಪ್ಪುವಿನ ಈ ಎರಡು ಅರಮನೆಗಳು ಹೋಲಿಕೆಯಲ್ಲಿ ಒಂದೇ ಆದರೂ ಚಿತ್ರಗಳಿರುವುದರಲ್ಲಿ ಭಿನ್ನ ಆಯಾಮಗಳನ್ನು ಗುರುತಿಸಬಹುದು. ಅದು ಈ ದರಿಯಾ ದೌಲತ್ ಅರಮನೆಯಲ್ಲಿ ಯುದ್ದದ ಬೃಹತ್ ದೃಶ್ಯ, ಹತ್ತಾರೂ ಭಾವಚಿತ್ರಗಳು, ಬ್ರಿಟಿಷ್ ಕಲಾವಿದ ಪ್ರಭಾವವನ್ನು ಎತ್ತಿಹಿಡಿಯುತ್ತಿವೆ ಇಲ್ಲಿನ ಭಿತ್ತಿಚಿತ್ರಗಳು. ಸಾಮಾಜಿಕ ಚಿತ್ರಗಳು ಮತ್ತು ರಾಜಕೀಯ, ಧಾರ್ಮಿಕ ಚಿತ್ರಗಳು ಕೂಡ ಇಲ್ಲಿರುತ್ತವೆ. ಅದೇ ರೀತಿ ನಾಲ್ಕುನಾಡು ಅರಮನೆಯಲ್ಲಿಯೂ ಕೂಡ ಕೆಲವು ದೃಶ್ಯಗಳಿರುವುದನ್ನು ಇದೇ ಅಧ್ಯಾಯದಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದ್ದು, ಮೇಲ್ಛಾವಣಿಯಲ್ಲಿ ಚಿತ್ರಗಳ ವಿನ್ಯಾಸವನ್ನು ಕಾಣಬಹುದು. ಇನ್ನೂ ಮೈಸೂರಿನ ಅರಮನೆಯಲ್ಲಿ ಸಾವಿರಾರು ಚಿತ್ರಗಳನ್ನು ಕಾಣಬಹುದಾದರೂ ಅಗತ್ಯಕ್ಕೆ ತಕ್ಕಂತೆ ಕೆಲವೇ ಕೆಲವು ಚಿತ್ರಗಳನ್ನು ಈ ಅಧ್ಯಯನಕ್ಕೆ ಬಳಸಿಕೊಂಡು ರಾಜರ ವೈಭವ ಮತ್ತು ಪ್ರಭಾವದ ಹಿನ್ನಲೆಯನ್ನು ತಿಳಿಸಿಕೊಡಲಾಗಿದೆ. ಪ್ರಮುಖವಾಗಿ ಇಲ್ಲಿನ ಚಿತ್ರಗಳನ್ನು ವಿಶ್ಲೇಷಿಸುವಾಗ ಆಯಾ ರಾಜರು ಚಿತ್ರಗಳನ್ನು ಯಾವ ಉದ್ದೇಶಗಳಿಗೆ ರಚನೆ ಮಾಡಿಸಿದರು, ಅವರ ಕೃತಿಯಲ್ಲಿನ ಅಭಿರುಚಿಗಳೇನು ಎಂಬುದರ ಮಹಿತಿಯನ್ನು ತಿಳಿದುಕೊಳ್ಳುವ ಪ್ರಯತ್ನ ಇದಾಗಿರುತ್ತದೆ.

ಇಲ್ಲಿರುವ ಭಿತ್ತಿಚಿತ್ರಗಳಲ್ಲಿ ರಾಜರ ಖಾಸಗಿ ಬದುಕಿಗೆ ಸಂಬಂಧಿಸಿದ ಚಿತ್ರಗಳು, ಅವರ ವಂಶಾವಳಿಯನ್ನು ಬಿಂಬಿಸುವ ಚಿತ್ರಗಳು, ರಾಜರ ಯುದ್ದದ ಸನ್ನಿವೇಶ ಮತ್ತು ದಿಗ್ವಿಜಯಗಳನ್ನು ನಿರೂಪಿಸುವ ಚಿತ್ರಗಳು, ರಾಜರ ನ್ಯಾಯ ವ್ಯವಸ್ಥೆಯನ್ನು ತಿಳಿಸುವ ಚಿತ್ರಗಳು, ರಾಜರ ಆಡಳಿತ ವ್ಯವಸ್ಥೆಯನ್ನು ತಿಳಿಸುವ ಚಿತ್ರಗಳು, ರಾಜರ ನ್ಯಾಯ ವ್ಯವಸ್ಥೆಯನ್ನು ತಿಳಿಸುವ ಚಿತ್ರಗಳು, ಸಮಕಾಲೀನ ರಾಜರವ್ಯಕ್ತಿತ್ವವನ್ನು ನಿರೂಪಿಸುವ ಚಿತ್ರಗಳು, ಹೀಗೆ ಹತ್ತು ಹಲವು ರೀತಿಯ ಅರಮನೆಗಳಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ರಾಜರ ಬೇಟೆಯ ದೃಶ್ಯಗಳು, ರಾಜರು ಬೇರೆ ಬೇರೆ ಸ್ತ್ರೀಯರೊಂದಿಗಿದ್ದ ವಯಕ್ತಿಕ ಸಂಬಂಧಗಳು ಮತ್ತು ಮಿಥುನ ಕ್ರೀಯೆಯ ಚಿತ್ರಗಳು, ಭಾವ, ವ್ಯಕ್ತಿ ಚಿತ್ರಗಳು, ಇವುಗಳೆಲ್ಲಾವೂ ಖಾಸಗಿ ಕೋಣೆಯಲ್ಲಿದ್ದು, ಅವುಗಳನ್ನು ಸಹ ಗಮನಿಸಿ ರಾಜರ ಕಲಾಭಿರುಚಿ, ಧಾರ್ಮಿಕತೆ, ಸಾಮಾಜಿಕತೆಗಳೊಳಗೊಂಡಂತೆ ನೂರಾರು ಚಿತ್ರಗಳಿರುವುದನ್ನು ಇಲ್ಲಿ ವಿವರಿಸಲಾಗಿರುತ್ತದೆ. ಇಲ್ಲಿರುವ ಪ್ರತಿಯೊಂದು ಚಿತ್ರ, ಆಕಾರಗಳು, ವಸ್ತುವಿಷಯ, ಶೈಲಿ, ಬಣ್ಣಗಾರಿಕೆ, ರೇಖಾವಿನ್ಯಾಸ, ಸಂಯೋಜನಾ ರೀತಿ, ಸ್ಥಳಾವಕಾಶದ ಹಿನ್ನೆಲೆ, ಚಿತ್ರದ ಮೈವಳಿಕೆ, ಚಿತ್ರಗಳಲ್ಲಿ ಕಂಡುಬರುವ ವೇಷಭೂಷಣಗಳು, ಪರಿಕರಗಳು ಮತ್ತು ಚಿತ್ರರಚನೆಯ ಉದ್ದೇಶಗಳನ್ನು ಕುರಿತು ಚರ್ಚಿಸಲಾಗಿರುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿನ ಭಿತ್ತಿಚಿತ್ರಗಳ ವಸ್ತು ವಿಷಯಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದ್ದು, ಶೈವ, ವೈಷ್ಣವ, ಕ್ರೈಸ್ಥ, ಜೈನ, ಮಸೀದಿ ಒಟ್ಟಾರೆ ಹಿಂದೂ, ಮುಸ್ಲಿಂ, ಕ್ರೈಸ್ಥ ಮತ್ತು ಜೈನ ಬಸದಿಗಳಲ್ಲಿ ಕಂಡುಬರುವ ಭಿತ್ತಿಚಿತ್ರಗಳ ಕುರಿತ ಸಮಗ್ರ ಅಧ್ಯಾಯವಿದಾಗಿದ್ದು, ಇಲ್ಲಿ ತಮ್ಮದೇ ಆಡಳಿತವಿರುವಾಗ ಆಚರಿಸಿದ ಅಭಿರುಚಿಯೇ ಈ ಕಲೆಯಾಗಿದೆ ಮತ್ತು ಆಗಿನ ಆಡಳಿತಾಧಿಕಾರಿಗಳ ಆಸಕ್ತಿ ಕಲೆಯ ಮೇಲಿನ ಪ್ರಭಾವ ಎಷ್ಟರಮಟ್ಟಿಗಿತ್ತು ಎಂಬುದಕ್ಕೆ ದಕ್ಷಿಣ ಕರ್ನಾಟಕದಲ್ಲಿ ಕಾಣಲ್ಪಡುವ ಭಿತ್ತಿಚಿತ್ರಗಳ ಸಂಗ್ರಹವಿರುವ ದೇವಾಲಯಗಳೇ ಸಾಕ್ಷಿ. ಇಲ್ಲಿಯೂ ಕೂಡ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಿನ್ನಲೆಯಲ್ಲಿ ನಡೆದು ಬಂದ ಹಾದಿಯಲ್ಲಿ ಕಲೆಯ ಪ್ರಭಾವ ಎಷ್ಟರ ಮಟ್ಟಿಗಿತ್ತು ಎಂಬುದನ್ನು ಈ ಅಧ್ಯಾಯನದಲ್ಲಿ ವಿವರಿಸಲಾಗಿದೆ. ದೇವಾಲಯದ ಭಿತ್ತಿಚಿತ್ರಗಳ ಮೇಲೆ ಮೈಸೂರು, ವಿಜಯನಗರ, ತಂಜಾವೂರು, ಸ್ಥಳೀಯ ಜಾನಪದ ಶೈಲಿ ಮತ್ತು ಇತರೆ ಶೈಲಿಗಳ ಪ್ರಭಾವವಿರುವುದು ಕಂಡುಬರುತ್ತದೆ. ಇಲ್ಲಿ ಚಿತ್ರಗಳಿಗೆ ಶೈವ, ವೈಷ್ಣವ, ಶಾಕ್ತ ಪುರಾಣಗಳು, ರಾಮಾಯಣ, ಮಹಾಭಾರತ, ರಾಜರ ದಿಗ್ವಿಜಯಗಳು, ಈ ದೇವಾಲಯದ ಜಾತ್ರೆ, ಉತ್ಸವಗಳು, ಸ್ಥಳೀಯ ಜನರ ಜೀವನ ವಿಧಾನಗಳ ಪ್ರೇರಣೆ ಇರುವುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೇ ಇಲ್ಲಿನ ಚಿತ್ರಗಳು ಅನೇಕ ಶೈಲಿಗಳ ಪ್ರಭಾವಕ್ಕೆ ಒಳಗಾದರೂ ಸಹಿತ ಇಲ್ಲಿರುವ ಚಿತ್ರಗಳು ಪ್ರತ್ಯೇಕ ಚಿತ್ರಶೈಲಿಯನ್ನು ಒಳಗೊಂಡಿವೆ ಎಂಬ ತೀರ್ಮಾನಕ್ಕೆ ಬರಬಹುದು. ಈ ಅಧ್ಯಾಯದಲ್ಲಿ ಚಿತ್ರಗಳಿಗೆ ಒದಗಿರುವ ಆಪತ್ತುಗಳನ್ನು ವಿಂಗಡಿಸಿಕೊಂಡು ಹೇಳಿ, ಅವುಗಳಿಂದ ಚಿತ್ರಗಳನ್ನು ಸಂರಕ್ಷಿಸುವ ಹಲವಾರು ಮಾರ್ಗೋಪಾಯಗಳನ್ನು

ತಿಳಿಸಲಾಗಿದೆ. ಹೀಗೆ ಅನೇಕ ಅಂಶಗಳನ್ನು ವಿವಿಧ ಅಧ್ಯಾಯಗಳಲ್ಲಿ ಚರ್ಚಿಸಲಾಗಿದ್ದು, ಅದರಂತೆ ಈ ಅಧ್ಯಾಯನದ ಹಿನ್ನೆಲೆಯಲ್ಲಿ ಕೆಳಗಿನ ಕೆಲವು ಪ್ರಮುಖ ಅಂಶಗಳನ್ನು ಕಾಣಬಹುದು.

ಪ್ರಮುಖವಾಗಿ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮೇಲ್ಛಾವಣಿಯಲ್ಲಿರುವ ಚಿತ್ರಗಳ ರಚನೆಯ ಕಾಲಮಾನವನ್ನು ೧೬ನೆಯ ಶತಮಾನವೆಂದು ಇತಿಹಾಸದಿಂದ ತಿಳಿಯಬಹುದಾಗಿದೆ. ಭಿತ್ತಿ ಚಿತ್ರಗಳು ಮೇಲ್ಛಾವಣಿಯಲ್ಲಿರುವ ಪ್ರತ್ಯೇಕ ಅಂಕಣಗಳಲ್ಲಿ ರಚನೆಗೊಂಡಿವೆ. ಬಹುಮಟ್ಟಿನ ಚಿತ್ರಗಳು ಸಂಪೂರ್ಣವಾಗಿ ನಾಶವಾಗಿದ್ದು, ಕೆಲವು ಚಿತ್ರಗಳು ಮಾತ್ರ ಉಳಿದುಕೊಂಡಿವೆ. ಅದೇರೀತಿ ಸಿಬಿಯ ನರಸಿಂಹ ದೇವಾಲಯ ಮತ್ತು ಶಿರಾದ ವೇಣುಗೋಪಾಲ ದೇವಾಲಯಗಳಲ್ಲಿಯೂ ಕೂಡ ರಾಮಾಯಣ ಮತ್ತು ಮಹಾಭಾರತದ ಕೆಲವು ದೃಶ್ಯಗಳನ್ನು ಕಾಣಬಹುದು. ಪ್ರಸ್ತುತ ಶಿರಾದ ದೇವಾಲಯದಲ್ಲಿ ಭಿತ್ತಿ ಚಿತ್ರಗಳು ಸಂಪೂರ್ಣ ನಾಶಗೊಂಡಿರುತ್ತವೆ. ಸಿಬಿಯಲ್ಲಿ ಭಾಗವತದ ದೃಶ್ಯ, ರಾಮಾಯಣದ ದೃಶ್ಯ, ಕೃಷ್ಣನ ಬಾಲ್ಯ ಜೀವನ, ನರಸಿಂಹನ ಅವತಾರ, ಮಿಥುನ ಚಿತ್ರಗಳು ಮತ್ತು ಸಾಮಾಜಿಕ ಚಿತ್ರಗಳನ್ನು ಕೂಡ ಕಾಣಬಹುದು. ಇದೇ ದಾರಿಯಲ್ಲಿ ಸಾಗಿದಾಗ ಮೈಸೂರು ಅರಮನೆಯಲ್ಲಿರುವ ಪ್ರಸನ್ನಕೃಷ್ಣಸ್ವಾಮಿ ದೇವಾಲಯ, ಶ್ವೇತಾವರಹ ದೇವಾಲಯದಲ್ಲಿಯೂ ಕೂಡ ಕ್ರಮವಾಗಿ ಕೃಷ್ಣನ ಲೀಲೆಗಳು ಮತ್ತು ಬದುಕಿನ ನೋಟಗಳನ್ನು ವಿವವರಿಸಲಾಗಿದೆ ಮತ್ತು ರಾಮಾಯಣದ ಸನ್ನೀವೇಶಗಳನ್ನು ಶ್ವೇತಾವರಹ ದೇವಾಲಯದಲ್ಲಿ ಕಾಣಬಹುದು.

ನಾಗಮಂಗಲದ ಸೌಮ್ಯಕೇಶವ ದೇವಾಲಯದಲ್ಲಿ ಕೆಲವೇ ಕೆಲವು ನೀಲಿ ರೇಖೆಗಳಿಂದ ರಚಿಸಿರುವ ಭಿತ್ತಿ ಚಿತ್ರಗಳನ್ನು ಕಾಣಬಹುದು. ಇಲ್ಲಿ ಮುಖ್ಯವಾಗಿ ಹೊರಭಾಗದ ಬಲಭಾಗದಲ್ಲಿರುವ ಲಕ್ಷ್ಮಿದೇವಾಲಯದ ಗರ್ಭಗುಡಿಯ ಭಾಗಲಿನ ಮೇಲೆ ಮತ್ತು ಅಕ್ಕಪಕ್ಕ ಅಲಂಕಾರ ಮತ್ತು ಶಂಖಚಿತ್ರವಿರುವ ದೃಶ್ಯವನ್ನು ಕಾಣಬಹುದು. ಅಷ್ಟೇ ಅಲ್ಲದೇ ಕರಾವಳಿ ಭಾಗದಲ್ಲಿರುವ ಕ್ರೈಸ್ಥ ಸಮುದಾಯದ ದೇವಾಲಯಗಳಲ್ಲಿ ವಿಶೇಷವಾದ ಭಿತ್ತಿಚಿತ್ರಗಳನ್ನು ಕಾಣಬಹುದು. ಕ್ರೈಸ್ತನ ಹುಟ್ಟು, ಸಾವಿನ ದೃಶ್ಯಗಳ ಜೊತೆ ಬದುಕಿನಲ್ಲಾದ ನೂರಾರು ಘಟನೆಗಳಿರುವ ಚಿತ್ರಗಳನ್ನು ಮಂಗಳೂರಿನಲ್ಲಿರುವ ಸೆಂಟ್ ಅಲೋಷಿಯಸ್ ಚರ್ಚ್, ಕುಲಶೇಖರ ಚರ್ಚ್, ಕೆಥೆಡ್ರೆಲ್ ಚರ್ಚ್‌ಗಳಲ್ಲಿ ಭಿತ್ತಿ ಚಿತ್ರಗಳನ್ನು ಕಾಣಬಹುದು. ಹಾಗೆಯೇ ಮೈಸುರಿನಲ್ಲಿರುವ ನೂರಕ್ಕೂ ಅಧಿಕ ಆಯಸ್ಸಿನ ಸಂತ ಫಿಲೋಮಿನ ಕೆಥೆಡ್ರಲ್ ಚರ್ಚ್‌ನಲ್ಲಿ ಗಾಜಿನ ಚಿತ್ರಗಳನ್ನು ಕಾಣಬಹುದು. ಜೊತೆಗೆ ಜೈನ ಬಸದಿಗಳು ಸಾಕಷ್ಟಿದ್ದು ಅಲ್ಲಿ ಹೆಚ್ಚು ದ್ವಾರಪಾಲಕರ ಚಿತ್ರಗಳಿರುವುದನ್ನು ಗುರುತಿಸಲಾಗಿದೆ.

ಅಧ್ಯಾಯ ಐದರಲ್ಲಿ ದಕ್ಷಿಣ ಕರ್ನಾಟಕ ಮಠಗಳಲ್ಲಿರುವ ಭಿತ್ತಿ ಚಿತ್ರಗಳನ್ನು ಕುರಿತು ಸಮಗ್ರ ಅಧ್ಯಯನ ಕೈಗೊಂಡಿದ್ದು, ಮೂಡಬಿದರೆಯ ಜೈನಮಠ, ಶ್ರವಣಬೆಳಗೊಳದ ಶ್ರೀಮಠ, ಕಾರ್ಕಳದ ಶ್ರೀಮಠ ಮತ್ತು ಅಂಕಲಿಮಠ, ಚಿತ್ರದುರ್ಗಗಳಲ್ಲಿ ಭಿತ್ತಿ ಚಿತ್ರಗಳಿರುವುದನ್ನು ಕಾಣುತ್ತೇವೆ. ಅಂಕಲಿಗ

ಮಠದಲ್ಲಿ ನಕ್ಷಾಚಿತ್ರ ಮತ್ತು ಸಾಮಾಜಿಕ ಚಿತ್ರಗಳಿರುವುದನ್ನು ಹಿರಿಯರು ಮತ್ತು ಸ್ಥಳಿಯರು ತಿಳಿಸುತ್ತಾರಾದರೂ ಸಧ್ಯ ಅಲ್ಲಿ ಚಿತ್ರಗಳು ಸಂಪೂರ್ಣವಾಗಿ ನಾಶವಾಗಿರುತ್ತವೆ. ಅದೇರೀತಿ ಶ್ರೀಮಠ ಶ್ರವಣಬೆಳಗೋಳ ಮತ್ತು ಮೂಡಬಿದರೆಯ ಮಠಗಳಲ್ಲಿ ಕೆಲವು ಭಿತ್ತಿ ಚಿತ್ರಗಳಿರುವುದನ್ನು ಕಾಣಬಹುದು. ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಜೈನ ಭೂಗೋಳ, ತ್ರಿಲೋಕ ನಕ್ಷೆ, ಮಾನಸ್ತಂಭ, ಜಂಭೂವೃಕ್ಷ, ದ್ವಾರಪಾಲಕರ ಚಿತ್ರ, ಪಾರ್ಶ್ವನಾಥನ ಜೀವನ ಚಿತ್ರಗಳು, ಅಂಬಾರಿಯ ಮೇಲೆ ಪಾರ್ಶ್ವನ ಮೆರವಣಿಗೆಯ ದೃಶ್ಯ. ಪಾರ್ಶ್ವಕುಮಾರ ಮತ್ತು ಮುನಿ, ಬಾಹುಬಲಿಯ ಸೈನ್ಯ ಹೀಗೆ ಹತ್ತಾರು ದೃಶ್ಯಗಳನ್ನೊಂದಿದ ಹೆಗ್ಗಳಿಕೆ ಈ ಜೈನಮಠಗಳದ್ದಾಗಿರುತ್ತದೆ. ಇಂತಹ ಭಿತ್ತಿಚಿತ್ರಗಳುಳ್ಳ ಮಠಗಳ ಇತಿಹಾಸವನ್ನು ತಿಳಿಸುವುದರ ಜೊತೆಗೆ ಅಲ್ಲಿರುವ ಭಿತ್ತಿಚಿತ್ರಗಳ ಕುರಿತು ಮಾಹಿತಿಯನ್ನು ಈ ಅಧ್ಯಾಯದಲ್ಲಿ ನೀಡುವುದರ ಜೊತೆ ಸಿಕ್ಕ ಭಿತ್ತಿ ಚಿತ್ರಗಳ ವಿಶ್ಲೇಷಣೆಯನ್ನು ಮಾಡಲಾಗಿರುತ್ತದೆ.

ಅಧ್ಯಾಯ ಆರು ಸಂಕೀರ್ಣ ಮಾಧ್ಯಮದ ಭಿತ್ತಿ ಚಿತ್ರಕಲೆಯಗಿರುವುದರಿಂದ ಭಿತ್ತಿ ಚಿತ್ರಗಳಿಗೆ ಹೊಂದಿಕೆಯಾದ ಮಾಧ್ಯಮಗಳನ್ನು ಹುಡುಕಿ ಈ ಅಧ್ಯಾಯದಲ್ಲಿ ವಿವರಿಸಲಾಗಿದ್ದು, ಅವುಗಳಲ್ಲಿ ಪ್ರಾಗಿತಿಹಾಸಿಕ ಚಿತ್ರಕಲೆ, ಕಾವಿ ಭಿತ್ತಿ ಚಿತ್ರಕಲೆ ಮತ್ತು ಗಾರೆ ಶಿಲ್ಪದ ಮೇಲೆ ಬಣ್ಣವನ್ನು ಲೇಪಿಸಲಾದ ಚಿತ್ರಗಳನ್ನು ಕುರಿತು ಚಚಿಸಲಾಗಿರುತ್ತದೆ.

ಅಧ್ಯಾಯ ಏಳರಲ್ಲಿ ದಕ್ಷಿಣ ಕರ್ನಾಟಕ ಭಿತ್ತಿ ಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿಗಳ ವಸ್ತುಸ್ಥಿತಿಯನ್ನು ಅರಿತು ಈ ಭಾಗದಲ್ಲಿ ಸಿಕ್ಕಿರುವ ಭಿತ್ತಿ ಚಿತ್ರಗಳಲ್ಲಿ ಸಾಮ್ಯತೆಯ ಸ್ಥಾನಮಾನಗಳನ್ನು ಚರ್ಚಿಸಲಾಗಿದ್ದು, ದಕ್ಷಿಣ ಕರ್ನಾಟಕದಲ್ಲಿ ಕಂಡು ಬರುವ ಭಿತ್ತಿ ಚಿತ್ರಗಳಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ಕೆಲವು ಚಿತ್ರಗಳು ವಿಜಯನಗರ ಶೈಲಿಯಲ್ಲಿದ್ದರೆ ಮತ್ತೊಂದು ಕಡೆ ಮೈಸೂರು ಶೈಲಿಯಲ್ಲಿಯೂ ಕೆಲವು ರಜಪೂತ ಶೈಲಿಯಲ್ಲಿರುವುದನ್ನು ಕಾಣಬಹುದು. ಅಷ್ಟೇ ಅಲ್ಲ ಜನಪದ ಶೈಲಿಯ ಭಿತ್ತಿ ಚಿತ್ರಗಳನ್ನು ಸಹ ಕಾಣಬಹುದು. ಇವೆಲ್ಲಾವುಗಳನ್ನು ಗಮನಿಸುವುದರೊಂದಿಗೆ ಇವುಗಳಿಗಾದ ಪ್ರಭಾವ ಎಂತಹದ್ದು, ತಂತ್ರ ಮತ್ತು ಶೈಲಿಯಲ್ಲಾದ ಬದಲಾವಣೆಗಳೇನೆಂಬುದನ್ನು ತುಂಬಾ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಮೈಸೂರು ಶೈಲಿ, ಅದರ ಜೊತೆಗೆ ಇಂಡೋಪರ್ಶಿಯನ್ ಶೈಲಿ, ಮೊಘಲ್ ಶೈಲಿಗಳು ಇಲ್ಲಿನ ಚಿತ್ರಗಳ ಮೇಲೆ ಪ್ರಭಾವ ಬೀರಿರುವುದನ್ನು ಕಂಡುಕೊಳ್ಳಲಾಗಿದೆ. ಕೆಲವು ಚಿತ್ರಗಳು ಒಂದೇ ಶೈಲಿಯ ಚಿತ್ರದ ಮೇಲೆ ಮತ್ತೊಂದು ಚಿತ್ರ ಶೈಲಿಯ ಪ್ರಭಾವ ಉಂಟಾಗಿದ್ದರೆ, ಮತ್ತೆ ಕೆಲವು ಚಿತ್ರ ನೆಲೆಗಳಲ್ಲಿ ಒಂದು ಚಿತ್ರದ ಮೇಲೆ ಒಂದಕ್ಕಿಂತ ಹೆಚ್ಚಿನ ಚಿತ್ರ ಶೈಲಿಯ ಪ್ರಭಾವಗಳು ಗೋಚರವಾಗುತ್ತವೆ. ಕೊನೆಯಲ್ಲಿ ದಕ್ಷಿಣ ಕರ್ನಾಟಕದ ಭಾಗದಲ್ಲಿರುವ ಭಿತ್ತಿ ಚಿತ್ರಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದವರ ಕುರಿತು ವಿವರಣೆಯನ್ನು ನೀಡಲಾಗಿದೆ.

ಎಂಟನೇ ಅಧ್ಯಾಯದಲ್ಲಿ ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆಗಳ ಸ್ಥಿತಿಗತಿ ಮತ್ತು ಸಂರಕ್ಷಣೋಪಾಯಗಳ ಕುರಿತು ವಿವರಿಸಲಾಗಿದ್ದು. ಗೋಡೆ ಮೇಲೆ ಇತಿಹಾಸವನ್ನು ಚಿತ್ರಗಳ

ಮೂಲಕ ತೋರಿಸಬಹುದು ಅದಕ್ಕಿಂತ ಮುಂಚೆ ಗೋಡೆಯನ್ನು ಹೇಗಲ್ಲಾ ಸಿದ್ಧತೆ ಮಾಡಿಕೊಂಡಿರಬೇಕು, ಚಿತ್ರಗಳ ಸಂರಕ್ಷಣೆ ಇರಬೇಕೆಂದರೆ ಚಿತ್ರಗಳ ಬಗ್ಗೆ ನಿಗಾವಹಿಸಬೇಕಾದದ್ದು ಆಧ್ಯ ಕರ್ತವ್ಯವಾದರೂ ಪ್ರಸ್ತುತ ದಿನಮಾನಗಳಲ್ಲಿ ಪ್ರಾಚೀನ ದೇವಾಲಯವನ್ನು ನವೀಕರಣ ಮಾಡುವ ದೃಷ್ಟಿಯಿಂದ ದೇವಾಲಯ, ಮಠ, ಮಸೀದಿ, ಬಸದಿ ಮುಂತಾದವುಗಳನ್ನು ಒಡೆದು ಭಿತ್ತಿ ಚಿತ್ರಗಳನ್ನು ನಾಶ ಮಾಡುತ್ತಿರುವ ಈ ಹೊತ್ತಲ್ಲಿ ಈ ಅಧ್ಯಾಯ ಒಂದು ಪಾಠವಾಗಿಯೂ ಪರಿಣಾಮವನ್ನು ಬೀರಬಲ್ಲಂತದ್ದಾಗಿದೆ. ಎಲ್ಲಿಂದ ಪ್ರಾರಂಭವಾಯಿತು, ಪ್ರಸ್ತುತ ಭಿತ್ತಿ ಚಿತ್ರಗಳ ಸ್ಥಿತಿಗತಿ ಹೇಗಿದೆ..? ಅದಕ್ಕೆಲ್ಲಾ ಕಾರಣವೇನು ಎಂಬ ಪ್ರಶ್ನೆಗೆ ಉತ್ತರವೇ ಇಲ್ಲವೇನೋ ಎಂಬ ಆತಂಕ ನೋಡುಗ ಮತ್ತು ಸಂಶೋಧಕನಿಗೆ ಬರುವುದು ಸಹಜವಾಗಿದೆ. ಇಲ್ಲಿಯವರೆಗೆ ಸುಂದರವಾಗಿದ್ದ ಯಡೆಯೂರಿನ ಸಿದ್ದಲಿಂಗೇಶ್ವರ ದೇವಾಲಯದ ಭಿತ್ತಿ ಚಿತ್ರಗಳು. ರೇವಣಸಿದ್ದೇಶ್ವರ ದೇವಾಲಯ, ಸಿರಾ, ಪರಿವಾರದವರ ಚಾವಡಿ, ಕೊಳ್ಳೆಗಾಲ. ಟಿ.ನರಸೀಪುರದ ಮುಡುಕುತೋರೆ ಮಲ್ಲಿಕಾರ್ಜುನ ದೇವಾಲಯ(೧೮೫೦). ಮಾಗಡಿ ಸೋಮೇಶ್ವರ ದೇವಾಲಯ, ತಿಪ್ಪೋಜಿ ಅರಮನೆ, ಚನ್ನಪಟ್ಟಣ, ನಲ್ಪಟ್ನ ಅರಮನೆ, ಚನ್ನಪಟ್ಟಣ. ಯಲ್ಲಾದಹಳ್ಳಿ ಲಕ್ಷ್ಮೀದೇವಾಲಯ. ಕಾನ್ಲೇಶಿವ ದೇವಾಲಯ, ಸಾಗರ. ದೊಡ್ಡಬಸದಿ, ಹಾಸನ. ಹಸನಾಂಬ ದೇವಾಲಯ, ಹಾಸನ. ಸಿದ್ದೇಶ್ವರ ದೇವಾಲಯ, ಹಾಸನ. ಜಕ್ಕನಹಳ್ಳಿ ಕಲ್ಲೇಶ್ವರ ದೇವಾಲಯ(೧೧೭೦). ಮಡಿಕೇರಿ ಅರಮನೆ, ಅನಂತೇಶ್ವರ ದೇವಾಲಯ, ಹರದನಳ್ಳಿ ದಿವ್ಯಲಿಂಗೇಶ್ವರ, ಚಾಮರಾಜನಗರ. ಶಾರದಾಂಬೆ, ಶೃಂಗೇರಿ. ವಸ್ತಾರೆ ಪದ್ಮಾವತಿ ದೇವಾಲಯ. ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ತುಮಕೂರು. ಮಿಂಚುಕಲ್ಲು ಗೊಲ್ಲಹಳ್ಳಿ ಆಂಜನೇಯ ದೇವಾಲಯ(೧೯ನೇ ಶತಮಾನ). ತ್ಯಾಮಗೊಂಡ್ಲು ಲಕ್ಷ್ಮೀದೇವಾಲಯ, ಮುಳಬಾಗಿಲು ಆಂಜನೇಯ ದೇವಾಲಯ ಮುಂತಾದ ದಕ್ಷಿಣ ಕರ್ನಾಟಕದ ಭಾಗದಲ್ಲಿ ಕಂಡುಬಂದಿದ್ದ ಭಿತ್ತಿ ಚಿತ್ರಗಳು ಪ್ರಸ್ತುತ ಮಾಯವಾಗಿವೆ. ಅಂತಹ ಚಿತ್ರಗಳು ಇಂದು ಸಿಗುತ್ತಿಲ್ಲವಾದರೂ ಹೀಗಿರುವ ಭಿತ್ತಿ ಚಿತ್ರಗಳಾದರೂ ಹೇಗೆ ಸಂರಕ್ಷಣೆ ಮಾಡಬೇಕು. ಅದರಿಂದಾಗುವ ಉಪಯೋಗಗಳೇನೆಂಬುದನ್ನು ಪ್ರಮುಖವಾಗಿ ಅಧ್ಯಾಯದಲ್ಲಿ ವಿವರಿಸಲಾಗಿರುತ್ತದೆ.

ಸಮಾರೋಪದಲ್ಲಿ ಈ ಮೇಲಿನ ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಿದ ವಿಷಯಗಳ ಪಟ್ಟಿಯನ್ನು ನೀಡುವುದರೊಂದಿಗೆ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಸಂಶೋಧನೆಯಿಂದ ಕಂಡುಕೊಂಡ ಪಲಿತಗಳನ್ನು ಈ ಕೆಳಕಂಡಂತೆ ಸಮೀಕ್ಷಿಸಲಾಗಿದೆ.

೧. ದಕ್ಷಿಣ ಕರ್ನಾಟಕದ ಇತಿಹಾಸದಲ್ಲಿ ಇಲ್ಲಿಯವರೆಗೆ ಸಾಹಿತ್ಯ, ಕಲಾಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಕುರಿತು ಸಾಕಷ್ಟು ವಿಷಯಗಳು ಬೆಳಕಿಗೆ ಬಂದಿರುತ್ತದೆ ಆದರೆ ಕಲೆ ಮತ್ತು ಭಿತ್ತಿ ಚಿತ್ರಗಳ ಕುರಿತ ಕಡಿಮೆ ಸಂಶೋಧನೆಗಳು ನಡೆದ ಹಿನ್ನಲೆಯಲ್ಲಿ ಈ ಅಧ್ಯಯನ ಬಹಳ ಮುಖ್ಯವಾಗಿರುತ್ತದೆ.

೨. ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಗಳನ್ನು ಅವಲೋಕಿಸಿದಾಗ ಕಾಣುವ ಭಿತ್ತಿ ಚಿತ್ರಗಳಲ್ಲಿ ರಚನಾ ವಿಧಾನ, ವರ್ಣಸಂಯೋಜನೆ ಹಾಗೂ ತಂತ್ರಗಾರಿಕೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದನ್ನು

ಕಂಡುಕೊಳ್ಳಲಾಯಿತು.

೩. ವಿಜಯನಗರ, ಹೊಯ್ಸಳ ಮತ್ತು ಮೈಸೂರು ರಾಜರಾಡಳಿತದಲ್ಲಿ ರಚಿಸಿರುವ ಭಿತ್ತಿ ಚಿತ್ರಗಳೇ ಹೆಚ್ಚು ಈ ಅಧ್ಯಯನದಲ್ಲಿ ಗಮನಸೆಳೆಯುತ್ತವೆ.

೪. ದಕ್ಷಿಣ ಕರ್ನಾಟಕದಲ್ಲಿನ ದೇವಾಲಯಗಳು, ಮಠಗಳು ಮತ್ತು ಅರಮನೆಗಳಲ್ಲಿ ಹೆಚ್ಚು ಭಿತ್ತಿ ಚಿತ್ರಗಳು ಕಂಡು ಬಂದಿದ್ದು, ಆಯಾ ರಾಜರ ಕಾಲಕ್ಕೆ ಅನುಗುಣವಾಗಿ ರಚಿಸಿರುವ ಭಿತ್ತಿ ಚಿತ್ರಗಳನ್ನು ಗುರುತಿಸಲಾಯಿತು.

೫. ಕಲೆಯು ಸಂವಹನ ಮಾಧ್ಯಮವಾದಾಗ ಅದು ದೃಶ್ಯವಿರಲಿ, ಶ್ರಾವ್ಯವಿರಲಿ ಪರಸ್ಪರ ನಿಕಟ ಸಂಬಂಧವನ್ನು ಹೊಂದಿರುವುದು ಮುಖ್ಯವಾಗಿರುತ್ತದೆ ಎಂಬುದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೬. ಪ್ರಮುಖವಾಗಿ ದಕ್ಷಿಣ ಕರ್ನಾಟಕ ಭಾಗದ ಭಿತ್ತಿ ಚಿತ್ರಕಲೆ ಪರಂಪರೆಯಲ್ಲಿ ಧಾರ್ಮಿಕತೆಯ ಜೊತೆ ಸಾಮಾಜಿಕ, ರಾಜಕೀಯ ಅಂಶಗಳನ್ನು ಗುರುತಿಸಲಾಗಿದೆ.

೭. ದಕ್ಷಿಣ ಕರ್ನಾಟಕದ ತುಂಭಾ ಸಿಗುವ ಪ್ರಾಚೀನ ದೇವಾಲಯ(ಹಿಂದೂ)ಗಳಲ್ಲಿ ಭಾಗವತ, ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳು ಹೆಚ್ಚು ಕಾಣಿಸಲ್ಪಟ್ಟಿರುತ್ತವೆ.

೮. ಈ ಅಧ್ಯಯನದಲ್ಲಿ ಮುಖ್ಯವಾಗಿ ಪ್ರಾಚೀನ ಇತಿಹಾಸವುಳ್ಳ ಜೈನ ಮಠಗಳು, ದೇವಾಲಯಗಳು, ಮಸೀದಿಗಳು, ಚರ್ಚ್‌ಗಳು ಮತ್ತು ಅರಮನೆಗಳನ್ನು ಗುರುತಿಸಿ, ಅಲ್ಲಿನ ಇತಿಹಾಸವನ್ನು ಭಿತ್ತಿ ಚಿತ್ರಗಳ ಮೂಲಕ ಕಂಡುಕೊಳ್ಳಲಾಯಿತು.

೯. ಸಾಮಾನ್ಯವಾಗಿ ದೇವಾಲಯದ ಹೊರಮಂಟಪದಲ್ಲಿ ಭಿತ್ತಿ ಚಿತ್ರಗಳನ್ನು ಕಂಡಿರುತ್ತೇವೆ. ಆದರೆ ಇಲ್ಲಿನ ಕೆಲವು ದೇವಾಲಯದ ಗರ್ಭಗುಡಿಯಲ್ಲಿಯೂ ಭಿತ್ತಿ ಚಿತ್ರಗಳು ರಚನೆಯಾಗಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಯಿತು.

೧೦. ಶೈವ ದೇವಾಲಯಗಳಲ್ಲಿ ವಿಷ್ಣುವಿನ ದಶಾವತಾರ ಮತ್ತು ವೈಷ್ಣವ ದೇವಾಲಯಗಳಲ್ಲಿ ಶಿವನಿಗೆ ಸಂಬಂಧಿಸಿದ ಚಿತ್ರಗಳಿರುವುದನ್ನು ಗುರುತಿಸಲಾಯಿತು.

೧೧. ಇತಿಹಾಸವನ್ನು ತಿಳಿಸುವ ಈ ಭಿತ್ತಿ ಚಿತ್ರಗಳ ಕುರಿತು ಅಷ್ಟಾಗಿ ಯಾರು ವಶೇಷ ಗಮನಹರಿಸುತ್ತಿಲ್ಲ. ಇತ್ತೀಚೆಗೆ ದೇವಾಸ್ಥಾನಗಳು, ಮಠಗಳು, ಮಸೀದಿಗಳು ಮತ್ತು ಅರಮನೆಗಳ ಜೀರ್ಣೋದ್ಧಾರದ ನೆಪದಲ್ಲಿ ಇತಿಹಾಸವನ್ನು ತಿಳಿಸುವ ಭಿತ್ತಿ ಚಿತ್ರಗಳನ್ನು ಅಳಿಸಲಾಗುತ್ತಿದೆ. ಇದರಿಂದ ದಕ್ಷಿಣ ಕರ್ನಾಟಕದ ಶೇ೬೦ರಷ್ಟು ಭಿತ್ತಿ ಚಿತ್ರಗಳು ನಾಶವಾಗಿ ಕೈಗೆ ಸಿಗದಷ್ಟು ಆಳಾಗಿರುವುದು ಈ ಅಧ್ಯಯನದ ಮೂಲಕ ತಿಳಿದಿರುತ್ತದೆ.

೧೨. ದಕ್ಷಿಣ ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲಿ ಸಿಗುವ ಭಿತ್ತಿ ಚಿತ್ರಗಳಲ್ಲಿ ರೇಖೆ,

ಬಣ್ಣ ಮತ್ತು ಚಿತ್ರ ಸಂಯೋಜನೆಯಲ್ಲಿ ಭಿನ್ನ ಆಯಾಮಗಳಿರುವುದನ್ನು ಗುರುತಿಸಲಾಯಿತು.

೧೩. ಇತಿಹಾಸ ತಿಳಿಸುವ ಭಿತ್ತಿ ಚಿತ್ರಗಳು ಶೇ೭೦ರಷ್ಟು ಸಂರಕ್ಷಣೆಯಿಲ್ಲದೇ ನಾಶವಾಗಿವೆ. ದೇವಸ್ಥಾನ ಜೀರ್ಣೋದ್ದಾರದ ನೆಪದಲ್ಲಿ ಭಿತ್ತಿ ಚಿತ್ರಗಳನ್ನು ಅಳಿಸಲಾಗುತ್ತಿದೆ. ಆದಷ್ಟು ಸರ್ಕಾರಗಳು ಇದರ ಕಡೆ ತುರ್ತಾಗಿ ನಿಗಾವಹಿಸಬೇಕಾಗಿದೆ.

ಅನುಬಂಧಗಳು

ಅನುಬಂಧಗಳು

ಸಂಕ್ಷೇಪಗಳು–೧

೧.	ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨.	ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೩.	ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೪.	ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫.	ಕಾ.ಶಿ	:	ಕಾಶ್ಯಪ ಶಿಲ್ಪಶಾಸ್ತ್ರ
೬.	ಕ್ರಿ.ಶ.	:	ಕ್ರಿಸ್ತ ಶಕ
೭.	ಮೈ.ವಿ.ವಿ.	:	ಮೈಸೂರು ವಿಶ್ವವಿದ್ಯಾಲಯ
೮.	ಗು.ವಿ.ವಿ.	:	ಗುಲಬರ್ಗಾ ವಿಶ್ವವಿದ್ಯಾಲಯ
೯.	ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
೧೦.	ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
೧೧.	ವಿ.ಧ.ಪುರಾಣ	:	ವಿಷ್ಣು ಧರ್ಮೋತ್ತರ ಪುರಾಣ.
೧೨.	ಶಿ.ರ.	:	ಶಿಲ್ಪರತ್ನ
೧೩.	ಪು	:	ಪುಟ
೧೪.	ಕ.ಕ	:	ಕರ್ನಾಟಕ ಕರ್ನಾಟಕ
೧೫.	ಉ.ಕ	:	ಉತ್ತಕ ಕರ್ನಾಟಕ
೧೬.	ದ.ಕ	:	ದಕ್ಷಿಣ ಕನ್ನಡ
೧೭.	ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
೧೮.	ದ.ಕ	:	ದಕ್ಷಿಣ ಕರ್ನಾಟಕ
೧೯.	ಭಿ.ಚಿ	:	ಭಿತ್ತಿಚಿತ್ರ
೨೦.	ಕ.ವಿ.ವಿ	:	ಕನ್ನಡ ವಿಶ್ವವಿದ್ಯಾಲಯ
೨೧.	ಪು.ಸ	:	ಪುಟ ಸಂಖ್ಯೆ
೨೨.	ಮ.ವಿ	:	ಮಹಿಳಾ ವಿಶ್ವವಿದ್ಯಾಲಯ

ಗ್ರಂಥಋಣ–೨

೦೧. ಕನ್ನಡ ಗ್ರಂಥಗಳು

೧. **ಇತಿಹಾಸ ದರ್ಶನ (ಸಂಪುಟ –೧೮)** – **ಡಾ. ಜಿ. ವಿ. ಕಲ್ಲಾಪುರ**
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
೨೦೦೩

೦೨. **ಇತಿಹಾಸ ದರ್ಶನ ಸಂಪುಟ –೨೪** – **ಡಾ. ಜ್ಯೋತ್ಸ್ನಾ ಕಾಮತ್**
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
೨೦೦೯

೦೩. **ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ** – **ಎ.ವಿ. ಪಾಟೀಲ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೮೦

೦೪. **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ** – **ಡಾ.ಯಾದಪ್ಪ ಪರದೇಶಿ**
ಆಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ–೨೦೦೦

೦೫ **ಉತ್ತರ ಕರ್ನಾಟಕದ ಒಗಟುಗಳು** – **ಡಾ. ಎಂ. ಎಸ್. ಲಠೆ**
ರವೀಂದ್ರ ಪ್ರಕಾಶನ, ಕಲಬುರ್ಗಿ
೧೯೭೪

೦೬. **ಎಂ. ರಾಮನರಸಯ್ಯ** – **ರಾಮದಾಸ ಅಡ್ಡಂತಾಯ್**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೨೦೦೦

೦೭. **ಕನ್ನಡ ನಾಡಿನ ಧಾರ್ಮಿಕ ಪರಂಪರೆ** –**ಪ್ರೊ. ಎಸ್.ಕೆ. ರಾಮಚಂದ್ರರಾವ್**
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು
೧೯೮೩

೦೮. **ಕರ್ನಾಟಕ ಚರಿತ್ರೆ ಸಂಪುಟ– ೬** –**ಸಂ.ಡಾ. ಸೆಬಾಸ್ಟಿಯನ್ ಜೋಸೆಫ್**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೧೯೯೭

೦೯. **ಕರ್ನಾಟಕದ ಜನಪದ ಚಿತ್ರಕಲೆ** – **ಡಾ. ಎಸ್. ಸಿ. ಪಾಟೀಲ**
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು
ತೋಂಟದಾರ್ಯ ಸಂಸ್ಥಾನ ಮಠ, ಗದಗ
೧೯೯೩

೧೦. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** – **ಕೆ.ವಿ. ಕಾಳೆ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೧೧. **ಕರ್ನಾಟಕದ ಕಲೆಗಳು ಭಾಗ – ೧** – **ಎಸ್. ಕೆ. ರಾಮಚಂದ್ರರಾವ್**
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
೧೯೮೧

೧೨. **ಕರ್ನಾಟಕದ ಗಂಜೀಫಾ ಚಿತ್ರಕಲೆ** – **ಡಾ. ಶಂಕರ ಕುಂದಗೋಳ**
ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬಾದಾಮಿ ಬನಶಂಕರಿ. ೨೦೦೫

೧೩. **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ** – **ಡಾ. ಶಶಿಕಲಾ ಹೂಗಾರ್**
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೫

೧೪. **ಕರ್ನಾಟಕದ ಜಾನಪದ ಸಮಾವೇಶ** –**(ಸಂ.)ಡಾ. ಜಿ.ಶಂ. ಪರಮಶಿವಯ್ಯ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು
೧೯೮೧

೧೫. **ಕರ್ನಾಟಕ ಜಾನಪದ** – **ಡಾ. ಕರೀಂಖಾನ್ ಎಸ್. ಕೆ**
ಕನ್ನಡ ಜಾನದಪ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು
೧೯೮೯

೧೬. **ಕರ್ನಾಟಕ ಭಿತ್ತಿಚಿತ್ರ ಪರಂಪರೆ** – **ಡಾ. ಅ. ಲ. ನರಸಿಂಹನ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೨೦೦೨

೧೭. **ಕರ್ನಾಟಕದ ಕರಕುಶಲ ಕಲೆಗಳು** – **ಬಿ. ಎಂ. ಚಂದ್ರಶೇಖರಯ್ಯ**
ಐ.ಬಿ.ಹೆಚ್. ಪ್ರಕಾಶನ,
ಗಾಂಧೀನಗರ, ಬೆಂಗಳೂರು, ೧೯೭೩

೧೮. **ಕರ್ನಾಟಕದ ಕಲೆಗಳು (ಭಾಗ-೧)** – **ಎಸ್. ಕೆ. ರಾಮಚಂದ್ರರಾವ್**
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೮೧

೧೯. **ಕರ್ನಾಟಕದ ಕಲೆಗಳು(ಭಾಗ-೩, ಕರಕುಶಲಕಲೆಗಳು)** – **ಬೆನಕನಹಳ್ಳಿ ಗಿ. ನಾಯಕ**
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
೧೯೮೬

೨೦. **ಕರ್ನಾಟಕದ ಬಿದ್ರಿ ಕಲೆ** – **ರೆಹಮಾನ್ ಪಟೇಲ್**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
೨೦೦೯

೨೧. **ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ** – **ನಿಂಗಪ್ಪ ಎಂ. ಅಂಗಡಿ**
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೦

೨೨. **ಕರ್ನಾಟಕದ ಗಂಜೀಫಾ ಚಿತ್ರಕಲೆ** – **ಶಂಕ್ರಪ್ಪ ಎಂ. ಕುಂದಗೋಳ**
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೧

೨೩. **ಕರಕುಶಲ ಕಲೆಗಳು ವಿಶ್ವಕೋಶ-೨** – **ಡಾ. ಕರೀಗೌಡ ಬೀಚನಹಳ್ಳಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೨೪. **ಕರಾವಳಿ ಕರ್ನಾಟಕದ ಕ್ರೈಸ್ಥ ಚಿತ್ರಕಲೆ** – **ಡಿ.ಆರ್.ಸುರೇಂದ್ರನಾಥ**
ಎಂ.ಫಿಲ್ ಸಂಪ್ರಬಂಧ
ಕನ್ನಡ ವಿಶ್ವವಿದ್ಯಾಲಯ.ಹಂಪಿ,೨೦೧೨

೨೫. **ಕಲಾಪ್ರಪಂಚ** – **ಡಾ. ಶಿವರಾಮ ಕಾರಾಂತ**
ವ್ಯಾಸಂಗ ವಿಸ್ತರಣ ಪ್ರಕಟನಾ, ಧಾರವಾಡ
೧೯೭೮

೨೬. **ಕಲಾಕೋಶ** – **ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೪

೨೭. **ಕಲಾತತ್ವ** – (ಮೂಲ) ಅಬರಕ್ರಾಂಬಿ
ಸೈಯಾದ್ರಿ ಪ್ರಕಾಶನ, ಶ್ರೀ ಕುವೆಂಪು (ಅನು) ಸಿ.ಪಿ.ಕೆ.
ವಿದ್ಯಾವರ್ಧಕ ಟ್ರಸ್ಟ್, ಮೈಸೂರು
೧೯೭೬

೨೮. **ಕಲೆಯ ದರ್ಶನ (ತೃತೀಯ ಮುದ್ರಣ)** – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟ ಚೌಕ
ಬೆಂಗಳೂರು

೨೯. **ಕಲೆಯ ನೆಲೆ** – ವಿ. ಕೃ. ಗೋಕಾಕ್
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು,
೧೯೭೮

೩೦. **ಕಲೆಗಳು ಮತ್ತು ಮಾನವ** – (ಮೂಲ) ಇರ್ವಿನ್ ಎಡ್ವನ್
ಕಾವ್ಯಾಲಯ ಪ್ರಕಾಶನ, ಮೈಸೂರು (ಅನು) ಎನ್. ಬಾಲಸುಬ್ರಹ್ಮಣ್ಯ
೧೯೪೬

೩೧. **ಕಲೆ ಮತ್ತು ಸಾಮಾಜಿಕ ಜೀವನ** –(ಮೂಲ) ಗಿ. ವಿ. ಪ್ಲೆಖನೋವೆ
ನವಕರ್ನಾಟಕ ಪಬ್ಲಿಕೇಶನ್, (ಅನು)ಹೆಚ್.ಕೆ. ರಾಮಚಂದ್ರಮೂರ್ತಿ
ಸುಬೇದಾರ ಛತ್ರಂ, ಬೆಂಗಳೂರು
೧೯೭೯

೩೨. **ಕರ್ನಾಟಕ ಕಲಾದರ್ಶನ ಸಂಪುಟ–೧** –(ಸಂ.) ಪ್ರೊ. ಎಂ.ಎಚ್. ಕೃಷ್ಣಯ್ಯ
ನವಕರ್ನಾಟಕ ಪ್ರಕಾಶನ, ಬೆಂಗಳೂರು
೨೦೧೦

೩೩. **ಕರ್ನಾಟಕದ ಸಸ್ಯ ಸಂಪತ್ತು ಕರ್ನಾಟಕ ಪರಂಪರೆ ಸಂಪುಟ – ೧** – ಡಾ. ಎಲ್. ನಾರಾಯಣರಾವ್
ಮೈಸೂರು ರಾಜ್ಯ ಸರಕಾರ
೧೯೭೦

೩೪. **ಗಂಜೀಫಾ ಕಲೆ** – ಸಂತೋಷ ಕುಮಾರ ಗುಲ್ವಾಡಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು
೧೯೯೪

೩೫. **ಗಂಜೀಫಾ** – ಎಂ. ಎಲ್. ಶಿವಶಂಕರ್
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ
ನಿರ್ದೇಶನಾಲಯ, ಮೈಸೂರು
೧೯೯೬

೩೬. **ಚಿತ್ರಕಲಾ ಪ್ರಪಂಚ** – (ಸಂ.) ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ, – ಎನ್. ಮರಿಶಾಮಾಚಾರ್
ಬೆಂಗಳೂರು
೨೦೦೮

೩೭. **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** – ಡಾ. ಎಸ್. ಸಿ. ಪಾಟೀಲ
ಸ್ಕೂಲ್ ಆಫ್ ಆರ್ಟ್,
ಧಾರವಾಡ
೧೯೯೬

೩೮. **ಚಿತ್ರಾಕ್ಷಿ** – (ಸಂ.) ಡಾ. ಎಸ್. ಸಿ. ಪಾಟೀಲ
ಶ್ರೀ. ಡಿ.ವಿ. ಹಾಲಭಾವಿ ಸ್ಕೂಲ್ ಆಫ್ ಆರ್ಟ್
ಧಾರವಾಡ
೧೯೯೬

೩೯. **ಜನಪದ ಜೀವನ ಮತ್ತು ಕಲೆ** – ಎಲ್. ಆರ್. ಹೆಗಡೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೭

೪೦. **ತೌಲನಿಕ ಕಾವ್ಯ ಮೀಮಾಂಸೆ** – ಡಾ. ಎಚ್. ತಿಪ್ಪೇರುದ್ರಸ್ವಾಮಿ
ಡಿ.ವಿ.ಕೆ. ಮಾರ್ಟ್, ಕೃಷ್ಣಮೂರ್ತಿಪುರಂ,
ಮೈಸೂರು
೨೦೦೭

೪೧. **ದಖನಿ ಚಿತ್ರಕಲೆ** – ಎಸ್. ಕೆ. ಅರುಣಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೨೦೦೧

೪೨. **ದೃಶ್ಯಕಲಾ ಸಂವೇದನೆ** – ಡಾ.ಎಸ್.ಸಿ.ಪಾಟೀಲ
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ
ಧಾರವಾಡ-೦೩

೪೩. **ದೃಶ್ಯಸಂಚಲನ** – ಡಾ. ಎಸ್. ಸಿ. ಪಾಟೀಲ
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,
ಧಾರವಾಡ, ೨೦೧೦

೪೪. **ದೃಶ್ಯಾನುಭವ** –ಡಾ.ಮೋಹನರಾವ್ ಬಿ. ಪಂಚಾಳ
ಅನ್ನಪೂರ್ಣ ಪ್ರಕಾಶನ, ಬೀದರ್
೨೦೧೦

೪೫. **ನವಗ್ರಹಗಳು** — **ಚಿಕ್ಕೇರೂರು ಧಾರೇಂದ್ರಾಚಾರ್ಯ**
ಸಾಧನಾ ಪ್ರಕಾಶನ, ಬೆಂಗಳೂರು
೨೦೦೮

೪೬. **ನಿಜದ ನೆಲೆ** — **(ಸಂ.) ಡಾ. ಎಸ್. ಸಿ. ಪಾಟೀಲ**
ಡಾ ಬಿ.ಕೆ. ಹಿರೇಮಠರ ಅಭಿನಂದ ಗ್ರಂಥ — **ಸತ್ಯಾನಂದ ಪಾತ್ರೋಟ**
ಪು. ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ
೨೦೦೩

೪೭. **ಪುರಾಣ ಭಾರತ ಕೋಶ** — **ಯಜ್ಞನಾರಾಯಣ ಉಡುಪ**
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ ಜೆ.ಸಿ. ರಸ್ತೆ, ಬೆಂಗಳೂರು
೨೦೦೮

೪೮. **ಬಹುಮುಖಿ** — **ಸಂ. ಜಿ. ಎಸ್. ಭಟ್ಟ**
ಎಸ್. ಎಂ. ಜಂಬುಕೇಶ್ವರ ಅಭಿನಂದನ ಗ್ರಂಥ
ಅಭಿನಂದನ ಸಮಿತಿ, ಮೈಸೂರು
೨೦೦೯

೪೯. **ಬಾರಾಮಾಸ** — **(ಸಂ.) ಶಾಂತರಸ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೯೯೩

೫೦. **ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ** — **ಡಾ. ಟಿ. ಎಸ್. ರಾಜಗೋಪಾಲ**
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು
೧೯೮೩

೫೧. **ಭಾರತೀಯ ಚಿತ್ರಕಲೆ** — **ಡಾ. ಶಿವರಾಮ ಕಾರಾಂತ**
ಪುತ್ತೂರು
೧೯೯೦

೫೨. **'ಮಹಾರಾಷ್ಟ್ರ ಜಾನಪದ'** — **(ಸ)ಡಾ.ಹೆಚ್.ಎಂ. ಮಹೇಶ್ವರಯ್ಯ**
ಕರ್ನಾಟಕ ಜಾನದಪ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳೂರು
೧೯೯೭

೫೩. **ಮಹಾಭಾರತ ಕಥಾ ಸಂಗ್ರಹ** — **ಡಾ. ಹೆಚ್. ರಾಮಚಂದ್ರಸ್ವಾಮಿ**
ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು
೨೦೦೩

೫೪. **ಮಾನ್ಯ ಡಿ.ವಿ.ಜಿ.ಯವರು** – ಶ್ರೀಕಾಂತ
ಮಂಕುತಿಮ್ಮ ಕಗ್ಗ ತಾತ್ಪರ್ಯ
ಶ್ರೀ ಎಚ್. ವಿ. ಶ್ರೀಕಂದನ್
ರಾಜಾಜಿನಗರ, ಬೆಂಗಳೂರು. ೨೦೦೯

೫೫. **ಮುಮ್ಮಡಿ ಕೃಷ್ಣರಾಜ ಒಡೆಯರು** – ಡಾ. ಆರ್. ಗೋಪಾಲ್
ಒಂದು ಚಾರಿತ್ರಿಕ ಅಧ್ಯಯನ – ಡಾ. ಎಸ್. ನರೇಂದ್ರ ಪ್ರಸಾದ್
ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಹೊಸಪೇಟೆ. ೨೦೦೪

೫೬. **ಮುಮ್ಮಡಿ ಕೃಷ್ಣರಾಜ ಒಡೆಯರು** –ಸಾಲಿಗ್ರಾಮಕೃಷ್ಣ ರಾಮಚಂದ್ರರಾವ್
ಶ್ರೀ ತತ್ವನಿಧಿ ಸಂಪುಟ – ೧
ಪ್ರಸಾರಾಂಗ್, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೯೯೨

೫೭. **ಮೂಡುಗೋಡು ಹಿರಣ್ಯಪ್ಪ** – ನಾ. ಡಿಸೋಜ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೯೮೫

೫೮. **'ಮೈಸೂರು ಅರಮನೆ' ಮಾರ್ಗದರ್ಶಿ** –ಕಾರ್ಯ ನಿರ್ವಾಹಕ ಅಧಿಕಾರಿಗಳು
ಅರಮನೆ ಮಂಡಳಿ, ಮೈಸೂರು
ಅರಮನೆ ಆವರಣ, ಮೈಸೂರು
೨೦೦೦

೫೯. **ಮೈಸೂರು ಚಾಮುಂಡೇಶ್ವರಿ ದೇವಸ್ಥಾನ** – ಬಿ. ಬಿ. ಗೋಸ್ವಾಮಿ
ಒಂದು ಸಾಮಾಜಿಕ ಅಧ್ಯಯನ ಎಸ್. ಜಿ. ಮೊರ್‌ಬ್
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೨೦೦೧

೬೦. **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ** –ಪ್ರೊ. ಪಿ.ವಿ. ನಂಜರಾಜ ಅರಸು
ಅಭಿರುಚಿ ಪ್ರಕಾಶನ, ಸರಸ್ವತಿಪುರ,
ಮೈಸೂರು. ೨೦೦೮

೬೧. **ಮೈಸೂರು ಕರ್ನಾಟಕ ಸರ್ಕಾರ ದಸರಾ–೮೫** – (ಸಂ.) ಶ್ರೀಕೃಷ್ಣ ಆಲನಹಳ್ಳಿ
ನೆನಪಿನ ಸಂಚಿಕೆ
ಆಡಳಿತ ಮಂಡಳಿ, ಮೈಸೂರು ಅರಮನೆ
ಮೈಸೂರು

೬೨. **ರಾಜಸ್ಥಾನ ಜಾನಪದ** – (ಮೂಲ) ಡಿ. ಆರ್. ಅಹುಜಾ
ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ – (ಅನು) ಡಾ. ಸಿ. ವಿ. ಕೃಷ್ಣಕುಮಾರ್
೧೯೯೩

೬೩. **ರಾಜರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀಚಿತ್ರಣ** – **ಡಿ.ಎಸ್.ಶ್ವೇತ**
ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೨

೬೪. **ವರ್ಣಸಂಚಯ** – **ಡಾ. ಎಸ್. ಸಿ. ಪಾಟೀಲ**
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಳಕಲ್
೨೦೦೧

೬೫. **ವಿಷ್ಣುಪುರಾಣ** – **ರಾಘವೇಂದ್ರ ಅಚಾರ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ
ವಿಶ್ವರೂಪ ಪ್ರಕಾಶನ, ಬೆಂಗಳುರು
೨೦೦೪

೬೬. **ಶ್ರಾವಣದ ಕವಿ ಬೇಂದ್ರೆ ಮಂಟಪಮಾಲೆ** – **ಡಾ. ಕೃಷ್ಣಕಟ್ಟಿ**
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೬೭. **ಶ್ರೀ ವಿ.ಎಂ. ಶೋಲಾಪೂರಕರ್‌ರವರ ಬದುಕು ಮತ್ತು ಕಲಾಜೀವನ** – **ವಿಠ್ಠಲರೆಡ್ಡಿ ಫ. ಚುಳಕಿ**
ಅಪ್ರಕಟಿತ ಕಿರುಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೦೮

೬೮. **ಸಂಗೀತ ಕಲೆಗೆ ಮೈಸೂರು ಒಡೆಯರ ಪ್ರೋತ್ಸಾಹ ಕೊಡುಗೆ** –**ಡಾ. ವಿ. ಎಸ್. ಸಂಪತ್ಕುಮಾರ ಆಚಾರ್ಯ**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ –**ಎಂ. ಎಲ್. ಶಿವಶಂಕರ**
ನಿರ್ದೇಶನಾಲಯ ಮೈಸೂರು
೧೯೯೬

೬೯. **ಸಾಹಿತಿ, ಕಲಾವಿದರ ಕಣ್ಣಲ್ಲಿ ಟಿಪ್ಪು** – **(ಸಂ.) ಪ್ರೊ. ಶಿವರಾಮಯ್ಯ**
ಸಿರಿಗನ್ನಡ ಪ್ರಕಾಶನ, ಶಿವಮೊಗ್ಗ
೨೦೦೫

೭೦. **ಸಾಹಿತ್ಯ ಮತ್ತು ಚಿತ್ರಕಲೆ** – **ಚಂದ್ರಕಾಂತ ಕುಸನೂರ**
ಕಾಲ ಪ್ರಕಾಶನ, ಬೆಂಗಳೂರು
೨೦೦೧

೭೧. **ಸೌಂದರ್ಯ ಸಮೀಕ್ಷೆ** – **ಡಾ. ಜಿ. ಎಸ್. ಶಿವರುದ್ರಪ್ಪ**
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು
೧೯೬೫

೭೨. ಜ್ಞಾನಗಂಗೋತ್ರಿ (ಕಲೆ. ಸಾಹಿತ್ಯ) – ಪ್ರಸಂ. ನಿರಂಜನ
ಕಿರಿಯರ ವಿಶ್ವಕೋಶ ಸಂಪುಟ – ೫
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ
ಬೆಂಗಳೂರು, ೧೯೭೩

೦೨. ಇಂಗ್ಲೀಷ್ ಗ್ರಂಥಗಳು

01. Arts and Crafts of Tamilnadu - **Nandita Krishna**
Photographed by **V.K. Rajamani**
Ashok Leyland Ltd
In Association with Maphin
Publishing Private Ltd.

02. Japan - **Yamaguchi Hikoichi**
National Book Trust, India
2007

03. Museum of India - **Jothin Jain**
National Handicraft and Handlooms **Arati Agarawal**
Museum , Delhi.

04. Mugal Art - **Shanti Swarup**
A study in Handicrafts

05. Mysore Chitramala - **Prof. S K Ramachandra Rao**
Traditional Paintings

06. Manjusha Art Centre - **Dr.Chudamani Nandagopal**
Published by S. Prabhakar
SDM Publication Trust (R)
Ujire.
2000

07. Rasidency to Rajabhavan - **M S Surazvi**
Bangalore Editional Committee **C. M. Gamapathi**
Published by : Govt of Karnataka
Stationery and Publication
1999


ಅರಮನೆಗಳು
ದೇವಾಲಯಗಳು
ಮಠಗಳು
Uttara Kannada
Davanagere
Chitradurga
Shimoga
Udupi
Chikmagalur
Tumkur
Kolar
Bangalore
Mangalore
Mandya
Kodagu
Mysore
Chamarajanagara
ದಕ್ಷಿಣ ಕರ್ನಾಟಕ



